ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ತಕ್ಕೊಳ್ಳಲ್ಪಡುವದು

Reg. No. B 1270. Monday, 1st January, 1945

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೨೭

ಕುಮಟಾ:- ಸೋಮವಾರ, ತಾ. ೧ ಮಾಹೆ ಜನವರಿ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಸ್ಥಾಯಿ ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೪ ಆಣೆಯಂತೆ.
ವಿಶಿಷ್ಟ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲದೆ ಪತ್ರದ್ವಾರಾ
ತಿಳಿಸಬಹುದು.

ಹಿಟ್ಲರನ ಮಾಟ.

(ನಿರೀಕ್ಷಕನು ಬರೆದುದು.)

ಹಿಟ್ಲರನು ಪಶ್ಚಿಮ ರಣಭೂಮಿಯಲ್ಲಿ ಬಗೆಬಗೆಯ ಮಾಟಗಳನ್ನು ಕೈಕೊಂಡು ಮಿತ್ರರಿಗೆ ಪಜೀತು ಮಾಡುತ್ತಿದ್ದಾನೆ ಕೊಡೆ-ವಿಮಾನಗಳ ಮೂಲಕ ಸೈನಿಕರನ್ನು ಮಿತ್ರ ಸೈನ್ಯದ ಹಿಂಬದಿಗೆ ಇಳಿಸುವ ಕ್ರಮವನ್ನು ನಾನು ಈ ಹಿಂದೆ ಉಲ್ಲೇಖಿಸಿದ್ದೇನೆ. ಈ ವ್ಯೂಹದಲ್ಲಿ ಒಂದು ಚಮತ್ಕಾರವುಂಟು ಯುದ್ಧದಲ್ಲಿ ಸೆರೆಹಿಡಿದ ಅಮೇರಿಕೆಯವರ ಬ್ರಿಟಿಶರ ಉಡುಗೆ-ತೊಡಿಗೆಗಳನ್ನು ಜರ್ಮನ ಸೈನಿಕರು ತೊಟ್ಟುಕೊಂಡು ಕೊಡೆ-ವಿಮಾನಗಳ ಮೂಲಕ ಮಿತ್ರರ ಸೈನ್ಯದ ಹಿಂಬದಿಗೆ ಇಳಿಯುತ್ತಾರೆ ಈ ಸೈನಿಕರು ಸ್ವಚ್ಛ ಇಂಗ್ಲಿಶ ಮಾತಾಡುತ್ತಾರೆ! ಇವರಿಗೆ ಇಂಗ್ಲಿಶ ಭಾಷೆ ಕಲಿಸಲು ಹಿಟ್ಲರನು ಬರ್ಲಿನದಲ್ಲಿ ಒಂದು ಶಾಲೆ ತೆರೆದು ೪-೬ ತಿಂಗಳುಗಳಾದವೆಂದೂ ಈ ಶಾಲೆಯಲ್ಲಿ ಇಂಗ್ಲಿಶ ಕಲಿಸುವದಕ್ಕಾಗಿ ರಣರಂಗದಿಂದ ಇಂಗ್ಲಿಶ ಒಬ್ಬ ಅಮೇರಿಕನ ಭಟರನ್ನು ಹಿಡಿದು ಕರೆಸಿಕೊಂಡಿದ್ದಾನೆಂದೂ ವಾರ್ತೆ ಬಂದಿದೆ. ಇಂಗ್ಲಿಶ ಕಲಿತ ಈ ಸೈನಿಕರು ಮಿತ್ರ ಸೈನಿಕರಂತೆ ನಟಿಸುತ್ತಾರೆ! ಶತ್ರು ಸೈನಿಕರ ಪೇಟುಗಳಲ್ಲಿ ಹಿಂದೆ ಯುದ್ಧದಲ್ಲಿ ಸೆರೆ ಹಿಡಿದ ಮಿತ್ರ ಸೈನಿಕರ ಕಾಗದಪತ್ರಗಳಿರುತ್ತವೆ! ಆ ಪತ್ರಗಳನ್ನು ತೋರಿಸಿ ಮಿತ್ರ ಸೈನಿಕರಿಗೂ ಸೈನ್ಯಾಧಿಕಾರಿಗಳಿಗೂ ಮೋಸಮಾಡಿ ಮಿತ್ರಸೈನ್ಯದ ಹಿಂಬದಿಗೆ ಈ ಕಪಟಿಗಳು ಬಹಳ ಅನರ್ಥವನ್ನುಂಟು ಮಾಡುತ್ತಾರೆ! ಇದರಿಂದ ಮಿತ್ರ ಸೈನ್ಯಕ್ಕೆ ಬಹಳ ತಪ್ಪುತ್ತದೆ. ಇದೀಗ ಫ್ರಾನ್ಸದೇಶದಲ್ಲಿ ಹಿಟ್ಲರನು ಈ ಕುತಂತ್ರ ಹಬ್ಬಿಸಿದ್ದಾನೆ ಫ್ರಾಂಸ ರಣಾಂಗಣದಲ್ಲಿ ೨ ಪಕ್ಷಗಳಿವೆ. ಹಿಟ್ಲರ-ಪಕ್ಷಪಾತಿ ಪೇಟೇನಪಕ್ಷ ಒಂದು, ಮಿತ್ರ ಪಕ್ಷಪಾತಿ ದಿಗೋಲೆಯವರ ಪಕ್ಷ ಒಂದು. ಪೇಟೇನ-ಪಕ್ಷದ ಜನರು ಇನ್ನೂ ದಿಗೋಲೆ-ಪಕ್ಷಕ್ಕೆ ಕೂಡಿಕೊಂಡಿಲ್ಲ ಅವರಿಗೆ ಹಿಟ್ಲರನ ಅಧಿರಾಜ್ಯವೇ ಬೇಕು. ದಕ್ಷಿಣ ಫ್ರಾನ್ಸದೊಳಗಿನ ಬೆಟ್ಟಗಳಲ್ಲಿರುವ ಅವರು ದೊಂಬಿಗಳನ್ನೆಬ್ಬಿಸುತ್ತಿದ್ದಾರೆ! ಹಿಟ್ಲರನು ಇವರಿಗೆ ವಿಮಾನಗಳ ಮೂಲಕ ಶಸ್ತ್ರಾಸ್ತ್ರಗಳನ್ನೂ ಯುದ್ಧಸಾಹಿತ್ಯವನ್ನೂ ಪೂರೈಸುತ್ತಾನೆ. ಉತ್ತರ ಫ್ರಾನ್ಸದಲ್ಲಿ ರಣಕಂದನ ಮತ್ತು ದಕ್ಷಿಣ ಫ್ರಾನ್ಸದಲ್ಲಿ ದೊಂಬಿಗಳು ನಡೆದದ್ದರಿಂದ ಫ್ರಾನ್ಸದೇಶವನ್ನು ಆಳಲು ದಿಗೋಲೆಯವರಿಗೆ ಕಷ್ಟವಾಗಿದೆ! ಹಿಟ್ಲರ ಪಾಳೆಯಗಾರರ ಉಪಟಳದಿಂದ ಸ್ವದೇಶವನ್ನು ಕಾಪಾಡಿಕೊಳ್ಳುವ ಬಗೆಯನ್ನು ದಿಗೋಲೆಯವರು ಆಲೋಚಿಸುತ್ತಿದ್ದಾರೆ. ಫ್ರಾನ್ಸದೇಶದೊಳಗೆ ನಿರ್ಮಿಸಿದ ಈ ಮಾಟಗಳ ಮೂಲಕ ಹಿಟ್ಲರನಿಗೆ ರಣಭೂಮಿಯಲ್ಲಿ ಜಯವಾಗುತ್ತಿದೆ. ಆತನು ಬೆಲ್ಜಿಯಮದಲ್ಲಿ ಸುಮಾರು ೬೦ ಮೈಲು ನುಗ್ಗಿದ್ದಾನೆ ಬೆಸ್ಟೋನ[illegible]ಗೆ ಅಮೇರಿಕೆಯ ಸೈನಿಕರು ಸುತ್ತುಗಟ್ಟಲ್ಪಟ್ಟಿದ್ದಾರೆ [illegible]ವರಿಗೆ ಆಹಾರವನ್ನು ವಿಮಾನಗಳಿಂದ ಪೂರೈಸುವ ಪ್ರಸಂಗ ಬಂದಿದೆ ರುಭಿಬೋಟ ಟ್ಯಾಂಕವನ್ನು ಜರ್ಮನರು ಪಡೆದುಕೊಂಡದ್ದರಿಂದ ಎಂಟವರ್ಪ, ಸೆಡನ್ ಮೊದಲಾದ ಮಹತ್ವದ ನಗರಗಳಿಗೆ ಗಂಡಾಂತರ ಬಂದಿದೆ. ಮ್ಯೂಸ ನದಿಯನ್ನು ಜರ್ಮನರು ದಾಟುವದಕ್ಕಿದ್ದರು ಆದರೆ ಮಿತ್ರ ಸೈನಿಕರು ಬಲವಾಗಿ ಪ್ರತಿಭಟಿಸಿದ್ದರಿಂದ ಅವರು ಅಲ್ಲೇ ತಡೆದು ನಿಂತಿದ್ದಾರೆ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಜರ್ಮನರು ಅಲ್ಲಿಂದ ಹಿಂಜರಿಯುವ ಪ್ರಸಂಗ ಬರಬಹುದೆಂದು ಕಾಣುತ್ತದೆ ಅಮೇರಿಕೆಯ ಸೇ। ಪ್ಯಾಟನ್ನರೂ ಬ್ರಿಟಿಶ ಸೇ। ಮೋಂಗೊಮೇರಿಯವರೂ ಶತ್ರುಗಳನ್ನು ಪ್ರತಿಭಟಿಸುತ್ತಿದ್ದಾರೆ. ಮಿತ್ರ ಸೈನ್ಯಗಳ ಪುನರ್ಘಟನೆಯಾಗುತ್ತಿದೆ. ಜರ್ಮನ ಸೇ। ರಂಡಸ್ಟೆಡ್ಟರನ್ನು ಇದಿರುಗೊಂಡು ಅವು ಸರ್ವನಾಶ ಮಾಡುವವೆಂದು ಯುದ್ಧ ಸುದ್ದಿಗಾರರು ಧೈರ್ಯ ಹೇಳುತ್ತಿದ್ದಾರೆ. ಈಹೊತ್ತು ಕ್ರಿಸ್ತ ಯುಗಾದಿ. ಇಂದು ಪ್ಯಾರೀ ಪಟ್ಟಣ ಪುನರಾಕ್ರಮಿಸಿ ತಾನು ಸ್ವತಃ ಫ್ರಾನ್ಸ ದೇಶದ ಸ್ವಾಮಿಯಾಗಬೇಕೆಂದು ಹಿಟ್ಲರನು ಹವಣಿಸಿದ್ದನು ಅವನ ಆ ಬಯಕೆ ಹೇಗೂ ಗಾಳಿಗೋಪುರವಾಗಿದೆ! ಮಿತ್ರರು ೩೦೦೦ ವಿಮಾನಗಳನ್ನು ಕಳಿಸಿ ಶತ್ರುಗಳಿಗೆ ಬಹಳೇ ಪೆಟ್ಟುಕೊಟ್ಟಿದ್ದಾರೆ. ಆದರಿಂದ ರಂಡಸ್ಟೆಡ್ಟನಿಗೆ ಸಾಕುಬೇಕಾಗಿದೆ. ಆತನು ಹಿಂಜರಿಯುತ್ತಿದ್ದಾನೇನೋ ನಿಜ ಆದರೆ ಆತನಿಗೆ ಈಗ ಸುರಕ್ಷಿತ ಮುನ್ನುಗ್ಗಲಿಕ್ಕೂ ಸಾಧ್ಯವಿಲ್ಲ; ಹಿಂಜರಿಯಲಿಕ್ಕೂ ಸಾಧ್ಯವಿಲ್ಲ. ಸುಮಾರು ೨೦೦೦ ಶತ್ರುವಿಮಾನಗಳು ನಾಶಹೊಂದಿವೆಯಂತೆ; ಇನ್ನೂ ಅವು ನಾಶಹೊಂದುತ್ತಲಿವೆ! ರಂಡಸ್ಟೆಡ್ಟನ ಅಬ್ಬರವೀಗ ತಗ್ಗಿತೆಂದೂ ಮಿತ್ರರ ಆವೇಶಕ್ಕೆ ಕಳೆಯೇರಿದೆಯೆಂದೂ "ಟೈಮ್ಸ" ಪತ್ರಿಕೆಯ ಲಂಡನ ಸುದ್ದಿಗಾರರು ತಿಳಿಸುತ್ತಾರೆ. ಪಶ್ಚಿಮ ರಣಭೂಮಿಯಲ್ಲಿ ಒಂದೇ ಏಟಿಗೆ ಮಿತ್ರರ ಟೊಂಕ ಮುರಿದು ಆ ಮೇಲೆ ರಶ್ಯರಿಗೆ ಇದಿರಾಗಬೇಕೆಂಬ ವಿಚಾರದಿಂದ ಗಾಬರಿಗೊಂಡು ಜರ್ಮನರು ಈ ದಾಳಿ ಕೈಕೊಂಡಿದ್ದಾರೆಂದು ಯುದ್ಧ ನಿರೀಕ್ಷಕರ ಅಭಿಪ್ರಾಯವಿದೆ. ಜರ್ಮನರ ಕಡೆಗೆ ೧೧ ಲಕ್ಷ ಸೈನ್ಯಬಲವುಂಟೆಂದೂ ಅವರ ದಾಳಿ ವಿಕ್ರಮವು ಜಬರದಸ್ತವಾದದ್ದೆಂದೂ ಮುಂಬಯಿಯ ಟಾಯಿಮ್ಸ ಪತ್ರಿಕೆಯ ಲಂಡನ್ ಪ್ರತಿನಿಧಿಯು ಬರೆದು ಬಲಜಸಾದ ಮೇಲೆ ಬಂದೊದಗಿದ ಕಷ್ಟ ಕಂಡು ಬಹಳ ಮರಗುತ್ತಾನೆ ರಶ್ಯರ ಮೇಲೆ ಯುದ್ಧ ಸಾರಲು ಸ್ಪೇನ ದೇಶಕ್ಕೆ ಪ್ರೋತ್ಸಾಹಿಸುವದಕ್ಕಾಗಿ ಹಿಟ್ಲರನು ಪಶ್ಚಿಮ ರಣಭೂಮಿಯಲ್ಲಿ ಪ್ರಸ್ತುತ ಆರ್ಭಟ ನಡೆಸಿರಬೇಕೆಂದೂ ಕೆಲವರು ಹೇಳುತ್ತಾರೆ. ಅಮೇರಿಕೆಯ ಜನರಲನು ಜರ್ಮನರನ್ನು ದೂರಿಸಲು ಸ್ವದೇಶ ಬಾಂಧವರಿಗೆ ಹೊರಡಿಸಿದ ಸಂದೇಶದಿಂದ ಜಪಾನಿಯರು ಉಬ್ಬಿ ರಶ್ಯರ ಮೇಲೆ ಸಾಗಿಹೋಗಲು ಅವಸರಪಡುತ್ತಾರೆಂದು ನಾವು ಊಹಿಸುತ್ತೇನೆ ಜಪಾನಿಯರು ಹಿಟ್ಲರನನ್ನು ನಂಬಿ ರಶ್ಯರ ಮೇಲೆ ದಂಡೆತ್ತಿಕೊಂಡುಹೋದರೆ ರಶ್ಯರು ತಮ್ಮ ಸೇನೆಗಳನ್ನು ಜರ್ಮನಿಯ ಪಾರ್ಶ್ವದಿಂದ ಹಿಂತೆಗೆದುಕೊಳ್ಳಬೇಕಾದೀತು. ಅಷ್ಟರ ಮಟ್ಟಿಗೆ ಜರ್ಮನಿಯ ಮೇಲಿನ ರಶ್ಯರ ಒತ್ತಡ ತಗ್ಗಿ ಹಿಟ್ಲರನಿಗೆ ಬೆಂಬಲ ಸಿಗುತ್ತದೆ ಆದರೆ ಮಿತ್ರರು ಸಾಹಸಮಾಡಿ ರಂಡಸ್ಟೆಡ್ಟನಿಗೆ ತಡೆ ಹಿಡಿದದ್ದರಿಂದ ಹಿಟ್ಲರನ ಹಾರಾಟ ಅಲ್ಲಿಂದಲ್ಲೇ ತಣ್ಣಗಾಗಿದೆ ಇನ್ನೊಂದು ವಾರದಲ್ಲಿ ನುಗ್ಗಿ ಬಂದ ಜರ್ಮನರು ಹಿಂದಕ್ಕೆ ಹೋಗುವ ಪ್ರಸಂಗವುಂಟು ಹಿಟ್ಲರನ ಮಾಟದಿಂದ ಮಿತ್ರರಿಗೆ ಆದ ಹಾನಿಗಿಂತ ಜರ್ಮನರಿಗೇ ಹೇಳಲಾರದಷ್ಟು ಹಾನಿಯಾಗಿದೆಯಂತೆ, ನಾವು ಈ ಹಿಂದೆ ಹೇಳಿದಂತೆ ಹಿಟ್ಲರನ ಕೊನೆಯ ಸಾಹಸವಿದು ಈ ಸಾಹಸ ನಿರರ್ಥಕವಾದರೆ ಹಿಟ್ಲರನ ಸರ್ವಸ್ವ ಸಂಪೂರ್ಣ ಅಳಿಯುವದು ಆಗ ಮಿತ್ರರು ತಮ್ಮ ಸಂಪೂರ್ಣ ಲಕ್ಷವನ್ನು ಜಪಾನ ಕಡೆಗೆ ಹೊರಳಿಸಬಹುದು ಗ್ರೀಸದೊಳಗಿನ ಪಕ್ಷಗಳನ್ನು ನಾವು ಹೇಳಬಹುದಾಗಿತ್ತು ಆದರೆ ಅವಕ್ಕೀಗ ಸ್ಥಳವಿಲ್ಲ ಗ್ರೀಸದ ರಾಜಧಾನಿಯಾದ ಅಥೆನ್ಸದಲ್ಲಿ ಬ್ರಿಟಿಶ ರಾಯಭಾರಿಯು ಕಚೇರಿಯನ್ನು ಸೇರುವಾಗ ಬ್ರಿಟಿಶ ಮಹಾಪ್ರಧಾನ ಚರ್ಚಿಲರ ಮೇಲೆ ಯಾರೋ ಒಂದು ಗುಂಡು ಹಾರಿಸಿದ್ದರಿಂದೂ ಗುಂಡಿನ ಗುರಿ ತಪ್ಪಿ ಚರ್ಚಿಲರು ಬದುಕಿದರೆಂದೂ ಕೇಳಿ ನಮಗೆ ಸಂತೋಷವಾಗಿದೆ ಆದರೆ ಈ ಗುಂಡು ಪೂರ್ವ ಸಂಕೇತದಿಂದ ಹಾರಿಸಿದ್ದಲ್ಲೆಂದೂ ಚರ್ಚಿಲರಿಗೆ ಕೊಲ್ಲುವ ಉದ್ದೇಶವು ಗುಂಡು ಹಾರಿಸಿದವನಿಗೆ ಇದ್ದಿಲ್ಲವೆಂದೂ ಸುದ್ದಿಗಾರರು ಸಮಾಧಾನ ಹೇಳುತ್ತಾರೆ ಗ್ರೀಸದೇಶದೊಳಗಿನ ಚರ್ಚಿಲ್ಲರ ಮಧ್ಯಸ್ಥಿಕೆ ನಿರರ್ಥಕವಾದರೂ ಅವರು ಶಾಂತತೆ ಸ್ಥಾಪಿಸಿದ್ದು ಪ್ರಶಂಸನೀಯವಾದ ಸುದೈವ. ಮಿತ್ರಪಕ್ಷಕ್ಕೆ ದೈವ ಸಹಾಯವುಂಟೆಂದು ತೋರಿಸಿಕೊಡುವ ಚಿಹ್ನವೆಂದು ಹೇಳಬಹುದು.

(೨ನೇ ಪುಟದಿಂದ ಮುಂದರಿಸಿದ್ದು.)

ಈಗ ಸುಗ್ಗಿ ಬತ್ತದ ಹಂಗಾಮು. ಆದರೆ ಕೊಂಕಣದಲ್ಲಿ ಬೆಳೆಗಾರರು ತಮ್ಮ ಬೆಳೆದ ಬೆಳೆ ಭತ್ತವನ್ನು ನಿಯಂತ್ರಣಾಧಿಕಾರಿಗಳು ನಡುವೆಯೇ ಜಪ್ತ ಮಾಡಿದ ಸುದ್ದಿಗಳು ಬರುತ್ತವೆ! ಇದರಿಂದ ಎಷ್ಟೋ ಸುಗ್ಗಿ ಗದ್ದೆಗಳು ಈ ಸಲ ಬರಡಾಗಿ ಬೀಳುವ ಭೀತಿಯುಂಟು! ಭತ್ತ ಬಿತ್ತಿ ಭಾಗ್ಯವಂತರಾಗಲು ಬೋಧಿಸುವ ಸರಕಾರದ ನೌಕರರು ಹೀಗೆ ಭತ್ತ ಬೆಳಸಲು ಕೊಂಡರೆ ಕೊಡುತ್ತಿರುವದು ಸರಕಾರಕ್ಕೆ ಮಾನ್ಯವಿದೆಯೇ?

ಅಂಕೋಲಾ—(ತಾ ೨೭-೧೨-೪೪) ಈಗಿನ ಮಹರ್ಗತೆಯನ್ನು ಅನುಲಕ್ಷಿಸಿ ಸರಕಾರದವರು ತಮ್ಮ ಸಣ್ಣ-ದೊಡ್ಡ ನೌಕರರಿಗೆ ಯುದ್ಧಭತ್ತೆ, ತುಟ್ಟಿಭತ್ತೆ ಮುಂತಾದವನ್ನು ಕೊಟ್ಟು ಸಲಹುತ್ತಿದ್ದರೂ ಬಡ ಪ್ರಾಥಮಿಕ ಶಾಲಾ-ಶಿಕ್ಷಕರ ಕಷ್ಟಗಳ ಕಡೆ ಅವರ ಲಕ್ಷ ಹೋಗದಿದ್ದುದು ತೀರ ಆಶ್ಚರ್ಯಕರ. ಸರಕಾರಿ ಕಚೇರಿಗಳಲ್ಲಿರುವ ಪೇದೆ-ಪಟ್ಟೇವಾಲ-ಚಪರಾಸಿಗಳಿಗೆ ಸಿಗುವ ಸಂಬಳ ಸಹ ಅನೇಕ (ಮುಲ್ಕೀ ಪಾಸಾದ) ಶಿಕ್ಷಕರಿಗೆ ಸಿಗುವದಿಲ್ಲ! ತಿಂಗಳ ಕೊನೆಗೆ ಸಿಗುವ ಸಂಬಳವು ಬರೇ ಮೂವತ್ತು ಊಟಗಳಿಗೂ ಸಾಲದ್ದರಿಂದ ಹಂಗಾಮು ಶಿಕ್ಷಕರನೇಕ ಸಲುವಾಗಿ ಹೊರದು ಅನೇಕರು ಸಾಲಕ್ಕೆ ಸಿಕ್ಕಿದ್ದುಂಟು. ತಮ್ಮ ಕುಟುಂಬವಿದ್ದ ಸ್ಥಳದಿಂದ ದೂರವಿರುವ ಊರುಗಳಲ್ಲಿ ಬದಲಿಯಾದಾಗ ಇತ್ತ ಕುಟುಂಬದ ಪೋಷಣೆ ಮತ್ತು ಅತ್ತ ತನ್ನ ಊಟ-ಉಪಚಾರಗಳ ವ್ಯವಸ್ಥೆ ಮಾಡಲು ಕಠಿಣವೆನಿಸಿದ್ದರಿಂದ ರಜೆ ತಕ್ಕೊಂಡ ಶಿಕ್ಷಕರ ಉದಾಹರಣೆಗಳೂ ಅನೇಕವಿವೆ. ಈ ತುಟ್ಟಿಕಾಲದಲ್ಲಿ ಸಂಸಾರ ಸಾಗಿಸಲಾಗದೆ ಎಲ್ಲ ಶಿಕ್ಷಕರೂ ಬಳಲುತ್ತಿದ್ದಾರೆ; ಬಹಳ ಮುಂದೆ ಬೇಡಿದ್ದಾರೆ ಸರಕಾರದವರು ಇವರ ಕಡೆ ಲಕ್ಷ್ಯ ಮಾಡಿದ್ದು ಮುಂಬಯಿ ಜಿಲ್ಲಾ ಬೋರ್ಡಿನವರ ಕಡೆ ಬೊಟ್ಟು ತೋರಿಸಿ ಸರಕಾರದವರು ತಮ್ಮ ಹೊಣೆ ತಪ್ಪಿಸಿಕೊಳ್ಳಲಾರರು. ಶಿಕ್ಷಣದ ವ್ಯವಸ್ಥೆಯ ಪೂರ್ಣ ಜವಾಬದಾರಿಯು ಸರಕಾರದವರ ಮೇಲೆಯೇ ಉಂಟು. ಜಿಲ್ಲಾ ಬೋರ್ಡಿನವರಾಗಲಿ ಶಾಲಾ ಬೋರ್ಡಿನವರಾಗಲಿ ಸರಕಾರದವರ ಪ್ರತಿನಿಧಿಗಳು ಯಾನೆ ಏಜಂಟರು. ಇವೆಲ್ಲ ಸಂಗತಿಗಳ ವಿಚಾರ ಮಾಡಿ ಪ್ರಾಂತಿಕ ಸರಕಾರದವರು ಕೂಡಲೇ ಎಲ್ಲ ಪ್ರಾಥಮಿಕ ಶಾಲಾ-ಶಿಕ್ಷಕರಿಗೆ ನ್ಯಾಯ್ಯ ಮತ್ತು ಅವಶ್ಯವಿರುವ ತುಟ್ಟಿ-ಭತ್ತೆಯನ್ನು ಕೊಟ್ಟು ಸಲಹಬೇಕಾಗಿ ಬೇಡಿಕೆಯಿದೆ

ಕಾರವಾರ—(೨೮-೧೨-೪೪) ಇದೇ ಜನವರಿ ತಾ. ೯ ರಿಂದ ತಾ. ೧೫ ರ ವರೆಗೆ ಪ್ರಾಂತಾಧಿಪರಾದ ಸರ್ ಜೋನ್ ಕೊಲವಿಲ್‌ರವರು ಅಂಕೋಲಾ ತಾಲೂಕಿನ ಬೇಲಿಕೇರಿಯಲ್ಲಿ ಮುಕ್ಕಾಮು ಮಾಡುವವರಿದ್ದಾರೆ. ನಡುವೆ ೧ ದಿನ ಇಲ್ಲಿಗೆ ಬರುವರು. ಆಗ ನಗರಸಭೆಯವರೂ ಜಿಲ್ಲಾ ಲೋಕಲ್ ಬೋರ್ಡಿನವರೂ ಮಾನ ಪತ್ರಗಳನ್ನರ್ಪಿಸುವರಂತೆ. ಪ್ರಾಂತಾಧಿಪರು ಬಂದು ಹೋಗುವ ವರೆಗೆ ರಾ। ಬ। ಮೈಸೂರಕರರೇ ಜಿಲ್ಲಾಧಿಕಾರಿಗಳಾಗುಳಿಯುವರು.

೧೯೪೫ನೇ ಸಾಲಿನ ಮಾಧ್ಯಮಿಕ ಶಾಲೆಗಳ ಹಾಗೂ ಹಾಯಸ್ಕೂಲುಗಳ ಶಿಷ್ಯವೃತ್ತಿ-ಪರೀಕ್ಷೆಗಳು ತಾ. ೫-೨-೪೫ರಿಂದ ನಡೆಯಲಿವೆ. ಪರೀಕ್ಷೆಗಳಿಗೆ ಕೂಡ್ರಲಬೇಕೆನ್ನುವವರು ಜನವರಿ ತಾ. ೫ ರೊಳಗಾಗಿ ಅರ್ಜಿ ಮಾಡಬೇಕಂತೆ

The Agricultural & Industrial Bank, Ltd.
(Incorporated in British India Liability of Members Limited)
ಸ್ಥಾಪನೆ: 1934.
ಅಭಿನಂದನೆ.
ಬ್ಯಾಂಕಿನ ಡೈರೆಕ್ಟರರು 1944ರಲ್ಲಿ ಬ್ಯಾಂಕಿಗೆ ನೀಡಿದ ಸಹಕಾರ ಮತ್ತು
ಸಹಾಯಗಳಿಗೋಸ್ಕರ ತಮ್ಮ ಪಾಲುದಾರರು, ಠೇವಣಿದಾರರು ಹಾಗೂ
ಹಿತಚಿಂತಕರನ್ನು ಮನಸಾರೆ ಅಭಿನಂದಿಸುತ್ತಾರೆ ಮತ್ತು ನವ ವರ್ಷವು ಅವರಿಗೆ
ಶುಭದಾಯಕವಾಗಲೆಂದು ಬಯಸುವದರೊಂದಿಗೆ 1945ರಲ್ಲಿ ಅವರ ದ್ವಿಗುಣಿತ
ಸಹಕಾರ ಮತ್ತು ಸಹಾಯಗಳನ್ನು ಮುಂಗಾಣುತ್ತಿದ್ದಾರೆ.
ಮುಖ್ಯ ಕಚೇರಿ. ಕುಂದಾಪುರ,
1-1-1945.
K. VAMAN SHENAI,
President

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯೇ ಚಳಿ ಬೀಳುತ್ತಿದೆ. ಊರಲ್ಲಿ ತಕ್ಕಮಟ್ಟಿಗೆ ಆರೋಗ್ಯವುಂಟು.

ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಸ್ವಾಮಿಯವರ ಮುಕ್ಕಾಮು ಈ ವಾರದ ಕೊನೆಯ ವರೆಗೆ ಅಂಕೋಲೆಯಲ್ಲಿಯೇ ಇರುವುದೆಂತ ತೋರುತ್ತದೆ. ಗುಂಡಬಾಳ, ಹಿರೇಗುತ್ತಿ ಮತ್ತು ಮಾದನಗೇರಿ ಊರುಗಳ ಮಹಾಜನರು ತಮ್ಮಲ್ಲಿ ಶ್ರೀಗುರುಗಳು ಚಿತ್ತೈಸಬೇಕಾಗಿ ಆಗ್ರಹ ಮಾಡುತ್ತಿದ್ದಾರೆ. ಆದರೆ ಸದರಿ ಗ್ರಾಮಗಳೊಳಗಿನ ಹವೆಯು ಈಗ ಚಳಿಜ್ವರ ಪೀಡಿತರಿಗೆ ಪ್ರತಿಕೂಲವಿರುವದರಿಂದ ಶ್ರೀಗುರುಗಳು ಅವರ ನಿಮಂತ್ರಣವನ್ನು ಸ್ವೀಕರಿಸುವ ಸಂಭವ ಕಡಿಮೆ. ಇದೇ ಬರುವ ೧೧ನೆಯ ತಾರೀಖಿಗೆ ಶ್ರೀಪಾದಂಗಳು ಗೋಕರ್ಣಕ್ಕೆ ಹೋಗಿ ಅಮಾವಾಸ್ಯೆಯ ಮರುದಿನ ಕುಮಟೆಗೆ ಚಿತ್ತೈಸುವರೆಂದು ಹೇಳುತ್ತಾರೆ.

ಪೂರ್ಣ ಸೀಧಾ-ಕ್ರಮವೆಂಬುದು ಗೋಕರ್ಣಕ್ಕೆ ಈಗ ಬಹಳ ಬಾಧೆಯಾಗಿದೆ. ಗೋಕರ್ಣ ಸೀಧಾ-ಕ್ಷೇತ್ರದೊಳಗಿನ ಜನಸಂಖ್ಯೆ ೫೦ ಸಾವಿರದ ಆಚೆ-ಈಚೆಯುಂಟು. ಅಲ್ಲಿಯ ಸೀಧಾ ಸಿಬಂದಿಯ ಮಾಸಿಕ ವೆಚ್ಚ ರೂ ೧೦೦೦ದ ಒಳ ಹೊರಗುಂಟು. ಗೋಕರ್ಣ-ನಿವಾಸಿಗಳ ಪೈಕಿ ಸುಮಾರು ೨॥ ಸಾವಿರ ಜನರು ಜಮೀನದಾರರು ಇಲ್ಲವೆ ಸಾಗುವಳಿದಾರರಾಗಿದ್ದಾರೆ. ಅವರು ಅಕ್ಕಿಯ ಸೀಧಾ ಒಯ್ಯುವದು ಅಪರೂಪ. ಸೀಧಾ-ಸಿಬಂದಿಯ ವೆಚ್ಚದ ಬಗ್ಗೆ ಸರಕಾರದವರು ಅಕ್ಕಿಯ ಪ್ರತಿ ಪಾಯಲಿಯ ಮೇಲೆ ೨-೨॥ ಆಣೆ ವೆಚ್ಚಕ್ಕೆ ದರ ತಕ್ಕೊಳ್ಳುತ್ತಾರೆ. ಆದರಿಂದ ಸೀಧಾ-ಸಿಬಂದಿಯ ಖರ್ಚ ಅಕ್ಕಿಯ ಸೀಧಾ ಪಡೆಯುವ ೪ ಸಾವಿರ ಜನರ ತಲೆಯ ಮೇಲೆಯೇ ಬೀಳುತ್ತದೆ. ಲೆಕ್ಕ ಮಾಡಿದರೆ ಸೀಧಾ ಪಡಕೊಳ್ಳುವ ಗೋಕರ್ಣ ನಿವಾಸಿಗಳು ವರ್ಷಕ್ಕೆ ತಲಾ ರೂ ೪ ರಂತೆ ಜಾಸ್ತಿ ತೆರಬೇಕಾಗುತ್ತದೆ. ಇಷ್ಟು ಭಾರವನ್ನು ಬಡ ಗೋಕರ್ಣ ನಿವಾಸಿಗಳಿಂದ ವಸೂಲ ಮಾಡುವದು ನ್ಯಾಯ್ಯವೋ ಹೇಗೆಂಬುದು ಒಂದು ಪ್ರಶ್ನೆ. ಇನ್ನೊಂದು ಪ್ರಶ್ನೆಯೆಂದರೆ ಗೋಕರ್ಣದಂತಹ ಚಿಕ್ಕ ಊರಿನಲ್ಲಿ ಪ್ರತಿ ತಿಂಗಳಿಗೆ ರೂ. ೧೦೦೦ದಷ್ಟು ಸಂಬಳ ಪಡೆಯುವ ದೊಡ್ಡ ಸೀಧಾ-ಸಿಬಂದಿಯ ಆವಶ್ಯಕತೆಯುಂಟೇನೆಂಬುದು. ಈಗ ಅಲ್ಲಿ ೧ ಸೀಧಾ-ಅಧಿಕಾರಿ, ೪ ಸೀಧಾ ಇನ್ಸಪೆಕ್ಟರರು, ೯ ಪೋಲೀಸ ಶಿಪಾಯಿ, ೪ ಮಂದಿ ಕಾರಕೂನರು ಮತ್ತು ೨ ಯಾ ೩ ಸೇವಕರು ಹೀಗೆ ೧೩ ಜನರು ಸೀಧಾ-ಕಚೇರಿಯಲ್ಲಿದ್ದಾರೆ. ಇಷ್ಟು ಮಂದಿಗೆ ಅಲ್ಲಿ ಕೆಲಸವಿದ್ದದ್ದು ಕಂಡುಬರುವದಿಲ್ಲ. ಒಬ್ಬ ಸೀಧಾ ಅಧಿಕಾರಿ, ಒಬ್ಬ ಇನ್ಸಪೆಕ್ಟರ, ಒಬ್ಬ ಕಾರಕೂನ ಮತ್ತು ಒಬ್ಬ ಶಿಪಾಯಿ ಇದ್ದರೆ ಕಾರ್ಯನಿರ್ವಹಣ ಸಾಕಾಗಬಹುದಾಗಿ ಸೀಧಾ-ಕಚೇರಿಯವರ ಕೆಲಸವೇನೆಂದು ಅರಿವಾಗಿ ಅಭ್ಯಸಿಸಿದವರೊಬ್ಬರು ಖಂಡಿತ ಅಭಿಪ್ರಾಯ ಪಡುತ್ತಾರೆ. ಈಗ ಆ ಸೀಧಾ ಕಚೇರಿಯಲ್ಲಿ ಇನ್ಸಪೆಕ್ಟರರೂ ಕಾರಕೂನರೂ ಅಧಿಕಾರಿಗಳೂ ಆರಾಮವಾಗಿ ಕುಳಿತುಕೊಂಡು ಯಾವಾಗಲೂ ನಗೆ-ಚಾಟಿಕೆಗಳನ್ನು ಮಾಡುತ್ತಿರುವರಂತೆ. ಕಚೇರಿಯಲ್ಲಿ ಓರ್ವ ಕಾರಕೂನ-ಯುವತಿಯಿದ್ದಾಳೆ. ಕಚೇರಿಯೊಳಗಿನ ಬಹುತೇಕ ಜನರು ಅವಳೊಡನೆ ಹಾಸ್ಯ ಪರಿಹಾಸ್ಯ ಮಾಡುತ್ತಲೇ ಕಾಲಕಳೆಯುತ್ತಾರೆಂದೂ (ತರುಣ-ತರುಣಿಗಳು ಒಂದೆಡೆ ಕೂಡಿದಲ್ಲಿ ಹೀಗಾಗುವದು ಅಸ್ವಾಭಾವಿಕವೇನಲ್ಲ!) ಅವರ ಈ ನಡತೆ ಕಂಡು ತಮಗೆ ನಾಚಿಕೆಯಾಗುತ್ತದೆಂದೂ ಸೀಧಾ-ಕಚೇರಿಗೆ ಬರ-ಹೋಗುವ ಮಂದಿ ಊರೊಳಗೆ ಅಪಹಾಸ್ಯ ಮಾಡುತ್ತಿದ್ದಾರೆ! ಈ ಪ್ರಹಸನ-ನಾಟಕ ನೋಡಲು ತಾವು ತಿಂಗಳೊಂದಕ್ಕೆ ಸಾವಿರ ರೂಪಾಯಿ ತೆರಬೇಕೇನೆಂದು ಅವರು ಪ್ರಶ್ನೆಯನ್ನೂ ಮಾಡುತ್ತಾರೆ!

ಕುಮಟಾ ವ್ಯಾಯಾಮಶಾಲೆಯ ೧೯೪೩ ೪೪ರ ಜಮಾ-ಖರ್ಚುಗಳು ಹೀಗಿವೆ- ಜಮಾ ಹಿಂದಿನ ಶಿಲ್ಕು ರೂ ೩-೩-೬, ವರ್ಗಣಿ ರೂ ೪೧೫, ಮ್ಯುನಿಸಿಪಲ್ ಧನಸಹಾಯ ರೂ ೨೦೦, ಸರಕಾರಿ ಧನಸಹಾಯ ರೂ ೫೦ ಒಟ್ಟು ರೂ ೬೬೮-೩-೬ ಖರ್ಚು- ಶಿಕ್ಷಕವೇತನ ರೂ. ೪೧೦, ಇತರ ವೆಚ್ಚ ೧೯-೮-೯ ವರ್ಷಾಂತ್ಯದ ಶಿಲ್ಕು ರೂ. ೨೩೮-೧೦-೯. ವ್ಯಾಯಾಮ ಇನ್ಸಪೆಕ್ಟರರು ಕಳೆದ ನವ್ಹಂಬರದಲ್ಲಿ ಶಾಲೆಯ ಲೆಕ್ಕ-ಪತ್ರ, ಕಾರ್ಯಕಲಾಪಗಳನ್ನು ನೋಡಿಕೊಂಡು, ಶಾಲೆಗೆ ಸಾರ್ವಜನಿಕರು ಹೆಚ್ಚು ಸಹಾಯ ನೀಡಬೇಕಾಗಿ ಶಿಫಾರಸು ಮಾಡಿದ್ದಾರೆ.

ಯಲ್ಲಾಪುರ— (ತಾ ೧೪-೧೨ ೪೪) ೬೪ ಖಂಡಿಗಿಂತ ಹೆಚ್ಚಿಗೆ ಅಕ್ಕಿ ಶಿಲ್ಕು ಇದ್ದವರು ಆ ಹೆಚ್ಚಿನ ಅಕ್ಕಿಯನ್ನು ಸರಕಾರಕ್ಕೆ ಮಾರಬೇಕೆಂದು ಆಗಸ್ಟ ತಿಂಗಳ ಕೊನೆಗೆ ಜಿಲ್ಲಾಧಿಕಾರಿ ಹೊರಡಿಸಿದ ಹುಕುಮಿನ ವಿರುದ್ಧ ಪ್ರಾಂತಿಕ ಅನ್ನಾಹಾರ ಸಮಿತಿಯ ಸಭಾಸದ ಮಿ॥ ಬಾಪಟರವರು ದೂರುಕೊಳ್ಳಲಾಗಿ ಸದರಿ ಹುಕುಮು ಅಮಲಬಜಾವಣೆ ಮಾಡುವ ಬಗ್ಗೆ ಹೊರಡಿಸಿದ್ದಲ್ಲವೆಂದೂ ಜಿಲ್ಲೆಯಲ್ಲಿ ಅಕ್ಕಿಯ ಶಿಲ್ಕು ಎಷ್ಟುಂಟೆಂದು ತಿಳಕೊಳ್ಳುವ ಬಗ್ಗೆಯೇ ಅದನ್ನು ಹೊರಡಿಸಿತ್ತೆಂದೂ ಮಿ॥ ಬಾಪಟರು ಖುಲಾಸೆ ಮಾಡಿದ್ದರು. ಆದರೆ ಈಗ ಯಲ್ಲಾಪುರ ತಾಲೂಕಿನಲ್ಲಿ ಆ ಹುಕುಮಿನ ಅಮಲಬಜಾವಣೆ ಭರದಿಂದ ಸಾಗಿದೆ! ಆ ತಾಲೂಕ ಜನರು ಕೊಟ್ಟ ಲೆಕ್ಕದಂತೆ ಈಗ ಭತ್ತ ಖರೀದಿಯ ಜಪ್ತಿಯು ನಡೆದಿದೆ! ಮಾಮಲೇದಾರರಿಗೆ ಬಿಡುವೇ ಇಲ್ಲ! ಅವರು ಬೆಳೆಯ ಲೆಕ್ಕ ಮತ್ತು ಹಳೆಯ ಭತ್ತದ ಖರೀದಿಯಲ್ಲಿ ತೊಡಗಿದ್ದಾರೆ!

ಇಲ್ಲಿಯ ಸರಕಾರಿ ಉಗ್ರಾಣದಲ್ಲಿಯ ಬಹಳಷ್ಟು ಭತ್ತ ಅದೃಶ್ಯವಾಗಿದೆಯೆಂದು ಸುದ್ದಿ! ಅಕ್ಕಿ ಗಿರಣಿಗೆ ಅವಲಕ್ಕಿ ಮಾಡುವ ಯಂತ್ರ ಹಚ್ಚಿ ಅವಲಕ್ಕಿ ಮಾಡಿಸಿ ಅದನ್ನು ಕಳ್ಳತನದಿಂದ ಪರಸ್ಥಳಕ್ಕೆ ಕಳಿಸಿದ್ದರಿಂದಲೇ ಭತ್ತ ಕಡಿಮೆಯಾಗಿದೆಂತಲೂ ಮೇಲಿನ ಸುದ್ದಿ ಹೇಳುವವರು ಭತ್ತದ ಕೊರತೆಯ ನಿದಾನ ಮಾಡಿದ್ದಾರೆ. ಅದೃಶ್ಯವಾದ ಭತ್ತವನ್ನು ಹೇಗಾದರೂ ಭರ್ತಿ ಮಾಡಿಡಲು ಈಗ ಘೋರ ಪ್ರಯತ್ನ ನಡೆದಿದೆ! ಅದಕ್ಕಾಗಿಯೇ ಹಳೆಯ ಭತ್ತದ ಖರೀದಿ ನಡೆದಿದೆಯಂತೆ! ಮೇಲಧಿಕಾರಿಗಳು ಕೂಡಲೇ ಇಲ್ಲಿಯ ಉಗ್ರಾಣಗಳ ತಪಾಸಣೆ ಮಾಡಿ, ಅಖಂಡ ಭತ್ತ ಮಾಯವಾಗಿ ಹೊಳ್ಳು ಭತ್ತವೆಷ್ಟು ಉಗ್ರಾಣದಲ್ಲಿ ಸೇರಿಕೊಂಡಿದೆ, ಎಷ್ಟು ಭತ್ತ ಇಲಿಪಾಲಾಗಿದೆ, ಲೆಕ್ಕದಂತೆ ಎಷ್ಟು ಭತ್ತ ಶಿಲ್ಕು ಇರಬೇಕಿತ್ತು ಮತ್ತು ಪ್ರತ್ಯಕ್ಷ ಎಷ್ಟು ಭತ್ತ ಶಿಲ್ಕುಂಟು ಎಂಬುದರ ಪತ್ತೆ ಹಚ್ಚುವದೊಳಿತು. ದಿವಸಗಳೆ ದಾಟಿದರೆ ಈಗ ನಡೆದಿರುವ ವಂಚನೆಯನ್ನು ಕಂಡು ಹಿಡಿಯಲು ಮುಂದೆ ಕಷ್ಟವಾದೀತು. ಈ ಸಂಬಂಧದಲ್ಲಿ ಒಂದು ಸಂಗತಿ ನಮೂದಿಸಬೇಕಾಗಿದೆ. ಹಿಂದೆ ಇಲ್ಲಿ ಪರಸ್ಥಳದವರೊಬ್ಬರು ಉಗ್ರಾಣಪಾಲರಿದ್ದರು. ಮಾಮಲೇದಾರರು ಅವನನ್ನು ಓಡಿಸಿ ಸ್ಥಾನಿಕ ಜಮೀನದಾರ ಕಾನಭಟ್ಟರಿಗೆ ಆ ಕೆಲಸ ಒಪ್ಪಿಸಿದ್ದಾರೆ. ಕಲೆಕ್ಟರರ ಮಂಜೂರಿ ಸಿಗುವ ಮೊದಲೇ ಈ ನೇಮಣೂಕಿ ಮಾಡಿ ಹಿಂದಿನಿಂದ ಅದಕ್ಕೆ ಮಂಜೂರಿ ದೊರಕಿಸಿಕೊಂಡಿದ್ದಾರಂತೆ! ಅದರಲ್ಲಿಯ ವಿಷಯ ಶೋಧಿಸಬೇಕೆಂದು ಜನರು ಮಾತಾಡುತ್ತಾರೆ.

ಇತರ ತರಹ ಅಧಿಕಾರಿಗಳ ಲೀಲೆಗಳೂ ಅಗಾಧವಾಗಿವೆ! ಒಬ್ಬ ಅಧಿಕಾರಿಯ ಕಾಯಿದೆ ಒಂದಾದರೆ ಇನ್ನೊಬ್ಬರ ಕಾಯಿದೆ ಮಗದೊಂದು! 'ಕಾರ. ಬಿದ್ಧ (bonded)' ಮಾಡಿ ಉಗ್ರಾಣಗಳಲ್ಲಿ ಸಂಗ್ರಹ ಇಡುವ ಮೊದಲು ಅವಕ್ಕೆ ದಂಸ್ತಾನ ಮಾಡಿಡಲು ಕಾಯಿದೆಯಲ್ಲಿ ಅವಕಾಶವುಂಟು. ಈ ಉಗ್ರಾಣಗಳ ಕೀಲಿ ತಮ್ಮ ಕೈಯಲ್ಲೇ ಇರಬೇಕೆಂದು ಕೆಲ ಅಧಿಕಾರಿಗಳ ಆಗ್ರಹ! ಸ್ವಲ್ಪ ಹೊತ್ತು ಮೀರಿ ಅಕ್ಕಿ ಬಂದರೆ ಅದನ್ನು ಮಾಲೀಕರು ಉಗ್ರಾಣದ ಹೊರಗೇ ಇಟ್ಟು ಇಡೀ ರಾತ್ರಿ ಕಾಯುತ್ತ ಕೂಡ್ರಬೇಕು! ಉಗ್ರಾಣದ ಕೀಲಿ ಮಾತ್ರ ಅಧಿಕಾರಿಗಳು ಇಟ್ಟುಕೊಳ್ಳುತ್ತಾರೆ. ಆದರೆ ಅದರ ಕಾವಲಿಲ್ಲ, ಏನಿಲ್ಲ! ಒಳಗಿದ್ದ ಅಕ್ಕಿ ಎಲ್ಲಾದರೂ ಕಳ್ಳ ಕಡಿಮೆಯಾದರೆ ಯಾರು ಹೊಣೆಗಾರರೋ ದೇವರೇ ಬಲ್ಲ!

(ತಾ. ೨೪-೧೨-೪೪) ಪತ್ತಳ್ಳಿಯಲ್ಲಿ ಸರಕಾರಿ ಧನಸಹಾಯದಿಂದ ನಡೆಯುವ ಒಂದು ದವಾಖಾನೆಯುಂಟು. ಅಲ್ಲಿ ಈಗ ಬಡವರಿಗೆ ಮದ್ದು ಸಿಗುವದಿಲ್ಲವಂತೆ! ಮುದ್ದವರಿಗೆ— ಡಾಕ್ಟರರು ಬೇಡಿದಷ್ಟು ಹಣ ಕೊಟ್ಟವರಿಗೆ ಮಾತ್ರ— ಮದ್ದು ಸಿಗುತ್ತದಂತೆ! ಮೇಲಾಧಿಕಾರಿಗಳು ಇತ್ತ ಗಮನಕೊಟ್ಟು ಡಾಕ್ಟರರಿಗೆ ಬುದ್ಧಿ ಹೇಳಬೇಕಾಗಿ ಬಿನ್ನಹವಿದೆ.

ಹೊನ್ನಾವರ— (ತಾ ೨೮-೧೨-೪೪) ಕಳೆದ ಸೋಮವಾರ ಇಲ್ಲಿಯ ಫೌಜದಾರರು ಸಂತೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಗೇರಸೊಪ್ಪೆಯಿಂದ ಬರುತ್ತಿದ್ದ ಕೆಲವು ದೋಣಿಗಳು ಅವರ ಕಣ್ಣಿಗೆ ಬಿದ್ದವಂತೆ! ಅವನ್ನೆಲ್ಲ ಅವರು ಧಕ್ಕೆಗೆ ತರಿಸಿ ತಪಾಸಣೆ ಮಾಡಿದರಂತೆ. ಹನುಮಂತನೆಂಬವನ ದೋಣಿಯಲ್ಲಿ ಪ್ರಯಾಣಿಕರಿದ್ದರು; ಕೆಲವು ಅಕ್ಕಿಯ ಗಂಟುಗಳೂ ಇದ್ದವು. ಆ ದೋಣಿಯನ್ನು ಇಟ್ಟುಕೊಂಡು ಫೌಜದಾರರು ಬೇರೆ ದೋಣಿಗಳನ್ನು ಬಿಟ್ಟುಕೊಟ್ಟರು. ಹಾಗೂ ಆ ಅಕ್ಕಿಗಂಟುಗಳನ್ನು ಅವುಗಳ ಮಾಲಕರಾದ ಜನರ ವಶಕ್ಕೆ ಕೊಡಕೂಡದೆಂದು ಹನುಮಂತನಿಗೆ ಹೇಳಿ ಅವನ ಕಡೆಗಿದ್ದ ಹಕ್ಕು ಪತ್ರಗಳನ್ನು ಕಸಿದುಕೊಂಡರಂತೆ! ಹನುಮಂತನಿಗೆ ಕಷ್ಟವಾಯಿತು. ಗಂಟುಗಳನ್ನು ಮಾಲಕರಿಗೆ ಮುಟ್ಟಿಸಲಿಕ್ಕೆ ಹಕ್ಕು ಉಳಿದಿಲ್ಲ; ದೋಣಿಯಲ್ಲಿ ಬಿಟ್ಟು ನಡೆದರೆ ಕಳ್ಳರ ಭೀತಿ! ನಿನ್ನೆ ಬುಧವಾರ ಅವರ ಫೌಜದಾರರದೂ ಪತ್ತೆಯಿಲ್ಲ! ಅದರಿಂದ ಹನುಮಂತನು ದೋಣಿಯಲ್ಲೇ ಉಪವಾಸ ಉಳಿಯಬೇಕಾಯಿತು! ಈ ಹೊತ್ತು ಫೌಜದಾರರ ಹುಕುಮಿನಂತೆ ಓರ್ವ ಪೋಲೀಸನು ಬಂದು ಆ ಗಂಟುಗಳನ್ನು ತನ್ನ ಸ್ವಾಧೀನಪಡಿಸಿಕೊಂಡಿದ್ದಾನಂತೆ. ಪೋಲೀಸ ಅಮಲದಾರರು ಹೀಗೆ ಬಡವರಿಗೆ ದಣಿಸಿದ್ದು ಯುಕ್ತವೇ?

(೧ನೇ ಪುಟದ ಮೇಲೆ ಮುಂದರಿದಿದೆ.)

ಜಾಹೀರ ವಿನಂತಿ.

ಕುಮಟಾ ತಾಲೂಕ ಬಾಡ ಶ್ರೀ ಶಾಂತಿಕಾಪರಮೇಶ್ವರೀ ಅಮ್ಮನವರ ಅಷ್ಟಬಂಧವು ಜೀರ್ಣವಾಗಿ ಅದರಿಂದ ರಾಷ್ಟ್ರಕ್ಷೋಭಾದಿ ದೋಷದರ್ಶನವು ಪ್ರತ್ಯಕ್ಷವಾಗಿರುವದರಿಂದ ಆ ಎಲ್ಲ ದೋಷನಿವಾರಣೆಯ ಮೂಲಕ ಸಕಲ ಭಕ್ತವೃಂದದ ಶ್ರೇಯಸ್ಸಿನ ಬಗ್ಗೆ ಶ್ರೀ ದೇವರ ನೂತನ ಅಷ್ಟಬಂಧ ಮಹೋತ್ಸವವನ್ನು ಇದೇ ಬರುವ ಮಾಘ ಮಾಸದಲ್ಲಿ ನೆರವೇರಿಸಬೇಕಾಗಿ ನಿಶ್ಚೈಸಿರುತ್ತದೆ. ಕಾರಣ ಆಪತ್ ದುಷ್ಕಾಲದ ಈ ಕಾಲದಲ್ಲಿ ಈ ಮಹತ್ಕಾರ್ಯವನ್ನು ಬರೇ ಶ್ರೀ ಭಂಡಾರದಿಂದ ನಿರ್ವಹಿಸುವದು ಅತಿ ಕಷ್ಟಸಾಧ್ಯವಾದ್ದರಿಂದ ಆಸ್ತಿಕ ಭಕ್ತ ಮಹಾಶಯರೆಲ್ಲರೂ ಶ್ರೀ ದೇವರ ನಿಸ್ಬತ್ ಬರುವ ಶ್ರೀ॥ ರಾಮಕೃಷ್ಣ ಸುಬ್ರಾಯ ನಾಯಕ, ಗುಡೇಅಂಗಡಿ ಮತ್ತು ಶ್ರೀ॥ ಪಾಂಡುರಂಗ ವೆಂಕಟೇಶ ಪೈ, ಕಾಗಾಲ ಮೊದಲಾದವರು ಶಿರ್ಸಿ, ಹುಬ್ಬಳ್ಳಿ, ಮುಂಬಯಿ, ಬೆಳಗಾಂವ ಕಡೆಗೆ ಹೊರಡುವವರಿದ್ದಾರೆ. ಕಾರಣ ಸದ್ಭಕ್ತರು ಅವರ ಕಡೆಗೆ ಶ್ರೀ ದೇವರ ಮೋಹರ ಸಿಕ್ಕೆ ಪಾವತಿ ತಕ್ಕೊಂಡು ಕೈಲಾದ ದ್ರವ್ಯಸಹಾಯ ಮಾಡಿ ಶ್ರೇಯಸ್ಸು ಪಡೆಯಬೇಕಾಗಿ ವಿನಂತಿ.

ಗಣೇಶ ನಾಗಾಭಟ್ಟ ಪೈವಾಟಿ-ಮೊಕ್ತೇಸರ
ತಾಲೂಕ— ಕುಮಟಾ ಪೋಸ್ಟ— ಗುಡೇಅಂಗಡಿ.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡುವವಳು ಜಾಹೀರಪಡಿಸುವದೇನೆಂದರೆ- ಕುಮಟಾ ತಾಲೂಕ ಬೆಟಕುಳಿ ಗ್ರಾಮದಲ್ಲಿರುವ ಬಳಗ ಪರಮಯ್ಯ ಈತನು ನನ್ನ ಮಾವನಾಗಿದ್ದು, ಮುಪ್ಪಿನ ಮುದುಕನಾಗಿರುವನು. ನನ್ನ ಗಂಡನು ತೀರಿದ ಬಳಿಕ ಆತನು ನಿಷ್ಕ್ರಿಯನಾಗಿರುತ್ತಾನೆ. ನಮ್ಮ ಮನೆತನಕ್ಕೆ ಸಾಲ ವಗೈರೆ ಇರುವದಿಲ್ಲ. ಆತನು ನಮ್ಮ ಅವಿಭಕ್ತ ಕುಟುಂಬದ ಆಸ್ತಿಗಳನ್ನೂ ಚಿನ್ನ ವಗೈರೆ ದಾಗಿನೆಗಳನ್ನೂ ಪರಾಧೀನ ಮಾಡುವವನಿದ್ದಾನೆಂದು ಕೇಳುತ್ತೇನೆ. ಈ ಆಸ್ತಿಗಳ ಮೇಲೆ ನನ್ನ ಜೀವನಾಂಶದ ಹಕ್ಕು ಇರುವದೆಂದು ಇದರ ಮೂಲಕ ಪ್ರಕಟಿಸುವೆನು

ಕಾವನ, ತಾ. ೨೯-೧೨-೪೪

● ಈ ಎಡಗೈ ಹೆಬ್ಬೆಟ್ಟಿನ ಗುರ್ತು ನಾಗವ್ವ
ಕೋಂ **ಗೋಳಿ** ಇವಳದಾಗಿರುತ್ತದೆ

ಹೊಸ ಪುಸ್ತಕಗಳು ಸಿಗುವವು !
ಶಾಲೋಪಯೋಗಿ ಕನ್ನಡ, ಮರಾಠಿ, ಇಂಗ್ಲಿಷ, ಹಿಂದಿ ಹೊಸ ಪುಸ್ತಕಗಳು ನಮ್ಮಲ್ಲಿ ಯೋಗ್ಯ ದರದಲ್ಲಿ ಸಿಗುತ್ತವೆ.
ದಿ ನೂತನ ಸಾಹಿತ್ಯ ಏಜನ್ಸಿ, ಕ[illegible]ಟಾ

Notice to Motor Owners in the Karnatak Region.

Owners of motor vehicles residing in Karnatak Region are hereby informed that the tax for the last quarter of the current financial year ending 31-3-1945 in respect of vehicles registered in the Bombay Province should be paid on or before 15-1-1945 and in respect of vehicles bearing extra-provincial and State registration marks on or before 31-12-44, in cash, crossed cheques drawn on the Imperial Bank of India, Belgaum only chalans or by money orders at the Regional Transport Office, Belgaum. Cash will be accepted between 11-0 a. m. & 3-0 p m on week days and between 9-30 a m & 11-0 a. m on Saturdays

2 Every payment of tax should invariably be accompanied by (i) a declaration in form "AT" for a vehicle registered in the Bombay Province and form 'FT' for a vehicle registered elsewhere. (ii) registration certificate of the vehicle and (iii) an insurance Policy in respect of a heavy transport vehicle.

3 Non use intimation in respect of all vehicles which are kept idle should be submitted so as to reach this office before the date on which tax tokens already issued for such vehicles expire.

No 12039/2 K/KR of 44
Regional Transport Office,
Belgaum, 22-12-44.

J. B. RABBITT.
Regional Transport Officer
Karnatak Region, BELGAUM

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸಾರಥಿ ಪ್ರೆಸ್

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು
ವರ್ಗಣಿ ಮುಂಗಡಕೊಟ್ಟಿರಬೇಕು

Reg. No. B 1270. Monday, 8th January, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೨೮

ಕುಮಟಾ:- ಸೋಮವಾರ, ತಾ. ೮ ಮಾಹೆ ಜನವರಿ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ,
ಸ್ಮಾಲಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೪ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಸ್ಥಳಿಕ ವಿಷಯಗಳು.

ಲೇಖಕ: ಸ್ಥಳವಂತಿಕ.

ಪ್ರಾಂತಾಧಿಪರಾದ ಸರ್ ಜ್ಯೊನ ಕೊಲವಿಲ್ಲರವರು ಈ ವಾರ ನಮ್ಮ ಜಿಲ್ಲೆಗೆ ಚಿತ್ತೈಸುತ್ತಾರೆ. ಆಗ ಶಿಷ್ಟಾಚಾರದಂತೆ ಜಿಲ್ಲಾ ಲೋಕಲ ಬೋರ್ಡ, ಮ್ಯುನಿಸಿಪಾಲಿಟಿ ಮೊದಲಾದ ಸಂಸ್ಥೆಗಳು ಅವರಿಗೆ ಮಾನಪತ್ರಗಳನ್ನು ಸಮರ್ಪಿಸುವವು. ಪ್ರಾಂತಾಧಿಪರು ಆ ಸಮಯದಲ್ಲಿ ಪ್ರಜೆಗಳಿಗೆ ಕಷ್ಟಪರಿಹಾರದ ಅಭಿವಚನ ಅನುಗ್ರಹಿಸುವದುಂಟು. ಈಗಿನ ಕಾಲ ಬಡ ಜನರ ಭವಣೆಯದು. ಸೀಧಾ-ಯುಗದಲ್ಲಿ ಬಡ ಜನರು ಬೆಂದುಬೆಂಡಾಗಿದ್ದಾರೆ. ಸೀಧಾ-ಅಂಗಡಿಯಲ್ಲಿ ಸರಕಾರದವರು ಅಕ್ಕಿ ಕೊಡುತ್ತಿದ್ದಾರೇನೋ ಅಹುದು. ಆದರೆ ಅದನ್ನು ಕೊಳ್ಳಲಿಕ್ಕೆ ಜನರ ಕೈಯಲ್ಲಿ ಹಣವಿಲ್ಲ! ನಮ್ಮ ಬಡ ಜಿಲ್ಲೆಯಲ್ಲಿ ಅಕ್ಕಿಯ ದರ ಮುಂಬಯಿಗಿಂತ ಹೆಚ್ಚು ಇರುತ್ತದೆ! ಆದರೆ ಶ್ರೀಮಂತರು ಉಣ್ಣುವ ನುಚ್ಚಕ್ಕಿ ಅಗ್ಗ! ಬಡವರು ಉಣ್ಣುವ ದೊಡ್ಡಕ್ಕಿ ತುಟ್ಟಿ!! ಧಾರವಾಡ ಜಿಲ್ಲೆಯೊಳಗೆ ನುಚ್ಚಕ್ಕಿ ರೂ. ೧ಕ್ಕೆ ೨ ಸೇರುಗಳಂತೆ ಮಾರಲ್ಪಡುತ್ತದೆ. ಅದೇ ಅಕ್ಕಿಯನ್ನು ನಮ್ಮ ಜಿಲ್ಲೆಯೊಳಗೆ ರೂ. ೧ಕ್ಕೆ ೪ ಸೇರುಗಳಂತೆ ಮಾರಬೇಕೆಂದು ಜಿಲ್ಲಾಧಿಕಾರಿಗಳ ಶಾಸನ! ಇಂಥ ಶಾಸನಗಳಿಂದಲೇ ಜನರ ನುಚ್ಚಕ್ಕಿ ಕಳ್ಳ ವ್ಯಾಪಾರದಿಂದ ಹೊರಹೋಗಿ ಸೀಮೆ ಸೇರುತ್ತದೆ. ಧಾರವಾಡ ಸೀಧಾ ಪ್ರದೇಶಗಳಲ್ಲಿ ಸೀಧಾ ಶಿಬಂದಿಯ ಖರ್ಚು ಸೀಧಾ ಕ್ಷೇತ್ರವಾಸಿಗಳ ಮೇಲೆ ಹೇರಲ್ಪಡುತ್ತದೆ. ಸಾಮಾನ್ಯವಾಗಿ ಅಕ್ಕಿ ಖಂಡಿಯೊಂದಕ್ಕೆ ೨ ಆಣೆ ದರ ಹೆಚ್ಚುಕಟ್ಟಿ ಈ ಖರ್ಚು ವಸೂಲ ಮಾಡುತ್ತಾರೆ. ಪ್ರಾಂತಾಧಿಪರು ಬಡ ಜನರ ಅಕ್ಕಿಯ ದರವನ್ನು ಇಳಿಸುವ ಘೋಷಣೆ ಮಾಡಿ ಇವರನ್ನು ಸಲಹಬೇಕಾಗಿ ಸೂಚನೆಯಿದೆ.

⁂

ಇಡೀ ಮುಂಬಯಿ ಪ್ರಾಂತದೊಳಗೆ ಹೊಸ ಸರಕಾರಿ ಧೋರಣದಿಂದ ಸಾಗುವಳಿಯಾಗುವ ಹೊಲಗಳ ಕ್ಷೇತ್ರ ಮಿಗಿಲಾಗಿದೆ. ನಮ್ಮ ಜಿಲ್ಲೆಯಲ್ಲಿ ಮಾತ್ರ ಅದು ಬಹಳ ಕುಗ್ಗಿದೆ. ೫೦ ವರ್ಷಗಳ ಹಿಂದೆ ಅಂದರೆ ೧೮೯೦ನೇ ಇಸ್ವಿಯಲ್ಲಿ ನಮ್ಮ ಜಿಲ್ಲೆಯೊಳಗೆ ೧,೯೬,೦೦೦ ಎಕರೆ ನೆಲದ ಭೂಮಿಯಲ್ಲಿ ಭತ್ತ ಬೆಳೆಯುತ್ತಿತ್ತು. ಈಗ ೧,೬೩,೦೦೦ ಎಕರೆ ಹೊಲದಲ್ಲಿ ಮಾತ್ರ ಬೆಳೆಯುತ್ತಿದೆ. ಹಿಂದೆ ಕಬ್ಬು, ಭತ್ತಗಳಿಂದ ನಲಿಯುತ್ತಿದ್ದ ಪ್ರದೇಶಗಳು ಈಗ ಬಂಜರು ಬಿದ್ದಿವೆಯೆಂದು ಜಂಗಲ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಮಿ|| ಕೊಲಿಪ್ಸನ್‌ರವರು ಬರೆದಿದ್ದುಂಟು. ಅಲ್ಲಲ್ಲಿಯ ಕೆರೆಗಳನ್ನು ದುರುಸ್ತಿಗೊಳಿಸದೆ ಸರಕಾರವು ಹಾಳುಗೆಡಹಿದ್ದರಿಂದ ಸಾವಿರಾರು ಎಕರೆ ಹೊಲ ಹಾಳಾಗಿ ಹೋಗಿವೆಯೆಂದು ೧೦ ವರ್ಷಗಳ ಹಿಂದೆ ಶಿರ್ಸಿ ವಿಭಾಗದ ಪ್ರಾಂತ ಸಾಹೇಬರಾಗಿದ್ದು ಈಗ ಮುಂಬಯಿ ಸರಕಾರದ ಮುಲ್ಕೀ ಇಲಾಖೆಯ ಕಾರ್ಯದರ್ಶಿಗಳಾಗಿರುವ ಮಿ|| ಮೇ[illegible]ಯವರು ಅಭಿಪ್ರಾಯ ನೀಡಿದ್ದುಂಟು. ಕಳೆದ [illegible]ಗಳಲ್ಲಿ ಮುಂಬಯಿ ಪ್ರಾಂತದ ಜನಸಂಖ್ಯೆ ೧ ಕೋಟಿ ೫೩ ಲಕ್ಷದಿಂದ ೨ ಕೋಟಿ ೮ ಲಕ್ಷಕ್ಕೆ ಏರಿದೆ. ಅದೇ ಅವಧಿಯಲ್ಲಿ ನಮ್ಮ ಜಿಲ್ಲೆಯ ಲೋಕಸಂಖ್ಯೆ ೪ ಲಕ್ಷ ೫೪ ಸಾವಿರದಿಂದ ೪ ಲಕ್ಷ ೪೧ ಸಾವಿರಕ್ಕೆ ಇಳಿದಿದೆ! ಘಟ್ಟದ ಕೆಳಗಿನ ಪ್ರದೇಶಕ್ಕಿಂತ ಘಟ್ಟದ ಮೇಲಿನ ಪ್ರದೇಶ[illegible] ಲೋಕಸಂಖ್ಯೆ ಹೆಚ್ಚು ಕುಗ್ಗಿದೆ. ಅಲ್ಲಿಯ ನೂರಾರು ಹಳ್ಳಿಗಳು ನಿರ್ಜನವಾಗಿ ಬಿಟ್ಟದಲ್ಲಿ ಸೇರಿಕೊಂಡಿವೆ! ಮೊದಲು ಜನನಾಶ, ಆ ಮೇಲೆ ಭೂನಾಶ ಹೀಗೆ ಸ್ಥಿತ್ಯಂತರವಾಗಿದೆ. ಈ ಪರಿ ಲೋಕ-ನಾಶವಾಗಲು ಛಳಿಜ್ವರದ ಹಾವಳಿಯೇ ಕಾರಣವೆಂದು ನಿರ್ಧರಿಸಲ್ಪಟ್ಟಿದೆ. ಪಟ್ಟೆವಯ ಸಾನ್ನಿಧ್ಯವೇ ಈ ಚಳಿಜ್ವರಕ್ಕೆ ಕಾರಣ. ಜಂಗಲ ಅಧಿಕಾರಿಗಳಿಗೆ ಜನರಿಗಿಂತ ಕಾಡು ಜಾನುವಾರಗಳ ಮೇಲೆಯೇ ಮಮತೆ ಹೆಚ್ಚು! ಅದರೂ ಸ್ವತಃ ಮನುಷ್ಯ [illegible] ಅವರಿಗೆ ಕರೆಕೊಂಟು. "ಕಾನಡಾ ಜಿಲ್ಲೆಯ ರೈತರು ಯಾವಾಗಲೂ ಚಳಿಜ್ವರ ಮತ್ತು ಕಾಡುಹಂದಿಗಳೊಡನೆ ಹೋರಾಡುತ್ತಿರಬೇಕಾಗಿದೆ! ಅವರ ಜೀವಬದುಕೇ ಹಾಗೆ!" ಎಂದು ಮಿ|| ಕೊಲಿಪ್ಸನ್‌ರವರು ಬರೆದಿಟ್ಟಿದ್ದಾರೆ. ಪ್ರಾಂತಿಕ ಸರಕಾರವು ಪ್ರಾಂತದ ಅಭ್ಯುದಯಕ್ಕಾಗಿ (೧೫ ವರ್ಷಗಳ) ಯೋಜನೆಯನ್ನೊಂದು ತಯಾರಿಸಿದೆ. ಆ ಯೋಜನೆಗಾಗಿ ಕೋಟ್ಯಾವಧಿ ರೂಪಾಯಿಗಳು ಖರ್ಚಾಗಲಿವೆ. ಈ ಉದ್ಧಾರ-ಯೋಜನೆಯಲ್ಲಿ ನಮ್ಮ ಜಿಲ್ಲೆ ಸೇರಲಿಕ್ಕೆ ಶಾಸ್ತ್ರವಿದ್ಯಾಗಳು ಅದನ್ನು ಅದರಲ್ಲಿ ಸೇರಿಸದಿರಲು ಕಾರಣವೇನೆಂದು ತಿಳಿಯುವದಿಲ್ಲ. ನಮ್ಮ ಜಿಲ್ಲೆಯಲ್ಲಿ ಸೈನ್ಯಭರತಿಯಾಗದೆ ಇಲ್ಲ; ಯುದ್ಧಸಾಲ, ಯುದ್ಧ ಕಾಣಿಕೆ, [illegible]ನಿಧಿ, ಸೈನ್ಯಭರತಿ-ನಿಧಿ ಮೊದಲಾದ ನಿಧಿಗಳಿಗೂ ಜನರ ಹಣ ಹರಿಯಲಾಗಿದೆ. ಕಾನಡಾ ಭಾಗದ ಅಂಕೋಲೆ ಜನರಲ್ಲಿ ಹೆಸರು ಪಡೆದ ಅಂಕೋಲಾ ತಾಲೂಕಿನಲ್ಲೂ ಆಟ-ನಾಟಕಗಳಿಂದ ಪ್ರಾಂತ ಸಾಹೇಬರೂ ಮಾಮಲೇದಾರರೂ ಇನ್ನಿತರ ನಿಯಂತ್ರಣ, ಪೋಲೀಸ ಅಧಿಕಾರಿಗಳೂ ಕೂಡಿ ಸೈನ್ಯಭರತಿ (ರಿಕ್ರೂಟಿಂಗ ಫಂಡ) ನಿಧಿಗೆ ಬಹಳ ಹಣ ಎತ್ತುವಳಿ ಮಾಡಿದ್ದುಂಟು. ಯುದ್ಧಕಾರ್ಯಕ್ಕೆ ಅವಶ್ಯವಿದ್ದ ಕಟ್ಟಿಗೆಯನ್ನು ಕಪ್ಪುರಕೆಯಿಂದ ಪೂರೈಸಿ ಯುದ್ಧ-ಸೇವೆ ಸಲ್ಲಿಸಿದ್ದುಂಟು. ನಮ್ಮಲ್ಲಿಯ ಜಂಗಲ ಇಲಾಖೆಯಿಂದ ಪ್ರಾಂತಿಕ ಸರಕಾರಕ್ಕೆ ಕೋಟ್ಯಾವಧಿ ರೂಪಾಯಿಗಳ ಪ್ರಾಪ್ತಿಯಾದದ್ದುಂಟು. ಹೀಗಿದ್ದೂ ನಮ್ಮ ಜಿಲ್ಲೆಯನ್ನು ಯುದ್ಧೋತ್ತರ ಉದ್ಧಾರ-ಯೋಜನೆಯಲ್ಲಿ ಬಿಟ್ಟು ಬಿಟ್ಟದ್ದು ಅನ್ಯಾಯವೆಂದು ಬೇರೆ ಹೇಳಬೇಕಾಗಿಲ್ಲ. ಪ್ರಾಂತಾಧಿಪರು ಈ ಕುರಿತು ಘೋಷಣೆ ಮಾಡಬೇಕಾಗಿ ಹಲವರ ಅಪೇಕ್ಷೆಯುಂಟು. ಯುದ್ಧ ಮುಗಿಯಲಿಕ್ಕೆ ಇನ್ನೂ ಅವಕಾಶವಿದೆ. ಇನ್ನೂ ಹೆಚ್ಚೆಂದರೆ ೫ ವರ್ಷ ಈ ಯುದ್ಧ ನಡೆಯುವದೆಂದು ಈಗಿನ ಲಕ್ಷಣಗಳ ಮೇಲಿಂದ ಕಾಣುತ್ತದೆ. ಆದ್ದರಿಂದ ಯುದ್ಧೋತ್ತರ ಉದ್ಧಾರ-ಯೋಜನೆಯ ಸ್ವರೂಪವನ್ನು ಈಗ ನಿರ್ಧರಿಸುವದಾಗಲಿ ಅದನ್ನು ಬದಲಿಸುವದಾಗಲಿ ಅಯೋಗ್ಯ. ಪ್ರಾಂತಾಧಿಪರು ಇದೀಗ ಆ ಕಡೆಗೆ ಪ್ರಜಾರಕ್ಷಣೆಯ ಯೋಜನೆ ಕೈಕೊಳ್ಳುವ ಸಂಕಲ್ಪವನ್ನು ಸಾರಬೇಕು. ಪ್ರತ್ಯೇಕವಾಗಿ ಜಂಗಲ ಇಲಾಖೆಗೆ ಒಳಪಟ್ಟ ಪ್ರದೇಶದ ಹುಲ್ಲುಬನ-ಬೇಣ ಹಾಡಿ, ಕಾನು-ಬ್ಯಾಣಗಳು ನೆರೆಹೊರೆಯಲ್ಲಿರುವ ಹೊಲಗಳಿಗೆ ನೀರದಂತೆ ಪ್ರತಿಬಂಧಿಸುವ ಯೋಜನೆಯಾಗುತ್ತದೆ. ಕಿರುಕುಳ ಬೀಳದಂತೆ ಜಾಗ್ರತೆ ವಹಿಸುತ್ತಾರೆ. ಇದರಂತೆ ಉಳಿದ ಕೆರೆಗಳನ್ನು ನಮ್ಮ ಜಿಲ್ಲೆಯೊಳಗೆ ದುರಸ್ತಿಗೊಳಿಸುವಂತೆ ಪ್ರಾಂತಾಧಿಪರು ಅಪ್ಪಣೆ ದಯಪಾಲಿಸಬೇಕು. ಹೆಚ್ಚೆಚ್ಚು ಆಹಾರ-ಧಾನ್ಯ ಬೆಳೆಸಿರೆಂದು ರಾಷ್ಟ್ರೀಯ ರಣರಂಗದ ಪ್ರಮುಖರು ಸಮಯ ಸಿಕ್ಕಿದಾಗ ಕೃಷಿಕವರ್ಗಕ್ಕೆ ಸಂಬಂಧವಿಲ್ಲದ ನಾಲ್ಕು ಜನರನ್ನು ಕೂಡಿಸಿ ಕೊಡುವ ಪ್ರವಚನಗಳಿಂದ ಸರಕಾರಕ್ಕೆ ಭಕ್ತಿ ತೋರಿದ ಖರ್ಚು ಮಾತ್ರ ಬೀಳುತ್ತದೆ, ಹೊರತು ಜನರಿಗಾಗಲಿ ಸರಕಾರಕ್ಕಾಗಲಿ ಪ್ರಯೋಜನ ಸಿಗುವದಿಲ್ಲ. ಗ್ರಾಮಗಳಲ್ಲಿ ಜನರಿಗೆ ಹೇಳಿದಂತೆ ಪ್ರತ್ಯಕ್ಷ ನಡೆದರೆ ಮಾತ್ರ ಏನಾದರೂ ಪ್ರಯೋಜನ ದೊರೆಯುವಂತಿದೆ. ಪ್ರಾಂತಾಧಿಪರುಗಳ ಆಗಮನದಿಂದ ಇಂತಹ ಲೋಕ ಕಲ್ಯಾಣದ ಯೋಜನೆಗಳೇನಾದರೂ ಆದರೆ ಅವರ ಸತ್ಕಾರ ಸಮಾರಂಭಗಳೂ ಅನ್ವರ್ಥಕವಾಗಿ ಆಗಿ ನಮ್ಮವೂ ಸಾರ್ಥಕವಾದಂತಾದೀತು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಶುಕ್ರವಾರ ರಾತ್ರಿ ೮ [illegible] ಘಂಟೆಯ ಸುಮಾರಿಗೆ ಒಮ್ಮೆಲೇ ೧ ತಾಸು ತನಕ ಬಹಳ ಮಳೆ ಸುರಿಯಿತು. ಮೊನ್ನೆಯಿಂದ ಪುನಃ ವಿಪರೀತ ಛಳಿ.

ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥತೀರ್ಥ ಗುರುಗಳು ನಿನ್ನೆ ಅಂಕೋಲೆಯಿಂದ ಗುಂಡಬಾಳೆಗೆ ದಯಮಾಡಿಸಿದ್ದಾರೆ. ನಾಳೆ ಗುಂಡಬಾಳೆಯಿಂದ ಗೋಕರ್ಣಕ್ಕೆ ಚಿತ್ತೈಸುವರು. ಅಮಾವಾಸ್ಯೆಯ ತನಕ ಶ್ರೀಗಳ ಮುಕ್ಕಾಮು ಗೋಕರ್ಣದಲ್ಲಾಗುವದಂತೆ. ಅನಂತರ ೧ ದಿನ ವಾಡ ನಗೆಯಲ್ಲೂ, ೧ ದಿನ ಹಿರೇಗುತ್ತಿಯಲ್ಲೂ ಮುಕ್ಕಾಮು ಮಾಡಿ ಮುಂದಿನ ಮಂಗಳವಾರ ಶ್ರೀಪಾದಂಗಳು ಇಲ್ಲಿ ಕುಮಟೆಗೆ ದಯಮಾಡಿಸುವರಾಗಿ ಗೊತ್ತಾಗಿದೆ. ರಥ ಸಪ್ತಮಿಯ ರಥೋತ್ಸವಕ್ಕೆ ಕುಮಟೆಗೆ ಬರಬೇಕೆಂದು [illegible] ಮಂಗಳವಾರದೊಳಗಾಗಿ ಅನುಗ್ರಹಿಸಬೇಕಾಗಿಯೂ ಗುರುಗಳಿಗೆ ನಿಮಂತ್ರಣ ಕೊಡುವದಕ್ಕಾಗಿ ಇಲ್ಲಿಯ ಮುಖಂಡರ ಶಿಷ್ಯರು ಶ್ರೀಗಳಲ್ಲಿಗೆ ನಿನ್ನೆ ರವಾನೆಯಾಗಿದ್ದಾರೆ.

ಹೆಚ್ಚು ಮಕ್ಕಳ ಮುಲ್ಕೀ ಪರೀಕ್ಷೆ ಈ ವರ್ಷ ಶಿರ್ಸಿಯಲ್ಲೂ ತೆಗೆದುಕೊಳ್ಳಲ್ಪಡುವದು. ಶಿರ್ಸಿ, ಸಿದ್ದಾಪುರ, ಹೊನ್ನಾವರ, ಕುಮಟಾ ತಾಲೂಕುಗಳ ವಿದ್ಯಾರ್ಥಿಗಳು ಶಿರ್ಸಿ ಕೇಂದ್ರದಲ್ಲಿ ಕೂಡ್ರಬೇಕೆಂದು ವ್ಯವಸ್ಥೆಯಾಗಿದೆ. ಹುಡುಗಿಯರ ಮುಲ್ಕೀ ಪರೀಕ್ಷೆ ಈ ವರ್ಷ ಮಾರ್ಚ ತಾ. ೫ರಿಂದ ನಡೆಯಲಿದೆ.

ಬಾಡ ಶ್ರೀ[illegible]ನವರ ಅಷ್ಟಬಂಧ-ಜೀರ್ಣೋದ್ಧಾರ ಇದೇ ಬರುವ ಮಾಘ ವ|| ೫ಮಿಗೆ ಆಗಲಿದೆ. ಸದರಿ ಮಹೋತ್ಸವದ ಕಾರ್ಯನಿರ್ವಹಣಕ್ಕಾಗಿ ಒಂದು ಮಂಡಳ ನೇಮಿಸಲ್ಪಟ್ಟಿದ್ದು ಶಿರ್ಸಿಯ ಡಾ|| ಗಣೇಶ ಗಣಪತಿ ಭಟ್ಟರು ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಕಳೆದ ವಾರದ "ವೃತ್ತ"ದಲ್ಲಿ ಪ್ರಕಟವಾದ ಕಪ್ಪು ಕಚೇರಿಯವರ ನಡತೆಯ ಟೀಕೆಯನ್ನನುಲಕ್ಷಿಸಿ, ಕಪ್ಪು ಕಚೇರಿಯವರು ನಿಯಮಿತ್ಯವಾಗಿ ಕಾಲ ಕಳೆಯುತ್ತಿರುವುದಾಗಲಿ, ಅವರ ವರ್ತನೆ ಆಕ್ಷೇಪಾರ್ಹವಿರುತ್ತದೆಂಬುದಾಗಲಿ ನಿಜವಲ್ಲೆಂದು ಗೋಕರ್ಣ ಸೀಧಾ ಅಧಿಕಾರಿಗಳು ಬರೆದು ತಿಳಿಸಿದ್ದಾರೆ. ಕಚೇರಿಯವರು ಕಚೇರಿಯ ಹೊತ್ತಿನ ಹೊರಗೆ, ಒಮ್ಮೊಮ್ಮೆ ರಜೆಯ ದಿನಗಳಲ್ಲೂ ಕೂಡ ಕೆಲಸ ಮಾಡಬೇಕಾಗುತ್ತದಂತೆ. (ಕಚೇರಿಯವರ ನಡತೆ ಕಚೇರಿಯವರ ದೃಷ್ಟಿಯಿಂದ ಆಕ್ಷೇಪಾರ್ಹವಿರದಿರಬಹುದು. ಅದನ್ನು ನೋಡಬೇಕಾದ ಹೊರಗಿನವರ ದೃಷ್ಟಿಯಿಂದ ಆಕ್ಷೇಪಾರ್ಹವಿರುತ್ತದೋ ಇಲ್ಲವೋ ಎಂಬುದೇ ಪ್ರಶ್ನೆ. ಅದರ ನಿರ್ಣಯ ಮಾಡತಕ್ಕವರು ಹೊರಗಿನವರು; ಕಚೇರಿಯವರಲ್ಲ. ಕಚೇರಿಯ ಕೆಲಸವನ್ನು ಕಚೇರಿಯವರು ಕಚೇರಿಯ ಹೊತ್ತಿನ ಹೊರಗೂ ಮಾಡುತ್ತಿರಬಹುದು. ಆ ಕೆಲಸದ ಪರಿಣಾಮವೆಷ್ಟು ಎಂಬುದೇ ಮುಖ್ಯ ಪ್ರಶ್ನೆ. ಆ ಪರಿಣಾಮವನ್ನು ಚನ್ನಾಗಿ ಕಂಡು ಹಿಡಿದವರೇ ಈಗಣ ಶಿಬಂದಿ ಅನಾವಶ್ಯಕವಿರುತ್ತದಾಗಿ ಹೇಳುತ್ತಾರೆ. — ಸಂಪಾದಕ.

ಕಾರ-ಬೆಳೆ ಹೆಚ್ಚಿಸುವ ದೃಷ್ಟಿಯಿಂದ ಸರಕಾರದವರು [illegible] ಪ್ರಮಾಣಗಳಿಗೆ ಹಂಗಾಮು ಕಟ್ಟು ಯಾ ಒಡ್ಡು ಹಾಕಿ ಇಲ್ಲವೆ ಹೊರಗಿನ ಉಪ್ಪು ನೀರು ಒಳಸೇರದಂತೆ ಕಟ್ಟುಹಾಕಿ ಕಾರಭತ್ತ ಬೆಳೆಸಿದ ಪ್ರತಿಯೊಂದು ಎಕರೆ ಹೊಲಕ್ಕೆ ರೂ. ೩ರಂತೆ ಧನಸಹಾಯ ನೀಡುವ ನಿರ್ಧಾರ ಮಾಡಿದ್ದಾರೆ. ಕಾರ-ಬೆಳೆ ಬೆಳೆಸಬಹುದಾದ ಭೂಮಿಗಳ ರೈತರೂ ಒಡೆಯರೂ ಈ ಯೋಜನೆಯ ಲಾಭ ಪಡೆಯಬೇಕು. ಸವಿಸ್ತರ ಮಾಹಿತಿ ಬೇಕಾದವರು ಕುಮಟೆಯಲ್ಲಿರುವ ಕಟ್ಟಿನ ಅಧಿಕಾರಿಗಳಿಂದ ಪಡೆಯಬಹುದು

ಹೊನ್ನಾವರ— ಇಲ್ಲಿಯ ಶಿರಸ್ತೇದಾರ ಮಿ|| ಕರ್ನಿಕ ಇವರಿಗೆ ಬೆಳಗಾಂವ ಜಿಲ್ಲೆಯಲ್ಲಿ ಮಾಮಲೇದಾರ ಸ್ಥಳಕ್ಕೆ ವರ್ಗವಾಗಿದೆ. ಮಿ|| ಕರ್ನಿಕಯವರು ನಿಗರ್ವಿಗಳಿದ್ದು, ಜನರ ಆದರಕ್ಕೆ ಪಾತ್ರರಾಗಿದ್ದರು.

THE DIRECTORS OF
The Agricultural & Industrial Bank, Ltd.,
(Incorporated in British India)
(ESTD: 1934)

Thank the numerous Share-holders, Depositors and Patrons of the Bank for their whole-hearted co-operation and support in the year 1944 and while wishing them a HAPPY AND PROSPEROUS NEW YEAR, they look forward for their continued patronage during the year 1945.

Head Office Coondapoor,
1—1—1945

K. VAMAN SHENAI,
President.

ಕಾಸರಕೋಡ— (ತಾ. ೩೦-೧೨-೪೪) ದಿ ಕರ್ನಾಟಕ ಗ್ರೆಂಡ ಸರ್ಕಸ್ ಕಂಪನಿಯು ಶಿರ್ಶಿ, ಕುಮಟಾ, ಸಿದ್ದಾಪುರ, ಕರ್ಕಿ, ಹೊನ್ನಾವರ, ಕಾಸರಕೋಡ ಊರುಗಳಲ್ಲಿ ಮುಕ್ಕಾಂ ಮಾಡಿ ಈಗ ಮಂಕಿಗೆ ಹೋಗಿದೆ [illegible] ಬಂದ ಬಡ ಕಂಪನಿಯೆಂದು ಈ ಕಂಪನಿಗೆ ನೆರವಾದ ಮಹನೀಯರನೇಕರು ಹಣ ಕಳಿಸಿಕೊಟ್ಟಿದ್ದಾರೆ [illegible] ನೀಡುವವರು ಇನ್ನು ಕೊಡಬೇಕಾಗಿ ಸರ್ಕಸ್ಸಿನವರೊಬ್ಬರು ತಿಳಿಸುತ್ತಾರೆ

ಶಿರಾಲಿ— (ತಾ. ೬-೧-೪೫) ಭಟಕಳ ಪೋಲೀಸರು ಈಗ ಪೆಂಢಾರಿಗಳಾಗಿದ್ದಾರೋ ಏನೋ! ನಿನ್ನೆ ರಾತ್ರಿ ೯-೩೦ ಘಂಟೆಯ ಸುಮಾರಿಗೆ ಭಟಕಳ ಪೋಲೀಸ ಜಮಾದಾರರೂ ಅವರ [illegible] ಇಲ್ಲಿಯ ಹಾಗೂ ತೆಂಗಿನಗುಂಡಿಯ ೧೫ ೧೬ ಮಂದಿ [illegible]ರನ್ನು ಜೊತೆಯಲ್ಲಿ ಕರೆದುಕೊಂಡು ಇಲ್ಲಿಯ ವೀರಭದ್ರ ಕೃಷ್ಣ [illegible] ಎಂಬವನ ಮನೆಯ ಮೇಲೆ ದಾಳಿ ಮಾಡಿ ಒಳಗಿದ್ದ ೪ ಚೀಲ ಭತ್ತ ಮತ್ತು [illegible] ತೆಂಗಿನಕಾಯಿಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ ಇದೊಂದು ಕಾನೂನು ಬದ್ಧ [illegible] ಹೇಳಲಿಕ್ಕೂ ತಿಳಿಯಲಿಕ್ಕೂ ಮಾರ್ಗವಿಲ್ಲ ಯಾಕೆಂದರೆ ಪೋಲೀಸರು ಯಾವದೇ ಪಂಚನಾಮೆಯನ್ನೂ ಮಾಡಿಲ್ಲ ಪಾವತಿಯನ್ನೂ ಕೊಟ್ಟಿರುವದಿಲ್ಲ! ವೀರಭದ್ರನು [illegible] ಕರೆತರುತ್ತೇನೆ [illegible] ಅವರದೇನೂ ಆಗತ್ಯವಿಲ್ಲವಾಗಿ ಪೋಲೀಸದಾರರು ಹೇಳಿದರಂತೆ! [illegible] ಕೊಟ್ಟರೆ ಭತ್ತ [illegible] ಒಯ್ಯಲಿಕ್ಕೆ ಕೊಡುವದಿಲ್ಲೆಂದು ವೀರಭದ್ರನ [illegible] ಯಾಗಿ, “ನಿನಗೆ ಕಂಬಳ್ಕೆ ಕಟ್ಟಬೇಕಿ [illegible]” ಎಂದು ಪೋಲೀಸದಾರರು ಗದ್ದರಿಸಿದರಂತೆ! ವೀರಭದ್ರನ ಭತ್ತ [illegible] ಪೋಲೀಸದಾರರೂ ಅವರ ಜತೆಗಾರರೂ ರಾತ್ರಿಯ ಕತ್ತಲೆಯಲ್ಲೇ ಫರಾರಿಯಾಗಿರುತ್ತಾರೆ! ಈ ಲೂಟಿಯ ಬಗೆ ನ್ಯಾಯಾಸನದೆದುರು ಫಿರ್ಯಾದಿ ಕೊಡಲಿಕ್ಕೆ ವೀರಭದ್ರನು ಇಂದು ಮುಂಜಾನೆ ಹೊನ್ನಾವರಕ್ಕೆ ಹೊರಟು ಹೋಗಿದ್ದಾನೆ

ಶಿರ್ಶಿ— (ತಾ. ೫-೧-೪೫) ಕಳೆದ ೩ ೪ ದಿನ ಸೀಧಾ ಅಂಗಡಿಗಳಲ್ಲಿ ಸಕ್ಕರೆ ಸಿಗುತ್ತಿದ್ದಿಲ್ಲ! ಸಕ್ಕರೆಯು ದರ ನಿಶ್ಚಯಿಸಿ ಬಂದಿದ್ದಿಲ್ಲವಂತೆ! ಸಕ್ಕರೆ ದರ ನಿಶ್ಚಯಿಸಿ ಕೊಡಲು [illegible] ಹೀಗೆ ವಿಳಂಬವಾಗುವ ಕಾರಣವೇನೆಂದು ಅವರೇ ಬಲ್ಲರು

ಸೀಧಾ ಅಂಗಡಿಗಳಲ್ಲಿ ೮ ಆಣೆ ದಾಳೀಕ ದರದ ಅಕ್ಕಿ [illegible] ನಿರ್ಣಯವಾಗಿದೆ ಆದರೆ ಅಂಗಡಿಗಳಲ್ಲಿ ಸಿಗುವ ಅಕ್ಕಿ ಅಷ್ಟು [illegible] ಮಾಡಿಸ್ತಿರುವದಿಲ್ಲ ಈ ಬಗ್ಗೆ ದೂರು ಕೇಳಿ ಸೀಧಾ ಅಧಿಕಾರಿಗಳು [illegible] ಅಂಗಡಿಯೊಳಗಿನ ಹುಳು ಹುಳು ಅಕ್ಕಿಯನ್ನೂ ಸರಕಾರಿ ಉಗ್ರಾಣಗಳೊಳಗಿನ ಅಕ್ಕಿಯನ್ನೂ ಮಾದರಿಗಾಗಿ [illegible] ಅದನ್ನು ಮಾಮಲೇದಾರರಿಗೆ ಕಳಿಸಿಕೊಟ್ಟನು, ಮತ್ತು ಇಷ್ಟು ಹೀನ ಅಕ್ಕಿಯನ್ನು ಗಿರಾಕಿಗಳು [illegible] ಎಂದು ಪ್ರಶ್ನೆ ಮಾಡಿದನು ಮಾಮಲೇದಾರರಿಗೆ [illegible] ಸಿಟ್ಟು ಬಂತಂತೆ ಸರಕಾರಿ ಉಗ್ರಾಣಗಳೊಳಗಿನ ಅಕ್ಕಿಯನ್ನು ನೋಡಲಿಕ್ಕೆ ಸೀಧಾ ಅಧಿಕಾರಿಗಳಿಗೆ ಅಧಿಕಾರ ನಿಲ್ಲೆಂದ ಬಂತೆಂದು ಅರ್ಥವಿಸಿದರಂತೆ! “ ನಿಮ್ಮ ಉತ್ಸಾಹ [illegible] ಜನರಿಂದಲೇ ಅಂಗಡಿಕಾರರು ನಾವು ಕೊಟ್ಟ [illegible] ಅಕ್ಕಿಯನ್ನು ಕಳ್ಳ ಪೇಟೆಗೆ ಕಳಿಸಿ ಎಲ್ಲಿಂದಲೋ ಸಂಪಾದಿಸಿದ ಸ್ಟೋರ್ ಅಕ್ಕಿಯನ್ನು ಅವರು ಮಾರುತ್ತಿದ್ದಾರೆ!”

ಹೀಗೆ ಸೀಧಾ ಅಧಿಕಾರಿಗಳ ಮೇಲೆಯೇ ಆರೋಪ ಹೊರಿಸಿದರಂತೆ! ಮಾಮಲೇದಾರರ ಈ ಆವೇಶ ನೋಡಿ ಸೀಧಾ ಅಧಿಕಾರಿಗಳಿಗೆ ದಂಗು ಬಡಿಯಿತು! ಮಾಮಲೇದಾರರಿಗೆ ಗಿರಣಿಯವರ ಬಗ್ಗೆ ಇಷ್ಟು ಅಭಿಮಾನ ಮತ್ತು ಆತ್ಮೀಯತೆ ಏಕೆ ಉಕ್ಕುತ್ತಿರಬಹುದೆಂದು ಜನರು ಈಗ ಆಲೋಚನೆಯಲ್ಲಿ ಬಿದ್ದಿದ್ದಾರೆ

ಮುಂಡಳ್ಳಿ [illegible] ಈಗ ಸರಕಾರಿ ಉಗ್ರಾಣದಿಂದ ಭತ್ತ ಸಿಗುತ್ತದಂತೆ ಅವಲಕ್ಕಿ ವ್ಯವಸಾಯದವರು ಮಾತ್ರ ಇನ್ನೂ ಅಂತರಾಳದಲ್ಲೇ ಇದ್ದಾರೆ! ಅದರಿಂದ ಊರಲ್ಲೀಗ ರೂ. ೩ ಸೇರು ಅವಲಕ್ಕಿಯೊಂದರೂ ಸಿಗುವದು ಕಷ್ಟವಾಗಿದೆ! ಜನರು ಅವಲಕ್ಕಿಗಾಗಿ ಬಾಯಿಬಿಡುತ್ತಿದ್ದಾರೆ

ಸೀಧಾ ಅಂಗಡಿಗಳಲ್ಲಿ ಈಗ ಪೂರ್ಣ ಅಕ್ಕಿ ಕೊಡುವದಿಲ್ಲ ೨॥ ಸೇರು ಅಕ್ಕಿ ಮತ್ತು ೧ ಸೇರು ರಾಗಿ ಕೊಡುತ್ತಾರೆ ಬಹುತೇಕ ಜನರು ಅಕ್ಕಿ ಮಾತ್ರ ಒಯ್ಯುತ್ತಾರೆ ಕಡಿಮೆ ಬೀಳುವ ಅಕ್ಕಿಯನ್ನು ಅವರು ಒಂದೇ ಕಳ್ಳ ಪೇಟೆಯಲ್ಲಿ ಕೊಳ್ಳಬೇಕು ಇಲ್ಲವೆ ಉಪವಾಸ ತೆಗೆಯಬೇಕು!

(ತಾ. ೧೫-೧-೪೫) ಈಗ ೩ ೪ ದಿನಗಳಿಂದ ಮ್ಯುನಿಸಿಪಾಲಿಟಿಯ ಮತ್ತು ಕೆ ಟ್ರೇ[illegible]ರಾಂತಿನ ಸೀಧಾ ಅಂಗಡಿಗಳಲ್ಲಿ ಸಕ್ಕರೆಯು [illegible] ಅಂಗಡಿಗಳಲ್ಲಿ [illegible] ಸಕ್ಕರೆ [illegible] ದರ [illegible] ಯಾಕೆ?”

(ತಾ [illegible]) [illegible] ಅಂಗಡಿ [illegible] ಕ್ಷಕನಾಗಿ [illegible] ಬದು [illegible] ಅಂಗಡಿಯ [illegible] ಯಿತ್ತು [illegible] ಅವನೇ [illegible] ಯಾಗದ [illegible] ಅವನ [illegible]

ಸಿದ್ದಾಪುರ— (ತಾ. ೨೨-೧೨-೪೪) ಹೇರೂರ [illegible] ಹಳೆಗದ ಕೋಟೆಗಳಿಗೆ ಅವನ್ನು ಆದಿತ ಪಾವತಿ [illegible] ಸರ್ಪಾತ [illegible] ಕೊಡುವದಕ್ಕಾಗಿ [illegible] ಅವನ [illegible] ಹಳ್ಳಿಗೆ ಹೋಗಿ [illegible] ಅವರು ಬೇಕಾದವರಿಗೆ ಪರವಾನೆ ಚೀಟು [illegible] ಅವರ [illegible] ಬಡವ [illegible] ಆದಿತ [illegible] ಗಳ [illegible] ಹೇರೂರಿಗೆ ಹೋಗಿ [illegible] ಬಾಕಿ, ಒಂದು [illegible] ಮನೆಯ ತಾವಿ [illegible] ಹೊಸ ಕೊಟ್ಟಿಗರು [illegible] ಪರವಾನೆ ಚೀಟಿಗಳು ಸಿಗುವದೆಂದು ತಿಳಿದಿದ್ದರೂ ಈ ಅಧಿಕಾರಿಗಳು ಹೊಸಕೋಟೆ ಚೀಟಿಗಳಿಗೆ ಬರಲು [illegible] ರಂತೆ ಅದರಂತೆ ಹಳ್ಳಿಗರೆಲ್ಲರೂ [illegible] ಮಂದಿ ಕೋಟಿಗರು ಮನ್ನೆ ಹೊಸಕೋಟೆಯಲ್ಲಿ ಕೂಡಿದ್ದರು ಮಧ್ಯಾಹ್ನ ೩ ಘಂಟೆಯಿಂದ ರಾತ್ರಿ ೮ ಘಂಟೆಯ ವರೆಗೆ ಜನರು ಅಧಿಕಾರಿಗಳ ಹಾದಿ ನೋಡಿ ಕೊನೆಗೆ ನಿರಾಶರಾಗಿ ಮನೆಗೆ ಮರಳಿ ಹೋಗಬೇಕಾಯಿತು! ಇಂಥ ರೀತಿ ಅಧಿಕಾರಿಗಳು ತಮಗೆ ಬೇಡ, ಜನರ ಬಗ್ಗೆ ಸಹಾನುಭೂತಿಯುಳ್ಳ ಮತ್ತು ಕರ್ತವ್ಯತತ್ಪರನಾಗಿರುವ ಬೇರೊಬ್ಬ ಅಧಿಕಾರಿಯನ್ನು ತಮಗೆ ನೇಮಿಸಿಕೊಡಬೇಕು ಎಂದು ಹೇರೂರ ಸೀಮೆಯವರು ಕೇಳುತ್ತಿದ್ದಾರೆ ಮೇಲಧಿಕಾರಿಗಳು ಇತ್ತ ಗಮನಿಸಬೇಕಾಗಿ ಅರಿಕೆಯಿದೆ

ಅಂಕೋಲಾ— (ತಾ. ೨೬-೧೨-೪೪) ಮುಂಬಯಿ ಸರಕಾರದ ಗ್ಯಾಝೆಟಿನ ತಾ. ೨೦-೭-೪೪ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರಾಥಮಿಕ ಶಾಲಾ-ಶಿಕ್ಷಕರ ಸಂಬಳದ ಪಟ್ಟಿಯಿಂದ ಶಾಲಾ-ಶಿಕ್ಷಕ-ಸಂಘಕ್ಕೆ ತೀವ್ರ ಅಸಮಾಧಾನವಾಗಿದೆ ಮುಲ್ಕೀ ಪರೀಕ್ಷೆ ಕೊಟ್ಟ ಶಿಕ್ಷಕ-ಶಿಕ್ಷಕಿಯರಿಗೆ ಕೊಡಮಾಡಿದ ಪಗಾರು ಬಹಳಷ್ಟು ಸರಕಾರಿ ಆಫೀಸುಗಳಲ್ಲಿರುವ ಶಿಪಾಯಿ ಸೇವಕರಿಗೆ ಸಿಗುವ ಸಂಬಳಕ್ಕಿಂತ ಕಡಿಮೆ ಇರುತ್ತದೆಂತಲೂ ಈಗಿನ ಪರಿಸ್ಥಿತಿಯಲ್ಲಿಂತೂ ಇದು ಆ ಶಿಕ್ಷಕ ಶಿಕ್ಷಕಿಯರ ಉದರಪೋಷಣೆಗೆ ಸಹ ಸಾಲದಿಕ್ಕಿಲ್ಲವೆಂತಲೂ ಶಿಕ್ಷಕ ಸಂಘದ ಸ್ಥಾಯಿ ಸಮಿತಿಯ ಅಭಿಪ್ರಾಯವುಂಟು. ಟ್ರೇನಿಂಗ ಪಡೆಯದ ಇಸಮುಗಳು ಬದಲಿ ಶಿಕ್ಷಕರಾಗಿ ನೇಮಿಸಲ್ಪಟ್ಟಾಗ ಅವರಿಗೆ ಮಾಸಿಕ ರೂ. ೩೦ ರಂತೆ ಇಂಥ ಇಸಮುಗಳು ಕಾಯಂ ಶಿಕ್ಷಕರಾದ ಮೇಲೆ ಅವರಿಗೆ ರೂ. ೩೦ ೧೬-೬೦ರಂತೆ ೧ನೇ ವರ್ಗದ ಟ್ರೇನ್ಡ ಶಿಕ್ಷಕರಿಗೆ ರೂ. ೪ [illegible] ೬೦ರಂತೆ, ೨ನೇ ವರ್ಗದ ಟ್ರೇನ್ಡ ಶಿಕ್ಷಕರಿಗೆ ರೂ. ೫ [illegible] ೭೦ ೩-೧೦೦ರಂತೆ ಮತ್ತು ೩ನೇ ವರ್ಗದ ಟ್ರೇನ್ಡ ಶಿಕ್ಷಕರಿಗೆ ರೂ. ೬೦ ೩ ೧೨೦ರಂತೆ ಪಗಾರ ಪಟ್ಟಿ ಇರಬೇಕಾಗಿ ಸ್ಥಾಯಿ ಸಮಿತಿಯವರು ಒಂದು ಠರಾವ ಮಾಡಿ ಸರಕಾರಕ್ಕೆ ಕಳಿಸಿಕೊಟ್ಟಿದ್ದಾರೆ

ಜಾಹೀರನಾಮೆ — R.

ಯಾವದೇ ಸೀಧಾ ಕ್ಷೇತ್ರದಲ್ಲಿಯ ಮನುಷ್ಯನ ಹೆಸರಿದ್ದ ಸೀಧಾ ಪತ್ರ (ರೇಶನ್ ಕಾರ್ಡ) ವಿಕೃತಗೊಳಿಸಲ್ಪಟ್ಟರೆ ಯಾ ಕಳೆದುಹೋದರೆ ಅಥವಾ ನಾಶ ಮಾಡಲ್ಪಟ್ಟರೆ ಆ ಮನುಷ್ಯನು ಅಥವಾ ಅವನ ಗೈರಹಾಜರಿಯಲ್ಲಿ ಅವನ ಕುಟುಂಬದಲ್ಲಿಯ ಪ್ರೌಢ ಮನುಷ್ಯನು ಆ ಸೀಧಾ ಕ್ಷೇತ್ರದ ಅಧಿಕಾರಿಯ (ರೇಶನಿಂಗ ಆಫೀಸರ) ಕಡೆಯಿಂದ ಒಂದು ಫಾರ್ಮನ್ನು ತೆಕ್ಕೊಂಡು ಅದನ್ನು ಭರ್ತಿ ಮಾಡಿ ಅದರ ಕೂಡ ರೂ. ೦-೨-೦ ಕೊಡಬೇಕು ಆ [illegible] ಸೀಧಾ ಅಧಿಕಾರಿಯು [illegible] ಕಂಡುಬಂದ ಮೇಲೆ ಬೇರೆ ಮಾಡಿ ಹೊಸ ಸೀಧಾ ಪತ್ರವನ್ನು ಕೊಡುವನು [illegible] ಸೀಧಾ [illegible] ಸಿಕ್ಕರೂ [illegible] ಬಗೆ [illegible] ತಾ. [illegible] ೧೨ ೪೪

W N Bakhtiyar
D M Kanara

For frank and unbiassed news views and reviews read
ORIENT
Illustrated Weekly
(Published every Sunday)
For specimen copy and subscription details apply with 4 stamps to
The New Supply Agency, Kumta

ಜಾಹೀರ ನೋಟೀಸು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ
ಸಿಂಡಿಕೇಟ ಲಿಮಿಟೆಡ್
ಬ್ರೆಂಚ ಹೊನ್ನಾವರ

ಈ ಮೂಲಕ ತಿಳಿಸುವದೇನಂದರೆ - ಈ ಕೆಳಗೆ ತೋರಿಸಿದವರು ನಮ್ಮ ಬೇಂಕಿನಲ್ಲಿ [illegible] ದಾಗಿನೆಗಳ ಮೇಲೆ ತೆಗೆದ ಸಾಲದ [illegible] ಅಸಲು ಮತ್ತು ಅದರ ಮೇಲಿನ ಬಡ್ಡಿ ಹಣ ಬೇಂಕಿಗೆ [illegible] ಕಾರಣ ಅವರು ಯಾ ಅವರ ವಾರಸದಾರರು ತಾರೀಖು ೧೦-೧-೧೯೪೫ನೇ ಬುಧವಾರ ಸಾಯಂಕಾಲ ಘಂಟೆ ೫ರ ಒಳಗೆ ಸಾಲ ಕೊಡದೆ ಇದ್ದಲ್ಲಿ ಸದರಿ ಸಾಲದ ಭದ್ರತೆಯ [illegible] ಬೇಂಕಿನಲ್ಲಿ [illegible] ತಾ. ೧೯ [illegible] ಮಧ್ಯಾಹ್ನ [illegible] ಘಂಟೆಗೆ [illegible] ಲಿಲಾಂವ ಮಾಡಲಾಗುವದು [illegible] ಶ್ರೀ [illegible] ಕೊಡಿ

ಏಜೆಂಟ M S H[illegible]kar

ಸಾಲ ಪಡೆದ ತಾರೀಖು ೧೦-೧-೧೯೪೪
ಬರೆಸಿಕೊಂಡ ರೂ [illegible] ೦ ೦ [illegible]
ತಾ ೧೦ ೧ ೪೪ರಿಂದ ಇದರ ಬಡ್ಡಿ

ತಾ 4-1 1945 ಏಜೆಂಟ, ಹೊನ್ನಾವರ

NOTICE.

Applications are invited from ladies and gentlemen willing to work in any city or taluka of the Province of Bombay as Authorised Agents under the Small Savings Scheme of Government of India The duties of the Agent are to encourage and assist the public to invest in National Savings Certificates The Agents will be paid commission at the rate of 2½% on the face value of National Savings Certificates sold through them The Agents may work full time or part time Employees of the Government of Bombay need not apply Applications from Government of India servants should be sent through their departments

Applicants must produce a certificate regarding their status and integrity either from a Government Official or from any other respectable person living in the applicant's locality

Applications should be addressed to the Mamlatdar or Mahalkari of the place where the applicants wish to work and copies of the application should be endorsed to the Chairman of the Small Savings Committee of the District (i.e. The Collector of the District) *and* also to the undersigned

Eros Theatre Building
42 Queen's Road
Fort Bombay 1

K. R. METHA.
National Savings Circle Officer
(for Bombay Province)

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ '[illegible]' ಛಾಪಖಾನೆಯಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೩
ಹಳೇ ಸಂಚಿಕೆಗೆ ೦ ೪-೦
[illegible]
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B 1270. Monday, 15th January, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೨೯

ಕುಮಟಾ:- ಸೋಮವಾರ, ತಾ. ೧೫ ಮಾಹೆ ಜನವರಿ ೧೯೪೫ನೇ ಇಸವಿ

ಜಾಹೀರಾತುಗಳ ದರ.
[illegible]
ಜಾಹೀರಾತುಗಳ ಬಗ್ಗೆ ಸವಿಸ್ತರ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು

ನಿಜ ಸ್ಥಿತಿ ತಿಳಿಯಬೇಕು!

(ನಿರೀಕ್ಷಕನು ಬರೆದುದು)

ಸ್ವಪಕ್ಷೀಯರಿಗೂ ಜಗತ್ತಿಗೂ ಧೈರ್ಯ ಕೊಡುವದಕ್ಕಾಗಿ, ಶತ್ರುಗಳ ಜನರ [illegible] ಯುದ್ಧ-ಸಾಹಿತ್ಯ ನಿರ್ಮಾಣದಲ್ಲಿ [illegible]

[illegible]

ಮುಂದಿನ ವಾರ "ವೃತ್ತ"ಕ್ಕೆ ರಜೆ.

ಬರುವ ರಥೋತ್ಸವದ ಜಾತ್ರೆಗಾಗಿ "ವೃತ್ತ"ದ ಕಾರ್ಯಾಲಯದೊಳಗಿನ ನೌಕರರಿಗೆ ರಜೆಯು ಕೊಡಲಾಗಿದೆ ಕಾರಣ ತಾ. ೨೨-೧-೪೫ಕ್ಕೆ "ವೃತ್ತ"ವು ಪ್ರಕಟವಾಗದು

(೨ನೇ ಪುಟದಿಂದ ಮುಂದರಿಸಿದ್ದು)

[illegible]

ಪ್ರಾಂತಾಧಿಪರು ನಾಳೆ ಮುಂಜಾನೆ ಮುಂಬಯಿಗೆ ಮರಳಿಹೋಗುವರು

[illegible]

ಹೊನ್ನಾವರ— (ತಾ ೧೧-೧-೪೫) [illegible]

[illegible]

The Agricultural & Industrial Bank, Ltd.
(Incorporated in British India Liability of Members Limited)
ಸ್ಥಾಪನೆ 1934.
ಅಭಿನಂದನೆ.
ಬ್ಯಾಂಕಿನ ಡೈರೆಕ್ಟರರು 1944ರಲ್ಲಿ ಬ್ಯಾಂಕಿಗೆ ನೀಡಿದ ಸಹಕಾರ ಮತ್ತು ಸಹಾಯಗಳಿಗೋಸ್ಕರ ತಮ್ಮ ಪಾಲುದಾರರು, ಠೇವಣಿದಾರರು ಹಾಗೂ ಹಿತಚಿಂತಕರನ್ನು ಮನಃಪೂರ್ವಕ ಅಭಿನಂದಿಸುತ್ತಾರೆ ಮತ್ತು ನವ ವರ್ಷವು ಅವರಿಗೆ ಶುಭದಾಯಕವಾಗಲೆಂದು ಬಯಸುವದರೊಂದಿಗೆ 1945ರಲ್ಲಿ ಅವರ ದ್ವಿಗುಣಿತ ಸಹಕಾರ ಮತ್ತು ಸಹಾಯಗಳನ್ನು ಮುಂಗಾಣುತ್ತಿದ್ದಾರೆ
ಮುಖ್ಯ ಕಚೇರಿ ಕುಂದಾಪುರ,
1—1—1945
K. VAMAN SHENAI,
President

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಬೀಳುತ್ತಿದೆ ಮಾರ್ಗಗಳ ಮೇಲೆ ಧೂಳು ಹೆಚ್ಚಾಗಿದೆ. ಸ್ಟೇಶನ್ ರೋಡು, ಸ್ಕೂಲ ರೋಡು, ಮೋಹಿನಿ ಬಂದಿ ಮೊದಲಾದ ರಸ್ತೆಗಳು ಮಾರ್ಗಗಳ ಮೇಲಿಂದ ಓಡಾಡಿದರೆ ಮಾರ್ಗ ತುಂಬ ಧೂಳೇ ಧೂಳು! ಸರಕಾರದಿಂದ ಕಡ ಸಿಕ್ಕಿದ ಹೊಸ ಮೋಟಾರ ಮುಟಾರಥಗಳು ಓಡಾಡಿದರಂತೂ ಕೇಳುವದೇ ಬೇಡ! ಮಾರ್ಗಗಳ ಅಕ್ಕ ಪಕ್ಕದ ಮನೆ ಮರಗಳೆಲ್ಲ ಧೂಳುಮಯವಾಗಿ ಹೋಗುತ್ತಿದೆ! ಇಷ್ಟಾದರೂ ನಗರ ಸಮಿತಿಯವರು ಮಾರ್ಗಗಳ ಮೇಲೆ ನೀರು ಹಾಕಿಸುವ ವ್ಯವಸ್ಥೆ ಮಾಡಿರುವದಿಲ್ಲ! ಧೂಳಿನ ಉಪದ್ರವ ಹೆಚ್ಚಾದರೆ ಊರಲ್ಲಿ ಅನಾರೋಗ್ಯ ಹೆಚ್ಚಿ ಕ್ಷಯವಾದ ಮಹಾರೋಗಗಳೂ ಹಬ್ಬುವವೆಂಬ ಮಾತನ್ನು ನಗರ ಸಂಸ್ಥೆಯವರು ಅರಿಯರೋ ಏನೋ!

ಶ್ರೀ ಗೋಕರ್ಣ ಮಠಾಧೀಶ [illegible] ತೀರ್ಥ ಸ್ವಾಮಿಗಳು ಈ ತಿಂಗಳು [illegible] ಈ ಊರಿಗೆ ದಯಮಾಡಿಸುವವರಿದ್ದಾರೆ. ಊರಲ್ಲಿ ಶ್ರೀಗಳವರ ಸ್ವಾಗತದ ಸಂಭ್ರಮ ನಡೆದಿದೆ. ಸಮಸ್ತರೂ ಶ್ರೀಗಳವರನ್ನು ಎದುರುಗೊಳ್ಳಲು ಉತ್ಸಾಹ ಉತ್ಸುಕತೆಗಳಿಂದ ನಡೆಯುತ್ತಿದ್ದಾರೆ.

ಮುಂಬಯಿ ಸರಕಾರದವರ [illegible] ಯು (೧೯೪೩) [illegible] ಯೋಜನೆ [illegible] ನಮ್ಮ ಜಿಲ್ಲೆಯ ಪಶ್ಚಿಮ ಭಾಗ [illegible] ಎಂದು ಸರಕಾರಿ ಪ್ರಕಟನೆಯಲ್ಲಿ [illegible] ಮುಂಬಯಿ ನಗರದ [illegible] ಯೋಜನೆಯಿಂದ ತೊರೆಯಲಾಗಿದೆ. [illegible] ಪ್ರಕಟನೆಯು [illegible] ಈ ಕೆಳಗಿನಂತೆ ಹೇಳುತ್ತದೆ: [illegible] ಯೋಜನೆಯಿಂದ [illegible] ಭಾಗಗಳಲ್ಲೂ ಜನರು [illegible] ವರೆಂದು [illegible] ಎಲ್ಲ ಭಾಗಗಳೂ [illegible] ನೋಡಿಕೊಳ್ಳುವ [illegible] ಭತ್ತ ಬೆಳೆಯುವ [illegible] ಭತ್ತ ಬೆಳೆದ ಕ್ಷೇತ್ರವನ್ನು [illegible] ಕ್ಷೇತ್ರಗಳಲ್ಲಿ ಬೆಳೆದ [illegible] ಉತ್ಪನ್ನವನ್ನು [illegible] ಮಾಡುವ ಭತ್ತದ [illegible] ಕಡಿಮೆ ಭತ್ತ ಕೊಟ್ಟವರಿಂದ ಕಡಿಮೆ ಬೆಲೆ [illegible] ಅವರ ಭತ್ತ [illegible] ವ್ಯವಸ್ಥೆ ಮಾಡ [illegible] ಈ ಜಿಲ್ಲೆಯ [illegible] ಕಚೇರಿಯ ಯೋಜನೆಯಿಂದ ತೊರೆಯಲ್ಪಡಲಾಗಿದೆ [illegible] ಬೇಗನೇ ಸ್ಪಷ್ಟಪಡಿಸುವದೊಳಿತು.

ಇಲ್ಲಿಯ ಮೊಗೇರ ಕೇರಿಯಲ್ಲಿ [illegible] ಗಲಾಟೆಗಳು ನಡೆಯಲ್ಪಟ್ಟವೆ! [illegible] ಈ ಗಲಾಟೆಯ ಸುತ್ತುಮುತ್ತಲು ಬಹಳ [illegible] ಕೇರಿಯೊಳಗಿನವರಿಗೆ [illegible] ಮಾಡಲು [illegible] ಯಾಗುದಂತೆ [illegible] ಮೇಲಿನ [illegible] ಕೇಳುತ್ತಿದೆ.

ಹಿರೇಪಟ್ಟಣ ವಾಲಗಳ್ಳಿ [illegible] ನದಿಯಲ್ಲಿ ಹುಲಿ [illegible] ಕಡಿಮೆಯಾಗಿಲ್ಲೆಂದು "ವೃತ್ತ"ದಲ್ಲಿ ಬಂದ ಮೇಲು ಕಂಡು ಯಾವದೇ ಹಳ್ಳಿಯ [illegible] ಆ ಹಳ್ಳಿಯ ಜನರು [illegible] ದಲ್ಲಿದ್ದ ಕಾರಿಸ್ವರ ಯಾ ಗಾರ್ಡನಿಗೆ [illegible] ಉಪದ್ರವ [illegible] ಹುಲಿಯ ಬಂದೋಬಸ್ತ ಮಾಡಲು [illegible] ಆ ಹುಲಿಗೆ [illegible] ಕಾರಿಸ್ವರ ಗಾರ್ಡನಿಗೆ [illegible] ಬೇಕು! [illegible] ಯಲ್ಲಿ [illegible] ಹುಲಿಯನ್ನು [illegible] ಅಧಿಕಾರವಿಲ್ಲ! ಇಂಥಹ [illegible] ದಯಮಾಡಿಸಿದ ಜಿಲ್ಲಾಧಿಕಾರಿ [illegible] ಸಾಧ್ಯವಾಗುವಂತಿಲ್ಲ [illegible] ಬೇಕು!! [illegible] ಫೌಜದಾರರು [illegible] ಸಹಾಯದಿಂದ ಒಂದು ಹುಲಿಯನ್ನು ಗುಂಡಿಟ್ಟು ಕೊಂದುಹಾಕಿದ್ದಾರೆ. ಆದರೂ ಹುಲಿ ಕಾಟ [illegible] ನಡೆದಿದೆಯೆಂದು ಜನರು ಆಡುತ್ತಾರೆ. ನಾಲ್ಕಾರು ದಿನಗಳ ಹಿಂದೆ ಒಂದು ಆಕಳು ಹುಲಿಯ ಬಾಯಿಗೆ ಬಿದ್ದ ಸುದ್ದಿಯುಂಟು.

ಕಾರವಾರ— (ತಾ. [illegible] ೧೯೪೫) ಇಲ್ಲಿಯ ಉಗ್ರಾಣಗಳೊಳಗಿನ ಅಕ್ಕಿ ಭತ್ತಗಳ ಲೆಕ್ಕ ನಡೆದಿದೆ. ಸುಮಾರು [illegible] ಸಾವಿರ ರೂ. ಬಾಕಿ ಹೊರಡುತ್ತದೆಂತೆ. [illegible] ಅಕ್ಕಿ ಭತ್ತ ಉಗ್ರಾಣಗಳಲ್ಲಿ ಸೇರಲಿಲ್ಲವೆಂದೂ ಸರಕಾರದ ಲೆಕ್ಕ [illegible] ಅಕ್ಕಿ ಭತ್ತಗಳ ಲೆಕ್ಕವನ್ನು ನೋಡಿದೆ ಉಗ್ರಾಣಗಳಲ್ಲಿ [illegible] ಅಕ್ಕಿ ಭತ್ತಗಳನ್ನು [illegible] ಕೊಟ್ಟ ಅಕ್ಕಿ ಭತ್ತಗಳ ಲೆಕ್ಕವನ್ನು ನೋಡಿದ್ದಾರೆಂದೂ ಹೇಳುತ್ತಾರೆ. ಜಿಲ್ಲಾಧಿಕಾರ ಕಚೇರಿಯವರು [illegible] ಕೊಡುತ್ತಿರುವದನ್ನು ನೋಡಿದಲ್ಲಿ ಆ ಕಚೇರಿಯವರ [illegible] ಈ ವಂಚನೆಯಲ್ಲಿ [illegible]

ಇಲ್ಲಿಯ [illegible] ೨೦೦೦ [illegible] ಹೇಗಿಂಟು — [illegible] ಭತ್ತ ಖರೀದಿಯು [illegible] ರೂ. [illegible] ಚೀಟಿ ಬರೆದ, [illegible] ಕೊಡಬೇಕಾಗಿ [illegible] ೨೦೦೦ [illegible] ವಂಚನೆಯಾಗಿದೆಂದೂ [illegible] ಕೊಟ್ಟಿದ್ದಿಲ್ಲೆಂದೂ ಹಲವು ಜನರ ಅಂಬೋಣವಿದೆ.

(೧೯ [illegible]) ಪ್ರಾಂತಾಧಿಕಾರಿ ಸರ್ ಜಾನ [illegible] ಅವರ ಗೌರವಾರ್ಥದಿಂದ [illegible] ಪ್ರಾಂತಾಧಿಕಾರ [illegible] ಸಕಲ [illegible] ಎಲ್ಲ [illegible] ಅಂಕೋಲೆಯೊಳಗಿನ [illegible] ಬೇರೆಬೇರೆ [illegible] ಒಂದು [illegible] ಪ್ರಾಂತಾಧಿಕಾರ [illegible] ಸಂಗ್ರಹಿಸಲ್ಪಟ್ಟಿ[illegible]

ಪ್ರಾಂತಾಧಿಕಾರ [illegible] ಇಲ್ಲಿಗೆ ಬಂದು [illegible] ನಗರ ಸಭೆ ಮತ್ತು ಜಿಲ್ಹಾ ಲೋಕಲ ಬೋರ್ಡಿನ ಮಾನಪತ್ರಗಳನ್ನು ಸ್ವೀಕರಿಸಿದರ [illegible] ನಗರಾಧ್ಯಕ್ಷ [illegible] ಬಿನ್ನವತ್ತಳೆಯನ್ನೋದಿದರು. [illegible] ಆಸ್ಪತ್ರೆ [illegible] ಮೇಲಿನ [illegible] ಮೊದಲಾದ ವಿಷಯಗಳು ಅದರಲ್ಲಿದ್ದವು. ಬೋರ್ಡಿನವರು ತಮ್ಮ ಬಿನ್ನವತ್ತಳೆಯಲ್ಲಿ [illegible] ಹಳ್ಳಿ ಮಾರ್ಗಗಳ [illegible] ಮೊದಲಾದ ವಿಷಯಗಳೂ ಬೋರ್ಡಿನ ಮಾನಪತ್ರದಲ್ಲಿ [illegible] ಮಾನಪತ್ರದ ಕೊನೆಯ ಭಾಗದಲ್ಲಿ [illegible] ಜಿಲ್ಲಾಧಿಕಾರಿ [illegible] ಹೊಗಳಿಕೆಯಿತ್ತು. ಈಗ ಜನತೆಯನ್ನು ಕಾಡುತ್ತಿರುವ [illegible] ಸಮಸ್ಯೆಯನ್ನು [illegible] ಬಹಳ [illegible] ಬಗೆಹರಿಸಿ ಮತ್ತು "ನಮಗೆ ಬೇಕಾದ ಯಾವ [illegible] ಗಮನ ಕೊಟ್ಟು" [illegible] ಉಪಕಾರದ ಭಾರವದ ಹೊರೆಯನ್ನು ಹೇರಿದ್ದಾರೆಂದು ಒಂದು ಉದ್ದ ಪ್ರಶಸ್ತಿಪತ್ರವು ಆ ಮಾನಪತ್ರದಲ್ಲಿ [illegible] ಅನೇಕರಿಗೆ [illegible] ಆಶ್ಚರ್ಯವಾಯಿತು! ಬೋರ್ಡಿನವರ [illegible] ನಲ್ಲಿ ನಮೂದಿಸಿದ್ದ ಮತ್ತು ಬೋರ್ಡಿನ [illegible] ಹೊಗಳಿಕೆಯನ್ನು ನಮೂದಿಸಿದವರು [illegible] ಯಿತು. ಬೋರ್ಡಿನ ಅಧ್ಯಕ್ಷ [illegible] ಮಾನಪತ್ರವನ್ನು [illegible] ಓದಿದೋಳಿದರು. ಎರಡೂ ಬಿನ್ನವತ್ತಳೆಗಳು [illegible] ಸಂದರ್ಭಗಳಲ್ಲಿ ಪ್ರಾಂತಾಧಿಕಾರಿಗೆ ಅರ್ಪಿಸಲ್ಪಟ್ಟವು. ಪ್ರಾಂತಾಧಿಕಾರು ಅವನ್ನು ಸ್ವೀಕರಿಸಿ ಎರಡೂ ಮಾನಪತ್ರಗಳಿಗೆ ಒಂದೇ ಉತ್ತರ ಕೊಟ್ಟರು. ಪ್ರಾಂತಾಧಿಕಾರು ನುಡಿದದ್ದೇನಂದರೆ— ನಿಮ್ಮ ಬಿನ್ನವತ್ತಳೆಗಳು ಈ ಸಂದರ್ಭಗಳಷ್ಟೇ [illegible] ನಾನು ಎಣಿಸುತ್ತೇನೆ. ಇವುಗಳಲ್ಲಿ ನಮೂದಿಸಿದ ಬೇರೆ ಬೇರೆ ಬೇಡಿಕೆಗಳನ್ನು ನನ್ನ ಸರಕಾರದ ಬೇರೆ ಬೇರೆ ಇಲಾಖೆಯವರು [illegible] ನಾನು ನಂಬಿಗೆ ಕೊಡುತ್ತೇನೆ. ನಿಮ್ಮ ಜಿಲ್ಲೆ [illegible] ಎನಿಸಬಹುದು. ಮುಂಬಯಿಯಿಂದ ನೀವು ದೂರದಲ್ಲಿದ್ದರೂ ನಾನು ಯಾವಾಗಲೂ ನಿಮ್ಮನ್ನು ನೆನಸುತ್ತಿರುತ್ತೇನೆ. ನಿಮ್ಮ ಕಲ್ಯಾಣ ಸಾಧಿಸಬೇಕೆಂದು ಸದಾ ಹಂಬಲಿಸುತ್ತೇನೆ. ನಿಮ್ಮ ಜಿಲ್ಲೆಯ ಬಗ್ಗೆ ನನ್ನಲ್ಲಿ ಬಹಳ ಮಮತೆಯುಂಟು. [illegible] ನಿಮ್ಮ ಜಿಲ್ಲೆಗೆ ಬರಬೇಕೆಂದು ನನ್ನ [illegible] ನಿಮ್ಮ ಸಮಸ್ಯೆಗಳ ಪೂರ್ಣ ಅರಿವು ನನಗುಂಟು. [illegible] ನಾನು [illegible] ಪ್ರದೇಶಗಳ ಸಮಸ್ಯೆಗಳನ್ನು [illegible] ಸಾಧಿಸಿದ್ದೇನೆ. [illegible] ಈ ಪ್ರದೇಶದಲ್ಲೂ [illegible] ಸಾಧಿಸಬೇಕೆಂಬ [illegible] ನನಗಿದೆ. [illegible] ಬ್ರಹ್ಮದೇಶದ ಅಕ್ಕಿ ಪುನಃ [illegible] ಬರುವ ವರೆಗೆ ಈ ದೇಶದೊಳಗಿನ ಅಕ್ಕಿಯ ಕೊರತೆ ದೂರವಾಗಲಾರದು. ನಮ್ಮ [illegible] ಬಂದು ಈಗ ಬ್ರಹ್ಮದೇಶದಲ್ಲಿ [illegible] ಯುದ್ಧ [illegible] ಉತ್ಸಾಹದಿಂದ [illegible] ಬ್ರಹ್ಮದೇಶವನ್ನು ಸ್ವಾಧೀನಪಡಿಸಿಕೊಂಡ [illegible] ಅಕ್ಕಿ ಪೂರೈಸಲು [illegible] ಪ್ರಾಂತಾಧಿಕಾರಿ [illegible] ನಾನು ನಿಮ್ಮವನೇ ಇದ್ದೇನೆ, ನಿಮ್ಮ ಗೆಳೆಯನಿದ್ದೇನೆ" ಎಂದು ಮುಂತಾಗಿ ಹೇಳಿ ಪ್ರಾಂತಾಧಿಕಾರು ತಮ್ಮ ಭಾಷಣವನ್ನು ಮುಗಿಸಿದ ಮೇಲೆ [illegible], ಛಾಯಾಚಿತ್ರ-ಗ್ರಹಣ ಮೊದಲಾದ ಸಂಭ್ರಮಗಳು ನಡೆದವು. ಈ ಸಮಾರಂಭ ಮುಗಿದ ಮೇಲೆ ಪ್ರಾಂ

(೧ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ನೋಟೀಸು.

ಉತ್ತರ ಕಾನಡಾ ಜಿಲ್ಲಾ ಸಿದ್ದಾಪುರ ತಾಲೂಕ ಕೆರೆಗದ್ದೆ ಗ್ರಾಮದ ಸಲಕಾರದಲ್ಲಿರುವ ಗಣಪತಿ ಮಂಜಪ್ಪ ಹೆಗಡೆ ಇವನ ಹೆಂಡತಿಯಾದ ಕಮಲಿ ಇವಳು ತಾ. ೨೫ [illegible] ೪೪ನೇಗೆ ಮೃತಪಟ್ಟಳು. ಸದ್ರಿಯವರಿಗೆ (೧) ಲಕ್ಷ್ಮಿ (೨) ಕಮಲ, ಎಂಬ ಇಬ್ಬರು ಅಪ್ರಾಯಸ್ಥ ಹೆಣ್ಣು ಹುಡುಗಿಯರಿದ್ದು, ಮೃತಳ ಯಾವತ್ತೂ ಚರ ಸ್ಥಿರ ಆಸ್ತಿಗಳಿಗೂ ಗಣಪತಿ ಹೆಗಡೆಯವರ ಅಸ್ತಿಗಳಿಗೂ ಇವರೇ ಹಕ್ಕುದಾರರು. [illegible] ಯಾವದೇ ರೀತಿಯಿಂದ ಅಸ್ತಿ ಅಧೀನ ಮಾಡುವ, ಸಾಲ ಮಾಡುವ ಗರಜು ಇರುವದಿಲ್ಲ. ಗಣಪತಿ ಮಂಜಪ್ಪ ಹೆಗಡೆಯವರು ಹೆಂಡತಿ ತೀರಿದ ನಂತರ ಅವರ [illegible] ಒಂದು ಕರದ ಪಟ್ಟು, ಬಿದ್ದು [illegible] ತಿಳಿಕೊಳ್ಳದಂತಾಗಿದ್ದು, ತನ್ನ [illegible] ಸ್ಥಿತಿಯಲ್ಲಿಲ್ಲದೇ ಇರುವದರಿಂದ ಅಪ್ರಾಯಸ್ಥ ಇಬ್ಬರು ಹೆಣ್ಣು ಹುಡುಗಿಯರ ರಕ್ಷಕನು ಈ ಕೆಳಗೆ ಸಹಿ ಮಾಡಿದ ಸೋದರಮಾವನಾದ ನಾನೇ ಇರುತ್ತೇನೆ. ಗಣಪತಿ ಹೆಗಡೆಯವರಿಂದ ಅವರ [illegible] ಯಾ ಅಪ್ರಾಯಸ್ಥ ಹೆಣ್ಣು ಹುಡುಗಿಯರ ರಕ್ಷಕ ನಾತೆಯಿಂದ ಚರ ಸ್ಥಿರ ಸೊತ್ತನ್ನು ಯಾರೇ ಆಗಲಿ ಯಾವದೇ ರೀತಿಯಿಂದ ಸ್ವಾಧೀನಕ್ಕೆ ಮಾಡಿಕೊಂಡಲ್ಲಿ ಅದು ಸಿಂಧುವಾಗಲಾರದು. ತಿಳಿಯುವದು.

ತಾ. ೧೧ ೧—೪೫

ಗೋವಿಂದ ರಾಮಕೃಷ್ಣ [illegible]

WANTED two S T C a teachers in the New English School Bhatkal with P T and Drawing Teachers Certificate Diplomas preferred Apply with the least [illegible] expected One year s binding essential

The Chairman
Managing Committee
The New English School Bhatkal
District N Kanara

For frank and unbiassed news views and reviews read the
ORIENT
Illustrated Weekly
(Published every Sunday)
For specimen copy and subscription details apply with /4 stamps to
The New Supply Agency Kumta

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿ ತಮ್ಮ [illegible] ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ. ೩ ೪ ೦
ಟಪಾಲಿನಿಂದ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ೦ ೦ ೯
ಹಳೇ ಸಂಚಿಕೆಗೆ ೦ ೪ ೯
ವ್ಹಿ. ಪಿ.ಯಿಂದ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡವಾಗಿ ಕೊಳ್ಳತಕ್ಕದ್ದು

Reg. No. B 1270 Monday, 29th January, 1945

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೩೦

ಕುಮಟಾ ಸೋಮವಾರ, ತಾ ೨೯ ಮಾಹೆ ಜನವರಿ ೧೯೪೫ನೇ ಇಸವಿ

ಜಾಹೀರಾತುಗಳ ದರ
ಪ್ರತಿ ಕಾ. ಇಂ. ಎಂದರ ಉದ್ದ
೧ ಸಾರಿಗೆ ೬ ಆಣೆಯಂತೆ
ಸ್ಥಾಲಿಯ ಕಾ. ೧ ಇಂಚು ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾಗುವದು

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಕುಮಟಾ ತಾಲೂಕಿನ ಉಪ್ಪಿನಪಟ್ಟಣ, ಅಂತ್ರವಳ್ಳಿ, ದೀವಗಿ ವಗೈರೆ ಗ್ರಾಮಗಳಲ್ಲಿ ಹುಲಿ ಹಾವಳಿ ಬಹಳವಾಗಿದೆ. ದೀವಗಿಯಲ್ಲಿ ಮೊನ್ನೆ ಹಗಲುಹೊತ್ತಿನಲ್ಲಿ ಶಾಲೆಯ [illegible] ಮೇಯುತ್ತಿದ್ದ ಒಂದು ಆಕಳ ಕರುವಿನ ಮೇಲೆ ಹುಲಿ ಧಕ್ಕನೆ ಹಾರಿ ಅದನ್ನು ಕೆಡವಿತು. ಆದರೂ ಆಕಳು ಹುಲಿಯನ್ನು ತಪ್ಪಿಸಿಕೊಂಡು ಓಡಿತು, ಹುಲಿ ಕಚ್ಚಿದ ಗಾಯದಿಂದ ಆಗ ರಕ್ತವು ಧಾರೆಯಾಗಿ ಸುರಿಯುತ್ತಿತ್ತು. ಶಾಲೆಯಲ್ಲಿದ್ದ ಚಿಕ್ಕ ಬಾಲಕರೆಲ್ಲ ಈ ನೋಟ ನೋಡಿ ಗಾಬರಿಗೊಂಡರು. ಅಂತ್ರವಳ್ಳಿಯಲ್ಲಿ ಅನೇಕ ದನದ ಕೊಟ್ಟಿಗೆಗಳು ಬರಿದಾಗಿವೆ! ಹಲವು ಕೊಟ್ಟಿಗೆಗಳಿಗೆ ಮುಳ್ಳು ಹಾಕಿಟ್ಟಿದ್ದಾರೆ! ಈ ಗ್ರಾಮಕ್ಕೆ ಹೊಂದಿ ತಿಂಡ್ಲುಕಾಡಿಯುಂಟು. ಅದನ್ನು ಕಡಿಯಬೇಕಾಗಿ ರೈತರು ಅಧಿಕಾರಿಗಳಿಗೆ ಅರಿಕೆ ಮಾಡಿಕೊಂಡಿದ್ದರು, ಆದರೆ ಅಧಿಕಾರಿಗಳು ಆ ಕಡೆ ಕಿವಿಗೊಡಲಿಲ್ಲ! ಈ ತಿಂಡ್ಲುಕಾಡು ಮರೆಗೆ ನಿಂತು ಹುಲಿ ಹಳ್ಳಿಯಲ್ಲಿ ಹಾವಳಿ ಹಾಕುತ್ತಿತ್ತು. ಆತ್ಮರಕ್ಷಣೆಗಾಗಿ ಆಗ ರೈತರು ತಿಂಡ್ಲುಕಾಡು ಕಡಿದರು. ಆಗ ಜಂಗಲ ಅಧಿಕಾರಿಗಳು ಎಚ್ಚತ್ತರು! ತಿಂಡ್ಲುಕಾಡು ಕಡಿದದ್ದರಿಂದ ಸರಕಾರಕ್ಕೆ ರೂ ೧೬೫ ನಷ್ಟವಾಯಿತೆಂದು ಲೆಕ್ಕ ಹಾಕಿ, ಅವರು ಈಗ ಆ ರಕಮನ್ನು ವಸೂಲ ಮಾಡಲಿಕ್ಕೆ ರೈತರ ಬೆನ್ನು ಹತ್ತಿದ್ದಾರೆ! ಹುಲಿಯ ಹಾವಳಿಯಿಂದ ನೂರಾರು ದನಗಳ ನಾಶ ಹೊಂದಿವೆ! ಸಾವಿರಾರು ರೂಪಾಯಿಗಳ ನಷ್ಟವಾಗಿದೆ. ದನಗಳ ಅಭಾವದಲ್ಲಿ ಹೆಚ್ಚಿನಷ್ಟು ಆಹಾರ ಬೆಳೆಸಲು ರೈತರಿಗೆ ತೊಂದರೆಯಾಗಿದೆ. ಜಂಗಲ ಅಧಿಕಾರಿಗಳಿಗೆ ಕಾಡು-ಜಾನುವಾರಗಳ ಪಾಲಕ ಪೋಷಕರಿಗೆ ಜನರಿಗಾದ ಈ ನಷ್ಟದ ಪರವೆಯಿಲ್ಲ! ಜನರಕ್ಷಣೆಯ ಹೊಣೆಯುಳ್ಳ ಜಿಲ್ಲಾಧಿಕಾರಿಗಳೇ ರೈತರ ಈ ಕಷ್ಟ ಪರಿಹರಿಸಬೇಕು.

⁂

ಇನ್ನೊಂದು ವಿಚಾರ. ಕಾಡು ಜಾನುವಾರಗಳು ಜನರಿಗೆ ಉಪದ್ರವ ಕೊಡುತ್ತಿದ್ದರೆ ಜನರು ಆತ್ಮರಕ್ಷಣೆಗಾಗಿ ಆ ಜಾನುವಾರಗಳಿಗೆ ಆಶ್ರಯ ಕೊಡುವ ಬೆಟ್ಟವನ್ನು ಕಡಿದು ಹಾಕಲು ತಕ್ಕಷ್ಟು ಹಕ್ಕುದಾರರಿದ್ದಾರೆ. ಜಾನುವಾರಗಳು ಜಂಗಲ ಪ್ರದೇಶ ದಾಟಿ ಜನವಸತಿಯ ಪ್ರದೇಶವನ್ನು ಆಕ್ರಮಿಸದಂತೆ ಜಾಗ್ರತೆ ಕೊಳ್ಳುವ ಹೊಣೆ ಜಂಗಲ ಅಧಿಕಾರಿಗಳ ಮೇಲುಂಟು. ಜಂಗಲ ಅಧಿಕಾರಿಗಳು ತಮ್ಮ ಹೊಣೆಯನ್ನು ಮರೆತು ಜನಸಂಕಟಕ್ಕೆ ಕಾರಣರಾದಾಗ ಆತ್ಮರಕ್ಷಣೆಗಾಗಿ ತಕ್ಕ ಉಪಾಯ ಕೈಕೊಳ್ಳಲು ಸಂಕಟಗ್ರಸ್ತ ಜನರಿಗೆ ಹಕ್ಕುಂಟು. ನಾಗಪೂರದ ಹ್ಯಾಕೋರ್ಟು ಹತ್ತಿರದಲ್ಲೊಂದು ಮಹತ್ವದ ತೀರ್ಮಾನ ಕೊಟ್ಟಿದೆ. ೧೯೪೨ನೇ ಇಸವಿ ಆಗಷ್ಟ ತಿಂಗಳಲ್ಲಿ ಅಧಿಕಾರಿಗಳು ವಿವೇಕಹೀನರಾಗಿ ರಾಷ್ಟ್ರಧ್ವಜದ ಮೇಲೆ ನಿರ್ಬಂಧ ಹಾಕಿದ್ದರು. ಧ್ವಜಾಭಿಮಾನಿ ಜನರು [illegible] ಶಾಸನವನ್ನು ಉಲ್ಲಂಘಿಸಿ ಪ್ರತಿಭಟಿಸಲಾಗಿ [illegible] ಕೆಲವು ಕೋರ್ಟುಗಳು ಆ ತೊಂದರೆಗಳಲ್ಲಿ [illegible] ಆ ಬಗ್ಗೆ [illegible] ಗಲಭೆಯಲ್ಲಿ ಸೇರಿದ ಜನರಿಗೆ ಶಿಕ್ಷೆಗಳಾದವು. ಈ ಪ್ರಕರಣವನ್ನು ನಾಗಪೂರ ಹ್ಯಾಕೋರ್ಟು ಪರಾಂಬರಿಸಿ ಎಲ್ಲ ಆರೋಪಿಗಳ ಶಿಕ್ಷೆಯನ್ನು ರದ್ದುಪಡಿಸಿದೆ. ಧ್ವಜವನ್ನು ನಿರ್ಬಂಧಿಸುವ ಅಧಿಕಾರ ಅಧಿಕಾರಿಗಳಿಗಿರಲಿಲ್ಲ, ಅಧಿಕಾರಿಗಳು ಅಧಿಕಾರದ ಅತಿಕ್ರಮ ಮಾಡಿ ತಮ್ಮ ಹೊಣೆಗಾರಿಕೆಯನ್ನು ಮರೆತು ಜನರನ್ನು ಸಂಕಟದಲ್ಲಿ [illegible] ಆ ಅಧಿಕಾರಿಗಳನ್ನು ಪ್ರತಿಭಟಿಸಲು ಜನರಿಗೆ ಹಕ್ಕುಂಟು, ಅದು ಗಲಭೆಯಾದರೆ ಅಪರಾಧವಲ್ಲ. ಹೊಣೆ ಕರ್ತವ್ಯ [illegible] ಅಧಿಕಾರಿಗಳ ಮೇಲುಂಟು, ಹೊರತು ಪ್ರತಿಭಟಿಸುವ ಜನರ ಮೇಲಿಲ್ಲ, ಹೀಗೆ ಹ್ಯಾಕೋರ್ಟಿನ ನ್ಯಾಯಮೂರ್ತಿಗಳು ಸಿದ್ಧಾಂತ ಮಾಡಿದ್ದಾರೆ. ಅಧಿಕಾರಿಗಳು ತಮ್ಮ ಅಧಿಕಾರದ ಮಿತಿಯಲ್ಲಿ ನಡೆಕೊಳ್ಳುವ ತನಕ ಜನರು ಅವರಿಗೆ ವಿಧೇಯರಾಗಿರಲು ಬದ್ಧರು. ಅಧಿಕಾರಿಗಳು ಹೇಗೂ ನಡೆದರೂ ಜನರು ಅವರಿಗೆ ಅಧೀನರಾಗಿ ಉಳಿಯಬೇಕೆಂದು ಕಾನೂನು ಹೇಳುವದಿಲ್ಲ. ಈ ದೃಷ್ಟಿಯಿಂದ ಆಲೋಚಿಸಿದರೆ ಜಂಗಲ ಅಧಿಕಾರಿಗಳು ತಮ್ಮ ಜಂಗಲದೊಳಗಿನ ಕಾಡು ಮೃಗಗಳನ್ನು ನಿರ್ಬಂಧಿಸಲು ಬದ್ಧರು. ರೈತರು ಅಂಥ ಮೃಗಗಳ ಹಾವಳಿಗೆ ಬೇಸತ್ತು ಆತ್ಮರಕ್ಷಣೆಯಿಂದ ಹುಲಿಯ ಹಾವಳಿಗೆ ಕಾರಣವಾಗಿರುವ ತಿಂಡ್ಲುಕಾಡು ಕಡಿದು ಹುಲಿಯು ಅಡವಿಯಲ್ಲಿ ಉಳಿಯುವಂತೆ ಮಾಡಲು ಅವರು ಬದ್ಧರು.

⁂

ಮುಂಬಯಿ ಪ್ರಾಂತದೊಳಗಿನ ಅಡಿಕೆ ತೆರಿಗೆಯ ಕಲೆಕ್ಟರು ಹಿಡ್ಡೆಕ್ಕೆ ಇತ್ತ ಕಡೆ ಸಂಚರಿಸಿ ಹೋಗಿರುತ್ತಾರೆ. ಕೆಲ ಚರ್ಚೆಯನ್ನು ಮಾಡಿ ಅವರು ಅಡಿಕೆ ತೆರಿಗೆಯಿಂದುಂಟಾದ ಕಷ್ಟಗಳನ್ನು ತಿಳಕೊಂಡಿದ್ದಾರೆ. ಹಣ್ಣಡಿಕೆ, ನೀರಡಿಕೆಗಳ ಮೇಲೆ ಒಂದೇ ಮಾದರಿ ತೆರಿಗೆ ಹೇರುವದು ತೀರ ಅನುಚಿತವೆಂದು ಅವರಿಗೆ ಮನಗಾಣಿಸಿಕೊಡಲಾಗಿದೆ. ಒಂದೇ ಸಮಾನ ತೆರಿಗೆ ಹೇರುವದರಿಂದ ನೀರಡಿಕೆ ಹೊತ್ತಿಗೆ [illegible] ಆ ಮಾದರಿ [illegible] ಕೆಲವು ಅಡಿಕೆ ಕುರಿತು ಒಂದೇ ಮಾತು ಅವರಿಗೆ ಹೇಳಲ್ಪಟ್ಟಿದೆ. ಅಡಿಕೆ ರತ್ತಲ ೧೧ ೨ ಆಣೆ ಸುಂಕವುಂಟು. ಹಣ್ಣಡಿಕೆ ನೀರಡಿಕೆಗಳಲ್ಲಿ ಸಾಮಾನ್ಯವಾಗಿ ಅಡಿಕೆಯು ಅಂಶ ಅರ್ಧ ಮತ್ತು ನೀರು ಕೊಟ್ಟಿನ ಅಂಶ ಅರ್ಧ ಇರುತ್ತದೆ. ಈಗಿನ ತೆರಿಗೆ ಅನ್ಯಾಯಕರವಾಗಿದೆಂದು ಕಲೆಕ್ಟರಿಗೆ ಪ್ರತ್ಯಕ್ಷ ಪ್ರಮಾಣದಿಂದ ತಿಳಿಸಲ್ಪಟ್ಟಿದೆ. ಅಡಿಕೆಯ ತೆರಿಗೆಯು ಅಡಿಕೆಯ ಬೆಲೆಗೂ ಹೆಚ್ಚಿರುತ್ತದೆಂದು ಅವರು ತಿಳಕೊಂಡಿದ್ದಾರೆ.

ಕಲೆಕ್ಟರರು ಒಂದು ದೂರನ್ನು ಪರಿಹರಿಸಿದ್ದಾರೆ. ಹಣ್ಣಡಿಕೆ, ನೀರಡಿಕೆಗಳನ್ನು ಇಲ್ಲವೆ ಇತರ ಅಡಿಕೆಗಳನ್ನು ತೋಟಿಗರು ಸ್ವತಃ ತಿರುಗಾಟ ಮಾಡಿ ಮಾರಾಟ ಮಾಡಲು ಪ್ರತಿಬಂಧವಿಲ್ಲ. ಕಾನೂನಿನಂತೆ ತೋಟಗಾರರ ಕಡೆ ಇರುವ ಅಡಿಕೆ ಮಾತ್ರ ತೆರಿಗೆಗೆ ಪಾತ್ರವುಂಟು. ಲೋಕರು ಕೊಳ್ಳುವದರ [illegible] ನ್ಯಾಯವಿರುವದೆಂದು ಅಡಿಕೆ ಕಾನೂನಿನಲ್ಲಿ ವ್ಯವಸ್ಥೆ ಕೊಟ್ಟದ್ದುಂಟು. ತೋಟಗರು ತಿರುಗಾಟದಲ್ಲಿ ವ್ಯಾಪಾರ ಮಾಡಿದರೆ ಅವರು ಲೈಸೆನ್ಸಿನ ವ್ಯವಸ್ಥೆಯ ಕಕ್ಷೆಯಲ್ಲಿ ಸೇರುವದಿಲ್ಲ. ಅದರಂತೆ ತೋಟಿಗರು ಸ್ವತಃ ಪೇಟೆಯಲ್ಲಿ ಅಡಿಕೆ ಒಯ್ದು ತಿರುಗಾಟ ವ್ಯಾಪಾರ ಮಾಡಿದರೆ ಅವರು ಆ ಅಡಿಕೆಗೆ ತೆರಿಗೆ ತೆರಬೇಕಾಗಿಲ್ಲ. ಈ ಅಡಿಕೆಯ ಮೇಲೆ ತೆರಿಗೆ ಎತ್ತುವಳಿ ಮಾಡಲು ಸರಕಾರಕ್ಕೆ ಹಕ್ಕಿಲ್ಲ. ತಿಅಡಿಕೆ ತೆರಿಗೆಯ ಅಧಿಕಾರಿಗಳ ಹೆಚ್ಚಿನಷ್ಟು ತೆರಿಗೆ ಎತ್ತುವಳಿ ಮಾಡುವ ಉತ್ಸಾಹದಲ್ಲಿ ತಿರುಗಾಟ ವ್ಯಾಪಾರಿ, ತೋಟಿಗ-ವ್ಯಾಪಾರಿ ಎಂಬ ಯಾವದೇ ಭೇದ ಮಾಡದೆ ಎಲ್ಲರಿಂದ ಸುಂಕ ವಸೂಲಿ ಮಾಡಿದ್ದುಂಟು! ಹೀಗೆ ಹಕ್ಕಿಲ್ಲದೆ ಎತ್ತುವಳಿ ಮಾಡಿದ ಸುಂಕವನ್ನು ಅವರವರಿಗೆ ಹಿಂತಿರುಗಿ ಕೊಡುವಂತೆ ಆ ಅಧಿಕಾರಿಗಳಿಗೆ ಕಲೆಕ್ಟರರು ಆಜ್ಞೆ ಮಾಡಿರುವದು ನ್ಯಾಯ್ಯ.

⁂

ಯುದ್ಧ ಸಾಮಗ್ರಿಗಳ ಪೂರೈಕೆಗೆ ಅನುಕೂಲವಾಗಬೇಕೆಂದು ಸರಕಾರ ಪ್ರಾಂತದಲ್ಲಿರುವ ಎಲ್ಲ ಮಚ್ಚೆಗಳ ಓಡಾಟವನ್ನು ನಿಯಂತ್ರಿಸಿದೆ. ನಮ್ಮ ಕಡೆಯ ಮಚ್ಚೆಗಳ ಓಡಾಟವನ್ನು ನಿಯಂತ್ರಿಸುವ ಬಾಬತ್ತು ಅಧಿಕಾರವನ್ನು ಸರಕಾರವು ಮುಂಬಯಿ ಸ್ಟೀಮ ನೆವಿಗೇಶನ ಕಂಪನಿಗೆ ಒಪ್ಪಿಸಿದೆ. ಈ ಕಂಪನಿಯವರು ಅಯಾ ಬಂದರಗಳಲ್ಲಿ ಏಜಂಟರನ್ನಿಟ್ಟು ಹಡಗಗಳ ಓಡಾಟ ವ್ಯವಸ್ಥೆ ಮಾಡುತ್ತಾರೆ. ಅದರಿಂದ ಕಂಪನಿಯ ಹೊರಗಿನ ಯಾವತ್ತೂ ಹಡಗಗಳು ಈ ಏಜಂಟರ ಸ್ವಾಧೀನ ಸಿಕ್ಕಿವೆ. ಸರಕು ಹೇರುವದು ಹಡಗ ಬಿಡುವದು ಯಾ ಹಡಗ ಹಿಡಿದಿಡುವದು ಈ ಏಜಂಟರ ಸ್ವಾಧೀನಕ್ಕೆ ಸೇರಿದೆ. ಯುದ್ಧ ಕಾರ್ಯಕ್ಕೆ ಸಂಬಂಧಪಟ್ಟ ಸರಕಿನ ಮಚ್ಚೆಗೆ ಏಜಂಟರು ತಮ್ಮ ಅಧಿಕಾರ ನಡಿಸಿ, ಇತರ ವ್ಯವಹಾರವನ್ನು ಸುಸೂತ್ರವಾಗಿ ನಡೆಯಗೊಟ್ಟರೆ ಯಾರದೂ ಆಕ್ಷೇಪವಿದ್ದಿಲ್ಲ. ಹಡಗಗಳಲ್ಲಿ ಬೇರೆ ಬೇರೆ ವರ್ಗಗಳುಂಟು. ಅಡಿಕೆ, ಎಲೆ ಮೊದಲಾದ ಬೆಲೆಯುಳ್ಳ ಮತ್ತು ದಕ್ಷತೆಯಿಂದ ಕಾಪಾಡಬೇಕಾದ ಸರಕು ಹೇರುವ ಮಚ್ಚೆಗಳುಂಟು, ಉರುವಲ ಮೊದಲಾದ ಹೆಚ್ಚಿನ ಬೆಲೆಯಿಲ್ಲದ ಜಿನಸುಗಳನ್ನು ಹೇರುವ ಮಚ್ಚೆಗಳುಂಟು. ಏಜಂಟರು ವರ್ತಕರಿಗೆ ಉಪದ್ರವ ಕೊಟ್ಟು ಏನಾದರೂ ಪ್ರಯೋಜನ ಪಡೆಯುವ ದಾಖಲೆಯುಳ್ಳದ ಉರುವಲ ಹೇರುವ ಮಚ್ಚೆಗಳ ಮೇಲೆ ಅಡಿಕೆಯ ನಷ್ಟ ಅಡಿ ಹೇರುವ ಹಡಗಗಳ ಮೇಲೆ ಉರುವಲವನ್ನೂ ಹೇರಿಸುತ್ತಾರೆ! ಸರಕಾರದವರ ಜಾವಾನು ಇಲ್ಲದಿದ್ದರೂ ಕಾಂಟೇಲರಿಗೆ ಬೇರೆ ಸರಕು ಒಯ್ಯಗೊಡುವದಿಲ್ಲ. ಯಾವದೇ ಸರಕು ಬೇಡವೆಂದು ಹೇಳಿ ಖಾಲಿಯಾದ ಮಚ್ಚೆಯನ್ನು ಹಾಗೆ ಒಯ್ಯಲಿಕ್ಕೆ ಬಿಡುವದಿಲ್ಲ. ಮಚ್ಚೆಗಳಲ್ಲಿ ಹೇರಿದ ಅಡಿಕೆ ಚೀಲಗಳನ್ನು ಇಳಿಸಿದ್ದುಂಟು. ಬಂದರದ ಮೇಲೆ ಬಂದು ಮುಟ್ಟಿದ, ಬೆಟ್ಟದಲ್ಲೇ ಬಿದ್ದುಕೊಂಡಿರುವ, ಯುದ್ಧಕಾರ್ಯಕ್ಕೆ ಸಂಬಂಧ ಸಹ ಇಲ್ಲದ ಉರುವಲ ಒಯ್ಯಲಿಕ್ಕೆಂದು ಹಲವು ಮಚ್ಚೆಗಳನ್ನು ಬಂದರಗಳಲ್ಲಿ ತಡೆಹಾಕಿಟ್ಟದ್ದುಂಟು. ಮಚ್ಚೆಯವರಿಗೆ ಊಟಕ್ಕೆ ಸಿಗುವದಿಲ್ಲ, ಅದನ್ನು ಪೂರೈಸಿಕೊಡುವ ಹೊಣೆ ಏಜಂಟರಿಗಿಲ್ಲ! ಏಜಂಟರು ಬಂದರದಲ್ಲುಳಿಯಬೇಕೆಂದ ನಿಯಮವುಂಟು. ಆದರೆ ಅವರು ಬಂದರದಲ್ಲಿ ಉಳಿಯದೆ ಊರಿಂದ ಊರಿಗೆ ಓಡಾಡುತ್ತಿರುತ್ತಾರೆ! ಮಚ್ಚೆಯವರೂ ವರ್ತಕರೂ ಇವರ ನಿರೀಕ್ಷೆ ಮಾಡಬೇಕು. ಕೈಬಿಸಿ ಮಾಡಿಕೊಳ್ಳುವದಕ್ಕಾಗಿ ಈ ಏಜಂಟರು ಮಾಡುತ್ತಾರೆಂಬ ಪ್ರವಾದ ಕೇಳಬರುತ್ತದೆ.

⁂

ಕಾರವಾರದೊಳಗಿನ ಛತ್ರ ಕುಣೇಬಿಯಲ್ಲಿ ಕಾಣೆಯಾದ ರೂ ೨೦೦೦ಗಳ ನಿಜ ಕಥೆ ಹೀಗುಂಟು. — ಕಾರವಾರದ ಮಾಮಲೇದಾರ ಕಚೇರಿಯಲ್ಲಿ ಟ್ರೆಜರಿ ಇಲ್ಲ. ದಿನದ ಪ್ರತಿ ವ್ಯವಹಾರಕ್ಕೆ ತಗಲುವ ಹಣವನ್ನು ಸರಾಫರು ಹುಜೂರ ಟ್ರೆಜರಿಯಿಂದ ತರುತ್ತಾರೆ ಮತ್ತು ವ್ಯವಹಾರ ಮುಗಿದ ಬಳಿಕ ಪೆಟ್ಟಿಗೆಯನ್ನು ತಿರುಗಿ ಹುಜೂರ ಕಚೇರಿಗೆ ಕಳಿಸುತ್ತಾರೆ. ಛತ್ರ ಕೊಳ್ಳಲು ಕೊಟ್ಟ ರಕಮುಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಬರೆದು ಅದರಲ್ಲಿ ಹಣ ಕೊಂಡ ಜನರ ಸಹಿ ಪಡೆಯುತ್ತಿದ್ದರು ಮತ್ತು ಅದೇ ದಿನ ಕೊಟ್ಟ ಒಟ್ಟೂ ರಕಮು, ಅವುಗಳ ನಾಮನಿರ್ದೇಶ ಮಾಡದೆ, ತೇದಿಯಲ್ಲಿ ಒಮ್ಮೆಲೇ ಖರ್ಚು ಬರೆಯುತ್ತಿದ್ದರು. ಸಹಿ ತಕ್ಕೊಂಡ ಪುಸ್ತಕದ ಅಭಾವದಲ್ಲಿ ರಕಮು ಕೊಂಡ ಜನರ ಸಹಿ ಸಿಕ್ಕಲಿಕ್ಕೆ ಇದೇ ಜುಲೈ ತಿಂಗಳ ವರೆಗಿನ ವ್ಯವಹಾರದ ಪಟ್ಟಿ ಕಚೇರಿಯಲ್ಲಿದ್ದದ್ದು ಈಗ ಕಾಣೆಯಾಗಿದೆಯಂತೆ. ಲೆಕ್ಕ ಪರೀಕ್ಷಕರು ಲೆಕ್ಕ ಪರೀಕ್ಷೆಗೆ ಬಂದಾಗ ಅವರು ಆ ಪಟ್ಟಿ ನೋಡಿದ್ದರೆಂತೆ. ಇತ್ತಲಾಗಿ ಅದು ಕಾಣೆಯಾಗಿದೆಯಂತೆ. ಈ ಪುಸ್ತಕವನ್ನು ಕಾಣದಿರುವ ಹೊಣೆ ಶಿರಸ್ತೇದಾರರದು, ಆದರೆ ಅದಕ್ಕೆ ಪ್ರತ್ಯಕ್ಷ ಹೊಣೆಗಾರರು ಈ ಪುಸ್ತಕ ಯಾವ ಶಿರಸ್ತೇದಾರ ಕಾಲದಲ್ಲಿ ಮತ್ತು ಹೇಗೆ ಕಾಣೆಯಾಯಿತೆಂದು ಜಿಲ್ಲಾಧಿಪರು ಪತ್ತೆ ಮಾಡುತ್ತಿದ್ದಾರೆಂದು ಸುದ್ದಿ. ತಾಲೂಕ ಕಚೇರಿಯ ಸಂಪಾದನೆಯ ಹೊಣೆ ಮಾಮಲೇದಾರರದೆಂದು ಹೇಳಿ ಕಾಣೆಯಾದ ಹಣವನ್ನೆಲ್ಲ ಅವರಿಂದ ಪಡೆಯಬಯಸುವದು ಅನ್ಯಾಯ್ಯ. ಇಂಥ ವಿಚಾರಣೆಯನ್ನು ಅಂಗೀಕರಿಸಿದರೆ ಜಿಲ್ಲಾಧಿಪ ಕಚೇರಿಯವರ ಮೇಲೂ ಆ ಹೊಣೆ ಹೊರಿಸಬಹುದಾಗಿದೆ.

THE DIRECTORS OF
The Agricultural & Industrial Bank, Ltd.,
(Incorporated in British India)
ESTD 1934)
Thank the numerous Share-holders, Depositors and
Patrons of the Bank for their whole-hearted co-operation and
support in the year 1944 and while wishing them
a HAPPY AND PROSPEROUS NEW YEAR, they look forward
for their continued patronage during the year 1945

Head Office Coondapoor
1-1-1945

K VAMAN SHENAI,
President

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬಹಳ ಒಂದೊಂದು ರಾತ್ರಿ ವಿಪರೀತ ಚಳಿ ಬೀಳುತ್ತಿದೆ ಇತ್ತ ೧೦-೧೫ ವರ್ಷಗಳಲ್ಲಿ ಈ ವರ್ಷದಷ್ಟು ಚಳಿ ಎಂದೂ ಬಿದ್ದಿದ್ದಿಲ್ಲ ಊರಲ್ಲಿ ತಕ್ಕ ಮಟ್ಟಿಗೆ ಆರೋಗ್ಯವಿದೆ

ಶ್ರೀಗೋಕರ್ಣ ಮಠಾಧೀಶ ಶ್ರೀವಿದ್ಯಾಧಿರಾಜ ತೀರ್ಥ ಗುರುಗಳ ಸ್ವಾರಿಯು, ಕಳೆದ "ವೃತ್ತ" ದಲ್ಲಿ ತಿಳಿಸಿದಂತೆ, ತಾ. ೧೫ನೇ ಸೋಮವಾರ ಸಂಜೆ ೬ ಘಂಟೆಗೆ ಗೋಕರ್ಣದಿಂದ ಈ ಊರಿಗೆ ಬಂದು ತಲ್ಪಿತು ಊರಿನವರು ಇವರು ಗುರುಗಳ ಸ್ವಾಗತಕ್ಕಾಗಿ ಮುಂತೆ [illegible] ವರೆಗೆ ಸುಬ್ಬಾಯ ವಿಠ್ಠಲ ಕಾಮತರ ಅಂಗಡಿಯ ಮುಂದೆ ಕಾದು ಕೊಂಡಿದ್ದರು ಶ್ರೀಗುರುಗಳು ಸವಾರಿ ಅಂಗಡಿಯ ಮುಂದೆ ದಾಟಿದ್ದು ಚಪ್ಪರದಲ್ಲಿಳಿದು ಅರ್ಧ ತಾಸು ವಿಶ್ರಾಂತಿ ತೆಕ್ಕೊಂಡರು. ಆಗ ಅಂಗಡಿಯವರ ಪಾದಪೂಜೆಯಾಯಿತು. ೭ ಘಂಟೆಗೆ ಆಂದಣದಲ್ಲಿ ಸಿಂಗರಿಸಿದ್ದ ಪಲ್ಲಕ್ಕಿಯಲ್ಲಿ ಶ್ರೀ ಗುರುಗಳ ಮೆರವಣಿಗೆ ಹೊರಟಿತು. ಮೆರವಣಿಗೆಯು ನೆಲ್ಲೀಕೇರಿ ರಸ್ತೆ ಬಸ್ತಿ ಬಲಗಡೆ ಮಾರ್ಗ, ತಾಂಬ್ರಪೇಟಿ ಮಾರ್ಗ, ತಾರೀಬಾಗಿಲ ರಸ್ತೆ, ಹಳ್ಳ ಬಂದರ ರಸ್ತೆ, ಮಾರ್ಗವಾಗಿ ದೊಡ್ಡ ಪೇಟೆಯೊಳಗಿಂದ ಸಾಗಿ ನಡೆದು ಕಟ್ಟೆಯ ತನಕ ಹೋಗಿ, ಅಲ್ಲಿಂದ ತಿರುಗಿ ಶ್ರೀ ವೆಂಕಟರಮಣ ದೇವರ ಮಠಕ್ಕೆ ಹೋಗಿ ಅಲ್ಲಿ ಪಟ್ಟದ ಮೆರವಣಿಗೆಯು ಮಾರ್ಗದಲ್ಲಿ ಬೀದಿಬೀದಿಗಳಲ್ಲಿ ತೋರಣಗಳಿಂದ ಶೃಂಗರಿಸಿತ್ತು, ಅಲ್ಲಲ್ಲಿ ದೀಪಾವಳಿಗಳೂ ಸಿಡಿಸುತ್ತಿದ್ದವು ಶ್ರೀ ಗುರುಗಳು ಮಠಕ್ಕೆ ಬಂದು ತಲ್ಪಿದಾಗ ಗಡಿಯಾರ ವಲ್ಲಿ ೧೦ ಬಡಿದಿತ್ತು. ಶ್ರೀ ಗುರುಗಳು ಮಠದಲ್ಲಿಳಿದವರೇ ದೇವದರ್ಶನ ತೆಕ್ಕೊಂಡು, ಮಠದ ಪ್ರಧಾನ ಬಾಗಿಲದ ಎದುರಲ್ಲಿ ಕೂಡ್ರಿಸಿದ್ದ ಶ್ರೀಮದಿಂದಿರಾಕಾಂತ ತೀರ್ಥ ಹಾಗೂ ಶ್ರೀಮದ್ಭುವನೇಂದ್ರ ತೀರ್ಥ ಗುರುಗಳ ಸುಂದರ ತೈಲ ಚಿತ್ರಗಳ ಅನಾವರಣ ಮಾಡಿ, ಆ ಪೂರ್ವ ಗುರುಗಳಿಗೂ ವಂದನೆಗಳನ್ನರ್ಪಿಸಿ, ಮಠದ ಜಗಲಿಯ ಮೇಲೆ ಸಿಂಗರಿಸಿಟ್ಟ ಆಸನದಲ್ಲಿ ಕುಳಿತರು. ಅಲ್ಲಿ ಪ್ರಥಮ ಪಾದಪೂಜೆ ನಡೆಯಿತು. ಮಠದಲ್ಲಿ ಜನರಿಂದ ತುಂಬಿದ ಸಭೆಯು ನಡೆಯಿತು. ಶ್ರೀ ಗುರುಗಳ ಆಗಮನದ ಸಂಭ್ರಮವು ರಾತ್ರಿ ೧ ಘಂಟೆಗೆ ಮುಗಿಯಿತು. ಕಳೆದ ೧೦ತಿಯ ವರೆಗೆ ದಿನಾಲೂ ಪಾದ ಪೂಜೆ, ಸಾಸಿರ ಭಿಕ್ಷೆ-ಪಾದಪೂಜೆಗಳು ನಡೆದವು. ಗುರುವಾರದಿಂದ ಭಿಕ್ಷೆಗಳು ನಡೆದಿದ್ದು ಮಂತ್ರ ಉಪದೇಶಗಳೂ ನಡೆಯುತ್ತಿವೆ

ಇದೇ ಬರುವ ೪ನೇ ಗುರುವಾರ ಸಂಜೆ ಇಲ್ಲಿಯ ಶ್ರೀ ವೆಂಕಟರಮಣ ದೇವರ ತಿರುಪತಿ-ದೀಪೋತ್ಸವ ಜರುಗಲಿದೆ ಶ್ರೀ ಗುರುಗಳ ಸಾನ್ನಿಧ್ಯದಿಂದ ಈ ಉತ್ಸವಕ್ಕೆ ವಿಶೇಷ ಶೋಭೆ ಬರುವದೆಂದು ಹೇಳಬಹುದು

ಮೊನ್ನೆ ಶುಕ್ರವಾರ ತಾ. ೨೨ಕ್ಕೆ ಸ್ವಾತಂತ್ರ್ಯ ದಿನದ ನಿಮಿತ್ತ ಕೆಲವು ಕಾಂಗ್ರೆಸ್ಸಿಗರು ಅಲ್ಲಲ್ಲಿಯ ಬಾವುಟ ಇರುವ ಸ್ಥಳದಲ್ಲಿ ಸೇರಿ, ತಿರ್ಗಾ ರಾಷ್ಟ್ರ ಧ್ವಜದ ಹಾರಿಸುವರ [illegible] ಪ್ರತಿಜ್ಞೆಯ ಉಚ್ಚಾರ ಮಾಡುವ ಕ್ರಮವನ್ನು ಹಿಡಿದರು ಆ ಬಳಿಕ ಇದೀಗ ಸಂಗಗಳಲ್ಲೂ [illegible] ಇರುವ ಬಡ ಕಾಂಗ್ರೆಸ್ಸಿಗರ ಕುಟುಂಬಗಳ ಸಹಾಯಕ್ಕಾಗಿ ಕೆಲವು ಸ್ವಯಂಸೇವಕರು ಊರಲ್ಲಿ ತಿರುಗಾಡಿ ಭಿಕ್ಷೆ ಕೂಡಿಸಿದರು. ಅವರ ಡಬ್ಬಿಯಲ್ಲಿ ರೂ ೧೪೪-೭-೪ ಕೂಡಿದವೆಂದು ತಿಳಿಯುತ್ತದೆ

ಈ ವರ್ಷ ಕುಮಟಾ ಮ್ಯುನಿಸಿಪಾಲಿಟಿಯ ಚುನಾವಣೆಯಾಗಲಿದೆ. ಕಳೆದ ಸೋಮವಾರ ಹುರಿಯಾಳು ಪತ್ರಿಕೆಗಳನ್ನು ಹಾಜರ ಮಾಡುವ ಕಡೆಯ ದಿನವಿತ್ತು. ಅಂತು ೬ ಆಸನಗಳಿಗಾಗಿ ೨೫ ಜನರು ೨೯ ಹುರಿಯಾಳು-ಪತ್ರ ಕೊಟ್ಟಿದ್ದರು ಅವರ ಪೈಕಿ ಮಂಗಳವಾರ ೮ ಮಂದಿ ತಮ್ಮ ೮ ಹುರಿಯಾಳು-ಪತ್ರಗಳನ್ನು ತಿರುಗಿ ತೆಕ್ಕೊಂಡಿದ್ದರಿಂದ ೨ನೇ ೫ನೇ ನಗರ-ವಿಭಾಗಗಳಲ್ಲಿಯ ೭ನೇ ಮುಸಲ್ಮಾನ ಕಿದಾರ ಸಂಘದಲ್ಲಿಯೂ ಪ್ರತ್ಯಕ್ಷ ಚುನಾವಣೆಯು ಅಗತ್ಯವಿಲ್ಲ ೩ನೇ (ಹೆ-ವಿಟ್ಟು) ನಗರ-ವಿಭಾಗದಲ್ಲಿ ಮಾತ್ರ ಆಸನಗಳಿಗಾಗಿ ಮೂವರ ಮೇಲಾಟವಿದ್ದು ಅಲ್ಲಿ ಮಾತ್ರ ಮತದಾನದ ಚುನಾವಣೆಯಾಗುವದು

ಗೋಕರ್ಣ ಮಹಾಶಿವರಾತ್ರಿಯ ಜಾತ್ರೆಗೆ ಬರುವ ಜನರಿಗೆ ಸೀಧಾ-ಸಾಮಗ್ರಿ ಕೊಡುವದಾಗಿ ಹೊಸ ಜಿಲ್ಲಾಧಿಕಾರಿಗಳು ಹೊರಡಿಸಿದ ವಿಸಂತಿ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ ಯಾತ್ರೆಗೆ ಬರುವವರು ೩ ದಿನಕ್ಕಿಂತ ಹೆಚ್ಚಿಗೆ ಇರುವದು ಅವಶ್ಯವಿಲ್ಲವೆಂತಲೂ ಅವರಿಗೆ ಸೀಧಾ-ಚೀಟಿ ಕೊಡುವದಾಗಿಯೂ ಜಿಲ್ಲಾಧಿಕಾರಿ ಸೀಧಾ-ಅಧಿಕಾರಿಗಳಿಗೆ ತಿಳಿಸಿದ್ದಾರೆ. ಅದರಿಂದ ಗೋಕರ್ಣದಲ್ಲಿ ದೊಡ್ಡ ಗಲಾಟೆಯುಂಟಾಗಿದೆ. ಮಹಾಶಿವರಾತ್ರಿಯಂದರ ಗೋಕರ್ಣ — ವೈದಿಕರು, ವ್ಯಾಪಾರಿಗಳು ಹಾಗೂ ಕೂಲಿಕಾರರು ಮೊದಲಾದವರು — ದೇವ-ಸಾಧನೆ ಅವರ ೩-೪ ತಿಂಗಳ ಜೀವ, ಶಿವರಾತ್ರಿಯ ಉತ್ಪನ್ನದಿಂದಲೇ ಸಾಗುತ್ತದೆಂದು ಬಲ್ಲವರ. ಆದ್ದರಿಂದ ಜಾತ್ರೆಯನ್ನೇ ಹೊಸ ಜಿಲ್ಲಾಧಿಕಾರಿ

ರವರು ಪರ್ಯಾಯದಿಂದ ಪ್ರತಿಬಂಧಿಸಿ ಗೋಕರ್ಣದವರಿಗೆ ಉಪವಾಸ ಹಾಕುತ್ತಿರುವದು ಶೋಚನೀಯ. ಜನರು ಉಪವಾಸ ಸಾಯಬಾರದೆಂಬ ಉದ್ದೇಶದಿಂದ ಅನ್ನವಸ್ತ್ರ ಸೀಧಾತ್ಮವಾದ ಅಧಿಕಾರಿಯು ಹೀಗೆ ಜನರನ್ನು ಉಪವಾಸ ಹಾಕತೊಡಗಿದ್ದಂತೂ ತೀರ ಲಾಂಛನಾಸ್ಪದವಾಗಿದ್ದು!

ಕೆಂಗಿನ ಎಣ್ಣೆಯ ಬೆಲೆಯು ನಿಯಂತ್ರಣವೀಗ ಬಿದ್ದಾಗ ಹತ್ತಿರುವದರಿಂದ ಪೇಟೆಯಲ್ಲಿದ್ದ ಎಲ್ಲ ಎಣ್ಣೆ ಒಮ್ಮೆಗಲೇ ಮಾಯವಾಗಿದೆ! ಎಣ್ಣೆ ಎಲ್ಲಿಲ್ಲೂ ಸಿಗದಂತಾಗಿದೆ! ಸರಕಾರ ನಿಯಂತ್ರಣಕ್ಕೊಳಪಟ್ಟ ಒಂದೇ ಒಂದು ಅಂಗಡಿಯಲ್ಲಿ ಎಣ್ಣೆಯುಂಟು. ಆದರೆ ತಿಂಗಳಿಗೆ ತಲಾ ೧೫ ತೊಲೆಯಷ್ಟು ಮಾತ್ರ ಸಿಗುತ್ತದೆ

ಅಕ್ಕಿ-ಭತ್ತವನ್ನು ಈ ಜಿಲ್ಲೆಯಲ್ಲಿ ಒತ್ತಾಯದಿಂದ (Levy ಪದ್ಧತಿಯಿಂದ) ಖರೀದಿಸಲಾಗಲಿಕ್ಕಿಲ್ಲವೆಂತಲೂ ರೈತರು ಸ್ವಬುದ್ಧಿಯಿಂದ ತಮ್ಮ ಉಳಿಕೆ ಭತ್ತ ಸರಕಾರಕ್ಕೆ ಮಾರುವರೆಂಬ ವಿಶ್ವಾಸದಿಂದಲೇ ಸರಕಾರವು ಉಳಿಯುವದೆಂತಲೂ ಪ್ರಾಂತಿಕ ಅಧಿಕಾರಿಗಳು ಡಂಗುರ ಸಾರಿರುವದಾದರೂ ಸ್ಥಾನಿಕ ಅಧಿಕಾರಿಗಳು ಭತ್ತ-ಮಾರಾಟದ ಬಗೆ ಒಂದು ಬಗೆಯ ಒತ್ತಾಯ ಮಾಡುತ್ತಿದ್ದಾರೆ. ಯಾವನೊಬ್ಬ ಜಮೀನದಾರನು ತನ್ನ ಭತ್ತವನ್ನು ಗ್ರಾಮಾಂತರ-ದ ಬಗ್ಗೆ ಪರವಾನೆ ಬೇಡಿದರೆ ಸರಕಾರಕ್ಕೆ ನಿಮ್ಮಿಂದ ಸಲ್ಲಬೇಕಾದ ಅಂಶ ಕೊಟ್ಟ ಹೊರತು ಅಂತಹ ಪರವಾನೆ ಕೊಡಬರುವದಿಲ್ಲವಾಗಿ ಸ್ಥಾನಿಕ ಅಧಿಕಾರಿಗಳು ಹೇಳುತ್ತಾರೆ. ಎಲ್ಲ ರೈತರಿಂದ ಗೇಣಿ ಭತ್ತ ಸಕಾಲಕ್ಕೆ ಬರುತ್ತದೋ ಇಲ್ಲವೋ. ಅಂತು ಎಷ್ಟು ಭತ್ತ ಯಾ ಅಕ್ಕಿ ಸಕಾಲ ಬರುವದು, ತಮ್ಮ ಸಂಸಾರಕ್ಕೆ ಸಾಲದಾಗಿ ಎಷ್ಟು ಉಳಿಯುವದು ಮತ್ತು ಎಷ್ಟು ಸರಕಾರಕ್ಕೆ ಕೊಡಬಹುದು ಎಂಬದು ಈಗಲೇ ಜಮೀನದಾರರಿಗೆ ಹೇಗೆ ತಿಳಿಯಬೇಕು? ಅದು ತಿಳಿಯುವ ವರೆಗೆ ಅವರಿಂದ ಅಕ್ಕಿ-ಭತ್ತ ಅಪೇಕ್ಷಿಸುವದು ಸರಿಯೇ? ಎಂದೀ ವಿಚಾರವನ್ನು ಅಧಿಕಾರಿಗಳು ಮಾಡಕೊಳ್ಳುವದಿಲ್ಲ! ಹೀಗೆ ಪರ್ಯಾಯದಿಂದ ಭತ್ತ ಮಾರಾಟದ ಬಗ್ಗೆ ಒತ್ತಾಯ ಮಾಡುವದಕ್ಕಿಂತ ಲೆವ್ಹಿಯ ಖರೀದಿಯ ಕ್ರಮವನ್ನೇ ಇಲ್ಲಿ ಅನ್ವಯಿಸಿದ್ದರೆ ಒಳಿತಾಗುತ್ತಿತ್ತೆಂದು ಅನೇಕರು ಮಾತಾಡುತ್ತಾರೆ

ಕಾರವಾರ— (ತಾ. ೧೯ ೧-೪೫) ಜಿಲ್ಲಾ ಲೋಕಲ ಬೋರ್ಡಿನವರು ಪ್ರಾಂತಾಧಿಪರಿಗೆ ಒಪ್ಪಿಸಿದ ಬಿನ್ನವತ್ತಳೆಯಲ್ಲಿ ರಾಜ್ಯವಿನ ಜಿಲ್ಲಾಧಿಪರ ಕೋಗಳಿಕೆ ಬಂದ ಬಗ್ಗೆ ಪ್ರಕಟವಾದ ಟೀಕೆಯನ್ನನುಲಕ್ಷಿಸಿ, ಬೋರ್ಡಿನ ಈ ವರ್ತನದಲ್ಲಿ ನಮೂದಿಲ್ಲದ ಸಂಗತಿಯನ್ನು ನಾವು ವಾರ ಪತ್ರದಲ್ಲಿ ಸೇರಿಸಿದ್ದೇವೆ, ಸಂಶಯಲ್ಲೆಂದು ಬೋರ್ಡಿನ ಅಧ್ಯಕ್ಷರು ತಿಳಿಸಿದ್ದಾರೆ; ಮತ್ತು ೨೫ ಬಿನ್ನವತ್ತಳೆಯ ಉಪಕಾರ ಮನ್ನಣೆ ತಾ. ೭ ೯ ೪೪ಕ್ಕೆ ಬೋರ್ಡಿನವರು ಕೈಕೊಂಡ ಠರಾವು (೯) ಗೊತ್ತುವಳಿಯ ಪ್ರಕಾರ ಕೊಟ್ಟಿದ್ದು ಅದು ಹಾಗೂ ಬೋರ್ಡ ಆಫೀಸಿನ ಮೇಲಿನ ರಾಷ್ಟ್ರಧ್ವಜ ಪ್ರಾಂತಾಧಿಪರ ದೃಷ್ಟಿಗೆ ಬೀಳಬಾರದೆಂದು ಅದನ್ನು ಮುಚ್ಚಿಡಲ್ಲವೆಂತಲೂ ಪ್ರಾಂತಾಧಿಪರು ಕಟ್ಟಡ ವೇದಿಕೆಯ ಮೇಲಿಂದ ಆದು ಬಾ.ತ್ತಿಂತಲೂ ಬೋರ್ಡಿನ ಹಲವು ಸದಸ್ಯರು ಈ ಸನ್ಮಾನಕ್ಕೆ ಪ್ರತ್ಯಕ್ಷ ಪ್ರತಿಕೂಲ ಮಾಡಿಕೊಂಡಿದ್ದಿಲ್ಲವೆಂತಲೂ ಅಧ್ಯಕ್ಷರು ಬರೆಯುತ್ತಾರೆ. [ಊಟವಾಯಿತೇ ಎಂದು ಪ್ರಶ್ನೆ ಮಾಡಿದಾಗ ಮುಂದಿನಾಸು ಮೂರು ತಾಸಿನ ಹಿಂದೆ ಮಾಡಿದ್ದಾಗಿ ಯಾರೋ ಉತ್ತರಕೊಟ್ಟದ್ದರಂತೆ ಅಧ್ಯಕ್ಷರ ಪ್ರತ್ಯುತ್ತರವಾದರೂ ಅದೇ ಬಗೆಯದು. ಪ್ರಾಂತಾಧಿಪರಿಗೆ ಕೊಡತಕ್ಕ ಮಾನಪತ್ರದಲ್ಲಿ ಜಿಲ್ಲಾಧಿಪರ ಹೊಗಳಿಕೆ ಮಾಡಬೇಕೆಂದು ಮಾನಪತ್ರದ ಬಗ್ಗೆ ಬೋರ್ಡು ಕೈಕೊಂಡ ಗೊತ್ತುವಳಿಯಲ್ಲಿ ಎಲ್ಲೂ ಹೇಳಿಲ್ಲವೆಂಬ ಆಕ್ಷೇಪಕ್ಕೆ, ೪-೫ ತಿಂಗಳ ಹಿಂದೆ ಎಂದೋ ಬೋರ್ಡಿನವರು ಠರಾವು ಒಪ್ಪಿದವರ ಉಪಕಾರ ಸ್ಮರಿಸಿದ್ದುಂಟೆಂದು ಹೇಳುವದು ಸಮರ್ಪಕ ಉತ್ತರವಾದೀತೇ? "ರಾಷ್ಟ್ರಧ್ವಜ ಪ್ರಾಂತಾಧಿಪರ ದೃಷ್ಟಿಗೆ ಬೀಳಬಾರದೆಂದು" ಎಂಬರ್ಥದ ಶಬ್ದಗಳನ್ನು ನಮ್ಮ ಸುದ್ದಿಗಾರರು ಉಪಯೋಗಿಸಿದ್ದು ಇರುವದಿಲ್ಲ. ಆ ಧ್ವಜವು ಎಂದಿನಂತೆ ಮೆರೆಯುತ್ತಿದ್ದಿಲ್ಲ; ಕೆಳಗಿನ ಕೋಣೆಗಳ ಕಪಾಟಿಯಲ್ಲಿ ಸಿಕ್ಕಿ ಬಿದ್ದು ವರ್ಣಗಳ ಜನರಿಗೆ ಕಾಣುತ್ತಿದ್ದಿಲ್ಲ. ಎಂದಷ್ಟೇ ಸುದ್ದಿಗಾರರ ಅಂಬೋಣ. ಆ ಅಂಬೋಣ ಬಾಧಿತವಾಗುತ್ತದೆಂದು ಹೇಳುವ ಪ್ರಾಂತಾಧಿಪರ ವೇದಿಕೆಯ ಮೇಲಿಂದ ಜನರ ನೋಡಿದರ ಕಾಣುವ ವಿಚಾರ ಎಂದು ಅಧ್ಯಕ್ಷರು ಕೊಟ್ಟ ದಾಖಲೆಯಿಂದ ಯಾರ [illegible]ಕಾರಣವಾದೀತು? — ಸಂಪಾದಕ]

ಸುಂದರ ಎತ್ತಿನ-ಜೋಡಿ ಮಾರಲಿದೆ!

ಬೈಲು ಸೀಮೆಯ, ದೊಡ್ಡ ಜಾತಿಯ ಸುಂದರ ಎತ್ತಿನ ಜೋಡಿ ಮಾರಲಿದೆ! ಬೇಕಾದವರು ಸಮಕ್ಷ ಭೆಟ್ಟಿಯಾಗಿಯಾ ಪತ್ರದ್ವಾರಾ ಬೇಕಾದ ಮಾಹಿತಿ ಪಡೆಯಬಹುದು

R D. Bhat Bhandikeri,
Gokarn. N K

ರುಶ್ಯ-ಜರ್ಮನರ ಘರ್ಷಣೆ.

(ಸಿರೀಕ್ಷಕನು ಬರೆದುದು.)

ಅತ್ತ ಪಶ್ಚಿಮ ರಣರಂಗದಲ್ಲಿ ಜರ್ಮನರ ವೀರ ಸೇನಾನಿ ರಂಡಸ್ಟೆಟ್ಟನು ರೌದ್ರಾವತಾರತಾಳಿ, ನುಗ್ಗಿಬಂದ ಮಿತ್ರರನ್ನು ಹಿಂದಟ್ಟುತ್ತಿರುವಷ್ಟರಲ್ಲಿ ಇತ್ತ ಪೂರ್ವರಣರಂಗದಲ್ಲಿ ರುಶ್ಯರು ಭಯಂಕರ ದಾಳಿ ಮಾಡಿ ಜರ್ಮನರನ್ನು ಹಿಮ್ಮೆಟ್ಟಿಸುತ್ತಿದ್ದಾರೆ ೫-೬ ತಿಂಗಳಿಂದ ಜರ್ಮನರು ಗಟ್ಟಿಯಾಗಿ ಹಿಡಿದುಕೊಂಡಿದ್ದ ವಾರ್ಸಾ ನಗರವು ಮೊನ್ನೆ ದಿನಗಳಲ್ಲಿ ಅವರ ಕೈಬಿಟ್ಟಿದೆ. ಮತ್ತು ಪೂರ್ವಪ್ರಶಿಯಾದ ೨/೩ ಭಾಗವೂ, ಉತ್ತರಸೈಲೇಶಿಯಾಪ್ರಾಂತವೂ ರುಶ್ಯವಶವಾಗಿ, ಈಗ ಪ್ರಶ್ಯ ಮಹಾಯುದ್ಧಕ್ಕೆ ಮೂಲ ನೆಲವಾಗಿದ್ದ ಡಾಂಝಿಗ್ ಬಂದರಕ್ಕೂ ಕೋನಿಗ್ಸಬರ್ಗ ನಗರಕ್ಕೂ ಗಂಡಾಂತರವುಂಟಾಗಿರುತ್ತದೆಂದು ಸುದ್ದಿ ಬಂದಿದೆ. ರಭಸದಿಂದ ಕೂಚು ಮಾಡುತ್ತಿರುವ ರುಶ್ಯ ದಂಡುಗಳು ಜರ್ಮನ ರಾಜಧಾನಿಯಾದ ಬರ್ಲಿನದಿಂದ ೯೦ ಮೈಲು ಅಂತರದಲ್ಲಿ ತಲ್ಪಿವೆಯೆಂತಲೂ ವಾರ್ತೆಯುಂಟು. ರುಶ್ಯರ ಈ ರಭಸ ಕಂಡು ಜರ್ಮನರು ಹೌಹಾರಿ ಹೋಗಬೇಕಿತ್ತು. ಆದರೆ ಹಾಗೇನೂ ಆದಿದ್ದು ಕಂಡುಬರುವದಿಲ್ಲ. ಬರ್ಲಿನ ಸಮಾಚಾರಗಳಲ್ಲಿ ಏನೇನೂ ಕಳವಳವುಂಟಾಗಿಲ್ಲೆಂದೂ ಗಂಭೀರರಾಗಿ ಯುದ್ಧ-ಪರಿಸ್ಥಿತಿ ಚರ್ಚಿಸುತ್ತಿದ್ದಾರೆಂದೂ ನೊಸೆಡ್ಯಾಕ್ ವಾರ್ತೆ ತಿಳಿಸುತ್ತಿದೆ. ಇದರ ಗುಟ್ಟೇನೆಂದು ನಾನು ಆಲೋಚಿಸುತ್ತಿದ್ದೇನೆ. ರುಶ್ಯರನ್ನು ಕೆಲವೊಂದು ಅಂತರದ ತನಕ ಬರಮಾಡಿಕೊಂಡು ಅಲ್ಲಿ ಅವರ ಪರಾಮರ್ಶ ತೆಕ್ಕೊಳ್ಳುವಾ ಎಂದು ಜರ್ಮನರು ತಂತ್ರ ಹೂಡಿರಬೇಕೆಂಬ ಸಂಶಯ ಬರುತ್ತಿದೆ. ರುಶ್ಯರ ಪರಾಮರ್ಶ ತೆಕ್ಕೊಳ್ಳುವ ಅತ್ಯವಿಶ್ವಾಸವಿದ್ದಿಲ್ಲವಾದರೆ ಜರ್ಮನರು ಗಾಲ ೧ಗೊಳ್ಳದೆ ಇರುತ್ತಿದ್ದಿಲ್ಲ ಕಳೆದ ವಾರ ಜರ್ಮನ ಸಮರಶಾಸ್ತ್ರಜ್ಞನ ದಳಪತಿಗಳೂ ಪೂರ್ವ ರಂಗಕ್ಕೆ ಹೊರಟ ಸುದ್ದಿಯುಂಟು. ನಡುವೆ ಬಂದ ಒಂದು ಸುದ್ದಿಯನ್ನು ಓದುಗರಿಗೆ ತಿಳಿಸಬಯಸುತ್ತೇನೆ. ಜರ್ಮನರು ರುಶ್ಯರೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ನಡಸಿದ್ದರೆಂದೂ ರುಶ್ಯರು ಹಾಗೆ ಮಾಡಲು ನಿರಾಕರಿಸಿದರೆಂದೂ ಮೊಸ್ಕೋದಿಂದ ವಾರ್ತೆ ಬರದಿತ್ತು. ಈ ಒಪ್ಪಂದದ ಯೋಜನೆ ಜರ್ಮನರ ಮಾಯಾಜಾಲವಿರುತ್ತದಾಗಿರುಶ್ಯರ ಅಂಬೋಣ. ಏನೇನೂ ಇರಲಿ ರುಶ್ಯರು ೧೫ ಲಕ್ಷ ಸೈನ್ಯದೊಂದಿಗೆ ಈಗ ಜರ್ಮನಿಯಲ್ಲಿ ಹೊಕ್ಕವರಾಗಿದ್ದಾರೆ. ಅವರನ್ನು ಜರ್ಮನರು ಹೇಗೆ ಎದುರಿಸುತ್ತಾರೆಂಬದನ್ನು ನೋಡಲು ನಾನು ಬಹಳ ಕವಳಿಸುತ್ತಿದ್ದೇನೆ.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿರುವ ೧ ವೆಂಕಟೇಶ ಮತ್ತು ೨ ಶ್ರೀನಿವಾಸ ನಾರಾಯಣ ಪೈ ಗುಂಡುಬಾಳೆಕರ ಸಾಃ ಭಟಕಳ (ಹಾಲಿ ಮುಂಬಯಿ) ಇವರು ಈ ಮೂಲಕ ಜಾಹೀರಪಡಿಸುವದೇನಂದರೆ:- ನಮ್ಮ ತಂದೆ ನಾರಾಯಣ ವಿಟ್ಠಲ ಪೈ ಗುಂಡುಬಾಳೆಕರ ಇವರಿಗೆ ನಾವಿಬ್ಬರೇ ಪುತ್ರರು ನಮ್ಮ ತಂದೆಯವರು ಇತ್ತ ೫-೬ ತಿಂಗಳಿಂದ ಭ್ರಾಂತಚಿತ್ತರಾಗಿ, ಕುಟುಂಬದ ಸ್ಥಿರ-ಚರ ಸೊತ್ತುಗಳನ್ನು ಗರಜು ಇಲ್ಲದೆ ಅಡವು, ಕ್ರಯ ವಗೈರೆ ಮಾಡತೊಡಗಿದ್ದಾರೆ. ಅವರು ಈ ಪರಿಸ್ಥಿತಿಯಲ್ಲಿ ಮಾಡಿದ ವ್ಯವಹಾರಗಳು ಕಾಯಿದೆಯಂತೆ ಸಿಂಧುವಾಗಲಾರವು; ಹಾಗೂ ಅವು ನಮ್ಮನ್ನು ಬಾಧಿಸುವದಿಲ್ಲ. ಕಾರಣ ಯಾರೂ ಅವರು ತಂದೆಯವರಿಂದ ನಮ್ಮ ಕುಟುಂಬದ ಯಾವದೇ ಆಸ್ತಿಯನ್ನು ಅಡವು, ಕ್ರಯ ವಗೈರೆ ಮಾಡಿಕೊಳ್ಳಬಾರದಾಗಿಯೂ ವ್ಯರ್ಥ ಲುಕ್ಸಾನಿಗೆ ಬೀಳಬಾರದಾಗಿಯೂ ಈ ಮೂಲಕ ತಾಕೀತು ಕೊಡುತ್ತೇವೆ ತಾ ೧೫-೧-೪೫

Venkatesh Naray[illegible]
ಶ್ರೀನಿವಾಸ ನಾರಾಯಣ ಪೈ, ಗುಂಡ[illegible]ಳೆಕರ
ಭಟಕಳ

ಜಾಹೀರನಾಮೆ- R

No 74-R **ಗೋಕರ್ಣ ಜಾತ್ರೆ.**

ಈ ಮೂಲಕ ಯಾವತ್ತು ಜನರಿಗೆ ತಿಳಿಸಲ್ಪಡುವದೇನಂದರೆ.. ಈ ವರ್ಷ ಮಹಾಶಿವರಾತ್ರಿ ಸಮಯಕ್ಕೆ ಗೋಕರ್ಣ ಸೀಧಾ ಕ್ಷೇತ್ರದಲ್ಲಿ ಜರುಗಲಿರುವ ಜಾತ್ರೆಗೆ ಬರುವ ಯಾತ್ರಿಕರಿಗೆ, ಜಿಲ್ಲೆಯ ಆಹಾರ-ಸಾಮಗ್ರಿಯ ಕುಟಾಗ್ರತೆಯಿಂದ ಮತ್ತು ವಾಹನಸೌಕರ್ಯದ ಅಭಾವದ ಮೂಲಕ, ಆಹಾರ-ಧಾನ್ಯಗಳನ್ನು ಯಾವದೇ ಪ್ರಸಂಗದಲ್ಲಿ ಪೂರೈಸಲಿಕ್ಕೆ ಬರಲಾರದು ಕಾರಣ ಯಾರೂ ಜಾತ್ರೆಗೆ ಬರಬಾರದಾಗಿ ತಿಳಿಸಿದೆಂದು ವಿನಂತಿಯಿದೆ

ಕಾರವಾರ, ತಾ 23-1-1945

V. NANJAPPA,
Dist. Magistrate, Kanara

ORIENT
Illustrated Weekly
(Published every Sunday)
The New Supply Agency, Kumta

Reg. No. B 1270. Monday, 5th February, 1945.

ಕಾನಡಾವೃತ್ತ

[illegible]] THE KANARA NEWS. [[illegible]

ಕುಮಟಾ:— ಸೋಮವಾರ, ತಾ. ೫ ನೇ ಫೆಬ್ರುವರಿ ೧೯೪೫ನೇ ಇಸವಿ.

[illegible]

[illegible]

ಸ್ಥಳೀಕ ವಿಷಯಗಳು.

ಲೇಖಕ: ಸ್ಥಳವಂತಿಕ.

[illegible]

([illegible])

[illegible]

ಮಂಚಿಕೇರಿ— [illegible]

The Agricultural & Industrial Bank, Ltd.,

(Incorporated in British India, Liability of Members Limited)

(ESTD: 1934)

ABRIDGED BALANCE SHEET AS ON 31-12-1944

Liabilities-	Rs	As	Ps	Assets-	Rs	As	Ps
Paid-up Capital	2,69,950	8	0	Cash & Bank ablances	4,31,126	14	7
Calls in Advance	15,700	0	0	Govt. Securities	20,26,838	7	0
Reserve	[illegible]	2	0	Other Investments	42,204	6	0
Deposits	27,76,944	6	6	Loans Secured	10,19,530	2	3
bills for Collection	1,03,821	10	0	Loans on Personal Security and Bills Discounted	5,06,871	9	1
Other Liabilities	10,41,465	14	11	Bills for collection	1,03,821	10	0
Profits' Account	16,803	15	11	Other Assets	1,05,251	8	5
Total Rs	42,37,154	9	4	Total Rs	42,37,154	9	4

Coondapoor, 27—1—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಕಡಿಮೆಯಾಗಿಲ್ಲ. ಮಾರ್ಗಗಳಲ್ಲಿ ಧೂಳು ಬಹಳವಾಗಿದೆ! ಸಣ್ಣದೊಂದು ಗಾಳಿ ಬೀಸಿದರೂ ಧೂಳು ಹಾರಿ ಮಾರ್ಗದ ಜನರಿಗೂ ಅಕ್ಕಪಕ್ಕಗಳಲ್ಲಿರುವ ಅಂಗಡಿ, ಮನೆಗಳೊಳಗಿನ ಜನರಿಗೂ ಧೂಳು ತಿನ್ನುವ ಸೌಭಾಗ್ಯ ಪ್ರಾಪ್ತವಾಗುತ್ತದೆ!!

ಕಳೆದ ವಾರ ತಿಳಿಸಿದಂತೆ ಗುರುವಾರ ಸಂಜೆ ಶ್ರೀ ವೆಂಕಟರಮಣ ದೇವರ ಶಿವರ ದೀಪೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಈಗ ೧೦-೧೧ ದಿನಗಳಿಂದ ತವಾಯಿತಿಗೆ ಅಧಿಕಾರಿಗಳು ಇಲ್ಲಿ ಮುಕ್ಕಾಮು ಮಾಡಿ ಈ ತಾಲೂಕಿನ ಹಾಗೂ ಹೊನ್ನಾವರ ತಾಲೂಕ ಮತ್ತು ಭಟಕಳ ಪೇಟೆಗಳ ಸರ್ಕಾರೀ ಸಾವಕಾರರ ಲೆಕ್ಕ ತಪಾಸಣೆ ನಡೆಸುತ್ತಾರೆ ಇತ್ತ ೧ ೨ ವರ್ಷಗಳಿಂದ ಬಹುತೇಕ ವ್ಯಾಪಾರ ಸರಕಾರದವರ ಕೈಯಲ್ಲಿ ಹೋಗಿ ಇವರು ಕೈಮುಗಿದು ಕುಳಿತುಕೊಳ್ಳುವ ಪ್ರಸಂಗ ಬಂದಿದ್ದರೂ ಆದಾಯ ತೆರಿಗೆ ಅಧಿಕಾರಿಗಳು ತಮ್ಮ ಮೇಲೆ ಹೆಚ್ಚೆಚ್ಚು ತೆರಿಗೆ ಹೇರುತ್ತಿದ್ದಾರೆಂದು ವರ್ತಕರು ಗೋಳಿಡುತ್ತಿದ್ದಾರೆ.

ಇನ್ನಿತರ ಸರಕಾರಿ ಸೇವಾಸಿದ್ಧರಿಗೆ ಸಿಗುತ್ತಿದ್ದಂತೆ ಸೇವಾಸಿದ್ಧ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಈಗ ಕೆಲವು ಕಾಲದಿಂದ ಕೆಲಸ್ಥೊಂದು ಮುಟ್ಟೆ-ಭತ್ಯೆ ಸಿಗುತ್ತಿತ್ತು. ಆದರೆ ಕಳೆದ ನವಂಬರ ಅಂಗಳಿಂದ ಆ ಭತ್ಯೆ ಕೊಡುವದನ್ನು ಜಿಲ್ಲಾ ಶಾಲಾ ಬೋರ್ಡಿನವರು ಒಮ್ಮೆಲೇ ನಿಲ್ಲಿಸಿಬಿಟ್ಟಿದ್ದಾರೆ! ಆದರಿಂದ ಸೇವಾಸಿದ್ಧ ಶಾಲಾ ಶಿಕ್ಷಕರಲ್ಲಿ ಹಾಹಾಕಾರವೆದ್ದು ಹೋಗಿದೆ. ಮುಟ್ಟೆ ಭತ್ಯೆ ಕೊಡಲು ಆಗದಿದ್ದಲ್ಲಿ ತಾವು ಸೇವಾನಿವೃತ್ತಿ-ವೇತನ ನಿಧಿಯ ಹಣವನ್ನಾದರೂ ಬೋರ್ಡಿನ ಕಡೆಯಿಂದ ಸರಕಾರದವರು ತಮಗೆ ಕೊಡಿಸಬೇಕಾಗಿಯೂ ಹಾಗೆ ಕೊಟ್ಟಲ್ಲಿ ತಮ್ಮ ಅಡಚಣೆ ಕೆಲಮಟ್ಟಿಗಾದರೂ ಕಡಿಮೆಯಾದಂತಾಗುವದೆಂದು ವೃದ್ಧ ಸೇವಾಸಿದ್ಧರು ಹೇಳುತ್ತಾರೆ

ಬಾಡದ ಶ್ರೀ ಕಾಂಚಿಕಾಂಬಾ ದೇವರ ಸನ್ನಿಧಾನದಲ್ಲಿ ಕಳೆದ ಶುಕ್ರವಾರ ಅಷ್ಟಬಂಧ ಜೀರ್ಣೋದ್ಧಾರ ಪ್ರತಿಷ್ಠೆಯಾಗಿ ಮರುದಿನ ಶನಿವಾರ ಮಹಾರಥೋತ್ಸವವಾಯಿತು

ಕಳೆದ ತಾ ೨೮ನೇ ರವಿವಾರ ಆದರ್ಶದಲ್ಲಿ ಇಲ್ಲಿಯ ಸರಕಾರೀ ಕನ್ನಡ ಶಾಲೆಯಲ್ಲಿ ಈ ಸೀಮೆಯ ಶಿಕ್ಷಕ-ಶಿಕ್ಷಕಿಯರ ಸಮ್ಮೇಳನ, ನಾಟಕ ಮಂತ್ರಗಳು ಮೊದಲಾದ ಕಾರ್ಯಕ್ರಮ ನಡೆಯಿತು ಅಧ್ಯಕ್ಷ ರಾ|| ಸಾಹುಕಾರ ಇವರು ಶಾಲಾಕಾಲಯಗಳ ವಿಸ್ತರಣೆಯ ಅವಶ್ಯಕತೆ ಎಷ್ಟಿದೆ ಎಂದು ತಿಳಿಸಿಕೊಟ್ಟರು

ಬಸೊಳ ಸಂಸ್ಥಾನದಲ್ಲಿ ಕಳೆದ ಮಾರ್ಗಶೀರ್ಷ ಮಾಸ ತಳಗೆ ಕೃಷ್ಣ ಮಹಾದೇವನ ಹವನ ನಡೆಯಿತು. ಆ ಕಾಲದಲ್ಲಿ ಶ್ರೀ ಜಗದ್ಗುರು ಗೋವರ್ಧನ ಪೀಠಾಧಿಪತಿಗಳಾದ ಯೋಗೇಶ್ವರಾನಂದತೀರ್ಥ ಸ್ವಾಮಿಗಳವರು ಶ್ರೀ ಗೋಕರ್ಣ ಕ್ಷೇತ್ರದ ವೇದಶಾಲೆ [illegible] ವಿದ್ಯಾರ್ಥಿಗಳ ಪ್ರವಚನ ಕೇಳಿ ಸಂತೋಷವಾಗಿ ವೇದಪಠನ ಮಾಡುವವರನ್ನು ಅನುಗ್ರಹಿಸಿದ್ದಾರೆ ಈ ಬಗ್ಗೆ ಗೋಕರ್ಣಸ್ಥರೂ ಸನಾತನ ಸಂಸ್ಕೃತಿಯ ಅಭಿಮಾನಿಗಳೂ ವೇದಶಾಸ್ತ್ರ ಮೂರ್ತಿಗಳನ್ನು [illegible] ಶ್ರೀ ಕ್ಷೇತ್ರದಲ್ಲಿ ಹೆಚ್ಚಿಸುವಂತೆ ಶ್ರೀ ಮಹಾಬಲೇಶ್ವರನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ

ಹೊನ್ನಾವರ— (ತಾ ೧೯-೧-೪೫) ಇಲ್ಲಿಯ ಸರಕಾರಿ ಉಗ್ರಾಣದಲ್ಲಿ ೧-೨ ಮಣ ಸವರಿ ಕೊಡುತ್ತಿದ್ದು ಯಾರೆಷ್ಟು ಬೇಕಿದ್ದರೂ ವಾರದಲ್ಲಿ ೨ ಬಾರಿ ಮಾತ್ರ ಸವರಿ ಸಿಗುತ್ತದೆ! ಬೇಕಾದ ಉರುವಲವನ್ನು ಪರ್ಮಿಟ್ ಮೂಲಕ ಬೇರೆ ಊರಿನಿಂದ ತರಿಸಿಕೊಳ್ಳಲಿಕ್ಕೆ ಜನರಿಗೆ ಅನುಕೂಲವಿಲ್ಲ! ಹಾಕೆಂದರೆ ಉರುವಲ ಉಗ್ರಾಣವಿದ್ದ ಊರಿನ ಜನರಿಗೆ ಪರ್ಮಿಟ್ ಸಿಗುವದಿಲ್ಲ. ಇಂಥ ಬಿಟ್ಟಿದ ಸಮಾಜದಲ್ಲಿ ಜನರು ಅಡಿಗೆ ಮಾಡಲು ಉರುವಲವಿಲ್ಲದೆ ಒಲೆಬಂದ ಪ್ರಸಂಗ ಬಂದಿದೆ!! ಮಂಗಲ [illegible] ನೋಡಿರಿ!

ಇಲ್ಲಿಯ ಅರ್ಬನ ಬ್ಯಾಂಕಿಗೆ ೫೦೦೦ [illegible] ೨ ತಿಂಗಳುಗಳಾದವು [illegible] ವರ್ತಕರು [illegible] ಸಮುದ್ರಮಾರ್ಗ ಗೋವೆಯಿಂದ [illegible] ೧೪೦ ರೊಕ್ಕದ [illegible] ೮-೧೨ ೦ [illegible] ಸರಕಾರದ ನಿಯಂತ್ರಣ ಧಾರಣೆ ರೂ ೧೨ ೦ ೦ ಉಂಟು [illegible] ಈ ಧಾರಣೆಯು ಪರೀಕ್ಷಿಸಲ್ಪಟ್ಟಿದ್ದಾರೆ

ತಾ ೧ ೨ ೪೫) ಪೋಲೀಸರು ಬಸ ಜನರನ್ನು ಹೇಗೆ ಪೀಡಿಸುತ್ತಿರುವರೆಂಬುದು ಕಳೆದ ರವಿವಾರ ಸಂಜೆ ಇಲ್ಲಿ ಕೋಣದಲ್ಲಿ ನಡೆದ ಒಂದು ಘಟನೆಯ ಮೇಲಿಂದ ಬೆಳಕಿಗೆ ಕಾಣುವಂತಿದೆ. ಅಂದು ಚಿತ್ರಾಪುರ ಎಕ್ಸಪ್ರೆಸ್ ಮೋಟಾರ ಸರ್ವಿಸ್ಸಿನ ಗಾಡಿ ೭ ಘಂಟೆಯ ಸುಮಾರಿಗೆ ಭಟಕಳಕ್ಕೆ ಹೊರಡಲು ಸಿದ್ಧವಾಗಿ ನಿಂತಿತ್ತು. ಭಟಕಳ, ಮುರ್ಡೇಶ್ವರ, ವೆಂಕಟಾಪುರ ವಗೈರೆ ಊರುಗಳಿಗೆ ಹೋಗುವ ಪ್ರಯಾಣಿಕರಿಂದ ಅದು ತುಂಬಿಹೋಗಿತ್ತು. ಡ್ರಾಯವ್ಹರನು ಗಾಡಿಯನ್ನು ಬಿಡಲು ತಯಾರಾಗುವಷ್ಟರಲ್ಲಿ ಭಟಕಳ ಬದಿಯ ಗಾಡಿಯೊಂದರಲ್ಲಿ ಮುರ್ಡೇಶ್ವರದೊಳಗಿನ ಪೋಲೀಸಕೋರ್ಟನು ಬಂದಿಳಿದು, ಮುರ್ಡೇಶ್ವರದಲ್ಲಿ ಮುಕ್ಕಾಮು ಮಾಡಿರುವ ಪೋಲೀಸ ಹೋಮ-ಇನ್ಸಪೆಕ್ಟರರ ಬಿರಾಡಿಯ ಸಾಮಾನು ಒಯ್ಯಲು ತಾನು ಬಂದಿರುವೆನೆಂದೂ ಹೊನ್ನಾವರದಿಂದ ಆ ಸಾಮಾನು ತಕ್ಕೊಂಡು ತಾನು ಬರುವ ವರೆಗೆ ಗಾಡಿ ಬಿಡಬಾರದೆಂದೂ ಡ್ರಾಯವ್ಹರನಿಗೆ ಅಪ್ಪಣೆ ಮಾಡಿ, ತಾನು ದೋಣಿಯಲ್ಲಿ ಹೊನ್ನಾವರಕ್ಕೆ ಬಂದನು. ೮ ಘಂಟೆಯಾಯಿತು; ೯ ಬಡಿಯಿತು, ೧೦ ಬಡಿಯಲಿಕ್ಕೆ ಬಂತು! ಆದರೂ ಆ ಪೋಲೀಸನ ಸುಳಿವಿಲ್ಲ! ಹೊನ್ನಾವರಕ್ಕೆ ಬಂದು, ಅಲ್ಲಿ ಮಿತ್ರರೊಡನೆ ಮಾತಾಡಿಕೊಂಡು, ರಾತ್ರಿಯ ಊಟವನ್ನೂ ತೀರಿಸಿ ೧೦|-೧೧ ಘಂಟೆಗೆ ಹೋಮ-ಇನ್ಸಪೆಕ್ಟರರ ಒಂದು ಪೆಟ್ಟಿಯನ್ನು ತಕ್ಕೊಂಡು ಆ ಗಾಡಿಯಲ್ಲಿ ಬಂದು ಕೂತನು! ಮತ್ತು ಅಷ್ಟು ರಾತ್ರಿಗೆ ಗಾಡಿ ಹೊರಟಿತು! ಹೋಮ-ಇನ್ಸಪೆಕ್ಟರರ ಬಿರಾಡಿಯ ಸಾಮಾನು ಎಂತಹದೆಂದು ನೋಡಲು ಪ್ರಯಾಣಿಕರು ಆ ಪೆಟ್ಟಿಯನ್ನು ಪರೀಕ್ಷಿಸಲಾಗಿ ಅದೊಂದು ಖಾಲಿ ಪೆಟ್ಟಿ, ಮತ್ತೇನೂ ಇಲ್ಲವೆಂದು ತಿಳಿದುಬಂತು! ಮುರ್ಡೇಶ್ವರದಲ್ಲಿ ರಾತ್ರಿ ವೇಳೆಗೆ ಮಲಗಿಕೊಳ್ಳಲು [illegible] ಎಲ್ಲೂ ಸಿಗುತ್ತಿದ್ದಿಲ್ಲವೆಂದು ಪೋಲೀಸರು ಈ ರೀತಿ ೩|| ತಾಸು ಗಾಡಿಗೆ ತಡೆ ಮಾಡಿ ಜನರೆಲ್ಲರಿಗೆ ರಾತ್ರಿ ಉಪವಾಸ ಬೀಳುವ ಪ್ರಸಂಗ ತಂದರೇ? ಎಂದು ಪ್ರಯಾಣಿಕರು ಉದ್ವೇಗಗೊಂಡು ಮಾತಾಡುತ್ತಿದ್ದರು ಆದರೆ ಜನರ ಈ ಪಾಡನ್ನು ಕೇಳಿಕೊಳ್ಳಲಿಕ್ಕೆ ಪೋಲೀಸರಿಗೂ ಅವರ ಅಧಿಕಾರಿಗಳಿಗೂ ತಿಳಿದಿದೆಯೇ?

(ತಾ ೩ ೨-೪೫) ಇದೇ ಕಳೆದ ತ್ರಯೋದಶಿಗೆ ಅಂಕಲ್ಲ ಗ್ರಾಮದ ಅರಸಿಕೆರೆ ಶ್ರೀ ಸುಬ್ರಹ್ಮಣ್ಯ ದೇವರ ರಥೋತ್ಸವವಾಯಿತು ಅಂದಿನಿಂದ ಆ ಗ್ರಾಮದಲ್ಲಿ ದಿನಾಲೂ ಕೋಳಿಅಂಕಗಳೂ, ಗಡಗಡ ಆಟಗಳೂ ನಡೆದಿವೆ! ಧರ್ಮಶಾಲೆ ಭಟ್ಟರ ಮನೆಯ ಹತ್ತಿರ ಒಂದು ದೊಡ್ಡ ಜೂಗಾರ ಮಂಡಪವೂ ನಡೆದಿದೆಯಂತೆ ಈ ಮಂಡಪದಲ್ಲಿ ಜೂಗಾರ ಆಡಲು ರಾಣೇಬೆನ್ನೂರಿನಿಂದ ಸಹ ಕೆಲವು ಮಂದಿ ಬಂದ ವಾರ್ತೆಯುಂಟು! ಇನ್ನೂ ಒಂದು ವಾರ ಈ ಮಂಡಪ ನಡೆಯುವದೆಂದು ಹೇಳುತ್ತಾರೆ ಮಂಡಪದವರಿಗೆ ಪೋಲೀಸರ ಭಯವೇ ಇಲ್ಲ! ಪೋಲೀಸರು ಇತ್ತ ಸುಳಿಯದಂತೆ ಮಂಡಪದ ಮಾಲಕರು ಶಾಂತಿ ಮಾಡಿ ಇಟ್ಟಿದ್ದಾರಂತೆ!

ಮಂಕಿ— (ತಾ ೨೮-೧-೪೫) ಈ ಊರಲ್ಲಿ ಎರಡು ಸೀಧಾ ಅಂಗಡಿಗಳುಂಟು. ಅವುಗಳಲ್ಲೊಂದು ಮಾವಿನಕೇರಿಯಲ್ಲಿದೆ ಅದಕ್ಕೆ ಹೊತ್ತಿನ ನಿಯಮವಿಲ್ಲ; ದಿನದ ನಿಯಮವೂ ಇಲ್ಲ! ಕಳೆದ ತಾ. ೨೪, ೨೫ಕ್ಕೆ ಈ ಅಂಗಡಿ ತೆರೆಯಲೇ ಇಲ್ಲ! ಅಂಗಡಿ ಮಾಲಕರಲ್ಲಿ ಇಬ್ಬರು ಪಟೇಲರಿದ್ದಾರೆ ಪಟೇಲರು ತಮ್ಮ ಇತರ ಕೆಲಸ ಮುಗಿಸಿಕೊಂಡು ಬಂದ ಮೇಲೆಯೇ ಅಂಗಡಿ ತೆರೆಯಲ್ಪಡುತ್ತದೆ! ಅಲ್ಲಿಯ ತನಕ ಬಂದ ಗಿರಾಕಿಗಳು ನೊಣ ಹೊಡೆಯುತ್ತ ಕೂಡ್ರಬೇಕು! ಅಧಿಕಾರಿಗಳು ಈ ಅಂಗಡಿಗೆ ಹೊತ್ತಿನ ಮತ್ತು ದಿನದ ನಿಯಮ ಹಾಕಿಕೊಡಬೇಕಾಗಿ ಅರಿಕೆ

ಭಟಕಳ— (ತಾ ೧೦-೧-೪೫) ಇಲ್ಲಿಯ ಕರ್ನಾಟಕ ವ್ಯಾಯಾಮ ಮಂಡಲದವರು ಮಂಡಳಕ್ಕೆ ನಿಧಿ ಕೂಡಿಸುವ ಬಗ್ಗೆ ತಾ ೨೪ ೧೨-೪೪ರಿಂದ ತಾ. ೨-೧-೪೫ರ ತನಕ ೮ ತರಹ ಆಟಗಳನ್ನು ಆಡಿತೋರಿಸಿದರು ಶಿರಾಲಿ, ಕುಮಟೆಯಿಂದಲೂ ಕೆಲವು ವಿದ್ಯಾರ್ಥಿಗಳು ಬಂದಿದ್ದರು. ಕೊನೆಯ ದಿನದ ಆಟ ನೋಡಲು ಶ್ರೀ ಚಿತ್ರಾಪುರ ಮಠಾಧೀಶರು ಚಿತ್ತೈಸಿದ್ದರು ಮಂಡಳದ ಬಾಲಕ ರಾ|| ಎಲ್. ಆರ್. ಪ್ರಭು ಇವರು ಅವರ ಪವಿತ್ರ ಹಸ್ತದಿಂದ ಆಟದಲ್ಲಿ ಕೆಲಸ ಮಾಡಿತೋರಿಸಿದ ವಿದ್ಯಾರ್ಥಿಗಳಿಗೆ ಸುವರ್ಣ ಪದಕ, ನಗದು ಹಣ, ಬಟ್ಟೆ ಮೊದಲಾದ ಪಾರಿತೋಷಕಗಳನ್ನು ಕೊಡಿಸಿದರು

(ತಾ ೨೦-೧ ೪೫) ದಕ್ಷಿಣ ಕನ್ನಡ ಜಿಲ್ಲೆಯೊಳಗಿನ "ದಿಕ್ಕು"ದ ರೋಗ ಈಗ ಈ ಊರಿಗೂ ಬಂದಿದೆ ಇಷ್ಟು ದಿನ ಅಡಗಿಕೊಂಡಿತ್ತು. ಈಗಿನ ಪೋಲೀಸ ಅಧಿಕಾರಿಗಳ ಕಾಲದಲ್ಲಿ ಬಹಿರಂಗವಾಗಿ — ನಡುಪೇಟೆಯಲ್ಲಿ — ನಡೆಯಲಾರಂಭಿಸಿದೆ! ಕವ್ವದಲ್ಲೇ ಆಟಕ್ಕೆ ಕಳೆ ಬಂದಿದೆ! ಮೊನ್ನೆ ಕೋರ್ಟಿನ ಜಾತ್ರೆಯಲ್ಲಿ ಜೂಗಾರು ಮಂಡ ನಡೆದಿತ್ತು! ಹತ್ತಿರದಲ್ಲೇ ಪೋಲೀಸರಿದ್ದರೂ ಅವರು ಆ ಆಟಕ್ಕೆ ಸನ್ನೆ ಸಹ ಅಡ್ಡಿ ಮಾಡಲಿಲ್ಲ! ಮೇಲಧಿಕಾರಿಗಳ ಅಪ್ಪಣೆಯಿಂದಲೇ ಈ ಆಟ ನಡೆಯುತ್ತಿರುವದರಿಂದ ತಾವೇನೂ ಮಾಡಲಾರೆವೆಂದು ಅವರು ಸ್ಪಷ್ಟ ಹೇಳಿದರು! ಜೂಗಾರಿಗರಿಗೂ ಪೋಲೀಸರಿಗೂ ಇಷ್ಟು ಅನ್ಯೋನ್ಯ ಗೆಳೆತನವೇಕಾಯಿತೆಂಬುದರ ಪತ್ತೆಯನ್ನು ಜಿಲ್ಲಾಧಿಕಾರಿಗಳು ಹಿಡಿಯಬೇಕಾಗಿ ಸೂಚನೆಯಿದೆ.

ಶಿರಸಿ— ಇಲ್ಲಿಯ ಸೀಧಾ-ಅಂಗಡಿಗಳಲ್ಲಿ ಸೀಧಾ-ಸರಕುಗಳ ಕೊರತೆಯಾಗಿ ಜನರಿಗೆ ತೊಂದರೆಯಾಯಿತೆಂದೂ, ಅಂಗಡಿಗಳಲ್ಲಿ ಕೊಡುತ್ತಿದ್ದ ಅಕ್ಕಿಯೊಳಗೆ ಹುಳಗಳು ತುಂಬಿದ್ದವೆಂತಲೂ ತಾ. ೧೧-೧೨-೪೪ರ "ವೃತ್ತ"ದಲ್ಲಿ ಪ್ರಕಟವಾದ ಸುದ್ದಿ ನಿರಾಧಾರವಿರುತ್ತದೆಂದು ತಮ್ಮ ಚೌಕಶಿಯಲ್ಲಿ ಕಂಡು ಬಂದಿದೆಯಾಗಿ ಜಿಲ್ಲಾಧಿಕಾರರು ತಿಳಿಸುತ್ತಾರೆ.

ಬನವಾಸಿಯಲ್ಲಿ ಗ್ರಾಮಪಂಚಾಯತಿಯವರದೊಂದು ಮತ್ತು ಸಹಕಾರ ಸಂಘದವರದೊಂದು ಹೀಗೆ ಎರಡು ಯೋಗ್ಯ ಧಾರಣೆಯ ಅಂಗಡಿಗಳಿವೆ. ಸಹಕಾರ ಸಂಘದ ಅಂಗಡಿಯಲ್ಲಿ ಚಿಲ್ಲರೆಯವರು ಹೇಳಿದ ಹೊತ್ತಿಗೆ ಬಂದು, ಚಿಲ್ಲರೆ ಕೊಟ್ಟು ಕೊಟ್ಟ ಹಣವನ್ನು ಒಯ್ಯುವವರಿಗಷ್ಟೇ ಸಕ್ಕರೆ ಮತ್ತು ಎಣ್ಣೆ ಕೊಡುತ್ತಾರೆ. ಇವರು ಕೊಡುವ ಲೆಕ್ಕ ಬೇರೆ ಮತ್ತು ಸರಕಾರದವರಿಗೆ ತೋರಿಸುವ ಬೇರೆ

(೧ನೇ ಪುಟದ ಮೇಲೆ ಮುಂದುವರಿಸಿದೆ.)

ಜಾಹೀರನಾಮೆ- R

ನಂ. 74 R

ಸನ್ 1945ನೇ ಜನವರಿ ತಿಂಗಳ 16ನೇ ತಾರೀಖಿನ ನಂತರ ಸೀಧಾಕ್ಷೇತ್ರದಲ್ಲಿ ಹೊರಗಿನ ಯಾವನೇ ಮನುಷ್ಯನು ನಾಲ್ಕು ವಾರ ಅದಕ್ಕಿಂತ ಹೆಚ್ಚು ದಿವಸ ಬಂದು ಉಳಿದಲ್ಲಿ ಆತನಿಗೆ ಸೀಧಾ ಟಿಕೆಟ್ ಕೊಡುವದರಲ್ಲಿ ಬರುವದಾಗಿ ಮುಂಬಯಿ ಸರಕಾರ ಗಾಝೆಟಿನ 1ನೇ ಭಾಗದಲ್ಲಿ ಪ್ರಸಿದ್ಧಿಪಡಿಸಲ್ಪಟ್ಟಿದೆ ಕಾರವಾರ, ತಾ. 22 1—45

V. NANJAPPA,
Dist. Magistrate, Kanara.

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡುವ ೧. ಜನಾರ್ದನ ನಾರಾಯಣ ಭಟ್ಟ ೨. ಸೀತಾರಾಮ ನಾರಾಯಣ ಭಟ್ಟ ಕೂಜಳ್ಳಿ ತಾಲೂಕ ಕುಮಟಾ ಆರ ರಹಿವಾಸಿಗಳು ಈ ಮೂಲಕ ಜಾಹೀರ ಪಡಿಸುವದೇನಂದರೆ:— ನಮ್ಮ ತಂದೆ ನಾರಾಯಣ ಜನ್ನ ಭಟ್ಟ ಕೂಜಳ್ಳಿ ಇವರಿಗೆ ನಾವಿಬ್ಬರೇ ಗಂಡು ಮಕ್ಕಳು. ನಮ್ಮ ತಂದೆ ನಾರಾಯಣ ಜನ್ನ ಭಟ್ಟ ಕೂಜಳ್ಳಿ ಇವರು ಇತ್ತ ೨-೩ ತಿಂಗಳಿಂದ ಭ್ರಾಂತಚಿತ್ತರಾಗಿ ಕುಟುಂಬದ ಸ್ಥಿರ-ಚರ ಸೊತ್ತುಗಳನ್ನು ಗರಜಿಲ್ಲದೆ ಈಡು, ಕ್ರಯ ವಗೈರೆ ಮಾಡತೊಡಗಿದ್ದಾರೆ. ಅವರು ಈ ಸ್ಥಿತಿಯಲ್ಲಿ ಮಾಡಿದ ಪರಾಧೀನತೆಗಳು ಕಾಯದೆಯಂತೆ ಸಿಂಧುವಾಗಲಾರವು. ಹಾಗೂ ಅವು ನಮ್ಮನ್ನು ಬಾಧಿಸುವಂತಿಲ್ಲ. ಕಾರಣ ಯಾರೂ ನಮ್ಮ ತಂದೆಯವರಿಂದ ನಮ್ಮ ಕುಟುಂಬದ ಯಾವದೇ ಆಸ್ತಿಯನ್ನು ಈಡು, ಕ್ರಯ ವಗೈರೆ ಮಾಡಿಕೊಳ್ಳಬಾರದಾಗಿಯೂ ವ್ಯರ್ಥ ಲುಕ್ಸಾನಿಗೆ ಬೀಳಬಾರದಾಗಿಯೂ ಈ ಮೂಲಕ ಜಾಗ್ರತೆ ಕೊಟ್ಟಿರುತ್ತೇವೆ. ಕೂಜಳ್ಳಿ, ತಾ. ೩-೨-೪೫

ಜನಾರ್ದನ ನಾರಾಯಣ ಭಟ್ಟ ಕೂಜಳ್ಳಿ
ಅ|| ರಾ|| ತಮ್ಮ ಸೀತಾರಾಮನ ಬಗ್ಗೆ ಸಹಾ.

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಗೋಳಗೋಡ ಮುಕ್ಕಾಮಿನ ಸೀತಾ ರೇಖೆ ಇವಳಿಗೆ— ಸಿದ್ದಾಪುರ ತಾಲೂಕ ಕವಲಕೊಪ್ಪ ಗ್ರಾಮದ ರಾಮಚಂದ್ರ ವೆಂಕಟ್ರಮಣ ಹೆಗಡೆ ಈತನು ಕೊಡುವ ನೋಟೀಸು ಏನಂದರೆ.—

ನೀನು ನನ್ನ ಲಗ್ನದ ಹೆಂಡತಿಯಾಗಿದ್ದು, ನಿನ್ನ ತಂದೆ ಮನೆಯವರ ದುರ್ಬೋಧನೆಯಿಂದಲೂ ಬೇರೆಯವರ ಕೆಟ್ಟ ಆಲೋಚನೆಯ ನಡತೆಯಿಂದಲೂ [illegible] ಯಾಗಿ ತಿರುಗುತ್ತೀ. ನನ್ನ ಸಂಗಡ [illegible] ಯಿಂದ ಇರುವದಕ್ಕೆ ಈ ಹಿಂದೆ ಒಂದೆರಡು [illegible] ಗೃಹಸ್ಥರು ಕರೆಸಿ ಹೇಳಿದಾಗ್ಯೂ ನೀನು ವಿವೇಕದಿಂದ ನನ್ನ ಸಂಗಡ ಉಳಿಯಲಿಕ್ಕೆ ಒಪ್ಪಲಿಕ್ಕೆ ಪದೆ ಪದೆ ಸ್ವೇಚ್ಛಾಚಾರಿಯಾಗಿ ತಿರುಗುತ್ತಿದ್ದು, ಈಗ ತಾ. ೧[illegible]-೪[illegible] ನೇ ದಿವಸ ಸಾಯಂಕಾಲ ೬ ಘಂಟೆ ಸಮಯ[illegible] ತಂದೆ ಮನೆಯವರ ಒಳಸಂಚಿನಿಂದ ನನ್ನ ಗೈರುಹಾಜರಿಯಲ್ಲಿ ನನ್ನ ಮನೆಯಲ್ಲಿರುವ [illegible] ಬಂಗಾರದ ದಾಗಿನೆಗಳನ್ನು [illegible] ರಾಮಕೃಷ್ಣ ಕೇಶವ ಹೆಗಡೆ ಮತ್ತು ಅವನ [illegible] ಮನೆ ಓಡಿಹೋಗಿರುತ್ತೀ ಕಾರಣ ಇನ್ನು ನನ್ನ ಮೇಲೆ ಯಾವದೇ ತರದ ಹಕ್ಕು-ಬಾಧ್ಯತೆ ನಡೆಸಲಿಕ್ಕೆ ನಿನಗೆ ಹಕ್ಕಿಲ್ಲ ಮುಂದೆ ನಿನಗೆ ಬರಬಹುದಾದ ಯಾವದೇ ತರದ ಕಷ್ಟನಷ್ಟಗಳಿಗೆ ನಾನೂ ಜವಾಬದಾರನಲ್ಲ ತಿಳಿಯಬೇಕು

ತಾ. ೧೨-೧-೪೫ **R. V Hegde.**

ORIENT
Illustrated Weekly
(Published every Sunday)
The New Supply Agency Kumta

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯು ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲವ್ಯಯಸಹಿತ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೨-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ಕಳಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 12th February, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೩೨

ಕುಮಟಾ:- ಸೋಮವಾರ, ತಾ. ೧೨ ಮಾಹೆ ಫೆಬ್ರುವರಿ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ
ಸ್ಟ್ಯಾಂಡಿಂಗ ೧೫ಎಮ್‌ಉದ್ದ
೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಹಿಟ್ಲರನು ಹಾರಿಹೋಗುವನೇ?

(ನಿರೀಕ್ಷಕನು ಬರೆದುದು.)

ಪೂರ್ವದಿಂದ ಒಕ್ಕೊತ್ತಿ ಬಂದ ರುಶ್ಯ-ದಂಡುಗಳು ಆಕ್ಟೋಬರದಿಂದ ಜರ್ಮನಿಯಲ್ಲಿ ನುಗ್ಗುತ್ತ, ಜರ್ಮನಿಯ ಪೂರ್ವಗಡಿಯು ಪ್ರಾಂತದಲ್ಲಿ ದಕ್ಷಿಣೋತ್ತರವಾಗಿ ಹರಿಯುವ ಓಡರ ಮಹಾನದಿಯನ್ನು ಕೆಲವೆಡೆ ದಾಟಿವೆಯೆಂತಲೂ, ಕೆಲವೆಡೆ ದಾಟುವ ಸಾಹಸ ನಡಿಸಿವೆಯೆಂತಲೂ ಸುದ್ದಿಗಳು ಬಂದಿವೆ. ಪಶ್ಚಿಮ ರಣರಂಗದಲ್ಲಿ ರ್‍ಹೈನ ನದಿಯಂತೆ ಪೂರ್ವದಲ್ಲಿ ಓಡರ ನದಿಯು ಜರ್ಮನಿಯನ್ನು ಸಂರಕ್ಷಿಸಿ, ಒತ್ತಿಬರುವ ರುಶ್ಯರನ್ನು ಬಲವಾಗಿ ತಡೆಹಿಡಿಯುವದೆಂದು ನಾವು ನಂಬಿದ್ದೆವು. ಆ ನದಿಯ ಗುಂಟ ಜರ್ಮನರು ಭದ್ರ ಸಂರಕ್ಷಕ ಯೋಜನೆಗಳನ್ನು ನಿರ್ಮಿಸಿದ್ದಾರೆಂತಲೂ ಬರ್ಲಿನ ನಗರದ ರಕ್ಷಣೆಯ ಸಲುವಾಗಿ ಆ ನದಿಯ ಧಡದಲ್ಲೇ ಸಂಪೂರ್ಣ ಸಾಹಸ-ಸಾಮರ್ಥ್ಯಗಳೊಂದಿಗೆ ಕಾದಾಡುವರೆಂದೂ ಯುದ್ಧ ಸುದ್ದಿಗಾರರು ತಿಳಿಸಿದ್ದರು. ಈಗ ಆ ಪ್ರಾಂತವೆಲ್ಲ ಜರಿದು ಬಿದ್ದಿತೆಯೆಂದು ತಿಳಿಸುತ್ತಾರೆ. ರುಶ್ಯರೀಗ ಬರ್ಲಿನ ಪಟ್ಟಣದಿಂದ ೩೦ ಮೈಲು ಅಂತರದಲ್ಲಿದ್ದಾರಂತೆ. ಎಲ್ಲ ರುಶ್ಯ ಸೇನೆಗಳು ಬರ್ಲಿನ ಪಟ್ಟಣದ ಕಡೆಗೇ ಸಾಗುತ್ತಿವೆ. ಜರ್ಮನರು ಈಗ ಹೊಸ ತಂತ್ರವನ್ನೇನಾದರೂ ಹೂಡದಿದ್ದರೆ ಈ ವಾರ ಮುಗಿಯುವದರೊಳಗಾಗಿ ರುಶ್ಯರು ಬರ್ಲಿನ ಮುಟ್ಟಿದ ಸುದ್ದಿ ನಾವು ಕೇಳಬಹುದು. ಆದರೆ ಬರ್ಲಿನ ಪಟ್ಟಣ ಸುಲಭವಾಗಿ ರುಶ್ಯರ ವಶವಾದೀತೇ? ವಾರ್ಸಾ, ಬುಡಾಪೆಸ್ಟ ನಗರಗಳ ಕಥೆ ನಮ್ಮ ಮುಂದುಂಟು. ಆ ಪರಕೀಯ ನಗರಗಳ ಬಗ್ಗಾಗಿ ಜೀವದ ಹಂಗುದೊರೆದು ಹೋರಾಡಿದ ಜರ್ಮನರು ತಮ್ಮ ಸ್ವಂತದ ರಾಜಧಾನಿಯಾದ ಬರ್ಲಿನವನ್ನು ರಕ್ತದ ಹೊಳೆ ಹರಿಸದೆ ವೈರಿವಶವಾಗಗೊಟ್ಟಾರೆಂದು ನಾನೊಪ್ಪಲಾರೆ. ದುರ್ದೈವದಿಂದ ಬರ್ಲಿನ ಬಿದ್ದರೂ ಜರ್ಮನರು ಒಮ್ಮೆಲೇ ಶರಣು ಬರುವಂತಿಲ್ಲ. ಜರ್ಮನರಲ್ಲಿ ಇನ್ನೂ ಹೋರಾಡುವ ಸಾಮರ್ಥ್ಯವುಂಟು. ಆದರಿಂದಲೇ ಕೆಲ ರಣಪಂಡಿತರು ಮಾರ್ಚ ತಿಂಗಳ ಮಧ್ಯದ ಸುಮಾರಿಗೆ ಜರ್ಮನ-ಯುದ್ಧ ಮುಗಿಯಬಹುದೆಂದು ಅರಿಸುತ್ತಿದ್ದಾಗ್ಯೂ ಬರುವ ಸಪ್ಟಂಬರ ತಿಂಗಳವರೆಗೂ ಈ ಯುದ್ಧ ನಿಲ್ಲುವಂತಿಲ್ಲವಾಗಿ ಬೇರೆ ಕೆಲ ತಜ್ಞರು ಎಚ್ಚರಿಕೆ ಕೊಟ್ಟಿದ್ದಾರೆ. ಕಾರಣ ಹಿಟ್ಲರನೂ ಅವನ ಪ್ರಧಾನರೊಡನೆಯವರೂ ವಿದೇಶಕ್ಕೆ ಹಾರಿಹೋಗಲು ವಿಮಾನ ಸಿದ್ಧಮಾಡಿಟ್ಟುಕೊಂಡಿದ್ದಾರೆಂಬ ವಾರ್ತೆಯನ್ನು ನಾ ನಂಬಲಾರೆ. ಆದರೂ ಈಗ ಜರ್ಮನರು ಘೋರ ಗಂಡಾಂತರದಲ್ಲಿದ್ದಾರೆ. ಮಿತ್ರರು ಸನ್ನಾಹ ಸಿದ್ಧಂದದ ಆಶೆ ತೋರಿಸುತ್ತಿದ್ದರೆ ಅವರು ಈ ಹಿಂದೆಯೇ ಶಸ್ತ್ರವನ್ನು ಕೆಳಗಿಡುತ್ತಿದ್ದರೆಂದು ನನ್ನ ಮತ. ಆದರೆ ಮಿತ್ರರಿಗೆ ಸಂಪೂರ್ಣ ಶರಣಾಗತಿ ಬೇಕು! ಜರ್ಮನಿಗೆ ಯಾವ ಆಶ್ವಾಸನೆಯನ್ನೂ ಅವರು ಕೊಡಲೊಪ್ಪುವದಿಲ್ಲ! ಜರ್ಮನಿಯ ತುಂಡು ತುಂಡು ಮಾಡಿ ಅದನ್ನು ನಿರ್ವೀರ್ಯಗೊ[illegible]ಕೆಂಬ ಮಾತನ್ನಾಡುತ್ತಿದ್ದಾರೆ. ಮಿತ್ರರ ಈ [illegible] ಯುದ್ಧವನ್ನು ಮುಂದರಿಸುತ್ತಿದೆ. ಶಸ್ತ್ರವನ್ನಿಟ್ಟು [illegible]ವದಕ್ಕಿಂತ ಸಮರಾಂಗಣದಲ್ಲೇ ಸಾಯುವದು [illegible]ಯಸ್ಕರವಲ್ಲವೇ ಎಂಬ ವಿಚಾರ ಜರ್ಮನರ ತಲೆಯಲ್ಲಿ [illegible]ಯುತ್ತಿರಬೇಕು. ಮಿತ್ರರೂ ಈಗ ದಣಿದಿದ್ದಾರೆ. ಅವ[illegible] ಯುದ್ಧ ಸಾಕಾಗಿದೆ. ಮೇಲಾಗಿ ಅವರೊಳಗೆ ಒಡ[illegible]ಟಾಗಿದೆ. ಈ ಒಡಕು ದಿನೇ ದಿನೇ ಬೆಳೆಯುತ್ತಿದೆ. [illegible] ಬಿನಹ ಅದು ಕೂಡಿಬರುವ ಲಕ್ಷಣಗಳನ್ನು ನಾ ಕಾಣೆ. [illegible]ಗ ಸ್ಟಾಲಿನ-ರೂಝವೆಲ್ಟ-ಚರ್ಚಿಲ್ಲರ ತ್ರಿಕೂಟವು [illegible]ಸಮುದ್ರದ ಧಡದಲ್ಲೆಲ್ಲೋ ಕೂಡಿ ಯುದ್ಧಸಂಸ್ಥೆ [illegible] ಯುದ್ಧೋತ್ತರ ವ್ಯವಸ್ಥೆ [illegible] ಆಲೋಚಿಸತೊಡಗಿದೆ. ಕೂಟದ ಚರ್ಚೆಯಿಂದ ಮಿತ್ರ-ಪಕ್ಷದೊಳಗಿನ ಒಡಕು [illegible]ಗಿಹೋಗುವದೋ ಏನೆಂದು ನೋಡಬೇಕು. ತ್ರಿಕೂಟವು [illegible]ಗೆ ಹೊರಟ ಚರ್ಚಿಲ್ಲರಿಗೆ ಒಂದು ಅಪಶಕುನವಾದ ಸು[illegible]ಯುಂಟು. ಅವರ ಪರಿವಾರದೊಳಗಿನ ಒಂದು ವಿಮಾನವು ಬಿದ್ದುದರಲ್ಲಿ ಒಳಗಿನ ೧೨ ಮಂದಿ ಪ್ರತಿಷ್ಠಿತ ಅಧಿಕಾರಿಗಳು ನಿಧನ ಹೊಂದಿದ್ದಾರೆ. ಈ ಅಪಶಕುನವೇನು ಸೂಚಿಸುತ್ತದೆಂಬುದು ಯಾರು ಹೇಳಬಲ್ಲರು?

(೩ನೇ ಪುಟದಿಂದ ಮುಂದರಿದದ್ದು.)

ಬದ್ಧರಬೇಕೆಂಬುದು ನಿರ್ವಿವಾದ! ಅದರಿಂದ ಲಕ್ಷ್ಯ ಕೊಟ್ಟ ವ್ಯಾಪಾರ ಮಾಡುವವರು ಯಾವ ಮಾಡಿಸುವವರು ಯಾರೆಂದು ಒಬ್ಬರು ಕೇಳಬೇಕೇ ತಿಳಿಯುವಂತಿದೆ. ನೂತನ ಜಿಲ್ಲಾಧಿಕಾರಿ ಈ ಕಳ್ಳರ ಪತ್ತೆ ಹಚ್ಚುವ ಸಾಹಸಕ್ಕೆ ಕೈ ಹಾಕುವರೇ?

—ಈ ಜಿಲ್ಲೆಯಲ್ಲಿ ಕೊಂಕಣಿ ಭಾಷೆಯನ್ನಾಡುವವರು ಒಮ್ಮೊಮ್ಮೆ ಕೋರ್ಟುಗಳಲ್ಲಿ ತಮ್ಮ ಜಬಾನಿಗಳನ್ನು ಕೊಂಕಣಿಯಲ್ಲಿ ಕೊಡುತ್ತಾರೆ. ಆದರೆ ಅವುಗಳನ್ನು ಬರೆಕೊಳ್ಳುವದು ಕನ್ನಡದಲ್ಲಿ! ಆ ಪದ್ಧತಿ ನಿಲ್ಲಿಸಿ ಕೊಂಕಣಿ ಜಬಾನಿಗಳನ್ನು ಕೊಂಕಣಿಯಲ್ಲೇ ಬರೆಕೊಳ್ಳುವಂತೆ ವಿಧಿಸಬೇಕಾಗಿ ಕೊಂಕಣಿ-ಪರಿಷತ್ತಿನ ಕಾರ್ಯದರ್ಶಿಗಳು ಹೈಕೋರ್ಟಿಗೆ ಮನವಿ ಮಾಡಿದ್ದಾರೆ. ಆ ಮನವಿ ಈಗ ಕಲೆಕ್ಟರನವರ ಮತ್ತು ವಕೀಲ ಮಂಡಳಗಳ ಅಭಿಪ್ರಾಯಕ್ಕಾಗಿ ಇಲ್ಲಿ ಕಳಿಸಲ್ಪಟ್ಟಿದೆ. ಅದರಂತೆ ಇಲ್ಲಿಯ ವಕೀಲ ಮಂಡಳವು ಕಾರ್ಯದರ್ಶಿಗಳ ಮನವಿಗೆ ತಮ್ಮ ತೃಪ್ತಿ ಕೊಟ್ಟಿದೆ.

[illegible] ಕಾನಪುರೇ ಮಹಾರಾಜರ ಪರಿವಾರ ಕಳೆದ ವಾರ ಈ ಊರಿಗೆ ಬಂದಿತ್ತು. ಈ ಪರಿವಾರದಲ್ಲಿ ೪೦೦-೫೦೦ ಜನರಿದ್ದಾರೆ. ಈಗಿನ ಸೀಧಾ-ಯುಗದಲ್ಲಿ ಇಷ್ಟು ದೊಡ್ಡ ಪರಿವಾರ ಕಟ್ಟಿಕೊಂಡು ತಿರುಗುವದು ಉಚಿತವಲ್ಲವಾಗಿ ರಾ|| ಮಾಧವ ಶಾನಭಾಗ ವಕೀಲರು ಮಹಾರಾಜರಿಗೆ ಸೂಚಿಸಿದ್ದಾರೆಂದು ಸುದ್ದಿಯುಂಟು.

ಹೊನ್ನಾವರ— (ತಾ. ೨೫-೧-೪೫) ಮಾರ್ಗಗಳಲ್ಲಿ ಧೂಳು ಬಹಳ. ಇತ್ತಲಾಗಿ ಮೋಟಾರ-ಮುಂತಾದಗಳ ಓಡಾಟ ಹೆಚ್ಚಾಗಿದೆ ಅವು ಕೂಡ ವೇಗದಿಂದ ನಡೆಯುತ್ತಿವೆ ಆಗ ಮಾರ್ಗದ ಆಚೆ-ಈಚೆಯ ವಾತಾವರಣವೆಲ್ಲ ಧೂಳಿನಿಂದ ತುಂಬಿ ಸರಿಯಾಗಿ ಉಸಿರಾಡಿಸಲಿಕ್ಕೂ ಕಷ್ಟವಾಗುತ್ತದೆ. ಆದರೂ ಮ್ಯುನ್ಸಿಪಾಲಿಟಿಯವರು ಮಾರ್ಗಗಳಲ್ಲಿ ನೀರು ಹಾಕಿಸುವ ವ್ಯವಸ್ಥೆ ಮಾಡಲೊಲ್ಲರು. ಇತ್ತಲಾಗಿ ಅವರು ಆಮದು-ತೆರಿಗೆಯನ್ನು ಬಹಳಷ್ಟು ಏರಿಸಿದ್ದಾರೆ. ಆ ಉತ್ಪನ್ನವೆಲ್ಲ ಎಲ್ಲಿ ಹೋಗುತ್ತದೋ ಪರಮೇಶ್ವರನೇ ಬಲ್ಲ!

(ತಾ. ೩-೨-೪೫) ಸೀಧಾ-ಅಂಗಡಿಗಳಲ್ಲೂ ಯೋಗ್ಯ ಧಾರಣೆಯ ಅಂಗಡಿಗಳಲ್ಲೂ ಅಕ್ಕಿ ಸಕ್ಕರೆ ಸ್ವಚ್ಛಗೊಳಿಸಿ ಕೊಡಬೇಕೆಂದು ನಿಯಮವಾಗಿದೆಯೇನೋ ಅಹುದು. ಆದರೆ ಆ ನಿಯಮ ಇಲ್ಲಿ ಇನ್ನೂ ಅಮಲಿನಲ್ಲಿ ಬಂದಿರುವದಿಲ್ಲ. ಸೀಧಾ-ಅಂಗಡಿಗಳಲ್ಲಿ ಜನರಿಗೆ —ಸರಕಾರಿ ನೌಕರರಿಗಲ್ಲ!— ಕೊಡುವ ಅಕ್ಕಿ ಬಹಳಷ್ಟು ಅಸ್ವಚ್ಛವಿರುತ್ತದೆ!

ನಿಯಂತ್ರಣ ದರದಿಂದ ಸಿಕ್ಕ ತೆಂಗಿನ ಎಣ್ಣೆ ಮಾರ್ಕೆಟ್ಟಿಗೆ ಬಂದಿದೆ ಆದರೆ ಅದು ಎಲ್ಲರಿಗೂ ಸಿಗುವದಿಲ್ಲ! ಪುಣ್ಯ ಮಾಡಿದವರಿಗೆ ಮಾತ್ರ ಸಿಗುತ್ತದೆ!

(ತಾ. ೧೧-೨-೪೫) ಕಳೆದ ಬುಧವಾರ ಹೊಸ ಜಿಲ್ಲಾಧಿಕಾರಿ ಈ ಊರಿಗೆ ಬಂದಿದ್ದರು. ಸೀಧಾ-ಅಂಗಡಿಗಳಿಗೆ ಭೆಟ್ಟಿ ಕೊಟ್ಟು ಅಲ್ಲಿ ಮಾರಾಟಕ್ಕೆ ಇಟ್ಟ ಅಕ್ಕಿಯನ್ನು ನೋಡಿಕೊಂಡು, ಹೀಗೆ ಹಸನಗೊಳಿಸದ ಅಕ್ಕಿಯನ್ನು ಮಾರಾಟಕ್ಕಿಡಬಾರದೆಂತಲೂ, ಹಸನ ಮಾಡದಿದ್ದ ಅಕ್ಕಿಯನ್ನು ಜನರು ಕೊಂಡುಕೊಳ್ಳಬಾರದೆಂತಲೂ ಅವರು ವಿಧಿಸಿರುತ್ತಾರೆ.

[illegible] ಎಣ್ಣೆ ಕಂಪನಿಯವರು ಡಬ್ಬಿ ಸಹಿತ ಎಣ್ಣೆಯ ದರ ನಿರ್ಧರಿಸಿಕೊಡುತ್ತಾರೆ. ಖಾಲಿ ಡಬ್ಬಿಗಳಿಗೆ ಈಗ ಬಹಳ ಬೆಲೆ ಬಂದಿದೆ ಆ ದರವನ್ನು ಲೆಕ್ಕಕ್ಕೆ ಹಿಡಿದರೆ ಎಣ್ಣೆಯ ದರ ಪ್ಯಾಂಟಿಗೆ ೨ ಆಣೆ ಇಳಿಯಲು [illegible]. ಹೊಸ ಜಿಲ್ಲಾಧಿಕಾರಿ ಕಂಪನಿಯವರ ಧಾರಣೆ, ಏಜಂಟರಿಗೆ ಸಿಗುವ ದಲಾಲಿ, ದಲಾಲಿಯ ಮೇಲೆ ಏಜಂಟರಿಗೆ ಸಿಗಗೊಡಬಹುದಾದ ಮೇಲ್-ಮುನಾಫೆಯ ಪರಿಮಿತಿ, ಖಾಲಿ ಡಬ್ಬಿಗೆ ಪೇಟೆಯಲ್ಲಿ ಸಿಗುವ ದರ ಇವುಗಳನ್ನೆಲ್ಲ ತಿಳಿಕೊಂಡು ಎಣ್ಣೆಯ ಚಿಲ್ಲರೆ ಮಾರಾಟದ ದರಗಳನ್ನು ಹೊಸದಾಗಿ ನಿರ್ಧರಿಸಿ ಕೊಡಬೇಕಾಗಿ ನಮ್ಮ ಸೂಚನೆಯುಂಟು.

ಶಿರಸಿ— ತಾ. ೧೧-೧೨-೪೪ರ "ವೃತ್ತ"ದಲ್ಲಿ ಪ್ರಕಟವಾದ ಸೀಧಾ-ಅಕ್ಕಿಯ ದೋಷದ ಮತ್ತು ಸೀಧಾ-ಸರಕುಗಳ ಕೊರತೆಯ ಸುದ್ದಿಯನ್ನು ಜಿಲ್ಲಾಧಿಕಾರಿ ನಿರಾಕರಿಸಿರುವರೇನೋ ನಿಜ. ಅಕ್ಕಿಯಲ್ಲಿ ಹುಳಗಳಿದ್ದ ಬಗ್ಗೆ ಜನರು ಒಂದು ಪಂಚನಾಮೆಯನ್ನು ಮಾಡಿಟ್ಟಿಲ್ಲವಾದ್ದರಿಂದ ಜಿಲ್ಲಾಧಿಕಾರ ನಿರಾಕರಣೆಯನ್ನು ಖಂಡಿಸಲಿಕ್ಕೆ ಈಗ ಸಾಧ್ಯವಿಲ್ಲ ಆದರೆ ಕೊರತೆಯ ಕಥೆ ಹಾಗಿಲ್ಲ. ಸೀಧಾ-ಅಂಗಡಿಗಳೊಳಗಿನ ಡಿಸೆಂಬರ ತಿಂಗಳ ಪೂರ್ವಾರ್ಧದ ಲೆಕ್ಕವನ್ನು ಪರಿಶೀಲಿಸಿದಲ್ಲಿ ಸರಕುಗಳ ಕೊರತೆಯ ಸತ್ಯತೆ ಕಂಡುಬರುತ್ತದೆ. ಅದನ್ನು ನಿರಾಕರಿಸಿ ಪ್ರಯೋಜನವೇನು?

ಸರಕಾರದವರ ಭತ್ತ-ಖರೀದಿಯ ಕ್ರಮದಿಂದ ಜನರಿಗೆ ಕಷ್ಟವಾಗಿದೆ. ಸರಕಾರದವರು ಮಾಡಿದ ಬೆಳೆಯ ಅಂದಾಜಿಗೂ ವಸ್ತುಸ್ಥಿತಿಗೂ ಮಹದಂತರವುಂಟು. ಅಂದಮೇಲೆ ರೈತರು ಸರಕಾರ ಲೆಕ್ಕದಂತೆ ಭತ್ತ ಎಲ್ಲಿಂದ ತಂದು ಕೊಡಬೇಕು? ತಮ್ಮ ಪಾಲಿನ ಭತ್ತ ತೆತ್ತವರಿಗೂ ಉಳಿದ ಭತ್ತ ಮನೆಗಿರಲು ಕೊಡುವದಿಲ್ಲ. ಊರವರೆಲ್ಲರೂ ಭತ್ತ ಕೊಟ್ಟಾವನಲ್ಲ ಸ್ಥಳಾಂತರದ ಪರವಾನೆ ಕೊಡಬರುವದಿಲ್ಲವಂತೆ! ಕೊನೆಗೆ ಮಾಮಲೇದಾರರು ಪರವಾನಗಿ ಕೊಟ್ಟರೂ ಶಿರಸಿಗೆ ಆ ಭತ್ತ ತರುವದಾದಲ್ಲಿ ಪುನಃ ಸೀಧಾ-ಅಧಿಕಾರಿಗಳ ಅಪ್ಪಣೆ ಬೇಕು! ನಿಯಂತ್ರಣ ರಾಜ್ಯದೊಳಗಿನ ಸುಖಗಳಿವು!

ಬನವಾಸಿ-(ತಾ. ೮-೧-೪೫) ಇಲ್ಲಿಯ ಸರಕಾರಿ ಕಾಳು-ಕಡಿಯ ಉಗ್ರಾಣದಲ್ಲಿ ಉಗ್ರಾಣದಾರರೂ ಅಳತೆ ಹೇರೆಯೂ ಬಹಳ ಕಳ್ಳತನ ಮಾಡುತ್ತಾರೆಂದು ದೂರು ಕೇಳಲಾಗುತ್ತದೆ. ಭತ್ತದ ಬೆಲೆ ಗಳ್ಳೆಗೆ ರೂ. ೧೨ ಹರವಿದ್ದಾಗ ಉಗ್ರಾಣದಾರರು ಎಷ್ಟೋ ರೈತರಿಗೆ ರೂ. ೧೧ರಂತೆ ಹಣ ಕೊಟ್ಟದ್ದುಂಟಂತೆ. ಭತ್ತ ತಂದ ರೈತರು [illegible]-ಸೇರಿಗೆ ಕೈ ದಿಸಿ ಹಾಕಿದರೆ ೯೬ ಸೇರು ಭತ್ತ ೯೮-೯೯ ಸೇರು ಆಗುತ್ತದೆ! ಕೈ ದಿಸಿ ಮಾಡದಿದ್ದರೆ ೯೩-೯೪ ಆಗುತ್ತದೆ!! ಕಳ್ಳ ವರ್ತಕರಿಗೂ ಇವರಿಗೂ ಬಹಳ ಅನ್ಯೋನ್ಯ! ಭತ್ತ ತಂದ ರೈತರು ಉಗ್ರಾಣದಾರರಿಗೆ ಕಾಣಿಕೆ ಸಲ್ಲಿಸಿ ಒಲಿಸಿಕೊಂಡರೆ ಅವರ ಕೆಲಸ ಲಗು ಆಗುತ್ತದಂತೆ. ಕಾಣಿಕೆ ಸಲ್ಲಿಸದೆ ಕಾಯಿದೆಯಂತೆ ವರ್ತಿಸಿದರೆ ಅವರು ತಮ್ಮ ಭತ್ತ ಉಗ್ರಾಣಕ್ಕೆ ಒಪ್ಪಿಸಿಕೊಡಲು ೪-೮ ದಿನ ಹಾದಿ ಕಾಯಬೇಕು! ಖಾಲಿ ಕೆಲಸವಿಲ್ಲ; ಹಣವಿಲ್ಲ; ಹೀಗೆ ಬಗೆಬಗೆಯ ನೆವ ಹೇಳಿ ಉಗ್ರಾಣದಾರರು ಅವರಿಗೆ ಸತಾಯಿಸುತ್ತಾರಂತೆ. ಕೊಟ್ಟ ಭತ್ತದ ಹಣವೂ ಲಗು ಸಿಗುವದಿಲ್ಲ! ವಾರಗಟ್ಟಲೆ ವಿಳಂಬವಾಗುತ್ತದೆ! ಅದರ ಬಗ್ಗೆ ಹಲವಾರ ತಿರುಗಾಟವನ್ನೂ ಮಾಡಬೇಕಾಗುತ್ತದೆ! ಮೇಲಧಿಕಾರಿಗಳು ಚೌಕಶಿ ಮಾಡಿ ರೈತರಿಗಾಗುವ ಕಷ್ಟಗಳನ್ನು ಪರಿಹರಿಸಬೇಕಾಗಿ ವಿನಂತಿಯಿದೆ.

ORIENT
Illustrated Weekly
(Published every Sunday)
The New Supply Agency Kumta

The Agricultural & Industrial Bank, Ltd.,
(Incorporated in British India, Liability of Members Limited)
(ESTD: 1934)

ABRIDGED BALANCE SHEET AS ON 31-12-1944

Liabilities-	Rs	As	Ps	Assets-	Rs	As	Ps
Paid-up Capital	2,69,950	8	0	Cash & Bank ablances	4,31,136	14	7
Calls in Advance	15,700	0	0	Govt. Securities	20,26,838	7	0
Reserves	12,4[illegible]	2	0	Other Investments	42,204	6	0
Deposits	27,76,[illegible]44	6	6	Loans Secured	10,19,580	2	3
Bills for Collection	1,08,821	10	0	Loans on Personal Security and Bills Discounted	5,08,371	9	1
Other Liabilities	10,41,465	14	11	Bills for collection	1,08,821	10	0
Profits' Account	16,803	15	11	Other Assets	1,05,251	8	5
Total Rs	42,87,154	9	4	Total Rs	42,87,154	9	4

Coondapoor, 27-1-1945

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ [illegible] ಕಳೆ [illegible] ಬರುತ್ತದೆ. [illegible] ಜನರಿಗೆ [illegible] ಬರೆ [illegible]

ಗೋಕರ್ಣ-ಮಹಾಬಲೇಶ್ವರ ಶ್ರೀಮನ್-[illegible] ಗುರುಗಳು [illegible] ಶ್ರೀ [illegible] ದೇವಸ್ಥಾನಕ್ಕೆ [illegible], ಶ್ರೀ ದೇವಸ್ಥಾನದ [illegible] ಪೂಜೆ [illegible] ಫಲಮಂತ್ರಾಕ್ಷತೆಗಳನ್ನು [illegible], ಇದೇ [illegible] ತಿಳಿಯುತ್ತದೆ [illegible] ಶ್ರೀ ಗುರುಗಳು ಶ್ರೀ [illegible] ದೇವಸ್ಥಾನದಲ್ಲಿ [illegible] ದರ್ಶನವನ್ನಿತ್ತರು.

ಇತ್ತೀಚೆ ತಾಲೂಕುಗಳಲ್ಲಿ ಅಕ್ಕಿ, ಗೋಧಿ, ಬೇಳೆ ಮೊದಲಾದ ಸೀಧಾ ಪದಾರ್ಥಗಳನ್ನು ಉಗ್ರಾಣದಿಂದ [illegible] ಜನರಿಗೆ [illegible] ಕೊಡುತ್ತಾರೆ. ಈ [illegible] ಇಲ್ಲ ಎಂದು [illegible] ಕೇಳುತ್ತಾರೆ. ಇಲ್ಲಿ [illegible] ತಾಲೂಕುಗಳಲ್ಲಿ [illegible] ಮತ್ತು [illegible] ಇರುತ್ತದೆ.

ಹೊಸ ಜಿಲ್ಲಾಧಿಕಾರಿ ಕಳೆದ ಮಂಗಳವಾರ ಸಂಜೆ ಈ ಊರಿಗೆ ಬಂದಿದ್ದರು. [illegible] ಈ ಜಿಲ್ಲೆಯೊಳಗೆ ಬೇರೆ ಬೇರೆ [illegible] ಅಕ್ಕಿಗಳ [illegible] ಮಾಡು [illegible] ವಿಚಾರ ಮಾಡಿದ್ದೇವೆಂದೂ [illegible] ಒಂದೇ [illegible] ಕೇಳಲಾಯಿತು; ಮತ್ತು [illegible], [illegible] ಮೊದಲಾದ [illegible] ಸುಗಂಧಿ, [illegible] ಅಕ್ಕಿಗಳಿಗೆ [illegible] ದರಗಳನ್ನಿಟ್ಟು [illegible] ಸಾಮಾನ್ಯ [illegible] ಅಕ್ಕಿಗೆ [illegible] ಧಾರಣೆಯಿದೆ ಎಂದೂ [illegible]. "ನಾವು ಬರಲು ತುಸು ತಡವಾಯಿತು. ನಾವು ಬರುವ ಮೊದಲೇ ಧಾರಣೆಗಳ ನಿಶ್ಚಯವಾಗಿ ಹೋಗಿದೆ. ಆದರೂ ಇನ್ನೊಂದು ತಿಂಗಳಲ್ಲಿ ಎಲ್ಲ ಪರಿಸ್ಥಿತಿಯ ಅಭ್ಯಾಸ ಮಾಡಿ ಶಕ್ಯವಿದ್ದ ಪರಿಹಾರವನ್ನು ಜನರಿಗೆ ಕಲ್ಪಿಸಿ ಕೊಡುವೆನು" ಎಂದು ಜಿಲ್ಲಾಧಿಕಾರಿ ಆಶ್ವಾಸನವನ್ನಿತ್ತಿದ್ದಾರೆ.

ಮುಂಬಯಿ ಸರಕಾರದ [illegible] ಕಮೀಶನರರಾದ [illegible] ಭಟ್ಟರವರು ಕಳೆದ ವಾರ ಈ ಜಿಲ್ಲೆಯಲ್ಲಿ ಸಂಚರಿಸಿ ಹೋಗಿದ್ದಾರೆ. ಸಂಚಾರದ ಉದ್ದೇಶವೇನೆಂದು ತಿಳಿಯಲಿಲ್ಲ. ಮುಖ್ಯ [illegible] ಈ ಜಿಲ್ಲೆಯೊಳಗಿನ ಮದ್ಯ ನಿರೋಧವು ನಡೆಯುತ್ತದೋ ಇಲ್ಲವೋ ಎಂದು ಅನೇಕರು ಸಂಶಯಪಡುತ್ತಿದ್ದಾರೆ.

ಕಾರವಾರ— (ತಾ. ೩೦-೧-೪೪) ಕಳೆದ [illegible] ಭಾರತೀಯ ಸ್ವಾತಂತ್ರ್ಯ ದಿನದ ನಿಮಿತ್ತ ಇಲ್ಲಿಯ ರಾಷ್ಟ್ರೀಯ ಸೇವಾ ದಲದವರೂ ಕಳೆದ ವಾರವೇ ಸ್ಥಾಪಿಸಲ್ಪಟ್ಟ ವಿದ್ಯಾರ್ಥಿ ಸಂಘದ ಸ್ವಯಂಸೇವಕರೂ ಊರಲ್ಲಿ ಭಿಕ್ಷೆ ಬೇಡಿ, ಸೆರೆಮನೆಯಲ್ಲಿರುವ [illegible] ಕುಟುಂಬಗಳ ಸಹಾಯಕ್ಕಾಗಿ ರೂ. ೨೧೯-೬-೦ ಯಷ್ಟು ನಿಧಿಯನ್ನು ಕೂಡಿಸಿರುತ್ತಾರೆ.

ನಮ್ಮ ಸಮಾಚಾರ [illegible] ಎಂಬ [illegible] ಜನರ [illegible] ಮಾಡು [illegible] ಹಣ [illegible] "[illegible] ಸಮಾಚಾರ [illegible]" ಎಂದು [illegible]

ಇತ್ತೀಚೆಗೆ ಇಲ್ಲಿಯ [illegible] ಅವರಿಗೆ ಸಿಗುವದಿಲ್ಲ [illegible] ಸರಕಾರಿ [illegible] ಅಧಿಕಾರಿಗಳು [illegible] ದರ್ಶನ [illegible] ನಡೆಯುವದಿಲ್ಲ! ನಮ್ಮ [illegible] ಪತ್ರಗಳಲ್ಲಿ [illegible] ಅಧಿಕಾರಿಗಳು [illegible] ನಾವು [illegible] ಅಧಿಕಾರಿಗಳು [illegible] ಅವರ [illegible] ಮಾಡುವದು. [illegible] ಬೇರೆ [illegible] ಪತ್ರಗಳನ್ನು ಅಧಿಕಾರಿಗಳು [illegible] ನೋಡುತ್ತಾರೆಂದು [illegible]

(ತಾ. ೩-೨-೪೪) ಕಳೆದ ವಾರ ಇಲ್ಲಿಂದ ೪ ದೋಣಿಗಳು ಏನೋ ಸಾಮಾನು ತುಂಬಿಕೊಂಡು ಗೋವೆಗೆ ಹೋಗುತ್ತಿದ್ದ ಸುದ್ದಿ ಅಧಿಕಾರಿಯವರಿಗೆ ತಿಳಿಯಿತು. ಕೂಡಲೇ ಅವರು ದೋಣಿಗಳಲ್ಲಿ ಕೂಡಿ ಅವನ್ನು ಹಿಂಬಾಲಿಸಿದರು. ಅಬಕಾರಿ ಮತ್ತು ಕಳ್ಳ ದೋಣಿಯವರಿಗೂ ಘನ ಘೋರ ಹಂದ್ಯಾಟ ನಡೆಯಿತು. ಕೊನೆಗೆ ೨ ಸಣ್ಣ ದೋಣಿಗಳು ಮಾತ್ರ ಅಧಿಕಾರಿಯವರ ಕೈಗೆ ಸಿಕ್ಕವು. ಅವನ್ನು ತಡೆಯಬೇಕಾದರೆ [illegible] ಬಡಿದಾಟವಾಯಿತಂತೆ. ಅದರಿಂದ ಮುಂದೆ ಹೋದ ೨ ದೊಡ್ಡ ದೋಣಿಗಳನ್ನು ಹಿಡಿಯಲಾಗಲಿಲ್ಲ. ಅವು ಸಿಕ್ಕಿಯೇ ಹೋದವು! ಕೈಗೆ ಸಿಕ್ಕ ೨ ದೋಣಿಗಳಲ್ಲಿ ೪೮ ಚೀಲ ಅಕ್ಕಿ ಇದ್ದಿತ್ತು. ಅದರಲ್ಲಿ ೨೦ ಚೀಲ ಅಕ್ಕಿ ಬಂಗಾರದಷ್ಟು! ಈ ಅಕ್ಕಿ ಘಟ್ಟದ ಮೇಲೆ ಮಾತ್ರ ಬೆಳೆಯುತ್ತದೆ. ಸರಕಾರದ ವಿನಾ ಬೇರೆ ಯಾರೂ ಅದನ್ನು ಖರೀದಿಸಿದ್ದಿಲ್ಲ. ಖಾಸಗಿ ವ್ಯಕ್ತಿಗಳು ಒಂದೊಮ್ಮೆ ಈ ಅಕ್ಕಿಯನ್ನು ಸಂಗ್ರಹಿಸಿದ್ದರೂ ಅದು ಬೇಲಗಟ್ಟಿಲೆ ಸಿಗುವಂತಿಲ್ಲ. ಕಾರಣ ಕಳ್ಳತನದಿಂದ ಗೋವೆಗೆ ಹೋಗುತ್ತಿದ್ದ ಬಂಗಾರದಷ್ಟು ಅಕ್ಕಿಯು ಸರಕಾರ ಉಗ್ರಾಣಗಳೊಳಗಿಂದಲೇ ಹೊರ

(೧ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾ ಜಿಲ್ಲಾ ಲೋಕಲ್ ಬೋರ್ಡಿನ

೧೯೪೨-೪೩ನೇ ವರ್ಷದ ಲೆಕ್ಕ-ತಪಾಸಣೆಯಲ್ಲಿ ಲೆಕ್ಕ-ತಪಾಸಕರು ಎತ್ತಿದ ಆಕ್ಷೇಪಗಳು, ಅವುಗಳಿಗೆ ಬೋರ್ಡು ಕೊಟ್ಟ ಉತ್ತರಗಳು ಮತ್ತು ಲೆಕ್ಕ-ತಪಾಸಕರು ಅವುಗಳನ್ನು ಕುರಿತು ಒಪ್ಪಿಸಿದ ಕೊನೆಯ ವರದಿ.

೧೯೪೨—೪೩

ಲೆಕ್ಕ-ತಪಾಸಕರ ವರದಿಯ ಕಲಂ ೩ ಬ— ಈ ಕೆಳಗಿನ ಕೋಷ್ಟಕದಲ್ಲಿ ೧೯೪೦-೪೩ನೇ ವರ್ಷಗಳ ಬೋರ್ಡಿನ ಸಾಮಾನ್ಯ ಜಮಾ-ಖರ್ಚು ಕೊಡಲಾಗಿದೆ.

ವರ್ಷ	ಜಮಾ	ಖರ್ಚು	ಉಳಿತಾಯ
೧೯೪೦-೪೧	ರೂ. ೧,೬೮,೨೮೯	ರೂ. ೧,೫೮,೦೯೯	ರೂ. ೧೦,೧೯೦
೧೯೪೧-೪೨	" ೧,೮೧,೨೦೪	" ೧,೮೫,೮೧೭	" -೪,೬೧೩
೧೯೪೨-೪೩	೧,೯೮,೧೫೯	" ೧,೮೩,೩೦೦	" ೧೪,೮೫೮
ಒಟ್ಟು ರೂ.	೫,೪೭,೬೫೨	ರೂ. ೫,೨೭,೨೧೬	ರೂ. ೨೦,೪೩೫

ಮೇಲಿನ ಅಂಕಿಗಳ ಮೇಲಿಂದ ಬೋರ್ಡಿಗೆ ಸರಾಸರಿ ರೂ. ೭೦೦೦ದಷ್ಟು ಶಿಲ್ಕಿ ವಾರ್ಷಿಕ ಉಳಿತಾಯವಿರುತ್ತದೆಂದು ಕಂಡುಬರುವದು. ಆದರೆ ಖರ್ಚಿನ ಬಾಬುಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಮಾರ್ಗ-ಶೌಚಕೂಪ ಮೊದಲಾದ ಸಾರ್ವಜನಿಕ ಉಪಯೋಗದ ಕೆಲಸಗಳ ವೆಚ್ಚವನ್ನು ಬೋರ್ಡಿನವರು ಹೆಚ್ಚಾಗಿ ಸರಕಾರ ಧನಸಹಾಯದೊಳಗಿಂದಲೇ ಪೂರೈಸುತ್ತಿರುವದು ಕಂಡುಬರುತ್ತದೆ. ಮಾರ್ಗಗಳ ಪಾಲನೆ ದುರುಸ್ತಿಯ ಬಗ್ಗೆ ಸರಾಸರಿ ರೂ. ೫೦೦೦ ಅಂದರೆ (ಮಾರ್ಗ-ಶೌಚಕೂಪದ ಬಗ್ಗಾಗಿ ಮಾಡಿದ) ವೆಚ್ಚದ ೩/೧೦ ಭಾಗವನ್ನು ಮಾತ್ರ ಬೋರ್ಡು ತನ್ನ ಸ್ವಂತ ಫಂಡಿನೊಳಗಿಂದ ವಿನಿಯೋಗಿಸಿದೆ ಮತ್ತು ಜಂಗಲ ಇಲಾಖೆಯವರಿಂದ ಸಿಕ್ಕ ಧನ-ಸಹಾಯದ ರೂ. ೨೫೦೦೦ನ್ನು ಬೇರೆ ಕೆಲಸಗಳಿಗೆ ಖರ್ಚು ಮಾಡಿದೆ. ಲೆಕ್ಕ ತಪಾಸಕರು ಹಾಗೂ ಕಲೆಕ್ಟರ-ಕಮಿಶನರ ಸಾಹೇಬರು ಪುನಃ ಪುನಃ ಸೂಚನೆ ಮಾಡಿದಾಗ್ಯೂ ಬೋರ್ಡಿನವರು ಲೋಕಲ್ ಫಂಡ ಪಟ್ಟಿ ಏರಿಸುವ ಪ್ರಶ್ನೆಯನ್ನು ಮನಸ್ಸಿಗೊಟ್ಟು ಆಲೋಚಿಸಿರುವದಿಲ್ಲ. ತಾ. ೨೦-೩-೧೯೪೩ರ ಎಲ್. ಎಫ್. ಜನರಲ್ ನಂಬರ ೪೧೦೮ ಪತ್ರದಲ್ಲಿ ಲೋಕಲ್ ಫಂಡ ಪಟ್ಟಿಯನ್ನು ಒಂದಾಣೆಯಿಂದ ೧॥ ಆಣೆಗಾದರೂ ಏರಿಸಿದಲ್ಲಿ ಮಾರ್ಗ-ಶೌಚಕೂಪದ ಬಗ್ಗಾಗಿ ಸರಕಾರದವರು ಕೊಡುವ ಧನಸಹಾಯದಲ್ಲಿ ಯೋಗ್ಯ ಪಾಲು ಬೇಡುವ ಹಕ್ಕು ಬೋರ್ಡಿಗೆ ಪ್ರಾಪ್ತವಾಗುವದೆಂದು ಕಮಿಶನರ ಸಾಹೇಬರು ಒತ್ತಿ ಹೇಳಿದ್ದಾರೆ. ಆದಾಯವನ್ನು ಬೆಳೆಸಿಕೊಳ್ಳದಿದ್ದರೆ ಬೋರ್ಡಿನ ಕಾರಭಾರವನ್ನು ಚೆನ್ನಾದ ರೀತಿಯಿಂದ ಸಾಗಿಸಿಕೊಂಡು ಹೋಗಲಿಕ್ಕಾಗಲಿ ದಿನೇ ದಿನೇ ಬೆಳೆಯುತ್ತಿರುವ ಬೇಡಿಕೆಗಳನ್ನು ಪೂರೈಸಲಿಕ್ಕಾಗಲಿ ಬೋರ್ಡಿಗೆ ಶಕ್ಯವಾಗುವಂತಿಲ್ಲ. ಕಾರಣ ಲೋಕಲ್ ಫಂಡ ಪಟ್ಟಿಯನ್ನು ಏರಿಸುವ ಪ್ರಶ್ನೆಯ ವಿಚಾರ ಬೋರ್ಡಿನವರು ತ್ವರೆಯನೇ ಮಾಡಬೇಕು.

ಮೇಲಿನ ಆಕ್ಷೇಪಕ್ಕೆ ಬೋರ್ಡಿನ ಉತ್ತರ:— ೩ (ಬ) ಲೋಕಲ್ ಬೋರ್ಡಿನ ಆವಶ್ಯಕ ಕಾರ್ಯಗಳ ನಿರ್ವಹಣಕ್ಕೆ ತಗಲುವ ಖರ್ಚು ದಿನೇ ದಿನೇ ಬೆಳೆಯುತ್ತಿರುವ ಸಂಗತಿಯನ್ನೂ ಈಗಿನ ಯುದ್ಧ-ಕಾಲದ ಪರಿಸ್ಥಿತಿಯಲ್ಲಿ ಖರ್ಚಿಗೆ ಹಣವಿಲ್ಲದೆ ಬೋರ್ಡಿನ ಕಾರಭಾರಕ್ಕೆ ಒಂದಾನೊಂದು ದಿನ ತೀರ ಬೀಳಬಹುದು ಎಂದು ಉಂಟಾಗಿರುವ ಭೀತಿಯನ್ನೂ ತಾ. ೨೬-೫-೧೯೪೪ಕ್ಕೆ ಕೂಡಿದ ಬೋರ್ಡಿನ ಸಭೆಯ ದೃಷ್ಟಿಗೆ ತಂದಾಗ ಈ ಸಮಸ್ಯೆಯ ಆಲೋಚನೆ ಮಾಡಲು ಬೋರ್ಡಿನವರು ಒಂದು ಉಪ-ಸಮಿತಿಯನ್ನು ನೇಮಿಸಿದ್ದರು. ಆ ಉಪ-ಸಮಿತಿಯವರು ಇದೇ ವಿಷಯವನ್ನು ಕೂಲಂಕಷವಾಗಿ ಆಲೋಚಿಸಿ, ಲೋಕಲ್ ಫಂಡ ಪಟ್ಟಿಯನ್ನು ೧ ಆಣೆಯಿಂದ ೧॥ ಆಣೆಗೆ ಏರಿಸುವದು ಅಗತ್ಯವಿರುತ್ತದೆಂಬ ಅಭಿಪ್ರಾಯ ಸಹಿತವಾದ ತಾ. ೧೩-೬-೪೪ಕ್ಕೆ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಮುಂದಿನ ತ್ರೈಮಾಸಿಕ ಸಭೆಯಲ್ಲಿ ಬೋರ್ಡಿನವರು ಈ ವರದಿಯನ್ನು ಪರಿಶೀಲಿಸಿ, ಅವಶ್ಯವೆನಿಸಿದಲ್ಲಿ ಸದರಿ ವಿಷಯವನ್ನು ವಿಶೇಷ ಸಭೆಗೆ ಒಪ್ಪಿಸುವವರಿದ್ದಾರೆ.

ಲೆಕ್ಕ-ತಪಾಸಕರ ಕೊನೆಯ ವರದಿ:- ಕಲಂ ೩- ಕಲಂ ೩ (ಬ)- ತಮ್ಮ ಬೆಳೆಯುವ ಖರ್ಚು ಸಹಿಸಲು ಸಾಧ್ಯವಾಗುವಂತೆ ಬೋರ್ಡಿನ ಸಾಂಪತ್ತಿಕ ಸ್ಥಿತಿಯನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ಅಡಿ-ಪಟ್ಟಿಯನ್ನು ಏರಿಸುವ ಸೂಚನೆಯನ್ನು ಬೋರ್ಡಿನವರು ಶೀಘ್ರವೇ ಆಲೋಚಿಸುವದು ಅಗತ್ಯವುಂಟು.

* * *

ಲೆಕ್ಕ ತಪಾಸಣೆ ವರದಿಯ ಕಲಂ ೭:- ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸದ ಸೂಚನೆಯನ್ನು ಚರ್ಚಿಸುವದಕ್ಕಾಗಿ ಬೋರ್ಡಿನ ಸಭೆ ಕರೆಯಬೇಕಾಗಿ ೧೩ ಮಂದಿ ಸದಸ್ಯರು ತಮ್ಮ ಸಹಿಯಿಂದ ತಾ. ೨೨-೯-೧೯೪೩ಕ್ಕೆ ಅಧ್ಯಕ್ಷರ ಕಡೆ ಒಂದು ವಿನಂತಿ-ಅರ್ಜಿ ಕಳಿಸಿದ್ದರು. ಅದರಂತೆ ತಾ. ೧೭-೧೦-೪೩ಕ್ಕೆ ಹಳಿಯಾಳದಲ್ಲಿ ಸಭೆ ಸೇರಿಸಲ್ಪಟ್ಟಿತು. ಆದರೆ ೧೫ ವಿರುದ್ಧ ೧೦ ಮತಗಳಿಂದ ಅವಿಶ್ವಾಸದ ಸೂಚನೆ ಬಿದ್ದುಹೋಯಿತು. ಸಭೆಯನ್ನು ಇಷ್ಟು ಅಗತ್ಯವಾಗಿ ಸೇರಿಸಲು ಅಂತಹ ಕಾರಣಗಳೇನಿದ್ದವೆಂಬುದನ್ನು [illegible] ಕಂಡುಬರುವದಿಲ್ಲ. ಮೇಲಾಗಿ ಬೇರೆ ಯಾವದೇ ಕೆಲಸವಿಲ್ಲದೆ ಬರೇ ಅವಿಶ್ವಾಸದ ಸೂಚನೆಯ ಚರ್ಚೆಗಾಗಿ ಸಭೆಯ ಸದಸ್ಯರ [illegible] ಅವಶ್ಯವಾಗುವದೆಂಬುದೂ ಅವಿಶ್ವಾಸದ ಗೊತ್ತುವಳಿಯ ಭವಿತವ್ಯವೇನಾಗುವದೆಂಬುದು ಸದಸ್ಯರಿಗೆ ಮುಂಚಿತವಾಗಿಯೇ ಗೊತ್ತಿತ್ತು. ಈ ಸಭೆಯ ಸಲುವಾಗಿ ರೂ. ೫೭೦ರಷ್ಟು ಹಣ ಖರ್ಚಾಗಿದೆ. [illegible] ದೃಷ್ಟಿಯಿಂದ ಇಷ್ಟು ವೆಚ್ಚ ತಗಲುವ ಸಭೆಯನ್ನು ಕೂಡಿಸಿದ್ದು ಯುಕ್ತವೇನೆಂದು ಕಮಿಶನರ ಸಾಹೇಬರು ವಿಚಾರಿಸಬಹುದು.

ಬೋರ್ಡಿನ ಉತ್ತರ:- ಕಲಂ ೭- ಬೋರ್ಡಿನ ಅಧಿಕಾರಿಗಳಲ್ಲಿ ವಿಶ್ವಾಸ ಯಾ ಅವಿಶ್ವಾಸ ತೋರಿಸುವ ಸ್ವಾತಂತ್ರ್ಯ ಬೋರ್ಡಿನ ಸದಸ್ಯರಿಗುಂಟು. ಈ ಸಂಬಂಧದ ಸೂಚನೆಗಳನ್ನು ತರುವದು ಲೋಕಲ್ ಬೋರ್ಡ [illegible] ಆಧರಿಸಿದೆ. ಕೊನೆಗಿನ ಪ್ರಶ್ನೆಯಿಂದು ಹೇಳಬರುವಂತಿಲ್ಲ. ವಿಶೇಷ ಸಭೆ ಕರೆಯಬೇಕೆಂದು ವಿನಂತಿ-ಅರ್ಜಿ ಮಾಡಿದ ಹಕ್ಕು ಸದಸ್ಯರಿಗೆ ಕಾನೂನಿನಿಂದ ಕೊಡಲ್ಪಟ್ಟಿದೆ. ಪ್ರಸ್ತುತ ಪ್ರಕರಣದಲ್ಲಿ ಸದಸ್ಯರಾಗಲಿ ಅಧ್ಯಕ್ಷರಾಗಲಿ ತಮ್ಮ [illegible] ಕಾರ್ಯಕ್ಷೇತ್ರ ಮತ್ತು ಅಧಿಕಾರಗಳಲ್ಲೇ ವರ್ತಿಸಿದ್ದಾರೆ. ಆದ್ದರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟ [illegible] ಲೋಕಲ್ ಬೋರ್ಡಿನ ನಿಧಿಯ ಮೇಲೆ ಬೀಳತಕ್ಕದ್ದು ನ್ಯಾಯ್ಯವೇ ಸರಿ. ಅದು ಅನವ್ಯಯ ಖರ್ಚೆಂದು [illegible] ಬಗ್ಗೆ ಏನೂ ಹೇಳುವದಿಲ್ಲ.

ಲೆಕ್ಕ-ತಪಾಸಕರ ಕೊನೆಯ ಅಭಿಪ್ರಾಯ:- ಕಲಂ ೩ — ಕಲಂ ೭ — ವಿಶೇಷ ಸಭೆ [illegible] ಸಭೆಯ ಬಗ್ಗೆ ಸದಸ್ಯರು ಕೊಟ್ಟ [illegible] ಅರ್ಜಿಯು ದುರುಪಯೋಗ ಲೋಕಲ್ ಬೋರ್ಡ ಕಾನೂನಿನ ಕಲಂ ೩೫ (೨) (೪) ದಲ್ಲಿ ಹೇಳಿರುವ ವಿಧಾನಕ್ಕನುಸಾರವಾಗಿ [illegible] ಮತ್ತು ಆ ಬಗ್ಗೆ ಮಾಡಿದ ಖರ್ಚು ಕಾನೂನಸಮ್ಮತವುಂಟೋ ಇಲ್ಲವೋ ಎಂಬುದರ ವಿಚಾರವಾಗಬಹುದು.

A. C. KITTUR.
ಅಧ್ಯಕ್ಷ, ಜಿ. ಲೋ. ಬೋರ್ಡ, ಕಾನಡಾ.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೩ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 19th February, 1945.

ಕಾನಡಾವೃತ್ತ

ವರ್ಷ ೨೬.] THE KANARA NEWS. [ಸಂಚಿಕೆ ೩೩

ಕುಮಟಾ:- ಸೋಮವಾರ, ತಾ. ೧೯ ಮಾಹೆ ಫೆಬ್ರುವರಿ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ.
ಸ್ಮಾಲ್‌ಪ್ಯಾಕಾ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾಗುವದು.

ಜರ್ಮನರು ಕೆರಳಿದ್ದಾರೆ!

(ವೀಕ್ಷಕನು ಬರೆದುದು.)

ಕಪ್ಪು ಸಮುದ್ರದ ದಡದಲ್ಲಿ ತ್ರಿಕೂಟದ ಸಭೆ ಸೇರಿದ ಸಂಗತಿಯನ್ನು ನಾನು ಕಳೆದ ವಾರ ಉಲ್ಲೇಖಿಸಿದ್ದುಂಟು. ಅದು ಕ್ರಿಮಿಯಾ ದ್ವೀಪಕಲ್ಪದೊಳಗಿನ ಯಾಲ್ಟಾ ಎಂಬ ಹಳ್ಳಿಯಲ್ಲಿರುವ, ಹಿಂದಿನ ಝಾರ್-ಚಕ್ರವರ್ತಿಗಳ ಬೇಸಿಗೆಯ ನಿವಾಸದ ಅರಮನೆಯಲ್ಲಿ ಕೂಡಿತ್ತೆಂತಲೂ, ತಾ ೫ರಿಂದ ತಾ. ೧೨ರ ವರೆಗೆ ನಡೆದು ಕಳೆದ ಅಮಾವಾಸ್ಯೆ ಸೋಮವಾರ ರಾತ್ರಿ ಸ್ಟಾಲಿನ-ರೂಝವೆಲ್ಟ-ಚರ್ಚಿಲ್ಲ ತ್ರಿಮೂರ್ತಿಗಳು ಕೂಟದ ಪ್ರಕಟನಾ-ಪತ್ರಕ್ಕೆ ಸಹಿ ಹಾಕಿ ಸಭೆಯನ್ನು ವಿಸರ್ಜಿಸಿದರೆಂತಲೂ ಈಗ ಪ್ರಕಟವಾಗಿದೆ. ತ್ರಿಕೂಟದ ಈ ಪತ್ರಕದಲ್ಲಾಗಲಿ ಅಲ್ಲಿಂದ ಹೊರಬಿದ್ದ ವಾರ್ತೆಗಳಲ್ಲಾಗಲಿ ಜಪಾನದ ಉಲ್ಲೇಖವಿಲ್ಲ. ರಶ್ಯನರು ಜಪಾನದ ವಿರುದ್ಧ ಇನ್ನೂ ಯುದ್ಧ ಸಾರಿಲ್ಲವಾದ್ದರಿಂದ ಜಪಾನಿಯರ ಉಲ್ಲೇಖವಿಲ್ಲೆಂತಲೂ, ಆದರೂ ಬೇಗನೆ ರಶ್ಯನರು ಜಪಾನದ ವಿರುದ್ಧ ಯುದ್ಧ ಸಾರಲು ಒಪ್ಪಿರುವರೆಂತಲೂ ಅಮೇರಿಕೆಯ ಸರಕಾರದ ಓರ್ವ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ರಶ್ಯ-ಜಪಾನಿಯರೊಳಗಿನ ಒಪ್ಪಂದದ ಅವಧಿ ಇದೇ ಬರುವ ಮೇ ತಿಂಗಳಲ್ಲಿ ತೀರುತ್ತದೆ. ಅನಂತರ ರಶ್ಯರು ಜಪಾನದ ವಿರುದ್ಧ ಶಸ್ತ್ರವನ್ನೆತ್ತಲು ಸ್ವತಂತ್ರರಾಗುತ್ತಾರಂತೆ. ಅದು ಮುಂದಿನ ಮಾತು. ಸದ್ಯಕ್ಕೆ ಅದರ ಮಹತ್ವವಿಲ್ಲ! ಜರ್ಮನಿಯ ಬಗ್ಗೆ ತ್ರಿಕೂಟದವರು ಮಾಡಿರುವ ನಿರ್ಣಯವೇ ಸದ್ಯಕ್ಕೆ ಮಹತ್ವದ್ದು. ಮಿತ್ರರು ಜರ್ಮನಿಯನ್ನು ಛಿನ್ನ-ವಿಛಿನ್ನ ಮಾಡಿ, ಅಲ್ಲಿಯ ಜನರನ್ನು ನಿರ್ವೀರ್ಯರ ಮಾಡುವ ಪ್ರಯತ್ನ ಆರಂಭಿಸುತ್ತಾರೆಂಬುದನ್ನು ನಾನು ಕಳೆದ ವಾರವೇ ತಿಳಿಸಿದ್ದೇನೆ. ಯಾಲ್ಟಾದಲ್ಲಿ ಕೂಡಿದ ತ್ರಿಮೂರ್ತಿಗಳಾದರೂ ಅದೇ ಸಂಕಲ್ಪವನ್ನು ಜಾಹೀರಪಡಿಸಿದ್ದಾರೆ. ಜರ್ಮನಿಗೆ ಎಳ್ಳಷ್ಟು ದಯೆ ತೋರಿಸಲಿಕ್ಕೆ ಅವರ ಒಪ್ಪಿಗೆಯಿಲ್ಲ. ಜರ್ಮನರಾಷ್ಟ್ರವನ್ನು ೩ (ಫ್ರೆಂಚರು ಈ ಯೋಜನೆಯಲ್ಲಿ ಸೇರಲೊಪ್ಪಿದರೆ ೪) ಭಾಗಗಳನ್ನಾಗಿ ಮಾಡಿ ಅವನ್ನು ಮಿತ್ರರು ವಶಪಡಿಸಿಕೊಂಡು ಬರ್ಲಿನ ನಗರದಲ್ಲಿ ತಮ್ಮ ಪ್ರತಿನಿಧಿಗಳನ್ನಿಟ್ಟು ಮಿತ್ರರು ಆಳತಕ್ಕದ್ದೆಂದೂ ಕೂಟದಲ್ಲಿ ನಿರ್ಣಯವಾಗಿದೆ. ಹಿಟ್ಲರ, ಹಿಮ್ಲರ ಮೊದಲಾದ ನಾಝಿ ಪ್ರಮುಖರನ್ನಷ್ಟೇ ಅಲ್ಲ, ಸಮಸ್ತ ನಾಝಿಗಳನ್ನು ನಿರ್ನಾಮ ಮಾಡಬೇಕೆಂದು ಕೂಟದ ಸಂಕಲ್ಪವಾಗಿದೆ! ನಾಝಿಪಕ್ಷಕ್ಕೆ ಸೇರದ ಅಥವಾ ಅದರ ಅನುಯಾಯಿಯಾಗಿರದ ಜನರು ಜರ್ಮನಿಯಲ್ಲಿ ತೀರ ವಿರಳರು. ಅದರಿಂದ ಮಿತ್ರರು ಜರ್ಮನಜನಾಂಗದ ನಾಶವನ್ನೇ ಬಯಸುತ್ತಾರೆಂದು ತಿಳಿಯಬೇಕಾಗಿದೆ. ಮಿತ್ರರ ಈ ಸಂಕಲ್ಪ, ಈ ಘೋಷ ಮತ್ತು ನಿರ್ದಯತನ ನೋಡಿ, ಜರ್ಮನರು ಕೆರಳುವದು ಸ್ವಾಭಾವಿಕವಾಗಿ ಅವರು ಕೆರಳುವ ಲಕ್ಷಣಗಳೂ ಕಾಣುತ್ತವೆ. "ನಾವೀಗ ಎಲ್ಲ ನೈತಿಕ ಬಂಧನಗಳಿಂದ ಮುಕ್ತರಾಗಿದ್ದೇವೆ!" ಎಂದು ಪ್ರಮುಖ ಜರ್ಮನರು ಘೋಷಿಸಿದ್ದಾರೆ. ಈಗ ತಮ್ಮ ಜೀವದ ಹಕ್ಕು ಬಂದಾಗ ಯಾವ ನಿಯಮ-ಕಟ್ಟಳೆಗಳನ್ನು ಮನ್ನಿಸದೆ ಜರ್ಮನರು ಆತ್ಮರಕ್ಷಣೆಗಾಗಿ ರಾಕ್ಷಸೀ ಉಪಾಯಗಳನ್ನು ಯೋಜಿಸಿ ಬಳಸುವರು. ಮಿತ್ರರಿಗೆ ಹೋರಾಡಬೇಕಾದದ್ದು ಜರ್ಮನರೊಡನಲ್ಲ; ಕೆರಳಿ ಕೂಗಾಡುತ್ತಿರುವ ಹುಲಿ, ಸಿಂಹಗಳೊಡನೆ! ಮಿತ್ರರು ಅದಕ್ಕೆ ಸಿದ್ಧರಿರುವರೇ?

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಹೊನ್ನಾವರ— (೧೭-೨-೪೫) ಪೇಟೆಯಲ್ಲಿ ಚಿಲ್ಲರೆ ಹಣ ಎಷ್ಟು ಸಿಗುವದು ಕಷ್ಟವಾಗಿದೆ ಅಷ್ಟೇ ಸಿಮೆಂಟು-ಎಣ್ಣೆ ಎಲ್ಲಿಯೂ ಸಿಗುವದಿಲ್ಲ!

ಇಲ್ಲಿಯ ಅರ್ಬನ ಬೇಂಕಿಗೆ ೫೦೦೦ ಮೈಲ ಹತ್ತಿ ತರಿಸಲು ಪರವಾನೆ ಸಿಕ್ಕಿದೆ ಆದರೂ ಬೇಂಕಿನವರು ಅದನ್ನು ಕಲಸದೆ ಸುಮ್ಮನೆ ಇಟ್ಟುಕೊಂಡಿದ್ದಾರೆ. ರಾಜ್ಯದಿಂದ ಹೊಸ ಸರಕಾಗಿ ತರಿಸಿದರೆ ೧೮-೧೯ ರವಾನೆಯಾಗಿ ಮೈಲ ಗರಿಷ್ಠ ಹಂಚಲು ಪೂರೈಸುತ್ತದೆ. ಇಲ್ಲಿಯ ಓರ್ವ ವರ್ತಕರು ಬೇರೆಯವರ ಪರವಾನೆಯಿಂದ ೫ ರೀಮ ೫೦೦ ಮೈಲ ಹತ್ತಿ ತರಿಸಿ ನೋಡಿದ್ದಾರೆ. ಬೇಂಕಿನವರು ಆ ಮಾರ್ಗವನ್ನು ಅವಲಂಬಿಸದೆ ಶಿರ್ಸಿ-ಕುಮಟಾ ಮಾರ್ಗವಾಗಿ ಮೋಟಾರ ಬಂಡಿಗಳಿಂದಲೇ ಹತ್ತಿ ತರಿಸಿ ರೂ ೧೨ಕ್ಕೆ ಮೈಲ ಗರಿಷ್ಠ ಮಾರಬೇಕೆಂದು ಸುಮ್ಮನೆ ಕುಳಿತಿರಬೇಕು! ಹೊನ್ನಾವರ ತಾಲೂಕಿನ ಕ್ಲೋಟಾ ಹಂಚಲು ಅರ್ಬನ ಬೇಂಕಿಗೆ ಕೊಟ್ಟಿರುವದರಿಂದ ಬೇರೆಯವರಿಗೆ ಈಗ ಪರವಾನೆ ಸಿಗುವದಿಲ್ಲ. ಅವರಿಗೆ ಸಿಕ್ಕಿದ್ದರೆ ಜನರಿಗೆ ಅಗ್ಗದಲ್ಲಿ ಹತ್ತಿ ಸಿಗುತ್ತಿತ್ತು. ಜಿಲ್ಲಾಧಿಕಾರಿ ಬೇಂಕಿಗೆ ಸಿಕ್ಕ ಪರವಾನೆಯನ್ನು ರದ್ದುಗೊಳಿಸಿಯಾದರೂ ಅದನ್ನು ವರ್ತಕರಿಗೆ ಕೊಡಿಸುವ ವ್ಯವಸ್ಥೆ ಮಾಡಬೇಕಾಗಿ ಸೂಚಿಸುತ್ತದೆ.

ಸಳವೇಖಾನೆಯಲ್ಲಿ ಇನ್ನೂ ಸೀಧಾ-ಚೀಟಿಗಳನ್ನು ಹಂಚುತ್ತಿರುವದಿಲ್ಲ. ಸೀಧಾ ಅಂಗಡಿಯವರೇ ಒಂದು ಯಾದಿ ಮಾಡಿಟ್ಟುಕೊಂಡು ಅಕ್ಕಿ, ಸಕ್ಕರೆ ಮಾರುತ್ತಿದ್ದಾರೆ. ಎಷ್ಟೋ ಜನರಿಗೆ ಸಕ್ಕರೆಯೂ ಸಿಗುವದಿಲ್ಲವಂತೆ; ಚಿಮಣಿ ಎಣ್ಣೆಯೂ ದೊರೆಯುವದಿಲ್ಲವಂತೆ. ಬಹಳಷ್ಟು ಎಣ್ಣೆಯೂ ಸಕ್ಕರೆಯೂ ಕಪ್ಪು ಪೇಟೆಗೆ ಹೋಗುತ್ತಿರುವದೆಂದು ದೂರು ಕೇಳಿ ಬರುತ್ತಿದೆ.

ಸಿದ್ದಾಪುರ— (ತಾ. ೧೫-೨-೪೫) ಇಲ್ಲಿಯ ವಯೋವೃದ್ಧ ಲೋಕಪ್ರಿಯ ಲೋಕಸೇವಕರಾಗಿದ್ದ ರಾ॥ ರಾಮಚಂದ್ರ ನಾರಾಯಣ ಭಟಕಳಕರ ಇವರು ಕಳೆದ ತಾ. ೧೧ನೇ ರವಿವಾರ ಅಕಸ್ಮಾತ್ ಹೃತ್ಕ್ರಿಯೆ ನಿಂತು ವೈಕುಂಠವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಕಾಂಗ್ರೆಸ ಸಮಿತಿ, ಲೋಕಲ್ ಬೋರ್ಡ ಮೊದಲಾದ ಸಂಸ್ಥೆಗಳಲ್ಲಿ ಸೇರಿ ಅವರು ಕೈಲಾದ ಮಟ್ಟಿಗೆ ಜನಸೇವೆ ಮಾಡಿದ್ದರು. ಮೃತಾತ್ಮರಿಗೆ ಚಿರಶಾಂತಿ ಲಭಿಸಲಿ!

ಈ ಜಿಲ್ಲೆಯ ಇನ್ನಿತರ ತಾಲೂಕುಗಳಲ್ಲಿ ಸರಕಾರದವರು ಕೆಲಮಟ್ಟಿಗೆ ಕಂಟ್ರೋಲ ಮಾಡಿದ ಅಕ್ಕಿ ಮಾರಾಟಕ್ಕಿಟ್ಟಿರುತ್ತಾರೆಂದು ತಿಳಿಯುತ್ತದೆ. ಆದರೆ ಇಲ್ಲಿಯ ಅಧಿಕಾರಿಗಳು ಕಂಟ್ರೋಲ ಮಾಡಿದ ಕೊಪ್ಪರಿಗೆಯನ್ನೇ ಮಾರುತ್ತಾರೆ! ಅದರಲ್ಲೂ ಸರಾಸರಿ ನಾಲ್ಕೈದು ಕಾಳು ಭತ್ತ ಸಿಗುತ್ತವೆ! ಬರಗಾಲ ಬೇರೆ ಕಳೆಯುತ್ತೇವೆ! ಜಿಲ್ಲಾಧಿಕಾರಿ ಇತ್ತ ಗಮನಿಸಿ ಜನರಿಗೆ ಚಲೋ ಅಕ್ಕಿ ಕೊಡಿಸಬೇಕಾಗಿ ಅರಿಕೆಯಿದೆ

ಇನ್ನಿತರ ತಾಲೂಕುಗಳಲ್ಲಿ ಸೀಧಾ-ಅಕ್ಕಿ ಒಯ್ಯುವಾಗ ರಾಗಿಯನ್ನು ಒಯ್ಯಲೇಬೇಕಾಗಿ ಒತ್ತಾಯವಿಲ್ಲ ನಮ್ಮಲ್ಲಿ ಹಾಗಿಲ್ಲ. ರಾಗಿ ಕೊಳ್ಳದಿದ್ದವರಿಗೆ ಅಕ್ಕಿ ಸಿಗುವದಿಲ್ಲ! ಸೀಧಾ-ಅಂಗಡಿಯವರಿಗೆ ರಾಗಿಯ ಬೆಲೆ ಮೊದಲು ಕೊಡಬೇಕು; ಆ ನಂತರ ಅಕ್ಕಿಯ ಹಣ! ಸಕ್ಕರೆ ಮತ್ತು ಚಿಮಣಿ ಎಣ್ಣೆ ಕಂಡುಹಿಡಿಯಲು ಬಹಳ ಕಷ್ಟ ನಡೆಯುತ್ತದೆ. ಅವು ಯಾರಿಗೆ ಸಿಗುತ್ತವೋ ದೇವರೇ ಬಲ್ಲ! ಜಿಲ್ಲಾಧಿಕಾರಿ ಈ ಕುರಿತು ತನಿಖೆ ನಡಿಸಿ ಕಳ್ಳತನವನ್ನು ನಿರ್ಮೂಲಗೊಳಿಸಬೇಕಾಗಿ ಬೇಡಿಕೆಯಿದೆ.

ಶಿರಸಿ— (ತಾ ೧೦-೨-೪೫) ರೈತರ ಹಾಗೂ ತೋಟಿಗರ ಮೇಲೆ ಬಂದಿರುವ ಮತ್ತು ಬರಲಿರುವ ಕಷ್ಟ-ದುಃಖಗಳನ್ನು ಎದುರಿಸಲು ಇದೇ ಜಿಲ್ಲೆಯ ರೈತರು ಸಂಘಟಿತರಾಗುವದವಶ್ಯವೆಂದು ಮನವರಿಕೆಯಾದ್ದರಿಂದ ಶಿರ್ಸಿ, ಸಿದ್ದಾಪುರ, ಭಟಕಳ, ಹೊನ್ನಾವರ, ಯಲ್ಲಾಪುರ ತಾಲೂಕುಗಳ ಪ್ರಮುಖ ರೈತರು ಕಳೆದ ತಾ. ೩ನೇಗೆ ಇಲ್ಲಿಯ ಬೇಸಾಯಗಾರರ ಯೂನಿಯನ್ನಿನ ಕಚೇರಿಯಲ್ಲಿ ಒಟ್ಟುಗೂಡಿ ಸೇರಿ, ಜಿಲ್ಲಾ ಬೇಸಾಯಗಾರರ ಸಂಘವನ್ನು ಸ್ಥಾಪಿಸಿದ್ದಾರೆ. ಸಂಘದ ಘಟನೆ ಮತ್ತು ನಿಯಮಾವಳಿಯನ್ನು ತಯಾರಿಸಲು ಕೆಲವರ ಸಮಿತಿಯಾಗಿದೆ. ಈ ವರ್ಷ ರಾ॥ ಕಡವೆ ರಾಮಕೃಷ್ಣ ಹೆಗಡೆಯವರು ಸಂಘದ ಅಧ್ಯಕ್ಷರಾಗಿಯೂ ರಾ॥ ಸೋಂದಾ ವೆಂಕಟರಮಣ ಹೆಗಡೆಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಸಂಘದ ಮುಖ್ಯ ಕಚೇರಿ ಶಿರ್ಸಿಯಲ್ಲೇ ಇರುವದು. ಈ ಸಭೆಯಲ್ಲಿ ಅಡಿಕೆ-ತೆಂಗಿನ, ಭತ್ತದ ಪಸಲಿನ ಮುಂತಾದ ಪ್ರಶ್ನೆಗಳ ಚರ್ಚೆಯೂ ನಡೆದು, ಅಡಿಕೆ-ತೆಂಗಿಯ ಕಷ್ಟಗಳನ್ನು ಪರಿಹರಿಸಲು ಮಧ್ಯವರ್ತಿ ಕಾನೂನ-ಮಂಡಳದವರಿಗೂ ತಿಳಿಸಿ ಯೋಗ್ಯ ಸಹಾಯ ದೊರಕಿಸಲಿಕ್ಕೆ ಜಿಲ್ಲಾಧ್ಯಕ್ಷ ಶ್ರೀ॥ ಶಿವರಾವ ಶಾಸ್ತ್ರಿಯವರನ್ನು ಹೊಸ ದಿಲ್ಲಿಗೆ ಕಳಿಸಿಕೊಡಬೇಕೆಂತಲೂ, ಇದೇ ತಿಂಗಳಲ್ಲಿ ಈ ಜಿಲ್ಲೆಗೆ ಬರಲಿರುವ ಪ್ರಾಂತಾಧಿಪತಿಗಳ ಸಲಹೆಗಾರರಾದ ಸರ್ ಹೆನ್ರಿ ನೈಟರ ಕಡೆ ಬೇಸಾಯಗಾರರಿಗಾಗುವ ತೊಂದರೆಗಳನ್ನು ಹೇಳಿಕೊಳ್ಳುವದಕ್ಕಾಗಿ ಶ್ರೀ॥ ಸಿಲೇದಾರಯವರ ಮುಂದಾಳುತನದಲ್ಲಿ ಒಂದು ಶಿಷ್ಟಮಂಡಳ ಕಳಿಸಿಕೊಡಬೇಕೆಂತಲೂ ನಿರ್ಣಯವಾಯಿತು; ಅಡಿಕೆ ವ್ಯಾಪಾರದ ಅಭಿವೃದ್ಧಿಗಾಗಿ ಒಂದು ಮಾರ್ಕೆಟಿಂಗ (ಮಾರಾಟದ ವ್ಯವಸ್ಥೆಯ) ಬೋರ್ಡ ನಿರ್ಮಿಸುವಂತೆ ಸರಕಾರಕ್ಕೆ ಮನವಿ ಮಾಡಿಕೊಳ್ಳಬೇಕಾಗಿ ತೀರ್ಮಾನವಾಯಿತು; ಮತ್ತು ಈ ಜಿಲ್ಲೆಯಲ್ಲಿ ಭತ್ತದ ಪಸಲು ಒತ್ತಾಯದಿಂದ ಮಾರತಕ್ಕದ್ದಲ್ಲವೆಂದು ಸರಕಾರ ಪ್ರಕಟಿಸಿ ಹೊರಟಿರುತ್ತಿದ್ದಾಗ್ಯೂ, ಸ್ಥಾನಿಕ ಅಧಿಕಾರಿಗಳು ಒತ್ತಾಯದ ಖರೀದಿ ಮಾಡುತ್ತಿರುವದನ್ನೂ, ಸರಕಾರದವರು ತಯಾರಿಸಿದ ಬೆಳೆಯ ಲೆಕ್ಕ ವಸ್ತುಸ್ಥಿತಿಗೆ ವಿಸಂಗತವಿರುವದನ್ನೂ ಜಿಲ್ಲಾಧಿಕಾರದ ದೃಷ್ಟಿಗೆ ತರಲು ಸಂಘದ ಕಾರ್ಯಕಾರಿ ಮಂಡಳಕ್ಕೆ ಅಧಿಕಾರ ಕೊಡಲಾಗಿದೆ.

ಕಾರವಾರ— (ತಾ. ೧೫-೨-೪೫) ಇಲ್ಲಿಯ ಸರಕಾರಿ ಉಗ್ರಾಣದೊಳಗಿನ ಕಾರಕೂನ ರಾ॥ ಎಮ್. ವ್ಹಿ. ಶಟ್ಟಿ ಇವರು ಸರಕಾರಿ ಹಣದ ವಂಚನೆ ಮಾಡಿರುವರೆಂಬ ಆರೋಪಕ್ಕೆ ಗುರಿಯಾಗಿ ಸದ್ಯಕ್ಕೆ ಸಸ್ಪೆಂಡ ಮಾಡಲ್ಪಟ್ಟಿದ್ದಾರೆ. ಪೋಲೀಸರು ವಂಚನೆಯ ತನಿಖೆ ನಡೆಸುತ್ತಿದ್ದಾರಂತೆ!

ಇಲ್ಲಿಯ ಸರಕಾರಿ ಉಗ್ರಾಣಗಳನ್ನು ನೋಡಲಿಕ್ಕೂ, ಸೀಧಾ-ಪದ್ಧತಿ ಹೇಗೆ ನಡೆದಿದೆಂದು ಪ್ರತ್ಯಕ್ಷ ಕಾಣಲಿಕ್ಕೂ ಪ್ರಾಂತಾಧಿಪರ ಸಲಹೆಗಾರರಾದ ಸರ್ ಹೆನ್ರಿ ನೈಟರು ಮುಂದಿನ ವಾರ ಇಲ್ಲಿಗೆ ಬರುವವರಿದ್ದಾರೆ.

ಇಲ್ಲಿಯ ಹಾಗೂ ಅಂಕೋಲೆಯ ಕೆಲವು ಸ್ವಯಂಸೇವಕರು ಗೋಕರ್ಣದ ಮಹಾಶಿವರಾತ್ರಿಯ ಜಾತ್ರೆಯಲ್ಲಿ ತಿರುಗಾಡಿ ಸ್ಥಾನಬದ್ಧ ಕೈದಿಗಳ ಸಹಾಯಕ್ಕಾಗಿ ನಿಧಿಯನ್ನು ಕೂಡಿಸಿದ ವಾರ್ತೆಯಿದೆ.

The Agricultural & Industrial Bank, Ltd.,
(Incorporated in British India, Liability of Members Limited)
(ESTD: 1934)

ABRIDGED BALANCE SHEET AS ON 31-12-1944

Liabilities-	Rs	As	Ps	Assets-	Rs	As	Ps
Paid-up Capital	2,69,950	8	0	Cash & Bank ablances	4,31,136	14	7
Calls in Advance	15,700	0	0	Govt. Securities	20,26,838	7	0
Reserves	12,468	12	0	Other Investments	42,204	6	0
Deposits	27,76,94[illegible]	6	6	Loans Secured	10,19,530	2	3
Bills for Collection	1,03,821	10	0	Loans on Personal Security and Bills Discounted	5,08,371	9	1
Other Liabilities	10,41,485	14	11	Bills for collection	1,03,821	10	0
Profits' Account	16,303	15	11	Other Assets	1,05,251	8	5
Total Rs	42,27,154	9	4	Total Rs	42,27,154	9	4

Coondapoor, 27-1-1945.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ವ್ಯವಧಿಯಲ್ಲಿ ೨ ದಿನ ಚಲೋ ಚಳಿ ಬಿತ್ತು. ಈಗ ಥಂಡಿ ಕಡಿಮೆಯಾಗುತ್ತಿದೆ. ವಾರ್ಡಗಳಲ್ಲಿ ದಡಾರಿಯ ಉಪದ್ರವ ಜಾಸ್ತಿಯಾಗಿದೆ.

ಶ್ರೀ ಗೋಕರ್ಣ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಗುರುಗಳು ನಿನ್ನೆ ಮಧ್ಯಾಹ್ನ [illegible] ವಾಶಿಸಿದ್ದಾರೆ. ಬುಧವಾರ ಅಷ್ಟರಲ್ಲಿ ಮುಂದೆ ಗೋಕರ್ಣಕ್ಕೆ ದಯಮಾಡಿಸುವರು. ಗೋಕರ್ಣದಿಂದ ಮುಂದೆ ಮುಂಬೈ ಕಡೆಗೆ ದಯಮಾಡಿಸಬೇಕೆಂದು ನಿಮಂತ್ರಣ [illegible] ಮಹಾಜನರ ಶಿಷ್ಯರು ನಿನ್ನೆ ಇಲ್ಲಿ ಬಂದಿದ್ದರು.

ಇದೇ ಬರುವ ಮಾರ್ಚ ತಾ. ೧೦ರಿಂದ [illegible] ಈ ಜಿಲ್ಲೆಯ ಯಾವದೇ [illegible] ಅಪ್ಪಣೆ [illegible] ತೋರಗೆ ರಪ್ತು [illegible] ಹೊರಟಿದೆ. ಈ [illegible] ಬಾಬುವಲ-ಶಿಕ್ಷಣ [illegible]

ಕುಮಟಾ ಮ್ಯುನಿಸಿಪಾಲಿಟಿಯ [illegible] ಬರುವ ಮಾರ್ಚ ತಾ. ೧೦ಕ್ಕೆ [illegible] ಕಚೇರಿಗಳಿಗೆ [illegible] ಅಪ್ಪಣೆ ಮಾಡಿದ್ದಾರೆ.

ಮೊನ್ನೆ ಶನಿವಾರ [illegible] ಶ್ರೀ [illegible] ದೇವರ [illegible] ವಿಜೃಂಭಣೆಯಿಂದ ಜರುಗಿತು.

ಗೋಕರ್ಣದ ವೇ॥ ಪರಮೇಶ್ವರ ವಿಶ್ವೇಶ್ವರ [illegible] ಶಾಸ್ತ್ರಿಯವರಿಗೆ ಹಿಂದುಸ್ಥಾನ ಸರಕಾರವು [illegible] ಸ್ವಾಮಿಗಳ ಮತ್ತು ನಾಗರಿಕ [illegible] ಇಲಾಖೆಯಲ್ಲಿ [illegible] ಹಿಂದುಸ್ಥಾನ ಸರಕಾರದಲ್ಲಿ ಗೆಜೆಟೆಡ್ ಆಫೀಸರ್ ದರ್ಜೆಯ ಉಚ್ಚ ಅಧಿಕಾರಸ್ಥಾನದಲ್ಲಿ ನೇಮಣೂಕಿಯಾದ ಮೊದಲನೇ [illegible] ಬ್ರಾಹ್ಮಣರು ಇವರೇ ಎಂದು ಹೇಳುತ್ತಾರೆ.

ಉಪ್ಪಿನಪಟ್ಟಣದಲ್ಲಿ ಹುಲಿ ಹಾವಳಿ ಹೆಚ್ಚಾಗಿದೆ. ಊರ ಹೊರಗೆ ಮೇಯಹೋದ ದನಗಳನ್ನಷ್ಟೇ ಅಲ್ಲ, ಜನವಸತಿಯ ಮಧ್ಯದಲ್ಲಿ ಕೊಟ್ಟಿಗೆಗಳಲ್ಲಿ ಕಟ್ಟಿದ್ದ ದನಕರುಗಳನ್ನೂ ಹುಲಿಯು ಕೊಂದು ಫಲಾಹಾರ ಮಾಡುತ್ತದೆ! ಈ ವರೆಗೆ ಸಾವಿರಾರು ರೂಪಾಯಿ ಬೆಲೆಯ ದನಗಳು ಹುಲಿಪಾಲಾಗಿ ಹೋಗಿವೆ! ಸಂಜೆಯಾಗುತ್ತಲೇ ಹುಲಿಯು ಊರೊಳಗೆ ಬರುತ್ತದೆ! ಬ್ರಿಟಿಶ ಸರಕಾರದ ಹಿಂದೀ ಪ್ರಜೆಗಳು ನಿಃಶಸ್ತ್ರರೂ ನಿರುಪದ್ರವಿಗಳೂ ಇರುತ್ತಾರೆಂಬುದು ಕಾಡು ಪಶುಗಳಿಗೂ ತಿಳಿದು ಹೋಗಿದ್ದದ್ದು ಆಶ್ಚರ್ಯ!

ಈ ಜಿಲ್ಲೆಯಲ್ಲಿ ಸರಕಾರವು ಭತ್ತವನ್ನು ಒತ್ತಾಯದಿಂದ ಖರೀದಿಸುವದಿಲ್ಲವೆಂದು ಪ್ರಕಟವಾಗಿದೆಯೇನೋ ನಿಜ. ಆದರೆ ಗ್ರಾಮಾಧಿಕಾರಿಗಳು ಭತ್ತ ವಸೂಲಿಯ ಬಗ್ಗೆ ಅಜ್ಞ ರೈತರಿಗೆ ಪರಿಪರಿಯಿಂದ ಒತ್ತಾಯ ಮಾಡುತ್ತಿರುವರೆಂಬ ದೂರು ಕೇಳಬರುತ್ತಿದೆ. ಒಡೆಯರಿಗೆ ಸಲ್ಲತಕ್ಕ ಗೇಣಿಯನ್ನು ಸಲ್ಲಿಸದೆ, ಸಂಸಾರಕ್ಕೆ ಬಂದಷ್ಟು ಭತ್ತವನ್ನೂ ಇಟ್ಟುಕೊಳ್ಳದೆ, ಭೂಮಿಯಲ್ಲಿ ಬೆಳೆದ ಎಲ್ಲ ಭತ್ತವನ್ನೂ ಸರಕಾರಕ್ಕೆ ಕೊಟ್ಟರೂ ಗ್ರಾಮಾಧಿಕಾರಿಗಳು ತಯಾರಿಸಿದ ಪಟ್ಟಿಯಂತೆ ಭತ್ತ ಸರಕಾರಕ್ಕೆ ಮುಟ್ಟುವದಿಲ್ಲವಂತೆ. ಆ ಭತ್ತವೆಲ್ಲ ತಂದು ಮುಟ್ಟಿಸುವ ತನಕ ಕೊಟ್ಟ ಭತ್ತದ ಹಣ ಸಿಗಲಾರದೆಂದೂ ಆ ಭತ್ತವನ್ನು ಕೊಟ್ಟ ಮೇಲೆಯೇ ಬೇಕಾದರೆ ಸೀಧಾ-ಅಕ್ಕಿಯ ಚೀಟಿ ಕೊಡಿಸಲಾಗುವದೆಂದೂ ಗ್ರಾಮಾಧಿಕಾರಿಗಳು ನಿಗ್ರಹಿಸುತ್ತಾರಂತೆ! ಸರಕಾರದ ಒಳ-ಹುಕುಮುಗಳನ್ನನುಸರಿಸಿ ಈ ಒತ್ತಾಯ-ನಿಗ್ರಹ ನಡೆದಿದೆಯೋ ಹೇಗೆ? ಹಾಗಿದ್ದ ಪಕ್ಷದಲ್ಲಿ ಒತ್ತಾಯದ ಖರೀದಿಯಿಲ್ಲವೆಂದು ಪ್ರಕಟಣೆಗಳನ್ನು ಹೊರಡಿಸುವದೇಕೆ? ಪ್ರಕಟವಾದ ಪ್ರಕಟನೆಯಂತೆಯೇ ಸರಕಾರದ ನಿಜವಾದ ಧೋರಣವಿರುತ್ತಿದ್ದಲ್ಲಿ, ಅದಕ್ಕೆ ವಿರೋಧವಾಗಿ ವರ್ತಿಸುತ್ತಿರುವ ಕೆಳ-ಅಧಿಕಾರಿಗಳ ಅತಿರೇಕವನ್ನು ಅವರು ನಿಯಂತ್ರಿಸಬೇಕಾಗಿ ಅರಿಕೆಯದೆ.

ಹೊನ್ನಾವರ— (ತಾ. ೨೨-೨-೪೫) ಕಳೆದ ಅಕ್ಟೋಬರ ತಿಂಗಳಲ್ಲಿ ಹಳದೀಪುರ ಗ್ರಾಮ ಪಂಚಾಯಿತಿಯ ಚುನಾವಣೆಯಾಗಿ ಹೊಸ ಪಂಚರು ಆರಿಸಿ ಬಂದಿದ್ದಾರೆ. ಈ ಚುನಾವಣೆ ೩ ವರ್ಷಗಳಾಗಿವೆಯೆಂದೂ ಹೊಸ [illegible] ಪಕ್ಷದವರು ತಮ್ಮ ಸೀಧಾ [illegible] ಪರವಾನಗಿಯನ್ನು ಊರೊಳಗಿನ ಕೆಲ [illegible] ಕೊಡುತ್ತಾರೆಂತಲೂ ಸುದ್ದಿ ಕೇಳಿ ಬರುತ್ತಿದೆ. ಹಿಂದಿನ [illegible] ವ್ಯವಸ್ಥೆಯನ್ನು ಬದಲಿಸಲು ಮಾಡುವ ಆಲೋಚನೆ ಅವರಿಗೆ ಯಾಕೆ ಬಂದಿರುವದೋ ತಿಳಿಯದು.

[illegible] ಯಲ್ಲಿ [illegible] ಬಾಧೆ ಅಧಿಕವಾಗಿದೆ. [illegible] ವಾಡಬೇಕೆಂದು [illegible] ಅಧಿಕಾರಿಗಳ [illegible] ಮಾಡುತ್ತಾರೆ.

[illegible] ಕಾರಾಖಾನೆ [illegible] ಸರಕಾರದ [illegible] ವ್ಯವಸ್ಥೆ ಮಾಡಬೇಕೆಂದು [illegible] ನಿರೀಕ್ಷಿಸುತ್ತಿದ್ದಾರೆ.

[illegible] ಗ್ರಾಮದಲ್ಲಿ ಬೋರ್ಡ ಶಾಲೆ ೧, ಗ್ರಾಂಟ ಶಾಲೆ [illegible] ಎರಡೂ ಶಾಲೆಗಳಲ್ಲಿ [illegible] ವಿದ್ಯಾರ್ಥಿಗಳಿದ್ದಾರೆ. ಈ ಎರಡೂ ಶಾಲೆಗಳನ್ನು ಒಟ್ಟುಗೂಡಿಸಿ ಊರ ಮಧ್ಯಭಾಗದಲ್ಲಿ [illegible] ಕಲಿಸುವ ಶಾಲೆಯನ್ನು ತೆರೆಯಬೇಕೆಂದು [illegible] ಹಳ್ಳಿಯವರ ಪ್ರಯತ್ನ ನಡೆದಿದೆ. ಆ [illegible] ಯಲ್ಲಿ ೪ನೇ ಇಯತ್ತೆಯ ಮುಂದೆ ಕಲಿಸುವ ಏರ್ಪಾಟು ಒಂದೂ ಶಾಲೆಯಿಲ್ಲ. ಆದರಿಂದ ಅನೇಕ ಹುಡುಗರು ಮುಂದೆ ಕಲಿಯದೆ ಶಾಲೆ ಬಿಡುತ್ತಾರೆ. ಕಲಿಯಬಯಸುವವರಾದರೂ ಹೊನ್ನಾವರದಂಥ ಪಟ್ಟಣಗಳಿಗೆ ಹೋಗಿ ಕಷ್ಟಪಟ್ಟು ಕಲಿಯಬೇಕಾಗುತ್ತದೆ.

ಸಿದ್ದಾಪುರ— (ತಾ. ೨೦-೨-೪೫) ಅಣಲೇಬೈಲ ಗ್ರಾಮದ ಹೇರೂರ ಮಜರೆಯಲ್ಲಿರುವ ರಾಮಚಂದ್ರ ನೆಂಬವನ ಮನೆಗೆ ಕಳೆದ ಶನಿವಾರ ಮಧ್ಯಾಹ್ನ ಬೆಂಕಿ ಬಿದ್ದು ಮನೆ ಸುಟ್ಟು ಹೋಯಿತೆಂದೂ ಆ ಮನೆಯ ಅಟ್ಟದಲ್ಲಿದ್ದ ಅಡಕೆ ತೆರಿಗೆ ಅಧಿಕಾರಿಗಳ ಕಚೇರಿಯೊಳಗಿನ ಪತ್ರಗಳು ಬೂದಿಯಾಗಿ ಹೋಗಿವೆಯೆಂದೂ ಸುದ್ದಿಯಿದೆ.

ಯಲ್ಲಾಪುರ— ೬ ಇ॥ [illegible] ಹೆಚ್ಚಿಗೆ ಅಕ್ಕಿ ಶಿಲ್ಲಕ್ಕಿದ್ದವರು ಆ ಹೆಚ್ಚಿನ ಅಕ್ಕಿಯನ್ನು ಸರಕಾರಕ್ಕೆ ಮಾರತಕ್ಕದ್ದೆಂದು ಅಧಿಕಾರಿಗಳು ನಿಗ್ರಹಿಸುತ್ತಾರೆಂದೂ ಯಲ್ಲಾಪುರದೊಳಗಿನ ಸರಕಾರಿ ಉಗ್ರಾಣಗಳೊಳಗಿಂದ ಹೇರಳ ಭತ್ತ ನಾಶವಾಗಿದೆಯೆಂದೂ ತಾ. ೧-೧-೪೫ರ "ವೃತ್ತ"ದಲ್ಲಿ ಪ್ರಕಟವಾದ ವಾರ್ತೆಗಳು ನಿರಾಧಾರವಿರುತ್ತವೆಂದು ತಮ್ಮ ತನಿಖೆಯಲ್ಲಿ ಕಂಡುಬಂದಿದೆಯಾಗಿ ಜಿಲ್ಲಾಧಿಪರು ತಿಳಿಸುತ್ತಾರೆ.

ಕಾರವಾರ— (ತಾ. ೧೫-೨-೧೯೪೫) ನಿನ್ನೆ ಹೊಸ ಜಿಲ್ಲಾಧಿಪರಾದ ರಾ॥ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಹಾರ ಸಲಹಾ ಸಮಿತಿಯ ಸಭೆ ಕೂಡಿತ್ತು. ಈಗ ಸರಕಾರದ ಸಂಗ್ರಹದಲ್ಲಿರುವ ಅಕ್ಕಿ

(೧ನೇ ಪಾನಿನ ಮೇಲೆ ಮುಂದುವರಿಸಿದೆ.)

ಪಾಲಕರಲ್ಲಿ ವಿನಂತಿ.

ಮುಂದಿನ ಕಲಿಕಾ ವರ್ಷ [illegible] ಬೋರ್ಡಿಂಗದಲ್ಲಿ [illegible] ಹುಡುಗರ [illegible] ಜೂನ ೩೧ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ [illegible]

ಕುಮಟಾ, | [illegible]
ತಾ. ೧೪-೨-೧೯೪೫ | ಶ್ರೀ [illegible]

ಜಾಹೀರ ನೋಟೀಸು.

ಸಿದ್ಧಾಪುರ ತಾಲೂಕ ಕವಲಕೊಪ್ಪದಲ್ಲಿರುವ ರಾಮಚಂದ್ರ ವೆಂಕಟ್ರಮಣ ಹೆಗಡೆ ಇವರಿಗೆ ಮುತ್ತಿಗೆಯಲ್ಲಿರುವ ರೇಣುಕಾಬಾಯಿ ಕೊಡುವ ಉತ್ತರವಜಾ ನೋಟೀಸು ಏನಂದರೆ:—

ನೀವು ನನ್ನನ್ನು ೬ ವರುಷಗಳ ಹಿಂದೆ ಲಗ್ನ ಮಾಡಿಕೊಂಡು ೨೦ ದಿನದಿಂದ ನೀವು ನನಗೆ ಪದೇ ಪದೇ ಬೈದು, ಹೊಡೆದು, ಕ್ರೂರತನದಿಂದ ನಡಿಸಿದಾಗ್ಯೂ ಟಾಳ್ಮೆ ಮಾಡಿಕೊಂಡು ಬಂದೆ. ಆದರೆ ತಾ. ೧೭-೧-೪೫ನೇಗೆ ನೀವು ನನಗೆ ಅತಿಶಯ ಹೊಡೆದು-ಬಡೆದದ್ದರಿಂದ ಸಹಿಸಲಾರದೆ ನಾನು ತವರ ಮನೆಗೆ ಬಂದಿರುತ್ತೇನೆ. ನಿಮ್ಮ ಸಂಗಡ ಬಾಳುವದು ಅಸಾಧ್ಯ. ನಿಮಗೆ ಗೃಹಸ್ಥರು ಎಷ್ಟೇ ಹಿತಬೋಧನೆ ಮಾಡಿದರೂ ಲಕ್ಷಿಸದೆ ನೀವು ನಿಮ್ಮ ಚಿಕ್ಕ ತಾಯಿಯ [illegible] ದುರ್ಬೋಧನೆಗೆ ಒಳಪಟ್ಟು ನನಗೆ ಪೀಡಿಸುತ್ತಾ ಬಂದಿರಿ. ಲಗ್ನಕಾಲದಲ್ಲಿ ಯಾ ಅನಂತರ ನೀವು ನನಗೆ ವಸ್ತ್ರ ಡಾಗಿನ ಹಾಕಿದ್ದು ಇಲ್ಲ. ನಿಮ್ಮ ನೋಟೀಸಿನಲ್ಲಿ ಕಾಣಿಸಿದಂತೆ ನಾನು ಯಾವದೇ ಡಾಗಿನ ಅಪಹರಿಸಿಕೊಂಡು ಬಂದಿದ್ದಿಲ್ಲ. ನೀವು ನನಗೆ ನಿಮ್ಮ ಸ್ವಂತ ಹಾಗೂ ಕುಟುಂಬದ ಸ್ಥಾವರಾಸ್ತಿಗಳ ಉತ್ಪನ್ನದಿಂದ ತಿಂಗಳು ೧೫ ರೂ. ಪ್ರಕಾರ ಪೋಟಗಿ ಕೊಡತಕ್ಕದ್ದು ಇದ್ದು [illegible] ಕಾರಣ ನಿಮ್ಮ ಸ್ಥಾವರಾಸ್ತಿಗಳನ್ನು ನನಗೆ [illegible] ಬಗ್ಗೆ ನೀವು ಪರಾಧೀನ ಮಾಡಕೂಡದೆಂದೂ ಯಾರೂ ನಿಮ್ಮಿಂದ ಪರಾಧೀನ ಮಾಡಿಸಿಕೊಳ್ಳಕೂಡದೆಂದೂ, ಕೊಂಡಲ್ಲಿ ಆ ಪರಾಧೀನತೆಗಳು ನನ್ನನ್ನು ಬಾಧಿಸಲಾರವೆಂದೂ ಈ ಮೂಲಕ ಜಾಹೀರಪಡಿಸುತ್ತೇನೆ. ತಾ. ೨೦-೨-೪೫.

● ಈ ಎ. ಟಿ. ಗುರ್ಜರ ರೇಣುಕಾಬಾಯಿ ಇವಳದು.

ಕಾಂಪೀನ ಕಡೆಗೆ ||ಸದ್ಗುರು ಪ್ರಸನ್ನ|| ಲಕ್ಷ ಕೊಡಿರಿ.

ಕರ್ಣಾಟಕದಲ್ಲಿ ಅರುಣೋದಯ

ರಾಧಾ-ಸ್ವಾಮಿ ದಯಾಳರ ದಯೆ,
ರಾಧಾಸ್ವಾಮಿಯ ಸಹಾಯ

ಭಾವಿಕ ಜನರಿಗೆ ವಿನಂತಿ— ಪರಮೇಶ್ವರನಿಗೆ ಮುಟ್ಟುವ ಸುಲಭ ಉಪಾಯ— ಈ ವಿಷಯದ ಮೇಲೆ ಪಂಜಾಬ ಇಲಾಖಾ, ಜಿಲ್ಹಾ ಅಮೃತಸರ, ಬ್ಯಾಸ ನಿವಾಸಿಗಳಾದ ಪರಮ ಸಂತ ಹಜೂರ ಸದ್ಗುರು ಬಾಬಾ ಸಾವನಸಿಂಗಜಿ ಮಹಾರಾಜರ ಆಜ್ಞಾಧಾರಕರಾದ ಗುರುಭಕ್ತ ಶಿರೋಮಣಿ **ಪರಮಹಂಸ ಬಾಬಾ ಸೋಮನಾಥಜಿಯವರು** ಗುರುಭಕ್ತಿ, ನಾಮ-ಮಹಾತ್ಮ್ಯೆಯನ್ನು ಸಂತಸಂಗ-ದ್ವಾರಾ ಬೋಧಿಸುವ ಸಲುವಾಗಿ ಬರುವವರಿದ್ದಾರೆ. ಮುಮುಕ್ಷು ಜನರು ಸುಸಂಧಿಯ ಲಾಭವನ್ನು ಕಳಕೊಳ್ಳಬಾರದು.

ಸಜ್ಜನರ ಕೃಪಾಭಿಲಾಷಿ-[illegible] ತುಚ್ಛ ಸೇವಕ,
ಗಂಗಾಧರ ನಾರಾಯಣ ಕಾನಭಾಗ ಧಾರೇಶ್ವರ

ಕನ್ನಡ ಎಟ್ಲಾಸ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಯುದ್ಧ-ವಾರ್ತಾಕ್ಷೇತ್ರಗಳ ಸ್ಥಳ-ಪರಿಚಯ ಮಾಡಿಕೊಡುವ ಅಪೂರ್ವ ಭೂಪಟ. ಬೆಲೆ ರೂ. ೧-೮-೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಜಾಹೀರ ನೋಟೀಸು.

ನಿಶಾನಿ ೬೧

ದಾವೆಯನ್ನು ನಿರ್ಣಯಿಸಲಿಕ್ಕೆ
ಸಮನ್ಸು

ಕುಮಟಾ ಸಬೊರ್ಡಿನೇಟ ಜಜ್ಜ ಕೋರ್ಟಿನಲ್ಲಿ.
ಮುಕ್ಕಾಮು ಕುಮಟಾ ಇಲ್ಲಿ. ಮೂಲ ನಂ. ೪೦೨—೧೯೪೪.

(೧) ಶ್ರೀಧರ ಕೃಷ್ಣ ಭಟ್ಟ, ಮೈನರ ವಾರಿಸದಾರ, ತನ್ನ [illegible] ನಾತೆಯಿಂದ—
(೨) ಮೆನೇಜರ: ಕೃಷ್ಣ ಶ್ರೀಧರ ಭಟ್ಟ, ವಯ ೩೬, ಜಾತಿ ಹವ್ಯಕ ಬ್ರಾಹ್ಮಣ, ಕಸಬು ವೈದಿಕ ವೃತ್ತಿ, ಸಾಕಿನ ಕುಮಟಾ ತಾಲೂಕ ಧಾರೇಶ್ವರ. } ವಾದಿಗಳು

— ವಿರುದ್ಧ — ವಕೀಲ ಮಿ॥ ಎಸ್. ಜಿ. ಕಾನಭಾಗ.

(೧) ಮೆನೇಜರ ರಾಮಚಂದ್ರ ನಾಗಪ್ಪ ಶೆಟ್ಟಿ ಹೊಸಮನಿ, ವಯ ೪೫, ಜಾತಿ ವೈಶ್ಯ ಬ್ರಾಹ್ಮಣ, [illegible] ಕಸಬು, ಸಾ॥ ಕುಮಟಾ ತಾಲೂಕ ಹೊಸಕೇರಿ, ಹಾಲಿ ಮೈಸೂರ ಸಂಸ್ಥಾನದ ಹೊಸಪೇಟೆ ಪೈಕಿ [illegible] } ಪ್ರತಿವಾದಿಯು
ದಾವಾ ರೂ. ೫೫—೬—೯.

ಸದರಿ ಪ್ರತಿವಾದಿ ರಾಮಚಂದ್ರ ನಾಗಪ್ಪ ಶೆಟ್ಟಿ ಇವರಿಗೆ— ವಾದಿಯು ತನ್ನ ಮಾಲ್ಕಿಯ ಕುಮಟಾ ತಾಲೂಕ ಹೊಸಕೇರಿ ಗ್ರಾಮದ ಸ. ನಂ ೬೦ ಕ್ಷೇತ್ರ ೬-೧೫-೦ ಆಕಾರ ರೂಪಾಯಿ ೪-೧೨-೦ [illegible] ಸ್ಥಳದ ಪೈಕಿ ಕ್ಷೇತ್ರ ೦-೬-೦ ದಲ್ಲಿ ಗುಂಟೆ ೨೪ ಮತ್ತು ಕ್ಷೇತ್ರ ಗುಂಟೆ ೬ರಲ್ಲಿ ೦-೨-೫ [illegible] ಗುಂಟೆ [illegible] ಅಕ್ಕಿ ಖಂಡಿ [illegible] ರಂತೆ ಗೇಣಿಗೆ ಇರುವಲ್ಲಿ ನಿಶ್ಚಯಿಸಿದ್ದು, [illegible] ಬಾಕಿ [illegible] ಅಕ್ಕಿ ಖಂಡಿ ೬॥ ರ ಬೆಲೆ ರೂ. ೫೫-೬-೯ರ ವಸೂಲಿಯ ಬಗ್ಗೆ ದಾವೆ ಮಾಡಿದ್ದು [illegible] ವಿಚಾರ ತಾ. ೫-೩-೧೯೪೫ನೇ ದಿವಸ ಬೆಳಗಿನ ೧೧ ಘಂಟೆಗೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. [illegible] ಆ ದಿವಸ ೧೧ನೇ ಪ್ರತಿವಾದಿಯು ಸ್ವತಃ ಇಲ್ಲವೆ ದಾವೆಯ ವಿಷಯ [illegible] ಕೋರ್ಟಿನ [illegible] ತನ್ನ ಹೇಳಿಕೆಯನ್ನು ಅರಿಕೆ ಮಾಡಿಕೊಳ್ಳ[illegible]

ತಪ್ಪಿದ್ದಲ್ಲಿ ಸದರ [illegible] ಕೋರ್ಟಿನವರು ನೇಮಿಸಲ್ಪಡುವ ಮುಂದಿನ ತಾರೀಖಿಗೆ ಎಕ್ಸ್-ಪಾರ್ಟಿ [illegible] ಕೊಡುವರು. ತಿಳಿಯುವದು.

ಈ ಕೋರ್ಟಿನ [illegible] ೧೯೪೫ನೇ ದಿವಸ ತಮ್ಮ ಸಹಿ ಮಾಡಿ ಮತ್ತು ಕೋರ್ಟಿನ ಶಿಕ್ಕಾ ಮಾಡಿ ಕೊಡಲ್ಪಟ್ಟಿದೆ.

[illegible]

H. S. Baindur.
ಕ್ಲಾರ್ಕ ಆಫ್ ದಿ ಕೋರ್ಟ, ಸಬಜಜ್ಜ ಕೋರ್ಟ, ಕುಮಟಾ

ಇದನ್ನು [illegible] ಕುಮಟಾದ "ಸ್ಟಾರ ಆಫ್ ಕೆನರಾ ಪ್ರೆಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತೆರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು.

Reg. No. B 1270. Monday, 5th March, 1945

ಕಾನಡಾವೃತ್ತ.

ವರ್ಷ ೨೬.] THE KANARA NEWS. [ಸಂಚಿಕೆ ೩೫

ಕುಮಟಾ:- ಸೋಮವಾರ, ತಾ. ೫ ನೆಯ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಪೆಶಲ್ ಪ್ರತಿ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ನಿಶ್ಚಿತ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಯುದ್ಧ ಬೇಗ ಮುಗಿಯದು!

(ನಿರೀಕ್ಷಕನು ಬರೆದುದು.)

ಈಗ ನಡೆದಿರುವ ವಿಶ್ವಯುದ್ಧವು ಬೇಗನೇ ಮುಗಿಯುವದೆಂಬ ಆಶೆ ಹಿಡಿದವರಿಗೆ ಕಳೆದ ಗುರುವಾರ ಪ್ರಕಟವಾದ ಹಿಂದುಸ್ಥಾನ ಸರಕಾರದ ಮುಂದಿನ ವರ್ಷದ (೧೯೪೫-೪೬) ಆಯ-ವ್ಯಯಗಳ ಅಂದಾಜ-ಪತ್ರಿಕೆ ನೋಡಿ ನಿರಾಶೆಯಾಗದೇ ಇರದು. ಚಾಲೂ ವರ್ಷದಲ್ಲಿ ಹಿಂದುಸ್ಥಾನ-ಸರಕಾರದ ಯುದ್ಧ ವೆಚ್ಚ, ಸಂರಕ್ಷಣ ವೆಚ್ಚ ಮತ್ತು ಇನ್ನಿತರ ವೆಚ್ಚ ಕೂಡಿ ಒಟ್ಟು ವೆಚ್ಚ ೩೬೩ ಕೋಟಿ ರೂಪಾಯಿ ಬರುವದೆಂದು ಹೋದ ವರ್ಷ ಅರ್ಥ-ಸಚಿವರು ಅಂದಾಜು ಮಾಡಿದ್ದರು. ಅದು ಈಗ ೫೧೨ ಕೋಟಿ ರೂಪಾಯಿಗಳಷ್ಟು ಬರುವದೆಂದು ದುರುಸ್ತ ಅಂದಾಜು ಮಾಡಿದ್ದಾರೆ. ವಿಷಯಾಂತರವಾಗಿ ಪ್ರತ್ಯಕ್ಷ ಲೆಕ್ಕ ಮಾಡಿ ನೋಡಿದಾಗ ಅದು ೫೫೦ ಕೋಟಿ ರೂಪಾಯಿಗಳಿಗೆ ಮುಟ್ಟಿದರೂ ಮುಟ್ಟಬಹುದು! ಆಗಾಮಿ ವರ್ಷದಲ್ಲಿ ತಮ್ಮ ಅಂದಾಜು ಬಹಳ ತಪ್ಪಬಾರದೆಂಬ ವಿಚಾರದಿಂದಲೋ ಏನೋ ಸರಕಾರದ ಒಟ್ಟು ವೆಚ್ಚ ೫೧೭ ಕೋಟಿ ರೂಪಾಯಿ ಬರುವದಾಗಿಯೂ ಒಟ್ಟು ಉತ್ಪನ್ನ ೩೬೨ ಕೋಟಿ ರೂಪಾಯಿ ಸಿಗಬಹುದೆಂತಲೂ, ೮ ಕೋಟಿ ರೂಪಾಯಿಗಳ ಹೊಸ ಕರಗಳನ್ನು ಹೇರಿದಾಗ್ಯೂ ಒಟ್ಟು ೧೫೫ ಕೋಟಿ ರೂ.ಗಳ ಕೊರತೆ ಬೀಳುವದೆಂತಲೂ ಹಿಂದುಸ್ಥಾನ ಅರ್ಥ ಮಂತ್ರಿಗಳು ಅಂದಾಜು ಮಾಡಿದ್ದಾರೆ. ಚಾಲೂ ವರ್ಷದ ಬಗ್ಗೆ ಅವರು ಮಾಡಿದ ಅಂದಾಜಿನ ಗತಿಯೇ ಮುಂದಿನ ವರ್ಷದ ಅಂದಾಜಿನದಾಗಲಿಕ್ಕಿಲ್ಲೆಂದು ನಿಶ್ಚಯ ಹೇಳುವವರಾರು? ಸೈನ್ಯ ಇಲಾಖೆಯು ಈ ವರ್ಷದ ವೆಚ್ಚ ೪೫೬ ಕೋಟಿ ರೂಪಾಯಿ (ಅಂದರೆ ಯುದ್ಧ-ಪೂರ್ವ ಕಾಲದ ವೆಚ್ಚದ ೧೧ ಪಟ್ಟು ವೆಚ್ಚ!) ಬರುವದೆಂದು ಹೊಸ ಅಂದಾಜುಂಟು, ಮತ್ತು ಮುಂದಿನ ವರ್ಷದ ವೆಚ್ಚ ೪೧೧ ಕೋಟಿ ರೂ. ಬರುವದಾಗಿ ಹೇಳಲಾಗುತ್ತಿದೆ. ಯುದ್ಧ ಬೇಗನೇ ಮುಗಿಯುವದೆಂದು ಹಿಂದುಸ್ಥಾನ ಸರಕಾರಕ್ಕೆ ಅನಿಸುತ್ತಿದ್ದರೆ ಸೈನ್ಯ ಇಲಾಖೆಯ ವೆಚ್ಚದ ಅಂದಾಜನ್ನು ಅವರು ಇಷ್ಟು ಮಟ್ಟಿಗೆ ನಿಲಿಸುತ್ತಿದ್ದಿಲ್ಲ. ಯುರೋಪ ಖಂಡದೊಳಗಿನ ಪಶ್ಚಿಮ ರಣರಂಗದಲ್ಲಿ ಬ್ರಿಟಿಶ ಸೇನೆಗಳ ದಳಪತಿಗಳಾದ ಸೇ|| ಮೊಂಟಗೊಮೆರಿಯವರೂ ಯುದ್ಧ ಬೇಗ ಮುಗಿಯುವದೆಂಬ ಭರವಸೆ ತೋರಿಸುವದಿಲ್ಲ. ಅಮೇರಿಕೆಯವರಷ್ಟೇ ಯುರೋಪ ಯುದ್ಧವು ಇದೇ ಬರುವ ಏಪ್ರಿಲ-ಮೇ ತಿಂಗಳೊಳಗೆ ಮುಗಿಯುವದೆಂಬ ಆಶೆ ತಳೆದಿದ್ದಾರೆ. ಯುದ್ಧ ಮಾಡಿ ಬಳಲಿದವರೂ ಯುದ್ಧ ಬೇಗ ಮುಗಿದರೆ ಸಾಕೆಂದು ಹಾರೈಸುವವರೂ ಬೇಗನೆ ಆ ಆಶೆ ತಳೆಯುವದು ಸ್ವಾಭಾವಿಕ. ಆದರೆ ಪ್ರತ್ಯಕ್ಷ ರಣರಂಗಗಳ ಸ್ಥಿತಿ ನೋಡಿದಲ್ಲಿ ಈ ಆಶೆ ಸಫಲವಾಗುವ ಲಕ್ಷಣವೊಂದೂ ತೋರುವದಿಲ್ಲ. ಪಶ್ಚಿಮ ರಣಾಂಗಣದಲ್ಲಿ ಮಿತ್ರರು ಕೊಂಚ ಪ್ರಗತಿ ಮಾಡುತ್ತಿದ್ದಾರೇನೋ ನಿಜ. [illegible] ಜರ್ಮನರ ಪ್ರತಿಭಟನೆಯೂ ಮೊದಲಿನಷ್ಟೇ [illegible] ಪೂರ್ವ ರಣರಂಗದಲ್ಲಿ ರಶ್ಯರ [illegible] ಅಲ್ಪಸ್ವಲ್ಪ ತಡೆಯುಂಟಾಗಿದೆ. ಜರ್ಮನ [illegible] ಮಾರ್ಗ [illegible] ಬಂದಿತ್ತಷ್ಟೇ [illegible] ಈ ರಣರಂಗದಲ್ಲಿ ಯಾರ ಕೈ ಮೇಲಾಗಿದೆ [illegible] ಯಾರು ಮುನ್ನುಗ್ಗುತ್ತಿದ್ದಾರೆ ಎಂಬ ಸುದ್ದಿಗಳು [illegible] ಬರುವದಿಲ್ಲ! ಹಿಟ್ಲರನು ಸ್ವತಃ ಈ ರಣರಂಗದಲ್ಲಿ [illegible]ಗಳನ್ನು ಚಲಿಸುತ್ತಿರಬೇಕು. ಅವನು ಹಾರಿಹೋಗಿ [illegible] ಅಲ್ಲಿನ ಶರಣುಹೋಗುವನೆಂದು ಮಿತ್ರರು ಕಲ್ಪಿಸಿಕೊಂಡರು. [illegible]ದ ತಾ. ೨೪ಕ್ಕೆ ನಾಝಿ ಪಕ್ಷದ ಹುಟ್ಟು ಹಬ್ಬದ ಕಾಲಕ್ಕೆ ಹಿಟ್ಲರನು ಒಂದು ಭಾಷಣ ಬರೆದು ಕಳಿಸಿದ್ದನು. ಅದನ್ನು ಓದಿದ ಯಾ ಕೇಳಿದ ಜರ್ಮನೇತರರೂ ಸ್ಫುರಣಗೊಳ್ಳಬಹುದು. ಸ್ವತಃ ಜರ್ಮನರ ಮೇಲೆ ಎಷ್ಟು ಪರಿಣಾಮವಾಗಿರಬಹುದೆಂದು ಇದರ ಮೇಲಿಂದ ಊಹಿಸಿರಿ. 'ರಾಷ್ಟ್ರಕ್ಕೆ [illegible] ಎಷ್ಟು ಅಗತ್ಯವುಂಟೋ ಅಷ್ಟೇ ನನ್ನ ಬದುಕಿನ ಬೆಲೆ...... ನನ್ನದೆಂಬುದೆಲ್ಲ ರಾಷ್ಟ್ರದ್ದಾಗಿರುತ್ತದೆ. ನನ್ನ ವೈಯಕ್ತಿಕ ಸೊತ್ತು ಯಾವದೂ ಇಲ್ಲ" ಎಂಬ ತತ್ವ ನುಡಿದು, ಶರಣಾಗಬೇಡಿರೆಂದೂ, ಹೇಡಿತನ ಪ್ರದರ್ಶಿಸುವವರನ್ನು [illegible] ಸಕಲ ಜರ್ಮನರಿಗೆ ಎಚ್ಚರಿಕೆ ಕೊಟ್ಟು, ಕೊನೆಗೆ ಜರ್ಮನಿಗೇ ವಿಜಯ ಸಿಗುವದೆಂದು ಸ್ವಜನರಿಗೆ ಆಶ್ವಾಸನೆ ಕೊಟ್ಟಿರುತ್ತಾನೆ. ಕಳೆದ ಬುಧವಾರ ಹಿಟ್ಲರನ ಪ್ರಚಾರ-ಮಂತ್ರಿ ಡಾ|| ಗೊಬೆಲ್ಸನಂತೂ "ಶರಣು ಹೋಗುವ ಬದಲು ನಾವು ಮರಣವನ್ನಾಲಿಂಗಿಸುವೆವೆಂದು" ಆಕಾಶವಾಣಿಯ ಮೂಲಕ ಸಾರಿದ್ದಾನೆ. ಬ್ರಿಟಿಶ-ಅಮೇರಿಕೆಯವರ ಮೇಲೆ ಅವನು ವಿಷಕಾರುತ್ತಾನೆ. ಬೇಗನೇ ಅಟ್ಲಾಂಟಿಕ ಮಹಾಸಾಗರದಲ್ಲಿ ಜರ್ಮನರು ಯು-ಬೋಟುಗಳ ಹಾವಳಿಯನ್ನು ಪ್ರಾರಂಭಿಸುವರೆಂತಲೂ, ಬ್ರಿಟನ್ನಿನ ಮೇಲೆ ಆಕಾಶಬಾಣಗಳ ಮಳೆಗರೆದು ಬ್ರಿಟಿಶರಿಗೆ ತ್ರಾಹಿ, ತ್ರಾಹಿ ಎಂದು ಹೇಳಿಸಬಲ್ಲರೆಂದೂ ಅವನು ಬೆದರಿಕೆಯನ್ನೂ ಕೊಟ್ಟಿದ್ದಾನೆ. ಸೀರಿಯಾ, ಈಜಿಪ್ತ, ತುರ್ಕಸ್ಥಾನ ಮೊದಲಾದ ದೇಶಗಳೆಲ್ಲ ಜರ್ಮನಿಯ ವಿರುದ್ಧ ಯುದ್ಧ ಸಾರಿ, ಇದೇ ಮೇ ತಿಂಗಳಲ್ಲಿ (ಅಮೇರಿಕೆಯೊಳಗಿನ) ಸಾನಫ್ರಾನ್ಸಿಸ್ಕೋ ನಗರದಲ್ಲಿ ಕೂಡಲಿರುವ ಮಿತ್ರ-ಪಕ್ಷೀಯ ರಾಷ್ಟ್ರಗಳ ಪರಿಷತ್ತಿನಲ್ಲಿ ಭಾಗ ವಹಿಸಲು ಸಿದ್ಧವಾಗಿವೆ. ವಿಜಯೋತ್ತರ ಕಾಲದಲ್ಲಿ ಮಿತ್ರರು ಹಂಚಿಕೊಳ್ಳುವ ಪಂಚಕಜ್ಜಾಯದಲ್ಲಿ ತಮಗೂ ಒಂದು ಪಾಲು ಸಿಗಲೆಂಬ ಹವಣಿಕೆಯಿಂದಲೇ ಈ ರಾಷ್ಟ್ರಗಳು ಯುದ್ಧ ಸಾರಬೇಕೆಂದು ತೋರುತ್ತದೆ, ಜರ್ಮನಿಯ ಬಗ್ಗೆ ತಿರಸ್ಕಾರವಿಟ್ಟು ಇಲ್ಲವೆ ದ್ವೇಷ ತಾಳಿ ಅವು ಯುದ್ಧ ಸಾರಿವೆಂದು ನಾ ಹೇಳಲಾರೆ. ಕಳೆದ ವಾರ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಮುಖ್ಯ ಮಂತ್ರಿ ಚರ್ಚಿಲ್ಲರು ಯಾಲ್ಟಾ ಕೂಟದ ನಿರ್ಣಯಗಳನ್ನು ಸಮರ್ಥಿಸಿ ಮಾಡಿದ ಭಾಷಣದಿಂದ ಸಂತುಷ್ಟವಾಗಿ ಪಾರ್ಲಿಮೆಂಟು ಅವರಲ್ಲಿ ಪೂರ್ಣ ವಿಶ್ವಾಸ ಪ್ರದರ್ಶಿಸಿದಾಗ್ಯೂ, ಬ್ರಿಟಿಶರಿಗೆ ಅವರ ನಡತೆಯಿಂದ ಸಮಾಧಾನವಾಗಿದೆಂದು ಹೇಳಲಾಗುವಂತಿಲ್ಲ. ಯಾಲ್ಟಾ ಕೂಟದ ನಿರ್ಣಯದಿಂದ ಪೋಲಂಡದವರಿಗೆ ನಿರಾಶೆಯಾಗಿದೆ. ಮಿತ್ರರ ತ್ರಿಕೂಟವು ಪೋಲಂಡವನ್ನು ರಶ್ಯಕ್ಕೆ ಬಲಿ ಕೊಟ್ಟಿದ್ದಾರೆಂದೇ ಹೇಳಬೇಕು. ಪೋಲಂಡದವರು ಜರ್ಮನರಿಗಿಂತ ರಶ್ಯರನ್ನೇ ಹೆಚ್ಚಿಗೆ ದ್ವೇಷಿಸುತ್ತಾರೆಂಬುದು ಲಂಡನ್ನಿನ ಸರಕಾರದ ಧೋರಣೆಯಿಂದ ಪೋಲಂಡ ಬಿಟ್ಟು ಲಂಡನ್ನಿಗೆ ಓಡಿಬಂದ ನೌಕಾ ಎಂಬ ಸೇನಾನಾಯಕರು 'ಸ್ಪೆಕ್ಟೇಟರ' ಪತ್ರದಲ್ಲಿ ಬರೆದಿದ್ದಾರೆ. ಅದರಿಂದ ಪೋಲಂಡದಲ್ಲಿದ್ದ ಇಲ್ಲವೆ ಪೋಲಂಡ ದಾಟಿ ಜರ್ಮನಿಯಲ್ಲಿ ನುಗ್ಗಿದ ರಶ್ಯರು ತಪ್ಪಿತಸ್ಥರಾಗುವ ಪ್ರಸಂಗವುಂಟು. ಪೂರ್ವಾಂತ್ಯದಲ್ಲಿಯೂ ಒಂದು ಮಹತ್ವದ ಸ್ಥಿತ್ಯಂತರವಾಗಿದೆ. ಚಾಂಗ-ಕೈ-ಶೇಕರು ಚೀನಿ ಕಮ್ಯುನಿಸ್ಟರ ವಿರುದ್ಧ ಯುದ್ಧ ಸಾರಿರುವರೆಂದೂ ಈ ಬಗ್ಗೆ ಜಪಾನಿಯರ ಕೈಗೊಂಬೆಯಾದ ಚೀನಿ ಸರಕಾರದೊಡನೆ ಸಹಕರಿಸುತ್ತಿದ್ದಾರೆಂದೂ ಒಂದು ಸುದ್ದಿ ಬಂದಿದೆ. ಈ ಎಲ್ಲ ಆಗು-ಹೋಗುಗಳನ್ನು ನೋಡಿಯೇ ಯುದ್ಧ ಬೇಗ ಮುಗಿಯದೆಂದು ನಾನು ನಿರ್ಧರಿಸಿರುವೆನು.

(೨ನೇ ಪುಟದಿಂದ ಮುಂದರಿಸಿದ್ದು)

ಶಿರಸಿ— (ತಾ. ೨೭—೨—೧೯೪೫) ಎಲ್ಲ ಸೀಧಾ ಅಂಗಡಿಗಳಲ್ಲಿ ಸಿಗುವ ಸರಕು ಒಂದೇ ಮಾದರಿಯದಿರುವದಿಲ್ಲೆಂದೂ, ಒಂದು ಅಂಗಡಿಯಲ್ಲಿ ಚಲೋ ಜೀನಸು ಸಿಗುತ್ತಿರುವಾಗ ಇನ್ನೊಂದು ಅಂಗಡಿಯಲ್ಲಿ ಅತ್ಯಂತ ಕನಿಷ್ಠ ದರ್ಜೆಯ ಜೀನಸು ಕೊಡುತ್ತಾರೆಂತಲೂ ಟೀಕಾಸ್ಪದವಾಗಿದೆ. ಎಲ್ಲ ಅಂಗಡಿಗಳಲ್ಲಿ ಆದಷ್ಟರ ಮಟ್ಟಿಗೆ ಒಂದೇ ದರ್ಜೆಯ ಸಾಮಾನು ಸಿಗುವಂತೆ ವ್ಯವಸ್ಥೆ ಮಾಡುವದೊಳಿತು.

ಸಿದ್ದಾಪುರ— (ತಾ. ೧-೩-೪೫) ಬಾಳೂರಗ್ರಾಮದ ಶ್ರೀಮಲ್ಲಿಕಾರ್ಜುನ ದೇವರ ಅಷ್ಟಬಂಧ ಜೀರ್ಣೋದ್ಧಾರ ಪ್ರತಿಷ್ಠೆಯ ಉತ್ಸವ ಕಳೆದ ತಾ. ೨೧ ರಿಂದ ೨೫ರ ವರೆಗೆ ನಡೆಯಿತು. ಮಹರ್ಗತೆಯ ಕಾಲವಾದರೂ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ಬನವಾಸಿ— (ತಾ. ೨೨-೨-೪೫) ಇಲ್ಲಿಯ ಜವಳಿ ಅಂಗಡಿಗಳಿಗೆ ಬೆಲೆ ನಿಯಂತ್ರಣ ಅನ್ವಯಿಸುವದಿಲ್ಲವೋ ಹೇಗೆ? ಅರಿವೆಯ ಮೇಲಿರುವ ಬೆಲೆಯ ಇಮ್ಮಡಿ ಬೆಲೆ ಕೊಟ್ಟರೆ ಮಾತ್ರ ಅಂಗಡಿಕಾರರು ತಮ್ಮ ಸರಕು ಹೊರಗೆ ಹಾಕುತ್ತಾರೆ! [illegible] ಕೊಡುವವರಿಗೆ ಇಲ್ಲವೆ ಪಾವತಿ ಬೇಡುವವರಿಗೆ ಅವರು ತಮ್ಮಲ್ಲಿ ಬೇಕಾದ ಸರಕೇ ಇಲ್ಲೆಂದು ಹೇಳುತ್ತಾರೆ! ಪೋಲೀಸರಿಗೂ ಈ ಅಂಗಡಿಕಾರರಿಗೂ ಗೆಳೆತನ ಬಹಳ! ಯಾರಾದರೂ ಪೋಲೀಸರ ಕಡೆ ದೂರಿಕೊಂಡರೆ "ನೀವು ಈ ಅಂಗಡಿಗಳಿಗೇ ಏಕೆ ಹೋಗಬೇಕು? ಅಗ್ಗ ಸರಕು ಸಿಗುವ ಅಂಗಡಿಯನ್ನು ಹುಡುಕಿ ಹೋದರಾಗದೇ?" ಎಂದು ಹೇಳಿ ದೂರುಗಾರರನ್ನು ಓಡಿಸಿಬಿಡುತ್ತಾರೆ! ಜಿಲ್ಲಾಧಿಕಾರಿ ಇತ್ತ ಗಮನಕೊಡಬೇಕಾಗಿ ಅರಿಕೆ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ!
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಾರಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತಿವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ. ೧೦ ರಿಂದ ರೂ. ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ [illegible] ಪ್ರಕಟನೆ].

ESTD: 1934.
The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K.
Branches:-
ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET
Season Deposits are now accepted at attractive rates.
For particulars please call at any of our Offices
Coondapoor, 15—2—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ವೃತ್ತದಲ್ಲಿ [illegible] ಚಳಿ ಬಿದ್ದು [illegible] ಮಾರ್ಗಗಳಲ್ಲಿ ದೂಳಿಯು [illegible]

ಶ್ರೀ ಗೋಕರ್ಣ ಮಠಾಧೀಶ ಶ್ರೀ [illegible] ತೀರ್ಥ ಗುರುಗಳು ನಿನ್ನೆ ಮಧ್ಯಾಹ್ನ [illegible] ಪಾಲಿಸಿದ್ದಾರೆ. ಬುಧವಾರ ಇಲ್ಲಿಂದ ಮುಂದೆ [illegible] ದಯಮಾಡಿಸುವರು. [illegible] ದಯಮಾಡಿಸಬೇಕೆಂದು [illegible] ಮಹಾಜನರ ಶಿಷ್ಯರು ನಿನ್ನೆ ಇಲ್ಲಿ [illegible]

ಇದೇ ಬರುವ ಮಾರ್ಚ ತಾ [illegible] ಅವ್ವಲಿಯನ್ನು ಈ ಜಿಲ್ಲೆಯ ಯಾವದೇ [illegible] ದೊರೆಗೆ [illegible] ಈ [illegible] ಉಡುವಲ-ಕಟ್ಟಿ ದೊರೆಯುತ್ತಿದೆಯೋ [illegible]

ಕುಮಟಾ ಮ್ಯುನಿಸಿಪಾಲಿಟಿಯ [illegible] ಬರುವ ಮಾರ್ಚ ತಾ. [illegible] ಕಚೇರಿಗಳಿಗೆ [illegible] ಅಪ್ಪಣೆ ಮಾಡಿದ್ದಾರೆ.

ಮೊನ್ನೆ [illegible] ಶ್ರೀ [illegible] ದೇವರ [illegible] ಉತ್ಸವ [illegible] ಜರುಗಿತು.

ಗೋಕರ್ಣದ ರಾ॥ ಪರಮೇಶ್ವರ [illegible] ಶಾಸ್ತ್ರಿಯವರಿಗೆ ಹಿಂದುಸ್ಥಾನ ಸರಕಾರದ [illegible] ನಾಗರಿಕ [illegible] ಹಿಂದುಸ್ಥಾನ ಸರಕಾರದಲ್ಲಿ [illegible] ಆಫೀಸರ ದರ್ಜೆಯ ಉಚ್ಚ ಅಧಿಕಾರಸ್ಥಾನ [illegible] ಎಂದು ಹೇಳುತ್ತಾರೆ.

ಉಪ್ಪಿನಪಟ್ಟಣದಲ್ಲಿ ಹುಲಿ [illegible] ಊರ ಹೊರಗೆ ಮೇಯಹೋದ ದನಗಳನ್ನಷ್ಟೇ ಅಲ್ಲ, ಜನವಸತಿಯ ಮಧ್ಯದಲ್ಲಿ ಕೊಟ್ಟಿಗೆಗಳೊಳಗೆ ಕಟ್ಟಿಹಾಕಿದ ದನಕರುಗಳನ್ನೂ ಹುಲಿಯು [illegible] ಫಲಾಹಾರ ಮಾಡುತ್ತಿದೆ! ಈ ವರೆಗೆ ಸಾವಿರಾರು ರೂಪಾಯಿ ಬೆಲೆಯ ದನಗಳು ಹುಲಿಪಾಲಾಗಿ ಹೋಗಿವೆ! ಸಂಜೆಯಾಗುತ್ತಲೇ ಹುಲಿಯು ಊರೊಳಗೆ ಬರುತ್ತದೆ! ಬ್ರಿಟಿಶ ಸರಕಾರದ ಹಿಂದೀ ಪ್ರಜೆಗಳು ನಿಃಶಸ್ತ್ರರೂ ನಿರುಪದ್ರವಿಗಳೂ ಇರುತ್ತವೆಂಬುದು ಕಾಡು ಪಶುಗಳಿಗೂ ತಿಳಿದ ಗೊತ್ತಾದದ್ದು ಆಶ್ಚರ್ಯ!

ಈ ಜಿಲ್ಲೆಯಲ್ಲಿ ಸರಕಾರವು ಭತ್ತವನ್ನು ಒತ್ತಾಯದಿಂದ ಖರೀದಿಸುವದಿಲ್ಲವೆಂದು ಪ್ರಕಟವಾಗಿದೆಯೇನೋ ನಿಜ. ಆದರೆ ಗ್ರಾಮಾಧಿಕಾರಿಗಳು ಭತ್ತ ಮಾರಾಟದ ಬಗ್ಗೆ [illegible] ಪರಿಪರಿಯಿಂದ ಒತ್ತಾಯ ಮಾಡುತ್ತಿರುವರೆಂಬ ದೂರು ಕೇಳಬರುತ್ತದೆ. ಒಡೆಯರಿಗೆ ಸಲ್ಲತಕ್ಕ ಗೇಣಿಯನ್ನು ಸಲ್ಲಿಸಿದ, ಸಂಸಾರಕ್ಕೆ ಬಂದಿಷ್ಟು ಭತ್ತವನ್ನು ಇಟ್ಟುಕೊಳ್ಳದೆ, ಭೂಮಿಯಲ್ಲಿ ಬೆಳೆದ ಎಲ್ಲ ಭತ್ತವನ್ನು ಸರಕಾರಕ್ಕೆ ಕೊಟ್ಟರೂ ಗ್ರಾಮಾಧಿಕಾರಿಗಳು ತಯಾರಿಸಿದ ಪಟ್ಟಿಯಂತೆ ಭತ್ತ ಸರಕಾರಕ್ಕೆ ಮುಟ್ಟುವದಿಲ್ಲವಂತೆ. ಆ ಭತ್ತವೆಲ್ಲ ತಂದು ಮುಟ್ಟಿಸದವರಿಗೆ ಕೊಟ್ಟ ಭತ್ತದ ಹಣ ಸಿಗಲಾರದೆಂದೂ ಆ ಭತ್ತ ತಂದು ಕೊಟ್ಟ ಮೇಲೆಯೇ ಬೇಕಾದರೆ ಸೀಧಾ-ಅಕ್ಕಿಯ ಚೀಟಿ ಕೊಡಿಸಲಾಗುವದೆಂದೂ ಗ್ರಾಮಾಧಿಕಾರಿಗಳು ಹೆದರಿಸುತ್ತಾರಂತೆ! ಸರಕಾರದ [illegible] ಈ ಒತ್ತಾಯ-ನಿಗ್ರಹ ನಡೆದಿದೆಯೋ ಹೇಗೆ? [illegible] ಒತ್ತಾಯದ ಖರೀದಿಯಿಲ್ಲೆಂದು ಪ್ರಕಟನೆಗಳನ್ನು ಹೊರಡಿಸುವದೇಕೆ? ಪ್ರಕಟವಾದ ಪ್ರಕಟನೆಯಂತೆಯೇ ಸರಕಾರದ ವಾಸ್ತವವಾದ ಧೋರಣವಿರುತ್ತದ್ದಲ್ಲಿ, ಅದಕ್ಕೆ ವಿರೋಧವಾಗಿ ವರ್ತಿಸುತ್ತಿರುವ ಕೆಳ-ಅಧಿಕಾರಿಗಳ ಅತಿರೇಕವನ್ನು ಅವರು ನಿಯಂತ್ರಿಸಬೇಕಾಗಿ ಅರಿಕೆಯು.

ಹೊನ್ನಾವರ— (ತಾ ೨೬-೨-೪೫) ಕಳೆದ ಅಕ್ಟೋಬರ ತಿಂಗಳಲ್ಲಿ [illegible] ಹೊಸ [illegible] ಅರಿವಿ ಬಂದಿದ್ದಾರೆ. ಈ ಕೆಲಸವನ್ನು [illegible] ಹೊಸ [illegible] ಊರೊಳಗಿನ ಕೆಲ [illegible] ಸುದ್ದಿ ಕೇಳಿ [illegible] ವ್ಯವಸ್ಥೆಯನ್ನು [illegible] ಅವರಿಗೆ ಯಾಕೆ ಬಂದಿರುವದೋ ತಿಳಿಯದು.

ಸ್ಟೇಶನ್ನಿನಲ್ಲಿ [illegible] ಬಾಧೆ ಬಹಳವಾಗಿದೆ. [illegible] ಪ್ರತಿಬಂಧ ಮಾಡಬೇಕೆಂದು ಅಲ್ಲಿಯ ಜನರು ಅಧಿಕಾರಿಗಳ ಕಡೆ ಪ್ರಾರ್ಥನೆ ಮಾಡುತ್ತಾರೆ.

ಗೋಕರ್ಣದಲ್ಲಿ [illegible] ವಿಪರೀತವಾಗಿದೆ [illegible] ಸರಕಾರದ [illegible] ವ್ಯವಸ್ಥೆ ಮಾಡಬೇಕೆಂದು [illegible]

ಕುಮಟಾ ಗ್ರಾಮದಲ್ಲಿ ಬೋರ್ಡ ಶಾಲೆ ೧, ಗ್ರಾಂಟ ಶಾಲೆ [illegible] ಶಾಲೆಗಳಲ್ಲಿ [illegible] ವಿದ್ಯಾರ್ಥಿಗಳಿದ್ದಾರೆ. ಈ ಎರಡೂ [illegible] ಊರ ಮಧ್ಯಭಾಗದಲ್ಲಿ [illegible] ಶಾಲೆಯನ್ನು ತೆರೆಯ [illegible] ಅಲ್ಲಿಯವರ ಪ್ರಯತ್ನ ನಡೆದಿದೆ. [illegible] ಮುಂದೆ ಕಲಿಸುವ ವಿಚಾರಟುಳ್ಳ ಒಂದೂ ಶಾಲೆಯಿಲ್ಲ. ಆದರಿಂದ ಅನೇಕ ಹುಡುಗರು ಮುಂದೆ ಕಲಿಯದೆ ಶಾಲೆ ಬಿಡುತ್ತಾರೆ. ಕಲಿಯಬಯಸುವವರಾದರೂ ಹೊನ್ನಾವರದಂಥ ಪಟ್ಟಣಗಳಿಗೆ ಹೋಗಿ ಕಷ್ಟಪಟ್ಟು ಕಲಿಯಬೇಕಾಗುತ್ತದೆ.

ಸಿದ್ದಾಪುರ— (ತಾ. ೨೦-೨-೪೫) ಅಣಲೇಬೈಲ ಗ್ರಾಮದ ಹೇರೂರ ಮಜರೆಯಲ್ಲಿರುವ ರಾಮಚಂದ್ರ ನಿಂಬವನ ಮನೆಗೆ ಕಳೆದ ಶನಿವಾರ ಮಧ್ಯಾಹ್ನ ಬೆಂಕಿ ಬಿದ್ದು ಮನೆ ಸುಟ್ಟು ಹೋಯಿತೆಂದೂ ಆ ಮನೆಯ ಅಟ್ಟದಲ್ಲಿದ್ದ ಅಡಿಕೆ [illegible] ಅಧಿಕಾರಿಗಳ ಕಚೇರಿಯೊಳಗಿನ ದಪ್ತರಗಳು ಬೂದಿಯಾಗಿ ಹೋಗಿವೆಯೆಂದೂ ಸುದ್ದಿಯಿದೆ.

ಯಲ್ಲಾಪುರ— ೬೪॥ ಪಾಯಲಿಗಿಂತ ಹೆಚ್ಚಿಗೆ ಅಕ್ಕಿ ಕೊಳ್ಳುವವರು ಆ ಹೆಚ್ಚಿನ ಅಕ್ಕಿಯನ್ನು ಸರಕಾರಕ್ಕೆ ಮಾರತಕ್ಕದ್ದೆಂದು ಅಧಿಕಾರಿಗಳು ನಿಗ್ರಹಿಸುತ್ತಾರೆಂದೂ ಯಲ್ಲಾಪುರದೊಳಗಿನ ಸರಕಾರಿ ಉಗ್ರಾಣಗಳೊಳಗಿಂದ ಹೇರಳ ಭತ್ತ ಹಾಳಾಗಿದೆಯೆಂದೂ ತಾ. ೧-೧-೪೫ರ "ವೃತ್ತ"ದಲ್ಲಿ ಪ್ರಕಟವಾದ ವಾರ್ತೆಗಳು ನಿರಾಧಾರವಿರುತ್ತವೆಂದು ನಮ್ಮ ಕಚೇರಿಯಲ್ಲಿ ಕಂಡುಬಂದಿದೆಯಾಗಿ ಜಿಲ್ಲಾಧಿಕಾರಿ ತಿಳಿಸುತ್ತಾರೆ.

ಕಾರವಾರ— (ತಾ. ೧೫-೨-೧೯೪೫) ನಿನ್ನೆ ಹೊಸ ಜಿಲ್ಲಾಧಿಕಾರಿಗಳಾದ ರಾ॥ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಹಾರ ಸಲಹೆ ಸಮಿತಿಯ ಸಭೆ ಕೂಡಿತ್ತು. ಈಗ ಸರಕಾರದ ಸಂಗ್ರಹದಲ್ಲಿರುವ ಅಕ್ಕಿ

(೧ನೇ ಪಾನಿನ ಮೇಲೆ ಮುಂದರಿಸಿದೆ.)

ಪಾಲಕರಲ್ಲಿ ವಿನಂತಿ.

[illegible]

ಕುಮಟಾ, } [illegible]
ತಾ. ೧೩-೨-೧೯೪೫ } ಶ್ರೀ [illegible]

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಕವಲಕೊಪ್ಪದಲ್ಲಿರುವ ರಾಮಚಂದ್ರ ವೆಂಕಪ್ಪಮಾ ಹೆಗಡೆ ಇವರಿಗೆ ಮುತ್ತಿಗೆಯಲ್ಲಿರುವ ರೇಣುಕಾಬಾಯಿ ಕೊಡುವ ಉತ್ತರವಜಾ ನೋಟೀಸು ಏನೆಂದರೆ:-

ನೀವು ನನ್ನನ್ನು ೬ ವರುಷಗಳ ಹಿಂದೆ ಲಗ್ನ ಮಾಡಿಕೊಂಡು ಅಂದಿನಿಂದ ನೀವು ನನಗೆ ಪದೇ ಪದೇ ಬೈದು, ಹೊಡೆದು ಕ್ರೂರತನದಿಂದ ನಡಿಸಿದಾಗ್ಯೂ ಬಾಳ್ವೆ ಮಾಡಿಕೊಂಡು ಬಂದೆ. ಆದರೆ ತಾ ೧೧-೧-೪೫ನೇಗೆ ನೀವು ನನಗೆ ಅತಿಶಯ ಹೊಡೆದು-ಬಡೆದದ್ದರಿಂದ ಸಹಿಸಲಾರದೆ ನಾನು ತವರುಮನೆಗೆ ಬಂದಿರುತ್ತೇನೆ. ನಿಮ್ಮ ಸಂಗಡ ಬಾಳ್ವೆ ಮಾಡುವದು ಅಸಾಧ್ಯ. ನಿಮಗೆ ಗೃಹಸ್ಥರು ಎಷ್ಟೇ ಹಿತ ಬೋಧನೆ ಕೊಟ್ಟರೂ ಲಕ್ಷ್ಯಕೊಡದೆ ನೀವು ನಿಮ್ಮ ಚಿಕ್ಕ ತಾಯಿ ಗಂಗಮ್ಮನ ದುರ್ಬೋಧನೆಗೆ ಒಳಪಟ್ಟು ನನಗೆ ಪೀಡಿಸುತ್ತ ಬಂದಿರಿ. ಲಗ್ನ ಕಾಲದಲ್ಲಿಯೂ ಅನಂತರ ನೀವು ನನಗೆ ಏನೂ ದಾಗಿನೆ ಹಾಕಿದ್ದು ಇಲ್ಲ. ನಿಮ್ಮ ನೋಟೀಸಿನಲ್ಲಿ ಬರೆಸಿದಂತೆ ನಾನು ಯಾವದೇ ದಾಗಿನೆ ಅಪಹರಿಸಿಕೊಂಡು ಬಂದದ್ದಿಲ್ಲ. ನೀವು ನನಗೆ ನಿಮ್ಮ ಸ್ವಂತ ಹಾಗೂ ಕುಟುಂಬದ ಸ್ಥಾವರಾಸ್ತಿಗಳ ಉತ್ಪನ್ನದಿಂದ ತಿಂಗಳು ೧೫ ರೂ ಪ್ರಕಾರ ಜೀವನಾಂಶ ಕೊಡಲಿಕ್ಕೆ ಬದ್ಧರಿರುವ ಕಾರಣ ನಿಮ್ಮ ಸ್ಥಾವರಾಸ್ತಿಗಳನ್ನು ನನಗೆ ವಂಚಿಸುವ ಬಗ್ಗೆ ನೀವು ಪರಾಧೀನ ಮಾಡಕೂಡದೆಂದೂ ಯಾರೂ ನಿಮ್ಮಿಂದ ಪರಾಧೀನ ಮಾಡಿಸಿಕೊಳ್ಳಕೂಡದೆಂದೂ, ಕೊಂಡಲ್ಲಿ ಆ ಪರಾಧೀನತೆಗಳು ನನ್ನನ್ನು ಬಾಧಿಸಲಾರವೆಂದೂ ಈ ಮೂಲಕ ಜಾಹೀರಪಡಿಸುತ್ತೇನೆ. ತಾ. ೨೦-೨-೪೫.

● ಈ ಎ ಡೆ ಗುರ್ತ ರೇಣುಕಾಬಾಯಿ ಇವಳದು.

ಶ್ರೀ [illegible] ||ಸದ್ಗುರು ಪ್ರಸನ್ನ|| [illegible]

ಕರ್ನಾಟಕದಲ್ಲಿ ಅರುಣೋದಯ

ರಾಧಾ-ಸ್ವಾಮಿ ದಯಾಳರ ದಯೆ,
ರಾಧಾಸ್ವಾಮಿಯು ಸಹಾಯ

ಭಾವಿಕ ಜನರಿಗೆ ವಿನಂತಿ- ಪರಮೇಶ್ವರನಿಗೆ ಮುಟ್ಟುವ ಸುಲಭ ಉಪಾಯ- ಈ ವಿಷಯದ ಮೇಲೆ ಪಂಜಾಬ ಇಲಾಖಾ, ಜಿಲ್ಲಾ ಅಮೃತಸರ, ಗ್ರಾಮ ನಿವಾಸಿಗಳಾದ ಪರಮ ಸಂತ ಹಜೂರ ಸದ್ಗುರು ಬಾಬಾ ಸಾವನಸಿಂಗಜಿ ಮಹಾರಾಜರ ಆಜ್ಞಾಧಾರಕರಾದ ಗುರುಭಕ್ತ ಶಿರೋಮಣಿ ಪರಮಹಂಸ ಬಾಬಾ ಸೋಮನಾಥಜಿಯವರು ಗುರುಭಕ್ತಿ, ನಾಮ-ಮಹಾತ್ಮ್ಯೆಯನ್ನು ಸಂತಸಂಗ-ದ್ವಾರಾ ಬೋಧಿಸುವ ಸಲುವಾಗಿ ಬರುವವರಿದ್ದಾರೆ. ಮುಮುಕ್ಷು ಜನರು ಸುಸಂಧಿಯ ಲಾಭವನ್ನು ತಕ್ಕೊಳ್ಳಬಾರದು.

ಸಜ್ಜನರ ಕೃಪಾಭಿಲಾಷಿ-[illegible] ಸೇವಕ,
ಗಂಗಾಧರ ನಾರಾಯಣ ಕಾನಭಾಗ ಧಾರೇಶ್ವರ

ಕನ್ನಡ ಎಟ್ಲಾಸ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಸಮರ-ವಾರ್ತೆಗಳ ಸ್ಥಳ-ಪರಿಚಯ ಮಾಡಿಕೊಡುವ ಅಪೂರ್ವ ಭೂಪಟ. ಬೆಲೆ ರೂ. ೧-೮-೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಜಾಹೀರ ನೋಟೀಸು.

ನಿಶಾನಿ ೬೧

ದಾವೆಯನ್ನು ನಿರ್ಣಯಿಸಲಿಕ್ಕೆ
ಸಮನ್ಸು

ಕುಮಟಾ ಸಬೋರ್ಡಿನೇಟ ಜಜ್ಜ ಕೋರ್ಟಿನಲ್ಲಿ.
ಮುಕ್ಕಾಮು ಕುಮಟಾ ಇಲ್ಲಿ. ಮೂಲ ನಂ. ೪೦೨—೧೯೪೪

(೧) ಶ್ರೀಧರ ಕೃಷ್ಣ ಭಟ್ಟ, [illegible] ವಾರಸದಾರ, [illegible] ನಾಶೆಯಿಂದ—
(೨) ಮೈನೇಜರ ಕೃಷ್ಣಾ ಶ್ರೀಧರ ಭಟ್ಟ, ವಯ ೪೨, ಜಾತಿ ಕೋಟ ಬ್ರಾಹ್ಮಣ, ಕಸಬು ವೈದಿಕ, ಸಾಕಿನ ಕುಮಟಾ ತಾಲೂಕ ಧಾರೇಶ್ವರ. } ವಾದಿ

— ವಿರುದ್ಧ — ಪಿ॥ ಮಿ॥ ಎಸ್. ಜಿ. ಕಾನಭಾಗ

(೧) ಮೈನೇಜರ ರಾಮಚಂದ್ರ ನಾಗಪ್ಪ ಶೆಟ್ಟಿ ಹೊಸಮನೆ, ವಯ ೪೫, ಜಾತಿ ದೈವಜ್ಞ ಬ್ರಾಹ್ಮಣ, [illegible] ಕಸಬು, ಸಾ ಕುಮಟಾ ತಾಲೂಕ ಹೊಸಕೇರಿ, ಹಾಲಿ ಮೈಸೂರ ಸಂಸ್ಥಾನದ [illegible] } ಪ್ರತಿವಾದಿಯು
ದಾವಾ ರೂ. ೫೯—೭—೯.

ಸದರಿ ಪ್ರತಿವಾದಿ ರಾಮಚಂದ್ರ ನಾಗಪ್ಪ ಶೆಟ್ಟಿ, ಇವರಿಗೆ — ವಾದಿಯು ತನ್ನ ಮಾಲ್ಕಿಯ ಕುಮಟಾ ತಾಲೂಕ ಹೊಸಕೇರಿ ಗ್ರಾಮದ ಸ ನಂ ೬೦ ಕ್ಷೇತ್ರ [illegible] ಆಕಾರ ರೂಪಾಯಿ ೪೭-೧೨-೦ [illegible] ಕ್ಷೇತ್ರ ೧-೬-೦ ದಲ್ಲಿ ಗುಂಟೆ ೨೪ ಮತ್ತು ಕ್ಷೇತ್ರ ಗುಂಟೆ [illegible] ಗುಂಟೆ [illegible] ಪ್ರತಿವಾದಿಗೆ [illegible] ಗೇಣಿಗೆ ಇರುವಲ್ಲಿ [illegible] ತಾ. ೫-೩-೧೯೪೫ನೇ ದಿವಸ ಬೆಳಗಿನ ೧೧ ತಾಸಿಗೆ ಈ ಕೋರ್ಟಿಗೆ [illegible] ಪ್ರತಿವಾದಿಯು ಸ್ವತಃ ಇಲ್ಲವೆ ದಾವೆಯ ವಿಷಯ [illegible] ಹಾಜರಾಗಿ ತನ್ನ ಹೇಳಿಕೆಯನ್ನು ಅರಿಕೆ ಮಾಡಿಕೊಳ್ಳ [illegible] ಇಲ್ಲದಿದ್ದರೆ ಸದರ [illegible] ಕೋರ್ಟಿನವರು ನೇಮಿಸಬಹುದಾದ ಮುಂದಿನ ತಾರೀಖಿಗೆ [illegible] ಏಕಪಕ್ಷ ನಿರ್ಣಯ ಮಾಡಲ್ಪಡುವದು, ತಿಳಿಯುವದು.

ಈ ತಾರೀಖು [illegible] ೧೯೪೫ನೇ ದಿವಸ ನಮ್ಮ ಸಹಿ ಮತ್ತು ಕೋರ್ಟಿನ ಮುದ್ರೆ [illegible]

[illegible]

H. S. Baindur.
ಕ್ಲಾರ್ಕ ಆಫ್ ದಿ ಕೋರ್ಟ, ಸಬಜಜ್ಜ ಕೋರ್ಟ, ಕುಮಟಾ

ಇದನ್ನು [illegible] (ಕುಮಟಾ) [illegible] ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ದಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿ ಮುಂಗಡವಾಗಿಯೇ ಕೊಡತಕ್ಕದ್ದು

Reg. No. B. 1270. Monday, 5th March, 1945

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೩೫

ಕುಮಟಾ:- ಸೋಮವಾರ, ತಾ. ೫ ಮಾಹೆ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಪೆಶಲ್ ಪ್ಲೇಸ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಯುದ್ಧ ಬೇಗ ಮುಗಿಯದು!

(ನಿರೀಕ್ಷಕನು ಬರೆದುದು.)

ಈಗ ನಡೆದಿರುವ ವಿಶ್ವಯುದ್ಧವು ಬೇಗನೇ ಮುಗಿಯುವದೆಂಬ ಆಶೆ ಹಿಡಿದವರಿಗೆ ಕಳೆದ ಗುರುವಾರ ಪ್ರಕಟವಾದ ಹಿಂದುಸ್ಥಾನ ಸರಕಾರದ ಮುಂದಿನ ವರ್ಷದ (೧೯೪೫-೪೬) ಆಯ-ವ್ಯಯಗಳ ಅಂದಾಜು-ಪತ್ರಿಕೆ ನೋಡಿ ನಿರಾಶೆಯಾಗದೇ ಇರದು. ಚಾಲೂ ವರ್ಷದಲ್ಲಿ ಹಿಂದುಸ್ಥಾನ-ಸರಕಾರದ ಯುದ್ಧ ವೆಚ್ಚ, ಸಂರಕ್ಷಣ ವೆಚ್ಚ ಮತ್ತು ಇತರ ವೆಚ್ಚ ಕೂಡಿ ಒಟ್ಟು ವೆಚ್ಚ ೪೬೪ ಕೋಟಿ ರೂಪಾಯಿ ಬರುವದೆಂದು ಹೋದ ವರ್ಷ ಅರ್ಥ-ಸಚಿವರು ಅಂದಾಜು ಮಾಡಿದ್ದರು. ಅದು ಈಗ ೫೧೨ ಕೋಟಿ ರೂಪಾಯಿಗಳಷ್ಟು ಬರುವದೆಂದು ದುರುಸ್ತ ಅಂದಾಜು ಮಾಡಿದ್ದಾರೆ. ವರ್ಷಾಂತ್ಯವಾಗಿ ಪ್ರತ್ಯಕ್ಷ ಲೆಕ್ಕ ಮಾಡಿ ನೋಡಿದಾಗ ಅದು ೫೫೦ ಕೋಟಿ ರೂಪಾಯಿಗಳಿಗೆ ಮುಟ್ಟಿದರೂ ಮುಟ್ಟಬಹುದು! ಆಗಾಮಿ ವರ್ಷದಲ್ಲಿ ತಮ್ಮ ಅಂದಾಜು ಬಹಳ ತಪ್ಪದಾರದೆಂಬ ವಿಚಾರದಿಂದಲೋ ಏನೋ ಸರಕಾರದ ಒಟ್ಟು ವೆಚ್ಚ ೫೧೭ ಕೋಟಿ ರೂಪಾಯಿ ಬರುವದಾಗಿಯೂ ಒಟ್ಟು ಉತ್ಪನ್ನ ೩೬೨ ಕೋಟಿ ರೂಪಾಯಿ ಸಿಗಬಹುದೆಂತಲೂ, ೮ ಕೋಟಿ ರೂಪಾಯಿಗಳ ಹೊಸ ಕರಗಳನ್ನು ಹೇರಿದಾಗ್ಯೂ ಒಟ್ಟು ೧೫೫ ಕೋಟಿ ರೂ.ಗಳ ಕೊರತೆ ಬೀಳುವದೆಂತಲೂ ಪ್ರಸ್ತುತ ಅರ್ಥ ಮಂತ್ರಿಗಳು ಅಂದಾಜು ಮಾಡಿದ್ದಾರೆ. ಚಾಲೂ ವರ್ಷದ ಬಗ್ಗೆ ಅವರು ಮಾಡಿದ ಅಂದಾಜಿನ ಗತಿಯೇ ಮುಂದಿನ ವರ್ಷದ ಅಂದಾಜಿನದಾಗಲಿಕ್ಕಿಲ್ಲೆಂದು ಧೈರ್ಯ ಹೇಳುವವರಾರು? ಸೈನ್ಯ ಇಲಾಖೆಯ ಈ ವರ್ಷದ ವೆಚ್ಚ ೪೫೬ ಕೋಟಿ ರೂಪಾಯಿ (ಅಂದರೆ ಯುದ್ಧ-ಪೂರ್ವ ಕಾಲದ ವೆಚ್ಚದ ೧೦ ಪಟ್ಟು ವೆಚ್ಚ!) ಬರುವದೆಂದು ಹೊಸ ಅಂದಾಜುಂಟು; ಮತ್ತು ಮುಂದಿನ ವರ್ಷದ ವೆಚ್ಚ ೪೧೧ ಕೋಟಿ ರೂ. ಬರುವದಾಗಿ ಹೇಳಲಾಗುತ್ತಿದೆ. ಯುದ್ಧ ಬೇಗನೇ ಮುಗಿಯುವದೆಂದು ಹಿಂದುಸ್ಥಾನ ಸರಕಾರಕ್ಕೆ ಅನಿಸುತ್ತಿದ್ದರೆ ಸೈನ್ಯ ಇಲಾಖೆಯ ವೆಚ್ಚದ ಅಂದಾಜನ್ನು ಅವರು ಇಷ್ಟು ಮಟ್ಟಿಗೆ ಏರಿಸುತ್ತಿದ್ದಿಲ್ಲ. ಯುರೋಪ ಖಂಡದೊಳಗಿನ ಪಶ್ಚಿಮ ರಣರಂಗದಲ್ಲಿ ಬ್ರಿಟಿಶ ಸೇನೆಗಳ ದಳಪತಿಗಳಾದ ಸೇ|| ಮೊಂಟಗೊಮರಿಯವರೂ ಯುದ್ಧ ಬೇಗ ಮುಗಿಯುವದೆಂಬ ಭರವಸೆ ಕೊಡುವದಿಲ್ಲ. ಅಮೇರಿಕೆಯವರಂತೂ ಯುರೋಪ ಯುದ್ಧವು ಇದೇ ಬರುವ ಏಪ್ರಿಲ-ಮೇ ತಿಂಗಳೊಳಗೆ ಮುಗಿಯುವದೆಂಬ ಆಶೆ ತಳೆದಿದ್ದಾರೆ. ಯುದ್ಧ ಮಾಡಿ ಬಳಲಿದವರೂ ಯುದ್ಧ ಬೇಗ ಮುಗಿದರೆ ಸಾಕೆಂದು ಹಾರೈಸುವವರೂ ಬೇಗ ಆಶೆ ತಳೆಯುವದು ಸ್ವಾಭಾವಿಕ. ಆದರೆ ಪ್ರತ್ಯಕ್ಷ ರಣರಂಗಗಳ ಸ್ಥಿತಿ ನೋಡಿದಲ್ಲಿ ಈ ಆಶೆ ಸಫಲವಾಗುವ ಲಕ್ಷಣವೊಂದೂ ತೋರುವದಿಲ್ಲ. ಪಶ್ಚಿಮ ರಣರಂಗದಲ್ಲಿ ಮಿತ್ರರು ಕೊಂಚ ಪ್ರಗತಿ ಮಾಡುತ್ತಿದ್ದಾರೇನೋ ನಿಜ. [illegible] ಜರ್ಮನರ ಪ್ರತಿಭಟನೆಯೂ ಮೊದಲಿನಷ್ಟೇ [illegible] ಪೂರ್ವ ರಣರಂಗದಲ್ಲಿ ರಶ್ಯರ ಧಾಂಧಾಟ [illegible] ಸ್ವಲ್ಪ ಕಡಿಮೆಯುಂಟಾಗಿದೆ. ಜರ್ಮನ [illegible] ಬರ್ಲಿನ ಪೇಟೆ ನಾರ್ಥ ಆಚೆಯ ವಾರ ಬಂದಿತ್ತಷ್ಟೇ [illegible] ಈ ರಣರಂಗದಲ್ಲಿ ಯಾರ ಕೈ ಮೇಲಾಗಿದೆ [illegible] ಯಾರು ಮುನ್ನುಗ್ಗುತ್ತಿದ್ದಾರೆ ಎಂಬ ಸುದ್ದಿಗಳ್ಯಾವವೂ ಬರುವದಿಲ್ಲ! ಹಿಟ್ಲರನು ಸ್ವತಃ ಈ ರಣರಂಗದಲ್ಲಿ [illegible]ಗಳನ್ನು ಚಲಿಸುತ್ತಿರಬೇಕು. ಅವನು ಹಾದಿಹೋಗುವನೆಂದು ಇಲ್ಲವೆ ದಣಿದಿರುವನೆಂದು ಮಿತ್ರರು ಕಲ್ಪಿಸಿದರೂ [illegible] ಕಳೆದ ತಾ. ೨೪ಕ್ಕೆ ನಾಝಿ ಪಕ್ಷದ ಹುಟ್ಟು ಹಬ್ಬದ ಕಾಲಕ್ಕೆ ಹಿಟ್ಲರನು ಒಂದು ಭಾಷಣ ಬರೆದು ಕಳಿಸಿದ್ದನು. ಅದನ್ನು ಓದಿದ ಯಾ ಕೇಳಿದ ಜರ್ಮನೀಯರಿಗೂ ಸ್ಫುರಣ ಗೊಳ್ಳಬಹುದು. ಸ್ವತಃ ಜರ್ಮನರ ಮೇಲೆ ಎಷ್ಟು ಸಂಕಟ ಬಂದರೂ ಸಹಿಸಿ ಎಂದು ಇದರ ಮೂಲಕ ಸೂಚಿಸಿ "ರಾಷ್ಟ್ರಕ್ಕೆ ನನ್ನದೆಷ್ಟು ಅಗತ್ಯವುಂಟೋ ಅಷ್ಟೇ ನನ್ನ ಬದುಕಿನ ಬೆಲೆ.... ನನ್ನದೆಂಬುದೆಲ್ಲ ರಾಷ್ಟ್ರದ್ದಾಗಿರುತ್ತದೆ. ನನ್ನ ವೈಯಕ್ತಿಕ ಸೊತ್ತು ಯಾವದೂ ಇಲ್ಲ" ಎಂಬ ಆತ ನುಡಿದು, ಹೇಡಿಗಳಾಗಬೇಡಿರೆಂದೂ, ಹೇಡಿತನ ಪ್ರದರ್ಶಿಸುವವರನ್ನು ಉದಾಸೀನರೆಂದೂ ಸಕಲ ಜರ್ಮನರಿಗೆ ಎಚ್ಚರಿಕೆ ಕೊಟ್ಟು, ಕೊನೆಗೆ ಜರ್ಮನಿಗೇ ವಿಜಯ ಸಿಗುವದೆಂದು ಪ್ರತಿಯೊಬ್ಬರಿಗೆ ಆಶ್ವಾಸನೆ ಕೊಟ್ಟಿರುತ್ತಾನೆ. ಕಳೆದ ಬುಧವಾರ ಹಿಟ್ಲರನ ಪ್ರಚಾರ-ಮಂತ್ರಿ, ಡಾ|| ಗೊಬೆಲ್ಸನಂತೂ "ಶರಣುಹೋಗುವ ಬದಲು ನಾವು ಮರಣವನ್ನಾಲಿಂಗಿಸುವೆವೆಂದು ಆಕಾಶವಾಣಿಯ ಮೂಲಕ ಸಾರಿದ್ದಾನೆ. ಬ್ರಿಟಿಶ-ಅಮೇರಿಕೆಯವರ ಮೇಲೆ ಅವನು ವಿಷಕಾರುತ್ತಾನೆ. ಬೇಗನೇ ಅಟ್ಲಾಂಟಿಕ ಮಹಾಸಾಗರದಲ್ಲಿ ಜರ್ಮನರು ಯು-ಬೋಟುಗಳ ಹಾವಳಿಯನ್ನು ಪ್ರಾರಂಭಿಸುವರೆಂತಲೂ, ಬ್ರಿಟನ್ನಿನ ಮೇಲೆ ಆಕಾಶಬಾಣಗಳ ಮಳೆಗರೆದು ಬ್ರಿಟಿಶರಿಗೆ ತ್ರಾಹಿ, ತ್ರಾಹಿ ಎಂದು ಹೇಳಿಸುವರೆಂದೂ ಅವನು ಬೆದರಿಕೆಯನ್ನು ಕೊಟ್ಟಿದ್ದಾನೆ. ಸಿರಿಯಾ, ಇಜಿಪ್ತ, ತುರ್ಕಸ್ತಾನ ಮೊದಲಾದ ದೇಶಗಳೆಲ್ಲ ಜರ್ಮನಿಯ ವಿರುದ್ಧ ಯುದ್ಧ ಸಾರಿ, ಇದೇ ಮೇ ತಿಂಗಳಲ್ಲಿ (ಅಮೇರಿಕೆಯೊಳಗಿನ) ಸಾನಫ್ರಾನ್ಸಿಸ್ಕೋ ನಗರದಲ್ಲಿ ಕೂಡಲಿರುವ ಮಿತ್ರ-ಪಕ್ಷೀಯ ರಾಷ್ಟ್ರಗಳ ಪರಿಷತ್ತಿನಲ್ಲಿ ಭಾಗ ವಹಿಸಲು ಪಾತ್ರವಾಗಿವೆ. ವಿಜಯೋತ್ತರ ಕಾಲದಲ್ಲಿ ಮಿತ್ರರು ಹಂಚಿಕೊಳ್ಳುವ ಪಂಚಕಜ್ಜಾಯದಲ್ಲಿ ತಮಗೂ ಒಂದು ಪಾಲು ಸಿಗಲೆಂಬ ಹವಣಿಕೆಯಿಂದಲೇ ಈ ರಾಷ್ಟ್ರಗಳು ಯುದ್ಧ ಸಾರಬೇಕೇ ಹೊರತು, ಜರ್ಮನಿಯ ಬಗ್ಗೆ ತಿರಸ್ಕಾರಪಟ್ಟು ಇಲ್ಲವೆ ದ್ವೇಷ ತಾಳಿ ಅವು ಯುದ್ಧ ಸಾರಿವೆಂದು ನಾ ಹೇಳಲಾರೆ. ಕಳೆದ ವಾರ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಮುಖ್ಯ ಮಂತ್ರಿ ಚರ್ಚಿಲ್ಲರು ಯಾಲ್ಟಾ ಕೂಟದ ನಿರ್ಣಯಗಳನ್ನು ಸಮರ್ಥಿಸಿ ಮಾಡಿದ ಭಾಷಣದಿಂದ ಸಂತುಷ್ಟವಾಗಿ ಪಾರ್ಲಿಮೆಂಟು ಅವರಲ್ಲಿ ಪೂರ್ಣ ವಿಶ್ವಾಸ ಪ್ರದರ್ಶಿಸಿದಾಗ್ಯೂ, ಬ್ರಿಟಿಶರಿಗೆ ಅವರ ನಡತೆಯಿಂದ ಸಮಾಧಾನವಾಗಿದೆಂದು ಹೇಳಲಿಕ್ಕಾಗುವಂತಿಲ್ಲ. ಯಾಲ್ಟಾ ಕೂಟದ ನಿರ್ಣಯದಿಂದ ಪೋಲಂಡದವರಿಗೆ ನಿರಾಶೆಯಾಗಿದೆ. ಮಿತ್ರರ ತ್ರಿಕೂಟವು ಪೋಲಂಡವನ್ನು ರಶ್ಯರಿಗೆ ಬಲಿ ಕೊಟ್ಟಿದ್ದಾರೆಂದೇ ಹೇಳಬೇಕು. ಪೋಲಂಡದವರು ಜರ್ಮನರಿಗಿಂತ ರಶ್ಯರನ್ನೇ ಹೆಚ್ಚಿಗೆ ದ್ವೇಷಿಸುತ್ತಾರೆಂದು ಲಬ್ಲಿನ ಸರಕಾರದ ಭೀತಿಯಿಂದ ಪೋಲಂಡ ಬಿಟ್ಟು ಲಂಡನ್ನಿಗೆ ಓಡಿಬಂದ ನೊವಾಕ ಎಂಬ ಸೇನಾನಾಯಕರು 'ಸ್ಪೆಕ್ಟೇಟರ' ಪತ್ರದಲ್ಲಿ ಬರೆದಿದ್ದಾರೆ. ಅದರಿಂದ ಪೋಲಂಡದಲ್ಲಿದ್ದ ಇಲ್ಲವೆ ಪೋಲಂಡ ದಾಟಿ ಜರ್ಮನಿಯಲ್ಲಿ ನುಗ್ಗಿದ ರಶ್ಯರು ಕಷ್ಟಕ್ಕೀಡಾಗುವ ಪ್ರಸಂಗವುಂಟು. ಪೂರ್ವಾಂತ್ಯದಲ್ಲೂ ಒಂದು ಮಹತ್ವದ ಸ್ಥಿತ್ಯಂತರವಾಗಿದೆ. ಚಾಂಗ-ಕೈ-ಶೇಕರು ಚೀನಿ ಕಮ್ಯುನಿಸ್ಟರ ವಿರುದ್ಧ ಯುದ್ಧ ಸಾರಿರುವರೆಂದೂ ಈ ಬಗ್ಗೆ ಜಪಾನಿಯರ ಕೈಗೊಂಬೆಯಾದ ಚೀನ ಸರಕಾರದೊಡನೆ ಸಹಕರಿಸುತ್ತಿದ್ದಾರೆಂದೂ ಒಂದು ಸುದ್ದಿ ಬಂದಿದೆ. ಈ ಎಲ್ಲ ಆಗು-ಹೋಗುಗಳನ್ನು ನೋಡಿಯೇ ಯುದ್ಧ ಬೇಗ ಮುಗಿಯದೆಂದು ನಾನು ನಿರ್ಧರಿಸಿರುವೆನು.

(೨ನೇ ಪುಟದಿಂದ ಮುಂದರಿಸಿದ್ದು.)

ಶಿರಸಿ— (ತಾ. ೨೭—೨—೧೯೪೫) ಎಲ್ಲ ಸೀಧಾ ಅಂಗಡಿಗಳಲ್ಲಿ ಸಿಗುವ ಸರಕು ಒಂದೇ ಮಾದರಿಯದಿರುವದಿಲ್ಲೆಂದೂ, ಒಂದು ಅಂಗಡಿಯಲ್ಲಿ ಚಲೋ ಜಿನಸು ಸಿಗುತ್ತಿರುವಾಗ ಇನ್ನೊಂದು ಅಂಗಡಿಯಲ್ಲಿ ಅದಕ್ಕಿಂತ ಕಡಿಮೆ ತರಗತಿಯ ಜಿನಸು ಕೊಡುತ್ತಾರೆಂತಲೂ ಬೋಭಾಟವಾದದೆ. ಎಲ್ಲ ಅಂಗಡಿಗಳಲ್ಲಿ ಅದಷ್ಟರ ಮಟ್ಟಿಗೆ ಒಂದೇ ತರಗತಿಯ ಸಾಮಾನು ಸಿಗುವಂತೆ ವ್ಯವಸ್ಥೆ ಮಾಡುವದೊಳಿತು.

ಸಿದ್ದಾಪುರ— (ತಾ ೧-೩-೧೯೪೫) ಬಾಳೂರಗ್ರಾಮದ ಶ್ರೀಮಲ್ಲಿಕಾರ್ಜುನ ದೇವರ ಅಷ್ಟಬಂಧ ಜೀರ್ಣೋದ್ಧಾರ ಪ್ರತಿಷ್ಠೆಯ ಉತ್ಸವ ಕಳೆದ ತಾ. ೨೧ ರಿಂದ ೨೫ರ ತನಕ ನಡೆಯಿತು. ಮಹರ್ಗತೆಯ ಕಾಲವಾದರೂ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ಬನವಾಸಿ— (ತಾ. ೨೨-೨-೧೯೪೫) ಇಲ್ಲಿಯ ಜವಳಿ ಅಂಗಡಿಗಳಿಗೆ ಬೆಲೆ ನಿಯಂತ್ರಣ ಅನ್ವಯಿಸುವದಿಲ್ಲವೋ ಹೇಗೆ? ಅರಿವೆಯ ಮೇಲಿರುವ ಬೆಲೆಯ ಇಮ್ಮಡಿ ಬೆಲೆ ಕೊಟ್ಟರೆ ಮಾತ್ರ ಅಂಗಡಿಕಾರರು ತಮ್ಮ ಸರಕು ಹೊರಗೆ ಹಾಕುತ್ತಾರೆ! ಕೆಲವರು ಮಾಡುವವರಿಗೆ ಇಲ್ಲವೆ ಸಾಲ ಬೇಡುವವರಿಗೆ ಅವರು ತಮ್ಮಲ್ಲಿ ಬೇಕಾದ ಸರಕೇ ಇಲ್ಲೆಂದು ಹೇಳುತ್ತಾರೆ! ಪೋಲೀಸರಿಗೂ ಈ ಅಂಗಡಿಕಾರರಿಗೂ ಗೆಳೆತನ ಬಹಳ! ಯಾರಾದರೂ ಪೋಲೀಸರ ಕಡೆ ದೂರಿಕೊಂಡರೆ "ನೀವು ಈ ಅಂಗಡಿಗಳಿಗೇ ಏಕೆ ಹೋಗಬೇಕು? ಅಗ್ಗ ಸರಕು ಸಿಗುವ ಅಂಗಡಿಯನ್ನು ಹುಡುಕಿ ಹೋಗಬಾರದೇ?" ಎಂದು ಹೇಳಿ ದೂರುಗಾರರನ್ನು ಓಡಿಸಿಬಿಡುತ್ತಾರೆ! ಜಿಲ್ಲಾಧಿಪರು ಇತ್ತ ಗಮನಿಸಬೇಕಾಗಿ ಅರಿಕೆ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ!
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ತಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ. ೧೦ ರಿಂದ ರೂ. ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ರಣರಂಗದವರ ಪ್ರಕಟನೆ].

ESTD: 1934.
The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K.
Branches:-
ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET
Season Deposits are now accepted at attractive rates.
For particulars please call at any of our Offices
Coondapoor, 15—2—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ಕಡೆಯು, ಶೆಕೆಯು ಬಹಳ ಹೆಚ್ಚಾಗಿದ್ದು ಬಿರುಗಾಳಿಯಂತೆ ಗಾಳಿ ಬೀಸುತ್ತಿದೆ

ಮುಂಬಯಿ ಪ್ರಾಂತಾಧಿಪರ ಸಲಹೆಗಾರರಾದ ಸರ್ ಹೆನ್ರಿ ನೈಟರವರು ಕಳೆದ ಶುಕ್ರವಾರ ಕಾರಿನಿಂದ ಹೊನ್ನಾವರಕ್ಕೆ ಹೋದರು. ಅಲ್ಲಿಂದ ಅವರು ಬೆಳಗಾವಿಗೆ ಹೋಗುತ್ತಾರೆ. ಹೋಗುತ್ತಾ ದಾರಿಯಲ್ಲಿ ಅವರು ಇಲ್ಲಿಯ ಶಿಕ್ಷಾ-ಅಧಿಕಾರಿಗಳ ಕಚೇರಿ, ದವಾಖಾನೆ, [illegible]-ಪ್ರಯೋಗದ ಹೊಲ ಇವುಗಳಿಗೆ ಭೆಟ್ಟಿ ಕೊಡುವರಂತೆ.

ಜಿಲ್ಲಾಧಿಪರ ಮುಕ್ಕಾಮು ಬರುವ ತಾ. ೧೨ರಿಂದ ೧೮ರ ವರೆಗೆ ಈ ಊರಲ್ಲುಳಿಯುವದು.

ಕುಮಟೆಯಿಂದ ಚಿತ್ರಿಗಿ, ಹೆಗಡೆ, ಕಾಗಾಲ ಬದಿಗೆ ಹೋಗುವ ರಸ್ತೆಯಲ್ಲಿರುವ ಚಿತ್ರಿಗಿ ಹಳ್ಳದ ಸಂಕ ಬಹಳ ಜೀರ್ಣವಾಗಿದೆ. ಅದರ ಕೊಡೆಗಳು ನಾದುರುಸ್ತ ಇರುವದರಿಂದ ಭಾರವಾದ ವಾಹನಗಳು ಅದರ ಮೇಲಿಂದ ಹಾದು ಹೋಗುವ ಸಾಹಸ ಮಾಡಬಾರದೆಂದಾಗಿ ಕುಮಟಾ ಮ್ಯುನಿಸಿಪಾಲಿಟಿಯವರು ೧-೨ ವರ್ಷದ ಹಿಂದೆ ಸಂಕದ ಆಚೆ-ಈಚೆ ನೋಟೀಸ-ಬೋರ್ಡ ಹಚ್ಚಿದ್ದರು. ಆದರೆ ಸಂಕದ ದುರುಸ್ತಿಯೇನೂ ಆಗಿರುವದಿಲ್ಲ! ಅದೇಕೋ ದೇವರೇ ಬಲ್ಲ! ಇತ್ತಲಾಗಿ ಸರಕಾರಿ ಅತ್ಯಂತ ಭಾರವಾದ ಸರಕು ಹೇರಿಕೊಂಡು ಭಾರವಾದ ಮೋಟಾರ ವಾಹನಗಳು ಮೇಲಿಂದ ಮೇಲೆ ಈ ಸಂಕದ ಮೇಲಿಂದ ಹಾದು ಹೋಗುತ್ತವೆ. ಬಾಡ ಮೊದಲಾದ ಹಳ್ಳಿಗಳಿಗೆ ಹೋಗುತ್ತಿವೆ. ದುರ್ದೈವದಿಂದ ಸಂಕವೆಲ್ಲಾದರೂ ಮುರಿದುಬಿದ್ದರೆ ಆಚೆ-ಈಚೆಯ ಸಂಪರ್ಕ ತಪ್ಪುವದಲ್ಲದೆ ಸ್ಥಿ ! ಯಾಕೆಂದರೆ ಮಾರ್ಗದ ಎರಡೂ ಪಕ್ಕಗಳಲ್ಲಿರುವ ಹೊಲಭೂಮಿಗಳು ಮಾರ್ಗದಿಂದ ಒಂದು ಆಳವಷ್ಟು ತಗ್ಗಿನಲ್ಲಿವೆ; ಹೊಳೆಯಿಂತೂ ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಕಾರಣ ಕುಮಟೆಯಲ್ಲಿ ಮುಕ್ಕಾಮು ಮಾಡಿರುವ ಜಿಲ್ಲಾಧಿಪರು ಒಮ್ಮೆ ಈ ಸಂಕ ನೋಡಿಕೊಂಡು ಅದರ ದುರುಸ್ತಿಯ ಬಗ್ಗೆ ಕೂಡಲೇ ವ್ಯವಸ್ಥೆ ಮಾಡಿಸಬೇಕಾಗಿ ಚಿತ್ರಿಗಿಯವರು ವಿನಂತಿಸುತ್ತಾರೆ

ಇಲ್ಲಿ ಮಾರಲ್ಪಡುವ ಸರಕಾರಿ ನಿಯಂತ್ರಣದ ತೆಂಗಿನ ಎಣ್ಣೆಯಲ್ಲಿ "ಸ್ಟ್ಯಾಂಡರ್ಡ ಒಯ್ಲ" ವಂತಹ ದ್ರವದ ಮಿಶ್ರಣ ಪ್ರಿಂಟೆಂದೂ ಈ ಎಣ್ಣೆ ತಿಂದಲ್ಲಿ ಅಥವಾ ತಲೆಗೆ ಹಾಕಿಕೊಂಡಲ್ಲಿ ಕಣ್ಣು-ತಲೆಗಳಿಗೆ ಕೂಡಲೇ ಉಪದ್ರವಾಗುತ್ತದೆಂತಲೂ ಬೋಕಾಪವಾದ ಕೇಳಿ ಬರುತ್ತಿದೆ. ಅಧಿಕಾರಿಗಳು ಇದರ ಚೌಕಶಿ ಮಾಡಬೇಕಾಗಿ ಸೂಚನೆಯಿದೆ.

ಹೊನ್ನಾವರ— (ತಾ. ೨೮-೨-೪೫) ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್-ದ್ವಾರಕಾನಾಥ ಗುರುಗಳ ಸ್ವಾರಿಯು ಕಳೆದ ರವಿವಾರ ಸಂಜೆ ೬ಕ್ಕೆ ಈ ಊರಿಗೆ ಬಂದು ತಲ್ಪಿತು. ಊರ ಮಹಾಜನರು ಬಂದೇ-ಹಳ್ಳದಾಚೆಯೇ ಅವರನ್ನು ಇದಿರುಗೊಂಡು ವೈಭವದ ಮೆರವಣಿಗೆಯಿಂದ ಶ್ರೀ ಮಠಕ್ಕೂ, ಅಲ್ಲಿಂದ ಮುಂದೆ ಶ್ರೀ ವೆಂಕಟರಮಣ ದೇವರ ಗುಡಿಗೂ, ವೆಂಕಟರಮಣ ದೇವಸ್ಥಾನದಿಂದ ತಿರುಗಿ ಮಠಕ್ಕೂ ಕರೆತಂದರು. ಮಾರ್ಗದಲ್ಲಿ ತೋರಣಗಳಿಂದಲೂ ದೀಪಾವಳಿಯಿಂದಲೂ ಶೃಂಗರಿಸುತ್ತಿತ್ತು. ಗುರು-ಚರಣಗಳ ದರ್ಶನಕ್ಕಾಗಿ ಕಿಕ್ಕಿರಿದು ಜನರು ಕೂಡಿದ್ದರು. ಶ್ರೀ ಗುರುಗಳು ಇಂದು ಅಪರಾಹ್ನ ೧೧ಘಂಟೆಗೆ ಇಲ್ಲಿಂದ ಹೊರಟು ಗಂಗೊಳ್ಳಿಗೆ ಹೋಗಿದ್ದಾರೆ. ಅಲ್ಲಿ ಕೆಲವು ದಿನ ಮುಕ್ಕಾಮು ಮಾಡಿ, ಮಂಗಳೂರ ಮಹಾಜನರ ಆಗ್ರಹಕ್ಕಾಗಿ ೪ ದಿನಗಳ ಮಟ್ಟಿಗೆ ಮಂಗಳೂರಿಗೆ ಹೋಗುವವರಿದ್ದಾರೆ. ಮಂಗಳೂರ, ಗಂಗೊಳ್ಳಿ ಮುಕ್ಕಾಮು ಮುಗಿಸಿಕೊಂಡು ಶ್ರೀಗಳು ಯುಗಾದಿ ಹಬ್ಬದ ಸುಮಾರಿಗೆ ಮರಳಿ ಈ ಊರಿಗೆ ಬರುವರು.

ಅರ್ಬನ ಬೇಂಕಿನವರು ಇಷ್ಟರಲ್ಲಿ [illegible] ಸಮುದ್ರಮಾರ್ಗವಾಗಿ [illegible] ಪೂರ್ಣ ಮಾಡಲು ಪ್ರಯತ್ನಿಸುತ್ತಾರಂತೆ. ಆದರೆ ಬೇಂಕಿನವರು ಸಮುದ್ರ ಮಾರ್ಗವಾಗಿ [illegible] ಸಮುದ್ರ [illegible] ಮೇಲೆ ಮೋಟಾರ ಬಂಡಿಗಳಲ್ಲಿ [illegible] ರೂ ೧೫೦ ಹೇಳುತ್ತಾರೆ [illegible] ನಡೆದಿರುವಂತೆ ತೋರುತ್ತದೆ ! ಬೇಂಕಿನವರ ಲೋಕ-ಕಲ್ಯಾಣ-ಸಾಧನೆಯ [illegible] ! ಬೇಂಕಿನವರ ಈ ಬಸ್ಸಾಟ [illegible] ಬಂದೆಂದು ಜನರ ಅಗ್ರಹದ ಪ್ರಾರ್ಥನೆ.

(ತಾ ೪-೩-೪೫) ಮುಂಬಯಿ ಪ್ರಾಂತಾಧಿಪರ ಸಲಹೆಗಾರ ಸರ್ ಹೆನ್ರಿ ನೈಟ ಇವರು ಈಗ ಇಲ್ಲಿದ್ದು ಇಂದು ಮುಂಜಾನೆ ಅವರು ಸರಕಾರಿ [illegible] ಗಳಿಗೆ ಭೆಟ್ಟಿ ಕೊಟ್ಟರು ಅಲ್ಲಿರುವ ಅತ್ಯಂತ [illegible] ಸ್ಥಿತಿಯನ್ನು ಅವರು ಒಳಿತಾಗಿ ಪರೀಕ್ಷಿಸಿದರೆ [illegible] ನು ಹೇಳುವದು ಕಠಿಣ. ಪರೀಕ್ಷಿಸಿದ್ದರೆ [illegible]

ನ ಅತ್ಯಂತ [illegible] ವಿಚಾರಿಸುತ್ತೇವೆಂಬುದು ಅವರಿಗೆ ತಿಳಿಯ ಬರದೆ ಇರಲಾರದು ಮುಂಬಯಿಯಲ್ಲಿ ಕೊಡುವ [illegible] ಆಶ್ವಾಸನೆಗಳಿಗೂ ಅಂತರವೆಷ್ಟಿದೆಯೆಂಬುದನ್ನೂ ಇಲ್ಲಿಯ ಮತ್ತು ಇಲ್ಲಿಯ ಧೋರಣೆಗಳಲ್ಲೂ ಎಷ್ಟು ವ್ಯತ್ಯಾಸವಿರುತ್ತಿರುವದನ್ನೂ ಅವರು ಗ್ರಹಿಸಿ ಈ ಬಡ ಜಿಲ್ಲೆಯ ಬಡ ಜನರಿಗೆ [illegible] ಧೋರಣೆಯನ್ನೇ ಇಲ್ಲಿಯ ಅಧಿಕಾರಿಗಳ ಇರುವಂತೆ ಪ್ರಯತ್ನ ಮಾಡಬೇಕಾಗಿ ಅಂತೆ

ಹಳದೀಪುರ ಗ್ರಾಮ ಪಂಚಾಯತನವರು ತಮ್ಮ ಯೋಗ್ಯ ದರದ ಅಂಗಡಿಯ ಪರವಾನೆಯನ್ನು ಊರ ಸಭ್ಯ ಗೃಹಸ್ಥರ ವಶಕ್ಕೆ ಕೊಡಬೇಕೆಂದು ಠರಾಯಿಸಿದ ಸಂಗತಿ ಸಾಹಿತ್ಯದಲ್ಲಿ, ಈ ತನಕ ಅಂಗಡಿ ನಡೆಸಿಕೊಂಡು ಬಂದವರ ನಡತೆಯ ವಿರುದ್ಧ ಊರ ಜನರ ದೂರುಗಳು ಹೆಚ್ಚಿದ್ದರಿಂದ ಮತ್ತು ಈಗ ಮುಂದೆ ಬಂದ ಸಭ್ಯರು ಸಾರ್ವಜನಿಕರಿಂದ ಶೇರು ಬಂಡವಲ ಕೂಡಿಸಿ, ನಿಯಮಬದ್ಧರೀತಿಯಿಂದಲೂ ಪಂಚಾಯತನವರ ಅಧಿಕಾರಕ್ಕೆ ಒಳಪಟ್ಟು ಅಂಗಡಿ ನಡೆಸಲು ಒಪ್ಪಿರುವದರಿಂದ ಈ ಹೊಸ ವ್ಯವಸ್ಥೆ ಕೈಕೊಳ್ಳುವ ಪ್ರಸಂಗ ಬಂತೆಂತಲೂ, ಈ ಹೊಸ ವ್ಯವಸ್ಥೆಯಿಂದ ಸ್ವಾರ್ಥಸಾಧನೆಗೆ ತೊಂದರೆಯಾದವರು ಪಕ್ಷ-ಪಂಗಡಗಳ ಆಟ್ಟಿಕಥೆ ಕಲ್ಪಿಸುವರೆಂತಲೂ ಹಳದೀಪುರ ಗ್ರಾಮದ ಕೆಲವು ಗೃಹಸ್ಥರು ತಿಳಿಸುತ್ತಾರೆ.

ಭಟಕಳ— (ತಾ. ೨೬-೨-೪೫) ಅಖಿಲ ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರಿ ಸಮಿತಿಯ ಸಭೆ ಮಾರ್ಚ ತಿಂಗಳ ೨ನೇ ವಾರದಲ್ಲಿ ಭಟಕಳದಲ್ಲಿ ಕೂಡಲಿದೆಯೆಂದು ರಾ॥ ಬಿ. ಎಚ್. ಶ್ರೀಧರ ಇವರು ತಿಳಿಸುತ್ತಾರೆ.

(೧ನೇ ಪಾನಿನ ಮೇಲೆ ಮುಂದರಿಸಿದೆ.)

ಕನ್ನಡ ಎಟ್ಲಾಸ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಸಮರ-ವಾರ್ತಾಕಾಂಕ್ಷಿಗಳಿಗೂ ಸ್ಥಳ-ಪರಿಚಯ ಮಾಡಿಕೊಡುವ ಅಮೌಲ್ಯ ಭೂಪಟ. ಬೆಲೆ ರೂ ೧—೮—೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ನೋಟೀಸು.

ಮೆ॥ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ಕಾರವಾರ ಡಿವ್ಹಿಜನ, ಕಾನಡಾರವರ ಕಚೇರಿಯಿಂದ—

ಮೆ॥ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ, ಕಾರವಾರ ಡಿವ್ಹಿಜನ, ಸಾ॥ ಕಾರವಾರ ಇವರು ಈ ಕೆಳಗೆ ಕಾಣಿಸಿದ ಶರ್ತುಗಳಿಗೆ ಅನುಸರಿಸಿ 15 ಜನರನ್ನು ಪಾನಭೋಗಿ ಉಮೇದವಾರರನ್ನಾಗಿ ಆರಿಸಿ ಉಮೇದವಾರಿ ಲಿಸ್ಟಿನಲ್ಲಿ ಹೆಸರು ದಾಖಲ ಮಾಡಲಿಕ್ಕಿದ್ದಾರೆ ಕಾರಣ ಉಮೇದವಾರಿ ಬಗ್ಗೆ ಅರ್ಜಿ ಮಾಡುವವರು ಈ ಕೆಳಗೆ ಕಾಣಿಸಿದ ಮಾಹಿತಿ ಸಹಿತ ರಜಿಸ್ಟರ ಮಾಡಿ ಅಥವಾ ಸಮಕ್ಷಮ ಅರ್ಜಿ ಮಾಡಿಕೊಳ್ಳತಕ್ಕದ್ದು. ಅರ್ಜಿಗಳು ತಾ 20-3-45ರೊಳಗೆ ಬಂದು ಮುಟ್ಟತಕ್ಕದ್ದು. ಅದರ ನಂತರ ಬಂದ ಅರ್ಜಿಗಳು ಸ್ವೀಕರಿಸಲ್ಪಡಲಿಕ್ಕಿಲ್ಲ. ಕಾನಡಾ ಜಿಲ್ಲೆಯ ರಹಿವಾಸಿಗಳು ಮಾತ್ರ ಅರ್ಜಿ ಮಾಡತಕ್ಕದ್ದು.

ಅರ್ಜಿ ಮಾಡಲಿಚ್ಛಿಸುವವರು ಅರ್ಜಿಗಳನ್ನು ತಮ್ಮ ಸ್ವಂತ ಬರಹದಲ್ಲಿ ಬರೆಯಬೇಕು, ಮತ್ತು ಅರ್ಜಿಗಳಲ್ಲಿ ಈ ಕೆಳಗೆ ಕಾಣಿಸಿದ ಮಾಹಿತಿಯನ್ನು ಕೊಡಬೇಕು

(1) ಅರ್ಜಿದಾರನ ಪೂರ್ಣ ಹೆಸರು, (2) ವಾಸಿಸುವ ಊರು ವ ಪೂರ್ಣ ಪತ್ತೆ, (3) ಜಾತಿ, (4) ವಯಸ್ಸು (ಅವಶ್ಯವಿಲ್ಲ ದಾಖಲೆ ಸಹಿತ), (5) ಯಾವ ಪರೀಕ್ಷೆ ಪಾಸಾಗಿರುತ್ತಾನೆ ?(ಸರ್ಟಿಫಿಕೇಟಿನ ನಕ್ಕಲು ಲಗ್ತು ಇಡಬೇಕು). [ಕನ್ನಡ ಮುಲ್ಕಿ ಪರೀಕ್ಷೆ ಪಾಸಾಗದೆ ಇದ್ದವರು ಅರ್ಜಿ ಮಾಡಕೂಡದು. ಆದರೆ ಮುಲ್ಕಿ ಪರೀಕ್ಷೆ ಪಾಸಾಗದೆ ಇಂಗ್ಲಿಷ ಮೆಟ್ರಿಕ್ ಪರೀಕ್ಷೆ ವರೆಗೆ ಕಲಿತಂಥವರು ಅರ್ಜಿ ಕಳಿಸಬಹುದು] (6) ಸರಕಾರಿ ನೌಕರಿಯಲ್ಲಿ ಸಂಬಂಧಿಕರಿದ್ದರೆ ಅವರ ಹೆಸರು ವ ವಿವರ. ಅರ್ಜಿಯ ಸಂಗಡ ಪ್ರಮುಖ ಸಭ್ಯ ಗೃಹಸ್ಥರಿಂದ ಪಡೆದ ಒಳ್ಳೇ ನಡತೆಯ ಸರ್ಟಿಫಿಕೇಟು ಕಳಿಸಬೇಕು (7) ಕನ್ನಡ ಮುಲ್ಕಿ ಪರೀಕ್ಷೆ ಪಾಸಾದವರು ಯಾ ಇಂಗ್ಲಿಷ ಮೆಟ್ರಿಕ್ ಪರೀಕ್ಷೆ ವರೆಗೆ ಕಲಿತಂಥವರು ಅರ್ಜಿಯನ್ನು ಕಳಿಸಬಹುದು.

ಅರ್ಜಿದಾರರು 18 ವರ್ಷಗಳಿಗಿಂತ ಕಡಿಮೆ ಪ್ರಾಯದವರಾಗಿರಕೂಡದು ಮುಂದುಳಿದ ಜಾತಿಯವರ ವಯಸ್ಸು ತಾ. 1 5-1945ಕ್ಕೆ 22 ವರ್ಷಕ್ಕೆ ಮೀರಿರಕೂಡದು, ಮತ್ತು ಮಧ್ಯಮ, ಹಿಂದುಳಿದ ವರ್ಗದವರ (ಬೆಕವರ್ಡ) ವಯಸ್ಸು ಆ ತಾರೀಖಿಗೆ 25 ವರ್ಷಕ್ಕೆ ಮೀರಿರಬಾರದು. ಆರಿಸಲ್ಪಟ್ಟ ಉಮೇದವಾರನು ಕಾಯಂ ಯಾ ಬದಲಿ ಜಾಗೆ ಸಿಗುವ ವರೆಗೆ ಪಗಾರವಿಲ್ಲದೆ ಉಮೇದವಾರನಾಗಿ ಕೆಲಸ ಮಾಡಬೇಕಾಗುವದು; ಮತ್ತು ಯಾವ ಪಿರ್ಕೆಗೆ ನೇಮಿಸಲ್ಪಡುತ್ತನೋ ಅಲ್ಲಿಯ ಪಾನಭೋಗಿಯ ಕಡೆಗೆ ಕೆಲಸ ಮಾಡಿ ಕೆಲಸ ಕಲಿಯಬೇಕಾಗುವದು. ಆರಿಸಲಿಕ್ಕೆ ಯೋಗ್ಯವಿದ್ದಂಥ ಅರ್ಜಿದಾರರಿಗೆ ಅವರ ಖರ್ಚಿನಿಂದ ಸಮಕ್ಷಮ ಬೆಟ್ಟಿಗೆ ತಾ. 5-4-1945ಕ್ಕೆ ಯಾ ಅದರ ನಂತರ ಕಾರವಾರಕ್ಕೆ ಕರೆಯಲಾಗುವದು ಸಮಕ್ಷಮ ಬಂದಾಗ ಸರ್ಟಿಫಿಕೇಟುಗಳ ಅಸ್ಸಲ ಪ್ರತಿಗಳನ್ನು ತೋರಿಸಬೇಕಾಗುವದು.

ಆರಿಸದೆ ಇದ್ದ ಉಮೇದ್ವಾರರಿಗೆ ಜವಾಬು ಕೊಡುವದರಲ್ಲಿ ಬರಲಿಕ್ಕಿಲ್ಲ ಲಿಸ್ಟಿನಲ್ಲಿ ದಾಖಲ ಮಾಡಿದ ಉಮೇದ್ವಾರರಿಗೆ ಅವರ ವಯಸ್ಸು ಮೀರುವದರೊಳಗಾಗಿ ಕಾಯಂ ನೌಕರಿ ಸಿಕ್ಕೇತೆಂಬ ಭರವಸೆ ಕೊಡಲಿಕ್ಕೂ ಬರಲಾರದು.

ಉಮೇದ್ವಾರರಾಗಲಿಚ್ಛಿಸುವವರು ಪ್ರತ್ಯಕ್ಷ ಯಾ ಅಪ್ರತ್ಯಕ್ಷ ಯಾವದೇ ತರದ ವಶೀಲಿ ತಂದರೆ ಅವರಿಗೆ ನಾಲಾಯಕ ಮಾಡಲಾಗುವದು ಇಸ್ವಾರ ಮಾಡಿದ ಅರ್ಜಿಗಳಿಗೆ ಉತ್ತರ ಸಿಗಲಿಕ್ಕಿಲ್ಲ

ಮುಕ್ಕಾಂ:— ಮುಂಡಗೋಡ,
ತಾ. 19-2-45.

N. B. SANKOLLI.
ಪ್ರಾಂತ ಆಫೀಸರ, ಕಾರವಾರ ಡಿವ್ಹಿಜನ, ಕಾನಡಾ, ಕಾರವಾರ

ಬೇಕು !

ಕರ್ನಾಟಕದಲ್ಲೆಲ್ಲ ನಮ್ಮ ಪ್ರತಿನಿಧಿಗಳಾಗಿ ಕೆಲಸ ಮಾಡಲು ಮಹತ್ವಾಕಾಂಕ್ಷಿ ತರುಣರು ಬೇಕು ! ಆಕರ್ಷಕ ಸವಲತ್ತುಗಳುಂಟು, ಒಳ್ಳೇ ಸಂಪಾದನೆಗೂ ಅವಕಾಶವುಂಟು.

ವಿಶೇಷ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಲಕರ್ಣಿ ಮತ್ತು ಕಂಪನಿ,
ಚೀಫ್ ಒರ್ಗನೈಝರ್,
ಮುಂಬಯಿ ಕೋ-ಒಪರೇಟಿವ್ಹ ಇನಶರೂನ್ಸ ಸೊಸೈಟಿ, ಲಿ.,
ನವಸಾರಿ ಬಿಲ್ಡಿಂಗ್ಸ, ಹೊರ್ನಬಿ ರೋಡ, ಮುಂಬಯಿ.

NOTICE.

Government of Bombay, Finance Dapartment (Supply),
Bombay, 28th February, 1945

Stock returns of yarn for the month ending 28th February, 1945

The above mentioned return is due by the 5th of March 1945 and is to be submitted in the prescribed from to the Provincial Textile Controller, Opp. Kalachowki Post Office, Parel Road, Bombay. IF NO BUSINESS HAS BEEN DONE BLANK RETURNS SHOULD BE SUBMITTED. Licence holders are requested to see that the stock returns are submitted in time

J. K. THAKORE.
Provincial Textile Controller, Bombay

ಇದನ್ನು ಪಾಂಡುರಂಗ ಕೃಷ್ಣ ಕಾಮಥಾರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ನ್ಯೂ ಆರ್ಟ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡವಾಗಿರತಕ್ಕದ್ದು

Reg. No. B. 1270. Monday, 12th March, 1945.

ಕಾನಡಾವೃತ್ತ

ವರ್ಷ ೨೬.] **THE KANARA NEWS.** [ಸಂಚಿಕೆ ೩೬

ಕುಮಟಾ:- ಸೋಮವಾರ, ತಾ. ೧೨ ಮಾಹೆ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಹಿಟ್ಲರನು ಹತಾಶನಾದನೇ ?

(ನಿರೀಕ್ಷಕನು ಬರೆದುದು.)

ಹಿಟ್ಲರನು ಈಗ ಹತಾಶನಾಗಿ ಜರ್ಮನಿಯ ಉತ್ತರಕ್ರಿಯೆಯ ವ್ಯವಸ್ಥೆ ಮಾಡುವದರಲ್ಲಿ ತೊಡಗಿದ್ದಾನೆಂದು ಅಮೇರಿಕೆಯ "ಯುನೈಟೆಡ್ ಪ್ರೆಸ್" ಎಂಬ ಸುದ್ದಿ-ಸಂಸ್ಥೆಯ ಸ್ಟಾಕಹೋಮ (ಸ್ವೀಡನ್) ಸುದ್ದಿಗಾರನು ತಿಳಿಸುತ್ತಾನೆ. ಕಳೆದ ತಾ. ೨೪ನೇಗೆ ಹಿಟ್ಲರನು ನಾಝಿ-ಪಕ್ಷದ ಪ್ರಮುಖರ ಸಭೆಯಲ್ಲಿ ಮಾಡಿದ ಭಾಷಣದ ವರದಿ ತನಗೆ ಗುಪ್ತ ಮಾರ್ಗದಿಂದ ಸಿಕ್ಕಿರುವದೆಂದೂ ಆ ವರದಿಯ ಸತ್ಯತ್ವದ ಬಗ್ಗೆ ಸಂಶಯ ತಾಳಲು ಕಾರಣವಿಲ್ಲೆಂದೂ ಆತ ತಿಳಿಸುತ್ತಾನೆ. ಈ ಸಭೆಯಲ್ಲಿ ಹಿಟ್ಲರನು ಮಾಡಿದ ದೀರ್ಘ ಭಾಷಣದಲ್ಲಿ ಅವನು ತನ್ನ ಮಿತ್ರರು ತನಗೆ ದ್ರೋಹ ಮಾಡಿದ್ದರಿಂದ ಜರ್ಮನರು ಸೋಲುವ ಪ್ರಸಂಗ ಬಂತೆಂದೂ ತಾನು ರಶ್ಯದ ವಿರುದ್ಧ ಯುದ್ಧ ಹೂಡಿದಾಗಲೇ ಜಪಾನಿಯರು ತಮ್ಮ ವಚನಕ್ಕನುಸಾರವಾಗಿ ರಶ್ಯದ ಮೇಲೆ ಪೂರ್ವದಿಂದ ದಂಡೆತ್ತಿ ಬರದೆ ದಗೆ ಕೊಟ್ಟರೆಂದೂ, ಬ್ರಹ್ಮದೇಶವನ್ನು ಗೆದ್ದು ಅಲ್ಲಿ ತಮ್ಮ ಕಾಲು ಗಟ್ಟಿಯಾದ ಕೂಡಲೇ ಭಾರತದ ಮೇಲೆ ಪ್ರಚಂಡ ದಾಳಿ ಮಾಡದೆ ವಿಶ್ವಾಸಘಾತ ಮಾಡಿದರೆಂದೂ, ೧೯೪೦ರಲ್ಲಿ ಡಂಕರ್ಕದಿಂದ ಓಡಿಹೋದ ಬ್ರಿಟಿಶರನ್ನು ಬೆನ್ನಟ್ಟಿ ಬ್ರಿಟನ್ನಿನ ಮೇಲೆ ಸಾಗಿಹೋಗಬೇಕೆಂದು ಸಂಕಲ್ಪಿಸಿದಾಗ ಇಟಲಿಯ ನೌಕಾಬಲವು ಜರ್ಮನ ಸೈನ್ಯವನ್ನೂ ಅವರ ಯುದ್ಧಸಾಮಗ್ರಿಗಳನ್ನೂ ಬ್ರಿಟನ್ನಿಗೆ ಸಾಗಿಸುವಷ್ಟು ಸಮರ್ಥವಿದ್ದಿಲ್ಲವೆಂದು ಹೇಳಿ ತನ್ನವರೇ ತನಗೆ ಮೋಸ ಮಾಡಿದರೆಂದೂ ದೂರಿದನಂತೆ. ಯಾಲ್ಟಾದಲ್ಲಿ ಕೂಡಿದ ಮಿತ್ರ-ತ್ರಿಕೂಟವು ಸಂಕಲ್ಪಿಸಿದ ಜರ್ಮನ ದೇಶದ ಪಾಲು-ಪಟ್ಟಿಯನ್ನು ಪರಾಂಬರಿಸುತ್ತ "ಜರ್ಮನಿಯಲ್ಲಿ ತಮಗೆ ಅಂದವಾದ ಕರಡಿಯ ತೊಗಲು ಸಿಗುವದೆಂದೂ ಅದನ್ನು ತಾವು ಪಾಲು ಮಾಡಿಕೊಳ್ಳಬೇಕೆಂದೂ ನಮ್ಮ ವೈರಿಗಳು ಬಗೆದಿದ್ದಾರೆ. ಆದರೆ ಅವರಿಗೆ ಜರ್ಮನಿಯಲ್ಲಿ ಅಂಥ ಕರಡಿಯ ಚರ್ಮ ಎಂದೂ ಸಿಗಲಿಕ್ಕಿಲ್ಲ. ಅವರಿಗೆ ಎಲ್ಲೆಲ್ಲೂ ಮಸಣ-ಗುಡ್ಡೆಗಳು, ಕಲ್ಲು-ರಾಶಿಗಳು, ಹೆಗ್ಗಣಗಳು, ಸಾಂಕ್ರಾಮಿಕ ಬೇನೆಗಳು, ಉಪವಾಸ-ಮರಣಗಳ ತಾಂಡವ-ನೃತ್ಯಗಳು ದೃಷ್ಟಿಗೆ ಬೀಳುವವೆಂಬುದನ್ನು ಅವರು ತಿಳಕೊಂಡಿರಲಿ" ಎಂದು ಎಚ್ಚರಿಕೆ ಕೊಟ್ಟಿರುತ್ತಾನೆಂದು ಮೇಲೆ ಹೇಳಿದ ಸುದ್ದಿಗಾರನು ತಿಳಿಸಿದ್ದಾನೆ. "ದೇವರ ದಯೆಯಿಂದ ಯುದ್ಧದ ಕೊನೆಯ ೮ ದಿನಗಳಲ್ಲಿ ನಾನೇನು ಮಾಡುವೆನೆಂದು ನೀವು ನೋಡುವಿರಿ." ಎಂದು ಹೇಳಿ ಹಿಟ್ಲರನು ತನ್ನ ಭಾಷಣ ಮುಕ್ತಾಯಗೊಳಿಸಿದನಾಗಿಯೂ ಆತ ಹೇಳುತ್ತಾನೆ. ನಾನಾ ಈ ಹಿಂದೆ ಹೇಳಿದಂತೆ ಜರ್ಮನರಿಗೆ ಈಗ ವಿಜಯದ ಆಶೆಯಿಲ್ಲ. ತಮಗೆ ಸೋಲು ಕಟ್ಟಿಟ್ಟದ್ದೆಂದು ಅವರಿಗೆ ಮನವರಿಕೆಯಾಗಿದೆ. ಕಳೆದ ವಾರ ಜರ್ಮನಿಯ ವಿದೇಶ ಸಚಿವ ವ್ಹೊನ ರಿಬೆನ್-ಟ್ರೊಪನು ತೆಗೆದ ಉದ್ಗಾರಗಳಾದರೂ ಈ ಮಾತನ್ನೇ ದೃಢಪಡಿಸುತ್ತವೆ. [illegible]ಯು ವೈರಿಗಳ ಆಕ್ರಮಣಕ್ಕೆ ಬಲಿಯಾಗುವ [illegible]ಗವೇ ಬಂದಲ್ಲಿ ಅದು ರಶ್ಯದ ಕೈಯಲ್ಲಿ ಬೀಳುವದು. [illegible]ರತು ಸಾಮ್ರಾಜ್ಯಮದದಿಂದ ಉನ್ಮತ್ತರಾದ ಬ್ರಿಟಿಶ-[illegible]ಮೇರಿಕೆಯವರ ಕೈಗೆ ಅದು ಎಂದೂ ಬೀಳಲಿಕ್ಕಿಲ್ಲ. [illegible]ನ ನದಿಯನ್ನು ದಾಟಿ ಮುಂದೆ ಬರಲಿಕ್ಕೆ ಅವರಿಗೆ ನಾವು [illegible]ಂದೂ ಬಿಡಲಿಕ್ಕಿಲ್ಲ." ಎಂದು ರಿಬೆನ್-ಟ್ರೊಪನು [illegible]ಸಿದ್ದಾನೆ. ಅವನ ಈ ಅಟ್ಟಹಾಸ ಎಷ್ಟರ ಮಟ್ಟಿಗೆ [illegible]ಡೇರುವದೆಂಬುದು ಗೌಣ-ಪ್ರಶ್ನೆ. ಜರ್ಮನಿಯ ಹಣೆ[illegible]ಪಡಿಸಿದೆಂದು ಆತ ಅಪ್ರತ್ಯಕ್ಷವಾಗಿ ಒಪ್ಪುತ್ತಾನೆಂಬು[illegible]ಮುಖ್ಯ ಮಾತು. ರಣಾಂಗಣಗಳೊಳಗಿನ ಪರಿಸ್ಥಿತಿ[illegible]ದರೂ ಜರ್ಮನರ ಬಲವೀಗ ಕುಗ್ಗಿದ್ದು ಕಂಡುಬರು[illegible]. [illegible]ಶ್ಚಿಮದಲ್ಲಿ ಮಿತ್ರಸೇನೆಗಳು ಪುನಃ ರ್ಹೈನ ನದಿಯ ದಂ[illegible]ಗೆ ಮುಟ್ಟಿವೆ. ಈ ನದಿಯನ್ನು ಮಿತ್ರರಿಗೆ ದಾಟಗೊಡ[illegible]ವಾಗಿ ಸೇ[illegible] ರಂಡಸ್ಟೆಟ್ಟನ ಅಟ್ಟಹಾಸ ನಡೆದಿದೆ. ಅದರ ಕೊಲೋನ ಭಾಗದಲ್ಲಿ ಕೆಲವು ಮಿತ್ರಸೈನಿಕರು ನದಿಯನ್ನು ದಾಟಿ ೪-೫ ಮೈಲು ಒಳನುಗ್ಗಿದ ವಾರ್ತೆಯುಂಟು. ಜರ್ಮನರು ಹಿಮ್ಮೆಟ್ಟುವಾಗ ಎಲ್ಲ ಆಸ್ತಿ-ಪಾಸ್ತಿಗಳನ್ನು ನಾಶ ಮಾಡಿ ಮಿತ್ರರಿಗೆ ನಗರ ಪ್ರವೇಶದ ಬದಲು ಸ್ಮಶಾನ ಪ್ರವೇಶದ ಭಾಗ್ಯವನ್ನು ಹೇಗೆ ಒದಗಿಸುತ್ತಿರುವರೆಂಬುದು ಕೊಲೋನ ನಗರದ ಕಥೆ ಕೇಳಿದರೆ ತಿಳಿಯುವದಂತಿದೆ. ಮಿತ್ರರು ಈ ನಗರವನ್ನು ಕೈವಶಪಡಿಸಿಕೊಂಡು ಪ್ರವೇಶಿಸಿದಾಗ ಅಲ್ಲಿ ನಾಗರಿಕರ್‍ಯಾರೂ ಇದ್ದಿಲ್ಲ! ಮನೆಗಳೆಲ್ಲ ನೆಲಸಮವಾಗಿದ್ದವು. ಗ್ಯಾಸಿನ ಮತ್ತು ನೀರಿನ ನಳಗಳು ಸಹ ನಾಶ ಮಾಡಲ್ಪಟ್ಟಿದ್ದವು! ಅತ್ತ ಪೂರ್ವದಲ್ಲಿಯೂ ರಶ್ಯರು ಡಾಂಝಿಗ ಬಂದರವನ್ನು ಸುತ್ತುಗಟ್ಟಿದ್ದಾರೆ. ಇಂದಲ್ಲ ನಾಳೆ ಅದು ರಶ್ಯರ ವಶವಾಗುವದು. ಸೇ॥ ಝುಕೋವ್ಹನ ಸೇನೆಯು ಇದೀಗ ಬರ್ಲಿನದಿಂದ ೩೧ ಮೈಲು ಅಂತರದಲ್ಲುಂಟು. ಜರ್ಮನ ಸರಕಾರವು ಆಗಲೇ ಬರ್ಲಿನ ಬಿಟ್ಟು ಬರ್ಚೆಸ-ಗಾಡನ್ನಿಗೆ ಹೋಗಿದೆಯೆಂಬಲೂ ವಾರ್ತೆಯುಂಟು. ಹೀಗೆ ಎರಡೂ ಕಡೆಗೆ ಯುದ್ಧವು ಮೇಲೆ ಬಂದದ್ದರಿಂದ ಜರ್ಮನರು ಹತಾಶರಾಗಿ ತಮ್ಮ ಕೊನೆಯ ಆರ್ಭಟವನ್ನು ಪ್ರಾರಂಭಿಸಿದ್ದಾರೆ. ಅಟ್ಲಾಂಟಿಕ ಮಹಾಸಾಗರದಲ್ಲಿ ಜಲಾಂತರ್ಗಾಮಿ ನಾವೆಗಳ ಹಾಗೂ ಯು-ಬೋಟುಗಳ ಹಾವಳಿ ಹೆಚ್ಚಾಗಿದೆಯೆಂದು ಚರ್ಚಿಲ್ಲ-ರೂಝವೆಲ್ಟರ ಸಂಯುಕ್ತ ಪ್ರಕಟನೆ ಹೇಳುತ್ತದೆ. ಬ್ರಿಟನ್ನಿನ ಮೇಲೆ ಆಕಾಶಬಾಣಗಳ ಸುರಿಮಳೆಯಾಗಹತ್ತಿದೆ. ಇದನ್ನೆಲ್ಲ ನೋಡಲಾಗಿ ಜರ್ಮನರು ಬರುವ ೧-೨ ತಿಂಗಳಲ್ಲಿ ಎಂಥ ಅನರ್ಥ ಮಾಡುವರೆಂದು ಕಲ್ಪನೆ ಮಾಡಲಿಕ್ಕೂ ನಾನು ಭಯಪಡುತ್ತೇನೆ. ಇದೇ ಬರುವ ಏಪ್ರಿಲ ತಾ.೨೩ಕ್ಕೆ ಯುರೋಪ ಯುದ್ಧದ ಮುಕ್ತಾಯವಾಗುವದೆಂದು ಬ್ರಿಟನ್ನಿನ ಸುಪ್ರಸಿದ್ಧ ಭವಿಷ್ಯವಾದಿ ಎನ್. ಗಾರ್ಟ ಎಂಬ ಗಾರುಡಿಕನು ಭವಿಷ್ಯ ವರ್ತಿಸಿದ್ದಾನೆ. ಜಪಾನ ಯುದ್ಧ ಡಿಸೆಂಬರ ತಿಂಗಳಲ್ಲಿ ಮುಗಿಯುವದಂತೆ.

(೨ನೇ ಪುಟದಿಂದ ಮುಂದರಿಸಿದ್ದು.)

ಶಿರಾಲಿ— (ತಾ. ೨-೩-೪೫) ಅಕ್ಕಿ-ಭತ್ತಗಳನ್ನು ಈ ಜಿಲ್ಲೆಯಲ್ಲಿ ಒತ್ತಾಯದಿಂದ ಖರೀದಿಸುವ ವಿಚಾರ ಸರಕಾರಕ್ಕಿರುವದಿಲ್ಲೆಂದು ಪತ್ರಿಕೆಗಳು ಸಾರುತ್ತಿರುವವೇನೋ ಅಹುದು. ಆದರೆ ಇಲ್ಲಿಯ ಜನರ ಅನುಭವ ಮಾತ್ರ ಹಾಗಿಲ್ಲ. ರೈತನು ಬೆಳಸಿದ ಭತ್ತ ಅವನ ಸಂಸಾರಕ್ಕೂ ಸಾಗುವಳಿಯ ಖರ್ಚಿಗೂ ಸಾಲುವಷ್ಟಿರಲಿ, ಇಲ್ಲದಿರಲಿ, ರೈತನು ತನ್ನ ಪಾಲಿನ — ಸರಕಾರಿ ಅಧಿಕಾರಿಗಳು ವ್ಯವಹಾರ-ಜ್ಞಾನವಿಲ್ಲದೆ ಮಾಡಿದ ಬೆಳೆಯ ಲೆಕ್ಕದ ಮೇಲಿಂದ ರಚಿಸಿದ ಪಾಲಿನ — ಭತ್ತವನ್ನು ಅಧಿಕಾರಿಗಳು ಹೇಳಿದಾಗ ಮತ್ತು ಹೇಳಿದಲ್ಲಿ ತಂದು ಕೊಡದಿದ್ದರೆ ಅಧಿಕಾರಿಗಳು ಪೋಲೀಸರನ್ನು ತಂದು ಜಪ್ತಿ ಮಾಡಿ ಕಣಜಗಳನ್ನು ಒಡೆದು ಭತ್ತವನ್ನು ತಮ್ಮ ವಶಕ್ಕೆ ಕೊಳ್ಳುತ್ತಾರೆ. ಇಲ್ಲಿಯ ನೀರಿನಮನೆ ಮಂಜಪ್ಪ ಬಡ್ಕರ ಇವನ ಕಥೆಯೋ ಈ ಮಾತಿಗೆ ಪ್ರತ್ಯಕ್ಷ ನಿದರ್ಶನವಾಗಿದೆ. ಮಂಜಪ್ಪನೊಬ್ಬ ರೈತ. ೪ ಮುಂದಿ ಬೀಜಾನದಾರದ ೪॥ ಎಕರೆ ಹೊಲಗಳನ್ನು ಆತ ಸಾಗುವಳಿ ಮಾಡುತ್ತಿದ್ದಾನೆ. ಈ ಒಡೆಯರಿಗೆ ೬೦ ಮುಡಿ (= ೯೬೦ ಪಾಯಲಿ) ಅಕ್ಕಿ ಗೇಣಿ ಕೊಡತಕ್ಕದ್ದುಂಟು. ಈ ವರ್ಷ ೧॥ ಎಕರೆಯಷ್ಟು ಹೊಲ ಬಂಜರ ಬಿದ್ದಿದೆ; ಮುಕ್ಕಾಲು ಎಕರೆ ಹೊಲದಲ್ಲಿ ಮಂಜಪ್ಪನು ಕಬ್ಬು ಮಾಡಿದ್ದಾನೆ; ಉಳಿದ ೬ ಎಕರೆಗಳಲ್ಲಷ್ಟೇ ಭತ್ತ ಬಿತ್ತಿದ್ದನು. ಕಳೆದ ಮಳೆಗಾಲದಲ್ಲಿ ಮಘಾ, ಹುಬ್ಬಾ ಮಳೆಗಳು ಸರಿಯಾಗಿ ಬೀಳದ್ದರಿಂದ ಬೆಳೆ ಕೆಟ್ಟಿದ್ದು ಎಲ್ಲರಿಗೂ ಗೊತ್ತುಂಟು. ತನ್ನ ಭೂಮಿಯಲ್ಲಿ ೮ ಆಣೆಗಿಂತ ಹೆಚ್ಚಿಗೆ ಬೆಳೆ ಹುಟ್ಟಿಲ್ಲೆಂದು ಮಂಜಪ್ಪನು ಹೇಳುತ್ತಾನೆ. ಆತ ಸಾಗು ಮಾಡಿದ ಎಲ್ಲ ಗದ್ದೆಗಳಲ್ಲಿ ೧೦೦ ಮುಡಿ ಭತ್ತ ಹುಟ್ಟಿದರೆ ಹೆಚ್ಚಾಯಿತು. ಆದರೂ ಮಂಜಪ್ಪನ ಗದ್ದೆಗಳಲ್ಲಿ ೧೭೯ ಮುಡಿ ಭತ್ತ ಬೆಳೆದಿದೆಯೆಂದು ಅಧಿಕಾರಿಗಳು ಲೆಕ್ಕ ಹಾಕಿ ಅವನು ಸರಕಾರಕ್ಕೆ ೧೪೭೩ ಪಾಯಲಿ ಅಂದರೆ ೯೪॥ ಮುಡಿ ಭತ್ತ ಸರಕಾರಕ್ಕೆ ಕೊಡಬೇಕೆಂದು ಠರಾಯಿಸಿ, ಕಳೆದ ಜನವರಿ ತಿಂಗಳಲ್ಲಿ ಭಟ್ಕಳ ಮಹಾಲಕರಿಯವರು ಅವನಿಗೆ ಅದರಂತೆ ನೋಟೀಸ ಕೊಟ್ಟಿದ್ದರು. ಮಂಜಪ್ಪನ ಮನೆಯಲ್ಲಿ ೧೨ ಮಂದಿ ದೊಡ್ಡವರೂ ಒಬ್ಬ ಚಿಕ್ಕ ಹುಡುಗನೂ ಕೂಡಿ ೧೩ ಮಂದಿ ಇದ್ದಾರೆ. ಅವರಿಗೆ ತಿಂಗಳೊಂದಕ್ಕೆ ೫೦ ಪಾಯಲಿ ಅಕ್ಕಿ (ಇಲ್ಲವೆ ೧೦೦ ಪಾಯಲಿ ಭತ್ತ) ಜೀವನಕ್ಕೆ ಬೇಕು. ಮಂಜಪ್ಪನು ಸಾಗುವಳಿಗೆ ಆಳುಗಳನ್ನು ತಕ್ಕೊಳ್ಳುತ್ತಾನೆ. ಅವರಿಗೆ ಮಜೂರಿ ಕೊಡಲಿಕ್ಕೆ ಭತ್ತ ಬೇಕು. ಈ ಖರ್ಚು ೬೫೦ ಪಾಯಲಿಗಳಷ್ಟು ಬರಬಹುದಂತೆ. ಮೇಲೆ ಬಿತ್ತಲಿಕ್ಕೆ ಭತ್ತ ಬೇಕು. ಸುಮಾರು ೨೫೦ ಪಾಯಲಿ ಭತ್ತ ತಗಲುತ್ತದಾಗಿ ಮಂಜಪ್ಪನ ಅಂದಾಜುಂಟು. ಈ ರೀತಿ ಜೀವನ ಖರ್ಚಿಗೆ, ಸಾಗುವಳಿ ಖರ್ಚಿಗೆ ಮತ್ತು ಬೀಜಕ್ಕೆ ಏನಿಲ್ಲೆಂದರೂ ೧೯೦೦ ಪಾಯಲಿ ಭತ್ತ ಮಂಜಪ್ಪನಿಗೆ ಬಿಟ್ಟುಕೊಟ್ಟು ಮೇಲುಳಿಯಬಹುದಾದ ಭತ್ತವನ್ನಷ್ಟೇ ಸರಕಾರವು ಅಪೇಕ್ಷಿಸತಕ್ಕದ್ದು ನ್ಯಾಯ್ಯ. ಆದರೆ ಮಹಾಲಕರಿ ಸಾಹೇಬರಿಗೆ ನ್ಯಾಯವೂ ಗೊತ್ತಿಲ್ಲ, ನೀತಿಯೂ ಗೊತ್ತಿಲ್ಲ! ಮಂಜಪ್ಪನು ಸರಕಾರಕ್ಕೆ ಸಕಾಲದಲ್ಲಿ ಭತ್ತ ತಂದು ಒಪ್ಪಿಸಲಿಲ್ಲೆಂದು ಆಪಾದನೆ ಹೊರಿಸಿ ಕಳೆದ ತಾ. ೧೯ನೇಗೆ ಅವನ ಎರಡೂ ಭತ್ತದ ಕಣಜಗಳನ್ನು ಅವರು ಜಪ್ತ ಮಾಡಿದ್ದರು. ಆಗ ತಾ. ೨೩ಕ್ಕೆ ಮಂಜಪ್ಪನು ಮಹಾಲಕರಿಗಳಿಗೆ ಒಂದು ಅರ್ಜಿ ಮಾಡಿ ತನ್ನ ಉತ್ಪನ್ನವೆಷ್ಟು, ಖರ್ಚೆಷ್ಟು, ಸಾಗುವಳಿಗೆ ಭತ್ತವೆಷ್ಟು ಬೇಕು ಎಂಬುದನ್ನೆಲ್ಲ ಸವಿಸ್ತರ ಅರುಹಿಕೊಂಡನು. ಆ ಅರ್ಜಿ ಓದಿ ಮಹಾಲಕರಿಗಳು ರೇಗಿರಬೇಕು. ಅರ್ಜಿ ಅವರ ಕೈಗೆ ಮುಟ್ಟಿದ ಮಾರನೇ ದಿನವೇ ಅಂದರೆ ತಾ. ೨೪ನೇಗೆ ಅವರು ಶಿರಾಲಿಯ ಸರ್ಕಲ ಇನ್ಸಪೆಕ್ಟರರ ಸಂಗಡ ಪೋಲೀಸ ಪಾರ್ಟಿಯೊಂದನ್ನು ಕಳಿಸಿ ಮಂಜಪ್ಪನಲ್ಲಿ ಜಪ್ತ ಮಾಡಿದ ಎರಡೂ ಕಣಜಗಳೊಳಗಿನ ೬೨ ಮುಡಿ ಭತ್ತವನ್ನು ಸರಕಾರಿ ಉಗ್ರಾಣಕ್ಕೆ ಸಾಗಿಸಿಕೊಂಡಿದ್ದಾರೆ! ಬರೇ ೮ ಮುಡಿ ಅಕ್ಕಿ ಜೀವನಕ್ಕೆ ಮತ್ತು ೮ ಮುಡಿ ಭತ್ತ ಬೀಜಕ್ಕೆ ಬಿಟ್ಟುಕೊಡಲ್ಪಟ್ಟಿದೆಯಂತೆ! ಮಂಜಪ್ಪನು ತನ್ನ ಅಕ್ಕಿ-ಭತ್ತಗಳನ್ನು ಬಚ್ಚಿಟ್ಟಿದ್ದಾನೆಂದು ಅಧಿಕಾರಿಗಳ ಆರೋಪವಿಲ್ಲ. ಇರುತ್ತಿದ್ದರೆ ಅವರು ಮೇಲೆ ಹೇಳಿದಂತೆ ಅವನಿಗೆ ಅಕ್ಕಿ ಮತ್ತು ಭತ್ತ ಬಿಟ್ಟುಕೊಡುತ್ತಿದ್ದಿಲ್ಲ. ಈ ಕಥೆಯ ಮೇಲಿಂದ ಅಧಿಕಾರಿಗಳು ಮಾಡಿದ ಬೆಳೆಯ ಅಂದಾಜು ಎಷ್ಟು ತಪ್ಪಿದೆಯೆಂಬುದು ಸ್ಪಷ್ಟ ತಿಳಿಯುತ್ತದೆ. ಸರಕಾರಿ ಲೆಕ್ಕದಂತೆ ಮಂಜಪ್ಪನಲ್ಲಿ ೧೭೯ ಮುಡಿ ಭತ್ತ ಬೆಳೆದಿರಬೇಕು. ಆದರೆ ಈಗ ಪ್ರತ್ಯಕ್ಷ ನೋಡಿದಲ್ಲಿ, ತೀರ ಅಧಿಕಾರಿಗಳು ಬಲಾತ್ಕಾರದಿಂದ ಒಯ್ದ ಭತ್ತ ೬೨ ಮುಡಿ, ಮಂಜಪ್ಪನು ಹಿಂದೆ ಸ್ವಸಂತೋಷದಿಂದ ಕೊಟ್ಟ ಭತ್ತ ೬। ಮುಡಿ, ಬೀಜಕ್ಕೆ ಬಿಟ್ಟ ಭತ್ತ ೮ ಮುಡಿ, ಊಟಕ್ಕೆ ಬಿಟ್ಟ ೮ ಮುಡಿ ಅಕ್ಕಿಯ ಭತ್ತ ೧೬ ಮುಡಿ ಮತ್ತು ಕಳೆದ ೨-೩ ತಿಂಗಳಲ್ಲಿ ಮಂಜಪ್ಪನು ಸಂಸಾರಕ್ಕೆ ಉಪಯೋಗಿಸಿಕೊಂಡಿರಬಹುದಾದ ಅಂದಾಜ ೧೦ ಮುಡಿ ಹೀಗೆ ಬರೇ ೧೦೨। ಮುಡಿ ಭತ್ತ ಮಂಜಪ್ಪನ ಹೊಲಗಳಲ್ಲಿ ಬೆಳೆದದ್ದು ಕಂಡುಬರುತ್ತದೆ! ಮಂಜಪ್ಪನು ತನ್ನ ಕರುಣ-ಕಥೆಯನ್ನು ಸವಿಸ್ತಾರವಾಗಿ ಜಿಲ್ಲಾಧಿಪರಿಗೆ ತಿಳಿಸಿದ್ದಾನಂತೆ. ಜಿಲ್ಲಾಧಿಪರು ಅದನ್ನು ಅಂತಃಕರಣಪೂರ್ವಕ ಪರಿಶೀಲಿಸಿ ಮಹಾಲಕರಿಗಳ ಭತ್ತ-ಖರೀದಿಯ ಉತ್ಸಾಹದ ದಾಟಿಯಿಂದ ಅಮಾಯಕರ ರೈತರನ್ನು ಕೂಡಲೇ ಸಂರಕ್ಷಿಸಬೇಕಾಗಿ ಬಿನ್ನವಿಸಿದೆ.

ESTD: 1934.

The Agricultural & Industrial Bank, Ltd.

[Incorporated in British India, Liability of Members limited]

Head Office: COONDAPOOR. S. K.

Branches:-

ANKOLA, DHARWAP, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor. 15—2—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬಹಳ ಕಡಿಮೆ. ರಸ್ತೆಗಳಲ್ಲಿ ಧೂಳು ಬಹಳವಾಗಿದೆ. ಗಾಳಿ ಬಂದರೆ ಇಲ್ಲವೆ ವಾಹನಗಳು ಓಡಾಡಿದರೆ ವಾತಾವರಣವೆಲ್ಲ ಧೂಳಿಮಯವಾಗಿ ಮಾರ್ಗಸ್ಥರಿಗೂ ಅಕ್ಕಪಕ್ಕದಲ್ಲಿರುವವರಿಗೂ ಧೂಳಿಯ ಸ್ನಾನವಾಗುತ್ತಿದೆ! ಆದರೂ ಮಾರ್ಗದ ಮೇಲೆ ನೀರು ಹಾಕುವ ಆಲೋಚನೆ ನಗರ ಸಭೆಗೆ ಆಗಲೊಲ್ಲದು! ಈ ಧೂಳಿಯ ಕಾಟ ಆರೋಗ್ಯಕ್ಕೆ ತೀರ ಅಪಾಯಕರವೆಂದು ವೈದ್ಯಶಾಸ್ತ್ರಜ್ಞರು ಒಮ್ಮತದಿಂದ ಹೇಳುತ್ತಾರೆ! ಊರಿನ ನಾಗರಿಕರ ಆರೋಗ್ಯ ರಕ್ಷಣೆಯ ಹೊಣೆ ಹೊತ್ತು ಮತ್ತು ಆ ಹೊಣೆಯನ್ನು ನಿರ್ವಹಿಸುವದಕ್ಕಾಗಿ ಸಾರ್ವಜನಿಕ ಆರೋಗ್ಯ ರಕ್ಷಣೆಯ ತೆರಿಗೆಯೆಂದು ವಿಶೇಷ ತೆರಿಗೆ ಹೇರಿರುವ ನಗರಸಭೆಯವರಿಗೆ ಮಾತ್ರ ಈ ಮಾತು ಗೊತ್ತಿಲ್ಲವೇನೋ! ಜಿಲ್ಲಾಧಿಪರು ಅವರಿಗೆ ಅದರ ಅರಿವು ಮಾಡಿಕೊಟ್ಟಲ್ಲಿ ಊರ ಜನರ ಮೇಲೆ ದೊಡ್ಡದೊಂದು ಉಪಕಾರವಾದೀತು.

ಪ್ರಾಂತಾಧಿಪರ ಸಲಹೆಗಾರ ಸರ್ ಕ್ರಿಸ್ಟಿ ಟೈಸನ್ನರು ಕಳೆದ ಸೋಮವಾರ ಇಲ್ಲಿಯ ಸೀಧಾ ಕಚೇರಿಗೆ ಭೆಟ್ಟಿ ಕೊಟ್ಟಾಗ ಬಹಳಷ್ಟು ಜನರು ತಮ್ಮ ಸೀಧಾ-ಧಾನ್ಯ ಒಯ್ಯುವೆ ಇರುತ್ತಿದ್ದುದು ಅವರ ದೃಷ್ಟಿಗೆ ಬಿತ್ತಂತೆ. ಒಂದೇ ಊರಿನಲ್ಲಿಲ್ಲದ ಜನರ ಹೆಸರು ಹಚ್ಚಿಕೊಟ್ಟು ಮನೆಗಳ ಮಾಲೀಕರು ಅವರ ಹೆಸರಲ್ಲಿ ಸೀಧಾ-ಚೀಟಿ ಮಾಡಿಕೊಂಡಿರಬೇಕು ಮತ್ತು ಆ ಜನರ ಅಭಾವದಲ್ಲಿ ಈಗ ಸೀಧಾಧಾನ್ಯದ ಆವಶ್ಯಕತೆಯಿಲ್ಲದ್ದರಿಂದ ಆ ಮಾಲೀಕರು ತಮ್ಮ ಪೂರ್ಣ ಸೀಧಾ ಒಯ್ಯದೆ ಉಳಿಯುತ್ತಿರಬೇಕು ಇಲ್ಲವೆ ಸೀಧಾ-ಅಧಿಕಾರಿಗಳು ಹಿಂದೆ ಚೌಕಶಿ ಮಾಡಿದಾಗ ಜನರು ಅಕ್ಕಿಯ ಶಿಲ್ಕು ಕಡಿಮೆ ಬರೆಕೊಟ್ಟು, ಈಗ ಆ ಶಿಲ್ಕು ಅಕ್ಕಿಯನ್ನೇ ಉಣ್ಣುತ್ತಿರುವದರಿಂದ ಸೀಧಾ-ಅಕ್ಕಿ ಒಯ್ಯುವ ಅವಶ್ಯಕತೆ ಅವರಿಗೆ ಅನಿಸದಿರುತ್ತಿರಬೇಕು ಎಂದು ಸರ್ ಕ್ರಿಸ್ಟಿಯವರ ಭಾವನೆಯಾಗಿ, ಸೀಧಾ ಅಧಿಕಾರಿಗಳು ತಮ್ಮ ಚೌಕಶಿಯಲ್ಲಿ ಏನಾದರೂ [illegible] ಮಾಡಿಲ್ಲವಲ್ಲ ಎಂದು ಉದ್ಗರಿಸಿದರಾಗಿ ತಿಳಿಯುತ್ತದೆ. ಸರಕಾರದವರಿಟ್ಟ ಅಕ್ಕಿಯ ದರ ಭಾರಿ ಇರುವದರಿಂದ ಮತ್ತು ಅಷ್ಟು ಧಾರಣೆ ಕೊಡಲಾಗದ್ದರಿಂದ ಅನೇಕರು ಅಕ್ಕಿ ಒಯ್ಯದೆ ಅಂತಃ ಉಪವಾಸ ತೆಗೆಯುತ್ತಿರಬಹುದು ಎಂಬ ಮೂರನೇ ಅನುಮಾನ ಸರ್ ಸಾಹೇಬರಿಗೆ ಹೊಳೆಯದಿದ್ದದ್ದು ವಿಷಾದಕರ. ಅಕ್ಕಿ ಒಯ್ಯದಿದ್ದವರ ಸೀಧಾ-ಚೀಟಿಗಳನ್ನೆಲ್ಲ ಕೈಯಲ್ಲಿ ತಕ್ಕೊಂಡು ಅಧಿಕಾರಿಗಳು ನಿರ್ವಿಕಾರ ಮತ್ತು ಪೂರ್ಣ ಚೌಕಶಿ ಮಾಡಿದಲ್ಲಿ ಈ ಮೂರನೇ ಅನುಮಾನವೇ ಬಹ್ವಂಶದಿಂದ ನಿಜವಿರುವದೆಂದು ಅವರಿಗೆ ಕಂಡು ಬರದಿರಲಾರದು.

ಊರಲ್ಲೀಗ ಸರಾಯಿಯ ವ್ಯಾಪಾರ ಬಹಳಷ್ಟು ಬೆಳೆದಿದೆ. ಮದ್ಯಪ್ರತಿಬಂಧ ಬರುವ ಮೊದಲು ಸರಾಯಿಯ ಪ್ರಚಾರ ಇಷ್ಟು ನಡೆಯುತ್ತಿದ್ದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಎಲ್ಲ ವರ್ಗಗಳಲ್ಲೂ ಮದ್ಯಪಿಗಳು ಕಂಡು ಬರುತ್ತಾರೆ! ಸರಾಯಿ ಕುಡಿಕೊಂಡು ನಾಟಕ-ಸಿನೇಮಾಗಳಿಗೆ ಬಂದು ಕೂಡ್ರುವವರಿದ್ದಾರೆ! ಕಚೇರಿಗೆ ಬರುವಾಗಲೂ ಒಂದಿಷ್ಟು ಸರಾಯಿ ಕುಡಿದು ಉತ್ತೇಜಿತರಾಗಿ ಬರುವ ಮಂದಿಯನ್ನೂ ಕಾಣಬಹುದು! ಹೀಗೆ ಮುಚ್ಚು-ಮರೆಯಿಲ್ಲದೆ ಕುಡುಕರು ಸಮಾಜದಲ್ಲಿ ತಲೆಯೆತ್ತಿ ತಿರುಗಾಡುತ್ತಿರಬೇಕಾದರೆ ಮದ್ಯಪಿಗಳಿಗೆ ಯಾರ ಭೀತಿಯೂ ಇಲ್ಲವೆಂದು ಸಿದ್ಧವಾಗುತ್ತದಲ್ಲವೇ? ಮದ್ಯಪಾನ ಪ್ರತಿಬಂಧವಿದ್ದ ಪ್ರದೇಶದಲ್ಲಿ ಹೀಗೆ ಸರಾಯಿಯ ಸಾಮ್ರಾಜ್ಯ ಹಬ್ಬಗೊಡುವ ಸರಕಾರದವರ ಕಾರ್ಯ-ತತ್ಪರತೆಯನ್ನೂ ಕಾರ್ಯ-ಕ್ಷಮತೆಯನ್ನೂ ಹೊಗಳಬೇಕೋ ತೆಗಳಬೇಕೋ ಎಂಬುದನ್ನು ಓದುಗರೇ ನಿರ್ಧರಿಸಲಿ.

ಇಲ್ಲಿಯ ಪಂಚಪರ್ವಾಣ ಕಮಿಟಿಯವರ ಅಂಕೆಯಿಲ್ಲದ ಕಾರಭಾರ ಅನಿರ್ಬಂಧವಾಗಿ ನಡೆದಿದೆ. ಸ್ವತಃ ಕಮಿಟಿಯ ಚೇರಮನ್ನರು ಕಳೆದ ವರ್ಷ ಈ ಜಿಲ್ಲೆಯ 'ಪಬ್ಲಿಕ್ ಟ್ರಸ್ಟರಜಿಸ್ಟ್ರಾರ'ರಿಗೆ ಕೊಟ್ಟ ಲೆಕ್ಕದಂತೆ ಕಮಿಟಿಯ ಕಡೆಗೆ ೪೯ ಸಾವಿರ ರೂಪಾಯಿಗಳಷ್ಟು ವಿಶ್ವಸ್ತ ನಿಧಿಯುಂಟು. ಅದರಲ್ಲಿ ೧೯ ಸಾವಿರ ರೂಪಾಯಿ ನಗದಿ ಶಿಲ್ಕೆಂದು ಚೇರಮನ್ನರು ಲೆಕ್ಕದಲ್ಲಿ ತೋರಿಸಿದ್ದಾರೆ! ಈ ಹಣ ಬೇಂಕಿನಲ್ಲಾಗಲಿ ಸರಕಾರಿ ಬಾಂಡುಗಳಲ್ಲಾಗಲಿ ತೊಡಗಿಸಿ ಬಡ್ಡಿ ಸಿಗುವಂತೆ ಮಾಡಲಿರುತ್ತಿದ್ದಿಲ್ಲವೇನೆಂಬುದೊಂದು ಪ್ರಶ್ನೆ. ಸರಕಾರದವರು ಸಾಲಪತ್ರಗಳನ್ನು ಕೊಂಡುಕೊಳ್ಳಿರೆಂದು ಮುಕ್ತಕಂಠವಾಗಿ ಸಾರುತ್ತಿರುವಾಗ ಕಮಿಟಿಯ ಬಹುಸಂಖ್ಯ ಸದಸ್ಯರು ಈ ಹಣವನ್ನು ತಮ್ಮ ಪೆಟ್ಟಿಗೆಯಲ್ಲಿ ಹಾಗೆಯೇ ಇಟ್ಟುಕೊಳ್ಳಲು ಕಾರಣವಿಲ್ಲವಾಗಿಯೂ ಕಮಿಟಿಯವರ ಶಿಲ್ಕೆಂಬುದು ನಾಮಮಾತ್ರ ಶಿಲ್ಕಿರಬೇಕಾಗಿರುವದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಯಾವ ಸಂಸ್ಥೆಗಳ ಬಗ್ಗೆ ತೆಗೆದಿಟ್ಟ ಧರ್ಮಾದಾಯವನ್ನು ಕಮಿಟಿಯ ವ್ಯಾಪಾರಸ್ಥರು ತಮ್ಮ ಕಡೆಗೆ ಒತ್ತಿ ಹಿಡಿದರೋ ಆ ಸಂಸ್ಥೆಗಳಿಗೂ ಕಮಿಟಿಯವರು ಆ ಹಣವನ್ನು ಒಪ್ಪಿಸುವದಿಲ್ಲ, ಅಥವಾ ಆ ಸಂಸ್ಥೆಗಳ ಬಗ್ಗೆ ವಿನಿಯೋಗಿಸಲಿಕ್ಕೂ ಸಿದ್ಧರಿಲ್ಲ. ಶ್ರೀ ಕುಂಬೇಶ್ವರ ದೇವಸ್ಥಾನವು ಬಹಳ ಜೀರ್ಣವಾಗಿರುವದಾದರೂ ಆ ದೇವಸ್ಥಾನದ ಬಗ್ಗೆ ತೆಗೆದಿಟ್ಟ ಹಣ ಖರ್ಚು ಮಾಡಿ ಅದರ ಜೀರ್ಣೋದ್ಧಾರ ಮಾಡುವಾ ಎಂಬ ಕಲ್ಪನೆ ಕಮಿಟಿಯವರ ತಲೆಯಲ್ಲಿ ಸುಳಿಯಲೊಲ್ಲದು! ಇಲ್ಲಿಯ ಉಂಗರು ಮಠದ ಬಾಬು ಕಮಿಟಿಯವರ ಕಡೆ ೨೦-೨೨ ಸಾವಿರ ರೂಪಾಯಿಗಳಷ್ಟು ಹಣವುಂಟು. ಅದರೊಳಗಿಂದ ಕೆಲವು ಹಣವನ್ನಾದರೂ ಖರ್ಚು ಮಾಡಿ ಮಳೆಯ ನೀರು ಮಠದಲ್ಲಿ ಸೋರದೆ ಹೊರಗೇ ಹೋಗುವಂತೆ ಮಾಡುವಾ ಎಂಬ ವಿಚಾರ ಕಮಿಟಿಯ ಸದಸ್ಯರನ್ನು ವರ್ಷದಿಂದ ಸ್ಪರ್ಶಿಸುವದಿಲ್ಲ! ಕಮಿಟಿಯ ಹಣದ ನಿಜವಾದ ಸೂತ್ರಧಾರರು ಈಗ ಯಾರು ಎಂಬುದೂ ತಿಳಿಯದು! ಕಮಿಟಿಯ ಹಣದ ಸಂಬಂಧವೇನೂ ತಮಗಿಲ್ಲೆಂದು ೨-೩ ಸದಸ್ಯರು ಹೇಳುತ್ತಾರೆ! ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನದವರು ಕಮಿಟಿಯ ವಿರುದ್ಧ ದಾವೆ ಮಾಡಲು ಪರವಾನಗಿ ಬೇಡಿ ಜಿಲ್ಲಾಧಿಪರಿಗೆ ಅರ್ಜಿ ಮಾಡಿದ್ದಾರೆಂದು ಸುದ್ದಿಯಿದೆ. ಆದರೆ ಮಹಾಬಲೇಶ್ವರ ದೇವಸ್ಥಾನದವರ ದಾವೆ ಅವರ ಮಟ್ಟಿಗಷ್ಟೇ ಆಗುವದು. ಕಾರಣ ಇನ್ನುಳಿದ ಸಂಸ್ಥೆಗಳ ಧುರೀಣರೂ ಇದೇ ಕಾಲಕ್ಕೆ ಜಿಲ್ಲಾಧಿಪರ ಅಪ್ಪಣೆ ಪಡೆಕೊಂಡು ಕಮಿಟಿಯವರ ಕಡೆಗಿದ್ದ ಹಣದ ಯೋಗ್ಯ ವ್ಯವಸ್ಥೆ-ವಿನಿಯೋಗಗಳಾಗುವಂತೆ ಯೋಗ್ಯ ಕ್ರಮ ಕೈಕೊಳ್ಳುವದೊಳಿತು. ಸ್ವತಃ ಜಿಲ್ಲಾಧಿಪರೇ ಮುಂದಾಗಿ ಕ್ರಮ ಕೊಂಡರೆ ಉತ್ತಮವಾದೀತು.

ಕಾರವಾರ— ಈ ತಾಲೂಕಿನ ಶಿಕ್ಷಕರು ತಮ್ಮದೊಂದು ಸಂಘವನ್ನೇರ್ಪಡಿಸಿಕೊಂಡು, ತಮ್ಮ ಸಮಾಜದೊಳಗಿನ ಶಾಲೆಗೆ ಹೋಗದ ಹುಡುಗ-ಹುಡುಗಿಯರ ಗಣನೆ ಮಾಡಿಕೊಂಡು ಆ ಹುಡುಗ ಹುಡುಗಿಯರನ್ನು ಶಾಲೆಗೆ ಕಳಿಸಿಕೊಡುವಂತೆ ಅವರ ತಾಯಿ ತಂದೆಗಳ ಮನವೊಲಿಸಬೇಕೆಂದೂ, ಶಾಲೆಗೆ ಹೋಗುವ ಸ್ಥಿತಿಯ ಹುಡುಗ-ಹುಡುಗಿಯರ್‍ಯಾದಿ ತಯಾರಿಸಿ ಅವರಿಗೆ ಮಾಧ್ಯಮಿಕ ಶಾಲೆಗೆ ಹೋಗಲು ಪ್ರೋತ್ಸಾಹಿಸಬೇಕೆಂದೂ ಬಡ ವಿದ್ಯಾರ್ಥಿಗಳಿಗೆ ಫೀ ಹಣ, ಪುಸ್ತಕ ಮೊದಲಾದ ಅವಶ್ಯವಸ್ತುಗಳ ಸಹಾಯ ಒದಗಿಸಿಕೊಡಬೇಕೆಂದೂ ತೀರ್ಮಾನಿಸಿದ್ದಾರೆ. ಜ್ಞಾತಿಯಲ್ಲಿ ಮದುವೆಗಳಾದಾಗ ಮದುಮಗನ ಪಕ್ಷದವರಿಂದ ರೂ ೨ರಂತೆ ಮತ್ತು ಮದುಮಗಳ ಪಕ್ಷದವರ ಕಡೆಯಿಂದ ರೂ ೧ರಂತೆ ವಂತಿಗೆ ವಸೂಲ ಮಾಡುವ ನಿರ್ಣಯವಾಗಿದೆ. ಪ್ರಾರಂಭದ ಒಂದು ವರ್ಷದಲ್ಲಿ ಸಂಘಕ್ಕೆ ಮಾರ್ಗದರ್ಶಕ ಅಧ್ಯಕ್ಷರಾಗಲು ರಾ|| ಮಾವಿನಕುರ್ವೆ ವಕೀಲರು ಒಪ್ಪಿದ್ದಾರೆ.

ಈ ವರ್ಷದ ಗಂಡು ಮಕ್ಕಳ ಮುಲ್ಕೀ ಪರೀಕ್ಷೆಯು ತಾ ೯-೪ ೪೫ಕ್ಕೆ ಪ್ರಾರಂಭವಾಗುವದು.

(೧ನೇ ಪೇಜಿನ ಮೇಲಿಂದ ಮುಂದರಿಸಿದೆ.)

ಕನ್ನಡ ಎಟ್ಲಾಸ

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಸಮರ-ವಾರ್ತಾಕಾಂಕ್ಷಿಗಳಿಗೂ ಸ್ಥಳ-ಪರಿಚಯ ಮಾಡಿಕೊಡುವ ಅಮೂಲ್ಯ ಭೂಪಟ ಬೆಲೆ ರೂ ೧—೮—೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಜಾಹೀರ ನೋಟೀಸು.

ಯಾವತ್ತು ಜನರಿಗೆ ಈ ಮೂಲಕ ತಿಳಿಸುವದೇನೆಂದರೆ:-- ಹೊನ್ನಾವರ ತಾಲೂಕ ಮಾಳಕೋಡ ನಿವಾಸಿ ತಿಗೊಳ್ಳಿ ವಿಷ್ಣು ಗಣಪ ಭಟ್ಟನು ಈ ಕೆಳಗೆ ಸಹಿ ಮಾಡಿದ ನನ್ನ ಖಾಸ ಸಹೋದರನಾಗಿದ್ದು, ಅವನು ಕಳೆದ ತಾ ೨೭-೮-೪೪ಕ್ಕೆ ಮರಣಪಟ್ಟಿದ್ದಾನೆ. ಆ ಕಾಲಕ್ಕೆ ಅವನಿಗೆ ಮಾಳಕೋಡ, ಗುಣವಂತೆ ಮುಂತಾದ ಗ್ರಾಮಗಳಲ್ಲಿ ಅಜಮಾಸ ರೂ ೧೦,೦೦೦ ಬೆಲೆ ಬಾಳುವ ಸ್ಥಿರ ಸೊತ್ತು, ಅಜಮಾಸ ರೂ. ೮೦೦೦ ಬೆಲೆಯ ಚರ ಸೊತ್ತು ಮತ್ತು ಅಜಮಾಸ ರೂ. ೨೦೦೦ ಕ್ರಯದ ಮಾಸ್ತರ್ಯದ ಮನೆ ಕೂಡಾ ಇದ್ದವು. ಇವುಗಳಲ್ಲಿ ಕೆಲವನ್ನು ಅವನು ನರಸಿಂಹ ಗಣಪ ಭಟ್ಟ ಇವನಿಗೆ ಬಕ್ಷೀಸ ಮಾಡಿ ಕೊಟ್ಟಿದ್ದನು. ಉಳಿದ ಪೂರಾ ಸ್ಥಿರ-ಚರ ಆಸ್ತಿ ತನ್ನ ಹೆಂಡತಿ ಸುಬ್ಬಮ್ಮ ಇವಳ ತಾಬೆ ಬಿಟ್ಟಿದ್ದನು. ಈ ಆಸ್ತಿಗಳ ಉತ್ಪನ್ನ ಅವಳ ಅನ್ನ-ವಸ್ತ್ರ-ಚರಿತಾರ್ಥಕ್ಕೆ ಸಾಕಾಗುವಷ್ಟುಂಟು. ಆದರೂ ಸದರಿ ಸುಬ್ಬಮ್ಮಳು ತನ್ನ ತಮ್ಮ ಮಹಾಬಲೇಶ್ವರ ವಿಷ್ಣು ಹೆಗಡೆ ಕೆರಮನೆ ಇವರ ದುರ್ಬೋಧನೆಯಿಂದ [illegible] ನನ್ನ ಹಕ್ಕಿಗೆ ದಗೆಪಡಿಸುವ ಇರಾದೆಯಿಂದ ಗಂಡನ ಆಸ್ತಿಯನ್ನು ಪರಾಧೀನ ಮಾಡುತ್ತಾಳೆಂದು ತಿಳಿದುಬರುತ್ತಿದೆ. ಅವಳಿಗೆ ಈ ರೀತಿ ಪರಾಧೀನ ಮಾಡಲು ಏನೂ ಕಾರಣ ಯಾ ಗರಜು ಇರುವದಿಲ್ಲ, ಹೊಸ ಸಾಲ ಮಾಡುವ ಗರಜೂ ಇರುವದಿಲ್ಲ. ಕಾರಣ ಅವಳು ಸ್ವಕಲ್ಪನೆಯ ಯಾ ಕಾಲ್ಪನಿಕ ಸಾಲಗಳನ್ನು ಇಲ್ಲವೆ ಗರಜು ಕಾಣಿಸಿ ಗಂಡನ ಆಸ್ತಿ ಪರಾಧೀನ ಮಾಡಿದಲ್ಲಿ ಆ ಪರಾಧೀನತೆಗಳು ನನ್ನನ್ನು ಬಾಧಿಸಲಾರವು. ಯಾರೂ ಅವಳಿಂದ ಕ್ರಯ, ಅಡವು, [illegible], ಮೂಲಗೇಣಿ ವಗೈರೆ ರೂಪದಿಂದ ಪರಾಧೀನತೆ ದಸ್ತು ಮಾಡಿಕೊಳ್ಳಬಾರದೆಂದು ಈ ಮೂಲಕ ತಿಳಿಸುತ್ತೇನೆ.

ತಾ. ೮-೩-೧೯೪೫.

● ಈ ಎ ಹೆ ಗುರ್ತು ಮಹಾದೇವಿ ಕೋಂ ಸದಾನಂದ ಹೆಗಡೆ, ಕೆಳಗಿನೂರ ತಾ. ಹೊನ್ನಾವರ ಇವಳದು

The Presidency Provident & General Insurance Co., Ltd.,
Meherwan Bldg., Sir P. Mehta Road,
Fort BOMBAY.

NOTICE.

Notice is hereby given that the Policy No. C 57590 granted by the above Company in the name of Mr. V. S Lokare of Sirsi is lost or mislaid. Any person claiming the above policy should notify his claim to the Company within one month from this date Otherwise the Company will issue the duplicate copy of the above said policy to the said Policy-holder.

6-3-1945.

N. J. GOR.
Managing Director

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಇದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡ[illegible]ರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ತಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ. ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ಬೇಕು !

ಕರ್ನಾಟಕದಲ್ಲೆಲ್ಲ ನಮ್ಮ ಪ್ರತಿನಿಧಿಗಳಾಗಿ ಕೆಲಸ ಮಾಡಲು ಮಹತ್ವಾಕಾಂಕ್ಷಿ ತರುಣರು ಬೇಕು!
ಆಕರ್ಷಕ ಸವಲತ್ತುಗಳುಂಟು; ಒಳ್ಳೇ ಸಂಪಾದನೆಗೂ ಅವಕಾಶವುಂಟು.
ವಿಶೇಷ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಲಕರ್ಣಿ ಮತ್ತು ಕಂಪನಿ,
ಚೀಫ್ ಒರ್ಗನೈಝರ್ಸ
ಮುಂಬಯಿ ಕೋ-ಒಪರೇಟಿವ್ ಇನಶೂರನ್ಸ ಸೊಸಾಯಟಿ, ಲಿ.,
ನವಸಾರಿ ಬಿಲ್ಡಿಂಗ, ಹೊರ್ನಬಿ ರೋಡ, ಮುಂಬಯಿ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲವ್ಯಯ ಸಹ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಮುಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 19th March, 1945.

ಕಾನಡಾವೃತ್ತ.

ವರ್ಷ ೨೭.] **THE KANARA NEWS.** [ಸಂಚಿಕೆ ೩೭

ಕುಮಟಾ:- ಸೋಮವಾರ, ತಾ. ೧೯ ಮಾಹೆ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧ ಇಂಚ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಕ್ಲೋಜಪ್ಪಾ ೧ ಇಂಚ್ ಉದ್ದ
೧ ಸಾರಿಗೆ ೪ ಆಣೆಯಂತೆ.
ಹೆಚ್ಚು ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಅಲ್ಲದೆ ಪತ್ರದ್ವಾರಾ
ತಿಳಿಸಲಾಗುವದು.

ವಿಜಯೋತ್ಸವದ ತಯಾರಿ!

(ನಿರೀಕ್ಷಕರು ಬರೆಯುವದು.)

ಯುರೋಪಿನ ಯುದ್ಧ ಬೇಗನೇ ಮುಗಿಯುವದೆಂದು ಮಿತ್ರ-ಪಕ್ಷದವರು ಹಾರೈಸುತ್ತಾರೆ. ೪೦ ದಿವಸಗಳೊಳಗಾಗಿ ಜರ್ಮನರ ಶರಣಾಗತಿಯ ಪತ್ರವನ್ನು ಕಳ್ಕೊಂಡು ಜರ್ಮನ ಸೇನಾನಿಗಳೊಬ್ಬರು ಮಿತ್ರರ ಕಡೆ ಬರುವರೆಂದು ಅಮೇರಿಕೆಯ ವಾಶಿಂಗ್ಟನ ಪಟ್ಟಣದ ಜನರು ಹಾರೈಸುತ್ತಿದ್ದಾರಂತೆ. ಏಪ್ರಿಲ್ ೨೫ ತಾರೀಖಿಗೆ ಮಿತ್ರ-ಪಕ್ಷೀಯ ರಾಷ್ಟ್ರಗಳ ಪ್ರತಿನಿಧಿಗಳ ಪರಿಷತ್ತು ಸಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಕೂಡಲಿದೆ. ಅದರ ಮುಂಚೆಯೇ ಈ ಶರಣಾಗತಿಯ ಪತ್ರ ಬರುವದೆಂದು ಅಪೇಕ್ಷಿಸುವವರ ಅಂದಾಜು. ಒಂದು ವೇಳೆ ಜರ್ಮನರು ಹಟವಾದಿಗಳಾಗಿ ಶರಣು ಬಾರದಿದ್ದರೆ ಆ ಕಾಲಕ್ಕೆ ಜರ್ಮನಿಯ ಮುರಿದೋದನ್ನು ಖಚಿತವಾಗಿ ನಡೆಯುತ್ತಿರುವ ನೋಟವನ್ನು ಮಿತ್ರರು ಕಾಣಬಹುದಂತೆ! ವಿಲಾಯಿತಿಯ ಜನರು ಇನ್ನೂ ಮುಂದೆ ಹೋಗಿ ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲೇ ಯುದ್ಧ ಮುಗಿಯುವದೆಂದು ನಿರೀಕ್ಷಿಸಿ, ಈಗಾಗಲೇ ವಿಜಯೋತ್ಸವದ ತಯಾರಿ ಮಾಡಲಾರಂಭಿಸಿದ ವರ್ತಮಾನವುಂಟು. ವಿಜಯೋತ್ಸವದ ಸಮಾರಂಭದಲ್ಲಿ ಸಿಹಿ ತಿಂಡಿ-ತಿನಸುಗಳನ್ನು ಪೂರೈಸುವದಕ್ಕಾಗಿ ಮಿಠಾಯಿ ಅಂಗಡಿಕಾರರು ಈಗಾಗಲೇ ತಮ್ಮ ನಿತ್ಯದ ಸಕ್ಕರೆಯ ಖರ್ಚನ್ನು ಕಡಿಮೆ ಮಾಡಿ ಸಕ್ಕರೆ ಸಂಗ್ರಹಿಸಲಾರಂಭಿಸಿದ್ದಾರೆಂದೂ ಪೇಯ-ಪಾನಕಗಳ ವ್ಯಾಪಾರಿಗಳು ಅವಶ್ಯವಾದ ಸಾಹಿತ್ಯ-ಸಂಭಾರ ಕೂಡಿಸಿಕೊಂಡಿದ್ದಾರೆಂದೂ ಸುದ್ದಿ ಬಂದಿದೆ. ಜರ್ಮನರು ಸಂಧಾನದ ಪ್ರಸ್ತಾಪ ನಡೆಸಲು ತಮ್ಮ ರಾಯಭಾರಿಗಳನ್ನು ಕಳುಹಿಕೊಟ್ಟಿದ್ದಾರೆಂದೂ ಸಂಪೂರ್ಣ ಶರಣಾಗತಿಯ ಮಾತಿನ ವಿನಾ ಬೇರೆ ಮಾತು ಕೇಳಲಿಕ್ಕೆ ಮಿತ್ರರು ತಯಾರಿಲ್ಲವೆಂದೂ ಸ್ವೀಡನದ ರಾಜಧಾನಿಯಾದ ಸ್ಟಾಕಹೋಮದಿಂದಲೂ ಪೋರ್ಚುಗಾಲದ ರಾಜಧಾನಿಯಾದ ಲಿಸ್ಬನದಿಂದಲೂ ವಾರ್ತೆಗಳು ಬರುತ್ತಿವೆ. ಆದರೆ ಲಂಡನ್ನಿನಲ್ಲಿ ಈ ವಾರ್ತೆಗಳಿಗೆ ಆಧಾರವೇನೂ ಸಿಗುವದಿಲ್ಲವಂತೆ! ಈ ಸುದ್ದಿಗಳನ್ನು ಹುಟ್ಟಿಸುವವರಾರೆಂದೇ ತಿಳಿಯದು! ಮಿತ್ರರಿಗೆ ಬೇಕಾದದ್ದು ಜರ್ಮನಿಯ ಸಂಪೂರ್ಣ ಶರಣಾಗತಿ! ಜರ್ಮನ ಸೇನಾನಾಯಕರೆಲ್ಲ ಶರಣು ಬರಬೇಕೆಂತೆ; ತಮ್ಮ ಸೈನಿಕರೂ ತಮ್ಮ ಶಸ್ತ್ರಾಸ್ತ್ರಗಳನ್ನು ಮಿತ್ರ ಸೇನಾನಾಯಕರಿಗೆ ಒಪ್ಪಿಸಿ, ಮಿತ್ರರ ದಳಪತಿಗಳು ಹೇಳಿದಲ್ಲಿ ಹೋಗಿ ಹೇಳಿದ ಕೆಲಸ ಮಾಡಲು ಒಪ್ಪಬೇಕಂತೆ! ಯುದ್ಧದಲ್ಲಿ ನಾಶ ಹೊಂದಿರುವ ಮಿತ್ರಪ್ರದೇಶಗಳ ಜೀರ್ಣೋದ್ಧಾರ ಮಾಡಿಕೊಡುವ ಕೆಲಸಕ್ಕೆ ಅವರನ್ನು ಈಗಲೇ ಹಚ್ಚಬೇಕೆಂಬ ಸಂಕಲ್ಪ ಮಿತ್ರರದಿರುತ್ತದಾಗಿ ಹೇಳುತ್ತಾರೆ! ಜರ್ಮನರು ಎಷ್ಟೇ ನುಗ್ಗಾಗಿ ಬಲಗುಂದಿರುವವಾದರೂ ಮಿತ್ರರ ಈ ಶರಣಾಗತಿಯ ಕರಾರುಗಳಿಗೆ ಎಂದೂ ಒಪ್ಪುವಂತಿಲ್ಲವೆಂದು ನನ್ನ ಎಣಿಕೆಯಾಗುತ್ತದೆ. ಮಿತ್ರರ ದಾಸರಾಗಿ ಬಾಳುವದಕ್ಕಿಂತ ರಣಭೂಮಿಯ ಮೇಲೆ ಹೋರಾಡುತ್ತ ಮಡಿವ [illegible]ಗಳ ಪಡೆಯುವ ಹವ್ಯಾಸ ಅವರು ಬಿಡದೆ [illegible]ಕೊಳ್ಳಬೇಕಾಗಿಲ್ಲ. ಮಿತ್ರ-ಪಕ್ಷದ ಸುದ್ದಿಗಾರರು ಹೇಳುವಷ್ಟು ಜರ್ಮನರು ಬಲಗುಂದಿಲ್ಲವೆಂದು ನಾನು [illegible]ಯುತ್ತೇನೆ. ಪಶ್ಚಿಮದಲ್ಲಿ ಮಿತ್ರರೂ ಪೂರ್ವದಲ್ಲಿ ರಷ್ಯರೂ ಒತ್ತೊತ್ತಿ ಮುಂದೆ ನುಗ್ಗುತ್ತಿದ್ದಾಗ್ಯೂ ಜರ್ಮನರ ಪ್ರತಿಭಟನೆಯ ರಭಸ ಕಡಿಮೆಯಾಗಿರುವದಿಲ್ಲ! ರಷ್ಯ ಸೇನಾನಿ ಝುಕೋವ್ಹರ ಸೇನೆಗಳು ಬರ್ಲಿನದಿಂದ ೨೫ ಮೈಲು ಅಂತರಕ್ಕೆ ಬಂದು ಮುಟ್ಟಿವೆಯಂತೆ. ಝುಕೋವ್ಹ ಸೇನೆ ೮-೧೦ ದಿನಗಳೊಳಗೆ ಬರ್ಲಿನ್ ಪ್ರವೇಶ ಮಾಡುವದೆಂದು ಈ ಸುದ್ದಿಗಾರರು ಸ್ಪಷ್ಟ ಹೇಳಿದ್ದರೂ ಹಾಗೆ ಧ್ವನಿಸುತ್ತಿದ್ದರೆ! ಮಿತ್ರರ ವಿಮಾನಗಳೆಂದೂ ಸಾವಿರಗಟ್ಟಲೆ ಹಾರಿಹೋಗಿ ಬರ್ಲಿನದ ಮೇಲೆ ಸಾವಿರಗಟ್ಟಲೆ ಟನ್ನು ಬಾಂಬುಗುಂಡುಗಳನ್ನು ಸುರಿದು ಬರುತ್ತಿವೆಯಂತೆ. ಈ ಪರಿಸ್ಥಿತಿ ನೋಡಿ ನನ್ನ ಮನಸ್ಸು ಸಂತೋಷಪಡುವ ಬದಲು ಬಹಳ ಕ್ಷುಬ್ಧವಾಗುತ್ತಿದೆ. ಇಂಥ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಸಿಲುಕಿಕೊಂಡ ಜರ್ಮನರು-ವಿಶೇಷವಾಗಿ ಹಿಟ್ಲರನ ಪ್ರಭಾವಳಿಯೊಳಗಿನ ಆ ರಾಕ್ಷಸರು - ಕೋಪೋದ್ರಿಕ್ತರಾಗಿ ಕೊನೆಗೆ ತಮ್ಮ ರಾಕ್ಷಸೀ ಅಸ್ತ್ರಗಳ ಪ್ರಯೋಗ ಮಾಡಿ ಇಡೀ ಯುರೋಪ ಖಂಡವನ್ನು ಘನಘೋರ ನರಕವನ್ನಾಗಿ ಮಾಡಿಬಿಟ್ಟಾರೆಂಬ ಅಂಜಿಕೆ ನನ್ನನ್ನು ಹಗಲಿರುಳು ಬಾಧಿಸುತ್ತದೆ. ಜರ್ಮನರು ಈಗ ಎಲ್ಲ ನೀತಿ-ನಿರ್ಬಂಧಗಳಿಂದ ಮುಕ್ತರಾಗಿದ್ದಾರೆಂದೂ ಆತ್ಮರಕ್ಷಣೆಗಾಗಿ ಅಲ್ಲದೆ ತಮ್ಮ ಶತ್ರುಗಳ ಭಕ್ಷಣೆಗಾಗಿ ಯಾವ ಬೇಕಾದ ಉಪಾಯ ಯೋಜಿಸಬಹುದೆಂದೂ ಮುಸೊಲಿನಿಯ ಅಳಿಯ ಸಾರವೇ ನಮಗೆ ಹೇಳಿದ್ದಾನೆ. ಲೋಕಕಲ್ಯಾಣಕ್ಕಾಗೆಂದು ಹೇಳಿ ಅಥವಾ ಮಿತ್ರರೂ ಪ್ರತಿಯಾಗಿ ಅಂಥ ಅಸ್ತ್ರಗಳನ್ನು ಉಪಯೋಗಿಸಿ ಜರ್ಮನಿಯನ್ನು ಉದ್ಧ್ವಸ್ತಗೊಳಿಸಬಹುದೆಂಬ ಭಯದಿಂದೆಂದು ಹೇಳಿ ಜರ್ಮನರು ಈ ವರೆಗೆ ವಿಷ ವಾಯು, ರೋಗಾಣು ಬೇನೆಗಳ ಪ್ರಸಾರ ಮುಂತಾದ ರಾಕ್ಷಸೀ ಅಸ್ತ್ರಗಳನ್ನು ಪ್ರಯೋಗಿಸಿರುವದಿಲ್ಲ. ಸಾಯುವಾಗ ಈ ಅಸ್ತ್ರಗಳನ್ನೂ ಅವರು ಪ್ರಯೋಗಿಸುವ ಭಯವುಂಟು. ಹಿಟ್ಲರನು ಅಂಥ ಸಹಸ್ರಾವಧಿ ರಾಕೆಟ್‌ಬಾಂಬುಗಳನ್ನೂ ಆಕಾಶಬಾಣಗಳನ್ನೂ ಸಿದ್ಧಪಡಿಸಿಟ್ಟಿದ್ದಾನೆಂದು ಹೇಳುತ್ತಾರೆ ಅವುಗಳ ಪ್ರಯೋಗವಾದರೆ ಶತ್ರುಗಳಂತೆ ಮಿತ್ರರೂ ಅಳಿವ ಪ್ರಸಂಗ ಬರುವದು ಖಂಡಿತ. ವಿಜಯೋತ್ಸವಕ್ಕಾಗಿ ಆತುರಗೊಂಡಿರುವ ಜನರು ಸಕ್ಕರೆ ಮುಂತಾದವುಗಳ ಸಂಗ್ರಹ ಮಾಡುವದಕ್ಕಿಂತ ಇಂಥ ದುರ್ಧರ ಪ್ರಸಂಗ ಬರದಂತೆ ಹಿಟ್ಲರನಿಗೂ ಅವನ ಅನುಯಾಯಿಗಳಿಗೂ ಸದ್ಬುದ್ಧಿ ದಯಪಾಲಿಸೆಂದು ದಯಾಘನ ದೇವರಿಗೆ ಅನುದಿನ ಪ್ರಾರ್ಥನೆ ಸಲ್ಲಿಸುವದೊಳ್ಳೆಯದೆಂದು ನನ್ನ ಅಭಿಪ್ರಾಯ

ಕನ್ನಡ ಎಟ್ಲಾಸ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಸಮುದ್ರ-ವಾಯುಮಾರ್ಗಾಕಾಂಕ್ಷಿಗಳಿಗೂ ಸ್ಥಳ-ಪರಿಚಯ ಮಾಡಿಕೊಡುವ ಅಪೂರ್ವ ಭೂಪಟ. ಬೆಲೆ ರೂ. ೧—೮—೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

NOTICE.

No. O/C. 150. Karwar 8th March 1945.

Stocks of minor cereals (pulses) held on Government accont in this district as shown in the appended schedule will be sold by public auction on 2nd April 1945 at 1 P. M. by the Mamlatdar or the Mahalkary concerned at his office.

SCHEDULE

Quantity approximately in bags (subject to alterations).
Bags of 32 cut paylees each.

Place of Storage.	Turdal	Gram	Gramdal	Masur
Karwar Taluka	396	—	1	78
Aukola Taluka	168	48	3	17
Kumta Taluka	134	—	2	1
Honavar Taluka	275	—	2	16
Bhatkal Petha	103	14	—	94
(Bags of 32 heaped paylees each)				
Siddapur Taluka	87	—	—	—
Sirsi Taluka	53	—	—	—
Yellapur Taluka	22	—	—	—
Haliyal Taluka	46	—	—	—
Supa Petha	3	—	—	—

The sale is subject to the following conditions.—

(1) One fourth of the total bid amount (calculated at the rates bid in the auction) shall immediately be deposited after the close of the sale and the remaining three fourths of the bid amount should be credited within 3 days from the date of the confirmation of the sale. In case of default *to credit the ¾ths of the bid amount in the prescribed time the sale* will be cancelled and the ¼th of the bid amount forfeited to Government

(2) The sale will be in one or more lots according to the discretion of the Mamlatdar or the Mahalkary.

(3) The sale will be subject to the confirmation by the Collector of Kanara His decision will be final.

(4) The bags of the said cereals will be delivered at the places where they are stored

(5) The bidders should take the delivery of the stock within 7 days from the date of confirmation of the sale, failing which godown charges and other incidental charges and a penalty of Rs- 25/- per day will be levied-

(6) No complaint as to the quality will be entertained after the auction Intending bidders will be allowed to inspect the grains before the auction day during office hours on any working day except on *holidays and Sundays at the places of storage.*

L. F. SALDANHA,
for COLLECTOR OF KANARA.

ESTD: 1934.

The Agricultural & Industrial Bank, Ltd.

(Incorporated in British India, Liability of Members limited)

Head Office: COONDAPOOR. S. K

Branches:-

ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor, 15—2—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯಿಲ್ಲ; ಸೆಕೆಯಾಗುತ್ತದೆ.

ಶುಕ್ರವಾರ ಸಂಜೆಯಿಂದ ಜಿಲ್ಲಾ ದೊರೆ ಮುಕ್ಕಾಮು ಇಲ್ಲುಂಟು.

ಸೀಧಾ-ಕ್ಷೇತ್ರಗಳ ಹೊರಗಿನ ಭಾಗಗಳಲ್ಲಿ ಯಾವಾತನೂ ತನ್ನಲ್ಲಿ ತನ್ನ ಮನೆಯ ಜನರಿಗೆ ತಲಾ ತಲೆಸೂತೆಯ ಅಳೆದ ೪೮ ವಾಯಲಿ ಇಕ್ಕಿನ ಕಲಿಗಾಂವಿ ಅಳೆದ ೪ ವಾಯಲಿ ಅಕ್ಕಿ ಮತ್ತು ಅಷ್ಟೇ ಇತರ ಧಾನ್ಯ (ಗೋದಿ, ಜೋಳ ಮತ್ತು ರಾಗಿ ಕೂಡಿ) ದೊರೆಯುವಂತೆ ಸಂಗ್ರಹವಿದ್ದರೆ ಸರಕಾರ-ಮಾನ್ಯ (ಸೀಧಾ) ಅಂಗಡಿಗಳಲ್ಲಿ ಈ ಧಾನ್ಯಗಳನ್ನು ಕೊಂಡುಕೊಳ್ಳಬಾರದವಾಗಿಯೂ, ಸಂಗ್ರಹವಿದ್ದ ಧಾನ್ಯ ಮತ್ತು ಕೊಂಡುಕೊಂಡ ಧಾನ್ಯ ಇವೆರಡೂ ಮೇಲೆ ಹೇಳಿದ ಪರಿಮಾಣ ಮೀರುವಂತಿದ್ದರೆ ಆ ಪರಿಮಾಣ ಮೀರದಷ್ಟೇ ಧಾನ್ಯವನ್ನು ಕೊಂಡುಕೊಳ್ಳಬೇಕೆಂತಲೂ ಜಿಲ್ಹಾಧಿಪರು ಒಂದು ಹೊಸ ಶಾಸನವನ್ನು ಹೊರಡಿಸಿದ್ದಾರೆ. ೬ ವರ್ಷಗಳೊಳಗಿನ ಮಕ್ಕಳಿಗೆ ಅರ್ಧ ಪರಿಮಾಣ ಹಿಡಿಯಲಾಗುವದು.

ಶ್ರೀ ಕುಂದಾಪುರ ನ್ಯಾಯವಾದಿ ಮಠದ ಅಧಿಕಾರಿಗಳಾದ ಶ್ರೀಮತ್-ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು (ಗಾಣಿಗ ಬಾಂಧವರ ಗುರುಗಳು) ನಿನ್ನೆ ಸಂಜೆ ಈ ಊರಿಗೆ ಚಿತ್ತೈಸಿ ಚಿತ್ರಗಿಯಲ್ಲಿರುವ ತಮ್ಮ ಮಠದಲ್ಲಿ ಇಳಿದಿರುತ್ತಾರೆ. ಸಾರ್ವಜನಿಕರ ಬಗ್ಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯದಲ್ಲಿ ಆದರದಿಂದ ಪ್ರವಚನ ಮಾಡಿಸುವ ವಿಚಾರವಿದೆ.

ಗೋಕರ್ಣದಲ್ಲಿ ಹೊರಗಿನಿಂದ [illegible] ದಿನದಿಂದ [illegible] ಸೀಧಾ-ಅಕ್ಕಿ [illegible] ಜಿಲ್ಲಾಧಿಕಾರಿ [illegible] ಜಿಲ್ಹಾಧಿಪರು ಈ ಅಧಿಕಾರಿಗಳಿಗೆ [illegible].

ಕಳೆದ ವಾರ ಗೋಕರ್ಣದವರೋರ್ವರು ಮಾಮಲೇದಾರರ ಪರವಾನಗಿ-ಚೀಟಿ ತಕ್ಕೊಂಡು ಗೋಕರ್ಣ ಗ್ರಾಮದ ಹೊರಗಿನಿಂದ ೬ ವಾಯಲಿ ಅಕ್ಕಿ ಗೋಕರ್ಣಕ್ಕೆ ಒಯ್ಯುತ್ತಿದ್ದಾಗ ಸುಪ್ರಸಿದ್ಧ ಕಂಟ್ರೋಲ-ಹವಾಲದಾರ ದಾಮೋದರನು ಅವರನ್ನು ಹಿಡಿದು, ಅವರು ನಡಿಸುತ್ತಿದ್ದ ಸ್ಯಾಕಲ ಸಹಿತ ಅವರ ಅಕ್ಕಿಯನ್ನು ಜಪ್ತ ಮಾಡಿಟ್ಟಿದ್ದಾನೆಂದು ಸುದ್ದಿಯಾದೆ. ಮಾಮಲೇದಾರರು ಕೊಟ್ಟ ಪರವಾನೆ-ಚೀಟಿಯಲ್ಲಿ ಇಂತಿಷ್ಟು ದಿನಗಳಲ್ಲಿ ಅಕ್ಕಿ ತರತಕ್ಕದ್ದೆಂದು ನಮೂದ ಇಲ್ಲದ್ದರಿಂದ ಆ ಪರವಾನೆ "ದೋಷಯುಕ್ತ" ಇರುತ್ತದೆಂದು ದಾಮೋದರನ ತೀರ್ಪು!

ಹೊನ್ನಾವರ— (ತಾ ೧೧-೩-೪೫) ಇಲ್ಲಿಯ ಸೀಧಾ-ಅಂಗಡಿಯಲ್ಲಿ ಕಾಚಿಗ ಅಕ್ಕಿ ಸಿಗುವದಿಲ್ಲ! ಕಾಚಿಗ ಅಕ್ಕಿಯ ದರ ಹಳ್ಳಿಗಳಲ್ಲಿ ವಾಯಲಿ ೧ಕ್ಕೆ ೨೪ ಆಣೆಯುಂಟು. ಆದರೂ ಇಲ್ಲಿಯ ಬಡವರು ವಾಯಲಿ ೧ಕ್ಕೆ ರೂ ೦-೩-೦ ದರವಿರುವ ಧಾಟಿ ಜಿಡ್ಡಿಗೆ ಅಕ್ಕಿಯನ್ನೇ ಕೊಂಡು ಕೊಂಡು [illegible] ! [illegible] !

ಕಾಯಿಪಲ್ಲೆ ಮಾರುವ [illegible] ನಗರ ಸಭೆಯವರು. ಇನ್ನು ವರೆಗೆ ಒಂದು ಮಾರ್ಕೆಟ ಕಟ್ಟಿಸಿಲ್ಲ! ಮಾರ್ಕೆಟ ಕಟ್ಟಿಸಲು [illegible]! [illegible] ಬೇಕಾದ, ಆರೋಗ್ಯ ದೃಷ್ಟಿಯಿಂದ [illegible] ಒಳ್ಳೆ [illegible] ಮಾಡಲಿಕ್ಕೆ ಮಾತ್ರ ಬೇಕಿಲ್ಲ [illegible]! [illegible] ಹಳ್ಳಿ [illegible] ಅಂಗಡಿ [illegible] ಅವರಿಗೆ [illegible] ಸ್ಥಳವಿಲ್ಲದ [illegible] ಅಲೆದಾಡಬೇಕಾಗುವದು [illegible]?

[illegible]

" ಸಹ್ಯಾದ್ರಿ "ಯು ಮಾಡಿರುವ ಪ್ರಗತಿಯ ಮತ್ತು ಸಂಪಾದಿಸಿರುವ
ಲೋಕವಿಶ್ವಾಸದ ಪೂರ್ಣ ಶ್ರೇಯಸ್ಸು **ನಿಮಗೇ ಸಲ್ಲುತ್ತಿದೆ.**
ಬಂದ ವ್ಯವಹಾರದ ಮೊತ್ತ ರೂ. ೩೧,೧೮,೯೩೮
ಮನ್ನಿಸಿದ ವ್ಯವಹಾರದ ಮೊತ್ತ " ೨೮,೨೨,೭೭೯
ಪೂರ್ಣಪಡಿಸಿದ ವ್ಯವಹಾರದ ಮೊತ್ತ " ೨೫,೦೪,೯೨೩
ಈ ಕಂಪನಿಯಲ್ಲೇ ನಿಮ್ಮ ಜೀವದ ವಿಮೆ ಇಳಿಸಿ, ನಿಮ್ಮ ಸಂಪತ್ತನ್ನೂ ಸೌಖ್ಯವನ್ನೂ ಸಮೃದ್ಧಗೊಳಿಸಿರಿ.
☞ ಏಜಂಟರಾಗುವವರಿಗೆ ಭರಪೂರ ದಲಾಲಿ ಕೊಡಲಾಗುತ್ತಿದೆ.

ಸಹ್ಯಾದ್ರಿ ಇನ್ಸೂರನ್ಸ ಕಂ., ಲಿ.,
ನಾಸಿಕ.

ಜಿ. ಜಿ. ಸೌಂದಣಕರ,
ಮೆನೆಜಿಂಗ ಡೈರೆಕ್ಟರ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಆವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತದೆ !
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ತಗ್ಗುವದು!
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ].

ಬೇಕು !

ಕರ್ನಾಟಕದಲ್ಲೆಲ್ಲ ನಮ್ಮ ಪ್ರತಿನಿಧಿಗಳಾಗಿ ಕೆಲಸ ಮಾಡಲು ಮಹತ್ವಾಕಾಂಕ್ಷಿ ತರುಣರು ಬೇಕು! ಆಕರ್ಷಕ ಸವಲತ್ತುಗಳುಂಟು, ಒಳ್ಳೇ ಸಂಪಾದನೆಗೂ ಅವಕಾಶವುಂಟು.

ವಿಶೇಷ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಲಕರ್ಣಿ ಮತ್ತು ಕಂಪನಿ,
ಚೀಫ್ ಒರ್ಗನೈಝರ್ಸ,
ಮುಂಬಯಿ ಕೋ ಒಪರೇಟಿವ್ಹ ಇನ್ಶೂರನ್ಸ ಸೊಸಾಯಟಿ, ಲಿ.,
ನವಸಾರಿ ಬಿಲ್ಡಿಂಗ, ಹಾರ್ನಬಿ ರೋಡ, ಮುಂಬಯಿ.

NOTICE TO MOTOR OWNERS IN THE KARNATAK REGION

All owners of motor vehicles residing in the Karnatak Region, are hereby informed that tax in respect of motor vehicles bearing regional registration marks for one or more quarters during the ensuing financial year commencing from 1-4-1945 ***has to be paid so as to reach this office on or before 15.4.1945.***

2 The payment should be made by cash, cheque, chalan or by money order at the Regional Transport Office, Belgaum. Cash will be accepted between hours 11-0 A M & 3-0 P M on week days and between 9-30 A M & 11-0 A M on Saturdays ***Crossed cheques drawn on the Imperial Bank of India, Belgaum, only will be accepted and those drawn on any other Bank are liable to be refused.***

3 If the tax is paid by cash, the registration certificate of the vehicle must be produced with declaration in form "AT" duly completed. ***Tax will not be accepted without the registration certificate.***

4 When the amount of tax is paid by chalan, the owner of a vehicle must send the duplicate copy of the chalan along with the registration certificate and a declaration in form "AT" duly signed so as to enable this office to issue tax tokens in time

5 Valid Insurance Policies in respect of Heavy Transport Vehicles must be produced at the time of payment of tax. Stamped receipts will not be accepted unless they are accompanied by Cover Notes

6 Owners of motor vehicles ***bearing Extra-Provincial or, State registration marks are informed that the concession of 15 days grace period does not apply to them*** and the tax due should be paid on or before the date of expiry of the tokens issued to them along with the registration certificates of the vehicles and a declaration in form "FT" for each vehicle duly completed.

7 Attention is invited to Rule 26 as the Bombay Motor Vehicles Tax Rules 1939 requiring motor owners who intend to keep their vehicles unused to intimate non-use in writing before the date of expiry of the period for which tax due has been paid.

8 Limited Companies and Unioons in Belgaum City and Camp are requested to remit tax a few days earlier instead of waiting till the last date of payment in order to prevent congestion at the counter on the last few days and to avoid inconvenience to other individual member of the public

No. 2618 2 K/KR of 45
Regional Transport Office
Belgaum, 14 - 3 - 1945

J. B RABBITT,
Regional Transport Officer,
Karnatak Region BELGAUM

ಇದನ್ನು ಪಾಂಡುರಂಗ ಕೃಷ್ಣ ಕಾಮತರ್ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ವರಾಜ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತರಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 26th March, 1945

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೩೮

ಕುಮಟಾ:- ಸೋಮವಾರ, ತಾ. ೨೬ ಮಾಹೆ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾರಿಗೆ ೩ ಆಣೆಯಂತೆ.
ಸ್ಮಾಲಪ್ಯಾಕಾ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಅಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಅಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಶಾಂತಿದೂತರ ನಿರೀಕ್ಷಣೆ !

(ನಿರೀಕ್ಷಕನು ಬರೆದುದು.)

ಎಲ್ಲೆಲ್ಲೂ ಮಿತ್ರರು ಪ್ರಗತಿ ಮಾಡುತ್ತಿರುವ ಸುದ್ದಿಗಳುಂಟು. ಜರ್ಮನಿಯ ಪಶ್ಚಿಮದಲ್ಲಿ ಮಿತ್ರರ ಸೇನೆಗಳು ಱ್ಹೈನ ನದಿಯನ್ನು ದಾಟುವ ಸಾಹಸ ನಡೆಸಿದ್ದಾರೆ; ಕೆಲವೆಡೆ ಅವರು ಯಶಸ್ವಿಯಾದ ಸುದ್ದಿಯೂ ಉಂಟು. ಱ್ಹೈನ ನದಿಯ ದಂಡೆಯಲ್ಲಿ ಜರ್ಮನರ ಉಗ್ರ ಪ್ರತಿಭಟನೆ ದೊರೆಯಬೇಕಾಗುವದೆಂದು ಯುದ್ಧ ಸುದ್ದಿಗಾರರು ಬರೆಯುತ್ತಿದ್ದರೂ, ಈ ಪ್ರತಿಭಟನೆಯಲ್ಲಿ ಅಷ್ಟೇನು ಸ್ವಾರಸ್ಯವಿಲ್ಲೆಂದು ಕೆಲ ಸುದ್ದಿಗಾರರು ಧ್ವನಿಸುತ್ತಾರೆ. ಕಳೆದ ಗುರುವಾರ ರಾತ್ರಿ ಅಮೇರಿಕೆಯವರ ೩ನೇ ಸೇನೆಯು [illegible] ಒಂದು ಗುಂಪು ನದಿಯನ್ನು ದಾಟುತ್ತಿರುವಾಗ ಜರ್ಮನರು ಒಂದೂ ಗುಂಡನ್ನು ಹಾರಿಸಲಿಲ್ಲವಾಗಿ ಅಮೇರಿಕೆಯೊಳಗಿನ ನ್ಯೂಯೋರ್ಕ ಪಟ್ಟಣದಿಂದ [illegible]ಗಿದೆ! ಉತ್ತರದಲ್ಲಿ ಬ್ರಿಟಿಶ ಸೇನಾಪತಿ ಮಾರ್ಶಲ ಮೊಂಟಗೊಮೆರಿಯವರೂ ಱ್ಹೈನ ಹೊಳೆ ದಾಟಿ ಉತ್ತರ ಜರ್ಮನಿಯ ಬೈಲು ಪ್ರದೇಶದಲ್ಲಿ ತಮ್ಮ ರಾಜ್ಯ ಕೂಡಿಸುತ್ತಾರಂತೆ. ಱ್ಹೈನ ನದಿಯ ಪ್ರದೇಶದಲ್ಲೇ ಕೊನೆಯ ಕಾಳಗವಾಗುವದೆಂದು ಯುದ್ಧ-ಶಾಸ್ತ್ರಜ್ಞರ ಅಂದಾಜುಂಟು. ೨ ವಾರಗಳ ಹಿಂದೆ ಬ್ರಿಟಿಶ ಮಹಾಮಂತ್ರಿ ಚರ್ಚಿಲ್ಲರು ಪಶ್ಚಿಮ ರಣರಂಗದಲ್ಲಿ ಸಂಚರಿಸುತ್ತಿದ್ದಾಗ, "ಈಗೊಂದು ಕೊನೆಯ ಪೆಟ್ಟು ಕೊಟ್ಟರೆ ಯುದ್ಧ ಮುಕ್ತಾಯವಾಗುತ್ತದೆ!" ಎಂದು ಸ್ವಪಕ್ಷೀಯರಿಗೆ ಹೇಳಿದ್ದುಂಟು. ಇತ್ತ ಪೂರ್ವರಣರಂಗದಲ್ಲಿ ರಶ್ಯರು ಬರ್ಲಿನ ನಗರದ ಮೇಲೆ ಸಾಗಿ ಬರುವ ಪೂರ್ಣ ತಯಾರಿಯನ್ನು ಮಾಡಿದ್ದಾರಂತೆ. ಬರ್ಲಿನ-ದಾಳಿಯ ಈ ತಯಾರಿಯಾಗಿ ಈಗ ಬಹಳ ದಿನಗಳಾದವು. ಇನ್ನೂ ಆ ದಾಳಿಯನ್ನು ಪ್ರಾರಂಭಿಸದೆ ರಶ್ಯ ಸೇನಾಪತಿಗಳು ಸುಮ್ಮಗೇಕೆ ಕುಳಿತಿರುವರೋ ನಾ ಕಾಣೆ! ಈ ರಂಗದಲ್ಲಿ ಸೇನಾಪತಿ ಗುಡೇರಿಯನ್ನರ ಮೇಲೆ ಅವಿಶ್ವಾಸವುಂಟಾಗಿ ಜರ್ಮನ ಯುದ್ಧಮಂಡಳದವರು ಈಗ ಅವರನ್ನು ಪದಚ್ಯುತ ಮಾಡಿ [illegible] ರಣರಂಗದಲ್ಲಿದ್ದ ಸೇ| ಫರ್ಡಿನಂದ ಶೋರ್ನರ ಅವರನ್ನು ಮುಖ್ಯ ಸೇನಾಪತಿಗಳನ್ನಾಗಿ ನೇಮಿಸಿದ್ದಾರಂತೆ. ಈ ಪ್ರಕಾರ ಯುರೋಪದಲ್ಲಿ ಮಿತ್ರರ ಕೈಯೇ ಮೇಲಾಗಿದೆ. ಇತ್ತ ಏಶಿಯಾ ಖಂಡದಲ್ಲೂ ಶಾಂತಸಾಗರದಲ್ಲೂ ಮಿತ್ರರು ವಿಜಯದ ಮೇಲೆ ವಿಜಯ ಸಂಪಾದಿಸುತ್ತ, ಕ್ರಮವಾಗಿ, ಸ್ಥಿರವಾಗಿ ಪ್ರಗತಿ ಮಾಡುತ್ತಿದ್ದಾರೆ. ಬ್ರಹ್ಮದೇಶದಲ್ಲಿ ಮಿತ್ರರು ಮಂಡಾಲೇ ಶಹರ ಪಡೆದು ಮಂಡಾಲೆಯಲ್ಲಿರುವ ಡಫರಿನ್ ದುರ್ಗವನ್ನು ಕೈವಶಪಡಿಸಿಕೊಂಡಿದ್ದಾರೆ. ಮಂಡಾಲೆ ಪಟ್ಟಣವು ಮಿತ್ರರ ಕೈಗೆ ಸಿಕ್ಕಿದ್ದರಿಂದ ಭಾರತವು ಸುರಕ್ಷಿತವಾಯ್ತು; ಚೀನಿಯರಿಗೆ ಬೇಕಾದ ರಣಸಾಮಗ್ರಿ ಅವರಲ್ಲಿ ಮುಟ್ಟಿಸಲು ಮಾರ್ಗ ತೆರೆಯಲ್ಪಟ್ಟಿತು; ಅರ್ಧದಷ್ಟು ಬ್ರಹ್ಮದೇಶವು ಮಿತ್ರರ ವಶಕ್ಕೆ ಬಂದಂತಾಗಿದೆ. ಬ್ರಹ್ಮದೇಶದ ಇನ್ನುಳಿದ ಅರ್ಧಭಾಗವನ್ನು ಗೆಲ್ಲಲು ಬಹಳ ಕಷ್ಟವಾಗಲಿ[illegible] ಯುದ್ಧ-ಸುದ್ದಿಗಾರರು ನಮಗೆ ಆಶ್ವಾಸನೆ ಕೊಡುತ್ತಿದ್ದಾರೆ. ಅಮೇರಿಕೆಯ ಬಲಾಢ್ಯ ನೌಕಾಪಡೆಯು ಶಾಂತಸಾಗರದಲ್ಲಿ ನಿರ್ಭಯವಾಗಿ ಸಂಚರಿಸುತ್ತಿದ್ದು ಒಂದೊಂದೇ ನಡುಗಡ್ಡೆಯನ್ನು ಆಕ್ರಮಿಸುತ್ತ ಈಗ ಜಪಾನವನ್ನು ಸುತ್ತುವರೆಯುತ್ತಿದೆ. ಚೀನದ ಕರಾವಳಿಯಲ್ಲಿಯೂ ಜಪಾನಿಯರನ್ನು ನೆಲದ ಮೇಲೂ ಪ್ರತಿಭಟಿಸುವ ವಿಚಾರ ಅಮೇರಿಕೆಯವರ ತಲೆಯಲ್ಲಿ ಬಂದಿದೆ. ಅಮೇರಿಕೆಯ ವಿಮಾನಗಳಂತೂ ಜಪಾನಿ ನಗರಗಳ ಮೇಲೆ ಮೇಲಿಂದ ಮೇಲೆ ಬಾಂಬು-ಗುಂಡುಗಳ ಮಳೆಗರೆಯುತ್ತಿವೆ. ಜಪಾನಿಗಳು ಈಗ ಟೋಕಿಯೋ ಮೊದಲಾದ ನಗರಗಳನ್ನು ಬಿಟ್ಟು ಹೋಗಲು ಜನರಿಗೆ ಹೇಳುತ್ತಿದ್ದಾರೆಂತಲೂ, ಮಾಧ್ಯಮಿಕ ಶಾಲೆಗಳನ್ನೂ ಕಾಲೇಜುಗಳನ್ನೂ ಮುಚ್ಚಿ ೧೬ ವರ್ಷ [illegible] ಮೀರಿದ ತರುಣರನ್ನೆಲ್ಲ ಸೇನೆಯಲ್ಲಿ ಸೇರಿಸಿಕೊಳ್ಳಲು ಆಲೋಚಿಸುತ್ತಿದ್ದಾರೆಂತಲೂ ವಾರ್ತೆಗಳು ಬಂದಿವೆ. ಇಷ್ಟು ದಿನ ಶಾಂತಸಾಗರದಲ್ಲಿ ಅಮೇರಿಕೆಯವರ ನೌಕಾಪಡೆಯು ಮಾತ್ರ ಹೋರಾಡುತ್ತಿತ್ತು, ಈಗ ಬ್ರಿಟಿಶ ನೌಕಾಪಡೆಯೂ ಅಲ್ಲಿ ಹೋಗಿ, ಅಮೇರಿಕೆಯವರಿಗೆ ಬೆಂಬಲ ಕೊಡುತ್ತಿದೆಯಂತೆ. ಹೀಗೆಲ್ಲ ಸಕಲ ರಣರಂಗದಲ್ಲಿ ಮಿತ್ರರು ಯಶಸ್ವಿಯಾಗಿ ಮುಂದರಿಯುತ್ತಿದ್ದರೂ ಅವರು ಶತ್ರು-ಪಕ್ಷದ ಶಾಂತಿ-ದೂತರ ಆಗಮನವನ್ನು ನಿರೀಕ್ಷಿಸುತ್ತಿರುವರಾಗಿ ನನಗೊಂದು ಭಾವನೆಯಾಗಿದೆ. ಮಿತ್ರರು ಈಗ ವಿಜಯದ ಮಾರ್ಗದಲ್ಲಿದ್ದರೂ ಕೊನೆಯ ವಿಜಯ ಸಿಗುವ ವರೆಗೆ ಎಷ್ಟು ಕಾಲ ಹೋರಾಡಬೇಕು ಮತ್ತು ಎಷ್ಟು ಬಲಿದಾನ ಮಾಡಬೇಕಾದೀತು ಎಂಬುದನ್ನು ಹೇಳುವವರಾರು? ಱ್ಹೈನ ನದಿಯಲ್ಲಿ ಜರ್ಮನರನ್ನು ಸೋಲಿಸಿದರೂ, ಬರ್ಲಿನ ನಗರವನ್ನು ಕೈವಶಪಡಿಸಿಕೊಂಡರೂ ಜರ್ಮನರು ಶಸ್ತ್ರವನ್ನು ಕೆಳಗಿಟ್ಟು ಶರಣುಬರುವಂತಿಲ್ಲ. ದಕ್ಷಿಣ ಜರ್ಮನಿಯ ಗುಡ್ಡಗಾಡು ಪ್ರದೇಶದಲ್ಲಿ ರಾಜ್ಯ ಹೂಡಿ ಅವರು ಮಿತ್ರರಿಗೆ ಸಾಕು-ಬೇಕು ಮಾಡದೆ ಉಳಿಯಲಿಕ್ಕಿಲ್ಲವೆಂದು ಬಲ್ಲವರು ತಿಳಿಸುತ್ತಾರೆ. ಈ ಭಾಗದಲ್ಲಿ ಸಂರಕ್ಷಣ-ಯುದ್ಧದ ಸಂಪೂರ್ಣ ಸಿದ್ಧತೆಗಳನ್ನು ಹಿಟ್ಲರನು ಮಾಡಿಟ್ಟಿದ್ದಾನಂತೆ. ಹಂಗರಿ ಮಾರ್ಗವಾಗಿ ಮುನ್ನುಗ್ಗುತ್ತಿದ್ದ ರಶ್ಯರನ್ನು ಜರ್ಮನರು ಹೇಗೆ ಅಡ್ಡಗಟ್ಟಿ ನಿಲ್ಲಿಸಿದ್ದರೆಂಬುದನ್ನು ನಾವು ನೋಡಿದ್ದೇವೆ. ಮೇಲಾಗಿ ನಾರ್ವೇ, ಡೆನ್ಮಾರ್ಕ, ಜರ್ಮನಿಯ ಉತ್ತರ ಕರಾವಳಿ ಮೊದಲಾದ ಭಾಗಗಳು ಇನ್ನೂ ಹಿಟ್ಲರನ ಹಿಡಿತದಲ್ಲಿವೆ. ಅಲ್ಲಿ ಅವನ ಅಸಂಖ್ಯ ದಂಡುಗಳೂ ಉಂಟು. ನಾರ್ವೇ ದೇಶದ ಬಂದರಗಳಲ್ಲೂ ಡೆನ್ಮಾರ್ಕದ ಸುತ್ತಲಿನ ಸಮುದ್ರದಲ್ಲೂ ಜರ್ಮನರ ಜಲಾಂತರ್ಗಾಮಿ ನೌಕೆಗಳು ಇನ್ನೂ ಸಂಚರಿಸುತ್ತಲಿವೆ. ಈ ನಾವೆಗಳನ್ನು ನಿರ್ನಾಮ ಮಾಡಿದನಕ ಅಟ್ಲಾಂಟಿಕ ಮಹಾಸಾಗರವಾಗಲಿ ಬ್ರಿಟನ್ನಿನ ಸುತ್ತು-ಮುತ್ತಲಿನ ಸಾಗರಗಳಾಗಲಿ ಸುರಕ್ಷಿತವೆಂದು ಎಂದೂ ತಿಳಿಯಲಾಗದು. ಜರ್ಮನರ ರಾಕ್ಷಸೀ ಗುಪ್ತಾಸ್ತ್ರಗಳ ಕಾಟವಂತೂ [illegible] ಇನ್ನೂ ನಡೆದಿದೆ. ಕಳೆದ ಅಕ್ಟೋಬರದಿಂದ ಈ ಫೆಬ್ರುವರಿ ವರೆಗಿನ ೫ ತಿಂಗಳಲ್ಲಿ ಜರ್ಮನರ ಆಕಾಶಬಾಣಗಳ ಹಾವಳಿಯಿಂದ ದಕ್ಷಿಣ-ಇಂಗ್ಲಂಡದಲ್ಲಿ (ಲಂಡನ ಪಟ್ಟಣ ಕೂಡಿ) ಕ್ರಮವಾಗಿ ೫೭, ೨೬೯, ೧೧೧, ೧೯೮, ೧೫೧ ಜನರು ಮೃತಪಟ್ಟಿರೆಂದೂ, ೪೧೬, ೧೫೧೧, ೮೪೭, ೧೬೨೯, ೧೧೫೨ ಜನರು ಗಾಯಗೊಂಡರೆಂದೂ ಸರಕಾರಿ ಅಂಕಿಗಳು ಪ್ರಕಟವಾಗಿವೆ. ಅಂದಮೇಲೆ ಜರ್ಮನರನ್ನು ಬೇಗನೇ ಸಂಪೂರ್ಣ ಸದೆಬಡೆಯಬಹುದೆಂದು ಆಶಿಸುವದು ತಪ್ಪು. ಅದೇ ಮೇರೆಗೆ ಜಪಾನ್ಯರನ್ನೂ ಅವರು ಈ ವರೆಗೆ ಆಕ್ರಮಿಸಿಕೊಂಡಿರುವ ವಿಸ್ತೀರ್ಣ ಪ್ರದೇಶಗಳಿಂದ ಹೊರದಬ್ಬುವದು ಅಸಾಧ್ಯವಲ್ಲದಿದ್ದರೂ ತೀರ ದುಃಸಾಧ್ಯವೇ. ಜಪಾನಿ ಸೈನಿಕರು ಜೀವಂತ ಶರಣು ಬರುವ ಪ್ರಾಣಿಗಳಲ್ಲ. ಸಾಯುವ ವರೆಗೂ ಹೋರಾಡುವ ಜಗಟು ಪ್ರಾಣಿಗಳವರು! ಅದರಲ್ಲೂ ಮಹಾ ಚತುರರು! ಇನ್ನೂ ವರೆಗೆ ಅವರ ನೌಕಾದಳ ಮಿತ್ರರನ್ನು ತಪ್ಪಿಸಿಕೊಂಡು ಅಡಗಿಕೊಂಡಿದೆ! ಅವರ ಸೇನೆಯೂ ಕೂಡ ಮಿತ್ರರನ್ನು ಎದುರಿಸದೆ ಹಾಗೆಯೇ ಉಳಿದಿದೆ! ಈ ಸೇನೆ ನಿರ್ನಾಮವಾಗುವ ವರೆಗೆ ಜಪಾನಿಯರ ಪತನವಾಯಿತೆಂದು ಹೇಳಬರಲಿಕ್ಕಿಲ್ಲ. ಅಲ್ಲಿಯ ವರೆಗೆ ಹೋರಾಡುವ ಶಕ್ತಿಯೂ, [illegible], ಜಗಟುತನವೂ, ಉತ್ಸಾಹವೂ ಮಿತ್ರರಲ್ಲಿಂಟೇ? ಸುದೀರ್ಘ ಅಂತರ ಓಡುವ ಪಂದ್ಯಾಟದಲ್ಲಿ ತನ್ನ ಶಕ್ತಿಯನ್ನು ಕಾಯ್ದುಕೊಳ್ಳುತ್ತ ತಾಳ್ಮೆಯಿಂದಲೂ ಜಗಟುತನದಿಂದಲೂ, ಧೈರ್ಯ - ಸ್ಥೈರ್ಯದಿಂದಲೂ ಓಡುವವನೇ ಕೊನೆಗೆ ವಿಜಯ ಸಂಪಾದಿಸುತ್ತಾನೆ. ಶಕ್ತಿ-ಸರ್ವಸ್ವವನ್ನು ವೆಚ್ಚ ಮಾಡಿ ಕೆಲವು ಅಂತರದ ವರೆಗೆ ಹಾರಾಡುವವನೂ ಇನ್ನೂ ಆಕ್ರಮಿಸಬೇಕಾದ ಅಂತರ ನೋಡಿಕೊಂಡು ವಿಗಲಿತನಾಗುವವನೂ ಆ ಪಂದ್ಯಾಟದಲ್ಲಿ ಎಂದೂ ಗೆಲ್ಲುವಂತಿಲ್ಲ. ಮಿತ್ರರಲ್ಲಿ ಈ ತಾಳ್ಮೆ, ಈ ಜಗಟುತನ, ಈ ಸ್ಥೈರ್ಯ-ಧೈರ್ಯ ಎಷ್ಟರ ಮಟ್ಟಿಗುಂಟೆಂದು ನಾನರಿಯೆ. ಅದರಲ್ಲಿ ಪುನಃ ಕಾಲನ ಉದರದೊಳಗಿಂದ ನಡುವೆ ಒಂದೊಂದೇ ವಿಘ್ನವೂ ಅಪಶಕುನವೂ ಹೊರಬೀಳುತ್ತಿದೆ! ಇದೀಗ ರಶ್ಯ-ತುರ್ಕರಲ್ಲಿ ತಿಕ್ಕಾಟವುಂಟಾಗಿದೆ; ಸಾನಫ್ರಾನ್ಸಿಸ್ಕೋ ಪರಿಷತ್ತಿನಲ್ಲಿ ಕೆಲವರಿಗೆ ನಿಮಂತ್ರಣ ಕೊಡದ್ದರಿಂದ ಅಸಂತೋಷವುಂಟಾಗಿದೆ; ಪೋಲಂಡದ ಬಗ್ಗೆ ತ್ರಿಕೂಟವು ಕೈಕೊಂಡ ನಿರ್ಣಯದಿಂದ ಆ ದೇಶ ಪ್ರಕ್ಷುಬ್ಧವಾಗಿದೆ; ಚೀನಿಯರು ತಮ್ಮ ನಿಷ್ಠ ಬಾಂಧವರ ಬಗ್ಗೆ ತಳೆದ ಧೋರಣದಿಂದ ರಶ್ಯರು ಸಿಟ್ಟಿಗೆದ್ದು ಚೀನಕ್ಕೆ ಆಪತ್ತಿಗಳಾಗುವ ಸಂಭವವುಂಟು. ಇವೆಲ್ಲ ಸಂಗತಿಗಳ ವಿಚಾರ ಮಾಡಿ ಮಿತ್ರರು ಯುದ್ಧ ಮುಗಿಸಲು ಆತುರಗೊಂಡಿರಬಹುದೆಂದು ನನ್ನ ಭಾವನೆಯಾಗುತ್ತದೆ. ಸ್ವಿಟ್ಝರ್ಲಂಡದಲ್ಲಿರುವ ಜಪಾನಿ ರಾಯಭಾರಿಯು ಮಿತ್ರ ರಾಯಭಾರಿಗಳೊಡನೆ ಶಾಂತಿಯಾಚನೆ ಮಾಡಿದ್ದನೆಂದು ಜರ್ಮನಿಯೊಳಗಿಂದ ವಾರ್ತೆ ಹೊರಬಿದ್ದಿರುವದಾಗಿ ಸ್ಟಾಕಹೋಮದಿಂದ ತಿಳಿದು ಬಂದಿದೆಯೆಂದು ಅಮೇರಿಕೆಯಲ್ಲಿ ಸುದ್ದಿ ಹರಡಿದೆಯಂತೆ! ಶಾಂತಿಯಾಚನೆ ಮಾಡಲು ಅನುಕೂಲವಾಗಬೇಕೆಂದೇ ಹಿಟ್ಲರನು ಪಶ್ಚಿಮರಂಗದಲ್ಲಿ ಸೇ| ಕೆಸಲರಿಂಗನನ್ನು ನೇಮಿಸಿರುವನಂತೆ! ಈ ಸುದ್ದಿಗಳು ಹೊರಡುವ ರೀತಿಯನ್ನು ಕಂಡೇ ನಾನು ಮಿತ್ರರು ಶಾಂತಿದೂತರ ಹಾದಿ ನೋಡುತ್ತಿದ್ದಾರೆಂದು ತರ್ಕ ಮಾಡಿದ್ದೇನೆ.

(೨ನೇ ಪುಟದಿಂದ ಮುಂದರಿಸಿದ್ದು.)

ಅವರ ಮೂಲಗೇಣಿದಾರರು ಇತ್ತಲಾಗಿ (ಭತ್ತ ಹುಟ್ಟಿಯೂ [illegible]) ಅಕ್ಕಿ ಯಾ ಭತ್ತದ ರೂಪದಿಂದ ಗೇಣಿ ಕೊಡುವದಿಲ್ಲ; ಕೊಡುವದಾದರೆ ನಗದಿಯಿಂದಲೇ ಕೊಡುತ್ತಾರೆ. ಅದರಿಂದ ರಾ|| ಮಾಮನ ನಾಯ್ಕರಿಗೆ ಸಂಸಾರಕ್ಕೆ ಮತ್ತು ಸಾಗುವಳಿ ವೆಚ್ಚಕ್ಕೆ ಬೇಕಷ್ಟು ಭತ್ತ ಅವರ ಭೂಮಿಯಿಂದ ಸಿಗುವದಿಲ್ಲ. ಅವರ ಮನೆಯಲ್ಲಿ ೨ ಮಂದಿ ಆಳುಗಳ ಸಮೇತ ೧೪-೧೫ ಮಂದಿಯಿದ್ದಾರೆ. ಆಚೆಯ ವಾರ ರಾ|| ನಾಯ್ಕರ ಮಗಂದಿರಾದ ಗಣಪಯ್ಯ ನಾಯ್ಕರು ತಿರ್ವೆ ಕೊಡಹೋದಾಗ ಕೊಡಾಣಿ ಶಾನಭೋಗರು ಅವರಿಗೆ ಸರಕಾರಕ್ಕೆ ಭತ್ತ ಕೊಡಬೇಕೆಂದು ಹೇಳಿದ್ದರಂತೆ. ರಾ|| ಗಣಪಯ್ಯ ನಾಯ್ಕರು ತಮ್ಮ ಕಡೆಗೆ ಸಾಲ ೬ [illegible] ಭತ್ತ ಮಾತ್ರ ಉಂಟೆಂದೂ ಸುಗ್ಗಿ ಬೆಳೆ ಕೈಗೆ ಬಂದಮೇಲೆ ೧೦ ಮಾನಗಿ ಅಕ್ಕಿ ಕೊಡುತ್ತೇನೆಂತಲೂ ಹೇಳಿದ್ದರಂತೆ. ಆದರೂ ಕಳೆದ ತಾ. ೧೮ನೇಗೆ ಈ ಗ್ರಾಮಸ್ಥರು ೪-೬ ಮಂದಿಗೆ ತಮ್ಮ ಸಂಗಡ ಕರಕೊಂಡು ರಾ|| ನಾಯ್ಕರಮನೆಗೆ ಹೋಗಿ "ನಿಮ್ಮಲ್ಲಿ ಹೇರಳ ಭತ್ತವುಂಟು; ನೀವು ಇನ್ನೂ ಸರಕಾರಕ್ಕೆ ಭತ್ತ ಕೊಟ್ಟಿಲ್ಲ; ನಿಮ್ಮ ಮನೆಯ ಝಡ್ತಿ ಮಾಡಬೇಕಾಗಿದೆ" ಎಂದು ಮುಂತಾಗಿ ರಾ| ನಾಯ್ಕರಿಗೆ ಬೆದರಿಸಿದರಂತೆ. ಇದ್ದ ಭತ್ತ ಹೊರಗೆ ಜಗಲಿಯ ಮೇಲೆಯೇ ಉಂಟು ಎಂದು ರಾ| ನಾಯ್ಕರು ಶಾಂತ ರೀತಿಯಿಂದ ಹೇಳಿದರು. ಆದರೂ ಗ್ರಾಮಸ್ಥರು ಮನೆಯಲ್ಲಿ ಪ್ರವೇಶ ಮಾಡಿ ಎಲ್ಲ ಕೋಣೆಗಳನ್ನೂ ಮೂಲೆಗಳನ್ನೂ ತಪಾಸ ಮಾಡಿದರಂತೆ! ಎಷ್ಟೂ ೧ ಸೋಲಿಗೆ ಸಹ ಭತ್ತ ಸಿಗಲಿಲ್ಲ! ಆದರೂ ಹೊರಬೀಳುವಾಗ "ಈ ಸಂಕ್ರಾಂತಿ ಹೀಗೆಯೇ ಹೋಗುವದೆಂದು ತಿಳಿಯಬೇಡಿ! ೩-೪ ನೂರು ರೂಪಾಯಿ ತಯಾರ ಮಾಡಿರಿ!" ಎಂದು ಬೆದರಿಕೆ ಹಾಕಿ ಹಾಗೆಯೇ ಸಂಗಡ ಬಂದ ಜನರಿಗೆ ಕರಕೊಂಡು ನಡೆದರಂತೆ! ರಾ|| ನಾಯ್ಕರಿಗೆ ಭೀತಿ ಹಾಕಿ ಏನಾದರೂ ಎತ್ತುವರೆ ಮಾಡಬೇಕೆಂದು ಗ್ರಾಮಸ್ಥರು ಈ ನಾಟಕ ಆಡಿದ್ದಿರಬೇಕೆಂದು ಬಲ್ಲವರ ತರ್ಕವುಂಟು.

ESTD: 1934.

The Agricultural & Industrial Bank, Ltd.

(Incorporated in British India, Liability of Members limited)

Head Office: COONDAPOOR. S. K.

Branches:-

ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor 15-2-1945.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯಿಲ್ಲ, ಸೆಕೆಯಾಗುತ್ತಿದೆ.

ಶುಕ್ರವಾರ ಸಂಜೆಯಿಂದ ಜಿಲ್ಹಾ ವಿಶೇಷ ಮುಕ್ಕಾಮು ಇಲ್ಲುಂಟು.

ಸೀಧಾ-ಕ್ಷೇತ್ರಗಳ ಹೊರಗಿನ ಭಾಗಗಳಲ್ಲಿ ಯಾವಾತನೂ ತನ್ನಲ್ಲಿ ತನ್ನ ಮನೆಯ ಜನರಿಗೆ ತಲಾ ತಲೆವೊಂದಕ್ಕೆ ಬಗೆದ ೪|| ಪಾಯಲಿ ಇದ್ದರೆ ಕಳಕೊಂಡು ಉಳಿದ ೪ ಪಾಯಲಿ ಅಕ್ಕಿ ಮತ್ತು ಅಷ್ಟೇ ಇತರ ಧಾನ್ಯ (ಗೋಧಿ, ಜೋಳ ಮತ್ತು ರಾಗಿ ಕೂಡಿ) ಬೇಕಾದಂತೆ ಸಂಗ್ರಹಿಸಿದ್ದರೆ ಸರಕಾರ-ಮಾನ್ಯ (ಸೀಧಾ) ಅಂಗಡಿಗಳಲ್ಲಿ ಈ ಧಾನ್ಯಗಳನ್ನು ಕೊಂಡುಕೊಳ್ಳಬಾರದಾಗಿಯೂ, ಸಂಗ್ರಹಿಸಿದ್ದಷ್ಟು ಧಾನ್ಯ ಮತ್ತು ಕೊಂಡುಕೊಂಡ ಧಾನ್ಯ ಇವೆರಡೂ ಕೂಡಿ ಹೇಳಿದ ಪರಿಮಾಣ ಎಷ್ಟಾಗುವದೋ ಅಷ್ಟೇ ಪರಿಮಾಣ ಮಾತ್ರವಷ್ಟೇ ಕಾಳುಕಡಿ ಕೊಂಡುಕೊಳ್ಳಬೇಕೆಂತಲೂ ಜಿಲ್ಹಾಧಿಕಾರಿ ಒಂದು ಹೊಸ ಶಾಸನವನ್ನು ಹೊರಡಿಸಿದ್ದಾರೆ. ೬ ವರ್ಷಗಳೊಳಗಿನ ಮಕ್ಕಳಿಗೆ ಅರ್ಧ ಪರಿಮಾಣ ಹಿಡಿಯಲಾಗುವದು.

ಶ್ರೀ ಕುಂದಾಪುರ ವ್ಯಾಸರಾಜ ಮಠದ ಅಧಿಪತಿಗಳಾದ ಶ್ರೀಮದ್-ವಿದ್ಯಾ [illegible] ಶ್ರೀ [illegible] ತೀರ್ಥರು (ಗಾಣಿಗ ಬಾಂಧವರ ಗುರುಗಳು) ನಿನ್ನೆ ಸಂಜೆ ಈ ಊರಿಗೆ ಚಿತ್ತೈಸಿ ಚಿತ್ರಗಿಯಲ್ಲಿರುವ ತಮ್ಮ ಮಠದಲ್ಲಿ ಇಳಿದಿದ್ದಾರೆ. ಸಾರ್ವಜನಿಕರ ಪರವಾಗಿ ಶ್ರೀ [illegible] [illegible]

ಗೋಕರ್ಣ-ದಲ್ಲಿ [illegible]

ಕಳೆದ ವಾರ ಗೋಕರ್ಣದವರೊಬ್ಬರು [illegible] ಪರವಾನಗಿ-ಚೀಟಿ [illegible] ಗೋಕರ್ಣ ಗ್ರಾಮದ ಹೊರಗಿನಿಂದ ೬ ಪಾಯಲಿ ಅಕ್ಕಿ ಗೋಕರ್ಣಕ್ಕೆ ಒಯ್ಯುತ್ತಿದ್ದಾಗ ಸುಕ್ರಿಕಿದ್ದ ಕಂಟ್ರೋಲ-ಹವಾಲದಾರ ದಾಮೋದರನು ಅವರನ್ನು ಹಿಡಿದು, ಅವರು ಸಾಗಿಸುತ್ತಿದ್ದ ಸ್ಥಳ ಸಹಿತ ಅವರ ಅಕ್ಕಿಯನ್ನು ಜಪ್ತ ಮಾಡಿಟ್ಟಿದ್ದಾನೆಂದು ಸುದ್ದಿಯಿದೆ. ಮಾಮಲೇದಾರರು ಕೊಟ್ಟ ಪರವಾನೆ-ಚೀಟಿಯಲ್ಲಿ ಇಂತಿಷ್ಟು ದಿನಗಳಲ್ಲಿ ಅಕ್ಕಿ ತರತಕ್ಕದ್ದೆಂದು ನಮೂದ ಇಲ್ಲದ್ದರಿಂದ ಆ ಪರವಾನ 'ದೀರ್ಘಾಯುಷಿ' ಇರುತ್ತದೆಂದು ದಾಮೋದರನ ತರ್ಕ!

ಹೊನ್ನಾವರ— (ತಾ. ೧೧-೩-೪೫) ಇಲ್ಲಿಯ ಸೀಧಾ-ಅಂಗಡಿಯಲ್ಲಿ ಕೂಡಲೆ ಅಕ್ಕಿ ಸಿಗುವದಿಲ್ಲ! ಕೂಡಲೆ ಅಕ್ಕಿಯ ದರ ಹಳ್ಳಿಗಳಲ್ಲಿ ಪಾಯಲಿ ೧ಕ್ಕೆ ೧೪ ಆಣೆಯುಂಟು. ಆದರೂ ಇಲ್ಲಿಯ ಜನರು ಪಾಯಲಿ ೧ಕ್ಕೆ ರೂ. ೧-೩-೦ ದರವಿರುವ ಫಾಟ [illegible] ಅಕ್ಕಿಯನ್ನೇ ಕೊಂಡು [illegible] ' [illegible] ' !

[illegible]

[illegible]

ಇದನ್ನು ಪಾಂಡುರಂಗ ಕೃಷ್ಣ ಕಾಮತ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

"ಸಹ್ಯಾದ್ರಿ"ಯು ಮಾಡಿರುವ ಪ್ರಗತಿಯ ಮತ್ತು ಸಂಪಾದಿಸಿರುವ
ಲೋಕವಿಶ್ವಾಸದ ಪೂರ್ಣ ಶ್ರೇಯಸ್ಸು **ನಿಮಗೇ ಸಲ್ಲುತ್ತಿದೆ.**
ಬಂದ ವ್ಯವಹಾರದ **ಮೊತ್ತ** ರೂ. ೩೧,೧೪,೯೩೮
ಮನ್ನಿಸಿದ ವ್ಯವಹಾರದ **ಮೊತ್ತ** ,, ೨೮,೨೨,೬೬೯
ಪೂರ್ಣಗೊಳಿಸಿದ ವ್ಯವಹಾರದ **ಮೊತ್ತ** ,, ೨೫,೦೪,೯೨೪
ಈ ಕಂಪನಿಯಲ್ಲೇ ನಿಮ್ಮ ಜೀವದ ವಿಮೆ ಇಳಿಸಿ, ನಿಮ್ಮ ಸಂಪತ್ತನ್ನೂ ಸೌಖ್ಯವನ್ನೂ ಸಮೃದ್ಧಗೊಳಿಸಿರಿ.
☞ ಏಜಂಟರಾಗುವವರಿಗೆ ಭರಪೂರ ದಲಾಲಿ ಕೊಡಲಾಗುತ್ತಿದೆ.
ಸಹ್ಯಾದ್ರಿ ಇನ್ಶೂರನ್ಸ ಕಂ., ಲಿ., ನಾಸಿಕ. } **ಜಿ. ಜಿ. ಸೌಂದಣಕರ,** ಮೆನೇಜಿಂಗ ಡಾಯರೆಕ್ಟರ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ **ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ**
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ **ಕೊಡುತ್ತಿದೆ !**
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ತಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತಿವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ. ೧೦ರಿಂದ ರೂ. ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಹಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ].

ಬೇಕು !

ಕರ್ನಾಟಕದಲ್ಲೆಲ್ಲ ನಮ್ಮ ಪ್ರತಿನಿಧಿಗಳಾಗಿ ಕೆಲಸ ಮಾಡಲು ಮಹತ್ವಾಕಾಂಕ್ಷಿ ತರುಣರು ಬೇಕು! ಆಕರ್ಷಕ ಸವಲತ್ತುಗಳುಂಟು; ಒಳ್ಳೇ ಸಂಪಾದನೆಗೂ ಅವಕಾಶವುಂಟು.

ವಿಶೇಷ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕುಲಕರ್ಣಿ ಮತ್ತು ಕಂಪನಿ,
ಚೀಫ್ ಒರ್ಗನೈಝರ್ಸ,
ಮುಂಬಯಿ ಕೋ-ಒಪರೇಟಿವ್ಹ ಇನ್ಶೂರನ್ಸ ಸೊಸಾಯಟಿ, ಲಿ.,
ನವಸಾರಿ ಬಿಲ್ಡಿಂಗ, ಹಾರ್ನಬಿ ರೋಡ, ಮುಂಬಯಿ

NOTICE TO MOTOR OWNERS IN THE KARNATAK REGION

All owners of motor vehicles residing in the Karnatak Region, are hereby informed that tax in respect of motor vehicles bearing regional registration marks for one or more quarters during the ensuing financial year commencing from 1-4-1945 ***has to be paid so as to reach this office on or before 15-4-1945.***

2 The payment should be made by cash, cheque, chalan or by money order at the Regional Transport Office, Belgaum. Cash will be accepted between hours 11-0 A M & 3-0 P M on week days and between 9-30 A M & 11-0 A M on Saturdays. ***Crossed cheques drawn on the Imperial Bank of India, Belgaum, only will be accepted and those drawn on any other Bank are liable to be refused.***

3 If the tax is paid by cash, the registration certificate of the vehicle must be produced with declaration in form "AT" duly completed. ***Tax will not be accepted without the registration certificate.***

4 When the amount of tax is paid by chalan, the owner of a vehicle must send the duplicate copy of the chalan along with the registration certificate and a declaration in form "AT" duly signed so as to enable this office to issue tax tokens in time

5 Valid Insurance Policies in respect of Heavy Transport Vehicles must be produced at the time of payment of tax. Stamped receipts will not be accepted unless they are accompanied by Cover Notes

6 Owners of motor vehicles ***bearing Extra-Provincial or, State registration marks are informed that the concession of 15 days grace period does not apply to them*** and the tax due should be paid on or before the date of expiry of the tokens issued to them along with the registration certificates of the vehicles and a declaration in form "FT" for each vehicle duly completed.

7 Attention is invited to Rule 26 as the Bombay Motor Vehicles Tax Rules [illegible] requiring motor owners who intend to keep their vehicles unused to intimate non-use in writing before the date of expiry of the period for which tax due has been paid.

8 Limited Companies and Unions in Belgaum City and Camp areas are requested to remit tax a few days earlier instead of waiting till the last date of payment in order to prevent congestion at the counter on the last few days and to avoid inconvenience to other individual members of the public.

No 2618 2 K/KR of 45
Regional Transport Office
Belgaum, 14 3-1945

J. B RABBITT,
Regional Transport Officer.
Karnatak Region BELGAUM

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 26th March, 1945

ಕಾನಡಾವೃತ್ತ

ವರ್ಷ ೨೬.] THE KANARA NEWS. [ಸಂಚಿಕೆ ೩೮

ಕುಮಟಾ:- ಸೋಮವಾರ, ತಾ. ೨೬ ಮಾಹೆ ಮಾರ್ಚ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪ್ಯಾಕಾ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬಹುದು.

ಶಾಂತಿದೂತರ ನಿರೀಕ್ಷಣೆ !

(ನಿರೀಕ್ಷಕನು ಬರೆದುದು.)

ಎಲ್ಲೆಲ್ಲೂ ಮಿತ್ರರು ಪ್ರಗತಿ ಮಾಡುತ್ತಿರುವ ಸುದ್ದಿಗಳುಂಟು. ಜರ್ಮನಿಯ ಪಶ್ಚಿಮದಲ್ಲಿ ಮಿತ್ರರ ಸೇನೆಗಳು ರ್‍ಹೈನ ನದಿಯನ್ನು ದಾಟುವ ಸಾಹಸ ನಡಿಸಿದ್ದಾರೆ; ಕೆಲವೆಡೆ ಅವರು ಯಶಸ್ವಿಯಾದ ಸುದ್ದಿಯೂ ಉಂಟು. ರ್‍ಹೈನ ನದಿಯ ದಂಡೆಯಲ್ಲಿ ಜರ್ಮನರ ಉಗ್ರ ಪ್ರತಿಭಟನೆ ನಡೆಯಬಹುದೆಂದು ಯುದ್ಧ ಸುದ್ದಿಗಾರರು ಬರೆಯುತ್ತಿದ್ದಾಗ್ಯೂ, ಈ ಪ್ರತಿಭಟನೆಯಲ್ಲಿ ಅಷ್ಟೇನು ಸ್ವಾರಸ್ಯವಿಲ್ಲೆಂದು ಕೆಲ ಸುದ್ದಿಗಾರರು ಧ್ವನಿಸುತ್ತಾರೆ. ಕಳೆದ ಗುರುವಾರ ರಾತ್ರಿ ಅಮೇರಿಕೆಯವರ ೩ನೇ ಸೇನೆಯ ಕಾಲ್ದಳದ ಒಂದು ಗುಂಪು ನದಿಯನ್ನು ದಾಟುತ್ತಿರುವಾಗ ಜರ್ಮನರು ಒಂದೂ ಗುಂಡನ್ನು ಹಾರಿಸಲಿಲ್ಲವಾಗಿ ಅಮೇರಿಕೆಯೊಳಗಿನ ನ್ಯೂಯೋರ್ಕ ಪತ್ರದಿಂದ ಅರುಹಲಾಗಿದೆ! ಉತ್ತರದಲ್ಲಿ ಬ್ರಿಟಿಶ ಸೇನಾಪತಿ ಮಾರ್ಶಲ ಮೊಂಟಿಗೊಮೆರಿಯವರೂ ರ್‍ಹೈನ ಹೊಳೆ ದಾಟಿ ಉತ್ತರ ಜರ್ಮನಿಯ ಬೈಲು ಪ್ರದೇಶದಲ್ಲಿ ತಮ್ಮ ಠಾಣ್ಯ ಹೂಡಿರುತ್ತಾರಂತೆ. ರ್‍ಹೈನ ನದಿಯ ಪ್ರದೇಶದಲ್ಲೇ ಕೊನೆಯ ಕಾಳಗವಾಗುವದೆಂದು ಯುದ್ಧ-ಶಾಸ್ತ್ರಜ್ಞರ ಅಂದಾಜು ಉಂಟು. ೨ ವಾರಗಳ ಹಿಂದೆ ಬ್ರಿಟಿಶ ಮುಖ್ಯಮಂತ್ರಿ ಚರ್ಚಿಲ್ಲರು ಪಶ್ಚಿಮ ರಣರಂಗದಲ್ಲಿ ಸಂಚರಿಸುತ್ತಿದ್ದಾಗ, "ಈಗೊಂದು ಕೊನೆಯ ಪೆಟ್ಟು ಕೊಟ್ಟರೆ ಯುದ್ಧ ಮುಕ್ತಾಯವಾಗುತ್ತಿದೆ!" ಎಂದು ಸ್ವಪಕ್ಷೀಯರಿಗೆ ಹೇಳಿದ್ದುಂಟು. ಇತ್ತ ಪೂರ್ವರಂಗದಲ್ಲಿ ರಶ್ಯರು ಬರ್ಲಿನ ನಗರದ ಮೇಲೆ ಸಾಗಿ ಬರುವ ಪೂರ್ಣ ತಯಾರಿಯನ್ನು ಮಾಡಿದ್ದಾರಂತೆ. ಬರ್ಲಿನ-ದಾಳಿಯ ಈ ತಯಾರಿಯಾಗಿ ಈಗ ಬಹಳ ದಿನಗಳಾದವು. ಇನ್ನೂ ಆ ದಾಳಿಯನ್ನು ಪ್ರಾರಂಭಿಸದೆ ರಶ್ಯ ಸೇನಾಪತಿಗಳು ಸುಮ್ಮನೇಕೆ ಕುಳಿತಿರುವರೋ ನಾ ಅರಿಯೆ! ಈ ರಂಗದಲ್ಲಿ ಸೇನಾಪತಿ ಗುಡೇರಿಯನ್ನರ ಮೇಲೆ ಅವಿಶ್ವಾಸವುಂಟಾಗಿ ಜರ್ಮನ ಯುದ್ಧಮಂತ್ರಿಮಂಡಳದವರು ಈಗ ಅವರನ್ನು ಪದಚ್ಯುತ ಮಾಡಿ ಪೋಲಂಡ ರಣರಂಗದಲ್ಲಿದ್ದ ಸೇ॥ ಫೀಲ್ಡ ಮಾರ್ಶಲ ಶೋರ್ನರ ಅವರನ್ನು ಮುಖ್ಯ ಸೇನಾಪತಿಗಳನ್ನಾಗಿ ನೇಮಿಸಿದ್ದಾರಂತೆ. ಈ ಪ್ರಕಾರ ಯುರೋಪದಲ್ಲಿ ಮಿತ್ರರ ಕೈಯೇ ಮೇಲಾಗಿದೆ. ಇತ್ತ ಏಶಿಯಾ ಖಂಡದಲ್ಲೂ ಶಾಂತಸಾಗರದಲ್ಲೂ ಮಿತ್ರರು ವಿಜಯದ ಮೇಲೆ ವಿಜಯ ಸಂಪಾದಿಸುತ್ತ ಕ್ರಮವಾಗಿ, ಸ್ಥಿರವಾಗಿ ಪ್ರಗತಿ ಮಾಡುತ್ತಿದ್ದಾರೆ. ಬ್ರಹ್ಮದೇಶದಲ್ಲಿ ಮಿತ್ರರು ಮಂಡಾಲೇ ನಗರ ಕಬಳಿಸಿದ್ದು ಮಂಡಾಲೆಯಲ್ಲಿರುವ ಡಫರಿನ್ ದುರ್ಗವನ್ನು ಕೈವಶಪಡಿಸಿಕೊಂಡಿದ್ದಾರೆ. ಮಂಡಾಲೆ ಪಟ್ಟಣವು ಮಿತ್ರರ ಕೈಗೆ ಸಿಕ್ಕಿದ್ದರಿಂದ ಭಾರತವು ಸುರಕ್ಷಿತವಾಗಿದೆ; ಚೀನಿಯರಿಗೆ ಬೇಕಾದ ರಣಸಾಮಗ್ರಿ ಕಳಿಸಲಿಕ್ಕೆ ಮಿತ್ರರಿಗೆ ಮಾರ್ಗ ತೆರೆಯಲ್ಪಟ್ಟಿದೆ; ಇಡೀ ಬ್ರಹ್ಮದೇಶವೂ ಮಿತ್ರರ ವಶಕ್ಕೆ ಬರುವಂತಾಗಿದೆ. ಬ್ರಹ್ಮದೇಶದ ಇನ್ನುಳಿದ ಅರ್ಧಭಾಗವನ್ನು ಗೆಲ್ಲಲು ಬಹಳ ಕಷ್ಟವಾಗಲಿಕ್ಕಿಲ್ಲವೆಂದು ಯುದ್ಧ-ಸುದ್ದಿಗಾರರು ನಮಗೆ ಆಶ್ವಾಸನೆ ಕೊಡುತ್ತಿದ್ದಾರೆ. ಅಮೇರಿಕೆಯ ಬಲಾಢ್ಯ ನೌಕಾದಳವು ಶಾಂತಸಾಗರದಲ್ಲಿ ನಿರ್ಭಯವಾಗಿ ಸಂಚರಿಸುತ್ತಿದ್ದು ಒಂದೊಂದೇ ದ್ವೀಪಗಳನ್ನು ಆಕ್ರಮಿಸುತ್ತ ಈಗ ಜಪಾನದ ನೆಲವನ್ನು ಸಮೀಪಿಸುತ್ತಿದೆ. ಚೀನದ ಕರಾವಳಿಯಲ್ಲಿ ಜಪಾನಿಯರನ್ನು ನೆಲದ ಮೇಲೂ ಪ್ರತಿಭಟಿಸುವ ವಿಚಾರ ಅಮೇರಿಕೆಯವರ ತಲೆಯಲ್ಲಿ ಬಂದಿದೆ. ಅಮೇರಿಕೆಯ ವಿಮಾನಗಳಂತೂ ಜಪಾನಿ ನಗರಗಳ ಮೇಲೆ ಮೇಲಿಂದ ಮೇಲೆ ಬಾಂಬು-ಗುಂಡುಗಳ ಮಳೆಗರೆಯುತ್ತಿವೆ. ಜಪಾನಿಗಳು ಈಗ ಟೋಕಿಯೋ ಮೊದಲಾದ ನಗರಗಳನ್ನು ಬಿಟ್ಟು ಹೋಗಲು ಜನರಿಗೆ ಹೇಳುತ್ತಿದ್ದಾರೆಂಬಲೂ, ಸಾಧ್ಯವಾದ ಶಾಲೆಗಳನ್ನೂ ಕಾಲೇಜುಗಳನ್ನೂ ಮುಚ್ಚಿ ೧೩ ವರ್ಷ ವಯಸ್ಸು ಮೀರಿದ ತರುಣರನ್ನೆಲ್ಲ ಸೇನೆಯಲ್ಲಿ ಸೇರಿಸಿಕೊಳ್ಳಲಾರಂಭಿಸಿದ್ದಾರೆಂಬಲೂ ವಾರ್ತೆಗಳು ಬಂದಿವೆ. ಇಷ್ಟು ದಿನ ಶಾಂತಸಾಗರದಲ್ಲಿ ಅಮೇರಿಕೆಯವರ ನೌಕಾದಳವು ಮಾತ್ರ ಹೋರಾಡುತ್ತಿತ್ತು, ಈಗ ಬ್ರಿಟಿಶ ನೌಕಾಪಡೆಯೂ ಅಲ್ಲಿ ಹೋಗಿ, ಅಮೇರಿಕೆಯವರಿಗೆ ಬೆಂಬಲ ಕೊಡುತ್ತಿದೆಯಂತೆ. ಹೀಗೆಲ್ಲ ಸಕಲ ರಣರಂಗದಲ್ಲಿ ಮಿತ್ರರು ಯಶಸ್ವಿಯಾಗಿ ಮುಂದರಿಯುತ್ತಿದ್ದರೂ ಅವರು ಶತ್ರು-ಪಕ್ಷದ ಶಾಂತಿ-ದೂತರ ಆಗಮನವನ್ನು ನಿರೀಕ್ಷಿಸುತ್ತಿರುವರೆಂದು ನನಗೊಂದು ಭಾವನೆಯಾಗಿದೆ. ಮಿತ್ರರು ಈಗ ವಿಜಯದ ಮಾರ್ಗದಲ್ಲಿದ್ದರೂ ಕೊನೆಯ ವಿಜಯ ಸಿಗುವ ವರೆಗೆ ಎಷ್ಟು ಕಾಲ ಹೋರಾಡಬೇಕು ಮತ್ತು ಎಷ್ಟು ಬಲಿದಾನ ಮಾಡಬೇಕಾದೀತು ಎಂಬುದನ್ನು ಹೇಳುವವರಾರು? ರ್‍ಹೈನ ನದಿಯಲ್ಲಿ ಜರ್ಮನರನ್ನು ಸೋಲಿಸಿದರೂ, ಬರ್ಲಿನ ನಗರವನ್ನು ಕೈವಶಪಡಿಸಿಕೊಂಡರೂ ಜರ್ಮನರು ಶಸ್ತ್ರವನ್ನು ಕೆಳಗಿಟ್ಟು ಶರಣುಬರುವಂತಿಲ್ಲ. ದಕ್ಷಿಣ ಜರ್ಮನಿಯ ಗುಡ್ಡಗಾಡು ಪ್ರದೇಶದಲ್ಲಿ ಠಾಣ್ಯ ಹೂಡಿ ಅವರು ಮಿತ್ರರಿಗೆ ಸಾಕು-ಬೇಕು ಮಾಡದೆ ಉಳಿಯಲಿಕ್ಕಿಲ್ಲವೆಂದು ಬಲ್ಲವರು ತಿಳಿಸುತ್ತಾರೆ. ಈ ಭಾಗದಲ್ಲಿ ಸಂರಕ್ಷಣ-ಯುದ್ಧದ ಸಂಪೂರ್ಣ ಸಿದ್ಧತೆಗಳನ್ನು ಹಿಟ್ಲರನು ಮಾಡಿಟ್ಟಿದ್ದಾನಂತೆ. ಹಂಗರಿ ಮಾರ್ಗವಾಗಿ ಮುನ್ನುಗ್ಗುತ್ತಿದ್ದ ರಶ್ಯರನ್ನು ಜರ್ಮನರು ಹೇಗೆ ಅಡ್ಡಗಟ್ಟಿ ನಿಲ್ಲಿಸಿದ್ದಾರೆಂಬುದನ್ನು ನಾವು ನೋಡಿದ್ದೇವೆ. ಮೇಲಾಗಿ ನಾರ್ವೇ, ಡೆನ್ಮಾರ್ಕ, ಜರ್ಮನಿಯ ಉತ್ತರ ಕರಾವಳಿ ಮೊದಲಾದ ಭಾಗಗಳು ಇನ್ನೂ ಹಿಟ್ಲರನ ಹಿಡಿತದಲ್ಲಿವೆ. ಅಲ್ಲಿ ಅವನ ಅಸಂಖ್ಯ ದಂಡುಗಳೂ ಉಂಟು. ನಾರ್ವೇ ದೇಶದ ಬಂದರಗಳಲ್ಲೂ ಡೆನ್ಮಾರ್ಕದ ಸುತ್ತಲಿನ ಸಮುದ್ರದಲ್ಲೂ ಜರ್ಮನರ ಜಲಾಂತರ್ಗಾಮಿ ನೌಕೆಗಳು ಇನ್ನೂ ಸಂಚರಿಸುತ್ತಲಿವೆ. ಈ ನಾವೆಗಳನ್ನು ನಿರ್ನಾಮ ಮಾಡಿದನಕ ಅಟ್ಲಾಂಟಿಕ ಮಹಾಸಾಗರವಾಗಲಿ ಬ್ರಿಟನ್ನಿನ ಸುತ್ತು-ಮುತ್ತಲಿನ ಸಾಗರಗಳಾಗಲಿ ಸುರಕ್ಷಿತವೆಂದು ಎಂದೂ ತಿಳಿಯಲಾಗದು. ಜರ್ಮನರ ರಾಕ್ಷಸೀ ಗುಪ್ತಾಸ್ತ್ರಗಳ ಕಾಟವಂತೂ ಸತತವಾಗಿ ಇನ್ನೂ ನಡೆದಿದೆ. ಕಳೆದ ಅಕ್ಟೋಬರದಿಂದ ೬ ಫೆಬ್ರುವರಿ ವರೆಗಿನ ೫ ತಿಂಗಳಲ್ಲಿ ಜರ್ಮನರ ಆಕಾಶಬಾಣಗಳ ಹಾವಳಿಯಿಂದ ದಕ್ಷಿಣ-ಇಂಗ್ಲಂಡದಲ್ಲಿ (ಲಂಡನ ಪಟ್ಟಣ ಕೂಡಿ) ಕ್ರಮವಾಗಿ ೫೭, ೨೬೯, ೧೧, ೧೯೪, ೧೫೦ ಜನರು ಮೃತಪಟ್ಟರೆಂದೂ, ೪೦೭, ೧೫೧೧, ೪೯೭, ೧೬೨೯, ೧೧೫೩ ಜನರು ಗಾಯಗೊಂಡರೆಂದೂ ಸರಕಾರಿ ಅಂಕಿಗಳು ಪ್ರಕಟವಾಗಿವೆ. ಅಂದಮೇಲೆ ಜರ್ಮನರನ್ನು ಬೇಗನೇ ಸಂಪೂರ್ಣ ಸದೆಬಡಿಯಬಹುದೆಂದು ಅರಿಸುವದು ತಪ್ಪು. ಅದೇ ಮೇರೆಗೆ ಜಪಾನ್ಯರನ್ನೂ ಅವರು ಈ ವರೆಗೆ ಆಕ್ರಮಿಸಿಕೊಂಡಿರುವ ವಿಸ್ತೀರ್ಣ ಪ್ರದೇಶಗಳಿಂದ ಹೊರದಬ್ಬುವದು ಅಸಾಧ್ಯವಲ್ಲದಿದ್ದರೂ ತೀರ ದುಃಸಾಧ್ಯವೇ. ಜಪಾನಿ ಸೈನಿಕರು ಅಂದರಂತೆ ಶರಣು ಬರುವ ಪ್ರಾಣಿಗಳಲ್ಲ. ಸಾಯುವ ವರೆಗೂ ಹೋರಾಡುವ ಹಟದ ಪ್ರಾಣಿಗಳವರು! ಅದರಲ್ಲೂ ಮಹಾ ಧರ್ಮಾಂಧರು! ಇನ್ನೂ ವರೆಗೆ ಅವರ ನೌಕಾದಳ ಮಿತ್ರರನ್ನು ತಪ್ಪಿಸಿಕೊಂಡು ಅಡಗಿಕೊಂಡಿದೆ! ಅವರ ಸೇನೆಯೂ ಕೂಡ ಮಿತ್ರರನ್ನು ಎದುರಿಸದೆ ಹಾಗೆಯೇ ಉಳಿದಿದೆ! ಈ ಸೇನೆ ನಿರ್ನಾಮವಾಗುವ ವರೆಗೆ ಜಪಾನ್ಯರ ಪತನವಾಯಿತೆಂದು ಹೇಳಬರಲಿಕ್ಕಿಲ್ಲ. ಅಲ್ಲಿಯವರೆಗೆ ಹೋರಾಡುವ ಶಕ್ತಿಯೂ, ತಾಳ್ಮೆಯೂ, ಜಿಗುಟುತನವೂ, ಉತ್ಸಾಹವೂ ಮಿತ್ರರಲ್ಲಿಂಟೇ? ದೀರ್ಘ ಅಂತರ ಓಡುವ ಪಂದ್ಯಾಟದಲ್ಲಿ ತನ್ನ ಶಕ್ತಿಯನ್ನು ಕಾಳಜಿಯಿಂದ ಕಾಯ್ದುಕೊಳ್ಳುವ ತಾಳ್ಮೆಯಿಂದಲೂ ಜಿಗುಟುತನದಿಂದಲೂ, ಧೈರ್ಯ - ಸ್ಥೈರ್ಯದಿಂದಲೂ ಓಡುವವನೇ ಕೊನೆಗೆ ವಿಜಯ ಸಂಪಾದಿಸುತ್ತಾನೆ. ಶಕ್ತಿ-ಸರ್ವಸ್ವವನ್ನು ವೆಚ್ಚ ಮಾಡಿ ಕೆಲವು ಅಂತರದ ವರೆಗೆ ಹಾರಾಡುವವನೂ ಇನ್ನೂ ಆಕ್ರಮಿಸಬೇಕಾದ ಅಂತರ ನೋಡಿಕೊಂಡು ವಿಗಲಿತನಾಗುವವನೂ ಆ ಪಂದ್ಯಾಟದಲ್ಲಿ ಎಂದೂ ಗೆಲ್ಲುವಂತಿಲ್ಲ. ಮಿತ್ರರಲ್ಲಿ ಈ ತಾಳ್ಮೆ, ಈ ಜಿಗುಟುತನ, ಈ ಸ್ಥೈರ್ಯ-ಧೈರ್ಯ ಎಷ್ಟರ ಮಟ್ಟಿಗುಂಟೆಂದು ನಾನರಿಯೆ. ಅದರಲ್ಲಿ ಪುನಃ ಕಾಲನ ಉದರದೊಳಗಿಂದ ನಡುವೆ ಒಂದೊಂದೇ ವಿಘ್ನವೂ ಆತಂಕವೂ ಹೊರಬೀಳುತ್ತಿದೆ! ಇದೀಗ ರಶ್ಯ-ತುರ್ಕರಲ್ಲಿ ಬಿಕ್ಕಟ್ಟುವುಂಟಾಗಿದೆ; ಸಾನ್‌ಫ್ರಾನ್ಸಿಸ್ಕೋ ಪರಿಷತ್ತಿನಲ್ಲಿ ಕೆಲವರಿಗೆ ನಿಮಂತ್ರಣ ಕೊಡದ್ದರಿಂದ ಅಸಂತೋಷವುಂಟಾಗಿದೆ; ಪೋಲಂಡದ ಬಗ್ಗೆ ಕ್ರಿಮಿಯಾದಲ್ಲಿ ಕೈಕೊಂಡ ನಿರ್ಣಯದಿಂದ ಆ ದೇಶ ಪ್ರಕ್ಷುಬ್ಧವಾಗಿದೆ; ಚೀನಿಯರು ಕಮ್ಯುನಿಸ್ಟ ಬಾಂಧವರ ಬಗ್ಗೆ ತಳೆದ ಧೋರಣದಿಂದ ರಶ್ಯರು ಸಿಟ್ಟಿಗೆದ್ದು ಚೀನಕ್ಕೆ ಅಪಾಯಗಳಾಗುವ ಸಂಭವವುಂಟು. ಇವೆಲ್ಲ ಸಂಗತಿಗಳ ವಿಚಾರ ಮಾಡಿ ಮಿತ್ರರು ಯುದ್ಧ ಮುಗಿಸಲು ಆತುರಗೊಂಡಿರಬಹುದೆಂದು ನನ್ನ ಭಾವನೆಯಾಗುತ್ತಿದೆ. ಸ್ವಿತ್ಸರ್ಲಂಡದಲ್ಲಿರುವ ಜಪಾನಿ ರಾಯಭಾರಿಯು ಮಿತ್ರ ರಾಯಭಾರಿಗಳೊಡನೆ ಶಾಂತಿಯಾಚನೆ ಮಾಡಿದ್ದನೆಂದು ಜರ್ಮನಿಯೊಳಗಿಂದ ವಾರ್ತೆ ಹೊರಬಿದ್ದಿರುವದಾಗಿ ಸ್ಟಾಕಹೋಮದಿಂದ ತಿಳಿದು ಬಂದಿದೆಯೆಂದು ಅಮೇರಿಕೆಯಲ್ಲಿ ಸುದ್ದಿ ಹರಡಿದೆಯಂತೆ! ಶಾಂತಿಯಾಚನೆ ಮಾಡಲು ಅನುಕೂಲವಾಗಬೇಕೆಂದೇ ಹಿಟ್ಲರನು ಪಶ್ಚಿಮರಂಗದಲ್ಲಿ ಸೇ॥ ಕೆಸಲರಿಂಗನನ್ನು ನೇಮಿಸಿರುವನಂತೆ! ಈ ಸುದ್ದಿಗಳು ಹೊರಡುವ ರೀತಿಯನ್ನು ಕಂಡೇ ನಾನು ಮಿತ್ರರು ಶಾಂತಿದೂತರ ಹಾದಿ ನೋಡುತ್ತಿದ್ದಾರೆಂದು ತರ್ಕ ಮಾಡಿದ್ದೇನೆ.

(೨ನೇ ಪುಟದಿಂದ ಮುಂದರಿಸಿದ್ದು.)

ಅವರ ಮಾಲಗೇಣಿದಾರರು ಇತ್ತಲಾಗಿ (ಭತ್ತ ಹುಟ್ಟಿಯೂ ಗದ್ದೆ ಬೆಳೆಯಿಂದ) ಅಕ್ಕಿ ಯಾ ಭತ್ತದ ರೂಪದಿಂದ ಗೇಣಿ ಕೊಡುವದಿಲ್ಲ; ಕೊಡುವದಾದರೆ ನಗದಿಯಿಂದಲೇ ಕೊಡುತ್ತಾರೆ. ಅದರಿಂದ ರಾ॥ ವಾಮನ ನಾಯ್ಕರಿಗೆ ಸಂಸಾರಕ್ಕೆ ಮತ್ತು ಸಾಗುವಳಿ ವೆಚ್ಚಕ್ಕೆ ಬೇಕಷ್ಟು ಭತ್ತ ಅವರ ಭೂಮಿಯಿಂದ ಸಿಗುವದಿಲ್ಲ. ಅವರ ಮನೆಯಲ್ಲಿ ೨ ಮಂದಿ ಆಳುಗಳ ಸಮೇತ ೧೮-೧೯ ಮಂದಿಯಿದ್ದಾರೆ. ಆಟೆಯ ವಾರ ರಾ॥ ನಾಯ್ಕರ ಮಗಂದಿರಾದ ಗಣಪಯ್ಯ ನಾಯ್ಕರು ತೀರ್ವೆ ಕೊಡಹೋದಾಗ ಕೊಪ್ಪದ ಶಾನಭೋಗರು ಅವರಿಗೆ ಸರಕಾರಕ್ಕೆ ಭತ್ತ ಕೊಡಬೇಕೆಂದು ಹೇಳಿದ್ದರಂತೆ. ರಾ॥ ಗಣಪಯ್ಯ ನಾಯ್ಕರು ತಮ್ಮ ಕಡೆಗೆ ಸಾಲ ೬ ಚೀಲ ಭತ್ತ ಮಾತ್ರ ಉಂಟೆಂದೂ ಸುಗ್ಗಿಯ ಬೆಳೆ ಕೈಗೆ ಬಂದಮೇಲೆ ೧೦ ಖಂಡಿಗೆ ಅಕ್ಕಿ ಕೊಡುತ್ತೇನೆಂಬಲೂ ಹೇಳಿದ್ದರಂತೆ. ಆದರೂ ಕಳೆದ ತಾ. ೧೮ನೇಗೆ ಈ ಗ್ರಾಮಸ್ಥರು ೪-೬ ಮಂದಿಗೆ ತಮ್ಮ ಸಂಗಡ ಕರೆಕೊಂಡು ರಾ॥ ನಾಯ್ಕರಮನೆಗೆ ಹೋಗಿ "ನಿಮ್ಮಲ್ಲಿ ಹೇರಳ ಭತ್ತವುಂಟು; ನೀವು ಇನ್ನೂ ಸರಕಾರಕ್ಕೆ ಭತ್ತ ಕೊಟ್ಟಿಲ್ಲ; ನಿಮ್ಮ ಮನೆಯ ಝಡ್ತಿ ಮಾಡಬೇಕಾಗಿದೆ" ಎಂದು ಮುಂತಾಗಿ ರಾ॥ ನಾಯ್ಕರಿಗೆ ಬೆದರಿಸಿದರಂತೆ. ಇದ್ದ ಭತ್ತ ಹೊರಗೆ ಅಗಳಿಯ ಮೇಲೆಯೇ ಉಂಟು ಎಂದು ರಾ॥ ನಾಯ್ಕರು ಶಾಂತ ರೀತಿಯಿಂದ ಹೇಳಿದರು. ಆದರೂ ಗ್ರಾಮಸ್ಥರು ಮನೆಯಲ್ಲಿ ಪ್ರವೇಶ ಮಾಡಿ ಎಲ್ಲ ಕೋಣೆಗಳನ್ನೂ ಮೂಲೆಗಳನ್ನೂ ತಪಾಸ ಮಾಡಿದರಂತೆ! ಎಲ್ಲೂ ೧ ಸೋಲಿಗೆ ಸಹ ಭತ್ತ ಸಿಗಲಿಲ್ಲ! ಆದರೂ ಹೊರಬೀಳುವಾಗ "ಈ ಸಂಕ್ರಾಂತಿ ಹೀಗೆಯೇ ಹೋಗುವದೆಂದು ತಿಳಿಯಬೇಡಿ! ೩-೪ ನೂರು ರೂಪಾಯಿ ತಯಾರ ಮಾಡಿರಿ!" ಎಂದು ಬೆದರಿಕೆ ಹಾಕಿ ಹಾಗೆಯೇ ಸಂಗಡ ಬಂದ ಜನರಿಗೆ ಕರೆಕೊಂಡು ನಡೆದರಂತೆ! ರಾ॥ ನಾಯ್ಕರಿಗೆ ಭೀತಿ ಹಾಕಿ ಏನಾದರೂ ಎತ್ತುವಳಿ ಮಾಡಬೇಕೆಂದು ಗ್ರಾಮಸ್ಥರು ಈ ನಾಟಕ ಆಡಿದ್ದಿರಬೇಕೆಂದು ಬಲ್ಲವರ ತರ್ಕವುಂಟು.

ESTD: 1934.

The Agricultural & Industrial Bank, Ltd.

[Incorporated in British India, Liability of Members limited]

Head Office: **COONDAPOOR. S. K.**

Branches:-

ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor 15-2-1945.

ಸ್ಥಾನಿಕ ವೃತ್ತಾಂತ.

ಕುಮಟಾ— ತೀವ್ರ ಸೆಕೆಯಾಗುತ್ತಿದೆ. ರಸ್ತೆಗಳ ಮೇಲಿನ ಧೂಳಿಯ ಕಾಟ ಇಮ್ಮಡಿ ಹೆಚ್ಚಿದೆ.

ಸೀಧಾ-ಅಂಗಡಿಗಳಲ್ಲಿ ಈಗ ಕೆಲವು ದಿವಸಗಳಿಂದ ಗೋದಿ ಸಿಗುವದಿಲ್ಲ. ಸರಕಾರಿ ಉಗ್ರಾಣದಲ್ಲಿ ಆ ಸರಕಾರದ ಗೋದಿ ಬಂದು ಬಿದ್ದಿದೆ. ಆದರೆ ಅದರ ಧಾರಣ ಇನ್ನೂ ನಿಶ್ಚಿತವಾಗದ್ದರಿಂದ ಅದನ್ನು ಮಾರಾಟಕ್ಕೆ ತೆಗೆದಿಲ್ಲವಂತೆ!

ಸರ್ [illegible] (ಸರ್ವಾಧಿಕಾರಿಗಳಾದ [illegible] ದೊರೆಗಳು ಯಾವದೋ ಮಹತ್ವದ ರಾಜಕಾರಣದ ಮೇಲೆ ಬ್ರಿಟಿಶ ಮಂತ್ರಿಮಂಡಳದೊಡನೆ ಚರ್ಚೆ ಮಾಡಲಿಕ್ಕೆ [illegible] ಹೋಗಿರುವದರಿಂದ [illegible] ನಮ್ಮ ಮುಂಬಯಿ ಪ್ರಾಂತದ [illegible] ತಾತ್ಕಾಲಿಕ ಸರ್ವಾಧಿಕಾರಿಗಳೆಂದು ನೇಮಿಸಲ್ಪಟ್ಟಿರುವ ಕಾರಣ ಇವರು ಈಗ ನಮ್ಮ ಪ್ರಾಂತದ [illegible] ಗಳಾಗಿದ್ದಾರೆ.) ಈ ತಿಂಗಳಾರಂಭಕ್ಕೆ ಇಲ್ಲಿಯ ಸೀಧಾ ಅಧಿಕಾರಿಗಳ ಕಚೇರಿಗೆ ಭೆಟ್ಟಿ ಕೊಟ್ಟು [illegible] ಸೀಧಾ ಅಕ್ಕಿ ಒಯ್ಯುವಿದ್ದವನ್ನು ಕಂಡು, ಸೀಧಾ [illegible] ವರು ತಮ್ಮ ಕೆಲಸದಲ್ಲಿ [illegible] ಇಲ್ಲ ಎಂದು ಉದ್ಗರಿಸಿದರಾಗಿ ಕೇಳಿದ [illegible] ದಲ್ಲಿ ಪ್ರಕಟವಾಗಿದೆಯಷ್ಟೆ! ಸರ್ [illegible] ವೇನೂ ಆಡಿದ್ದಿರುವದಿಲ್ಲದಾಗಿ ಅವರ [illegible] ಕಚೇರಿಯಲ್ಲಿದ್ದವರೊಬ್ಬರು ತಿಳಿಸುತ್ತಾರೆ.

ಇಲ್ಲಿ [illegible] ಶ್ರೀ [illegible] ಮಠದ ಶ್ರೀಮತ್ [illegible] ಕ್ರಮದಲ್ಲಿ [illegible] ಶ್ರೀ ಗುರುಗಳು ಇಲ್ಲಿಯ [illegible] ಶ್ರೀ ವೆಂಕಟರಮಣ ದೇವರ ಮಂದಿರದಲ್ಲಿ ಒಂದು ಪ್ರವಚನ ಕೊಟ್ಟರು. "ಧರ್ಮೋ ರಕ್ಷತಿ ರಕ್ಷಿತಃ" ಎಂಬೀ ವಿಷಯದ ಮೇಲೆ [illegible] ಪ್ರವಚನವಾಯಿತು. [illegible] ಪ್ರವಚನ [illegible] ಮುಂದೆಗೆ ಪ್ರಾರಂಭವಾಗುತ್ತದೆ.

ಇಲ್ಲಿಯ ಶ್ರೀ [illegible] ದೇವಸ್ಥಾನದಲ್ಲಿ [illegible] ಪ್ರತಿ ದಿನ ಸಂಜೆ [illegible] ಶ್ರೀ ಪುರುಷೋತ್ತಮ [illegible] ಹೇಳುತ್ತಾರೆ.

ಗೋಕರ್ಣದೊಳಗಿನ ಸೀಧಾ ಕಚೇರಿಯವರ [illegible] ಸೀಧಾ-ಕ್ಷೇತ್ರದ [illegible] ಅಕ್ಕಿಯನ್ನು ಸೀಧಾ-ಕ್ಷೇತ್ರದಲ್ಲಿ [illegible] ೭ ದಿನಗಳ ಅವಧಿ [illegible] ಚೀಟಿ ಕೊಡುತ್ತಾರೆ. ಆ ಚೀಟಿಗಳನ್ನು ಈ ಸೀಧಾ [illegible] ಅವರ [illegible] ಕಚೇರಿಯವರು [illegible] ಆ ಚೀಟಿಗಳನ್ನು [illegible] ದಿನ ತಮ್ಮಲ್ಲಿ [illegible] ಅದರಿಂದ ಸೀಧಾ [illegible] ಚೀಟಿಗಳು [illegible] ಅವಧಿಯು ಮುಗಿದು ಹೋಗುತ್ತದೆ!! [illegible] ಅವಧಿಯೇ [illegible]! ಈ ಕಚೇರಿಯೊಳಗಿನ ಒಬ್ಬರು ಸಕ್ಕರೆಯ [illegible] ಸೀಧಾ-ಕಾರ್ಡುಗಳನ್ನು [illegible] ಅವರ ಸಕ್ಕರೆ ಕೊಂಡು [illegible] ಸಕ್ಕರೆಯು [illegible] ಊರಿನವರಿಗೆ [illegible] ಇದರ ಚೌಕಶಿ ಮಾಡುವರೋ?

ತಮ್ಮ ಮದುವೆಗಾಗಿ ೧-೧ ಖಂಡಿ ಅಕ್ಕಿ [illegible] ಬಂದ ಪ್ರಯಾಣಿಕರ ಅಕ್ಕಿಯನ್ನು ಗೋಕರ್ಣ ಸೀಧಾ-ಕಚೇರಿಯವರು ಕಸಕೊಂಡಿಟ್ಟ ಸುದ್ದಿ [illegible] ಪ್ರಕಟವಾಗಿದೆಯಷ್ಟೆ. ಈ ಸಂಬಂಧದಲ್ಲಿ [illegible] ಮಾಡಲಾಗಿ, ಆ ಅಕ್ಕಿ ತಂದ ಪ್ರಯಾಣಿಕರು [illegible] ರಂತಲೂ, ಅವರು ತಮ್ಮಲ್ಲಿಯ ಖಂಡಿ [illegible] ತಲೆ ತುಂಬಿ ಅಳೆದ [illegible] ಅಕ್ಕಿ ತಂದಿದ್ದರಂತೆ, ಅವರ ಅಕ್ಕಿ ಗೋಕರ್ಣದೊಳಗಿನ ವ್ಯವಹಾರದಂತೆ ತಲೆ ಕೊಯ್ದು ಅಳೆದ ಖಂಡಿಗಿಂತ ಹೆಚ್ಚಿದ್ದುದರಿಂದ ಅದನ್ನು ಜಪ್ತಿ ಮಾಡಿದೆವೆಂದು ಕಚೇರಿಯವರು ಹೇಳುತ್ತಾರಂತೆ! ಅಕ್ಕಿಯ ಸ್ಥಳಾಂತರದ ಬಗ್ಗೆ ಹೊರಡಿಸಿದ ಜಿಲ್ಲಾಧಿಕಾರಿ ಹುಕುಮಿನಲ್ಲಿ ೧-೧ ಖಂಡಿ ಅಕ್ಕಿ ಒಯ್ಯಬಹುದಾಗಿ ಎಂದಿಷ್ಟೇ ಇರುವದು. ಆ ಖಂಡಿ ತಲೆ ತುಂಬಿ ಅಳೆದದ್ದಿರಬೇಕೋ ತಲೆ ಕೊಯ್ದು ಅಳೆದದ್ದಿರಬೇಕೋ ಎಂಬುದರ ಸ್ಪಷ್ಟತೆಯಿಲ್ಲ. ಅಂಥ ಪ್ರಸಂಗದಲ್ಲಿ ತಲೆ ತುಂಬಿ ಅಳೆದ ಖಂಡಿ ಅಕ್ಕಿ ಒಯ್ಯುವದು ಅ [illegible] ಕೋಡಬೇಕು!

ಹೊನ್ನಾವರ— (ತಾ. ೨೪ ೩ ೪೫) ಸರಕಾರದವರ [illegible]

(ಇನ್ನೂ [illegible] ಮುಂದುವರಿಸಿದೆ.)

— R —

ಕುಮಟಾ ಟೌನ್ಸ ರೇಶನಿಂಗ ರೆಗ್ಯುಲೇಶನ್ಸಗಳ ಕಲಮ ೧೫ ಸಬಕಲಮ (೨)ನೇದರಲ್ಲಿ ತಾ. ೧-೦೩-೪೫ರಿಂದ "ರೇಶನ್ ಟಿಕೀಟು ಧಾರಣ ಮಾಡುವವನು ಅರ್ಜ ಮಾಡಿ ತಮ್ಮಲ್ಲಿಯ ೬ ವರ್ಷಗಳಿಗಿಂತ ಕಡಿಮೆ ವಯಸ್ಸಿನವರ ಬಗ್ಗೆ ೭ ದಿವಸಗಳಿಗೆ ಪ್ರತಿಯೊಬ್ಬನಿಗೆ ಅರ್ಧ ಯುನಿಟ್ಟಿನಂತೆ ಸಕ್ಕರೆಯನ್ನು ಪಡಕೊಳ್ಳಬಹುದು." ಎಂದು ದುರುಸ್ತಿಯಾಗಿದೆ.

ಕುಮಟಾ, ತಾ. ೨೪-೩-೪೫. } **R. B. NAIK,** ರೇಶನಿಂಗ ಆಫೀಸರ, ಕುಮಟಾ.

— R —

೧೯೪೪ರ ಕುಮಟಾ ಟೌನ್ಸ ರೇಶನಿಂಗ ರೆಗ್ಯುಲೇಶನ್ಸಗಳ ಕಲಮ ೨೫ಕ್ಕೆ ಜೋಡಿಸಿದ ಹೊಸ ತಿದ್ದುಪಡಿಯಂತೆ, ಆಸ್ಪತ್ರೆ, ಹೆರಿಗೆ ಆಸ್ಪತ್ರೆ ಮೊದಲಾದ ಸಂಸ್ಥೆಗಳಿಗೆ ನೇಮಿಸಿಕೊಟ್ಟ ಸೀಧಾ ಆಹಾರ ಧಾನ್ಯಗಳ ಪ್ರಮಾಣಗಳಲ್ಲಿ ಹೆಚ್ಚು-ಕಡಿಮೆ ಮಾಡಿಕೊಳ್ಳುವದು ಅವಶ್ಯ ಕಂಡು ಬಂದು ಅಂಥ ಸಂಸ್ಥೆಗಳು ಆ ರೀತಿ ಅರ್ಜ ಮಾಡಿಕೊಂಡಲ್ಲಿ ರೇಶನಿಂಗ ಆಫೀಸರರು ವಿಚಾರ ಮಾಡಿ ತಮಗೆ ಯೋಗ್ಯವೆನಿಸಿದರೆ ಅವರ ಆಹಾರ-ಧಾನ್ಯಗಳ ಪ್ರಮಾಣಗಳಲ್ಲಿ ಹೆಚ್ಚು-ಕಡಿಮೆ ಮಾಡಿಕೊಡಬಹುದು.

ಕುಮಟಾ, ತಾ. ೨೪-೩-೪೫ } **R. B. Naik,** ರೇಶನಿಂಗ ಆಫೀಸರ, ಕುಮಟಾ.

— R —

ಕುಮಟಾ ಟೌನ್ಸ ರೇಶನಿಂಗ ರೆಗ್ಯುಲೇಶನ್ ಕಲಮ ೧೪ನೇದು ಈ ಕೆಳಗಿನಂತೆ ತಿದ್ದುಪಡಿ ಮಾಡಲ್ಪಟ್ಟಿದೆ.- ಯಾವದೇ ಕುಟುಂಬದ ಮುಖ್ಯಸ್ಥನು ತನ್ನ ಸೀಧಾ ಕಾರ್ಡಿನ ಮೇಲೆ ಯಾವದೇ ಗೈರಹಾಜರಿ ಇದ್ದ ವ್ಯಕ್ತಿಯ ಬಗ್ಗೆ ಸೀಧಾ ಸಾಮಾನು ತೆಗೆದುಕೊಳ್ಳಲಾಗದು. ಅಂಥ ಗೈರಹಾಜರ ಇದ್ದ ವ್ಯಕ್ತಿಯು ಅಥವಾ ವ್ಯಕ್ತಿಗಳು ಸೀಧಾ ಅವಧಿಯೊಳಗೆ ಪುನಃ ಹಾಜರ ಆದ ಪಕ್ಷಕ್ಕೆ ಅವರ ಬಗ್ಗೆ ಸೀಧಾ ಸಾಮಾನು ಅಂಥ ಅವಧಿಯೊಳಗೆ ತೆಗೆದುಕೊಳ್ಳಲು ಆತಂಕವಿಲ್ಲ. ಸೀಧಾ ಸಾಮಾನು ಕೊಳ್ಳುವ ನಾಲ್ಕು ಕಂತುಗಳು ಗುಜರಿ ಆದ ಸಂದರ್ಭಗಳಲ್ಲಿ ಸಹ ಪುನಃ ಹಾಜರ ಆದವರ ಬಗ್ಗೆ ಮಾತ್ರ ಸೀಧಾ ಸಾಮಾನು ಪಡಕೊಳ್ಳಬಹುದು.

ಕುಮಟಾ, ತಾ. ೨೪-೩-೪೫. } **R. B. Naik.** ರೇಶನಿಂಗ ಆಫೀಸರ, ಕುಮಟಾ

— ಔ —

೧೯೪೪ನೇ ಕುಮಟಾ ರೇಶನಿಂಗ ರೆಗ್ಯುಲೇಶನಗಳ ಕಲಮ ೧೪ನೇದರ ಸಬಕಲಮ ೩ರಲ್ಲಿ, ಕುಟುಂಬಕ್ಕೆ ಕೊಟ್ಟ ಸೀಧಾ ಕಾರ್ಡಿನಲ್ಲಿ ಜನರ ಎಣಿಕೆಯ ಯುನಿಟ್ಟುಗಳು "ಜಿಲ್ಲಾ ಮೆಜಿಸ್ಟ್ರೇಟರಿಂದ ಆಗಾಗ್ಗೆ ನಿರ್ಣಯಿಸಲ್ಪಡುವ ಪ್ರಮಾಣಗಳಂತೆ ಮತ್ತು ಜಿಲ್ಲಾ ಮೆಜಿಸ್ಟ್ರೇಟರು ಅನ್ಯಥಾ ಜಾಹೀರ ಮಾಡುವ ವರೆಗೆ" ತೋರಿಸಲ್ಪಡುವವು ಎಂತ ಮುಂಬಯಿ ಸರಕಾರದವರು ತಿದ್ದುಪಡಿ ಮಾಡಿರುತ್ತಾರೆ.

ಕುಮಟಾ, ತಾ. ೨೪-೩-೪೫. } **R. B Naik,** ರೇಶನಿಂಗ ಆಫೀಸರ, ಕುಮಟಾ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಮಗಳು ಇನ್ನು ೧೦ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಆವಳ ಮದುವೆಯ ಖರ್ಚಿನ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಇದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದು
ಯಾವ ಪ್ರತಿಫಲ ಕೇಳ್ದೆ ಅವರು ನಿಮಗೆ ನೆರವಾಗುವರು
ರೂ ೧೦ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ನಿಶ್ಚಲ ಪ್ರಗತಿಯ ಲಕ್ಷಣ!
೧೯೪೦ರಲ್ಲಿ ರೂ ೮,೨೦,೦೦೦ರಷ್ಟಿದ್ದ ಜೀವವಿಮಾ ನಿಧಿ ೧೯೪೪ರಲ್ಲಿ ರೂ. ೫೯,೫೦,೦೦೦ಕ್ಕೆ ಏರಿದೆ!
ಅಂದರೆ ೪ ವರ್ಷಗಳಲ್ಲಿ ೭॥ ಪಟ್ಟಿಗಿಂತ ಹೆಚ್ಚಾಗಿದೆ!
ಇಂದು ಅಸ್ತಿತ್ವದಲ್ಲಿದ್ದ ಹಂತು ವಿಮಾ-ವ್ಯವಹಾರ ಮೊತ್ತ ೩ ಕೋಟಿ ರೂಪಾಯಿ.
ಹಂತು ವಿಮೆಯ ಕಂತುಗಳ ಉತ್ಪನ್ನ ರೂ ೧೦॥ ಕೋಟಿ!
([illegible] ಸಂಪೂರ್ಣ ಸಹಕಾರಿ ಸಂಸ್ಥೆ ಶ್ರೀಮಂತರಿಗೂ ಬಡವರಿಗೂ ಅನುಕೂಲವಾದ ವಿಮಾ-ಪತ್ರಗಳು)
ಪ್ರತಿನಿಧಿಗಳು ಬೇಕು! ಎಲ್ಲ ಕಡೆ ಆಕರ್ಷಕ ಸವಲತ್ತುಗಳನ್ನು ಪಡೆದು ದುಡಿಯಬಯಸುವವರು ಬೇಕು!
ಸವಿಸ್ತರ ಮಾಹಿತಿಗಾಗಿ— **ಕುಲಕರ್ಣಿ ಮತ್ತು ಕಂಪನಿ, ಚೀಫ್ ಏಜಂಟ್ಸ,**
ಮುಂಬಯಿ ಕೋ-ಓಪರೇಟಿವ್ಹ ಇನಶೂರನ್ಸ ಸೊಸಾಯಿಟಿ, ಲಿ.,
ನವಸಾರಿ ಬಿಲ್ಡಿಂಗ, ಹಾರ್ನಬಿ ರೋಡ, ಮುಂಬಯಿ, ಇವರಿಗೆ ಬರೆಯಿರಿ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಟಪಾಲಿನಿಂದ
ವರ್ಷಕ್ಕೆ ರೂ. ೨-೪-೦
ಆಶ್ರಯದಾತೃಗಳಿಂದ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೩
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 2nd April, 1945

ಕಾನಡಾವೃತ್ತ

ವರ್ಷ ೨೭.] **THE KANARA NEWS.** [ಸಂಚಿಕೆ ೩೯

ಕುಮಟಾ:- ಸೋಮವಾರ, ತಾ ೨ ಮಾಹೆ ಏಪ್ರಿಲ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಸ್ಥಳ ೧೦ ಇಂಚ್ ಉದ್ದ
೧ ಸಾರೆಗೆ ೬ ಆಣೆಯಂತೆ.
ಸಣ್ಣಲಿಪಿಯ ೧೦ ಇಂಚ್ ಉದ್ದ
೧ ಸಾರೆಗೆ ೪ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಬಹುದು.

ಹಿಟ್ಲರನ ಇಂಗಿತವೇನು?

(ನಿರೀಕ್ಷಕನು ಬರೆದುದು.)

ಪಶ್ಚಿಮ ರಣರಂಗದಲ್ಲಿ ಜೆ(ನ). ಐಸೆನ ಹೌವರ ಮತ್ತು ಜೆ(ನ). ಮಾಂಟಗೊಮರಿ ಇವರ ನೇತೃತ್ವದಲ್ಲಿ ಮಿತ್ರರು ಸಕಲ ಸಂಗ್ರಾಮ-ಸಾಹಿತ್ಯದೊಂದಿಗೆ ಜರ್ಮನಿಯ ನೈಸರ್ಗಿಕ ರಕ್ಷಣೆಯಾದ ರ್‍ಹೈನ ನದಿಯನ್ನು ದಾಟಿ ಅದರ ಪೂರ್ವಕ್ಕೆ ಈಗಾಗಲೇ ಕೆಲವು ಕಡೆ ೫೦-೬೦, ಕೆಲವು ಕಡೆ ೭೦-೮೦ ಮೈಲು ಜರ್ಮನಿಯಲ್ಲಿ ಒಳನುಗ್ಗಿದ್ದಾರೆ. ಈ ಭಾಗದಲ್ಲಿ ಜರ್ಮನ ಸೇನೆಯ ಅಧಿಪತ್ಯವೀಗ ಜೆ(ನ). ಕೆಸಲರಿಂಗನ ಕಡೆಗುಂಟು. ನುಗ್ಗಿ ಬರುತ್ತಿರುವ ಮಿತ್ರರ ಸೇನೆಗಳನ್ನು ತಡೆದು ಹಿಡಿಯುವ ಪ್ರಯತ್ನವನ್ನು ಆತ ಮಾಡಿದ್ದು ತೋರುವದಿಲ್ಲ. ಅತ್ತ ದಕ್ಷಿಣ ರಂಗದಲ್ಲಿ ರಷ್ಯ ಸೇನಾಪತಿಗಳಾದ ಟೋಲಬುಕಿನ ಮತ್ತು ಮಾಲಿನೊವ್ಹಸ್ಕಿ ಇವರು ಕಳೆದ ವಾರ ಒಮ್ಮೆಲೇ ಉಗ್ರ ರೂಪ ಧಾರಣ ಮಾಡಿ ಆಸ್ಟ್ರಿಯಾ ಮತ್ತು ಝೆಕೋಸ್ಲೋವ್ಹಾಕಿಯಾ ದೇಶಗಳ ಮೇಲೆ ಏರಿಹೋಗಲು ಆರಂಭಿಸಿದ್ದಾರೆ. ಬರ್ಲಿನ ಪತನವಾದರೆ ಜರ್ಮನರು ಆಸ್ಟ್ರಿಯಾ, ಬವೇರಿಯಾ ವಗೈರೆ ಗುಡ್ಡಗಾಡು ದೇಶಗಳನ್ನು ಆಶ್ರಯಿಸಿ ಶತ್ರುಗಳಿಗೆ ಪೀಡೆ ಕೊಡುವ ವ್ಯೂಹ ರಚಿಸಿದ್ದಾರೆಂದು ನಾನು ಹಿಂದೆ ನಮೂದಿಸಿದ್ದೇನಷ್ಟೇ. ಜರ್ಮನರ ಈ ವ್ಯೂಹವನ್ನು ಮೊದಲೇ ಊಹಿಸಿ ಮಾಡಿರುವ ವ್ಯೂಹವನ್ನು ರಷ್ಯ ಸರ್ವಾಧಿಕಾರಿ ಸ್ಟಾಲಿನನು ಹಿಡಿದಿರುವಂತೆ ತೋರುತ್ತದೆ. ಬರ್ಲಿನಕ್ಕೆ ಮೊದಲು ಆಸ್ಟ್ರಿಯಾದ ರಾಜಧಾನಿಯಾದ ವ್ಹಿಯೆನ್ನಾ ಮತ್ತು ಝೆಕೋಸ್ಲೋವ್ಹಾಕಿಯಾದ ರಾಜಧಾನಿಯಾದ ಪ್ರಾಗ ಈ ನಗರಗಳನ್ನು ಸ್ವಾಧೀನಪಡಿಸಿಕೊಂಡು ದಕ್ಷಿಣ ಜರ್ಮನಿಯಲ್ಲಾಗಲಿ ಆ ಪಾರ್ಶ್ವದಲ್ಲಾಗಲಿ ಜರ್ಮನ ಸೇನೆಗೆ ಆಶ್ರಯ ಸಿಗದಂತೆ ವ್ಯವಸ್ಥೆ ಮಾಡಲು ಆತ ತನ್ನ ಸೈನ್ಯಗಳಿಗೆ ಅಪ್ಪಣೆ ಕೊಟ್ಟಿರುತ್ತಾನಂತೆ. ಪೂರ್ವರಣರಂಗದ ತೀರ ದಕ್ಷಿಣದಲ್ಲಿರುವ ಜೆ(ನ). ಕೊನೇವನೂ ಹಂಗೇರಿಯಿಂದ ದಾಳಿ ಹೂಡಿರುವ ದಂಡುಗಳಿಗೆ ಪೂರ್ಣ ಸಹಾಯಕನಾಗಿ ಆಗ್ನೇಯ ಬದಿಯಿಂದ ಜರ್ಮನಿಯಲ್ಲಿ ರಭಸದಿಂದ ನುಗ್ಗಿ ಹೋಗುತ್ತಿದ್ದಾನೆ. ಇಲ್ಲೂ ಜರ್ಮನರ ಪ್ರತಿಭಟನೆ ಅಷ್ಟು ಉಗ್ರವಿಲ್ಲ. ಇದನ್ನೆಲ್ಲ ನೋಡಿ ಜರ್ಮನಿಯು ತನ್ನ ಕಡೆ ಗಳಿಗೆ ಬಂದಂತೆಯೇ ಎಂದು ಯುದ್ಧ ಸುದ್ದಿಗಾರರು ಹೇಳಿದ್ದರು. ಜರ್ಮನರ ಶರಣಾಗತಿಯ ವಾರ್ತೆ ಎಂದು ಬರುವದೆಂದು ತಿಳಿಯದೆ, ಆ ವಾರ್ತೆ ಬಂದೊಡನೆ ಮುಂದಿನ ಆಲೋಚನೆ ಮಾಡುವದಕ್ಕಾಗಿ ಬ್ರಿಟಿಶ ಯುದ್ಧ ಮಂತ್ರಿ-ಮಂಡಳದ ಸಭಾಸದರು ಈಸ್ಟರ ಹಬ್ಬದ ರಜೆಯನ್ನು ಸಹ ಅನುಭವಿಸದೆ ಲಂಡನದಲ್ಲೇ ಉಳಿದುಕೊಂಡಿದ್ದರೆಂದೂ, ಕೂಡಲೇ ಪಾರ್ಲಮೆಂಟ ಸಭೆ ಕೂಡಿಸುವ ಏರ್ಪಾಟನ್ನು ಸಹ ಮಾಡಿಟ್ಟಿದ್ದಾರೆಂದೂ ವಾರ್ತೆಗಳು ಬಂದಿದ್ದವು "The hour of success is near" ಎಂದು ಮಹಾಮಂತ್ರಿ ಚರ್ಚಿಲ್ಲರು ಕೂಡ ವಿಶೇಷ ಚುನಾವಣೆಗೆ ನಿಂತ ಹುರಿಯಾಳುಗಳೊಬ್ಬರಿಗೆ ಬರೆದ ಪತ್ರದಲ್ಲಿ ಬರೆದಿದ್ದರು. ಆದರೆ ಈಗ ಈ ಆಶೆ ಬಯಲಾಗಿ, ಜರ್ಮನರ ಉದ್ದೇಶವೇನೆಂದು ತಿಳಿಯದೆ ಮಿತ್ರಪಕ್ಷೀಯರು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಪಶ್ಚಿಮದಲ್ಲಿ ಅರ್ಭಟದಿಂದ ನುಗ್ಗಿ ಬರುತ್ತಿರುವ ಮಿತ್ರರ ಸೈನಿಕರ ಮಹಾಪೂರದ ತೆರೆಯನ್ನು ಅಡ್ಡಗಟ್ಟಲಿಕ್ಕೆ ಜರ್ಮನರು ಪೂರ್ವದಿಂದಾಗಲಿ ಅನ್ಯತ್ರ ಕಡೆಯಿಂದಾಗಲಿ ದಂಡುಗಳನ್ನು ತರದೆ ಉದ್ದೇಶಪೂರ್ವಕವಾಗಿ ಹಿಂದೆ ಸರಿಯುತ್ತಿದ್ದಾರೆಂದೂ, ಬರ್ಲಿನದ ಬಳಿಯಲ್ಲೇ ಹಿಂದಿನ ತನ್ನ ಸಕಲ ಸೇನೆಗಳನ್ನು ಒಟ್ಟುಗೂಡಿಸಿ, ಪೂರ್ವದಿಂದ ನಡೆ ಬರುವ ರಷ್ಯರನ್ನೂ ಪಶ್ಚಿಮದಿಂದ ಬರುವ ಮಿತ್ರರನ್ನೂ ಏಕಕಾಲಕ್ಕೆ ಎದುರಿಸುವ ಕುಟಿಲ ಕಾರಸ್ಥಾನವನ್ನೇನಾದರೂ ಅವರು ರಚಿಸಿರಬೇಕೆಂದೂ ರಾಯಿಟರ ಸುದ್ದಿ-ಸಂಸ್ಥೆಯ ಯುದ್ಧ-ಸುದ್ದಿಗಾರನು ಈಗ ಹೇಳುತ್ತಿದ್ದಾನೆ. ರಷ್ಯರು ಮತ್ತು ಮಿತ್ರರ ನಡುವೆ ಅನಾದರದಿಂದ ಘರ್ಷಣೆಯಾಗುವಂತೆ ಅವರ ಪ್ರಯತ್ನ ನಡೆದರೂ ನಡೆಯಬಹುದಂತೆ. ಝೆಕೋಸ್ಲೋವ್ಹಾಕಿಯಾದ ಗಡಿಯಿಂದ ಉತ್ತರದಲ್ಲಿ ಸ್ಟೆಟಿನದ ವರೆಗೆ ಜರ್ಮನರ ೧೦೦ಕ್ಕಿಂತ ಹೆಚ್ಚು ಸುಸಜ್ಜಿತ ದಂಡುಗಳು ಇದ್ದಲ್ಲಿವೆ. ಈ ದಂಡುಗಳನ್ನೆಲ್ಲ ಒಂದೇ ಕಾಲಕ್ಕೆ ಶತ್ರುಗಳ ಮೇಲೆ ಬಿಟ್ಟು ಕೊನೆಯ ಭಯಂಕರ ಕಾಳಗವನ್ನು ಅವರು ಕೊಡಬಹುದಾಗಿ ಈ ಸುದ್ದಿಗಾರನ ಅಭಿಪ್ರಾಯವುಂಟು. ಜರ್ಮನರು ಶರಣು ಬರುವ ಆಶೆಯು ಇಲ್ಲವೆಂದೂ ಕೊನೆಯ ವರೆಗೂ ಅವರು ಹೋರಾಡುವರೆಂದು ಜೆ(ನ). ಐಸೆನಹೌವರರು ಪತ್ರಿಕಾ ವರದಿಗಾರರಿಗೆ ಹೇಳಿದ್ದುಂಟು. ಮಿತ್ರ ಸೈನ್ಯವನ್ನೆಲ್ಲ ಜರ್ಮನಿಯಲ್ಲಿ ಬರಮಾಡಿಕೊಂಡು ಕೊನೆಗೆ ಅದರ ಮೇಲೆ ವಿಷವಾಯುವಿನ ಪ್ರಯೋಗ ಮಾಡುವ ರಾಕ್ಷಸೀ ಸಂಕಲ್ಪವನ್ನು ಕೂಡ ಹಿಟ್ಲರನು ಮಾಡಿರಬಹುದೆಂದೂ ನನ್ನ ಅನುಮಾನವುಂಟು "No one knows what the German can do in his own country. He is trying to do everything he can" (ತನ್ನ ದೇಶದಲ್ಲಿ ಜರ್ಮನರು ಏನು ಮಾಡಬಲ್ಲರೆಂದು ಹೇಳ ಬರುವಂತಿಲ್ಲ. ತನಗೆ ಸಾಧ್ಯವಿದ್ದ ಎಲ್ಲ ಉಪಾಯಗಳನ್ನೂ ಅವನು ಮಾಡುತ್ತಿದ್ದಾನೆ) ಎಂದು ಸ್ವತಃ ಜೆ(ನ). ಐಸೆನಹೌವರರೇ ಎಚ್ಚರಿಕೆ ಕೊಟ್ಟಿದ್ದಾರೆ. ಅಂತು ಬರುವ ೧-೨ ವಾರಗಳಲ್ಲಿ ನಾವು ದಾರುಣವಾರ್ತೆಗಳನ್ನು ಕೇಳುವ ಪ್ರಸಂಗವುಂಟು. ಅದಕ್ಕೆ ನಾವು ತಯಾರಾಗಿರೋಣ.

(೨ನೇ ಪುಟದಿಂದ ಮುಂದರಿಸಿದ್ದು.)

ಮೆಜಿಸ್ಟ್ರೇಟರ ಮುಂದೆ ಒಂದು ಖಟ್ಲೆ ನಡೆದಿತ್ತು. ಆರೋಪಿಯ ಕಥೆ ಶಿಂದ ಮೇಲೆ ಪಟೇಲನು ತನ್ನ ಉಗ್ರಾಣದವನನ್ನು ಫಿರ್ಯಾದಿಯ ಸಂಗಡ ಗಿರಣಿಯ ಹೋರಿಗೆ ಕಳಿಸಿದ್ದನೆಂದು ಫಿರ್ಯಾದಿ ಪಕ್ಷದ ಪುರಾವೆಯಿಂದಲೇ ಸಿದ್ಧವಾಯಿತು. ಆದರಿಂದ ಮೆಜಿಸ್ಟ್ರೇಟರು ಮೊನ್ನೆ ತೀರ್ಪು ಹೇಳಿ ಫಿರ್ಯಾದವನ್ನು ಕಿತ್ತುಹಾಕಿದ್ದಾರೆ

ಹೊನ್ನಾವರ— ಶ್ರೀ ಗೋಕರ್ಣ ಮಠಾಧೀಶರು ಶನಿವಾರ ತಾ. ೨೫-೩-೪೫ಕ್ಕೆ ಇಲ್ಲಿ ಚಿತ್ತೈಸಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಇಳಕೊಂಡಿದ್ದಾರೆ. ಗುರುಗಳು ಬರುವ ಬುಧವಾರ ಇಲ್ಲಿಂದ ಹಳದೀಪುರಕ್ಕೆ ಹೋಗಿ, ಅಲ್ಲಿಂದ ಮರುದಿನ ಗುರುವಾರ ಹೆಗಡೆಗೆ ಹೋಗುವರು; ಮುಂದೆ ಶನಿವಾರ ಹೆಗಡೆಯಿಂದ ಹೊರಟು ಆದಿವಾರ ಮಾರ್ಗವಾಗಿ ಕುಮಟೆಗೆ ಹೋಗುವರೆಂದು ತಿಳಿಯುತ್ತದೆ.

ಇಲ್ಲಿಯ ಬಡವರು ಹೆಚ್ಚಾಗಿ ಕಾಳೆಹಕ್ಕಿಯ ಹಿಟ್ಟು ಮತ್ತು ಕುಚ್ಚಿಗೆ ಅಕ್ಕಿಯ ಅಂಬಲಿ ಕುಡಿದು ಜೀವನ ಸಾಗಿಸುತ್ತಾರೆ. ಕಾಳೇಹಿಟ್ಟಿನ ಅಂಬಲಿಗೆ ಕುಚ್ಚಿಗೆ ಅಕ್ಕಿಯು ಏನಕ್ಕೂ ಬೇಕಾಗಿ ಅಕ್ಕಿ ಕೊಡಿಬರುವದಿಲ್ಲ ಆದರೆ ಇತ್ತೀಚೆಗೆ ಈ ತಾಲೂಕಿನಲ್ಲಿ ಸರಕಾರದವರು ಕುಚ್ಚಿಗೆ ಅಕ್ಕಿಯನ್ನು ಮಾರಾಟಕ್ಕೆ ಇಟ್ಟಿರುವದಿಲ್ಲ ಆದರಿಂದ ಬಡವರಿಗೆ ಬಹಳ ಕಷ್ಟವಾಗಿದೆ. ಜಿಲ್ಲಾಧಿಪರು ಎಲ್ಲ ಅಂಗಡಿಗಳಲ್ಲಿ ಕುಚಗಿಅಕ್ಕಿಯನ್ನು ಮಾರಾಟಕ್ಕೆ ಇಡುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕಾಗಿ ಅರಿಕೆಯಿದೆ.

ಇರಾಣಿ ಜನರು ಈಗ ೪-೬ ದಿನಗಳಿಂದ ಈ ಊರಲ್ಲಿ ಬೀಡುಬಿಟ್ಟಿದ್ದಾರೆ. ಅವರ ಹಾಗಾಟವೂ ಪ್ರಾರಂಭವಾಗಿದೆ. ಜಿಲ್ಲಾಧಿಪರು ಅದಕ್ಕೆ ತಡೆ ಹಾಕಬೇಕು.

ಶಿರಸಿ— (ತಾ. ೧೦-೩-೪೫) ಮಾರ್ಗಗಳಲ್ಲಿ ಧೂಳು ಬಹಳವಾಗಿದೆ. ಗಾಳಿ ಬೀಸಿದಲ್ಲಿ ಇಲ್ಲವೆ ಮೋಟಾರ ಬಂಡಿಗಳು ಓಡಾಡಿದಲ್ಲಿ ವಾತಾವರಣವೆಲ್ಲ ಧೂಳಿಯಿಂದ ತುಂಬಿ ಹೋಗುತ್ತದೆ. ನಗರ ಸಭೆಯವರು ಮಾರ್ಗಗಳ ಮೇಲೆ ನೀರು ಹಾಕಿಸುವ ವ್ಯವಸ್ಥೆ ಮಾಡಬಾರದೇ?

(ತಾ. ೩-೩-೪೫) ಮೊನ್ನೆಯಿಂದ ಶಿಧಾ-ಧಾನ್ಯದ ಪ್ರಮಾಣ ಏರಿಸಿ ಪ್ರತಿ ಯುನಿಟ್ಟಿಗೆ ೩ ಸೇರು ಅಕ್ಕಿ ಮತ್ತು ೧ ಸೇರು ಗೋಧಿ, ಜೋಳ ಯಾ ರಾಗಿ ಕೊಡತಕ್ಕದ್ದೆಂದು ಜಾಹೀರು ಮಾಡಿದ್ದಾರೆ.

No. 103

ORDER.

In exercise of the powers conferred by sub-rule (2) of rule 81 of the Defence of India Rules read with Bombay Goverment *Notification in the* Home Department (Political War) No S. D II—1370, dated the 15th September 1944, and all other powers enabling me to do so, I, V. Nanjappa Esquire I. C S, Collector and District Magistrate, Kanara hereby order that every Butcher shall with immediate effect furnish on Monday, every week beginning with 2nd April 1945, a statement in the form appended hereto showing the number of the various specified types of animals slaughtered by him at places other than recognised Civil Slaughter houses in his charge during the week ending on the previous Sunday, direct to the Chief Secretary to the Government of Bombay in the Reconstruction Department and a copy of such statement to me.

FORM

Report for week ending (Monday to Sunday	Numbers of animals slaughtered
	Buffaloes (Male)
	Buffaloes (Female)
	Bulls
	Bullocks
	Cows
	Calves
	Goats
	Sheep

Karwar,
24—3—1945

V. NANJAPPA,
District Magistrate, KANARA.

ESTD: 1934.

The Agricultural & Industrial Bank, Ltd.

(Incorporated in British India, Liability of Members limited)

Head Office: **COONDAPOOR.** S. K

Branches:-

ANKOLA, DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR, HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor, 15—3—1945

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ಕುಮಟಾ ವ್ಯಾಪಾರಿ [illegible] ಮಂಡಳದ [illegible] ಯಾವ [illegible] ಸಂಸ್ಥೆಯು [illegible] ಗಳನ್ನು ಹೇಳುವದಿಲ್ಲ [illegible]

[illegible]

[illegible] ಸಂಪಾದಕೀಯ [illegible] ಯೋಗ್ಯ [illegible]

[illegible]

ಶ್ರೀ [illegible]ರ ನೋಟೀಸಿಗೆ ಉತ್ತರ.

[illegible] ಈ ಮೂಲಕ ತಿಳಿಸುವದೇನಂದರೆ ನನ್ನ [illegible] ಕೇವಲ ಸುಳ್ಳು ಇರುತ್ತದೆ ಆದರಲ್ಲಿ [illegible] ನನ್ನ [illegible] ನನ್ನ [illegible] ನನ್ನ [illegible] ನನ್ನ [illegible]

ನಾರಾಯಣ ತಿಮ್ಮಭಟ್ಟ, ಕೂಜಳ್ಳಿ

[illegible] ಗೋಕರ್ಣ [illegible] ಅವರ ಮೇಲೆ ಇದ್ದಿಯ ೧ನೇ ವರ್ಗದ

(೧ನೇ ಪಾನಿನ ಮೇಲೆ ಮುಂದರಿಸಿದೆ)

—R—

೧೯೪೪ನೇ ಗೋಕರ್ಣ ರೇಶನಿಂಗ ರೆಗ್ಯುಲೇಶನುಗಳ ಕ್ಲಾಜ ೧೩ನೇದರ ಸಬಕ್ಲಾಜ ೩ರಲ್ಲಿ, ಕುಟುಂಬಕ್ಕೆ ಕೊಟ್ಟ ಸೀಧಾ ಕಾರ್ಡಿನಲ್ಲಿ, ಚಿಮಣಿ ಎಣ್ಣೆಯ ಯುನಿಟ್ಸುಗಳು [illegible] ಜಿಲ್ಹಾ ಮೆಜಿಸ್ಟ್ರೇಟರಿಂದ ಆಗಾಗ್ಗೆ ನಿರ್ಣಯಿಸಲ್ಪಡುವ ಪ್ರಮಾಣಗಳಂತೆ ಮತ್ತು, ಜಿಲ್ಹಾ ಮೆಜಿಸ್ಟ್ರೇಟರು ಅನ್ಯಥಾ ಜಾಹೀರ ಮಾಡುವ ವರೆಗೆ ತೋರಿಸಲ್ಪಡುವವು ಎಂಬ [illegible]

ಗೋಕರ್ಣ, ತಾ ೨೬-೩-೪೫ } **P M Hegdekatti**
ರೇಶನಿಂಗ ಅಧಿಕಾರಿ, ಗೋಕರ್ಣ

—R—

ಜಾಹೀರನಾಮೆ—

೧೯೪೪ನೇ ಗೋಕರ್ಣ ರೇಶನಿಂಗ ರೆಗ್ಯುಲೇಶನುಗಳ ಕ್ಲಾಜ ೧೪ರ ಸಬ ಕ್ಲಾಜ ೪ರಲ್ಲಿ ಯಾವದೇ ರೇಶನ ಪಕ್ಷದಲ್ಲಿ ಯಾವನೊಬ್ಬನು ಗೋಕರ್ಣ ರೇಶನಿಂಗ ಹದ್ದಿನಲ್ಲಿ ಗೈರಹಾಜರ ಇದ್ದರೆ, ಅವನ ಕುಟುಂಬದ ಮುಖ್ಯಸ್ಥನಾಗಲಿ ಮನೇಜರನಾಗಲಿ ಚಿಮಣಿ ಎಣ್ಣೆಯು ಹೊರತು ಸದರಿ ಗೈರಹಾಜರ ಇದ್ದವನ ಬಾಬ್ತು ಸೀಧಾ ಮಾರಲ್ಪಟ್ಟ ಬೇರೆ ಯಾವದೇ ಪದಾರ್ಥವನ್ನು ಪಡೆಯತಕ್ಕದ್ದಲ್ಲ ಎಂದು ತಾ ೨೩-೩-೧೯೪೫ರ ಮುಂಬಯಿ ಗವರ್ನಮೆಂಟ ಗ್ಯಾಝೆಟದಲ್ಲಿ [illegible] ಪ್ರಸಿದ್ಧವಾಗಿರುತ್ತದೆ

ಅಂಥ ಗೈರಹಾಜರ ಇದ್ದ ವ್ಯಕ್ತಿಯು ಅಥವ ವ್ಯಕ್ತಿಗಳು ಸೀಧಾ ಅವಧಿಯೊಳಗೆ ಪುನಃ ಹಾಜರ ಆದ ಪಕ್ಷಕ್ಕೆ ಅವರ ಬಗ್ಗೆ ಸೀಧಾ ಸಾಮಾನು ಆಯಾ ಅವಧಿಯೊಳಗೆ ಕೊಂಡುಕೊಳ್ಳಲು ಅಡಂಚಣವಿಲ್ಲ

ಸೀಧಾ ಸಾಮಾನು ಕೊಳ್ಳುವ ನಾಲ್ಕು ವಾರಗಳ [illegible] ಆದ ಸಂದರ್ಭದಲ್ಲಿ ಸಹ ಪುನಃ ಹಾಜರ ಆದವರ ಬಗ್ಗೆ ಮಾತ್ರ ಸೀಧಾ ಸಾಮಾನು ಪಡೆಕೊಳ್ಳಬಹುದು

ಗೋಕರ್ಣ, ತಾ ೨೬-೩-೪೫ } **P M Hegdekatti**
ರೇಶನಿಂಗ ಅಧಿಕಾರಿ ಗೋಕರ್ಣ

ಜಾಹೀರನಾಮೆ.

ಕಾರವಾರ ಡಿಸ್ಟ್ರಿಕ್ಟ ಲೋಕಲ ಬೋರ್ಡ ಕಚೇರಿಯಿಂದ— ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ — [illegible] ಕಾಂಟ್ರಾಕ್ಟಿಗೆ ಕೊಡತಕ್ಕದ್ದುಂಟು ಸದರ ಕಾಮಗಾರಿ [illegible] ೧೯೪೫ನೇ ದಿನ ಸಂಜೆ ೪ ಘಂಟೆಯೊಳಗೆ [illegible] ಟೆಂಡರುಗಳನ್ನು ಕಾಂಟ್ರಾಕ್ಟ ರಕಮಿನ ನೂರಕ್ಕೆ [illegible] ಬಂದ ಟೆಂಡರುಗಳನ್ನು ಮಂಜೂರ ಮಾಡುವದು [illegible] ಮಂಜೂರಾದ ಟೆಂಡರ ಬಾಬ್ತು [illegible] ಮಂಜೂರಾದ ಟೆಂಡರ ಕೊಟ್ಟ [illegible] ಹಣವನ್ನು ಸದರಿ [illegible] ಮೇಲೆ ಅವಶ್ಯವಿದ್ದಲ್ಲಿ [illegible] ಟೆಂಡರ [illegible] ಅರ್ಜಿಗಳ [illegible] ಸ್ಪೆಸಿಫಿಕೇಶನ್ [illegible] ಡಿಸ್ಟ್ರಿಕ್ಟ ಲೋಕಲ ಬೋರ್ಡ ಇಂಜನಿಯರ [illegible]

ಕಾಮಗಾರಿ ಹೆಸರು	ಕೆಲಸ ಶುರು ಮಾಡುವ ವ ಪೂರ್ತಿಗೊಳಿಸುವ ಮುದ್ದತು	ಅಂದಾಜು ಎಸ್ಟಿಮೇಟಿನ ಪೂರ್ಣ ರಕಮು
[illegible]	ತಾ [illegible] ೧೯೪೫ಕ್ಕೆ ಶುರು ಮಾಡಿ [illegible] ೧೯೪೬ರೊಳಗೆ ಮುಗಿಸಬೇಕು	[illegible]

[illegible]

A. C. KITTUR.
ಅಧ್ಯಕ್ಷ ಡಿ ಲೋಕಲ ಬೋರ್ಡ, ಕಾರವಾರ

[illegible] ವಿವಾಹಯೋಗ್ಯಳಾಗುವಳು

ಆವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?

ಇಂದು [illegible] ಮುಪ್ಪಿನ ಕಾಲದಲ್ಲಿ ದುಡಿಯಲಾಗದು!

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?

ಅದಕ್ಕೊಂದೇ ಮಾರ್ಗವುಂಟು

[illegible] ನ್ಯಾಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ

[illegible] ವರ್ಷಗಳ ಮೇಲೆ ರೂ [illegible] ಕೊಡುತ್ತಿದೆ!

[illegible] ಸರಕುಗಳಲ್ಲಿ ಹಣ ಹಾಕಬೇಡಿ!

[illegible] ಭರಭರನೆ ಏರುವದು

[illegible] ಪ್ರತಿ ಊರಲ್ಲಿ ಅಧಿಕೃತ ಏಜಂಟರಾದರೆ

[illegible] ನಿಮಗೆ ನೆರವಾಗುವರು

[illegible] ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು

[illegible] ಪ್ರಚಾರ ಸಮಿತಿಯ ಪ್ರಕಟನ]

ಇದನ್ನು [illegible] ಕಾರವಾರ [illegible] ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ [illegible]
ಟಪಾಲದ್ವಾರಾ ವರ್ಷಕ್ಕೆ [illegible]
೬ ತಿಂಗಳಿಗೆ [illegible]
ಬಿಡಿ ಸಂಚಿಕೆಗೆ [illegible]
ಹಳೇ ಸಂಚಿಕೆಗೆ [illegible]
ವ್ಹಿ. ಪಿ. ಯಿಂದ ತರಿಸುವವರು ವ್ಹಿ. ಪಿ. ವೆಚ್ಚ [illegible] ತೆರಬೇಕು.
ವರ್ಗಣಿ ಮುಂಗಡ ಕೊಡತಕ್ಕದ್ದು.

Reg. No. B 1270 Monday, 9th April, 1945

ಕಾನಡಾವೃತ್ತ

ವರ್ಷ [illegible].] THE KANARA NEWS [ಸಂಚಿಕೆ [illegible]

ಕುಮಟಾ:- ಸೋಮವಾರ, ತಾ ೯ ನೇ ಎಪ್ರಿಲ ೧೯೪೫ನೇ ಇಸವಿ.

ಜಾಹೀರಾತುಗಳ ದರ.
ಪ್ರಥಮ [illegible] ಎರಡು ಆಣೆ
[illegible] ಆಣೆಯಂತೆ.
[illegible]
[illegible] ಆಣೆಯಂತೆ
ವಿಶಿಷ್ಟ ಅಥವಾ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಅಥವಾ ಪತ್ರದ್ವಾರಾ ತಿಳಿಸಬೇಕು.

ಹಿಟ್ಲರನಿಗೆ ಸಂಧಿಕಾಲವೇ?

([illegible] ಬರೆದುದು)

ಇದೀಗ ಜರ್ಮನಿಯು ಇತಿಶ್ರೀಯಾದಂತೆಯೇ ಸರಿ. ಪಶ್ಚಿಮದಿಂದ ನುಗ್ಗುತ್ತಿದ್ದ ಅಮೇರಿಕೆಯವರೂ ಬ್ರಿಟಿಶರೂ ಹೇಳತಕ್ಕ ಪ್ರತಿಘಟನೆಯಿಲ್ಲದೆ ಭರದಿಂದ ಬರ್ಲಿನ ಕಡೆಗೆ ಸಾಗುತ್ತಿದ್ದಾರೆ. ಅಮೇರಿಕೆಯ ಸೇನಾಪತಿ ಪ್ಯಾಟನರಂತೂ ಮಧ್ಯ ಜರ್ಮನಿಯಲ್ಲಿ ನುಸುಳಿ ಆಗ್ನೇಯ ಜರ್ಮನಿಯಲ್ಲಿ ರುಶ್ಯ ಸೇನಾಪತಿ ಕೋನೀವ್ಹರ ದಾಳಿಯನ್ನು ತಡೆಯುತ್ತಿರುವ ಜರ್ಮನ ಸೈನ್ಯಗಳ ಮೇಲೆ ಹಿಂಬದಿಯಿಂದ ಹಲ್ಲೆ ಮಾಡುವ ವಿಚಾರ ತಳೆದಿದ್ದಾರೆ. ಜರ್ಮನರ ಸಂಪತ್ಸಮೃದ್ಧ ರ್ಹೂರ ಪ್ರಾಂತವು ಈಗ ಮಿತ್ರರ ವಶಕ್ಕೆ ಬಂದಿದೆಯೆಂದೇ ಹೇಳಬಹುದು ಮತ್ತು ಅದರಲ್ಲಿರುವ ಜರ್ಮನರು ಮಿತ್ರರ ಕತ್ತರಿಯಲ್ಲಿ ಸಿಲುಕಿಬಿದ್ದಿದ್ದಾರೆ. ಜರ್ಮನಿಯ ರಾಜಧಾನಿಯು ಈಗ ಮಿತ್ರರಿಂದ ೧೨೦ ಮೈಲಿಗಿಂತ ಕಡಿಮೆ ಅಂತರದಲ್ಲುಂಟು. ಇತ್ತ ದಕ್ಷಿಣ ರಂಗದಲ್ಲಿ ರುಶ್ಯ ದಂಡುಗಳು ಆಸ್ಟ್ರಿಯಾದ ರಾಜಧಾನಿಯಾದ ವ್ಹಿಯೆನ್ನಾ ಪಟ್ಟಣವನ್ನು ಮುತ್ತಿದ್ದು, ಅಲ್ಲಿ ಈಗ ಬೀದಿ-ಬೀದಿಗಳಲ್ಲಿ ಕಾಳಗ ಮಾಡಲು ಜರ್ಮನರು ಪ್ರಾರಂಭಿಸಿದ ಸುದ್ದಿ ಬಂದಿದೆ. ಪೂರ್ವ ರಣರಂಗದಲ್ಲಿ ಈ ಮಹಾಯುದ್ಧಕ್ಕೆ ಮೂಲ ಕಾರಣವಾಗಿದ್ದ ಡಾಂಝಿಗ ನಗರವು ಆಚೆಯ ವಾರವೇ ರಶ್ಯರ ಸ್ವಾಧೀನ ಬಂದಿದೆ. ಇಷ್ಟು ದಿನ ತಣ್ಣಗೆ ಕುಳಿತ ರುಶ್ಯ ಸೇನಾಪತಿ ಝುಕೋವ್ಹನು ಈಗ ಬರ್ಲಿನ ಮೇಲೆ ನುಗ್ಗಿಬರಲು ಸಿದ್ಧನಾಗಿದ್ದಾನಂತೆ. ಅಂತು ಜರ್ಮನರೀಗ ಸೋತರೆಂದೇ ಒಪ್ಪಬೇಕು. ಹಿಟ್ಲರನ ಬಲಗೈಯಂತಿರುವ ಹಿಮ್ಲರನು ಕೂಡ "ಇನ್ನು ಕೆಲವೇ ದಿನಗಳಲ್ಲಿ ಜರ್ಮನರ ವಿನಾಶವಾಗುವದೆಂದು ತೋರಿಸುವರೀತಿಯಲ್ಲಿ ಇಂದಿನ ಯುದ್ಧ ಸಾಗಿದೆ" ಎಂದು ತನ್ನ ಡಾಸ ಸ್ವಾರ್ಜೆಕೋರ ಪತ್ರಿಕೆಯಲ್ಲಿ ಒಪ್ಪಿರುತ್ತಾನೆಂದು ಸ್ಟಾಕಹೋಮ (ಸ್ವೀಡನ) ದೊಳಗಿನ ರೈಟರ ಸುದ್ದಿಗಾರನು ತಿಳಿಸುತ್ತಾನೆ. ಪರಿಸ್ಥಿತಿ ಹೀಗಿರುವದಾಗಿ ಜರ್ಮನಿಯ ಯುದ್ಧವು ಬೇಗನೇ ಶಾಂತವಾಗಿ ಯುದ್ಧ-[illegible]ದ ಆನಂದೋತ್ಸವ ಜರುಗಿಸಲು ಮಿತ್ರರಿಗೆ ಅವಕಾಶದೊರಕೀತೆಂದು ನಾ ಹೇಳಲಾರೆ. ಆದರೂ ಮಿತ್ರ ಪಕ್ಷೀಯ ಧುರೀಣರಿಗೂ, ಪ್ರಚಾರಕ ಸುದ್ದಿಗಾರರಿಗೂ ಜರ್ಮನರು ಬೇಗನೇ ಹಲ್ಲಿನೊಳಗೆ ಹುಲ್ಲು ಕಚ್ಚಿ ಹಿಡಿದು ಶರಣುಬರುವರೆಂಬ ಹುಚ್ಚು ಹಿಡಿದಿದೆ. ಇದೇ ಬೇಸಿಗೆಯಲ್ಲಿ ವಿಜಯೋತ್ಸವ ಮಾಡಲು ಹವಣಿಸಿರುವರಲ್ಲಿ ಸೇರುವದಕ್ಕಾಗಿ ೧೭ ಮಂದಿ ಹಿಂದೀ ಸಂಸ್ಥಾನಾಧಿಪತಿಗಳಿಗೆ ಪ್ರಧಾನಮಂತ್ರಿ [illegible]ಯೆಂದೂ ಅವರು ಸಪರಿವಾರ ಲಂಡನ್ನಿಗೆ ಚಿತ್ತೈಸುವರೆಂದೂ ಲಂಡನ್ನಿನ ಡೇಲಿ ಎಕ್ಸಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇನ್ನು ಮುಂದೆ ಯುದ್ಧ ಸಾಗಿಸುವ ಮಾತು ಸರ್ವಥಾ ಸಾಧ್ಯವಿಲ್ಲೆಂತಲೂ, ೭ ದಿನಗಳೊಳಗಾಗಿ ಸನ್ಯಾಸ್ಯ ಆತ್ಮಘಾತ ಮಾಡಿಕೊಂಡು ಮಿತ್ರರೊಡನೆ ಶಸ್ತ್ರ-ಸಂಧಿ ಮಾಡಿಕೊಳ್ಳಲು ಸೇನಾಧಿಕಾರಿಗಳಿಗೆ ಅನುವು ಮಾಡಿಕೊಡಬೇಕೆಂತಲೂ ರಣರಂಗದಲ್ಲಿದ್ದ ಜರ್ಮನ ದಳಪತಿಗಳು ಹಿಟ್ಲರನಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿರುತ್ತಾರೆಂದು ಒಂದು [illegible] ವಾರ್ತೆ ಬಂದಿತ್ತು! ಇದಕ್ಕೂ ಅದ್ಭುತವಾದ ಮತ್ತು ತೀರ ವಿಸಂಗತ ವಾರ್ತೆಗಳು ದಿನಾಲೂ ಎಂಬಂತೆ ಬರುತ್ತಿವೆ! ಹಿಟ್ಲರ, ಹಿಮ್ಲರ ಮತ್ತಿತರ ನಾಝಿ ಪ್ರಮುಖರು ಜಪಾನಕ್ಕೆ ಓಡಿಹೋಗುವ ಸಿದ್ಧತೆ ಮಾಡಿದ್ದಾರೆಂದು ಕಳೆದ ವಾರ ಒಂದು ಸುದ್ದಿ ಬಂತು! ಹಿಟ್ಲರನು ಗಡ್ಡ ಬೆಳಸಿ ತನ್ನ ಮುಖಚರ್ಯೆಯನ್ನು ಸಂಪೂರ್ಣ ಬದಲಿಸಿಕೊಂಡಿದ್ದಾನೆಂದೂ ಬೈರಾಗಿಯ ವೇಷ ಧರಿಸಿ ಫರಾರಿಯಾಗುವ ಸಿದ್ಧತೆ ಮಾಡಿಟ್ಟಿದ್ದಾನೆಂದೂ ೪ ದಿನಗಳ ಹಿಂದೆ ಇನ್ನೊಂದು ವಾರ್ತೆ ಬಂದು ತಲ್ಪಿತು! ಹಿಟ್ಲರನೀಗ ರಣಭೂಮಿಯಿಂದ ತನ್ನ ಸ್ವಸ್ಥಾನವಾದ ಬ್ರೆಕ್ಟೆಸ್‌ಗಾಡನ್ನಿಗೆ ಮರಳಿಬಂದಿದ್ದು, ದುಃಖಾಕ್ರಾಂತನಾಗಿ ತನ್ನ ನೆಲಮನೆಯೊಳಗಿನ ಅಭೇದ್ಯ ಮಂದಿರದಲ್ಲಿ ಕುಳಿತುಕೊಂಡಿದ್ದಾನೆಂತಲೂ, ಬ್ರಿಟಿಶ ಆಕಾಶವಾಣಿಯು ಸಾರುತ್ತಿರುವ ಜರ್ಮನರ ಪರಾಭವದ ಸುದ್ದಿಗಳನ್ನು ಆಲಿಸುತ್ತಿರುವನೆಂತಲೂ ಒಮ್ಮೊಮ್ಮೆ ದಿಙ್ಮೂಢನಾಗಿ ಹುಚ್ಚನಂತೆ ಆವೇಶದಿಂದ ಗರ್ಜಿಸುತ್ತಾನೆಂತಲೂ ಲಂಡನದಿಂದ ಮತ್ತೊಂದು ಸುದ್ದಿ ಹೊರಟಿದೆ! ಇದೇ ಬರುವ ಎಪ್ರಿಲ ತಾ ೨೦ಕ್ಕೆ ಹಿಟ್ಲರನ ೫೬ನೇ ಜನ್ಮದಿನದ ಸಮಯದಲ್ಲಿ, ಹಿಟ್ಲರನ ಗ್ರಹಗತಿ ಬಹಳ ಕೆಟ್ಟದ್ದುಂಟೆಂದು ಅವನ ಜ್ಯೋತಿಷಿಗಳು ತಿಳಿಸಿದ್ದಾರೆಂತಲೂ (ಬ್ರಿಟಿಶ [illegible] ಭೀತಿಯಿಂದಲೋ ಏನೋ!). ಅವನೀಗ ತನ್ನ ಅಂಗರಕ್ಷಕರನ್ನು ಹೆಚ್ಚಿಸಿಕೊಂಡಿದ್ದಾನೆಂತಲೂ ಜರ್ಮನಿಯ ಗಡಿನಾಡಿನಲ್ಲಿ ವಾರ್ತೆ ಹಬ್ಬಿರುವದಾಗಿ ಮುಂಬಯಿ ಕ್ರೊನಿಕಲ್ ಪತ್ರಿಕೆಯಲ್ಲಿ ಮಗದೊಂದು ವೃತ್ತ ಪ್ರಕಟವಾಗಿದೆ! ಈ ಎಲ್ಲ ವಾರ್ತೆಗಳನ್ನು ನಂಬ ಬೇಕಾದರೆ ಹಿಟ್ಲರನೊಬ್ಬ ಬೀದಿಯ ಭಿಕಾರಿ, ಹುಚ್ಚರ ಧರ್ಮಶಾಲೆಯಲ್ಲಿ ಮಲಗುವ ತಿರುಕ ಎಂದು ನಾವು ಮೊದಲು ಗ್ರಹಿಸಬೇಕಾಗುತ್ತದೆ! ಸದಾಕಾಲ ನಂಬಿಗಸ್ತ ಸೈನಿಕರ ಸಶಸ್ತ್ರ ಪಹರೆಯೊಳಗೆ ಇರುವ ಹಿಟ್ಲರನು ಮೇಲ್ಕಾಣಿಸಿದ ಸುದ್ದಿಗಳನ್ನು ಪ್ರಚುರಗೊಳಿಸಿದ ಚಿತ್ರಗುಪ್ತರ ಕಣ್ಣಿಗೆ ಹೇಗೆ ಬಿದ್ದನು, ಅವನ ಗುಪ್ತ ಮಂತ್ರಗಳೂ, ಆಲೋಚನೆಗಳೂ ಇವರಿಗೆ, ಹೇಗೆ ತಿಳಿಯುತ್ತಿವೆ? ಎಂಬುದು ಒಂದು ಗೂಢ ಸಮಸ್ಯೆ! ಇಂತಹ ಹುಚ್ಚು-ವಾರ್ತೆಗಳನ್ನು ಕಣ್ಮುಚ್ಚಿ ನಂಬಿದರೆ ಮಾತ್ರ ಜರ್ಮನಿಯ ಯುದ್ಧ ಬೇಗನೇ ಮುಕ್ತಾಯವಾದೀತೆಂದು ಹೇಳಬಹುದು. ಆದರೆ ಪಶ್ಚಿಮ ರಣರಂಗದ ಸರ್ವಸೇನಾಪತಿಗಳಾದ ಐಸೆನ್‌ಹಾವರರವರು ಅಮೇರಿಕೆಯ ಅಧ್ಯಕ್ಷರಿಗೆ ಮಾರ್ಚ ತಾ ೩೧ಕ್ಕೆ ಬರೆದ ಪತ್ರವನ್ನು ಸೂಕ್ಷ್ಮವಾಗಿ ಅಭ್ಯಸಿಸಿದವರು ಇಂಥ ಮೂಢತನ ಎಂದೂ ಮಾಡಲಾರರು. 'There will never be a clean-cut military surrender on the Western Front" (ಪಶ್ಚಿಮ ರಣರಂಗದಲ್ಲಿ ಶತ್ರುಗಳು ಎಂದಿಗೂ ಶರಣುಬರುವ ಆಶೆಯಿಲ್ಲ) ಎಂದೂ ಜರ್ಮನರು ನಾಡಿನಲ್ಲೆಲ್ಲ ಕೂಟಯುದ್ಧವನ್ನಾರಂಭಿಸುವರೆಂದೂ, ಅದನ್ನು ತಡೆಯಬೇಕಾದರೆ ಅಪರಿಮಿತ ದಂಡುಗಳು ಬೇಕಾಗುವವೆಂದೂ ಐಸೆನಹಾವರರು ತಮ್ಮ ಅಧ್ಯಕ್ಷರಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಜರ್ಮನರು ಈ ಕೂಟಯುದ್ಧದ ಭವ್ಯ ಯೋಜನೆಯನ್ನು ಈ ಹಿಂದೆಯೇ ಮಾಡಿಟ್ಟ ಸಂಗತಿಯನ್ನು ನಾನು ಈ ಮುಂಚೆ ನಮೂದಿಸಿದ್ದೇನೆ. ಸಹಸ್ರಾವಧಿ, ಲಕ್ಷಾವಧಿ ತರುಣರಿಗೂ ತರುಣಿಯರಿಗೂ ಅವರು ಕ್ರಮಬದ್ಧ ಶಿಕ್ಷಣ ಕೊಟ್ಟು, ಅವರಿಗೆ ಕೂಟಯುದ್ಧದ ಕ್ರಮಗಳನ್ನು ಕಲಿಸಿಕೊಟ್ಟಿದ್ದಾರೆ. ಈಗಾಗಲೇ ಈ ಕೂಟಸೈನಿಕರು ಪಶ್ಚಿಮ ರಣಾಂಗಣದಲ್ಲಿ ಅಮೇರಿಕೆಯ ೯ನೆಯ ದಂಡು ಹೋರಾಡುತ್ತಿರುವ ಭಾಗದಲ್ಲಿ ತಮ್ಮ ಕೂಟಯುದ್ಧದ ತಂತ್ರವನ್ನು ಆಚರಣೆಯಲ್ಲಿ ತರಲಾರಂಭಿಸಿದ ವಾರ್ತೆಯುಂಟು. ಸಾದಾ ನಾಗರಿಕರ ವೇಷದಿಂದ ಈ ಗುಪ್ತ ಸೈನಿಕರು ಸಂಚರಿಸುತ್ತ ಮಿತ್ರ ಸೈನಿಕರಿಗೆ ಕಷ್ಟಕೊಡುತ್ತಾರಂತೆ. ಆದ್ದರಿಂದ ಇಂತಹ ಗುಪ್ತ ಸೈನಿಕರಿಗೆ ಆಶ್ರಯ ಕೊಡುವ ಪ್ರತಿಯೊಂದು ಮನೆಯನ್ನು ಸುಟ್ಟು ಬೂದಿ ಮಾಡಬೇಕೆಂದು ಮಿತ್ರ ಸೈನಿಕರಿಗೆ ಆಜ್ಞೆ ಕೊಡಲಾಗಿದೆ. ಜರ್ಮನರ ಈ ಕೂಟ ಸೈನಿಕರ ಸಂಸ್ಥೆಗೆ 'ವೇರವೂಲ್ಫ' ಎಂದು ಹೆಸರಿಡಲಾಗಿದೆ. ಜರ್ಮನಿಯ ಪ್ರಚಾರ ಮಂತ್ರಿಯಾದ ಡಾ। ಗೊಬೆಲ್ಸನು ಈಗಿನಿಂದಲೇ ಆಕಾಶವಾಣಿಯಲ್ಲಿ ಕೂಟಸೈನಿಕರಿಗೆ ಹುರುಪು ಕೊಡುವ ಪದ್ಯಗಳನ್ನು ಹೇಳಿಸುವ ಪರಿಪಾಠವನ್ನಿಟ್ಟಿದ್ದಾನೆಂದು ಮುಂಬಯಿ ಕ್ರೊನಿಕಲ್ ಪತ್ರಿಕೆಯ ಸ್ವಂತ ಪ್ರತಿನಿಧಿಗಳು ಲಂಡನದಿಂದ ತಿಳಿಸುತ್ತಾರೆ. ಇಂತಹ ಕೂಟಯುದ್ಧದ ವ್ಯಾಪ್ತಿ ಮತ್ತು ಪರಿಣಾಮ ಎಷ್ಟಿರುತ್ತದೆಂಬುದು ಹಿಂದೀಯರಾದ ನಮಗೆ ಅಪರಿಚಿತವಲ್ಲ. ೧೭ನೇ ಶತಮಾನದ ಕೊನೆಗೆ ಮಹಾರಾಷ್ಟ್ರವನ್ನು ಪಾದಾಕ್ರಾಂತ ಮಾಡಲು ಪ್ರಚಂಡ ಸೇನೆಯೊಂದಿಗೆ ದಿಲ್ಲಿಯಿಂದ ದಕ್ಷಿಣಕ್ಕೆ ಹೊರಟು ಬಂದ ಮೊಗಲ ಚಕ್ರವರ್ತಿ ಔರಂಗಜೇಬನಿಗೆ ಮರಾಠಾ ಸೈನಿಕರು ಸತತ ೨೫ ವರ್ಷಗಳ ಕಾಲ ಹೇಗೆ ಕಷ್ಟ ಕೊಟ್ಟು, ಕೊನೆಗೆ ಆ ಚಕ್ರವರ್ತಿಗೆ ಅಹಮ್ಮದನಗರದಲ್ಲೇ ಯಮಲೋಕದ ಹಾದಿಯನ್ನು ಹೇಗೆ ತೋರಿಸಿದರೆಂಬುದನ್ನು ನಾವು ಮರಾಠರ ಇತಿಹಾಸದಲ್ಲಿ ಓದಿಲ್ಲವೇ? ೨೦ನೇ ಶತಮಾನದ ಜರ್ಮನರು ಆ ಮರಾಠರಿಗಿಂತ ನೂರು ಮಡಿ ಸುಶಿಕ್ಷಿತರಿದ್ದಾರೆ. ಮಿತ್ರರ ಮನೆಯಲ್ಲೀಗ ಛಿದ್ರಗಳುಂಟು. ಅವು ವಿಕೋಪಕ್ಕೆ ಹೋಗುವ ಲಕ್ಷಣಗಳೂ ಉಂಟು. ಆದ್ದರಿಂದ ಮಿತ್ರರು ಈ ಕೂಟಯುದ್ಧದ ಕಷ್ಟಗಳನ್ನು ಎದುರಿಸಿ [illegible] ಗತಿಯನ್ನು ಹೊಂದಬಾರದೆಂತಲೂ ಜರ್ಮನರಿಗೆ ಸೌಜನ್ಯ ತೋರಿಸಿ ಸಂಧಿ ಮಾಡಿಕೊಳ್ಳುವದು ಹಿತಕರವೆಂತಲೂ [illegible] ಸಲಹೆ ಕೊಟ್ಟಿದೆ

ESTD: 1934

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR S K

Branches.-

ANKOLA, DHARWAR HUBLI, MANGALORE
BELGAUM, GOKARN, KARWAR, NAGAR,
COONDAPOOR HAVERI KUMTA SHIMOGA
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor 15—2—1945.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರ ಒಮ್ಮೊಮ್ಮೆ ಮೋಡಗಳಾಗಿ ಮಳೆಯಾಗುವ ಚಿಹ್ನೆಗಳು ಕಾಣಿಸುತ್ತಿವೆ. ಊರಲ್ಲಿ ಕೆಲವರಿಗೆ ಜ್ವರದ ಬಾಧೆಯುಂಟು.

ಶ್ರೀ ಗೋಕರ್ಣ ಮಠಾಧೀಶ ಶ್ರೀ ವಿದ್ಯಾಧಿರಾಜತೀರ್ಥ ಗುರುಗಳ ಸ್ವಾರಿಯು ಕಳೆದ ತಾ ೨ ರಂದು ಗುರುವಾರ ಹೆಗಡೆಗೆ ಬಂದು ಮೊನ್ನೆ ಶನಿವಾರ [illegible] ಕಾರವಾರಕ್ಕೆ ಹೊರಟುಹೋಗಿದೆ. ಕೆಲವು ಊರುಗಳೊಳಗಿನ ಮುಖ್ಯರು ಬೇಡಿದ್ದರಿಂದಲೂ ಗಂಗೊಳ್ಳಿ, ಮಂಗಳೂರ ಊರವರ ಅನಪೇಕ್ಷಿತ ಆಮಂತ್ರಣ ಬಂದುದರಿಂದ ಅಲ್ಲಿ ಕೆಲವು ದಿನ ಸಂಚರಿಸಬೇಕಾದ್ದರಿಂದಲೂ ಈ ಸಾರೆ ಕೆಲವು ಹಳ್ಳಿಗಳಲ್ಲೂ ಹೊನ್ನಾವರ ಭಟಕಳ ಸೀಮೆಯಲ್ಲೂ ದಿಗ್ವಿಜಯ ಮಾಡಲು ಶ್ರೀಗಳಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಶ್ರೀ ರಾಮನವಮಿಯ ಮಹೋತ್ಸವ ಮುಗಿದ ಬಳಿಕ ಇನ್ನೊಮ್ಮೆ ಈ ಕಡೆ ಸಂಚಾರವನ್ನಿಟ್ಟು ಈ ಸಾರೆ ಭೆಟ್ಟಿ ಕೊಡಲಾಗದ ಹಳ್ಳಿಗಳೊಳಗಿನ ಶಿಷ್ಯವೃಂದಗಳಿಗೆ ದರ್ಶನಾನುಗ್ರಹ ದಯಪಾಲಿಸುವ ವಿಚಾರ ಶ್ರೀ ಗುರುಗಳವರಿಂದ ತಿಳಿಯುತ್ತದೆ.

ಶ್ರೀ ಕುಂದಾಪುರ ವ್ಯಾಸರಾಜ ಮಠದ ಶ್ರೀ ಲಕ್ಷ್ಮೀಶ ತೀರ್ಥ ಗುರುಗಳು ಕಳೆದ ಬುಧವಾರ ಇಲ್ಲಿಂದ ಹೊನ್ನಾವರ ಸೀಮೆಗೆ ಹೋಗಿದ್ದಾರೆ. ಹಾಗೆಯೇ ಅವರು ಮುಂದೆ ಗುಣವಂತೆ ಸೀಮೆಗೆ ಹೋಗುವರಂತೆ.

ಕಳೆದ ೨ ವಾರಗಳಿಂದ ಸರಕಾರದವರ ಅಕ್ಕಿ ಭತ್ತಗಳ ಖರೀದಿ ಬಲು ರಭಸದಿಂದ ಸಾಗಿದೆ. ಗ್ರಾಮಸ್ಥರಿಗೂ ನೆರೆಯಲ ಇಷ್ಟವಿದ್ದರೂ ಈಗ ಖರೀದಿಯಾದ ಮತ್ತು ಕೆಲಸ ಒತ್ತಾಯದ ಭತ್ತ ಖರೀದಿಯಾಗಲೆಂದು ಮುಂಬಯಿ ಸರಕಾರದವರು ಹೇಳುವ ಮಾತಿಗೂ ಹಳ್ಳಿಗಳಲ್ಲಿ ನಡೆದಿರುವ ಭತ್ತ ಖರೀದಿಯ ನಮೂನೆಗೂ ಮೇಳ ಹಾಕುವದು ಸರ್ವಥಾ ಅಶಕ್ಯ! ಹಳ್ಳಿಗಳಲ್ಲೀಗ ನಡೆದಿರುವ ಖರೀದಿಯು ರೈತ ಜನರ ಖುಷಿಯಿಂದ ನಡೆದಿದೆಯೆಂದು ಹೇಳಬೇಕೆಂದರೆ 'ಖುಷಿ' ಎಂಬ ಶಬ್ದಕ್ಕೆ ಶಬ್ದಕೋಶದಲ್ಲಿ ಹೊಸ ಅರ್ಥ ಕೊಟ್ಟು, ಎಂದರೆ ಗ್ರಾಮಸ್ಥ ಅಧಿಕಾರಿಗಳ ಉಪಟಳದಿಂದ [illegible] ಭಾವನೆ ಬಂದು ಅರ್ಥವಿವರಣೆ ಮಾಡಬೇಕಾದೀತು. ಆ ಅಧಿಕಾರಿಗಳು ಈಗ ರೈತರಲ್ಲಿ ಹೋಗಿ ಅಕ್ಕಿ ಎಷ್ಟುಂಟು? ಭತ್ತ ಎಷ್ಟುಂಟು? ಸರಕಾರಕ್ಕೆ ಎಷ್ಟು 'ಲೆವ್ಹಿ' (ಪಟ್ಟಿಯೋ?) ಇನ್ನೂ ಮಾಪಲ ಬಂದಿರುವದಿಲ್ಲ? ನಿಮ್ಮ ಅಕ್ಕಿ ಭತ್ತಗಳ ವೃದ್ಧಿ ನಂಬಲನರ್ಹ. ಮಾಡಬೇಕಾಗಿದೆ! ಎಂದು ಆ ರೈತರಿಗೆ ಬೆದರಿಸಿ ಅವರಿಂದ ಅಕ್ಕಿ ಭತ್ತಗಳನ್ನು ಖರೀದಿಸುತ್ತಿದ್ದಾರೆ. ಅವರಲ್ಲಿ ಎಷ್ಟು ಅಕ್ಕಿಯುಂಟು, ಮನೆಯಲ್ಲಿ ಎಷ್ಟು ಜನರುಂಟು, ಸಂಸಾರಕ್ಕೆ ಅವರಿಗೆ ಅಕ್ಕಿ ಭತ್ತ ಎಷ್ಟು ಬೇಕಾದೀತು, ಸಾಗುವಳಿ ವೆಚ್ಚಕ್ಕೆ ಎಷ್ಟು ಬೇಕಾದೀತು ಎಂಬುದರ ಯೋಚನೆ ಅವರು ಮಾಡುವದಿಲ್ಲ! ಯೋಚನೆ ಮಾಡಬೇಕೆಂಬ ಅರಿವೂ ಅವರಿಗೆ ಇಲ್ಲೆಂದು ಹೇಳಬಹುದು. ರೈತರು "ಇದು ಒಡೆಯರಿಗೆ ಗೇಣಿ ಕೊಡತಕ್ಕದೆಂದು ತೆಗೆದಿಟ್ಟ ಅಕ್ಕಿ ಯಾ ಭತ್ತ" ಎಂದು ಹೇಳಿದರೆ, ಆ ಅಕ್ಕಿ ನಮಗೆ ಕೊಡು. ಒಡೆಯರಿಗೆ ನಗದಿಯಿಂದ ಗೇಣಿ ಸಲ್ಲಿಸು, ಒಡೆಯರು ಹಣ ಕೊಳ್ಳದಿದ್ದರೆ ನಮ್ಮ ಕಡೆಗೆ ಬಾ, ನಾವು ನಿಯಮಾವಳಿ ಬರೆದು ಕೊಡುತ್ತೇವೆ, ಮಾಮಲೇದಾರರನ್ನು ಕೇಳಿನೋಡು. ಅವರು [illegible] ನೀನು ಬೆದರಬೇಕಾಗಿಲ್ಲ. [illegible] ಅವರೇ ಕೊಡಬೇಕಾದೀತು. ಸರಕಾರಿ ದರದಿಂದಲೇ ಅವರು ಹಣ ತಕ್ಕೊಳ್ಳಬೇಕಾದೀತು ಎಂದು ಮುಂತಾಗಿ ಬುದ್ಧಿವಾದ ಕೊಟ್ಟು ಆ ಅಕ್ಕಿ ಭತ್ತಗಳನ್ನು ಸರಕಾರಿ ಉಗ್ರಾಣಕ್ಕೆ ಒಯ್ಯಿಸಿಕೊಳ್ಳುತ್ತಾರೆ. ಗ್ರಾಮಸ್ಥರ ಈ ಉತ್ಸಾಹದ ಪರಿಯಿಂದ ಸರಕಾರಿ ಉಗ್ರಾಣಗಳು ತುಂಬುತ್ತಿರಬಹುದು. ಮೇಲಧಿಕಾರಿಗಳೂ ಅವರ ಕಾರ್ಯದಕ್ಷತೆಗೆ ಶಾಬಾಸಕಿ ಕೊಡಬಹುದು. ಆದರೆ ಆ ರೈತರಿಗೂ ಅವರ ಒಡೆಯರಿಗೂ ಎಷ್ಟು ಕಷ್ಟ ನಷ್ಟಗಳಾಗುತ್ತವೆ ಎಂಬುದನ್ನು ಯಾವ ಮೇಲಧಿಕಾರಿಯೂ ನೋಡುವದಿಲ್ಲ! ರೈತರ ಸಂಸಾರಕ್ಕೆ ಸಾಕಷ್ಟು ಅಕ್ಕಿ-ಭತ್ತ ಬಿಟ್ಟೇ ಅವರ ಅಕ್ಕಿ ಭತ್ತಗಳ ಖರೀದಿಯಾಗಬೇಕೆಂದು ಅಧಿಕಾರಸ್ಥರ ಅಭಿಪ್ರಾಯವಿರುತ್ತದೆ. ಆದರಿಂದ ಆ ರೈತರಿಗೆ ಅಕ್ಕಿಯು ಸೀಧಾ ಅವರು ಕೊಡಲೊಲ್ಲುವದಿಲ್ಲ! ಹೀಗಾಗಿ ಭತ್ತ ಬೆಳೆಸಿದ ರೈತರು ಉಪವಾಸ ತೆಗೆಯುವ ಪ್ರಸಂಗ ಬಂದಿದೆ ಇಲ್ಲವೆ ಬರುತ್ತಿದೆ! ಒಡೆಯರ ಮೇಲೂ ಇಂತಹದೇ ವಿಚಿತ್ರ ಪ್ರಸಂಗ ಬಂದಿದೆ. ಅವರ ಗೇಣಿಯ ಅಕ್ಕಿಯನ್ನು ಅಧಿಕಾರಿಗಳು ಪರಸ್ಪರ ರೈತರ ಕಡೆಯಿಂದ ಖರೀದಿಸಿ ಸರಕಾರಿ ಉಗ್ರಾಣಗಳಲ್ಲಿ ತುಂಬುತ್ತಿರುವದರಿಂದ ಅವರು ಸೀಧಾ ಅಕ್ಕಿಯ ಭಿಕ್ಷೆಯಿಂದ ಜೀವನ ನಡಿಸಬೇಕಾಗಿದೆ! ಅವರ ಅಕ್ಕಿಯ ಬಗ್ಗೆ ಸರಕಾರದವರು ಕೊಡುವ ಧಾರಣೆ ಬೇರೆ, ಅವರಿಗೆ ಸೀಧಾ-ಅಕ್ಕಿ ಮಾರುವ ಧಾರಣೆ ಬೇರೆ! ರೂ ೧೧ ೧೪ ರಂತೆ ಒಂದು ಮಾನಗಿಯಂತೆ ಸರಕಾರವು ಅವರ ಅಕ್ಕಿಯನ್ನು ಸ್ವಾಧೀನಪಡಿಸಿಕೊಂಡು, ಅದೇ ಅಕ್ಕಿಗಾಗಿ ಇಲ್ಲವೆ ಅದಕ್ಕಿಂತ ಹೀನ ತರಗತಿಯ ಅಕ್ಕಿಗಾಗಿ ಮಾನಗಿ ೧೮ ರೂ ೧೩ ೧೩ ೦ ಅವರಿಂದ ಕೊಳ್ಳುತ್ತಿದೆ! ಇದು ಒಡೆಯರಿಗಾಗುವ ನಷ್ಟ. ತಮ್ಮ ಭೂಮಿಯ ಬೆಳೆಯ ಅಕ್ಕಿಯನ್ನು ಈಗ ಕಳಕೊಂಡು ಮುಂದೆ ಪ್ರೊಮೆ ಇಲ್ಲವೆ ಕೊಬ್ಬಕ್ಕಿಯನ್ನು ಅವರು ಉಣ್ಣಬೇಕಾಗುವದು ಕಷ್ಟ! ಮತ್ತು ಅದನ್ನು ಪಡಕೊಳ್ಳುವದಕ್ಕಾಗಿ ಏಳ ವಾರಕ್ಕೆ ಅಥವಾ ಪಕ್ಷ-ಪಕ್ಷಕ್ಕೆ ಸೀಧಾ ಅಂಗಡಿಯ ಬಾಗಿಲ ಮುಂದಿನ ಗಲಾಟೆಯಲ್ಲಿ 'ಭಿಕ್ಷಾಂ ದೇಹಿ' ಎಂದೆನ್ನುತ್ತ ತಾಸುಗಟ್ಟಲೆ ನಿಲ್ಲುವ ಪ್ರಸಂಗ ಬರುವದಂತೂ ಅತಿ ಕಷ್ಟ!! ರೈತರನ್ನೂ ಜಮೀನದಾರರನ್ನೂ ಈ ಪರಿ ಕಷ್ಟನಷ್ಟಗಳಿಗೆ ಗುರಿ ಮಾಡುವದು ನ್ಯಾಯ್ಯವೇ ಹೇಗೆಂಬುದರ ವಿಚಾರವನ್ನು ವಿಚಾರಿ ಜಿಲ್ಲಾಧಿಪರು ಮಾಡಬೇಕಾಗಿಯೂ, ಪ್ರಾಂತಿಕ ಸರಕಾರದವರ ಸಂಕಲ್ಪದಂತೆ ಅಕ್ಕಿ ಭತ್ತಗಳ ಖರೀದಿಯು ನಿಜವಾಗಿಯೂ ಒಕ್ಕಲು-ಒಡೆಯರ ಸ್ವಸಂತೋಷದ ಒಪ್ಪಿಗೆಯಿಂದಲೇ ನಡೆಯುವಂತೆ ಕೂಡಲೆ ಏರ್ಪಾಟು ಮಾಡಬೇಕಾಗಿಯೂ ವಿನಂತಿಯಿದೆ.

ಇಲ್ಲಿಯ ಪೋಸ್ಟ ಮಾಸ್ತರ ರಾ॥ ಪಡುಕೋಣರವರಿಗೆ ಕಾರವಾರ ಅಂಚೆಕಛೇರಿಗೆ ವರ್ಗವಾಗಿರುವ ವಾರ್ತೆ ಕೇಳಿ ಊರ ಜನರಲ್ಲಿ ಬಹಳ ಅಸಮಾಧಾನವಾಗಿದೆ. ಇಲ್ಲಿಯ ಅಂಚೆಕಛೇರಿಯ ಕೆಲಸ ವಿಪರೀತ ಹೆಚ್ಚಾಗಿರುತ್ತಿದ್ದು ಅದನ್ನು ನಿರ್ವಹಿಸಲು ರಾ. ಪಡುಕೋಣರ ಪ್ರದಕ್ಷ [illegible] ಮಾತ್ರ ಸಮಾಧಾನವನ್ನುಂಟುಮಾಡುವರೇ [illegible] ಕಾರಣ ರಾ॥ ಪಡುಕೋಣರವರ ವರ್ಗವನ್ನು ರದ್ದುಗೊಳಿಸಬೇಕಾಗಿ ಮೇಲಧಿಕಾರಿಗಳಲ್ಲಿ ಸಾರ್ವಜನಿಕರ ಆಗ್ರಹದ ವಿನಂತಿಯಿದೆ.

ಇಂದು ಗಂಡುಮಕ್ಕಳ ಮುಲ್ಕೀ ಪರೀಕ್ಷೆಗಾರಂಭ. ಇಲ್ಲಿಯ ಕೇಂದ್ರದಲ್ಲಿ ೪೬೬ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದಾರೆ.

ಗೋಕರ್ಣ ಸೀಗೆ ಕಚೇರಿಯ [illegible] ಒಕ್ಕಲಿಗರ ಸಕ್ಕರೆಯನ್ನು ಕೊಂಡುಕೊಂಡು ಕಳ್ಳ ಪೇಟೆ ನಡಿಸಿದ್ದರಿಂದ [illegible] ವಾರ್ಕದಲ್ಲಿ [illegible] ಅವರ ಸಕ್ಕರೆ [illegible] ಮತ್ತು [illegible] ಸೀಧಾ ಅಂಗಡಿಕಾರರೇ ಈ [illegible] ವಾರ್ತೆಯನ್ನು ಎಷ್ಟುಸಿರುವದರಿಂದ [illegible] ಅಧಿಕಾರಿಗಳು [illegible]

ಹರಳು ಸಕ್ಕರೆ, ಪುಡಿ ಮಾಡಿದ ಸಕ್ಕರೆ, ಬೂರಾ ಸಕ್ಕರೆ, [illegible] ಸಕ್ಕರೆ ಮತ್ತು ಕಲ್ಲು ಸಕ್ಕರೆ ಇವುಗಳಷ್ಟೇ ಸೀಧಾ ನಿಬಂಧನೆಗಳಿಗೆ ಒಳಗಾಗಿರುತ್ತವೆಂತಲೂ 'ಕ್ಯೂಬ' ಸಕ್ಕರೆ, 'ಪ್ಯಾಸಿಂಗ' ಸಕ್ಕರೆ, ಕಾಫಿ ಹರಳು ಮುಂತಾದ ವಿಶಿಷ್ಟ ಜಾತಿ ಸಕ್ಕರೆಗಳಿಗೆ ಈ ನಿಬಂಧನೆಗಳು ಅನ್ವಯಿಸುವದಿಲ್ಲೆಂದೂ ಮುಂಬಯಿ ಸರಕಾರದವರು ಸ್ಪಷ್ಟೀಕರಣ ಮಾಡಿದ್ದಾರೆ.

ಗೋಕರ್ಣದ [illegible] ಉತ್ತೇಜಕ ಸಭೆಯವರು ಕಳೆದ ತಾ. ೨೫ಕ್ಕೆ ಒಂದು [illegible] ಸ್ಪರ್ಧೆಯನ್ನು ಏರ್ಪಡಿಸಿದ್ದರು. ೧೩ ಮಂದಿ ಅದರಲ್ಲಿ ಸೇರಿದ್ದರು. ಅವರಲ್ಲಿ ಕುಮಾರ ಗಣಪತಿ ಸುಬ್ಬರಾವ ಗಾಯತ್ರೀ (೯ ವರ್ಷ ಪ್ರಾಯ) ಶ್ರೀ [illegible] ಭಟ್ಟ ಮತ್ತು ರಾ॥ ನರಸಿಂಹ ಪಂಡಿತ ಇವರು ಅನುಕ್ರಮವಾಗಿ ೧-೨-೩ ನೇ ಸ್ಥಾನ ಪಡೆದರು. ಇವರಿಗೆ ಪರೀಕ್ಷಕರ ಅಧ್ಯಕ್ಷರಾದ ರಾ॥ [illegible] ಶೇಷಗಿರಿ ಕಾಮತರ ಹಸ್ತದಿಂದ ಬಹುಮಾನ ಕೊಡಿಸಲಾಯಿತು.

ಭಟಕಳ— (ತಾ ೩-೪-೪೫) ನಿನ್ನೆ ಇಲ್ಲಿಯ ಕರ್ನಾಟಕ ಸಂಘದ ವಿದ್ಯಮಾನದ ಶ್ರೀ ಹನುಮಂತ ದೇವರ ಗುಡಿಯ ಚಾವಡಿಯಲ್ಲಿ ರಾ॥ [illegible] ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ [illegible] ದಿವಂಗತ [illegible] ಬಗ್ಗೆ [illegible]

ಶಿರಸಿ— (ತಾ ೩ ೪ ೪೫) [illegible] ಹಬ್ಬದಂತೆ ಮುಂಜಾಗ್ರತೆಯ ಉಪಾಯ ಕೈಕೊಂಡಿದ್ದರೆ [illegible] ವ್ಯವಸ್ಥೆಯೂ ಮಾಡಲ್ಪಟ್ಟಿದೆ.

ಇಲ್ಲಿಂದ ಸಿದ್ದಾಪುರಕ್ಕೂ ಹುಬ್ಬಳ್ಳಿಗೂ ಕುಮಟೆಗೂ ಟಪಾಲ ಒಯ್ಯುವ ಮತ್ತು ಅಲ್ಲಿಂದ ಟಪಾಲ ತರುವ ಮೋಟಾರ ಒಪ್ಪಂದಕ್ಕೆ ಕೊಡಲ್ಪಟ್ಟಿದೆ. ಅವರ ಒಂದೂ ಗಾಡಿ ಸುಸ್ಥಿತಿಯಲ್ಲಿಲ್ಲ! ಆದರಿಂದ ಒಮ್ಮೊಮ್ಮೆ ಟಪಾಲ ಒಯ್ಯಲು ಬಂಡಿಯಿಲ್ಲದೆ ತೊಂದರೆಯಾಗುತ್ತಿದೆ! ಟಪಾಲ ಒಯ್ಯುವ ಬಂಡಿಗಳಲ್ಲಿ ಟಪಾಲ ಹಾಕುವ ಪೆಟ್ಟಿಗೆಗಳೇನೋ ಇವೆ. ಆದರೆ ಅವುಗಳಿಗೆ ಕೀಲಿಗಳೆಂದರೂ ಬೀಗವಿಲ್ಲ! ಆದರಿಂದ ಅವುಗಳಲ್ಲಿ ಹಾಕಿದ ಪತ್ರಗಳ ಹಾನಿಯಾಗುತ್ತವಂತೆ! ಅಧಿಕಾರಿಗಳು ಇತ್ತ ಲಕ್ಷ್ಯ ಪೂರೈಸಿ, ಸುಸ್ಥಿತಿಯಲ್ಲಿದ್ದ ಬಂಡಿಗಳನ್ನು ಇಡುವಂತೆಯೂ ಬೀಗ ಪೆಟ್ಟಿಗೆಗಳನ್ನು ಭದ್ರಗೊಳಿಸುವಂತೆಯೂ ಮಾಲಕರಿಗೆ ಎಚ್ಚರಿಕೆ ಕೊಡಬೇಕಾಗಿ ಸೂಚನೆಯಿದೆ.

ಕಳೆದ ತಾ ೨೫ ನೇ ರಾತ್ರಿ ತಗಡ ಗ್ರಾಮದೊಳಗಿನ ಹರಿಜನರ ಕೇರಿಗೆ ಅಕಸ್ಮಾತ್ ಬೆಂಕಿ ಬಿದ್ದು ೧೧ ಗುಡಿಸಲುಗಳು ೬ ದನದ ಕೊಟ್ಟಿಗೆಗಳು, ೧ ಗುಡಿ ಮತ್ತು ೧ ಭತ್ತದ ಕಣಜ ಪೂರ್ತಿ ಸುಟ್ಟು ಹೋಗಿವೆ. ಸುಮಾರು ೫೦ ಜನರು ನಿರಾಧಾರಿಗಳಾಗಿದ್ದಾರೆ. ಅವರಿಗೆ ಜಿಲ್ಲಾ ಹರಿಜನ ಸೇವಕ ಸಂಘದವರು ಸಹಾಯವನ್ನೀಯುತ್ತಿದ್ದು ಸಂಘದ ಕಡೆ ಸರ್ವ ವಿಪತ್ತಿನ ನಿವಾರಣೆಯ ಬಗ್ಗೆ ರೂ ೪೦೦-೫೦೦ ಕೊಡಿವೆ. ಇಲ್ಲಿಯ ಶ್ರೀ ಮಾರಿಕಾಂಬಾ ದೇವಾಲಯದ ಭಂಡಾರದಿಂದ ರೂ ೨೫೦ ಮತ್ತು ಅಡಿಕೆ ವ್ಯಾಪಾರಿ ಸಂಘದಿಂದ ರೂ ೧೦೦ ದೊರಕಿವೆ. ಬೆಂಕಿಯಿಂದ ನಷ್ಟವಾದ ಆಸ್ತಿಯ ಬೆಲೆ ರೂ ೫೦೦೦ಕ್ಕೆ ಮೀರುತ್ತದೆಯಂತೆ. ಧರ್ಮಾತ್ಮರು ಈ ಪರಿಹಾರ ಕಾರ್ಯಕ್ಕೆ ಶಕ್ತ್ಯನುಸಾರ ಸಹಾಯ ನೀಡಬೇಕಾಗಿ ಬೇಡಿಕೆಯಿದೆ.

(ತಾ ೪ ೩-೪೫) ಇಲ್ಲಿಯ ಮಾಮಲೇದಾರ ರಾ॥ [illegible] ಇವರು ಅತಿ ಮೊನ್ನೆ ಗಾಡಿಯಲ್ಲಿ ಕೂತು ಬನವಾಸಿಗೆ ಹೋಗುತ್ತಿದ್ದಾಗ ಗಾಡಿಯು ಒಂದು ಕಡೆ ಮಗುಚಿ ಬಿದ್ದದರಿಂದ ಗಾಡಿಯಲ್ಲಿದ್ದ ಜನರಿಗೆ ಗಾಯಗಳಾಗಿವೆ. ಮಾಮಲೇದಾರರಿಗಾದ ಗಾಯ ವಿಶೇಷ ಸ್ವರೂಪದ್ದಿದ್ದು, ಅವರ ಎಡಗಾಲಿನ ಎಲುವು ಮುರಿದಿರಬೇಕೆಂದು. [illegible] ಕ್ಷ ಕಿರಣಗಳಿಂದ ಅವರ ಕಾಲಿನ ತಪಾಸಣೆ ಮಾಡುವದಕ್ಕಾಗಿ ನಿನ್ನೆ ಅವರಿಗೆ ಹುಬ್ಬಳ್ಳಿಗೆ ಒಯ್ದಿದ್ದಾರೆ.

(ತಾ ೧ ೪ ೪೫) ಮುಂಬಯಿಯಿಂದ ಶಿರಸಿಗೆ ಜವಳಿ ತರಲು ಸ್ವತಂತ್ರದ ಪರವಾನೆ ದೊರೆಯಲೆಂದು ಇಲ್ಲಿಯ ಜವಳಿ ವರ್ತಕ ಸಂಘದವರು ಮುಂಬಯಿಯ ಟೆಕ್ಸ್ಟೈಲ ಕಮಿಶನರರಿಗೆ ಪತ್ರ ಬರೆದು ಕೇಳಿದ್ದರು. ಮುಂಬಯಿ ಪ್ರಾಂತದಲ್ಲೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಜವಳಿ ಒಯ್ಯುವದಾದರೆ ಪರವಾನೆಯ ಅವಶ್ಯಕತೆ ಇಲ್ಲೆಂದು ಕಮಿಶನರರು ತಿಳಿಸಿದ್ದಾರೆ.

ಮುಂಡಗೋಡ— (ತಾ. ೧-೪-೪೫) ಕಳೆದ ತಾ ೧೬ ೩-೪೫ನೇ ದಿನ ಮಧ್ಯಾಹ್ನ ೨ ಘಂಟೆಯ ಸುಮಾರಿಗೆ ಇಲ್ಲಿಯ ಲಂಬಾಣಿ ಜನರ ಕೇರಿಗೆ ಅಕಸ್ಮಾತ್ ಬೆಂಕಿ ಬಿದ್ದು ೬೩ ಗುಡಿಸಲು ಭಸ್ಮವಾದವು. ಈ ಅನಾಹುತದಲ್ಲಿ ಸರಕಾರದವರ ಕೊರಡಿಟ್ಟ ಕೆಲವು ಕಟ್ಟಿಗೆಯೂ ಸುಟ್ಟು ಹೋಗಿದೆ. ಜನರು ಬೆಂಕಿ ಆರಿಸಲು ಪ್ರಯತ್ನ ಮಾಡಿದರೂ ಅದು ಹಿಡಿತದಲ್ಲಿ ಬರಲಿಲ್ಲ. ಲಂಬಾಣಿ ಜನರು ಆಗ ಕೆಲಸಕ್ಕಾಗಿ ಹೊರಗೆ ಹೋಗಿದ್ದರಿಂದ ಮನೆಗಳೊಳಗಿನ ಯಾವ ಸಾಮಾನೂ ಉಳಿಸಲಾಗಲಿಲ್ಲ. ಎಲ್ಲವೂ ಅಗ್ನಿನಾರಾಯಣನಿಗೆ ಆಹುತಿಯಾಯಿತು! ಆದರಿಂದ ನಿರ್ಗತಿಕರಾದ ಆ ಜನರ ಗೋಳು ನೋಡಿ ಆಗ ಇಲ್ಲಿದ್ದ ಪ್ರಾಂತಸಾಹೇಬರು [illegible] ಊರಲ್ಲಿ ವಂತಿಗೆಯಿಂದ ರೂ ೨೦೦೦ ಕೂಡಿಸಿ ನಿರ್ಗತಿಕರಿಗೆ ಕೆಲವು ಅಕ್ಕಿ, ಬಟ್ಟೆಗಳನ್ನು ಪೂರೈಸಿ ಮೇಲೆ [illegible] ಖರ್ಚಿಗೆ ನಗದಿ ರೂ ೨೦೦ ಹಂಚಿದರು. ಹಾಗೂ ಇವರಿಗೆ ಬೇರೆ ಜಾಗ [illegible] ಕೊಡುವಂತೆಯೂ, ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಎಲ್ಲ ಮುಂಚಿನ ಜಂಗಲ ಸಾಹಿತ್ಯ ಪುಕ್ಕಟೆ ಕೊಡಿಸುವಂತೆಯೂ, ಮುಂದಿನ ಮಳೆಗಾಲದ ಸಾಗುವಳಿಗಾಗಿ ಬೀಜ ಮುಂತಾದ್ದು ಪೂರೈಸಿಕೊಳ್ಳಲಿಕ್ಕೆ ತಗಾಯಿ ಕೊಡುವಂತೆಯೂ ಕಲೆಕ್ಟರರಿಗೆ ಬರೆದು ಹಾಕಿದ್ದಾರೆ. ಸದರಿ ಬೆಂಕಿಯ ಹಾವಳಿಯಿಂದ ಲಂಬಾಣಿ ಜನರಿಗಾದ ನಷ್ಟದ ಬೆಲೆ ರೂ ೨೦೦೦೦ ದಷ್ಟು ಮತ್ತು ಸರಕಾರಕ್ಕಾದ (ಕಟ್ಟಿಗೆ ಸುಟ್ಟು ಹೋದ್ದರಿಂದ) ನಷ್ಟದ ಬೆಲೆ ರೂ ೧೫೦೦೦ ಇರುತ್ತದೆಂದು ಅಂದಾಜು ಮಾಡಲಾಗಿದೆ.

ಕನ್ನಡ ಎಟ್ಲಾಸ

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ವರ್ತಮಾನ-ಪತ್ರ ಓದುವವರಿಗೂ ಸಮರ ಪ್ರಾಂತಗಳ ಸ್ಥಳ ಪರಿಚಯ ಮಾಡಿಕೊಡುವ ಅಮೂಲ್ಯ ಪುಸ್ತಕ. ಬೆಲೆ ರೂ ೧—೮—೦

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

ಅಡಿಕ ತೆರಿಗೆ ಕಾನೂನಿಗೆ ಈಗ ಜೀವವುಂಟೇ ?

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

[illegible], ತಾ ೩೧-೩-೧೯೪೫

ಇಲ್ಲಿಯ [illegible] ಸಂಘದ [illegible] ಹಿಂದುಸ್ಥಾನ ಸರಕಾರದೊಡನೆ ಶಿಷ್ಟಾಯಿ ಮಾಡಹೋದ ಶ್ರೀ ಶಿವರಾವ ಶಾಸ್ತ್ರಿಯವರು ಕಳೆದ ಮಂಗಳವಾರ ಮುಂಬಯಿಗೆ ಬಂದಿದ್ದಾರೆ. ತಾ. ೧೨-೩-೪೫ ರ ನಂತರ ಅವರು ದಿಲ್ಲಿಯಲ್ಲಿದ್ದರು. ಅವರ ಶಿಷ್ಟಾಯಿಯು ಪರಿಣಾಮವೇನಾಯಿತೆಂದು ಕೇಳಿಕೊಳ್ಳಲು ನಾನು ನಿನ್ನೆ ಅವರನ್ನು ಭೆಟ್ಟಿಯಾಗಿ ಅವರ ಅನುಭವವನ್ನು ಕೇಳಿಕೊಂಡೆನು. ಅದನ್ನು ಅತಿ ಸಂಕ್ಷಿಪ್ತವಾಗಿ 'ವೃತ್ತ'ದ ಓದುಗರ ತಿಳುವಳಿಕೆಗಾಗಿ ಕೆಳಗೆ ಕೊಟ್ಟಿದ್ದೇನೆ.

ದಿಲ್ಲಿಯಲ್ಲಿ ಈಗ ಬಜೆಟ ಅಧಿವೇಶನ ನಡೆಯುತ್ತದೆ. ಪ್ರತಿ ದಿನ ಭೋಜನ ಮಾತ್ರ [illegible] ೧೦ [illegible]! [illegible]! [illegible] ಯಾವದೇ ವಸ್ತು ದೊರೆಯುವದಿಲ್ಲ.

ಶ್ರೀ ಶಾಸ್ತ್ರಿಗಳೂ ಮಂಗಳೂರಿನ ಶ್ರೀ ಗೋವಿಂದ ಭಟ್ಟರೂ ಮೈಸೂರಿನ ಶ್ರೀ [illegible] ಭೂಪಾಲಂ ರವರೂ ಹಿಂದುಸ್ಥಾನ ಸರಕಾರದ ಅಧಿಕ ತೆರಿಗೆಯ ಮುಖ್ಯಾಧಿಕಾರಿಗಳಾದ ಮಿ|| ಗ್ರೀನ್‌ಫೀಲ್ಡರನ್ನು ತಾ ೭-೩-೪೫ [illegible] ಹೀಗೆ ಮೂರು ದಿನ [illegible] ಅವರ ಕೂಡ ಮಾತುಕತೆ ನಡೆಸಿದರು. ಅಧಿಕ ತೆರಿಗೆಯ ಕಾನೂನಿನಲ್ಲಿ ತೋಟ ವ್ಯಾಪಾರದ ಉಲ್ಲೇಖ ಮಾತ್ರ ಉಂಟು, [illegible] ವ್ಯಾಪಾರದ ಉಲ್ಲೇಖವಿಲ್ಲ, ಆದ್ದರಿಂದ [illegible] ವ್ಯಾಪಾರ ಅಧಿಕ [illegible] ಪಾತ್ರವಲ್ಲವೆಂಬ ಸಂಗತಿಯನ್ನು ಕುರಿತು ಈ ಹಿಂದೆ ಕಳಿಸಿದ ಹೇಳಿಕೆಗಳನ್ನು [illegible] ಮಿ|| ಗ್ರೀನ್‌ಫೀಲ್ಡರು ಹೇಳಿ, [illegible] ಅಧಿಕ [illegible] ವ್ಯಾಪಾರ [illegible] ಮಾತ್ರ [illegible] ಎತ್ತುವಳಿ ಮಾಡಬೇಕೆಂದು [illegible] ಶ್ರೀ [illegible] ಶಿಷ್ಟರು [illegible] ಬಗ್ಗೆ [illegible] ಸ್ಪಷ್ಟತೆ ಮಾಡಿಕೊಳ್ಳಲು ಈಗ ಅನುಕೂಲವಾಗಿಲ್ಲವಂತೆ.

ಈ ವರ್ಷದ ತೆರಿಗೆಯು ಕಾನೂನಿನಲ್ಲಿ ಕಳೆದ ವರ್ಷದಂತೆ ಅಧಿಕ [illegible] ಉಲ್ಲೇಖವಿಲ್ಲ. ಆದರಿಂದ ಅಧಿಕ [illegible] ರದ್ದಾಯಿತೆಂದೂ [illegible] ನಂತರ ಅದನ್ನು ಎತ್ತುವಳಿ ಮಾಡಲಿಕ್ಕಾಗುವದಿಲ್ಲವೆಂದೂ [illegible] ಎಸೆಂಬ್ಲಿಯ [illegible] ಅಭಿಪ್ರಾಯವಿದೆ. ಕಳೆದ ವರುಷದ [illegible] ಕಾನೂನಿನಲ್ಲಿ ಅಧಿಕ [illegible] ಉಲ್ಲೇಖ ಮಾಡಿ ಅದನ್ನು [illegible] ಕಾನೂನಿನಲ್ಲಿ ಸೇರಿಸಿದ್ದರಿಂದ ಈ ವರುಷ ಪುನಃ ಅದನ್ನು [illegible] ಕಾನೂನಿನಲ್ಲಿ [illegible] ಅಗತ್ಯವಿಲ್ಲೆಂದು ಸರಕಾರಿ [illegible] ಮತವಿರುವಂತೆ [illegible] ಕಾನೂನಿನ ಆಯುಷ್ಯ ಒಂದೇ ವರುಷವಿರುವದರಿಂದ ಅದರೊಳಗಿನ ನಿಬಂಧನೆಗಳು ವರುಷದ ಅಂತ್ಯವಾದೊಡನೆ [illegible] ಅಂತ್ಯವಾಗುತ್ತವೆಂದು [illegible] ಶ್ರೀ [illegible] ನಿಯೋಗಿಯವರು [illegible] ಕಾಂಗ್ರೆಸ ಪಕ್ಷದ [illegible] ಶ್ರೀ [illegible] ದೇಸಾಯಿಯವರ [illegible] ಉಂಟು. ತಾ ೧-೪ [illegible] ನಂತರ ಸರಕಾರವು ಅಧಿಕ ತೆರಿಗೆಯನ್ನು ಎತ್ತುವಳಿ ಮಾಡಿದರೆ, ಸರಕಾರದ ವಿರುದ್ಧ ದಾವೆ ಮಾಡಬಹುದಾಗಿ ಅವರೆಲ್ಲರ [illegible] ಕಲಕತ್ತೆಯ ಹೈಕೋರ್ಟಿನಲ್ಲಿ [illegible] ಪ್ರತಿಬಂಧಕ [illegible] ಆಲೋಚನೆ ಮಾಡಿದ್ದಾರಂತೆ. ಮುಂಬಯಿ, ಮದ್ರಾಸ ಪ್ರಾಂತಗಳಲ್ಲೂ ಇದೇ ಪ್ರಕಾರ ಕ್ರಮ ಕೈಕೊಳ್ಳುವದು ಯುಕ್ತವೆಂದು ಶ್ರೀ ಶಾಸ್ತ್ರಿಗಳು ಹೇಳುತ್ತಾರೆ.

೧೯೪೩-೪೪ರ ಬೆಳೆಯ ಅಡಿಕೆಗೆ ಮದ್ರಾಸದಲ್ಲಿ [illegible] ಎತ್ತುವಳಿಯಾಗಿತ್ತು. ಮುಂಬಯಿ ಪ್ರಾಂತದಲ್ಲಿ ಎತ್ತುವಳಿಯಾಗಿದ್ದಿಲ್ಲವೆಂದು ಶ್ರೀ ಗೋವಿಂದ ಭಟ್ಟರು ಮಿ|| ಗ್ರೀನ್‌ಫೀಲ್ಡರಿಗೆ ತಿಳಿಸಿದರಂತೆ. ಮುಂಬಯಿ ಪ್ರಾಂತದ [illegible]

ORDER.

No 31

In exercise of the powers conferred by sub rule (2) of rule 81 of the Defence of India Rules read with Bombay Government Notification in the Home Department (Political-War) No S D II/1370 dated the 15th September 1944 and of all other powers enabling him to do so, the District Magistrate, Kanara, is hereby pleased to order that every person shall on the 5th day of every month beginning with 1st April 1945 furnish to the Mamlatdar or Mahalkary concerned a full and correct statement, in the form specified in the Schedule appended hereto of the stocks of cotton-seed held by him in the Kanara District, on his own account, or on account of or in partnership with any other person on the last day of the month immediately preceding, if such stocks are in excess of one hundred bags (of 5 quarters each)

SCHEDULE.

Form

1. Full name and address of the person
2. Article
3. The exact location of the godown or godowns or any other place or places where the stocks are kept
4. (i) The quantity of stock held
    - (a) on his own account,
    - (b) on account of any other person,
    - (c) in partnership with any other person

   (ii) Full names and addresses of persons on account of whom stocks are held and the quantity of stock held on account of each such person

   (iii) Full names and addresses of persons in partnership with whom stocks are held and the quantity of stock held in partnership with each such person

If any person contravenes the provisions of this order, then without prejudice to any other punishment to which he may be liable, any Court trying the offence may order that any stocks of cotton seed together with the packages and coverings thereof in respect of which the Court is satisfied that the offence has been committed shall be forfeited to 'His Majesty'

Karwar,
27-3-1945

V. NANJAPPA.
District Magistrate, Kanara

ORDER.

No 31

In exercise of the powers conferred by sub-rule (2) of rule 81 of the Defence of India Rules read with Bombay Government Notification in the Home Department (Political-War) No S D II/1370, dated the 15th September 1944 and of all other powers enabling him to do so, the District Magistrate, Kanara, is hereby pleased to order that no person shall remove cotton-seed in excess of 20 seers by road, rail, river or sea from any place within the limits of the Kanara District to any place in India outside the limits of the said district except under and in accordance with the conditions of a permit granted by the District Magistrate, Kanara

If any person contravenes the provisions of this order, then without prejudice to any other punishment to which he may be liable, any Court trying the offence may order that any stocks of cotton-seed together with the packages and coverings thereof, in respect of which the Court is satisfied that the offence has been committed shall be forfeited to 'His Majesty'

Note.— This order supersedes the previous order No 4905, dated 29th July 1943

Karwar,
31-3-1945

V. Nanjappa,
District Magistrate, KANARA

[illegible] ಅವರು [illegible] ...ಂದಿನ ಸಂಚಿಕೆಗಳನ್ನು ಶೋಧಿಸಿದರಂತೆ [illegible] ...ಯಂತೆ ವಾಕ್ಯದಲ್ಲೂ [illegible] [illegible] ಕೊಡಲ್ಪಡುವದೆಂದೂ [illegible] ಗ್ರೀನಫೀಲ್ಡರು ಹೇಳಿದರು ವರ್ತಮಾನ ಪತ್ರದ ಪಟ್ಟಿಯಲ್ಲಿ ಅನಧಿಕೃತವಾಗಿ ವಸೂಲಾದ ಇಂಥ ಸುಂಕ ಸುಮಾರು [illegible] ಲಕ್ಷ ಉಂಟು

ಬಿಹಾರದ ಪ್ರತಿನಿಧಿಗಳಾದ ಶ್ರೀ [illegible] ಎಸೆಂಬ್ಲಿ ಸಭೆಯಲ್ಲಿ ಮಾತನಾಡುತ್ತ [illegible] [illegible] [illegible] ಪಟ್ಟಿಗಳಲ್ಲಿ [illegible], [illegible] ಆಹಾರಸಾಮಗ್ರಿಗಳಲ್ಲಿ, ಜನರು ಬಹಳ [illegible] ಎಂದು ಹೇಳಿದರು. ಶ್ರೀ [illegible] [illegible] [illegible] ಶ್ರೀ [illegible] [illegible]

ಹೊನ್ನಾವರ— (ತಾ. ೩೧ ೩ ೪೫) [illegible] [illegible] ಕೆಳಗೆ ಅಕ್ಕಿ [illegible] [illegible] ಬಹಳ ದಿನ [illegible] ಜನರ ಅನುಭವವುಂಟು [illegible] [illegible] [illegible] [illegible]

ಜಾಹೀರ ನೋಟೀಸು.

[illegible]

ಜನರಿಗೆ [illegible] [illegible] [illegible] [illegible]

ಸುಹೀಲ [illegible] ರಾಮರಾವ
[illegible], ಶಿರ್ಸಿ

ಜಮೀನ ಮಾರುವದದೆ

[illegible]

ರಾ|| ರಾಘವೇಂದ್ರರಾವ [illegible],
ಮು|| ಕಲಘಟಗಿ (ಧಾರವಾಡ)

[illegible]

[illegible] ಹೊಸ [illegible] [illegible] ಯು ಕಡೆ [illegible] ಕೊಡಬೇಕಾಗಿ ಸೂಚನೆಯಿದೆ

ಸರಕಾರಿ [illegible] ಮಾರುವ ಒಂದು ಅಂಗಡಿಯಲ್ಲಿ ನಿಯಮಿತ ಬೆಲೆಗಿಂತ ಹೆಚ್ಚಿಗೆ ಬೆಲೆ ತಕ್ಕೊಂಡು ಧೋತರ ಮಾರಿದನೆಂಬ ಪಂಚನಾಮೆಯಾಗಿ ಪ್ರಕರಣ ನಡೆದಿದೆ

(ತಾ ೩೧ ೩-೪೫) ಈ ತಾಲೂಕಿನ ಹಳ್ಳಿಗಳಲ್ಲಿ ಓರ್ವ "ಪಂಡಿತ"ನೆಂಬ ಹೆಸರು ಹೇಳಿ ಕೊಳ್ಳುವ ವ್ಯಕ್ತಿ [illegible] ಔಷಧಗಳನ್ನು ಕೊಟ್ಟು [illegible] ೨ ಜನ [illegible] ಮುಂದಾಗಿ ಬಂದು ಅವನನ್ನು ಬಹಳ [illegible] ಅವನನ್ನು ಹುಡುಕುತ್ತಿದ್ದಾರೆಂದೂ ಈ ಮೋಸಗಾರನಿಗೆ ಯಾರೂ ಮೋಸಹೋಗಬಾರದೆಂದೂ [illegible] ಪೊಲೀಸರು ತಿಳಿಸುತ್ತಾರೆ.

ಗೇರಸೊಪ್ಪಾ— (ತಾ ೧೬-೩-೪೫) ಕಳೆದ ತಾ ೯ನೇ ಸಂಜೆ [illegible] ಉಪ್ಪಿನಗದ್ದೆ ಎಂಬ [illegible] ದಲ್ಲಿರುವ ನಾಲ್ಕು ಮನೆಗಳಿಗೆ ಆಕಸ್ಮಿಕ ಬೆಂಕಿ ಬಿದ್ದು ಅವು ಪೂರ್ತಿ ಸುಟ್ಟು ಹೋಗಿವೆ ಎಷ್ಟೇ ಪ್ರಯತ್ನ ಮಾಡಿದರೂ ಆ ಬೆಂಕಿ ನಂದಿಸಲಾಗಲಿಲ್ಲ, ಮನೆಗಳಲ್ಲಿದ್ದ ಅಕ್ಕಿ-ಭತ್ತ ಮುಂತಾದ ಸಂಸಾರ-ಸಾಹಿತ್ಯವನ್ನು ಉಳಿಸಲಾಗಲಿಲ್ಲ ಸರಕಾರದವರು ಈ ಸಂತ್ರಸ್ತರಿಗೆ ಸಹಾಯ ಮಾಡಬೇಕಾಗಿ ಅರಿಕೆಯುಂಟು

ORDER.

No. 31

In exercise of the powers conferred by sub-rule (2) of rule 81 of the Defence of India Rules read with Bombay Government Notification in the Home Department (Political-War), No S D II/1370 dated the 15th September 1944 and of all other powers enabling him to do so, the District Magistrate, Kanara is hereby pleased to order that no person holding whether on his own account or on account of or in partnership with, any other person any stocks of cotton seed exceeding 50 Bengal maunds in quantity, at any godown or other place of storage in any of the talukas or pethas in the Kanara District shall remove from the said godown or place or dispose of any of the said stocks without the written permission of the Mamlatdar or Mahalkary concerned

If any person contravenes the provisions of this order, then without prejudice to any other punishment to which he may be liable, any Court trying the offence may order that any stocks of cotton-seed together with the packages and coverings thereof, in respect of which the Court is satisfied that the offence has been committed shall be forfeited to His Majesty'

Karwar
31—3—1945

V. NANJAPPA,
District Magistrate, KANARA

NOTICE.

Government of Bombay, Finance Department (Supply),
Bombay, 31st March, 1945

Stock returns of yarn for the month ending 31st March 1945

The above mentioned return is due by the 5th of April 1945 and is to be submitted in the prescribed form, to the Provincial Textile Controller, Opp Kalachowki Post Office Parel Road, Bombay IF NO BUSINESS HAS BEEN DONE BLANK RETURNS SHOULD BE SUBMITTED. License holders are requested to see that the stock returns are submitted in time

J K THAKORE,
Provincial Textile Controller, Bombay

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ [illegible] [illegible]
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ !
[illegible]-[illegible]ದಿಗಳಲ್ಲಿ, ಮನೆ-ಮಠಗಳಲ್ಲಿ, ಫರಕುಗಳಲ್ಲಿ ಹಣ ಉಳಿಸಿರಿ !
[illegible] ಯುದ್ಧಾನಂತರ ಉಪ್ಪಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[[illegible]]

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೨ ೪ ೦
ಟಪಾ ಖರ್ಚ್ಚಿನಿಂದ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦ ೦
ಬಿಡಿ ಸಂಚಿಕೆಗೆ ೦ ೦ ೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B 1270. Monday, 16th April, 1945

ಕಾನಡಾವೃತ್ತ

ವರ್ಷ ೨೬.] THE KANARA NEWS. [ಸಂಚಿಕೆ ೪೧

ಕುಮಟಾ.- ಸೋಮವಾರ, ತಾ ೧೬ ಮಾಹೆ ಏಪ್ರಿಲ ೧೯೪೫ನೇ ಇಸವಿ.

ಜಾಹೀರಾತುಗಳ ದರ
ಪ್ರತಿ ೧೦ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಸ್ಥಳೀಯರಿಗೆ ೧೦ ಎಮ್ ಉದ್ದ
೧ ಸಾರಿಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು.

ರೂಝುವೆಲ್ಟರ ನಿಧನ.

(ನಿರೀಕ್ಷಕನು ಬರೆದುದು.)

ಹಿಟ್ಲರನು ಮರಣಶಯ್ಯೆಯಲ್ಲಿದ್ದಾನೆಂದು ಕಳೆದ ವಾರದ ಪ್ರಾರಂಭಕ್ಕೆ ಸುದ್ದಿಗಳು ಬರುತ್ತಿದ್ದವು ಅವನ ತಲೆಯು ಸುಟ್ಟುಹೋಗಿದ್ದ ಕಾಲಕ್ಕೆ ಅವನ ಗ್ರಹಗತಿ ಅನಿಷ್ಟನಿರುತ್ತವಾಗಿ ಜ್ಯೋತಿಷಿಗಳು ಹೇಳಿರುವರೆಂದು ಪ್ರಕಟವಾದ ಸಂಗತಿಯನ್ನು ನಾನು ಕಳೆದ ವಾರ ತಿಳಿಸಿದ್ದೇನೆ ಹಿಟ್ಲರನ ಮೃತ್ಯುಸ್ಥಾನದಲ್ಲಿ ಉಚ್ಚನಾಗಿದ್ದದ್ದು ಶನಿಯು ಕಂಡನೆಂದೂ ಅದು ಅವಗೆ ಅತ್ಯಂತ ಅನಿಷ್ಟ ಸೂಚಕವಿರುತ್ತದೆಂದೂ ಓರ್ವ ಕನ್ನಡಿಗ ದೈವಜ್ಞರು (ಸಂಯುಕ್ತ ಕರ್ನಾಟಕ)ದಲ್ಲಿ ಪ್ರಕಟಿಸಿದ ಸುದ್ದಿ ನನ್ನ ನೆನಪಿನಲ್ಲಿತ್ತು. ಆದರಿಂದ ಹಿಟ್ಲರನು ತನ್ನ ದಿನಗಳನ್ನು ಎಣಿಸುತ್ತಿದ್ದಾನೆಂದು ಬಂದ ಸುದ್ದಿಯನ್ನು ನಾನು ನಂಬಿ, ಅವನ ನಿಧನದ ವಾರ್ತೆ ಎಂದು ಬರುವದೆಂದು ಉತ್ಕಂಠೆಯಿಂದ ನಿರೀಕ್ಷಿಸುತ್ತಿದ್ದಾಗ, ಕಳೆದ ಗುರುವಾರ ಸಂಜೆ ೪॥ ಘಂಟೆಗೆ (ಅಂದರೆ ನಮ್ಮಲ್ಲಿ ರಾತ್ರಿ ೩-೩॥ ಘಂಟೆಯ ಸುಮಾರಿಗೆ) ಅಮೇರಿಕೆಯ ಅಧ್ಯಕ್ಷ ಫ್ರೆಂಕ್ಲಿನ ಡಿ ರೂಝುವೆಲ್ಟರು ಒಮ್ಮೆಲೇ ರಕ್ತೋದ್ರೇಕವಾಗಿ ಮರಣಪಟ್ಟರೆಂಬ ಸುದ್ದಿ ಕೇಳಿ ನನಗೆ ನಂಬಲು ಬಾರದಂತಾಯಿತು ಅವರಿಗೆ ಕಾಯಿಲೆಯಾದ ಸುದ್ದಿಯಿದ್ದಿಲ್ಲ, ಅವರ ಆರೋಗ್ಯ ಕೆಟ್ಟ ಸುದ್ದಿಯೂ ಇದ್ದಿಲ್ಲ ಇಂತಹ ಪರಿಸ್ಥಿತಿಯಲ್ಲಿ ಅವರು ತೀರಿಕೊಂಡರೆಂಬ ವಾರ್ತೆ ಒಮ್ಮೆಲೇ ಕೇಳಿದರೆ ಯಾರಿಗೆ ತಾನೇ ಸಿಡಿಲು ಬಡಿಯಲಾರದು? ರೂಝುವೆಲ್ಟರೆಂದರೆ ಸಾಮಾನ್ಯರಲ್ಲ. ಅಮೇರಿಕೆಯಲ್ಲಿ ನಾಲ್ಕನೇ ಬಾರಿ ಅಧ್ಯಕ್ಷರಾಗಿ ಆರಿಸಿ ಬಂದವರು ಅವರೇ ಮೊದಲಿಗರು ಕೊನೆಯವರೂ ಅವರೇ ಉಳಿಯಬಹುದು ಈ ವಿಶ್ವಸಂಗ್ರಾಮದ ಪೂರ್ವಾರ್ಧದಲ್ಲಿ ಘೋರ ಸಂಕಟದೊಳಗೆ ಬಿದ್ದ ಬ್ರಿಟನವನ್ನು ರಕ್ಷಿಸಿದ ಶ್ರೇಯಸ್ಸನ್ನು ನಾನು ಸಂಪೂರ್ಣವಾಗಿ ರೂಝುವೆಲ್ಟರಿಗೇ ಕೊಡುತ್ತೇನೆ ಅವರ ಪ್ರೋತ್ಸಾಹ, ಸಹಾಯ ಮತ್ತು ಧೈರ್ಯ ಇರುತ್ತಿದ್ದಿಲ್ಲವಾದರೆ ೧೯೪೦ರಲ್ಲೇ ಬ್ರಿಟಿಶರು ಹತಾಶರಾಗಿ ಹಿಟ್ಲರನಿಗೆ ಶರಣಾಗತರಾಗುವ ಪ್ರಸಂಗ ಬರುತ್ತಿತ್ತು. ಈ ಯುದ್ಧದಲ್ಲಿ ಅಲಿಪ್ತವಾಗುಳಿಯಲು ಬಯಸುತ್ತಿದ್ದ ಅಮೇರಿಕೆಯ ಜನತೆಗೆ ಮಿತ್ರರ ಪರವಾಗಿ ಯುದ್ಧಕ್ಕೇರಲು ಚಾತುರ್ಯದಿಂದ ಒಲಿಸಿದ ಹಾಗೂ ಇಡೀ ರಾಷ್ಟ್ರದಲ್ಲಿ ಯುದ್ಧೋತ್ಸಾಹ ತುಂಬಿದವರೂ ರೂಝುವೆಲ್ಟರೇ ಸರಿ ಮಿತ್ರಪಕ್ಷದ ಯುದ್ಧ ಕಾರಣಗಳಲ್ಲಿ ಅವರೇ ಈಗ ಅಧ್ವರ್ಯುಗಳಾಗಿದ್ದರು ಮೊನ್ನೆ ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ ಭುಲಾಭಾಯಿ ದೇಸಾಯಿಯವರು ನುಡಿದಂತೆ, ರುಶ್ಯ ಪ್ರಭು ಸ್ಟೆಲಿನ ಮತ್ತು ಬ್ರಿಟಿಶ ಮಹಾಮಂತ್ರಿ ಚರ್ಚಿಲ್ಲ ಇವರ ನಡುವೆ ರೂಝುವೆಲ್ಟರು ಒಂದು ಕೊಂಡಿಯಂತಿದ್ದರು ಯುದ್ಧೋತ್ತರ ಶಾಂತಿ ಸ್ಥಾಪನೆಯ ಕಾಲದಲ್ಲಿ ರೂಝುವೆಲ್ಟರಂತಹ ಜಾಗತಿಕ ಪ್ರತಿಭಾಶಾಲಿಯ ಅವಶ್ಯಕತೆ ಇರುತ್ತಿತ್ತು. ಅವರು ಒಮ್ಮೆಲೇ ನಮ್ಮನ್ನು ಅಗಲಿ ಹೋದದ್ದು ತೀರ ಶೋಚನೀಯ ರೂಝುವೆಲ್ಟರ ನಿಧನದಿಂದ ಅಮೇರಿಕೆಯ ಯುದ್ಧೋತ್ಸಾಹದಲ್ಲಾಗಲಿ ಧೃಢನಿರ್ಧಾರದಲ್ಲಾಗಲಿ ಎಳ್ಳಷ್ಟೂ ವ್ಯತ್ಯಾಸವಾಗದೆಂದು ಅಮೇರಿಕೆಯ ಉಪಾಧ್ಯಕ್ಷರಾದ ಹ್ಯಾರಿ ಟ್ರುಮನ್ನರವರೂ — ಅಮೇರಿಕೆಯ ರಾಜ್ಯಘಟನೆಯಂತೆ ಅಧ್ಯಕ್ಷನು ಸಾಯಲು ನೆಯೇ ಮೃತಪಟ್ಟವನ ಉಳಿದ ಅಧ್ಯಕ್ಷತೆಯ ಅವಧಿಯಲ್ಲಿ ಉಪಾಧ್ಯಕ್ಷರು ತಾನೇ ಅಧ್ಯಕ್ಷರಾಗುತ್ತಾರೆ — ಅಮೇರಿಕೆಯ ಮಂತ್ರಿಮಂಡಳದವರೂ ಘೋಷಿಸಿರುವರಾದರೂ, ರೂಝುವೆಲ್ಟರ ಮರಣದಿಂದ ಮಿತ್ರಪಕ್ಷದ ಶಕ್ತಿ ಸಾಹಸ ಉತ್ಸಾಹಗಳು ಬಹಳಷ್ಟು ಕುಗ್ಗದೆ ಉಳಿಯುವದೆಂದು ನನ್ನ ಅಭಿಪ್ರಾಯವಿರುತ್ತದೆ

ಅಧ್ಯಕ್ಷ ರೂಝುವೆಲ್ಟರ ಮರಣದ ವಾರ್ತೆಯೊಂದನ್ನು ಬಿಟ್ಟರೆ, ಕಳೆದ ವಾರ ಸಕಲ ರಣಭೂಮಿಗಳಲ್ಲಿ ಮಿತ್ರರ ವಿಜಯದ ಮೇಲೆ ವಿಜಯ ಸಿಕ್ಕಿರುವ ಆನಂದದ ವಾರ್ತೆಗಳೇ ಬಂದಿರುತ್ತವೆ. ಪಶ್ಚಿಮ ರಣರಂಗದಲ್ಲಿ ಮಿತ್ರರ ಎಲ್ಲ ದಂಡುಗಳೂ ರಭಸದಿಂದ ಬರ್ಲಿನದ ಕಡೆ ಸಾಗಿವೆ ಅಮೇರಿಕೆಯ ಜ॥ ಹೊಡ್ಜರ ದಂಡು ಬರ್ಲಿನ ನಗರದ ಪಶ್ಚಿಮದಲ್ಲಿರುವ ಎಲ್ಬ ನದಿಯನ್ನು — ಬರ್ಲಿನ ಮಾರ್ಗದಲ್ಲಿ ಇದೇ ಕೊನೆಯ ನದಿ — ದಾಟಿದ ವಾರ್ತೆಯುಂಟು ಜ॥ ಪ್ಯಾಟನ್ನರು ಲಿಪಝಿಗ ನಗರವನ್ನು ಸುತ್ತಿ ಮುತ್ತಿಕೊಳ್ಳುವಂತೆ ಯಾದ ಗತಿಯನ್ನು ಸಾಧಿಸಿದ್ದಾರೆ ಜ॥ ಪ್ಯಾಟನ್ನರು ಆಕ್ರಮಿಸಿರುವ ಭಾಗದಲ್ಲಿ ಮ ಂಲಹೌಸ ನಗರದ ಸಮೀಪ ಒಂದು ಗಣಿಯಲ್ಲಿ ಜರ್ಮನರು ಅಡಗಿಸಿಟ್ಟ ಹೇರಳ ಬಂಗಾರದ ನಿಧಿ ದೊರಕಿದೆಯಂತೆ! ೧೦೦ ಟನ್ ಬಂಗಾರದ ಗಟ್ಟಿಗಳು ಸಿಕ್ಕಿವೆಯಂತೆ ಈ ನಿಧಿಯ ವಿವರ ಕೇಳಿ ಕುಬೇರನೂ ಬಾಯಿಬಿಡಬಹುದು ಇದನ್ನು ಹಂಚಿಕೊಳ್ಳುವದರಲ್ಲಿ ಮಿತ್ರರೊಳಗೆ ತಂಟೆಯಾಗಿ ಕಲಹಗಳುದ್ಭವಿಸದಿದ್ದರೆ ಸಾಕು! ಅತ್ತ ಉತ್ತರದಲ್ಲಿ ಜ॥ ಮೊಂಟಗೊಮೆರಿಯವರು ಬಾಲ್ಟಿಕ ಸಮುದ್ರದ ಕರಾವಳಿಯ ಗುಂಟ ವಿಜಯ-ಯಾತ್ರೆಯನ್ನು ನಡಿಸಿದ್ದಾರೆ ದಕ್ಷಿಣದಲ್ಲಿ ಜ॥ ಟಾಲ್ಬುಕಿನರವರು ವಿಯೆನ್ನಾ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಈ ಭಾಗದಲ್ಲಿ ರುಶ್ಯರು ಕೆಲವು ಕಡೆ ವ್ಹಿಯೆನ್ನಾ ನಗರ ರೇಷೆಗಿಂತ ೪೦-೫೦ ಮೈಲು ಮುಂದೆ ನುಗ್ಗಿರುತ್ತಾರೆಂತಲೂ ಸುದ್ದಿಯುಂಟು ಅತ್ತ ರುಶ್ಯ ರಣರಂಗದಲ್ಲಿ ಪೂರ್ವ ಪ್ರಶಿಯಾ ದೇಶದ ರಾಜಧಾನಿಯಾದ ಕೋನಿಗ್ಸಬರ್ಗ ನಗರವು ೩ ತಿಂಗಳ ಹೋರಾಟದ ನಂತರ ಜರ್ಮನರ ಕೈ ಬಿಟ್ಟಿದೆ ಹೀಗೆ ಮೂರೂ ಬದಿಗಳಿಂದ ರುಶ್ಯರೂ ಮಿತ್ರರೂ ಚಕ್ರಾಕಾರವಾಗಿ ಬರ್ಲಿನ ಮಹಾಪಟ್ಟಣವನ್ನು ಮುತ್ತಿಕೊಂಡು ನುಗ್ಗಿದ್ದಾರೆ ಪಶ್ಚಿಮದಲ್ಲಿ ಮಿತ್ರರು ಎಲ್ಬ ನದಿಯನ್ನು ದಾಟುತ್ತಲೇ ಅತ್ತ ಪೂರ್ವದಿಂದ ಓಡರ ನದಿಯ ದಂಡೆಗುಂಟ ನಿಂತುಕೊಂಡಿರುವ ಜ॥ ಝುಕೋವರ ಸೇನೆಯೂ ಬರ್ಲಿನ ಮೇಲಿನ ಆಕ್ರಮಣ ಪ್ರಾರಂಭ ಮಾಡಬೇಕೆಂದು ರುಶ್ಯ ಮಿತ್ರರೊಳಗೆ ಸಂಕೇತವಾಗಿದೆಯೆಂದು ಹೇಳುತ್ತಾರೆ ಇತ್ತ ಮಿತ್ರರೂ ಬರ್ಲಿನದಲ್ಲಿ ಕೂಡಲೇ ಸೇರುತ್ತಾರೆ ನಾಳೆ ನಾಡದು ಇಲ್ಲವೆ ಈ ವಾರದ ಕೊನೆಯೊಳಗೆ ಮಿತ್ರರೂ ರುಶ್ಯರೂ ಪರಸ್ಪರರನ್ನು ಕೂಡಿಕೊಳ್ಳಬಹುದೆಂದು ಎಣಿಸಲಾಗಿದೆ ರುಶ್ಯ ಮಿತ್ರರ ಯೋಗವಾಗುತ್ತಲೇ ಯುದ್ಧ ಮುಕ್ತಾಯದ ಘೋಷಣೆಯನ್ನು ಹೊರಡಿಸುವರಂತೆ! ಈ ಘೋಷಣೆಯ ಮೊದಲೇ ಯುದ್ಧ ನಿಜವಾಗಿ ನಿಂತೀತೆಂದು ಮಾತ್ರ ಯಾರೂ ತಿಳಿಯಬಾರದು ಜರ್ಮನರು ಸರ್ವಥಾ ಶರಣು ಬರಲಿಕ್ಕಿಲ್ಲೆಂದು ನಾನು ಅನೇಕ ಸಾರೆ ತಿಳಿಸಿದ್ದೇನೆ ನಷ್ಟವೆಷ್ಟೇ ಆಗಲಿ, ಕಷ್ಟಗಳೆಷ್ಟೇ ಬರಲಿ ಕೊನೆಯ ವರೆಗೆ ಹೋರಾಡಬೇಕೆಂಬ ಧೃಢನಿರ್ಧಾರವನ್ನು ನಾಝಿ ಪ್ರಮುಖರು ಮಾಡಿದ್ದಾರೆ ಯಾವ ಪಟ್ಟಣವನ್ನೂ ಅರಕ್ಷಿತ ಪಟ್ಟಣವೆಂದು ಸಾರಬಾರದಾಗಿ ಜರ್ಮನ ಮಿಲ್ಟರಿ ಆಜ್ಞೆಯಾಗಿದೆ' ಈ ನಿರ್ಧಾರ ಕಂಡರೆ ಜರ್ಮನರು ಬರ್ಲಿನ ವಲಯದಲ್ಲಿ ಮಿತ್ರರನ್ನೂ ರುಶ್ಯರನ್ನೂ ಒಂದೇ ಸಲಕ್ಕೆ ಅತ್ಯದ್ಭುತ ಸಾಹಸದಿಂದ ಪ್ರತಿಭಟಿಸುವರೆಂದು ಹೇಳಬೇಕು ಆದರೂ ಬರ್ಲಿನವನ್ನು ಬಹಳ ದಿನ ರಕ್ಷಿಸಿಕೊಳ್ಳಲು ಅವರಿಂದ ಆಗಲಿಕ್ಕಿಲ್ಲ ಬರ್ಲಿನ ಬಿದ್ದ ಮೇಲೆ ಜರ್ಮನರು ಮುಂದೆ ಎಲ್ಲಿ ಹೋರಾಡುವರೆಂಬ ಪ್ರಶ್ನೆ ಕೇಳಬರುತ್ತದೆ ಡೆನ್ಮಾರ್ಕ ದೇಶವೂ ನಾರ್ವೇ ದೇಶವೂ ಈಗ ಪೂರ್ಣವಾಗಿ ಜರ್ಮನರ ಅಂಕೆಯಲ್ಲಿವೆ ಹೇರಳ ಯುದ್ಧಸಾಮಗ್ರಿಯನ್ನು ಅವರು ಡೆನ್ಮಾರ್ಕಕ್ಕೆ ಕಳಿಸಿದ್ದಾರೆಂದು ಹೇಳುತ್ತಾರೆ ನಾರ್ವೇಯಲ್ಲೂ ಜರ್ಮನರ ದಂಡುಗಳುಂಟು, ಒಳ್ಳೇ ಒಳ್ಳೇ ವಿಮಾನ ಗೃಹಗಳುಂಟು ನಾರ್ವೇ ದೇಶ ಗುಡ್ಡಗಾಡು ದೇಶ, ಸಂರಕ್ಷಣ ಇಲ್ಲವೆ ಕಾಳಗ ಯುದ್ಧಕ್ಕೆ ಬಹಳ ಅನುಕೂಲವಾದ ನಾಡು ಬರ್ಲಿನದಿಂದ ಹಿಂದೆ ಸರಿದ ಜರ್ಮನರು ಜರ್ಮನಿಯ ಉತ್ತರ ಕರಾವಳಿಯ ಮಾರ್ಗವಾಗಿ ಇಲ್ಲವೆ ಸಮುದ್ರಮಾರ್ಗವಾಗಿ ಡೆನ್ಮಾರ್ಕಕ್ಕೆ ಸರಿದು ಅಲ್ಲಿ, ಒಂದೊಮ್ಮೆ ಅಲ್ಲಿಂದ ಕಾಲು ಕೀಳುವ ಪ್ರಸಂಗ ಬಂದರೆ ನಾರ್ವೇ ದೇಶದಲ್ಲಿ ಕೊನೆಯ ಸಂಗ್ರಾಮ ಹೋರಾಡುವರೆಂದು ಧಾರಾಳವಾಗಿ ಹೇಳಬಹುದು ಈ ಸಂಗ್ರಾಮ ಅತ್ಯಂತ ಭಯಂಕರವಾದೀತು ಜರ್ಮನರು ನಾರ್ವೇಯಲ್ಲಿ ಹೊಸದೊಂದು ಗುಪ್ತ ಅಸ್ತ್ರದ ಪ್ರಯೋಗ ನಡಿಸಿದ್ದಾರೆ ಈ ಅಸ್ತ್ರವು ಒಂದು ಉರಿಯುವ ಗೋಲದಂತೆ ಕಾಣುತ್ತಿದೆಯೆಂತಲೂ, ವಿದ್ಯುದ್ವೇಗದಿಂದ ಚಲಿಸುತ್ತದೆಂತಲೂ, ಆ ಗೋಲ ಆಕಾಶದಲ್ಲಿದ್ದಾಗ ಕೆಳಗೆ ಭೂಮಿಯ ಮೇಲೆ ಹಗಲಿನಷ್ಟು ಬೆಳಕು ಬೀಳುತ್ತದೆಂತಲೂ ನೋಡಿದವರು ಹೇಳುತ್ತಾರೆ ಯುದ್ಧದ ಕೊನೆಯ ೮ ದಿನಗಳ ಅತ್ಯುಗ್ರ, ಅತಿ-ಭೀಷಣ, ಪ್ರಳಯಕಾರಿ ಹೋರಾಟಕ್ಕಾಗಿ ಕಾದಿಟ್ಟ ಅಸ್ತ್ರಗಳಾಗಿರಬಹುದೆಂದು ನಿರೀಕ್ಷಕರು ತರ್ಕಿಸುತ್ತಾರೆ ಆ ಕೊನೆಯ ಯುದ್ಧದ ಕಲ್ಪನೆಯನ್ನೇ ನಾನು ಮಾಡಲಾರೆ! ಆ ಕಲ್ಪನೆ ಮಾಡಲಿಕ್ಕೇ ಅಂಜಿಕೆಯಾಗುತ್ತದೆ

ಯುರೋಪ ಯುದ್ಧ ಮುಕ್ತಾಯವಾಗುತ್ತಲೇ ಶಾಂತ ಸಾಗರದ ಯುದ್ಧಕ್ಕೆ ಕಳೆ ತುಂಬುವದು ರುಶ್ಯರು ೨ ವಾರಗಳ ಹಿಂದೆಯೇ ರುಶ್ಯ-ಜಪಾನ ಒಪ್ಪಂದದ ಅವಧಿ ಬೆಳೆಸಲಾಗುವದಿಲ್ಲೆಂದು ಜಪಾನ ಸರಕಾರಕ್ಕೆ ತಿಳಿಸಿದ್ದಾರೆ ಅದೇ ಕಾಲಕ್ಕೆ ಜಪಾನದಲ್ಲಿ ಕೊಯಿಸೋ ಮಂತ್ರಿಮಂಡಳ ಹೋಗಿ ಹೊಸ ಸುಝುಕಿ ಮಂತ್ರಿಮಂಡಳ ಬಂದಿದೆ ಈ ಹೊಸ ಮಂತ್ರಿಮಂಡಳ ಶಾಂತಿಯಾಚನೆ ಮಾಡಬಹುದೆಂದು ಕೆಲವರು ಊಹಿಸುತ್ತಾರೆ ರುಶ್ಯರು ಜಪಾನದ ವಿರುದ್ಧ ಯುದ್ಧ ಸಾರಬೇಕೆಂದು ಮಿತ್ರರು ಒತ್ತಾಯಪಡಿಸುತ್ತಿದ್ದುದು ಜನಜನಿತ ಮಾತು ರುಶ್ಯರು ಈಗ ಜಪಾನಿಯರ ಮಿತ್ರತ್ವ ಬಿಟ್ಟಿದ್ದರಿಂದ ಇವರು ಬೇಗನೇ ಜಪಾನ ಯುದ್ಧದಲ್ಲಿ ಬೀಳುವರೆಂದು ಮಿತ್ರರು ಸುಖಸ್ವಪ್ನ ಕಾಣುತ್ತಿದ್ದರೆ ಅವರ ರುಶ್ಯರು ಬಾಂಬು ಉದುರುವ ಮೊದಲೇ ಸ್ವಲ್ಪ-ಜಪಾನಿಯರೇ ಪ್ರದರ್ಶಿಸುವ ಲಕ್ಷಣಗಳುಂಟು ಜಪಾನ ಯುದ್ಧದ ಸಿದ್ಧತೆಯ ಆಲೋಚನೆಗಾಗಿಯೇ ವೆವೆಲ್ ದೊರೆಗಳು ಲಂಡನ್ನಿಗೆ ಹೋಗಿರುತ್ತಾರೆಂದು ಬಲ್ಲವರು ಹೇಳುತ್ತಾರೆ ಆ ಆಲೋಚನೆಯಲ್ಲಿ ಭಾರತವನ್ನು ಸಂತೈಸುವ ಪ್ರಶ್ನೆ ಬರುವದು ಸಹಜವು ಭಾರತೀಯ ಬೆಂಬಲ ಪಡೆಯುವದಕ್ಕಾಗಿ ಬೇಗನೇ ಕೊಂಗ್ರೆಸ ಪುಢಾರಿ ಬಿಡುಗಡೆ ಮಾಡಬಹುದೆಂದು ಸುದ್ದಿ ಬಂದಿದೆ.

ಶಿರಸಿ— (ತಾ. ೧೪-೪-೪೫) ಸೀಧಾ ಅಂಗಡಿಗಳಲ್ಲಿ ಬೋಳ ಅಕ್ಕಿ ಸಿಗುವದಿಲ್ಲವಾಗಿ ಜನರು ದೂರಿದ್ದರಿಂದ, ಇನ್ನು ಮುಂದೆ ಬೋಳ ಅಕ್ಕಿ ಕೊಡುವಂತೆ ಜಿಲ್ಲಾಧಿಕಾರು ಸೀಧಾ ಅಧಿಕಾರಿಗಳಿಗೂ ಕಚೇರಿಯವರಿಗೂ ಹುಕುಮು ಮಾಡಿದ್ದಾರೆ

ಹಿಂದಿನ ಮಾಮಲೇದಾರರಾದ ಹಳಕಾರರು ಅವಲಕ್ಕಿ, ಮುಂಡಕ್ಕಿ ಮಾಡುವ ಜನರಿಗೆ ಅವರವರ ಬೇಡಿಕೆಯಷ್ಟು ಸುಲಕ್ಷಿಸಿ ಪ್ರತಿ ವಾರ ಭತ್ತ ಕೊಡುವ ಏರ್ಪಾಟು ಮಾಡಿದ್ದರು. ಹೊಸ ಮಾಮಲೇದಾರರು ಅವರ ಭತ್ತದ ಪರವಾನಗಿಯನ್ನು ಇಳಿಸುವ ಆಲೋಚನೆ ನಡಿಸಿದ್ದಾರೆಂತೆ ಹೀಗೆ ಮಾಡಿದಲ್ಲಿ ಅವಲಕ್ಕಿ ಮುಂಡಕ್ಕಿ ಮಾಡಿ ಜೀವನ ಮಾಡುವವರಿಗೆ ಕಷ್ಟವಾದೀತು. ಜಿಲ್ಲಾಧಿಕಾರು ಅವರ ಮೇಲೆ ಕಷ್ಟ ಬರಗೊಡಬಾರದಾಗಿ ಅರಿಕೆಯಿದೆ

ESTD 1934

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR S. K

Branches.-

ANKOLA DHARWAR HUBLI MANGALORE,
BELGAUM GOKARN, KARWAR, NAGAR,
COONDAPOOR HAVERI KUMTA SHIMOGA,
SOMWARPET and VIRAJPET

Season Deposits are now accepted at attractive rates
For particulars please call at any of our Offices

Coondapoor 15-2-1945

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲಿರುಳು ಸೆಕೆ ಮುಂಜಾನೆಯಲ್ಲಿ ಸ್ವಲ್ಪ ತುಸು ತಂಪು ಬೀಳುತ್ತದೆ

ರೇಶನ್-ವಿಭಾಗದ ಪ್ರಾಂತ ಸಾಹೇಬರ ಕಚೇರಿ ಈಗ ಇಲ್ಲುಂಟು

ಸಮುದ್ರದಲ್ಲಿ ಬರ ಹೋಗುವ ಹಡಗಗಳನ್ನು ನೋಡ[illegible] ಅಪಾಯಕ್ಕೊಳಗಾದ ಹಡಗಗಳು ತಂತಡೆ ಹೂಡಲೇ [illegible] ಪ್ರತಿ ಬಂದರದಲ್ಲಿ ಸರಕಾರದವರು "ಲುಕ್ ಔಟ ಒಫೀಸರ್" ರೆಂಬ ಅಧಿಕಾರಿಗಳನ್ನು ನೇಮಿಸಿದ್ದಾರೆ. ಈ ಅಧಿಕಾರಿಗಳೂ ತಮ್ಮ ಹಿಲಂದಿಯವರೂ ಸಮುದ್ರದ ದಂಡೆಯ ಹತ್ತಿರವೇ ಉಳಿಯಬೇಕೆಂದು ನಿಯಮ. ಆದರೆ ಕುಮಟೆಯ 'ಲುಕ್ ಔಟ ಒಫೀಸರ್'ರು ಆ ನಿಯಮದಂತೆ ಬಂದರದಲ್ಲಿ ಇಲ್ಲವಂತೆ! ಇವರು ಎಲ್ಲಿ ದೇಶದಲ್ಲಿ ಉಳಿಯಬಹುದೆಂದು ಇವರಿಗೆ ವಿಶೇಷ ಸವಲತ್ತೇನಾದರೂ ಕೊಡಲಾಗಿದೆಯೋ ಎಂದು ಓದುಗರ ಪ್ರಶ್ನೆ

ಹೆಗಡೆಯ ಗ್ರಾಮ ಪಂಚಾಯತ ಕಚೇರಿಯಲ್ಲೀಗ ಗಡಿಬಿಡಿಯುಂಟಾಗಿದೆ. ಪಂಚಾಯತಿನ ಲೆಕ್ಕ ತಪಾಸಣೆ ಮಾಡಲಿಕ್ಕೆ ಕಳೆದ ತಿಂಗಳ ಕೊನೆಯ ವಾರದಲ್ಲಿ ಪಂಚಾಯತಿನ ಸಭೆ ಕೂಡುವದಿತ್ತು. ಸಭೆಯ ದಿನ ತನಗೆ ಜರೂರಿಯ ಕೆಲಸಕ್ಕೆ ಬೆಳಗಾವಿಗೆ ಹೋಗಬೇಕಾಗಿದೆ ಎಂದು ಹೇಳಿ ಕಾರ್ಯದರ್ಶಿಯು ಸಭೆಯನ್ನು ೩-೪ ದಿನಕ್ಕೆ ಮುಂದೂಡಿಸಿಕೊಂಡನಂತೆ, ಮತ್ತು ಬೆಳಗಾವಿಗೆ ಹೊರಟುಹೋದನಂತೆ. ಅಲ್ಲಿಂದ ಅವನು ತಿರುಗಿ ಬರಲಿಲ್ಲ! [illegible] ಹೋಗಿ ಯುದ್ಧ ಇಲಾಖೆಯ ನೌಕರಿ ಹಿಡಿದಿರುತ್ತಾನೆಂದು ಸುದ್ದಿ! ಪಂಚಾಯತಿನ ಸದಸ್ಯರು ಈಗ ಲೆಕ್ಕವನ್ನು ಪರಿಶೋಧಿಸಿ ನೋಡಲಾಗಿ ಎಷ್ಟಷ್ಟೋ ಲೋಪದೋಷಗಳೂ ವಂಚನೆಗಳೂ ಕಂಡುಬರುತ್ತಿವೆಯಂತೆ. ಈ ಗೊಂದಲ ಸುಧಾರಿಸಿಕೊಳ್ಳುವದು ಹೇಗೆಂದು ತಿಳಿಯದ ಸದಸ್ಯರು ಚಂಚಲ ಚಿತ್ತರಾಗಿದ್ದಾರೆ

ಕಳ್ಳ ಪೇಟೆಯಲ್ಲೀಗ ಸಕ್ಕರೆಯ ದರ ಬಹಳ ಕೆಳಗಿಳಿದಿರುವಂತೆ ಮಣ ಒಕ್ಕೆ ರೂ ೨೪ [illegible] ದರ ಸಿಗುತ್ತದಂತೆ ಆದರಿಂದ [illegible] ಯೋಗ್ಯ ದರದ ಅಂಗಡಿಗಳಲ್ಲಿ ಬಹಳಷ್ಟು ಕಳ್ಳತನ ನಡೆದಿದೆ. [illegible] ಯೋಗ್ಯ ದರದ ಅಂಗಡಿಯ [illegible] ದಾರರುಗಳನ್ನು [illegible] ಸಕ್ಕರೆಯನ್ನು ಅಂಗಡಿಯವರಿಗೆ ಬಿಟ್ಟುಕೊಡುವವರಿಗೆ ಈ ಅಂಗಡಿಯವರು ಜಾಸ್ತಿ ಸಾಮಾನು [illegible] ಕೊಡುತ್ತಾರಂತೆ! ಸಕ್ಕರೆ ಬಿಟ್ಟುಬಿಡದಿದ್ದವರು [illegible] ಅಂಗಡಿ ಬಾಗಿಲಲ್ಲಿ ನಿಂತರೂ ಸಾಮಾನು ಸಿಗುವದಿಲ್ಲವಂತೆ! ಕಳೆದ ತಿಂಗಳಲ್ಲಿ ಈ ಅಂಗಡಿಯಿಂದ ಸಾಮಾನು ಒಯ್ಯುವ ಎಷ್ಟೋ ಜನರಿಗೆ ಸಕ್ಕರೆಯೂ [illegible] ಎಣ್ಣೆಯೂ ದೊರೆತಿಲ್ಲವಂತೆ! ಸದರಿ ಅಂಗಡಿಯವರು ತಮ್ಮ ನೆಂಟರಿಷ್ಟರಿಗೆ ಮಾತ್ರ [illegible] ಅಕ್ಕಿ ಕೊಡುತ್ತಾರೆಂತಲೂ ಉಳಿದವರಿಗೆ [illegible] ಅಕ್ಕಿ ಕೊಡುತ್ತಾರೆಂತಲೂ ಇನ್ನೊಂದು ಲೋಕಾಪವಾದವುಂಟು. ಅಂಗಡಿಯ ಮಾಲಕರು ಈಗ ಮತ್ತೊಂದು ಹೊಸ ಸೇವೆ ಮಾಡಿದ್ದಾರೆ. ಸೀಧಾ-ಚೀಟಿ ಸಾಮಾನು ಒಯ್ಯುವದಾದರೆ ಯಾರ ಹೆಸರಲ್ಲಿ ಆ ಚೀಟಿಯು ಇದೆಯೋ ಅವರೇ ಸ್ವತಃ ಅಂಗಡಿಗೆ ಬಂದು ಅಂಗಡಿಯ ಮಾಲಕರ ದಫ್ತರದಲ್ಲಿ ಸಹಿ ಇಲ್ಲವೆ ಹೆಬ್ಬೆರಳಿನ ಗುರುತು ಕೊಡಬೇಕಂತೆ! ಪೂರ್ಣ ಸೀಧಾ ಕ್ರಮ ಅಮಲಿನಲ್ಲಿರುವ ಪ್ರದೇಶದಲ್ಲಿ ಸಹ ಇಂತಹ ನಿಯಮವಿಲ್ಲ! ಮಿಶ್ರಣ ಪ್ರದೇಶದಲ್ಲಿ [illegible] ಸೀಧಾ ಚೀಟಿಗಳು ಮುದುಕರು ಮತ್ತು ಹೆಂಗಸರ ಹೆಸರಲ್ಲಿವೆ. ಸಾಮಾನು ಪಡೆಯಬೇಕಾದರೆ ಅವರೇ ಸ್ವತಃ ಅಂಗಡಿಗೆ ಬರಬೇಕೇ? ಪರದೆಯ ಪದ್ಧತಿಯುಳ್ಳ ಮುಸಲ್ಮಾನ ಹೆಂಗಸರೂ ಅಂಗಡಿಗೆ ಬಂದೇ ಸಾಮಾನು ಪಡೆಯ ಬೇಕೇ? ಎಂದು ಕೇಳಿದರೆ ಅಂಗಡಿಯವರ ಉತ್ತರವಿಲ್ಲ! ಜನರಿಗೆ ಕಷ್ಟ ಕೊಟ್ಟಷ್ಟು ತಮ್ಮ ಪ್ರತಿಷ್ಠೆ ಬೆಳೆಯುತ್ತದೆಂದು ಅಂಗಡಿಯವರ ಅಭಿಪ್ರಾಯವೇ? ಅಂಗಡಿಯಲ್ಲಿ ಈಗಿರುವ ವಿಕ್ರ [illegible] ಬಹಳ ದೂರುತ್ತಿದ್ದುದು ಕೇಳಿ ಕೇಳಿ ಬೇಸತ್ತು [illegible] ಅವನನ್ನು ತೆಗೆದು ಹಾಕಿ [illegible] ಬೇಕು [illegible] ಗೆ ಸಹಾನುಭೂತಿ [illegible] ಲವರೂ ಸೊಸೈಟಿಯ ಕಾರ್ಯದರ್ಶಿಯು ಆ [illegible] ಯನ್ನು [illegible] ಆದ ವಿಕ್ರ-ಮನುಷ್ಯನನ್ನು ಇಟ್ಟುಕೊಂಡಿದ್ದಾನೆ. [illegible] ವ್ಯಾಪಾರ ನಡೆಸಲಿಕ್ಕೆ ಇವನು ಪೂರ್ಣ ಸಹಾಯಕನಾಗಿರುವದರಿಂದಲೇ ಕಾರ್ಯದರ್ಶಿಯು ಇವನನ್ನು ಇಟ್ಟುಕೊಂಡಿರುತ್ತಾನೆಂದು ಹೇಳುತ್ತಾರೆ

[illegible] ಯೋಗ್ಯ ದರದ ಅಂಗಡಿಯವರು ದಿನಾಲೂ ಅಂಗಡಿ ತೆರೆಯುವದಿಲ್ಲೆಂದೂ ವಾರದಲ್ಲಿ ತಮಗೆ ಪುರಸತ್ತಿದ್ದ ೩ ಯಾ ೪ ದಿನ ತೆರೆಯುತ್ತಾರೆಂತಲೂ, ಹೀಗೇಕೆ ಮಾಡುತ್ತೀರಿ ಎಂದು ವಿಕ್ರ ಮನುಷ್ಯನಿಗೆ ಕೇಳಿದರೆ ತನಗೇನೂ ಗೊತ್ತಿಲ್ಲೆಂದು ಹೇಳುತ್ತಾನೆಂದೂ ಅಂಗಡಿಯವರ ಈ ಸ್ವೇಚ್ಛೆಯ ವ್ಯವಹಾರದಿಂದ ಬಡವರಿಗೆ ಕಷ್ಟವಾಗುತ್ತದೆಂದೂ ಒಂದು ದೂರು ಬಂದಿದೆ. ಅಧಿಕಾರಿಗಳು ಚೌಕಶಿ ಮಾಡಬೇಕು

ಭಟಕಳ— (ತಾ ೧೧-೪-೪೮) ಕಳೆದ ತಾ ೨೬ಕ್ಕೆ ಆಬಕಾರಿ ಅಧಿಕಾರಿಗಳು ಅಳವೆಕೋಡಿಯಲ್ಲಿರುವ ಜೂಜೆ ಬರ್ನಲ ಕೊಸ್ತಾ ವಗೈರೆ ೩-೪ ಜನರ ಮನೆಗಳನ್ನು ಝಡತಿ ಮಾಡಲಾಗಿ ಸಾರಾಯಿ ಬಟ್ಟಿಗಳೂ ರಸಾಯನಗಳೂ ಸಿಕ್ಕವಂತೆ. ಕಳೆದ ೩-೪ ವರ್ಷಗಳಿಂದ ಈ ಭಾಗದಲ್ಲಿ ಬಹಳಷ್ಟು ಸಾರಾಯಿ ಹುಟ್ಟುತ್ತದೆಂದು ಆಬಕಾರಿ ಜನರಿಗೆ ಸುದ್ದಿ ಸಿಕ್ಕಿತ್ತಂತೆ

ಇಲ್ಲಿಯ ನ್ಯಾಶನಲ್ ಇಂಗ್ಲಿಷ ಶಾಲೆಯಲ್ಲಿ ೪ ಮಂದಿ ಶಿಕ್ಷಕರು. ಈಗ ೨ ತಿಂಗಳಿಂದ ಎರಡೇ ಶಿಕ್ಷಕರು [illegible]. ಆದರಿಂದ ಅನೇಕ ವಿದ್ಯಾರ್ಥಿಗಳು ಪಾಠ ಕಲಿಸುವವರಿಲ್ಲದೆ ಅಲೆದಾಡುತ್ತಾರೆ. ಚಾಲಕರು ಇತ್ತ ಗಮನಿಸಬಾರದೇ?

ನೋಟೀಸು.

ಕೆಳಗೆ ಸಹಿ ಮಾಡಿದ ನಾನು ಯಾವತ್ತೂ ಜನರಿಗೆ ತಿಳಿಸುವದೇನಂದರೆ - ನಮ್ಮ ಅವಿಭಕ್ತ ಕುಟುಂಬದಲ್ಲಿ (೧) ರಾಮಚಂದ್ರ (೨) ಹನುಮಂತ (೩) ಪಾಂಡುರಂಗ, ಹೀಗೆ ನಾವು ಮೂರು ಮಂದಿ ಸಹೋದರರು. ನಮ್ಮ ತಂದೆ [illegible] ಹಿಂದೆ ನಮ್ಮಲ್ಲಿ [illegible] ನಮ್ಮ ಚರ ಸ್ಥಿರ ಆಸ್ತಿಗಳು [illegible] ಅಪೇಕ್ಷೆಯಿಂದ [illegible] ಈ ಬಗ್ಗೆ ಪ್ರಯತ್ನ ಮಾಡಿಕೊಂಡಿದ್ದೇನೆ. ಆದರೂ [illegible] ಈಗ ನನಗೆ [illegible] ಕುಟುಂಬದ ಸ್ಥಿರಾಸ್ತಿಗಳನ್ನು [illegible] ಮಾಡುವ ಆಲೋಚನೆಯಲ್ಲಿದ್ದಾನೆಂದು ತಿಳಿದು ಬಂದಿದೆ. ಆದರೆ ನಮ್ಮ ಅವಿಭಕ್ತ ಕುಟುಂಬಕ್ಕೆ ಸಾಲ ವಗೈರೆ ಇಲ್ಲದ್ದರಿಂದ ಕುಟುಂಬದ ಆಸ್ತಿಯನ್ನು ವಿಕ್ರಯಿಸುವದು ಅವಶ್ಯವಿಲ್ಲ. ಹೀಗಿರುವಾಗ ನಮ್ಮ ಕುಟುಂಬಕ್ಕೆ ಒಳಪಟ್ಟ ಆಸ್ತಿಯನ್ನು ಯಾರಾದರೂ [illegible] ರೀತಿಯಿಂದ ಪಡೆದುಕೊಂಡಲ್ಲಿ ಅದು [illegible] ನಮ್ಮ ಹಕ್ಕಿಗೆ ಬಾಧೆ ಬರಲಾರದು ತಾ ೧೫-೪-೪೮

ಹನುಮಂತ ಕೃಷ್ಣ ಶಾನಭಾಗ, ಕರ್ಕಿ.

ಜಾಹೀರ ವಿಜ್ಞಾಪನೆ.

ಹೊನ್ನಾವರ ತಾಲೂಕ ಕಡತೋಕಾ ಪೈಕಿ ಶ್ರೀ ಮಹಾ ನಾರಾಯಣ ದೇವಸ್ಥಾನ ಯಾ ಹೆಬ್ಬಾರ ದೇವಸ್ಥಾನ ಈಗ ಜೀರ್ಣವಾಗಿ ಬಹಳ ಕಾಲವಾಯಿತು. ಅದನ್ನು ಈ ವರ್ಷ [illegible] ಕಟ್ಟಿಸುವ ಕೆಲಸ ನಾನು ಮುಂದಾಗಿ ಕೈಕೊಂಡಿದ್ದು ನನ್ನ ಕೈಯಿಂದಲೂ ಸಾಲ ಮಾಡಿಯೂ ಹಣ ಹುಟ್ಟಿಸಿ ಈ ದೇವಕಾರ್ಯ ಪ್ರಾರಂಭಿಸಿದ್ದೇನೆ. ಆಸ್ತಿಕ ಮಹಾಶಯರೆಲ್ಲರೂ ನನಗೆ ಈ ಕಾರ್ಯದಲ್ಲಿ ಪ್ರೋತ್ಸಾಹ ಕೊಟ್ಟು ಶ್ರೇಯೋಭಾಗಿಗಳಾಗಬೇಕಾಗಿ ಬೇಡಿಕೊಳ್ಳುತ್ತೇನೆ. ತಾ ೧೪-೪-೪೮

ನಾರಾಯಣ ಶಂಭಟ್ಟ ಮುಂಡಿ, ಕಡತೋಕಾ

ಎಚ್ಚರಿಕೆ -- ಎಚ್ಚರಿಕೆ.

ನರಸಿಂಹ ವೈಜಪ್ಪ ಭಂಡಾರಿ ಬಳ್ಕೂರ ಆದ ನಾನು ಯಾವತ್ತೂ ಜನರಿಗೆ ತಿಳಿಯುವಂತೆ ಜಾಹೀರ ಪಡಿಸಿ ಎಚ್ಚರಿಕೆ ಕೊಡುವದೇನಂದರೆ - ತಾ ೨೮ ಜನವರಿ ೧೯೪೩ನೇ ದಿವಸ ನಾನು ರಜಿಸ್ಟ್ರ ಕ್ರಯದಸ್ತನಿಂದ [illegible] ಇವರಿಂದ [illegible] ಗ್ರಾಮದ ಆಸ್ತಿಗಳನ್ನು ಕ್ರಯಕ್ಕೆ ಪಡೆದ ನಂತರ ಅವುಗಳ ಒಕ್ಕಲಿಗರು ನನಗೆ ಆಸ್ತಿ ಭೋಗವಟಿಗೆ ತಕರಾರು ಮಾಡುತ್ತಿರುವಲ್ಲಿ ಬಳ್ಕೂರ ಪೈಕಿ ಕೊಡ್ಲಮನೆ ಶ್ರೀ ವಿಷ್ಣು ದೇವರಲ್ಲಿಯ ದರ್ಶನ ಪಾತ್ರವಾದ ಹನುಮಂತ ನರಸಿಂಹ ಭಟ್ಟ ಎಂಬವರು ತನ್ನ ಸದ್ರಿ ಭಾರದ ಪಾತ್ರದ [illegible] ವಶೀಲೆ [illegible] ಸದ್ರಿ ಒಕ್ಕಲಿಗರ ಕಡೆಯಿಂದ ರಜಿಸ್ಟ್ರ [illegible] ಚಾಲುಚೀಟು ಮಾಡಿಸುವೆನಾಗಿ ನನಗೆ ನಂಬಿಸಿ ಆ ಬಗ್ಗೆ ತನಗೆ ಅನುಕೂಲವಾಗುವಂತೆ ತನ್ನ ಹೆಸರಿಗೆ ಸದ್ರಿ ಆಸ್ತಿಗಳ ಕುರಿತು ನಾನು ತೋರಿಕೆ ಪೂರ್ತ ಒಂದು ಕ್ರಯದಸ್ತು ಮಾಡಿಕೊಡಬೇಕಾಗಿಯೂ ಸದ್ರಿ ಚಾಲುಚೀಟುಗಳು ರಜಿಸ್ಟ್ರಿಯಾದ ನಂತರ ಅವುಗಳ ಸಮೇತ ಸದ್ರಿ ಆಸ್ತಿಗಳನ್ನು ಪರತ ಕ್ರಯಪಡಿಸಿ ಬಿಟ್ಟುಕೊಡುವೆನಾಗಿಯೂ ಕೂಡಾ ನನಗೆ ವಿಶ್ವಾಸ ಕೊಟ್ಟು ತಾ ೨೪-೧-೧೯೪೪ಕ್ಕೆ ನನ್ನಿಂದ ರಜಿಸ್ಟ್ರನಿಂದ ಒಂದು ತೋರಿಕೆಗೆ ಪೂರ್ತ ಕ್ರಯದಸ್ತು ಪಡೆದರು. ಆದರೆ ಆ ನಂತರ ಮಾತಿನಂತೆ ನಡೆಕೊಳ್ಳಲಿಲ್ಲ. ಯಾ ಪರತ ದಸ್ತು ಮಾಡಿಕೊಡಲಿಲ್ಲ. ಈ ರೀತಿ ನನಗೆ ವಿಶ್ವಾಸ ಘಾತ ಮಾಡಿರುತ್ತಾರೆ. ನನ್ನಿಂದ ಸದ್ರಿಯವರ ಹೆಸರಿಗೆ ಮೇಲ್ಕಾಣಿಸಿದಂತೆ ಆದ ದಸ್ತು ತೋರಿಕೆ ಪೂರ್ತವಿದ್ದು, ಪೋಕಳ ಮತ್ತು ಅಸಿಂಧು ಮತ್ತು ಆ ಕಾರಣದಿಂದ ರದ್ದು ಆದೆ. ಈ ಕುರಿತು ಸದ್ರಿಯವರಿಗೆ ಟಪಾಲ ರಜಿಸ್ಟ್ರದ್ವಾರಾ ತಾ ೯-೪-೧೯೪೮ಕ್ಕೆ ಖುಲಾಸೆವಾರ ನೋಟೀಸು ಕೊಟ್ಟಿರುತ್ತೇನೆ. ಕಾರಣ ಯಾರಾದರೂ ಸದ್ರಿಯವರಿಂದ ಸದ್ರಿ ಆಸ್ತಿ ಕುರಿತು ಏನಾದರೂ ಪರಾಧೀನತೆ ಪಡೆದಲ್ಲಿ ಸದ್ರಿ ಪರಾಧೀನತೆ ಸಹ ಅಸಿಂಧು ಇರುವ ಮೂಲಕ ನನಗೆ ಬಾಧಿಸಲಾರದು ತಾ ೧೨-೪-೪೮

ಬಳ್ಕೂರ ನರಸಿಂಹ ವೈಜಪ್ಪ ಭಂಡಾರಿ.

ಜಮೀನ ಮಾರುವದಿದೆ

ನನ್ನ ಸ್ವಂತದ ಅಂಕೋಲಾ ತಾಲೂಕ [illegible] ಗ್ರಾಮದ [illegible] ನಂಬರಗಳನ್ನು ([illegible]) ಮಾರಲಿರುತ್ತದೆ [illegible] ಇದ್ದು [illegible] ಕೊಳ್ಳಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು

ಡಾ|| ರಾಘವೇಂದ್ರ ರಾವ ಸಾವಂತ,
ಪೋ ಕಲಘಟಗಿ (ಧಾರವಾಡ)

"ಸಹ್ಯಾದ್ರಿ"ಯು ಮಾಡಿರುವ ಪ್ರಗತಿಯ ಮತ್ತು ಸಂಪಾದಿಸಿರುವ
ಲೋಕವಿಶ್ವಾಸದ ಪೂರ್ಣ ಶ್ರೇಯಸ್ಸು **ನಿಮಗೇ ಸಲ್ಲುತ್ತಿದೆ.**
ಬಂದ ವ್ಯವಹಾರದ ಮೊತ್ತ ರೂ ೩೧,೧೮,೯೩೮
ಮನ್ನಿಸಿದ ವ್ಯವಹಾರದ ಮೊತ್ತ „ ೨೮,೨೨,೭೬೯
ಪೂರ್ಣಪಡಿಸಿದ ವ್ಯವಹಾರದ ಮೊತ್ತ „ ೨೫,೭೪,೯೨೩
ಈ ಕಂಪನಿಯಲ್ಲೇ ನಿಮ್ಮ ಜೀವದ ವಿಮೆ ಇಳಿಸಿ, ನಿಮ್ಮ ಸಂಪತ್ತನ್ನೂ ಸೌಖ್ಯವನ್ನೂ ಸಮೃದ್ಧಗೊಳಿಸಿರಿ
☞ ಏಜಂಟರಾಗುವವರಿಗೆ ಭರಪೂರ ದಲಾಲಿ ಕೊಡಲಾಗುತ್ತಿದೆ
ಸಹ್ಯಾದ್ರಿ ಇನ್ಸೂರನ್ಸ ಕಂ., ಲಿ., ನಾಸಿಕ
ಜಿ. ಜಿ. ಸೌಂದಣಕರ, ಮೆನೆಜಿಂಗ ಡ್ಯಾರೆಕ್ಟರ

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
ಇದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ!
[illegible] ಡಬ್ಬಿ ರಂಧ್ರಗಳಲ್ಲಿ, ಮನೆ-ಮರಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟಗಳು ಎಲ್ಲೆಲ್ಲೂ ಸಿಗುತ್ತಿವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೫ ರಿಂದ ರೂ ೫೦೦೦ ವರೆಗೆ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[[illegible] ಪ್ರಚಾರ ಸಮಿತಿಯ ಪ್ರಕಟನೆ]

ಇದನ್ನ ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. [illegible]
[illegible]
ಬಿಡಿ ಸಂಚಿಕೆಗೆ [illegible]
ಸಳೇ ಸಂಚಿಕೆಗೆ [illegible]
[illegible]
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 23rd April, 1945

ವರ್ಷ ೨೬.] THE KANARA NEWS. [ಸಂಚಿಕೆ ೯೨

ಕುಮಟಾ:- ಸೋಮವಾರ, ತಾ. ೨೩ ನೇ ಏಪ್ರಿಲ ೧೯೪೫ನೇ ಇಸವಿ.

ಜಾಹೀರಾತುಗಳ ದರ:
[illegible]
[illegible]
ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಬೇಕು.

ಹಬ್ಬ ಹಿಂದೆ ಬಿತ್ತು!

(ನಿರೀಕ್ಷಕನು ಬರೆದುದು.)

ಜರ್ಮನಿಯ ಯುದ್ಧ ಬೇಗನೇ ಮುಕ್ತಾಯಗೊಳಿಸಿ ವಿಜಯೋತ್ಸವದ ಹಬ್ಬ ಮಾಡಬೇಕೆಂದು ಮಿತ್ರರು ಯೋಚಿಸಿದ ಸಂಗತಿಯನ್ನು ನಾನು ಈ ಹಿಂದೆಯೇ ಬರೆದಿದ್ದೇನೆ. ಯುದ್ಧ-ಮುಕ್ತಾಯದ ಘೋಷಣೆಯು ಹೊರಡುತ್ತಲೇ ಎಲ್ಲ ಸರಕಾರಿ, ಅರ್ಧ ಸರಕಾರಿ ಕಚೇರಿಗಳಿಗೆ ೨ ದಿನಗಳ ರಜೆ ಕೊಡಬೇಕೆಂದು ಬ್ರಿಟಿಶ ಸರಕಾರದ ಸಂಕಲ್ಪವಾಗಿತ್ತು. ಬ್ರಿಟನ್ನಿನಲ್ಲಿ ವಿಜಯೋತ್ಸವದ ತಯಾರಿಯೂ ನಡೆದಿತ್ತು. ಎಲ್ಲೆಲ್ಲಿಯೂ ಜನರು ಆ ಹಬ್ಬದ ಹಾದಿಯನ್ನು ತೀವ್ರ ಉತ್ಕಂಠೆಯಿಂದ ನೋಡುತ್ತಿದ್ದರು. [illegible]

[illegible]

(೨ನೇ ಪುಟದಿಂದ ಮುಂದರಿದದ್ದು)

[illegible]

ಕನ್ನಡ ಎಟ್ಲಾಸ

[illegible] ರೂ. ೧—೮—೦

ದಿ ನ್ಯೂ ಕನ್ನಡ [illegible], ಕುಮಟಾ

ESTD 1934

The Agricultural & Industrial Bank, Ltd.

(Incorporated in British India, Liability of Members limited)

Head Office. COONDAPOOR. S. K

Branches:-

ANKOLA DHARWAR, HUBLI, MANGALORE,
BELGAUM, GOKARN, KARWAR, NAGAR,
COONDAPOOR HAVERI KUMTA SHIMOGA
SOMWARPET and VIRAJPET

Season Deposits are now accepted at attractive rates.
For particulars please call at any of our Offices

Coondapoor 15—2—1945

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಹಳದೀಪುರ— [illegible]

[illegible] ಬಗ್ಗೆ ರೂ. [illegible] ಒಂದು ತರದ ಪುಡಿಯನ್ನು ಕೊಟ್ಟನು ಮತ್ತು ದೇವರ [illegible] ಮಾಡುವದಕ್ಕಾಗಿ [illegible] ಸೀರೆ [illegible] ಕೆಲವು ವೀಳ್ಯದೆಲೆಗಳನ್ನು [illegible] ಕಡೆ ನಡೆದನು. ಆ ದೇವರ ಬಲಿ ಮಾಡಿ ಕೆಲವೇ ದಿನಗಳಲ್ಲಿ [illegible] ಅವನು ಹೇಳಿದ್ದನು. ಆದರೆ ಈಗ ಅವನ ಪತ್ತೆಯೇ ಇಲ್ಲ! ಅವನು ಕೊಟ್ಟ ಔಷಧವೆಂಬುದು ಕೇವಲ [illegible] ಪುಡಿ ಇರುತ್ತದೆಂದು ಕಂಡುಬಂದಿದೆ ಎಂದು [illegible] ಬರೆಯುತ್ತಾನೆ. [illegible] ಬೇರೆ ಯಾರೂ [illegible] ಅವನ ಸೂಚನೆಯಾಗಿದೆ.

ಮಂಚಿಕೇರಿ— [illegible]

ಕಾರವಾರ— [illegible]

[illegible]— [illegible]

([illegible])

ORDER.

Defence of India Rules

No 4— In exercise of the powers [illegible] clause (a a) of sub rule (2) of rule [illegible] of the Defence of India R[illegible] Government Notification Home Department Political War No [illegible] D II 1370 dated the 15th September 1944 the District Magistrate K[illegible] hereby orders that —

(1) No person occupying any premises within the rationed area of Karwar Kumta Honavar Bhatkal G[illegible] shall refuse such access hereto, to any person appointed to affix thereto or paint thereon letters marks or numbers of indentification (hereinafter referred to as the numbering officer) as may be necessary for th[illegible] purpose

Provided that in requiring access due r[illegible] shall be paid by the numbering officer to the social and reli[illegible]ous cus[illegible] of the occupants

(2) No person shall voluntarily obstruct the numbering officer in the discharge of his duty and

([illegible]) No person shall remove obliterate alter or damage before the 31st [illegible] 1946 any letters marks or numbers affixed to or painted on any [illegible] by the numbering officer

K[illegible]
1[illegible] 1945

V. NANJAPPA.
DISTRICT MAGISTRATE KANARA

[illegible] ನಿಮ್ಮ ಹುಡುಗಿ [illegible] ಲಗ್ನವಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾರದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಇದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ. ೧೦ [illegible] ವರ್ಷಗಳ ನಂತರ ರೂ. [illegible] ಕೊಡುತ್ತವೆ!
[illegible] ದಗಳಲ್ಲಿ, ಮನೆ-ಮಠಗಳಲ್ಲಿ [illegible] ಹಣ [illegible]!
[illegible]
[illegible] ಎಲ್ಲಾ [illegible] ಅಧಿಕೃತ [illegible]
[illegible] ಕೊಳ್ಳದೆ [illegible]
[illegible] ರೂ. [illegible] ತನಕ [illegible]
([illegible])

ಹೊನ್ನಾವರ— [illegible]

[illegible]

= ನೋಟೀಸು. =

1923ನೇ ಇಸವಿಯ ಮುಂಬಯಿ ಲೋಕಲ್ ಬೋರ್ಡ ಆಕ್ಟ 6ರಂತೆ ಮಾಡಿದ ಇಲೆಕ್ಷನ ರೂಲ 7ನೇದರ ಅನ್ವಯ ಇದರ ಮೂಲಕವಾಗಿ ಕಾನಡಾ ಜಿಲ್ಲೆಯ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ —

ಇದೇ ಬರುವ ಕಾನಡಾ ಜಿಲ್ಲೆಯ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಇಲೆಕ್ಷನ ಬಾಬಕು ಈ ಕೆಳಗಿನಂತೆ ಪ್ರೋಗ್ರಾಮು ಠರಾಯಿಸಿದ್ದಿರುತ್ತದೆ

1	ನೇಮಣೂಕಿ ಪತ್ರಗಳನ್ನು ಸ್ವೀಕರಿಸುವ ಅಖೈರ ತಾರೀಖು (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	1945ನೇ ಮೇ ತಿಂಗಳ ತಾರೀಖು 10ನೇ ಗುರುವಾರ (ಆಫೀಸ ವೇಳೆಯಲ್ಲಿ)
2	ನೇಮಣೂಕಿ ಪತ್ರಗಳನ್ನು ಛಾಣನಿ ಮಾಡುವದು (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	1945ನೇ ಮೇ ತಿಂಗಳ ತಾರೀಖು 15ನೇ ಮಂಗಳವಾರ ದಿವಸ (ಆಫೀಸ ವೇಳೆಯಲ್ಲಿ)
3	ಡಿಸ್ಟ್ರಿಕ್ಟ ಲೋಕಲ್ ಬೋರ್ಡ (ಮುಸಲ್ಮಾನರ ಮತ್ತು ಜನರಲ್ ಸಂಘಗಳ) ಇಲೆಕ್ಷನ ಬಗ್ಗೆ ಮತಗಳನ್ನು ಕೊಡುವದು (ಮತ ತೆಗೆದುಕೊಳ್ಳುವ ಬಗ್ಗೆ ನೇಮಿಸಿದ ಪೋಲಿಂಗ ಜಾಗೆಗಳಲ್ಲಿ)	26 6-1945ನೇ ಮಂಗಳವಾರ ದಿವಸ ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರ ವರೆಗೆ ಮತ್ತು ಮಧ್ಯಾಹ್ನ 1-30ರಿಂದ 6ರ ತನಕ
4	ಮತಗಳನ್ನು ಎಣಿಸುವದು (ರಿಟರ್ನಿಂಗ ಆಫೀಸರರ ಆಫೀಸಿನಲ್ಲಿ)	ತಾರೀಖು 6-7-1945ನೇ ಶುಕ್ರವಾರ ದಿವಸ (ಆಫೀಸ ವೇಳೆಯಲ್ಲಿ)

ನೇಮಣೂಕಿ ಪತ್ರದ ಫಾರ್ಮ ಆಯಾಯ ತಾಲೂಕಿನ ಮಾಮಲೇದಾರ/ಪೇಠೆಯ ಮಹಾಲಕರಿ ಸಾಹೇಬ ಕಚೇರಿಯಿಂದ ಪಡೆಯಬಹುದು.

ಯಾವದಾದರೂ ಮತದಾರರ ಸಂಘದ ಬಗ್ಗೆ ಆರಿಸಿ ತೆಗೆಯಲ್ಪಡಬೇಕೆಂದು ಯಾವನಾದರೂ ಮತದಾರನು ಇಚ್ಛಿಸಿದರೆ ಅವನು ಆಯಾಯ ಮತದಾರರ ಸಂಘದ ಸುಧಾರಿಸಿದ ಮತದಾರರ ಪತ್ರಿಕೆಯಲ್ಲಿ ಯಾರ ಹೆಸರುಗಳು ಇವೆಯೋ ಆ ಪೈಕಿ ಒಬ್ಬರಿಂದ ನೇಮಿಸಲ್ಪಡಬೇಕು ವ ಮತ್ತೊಬ್ಬರಿಂದ ಅನುಮೋದಿಸಲ್ಪಡಬೇಕು ಅಂಥ ನೇಮಿಸಲ್ಪಡುವವನು ತನಗೆ ಮೆಂಬರನಾಗಿ ಆರಿಸಿ ತೆಗೆದ ಪಕ್ಷಕ್ಕೆ ತಾನು ಕಬೂಲ ಇದ್ದೇನಾಗಿ ಆ ನೇಮಣೂಕಿ ಪತ್ರದ ಮೇಲೆ ಸಹಿ ಮಾಡಬೇಕು ಅಂಥ ನೇಮಣೂಕಿ ಪತ್ರಗಳನ್ನು ಮೇಲೆ ನಮೂದಿಸಿದ ಕೋಷ್ಟಕದಲ್ಲಿ ಈ ಕೆಳಗೆ ಕಾಣಿಸಿದ ರಿಟರ್ನಿಂಗ ಆಫೀಸರರು ತಮ್ಮ ಆಫೀಸಿನಲ್ಲಿ ಸ್ವೀಕರಿಸುವರು.

ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮುಹಮ್ಮಡನ್ ಸಂಘದ ಬಗ್ಗೆ	ಮೆನ ಹುಜೂರ ಮಾಮಲೇದಾರ ಸಾಹೇಬ, ಕಾರವಾರ
ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಜನರಲ್ ಮತದಾರರ ಸಂಘಗಳ ಬಗ್ಗೆ	ಆಯಾಯ ತಾಲೂಕಿನ ಮಾಮಲೇದಾರ ಸಾಹೇಬ, ಪೇಠೆಗಳ ಮಹಾಲಕರಿ ಸಾಹೇಬರು

ನೇಮಣೂಕಿ ಪತ್ರಗಳನ್ನು ಕೊಡುವ ಪೂರ್ವದಲ್ಲಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮೆಂಬರ ಆಗಬಿಚ್ಛಿಸುವವರು ರೂ. 100 ಒಂದು ನೂರು ರೂಪಾಯು ರಿಟರ್ನಿಂಗ ಆಫೀಸರರ ಕಡೆಗೆ ಡಿಪೋಝಿಟ ಇಡಬೇಕು ಮತ್ತು ನೇಮಣೂಕಿ ಪತ್ರದ ಸಂಗಡ ಚುನಾವಣಿ ಬಗ್ಗೆ ಪ್ರತಿಜ್ಞಾ ಲೇಖಕ್ಕೆ ಸಹಿ ಮಾಡಬೇಕು ಚುನಾವಣಿ ಏಜಂಟನು, ಉಮೇದವಾರನು ತಾನೇ ಆಗಬಹುದು ಯಾ ಮೆಂಬರ ಆಗಲಿಕ್ಕೆ ಯೋಗ್ಯ ಇದ್ದಂಥ ಬೇರೆಯವನೂ ಇರಬಹುದು

ಟೀಪು — ಮೇಲೆ ನಮೂದಿಸಿದ ಯಾವತ್ತೂ ಸಂಘಗಳ ಬಾಬಕು ಮತಗಳನ್ನು ಕೊಡುವ ಬಗ್ಗೆ ನೇಮಿಸಿದ ಪೋಲಿಂಗ ಸ್ಟೇಶನಗಳ ಯಾದಿ ಇದರ ಲಗತ್ತ ಇರುತ್ತದೆ

Karwar,
21—4—1945

V. NANJAPPA,
COLLECTOR OF KANARA

ಕಾರವಾರ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಇಲೆಕ್ಷನ್.

ಜನರಲ್ ಮತ್ತು ಮುಹಮ್ಮಡನ್ ಮತದಾರರ ಸಂಘದ ಬಗ್ಗೆ ಮತ ತೆಗೆದುಕೊಳ್ಳುವ ಸ್ಟೇಶನಗಳು. ಸನ್ 1945ನೇ ಇಸವಿ.

ಜನರಲ್ ಕೊನ್ಸ್ಟಿಟ್ಯುಯೆನ್ಸಿ ಬಗ್ಗೆ

ಸಂಘದ ಹೆಸರು (1)	ಪೋಲಿಂಗ ಜಾಗೆಗಳ ನಂಬರು ವ ಹೆಸರು (2)
1 ಬಾಡ ಮತದಾರ ಸಂಘ ಕಾರವಾರ ತಾಲೂಕ	1 ಚಂಡಿಯ (ಲೋಕಲ್ ಬೋರ್ಡ ಧರ್ಮಶಾಲೆ)
	2 ಕದವಾಡ (ಕನ್ನಡ ಶಾಲೆ)
	3 ಕಾರವಾರ (ಮರಾಠಿ ಹುಡುಗಿಯರ ಶಾಲೆ)
	4 ಸೈಕಸಾಗರ (ಸೈಕ ಪೋರ್ಟ ಬಂಗಲೆ)
2 ಚಿತಾಕುಲಾ ಮತದಾರ ಸಂಘ ಕಾರವಾರ ತಾಲೂಕ	1 ಅಂಗಡಿ (ಶಿವನಾಥ ದೇವಸ್ಥಾನ)
	2 ಚಿತಾಕುಲಾ (ಧರ್ಮಶಾಲೆ)
	3 ಹಣಕೋಣ (ಪಿ ಡಬ್ಲ್ಯು ಡಿ ಸ್ಟೋರ)
	4 ಕದ್ರಾ (ಧರ್ಮಶಾಲಾ ನಂ 2)
3 ಅಂಕೋಲಾ ಮತದಾರ ಸಂಘ ಅಂಕೋಲಾ ತಾಲೂಕ	1 ಅಂಕೋಲಾ (ತಾಲೂಕ ಕಚೇರಿ)
	2 ಅಂಕೋಲಾ (ಗ್ರಾಮಚಾವಡಿ)
	3 ಹಟ್ಟಿಕೇರಿ (ಹಟ್ಟಿಕೇರಿ ಧರ್ಮಶಾಲಾ)
	4 ಹಿಲ್ಲೂರ (ಹಿಲ್ಲೂರ ಧರ್ಮಶಾಲಾ)
	5 ಸುಂಕಸಾಳ (ಗ್ರಾಮಚಾವಡಿ)
	6 ಅವರ್ಸೆ (ಶಾಲಾ ವಿದ್ಯಾಂತಗೃಹ)
4 ಬರ್ಗಿ ಮತದಾರ ಸಂಘ ಕುಮಟಾ ತಾಲೂಕ	1 ಗೋಕರ್ಣ (ಗೋಕರ್ಣ ಲೋಕಲ ಬೋರ್ಡ ಧರ್ಮಶಾಲೆ)
	2 ಹನೇಹಳ್ಳಿ (ದೇವತಿ ದೇವಸ್ಥಾನ)
	3 ಹಿರೇಗುತ್ತಿ (ಹಿರೇಗುತ್ತಿ ಲೋಕಲ ಬೋರ್ಡ ಧರ್ಮಶಾಲಾ)
	4 ಕತಗಾಲ (ಗ್ರಾಮಚಾವಡಿ)
	5 ಮಿರ್ಜಾನ (ಲೋ. ಬೋ. ಧರ್ಮಶಾಲಾ)
5 ಕೂಜಳ್ಳಿ ಮತದಾರ ಸಂಘ ಕುಮಟಾ ತಾಲೂಕ	1 ದೇವಗಿರಿ (ಗ್ರಾಮಚಾವಡಿ)
	2 ಗುಡೇಅಂಗಡಿ (ಲೋಕಲ್ ಬೋರ್ಡ ಕನ್ನಡ ಶಾಲೆ)
	3 ಹೆಗಡೆ (ಹೆಗಡೆ ಕನ್ನಡ ಶಾಲೆ)
	4 ಕುಮಟಾ (ಅ) (ಕುಮಟಾ ಕುಂಭೇಶ್ವರ ದೇವಸ್ಥಾನ)
	5 ಕುಮಟಾ (ಬ) (ಪ್ಯಾಟಿ ಧರ್ಮಶಾಲಾ)
	6 ಸಾಂತಗಲ್ (ಸಾಂತಗಲ್ ಲೋಕಲ ಬೋರ್ಡ ಸ್ಕೂಲ ಹೌಸ)
	7 ವಾಲಗಳ್ಳಿ (ವಾಲಗಳ್ಳಿ ಕನ್ನಡ ಶಾಲೆ)
6 ಹೊನ್ನಾವರ ಮತದಾರ ಸಂಘ ಹೊನ್ನಾವರ ತಾಲೂಕ	1 ಗುಣವಂತೆ (ಶಂಭುಲಿಂಗ ದೇವಸ್ಥಾನ)
	2 ಹೊನ್ನಾವರ (ಮಾಮಲೇದಾರ ಕಚೇರಿ)
	3 ಜಲವಳ್ಳಿಕರ್ಕಿ (ಶ್ರೀ ಶಿವಮ್ಮ ದೇವಸ್ಥಾನ)
	4 ಮಂಕಿ (ಮಂಕಿ ಗ್ರಾಮಚಾವಡಿ)
	5 ಉಪ್ಪೋಣಿ (ಶ್ರೀ ಶಾಂತಾದುರ್ಗಾ ದೇವಸ್ಥಾನ)
7 ಹಳದೀಪುರ ಮತದಾರ ಸಂಘ ಹೊನ್ನಾವರ ತಾಲೂಕ	1 ಹಡಿನಬಾಳ (ಹಡಿನಬಾಳ ಕನ್ನಡ ಶಾಲೆ)
	2 ಹಳದೀಪುರ (ಗ್ರಾಮಚಾವಡಿ)
	3 ಹೊಸಾಕುಳಿ (ಮುಖ್ಯ ದೇವಸ್ಥಾನ)
	4 ಕರ್ಕಿ (ಕರ್ಕಿ ಗ್ರಾಮಚಾವಡಿ)
	5 ಕೆಕ್ಕಾರ (ಗ್ರಾಂಟ ಇನ್ ಏಡ ಕನ್ನಡ ಶಾಲೆ)
	6 ನಗರಬಸ್ತೀಕೇರಿ (ನಗರಬಸ್ತೀಕೇರಿ ಲೋಕಲ್ ಬೋರ್ಡ ಧರ್ಮಶಾಲೆ)
8 ಶಿರ್ಸಿ ಮತದಾರ ಸಂಘ	1 ಶಿರ್ಸಿ (ಮ್ಯುನಿಸಿಪಲ್ ಆಫೀಸ)
	2 ಶಿರ್ಸಿ (ತಾಲೂಕ ಆಫೀಸ ಶಿರ್ಸಿ)
	3 ಬನವಾಸಿ (ಗ್ರಾಮಚಾವಡಿ)

ಸಂಘದ ಹೆಸರು (1)	ಪೋಲಿಂಗ ಠಾಣೆಗಳ ನಂಬರು ವ ಹೆಸರು (2)
	4 ಇಸಳೂರ (ಇಸಳೂರ ಗ್ರಾಮಚಾವಡಿ)
	5 ಹುಲೇಕಲ್ (ಲೋ. ಬೋ. ಧರ್ಮಶಾಲಾ)
	6 ಶಿವಗಾಂವ (ಹೆಗಡೇಶೆಟ್ಟಿ ಧರ್ಮಶಾಲೆ)
	7 ಸಂಪಖಂಡ ([illegible] ಸಂಪಖಂಡ)
	8 ಬದನಗೋಡ (ಲೋ. ಬೋ. ಧರ್ಮಶಾಲಾ ದಾಸನಕೊಪ್ಪ)
	9 ಬಂಡಳ್ಳಿ (ಫೋರೆಸ್ಟ ನಾಕೆ)
9 ಸಿದ್ದಾಪುರ ಮತದಾರ ಸಂಘ ಸಿದ್ದಾಪುರ ತಾಲೂಕ	1 ಬಿಳಗಿ (ಲೋ. ಬೋ. ಧರ್ಮಶಾಲಾ)
	2 ದೊಡ್ಡಮನೆ (ಗ್ರಾಮಚಾವಡಿ)
	3 ಹಾರ್ಸಿಕಟ್ಟಾ (ಧರ್ಮಶಾಲೆ)
	4 ಹೇರೂರ (ಗ್ರಾಮಚಾವಡಿ)
	5 ಕಾನಸೂರ (ಗ್ರಾಮಚಾವಡಿ)
	6 ಕೋಲಸಿರ್ಸಿ (ಲೋಕಲ್ ಬೋರ್ಡ ಕನ್ನಡ ಶಾಲೆ)
	7 ಮಾವಿನಗುಂಡಿ (ಧರ್ಮಶಾಲಾ)
	8 ನಿಲಕುಂದ (ಧರ್ಮಶಾಲಾ)
	9 ಸಿದ್ದಾಪುರ (ತಾಲೂಕ ಕಚೇರಿ)
10 ಯಲ್ಲಾಪುರ ಮತದಾರ ಸಂಘ ಯಲ್ಲಾಪುರ ತಾಲೂಕ	1 ಭರತನಳ್ಳಿ (ಗ್ರಾಮಚಾವಡಿ)
	2 ದೇಹಳ್ಳಿ ([illegible] ಧರ್ಮಶಾಲಾ)
	3 ಇಡಗುಂದಿ (ಧರ್ಮಶಾಲಾ)
	4 ಕಿರವತ್ತಿ (ಧರ್ಮಶಾಲಾ)
	5 ಮಂಚಿಕೇರಿ (ಗ್ರಾಮಚಾವಡಿ)
	6 ಮಾವಿನಮನೆ (ರಾಮಲಿಂಗ ದೇವಸ್ಥಾನ)
	7 ನಂದೊಳ್ಳಿ (ಫೋರೆಸ್ಟ ನಾಕಾ)
	8 ವಜ್ರಳ್ಳಿ (ಧರ್ಮಶಾಲಾ)
	9 ಯಲ್ಲಾಪುರ (ತಾಲೂಕ ಆಫೀಸ)
11 ಹಳಿಯಾಳ ಮತದಾರ ಸಂಘ ಹಳಿಯಾಳ ತಾಲೂಕ	1 ದಾಂಡೇಲಿ (ದಾಂಡೇಲಿ ರೇಂಜರ ಆಫೀಸ)
	2 ಮದನಳ್ಳಿ (ಗ್ರಾಮಚಾವಡಿ)
	3 ಮುರಕವಾಡ (ಮುರಕವಾಡ ಗ್ರಾಮದೇವಿ ದೇವಸ್ಥಾನ)
	4 ಹಳಿಯಾಳ (ಮ್ಯುನಿಸಿಪಲ್ ಆಫೀಸ) ಹಳಿಯಾಳ ಮ್ಯುನಿಸಿಪಲ್ ಹದ್ದು
	5 ಹಳಿಯಾಳ (ತಾಲೂಕ ಆಫೀಸ)
	6 ಸಾಂಬ್ರಾಣಿ (ಧರ್ಮಶಾಲಾ)
12 ಭಟಕಳ ಮತದಾರ ಸಂಘ ಭಟಕಳ ಪೇಟಾ	1 ಬೆಳಕೆ (ಬೆಳಕೆ ಲೋಕಲ್ ಬೋರ್ಡ ಧರ್ಮಶಾಲಾ)
	2 ಭಟಕಳ (ಭಟಕಳ ಗಂಡು ಹುಡುಗರ ಶಾಲೆ)
	3 ಮಾವಳ್ಳಿ (ಮುಸಲ್ಮಾನ ಗಂಡು ಹುಡುಗರ ಶಾಲೆ)
	4 ಮಾರುಕೇರಿ (ಗ್ರಾಮ-ಪಂಚಾಯತ ಆಫೀಸ)
	5 ಶಿರಾಲಿ (ಶಿರಾಲಿ ಲೋಕಲ್ ಬೋರ್ಡ ಧರ್ಮಶಾಲಾ)
13 ಮುಂಡಗೋಡ ಮತದಾರ ಸಂಘ ಮುಂಡಗೋಡ ಪೇಟಾ	1 ಮುಂಡಗೋಡ (ಮುಂಡಗೋಡ ಮಹಾಲ ಆಫೀಸ)
	2 ಪಾಳಾ (ಗ್ರಾಮಚಾವಡಿ)
14 ಸುಪಾ ಮತದಾರ ಸಂಘ ಸುಪಾ ಪೇಟಾ	1 ಕಾಲಕಾಯಿ (ಕಾಲಕಾಯಿ ದೇವಸ್ಥಾನ)
	ಕುಂಭಾರವಾಡಾ (ಧರ್ಮಶಾಲಾ)
	3 ಸುಪಾ (ಸುಪಾ ಗ್ರಾಮಚಾವಡಿ)
	4 ಅಸೂ (ಅಸೂ ನಾಗನಾಥ ದೇವಸ್ಥಾನ)
	5 ಗುಂದ (ಗುಂದ ಫೋರೆಸ್ಟ ನಾಕಾ)
	6 ಕ್ಯಾಸಲರಾಕ (ಧರ್ಮಶಾಲಾ)

ಮಹಮ್ಮಡನ್ ಕೊನ್ಸ್ಟಿಟ್ಯುಯೆನ್ಸಿ ಬಗ್ಗೆ

ಕಾರವಾರ ಮತದಾರ ಸಂಘ ಕಾರವಾರ ತಾಲೂಕ	1 ಚಿತಾಕುಲಾ (ಲೋ. ಬೋ. ಧರ್ಮಶಾಲೆ)
	2 ಕದ್ರಾ (ಲೋ. ಬೋ. ಧರ್ಮಶಾಲೆ)
	3 ಕಾರವಾರ, ಕನ್ನಡ ಶಾಲೆ)
	4 ಕಾರವಾರ (ಮರಾಠಿ ಹುಡುಗಿಯರಶಾಲೆ)
ಅಂಕೋಲಾ ಮತದಾರ ಸಂಘ ಅಂಕೋಲಾ ತಾಲೂಕ	1 ಅಂಕೋಲಾ (ತಾಲೂಕ ಕಚೇರಿ)
	2 ಅಂಕೋಲಾ (ಗ್ರಾಮಚಾವಡಿ)
	3 ಹಟ್ಟಿಕೇರಿ (ಹಟ್ಟಿಕೇರಿ ಧರ್ಮಶಾಲಾ)
	4 ಸುಂಕಸಾಳ (ಗ್ರಾಮಚಾವಡಿ)
ಕುಮಟಾ ಮತದಾರ ಸಂಘ ಕುಮಟಾ ತಾಲೂಕ	1 ಗೋಕರ್ಣ (ಗೋಕರ್ಣ ಲೋಕಲ್ ಬೋರ್ಡ ಧರ್ಮಶಾಲೆ)
	2 ಕುಮಟಾ ([illegible] ಧರ್ಮಶಾಲಾ)
	3 ಸಂತೆಗುಳಿ (ಸಂತೆಗುಳಿ ಲೋಕಲ ಬೋರ್ಡ ಸ್ಕೂಲ ಹೌಸ)
4 ಹೊನ್ನಾವರ ಮತದಾರ ಸಂಘ ಹೊನ್ನಾವರ ತಾಲೂಕ	1 ಹಡಿನಬಾಳ (ಹಡಿನಬಾಳ ಕನ್ನಡ ಶಾಲೆ)
	2 ಹಳದೀಪುರ (ಗ್ರಾಮಚಾವಡಿ)
	3 ಹೊನ್ನಾವರ (ಮಾಮಲತದಾರ ಕಚೇರಿ)
	4 ಮಂಕಿ (ಮಂಕಿ ಗ್ರಾಮಚಾವಡಿ)
	5 ನಗರಬಸ್ತಿಕೇರಿ (ಲೋಕಲ್ ಬೋರ್ಡ ಧರ್ಮಶಾಲೆ)
5 ಶಿರ್ಸಿ ಮತದಾರ ಸಂಘ ಶಿರ್ಸಿ ತಾಲೂಕ	1 ಶಿರ್ಸಿ (ಮ್ಯುನಿಸಿಪಲ ಆಫೀಸ)
	2 ಶಿರ್ಸಿ (ತಾಲೂಕ ಆಫೀಸ ಶಿರ್ಸಿ)
	3 ಬನವಾಸಿ (ಗ್ರಾಮಚಾವಡಿ)
	4 ಇಸಳೂರ (ಗ್ರಾಮಚಾವಡಿ)
	5 ಹುಲೇಕಲ್ (ಧರ್ಮಶಾಲಾ)
	6 ಶಿವಗಾಂವ (ಹೆಗಡೇಶೆಟ್ಟಿ ಧರ್ಮಶಾಲೆ)
	7 ಬದನಗೋಡ (ಲೋಕಲ ಬೋರ್ಡ ಧರ್ಮಶಾಲೆ)
	8 ಬಂಡಳ್ಳಿ (ಫೋರೆಸ್ಟ ನಾಕೆ)
6 ಸಿದ್ದಾಪುರ ಮತದಾರ ಸಂಘ ಸಿದ್ದಾಪುರ ತಾಲೂಕ	1 ಬಿಳಗಿ (ಲೋಕಲ್ ಬೋರ್ಡ ಧರ್ಮಶಾಲಾ)
	2 ಹಾರ್ಸಿಕಟ್ಟಾ (ಧರ್ಮಶಾಲೆ)
	3 ಹೇರೂರ (ಗ್ರಾಮಚಾವಡಿ)
	4 ಮಾವಿನಗುಂಡಿ (ಧರ್ಮಶಾಲಾ)
	5 ನಿಲಕುಂದ (ನಿಲಕುಂದ ಧರ್ಮಶಾಲಾ)
	6 ಸಿದ್ದಾಪುರ (ತಾಲೂಕ ಕಚೇರಿ)
7 ಯಲ್ಲಾಪುರ ಮತದಾರ ಸಂಘ ಯಲ್ಲಾಪುರ ತಾಲೂಕ	1 ಕಿರವತ್ತಿ (ಧರ್ಮಶಾಲಾ)
	2 ಮಂಚಿಕೇರಿ (ಗ್ರಾಮಚಾವಡಿ)
	3 ಯಲ್ಲಾಪುರ (ತಾಲೂಕ ಆಫೀಸ)
8 ಹಳಿಯಾಳ ಮತದಾರ ಸಂಘ ಹಳಿಯಾಳ ತಾಲೂಕ	1 ಮದನಳ್ಳಿ (ಗ್ರಾಮಚಾವಡಿ)
	2 ಮುರಕವಾಡ (ಮುರಕವಾಡ ಗ್ರಾಮದೇವಿ ದೇವಸ್ಥಾನ)
	3 ಹಳಿಯಾಳ (ಹಳಿಯಾಳ ಮ್ಯುನಿಸಿಪಲ್ ಆಫೀಸ)
	4 ಹಳಿಯಾಳ (ತಾಲೂಕ ಆಫೀಸ)
	5 ಸಾಂಬ್ರಾಣಿ (ಧರ್ಮಶಾಲಾ)
9 ಭಟಕಳ ಮತದಾರ ಸಂಘ ಭಟಕಳ ಪೇಟಾ	1 ಭಟಕಳ (ಮುಸಲ್ಮಾನ ಹುಡುಗಿಯರ ಉರ್ದು ಶಾಲೆ)
	2 ಮಾವಳ್ಳಿ (ಮುಸಲ್ಮಾನ ಗಂಡು ಹುಡುಗರ ಶಾಲೆ)
10 ಮುಂಡಗೋಡ ಮತದಾರ ಸಂಘ ಮುಂಡಗೋಡ ಪೇಟಾ	1 ಪಾಳಾ (ಗ್ರಾಮಚಾವಡಿ)
	2 ಮುಂಡಗೋಡ (ಮಹಾಲ ಆಫೀಸ)
11 ಸುಪಾ ಮತದಾರ ಸಂಘ ಸುಪಾ ಪೇಟಾ	1 ಗುಂದ (ಗುಂದ ಫೋರೆಸ್ಟ ನಾಕೆ)
	2 ಕ್ಯಾಸಲರಾಕ (ಧರ್ಮಶಾಲಾ)

Karwar.
21-4-1945

V. NANJAPPA,
COLLECTOR OF KANARA

ಇದನ್ನು ಪಾಂಡುರಂಗ ಕೃಷ್ಣ ಬಾನಧರ್ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B. 1270. Monday, 30th April, 1945.

ಕಾನಡಾವೃತ್ತ.

ವರ್ಷ ೨೭.] THE KANARA NEWS. [ಸಂಚಿಕೆ ೪೬

ಕುಮಟಾ:- ಸೋಮವಾರ, ತಾ, ೩೦ ಮಾಹೆ ಏಪ್ರಿಲ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಕಾಲಮ್ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಡಬಲ್‌ಕಾಲಮ್ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ.
ನಿಶ್ಚಿತ್ತ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಹಿಟ್ಲರನೆಲ್ಲಿ?

(ನಿರೀಕ್ಷಕನು ಬರೆದುದು.)

ಬರ್ಲಿನ ಪಟ್ಟಣವನ್ನು ಸಂಪೂರ್ಣ ಕೈವಶಪಡಿಸಿಕೊಂಡು ಏಪ್ರಿಲ ತಾ. ೨೫ಕ್ಕೆ ಸಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಕೂಡುವ ವಿ.ಶ್ವ.ರಕ್ಷಣ ಸಂಯುಕ್ತ ರಾಷ್ಟ್ರಗಳ ಪರಿಷತ್ತಿಗೆ ಕಾಣಿಕೆಯಾಗಿ ಒಪ್ಪಿಸುತ್ತೇನೆಂದು ರುಶ್ಯ ಮಹಾಪ್ರಭು ಸ್ಟೆಲಿನ್ನನು ಯಾಲ್ಟಾದೊಳಗಿನ ತ್ರಿಕೂಟದ ಸಭೆಯಲ್ಲಿ ವಚನ ಕೊಟ್ಟಿದ್ದನಂತೆ. ಸ್ಟೆಲಿನ್ನನ ಶಬ್ದವೆಂದರೆ ಶ್ರೀ ರಾಮದೇವರ ವಚನದಂತೆ ಎಂದಿಗೂ ಹುಸಿಯಾಗದ ಶಬ್ದವೆಂದು ಚರ್ಚಿಲ್ಲರು ಸಾಕ್ಷಿ ಕೊಡುತ್ತಾರೆ. ಸ್ಟೆಲಿನ್ನರ ತಾ. ೨೫ ಕಳೆದು ಇಂದು ೫ ದಿನಗಳಾದವು ಆದರೂ ಬರ್ಲಿನ ಪೂರ್ಣ ಬಿದ್ದಿಲ್ಲ! ಆ ಪಟ್ಟಣದಲ್ಲೀಗ ಘನಘೋರ ಸಂಗ್ರಾಮ ನಡೆದಿದೆ! ರುಶ್ಯರು ಅರ್ಧದಷ್ಟು ನಗರವನ್ನು ಆಕ್ರಮಿಸಿದ ಸುದ್ದಿಗಳಿವೆ. ಬರ್ಲಿನ ಪಟ್ಟಣದ ನಾಗರಿಕರು ಜೀವದಾಸೆಗೆ ಓಡುತ್ತಿದ್ದಾರೆ, ನಗರದ ಮಧ್ಯದಲ್ಲಿ ಬಿಳೀ ಧ್ವಜಗಳು ತೋರಹತ್ತಿವೆ; ಬರ್ಲಿನ ಪಟ್ಟಣದಲ್ಲಿ ಎಲ್ಲೆಲ್ಲೂ ಬೆಂಕಿ ಉರಿಯುತ್ತಿದೆ; ಮನೆ-ಮಠಗಳು ಉರುಳುತ್ತಿವೆ; ಎಂದು ಮುಂತಾಗಿ ರಣಭೂಮಿ ಸುದ್ದಿಗಳು ಒಂದರ ಹಿಂದೊಂದು ಬರುತ್ತಿವೆ. ರುಶ್ಯರು ಸುತ್ತುಬಂದಿ ಮಾಡಿ ಬರ್ಲಿನದೊಳಗಿನ ಜರ್ಮನ ಸೈನಿಕರೂ ಸೇನಾಧಿಕಾರಿಗಳೂ ಪಾರಿಹೋಗದಂತೆ ಆಕಾಶಮಾರ್ಗದಿಂದ ನಾಲ್ಕೂ ಬದಿಗೆ ಭದ್ರಕಾವಲು ಇಟ್ಟಿದ್ದಾರಂತೆ. ಸ್ವತಃ ಹಿಟ್ಲರನೇ ಬರ್ಲಿನ ಸಂಗ್ರಾಮದ ನೇತೃತ್ವವನ್ನು ವಹಿಸಿಕೊಂಡಿದ್ದಾನೆಂದು ಹೆಂಬುರ್ಗದಿಂದ ಜರ್ಮನ ಆಕಾಶವಾಣಿಯು ಡಂಗುರ ಸಾರಿದ ಸುದ್ದಿಯುಂಟು. ಆ ಸುದ್ದಿ ಕೇಳಿ ಮತ್ತೆ ನಂಬಿ ರುಶ್ಯರು ಹಿಟ್ಲರನನ್ನು ಜೀವಂತ ಸೆರೆಹಿಡಿಯುವ ಹವ್ಯಾಸ ಹಿಡಿದಿದ್ದಾರೆ! ಹಿಟ್ಲರನ ಬಗ್ಗೆ ಈ ಕನಕ ಮಿತ್ರ ಪಕ್ಷೀಯರು ನೂರಾರು, ಸಾವಿರಾರು ಸುದ್ದಿಗಳನ್ನು ಹುಟ್ಟಿಸಿದ್ದಾಯಿತು! ಹಿಟ್ಲರನಿಗೆ ಹುಚ್ಚು ಹಿಡಿದ ಸುದ್ದಿ ಬಂತು, ಅವನು ಸಾಯಬಿದ್ದ ವಾರ್ತೆ ಬಂತು; ಅವನು ಜಪಾನಕ್ಕೆ ಓಡಿಹೋಗುವ ಪ್ರಯತ್ನದಲ್ಲಿದ್ದ—ಆದೇಶ ಓಡಿಹೋದ — ವರ್ತಮಾನ ಬಂತು, ಅವನು ಬರ್ಲಿನ ಬಳಿಯ ಹೋರಾಟದಲ್ಲಿ ಗಾಯಗೊಂಡ ವೃತ್ತ ಪ್ರಕಟವಾಯಿತು, ಬರ್ಲಿನದಲ್ಲೇ ಅವನು ಸರ್ವಾಧಿಕ್ಷನಾಗುವನೆಂಬ ಸುದ್ದಿಯೂ ಬಂದಿದೆ! ಈ ಎಲ್ಲ ಸುದ್ದಿಗಳು ನಂಬಿಗಸ್ತರಿಂದ ತಿಳಿದುಬಂದ ಪ್ರಮಾಣ ಸಹ ಕೊಡಲಾಗುತ್ತಿದೆ! ಏನು ಪ್ರಮಾಣವೋ ಏನು ಆಧಾರವೋ! ಮಿತ್ರ ಪಕ್ಷೀಯ ಯುದ್ಧವಾರ್ತೆಗಳೆಲ್ಲ ಹಿಟ್ಲರನ ಸಂಬಂಧದ ವಾರ್ತೆಗಳಷ್ಟೇ [illegible] ಮತ್ತು ಸತ್ಯಸಾಪೇಕ್ಷವಾದವುಗಳಾದರೆ ರುಶ್ಯರ ಬರ್ಲಿನ ಪ್ರವೇಶದ ವಾರ್ತೆಯನ್ನು ನಂಬುವದು ಕಷ್ಟವೆಂದು ನಾನು ನುಡಿಯಬಹುದಲ್ಲವೆ! ಇವೆಲ್ಲ ಸುದ್ದಿಗಳ ಪೊಳ್ಳುತನ ಹೊರಬೀಳುತ್ತ ಬಂತೆಂದು ಭಾವಿಸಿ ಸುದ್ದಿಗಾರರು ಈಗ ಹೊಸ ಸುದ್ದಿಯನ್ನೊಂದು ಕಳಿಸಿದ್ದಾರೆ! ಬರ್ಲಿನ ಯುದ್ಧದ ಮುಖಂಡತ್ವ ವಹಿಸಿಕೊಂಡ ಹಿಟ್ಲರನು ಹಿಟ್ಲರನಲ್ಲವಾಗಿಯೂ, ಹಿಟ್ಲರನ ಪ್ರತಿಬಿಂಬದಂತಿರುವ ವಿಲ್ಹೆಲ್ಮ ಬಾರ್ಟ್ಝೋಲ್ಟ ಎಂಬುವನಿರುತ್ತಾನೆಂತಲೂ ಸ್ವತಂತ್ರ ಜರ್ಮನರ ನಭೋವಾಣಿಯು ಸಾರುತ್ತಲಿದೆಯಾಗಿ ಅವರು ತಿಳಿಸುತ್ತಾರೆ! ಅತ್ತ ಹಿಟ್ಲರನನ್ನು ಕೊಂದುಬಿಡುವದಕ್ಕಾಗಿ ಅವನ ಸರ್ವಸಾಧಾರಣ ನಿವಾಸಸ್ಥಾನವಾಗಿರುವ ಬರ್ಚಸಗಾಡೆನದ ಮೇಲೆ ಒಂದು ದಿನ ೧೨ ಸಾವಿರ ಟನ್ನ ತೂಕದ ಬಾಂಬು ಗುಂಡುಗಳನ್ನು ಮಿತ್ರ ಪಕ್ಷೀಯ ವಿಮಾನಗಳು ಸುರಿಸಿದ ಸುದ್ದಿಯೊಂದು ಬಂದಿದೆ! ಹೀಗೆ ಎಲ್ಲೆಲ್ಲೂ ಮಿತ್ರರಿಗೆ ಹಿಟ್ಲರನು ಕಾಣುತ್ತಿದ್ದಾನೆ! ಆದರೆ ಅವನು ನಿಜವಾಗಿಯೂ ಎಲ್ಲಿದ್ದಾನೆಂಬುದರ ಪಕ್ಕಾ ಅವರಿಗೆ ಪತ್ತೆ, ಹತ್ತುವವರೆಗೂ ನನಗೆ ಕಾಣುವದಿಲ್ಲ. ಹಿಟ್ಲರನೆಂದರೆ ಜರ್ಮನರಿಗೆ ಒಂದು ದೇವತೆ. ಆ ದೇವತೆಯನ್ನು ಜರ್ಮನರು ಬೈಬಲ್ಲಿ ಇಟ್ಟು ಮಿತ್ರರ ಬಾಂಬುಗುಂಡುಗಳಿಗೆ ಬಲಿ ಕೊಟ್ಟಾರೆಂದು ನಾ ನಂಬಲಾರೆ. ಹಿಟ್ಲರನಾದರೂ ತನ್ನ ಜೀವದ ಬೆಲೆ ಬಲ್ಲನು. ಜರ್ಮನ ರಾಷ್ಟ್ರದ ಉದ್ಧಾರಕ್ಕಾಗಿ ಮೀಸಲಿಟ್ಟ ತನ್ನ ಪ್ರಾಣವನ್ನು ಅವ ಕೊನೆಯ ವರೆಗೂ ಜತನದಿಂದ ರಕ್ಷಿಸದಿರಲಾರನು. ಜರ್ಮನ ರಾಷ್ಟ್ರವು ಸಂಪೂರ್ಣ ಪರವಶವಾದ ದಿವಸವೇ ಆತನ ಪ್ರಾಣವಾದೀತು. ಅವನಂಥ [illegible] ಹೋಗಿಯೂ ಬೇರೊಬ್ಬನಿಲ್ಲ. ಶರಣಾಗತಿಯ ಮಾತು ಅವನೆಂದೂ ಎತ್ತಲಿಕ್ಕಿಲ್ಲ. ನೆನ್ನೆ ಹಿಮ್ಲರನು ಮಿತ್ರರ ಕಡೆ ಸಂಧಿಯ ಯೋಚನೆ ಮಾಡಿರುವನೆಂಬ ಸುದ್ದಿ ಬಂದಿದೆ. ಆದರೆ ಹಿಟ್ಲರನು ಈ ಯೋಜನೆಗೆ ವಿರುದ್ಧನಿರುವನಂತೆ. ಬವೇರಿಯಾದ ಗುಡ್ಡಗಾಡು ಪ್ರದೇಶದಲ್ಲಿ ಅಭೇದ್ಯ ಕೋಟೆ-ಕೊತ್ತಳಗಳನ್ನು ಕಟ್ಟಿಸಿ ಅವನು ಅಲ್ಲಿ ಕೊನೆಯ ಹೋರಾಟ-ಅದೊಂದು ದೀರ್ಘ ಹೋರಾಟವಾಗುವದು ನಿಶ್ಚಿತ! — ಹೂಡುವ ತಯಾರಿ ಇಟ್ಟಿದ್ದಾನೆಂಬ ಸುದ್ದಿಗಳು ಬಂದಿವೆ. ಬರ್ಲಿನ ನಗರವನ್ನು ಆತ ಸಂರಕ್ಷಿಸಲು ಪಣ ತೊಟ್ಟಿರುವನಾದರೂ ತನ್ನ ಸಂಪೂರ್ಣ ಬಲವನ್ನು ಆ ಪಟ್ಟಣದ ಸಲುವಾಗಿ ಧಾರೆಯೆರೆಯಲು ಅವನು ಸಿದ್ಧನಿಲ್ಲ. ಬರ್ಲಿನದ ಸಮೀಪ ಇರಿಸಿದ್ದ ಎಷ್ಟೋ ದಂಡುಗಳನ್ನು ಅವನು ಸ್ಥಳಾಂತರಿಸಿದ ಸುದ್ದಿಯುಂಟು. ಅದರಿಂದ ಬರ್ಲಿನ ಪತನದಿಂದ ಯುದ್ಧ ಮುಗಿಯುವದೆಂದು ಯಾರೂ ತಿಳಿಯಕೂಡದು. ಹಿಟ್ಲರನಲ್ಲಿ ಜೀವಚೈತನ್ಯ ಬೆಳಗುತ್ತಿರುವವರೆಗೆ ಆತ ಮಿತ್ರರಿಗೆ ಸುಖದ ನಿದ್ರೆ ಸರ್ವಥಾ ಕೊಡಲಾರನು. ಮಿತ್ರರೊಳಗೆ ತಿಕ್ಕಾಟವುಂಟಾಗಿ ತನ್ನ ರಾಷ್ಟ್ರಕ್ಕೆ ಪುನಃ ಅನುಕೂಲ ಕಾಲ ಬರುವದೆಂಬ ಆಶೆ ಹಿಟ್ಲರನಿಗಿದೆ. ಅವನ ಎಣಿಕೆಯಂತೆ ಆ ತಿಕ್ಕಾಟವು ಉಂಟಾಗಿದೆ; ಅದು ಬೆಳೆಯುತ್ತಲೂ ಇದೆ! ಮಿತ್ರರು ತಮ್ಮೊಳಗೇ ಬಡಿದಾಡುತ್ತ ಕುಳಿತು ಹಿಟ್ಲರನಿಗೆ ಪುನಃ ತಲೆಯೆತ್ತಗೊಡುವರೇ?

(೨ನೇ ಪುಟದಿಂದ ಮುಂದರಿದದ್ದು.)

ಕಟ್ಟಿದ) ಅಕ್ಕಿ ಸಂಗ್ರಹಿಸಿಕೊಳ್ಳಬೇಕೆಂಬ ಧೋರಣ. (೭) ಒತ್ತಾಯದಿಂದ ಅಕ್ಕಿ-ಭತ್ತಗಳ ಖರೀದಿಯಾಗುತ್ತಿದ್ದುದರ ನಿಷೇಧ, ಮತ್ತು ಒಕ್ಕಲಿಗರ ಸಂಸಾರಕ್ಕೆ ಬೇಕಾಗುವಷ್ಟು ಖರ್ಚಿಗೂ ಅವಶ್ಯವಿರುವ ಭತ್ತ ಬಿಟ್ಟು ಮೇಲೆ ಉಳಿಯಬಹುದಾದ ಭತ್ತ ಯಾ ಅಕ್ಕಿ ಮಾತ್ರ ಕೊಂಡುಕೊಳ್ಳತಕ್ಕದ್ದೆಂಬ ಸೂಚನೆ. (೮) ಒಕ್ಕಲಿಗರ ಸಾಧಾರಣ ಬಗ್ಗೆಂದು ಸರಕಾರವು ತೆಗೆದಿಟ್ಟ ನಿಧಿಯೊಳಗಿಂದ ಈ ಜಿಲ್ಲೆಯೊಳಗಿನ ನೀರಾವರಿ ಆಣೆಕಟ್ಟುಗಳ ದುರುಸ್ತಿ ಮತ್ತು ಜಲ-ನಿವಾರಣೆಯ ಯೋಜನೆ ಮಾಡಬೇಕೆಂಬ ಧೋರಣ. (೯) ಕುಮ್ರಿ-ಬಿತ್ತಿಗೆಯ ವಿರುದ್ಧ ಅರಣ್ಯ ಇಲಾಖೆಯವರು ಹಾಕಿರುವ ನಿಬಂಧನೆಗಳ ರದ್ದಾಯಿತಿಯ ಬೇಡಿಕೆ ಆಗಾಮಿ ವರ್ಷದಲ್ಲಿ ರೈತರ ಸಂಘಟನೆ ಮಾಡುವದಕ್ಕಾಗಿ ಒಂದು ಮಂಡಳದ ನೇಮಣೂಕಿಯೂ ಆಗಿದೆ.

ಹೊನ್ನಾವರ— (ತಾ. ೨೬-೪-೪೫) ನಿನ್ನೆ ರಾಮನವಮಿಯ ರಥೋತ್ಸವವಾಯಿತು. ಸಕ್ಕರೆ ಸಿಗದ್ದರಿಂದ ಈ ಜಾತ್ರೆಯಲ್ಲಿ ಮಿಠಾಯಿಯ ಅಂಗಡಿಗಳಿದ್ದಿಲ್ಲ. ಮಿಠಾಯಿಗೆಂದು ತಂದ ಹಣವನ್ನೆಲ್ಲ ಹುಡುಗರು ಆಟಿಗೆಗಳ ಖರ್ಚಿಗೇ ಉಪಯೋಗಿಸಿದರು! ಆಟಗಳ ಬಾಗಾಯಿತು [illegible] ನಿರ್ಬಂಧಿತವಾದವುಗಳಿಲ್ಲ ಆದ್ದರಿಂದ ಬೆಲೆ ಹೆಚ್ಚಾಗಿತ್ತೆಂದು ಜನರು ಹೇಳುತ್ತಾರೆ!

ಭಟಕಳ ಬೈಂದೂರ ಗಡಿಯ ಮೇಲಿನ ಪಾಳೇದಾರನು ವರ್ತಕರಿಗೆ ಬಹಳ ತೊಂದರೆ ಕೊಡುತ್ತಾನಂತೆ. ನಿಯಂತ್ರಣಕ್ಕೊಳಪಡದ ಸರಕುಗಳನ್ನೇ ಹೇರಿಕೊಂಡು ಬಂದ ಗಾಡಿಗಳನ್ನು ಕೂಡ ಅವ ಎಷ್ಟೋ ಹೊತ್ತು ನಿಲ್ಲಿಸಿ ನಿಲ್ಲಿಸುತ್ತಾನಂತೆ! ಕೈ ಮೇಲೇನಾದರೂ ಬೀಳುತ್ತದೋ ಎಂದು ನೋಡುವಷ್ಟು ಕಡೆಲ್ಲ ಖುಲಾಸೆಯೆಂದು ಬಲ್ಲವರು ಹೇಳುತ್ತಾರೆ.

ಸೀಧಾ-ಅಂಗಡಿಯೊಳಗಿನ ಕಾಳುಕಡ್ಡಿ ಕಳಪೆ ಮತ್ತು [illegible] ಇರುತ್ತದಾಗಿ ಜನರ ದೂರುಂಟು. ಅಧಿಕಾರಿಗಳು ಅದರ ಪರೀಕ್ಷೆ ಮಾಡಬೇಕು.

ಇಲ್ಲಿಯ ನಮ್ಮ ಇಂಗ್ಲಿಷ ಸ್ಕೂಲಿನ ಶಿಕ್ಷಕ ಶ್ರೀ ಕಾಮತರು ಕಳೆದ ಫೆಬ್ರುವರಿಯಲ್ಲಾದ ದ. ಭಾ. ಹಿಂ. ಪ್ರ. ಸಮಿತಿಯ ಪ್ರಥಮಾ ಪರೀಕ್ಷೆಗೆ ೧೪ ಹಾಗೂ ಮಧ್ಯಮಾ ಪರೀಕ್ಷೆಗೆ ೮ ಮಂದಿ ವಿದ್ಯಾರ್ಥಿಗಳನ್ನು ಕಳಿಸಿದ್ದರು. ಅವರಲ್ಲಿ ಅನುಕ್ರಮವಾಗಿ ೧೨, ೮ ಮಂದಿ ಉತ್ತೀರ್ಣರಾಗಿದ್ದಾರೆ.

ಕಳೆದ ತಾ. ೧೬ಕ್ಕೆ ಕೆಕ್ಕಾರದಲ್ಲಿ ಸೇರಿದ ಸಾರ್ವಜನಿಕ ಸಭೆಯೊಳಗೆ ಮಾಮಲೇದಾರ ಸಾಹೇಬರು ಗ್ರಾಮಸುಧಾರಣೆಯ ಕೆಲಸ ಚನ್ನಾಗಿ ಮಾಡಿದ ಬಗ್ಗೆ ಕೆಕ್ಕಾರ ಗ್ರಾಮಸುಧಾರಣಾ ಮಂಡಳಕ್ಕೆ ಕಮಿಶನರ ಸಾಹೇಬರು ಮಂಜೂರ ಮಾಡಿದ ಪಾರಿತೋಷಕವನ್ನು ಅರ್ಪಿಸಿದರು.

ಶಿರಸಿ— (ತಾ ೨೧-೪-೪೫) ಅವಲಕ್ಕಿ ಕುಟ್ಟುವವರಿಗೆ ಹಿಂದಿನ ಮಾಮಲೇದಾರರು ಹಾಕಿಕೊಟ್ಟ ಭತ್ತದ ಪರವಾನಗಿಯನ್ನು ಕಡಿಮೆ ಮಾಡುವ ವಿಚಾರ ತಾವು ಎಂದೂ ಮಾಡಿಲ್ಲವೆಂತಲೂ, ಅದನ್ನು ಹೆಚ್ಚಿಸಿ ಕೊಡಲು ಬರುವದಿಲ್ಲೆಂದಷ್ಟೇ ತಾವು ಹೇಳಿದ್ದಾಗಿಯೂ ಮಾಮಲೇದಾರರು ಹೇಳುತ್ತಾರೆ. ಹಿಂದೆ ಭತ್ತ ಸಿಗದವರಿಗೂ ತಾವು ಕೊಡಿಸುವೆವಾಗಿ ಅವರು ನುಡಿಯುತ್ತಾರೆ. ಆದರೆ ನಿಯಂತ್ರಣ ಶಿರಸ್ತೇದಾರರು ನಡುವೆ "ಪೂಜಾರಿ"ಯಾಗಿ ಕೊಡುವರೆ ಕೊಡುತ್ತಾರೆಂದು ವದಂತಿಯುಂಟು. ಮಾಮಲೇದಾರರು ಈ ಪೂಜಾರಿಯ ಉಪಟಳ ತಪ್ಪಿಸಬೇಕು.

(ತಾ ೨೬-೪-೪೫) ನಿಯಂತ್ರಿತ ಜೀನಸುಗಳ ವ್ಯವಹಾರದ ಮಳಿಗೆಗಳನ್ನಷ್ಟು ಜಿಲ್ಲಾ ಮಧ್ಯವರ್ತಿ ಸಹಕಾರಿ ಬೇಂಕಿನವರು ಪಡೆಯುತ್ತಾರೆಂತಲೂ ಆದರೆ ಸಕಾಲದಲ್ಲಿ ಸರಕು ತಂದು ಜನರಿಗೆ ಸರಿಯಾಗಿ ಪೂರೈಸುವದಿಲ್ಲೆಂದೂ ದೂರು ಕೇಳಿಬರುತ್ತದೆ. ಬೇಂಕಿನವರಿಗೆ ಹತ್ತೀಕಾಳು ತರಿಸುವ ಪರವಾನಿಗೆಯುಂಟು. ಆದರೆ ಅವರ ಕಡೆ ಈಗ ಹತ್ತೀಕಾಳು ಸಿಗಲೊಲ್ಲದು! ಅವರು ಹತ್ತೀಕಾಳನ್ನೇ ತರಿಸಲಿಲ್ಲವೋ, ಅಥವಾ ತಂದು ಕಳ್ಳ ಪೇಟೆಯವರಿಗೆ ಕೊಟ್ಟರೋ ದೇವರೇ ಬಲ್ಲ! ಜಿಲ್ಹಾಧಿಪರು ಇದರ ಒಳಗುಟ್ಟಿನ ಶೋಧ ಮಾಡಬೇಕಾಗಿ ಸೂಚಿಸುವೆವು.

ಸಿದ್ದಾಪುರ— (ತಾ. ೧೮-೪-೪೫) ಇಲ್ಲಿಯ ಪೋಲೀಸರು ಕೆಲವರು ಅಂಕೆಯಿಲ್ಲದ ಕುದುರೆಗಳಂತಾಗಿದ್ದಾರೆ! ನಿನ್ನೆ ಕೆಲವು ಸಿಂಗಿನ ಕಾಯಿ ಮತ್ತು ಬಾಳೇ ಕಾಯಿ ಹೇರಿಕೊಂಡು ಇಲ್ಲಿಂದ ಸೊರಬಕ್ಕೆ ಹೋಗುತ್ತಿದ್ದ ಗಾಡಿಯೊಂದನ್ನು ನಿಲ್ಲಿಸಿ ಇಬ್ಬ ಪೋಲೀಸ ಪೇದೆಗಳು ಗಾಡಿಕಾರನಿಗೆ ಹೊರಗೆ ಎಳೆದು ಹೊಡೆದರಂತಲೂ ಅವನಿಂದ ರೂ. ೨ ಕಸಿದುಕೊಂಡರೆಂತಲೂ ಒಂದು ಸುದ್ದಿ ಬಂದಿದೆ. ಈ ಸುದ್ದಿಯನ್ನು ಫೌಜದಾರರಿಗೆ ತಿಳಿಸಿ ಇನ್ನು ಮುಂದೆ ಇಂಥ ಪುನರಾವರ್ತನವಾಗದಂತೆ ವ್ಯವಸ್ಥೆ ಮಾಡಿಸಲು ಇಲ್ಲಿಯ ರಾ|| [illegible] ಪುತ್ತು ಭಟ್ಟರು ಸದರಿ ಗಾಡಿಯವನಿಗೆ ಕರಕೊಂಡು ಪೋಲೀಸ ಕಚೇರಿಗೆ ಹೋಗಿದ್ದರಂತೆ. ಫೌಜದಾರರು ಕಚೇರಿಯಲ್ಲಿಲ್ಲದ್ದರಿಂದ ಅಲ್ಲಿದ್ದ ಜಮಾದಾರರಿಗೆ ಅವರು ನಡೆದ ಸಂಗತಿ ತಿಳಿಸಿದರಂತೆ. ಅವರು ನಡೆದ ಕಥೆ ಹೇಳುತ್ತಿದ್ದಾಗ ಅಲ್ಲೇ ಸಮೀಪದಲ್ಲಿದ್ದ ಇಬ್ಬ ಪೋಲೀಸಪೇದೆಗಳೂ ಬರೆಗರ ಪೋಲೀಸನೂ ಭಟ್ಟರಿಗೂ ಆ ಗಾಡಿಕಾರನಿಗೂ ಬಹಳ ಬೆದರಿಸಿದರಂತೆ, ಮೈಮೇಲೆ ಕೈ ಮಾಡಿದರಂತೆ! ಜಮಾದಾರರು ಅವರಿಗೆ ನಿಯಂತ್ರಣದಲ್ಲಿಡಲಿಕ್ಕೆ ಪ್ರಯತ್ನ ಕೂಡ ಮಾಡಲಿಲ್ಲವಂತೆ! ಮೇಲಧಿಕಾರಿಗಳು ಇಂಥ ಪಟಿಂಗರನ್ನು ನಿರ್ಬಂಧಿಸದಿದ್ದರೆ ಪೋಲೀಸ ಪಡೆಯಿಂದ ಜನರಿಗೆ ಒಂದು ಕಸಿ ಕಾಲವೆಂದು ಲೋಕಭಾವನೆಯಾದೀತು

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR, }
25-4-1945 }

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ರೋಹಿಣಿಯ ಮಳೆ ಬೀಳುವ ಚಿನ್ಹಗಳೂ ಹುಟ್ಟುತ್ತ ಕಾಣದೋರುತ್ತಿವೆ.

ಕುಮಟಾ ನಗರ ಸಭೆಯ ಹೊಸ ಮಂಡಳದ ಪ್ರಥಮ ಸಭೆ ಕಳೆದ ಸೋಮವಾರ ಬೆಳಿಗ್ಗೆ ಕೂಡಿ ಹೊಸ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಾಯಿತು. ಅಧ್ಯಕ್ಷಸ್ಥಾನಕ್ಕೆ ರಾ|| ಗೋವಿಂದ ವೆಂಕಪ್ಪ ಪೈ ಮತ್ತು ರಾ|| ವಿಮಲಾನಂದ ಮಹಾಜನರ ಹೀಗೆ ಇಬ್ಬರ ಹೆಸರು ಸೂಚಿಸಲ್ಪಟ್ಟಿತ್ತು. ಮತಗಣನೆಯಲ್ಲಿ ರಾ|| ಪೈರಿಗೆ ೯ ಮತ್ತು ರಾ|| ಮಹಾಜನರಿಗೆ ೬ ಮತಗಳು ಬಿದ್ದದ್ದರಿಂದ ರಾ|| ಪೈ ಆರಿಸಿ ಬಂದರು. ಉಪಾಧ್ಯಕ್ಷಸ್ಥಾನಕ್ಕೆ ರಾ|| ಸೀತಾರಾಮ ಭಾಗವತರು ಆರಿಸಲ್ಪಟ್ಟರು.

ಕುಮಟಾ-ಹೆರವಟ್ಟಾ ಮಾರ್ಗವು ಶ್ರೀ ಅಮ್ಮನವರ ದೇವಸ್ಥಾನಕ್ಕೆ ಹೋಗುವ ಮಾರ್ಗವು ಕೂಡುವಲ್ಲಿದ್ದ ಮ್ಯುನಿಸಿಪಾಲಿಟಿಯ ಬಾವಿಯು ಕಟ್ಟಡ ಕುಸಿದು ಬಿದ್ದು ಈಗ ೬-೮ ತಿಂಗಳುಗಳಾದವು. ಅದರ ದುರುಸ್ತಿಯ ವ್ಯವಸ್ಥೆ ಮಾಡಿದ್ದು ತೋರುವದಿಲ್ಲ! ಜನ-ಜಾನುವಾರಗಳು ಬಾವಿಯ ಸಮೀಪ ಹೋಗಿ ಅಪಘಾತಕ್ಕೀಡಾಗಬಾರದೆಂದು ಹಾಕಿದ ಬೇಲಿಯೂ ಈಗ ಮುರಿದು ಹೋಗಿದೆ. ಅದನ್ನೂ ಮ್ಯುನಿಸಿಪಾಲಿಟಿಯವರು ದುರುಸ್ತಗೊಳಿಸುವದಿಲ್ಲ! ಇಂಥ ಈ ಅಪಾಯಕರ ಸ್ಥಳದಲ್ಲಿ ಜನ-ಜಾನುವಾರಗಳಿಗೆ ಅಪಾಯ-ಅಪಘಾತಗಳಾಗದಂತೆ ವ್ಯವಸ್ಥೆ ಮಾಡಿಡುವದು ಸ್ಥಳದ ಮಾಲಿಕರ ಕರ್ತವ್ಯವಿರುತ್ತದೆ. ಮ್ಯುನಿಸಿಪಾಲಿಟಿಯವರಿಗೆ ಅದರ ಅರಿವಿಲ್ಲದಂತೆ ತೋರುತ್ತಿದೆ. ಮಾಜಿಸ್ಟ್ರೇಟರು ಒಮ್ಮೆ ಆ ಅರಿವು ಮಾಡಿಕೊಡುವದುತ್ತಮ.

ಶಿರಸಿ ವಿಭಾಗದ ಪ್ರಾಂತ ಸಾಹೇಬ ರಾ|| ಕಾಮತರು ಇಲ್ಲಿಯ ತಾಲೂಕ ಕಚೇರಿಯನ್ನು ಮುಗಿಸಿ ಕಳೆದ ಗುರುವಾರ ಶಿರಸಿಗೆ ಹೋಗಿದ್ದಾರೆ. ಪ್ರಾಂತ ಸಾಹೇಬರು ಇಲ್ಲಿದ್ದಾಗ ಪೂರ್ವಸೂಚನೆ ಕೊಡದೆ ಹೆಗಡೆ ಗ್ರಾಮಕ್ಕೆ ಸಂದರ್ಶನ ಕೊಟ್ಟು, ಶಾನಭೋಗರು ಆಗ ಗ್ರಾಮದಲ್ಲಿಲ್ಲದ್ದನ್ನು ಕಂಡು ಅವರಿಗೆ ಸಸ್ಪೆಂಡ ಮಾಡಿಟ್ಟಿದ್ದಾರೆ. ಈ ಶಾನಭೋಗರ ವಿರುದ್ಧ ಕೆಲವು ದೂರುಗಳು ಪ್ರಾಂತ ಸಾಹೇಬರ ಕಡೆ ಮುಟ್ಟಿವೆಯೆಂದು ಲೋಕವಾರ್ತೆಯಿದೆ.

ಕಳೆದ ತಾ ೨೨ನೇ ರವಿವಾರ ಮಧ್ಯಾಹ್ನ ಹಿರೇಗುತ್ತಿಯಲ್ಲಿ ಜಿಲ್ಲಾ ರೈತರ ಪರಿಷತ್ತಿನದೊಂದು ಸಭೆ ಕೂಡಿತ್ತು. ಹಳಿಯಾಳದ ವಕೀಲ ರಾ|| ಘಟನೀಕರು ಪರಿಷತ್ತಿನ ಉದ್ಘಾಟನೆ ಮಾಡಿದರು. ಸ್ವಾಗತಾಧ್ಯಕ್ಷ ರಾ|| ಹೊನ್ನಪ್ಪ ನಾಯ್ಕರು ತಮ್ಮ ಸ್ವಾಗತ ಭಾಷಣದಲ್ಲಿ ರೈತರ ಕಷ್ಟಗಳನ್ನು ಬಣ್ಣಿಸಿದರು. ಪರಿಷತ್ತಿನ ಅಧ್ಯಕ್ಷ ರಾ|| ಕರಾಳೇಕರರು (ಮುಂಬಯಿ ಎಸೆಂಬ್ಲಿಯ ಸಭಾಸದರಿದ್ದವರು) ತಮ್ಮ ಭಾಷಣದಲ್ಲಿ, ನಾಡಿನಲ್ಲೀಗ ಲಂಚಗೋಳತನ ಹೆಚ್ಚಾಗಿದೆಂದೂ ಅದನ್ನು ನಿರ್ಮೂಲಿಸಬೇಕಾದರೆ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗುವದು ಅವಶ್ಯವಿರುತ್ತದೆಂದೂ ಪ್ರತಿಪಾದಿಸಿ, ರೈತರೆಲ್ಲ ಕಿಸಾನ (ಒಕ್ಕಲಿಗರ) ಸಭೆ ಸೇರಬೇಕೆಂದೂ ಬೋಧಿಸಿದರು. ಆಮೇಲೆ ಈ ಕೆಳಗೆ ಕಾಣಿಸಿದ ಗೊತ್ತುವಳಿಗಳಾದವು — (೧) ಸೆರೆಮನೆಯಲ್ಲೂ ಸ್ಥಾನಬದ್ಧತೆಯಲ್ಲೂ ಇರುವ ರಾಜಕೀಯ ಮುಖಂಡರ ಬಿಡುಗಡೆ ಮಾಡಿ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ರಚಿಸಬೇಕು (೨) ದಿವಂಗತ ಮಧ್ವರಾವ ಕಬ್ಬೂರ ಧಾರವಾಡ ಮತ್ತು ನಾರಾಯಣರಾವ ಜೋಶಿ ಬೆಳಗಾಂವ ಇವರ ನಿಧನದ ಬಗ್ಗೆ ದುಃಖಪ್ರದರ್ಶನ (೩) ಕಾಂಗ್ರೆಸ ಮಂತ್ರಿಮಂಡಳವು ರಚಿಸಿಟ್ಟ ಲಾವಣಿ ಕಾಯದೆ ಮತ್ತು ಒಕ್ಕಲಿಗರ ಸಾಲ ಪರಿಹಾರದ ಕಾಯದೆ ಈ ಜಿಲ್ಲೆಗೆ ಕೂಡಲೆ ಲಾಗು ಮಾಡಬೇಕೆಂಬ ಸೂಚನೆ (೪) ದೇಸಾಯಿಕ್ಕೆ ಅವಶ್ಯವುಳ್ಳ ಅಂಗಡಿ ಸಾಮಾನು ಅನುಕೂಲವುಳ್ಳ ಚಿಟ್ಟಿಯಿಂದ ಸರಿಯು ಒಕ್ಕಲಿಗರಿಗೆ ಸಿಗಲೆಂತು ಕೊಡಬೇಕೆಂಬ ಬಿನ್ನಹ (೫) ಟೆಕ್ಸ ರಕ್ಷಣೆಯ ಬಗ್ಗೆ ಒಕ್ಕಲಿಗರಿಗೆ ಕೋವಿಯ ಪರವಾನಗಿಗಳನ್ನು ಕೊಡುವಂತೆ ಸರಕಾರಕ್ಕೆ ಸೂಚನೆ (೬) ಸರಕಾರದವರು ಖರೀದಿಸುವ ಭತ್ತವನ್ನು ಗಿರಣಿಗಳಿಗೆ ಕಳಿಸದೆ ಒಕ್ಕಲಿಗರ ಕಡೆಯಿಂದಲೇ ಅದರ (ಕೈಯಿಂದ

(೩ನೇ ಪುಟದ ಮೇಲೆ ಮುಂದರಿಸಿದೆ)

WANTED.

Applications are invited for posts of Supervisors of Co operative Supervising Unions from Matriculates. Starting pay Rs 30/- plus P T. A & dearness allowance according to prescribed scales Preference given to Matriculates having experience of Co operative work. Apply with testimonials before *10—5—1945*

Kumta,
28—4—45

Chairman,
Kanara District Board of
Supg. Unions, Kumta.

WANTED.

A qualified Compounder to serve in the Byadgi Grant-in-aid Dispensary. The scale of pay of the said post is Rs. 20—1—35 *plus house rent* allowance of Rs 2 P M, as well as dearness allowance sanctioned by the Municipality. *Starting pay can* be raised according to merits & experience of the applicants Applications to reach this office on or before 5th of May, 1945 with copies of testimonials.

Byadgi
27—4—1945

M. H. Motgi,
PRESIDENT,
Byadgi Municipality

ಕಾನಡಾ ಜಿಲ್ಲಾ ಸ್ಕೂಲ ಬೋರ್ಡಿನ ಮೇಲೆ ಖಾಲಿಯಾದ ಜಾಗಾದ ಚುನಾವಣೆಯ

ನೋಟೀಸು ಮತ್ತು ಕಾರ್ಯಕ್ರಮ.

ಕಾನಡಾ ಜಿಲ್ಹಾದ ಸ್ಥಾನಿಕ ಅಧಿಕಾರಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮೆ|| ಪ್ರೆಸಿಡೆಂಟ ಸಾ|| ಬ|| ಇವರ ಕಡೆಯಿಂದ ಈ ಜಿಲ್ಹೆಯ ಲೋಕಲ ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಹದ್ದಿನೊಳಗಿನ ಜನತೆಗೆ ತಿಳಿಯಪಡಿಸುವದೇನಂದರೆ.—

1 ತಾರೀಖು 25—2—1926 ನೇ ದಿವಸ ಮುಂಬಯಿ ಸರಕಾರಿ ಗೆಝೆಟಿನಲ್ಲಿ ಪ್ರಸಿದ್ಧಪಡಿಸಿದ 3698 A 24-2-1926 ನೇ ಜಾಹೀರನಾಮೆಯಲ್ಲಿ ಇದ್ದ ಹುಕುಮಿಗನುಸರಿಸಿ ಈ ಸ್ಥಾನಿಕ ಅಧಿಕಾರಿಯು ಸ್ಕೂಲ ಬೋರ್ಡಿನ ಮುಖಾಂತರವಾಗಿ ತಾ 1—3—1932 ನೇ ದಿವಸದಿಂದ ಪ್ರಾಥಮಿಕ ಶಿಕ್ಷಣದ ಹವಾಲೆಯನ್ನು ಆಡಳಿತೆಯನ್ನೂ ತೆಗೆದುಕೊಂಡಂತೆ ಸ್ಥಾನಿಕ ಅಧಿಕಾರಿಯು ತಾ. 1—8—1942 ನೇಯಿಂದ ಶುರುವಾದ ಮೂರು ವರ್ಷಗಳ ಮುದ್ದತ್ತಿನ ಬಗ್ಗೆ ರಚಿಸಿದ ಸ್ಕೂಲ ಬೋರ್ಡಿನ ಮೇಲೆ ಆರಿಸಲ್ಪಟ್ಟ ನಾನ್-ಲೋಕಲ್ ಒಥೊರಿಟಿ ಮ್ಯುನಿಸಿಪಾಲಿಟಿಗಳ ಪ್ರತಿನಿಧಿಯು ಪ್ರಾಯ್ಮರಿ ಎಜ್ಯುಕೇಶನ್ ಆಕ್ಟ ಕಲಂ 3 (1) (a) ಪ್ರಕಾರ ಡಿಸ್‌ಕ್ವಾಲಿಫಾಯ್ ಆದ್ದರಿಂದ P. E. Rule ನಂ 25 (2) ರ ಪ್ರಕಾರ ಆ ಜಾಗಾ ತುಂಬುವದು ಯೋಚಿಸಿರುತ್ತದೆ.

2 ಖಾಲಿ ಬಿದ್ದ ಜಾಗಾದ ವರ್ಣನೆ - ನಾನ್‌ಲೋಕಲ್ ಒಥೊರಿಟಿ ಮ್ಯುನಿಸಿಪಾಲಿಟಿಗಳ ಪ್ರತಿನಿಧಿ ಜಾಗಾ 1. ಟೀಪು. ಮ್ಯುನಿಸಿಪಾಲಿಟಿಗಳ ಬಗ್ಗೆ ಆರಿಸಲ್ಪಡುವ ಪ್ರತಿನಿಧಿಯು ಮ್ಯುನಿಸಿಪಾಲಿಟಿಯ ಮೆಂಬರನೇ ಇರಬೇಕೆಂದಿಲ್ಲ

3 1923ನೇ ಇಸ್ವಿ ಮುಂಬಯಿ ಪ್ರಾಯ್ಮರಿ ಎಜ್ಯುಕೇಶನ್ ಎಕ್ಟ IV ನೇದರಂತೆ ಮಾಡಿದ ನೇಮುಗಳಲ್ಲಿ 17 (A) ನೇ ನೇಮಕ್ಕೆ ಅನುಸರಿಸಿ ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿದ ಚುನಾವಣಿ ನೇಮ 1-2 ನೇದರ ಅನ್ವಯ

ಇದರ ಮೂಲಕವಾಗಿ ಕಾನಡಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಸ್ಥಾನಿಕ ಅಧಿಕಾರಿಗೆ ಒಪ್ಪಿದ ಸ್ಕೂಲ ಬೋರ್ಡಿನ ಮೇಲೆ ಮೇಲಿನಂತೆ ಖಾಲಿಯಾದ ಜಾಗಾದ ನಿವಡಣೂಕಿಯ ಬಗ್ಗೆ ಈ ಕೆಳಗಿನಂತೆ ಕಾರ್ಯಕ್ರಮ ಪ್ರಸಿದ್ಧಿಸುತ್ತದೆ.

ತಪಶೀಲು	ಸ್ಥಳ	ತಾರೀಖು ವ ಘಂಟೆ
1. ನೇಮಣೂಕಿ ಪತ್ರಗಳನ್ನು ಸ್ವೀಕರಿಸುವದು. (ಚುನಾವಣಿ ನೇಮ A)	ಕಾನಡಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಆಫೀಸಿನ ಮಾಳಿಗೆಯ ಮೇಲೆ, ಕಾರವಾರದಲ್ಲಿ.	17-5 45 ಬೆಳಿಗ್ಗೆ 10½ ಯಿಂದ 11½ ವರೆಗೆ (ಸ್ಟಂ. ಟ್ಯಾ.)
2. ನೇಮಣೂಕಿಯ ಪತ್ರಗಳನ್ನು ತಪಾಸ ಮಾಡುವದು (ಚುನಾವಣಿ ನೇಮ 5, 6, 7)	— ಡಿ —	— ಡಿ — ಸಂಜೆ ಘಂಟೆ 4ರಿಂದ ಮುಂದೆ (ಸ್ಟಂ. ಟ್ಯಾ.)
3. ನಾನ್ ಲೋಕಲ್ ಒಥೊರಿಟಿ ಮ್ಯುನಿಸಿಪಾಲಿಟಿಯ ಕಡೆಯಿಂದ ಬರೆದ ಮತದಾನ ಪತ್ರಿಕೆಗಳನ್ನು ಸ್ವೀಕರಿಸುವದು, ಮತಗಳನ್ನು ಎಣಿಸುವದು (ನೇಮ 15) ಮತ್ತು ಅದರ ಪರಿಣಾಮ ವ್ಯಕ್ತಪಡಿಸುವದು (ನೇಮ 16)	ಕಾನಡಾ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಆಫೀಸಿನ ಮಾಳಿಗೆಯ ಮೇಲೆ, ಕಾರವಾರದಲ್ಲಿ.	11-6-45 ಬೆಳಿಗ್ಗೆ 10½ ಯಿಂದ 11½ ವರೆಗೆ (ಸ್ಟಂ. ಟ್ಯಾ.)

4 ಯಾವ ಉಮೇದವಾರನಿಗೆ ಸದ್ರಿ ಸ್ಕೂಲ ಬೋರ್ಡಿನ ಮೇಲೆ ಖಾಲಿಯಾದ ನಾನ್‌ಲೋಕಲ್ ಒಥೊರಿಟಿ ಮ್ಯುನಿಸಿಪಾಲಿಟಿಯವರು ನಿವಡಣೂಕಿ ಮಾಡಿಕೊಡುವ ಜಾಗಾದ ಬಗ್ಗೆ ನಿಲ್ಲುವದಿದೆಯೋ ಅವರು ಪ್ರಾಯ್ಮರಿ ಎಜ್ಯುಕೇಶನ್ ಆಕ್ಟ ಕಲಂ 3(1) ರ ಕೆಳಗಿನ ಪ್ರಸಿದ್ಧೀಕರಣ (b) ವ ಕಲಂ 3 (A) ವ ಪ್ರಾಯ್ಮರಿ ಎಜ್ಯುಕೇಶನ್ ರೂಲ 17 (2) ವ 17 (3) ರ ಕಡೆಗೆ ಲಕ್ಷ ಕೊಟ್ಟು ನೇಮಣೂಕಿ ಪತ್ರಗಳನ್ನು ಕೊಡಬೇಕು

5. ನೇಮಣೂಕಿ ಪತ್ರದ ಫಾರ್ಮು ಯಾ ನಮೂನೆಯು ಮೆ|| ಪ್ರೆಸಿಡೆಂಟ ಸಾ|| ಡಿ. ಲೋ. ಬೋರ್ಡ ಕಾನಡಾ ಇವರ ಕಚೇರಿಯಲ್ಲಿ (ಕಾರವಾರದಲ್ಲಿ) ಸಿಗುವದು

ಮ್ಯುನಿಸಿಪಾಲಿಟಿ ಕಡೆಯಿಂದ ನಿಲ್ಲುವ ಉಮೇದವಾರರು ಕೊಡತಕ್ಕ ನೇಮಣೂಕಿ ಪತ್ರದಲ್ಲಿ, ಅಂಥ ಉಮೇದವಾರರಿಗೆ ಸೂಚಿಸುವವರು ನಾನ್‌ಲೋಕಲ್ ಒಥೊರಿಟಿ ಮ್ಯುನಿಸಿಪಾಲಿಟಿಗಳ ಪ್ರತಿ ಒಂದು ಮ್ಯುನಿಸಿಪಾಲಿಟಿ ಇರಬೇಕು ಮತ್ತು ಹಾಗೆ ಸೂಚಿಸಿದ್ದರ ನಿದರ್ಶನದ ಬಗ್ಗೆ ಅಂಥ ನೇಮಣೂಕಿ ಪತ್ರಕ್ಕೆ ಸೂಚಿಸುವ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ ಯಾ ವ್ಹಾಯ್ಸಪ್ರೆಸಿಡೆಂಟರು ಸಹಿ ಮಾಡಬೇಕು ಮತ್ತು ಹಾಗೆ ಸಹಿ ಮಾಡಿದವರು ಸದರಿ ನೇಮಣೂಕಿ ಪತ್ರ ಕೊಡುವ ವೇಳ್ಯಕ್ಕೆ ಹಾಜರ ಇರಬೇಕು. ಉಮೇದವಾರರು ಸ್ವತಃ ಯಾ ತಮ್ಮ ಸೂಚಕರಿಂದ ನೇಮಣೂಕಿ ಪತ್ರ ಚಿಟನೀಸ ಅಧಿಕಾರಿಯ ಕಡೆಗೆ ಕೊಡತಕ್ಕದ್ದು. ಉಮೇದವಾರನಿಗೆ ಮೆಂಬರನಾಗಿ ನಿಲ್ಲಲು ಯೋಗ್ಯತೆ, ಪ್ರಾಥಮಿಕ ಶಿಕ್ಷಣ ಕಾಯದೆ ವ ನೇಮುಗಳ ಪ್ರಕಾರ ಇದ್ದ ಬಗ್ಗೆ ಪುರಾವೆ ಕೊಡಬೇಕಾದ್ದು ಚಿಟನೀಸ ಅಧಿಕಾರಿಗೆ ಅವಶ್ಯ ಕಂಡಲ್ಲಿ ಅಂಥ ಪುರಾವೆಯನ್ನು ನೇಮಣೂಕಿ ಪತ್ರಗಳ ತಪಾಸಣೆ ಕಾಲಕ್ಕೆ ಕೊಡಬೇಕಾಗುವದು

6. ಚುನಾವಣಿ ನೇಮ 3ನೇದರಂತೆ ಸ್ಥಾನಿಕ ಅಧಿಕಾರಿಯ ಅಧ್ಯಕ್ಷರು ಚಿಟನೀಸ ಅಧಿಕಾರಿಯಾಗುವರು

ಕಾರವಾರ,
23—4—45.

N. P. PAI.
C O, D L B, Kanara

A C. KITTUR.
PRESIDENT, D L B, Kanara

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು

ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಇದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತದೆ !

[illegible]-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ್ಸ [illegible]ಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿರುತ್ತಾರೆ
ವಿನಃ [illegible]ಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ವರೆಗೆ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಉಳಿತಾಯದ ಸಮಿತಿಯ ಪ್ರಕಟನೆ]

ಇದನ್ನು, ಪಾಂಡುರಂಗ ಕೃಷ್ಣ ಕಾಸರ್ಗೋಡ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೦-೯
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವದು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡಕೊಟ್ಟಕೊಳ್ಳತಕ್ಕದ್ದು

Reg. No. B 1270. Monday, 7th May, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೪೪

ಕುಮಟಾ:- ಸೋಮವಾರ, ತಾ. ೭ ಮಾಹೆ ಮೇ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧ ಇಂಚು ಉದ್ದ
೧ ಸಾರಿಗೆ ೬ ಆಣೆಯಂತೆ
ಸ್ಥಿರ ಜಾಹಿರಾತು ೧ ಇಂಚು ಉದ್ದ
೧ ಸಾರಿಗೆ ೪ ಆಣೆಯಂತೆ.
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಇನ್ನೊಂದು ಯುದ್ಧದ ಬಿತ್ತಿಗೆ!

(ನಿರೀಕ್ಷಕನು ಬರೆದುದು.)

ಕಳೆದ ವಾರ ಮಿತ್ರರಿಗೆ ವಿಜಯದ ಮೇಲೆ ವಿಜಯಗಳು ಸಿಕ್ಕಿರುವವಾದರೂ ಜರ್ಮನಿಯ ಪತನ ಬಹುತೇಕ ಪೂರ್ಣವಾಗಿರುವದಾದರೂ ಮುಂದಿನ ಯುದ್ಧದ ಪೂರ್ವ ಲಕ್ಷಣಗಳನ್ನು ಕಂಡು ನಾನು ಬಹಳ ವ್ಯಾಕುಲನಾಗಿದ್ದೇನೆ. ಇಟಾಲಿಯಲ್ಲಿ ಈಗ ೮-೧೦ ತಿಂಗಳಿಂದ ಮಿತ್ರರನ್ನು ತಡೆಗಟ್ಟಿ ನಿಂತುಕೊಂಡಿದ್ದ ೧೦ ಲಕ್ಷ ಜರ್ಮನ ಸೈನಿಕರು ಸೇ|| ಅಲೆಕ್ಝಾಂಡರರಿಗೆ ಬಿನ್-ಶರ್ತ ಶರಣಾಗತರಾಗಿದ್ದಾರೆ ಅವರ ಸಹಾಯಕ್ಕಿದ್ದ ನೌಕಾದಲವೂ ವಿಮಾನಗಳೂ ಮಿತ್ರರ ವಶವಾಗಿವೆ, ಮತ್ತು ಕಳೆದ ಬುಧವಾರ ಮಧ್ಯಾನ್ಹದಿಂದ ಇಟಾಲಿಯಲ್ಲೂ ಪಶ್ಚಿಮ ಆಸ್ಟ್ರಿಯಾದಲ್ಲೂ ಯುದ್ಧ ನಿಂತಿದೆ. ಅದೇ ಕಾಲಕ್ಕೆ ಬರ್ಲಿನ ನಗರವು ತಮ್ಮ ಕೈವಶವಾಯಿತೆಂದು ರಷ್ಯ-ಪ್ರಭು ಸ್ಟಾಲಿನ್ನರ ಪ್ರಕಟನೆ ಹೊರಟಿತು, ಮತ್ತು ಹಿಟ್ಲರ, ಗೋಬೆಲ್ಸ, ಕ್ರೆಬ್ಸ ವಗೈರೆ ನಾಝಿ ಪ್ರಮುಖರು ಆತ್ಮಹತ್ಯ ಮಾಡಿಕೊಂಡ ವಾರ್ತೆಯೂ ಹೊರಬಿತ್ತು. ಹಿಟ್ಲರನು ಸತ್ತನೆಂದು ತಿಳಿಸುವ ಬೇರೆ ಬೇರೆ ಸುದ್ದಿಗಳು ತೀರ ವಿಸಂಗತವಿರುತ್ತವೆ. ಹಿಟ್ಲರನು ಮಿದುಳಿನ ರಕ್ತಸ್ರಾವದಿಂದ ನರಳುತ್ತಿದ್ದಾನೆಂತಲೂ, ಒಂದೆರಡು ದಿನಗಳಲ್ಲಿ ಆತ ಸಾಯುವದು ಖಚಿತವೆಂತಲೂ ಒಪ್ಪಂದಕ್ಕಾಗಿ ಹೆಣಗಾಡುತ್ತಿದ್ದ ಹಿಮ್ಲರನು ತಾ ೨೬ಕ್ಕೆ ತ್ರಯಸ್ಥರ ಮುಖಾಂತರ ಮಿತ್ರ ಪ್ರಮುಖರಿಗೆ ತಿಳಿಸಿದ್ದನಾಗಿ ಒಂದು ವಾರ್ತೆ! ಹಿಟ್ಲರನು ಬಡಬಡಿಸುತ್ತ ಸಾಯುವನೆಂದು ಆತ ತಿರಸ್ಕಾರದ ಮಾತು ಆಡಿದ್ದನಾಗಿ ಇನ್ನೊಂದು ಸುದ್ದಿ! ಹಿಟ್ಲರನು ಟಿಯರಗಾರ್ಟೆನ ಎಂಬಲ್ಲಿ ಬೇನೆಯಿಂದ ಬಳಲಿ ಸತ್ತನೆಂತಲೂ, ಡಾ|| ಗೊಬೆಲ್ಸನು ಮರಣದ ಕಾಲಕ್ಕೆ ಆತನ ಬಳಿಯಲ್ಲಿದ್ದನೆಂಬುದೂ ಮತ್ತೊಂದು ವೃತ್ತ! ಹಿಮ್ಲರನೇ ಆತನನ್ನು ಕೊಂದಿರಬೇಕೆಂಬುದು ನುಗದೊಂದು ವರ್ತಮಾನ! ಈ ಎಲ್ಲ ವಾರ್ತೆಗಳ ಗೊಂದಲವನ್ನು ಪರಿಹರಿಸುವದಕ್ಕಾಗಿ ಹಿಟ್ಲರನು ಬರ್ಲಿನ ರಣರಂಗದಲ್ಲೇ ಕಾದಾಡುತ್ತ ತನ್ನ ದೇಹವನ್ನಿಟ್ಟನಾಗಿ ಬೇರೊಂದು ವಾರ್ತೆ ಪ್ರಕಟವಾಯಿತು ಈ ವಾರ್ತೆಯನ್ನು ರಷ್ಯರು ನಂಬಲು ಸಿದ್ಧರಿಲ್ಲ. ಹಿಟ್ಲರನ ಶವವು ದೊರೆತು, ಅದು ಅವನದೇ ಇರುತ್ತದೆಂದು ಗುರ್ತಿಸಲ್ಪಟ್ಟ ವಿನಹ ಹಿಟ್ಲರನು ಮಡಿದನೆಂದು ತಾವು ನಂಬಲಾರೆವೆಂದು ಹೇಳುತ್ತಾರೆ ಹಿಟ್ಲರನ ಶವ ಹುಡುಕುವದಕ್ಕಾಗಿ ರಷ್ಯರು ಪ್ರಯತ್ನ ಪಟ್ಟರಂತೆ. ಆದರೆ ಅದು ಅವರಿಗೆ ಸಿಗಲಿಲ್ಲ! ಸಿಗುವಂತೆಯೂ ಇಲ್ಲ!! ಹಿಟ್ಲರನ ಬರ್ಲಿನ ನಿವಾಸಸ್ಥಾನವಾದ ರ್ಯಾಕ ಕಚೇರಿಯು ಮೊನ್ನೆ ಶನಿವಾರದ ವರೆಗೂ ಉರಿಯುತ್ತಿತ್ತಂತೆ, ಅಲ್ಲೇ ಹಿಟ್ಲರನ ಪತನವಾಯಿತೆಂದು ಜರ್ಮನರ ಅಂಬೋಣ! ಹೀಗೇ ಮಾತಿನಲ್ಲಿ ನಂಬಿಗೆ ಹುಟ್ಟುವದಿಲ್ಲ. ಹಿಟ್ಲರನು ಹೀಗೆ ಸುಲಭವಾಗಿ ಮೃತ್ಯುವನ್ನಾಲಿಂಗಿಸುವಷ್ಟು ಅಳ್ಳೆದೆಯವನಲ್ಲ. ಮುಂದೆ ಕೂಟ ಯುದ್ಧ ನಡೆಸುವದಕ್ಕಾಗಿ ಮತ್ತು ಅದರ ನೇತೃತ್ವವನ್ನು ಸ್ವತಃ ವಹಿಸಿಕೊಳ್ಳುವದಕ್ಕಾಗಿ ಅವನು ಅದೃಶ್ಯನಾಗಿರಬೇಕೆಂದೇ ನನ್ನ ಸ್ಪಷ್ಟ ಅಭಿಪ್ರಾಯವಿದೆ. ಹಿಟ್ಲರನು ನಿಜವಾಗಿಯೂ ಮಡಿದಿದ್ದರೆ ಜರ್ಮನರು ಇನ್ನೂ ಹೋರಾಡುತ್ತಿದ್ದಿಲ್ಲ. ಇಟಾಲಿಯಲ್ಲೂ, ಡೆನ್ಮಾರ್ಕದಲ್ಲೂ, ವಾಯವ್ಯ ಜರ್ಮನಿಯಲ್ಲೂ ೨೦-೨೫ ಲಕ್ಷ ಜರ್ಮನರು ಶಸ್ತ್ರಸನ್ಯಾಸ ಮಾಡಿ ಮಿತ್ರ ಪಕ್ಷದ ಸೇನಾನಿಗಳಿಗೆ ಶರಣು ಹೋಗಿರುವಾಗ, ಝೆಕೋಸ್ಲೋವ್ಹಾಕಿಯಾದಲ್ಲಿದ್ದ ಜರ್ಮನರು ಇನ್ನೂ ಹೋರಾಡುತ್ತಿರುವದರಲ್ಲಿ ಗೂಢಾರ್ಥವುಂಟು. ಝೆಕೋಸ್ಲೋವ್ಹಾಕಿಯಾದೊಳಗಿನ ಜರ್ಮನರ ದುರ್ಗವು ಅಭೇದ್ಯವಿರುತ್ತದೆಂದು ಬ್ರಿಟಿಶ ಸುದ್ದಿ ಸಂಸ್ಥೆಯ ವಿಶೇಷ ಸುದ್ದಿಗಾರನಾದ ಸೀಗೆವರ್ಟನು ತಿಳಿಸುತ್ತಾನೆ. ಆ ದುರ್ಗದಲ್ಲಿ ನೆಲೆಸಲು ಹಿಮ್ಲರನೂ ಅವನ ಹಿಂದಿನಿಂದ ಹಿಟ್ಲರನ ಉತ್ತರಾಧಿಕಾರಿಯಾದ ಡೋಯೆನಿಟ್ಝನೂ ಮಿತ್ರಪ್ರತಿನಿಧಿಯಾದ ಸೇ|| ಮೊಂಟಗೊಮೆರಿಯವರೆದುರಿನ ಶರಣಾಗತಿಯ ಒಪ್ಪಂದದ ಮಾತುಕತೆ ನಡೆಸುತ್ತಿರುವಾಗಲೇ ಡೆನ್ಮಾರ್ಕದಲ್ಲಿದ್ದ ಜರ್ಮನರ ದೊಡ್ಡ ನೌಕಾಪಡೆಯು ಒಮ್ಮೆಲೇ ಅಲ್ಲಿಂದ ಹೊರಬಿದ್ದು ನಾರ್ವೇ ಅಂಚಿನ ಕಡೆ ಸಾಗಿದ್ದು ಒಂದು ದೊಡ್ಡ ಒಗಟು. ಇದು ಜಾಣತನಕ್ಕೆ ಹೋಗಿ ಮುಟ್ಟುತ್ತದೋ ಏನೋ! ಇಷ್ಟೆಲ್ಲ ಕಪಟನಾಟಕ ನಡೆಯುತ್ತಿದ್ದರೂ ಬ್ರಿಟಿಶ ಸೇನಾಪತಿ ಮೊಂಟಗೊಮೆರಿಯವರು ಜರ್ಮನಿಯ ಹೊಸ ಸರ್ವಾಧಿಕಾರಿ ಎಡ್ಮಿರಲ್ ಡೋಯೆನಿಟ್ಝನ ಒಪ್ಪಂದ ಮಾಡಿಕೊಳ್ಳುತ್ತಿದ್ದುದು ಹೇಗೆಂಬುದು ನನಗೆ ತಿಳಿಯದಾಗಿದೆ. ಡೋಯೆನಿಟ್ಝನು ಕಾಂಟ ಶ್ವೆರಿನ್ ಕ್ರೋಸಿಗನನ್ನು ತನ್ನ ವಿದೇಶ ಮಂತ್ರಿಯನ್ನಾಗಿ ಮಾಡಿಕೊಂಡಿದ್ದಾನೆ. ಹಿಂದಿನ ವಿದೇಶ ಮಂತ್ರಿ ರಿಬೆಂಟ್ರಾಪನು ಎಲ್ಲಿ ಪಲಾಯನ ಮಾಡಿದನೆಂಬುದರ ಪತ್ತೆಯಿಲ್ಲ! ಡಾ|| ಗೊಬೆಲ್ಸ ಮತ್ತು ಕ್ರೆಬ್ಸ ಇವರೂ ಆತ್ಮಹತ್ಯ ಮಾಡಿಕೊಂಡಿರುವ ವರ್ತಮಾನವುಂಟು ಆದರೆ ಅವರ ಶವಗಳ ಪತ್ತೆ ಹತ್ತಿರುವದಿಲ್ಲ. ಇಷ್ಟು ದಿನ ಮಿತ್ರರೊಡನೆ ಶರಣಾಗತಿಯ ಒಪ್ಪಂದದ ಚಿನ್ನಾಟವಾಡುತ್ತಿದ್ದ ಹಿಮ್ಲರನು ಈಗ ಜಪಾನಕ್ಕೆ ಪಲಾಯನ ಮಾಡಿರುತ್ತಾನೆಂದು ಸುದ್ದಿ ಬಂದಿದೆ. ಎಡ್ಮಿರಲ್ ಡೋಯೆನಿಟ್ಝನೂ ಜಲಮಾರ್ಗವಾಗಿ ಎಲ್ಲೋ ಅಜ್ಞಾತಸ್ಥಳಕ್ಕೆ ಹೊರಟುಹೋಗುವನಂತೆ! ಹೀಗೆಲ್ಲ ಚಿತ್ರವಿಚಿತ್ರ, ಪರಸ್ಪರ ವಿಸಂಗತ ಮತ್ತು ನಂಬಲು ತೀರ ಕಷ್ಟಕರವಾದ ಸುದ್ದಿಗಳು ಗೊಂದಲವನ್ನೆಬ್ಬಿಸಿವೆ. ಯಾವುದು ನಂಬಬೇಕು ಮತ್ತು ಯಾವುದನ್ನು ನಂಬಬಾರದೆಂಬುದು ನನಗೇನೂ ತಿಳಿಯದಾಗಿದೆ. ಆದರೆ ಶರಣು ಬರುವ ಎಲ್ಲ ಜರ್ಮನರೂ ಜರ್ಮನ ದಳಪತಿಗಳೂ ಬ್ರಿಟಿಶ-ಅಮೇರಿಕೆಯವರಿಗೇ ಶರಣು ಬರುತ್ತಾರೆ, ವಿನಹ ರಷ್ಯರಿಗೆ ತಲೆಬಾಗುವದಿಲ್ಲವೆಂಬುದೊಂದು ವಿಶೇಷವಾಗಿ ನಮೂದಿಸತಕ್ಕ ಸಂಗತಿ. ಮಿತ್ರರೊಡನೆ ತಮ್ಮ ಹೋರಾಟವಿಲ್ಲವೆಂದೂ ರಷ್ಯರಿಗೆ ಮಾತ್ರ ತಾವು ಸರ್ವಥಾ ಶರಣು ಹೋಗುವದಿಲ್ಲವೆಂದೂ ಜರ್ಮನಿಯ ಪ್ರಮುಖರು ಹೇಳುತ್ತಿದ್ದುದರಲ್ಲಿ ಏನೋ ಹೊಳವಿದೆ! ಇದರಲ್ಲಿ ಜರ್ಮನರದೇನಾದರೂ ದೊಡ್ಡ ಕುತಂತ್ರವುಂಟು. ಪಶ್ಚಿಮ ಜರ್ಮನಿಯಲ್ಲಿ ಸಾಗಿದ್ದ ಅಮೇರಿಕೆಯ ಸೈನಿಕರು ಎಲ್ಬೆಯ ಪಾರಿನ ರಷ್ಯ ಸೈನಿಕರನ್ನು ಕೂಡಿಕೊಂಡಿದ್ದರು. ಈಗ ಉತ್ತರ ಜರ್ಮನಿಯಲ್ಲಿ ಸಾಗುತ್ತಿದ್ದ ಬ್ರಿಟಿಶ ಸೈನ್ಯವೂ ಬಾಲ್ಟಿಕ ಸಮುದ್ರ ತೀರಾವಳಿಯ ಭಾಗದಲ್ಲಿ ರಷ್ಯರನ್ನು ಸಂಧಿಸಿದ ವಾರ್ತೆಯಿದೆ. ಮಿತ್ರಸೈನಿಕರೊಳಗೂ ರಷ್ಯ ಸೈನಿಕರೊಳಗೂ ಜರ್ಮನರ ಹೆಚ್ಚೆಚ್ಚು ಪ್ರದೇಶ ಹಸ್ತಗತ ಮಾಡಿಕೊಳ್ಳುವದಕ್ಕಾಗಿ ಒಂದು ಬಗೆಯ ದಂಡ್ಯಾಟ ನಡೆದಿದೆ! ಪೂರ್ವ ಜರ್ಮನಿಯ ಪೂರ್ಣ ದಾರಿಯನ್ನು ಹಿಡಿದು ರಷ್ಯರ ಒಂದು ಪಡೆಯು ಡೆನ್ಮಾರ್ಕ ಕಡೆ ಸಾಗಿದ್ದು ರಷ್ಯರಿಂದ ದ್ವೀಪದಲ್ಲಿ ವರ್ತಮಾನವಿದೆ ಇದರಿಂದ ಬಾಲ್ಟಿಕ ಸಮುದ್ರದ ಇಡೀ ದಕ್ಷಿಣ ತೀರವನ್ನು ತಾವೇ ಹಸ್ತಗತ ಮಾಡಿಕೊಳ್ಳಬೇಕೆಂದು ರಷ್ಯರು ನಿರ್ಧರಿಸಿರುವಂತೆ ತೋರುತ್ತದೆ. ರಷ್ಯ ಮಿತ್ರರೊಳಗಿನ ಈ ದಂಡ್ಯಾಟವು ಅಶುಭಸೂಚಕವಿರುತ್ತದಾಗಿ ನನ್ನ ಎದೆಗೆ. ಆಸ್ಟ್ರಿಯಾ ದೇಶವನ್ನು ಗೆದ್ದವರು ಮಿತ್ರರೂ ಅಹುದು, ರಷ್ಯರೂ ಅಹುದು. ಅಲ್ಲಿ ಏನೊಂದು ವ್ಯವಸ್ಥೆ ಮಾಡುವದಾದರೆ ಇತ್ತಂಡದವರೂ ಕೂಡಿ ಮಾಡುವದು ಯೋಗ್ಯವು ಮತ್ತು ಉಚಿತ. ಆದರೆ ರಷ್ಯರು ಮಿತ್ರರನ್ನು ಕೇಳದೆ ತಾವೊಬ್ಬರೇ ಅಲ್ಲಿ ಒಂದು ತಾತ್ಪೂರ್ತಿಕ ಸರಕಾರವನ್ನು ನೇಮಿಸಿದ್ದಾರೆ! ಈಗ ಬರ್ಲಿನದಲ್ಲೂ ಅವರು ಹೊಸ ಜರ್ಮನ ಸರಕಾರ ಸ್ಥಾಪಿಸಿದ್ದಾರೆ ಇದಕ್ಕೆ ಮಿತ್ರರ ಸಲಹೆಯನ್ನು ಕೇಳುವದಿಲ್ಲ, ಅನುಮತಿಯನ್ನು ಬೇಡುವದಿಲ್ಲ! ಜರ್ಮನರಿಂದ ರಷ್ಯರು ವಶಪಡಿಸಿಕೊಂಡ ಪ್ರದೇಶಗಳಲ್ಲಿ ರಷ್ಯರು ಬ್ರಿಟಿಶ, ಅಮೇರಿಕನ ಮೊದಲಾದ ಹೊರಗಿನ ಯಾವ ಸುದ್ದಿಗಾರರಿಗೂ ಪ್ರವೇಶ ಮಾಡಲು ಬಿಡುವದಿಲ್ಲವೆಂದು ಈಗ ೧-೨ ತಿಂಗಳಿಂದ ಮಿತ್ರರು ದೂರುತ್ತಿದ್ದಾರೆ ವಿಮೋಚಿಸಿದ ಭಾಗಗಳಲ್ಲಿ ಮಾತ್ರ ರಷ್ಯ ಸುದ್ದಿಗಾರರು ಯಥೇಚ್ಛ ಸಂಚರಿಸುತ್ತಾರೆ! ಮಿತ್ರರು ಜರ್ಮನರ ಕೈಯಿಂದ ಬಿಡಿಸಿದ ರಷ್ಯ ಸೆರೆಯಾಳುಗಳ ವ್ಯವಸ್ಥೆಯನ್ನು ಸರಿಯಾಗಿ ಮಾಡಲಿಲ್ಲವಾಗಿ ಈಗ ರಷ್ಯರು ಮಿತ್ರರಮೇಲೆ ದ್ರೋಹದ ಆರೋಪ ಮಾಡಿದ್ದಾರೆ! ಅತ್ತ ಸಾನಫ್ರಾನ್ಸಿಸ್ಕೋದಲ್ಲಿ ಕೂಡಿರುವ ಲೋಕಶಾಂತಿಯ ಪರಿಷತ್ತಿನಲ್ಲೂ ರಷ್ಯ-ಮಿತ್ರರೊಳಗೆ ಜಗ್ಗಾಟ ಪ್ರಾರಂಭವಾಗಿದೆ. ಈ ಪರಿಷತ್ತಿನಲ್ಲಿ ಪೋಲಂಡಕ್ಕೆ ಇನ್ನೂ ಸ್ಥಾನ ಸಿಕ್ಕಿಲ್ಲ! ಅಲ್ಲಿ ಮಿತ್ರರಿಗೆ ಒಪ್ಪಿಗೆಯಾದ ಸರಕಾರ ಸ್ಥಾಪನೆಯಾದರೆ ಮಾತ್ರ ಪೋಲಂಡಕ್ಕೆ ಪ್ರಾತಿನಿಧ್ಯ ಕೊಡಲಾಗುವದೆಂದು ಬ್ರಿಟಿಶ-ಅಮೇರಿಕೆಯವರ ಹಟ! ಬ್ರಿಟಿಶ-ಅಮೇರಿಕೆಯವರು ಕೋಟ್ಯಾವಧಿ ಪೌಂಡುಗಳಷ್ಟು ಬಂಡವಾಳ ತೊಡಗಿಸಿದ ಅರ್ಜೆಂಟಿನಾ ದೇಶಕ್ಕೆ, ರಷ್ಯರ ವಿರೋಧ ಲೆಕ್ಕಿಸದೆ ಮಿತ್ರರು ಪ್ರಾತಿನಿಧ್ಯ ಕೊಟ್ಟಿದ್ದಾರೆ! ಈ ಪರಿಷತ್ತು ಸಮಾಧಾನಕರವಾಗಿ ಸಾಗುವ ಲಕ್ಷಣ ಕಾಣುವದಿಲ್ಲ ರಷ್ಯರು ಬೇಗನೆ ಅದಕ್ಕೆ ಬಹಿಷ್ಕಾರ ಹಾಕುವ ಸಂಭವವಿದೆ. ರಷ್ಯರು ಮಿತ್ರರ ಅಪೇಕ್ಷೆಯಂತೆ ಮೇ ತಾ. ೧ಕ್ಕೆ (ಮೇ ಹಬ್ಬದ ಕಾಲಕ್ಕೆ) ಜಪಾನರ ವಿರುದ್ಧ ಯುದ್ಧ ಸಾರುವರೆಂದು ಕೆಲವರು ಪ್ರತೀಕ್ಷಿಸಿದ್ದರು ಆದರೆ ಹಾಗೇನೂ ಆಗಿಲ್ಲ. ಚೀನದಲ್ಲಿದ್ದ ಕಮ್ಯುನಿಸ್ಟರನ್ನು ಹತ್ತಿಕ್ಕುವದಕ್ಕಾಗಿ ಅಮೇರಿಕೆಯವರು ಚಾಂಗ-ಕೈ-ಶೇಕರಿಗೆ ಬೇಕಾದ ಸಹಾಯ ನೀಡಲು ಒಪ್ಪಿಂದ್ದಾರೆಂತಲೂ ಅದರಿಂದ ಕಮ್ಯುನಿಸ್ಟ-ಪಕ್ಷಪಾತಿ ರಷ್ಯರಿಗೂ ಅಮೇರಿಕೆಯರಿಗೂ ಚೀನದಲ್ಲಿ ಬೇಗನೆ ತಿಕ್ಕಾಟವಾಗುವದೆಂತಲೂ ಬಲ್ಲವರು ಹೇಳುತ್ತಾರೆ ಇಂಥ ಪ್ರಸಂಗದಲ್ಲಿ ರಷ್ಯರು ಜಪಾನರನ್ನು ಪ್ರತಿಭಟಿಸುವರೆಂದು ಹೇಳಬಾರದು ತದ್ವಿರುದ್ಧ ಯುರೋಪದ ಪಾಲುಪಟ್ಟಿಗಾಗಿ ರಷ್ಯ-ಮಿತ್ರರೊಳಗೇ ತಿಕ್ಕಾಟವುಂಟಾಗಿ ಇನ್ನೊಮ್ಮೆ ಮಧ್ಯಯುರೋಪದಲ್ಲಿ ರಣಚಂಡಿಯ ತಾಂಡವ-ನೃತ್ಯ ಎಲ್ಲಿ ನಡೆಯುವದೋ ಎಂದು ನನಗೆ ಅಂಜಿಕೆಯುಂಟಾಗಿದೆ ಜಗನ್ನಿಯಾಮಕನ ಸಂಕಲ್ಪವೇನುಂಟೆಂಬುದು ಯಾರು ಬಲ್ಲರು?

(ಐದನೇ ಪುಟದಿಂದ ಮುಂದರಿಸಿದ್ದು)

೧೯೪೪-೪೫ನೇ ಸಾಲಿನ ಹಾಯಸ್ಕೂಲ ಮತ್ತು ಮಾಧ್ಯಮಿಕ ಶಾಲಾ ಶಿಷ್ಯವೃತ್ತಿಗಳು ಈ ಕೆಳಗಿನ ವಿದ್ಯಾರ್ಥಿಗಳಿಗೆ ದೊರೆತಿವೆ - **ಹಾಯಸ್ಕೂಲ ಶಿಷ್ಯವೃತ್ತಿಗಳು:—** ೧ ವಾಸುದೇವ ಧ ಇಡಗುಂಜಿ (ಮಾಣಿಕಾಂಬಾ) ೨ ವಸಂತ ಪಿ. ನಾಯಕ (ಸದಾಶಿವಗಡ) ೩ ಗಣಪತಿ ವೆಂ. ಕಲ್ಗುಣಿ (ಸೇಂಟ ಥೋಮಸ್) ೪. ಶ್ರೀಪಾದ ಉ ಬಾಡ್ಕೋಳಕರ (ಕಾರವಾರ ಹಾಯಸ್ಕೂಲ) ೫. ರುಮಾನಾ ಜೋಸೆಫ ಡಿಕೋಸ್ತ (ಕಾ ಹಾ). ೬ ವಿದ್ಯಾರಣ್ಯ ಮ ಹೆಬ್ಬಾರ (ಹಿಂ. ಹಾ) ೭ ಪೀರು ಶಂಕರ ಬೋರಕರ (ಪೀಪಲ್ಸ ಇಂ. ಸ್ಕೂ) ಅಂಕೋಲಾ) ೮. ಶೇಕ ಕಾಶಿಂ ಶೇಕ ಹಸನ (ಎಡ್ವರ್ಡ) ೯. ಸಯ್ಯದ ಅಹಮದ ಸಯ್ಯದ ಅಬ್ದುಲ್ಲಾ (ಕಾ ಹಾ) ೧೦. ಅಬ್ದುಲ್ ರಹಿಮಾನ ರ. ಮಾಂಡಲಿಕ (ಕಾ ಹಾ)

ಮಾಧ್ಯಮಿಕ ಶಾಲಾ-ಶಿಷ್ಯವೃತ್ತಿಗಳು:— ೧ ಶ್ರೀನಿವಾಸ ಕೇ ಶೆಟ್ಟಿ (ಹಳಿಯಾಳ) ೨ ಗುರುದಾಸ ಲ ಪೈಲೂರ (ಬಾಜಾರ ಶಾಲೆ, ಕಾರವಾರ) ೩ ವಿನಾಯಕ ಸು ನಾಯ್ಕ (ಹೆಗಡೆ) ೪ ಸದಾನಂದ ಮ. ಅಬಾಂ (ಬಾಜಾರ ಶಾಲೆ, ಕಾರವಾರ) ೫ ವಿಶ್ವನಾಥ ನಾ ವಾ (೧ನೇ ನಂ ಕನ್ನಡ ಶಾಲೆ, ಅಂಕೋಲಾ) ೬ ವಿಟ್ಠಲರಾ ಗಾಂವಕರ (ಅಗರಗೋಣ). ೭ ಶಾಂತಾ ವೆಂ ಶೆಟಗಿ (೧ನೇ ನಂ ೪ ಶಾಲೆ, ಅಂಕೋಲಾ) ೮ ಶಾಂತಾ ಕೃ. ನಾಯಕ (ಸದಂ ಶಾಲೆ) ೯ ಶಾರದಾ ಸದಾಶಿವ ಕಾಶಿಮ ಸಾಬ ದೇಸಾಯಿ (ಕನ್ಯಾ ಸಹಕಾರಿ ಶಾಲೆ, ಕಾರವಾರ) ೧೦ ಮಹಮದ ಸಾಬ ದಫೇದಾರ (ಉರ್ದು ಶಾಲೆ, ಅಂಕೋಲಾ) ೧೧ ಶಾಂತಾರಾಮ ಭಾ ನಾಯಕ (ಸದಂ ಶಾಲೆ)

ಕನ್ನಡ ಅಭ್ಯಾಸ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೂ ಸುಗಂಧ! ಬೆಲೆ ರೂ ೧-೮-೦

[illegible], ಕುಮಟಾ

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. K.

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR, 25-4-1945.

K VAMAN SHENAI,

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಬಹಳ ಮುಗಿಲುಗಳು ನೆರೆದು ಗಳಾಗುತ್ತಿವೆ ಮಳೆಯಾಗುವ ಚಿನ್ಹಗಳೂ ಕಾಣುತ್ತಿವೆ ಆದರೆ ಮಳೆ ಮಾತ್ರ ಆಗುವದಿಲ್ಲ.

ಸರಕಾರಿ ನಿಯಂತ್ರಣಕ್ಕೊಳಪಟ್ಟ ಸೀಮೆ ಎಣ್ಣೆ ಈಗ ಮಾರ್ಕೆಟ್ಟಿಗೆ ಸಿಗುವದಿಲ್ಲ! ಎಣ್ಣೆಯೇನೋ ಬಂದಿದೆಯಂತೆ ಆದರೆ ಮಾರ್ಕೆಟ್ಟಿಗೆ ಅಷ್ಟಕ್ಕೆ ಸಿಕ್ಕಿಲ್ಲೆಂದು ಹೇಳುತ್ತಾರೆ! ಗಾಂಧಾರಿ ಇಲ್ಲದ ಕೊಟ್ಟ ಎಣ್ಣೆಯ ಧಾರಣೆ ಟಿನ್ನು ಒಂದಕ್ಕೆ ರೂ ೨–೩ (ಅಂದರೆ ರತ್ತಲ ೧ಕ್ಕೆ ೧೦ ಆಣೆಯಷ್ಟು) ಉಂಟು.

ಆಚೆಯ ಸೋಮವಾರ ನಡೆದ ಕುಮಟಾ ನಗರ ಸಭೆಯ ಅಧ್ಯಕ್ಷಪದದ ಚುನಾವಣೆಗೆ ಶ್ರೀ [illegible] ಹುರಿಯಾಳುಗಳಾಗಿ ನಿಂತಿದ್ದಿಲ್ಲವೆಂದೂ, [illegible] ತಮ್ಮ ಹೆಸರನ್ನು ಕೆಲವರು ಸೂಚಿಸಿ ತಮ್ಮ ಅನುಮೋದನೆ ಮತಕ್ಕೆ ಹಾಕಲೇಬೇಕೆಂದು ಹಟ ಹಿಡಿದದ್ದರಿಂದ ಸೂಚನೆ-ಅನುಮೋದನೆಗಳ ಮೇಲೆ ಮತ ಕೇಳಬೇಕಾದ ಪ್ರಸಂಗ ಬಂತೆಂದೂ, ತಾವು ತಮ್ಮ ಗೆಳೆಯರೂ [illegible] ಗೋಯಿಂದ ಸ್ಪರ್ಧೆಗೆ ಮತ ಕೊಟ್ಟೆವೆಂದೂ [illegible] ವಿಮಲಾನಂದ [illegible] ತಿಳಿಸುತ್ತಾರೆ.

ಸರಕಾರದವರ ಭತ್ತ-ಖರೇದಿಯ ವಿಚಿತ್ರ ಕ್ರಮದಿಂದ ಭೂಮಾಲೀಕರಿಗೆ ಗೇಣಿ ಅಕ್ಕಿ ವಸೂಲ ಮಾಡಲಿಕ್ಕೂ ಅವನ್ನು ಮನೆಗೆ ತರಲಿಕ್ಕೂ ಬಹಳ ಕಷ್ಟವಾಗಿದೆ! ಹೆಚ್ಚಿನ ಭತ್ತ ಖರೇದಿಸಿ ಮೋಟಾರುಗಳಿಂದ ಸಾಗಿಸಲ್ಪಡುವ [illegible] ಹಾಕಿಕೊಂಡಿರುವ ಗ್ರಾಮಸ್ಥರು 'ಈವರೆಗೆ ಗೇಣಿ ಅಕ್ಕಿ ಕೊಡಬೇಡಿರಿ, [illegible] ಅವರಿಗೆ ಗೇಣಿ ಸಲ್ಲಿಸಿರಿ' ಎಂದು ಬೋಧಿಸುತ್ತಿರುವದು ಈಗ ಜನ ಜನಿತವಾದ ವಿಷಯ. ಇದರಿಂದ ರೈತರು ಒಳಗೆ [illegible] ಗಿದ್ದಾರೆ! 'ಸರಕಾರದವರು ಇದ್ದ ಅಕ್ಕಿ-ಭತ್ತ ಕೊಂಡು ಹೋಗಿದ್ದಾರೆ ನಿಮಗೆಲ್ಲಿಂದ ಅಕ್ಕಿ ಕೊಡುವದು?' ಎಂದು ಅವರು ಒಡೆಯರಿಗೆ ಹೇಳಿ, ಸರಕಾರಕ್ಕೆ ಕೊಟ್ಟು ಉಳಿದ ಇದ್ದ ಅಕ್ಕಿ ಭತ್ತ ಕಳ್ಳಪೇಟೆಯಲ್ಲಿ ಮಾರುತ್ತಾರೆ! ಮಾನ್ಯ ಕಲೆಕ್ಟರ ಸಾಹೇಬರು ೧೦–೧೪–೪೫ ರಂತೆ ಒಡೆಯರಿಗೆ ಗೇಣಿಯನ್ನು ನಗದಿಯಿಂದ ಸಲ್ಲಿಸದಿರುತ್ತಾರೆ, ಕಳ್ಳ ಪೇಟೆಯಲ್ಲಿ ಮಾರಿ [illegible] ಖಾಸಗಿ ಲಾಭ ಮಾಡಿಕೊಳ್ಳಬಾರದು ಎಂದು ಅವರು ಒಳ್ಳೇ ಪಕ್ಕಾ ಮಾಡಿಕೊಂಡಿದ್ದಾರೆ! ಸರಕಾರದವರ ಭತ್ತ ಖರೇದಿಯ ಲೆಕ್ಕವಿಟ್ಟಿಯೂ [illegible] ಕೊಡದ [illegible] (ಗ್ರಾಮಸ್ಥರೇ ಅವರಿಗೆ ಸಾಕ್ಷಿ ಕೊಡುತ್ತಾರೆ!) ಒಂದು ಭೂಮಿಯು [illegible] ಸರಕಾರಕ್ಕೆ ಬಂದರೆ ಭತ್ತ ಕೊಡತಕ್ಕದ್ದೆಂದಾಗಿ ಈ ಪಟ್ಟಿ ಬಿಲ್ಲುಂಟು! ಎಲ್ಲಿಂದ ಅವರು ಭತ್ತ ತರಬೇಕು? ಎಂಬುದು ಅಧಿಕಾರಿಗಳಿಗೆ ಗೊತ್ತು! ಇಂಥ ಪಟ್ಟಿಯಲ್ಲಿ ಕಾಣಿಸಿದ ಅಕ್ಕಿ ಭತ್ತ ಸರಕಾರಕ್ಕೆ ಸಲ್ಲಿಸಿದವರಿಗೆ ಮಾತ್ರ ತಮ್ಮ ಗೇಣಿಯ ಅಕ್ಕಿ ಭತ್ತಗಳನ್ನು ಗ್ರಾಮಸ್ಥರಿಂದ ಪಡೆದು ಗ್ರಾಮಸ್ಥರು ಭೂಮಾಲೀಕರಿಗೆ ಕೊಡಬೇಕು ಎಂದು ಇಂಥ ಭೂಮಿ ಇದ್ದವರ ಕಷ್ಟ ಭೂಮಿ ಇಲ್ಲದವರ ಕಷ್ಟಕ್ಕಿಂತ ಹೆಚ್ಚಾಗಿದೆ! ಇಷ್ಟರಿಂದ ತಮ್ಮ ನಿಯಂತ್ರಣ ಯೋಜನೆಯನ್ನೂ ಅಕ್ಕಿ ಭತ್ತಗಳ ಖರೇದಿ-ವಿಕ್ರೀ-ಪ್ರವರ್ತನ ಕ್ರಮವನ್ನೂ ಇವರು ದಯವಿಟ್ಟು ಹೊಸದಾಗಿ ಪರೀಕ್ಷಿಸ ಬೇಕಾಗಿದೆ!

ಈಗ ನಾಲ್ಕು ವರ್ಷಗಳಿಂದ ನೆಲ್ಲೀಕೇರಿಯಲ್ಲಿ ಶ್ರೀ ಸ್ವಾಮಿ ವಿಮಲಾನಂದ ಇವರು ವಾಸ್ತವ್ಯ ಮಾಡಿಕೊಂಡಿದ್ದು ಅನೇಕ ಭಾವಿಕರು ಅವರಿಂದ ಧರ್ಮೋಪದೇಶವನ್ನು ಪಡೆಯುತ್ತಿದ್ದಾರೆ. ಶ್ರೀ ಸ್ವಾಮಿಗಳು ತಮ್ಮ ಕಥೋಪದೇಶದಿಂದ ನೈತಿಕ, ಮಾನಸಿಕ ರೋಗಗಳನ್ನು ಪರಿಹರಿಸುತ್ತಾ ಬಂದು ಹಲವರ ಕಲ್ಯಾಣ ಮಾಡುತ್ತಿದ್ದಾರೆ. ಶ್ರೀ ಸ್ವಾಮಿಗಳವರ ವಿವಿಧ ಕಾರ್ಯಕಲಾಪಗಳಿಗೆ ಇಲ್ಲಿ ಅವರ ಭಕ್ತವೃಂದವು ಒಂದಾಗಿ ಕೂಡಿ ಸ್ವಾಮಿಗಳವರ ಯೋಗಕ್ಷೇಮಕ್ಕಾಗಿ ಸಹಾಯ ಮಾಡಬೇಕಾಗಿದ್ದ ಒಂದು ಆಶ್ರಮದ ಅಗತ್ಯವುಂಟು. ಅಂಥದೊಂದು ಆಶ್ರಮ ಸ್ಥಾಪಿಸಲು ಇಲ್ಲಿಯ ಹಲವು ಭಕ್ತರು ಪ್ರಯತ್ನ ಸಂಗ್ರಹಿಸಿದ ಸಂಕಲ್ಪಿಸಿ ನಿಧಿಸಂಗ್ರಹ ಕಾರ್ಯ ಕೈಕೊಂಡಿದ್ದಾರೆ. ಸಾರ್ವಜನಿಕ [illegible] ಪ್ರಚಾರ ಮಾಡುವ ಅಂಥ ಆಶ್ರಮಗಳ ಸ್ಥಾಪನೆಯನ್ನು ಅರಿತು ಸಮಸ್ತರೂ ಈ ನಿಧಿಗೆ ಕೊಡುಗೆಯಿಂದ ಧನಸಹಾಯ ಮಾಡಬೇಕಾಗಿ ಅಪೇಕ್ಷೆಯುಂಟು.

ರೂ ೨೦೦ ರ ವರೆಗೆ ಸಂಬಳ ಪಡೆಯುವ ಸರಕಾರಿ ನೌಕರರಿಗೆ ಕೊಡುವ ತುಟ್ಟಿ ಪಗಾರ, ಯುದ್ಧ ಭತ್ಯೆಗಳನ್ನು ಮುಂಬಯಿ ಸರಕಾರವು ಹೆಚ್ಚಿಸಿದೆ. ರೂ ೪೦ಕ್ಕೂ ಕಡಿಮೆ ಮಾಸಿಕ ವೇತನ ಪಡೆಯುವವರಿಗೆ ರೂ ೧೩ರಂತೆ ಮತ್ತು ರೂ ೪೦ರಿಂದ ರೂ ೧೦೦ರ ವರೆಗೆ ವೇತನ ಪಡೆಯುವವರಿಗೆ ರೂ ೧೮ರಂತೆ ಮತ್ತು ರೂ ೧೦೦ರಿಂದ ೨೦೦ರ ವರೆಗೆ ಪಗಾರ ಪಡೆಯುವ ನೌಕರರಿಗೆ ಅದರ ಸಂಬಳದ ಶೇಕಡಾ ಹತ್ತರಷ್ಟು ಭತ್ತೆ ಕೊಡಬೇಕೆಂದು ನಿರ್ಣಯಿಸಿದೆ.

ಇದೇ ಕಳೆದ ನವ ವೃತ್ತ ರವಿವಾರ ೧೦ರಂದು ನಡೆದ ಶ್ರೀ ಕ್ಷೇತ್ರ ಗೋಕರ್ಣದಲ್ಲಿ ನೆರೆದ ಮಹಾಶಿವರಾತ್ರಿಗೆ ಸುಪ್ರಸಿದ್ಧ ಭಟ್ಟರು ಚೆನ್ನಕೇಶವ ಮಹಾಯಜ್ಞ ನಡೆಸಿದರು. ಅವರ ಮಾತ್ರವಲ್ಲದೆ ವೇದಶಾಸ್ತ್ರ ಪಂಡಿತರು ಈ ಯಜ್ಞದಲ್ಲಿ ಅಧ್ವರ್ಯುಗಳಾಗಿದ್ದರು. ಈ ಯಜ್ಞದ ಕಾಲಕ್ಕೆ ಅನೇಕ ಶಾಸ್ತ್ರ ವಿಷಯಗಳ ಚರ್ಚೆಯಾಯಿತು. ಒಂದು ದಿನ "ದ್ವೈತ–ಅದ್ವೈತ" ಎಂಬ ವಿಷಯದ ಮೇಲೆ ಪ್ರಚಾರಕ ಪುಸ್ತಕದ ಬಗ್ಗೆ ವಿದ್ವಜ್ಜನರ ಸಭೆಯಲ್ಲಿ ಚರ್ಚೆಯಾಗಿ ಸಕಲ ವೈದಿಕ ಧರ್ಮೀಯರು ದ್ವೈತ-ಸಿದ್ಧಾಂತ-ಗುರುತ ಪಂಚಾಂಗವನ್ನೇ ಗ್ರಾಹ್ಯ ಮಾಡತಕ್ಕದ್ದೆಂದು ನಿರ್ಣಯವಾಯಿತು.

ಹೊನ್ನಾವರ— ಕುಮಟಾ ತಾಲೂಕು ಈ ಜಿಲ್ಲೆಯಲ್ಲಿ ಅತಿ ದೊಡ್ಡ ತಾಲೂಕು. ಆದರೂ ಇನ್ನಿತರ ತಾಲೂಕುಗಳಲ್ಲಿದ್ದಂತೆ ಈ ತಾಲೂಕು ಎರಡೂ ಮಾರ್ಗಗಳಲ್ಲಿ ವಿಶ್ರಾಂತಿಗೃಹಗಳಿಲ್ಲ! ಇಲ್ಲಿ ಮಾತ್ರ ಒಂದು ವಿಶ್ರಾಂತಿಗೃಹವಿದೆ; ಕಾಸರಕೋಡದಲ್ಲಿಲ್ಲ. ಆದರಿಂದ ಕಾಸರಕೋಡದಲ್ಲಿ ಹಾದಿ ದಾಟಲು ಬಂದ ಪ್ರಯಾಣಿಕರು ಬಿಸಿಲು, ಮಳೆ, ಗಾಳಿಗಳಲ್ಲಿ ಬಿದ್ದು ಬಹಳ ಕಷ್ಟಪಡಬೇಕಾಗುತ್ತದೆ. ಇಂಜೀನಿಯರ ಇಲಾಖೆಯವರು ಈ ಕೊರತೆಯನ್ನು ಬಗೆಹರಿಸಲಾರರೇ? ಈ ತಾಲೂಕಿನಲ್ಲಿ ನೋಡತಕ್ಕವರು ಕಾರವಾರಕ್ಕೆ ಹೋಗಲಿಕ್ಕೆ [illegible] "ಇನಾಮು" ಕೊಡಬೇಕೆಂದು ಪ್ರಯಾಣಿಕರನ್ನು ಪೀಡಿಸುತ್ತಾರೆಂದು ಪ್ರವಾದವುಂಟು. ಅಧಿಕಾರಿಗಳು ಚೌಕಶಿ ಮಾಡಿ ಇಂಥ ಉಪಟಳವನ್ನು ನಿಲ್ಲಿಸಬೇಕಾಗಿ ಅಪೇಕ್ಷೆ.

ಶಿರಸಿ— (ತಾ ೪–೫–೪೫) ಊರಲ್ಲೀಗ ನಿಯಂತ್ರಣ ದರದಿಂದ ಸಕ್ಕರೆಯು ಸಿಗುವದಿಲ್ಲ. ಕಳ್ಳಪೇಟೆಯಲ್ಲಿ ರೂ ೧೬–೧೭ ಕೊಟ್ಟರೆ ಮಾತ್ರ ಸಕ್ಕರೆಯ ಚೀಲ ಸಿಗುತ್ತದೆ! ಸೆಂಟ್ರಲ ಬೇಂಕಿನವರು ಕಳ್ಳತನ ಮಾಡಿದ್ದು ಇಲ್ಲೆಂದು ಜಿಲ್ಲಾ ಸರಕಾರಿ ಅಧಿಕಾರಿಗಳು ತಿಳಿಸುತ್ತಾರೆ. ಹಂಗಾಮಿ ಬಂದ ಬಂದ ಸಕ್ಕರೆಯು ಎಲ್ಲಿ ಹೋಯಿತು, ಯಾರಿಗೆ ಕೊಟ್ಟಿತು, ಮತ್ತು ಅದು ಈಗ ಎಲ್ಲಿಯದು ಎಂಬುದರ ಬಗ್ಗೆ ಪತ್ತೆಯಾಗಬೇಕಾಗಿದೆ. ಹೊರಗಿಂದ ಬಂದ ಸಕ್ಕರೆಯೆಷ್ಟು, ಯಾರ್ಯಾರ ಮುಖಾಂತರ ಅದರ ವಿನಿಯೋಗ ಹೇಗಾಯಿತು ಎಂಬುದರ ಚೌಕಶಿ ಮಾಡಿದಲ್ಲಿ ಎಲ್ಲಿ ಮತ್ತು ಯಾರು ಕಳ್ಳತನ ಮಾಡುತ್ತಿದ್ದಾರೆಂಬುದರ ಪತ್ತೆಯಾಗುವಂತಿದೆ.

ಜನರಿಗೆ ಸಕ್ಕರೆ, ಸೀಮೆ ಎಣ್ಣೆ, ಬಟ್ಟೆ ಮುಂತಾದ ವಸ್ತುಗಳು ಸಿಗದ್ದರಿಂದ, ಸೀಮೆ ಎಣ್ಣೆಯಿಂದ ಕಳ್ಳ ಪೇಟೆ ನಿರ್ಮಾಣವಾಗುವದರ ಬದಲು ಅದಕ್ಕೆ ಒಳ್ಳೇ ಪ್ರೋತ್ಸಾಹವೇ ಸಿಕ್ಕಿದೆ. ಜಿಲ್ಲಾಧಿಕಾರಿ ಸಾಹೇಬರು ಚೌಕಶಿ ಮಾಡಿ ಈ ವಸ್ತುಗಳ ಮಾರಾಟ ಮಾಡಿಕೊಳ್ಳುವುದು ಜನರಿಗೆ ಬೇಕಷ್ಟು (ಸಾಕಷ್ಟು) ಸಾಮಗ್ರಿಯ ಪ್ರಕಟ ಮಾಡುವ ವ್ಯವಸ್ಥೆ ಮಾಡದಿದ್ದರೆ ಕಳ್ಳ ಪೇಟೆ ಎಂದೂ ನಿರ್ನಾಮವಾಗುವಂತಿಲ್ಲ.

ಕಳೆದ ತಾ ೨೭ಕ್ಕೆ ಜಿಲ್ಲಾ ಬೇಸಾಯಗಾರ ಸಂಘದ ಕಾರ್ಯಕಾರಿ ಮಂಡಳದ ಸಭೆಯಾಗಿ ನಿಯಮಾವಳಿ— ಮಂಡಳದವರು ತಯಾರಿಸಿದ ನಿಯಮಗಳು ಮಂಜೂರ ಮಾಡಲ್ಪಟ್ಟವು; ಅದಕ್ಕೆ ಕೆಲವರ ಆಕ್ಷೇಪ ಕಾಯಿದೆಯಂತೆ ಪಕ್ಕಾಲ ಮಾಡಲು ಬರುವದಿಲ್ಲವೆಂಬುದರ ಕಾರಣ ಯೋಗ್ಯ ನ್ಯಾಯಾಸನಗಳಲ್ಲಿ ದಾವೆ ಮಾಡಿ ನಿರ್ಣಯ ಪಡಕೊಳ್ಳಬೇಕೆಂದು ಗೊತ್ತಾಯಿತು ಮತ್ತು ಅದರ ವೆಚ್ಚದ ಬಗ್ಗೆ ನಿಧಿ ಕೂಡಿಸುವ ತೀರ್ಮಾನವಾಯಿತು. ತಾಲೂಕ ಸಂಘಗಳು ತಾ ೧೦–೫–೪೫ರೊಳಗೆ ಜಿಲ್ಲಾ-ಸಂಘಕ್ಕೆ ತಮ್ಮ ಪ್ರವೇಶಧನ ಕಳುಹಿಸಿ, ತಾ ೨೦–೫ ೪೫ ರೊಳಗೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳಿಸಬೇಕೆಂಬುದೂ ನಿರ್ಣಯವಾಯಿತು.

(ತಾ ೨೭–೪–೪೫) ಸರಕಾರದವರನ್ನ ಅಂಗಡಿಗಳಲ್ಲಿ ಎಲ್ಲಿಯೂ ಬಟ್ಟೆ ಸಿಗುವದಿಲ್ಲವಂತೆ! ಇವರು ಚಲಿಯೇ ಬಟ್ಟೆ ಕೊಡಬೇಕೆಂದರೆ ಅವರ ಬಳಿ ಬಂದಿಲ್ಲೆಂದು ಹೇಳಿ ತಮಗೆ ಕಳಿಸಿಕೊಟ್ಟು, ಅದನ್ನು ಹೊಂದಿಸಿ ತಮ್ಮ ಆಪ್ತ-ಮಿತ್ರ, ಬಂಧು ಬಳಗದವರಿಗೆ ಕೊಡುತ್ತಾರೆಂತಲೂ ಒಂದು ಪ್ರವಾದವುಂಟು. ಜಿಲ್ಲಾಧಿಕಾರಿ ಈ ಕಳ್ಳತನ ನಿಲ್ಲಿಸಬೇಕು.

ಕಾರವಾರ— (ತಾ ೨೭–೪–೪೫) ಕಳೆದ ವಾರ ನಿರೀಕ್ಷಿಸಿದಂತೆ ರಾ॥ ರಾಮಚಂದ್ರ ಪ್ರಭು ಶಿರೂರ ಇವರು ನಿರ್ದೋಷಿಗಳೆಂದು ಜಿಲ್ಲಾ ನ್ಯಾಯಾಧೀಶರು ಸೋಮವಾರ ತೀರ್ಪು ಕೊಟ್ಟು ಅವರ ಬಿಡುಗಡೆ ಮಾಡಿದ್ದಾರೆ.

ಜಿಲ್ಲಾಧಿಕಾರಿ ಈಗ ಸಿದ್ದಾಪುರಕ್ಕೆ ಹೋಗಿದ್ದು ಮೇ ತಾ ೬ ರ ವರೆಗೆ ಅವರು ಅಲ್ಲಿರುವರು. ತಾ. ೭ಕ್ಕೆ ಇಲ್ಲಿಗೆ ಮರಳಿಬಂದು ಅದೇ ತಾ ೧೦ಕ್ಕೆ ಮಹಾಬಲೇಶ್ವರಕ್ಕೆ ಹೋಗುವರು ಮಹಾಬಲೇಶ್ವರದಿಂದ ತಾ ೨೭ಕ್ಕೆ ಮರಳಿ ಬರುವರು.

(೧ನೇ ಪುಟದ ಮೇಲಿ ಮುಂದರಿಸಿದೆ).

—R—

" ಸೀಧಾ ಕಾರ್ಡ ಕೊಟ್ಟ ಯಾವದೇ ಕುಟುಂಬದಲ್ಲಿ ಸೇರಿದ ಯಾವದೇ ಮನುಷ್ಯನ ಕುಟುಂಬದ ಮೆಂಬರಿಯು ಯಾವದೇ ಕಾಲದಲ್ಲಿ ಅಂತ್ಯವಾದರೆ, ಕುಟುಂಬದ ಯಜಮಾನನು ಯಾ ಅವನ ಗೈರ ಹಾಜರಿಯಲ್ಲಿ ಕುಟುಂಬದ ವೈವಾಟದಾರನು ಅಂಥ ಮನುಷ್ಯನ ಕುಟುಂಬದ ಮೆಂಬರಿಯು ಅಂತ್ಯವಾದ ನಂತರದ ಯಾವದೇ ಸೀಧಾ ಅವಧಿಯಲ್ಲಿ ಅವನ ಬಗ್ಗೆ ಮಂಜೂರಾದ ಪ್ರಮಾಣಕ್ಕೆ ಬಿಟ್ಟು ಉಳಿದ ಯಾವದೇ ಸಾಮಾನು ಪಡೆಯಲು ಯಾ ದೊರಕಿಸಿಕೊಳ್ಳಲು ಬರುವದಿಲ್ಲ. ಮತ್ತು ಅವನ ಮೆಂಬರಿಯು ಅಂತ್ಯವಾದ ತಾರೀಖಿನಿಂದ ೧೦ ದಿನಗಳೊಳಗೆ ಸದರಿ ಸಂಗತಿಯನ್ನು ರೇಶನಿಂಗ ಆಫೀಸರರಿಗೆ ತಿಳಿಸಿ ಕುಟುಂಬಕ್ಕೆ ಕೊಟ್ಟ ಸೀಧಾ ಸಾಮಾನುಗಳ ಪ್ರಮಾಣಗಳನ್ನು ಅವಶ್ಯವಿದ್ದಂತೆ ಕಡಿಮೆ ಮಾಡಿಸಿಕೊಳ್ಳಲಿಕ್ಕೆ ಅಂಥ ಆಫೀಸರರ ಕಡೆಗೆ ಸೀಧಾ ಕಾರ್ಡನ್ನು ಹಾಜರಪಡಿಸತಕ್ಕದ್ದು. " ಎಂತ ಕುಮಟಾ ರೇಶನಿಂಗ ರೆಗ್ಯುಲೇಶನುಗಳ 14ನೇ ಕ್ಲಾಜಿನ ನಂತರ 14 (A) ಕ್ಲಾಜ ಸೇರಿಸಿ ತಾರೀಖು ೧೭–೪–೪೫ನೇಗೆ ತಿದ್ದುಪಡಿಯಾಗಿದೆ.

ಕುಮಟಾ,
ತಾ ೨೭–೪ ೪೫.

R. B. Naik,
ರೇಶನಿಂಗ ಆಫೀಸರ, ಕುಮಟಾ

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ !
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಾರಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

NOTICE.

Government of Bombay, Finance Department (Supply).

Bombay 30th April, 1945

Stock returns of yarn for the month
ending 30th April 1945

The above mentioned return is due by the 5th of May 1945 and is to be submitted, in the prescribed form to the Provincial Textile Controller Opp Kalachowki Post Office Parel Road Bombay. IF NO BUSINESS HAS BEEN DONE BLANK RETURNS SHOULD BE SUBMITTED Licence holders are requested to see that the stock returns are submitted in time.

J K THAKORE,
Provincial Textile Controller, Bombay.

ಇದನ್ನು ಪಾಂಡುರಂಗ ಕೃಷ್ಣ ಕಾಸ್ಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಪ್ರಾಚ್ಯ ಆರ್ಯ ಕೆನರಾ ಪ್ರೆಸ್ಸ'ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೪
ಹಳೇ ಸಂಚಿಕೆಗೆ.... ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B 1270. Monday, 14th May, 1945.

ಕಾನಡಾವೃತ್ತ.

ವರ್ಷ ೨೭.] THE KANARA NEWS. [ಸಂಚಿಕೆ ೪೫

ಕುಮಟಾ:- ಸೋಮವಾರ, ತಾ. ೧೪ ಮಾಹೆ ಮೇ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಸ್ಥಳೀಯರಿಗಾದರೆ ೧೫ ಎಮ್ ಉದ್ದ
೧ ಸಾರಿಗೆ ೪ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು.

ಹಿಟ್ಲರನು ಸತ್ತಿಲ್ಲ!

(ಸಮೀಕ್ಷಕರು ಬರೆದುದು.)

ಹಿಟ್ಲರನ ಉತ್ತರಾಧಿಕಾರಿಯಾಗಿ ನೇಮಿಸಲ್ಪಟ್ಟ ಜಲ-ಯುದ್ಧ ಸೇನಾನಿಯಾದ ಡೊಯೆನಿಟ್ಜನು ರಶ್ಯರ ಸಹಿತ ಮಿತ್ರರಿಗೆ ಕಳೆದ ಸೋಮವಾರ ಮಧ್ಯರಾತ್ರಿಯಲ್ಲಿ ಅನಿರ್ಬಂಧ ಶರಣುಬಂದು ಮುಂಗಳವಾರದಿಂದ ಯುರೋಪದ ಪೂರ್ವ ಮತ್ತು ಪಶ್ಚಿಮ ರಣರಂಗಗಳಲ್ಲಿ ನಡೆದ ಘೋರ ಮಾನವ ಜಾತಿಯ ಹತ್ಯಾಕಾಂಡವನ್ನು ನಿಲ್ಲಿಸಿರುವನಾದರೂ ಹಿಟ್ಲರನೂ ಹಿಮ್ಲರನೂ ರಿಬೆನ್‌ಟ್ರೊಫನೂ ಮಿತ್ರರ ಕಣ್ಣು ತಪ್ಪಿಸಿ ಪಾರಾಗಿಹೋದರಲ್ಲ ಎಂಬೀ ವಿಚಾರದಿಂದ ನನ್ನ ಮನಸ್ಸು ತೀರ ವ್ಯಗ್ರವಾಗಿದೆ. ಹಿಟ್ಲರನ ಸಹಕಾರಿಯಂತೆ ವಿದೇಶ ಮಂತ್ರಿಯಾಗಿದ್ದ ಆ ವ್ಹಾನ್ ರಿಬೆನ್‌ಟ್ರೊಫನು ಎಲ್ಲಿದ್ದಾನೆಂಬುದು ಪತ್ತೆ ಇಲ್ಲ! ಹಿಮ್ಲರನು ಸ್ವೀಡನಕ್ಕೆ ಓಡಿಹೋಗಿದ್ದಾನೆಂದು ಕೆಲವರು ಹೇಳುತ್ತಾರೆ. ಅದು ದಿಟವಲ್ಲೆಂದು ಬೇರೆ ಕೆಲವರು ವಾದಿಸುತ್ತಾರೆ. ಹಿಮ್ಲರನೆಂದರೆ ಸಾಧಾರಣ ಮನುಷ್ಯನಲ್ಲ! ಅವನೊಬ್ಬ ನಿರ್ದಯ ರಾಕ್ಷಸನೆಂದು ಹೇಳಬಹುದು. ಜರ್ಮನರು ಅಲ್ಲಲ್ಲಿ ತೆರೆದಿದ್ದ ಸ್ಥಾನಬದ್ಧ ಶಿಬಿರಗಳಲ್ಲೂ ಸೆರೆಮನೆಗಳಲ್ಲೂ ಈತನು ಸಾಮುದಾಯಿಕ ಕೊಲೆಗಳನ್ನು ಮಾಡಿಸಿದ್ದನಂತೆ! ಅಂತಹ ಕೊಲೆ ಮಾಡುವ ತಂತ್ರಗಳನ್ನು ಇವನು ಸ್ವತಃ ಹೇಳಿಕೊಡುತ್ತಿದ್ದನಂತೆ! ರಶ್ಯರ ಕೈಯಲ್ಲಿ ಇವನು ಸಿಕ್ಕರೆ ಅವನ ಗತಿಯೇನಾದೀತೆಂದು ನಾನು ಹೇಳಲಾರೆ! ಹಿಟ್ಲರನಂತೂ ಈ ವಿಶ್ವಯುದ್ಧ ಪ್ರಾರಂಭಿಸಲು ಕಾರಣೀಭೂತನಾದ ಮಹಾಪಾಪಿ! ಮಿತ್ರರೂ ರಶ್ಯರೂ ಅವನಿಗೆ ದೇಹಾಂತ ಪ್ರಾಯಶ್ಚಿತ್ತವನ್ನೇ ಕೊಡತಕ್ಕದ್ದೆಂದು ಈ ಹಿಂದೆಯೇ ನಿಶ್ಚಯಿಸಿದ್ದುಂಟು. ಆದರೆ ಇಟಲಿಯ (ಹಿಂದಿನ) ಸರ್ವಾಧಿಕಾರಿ ಮುಸೋಲಿನಿಯಂತೆ ಆತ ಮಿತ್ರರ ಇಲ್ಲವೆ ಮಿತ್ರಪಕ್ಷೀಯ "ದೇಶಪ್ರೇಮಿ"ಗಳ ಕೈಯಲ್ಲಿ ಸಿಕ್ಕಬೀಳುವವನಲ್ಲ. ಅಂತಹದೇ ಪ್ರಸಂಗ ಬಂದರೆ ಆತ್ಮಹತ್ಯೆ ಮಾಡಿಕೊಂಡು ಸಾಯುವನೇ ವಿನಹ ಶತ್ರುಗಳ ಕೈಯಲ್ಲಿ ಎಂದೂ ಬೀಳಲಿಕ್ಕಿಲ್ಲೆಂದು ಆತ ನಿರ್ಧರಿಸಿದ್ದನೆಂದು ಮಿತ್ರ ಸೈನಿಕರಿಗೆ ಸೆರೆ ಸಿಕ್ಕ ಸೇ॥ ಕೆಸೆಲ್‌ರಿಂಗ ವಗೈರೆ ಜರ್ಮನ ಪ್ರಮುಖರು ಹೇಳುತ್ತಾರೆ. ಆದರೆ ಹಿಟ್ಲರನು ಹೀಗೆ ಆತ್ಮಘಾತ ಮಾಡಿಕೊಳ್ಳಲಿಕ್ಕಿಲ್ಲೆಂದು ಇಟಲಿಯಲ್ಲಿ ಮಿತ್ರರು ಸೆರೆಹಿಡಿದಿರುವ ಸುವಿಖ್ಯಾತ ಜರ್ಮನ ಅರ್ಥಶಾಸ್ತ್ರಜ್ಞ ಡಾ॥ ಶಾಖ್ಟರು ವಾದಿಸುತ್ತಾರಂತೆ. ಹಿಟ್ಲರನು ಮಡಿದಿರುವನೆಂಬ ವಾರ್ತೆಯನ್ನು ಆತ ಹೆಚ್ಚಾಗಿ [illegible]ಯುತ್ತಿದ್ದ ಬರ್ಲಿನದೊಳಗಿನ ಜನರೂ, ಹಿಟ್ಲರನು ಸ್ವಂತ ಕೊನೆಯ ದುರ್ಗವನ್ನಾಗಿ ಮಾಡಿಕೊಂಡಿದ್ದ ಸಾಲ್ಜ್‌ಬರ್ಗದ ಜನರಾಗಲಿ ಎಳ್ಳಷ್ಟೂ ನಂಬುವದಿಲ್ಲವೆಂದು ಪ್ರಕಟವಾಗಿದೆ. ಹಿಟ್ಲರನ ಬರ್ಲಿನ ನಿವಾಸಸ್ಥಾನವಾದ ರೈಶ ಚಾನ್ಸಲರಿ ಕಚೇರಿಯ ವಿಶಾಲ ನೆಲಮನೆಯಲ್ಲಿ ರಶ್ಯರು ಇನ್ನೂ ಹಿಟ್ಲರನ ಶೋಧ ನಡೆಸಿದ್ದಾರೆ! ಹಿಟ್ಲರನು ಆಯರ್ಲಂಡದಲ್ಲಿ ಬಂದಿಳಿದಿರಬಹುದೆಂದೂ ಒಂದು ತರ್ಕವುಂಟು. ಈ ತಿಂಗಳ ಪ್ರಾರಂಭಕ್ಕೆ ನಾರ್ವೇಯಿಂದ ೩ ವಿಮಾನಗಳು ಆಯರ್ಲಂಡದಲ್ಲಿ ಬಂದಿಳಿದಿದ್ದವೆಂದೂ ಅವುಗಳಲ್ಲಿ ಯಾರ‍್ಯಾರಿದ್ದರೆಂಬುದು ಗುಪ್ತವಿಡಲಾಗಿದೆಯೆಂದೂ ಸುದ್ದಿಯುಂಟು. ಈ ವಿಮಾನಗಳಿಂದ ಬಂದ ಜನರ ಹೆಸರುಗಳನ್ನು ತಿಳಿಸಲು ಬ್ರಿಟಿಶ ಸರಕಾರವು ಆಯರ್ಲಂಡದ ಡಿ ವ್ಹೆಲೆರಾ ಸರಕಾರಕ್ಕೆ ಒತ್ತಾಯ ಮಾಡುತ್ತಿದೆ. ಹೀಗಲ್ಲ ಹಿಟ್ಲರ-ಮರಣದ ಕಥೆಯಿದೆ. ಹಿಟ್ಲರನು ಸತ್ತ — ಆತ್ಮಘಾತ ಮಾಡಿಕೊಂಡಾಗಲಿ ಮಿದುಳಿನ ರಕ್ತಸ್ರಾವದಿಂದಾಗಲಿ ಹಿಮ್ಲರನ ಗೆಸ್ಟಪೋ ಪೋಲೀಸರ ಶಸ್ತ್ರಗಳಿಗೆ ಬಲಿಬಿದ್ದಾಗಲಿ ಸತ್ತ — ಪ್ರತ್ಯಕ್ಷ ಮತ್ತು ನಿರ್ವಿವಾದ ಪುರಾವೆ ಸಿಕ್ಕನಕ ಹಿಟ್ಲರನು ಸತ್ತಿಲ್ಲೆಂದೇ ನಾನು ಪ್ರತಿಪಾದಿಸುವೆನು. ಹಿಟ್ಲರನ ಪ್ರತಿಭಾಶಾಲಿ ಪ್ರಚಾರಕನಾಗಿದ್ದ ಡಾ॥ ಗೊಬೆಲ್ಸನ ಶವ ಬರ್ಲಿನನಲ್ಲಿ ಸಿಕ್ಕಿತೆಂದು ೪-೬ ದಿನಗಳ ಹಿಂದೆ ಸುದ್ದಿ ಬಂದಿತ್ತು. ಈ ಸುದ್ದಿಯಾದರೂ ದಿಟವೆಂದು ಹೇಳಲಾರೆ. ಗೊಬೆಲ್ಸನ ಹೆಣದೊಂದಿಗೆ ಅವನ ಹೆಂಡತಿ-ಮಕ್ಕಳ ಶವಗಳೂ ಸಿಕ್ಕಿವೆಯೆಂದು ಆ ಸುದ್ದಿಯಲ್ಲಿತ್ತು. ಆದರೆ ಆಯರ್ಲಂಡದಲ್ಲಿ ಬಂದಿಳಿದ ವಿಮಾನಗಳಲ್ಲಿ ಡಾ॥ ಗೊಬೆಲ್ಸನ ಪತ್ನಿಯೂ ಇದ್ದಳೆಂಬುದಾಗಿ ಹಿಂದಿನಿಂದ ವರದಿಯಾಗಿದೆ! ಅಂದ ಮೇಲೆ ಇವಳ ಶವ ಸಿಕ್ಕಿದ್ದು ಸುಳ್ಳೆಂದು ತಿಳಿಯಬೇಕಾಗಿ ಬರುವದಿಲ್ಲವೇ? ಅದರ ಸಂಗಡ ಗೊಬೆಲ್ಸನ ಶವ ಸಿಕ್ಕಿದ್ದೂ ಸುಳ್ಳೆಂದು ಯಾಕೆ ಹೇಳಬಾರದು?

ಇದು ವರೆಗೆ ನಾನು ವಿವರಿಸಿದ್ದು ಹಿಟ್ಲರನ ವಾಚ್ಯಾರ್ಥದ ಕಥೆ. ಅಲಂಕಾರ ಶಾಸ್ತ್ರದಲ್ಲಿ ಶಬ್ದಗಳಿಗೆ ವಾಚ್ಯ, ಲಕ್ಷ್ಯ, ವ್ಯಂಗ್ಯ ಹೀಗೆ ೩ ಬಗೆಯ ಅರ್ಥಗಳುಂಟೆಂದು ಹೇಳಿದೆ. ಹಿಟ್ಲರ ಶಬ್ದದ ವಾಚ್ಯಾರ್ಥ ಎಡೋಲ್ಫ ಹಿಟ್ಲರ ಎಂಬ ವ್ಯಕ್ತಿ. ಲಕ್ಷ್ಯಾರ್ಥ ಹಿಟ್ಲರನಿಗೆ ಸಂಬಂಧಪಟ್ಟ ನಾಝಿ ಪಕ್ಷ, ಅವನ ಅನುಯಾಯಿಗಳು ಮತ್ತು ಅವನ ತತ್ತ್ವಜ್ಞಾನ ಅಥವಾ ರಾಜನೀತಿ, ಮತ್ತು ಹಿಟ್ಲರ ಶಬ್ದದ ವ್ಯಂಗ್ಯಾರ್ಥವೆಂದರೆ ಹಿಟ್ಲರನಂತೆಯೇ ಲೋಕಕ್ಕೆ ಕುತ್ತು ಶಾಪ ಮಾಡಬಲ್ಲ ವ್ಯಕ್ತಿಗಳು ಯಾ ಸಂಸ್ಥೆಗಳು, ಅಥವಾ ಹಿಟ್ಲರನ ಪ್ರಾದುರ್ಭಾವಕ್ಕೆ ಕಾರಣವಾದ ಕಾರಣಪರಂಪರೆಯು, ಅಥವಾ ಅವನ ಸ್ಥಿತಿಯನ್ನು ಹುಟ್ಟಿಸಬಹುದಾಗಿದ್ದ ಬಲ್ಲ ಘಟನೆಗಳು ಯಾ ಸಂಸ್ಥೆಗಳು, ಅಥವಾ (ಒಂದೇ ಶಬ್ದದಲ್ಲಿ ಹೇಳುವದಾದರೆ) ಹಿಟ್ಲರ-ಪ್ರವೃತ್ತಿ. ವಾಚ್ಯಾರ್ಥದಿಂದ ಹಿಟ್ಲರ ಸತ್ತಿಲ್ಲೆಂದು ನಾನು ಮೇಲೆ ನಮೂದಿಸಿದ್ದೇನೆ. ಲಕ್ಷ್ಯಾರ್ಥ-ವ್ಯಂಗ್ಯಾರ್ಥಗಳಿಂದಲೂ ಆತ ಸತ್ತಿಲ್ಲೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಹಿಟ್ಲರನ ನಾಝಿ ಪಕ್ಷ ನಷ್ಟವಾಗಿದ್ದಿಲ್ಲ. ಆ ಪಕ್ಷದಲ್ಲಿ ಲಕ್ಷಾವಧಿ ಜನರು ಸೇರಿದ್ದರು. ಭಾರತದೊಳಗಿನ ಕೊಂಗ್ರೆಸ ಪಕ್ಷದಷ್ಟೇ ಅದು ವಿಶಾಲವಿತ್ತು. ಅದರ ನಿರ್ಮೂಲನ ಮಾಡುವದು ಎಂದಿಗೂ ಸಾಧ್ಯವಿಲ್ಲ. ಜರ್ಮನರನ್ನು ಕ್ರೌರ್ಯದಿಂದ ನಡೆಸಿದರಂತೂ ಅದು ಒಳಗಿಂದೊಳಗೆ ಕುದಿಯುತ್ತ ಉಳಿಯುವದೇ. ಯುದ್ಧದಲ್ಲಿ ವಿಜಯ ಸಂಪಾದಿಸಿದ ಮಿತ್ರರು ತಮ್ಮ ಅವಿಚಾರದ ನಿಷ್ಠುರ ಕಾಠಿಣ್ಯದಿಂದ ಆ ಪಕ್ಷಕ್ಕೆ ಪರ್ಯಾಯದಿಂದ ಜೀವದಾನ ಕೊಡುತ್ತಿದ್ದಾರೆ! ಹಿಟ್ಲರನ ನಿಧನವಾರ್ತೆ ಕೇಳಿ ಆಯರ್ಲಂಡದ ಮುಖ್ಯಮಂತ್ರಿ ಡಿ. ವ್ಹೆಲೆರಾರವರು ವಿಷಾದಪ್ರದರ್ಶನ ಮಾಡಿದ್ದು ಮಿತ್ರ-ಪಕ್ಷದ ದ್ರೋಹವಾಯಿತಂತೆ! ರ್‍ಹೀಮ್ಸದಲ್ಲಿರುವ ಜ॥ ಐಸೆನ್‌ಹಾವರರ ಕಚೇರಿಯಲ್ಲಿ ಶರಣಾಗತಿಯ ಪತ್ರಕ್ಕೆ ಸಹಿ ಮಾಡಿದ ನಂತರ ಜರ್ಮನ ಸೇನೆಯ ಪ್ರತಿನಿಧಿಯಾದ ಸೇ॥ ಜೋಡ್ಲನು ಎರಡು ಮಾತುಗಳನ್ನಾಡಲು ಪರವಾನಗಿ ಪಡೆದು, "ಜರ್ಮನ ಜನಾಂಗವು ಬೇರೆಯವರಿಗಿಂತ ಹೆಚ್ಚು ಕಷ್ಟ-ನಷ್ಟ ಸಹಿಸಿದೆ. ನಾವೀಗ ನಿಮ್ಮ ಕೈಯಲ್ಲಿದ್ದೇವೆ. ಜರ್ಮನರನ್ನು ಔದಾರ್ಯದಿಂದ ನಡೆಸಿಕೊಳ್ಳಬೇಕೆಂಬುದಾಗಿ ನನ್ನ ಪ್ರಾರ್ಥನೆಯಿದೆ" ಎಂದು ದೀನವಾಣಿಯಿಂದ ಬೇಡಿಕೊಂಡನು. ಅವನ ಆ ಪ್ರಾರ್ಥನೆಗೆ ಅಲ್ಲಿ ಕೂತ ವಿಜಯ ಮಹಾವೀರರ ಪ್ರಾಣ ಒಂದಿಷ್ಟು ಶಾಬ್ದಿಕ ಸಹಾನುಭೂತಿಯನ್ನು ಸಹ ವ್ಯಕ್ತಗೊಳಿಸಲಿಲ್ಲ! ಜರ್ಮನ ಜನಾಂಗದ ವಿರುದ್ಧ ನಮ್ಮ ದ್ವೇಷವಿಲ್ಲ, ಹೋರಾಟವಿಲ್ಲ; ನಾಝಿ ಪಕ್ಷದ ಪ್ರಮುಖರೇ ನಮ್ಮ ವೈರಿಗಳು, ಎಂದು ಮೊದಲಾಗಿ ಸಾರುತ್ತಿದ್ದ ಮಿತ್ರರೂ ರಶ್ಯರೂ ಈಗ ಅದೇ ಜರ್ಮನ ಜನಾಂಗವನ್ನು ನಿರ್ವೀರ್ಯಗೊಳಿಸುವ ಮಾತನ್ನಾಡುತ್ತಿದ್ದಾರೆ! ೫ ಅಬ್ಜ ಪವನುಗಳಷ್ಟು ಯುದ್ಧನಷ್ಟವನ್ನು ಜರ್ಮನರ ಕಡೆಯಿಂದ ವಸೂಲ ಮಾಡುವ ಹವಣಿಕೆಯಲ್ಲಿದ್ದಾರೆ. ಮಿತ್ರರ ಈ ಕೃತಿಗಳೂ ವಿಚಾರಗಳೂ ಸಂಪೂರ್ಣವಾಗಿ ಹಿಟ್ಲರನಿಗೆ ಒಪ್ಪುವಂಥವಿವೆ! ಹಿಟ್ಲರನು ಮಡಿದರೆ ಮಡಿಯದಿರಲಿ, ಅವನ ತತ್ತ್ವಜ್ಞಾನ, ಅವನ ಪ್ರವೃತ್ತಿ, ಅವನ ಮನೋವೃತ್ತಿ ಈಗ ಮಿತ್ರಪಕ್ಷೀಯ ಮುಂದಾಳುಗಳಲ್ಲಿ ಸಂಚಾರವಾದದ್ದು ಕಂಡುಬರುತ್ತಿದೆ. ಆದ್ದರಿಂದಲೇ ನಾನು ಲಕ್ಷ್ಯಾರ್ಥ-ವ್ಯಂಗ್ಯಾರ್ಥಗಳಿಂದಲೂ ಕೂಡ ಹಿಟ್ಲರನು ಸತ್ತಿಲ್ಲೆಂದು ಪ್ರತಿಪಾದಿಸಿರುವೆನು.

(೨ನೇ ಪುಟದಿಂದ ಮುಂದರಿಸಿದ್ದು.)

ಕಳಿಯುವದಕ್ಕೆ ಪ್ರಯತ್ನಿಸಲಾರಂಭಿಸಿದನು. ಖಾನಾವಳಿಯವನಿಗೆ ಇದೇನು ಆಟವೆಂದು ತಿಳಿಯಲಿಲ್ಲ! ಮೂರು ಪಟ್ಟು ಮುದ್ದೆಯ ಬಗ್ಗೆ ೩ ಆಣೆ ಆಕರಿಸಿದ್ದೇನಾಗಿ ಅವನು ಮರಳಿ ಹೇಳಿದನು. ಆಗ ಸಾವಂತನ ಸಿಟ್ಟು ಇನ್ನೂ ಕೆರಳಿತು! "ಮುದ್ದೆಗೆ ಬೇರೆ ದುಡ್ಡು ಕೊಟ್ಟು ಊಟಕ್ಕೆ ಬೇರೆ ದುಡ್ಡು ನಿನಗೆ ಕೊಡಬೇಕೇ?" ಎಂದು ಒಮ್ಮೆಲೇ ಖಾನಾವಳಿಯವನ ಮೈಮೇಲೆ ಏರಿಹೋಗಿ, ಅವನಿಗೆ ಗುದ್ದುತ್ತಾ ಬಡಿಯುತ್ತಾ ಮಾಳಿಗೆಯ ಮೇಲೆ ಎಳೆತಂದನು! ನಾನು ಪೋಲೀಸ ಅಮಲದಾರನಿದ್ದೇನೆ, ಪೋಲೀಸ ಸಮವಸ್ತ್ರ ತೊಟ್ಟುಕೊಂಡಿದ್ದೇನೆ, ಕುಂಟದ ಪೇಟೆಯಲ್ಲಿ ಈ ರೀತಿ ಅನಾಚಾರ ಅತ್ಯಾಚಾರ ಮಾಡಿದರೆ ಜನರು ತನಗೆ ನಗುವರು, ಅಲ್ಲದೆ ತನಗೆ ದಂಡ-ಶಿಕ್ಷೆಗಳಾಗಬಹುದು ಎಂಬ ಯಾವ ವಿಚಾರವೂ ಆತನ ತಲೆಯಲ್ಲಿ ಸುಳಿಯಲಿಲ್ಲ! ಅಷ್ಟು ಆತ "[illegible]" ಆಗಿಹೋಗಿದ್ದನು! ಕೂಡಿದ ಜನರು ಅವನ ಆವೇಶ ನೋಡಿ ಬೆಪ್ಪಾದರು! ಕೊನೆಗೆ ಖಾನಾವಳಿಯವನ ಭಾವನು ಬಂದು ಏನು ಅನಾಚಾರವೆಂದು ತಿಳಕೊಂಡು ರೂ. ೫ರ ಒಂದು ನೋಟು ಸಾವಂತನ ಕೈಯಲ್ಲಿಟ್ಟು ಸಾವಂತನಿಗೆ ಶಾಂತಗೊಳಿಸಿದನು! ಈ ಬಗ್ಗೆ ಮುಂದೆ ಸಾವಂತನ ವಿರುದ್ಧ ಫಿರ್ಯಾದಿಯಾಗಿತ್ತು. ಆದರೆ ಸಾವಂತನ ನೆಂಟರು ಖಾನಾವಳಿಯವನಿಗೆ ಪರಿಹಾರ ದ್ರವ್ಯ ಕೊಟ್ಟು ಪ್ರಕರಣವನ್ನು ಸಾಧಾರಿಸಿಕೊಂಡಿದ್ದಾರೆಂದು ಕೇಳಬರುತ್ತಿದೆ. ಸಾವಂತನ ಈ ಚೇಷ್ಟೆಗಳಿಗೆ ಮಂಗಚೇಷ್ಟೆಗಳೆಂದು ಸಂಬೋಧಿಸಿದರೆ ಮಂಗಗಳು ಸಿಟ್ಟಾಗಲಿಕ್ಕಿಲ್ಲವೇ?

ಶಿರಸಿ— ಇದೇ ಬರುವ ತಾ. ೨೭-೫-೪೫ಕ್ಕೆ ಶಿವಮೊಗ್ಗೆಯಲ್ಲಿ ಅ॥ ಭಾ॥ ಅಡಿಕೆ ಸಮ್ಮೇಲನ ಜರುಗಲಿದೆಯೆಂತಲೂ ಈ ಜಿಲ್ಲೆಯ ಪ್ರತಿನಿಧಿಗಳು ಈ ಸಮ್ಮೇಲನಕ್ಕೆ ಮುದ್ದಾಂ ಹೋಗಿ ಸಮ್ಮೇಲನವನ್ನು ಯಶಸ್ವಿಗೊಳಿಸಬೇಕಾಗಿಯೂ ಜಿಲ್ಲಾ ಬೇಸಾಯ ಸಂಘದವರು ಬಿನ್ನವಿಸುತ್ತಾರೆ.

ಮಂಚಿಕೇರಿ— (ತಾ ೪-೫ ೪೫) ಯಲ್ಲಾಪುರ ತಾಲೂಕಿನ ಡೆವ್ಹಲಪಮೆಂಟ ಅಸಿಸ್ಟಂಟ ಇನ್ಸಪೆಕ್ಟರರ ವಿರುದ್ಧ "ವೃತ್ತ"ದಲ್ಲಿ ಪ್ರಕಟವಾದ ಟೀಕೆ ಕೇವಲ ನಿರಾಧಾರವೆಂತದಾಗಿ ಗ್ರಾಮಸುಧಾರಣಾ ಮಂಡಳದ ಚೇರ್ಮನ್ನರು ತಿಳಿಸುತ್ತಾರೆ. ಈ ಇನ್ಸಪೆಕ್ಟರರು ಪ್ರತಿಯೊಂದು ಹಳ್ಳಿಯಲ್ಲಿ ಹೋಗಿ ರೈತ ಜನರಿಗೆ ಯೋಗ್ಯ ಸಲಹೆ ಕೊಟ್ಟು ಭತ್ತದ ಬೀಜ, ಕಾಯಿ-ಪಲ್ಲೆಗಳ ಬೀಜ, ಗೊಬ್ಬರ ವಗೈರೆ ಪೂರೈಸುತ್ತಾರಂತೆ. ಇಂಥವರನ್ನು ದೂರುವದು ಸಾಧುವಲ್ಲವೆಂದು ಚೇರಮನ್ನರ ಅಂಬೋಣ.

ಹಳಿಯಾಳ— (ತಾ. ೧೪-೪-೪೫) ಹಳಿಯಾಳದಿಂದ ೩ ಮೈಲು ಅಂತರದಲ್ಲಿರುವ ಸಾತ್ನಳ್ಳಿ ಮತ್ತು ಯಡೋಗಾ ಗ್ರಾಮಗಳಲ್ಲಿ ಕಳೆದವಾರ ಸುಮಾರು ೩೦ ದನಗಳು ಕಳವಾಗಿ ಹೋಗಿವೆ. ಬೆಳಗಾಂವ ಜಿಲ್ಲೆಯ ಗಡಿಯಲ್ಲಿರುವ ಬೇಡರು ಇವನ್ನು ಹಲಗಿ-ಬಸ್ತವಾಡ ಮಾರ್ಗದಿಂದ ಓಡಿಸಿಕೊಂಡು ಹೋಗಿದ್ದಾರೆಂದು ವದಂತಿಯುಂಟು. ಅಧಿಕಾರಿಗಳು ಈ ಕಳವುಗಳ ತಪಾಸ ಮಾಡಿ ದನ ಕಳಕೊಂಡ ಬಡ ರೈತರನ್ನು ಕಾಯಬೇಕಾಗಿ ಅರಿಕೆಯಿದೆ.

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR,
25—4—1945.

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಈ ಬಸಳ ನೋಟಗಳು ಈಗ ಕಡಿಮೆಯಾಗಿವೆ ಅದರಿಂದ ಮಳೆ ಈ ವರ್ಷ ಕಳೆದ ೨ ವರ್ಷಗಳೊಳಗಾದಂತೆ ಮೇ ತಿಂಗಳಲ್ಲೇ ಬೀಳಬಹುದೆಂದು ಅನಿಸುತ್ತದೆ

ಕಳೆದ ಮಾರ್ಚ ತಿಂಗಳಲ್ಲಾದ ಹೆಣ್ಣು ಹುಡುಗಿಯರ ಮುಲ್ಕೀ ಪರೀಕ್ಷೆಗೆ ಇಲ್ಲಿಯ ಮರಾಠಿ ಶಾಲೆಯಿಂದ ೬ ಹುಡುಗಿಯರು (ಶಿರ್ಶಿ ಕೇಂದ್ರದಲ್ಲಿ) ಕೂತಿದ್ದರು ಅವರಲ್ಲಿ ೫ ಮಂದಿ ಉತ್ತೀರ್ಣರಾಗಿದ್ದಾರೆ ಪರೀಕ್ಷೆಯ ಸರ್ವಸಾಧಾರಣ ಫಲಿತಾಂಶ ನೋಡಿದ್ದು ತೃಪ್ತಿಕರವಾಗಿದೆ

ಕಳೆದ ವಾರ ಪ್ರಕಟವಾದಂತೆ ಗೋಕರ್ಣದಲ್ಲಾದ ಜಿಲ್ಲಾ ಕಾಂಗ್ರೆಸ್ಸಿನ [illegible] ಸಭೆಯಲ್ಲಿ [illegible] ನಿರ್ಣಯವಾಗಿಲ್ಲೆಂತಲೂ ಸರ್ಕಾರ [illegible] ತಮ್ಮ [illegible] ಮಂಡಿಸಲಿಕ್ಕೆ ಸಭೆಯ [illegible] ಇದ್ದಿಲ್ಲೆಂತಲೂ ಸಭೆಯಲ್ಲಿ ಬರೇ ವಿತಂಡವಾದವನ್ನು ನಡೆಸಿದರೆಂತಲೂ, ಸಭೆಯಲ್ಲಿದ್ದ ಹಲವರು ಸಭೆಯ ಶಿಸ್ತಿನ [illegible] ಲಕ್ಷ್ಯವಿಡದೆ [illegible] ಅಧ್ಯಕ್ಷರಿಗೆ ಅವಾಚ್ಯ [illegible] ಇದನ್ನೆಲ್ಲ ಕಂಡು ಸ್ವಾಗತ [illegible] ಬೇಸರಗೊಂಡು ಸಭೆಯಿಂದ ಎದ್ದು ಹೋದರೆಂತಲೂ ಇಂತಹ ಸಭೆಯಲ್ಲಾದ ನಿರ್ಣಯಕ್ಕೆ ಬೆಲೆಯಿಲ್ಲೆಂತಲೂ ಪ್ರತ್ಯಕ್ಷ ಕಂಡವರೊಬ್ಬರು ತಿಳಿಸುತ್ತಾರೆ

ಕಂಟ್ರೋಲಿನೊಳಗಿನ ಯೋಗ್ಯ ಧಾರಣೆ ಅಂಗಡಿ ಅವಶ್ಯ ದಿನಸಿ ತೆರೆಯುವ ವ್ಯವಸ್ಥೆಯಾಗಿಲ್ಲೆಂದೂ ಈ ತಿಂಗಳಲ್ಲಿ ಇನ್ನೂ ಎಣ್ಣೆ ಸಕ್ಕರೆ [illegible] ಕೇಳಿದರೆ [illegible] ಎಂದಿಲ್ಲೆಂದು ಹೇಳುತ್ತಿರೆಂತಲೂ ಅಂಗಡಿಯಲ್ಲಿ ಅಕ್ಕಿ ಬಿಟ್ಟು ಏನೂ ಇರುತ್ತಿಲ್ಲೆಂತಲೂ, ತಾಲೂಕ ಕಚೇರಿಗೆ ರಜೆಯಿದ್ದದರಿಂದ [illegible] ಕೇಳುತ್ತಿದ್ದರೆಂತಲೂ ಒಬ್ಬರು [illegible] ಈ ಅಂಗಡಿಯಲ್ಲಿ [illegible] ತೆಗೆಯುವ ಪ್ರಸಂಗ ಬಂದಿದೆಯಂತೆ ಅಧಿಕಾರಿಗಳು [illegible] ಹೇಳಬಹುದೇ?

ಹೊನ್ನಾವರ— (ತಾ ೧೦-೫-೪೫) [illegible] ಸಮುದ್ರದಲ್ಲಿ ತೂಫಾನುಂಟು

ಇಲ್ಲಿಯ [illegible] ಸಂಸಾರ [illegible] ಜಿಲ್ಲಾಧಿಕಾರ [illegible] ಕಳೆದ ತಾ ೩ನೇ [illegible]

ಊರಲ್ಲಿ [illegible] ೪೦೦೦ [illegible] ೧೦೦೦ [illegible] ಅದರಲ್ಲಿ [illegible] ಹೇಳುತ್ತಾರೆ

[illegible] ಹಳ್ಳಿಯಲ್ಲಿ [illegible] ಹೆಚ್ಚಾಗಿದೆಯಂತೆ [illegible] ಸ್ಥಳಗಳಲ್ಲಿ [illegible] ಕಂಡಂತೆ [illegible] ಹೋಗುತ್ತಿದ್ದರೆ [illegible] ಹೇಳುತ್ತಾರೆ [illegible] ಅಧಿಕಾರಿಗಳ [illegible] ಆಗಿ ಅರಿಕೆಯಿದೆ

ಭಟಕಳ— (ತಾ ೧೦-೫-೪೫) [illegible] ಊರಲ್ಲಿ ಸ್ಥಿತಿಯುಂಟು

[illegible] ಮಧ್ಯಾಹ್ನ [illegible] ಗಾಡ್ರೀಲ [illegible] ಭಟ [illegible] ಅಧಿಕಾರಿಗಳು ಆ ಪಟ್ಟಿಯಲ್ಲಿ [illegible] ಗಾಡ್ರೀಲನು [illegible] ಭಟ್ಟಿಯನ್ನು [illegible] ತೆಗೆಯಲಾರಂಭಿಸಿದ್ದನಂತೆ!

ಸಿದ್ದಾಪುರ— (ತಾ ೧೧-೫-೪೫) ಇಲ್ಲಿಯ ಅಂಚೆ ಕಟ್ಟೆಯಲ್ಲಿ ಟಪಾಲ ಬಂದಿ ಬಂದುಮುಟ್ಟಿದ ೨೫ ನಿಮಿಷಗಳಲ್ಲಿ ಪತ್ರಗಳ ಬಟವಡೆ ಮಾಡಬೇಕೆಂದು ಟಪಾಲಿನವ [illegible] ಬಂದ ಬಟ್ಟರೇ ಪೋಸ್ಟ ಮಾಸ್ತರರಿದ್ದಾಗ್ಯೂ ಬಂದ [illegible] ಪತ್ರಗಳನ್ನು ಸರಿಪಡಿಸಿಕೊಂಡು ಟಪಾಲಪೆಟ್ಟಿಗೆ ಬಂದವರಿಗೆ ಅರ್ಧ ಘಂಟೆಯೊಳಗೇ ಬಟವಡೆ ಮಾಡುತ್ತಿದ್ದರು ಈಗ ಒಪ್ಪರ ಬದಲು ಇಪ್ಪರಿದ್ದಾರೆ ಆದರೂ ಟಪಾಲ ಬಂದು ೧ ೧| [illegible] ಚಹಾ [illegible] ಸಿಗುವದಿಲ್ಲ [illegible] ಮೇಲಾಧಿಕಾರಿಗಳು [illegible] ಮಾಡಬೇಕಾಗಿ ವಿನಂತಿಯಿದೆ

ಶ್ರೀಮತ್ [illegible] ಶಿವಾನಂದ [illegible] ಶ್ರೀಮತ್ [illegible] ಸ್ವಾಮಿಯವರು ಕಳೆದ [illegible] ಶ್ರೀ [illegible] ದೇವಸ್ಥಾನಕ್ಕೆ [illegible] ಇದೇ ಮಂಗಳವಾರದಿಂದ ಪ್ರಾರಂಭವಾಗಿ ೩ ದಿವಸಗಳ ಪರ್ಯಂತ ಶ್ರೀ [illegible] ಅಖಂಡ ಭಜನೆಯೂ [illegible] ನಡೆದವು

ಈ ವರ್ಷದ ಜಿಲ್ಲಾ ಲೋಕಲ್ ಬೋರ್ಡಿನ ಸಾರ್ವತ್ರಿಕ ಚುನಾವಣೆಯು ತಾ. ೨೬-೬-೪೫ಕ್ಕೆ ನಡೆಯಲಿದೆ ಈ ಚುನಾವಣೆಯನ್ನು ಬೇಸಿಗೆಯಲ್ಲಿಡದೆ ಮಳೆಗಾಲದಲ್ಲಿಟ್ಟಿದ್ದು ಯಾಕೋ ತಿಳಿಯದು. ಮಳೆಗಾಲದಲ್ಲಿ ಹೊಳೆಗಳೂ ಹಳ್ಳಗಳೂ ತುಂಬಿ ಹರಿಯುತ್ತಿರುವದರಿಂದಲೂ ರಹದಾರಿಯ ಮಾರ್ಗಗಳು ಕಟ್ಟಾಗುತ್ತಿರುವದರಿಂದಲೂ ಈ ತಾಲೂಕಿನ ಹಾಗೂ ಶಿರ್ಶಿ ತಾಲೂಕಿನ ಹಳ್ಳಿಗಳೊಳಗಿನ ಮತದಾರರು ಮತದಾರರಿಗೆ ಮತದಾನದ ದಿವಸ ಮತದಾನ ಕಚೇರಿಗಳಿಗೆ ಹೋಗಿ ಮತ ಕೊಡುವದು ಸರ್ವಥಾ ಸಾಧ್ಯವಾಗದು

ಯಲ್ಲಾಪುರ— ಸಿದ್ದಾಪುರದ ಪೋಲೀಸರ ಮಂಗ [illegible] ಮುಗಿಯದ ಮಂಗಚೇಷ್ಟೆ — ಅಲ್ಲಿ ಮಂಗಗಳು ಹೇಗೆ ತಮ್ಮನ್ನು ತೀರ್ಥ [illegible] ಬಗ್ಗೆ ಒಂದೊಂದೇ [illegible] ಹೊರಬರುವದು! — ಮಾಡಬಲ್ಲ ಪೋಲೀಸರು ನಮ್ಮ ಜಿಲ್ಲೆಯಲ್ಲಿದ್ದಾರೆ ಕಳೆದ ತಿಂಗಳಲ್ಲಿ ಈ ಊರಲ್ಲಿ ನಡೆದ ಒಂದು ಕತೆಯನ್ನೇ ಇಲ್ಲಿ ಕೊಟ್ಟರೆ ಸಾಕು ತಾ ೧೩-೪-೪೫ಕ್ಕೆ ಹೊಸ್ಪೇಟೆ [illegible] ನಂತರ [illegible] ಸರ [illegible] ಹಿಂದಲಗಿ ಸೆರೆಮನೆಗೆ ಮುಟ್ಟಿಸಲು ಇಲ್ಲಿ ತಂದಿದ್ದನು ಅವನೂ ಅವನ ಸಂಗಡಿಗ ಪೋಲೀಸರೂ ಕೈದಿಗಳೂ ಕೂಡಿ ೬ ಮಂದಿ ಇಲ್ಲಿಯ [illegible] ಊಟ ಮಾಡಿದರು ಊಟದ ನಂತರ [illegible] ಮಾಡಿದ [illegible] ಹೇಳಿ [illegible] ಹೋಗಲು [illegible]

(೧ನೇ ಪುಟದ ಮೇಲೆ ಮುಂದರಿಸಿದೆ)

ಕೊಂಡನು ಹಾಗೂ ಮೋಟಾರ ನಿಲ್ದಾಣಕ್ಕೆ ಹೊರಟು ಹೋದನು ಹಾದಿಯಲ್ಲಿ ಅವನಿಗೆ ಎಂಥ ಪಿಶಾಚ-ಬಾಧೆಯಾಯಿತೋ ಏನೋ! ೮ ೬ ನಿಮಿಷಗಳಲ್ಲಿ ಆ ಸಾವಕಾರನು ತಿರುಗಿ ಮಾವಾವಳಿಗೆ ಬಂದು, "ಏನು ಘಟಿಂಗಕನ ಮಾಡುತ್ತೀಯಾ? ಊಟಕ್ಕೆ ೧೦ ಆಣೆ ದರ ಹೇಳಿ ನನ್ನ ಕಡೆಯಿಂದ ರೂ ೩-೧೫-೦ ಪಡಕೊಂಡೆಯಾ?" ಎಂದು ಖಾನಾ

—R—

ಸೀಧಾ ಕಾರ್ಡ ಪಡೆದ ಯಾವದೇ ಕುಟುಂಬದಲ್ಲಿ ಸಮಾವೇಶವಿರುವ ಯಾವನೊಬ್ಬ ಮನುಷ್ಯನ ಕುಟುಂಬದ ಮೆಂಬರಶಿಪ್ಪು ಯಾವದೇ ಕಾಲಕ್ಕೆ ಅಂತ್ಯವಾದಲ್ಲಿ ಕುಟುಂಬದ ಯಜಮಾನನು ಯಾ ಅವನ ಗೈರಹಾಜರಿಯಲ್ಲಿ ಕುಟುಂಬದ ವಹಿವಾಟದಾರನು ಅಂಥ ಮನುಷ್ಯನ ಕುಟುಂಬದ ಮೆಂಬರಶಿಪ್ಪು ಅಂತ್ಯವಾದ ನಂತರದ ಸೀಧಾ ಅವಧಿಯಲ್ಲಿ ಅವನ ಬಗ್ಗೆ ಮಂಜೂರಾದ (ಟಿಕೀಟ ಎಷ್ಟು ಬಿಟ್ಟು ಉಳಿದ ಯಾವದೇ) ಸೀಧಾ ಸಾಮಾನು ಪಡೆಯಲು ಯಾ ದೊರಕಿಸಿಕೊಳ್ಳಲು ಬರುವದಿಲ್ಲ ಮತ್ತು ಸದರಿ ಮೆಂಬರಶಿಪ್ಪು ಅಂತ್ಯವಾದ ಸಂಗತಿಯನ್ನು ಅಂತ್ಯವಾದ ತಾರೀಕಿನಿಂದ ೧೦ ದಿವಸಗಳೊಳಗೆ ರೇಶನಿಂಗ ಆಫೀಸರರಿಗೆ ತಿಳಿಸತಕ್ಕದ್ದು ಹಾಗೂ ಕುಟುಂಬಕ್ಕೆ ನೇಮಿಸಿಕೊಟ್ಟ ಸೀಧಾ ಸಾಮಾನುಗಳ ಪರಿಮಾಣಗಳನ್ನು ಅವಶ್ಯವಿದ್ದಂತೆ ಕಡಿಮೆ ಮಾಡಿಸಿಕೊಳ್ಳತಕ್ಕದ್ದು ಎಂದು ಗೋಕರ್ಣ ರೇಶನಿಂಗ ರೇಗ್ಯುಲೇಶನ್ಸುಗಳಲ್ಲಿ ೧೪ನೇ ಕಲಮಿನ ನಂತರ ೧೪ ಅ ಕಲಂ ಸೇರಿಸಿ ತಾ. ೧೭-೪-೪೫ ನೇಗೆ ತಿದ್ದುಪಡಿಯಾಗಿದೆ

ಗೋಕರ್ಣ, ತಾ ೧೨-೫-೪೫ } **P M. Hegdekatti**
ರೇಶನಿಂಗ ಆಫೀಸರ, ಗೋಕರ್ಣ

ನೋಟೀಸು.

ಯಾವತ್ತು ಮೆಂಬರರ ಬಳಿಗೆ ವಿನಂತಿಗಳು

ಉತ್ತರ ಕನ್ನಡ ಜಿಲ್ಲೆಯ ಪ್ರಾಥಮಿಕ ಶಿಕ್ಷಕ ಸಂಘದ ೧೯೪೪-೪೫ನೇ ಸಾಲಿನ ವಾರ್ಷಿಕ ಅಧಿವೇಶನವು ತಾ ೨೩-೫-೪೫ನೇ ಬುಧವಾರ ಮುಂಜಾನೆ ೮ ಘಂಟೆಯಿಂದ ಕುಮಟಾ ಕನ್ನಡ ಶಾಲೆಯಲ್ಲಿ [illegible] ಎಸ್ [illegible] ವಕೀಲ ಕಾರವಾರ ಅವರ ಅಧ್ಯಕ್ಷತೆಯಲ್ಲಿ ನಡೆಯುವದು ಆದರಿಂದ ಯಾವತ್ತೂ ಮೆಂಬರರೂ ಶಿಕ್ಷಕ ಬಂಧುಗಳೂ ಸದರ ಸಭೆಗೆ ಬರಬೇಕಾಗಿ ವಿನಂತಿ ಅಂಕೋಲಾ, ತಾ. ೩-೫-೧೯೪೫

ಪ ರಾ ನಾಯ್ಕ,
ಉಪಾಧ್ಯಕ್ಷ ಉತ್ತರ ಕನ್ನಡ ಜಿಲ್ಲಾ ಪ್ರಾ ಶಿಕ್ಷಕ ಸಂಘ

ಇಂದು [illegible] ಇನ್ನು ೧೩ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ತಿಪರ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
[illegible] ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
[illegible] ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ ೧೦ [illegible] ವರ್ಷಗಳ ಮೇಲೆ ರೂ ೧೫ ಕೊಡುತ್ತಿದೆ!
[illegible] ಒಳ್ಳೆ [illegible] ಮನೆ ಮಠಗಳಲ್ಲಿ ಸರಕುಗಳಲ್ಲಿ ಹಣ ಹೂಡಬೇಡಿ!
[illegible] ಬೆಲೆ ಭರಭರನೆ ತಗ್ಗುವದು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು [illegible] ಅಧಿಕೃತ ಏಜಂಟರಿಂದ್ದರೆ
[illegible] ಕೊಳ್ಳದೆ [illegible]
[illegible] ದಿಂದ ರೂ [illegible] ತನಕ [illegible] ತೊಡಗಿಸಬಹುದು
[ಜಿಲ್ಲಾ [illegible] ಪ್ರಕಟನೆ]

NOTICE.

Government of Bombay Finance Department (Supply).

Bombay 5th May 1945

Stock returns of cloth for the quarter ending 30th April 45

The above mentioned return is due from all holders of cloth licences by the 10th of May 1945 It is to be submitted in Form No IX appended to the Bombay Cotton Cloth Trade Regulation Order, 1945 to the Provincial Textile Controller Kalachowki Parel Bombay, so far as licences in Bombay City and Bombay Suburban District are concerned, and to the District Magistrate Ahmedabad so far as licensees in part of Ahmedabad District to which the Bombay Cotton Cloth Trade Regulation Order has been extended are concerned In the other places in the Province the return is to be submitted in Form No III appended to the Bombay Cotton Cloth Dealers Licensing Order 1943 to the District Magistrate concerned

2 Even if there is no stock to report on 30th April 1945 a blank return should be submitted

J K THAKORE,
Provincial Textile Controller Bombay

ಇದನ್ನು ಪಾಂಡುರಂಗ ಕೃಷ್ಣ ಕಾನಡಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ [illegible] ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೩ ೪ ೦
ಟಪಾಲದ್ವಾರಾ ವರ್ಷಕ್ಕೆ ೪-೧ ೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦ ೪-೦
ವ್ಹಿ. ಪಿ. ಯಿಂದ ಹಣ ಕಳುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡಕೊಟ್ಟುಕೊಳ್ಳಬೇಕು

Reg. No. B 1270. Monday, 21st May, 1945.

ಕಾನಡಾವೃತ್ತ.

ವರ್ಷ ೩೭.] THE KANARA NEWS. [ಸಂಚಿಕೆ ೪೭

ಕುಮಟಾ.- ಸೋಮವಾರ, ತಾ ೨೧ ಮಾಹೆ ಮೇ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಸ್ತಂಭಾ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ.
ಸ್ವಲ್ಪಸ್ತಂಭಾ ೧೫ಎಮ್‌ಉದ್ದ
೧ ಸಾರಿಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ರಣಹದ್ದುಗಳ ಕಚ್ಚಾಟ!

(ನಿರೀಕ್ಷಕನು ಬರೆದುದು.)

ಈಗ ಯುರೋಪ ಯುದ್ಧದ ಮುಕ್ತಾಯವಾದ್ದರಿಂದ ನಾನು ಜಪಾನ-ಯುದ್ಧದ ಕಡೆ ಹೊರಳಬೇಕೆಂದು ಮನಸ್ಸು ಮಾಡಿದ್ದೆ. ಈಗ ೬ ತಿಂಗಳಿಂದ ಮಿತ್ರರು ಜಪಾನಿಯರನ್ನು ಕ್ರಮವಾಗಿ, ಸ್ಥಿರವಾಗಿ ಹಿಮ್ಮೆಟ್ಟಿಸುತ್ತಿದ್ದಾರೆ. ರಂಗೂನ ಪಟ್ಟಣ ಆದಾಗಲೇ ಮಿತ್ರರ ವಶವಾಗಿದೆ. ಜಪಾನಿ ನಗರಗಳ ಮೇಲೆ ಮೇಲಿಂದ ಮೇಲೆ ಬಾಂಬು-ಗುಂಡುಗಳ ಮಳೆಯಾಗುತ್ತಿದೆ. ಬ್ರಿಟಿಶರು ಯುರೋಪದಲ್ಲಿದ್ದ ತಮ್ಮ ನೌಕಾಬಲವನ್ನು ಈಗ ಶಾಂತಿಸಾಗರಕ್ಕೆ ಸ್ಥಳಾಂತರಿಸುತ್ತಿದ್ದಾರೆ. ಸೈನ್ಯವನ್ನೂ ಸಾಗಿಸುತ್ತಿದ್ದ ಸುದ್ದಿಯಿದೆ. ಜಪಾನಿಯರು ಈಗ ಗಾಬರಿಗೊಂಡು ಶಾಂತಿಯಾಚನೆ ಮಾಡುತ್ತಿದ್ದಾರೆಂದು ವಾರ್ತೆಗಳು ಬರಹತ್ತಿವೆ. ಆದರೆ ಅವುಗಳಲ್ಲಿ ಹುರುಳಿಲ್ಲ. ಈ ಎಲ್ಲ ಪರಿಸ್ಥಿತಿಯನ್ನು ನಾನು ಹಿಂದಿನಿಂದ ಬಣ್ಣಿಸುವೆನು. ಇದೀಗ ಯುರೋಪದಲ್ಲಿ ನಡೆದಿರುವ ರಣಹದ್ದುಗಳ ಕಚ್ಚಾಟವೇ ನನ್ನ ಚಿತ್ತವನ್ನು ವೇಧಿಸಿದೆ. ಯುದ್ಧದಲ್ಲಿ ಸೋತ ಜರ್ಮನಿಯ ಹಾಗೂ ಜರ್ಮನರ ಕೈಯಿಂದ ವಿಮೋಚನೆಗೊಳಿಸಿದ ನಾಡುಗಳ ಪಾಲುಪಟ್ಟಿಗಾಗಿ ಮಿತ್ರ ಪಕ್ಷೀಯರೊಳಗೆ ಭಯಂಕರ ಕಚ್ಚಾಟ ನಡೆದಿದೆ! ಫ್ರಾನ್ಸಕ್ಕೆ ಜರ್ಮನಿಯ ರ್‍ಹೂರ ಪ್ರಾಂತ ಬೇಕಾಗಿದೆ. ಹೊಲಂಡ, ಬೆಲಜಿಯಮುಗಳು ಈ ಮಾತಿಗೆ ಒಪ್ಪುವಂತಿಲ್ಲ! ಇಟಾಲಿಯ ಅಯಾಡ್ರಿಯಾಟಿಕನ ಟ್ರೀಸ್ಟ ಬಂದರವನ್ನು ಯುಗೋಸ್ಲಾವ್ಹಿಯಾ ಸರಕಾರದ ಅಧ್ಯಕ್ಷನಾದ ಮಾ|| ಟಿಟೋ ಇವನು ಬ್ರಿಟಿಶ ಅಮೇರಿಕೆಯವರ ಪ್ರತಿಭಟನೆಯನ್ನು ಲೆಕ್ಕಿಸದೆ ಕಳೆದ ವಾರ ಆಕ್ರಮಿಸಿಕೊಂಡಿದ್ದಾನೆ! ಮಾ|| ಟಿಟೋ ಇವನು ಕಮ್ಯೂನಿಸ್ಟ ಪಕ್ಷದವನು. ಸ್ಟಾಲಿನರ ಬೆಂಬಲವಿದ್ದದರಿಂದಲೇ ಅವನು ಈ ಸಾಹಸ ಮಾಡಿದ ನೆಂದು [illegible] ಪೋಲಂಡದ ಪ್ರಶ್ನೆ ಬಹಳ ಬಿಗಿಯಾಗಿದೆ. ಅಲ್ಲಿ ಪೋಲರ ಸ್ವತಂತ್ರ ಸರಕಾರ ಸ್ಥಾಪಿಸಬೇಕೆಂದು ಯಾಲ್ಟಾದಲ್ಲಿ ನಿರ್ಣಯವಾದದ್ದುಂಟು. ಈ ನಿರ್ಣಯದ ಅರ್ಥದ ಬಗ್ಗೆ ರಶ್ಯಾ ಮಿತ್ರರಲ್ಲಿ ಮತಭೇದವಾಗಿದೆ. ರಶ್ಯಕ್ಕೆ ಅನುಕೂಲವಿರುವ ಸರಕಾರವನ್ನೇ ಅಲ್ಲಿ ಸ್ಥಾಪಿಸಬೇಕೆಂದು ಸ್ಟಾಲಿನರ ಒತ್ತಾಯ. ಹಾಗಾದಲ್ಲಿ ಪೋಲಂಡವನ್ನು ರಶ್ಯಕ್ಕೆ ಒಪ್ಪಿಸಿದಂತೆಯೇ ಆಗುವದೆಂದು ಮಿತ್ರರು ಅದನ್ನು ಕಟುವಾಗಿ ವಿರೋಧಿಸುತ್ತಿದ್ದಾರೆ. ಹೀಗೆಲ್ಲ ಮಿತ್ರರೊಳಗೆ ಕಚ್ಚಾಟಕ್ಕೆ ಆರಂಭವಾಗಿದೆ! ಈ ಕಚ್ಚಾಟ ವಿಕೋಪಕ್ಕೆ ಹೋದರೆ ಯುರೋಪವು ಪುನಃ ರಣಭೂಮಿಯಾಗುವ ಪ್ರಸಂಗವುಂಟು. ಆದರಿಂದ ಯುರೋಪಖಂಡವೇ ಇನ್ನೂ ಕತ್ತಲೆಯಲ್ಲಿ ಸಿಲುಕುತ್ತಿದೆ

ಸ್ಥಾನಿಕ ವೃತ್ತಾಂತ

(೨ನೇ ಪುಟದಿಂದ ಮುಂದರಿಸಿದ್ದು)

ಎಳ್ಳಷ್ಟು ಕಡಿಮೆಯಾಗಿಲ್ಲ! ಸರಕಾರಿ ಅಧಿಕಾರಿಗಳ ಮರ್ಜಿ ಸಂಪಾದಿಸಿ ಸೀಧಾ ಅಂಗಡಿಗಳ ಲೈಸೆನ್ಸದ ಅಧಿಕಾರ ಪಡೆದವರಿಗೆ ಹಣ ಗಳಿಸಲು ಅವಕಾಶ ಸಿಕ್ಕಿದೆ! ಕಳೆದ ವರ್ಷ ಮೇ ತಿಂಗಳಲ್ಲಿ ಅಕ್ಕಿಂತಿಯ ಸೀಧಾ ಅಂಗಡಿಯವರ ದುರಾಚಾರಗಳನ್ನು "ವೃತ್ತ"ವು ಹೊರಗೆಡವಿದಾಗ ಆ ಟೀಕೆ ನಿರಾಧಾರವಿರುತ್ತದೆಂದು ಪ್ರತಿಪಾದಿಸಿದ ಮಹನೀಯರೊಬ್ಬರು ಈಗ ಪ್ರತ್ಯಕ್ಷ ಅನುಭವದಿಂದ 'ವೃತ್ತ'ದಲ್ಲಿ ಪ್ರಕಟವಾದ ಮಾಹಿತಿಯು ಪೂರ್ಣ ದಿಟವಿತ್ತಾಗಿ ತಿಳಿಸುತ್ತಾರೆ, ಮತ್ತು ತಾವು ಆಗ ಅದನ್ನು ಪ್ರತಿಭಟಿಸಿದುದಕ್ಕಾಗಿ ಪಶ್ಚಾತ್ತಾಪಪಡುತ್ತಾರೆ. ಅಕ್ಕಿಂತಿಯಲ್ಲಿ ಅವರಿಗೆ ಸಿಕ್ಕ ಪ್ರತ್ಯಕ್ಷ ಅನುಭವ ಹೀಗುಂಟು: ಅಂಗಡಿಯಲ್ಲಿ ಅಕ್ಕಿ ಇದ್ದರೂ ಅಂಗಡಿಯವರು ಅಕ್ಕಿಯು ಶಿಲ್ಲಕವಿಲ್ಲವೆಂದು ಹೇಳಿ ಅದನ್ನು ಅಂತರಂಗದಿಂದ ೧೬ ರೂಪಾಯಿಗೊಂದು ಮಾನಿಗೆಯಂತೆ ಮಾರುತ್ತಾರೆ! ಸಕ್ಕರೆಯು "ಬ್ಲೇಕ ಲಿಸ್ಟ"ದಲ್ಲಿ ಅವರವರ ಹೆಸರಲ್ಲಿ ಸಕ್ಕರೆ ಖರ್ಚು ಬರೆದು, ಅದನ್ನು ಹಿಂದಿನಿಂದ ಕಳ್ಳಪೇಟೆಯಲ್ಲಿ ೧೬ ರೂಪಾಯಿಗೊಂದು ಮಣದಂತೆ ಮಾರುತ್ತಾರೆ! ಚಿಮಣಿ ಎಣ್ಣೆಯ ಗತಿಯೂ ಇದೇ! ಒಂದು ಚೀಲ ಭತ್ತಕ್ಕೆ ಒಂದು ಚಿಮಣಿ ಎಣ್ಣೆಯ ಪಟ್ಟೆ ಹೀಗೆ ವ್ಯವಹಾರಗಳಾದದ್ದುಂಟು! ಬಡ ಜನರಿಗೆ ಅವರ ಎಣ್ಣೆಯು ಸೀಧಾ ಸಿಗಬೇಕಾದರೆ ಅವರು ಅಂಗಡಿಯವರಿಗೆ ಸೌದಿಕೊರಡುಗಳನ್ನು (ಅದೂ ಪುಕ್ಕಟೆ!) ತಂದುಕೊಡಬೇಕಂತೆ! ಇನ್ನಿತರ ಹಳ್ಳಿಗಳ ಅಂಗಡಿಗಳಲ್ಲಿಯೂ ಹೆಚ್ಚುಕಡಿಮೆ ಇದೇ ಬಗೆಯ ಕಾರಭಾರ ನಡೆದಿದೆಯಾಗಿ ಹೊರಬಿದ್ದಿದೆ.

ಭಟಕಳ— (ತಾ ೧೮ ೫-೪೫)- ನಿನ್ನೆಯಿಂದ ಮಳೆ ಬೀಳಹತ್ತಿದೆ. ಕಳೆದ ಸೋಮವಾರ ವಿಜಯೋತ್ಸವವಾಯಿತು. ಮುಂಜಾನೆ ಮೆರವಣಿಗೆಯಾಯಿತು. ಮೆರವಣಿಗೆಯಲ್ಲಿ ಮುಸಲ್ಮಾನ ಬಾಂಧವರೇ ಹೆಚ್ಚಿದ್ದರು. ಸಂಜೆಯಲ್ಲಿ ಸಭೆಯಾಗಿ ಮಿತ್ರರಿಗೆ ಸಿಕ್ಕ ವಿಜಯದ ಬಗ್ಗೆ ಸಂತೋಷ ವ್ಯಕ್ತಪಡಿಸಲ್ಪಟ್ಟಿತು. ಶಿರಾಲಿಯ ಗ್ರಾಮ-ಪಂಚಾಯತದವರೂ ಹಬ್ಬ ಮಾಡಿದರಾಗಿ ಸುದ್ದಿ ಬಂದಿದೆ.

ಸಬ್ಬಾವಿಯಲ್ಲಿ ಭಟ್ಟಿ ಸಹಿತ ಹಿಡಿಯಲ್ಪಟ್ಟ ಇಸಮ ಕೊತ್ತ ಇವನ ಅಣ್ಣ ದುಖುಂಗನ ಮನೆಯಲ್ಲಿ ಮೊನ್ನೆ ಕೆಲವು ಸರಾಯಿಯ ಬಾಟ್ಲಿಗಳು ಸಿಕ್ಕಿದವಂತೆ.

ಸೀಧಾ ಅಂಗಡಿಯಲ್ಲಿ ನಿನ್ನೆಯಿಂದ ಅಕ್ಕಿ ಸಿಗುವದಿಲ್ಲವಾಗಿ ದೂರು ಕೇಳಬರುತ್ತಿದೆ.

ಶಿರಸಿ— (ತಾ ೨೦ ೫-೪೫) ಹಿಂದೆ ೬-೮ ವರ್ಷಗಳ್ಟು ಹ್ಯಾಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಮತ್ತು ಇತ್ತ ೧೪-೧೫ ವರ್ಷಗಳಿಂದ ಇಲ್ಲಿಯ ಶ್ರೀ ಮಾರಿಕಾಂಬಾ ಹ್ಯಾಸ್ಕೂಲಿನ ಶಿಕ್ಷಕರಾಗಿ ದುಡಿದು ರಾ|| ಅಮ್ಮೆಂಬಳರು ಕಳೆದ ವರ್ಷ ಸೇವಾನಿವೃತ್ತರಾದ ಬಳಿಕ ಸದರಿ ಶಾಲೆಯ ಮುಖ್ಯಾಧ್ಯಾಪಕರಾಗಿದ್ದ ರಾ|| ಶ್ರೀನಿವಾಸ ವೆಂಕಟರಮಣ ಕಾಮತ ಇವರು ಕಳೆದ ಗುರುವಾರ ಅರ್ಧಾಂಗವಾಯುವಿಕಾರದಿಂದ ಅಕಾಲಿಕವಾಗಿ ಸ್ವರ್ಗಸ್ಥರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ಮೃತರು ಬಡತನದಲ್ಲಿ ಹುಟ್ಟಿದಾಗ್ಯೂ ತಮ್ಮ ಬುದ್ಧಿ ಚಾತುರ್ಯದಿಂದ ಅವರಿವರ ಸಹಾಯ ಪಡೆದು ಉಚ್ಚಶಿಕ್ಷಣ ಪಡೆದಿದ್ದರು. ಅದರಿಂದ ಬಡ ವಿದ್ಯಾರ್ಥಿಗಳ ಬಗ್ಗೆ ಅವರು ವಿಶೇಷ ಮಮತೆ ತೋರುತ್ತಿದ್ದರು. ಅವರ ಆತ್ಮಕ್ಕೆ ಶ್ರೀಶನು ಚಿರಶಾಂತಿಯನ್ನೀಯಲಿ!

ಯಲ್ಲಾಪುರ— (ತಾ ೧೬-೫-೪೫) ಸರಕಾರದವರ ಭತ್ತದ ಖರೀದಿ ಒತ್ತರದಿಂದ ಸಾಗಿದೆ. ಅಧಿಕಾರಿಗಳು ಬೇಡಿದಷ್ಟು ಭತ್ತ ಕೊಡದಿದ್ದರೆ ಭಾರತ ರಕ್ಷಣ ಕಾನೂನಿನನ್ವಯ ನೋಟೀಸುಗಳು ಹೊರಡುತ್ತವೆ! ಮಾರ್ಗಗಳ ಮೇಲೆ ಎಲ್ಲಿ ನೋಡಿದಲ್ಲಿ ಅಕ್ಕಿ ಮತ್ತು ಭತ್ತ ಹೇರಿದ ಮೋಟಾರ ಬಂಡಿಗಳು ಕಣ್ಣಿಗೆ ಬೀಳುತ್ತವೆ.

ಇದೇ ಕಳೆದ ತಾ ೧೪ ರಿಂದ ಯಲ್ಲಾಪುರ ಮತ್ತು ಹಳಿಯಾಳ ತಾಲೂಕುಗಳಿಗೆ ಸರಕಾರದವರು ಒಕ್ಕಲಿಗರ ಋಣವಿಮೋಚನೆಯ ಕಾನೂನು ಅನ್ವಯಿಸಿ ಆ ಬಗ್ಗೆ ಅವಶ್ಯವುಳ್ಳ ಶಿಬಂದಿಯನ್ನು ಸಹ ನೇಮಿಸಿದ್ದಾರೆ. ಈ ಎರಡೂ ತಾಲೂಕುಗಳಿಗೆ ಕೂಡಿ ಒಂದೇ ಸಾಲ ನಿರ್ಣಯ ಮಂಡಳ (ಡೆಟ್ ಎಡ್ಜಸ್ಟಮೆಂಟ ಬೋರ್ಡ) ನಿರ್ಮಿಸಲ್ಪಟ್ಟಿದ್ದು ಅದರ ಕಚೇರಿಯು ಇಲ್ಲಿ ಯಲ್ಲಾಪುರದಲ್ಲೇ ಇರತಕ್ಕದ್ದೆಂದು ಸರಕಾರದವರ ನಿರ್ಣಯವಾಗಿದೆ. ಆದರೆ ಈ ಮಂಡಳದ ಚೇರಮನ್ನರಾಗಿ ನೇಮಕವಾದ ರಾ|| ಎತ್ತಿನಮನೆಯವರಿಗೆ ಇಲ್ಲಿ ಯಲ್ಲಾಪುರದಲ್ಲಿರಲು ಮನಸ್ಸಿಲ್ಲವಂತೆ! ಮಂಡಳದ ಕಚೇರಿಯು ತಾ ೧-೪ ೪೫ ರಿಂದ ತೆರೆಯಲ್ಪಡಬೇಕಾಗಿದ್ದರೂ ತಾ ೨೦ ೪-೪೫ ರವರೆಗೂ ಈ ಚೇರಮನ್ನರು ಬಂದು ಮುಟ್ಟಿಲ್ಲ. ಈ ತಿಂಗಳ ಪ್ರಾರಂಭಕ್ಕೆ ಹಾಗೂ ಹೀಗೂ ಇಲ್ಲಿ ಒಂದು ದಿನ ಕಾಲ ಕಳೆದು ಹಾಗೆಯೇ ಹಳಿಯಾಳಕ್ಕೆ ಹೊರಟುಹೋದರು! ಮತ್ತು ಯಲ್ಲಾಪುರದಲ್ಲಿ ತಮ್ಮ ವಾಸ್ತವ್ಯಕ್ಕಾಗಿ ಮಂಡಳದ ಕಚೇರಿಯ ಬಗ್ಗಾಗಿ ಒಳ್ಳೆ ಮನೆಗಳು ಸಿಗುವದಿಲ್ಲವೆಂತಲೂ ಕೆಟ್ಟ ಹವೆಯ ಯಲ್ಲಾಪುರಕ್ಕಿಂತ ಹಳಿಯಾಳದಲ್ಲೇ ತಮ್ಮ ಕಚೇರಿಯನ್ನಿಡಲು ಅಪ್ಪಣೆ ಕೊಡಿಸಬೇಕೆಂತಲೂ (ಆಗ ಹಳಿಯಾಳದಲ್ಲಿದ್ದ) ಜಿಲ್ಲಾ ನ್ಯಾಯಾಧೀಶರ ಕಡೆ ಬೇಡಿಕೊಂಡರಂತೆ. ಜಿಲ್ಲಾ ನ್ಯಾಯಾಧೀಶರು ಕೂಡ ಪಕ್ಷಗಾರ ಜನರಿಗೆ ಅನುಕೂಲ ಅನನುಕೂಲತೆಗಳ ವಿಚಾರ ಮಾಡದೆ, ಅವರ ಅಭಿಪ್ರಾಯ ಸಹ ತಿಳಿಕೊಳ್ಳದ ಪ್ರಯುಕ್ತ ಮಾಡದೆ ಒಮ್ಮೆಲೇ ಚೇರಮನ್ನರ ಬೇಡಿಕೆಯಂತೆ ವ್ಯವಸ್ಥೆ ಮಾಡಲಡ್ಡಿಯಿಲ್ಲವಾಗಿ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆಂದು ಸುದ್ದಿ! ಋಣವಿಮೋಚನೆಯ ಪರಿಹಾರ ಬೇಕಾದವರು ಇಲ್ಲಿಯ ಜನರಷ್ಟು ಹಳಿಯಾಳದಲ್ಲಿಲ್ಲ! ಇಲ್ಲಿಯ ಬಡ ಜನರು ಮಂಡಳದ ಅನುಗ್ರಹ ಪಡೆಯುವದಕ್ಕೆ ತಿರುತಿರುಗಿ ಹಳಿಯಾಳ-ಯಾತ್ರೆ ಮಾಡಬೇಕಾದ ಪ್ರಸಂಗ ಬರಬೇಕಾದುದು ತೀರ ಶೋಚನೀಯ. ಹಳಿಯಾಳದವರಿಗೆ ಯಲ್ಲಾಪುರಕ್ಕೆ ಬರುವದು ಹೊಸ್ತ ಮಾತಲ್ಲ! ಚಹಾ ಸಿಗರೇಟುಗಳ ಬಗ್ಗಾಗಿ ಅವರು ಮಾಡುವ ವೆಚ್ಚದಿಂದ ಯಲ್ಲಾಪುರ ಯಾತ್ರೆಯ ಖರ್ಚು ಸಹಜವಾಗಿ ಸಾಗುವಂತಿದೆ. ಯಲ್ಲಾಪುರದಲ್ಲಿ ಮಂಡಳದ ಕಚೇರಿಯಿರತಕ್ಕದ್ದೆಂದು ನಿರ್ಣಯಿಸಿದ ಸರಕಾರಕ್ಕೆ ಯಲ್ಲಾಪುರದ ಮಾಹಿತಿ ಇಲ್ಲದಿಲ್ಲ. ಅವರಿಗೆ ಪೂರ್ಣ ಮಾಹಿತಿಯುಂಟು. ಯಲ್ಲಾಪುರವನ್ನು ಅನೇಕ ಸಂವತ್ಸರ ನೋಡಿದವರೇ ಈಗ ಮುಂಬಯಿ ಸರಕಾರದ ಕೇಂದ್ರದಲ್ಲಿದ್ದಾರೆ. ಹೀಗಿರುವಾಗ ಬರೇ ಚೇರಮನ್ನರ ಮಾತಿಗೆ ಅವಾಸ್ತವ ಬೆಲೆ ಕೊಟ್ಟು ಯಲ್ಲಾಪುರದ ಬದಲು ಹಳಿಯಾಳದಲ್ಲಿ ಮಂಡಳದ ಕಚೇರಿ ಇಡಬೇಕಾಗಿ ನ್ಯಾಯಾಧೀಶರು ಹೇಗೆ ಶಿಫಾರಸು ಮಾಡಿರುವರೋ ತಿಳಿಯಲೊಲ್ಲದು! ರಾ|| ಎತ್ತಿನಮನೆಯವರು ಹಳಿಯಾಳದಲ್ಲಿ ಕಚೇರಿ ಇಡಬೇಕೆಂದು ಹೇಳುವದರಲ್ಲಿ ಕೆಲವು ಗುಟ್ಟುಗಳುಂಟು. ಅವರು ಧಾರವಾಡ ಜಿಲ್ಲೆಯವರು. ಹಳಿಯಾಳದಲ್ಲಿ ಮಂಡಳದ ಕಚೇರಿಯಿದ್ದರೆ ಧಾರವಾಡದಲ್ಲೇ ತಮ್ಮ ಬಿಡಾರು ಇಟ್ಟು ಕಚೇರಿಯ ಕೆಲಸ ಮಾಡಲು ಅವರಿಗೆ ಅನುಕೂಲವಾಗುತ್ತದೆ! ಹಳಿಯಾಳ-ಧಾರವಾಡ ನಗರಗಳ ವಿಲಾಸಿ ಜೀವನವನ್ನೂ ಉಪಭೋಗಿಸಬರುತ್ತದೆ! ಮಂಡಳದ ಮುಂದಿನ ವ್ಯಾಜ್ಯಗಳಲ್ಲಿ ವಕೀಲರ ಅವಶ್ಯಕತೆಯುದ್ದಲ್ಲಿ ಆ ವ್ಯವಹಾರ ಕಾರವಾರ ಜಿಲ್ಲೆಯ ವಕೀಲರಿಗಿಂತ ತಮ್ಮ ಧಾರವಾಡ ಜಿಲ್ಲೆಯ ವಕೀಲರಿಗೇ ಸಿಗಬೇಕೆಂಬ (ಯಲ್ಲಾಪುರದಲ್ಲಿ ಕಚೇರಿಯಿದ್ದರೆ ಅದು ಅವರಿಗೆ ಸಿಗುವಂತಿಲ್ಲ) ಅಂತರಂಗದ ಮನೀಷೆಯೂ ಚೇರಮನ್ನರದಿರಬಹುದಾಗಿ ಹೇಳುತ್ತಾರೆ. ಕಾರಣ ಸರಕಾರದವರು ತಮ್ಮ ಮೂಲ ನಿರ್ಣಯವನ್ನು ಬದಲಿಸಬಾರದಾಗಿ ನಮ್ಮ ಸೂಚನೆಯಿದೆ. ಯಲ್ಲಾಪುರದಲ್ಲುಳಿದು ಕೆಲಸ ಮಾಡಲು ಈ ಚೇರಮನ್ನರಿಗೆ ಸಾಧ್ಯವಿಲ್ಲದಿದ್ದರೆ ಅವರಿಗೆ ಮನೆಗೆ ಹೋಗಲು ಹೇಳಲೇನೂ ಅಡ್ಡಿಯಿಲ್ಲ! ಯಲ್ಲಾಪುರದಲ್ಲುಳಿದು ಕೆಲಸ ಮಾಡಲು ಬೇಕಷ್ಟು ಮಂದಿ ಸಿಗುವಂತುಂಟು. ಕಚೇರಿಯ ವಿಷಯ ಜನತೆಯ ಅನುಕೂಲತೆಯ ಬಗ್ಗಾಗಿ, ಚೇರಮನ್ ವ್ಯಕ್ತಿಯ ಸುಖ-ಸೌಕರ್ಯಗಳ ಬಗ್ಗಲ್ಲ, ಎಂಬುದು ಸ್ಪಷ್ಟವುಂಟು.

ಕಳೆದ ಸೋಮವಾರ ಇಲ್ಲಿ ಯುರೋಪ ಯುದ್ಧದ ವಿಜಯದ ಬಗ್ಗೆ ದೊಡ್ಡ ಉತ್ಸವವಾಯಿತು. ಊರೆಲ್ಲ ಸಿಂಗರಿಸಲ್ಪಟ್ಟಿತು. ಮುಂಜಾನೆ ದೊಡ್ಡ ಮೆರವಣಿಗೆಯಾಯಿತು. ಎಲ್ಲ ದೇವಸ್ಥಾನಗಳಲ್ಲಿ ಪ್ರಾರ್ಥನೆಗಳು ಜರುಗಿಸಲ್ಪಟ್ಟವು. ಮೆರವಣಿಗೆಯು ತಿರುಗಿ ಕಚೇರಿಗೆ ಬಂದ ಮೇಲೆ ಅಲ್ಲಿ ಸಭೆಯಾಗಿ ವಿಜಯಿ ಮಿತ್ರರನ್ನು ಅಭಿನಂದಿಸುವ ಭಾಷಣಗಳಾದವು. ಸೈನಿಕರನ್ನು ಕೊಡಮಾಡಿಕೊಟ್ಟವರಿಗೆ ಮಾಮಲೇದಾರರು ಪೂಮಾಲೆಗಳನ್ನು ಹಾಕಿ ಸತ್ಕರಿಸಿದರು. ಸಂಜೆಗೆ ಪುನಃ ಸಂದ್ಯಾಟಿಗಳಾದವು. ದೀಪೋತ್ಸವವಾಯಿತು, ದೊಡ್ಡ ಹೋಳಿಯು ಸುಡಲ್ಪಟ್ಟಿತು.

The Agricultural & Industrial Bank, Ltd.
[Incorporated in British India, Liability of Members limited]
Head Office COONDAPOOR S. K

ANNOUNCEMENT.
The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR,
25-4-1945.

K VAMAN SHENAI
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದಿಂದ ಈಗ ಪ್ರತಿ ಸಂಜೆ ಆಕಾಶದಲ್ಲಿ ಮೋಡಗಳಾಗುತ್ತಿವೆ. ಒಂದೆರಡು ಹನಿಗಳೂ ಉದುರುತ್ತಿವೆ. ಮೊನ್ನೆ ಧಾರೇಶ್ವರ, ಹೊಳೆಗದ್ದೆ ಕಡೆಗೆ ಜಲ್ಲೋ ಮಳೆಯಾದ ಸುದ್ದಿಯುಂಟು.

ಈ ಜಿಲ್ಲೆಯಲ್ಲೀಗ ೧೦ ಹಾಯಸ್ಕೂಲುಗಳಿವೆ. ಸುಮಾರು ೬೦೦ರಷ್ಟು ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಗೆ ಕೂಡ್ರುತ್ತಾರೆ; ೩೦೦ರಷ್ಟಾದರೂ ತೇರ್ಗಡೆ ಹೊಂದುತ್ತಾರೆ. ಅವರಲ್ಲಿ ಕಾಲೇಜ-ಶಿಕ್ಷಣ ಪಡೆಯಬಯಸುವವರು ಧಾರವಾಡ, ಬೆಳಗಾಂವ, ಪುಣೆ, ಕೊಲ್ಹಾಪುರ, ಮುಂಬಯಿ ಮುಂತಾದ ಪರಸ್ಥಳಗಳಿಗೆ ಹೋಗಬೇಕಾಗುತ್ತದೆ. ಆ ಸ್ಥಳಗಳಲ್ಲಿ ವೆಚ್ಚ ಬಹಳ ಬರುತ್ತದೆ. ಅದೇ ನಮ್ಮ ಜಿಲ್ಲೆಯಲ್ಲಿ ಒಂದು ಕಾಲೇಜು ತೆರೆಯಲ್ಪಟ್ಟರೆ ಶಿಕ್ಷಣವು ಅಗ್ಗವಾಗುವಂತುಂಟು, ಪರ-ಜಿಲ್ಲೆಗಳಿಗೆ ಹೋಗಿ ಕಲಿಯಲಾಗದ ಬಹಳಷ್ಟು ವಿದ್ಯಾರ್ಥಿಗಳೂ ಕೂಡ ಕಾಲೇಜ ಶಿಕ್ಷಣ ಪಡೆಯಬಹುದಾಗುವಂತುಂಟು. ಇದಲ್ಲದೆ ಬಹುತೇಕ ಜಿಲ್ಲೆಗಳಲ್ಲಿ ಈಗ ಕಾಲೇಜುಗಳಾಗಿವೆ. ಅದರಂತೆ ನಮ್ಮ ಜಿಲ್ಲೆಯಲ್ಲಿ ಒಂದು ಕಾಲೇಜು ತೆರೆದು ಜಿಲ್ಲೆಯವರಿಗೆ ಉಚ್ಚ ಶಿಕ್ಷಣದ ಅನುಕೂಲತೆಗಳನ್ನು ಒದಗಿಸಿ ಕೊಡುವದು ಕ್ರಮಪ್ರಾಪ್ತವಿದೆ. ಈ ಎಲ್ಲ ವಿಷಯಗಳ ವಿಚಾರ ಮಾಡಿ ಇಲ್ಲೊಂದು ಕಾಲೇಜು ತೆರೆಯುವ ಆಲೋಚನೆ ಮಾಡುವದಕ್ಕಾಗಿ ಇಲ್ಲಿಯ ಮುಂದಾಳುಗಳಾದ ರಾ| ಅಣ್ಣಪ್ಪ ರಾಮಚಂದ್ರ ಪೈ ಇವರು ಬರುವ ರವಿವಾರ ತಾ ೨೭-೫-೧೯೪೫ಕ್ಕೆ ಇಲ್ಲಿಯ ಗಿಬ್ಬ ಹಾಯಸ್ಕೂಲಿನ ಧೇಂಡೆ ಸಭಾಮಂದಿರದಲ್ಲಿ ಜಿಲ್ಲೆಯ ಪ್ರಮುಖ ಶಿಕ್ಷಣ ಪ್ರೇಮಿಗಳ ಸಭೆಯೊಂದನ್ನು ಕರೆದಿದ್ದಾರೆ.

ಇದೇ ಬರುವ ತಾ ೨೬-೬ ಕ್ಕೆ ಆಗಲಿರುವ ಜಿಲ್ಲಾ ಲೋಕಲ್ ಬೋರ್ಡಿನ ಸಾರ್ವತ್ರಿಕ ಚುನಾವಣೆಗೆ ಈ ತಾಲೂಕಿನ ಉತ್ತರ ಭಾಗದ ಬರ್ಗಿ ಮತದಾರ ಸಂಘದಲ್ಲಿ ೨ ಆಸನಗಳಿಗಾಗಿ ರಾ| ಪುಂಡಲೀಕ ಶಾನಭಾಗ ಚಿತ್ರಿಗಿ, ಶ್ರೀಧರ ಪಂಡಿತ ಬರ್ಗಿ, ಗಜಾನನ ನಾ. ಪಂಡಿತ ಗೋಕರ್ಣ, ಮುದ್ದು ನಾಯ್ಕ ಹನೇಹಳ್ಳಿ, ಹೊನ್ನಪ್ಪ ಮುರ್ಕುಂಡಿ ನಾಯ್ಕ ಕೋಡ್ಕಣಿ ಮತ್ತು ಹೆಗಡೆಯ ಹೊಸ ಪಟೇಲ ರಾಮ ನಾಯ್ಕ ಹೀಗೆ ೬ ಮಂದಿ ಹುರಿಯಾಳುಗಳೂ, ದಕ್ಷಿಣ ಭಾಗದ ಕೊಪ್ಪ ಮತದಾರ ಸಂಘದಲ್ಲಿ ೧ ಸರ್ವಸಾಮಾನ್ಯ ಆಸನಕ್ಕಾಗಿ ರಾ| ಸೀತಾರಾಮ ಭಾಗವತ ಕುಮಟಾ ಮತ್ತು ನಾಗೇಶ್ವರ ಕೃಷ್ಣ ಭಟ್ಟ ಹೀಗೆ ಇಬ್ಬರು ಮತ್ತು ಹರಿಜನರಿಗಾಗಿ ಕಾದಿಟ್ಟ ೧ ಆಸನಕ್ಕಾಗಿ ರಾ| ದೇವಪ್ಪ ಬೋಳಕರ ಅಂಕೋಲಾ, ಪೋನು ಚಮಗಾರ ಅವರ್ಸಾ ಮತ್ತು ಪೇತು ದೀನಾ ಮುಕ್ರಿ ಮಿರ್ಜಾನ ಹೀಗೆ ಮೂವರು ಕೂಡಿ ೨ ಆಸನಗಳಿಗಾಗಿ ೫ ಮಂದಿ ಹುರಿಯಾಳುಗಳೂ ನಿಂತಿದ್ದಾರೆ.

ಮೊನ್ನೆ ರಾತ್ರಿ ಮಣಕಿಯಲ್ಲಿ ಓರ್ವ ಕ್ರಿಶ್ಚಿಯನ ಹೆಂಗಸು ಆಕಸ್ಮಿಕವಾಗಿ ಮರಣಪಟ್ಟಳು. ಅದೊಂದು ನರಹತ್ಯೆಯೆಂದು ಹೇಳುತ್ತಾರೆ. ಸತ್ತ ಮೃತಳ ಶವವು ಮರಣೋತ್ತರ ಪರೀಕ್ಷೆಗಾಗಿ ಇಲ್ಲಿಯ ಆಸ್ಪತ್ರೆಗಾಗಿ ತರಲ್ಪಟ್ಟಿತು.

ಊರಲ್ಲೀಗ ಮಂಗಗಳ ಕಾಟ ಅಸಹ್ಯವಾಗಿದೆ! ಪ್ರಯಾಸಪಟ್ಟು ಬೆಳಸಿದ ಮಾವಿನ ಕಾಯಿ, ಬಾಳೇ ಕಾಯಿ, ಮುಂತಾದ ಹಣ್ಣು-ಹಂಪಲಗಳೂ ಕಾಯಿ ಪಲ್ಯಗಳೂ ಈ ಮಂಗಗಳ ಪಾಲಾಗಿ ಹೋಗುತ್ತವಲ್ಲ ಎಂದು ಜನರು ಮರಗುವದು ಕಂಡುಬರುತ್ತಿದೆ. ಕೆಲವು ಕಾಲದ ಹಿಂದೆ ಮ್ಯುನಿಸಿಪಾಲಿಟಿಯವರು ಮಂಗಗಳ ನಾಶವನ್ನು ಮಾಡಲಾರಂಭಿಸಿದ್ದರು. ಆದರೆ ಈಗ ಅವರ ಚಟುವಟಿಕೆ ಕಂಡುಬರುವದಿಲ್ಲ! ಮಂಗಗಳನ್ನೋಡಿಸುವ ಸಾಧನಗಳೇ ಅವರ ಕಡೆ ಇಲ್ಲವಂತೆ! ಮಂಗಗಳ ಸುಲಿಗೆಯನ್ನು ತಡೆಯುವ ಕೆಲಸ ಪೋಲೀಸರಿಗೆ ಒಪ್ಪಿಸಬಾರದೇಕೆ?

ಕೊಚ್ಚಿಯಿಂದ ತರಿಸಿದ ತೆಂಗಿನ ಎಣ್ಣೆಯ ದರವನ್ನು ಈಗ ಜಿಲ್ಲಾಧಿಪರು ನಿಯಂತ್ರಿಸಿ, ಘಟ್ಟದ ಕೆಳಗಿನ ತಾಲೂಕ-ಪೇಟೆಗಳಲ್ಲಿ ಎಣ್ಣೆಯ ಮಣ ೧ರ ಸಗಟಾವಧಿಯ ದರವನ್ನು ರೂ. ೧೪-೧೧-೦ಗೆ ಮತ್ತು ಚಿಲ್ಲರೆ ರತ್ತಲ ೧ರ ದರವನ್ನು ೯ ಆಣೆಗೆ ಹಾಗೂ ಘಟ್ಟದ ಮೇಲಿನ ಪ್ರದೇಶದಲ್ಲಿ ಮಣ ೧ರ ಧಾರಣೆಯನ್ನು ರೂ. ೧೬ಕ್ಕೆ ಮತ್ತು ಚಿಲ್ಲರೆ ರತ್ತಲ ೧ರ ಧಾರಣೆಯನ್ನು ೧೦ ಆಣೆಗೆ ನಿಯಂತ್ರಿಸಿದ್ದಾರೆ. ಮುಂಬಯಿಯಿಂದ ತರಿಸಿದ ನಿಯಂತ್ರಿತ ಕೊಬರಿ ಎಣ್ಣೆಯ ದರ ಮಾತ್ರ ಹಿಂದಿನಂತೆ ರತ್ತಲ ೧ಕ್ಕೆ ೭ ಆಣೆಯುಂಟು.

ಕಳೆದ ಸೋಮವಾರ ಯುರೋಪ-ಯುದ್ಧದ ವಿಜಯೋತ್ಸವವಾಯಿತು. ಮುಂದಾನೆ ಸಮ್ರಾಟರ ಭಾಷಣದೊಂದಿಗೆ ಅಧಿಕಾರಸ್ಥರೂ ಯುದ್ಧ ಯತ್ನ ಮಂಡಳದವರೂ ಸರಕಾರಿ ನೌಕರರೂ ಊರಲ್ಲಿ ಮೆರವಣಿಗೆ ನಡೆಸಿದರು, ಸಂಜೆಯಲ್ಲಿ ತಾಲೂಕ ಕಚೇರಿಯಲ್ಲಿ ದೀಪೋತ್ಸವವಾಯಿತು, ಬಂಗಲೆ ಗುಡ್ಡೆಯ ಮೇಲೆ ಆನಂದದರ್ಶಕ ತೋಪು ಹಾರಿಸಲ್ಪಟ್ಟಿತು. ಸರಕಾರಿ, ಅರ್ಧ-ಸರಕಾರಿ ಕಚೇರಿಗಳಲ್ಲಿ ತೋರಣಗಳು ರಾಜಿಸುತ್ತಿದ್ದವು.

ಕೋಡ್ಕಣಿ ಸೀಧಾ-ಅಂಗಡಿಯ ಬಗ್ಗೆ ಕಳೆದ ವಾರ ಪ್ರಕಟವಾದ ಟೀಕೆ ನಿರಾಧಾರವಿರುತ್ತದೆಂದೂ ಅಂಗಡಿಯವರು ತಮಗೆ ನೇಮಿಸಿಕೊಟ್ಟ ಕೆಲಸವನ್ನು ನಿಯಮಿತವಾಗಿ ನಡೆಸುತ್ತಾರೆಂದೂ ಕೊಳ್ಳುವವರೊಬ್ಬರು ಬರೆಯುತ್ತಾರೆ.

ಹೊನ್ನಾವರ— (ತಾ ೧೯-೫-೧೯೪೫) ಪಟ್ಟಣದೊಳಗಿನ ಸೀಧಾ ಅಂಗಡಿಗಳ ಬಾಗಿಲಿನಿಂದ ಲಂಚಬಾಳ ವ್ಯಾಪಾರಿಗಳ ಗೋಳಾಗಿರಬಹುದಾದರೂ ಜನರಿಗೆ ಸುಖವಾಗಿದೆಯೆಂದು ಹೇಳಬರುವಂತಿಲ್ಲ. ಅವರ ಗೋಳು

(೧ನೇ ಪುಟದ ಮೇಲೆ ಮುಂದರಿಸಿದೆ.)

ಬೇಕು— ಇಬ್ಬರು ೨ನೇ ವರ್ಗ ಕನ್ನಡ ಟ್ರೇಂಡ ಶಿಕ್ಷಕರು ಇದೇ ಬರುವ ಜೂನ ೧ನೇ ತಾರೀಖಿನಿಂದ ಬೇಕಾಗಿದ್ದಾರೆ. ಪಗಾರ ಲಾಯಕಿ ಪ್ರಕಾರ. ಸರ್ಟಿಫಿಕೇಟ ಸಹಿತ ಸಮಕ್ಷ ಭೆಟ್ಟಿಯಾಗಿರಿ ಇಲ್ಲವೆ ಕೆಳಗಿನ ಪತ್ತೆಯ ಮೇಲೆ ಕೂಡಲೆ ಅರ್ಜಿ ಕಳಿಸಿರಿ.

ಪತ್ತೆ— ದಿ ಮೆನೇಜರ, ಸೇಂಟ ಎಂಥನೀಸ ಎಜ್ಯುಕೇಶನಲ್ ಸೊಸಾಯಿಟಿ, ಹೊನ್ನಾವರ.

"ಸಹ್ಯಾದ್ರಿ"ಯು ಮಾಡಿರುವ ಪ್ರಗತಿಯ ಮತ್ತು ಸಂಪಾದಿಸಿರುವ
ಲೋಕವಿಶ್ವಾಸದ ಪೂರ್ಣ ಶ್ರೇಯಸ್ಸು ನಿಮಗೇ ಸಲ್ಲುತ್ತಿದೆ.

ಬಂದ ವ್ಯವಹಾರದ ಮೊತ್ತ ರೂ. ೪೧,೦೮,೯೪೮
ಮನ್ನಿಸಿದ ವ್ಯವಹಾರದ ಮೊತ್ತ „ ೨೮,೩೩,೭೬೯
ಪೂರ್ಣಪಡಿಸಿದ ವ್ಯವಹಾರದ ಮೊತ್ತ „ ೨೫,೦೪,೯೨೪

ಈ ಕಂಪನಿಯಲ್ಲೇ ನಿಮ್ಮ ಜೀವದ ವಿಮೆ ಇಳಿಸಿ, ನಿಮ್ಮ ಸಂಪತ್ತನ್ನೂ ಸೌಖ್ಯವನ್ನೂ ಸಮೃದ್ಧಗೊಳಿಸಿರಿ.

☞ ಏಜಂಟರಾಗುವವರಿಗೆ ಭರಪೂರ ದಲಾಲಿ ಕೊಡಲಾಗುತ್ತಿದೆ

ಸಹ್ಯಾದ್ರಿ ಇನ್ಶ್ಯೂರನ್ಸ ಕಂ., ಲಿ., }
ನಾಸಿಕ. }

ಜಿ. ಜಿ. ಸೌಂದಣಕರ,
ಮೆನೇಜಿಂಗ ಡ್ಯಾರೆಕ್ಟರ.

ಇಂದು ಚಿಕ್ಕ ಬಾಲೆಯಾಗಿರುವ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
ಅದಕ್ಕೊಂದೇ ಮಾರ್ಗವುಂಟು.

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಆಗುತ್ತಿದೆ!

ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವವು!
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.

[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

No 4905 (Estt)

NOTIFICATION.

Applications are invited by 15—6—1945 for the following temporary posts in the Supply Department of the Kanara District.—

	Name of posts.	*No. of posts.*	*Scale of pay.*
1	Chief Rationing Inspector	1	Rs 100—5—150
2	Taluka Supply Assistants	2	Rs 80—5/2—97 *or* Rs 100—5—150 according to qualifications
3	Foodgrain Grading Officers	11	Rs 80—5/2—95
4	Godown-keepers	21	Rs 60—5/2—75

I Applications should contain the following particulars.—

(a) The name of the applicant in full
(b) Educational qualifications together with the marks obtained in the final examination. (The minimum qualification required for the posts of godown-keepers is Intermediate Arts or Science. For other posts the candidates must have passed either B A, B.A (Hons), B Sc, B Com, or LL B., Examination of the Bombay or any other University)
(c) Age (At the time of submitting the applications candidates must be below the age of 25)
(d) Caste
(e) Previous experience if any.
(f) Languages known.
(g) Present occupation (with pay if in service).

II. Persons already in Government service or serving under Local Bodies should apply through the Heads of their Departments

III. Selected candidates will be interviewed in the Collector's Office at Karwar and will have to come to Karwar at their own expense.

Karwar, }
16—5—1945 }

V. NANJAPPA,
COLLECTOR OF KANARA

PRESS NOTE.

A press note issued by the Supply Commissioner, Bombay says that the Government of Bombay has amended the Bombay Rationing Order 1943 with a view to make it clear that the concession given to the members of the public to distribute rationed articles lawfully obtained by them to their family members or to guests or to any other person without payment of price or in exchange for any other rationed article does not apply to the authorized distributors and establishments Distribution of rationed articles by the dealers and establishments must be in accordance with the provisions of the order. No dealer or person in charge of an establishment can make a free gift or exchange of the rationed articles which are [illegible] possession in his business capacity

The necessary amendment has been published in the Bombay Government Gazette dated [illegible]th April, 1945

Karwar }
15—5—1945 }

L. F. SALDANHA.
for District Magistrate Kanara

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೮-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೧-೦
ವ್ಹಿ. ಪಿ. ಯಿಂದ ಹಣ ಕಳುಹುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು.

Reg. No. B 1270. Monday, 28th May, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪೭

ಕುಮಟಾ:- ಸೋಮವಾರ, ತಾ ೨೮ ಮಾಹೆ ಮೇ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಪ್ರಥಮ ೧೫ ಎರ್ ಇಂಚ
೧ ಸಾರಿಗೆ ೬ ಆಣೆಯಂತೆ.
[illegible] ೧೫ ಎರ್ ಇಂಚ
೧ ಸಾರಿಗೆ ೫ ಆಣೆಯಂತೆ
ಹೆಚ್ಚು ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಜಪಾನ-ಯುದ್ಧದ ಕೊನೆಯೆಂದು?

(ಸಮೀಕ್ಷಕನು ಬರೆದುದು.)

ಯುರೋಪ-ಯುದ್ಧದಲ್ಲಿ ವಿಜಯಿಯಾದ ಮಿತ್ರರು ಈಗ ತಮ್ಮ ಪೂರ್ಣ ಲಕ್ಷವನ್ನು ಜಪಾನದ ಕಡೆ ತಿರುಗಿಸಿದ್ದಾರೆ. ಜಪಾನವನ್ನು ಈ ವರ್ಷದ ಕೊನೆಯೊಳಗಾಗಿ ಬಗ್ಗು ಬಡಿಯಬೇಕೆಂದು ಮಿತ್ರರ ಬಯಕೆಯುಂಟು. ಇನ್ನು ೬ ತಿಂಗಳಲ್ಲಿ ಜಪಾನರು ಶಸ್ತ್ರವನ್ನು ಕೆಳಗಿಟ್ಟು ಶರಣು ಬರುವರೆಂದು ಸಾನ-ಫ್ರಾನ್ಸಿಸ್ಕೋದಲ್ಲಿ ಕೂಡಿದ ಮಿತ್ರರಾಷ್ಟ್ರಗಳ ಪ್ರತಿನಿಧಿಗಳು ಲೆಕ್ಕ ಹಾಕಿದ್ದಾರೆಂದೂ ವರದಿಯಾಗಿದೆ. ಆದರೆ ಆ ವಿಷಯದಲ್ಲಿ ನನಗೆ ಸಂಶಯವಾಗುವದಿಲ್ಲವೆಂದು ನಾನು ಈಗಲೇ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಜರ್ಮನಿಯಂಥ ಬಲಾಢ್ಯ ಶತ್ರುವನ್ನು ಮಣ್ಣುಗೂಡಿಸಿದ ಬಲಶಾಲಿ ಮಿತ್ರರಿಗೆ ಈಗ ಏಕಾಕಿಯಾಗಿ ಹೋರಾಡುತ್ತಿರುವ ಜಪಾನಿಯರನ್ನು ಮಣಿಸುವದು ತೀರ ಸುಲಭವೆಂದು ಮೇಲಿಂದ ಮೇಲೆ ನೋಡುವವರಿಗೆ ಕಾಣಬಹುದು. ಆದರೆ ಜರ್ಮನರ ಪರಿಸ್ಥಿತಿ ಬೇರೆಯಿತ್ತು; ಜಪಾನರ ಪರಿಸ್ಥಿತಿ ಬೇರೆಯುಂಟು. ಜರ್ಮನರು ರುಶ್ಯರೊಡನೆ ಹೋರಾಡಿ ಹೋರಾಡಿ ಪೂರ್ಣ ದಣಿದು ಹೋಗಿದ್ದರು, ಲಂಡನವನ್ನು ಭಗ್ನ ಮಾಡುವದಕ್ಕೆಂದು ತಮ್ಮ ವೈಮಾನಿಕ ಬಲವನ್ನೆಲ್ಲ ಉಪಯೋಗಿಸಿ ಕಳಕೊಂಡು ಕೂತಿದ್ದರು; ಸ್ಟಾಲಿನಗ್ರಾಡದಲ್ಲಿ ಕಾಲಿ ಹಚ್ಚಿಕೊಂಡು ಅಪಾರ ನಷ್ಟ ಮಾಡಿಕೊಂಡಿದ್ದರು! ಆದರೆ ಜಪಾನರು ಈ ವರೆಗೆ ಎಲ್ಲೂ ತಮ್ಮ ವಿಮಾನಬಲವನ್ನಾಗಲಿ ಸೈನಿಕ ಬಲವನ್ನಾಗಲಿ ಬಲಿ ಕೊಟ್ಟಿರುವದಿಲ್ಲ. ಎಲ್ಲೂ ಅವರು [illegible] ಕಾಳಗ ಮಾಡಿ ತಮ್ಮ ಶಕ್ತಿಯ ಅಪವ್ಯಯ ಮಾಡಿರುವದಿಲ್ಲ. ಅವರ ನೌಕಾಬಲವಾದರೂ ಮಿತ್ರರನ್ನು ತಪ್ಪಿಸಿಕೊಂಡೇ ತಿರುಗಾಡುತ್ತಿದೆ. ಶಾಂತ-ಸಾಗರದಲ್ಲಿ ಅಮೇರಿಕೆಯವರು ಒಂದೊಂದೇ ನಡುಗಡ್ಡೆಯನ್ನು ಕಳೆದ ೧-೧½ ವರ್ಷದಿಂದ ಆಕ್ರಮಿಸಿಕೊಳ್ಳುತ್ತ ಜಪಾನವನ್ನು ಸುತ್ತುವರಿಯುತ್ತ ಬಂದಿರುವರೇನೋ ನಿಜ ಆದರೂ ಜಪಾನರು ೧೯೪೨ರಲ್ಲಿ ಆಕ್ರಮಿಸಿಕೊಂಡ ವಿಸ್ತಾರವಾದ ಭೂಭಾಗದ ಹತ್ತರಲ್ಲಿ ೧ ಪಾಲಿಗಿಂತ ಹೆಚ್ಚಿಗೆ ಪ್ರದೇಶ ಅವರ ಕೈ ಬಿಟ್ಟುಹೋಯಿತೆಂದು ಹೇಳಬರುವದಿಲ್ಲ. ಆ ಭಾಗಗಳನ್ನು ಆಕ್ರಮಿಸಿಕೊಳ್ಳಲಿಕ್ಕೆ ಮಿತ್ರರಿಗೆ ಅಲ್ಲಿಯ ಜನರು, ಜರ್ಮನರನ್ನು ಹೊರಗಟ್ಟಲು ಹಟ್ಟಿದರು ಸಾಧ್ಯವಾದಂತೆ ಸಹಾಯ ಮಾಡಿದ ನಾಡುಗಳ ಜನರು ಮಿತ್ರರಿಗೆ ನೆರವಾದಂತೆ, ನೆರವಾಗುವರೆಂದು ನಾನು ಹೇಳಲಾರೆ. ಯುರೋಪದ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಬೇಕಿತ್ತು; ಜರ್ಮನರನ್ನು ಹೊರಗಟ್ಟಿದರೆ ತಮಗೆ ಸ್ವಾತಂತ್ರ್ಯ ಸಿಗುವದೆಂಬ ವಿಶ್ವಾಸವಿತ್ತು. ಜಪಾನರು ಆಕ್ರಮಿಸಿದ ಬ್ರಹ್ಮದೇಶ, ಮಲಾಯಾ, ಇಂಡೋಚೀನ, ಸುಮಾತ್ರಾ, ಜಾವಾ ಮೊದಲಾದ ನಾಡುಗಳ ಜನರಿಗೆ ಅಂಥ ಸ್ವಾತಂತ್ರ್ಯ-ಲಾಭದ ಆಶೆಯೂ ಇಲ್ಲ, ವಿಶ್ವಾಸವೂ ಇಲ್ಲ! ಮಿತ್ರರು ಆ ನಾಡುಗಳಲ್ಲಿ ಪುನಃ ತಮ್ಮ ಸಾಮ್ರಾಜ್ಯವನ್ನೇ ಸ್ಥಾಪಿಸಲಿಚ್ಛಿಸುತ್ತಾರೆ!! ಜಪಾನಿಯರಿಗೂ ಸಾಮ್ರಾಜ್ಯ ಬೇಕೆಂಬುದು ನಿಜ ಆದರೆ ಅಂತಹ ಪ್ರಸಂಗ ಬಂದರೆ ಅವರು ಸಾಮ್ರಾಜ್ಯ ಕಟ್ಟುವ ಅಭಿಲಾಷೆಯನ್ನು ತೊರೆದು, ಆಯಾ ನಾಡಿನ ಜನರಿಗೆ ಸ್ವಾತಂತ್ರ್ಯದ ಆಶೆ ನಂಬಿಗೆಗಳನ್ನು ತೋರಿಸಿ, ಮಿತ್ರರ ವಿರುದ್ಧ ಹೋರಾಡಲಿಕ್ಕೆ ಅವರಿಗೆ ಪ್ರೋತ್ಸಾಹ ಕೊಡುವರೆಂದು ನಾನು ತಿಳಿಯುತ್ತೇನೆ. ಹಾಗೆ ಅವರು ಮಾಡಿದಲ್ಲಿ ಮಿತ್ರರು ಘೋರ ಕಷ್ಟದಲ್ಲಿ ಬೀಳುವದು ಖಂಡಿತ. ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ವೀರರನ್ನು ಎದುರಿಸುವದು ಬೇರೆ, ಪರರ ಸಾಮ್ರಾಜ್ಯ ಉಳಿಸುವದಕ್ಕಾಗಿ ಹೋರಾಡುವ ಭಾಡಿಗೆಯ ಶಿಪಾಯಿಗಳನ್ನು ಎದುರಿಸುವದು ಬೇರೆ. ಸ್ವಾತಂತ್ರ್ಯಕ್ಕಾಗಿ ಕಾದಾಡುವ ಜನರನ್ನು ಗೆದ್ದ ಉದಾಹರಣೆಗಳು ಇತಿಹಾಸದಲ್ಲಿ ತೀರ ವಿರಳ. ಮೇಲಾಗಿ ಮಿತ್ರರ ಹೋರಾಟಕ್ಕೆ ನೈತಿಕ ಬೆಂಬಲವೂ ಇಲ್ಲ! ಇದು ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ನಡೆಸಿದ ಯುದ್ಧವಾಗದೆ ಪರರ ಸ್ವಾತಂತ್ರ್ಯ ಅಪಹರಿಸುವದಕ್ಕಾಗಿ ನಡೆಸಿದ ಸ್ವಾರ್ಥೀ ಯುದ್ಧವೆಂದು ತಿಳಿಯಲ್ಪಡುವದು. ಈ ಕಾರಣದಿಂದ ಪೂರ್ವ ಏಶಿಯಾಖಂಡದೊಳಗಿನ ಯುದ್ಧದಲ್ಲಿ ಮಿತ್ರರಿಗೆ ಬಹಳ ಕಷ್ಟವಾಗುವದೆಂದು ನನ್ನ ಎಣಿಕೆಯಿದೆ. ಮಿತ್ರರಿಗಾದರೂ ಈ ಯುದ್ಧವನ್ನು ತಾವು ಸುಲಭವಾಗಿ ಗೆಲ್ಲುವೆವೆಂಬ ವಿಶ್ವಾಸವಿಲ್ಲ. ಅದರಿಂದಲೇ ಅವರು ರುಶ್ಯರನ್ನು ಈ ಯುದ್ಧದಲ್ಲಿ ಸೇರಲು ಪ್ರೋತ್ಸಾಹ ಮಾಡುತ್ತಿದ್ದಾರೆ! ಜಪಾನಿಯರ ವಿರುದ್ಧ ರುಶ್ಯರ ಮನಸ್ಸು ಕೆಡಿಸಲು ಬಗೆಬಗೆಯ ಪ್ರಚಾರವನ್ನು ನಡೆಸುತ್ತಿದ್ದಾರೆ! ಆದರೆ ರುಶ್ಯರು ಜಪಾನಿಯರ ವಿರುದ್ಧ ಯುದ್ಧ ಮಾಡಿ ಮಿತ್ರರಿಗೆ ನೆರವಾಗುವರೆಂದು ನಾನು ತಿಳಿಯುವದಿಲ್ಲ. ಯುರೋಪದೊಳಗಿನ ಘಟನೆಗಳನ್ನು ನೋಡಿದಲ್ಲಿ ರುಶ್ಯರು ಮಿತ್ರರಿಂದ ಸಿಡಿದು ನಿಂತು, ಮಿತ್ರರ ಹೆಚ್ಚುತ್ತಿರುವ ಪ್ರಾಬಲ್ಯವನ್ನು ಸೊಕ್ಕನ್ನು ಅಡಗಿಸುವದಕ್ಕಾಗಿ ಅಂತರಂಗದಿಂದ ಜಪಾನಿಯರಿಗೇ ಮದ್ದತ್ತು ಮಾಡ್ಯಾರೆಂದು ನನಗೆ ಸ್ಪಷ್ಟ ದೀಸುತ್ತದೆ! ಹಾಗಾದಲ್ಲಿ ಮಿತ್ರರಿಗೆ ಬಲು ಕಷ್ಟವಾಗುವದು ಅದರಿಂದ ಜಪಾನ ಯುದ್ಧ ಬೇಗನೇ ಮುಗಿಯುವದೆಂಬ ಕಲ್ಪನೆ ನನಗೆ ಮಾನ್ಯವಿಲ್ಲ ಅದು ಕನಿಷ್ಟ ೨ ವರ್ಷವಾದರೂ ನಡೆಯಬಹುದು.

(೨ನೇ ಪುಟದಿಂದ ಮುಂದರಿದ್ದು.)

ರಿಗೆ ನಿಯಂತ್ರಿತ ದರದಿಂದ (ಮಣ ೧೪ಕ್ಕೆ ರೂ. ೩॥) ಹತ್ತಿ ಕಾಳು ದೊರೆಯುವ ವ್ಯವಸ್ಥೆ ಮಾಡಿದಂತೆ ಇಲ್ಲೂ ಮಾಡದಾರರೇ?

ಭಟಕಳ— (ತಾ. ೨೫-೫-೪೫) ಮ್ಯಾಲೇರಿಯ ಉಗ್ರವಾಗಿದೆ. ದಿನಾ ೧-೨ ಮರಣಗಳಾಗುತ್ತಿವೆ. ಬೇನೆಯನ್ನು ನಿಯಂತ್ರಿಸುವಲ್ಲಿ ನಗರ ಸಭೆಯವರು ಏನೂ ಉಪಾಯ-ಯೋಜನೆ ಮಾಡಿದ್ದು ಕಾಣುವದಿಲ್ಲ. ಹಿಂದುಗಳ ಕೇರಿಯಲ್ಲಿ ಸ್ವಚ್ಛತೆಯ ಕೆಲಸ ಇನ್ನು ಸಮಾಧಾನಕರವಿರುವದಿಲ್ಲ. ಅಸ್ವಚ್ಛತೆಯಿಂದ ಮ್ಯಾಲೇರಿಯಾ ಬೇನೆಗೆ ಪುಟ ಸಿಗುತ್ತದೆಂಬುದನ್ನು ಮರೆಯಕೂಡದು

ಕಾರವಾರ—(ತಾ. ೨೪-೫-೪೫) ಕಳೆದ ವಾರ ಜಿಲ್ಲಾ ಲೋಕಲ ಬೋರ್ಡಿನ ಸಭೆಯಾಯಿತು. ಲೋಕಲ ಫಂಡ ಕರಿಗೆ ಈಗ ೧ ಆಣೆ ಇದ್ದದ್ದನ್ನು ಕನಿಷ್ಟ ಪಕ್ಷ ೧½ ಆಣೆಗೆ ಏರಿಸಬೇಕೆಂದು ಕಮಿಶನರ ಸಾಹೇಬರು ಮಾಡಿದ ಮಹತ್ವಪೂರ್ಣ ಸೂಚನೆಯು ಚರ್ಚೆ ಆ ಸಭೆಯಲ್ಲಿ ಆಗುವದಿತ್ತು, ಬರುವ ಸಪ್ಟೆಂಬರ ತಿಂಗಳ ಕೊನೆಯೊಳಗಾಗಿ ಆಕಟ್ಟನ್ನು ಏರಿಸದಿದ್ದಲ್ಲಿ ಬೋರ್ಡನ್ನು "ಸುಪರಸೀಡ" (ರದ್ದು) ಮಾಡಿ ಬೋರ್ಡಿನ ಕಾರಭಾರವನ್ನು ಸರಕಾರದವರು ತಾವೇ ವಹಿಸಿಕೊಳ್ಳುವ ಪ್ರಸಂಗ ಬರಬಹುದಾಗಿ ಕಮಿಶನರ ಸಾಹೇಬರು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ! ಅದರಿಂದ ಅನೇಕ ಸಭಾಸದರಿಗೆ ಕಷ್ಟವಾಯಿತು. ಆಕಟ್ಟೆಯನ್ನು ಏರಿಸುವ ಸೂಚನೆಗೆ ಬೆಂಬಲ ಕೊಟ್ಟಲ್ಲಿ ಜನರೊಳಗೆ ಅಪ್ರಿಯರಾಗುವ ಸಂಭವ, ಆ ಸೂಚನೆಯನ್ನು ವಿರೋಧಿಸಿದರೆ ಬೋರ್ಡ ರದ್ದಾಗುವ ಭೀತಿ! ಮತ್ತು ಬೋರ್ಡ ರದ್ದುಗೊಳಿಸಲಿಕ್ಕೆ ನಮ್ಮ ವರ್ತನೆಯಿಂದ ತಾವು ಕಾರಣರಾದೆವೆಂದು ಅಪವಾದ ಬರುವ ಅಂಜಿಕೆ! ಹಾಗೂ ತಮ್ಮ ಮೇಲೆ ಸರಕಾರ ಅಧಿಕಾರಿಗಳ ಅವಕೃಪೆಯಾದೀತೆಂಬ ಭೀತಿ! ಹೀಗೆ "ಅತ್ತ ನಡೆದರೆ ಬಾವಿ, ಇತ್ತ ನಡೆದರೆ ಹಳ್ಳ" ಎಂಬ ಸ್ಥಿತಿಯಲ್ಲಿ ಸಿಲುಕಿ ಏನೂ ಮಾಡುವದಕ್ಕಿಂತ ಸಭೆಗೆ ಹೋಗದಿರುವದೇ ಒಳ್ಳೆಯದು ಭಾವಿಸಿ ಅನೇಕ ಸದಸ್ಯರು ಸಭೆಗೆ ಬರಲೇ ಇಲ್ಲ! ಕಮಿಶನರರ ಸೂಚನೆಯು ಚರ್ಚೆಯ ಕಾಲಕ್ಕೆ ಬೋರ್ಡಿನ ೪೦ ಸದಸ್ಯರಲ್ಲಿ ೧೯ ಸಭಾಸದರಷ್ಟೇ ಸಭೆಯಲ್ಲಿದ್ದರು. ಅವರಲ್ಲಿ ೧೪ ಮಂದಿ ಧೈರ್ಯ ಮಾಡಿ — ಆದದ್ದು ಆಗಲೆಂಬ ವಿಚಾರದಿಂದ — ಕಮಿಶನರರ ಸೂಚನೆಯನ್ನು ತಿರಸ್ಕರಿಸಿದರು. ಐವರು ಮಾತ್ರ ಅದಕ್ಕೆ ಬೆಂಬಲ ಕೊಟ್ಟರು. ಬೋರ್ಡಿನಲ್ಲಿ ಇನ್ನೊಂದು ತೀರ್ಮಾನವಾಗಿದೆ. ಇದೇ ಬರುವ ತಾ. ೨೬-೬-೧೯೪೫ಕ್ಕೆ ಜರುಗಲಿರುವ ಚುನಾವಣೆಯು ಕಾಲಕ್ಕೆ ಹಳ್ಳಿಗಳ ಮತದಾರರಿಗೆ ಮತ ನೋಂದಿಸಲು ಅಡಚಣೆಯಾಗುತ್ತಿರುವದರಿಂದ ಚುನಾವಣೆಯನ್ನು ಮಳೆಗಾಲದ ನಂತರ ಮಾಡಿಸಬೇಕೆಂದು ಸರಕಾರಕ್ಕೆ ಸೂಚನೆ ಮಾಡಲಾಗಿದೆ. ಆದರೆ ಈ ಸೂಚನೆ ಇಷ್ಟು ವಿಳಂಬದಿಂದ ಮಾಡಿ ಪ್ರಯೋಜನವೇನು? ಬೋರ್ಡಿನವರು ಇಷ್ಟು ದಿನ ಮಲಗಿ ಚುನಾವಣೆಯು ಹತ್ತಿರ ಬಂದ ಮೇಲೆ ಅದನ್ನು ಮುಂದೂಡಬೇಕೆಂದು ಈಗ ಹೇಳಿದರೆ ಸರಕಾರದವರು ಅದನ್ನು ಮನ್ನಿಸುವರೇ?

(ತಾ. ೧೪-೫-೪೫) ಕಳೆದ ತಾ. ೧೪ನೇ ಸೋಮವಾರ ಯುರೋಪ-ಯುದ್ಧದಲ್ಲಿ ಮಿತ್ರರಿಗೆ ವಿಜಯವಾದ ಬಗ್ಗೆ ಇಲ್ಲಿ ದೊಡ್ಡ ಉತ್ಸವವಾಯಿತು, ಬೆಳಿಗ್ಗೆ ಊರಲ್ಲಿ ಮೆರವಣಿಗೆಯಾಯಿತು; ಮಕ್ಕಳಿಗೆ ಮಿಠಾಯಿ ಹಂಚಿದರು; ಮಿತ್ರ ಸಮಾಜದಲ್ಲಿ ಸಭೆಯಾಗಿ ಮಿತ್ರರನ್ನು ಅಭಿನಂದಿಸುವ ಭಾಷಣಗಳಾದವು. ಸಂಜೆಯ ವೇಳೆಗೆ ಪೋಲೀಸರ ಆಟಪಾಟಗಳಾದವು, ಬಾಣ-ಬಿರುಸು-ಮದ್ದುಗಳನ್ನು ಸುಟ್ಟರು, ಸರಕಾರಿ ಆಫೀಸುಗಳಲ್ಲಿ ದೀಪೋತ್ಸವವಾಯಿತು. ಕೆಲವು ಖಾಸಗಿ ಆಫೀಸುಗಳಲ್ಲೂ ದೀವಿಗೆಗಳು ತೂಗುತ್ತಿದ್ದವು. [illegible] ಗುಡ್ಡದಲ್ಲಿ ದೊಡ್ಡ ಹೋಳಿಯಾಯಿತು. ಉರುವಲ ಸಿಗುವದು ಕಷ್ಟವಾದ ಈ ದಿನಗಳಲ್ಲಿ ಅಂತಹ ಹೋಳಿಗನ್ನು ಸುಟ್ಟು ಬಹಳಷ್ಟು ಉರುವಲ ದುಂದು ಮಾಡಿದ್ದು ಅನುಚಿತವೆಂದು ಕೆಲವು ವಿಚಾರವಂತರ ಅಭಿಪ್ರಾಯವಿದೆ

ಸೀದಾ ಅಂಗಡಿಗಳಲ್ಲೀಗ ಹೊಸ ಬೆಳೆಗಿ ಅಕ್ಕಿ ಬಂದಿದೆ ಕೆಲವರಿಗೆ ಅಕ್ಕಿಯನ್ನು ಈಗ ವಿಭಾಗಿಸಿ ಇಟ್ಟಿದ್ದಾರೆ. ಹೋದ ವರ್ಷ ಸರಕಾರಕ್ಕೆ ಅಕ್ಕಿಯ ವ್ಯಾಪಾರದಲ್ಲಿ ಬಹಳ ಲಾಭವಾದದ್ದುಂಟಂತೆ. ಕಾರಣ ಈ ವರ್ಷ ಅಕ್ಕಿಯ ಮಾರಾಟದ ದರ ಇಳಿಸಿ ಅದರಲ್ಲಿ ಕೆಲವು ಅಂಶವನ್ನಾದರೂ ಜನರಿಗೆ ಕೊಟ್ಟಿದ್ದರೆ ಒಳಿತಾಗುತ್ತಿತ್ತು.

ಶಿರಸಿ— (ತಾ. ೨೫-೫-೪೫) ಇಲ್ಲಿಯ ಮಾರಿಕೇರಿ ಅಕ್ಕಿ-ಗಿರಣಿಗೆ ಕಳೆದ ಸೋಮವಾರ ಬೆಂಕಿ ಬಿದ್ದು ಇಡೀ ಗಿರಣಿಯೂ, ಅದರಲ್ಲಿದ್ದ ಅಕ್ಕಿ, ಭತ್ತ, ಎಣ್ಣೆ ಮುಂತಾದ ಬಹಳಷ್ಟು ಸರಕೂ ಪೂರ್ಣ ಭಸ್ಮವಾಗಿ ಹೋಗಿದೆ. ಗಿರಣಿಗೆ ಹೊಂದಿ ಸರಕಾರದವರ ಭತ್ತದ ಉಗ್ರಾಣವಿತ್ತು. ಅದರಲ್ಲಿ ೨೦೦೦ ಚೀಲ ಭತ್ತವಿತ್ತಂತೆ. ಆ ಉಗ್ರಾಣವೂ ಅಗ್ನಿ-ನಾರಾಯಣನಿಗೆ ಆಹುತಿಯಾಗಿದೆ. ಅಂದು ಸುಮಾರು ೪೦೦೦ ಚೀಲ ಭತ್ತ ಸುಟ್ಟು ಹೋಗಿದೆ! ಬೆಂಕಿ ಬಿದ್ದಾಗ ಜಿಲ್ಲಾ ಪೋಲೀಸ ಸಾಹೇಬರ ಮುಕ್ಕಾಮು ಇಲ್ಲಿತ್ತು. ಅವರು ಸ್ವತಃ ನೀರಿನ ಕೊಡ ಕೈಯಲ್ಲಿ ಹಿಡಿದುಕೊಂಡು ಬೆಂಕಿ ಆರಿಸುವ ಕೆಲಸಕ್ಕೆ ಇಡೀ ಪೋಲೀಸ ಪಡೆಯನ್ನು ತೊಡಗಿಸಿದ್ದರು. ಆದರೆ ಉಮ್ಮಿಗೆ ಬೆಂಕಿ ಬಿದ್ದದ್ದರಿಂದಲೂ ಅದರ ಬಳಿಯಲ್ಲೇ ಇದ್ದ ಕ್ರೂಡ ಒಯ್ಲು, ಚಿಮಣಿಎಣ್ಣೆ ಮುಂತಾದವುಗಳಿಗೆ ಬೆಂಕಿ ಹಿಡಿದದ್ದರಿಂದಲೂ ಬೆಂಕಿಯನ್ನು ಆರಿಸಲು ಸಾಧ್ಯವಾಗಲಿಲ್ಲ.

[illegible]— (ತಾ. ೩-೫-೪೫) ಈ ಊರೊಳಗಿನ ಮಾರ್ಗಗಳು ಲೋಕಲ ಬೋರ್ಡಿಗೆ ಒಪ್ಪಿಸಲ್ಪಟ್ಟಿರುತ್ತವೆ. ೨-೩ ತಿಂಗಳಿಂದ ಅವುಗಳ ಕಡೆ ಯಾರದೂ ಲಕ್ಷವಿಲ್ಲ! ಕಾಲುವೆಗಳಲ್ಲಿ ಹೊಲಸು ನಾರುತ್ತಿದೆ! ಇದು ಇನ್ನು ಹಾಗೆಯೇ ಉಳಿದಲ್ಲಿ ಊರೊಳಗೆ ಬೇನೆಗಳುದ್ಭವಿಸಲಡ್ಡಿಯಿಲ್ಲ! ಮಾರ್ಗಗಳನ್ನು ಯಾಕೆ ಸ್ವಚ್ಛಗೊಳಿಸುವದಿಲ್ಲೆಂದು ಬೋರ್ಡಿನ ಅಧಿಕಾರಿಗಳ ಕಡೆಗೆ ಕೇಳಿದರೆ ತಮ್ಮ ಕಡೆ ಹಣವಿಲ್ಲೆಂದಲೂ, ಬೋರ್ಡಿನವರು ಹಣ ಕೊಡುವದಿಲ್ಲೆಂದಲೂ ಅವರು ನುಡಿಯುತ್ತಾರೆ. ಬೋರ್ಡಿನವರು ಇತ್ತ ಗಮನಿಸುವರೇ?

ಇಲ್ಲಿಯ ಹೊಳೆ ದಾಟಿಸುವ ದೋಣಿಗಳು ಬಹಳ ಜೀರ್ಣವಾಗಿವೆ. ಹೊಸ ದೋಣಿಗಳನ್ನು ತರಿಸದಿದ್ದಲ್ಲಿ ಬರುವ ಮಳೆಗಾಲದಲ್ಲಿ ಹೊಳೆ ದಾಟುವದು ಸಾಧ್ಯವಾಗಲಿಕ್ಕಿಲ್ಲ. ರಹದಾರಿಯೇ ಕಟ್ಟಾಗುವದು! ಈ ಮಾತಿನ ಕಡೆ ಬೋರ್ಡಿನವರು ಲಕ್ಷವನ್ನೀಯಬೇಕು.

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. K.

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR,
25—4—1945.

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಕಲವು [illegible]ಗಳಲ್ಲಿ ಬಾವಿಗಳೆಲ್ಲ ಬತ್ತಿಹೋಗುವ ಬರಗಾಲ [illegible] ಇನ್ನೂ ಬೀಳುತ್ತಿದೆ ಅವೆಯ ಲಕ್ಷಣಗಳನ್ನು ನೋಡಿದಲ್ಲಿ [illegible] ಮುಂದೆ ಮಳೆಗಾಲ ಆರಂಭವಾಗದೆಂದು [illegible] ಹೇಳುತ್ತಾರೆ

ಕಳೆದ ವಾರ [illegible] ಈ ಜಿಲ್ಹೆಯಲ್ಲಿಂದ ಕಾಲೇಜು ತೆರೆಯುವ ಆಲೋಚನೆ ಮಾಡುವದಕ್ಕಾಗಿ ರಾ॥ ಸಾ॥ ಅಣ್ಣಪ್ಪಾ ಶೆಟ್ರು ಆಮಂತ್ರಿಸಿದ ಸಭೆ ನಿನ್ನೆ ಅವರ ರಾಷ್ಟ್ರ ಥೇಟರ ಸಭಾಗೃಹದಲ್ಲಿ ಕೂಡಿತ್ತು [illegible]ದಿಂದ ಇಬ್ಬರು ಮತ್ತು ಅಂಕೋಲೆಯಿಂದ [illegible]ರು ಹೀಗೆ ಹೊರಗೂರುಗಳಿಂದ ಮೂವರು ಮತ್ತು ಸ್ಥಾನಿಕ [illegible] ೧೩ ಮಂದಿ ಹೀಗೆ ಒಟ್ಟು ೧೬ ಮಂದಿ ಸದ್ಗೃಹಸ್ಥರು ಸಭೆಗೆ ಬಂದಿದ್ದರು ರಾ॥ ಸಾ॥ ಶೆಟ್ರು ಸಭಾಧ್ಯಕ್ಷರಾಗಿ ಆರಿಸಲ್ಪಟ್ಟ ಬಳಿಕ ಕಾಲೇಜಿನ ಅವಶ್ಯಕತೆಯ ಮೇಲೆ ಕೆಲಕಾಲ ಚರ್ಚೆಯಾಗಿ ಈ ಜಿಲ್ಹೆಯಲ್ಲಿ ಒಂದು ಕಾಲೇಜು ತೆರೆಯುವದವಶ್ಯವೆಂದು ಎಲ್ಲರೂ ಅಭಿಪ್ರಾಯಪಟ್ಟರು ಮತ್ತು ಕಾಲೇಜಿನ ಸ್ಥಾಪನೆಯ ಪೂರ್ವ ತಯಾರಿ ಮಾಡುವದಕ್ಕಾಗಿ —ಅಂದರೆ ನಿಧಿಸಂಗ್ರಹ [illegible] ಸಂಬಂಧದ ಮುಂತಾದ [illegible]ಗಳನ್ನು ಮಾಡಲಿಕ್ಕೆ— ಜಿಲ್ಹೆಯ ಎಲ್ಲ ಭಾಗಗಳ ಮತ್ತು ಸಮಾಜಗಳ ಪ್ರತಿನಿಧಿಗಳಿಂದ ಕೂಡಿರುವ ಒಂದು ಮಂಡಳವನ್ನು ಆರಿಸಲಾಯಿತು ರಾ॥ ಸಾ॥ ಅಣ್ಣಪ್ಪಾ ಶೆಟ್ರು ಅದರ ಅಧ್ಯಕ್ಷರಾಗಿಯೂ ರಾ॥ ಲಕ್ಷ್ಮಣ ಕಾಮತ ವಕೀಲ ಮತ್ತು ಗಿಬ್ಬ ಹಾಯಸ್ಕೂಲಿನ ಮುಖ್ಯಾಧ್ಯಾಪಕರಾಗಿರುವ ರಾ॥ ಜಗನ್ನಾಥ [illegible] ಇವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ [illegible] ಗೃಹಸ್ಥರನ್ನು ಮಂಡಳದ ಸದಸ್ಯರನ್ನಾಗಿ ನೇಮಿಸಿಕೊಳ್ಳಲಿಕ್ಕೆ ಮಂಡಳಕ್ಕೆ ಅಧಿಕಾರವುಂಟು ಈ ಜಿಲ್ಹೆಯ ಶಿಕ್ಷಣದ ಪ್ರಗತಿಯಾಗಬೇಕೆಂದು ಆಸ್ಥೆ ಮತ್ತು ಇಚ್ಛೆಯುಳ್ಳ ಧನಿಕರು ಕೊಡುಗೈಯಿಂದ ಧನಸಹಾಯ ಮಾಡಿದಲ್ಲಿ ಕಾಲೇಜಿನ ಕಲ್ಪನೆ ಶೀಘ್ರದಲ್ಲೇ ಮೂರ್ತಸ್ವರೂಪ ಹೊಂದುವದು

ಇಲ್ಲಿಯ ರಾಷ್ಟ್ರೀಯ ವ್ಯಾಯಾಮ ಶಾಲೆಯ ವಾರ್ಷಿಕ [illegible] ಆರಿಯ ರವಿವಾರ [illegible] ಶ್ರೀ [illegible] ದೇವಸ್ಥಾನದ ಎದುರಿನ [illegible] ರಾ॥ ಸಾ॥ ಅಣ್ಣಪ್ಪಾ ಶೆಟ್ರ ಅಧ್ಯಕ್ಷತೆಯಲ್ಲಿ ಜರುಗಿತು [illegible] ವಿದ್ಯಾರ್ಥಿಗಳ [illegible] ವ್ಯಾಯಾಮ ಪ್ರಯೋಗಗಳನ್ನು [illegible] ಕೊಟ್ಟರು

ಈ ಹಿಂದೆ ಪ್ರಕಟವಾದಂತೆ ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ [illegible] ಸಭೆಯು [illegible] ರವಿವಾರ ಗೋಕರ್ಣದಲ್ಲಿ ಅಂಕೋಲೆಯ ರಾ॥ [illegible] ಭಟ್ಟರ ಅಧ್ಯಕ್ಷತೆಯ ಕೆಳಗೆ [illegible] ಮಂಡಳದ ಆಯ್ಕೆ [illegible] ಕಾರ್ಯಗಳಾದವು [illegible] ಸಂಘಗಳನ್ನು [illegible] ಸಂಘಗಳಿಗೆ [illegible] ಮಾಡಬಹುದೆಂದು [illegible] ಸಂಘಗಳ [illegible] ಆದನ್ನು ಈ ಸಂಘಕ್ಕೆ ಜೋಡಿಸಿಕೊಳ್ಳಬಹುದೆಂದೂ ಸಂಘದ ನಿಯಮಾವಳಿಯಲ್ಲಿ ಒಂದು ಹೊಸ [illegible] ಸೇರಿಸಲ್ಪಟ್ಟಿತು ಸಂಘದವರು ಈ ವರ್ಷ ಕನ್ನಡ ಇಂಗ್ಲಿಷ ವಿದ್ಯಾರ್ಥಿಗಳಿಗೆ ಪುಸ್ತಕ ಸಹಾಯ ಫೀ ಸಹಾಯ ಮಾಡಲಿಕ್ಕೂ ಟ್ರೇನಿಂಗಕ್ಕಾಗಿ ಹೋಗುವ ವಿದ್ಯಾರ್ಥಿಗಳ ಪ್ರತ್ಯೇಕಗಳನ್ನು ಪೂರೈಸಲಿಕ್ಕೂ ಕಾಲೇಜಿನಲ್ಲಿ ರಾಷ್ಟ್ರೀಯ ವಿಷಯ [illegible] ವಿದ್ಯಾರ್ಥಿಗೆ [illegible] ಮಾಡಲಿಕ್ಕೂ [illegible] ಕೊಡುವದೂ ಉಂಟು [illegible] ಎಲ್ಲ [illegible] ನೋಡಿಸುವದು. ಪ್ರೈಸ್-ಸಹಾಯ ಪಡೆಯು[illegible] ಬಿಟ್ಟಹೋಗುವ ವಿದ್ಯಾರ್ಥಿಗಳ [illegible] ರೊಳಗೆ ಮತ್ತು [illegible] ಅಪ್ಲಿಕೇಶನ [illegible] ಪಡೆಯುವವರು [illegible] ರೊಳಗೆ ಅಧ್ಯಕ್ಷರಿಗೆ ಮುಟ್ಟುವಂತೆ ಅರ್ಜಿ ಮಾಡಬೇಕೆಂತ [illegible] ಸಂಕ್ಷಿಪ್ತದಲ್ಲಿ [illegible] ಅರ್ಜಿ ಮಾಡಲಿಕ್ಕೆ ತಾರೀಕು [illegible] ರಿಂದ ಯಿಸಲ್ಪಟ್ಟಿದೆ

ಹೊನ್ನಾವರ— ([illegible]) ಅನ್ನ ಮಾಡಲು ಭತ್ತ ಸಿಗದ್ದರಿಂದ [illegible] ಹೊಟ್ಟೆ ಜೀವನ ಸಾಗಿಸುತ್ತಿದ್ದ ನೂರಾರು ಜನರು ಭತ್ತ ಭತ್ತವೆಂದು ಬಳಲುತ್ತಿದ್ದಾರೆ ಕಳ್ಳ ಪೇಟೆಯಲ್ಲಿ ಭತ್ತ ಕೊಂಡು ತಯಾರಿಸಿದ ಅವಲಕ್ಕಿಯೊಂದಿಷ್ಟು [illegible] ಅಧರ ಧಾರಣೆ ರೂ [illegible] ಕೇಳು ! ಸರಕಾರದವರಿಗೆ ಅವಲಕ್ಕಿಗಾಗಿ [illegible] ಭತ್ತ ನಿಯಂತ್ರಣ ದರದಿಂದ ಪೂರೈಸುವ ವ್ಯವಸ್ಥೆಯಾದದ್ದುಂಟು ಆ ವ್ಯವಸ್ಥೆಯನ್ನು ಈ ಊರಲ್ಲಿ ಮಾಡ[illegible]ಗುವದಿಲ್ಲವೇ ?

[illegible] ಸಿಗುವದು ಕಠಿಣ ಕಳ್ಳ ಪೇಟೆಯಲ್ಲಿ ಅದರ ಧಾರಣೆ ಮಣ ಒಂದಕ್ಕೆ ರೂ [illegible] ಆಗಿದೆಯಂತೆ [illegible] ಅಂಗಡಿಗಳಲ್ಲಿ [illegible]

([illegible]ನೇ ಪುಟದ ಮೇಲೆ ಮುಂದರಿಸಿದೆ)

ನೋಟೀಸು.

ಧಾರೇಶ್ವರ ಪರಸ್ಪರ ಸಹಕಾರಿ ಸಂಘದ ಚೆಅರಮನ್'ರ ಕಡೆಯಿಂದ—

ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ಸದರ ಸಂಘದ ತಬೆಯಲ್ಲಿರುವ ಜವಿನಾಸುಗಳನ್ನು ಇದೇ ಬರುವ ತಾರೀಖು 3 6 1945ನೇ ದಿವಸ ಧಾರೇಶ್ವರ ಗ್ರಾಮ-ಚಾವಡಿಯಲ್ಲಿ ಜಾಹೀರ ರೀತಿಯಿಂದ ಲಿಲಾಂವ ಮಾಡುವವರಿದ್ದೇವೆ ಖಾಯಿಸ ಇದ್ದವರು ಲಿಲಾಂವಿನ ಶರ್ತುಗಳಿಗೆ ಒಳಪಟ್ಟು ಸವಾಲ ಮಾಡಬಹುದು

ತಾ 1[illegible] [illegible] 1945

ಗಣೇಶ ನರಸ ಹೆಗಡೆ ಚಿತ್ರಗೇರಿ

ಚೆಅರಮನ್ ಧಾರೇಶ್ವರ ಪರಸ್ಪರ ಸಹಕಾರಿ, ಸಂಘ

ಬೇಕು— ಇಬ್ಬರು [illegible]ನೇ ವರ್ಷ ಕನ್ನಡ ಟ್ರೇಂಡ ಶಿಕ್ಷಕರು ಇದೆ [illegible] ಜೂನ [illegible]ನೇ ತಾರೀಖಿನಿಂದ ಬೇಕಾಗಿದ್ದಾರೆ ಸರಕಾರ ಖಾಯಿದ ಪ್ರಕಾರ ಸರ್ಟಿಫಿಕೇಟ [illegible] ಪ್ರತಿಯನ್ನು ಇದ್ದವರು ಕೆಳಗಿನ ಪತ್ತೆಯ ಮೇಲೆ ಕೂಡಲೆ ಅರ್ಜಿ ಕಳಿಸಿರಿ

ಪತ್ತೆ — ದಿ ಮೆನೇಜರ, ಸೇಂಟ ಎಂಥನೀಸ ಎಜ್ಯುಕೇಶನಲ್ ಸೊಸೈಟಿ, ಹೊನ್ನಾವರ

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು [illegible] ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು

ಆವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಅದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ

ಇಂದಿನ ರೂ ೧೦ [illegible] ವರ್ಷಗಳ ಮೇಲೆ ರೂ ೧೫ ಕೊಡುತ್ತದೆ !

ಚಿನ್ನ ಬೆಳ್ಳಿ ರತ್ನಗಳಲ್ಲಿ ಮನೆ-ಮಠಗಳಲ್ಲಿ ಸರಕುಗಳಲ್ಲಿ ಹಣ ಹಾಕಬೇಡಿ !

ಯುದ್ಧಾನಂತರ ಅವುಗಳ ಬೆಲೆ ಭರಭರನೆ ತಗ್ಗುವದು !

ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ

ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು

ರೂ [illegible] ದಿಂದ ರೂ [illegible] ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು

[ಹಿಂದಿನ ಸರ್ಕಾರ? ರೇವುಗಳ ಪ್ರಕಾರ ಸಮಿತಿಯ ಪ್ರಕಟನೆ]

No 103

ORDER.

In exer se of he powers conferred by sub rule (2) of Rule 81 of the Defence of India R les real with Bombay Government Notification in the Home De rtment (Political War) N S D II 1370 dated the 15th Septem r 1944 and of all other p rs enabling me to do so and in super session of all pre s rd r o the s bje t I V Nanjappa, Esquire I C S Collector and Distr Magistrate Kanara hereby order that every person in c arge of sla ter ouses and every butcher in Kanara District shall furnish on Su d y e ery week beginning with 27th May 1945 a statement in the for ap e d d h r to showing the number of various specified types of animals slaught ered the Civil Slaughter house or by the butcher as the case may b r n the week ending on the previous Saturday direct to the Direct r of Vet r n ry S r ices Bombay Province Poona and a copy of such statement t m

FORM

Report for week ending on (Sunday to Saturday)	Number of animals slaughtered
	Buffaloes (Male)
	Buffaloes (Female)
	Bulls
	Bullocks
	Cows
	Calves
	Goats
	Sheep

Karwar
21-5-1945

V. NANJAPPA.
Distr t Magistrate Kanara

ORDER.

The Defence of India Rules

No 74 In exercise of the powers conferred by sub rule (2) of Rule 81 of the Defence of India Rules read with Government of Notification Home Department (Political War) No S D II/1370 dated the 15th Septembe 1944 and of all other powers enabling him i this behalf the Distric Magistrate and Controller of Pr ces, Kanara is pleased to amend the second proviso to this office order No 74 dated 6th October 1944 and 5t January 1945 as follows namely

A permit sh also be granted to holders of Ration Tickets for im porting rationed artic in lieu of a part or the whole of the quantity sanctioned on such ticke

Karwar
17/26-5-45

V. NANJAPPA,
DISTRICT MAGISTRATE, KANARA

[illegible] —ಭಟ್ಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

Special Number:
Reg No B. 1270
Price As 2

THE KANARA NEWS,

KUMTA. 5th JUNE, 1945.

Matriculation Examination 1945.

The result of the Matriculation examination held by the Bombay University in March last is declared this morning Herebelow is given the list of the students who appeared at the Karwar centre and have passed the examination as well as those who have appeared at other centers from the High schools of this district and are declared successful

Karwar High School

(78 appeared, 18 pass)

Miss Malati M Chandavar
„ Vijaya S. Gokarn
„ Indumati B Karajgi

L Bailur S S Dhareshwar M G Vinekar S S Bandekar M V Divekar S D Gaonkar V Naik M. M Naik R Naik B F Undalli Wagle, M Y A K Syed, M S A Shaik, M A H Khureshi, R H Sali [illegible]

Hindu High Scoool, Karwar.

([illegible]1 appeared 45 pass)

Miss Pushpa M Kasbekar „ Malati U Karnad Miss Meera D Kasabekar „ Shanta Netravali „ Rama M Shanbhag , Kunda G Wagle Manorama G. Kamat „ Lalita Nadkarni „ Shanta N Nadkarni P G Bhat U G Divekar Y. Keni D F Kulkarni P K Nadkarni R M Vetekar K V Bhandari M T Borkar S R Borkar G M Chickermane A Chittal D K Devanalli M Hegde A M Joshi V B Joshi M R Kamat R M Kasbekar V G Lokare N T Netravali C V Pavaskar S Saokar G D Shanbhag B Shejjekar P V Shenvi V Shenvi M P Shetti S Sukhathankar D M Telang R Balgi M G Naik, A C Fernandes. S V Achrekar S N Vernekar B S Wagle M K ikre R M Kumtakar

St. Michael's Convent

(4 appeared, 3 pass)

Miss Mary Coelho
" Tarsilia D'Souza
" Ivy Silva

Private High School, Sadashivgad

(39 appeared 6 pass)

Miss Kamal D Sukhthankar J C Telang J K Wagh M V Nadkarni V S Bandekar D [illegible] Kalgutkar

Edward High School, Ankola

(66 appeared, 21 pass)

Miss Malini P Amladi Nalini R Balvalli Malati M Telang Vimala P Shetye, G S Palekar, R S Ankolekar, S H Badgeri, P G Dalal M N Desai, R V Harite, S T Netravali, A M. Prabhu, G M Prabhu, R S Prabhu, B J Shaik, V G Shanbhag, Beerappa N Shetti, L P Hegde, V S Kulkarni, R N Prabhu, A N Peorjade

Gibb High School, Kumta

(52 appeared, 28 pass)

Raghuvir S Kambadkone N B Bagali G S Nayak S S Koppalkar D M Bailur R P Bailur V G Bhat V. S Bhat D C Bhatya M M Kamat R S Khambadkone P R Kini M M Kumoarkeri D M Lokeshwar V K Mangeshkar D S Nadkarni A N Nadkarni R B Padukone G R Pai S R Raikar B M Telang S S Vernekar M S Wagh A H Sayad Girija K Mahale Sumitra M Kamat Pramila E Shetti, Lalita S Wagh

St Thomas High School, Honavar

(25 appeared 13 pass)

Miss Mira M Balvally K I Bhat V. S Eikos K N Hegde V N Honavar R M Karki N R Kasargod M C Naik S V Naik [illegible] N. Nayak. V. A Prabhu S V Dhareshwar S D Mudbhatkal

New English School, Honavar,

(37 appeared, 19 pass)

Miss Ramabai V Kamat, Indira N Kodlekere, , Jambai P. Shanbhag, T S Bhagvat, P M Bhat, T G. Hegde, S R Kamat, L M Kaltige D L Nayak, R N Nayak, V. T Naval M R Pai, N P Pai R S Pai, L G Prabhu N M. Shanbhag, S N Shenvi, D U Nayak G V Kamat

Islamia A V High School, Bhatkal

(6 appeared 1 passes)

S V Bhat

Shri Marikamba High School Sirsi

(49 appeared 14 pass)

A A Nizu O G, M Fernandes, V D Islur P V Pandit. G G Pratahkal, C G Shirali, R B Sonde S S Halkar, G B Hervatta M D Kamat M Y Prabhu R N Vaidya A K R Ayengar Miss Indrani D Vishwamitra

Outsiders.

(11 appeared, 4 pass)

Krishna G Katti, Surendra N Amonkar, Manohar V Borkar Mahabaleshwar G Shetti

ಇದನ್ನು ಪಾಂಡುರಂಗ ಕೃಷ್ಣ ಕಾಸರ್ಗೋಡ್ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೆರಬೇಕು.
ವರ್ಗಣಿ ಮುಂಗಡಕಳಿಸತಕ್ಕದ್ದು

Reg. No. B. 1270. Monday, 4th June, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೪೮

ಕುಮಟಾ:- ಸೋಮವಾರ, ತಾ. ೪ ಮಾಹೆ ಜೂನ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
[illegible] ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಟ್ರೂಮನ್ನರ ಬೆದರಿಕೆ!

(ನಿರೀಕ್ಷಕನು ಬರೆದುದು.)

ಅಮೇರಿಕೆಯ ಅಧ್ಯಕ್ಷರಾದ ಟ್ರೂಮನ್ನರು ತಮ್ಮ ಕೊಂಗ್ರೆಸ್ಸಿ (ಪ್ರಜಾಪ್ರತಿನಿಧಿ ಸಭೆ)ಗೆ ಕಳಿಸಿಕೊಟ್ಟ ಒಂದು ಸಂದೇಶದಲ್ಲಿ ಜಪಾನಿಯರಿಗೆ ಭಯಂಕರ ಎಚ್ಚರಿಕೆ ಕೊಟ್ಟಿದ್ದಾರೆ. ತಮ್ಮ ರಾಷ್ಟ್ರದ ನಾಶವಾಗುವದು ಬೇಡೆಂದೆನಿಸಿದರೆ ಜಪಾನಿಯರು ಈಗಲೇ ನಿಃಶರ್ತ ಶರಣು ಬರುವದು ಲೇಸು; ಇಲ್ಲದಿದ್ದರೆ ಸಂಪೂರ್ಣ ವಿಜಯ ಸಿಗುವ ವರೆಗೆ ಅಮೇರಿಕೆಯು ಅವಿಶ್ರಾಂತ ದುಡಿದು ಜಪಾನಿಯರನ್ನು ಹಣ್ಣು ಮಾಡುವದು; ಯುದ್ಧವನ್ನು ದೀರ್ಘ ಕಾಲ ನಡಿಸಿದಲ್ಲಿ ಅಮೇರಿಕೆಯು ದಣಿದು ಜಪಾನಿಯರೊಡನೆ ಸನ್ಮಾನ್ಯ ಒಪ್ಪಂದಕ್ಕೆ ಬಂದುಬಿಡುವದೆಂದು ಜಪಾನಿಯರು ಭಾವಿಸುತ್ತಿದ್ದರೆ ಅದು ಅವರ ಮೂಢತನ; ಎಂದು ಅಧ್ಯಕ್ಷರು ಸ್ಪಷ್ಟೀಕರಿಸಿದ್ದಾರೆ. ತಮ್ಮ ಯುದ್ಧ ತಯಾರಿಯನ್ನೂ ಅವರು ಬಣ್ಣಿಸಿದ್ದಾರೆ. ಈಗ ಯುರೋಪದಲ್ಲಿದ್ದ ೩೫ ಲಕ್ಷ ಸೈನ್ಯವನ್ನಲ್ಲದೆ ಇನ್ನೂ ೩೫ ಲಕ್ಷ ಸೈನ್ಯ (ಒಟ್ಟು ೭೦ ಲಕ್ಷ) ಅಮೇರಿಕೆ ಶಾಂತಸಾಗರದ ರಂಗಕ್ಕೆ ಕಳಿಸಿಕೊಡುವದು. ಈ ಬಗ್ಗೆ ವ್ಯಾಪಾರಿ ಹಡಗಗಳನ್ನು ಬ್ರಿಟಿಶ, ಜರ್ಮನ ಹಡಗಗಳನ್ನು ಉಪಯೋಗಿಸಿಕೊಳ್ಳಲಾಗುವದು. ಜಪಾನಿಯರ ಬಲವೂ ಅಷ್ಟೇ ಬಲಶಾಲಿಯಿರುತ್ತದೆ. ಈಗಾಗಲೇ ೪೦ ಲಕ್ಷ ಸೈನ್ಯವನ್ನು ಅವರು ಕಣಕ್ಕಿಳಿಸಿದ್ದಾರೆ. ಈ ವಿನಃ ಸೈನ್ಯದಲ್ಲಿ ಸೇರಿಸಿಕೊಳ್ಳಬಹುದಾದ ಲಕ್ಷಗಟ್ಟಲೆ ತರುಣರು ಅವರಲ್ಲಿದ್ದಾರೆ. ಆದರೆ ವಿಮಾನಬಲ, ನೌಕಾ ಬಲದಲ್ಲಿ ಅಮೇರಿಕೆಯವರು ಶ್ರೇಷ್ಠರು. ಜಪಾನಿಯರು ೧ ಹಡಗ ಮುಳುಗಿಸಿದರೆ ಅವರು ಅದರ ಸ್ಥಳದಲ್ಲಿ ೨ ಹಡಗಗಳನ್ನು ತರುತ್ತಾರೆ; ಜಪಾನಿಯರು ೧ ವಿಮಾನ ಕೆಡವಿದಲ್ಲಿ ೨೦ ವಿಮಾನಗಳನ್ನು ಕಳಿಸುತ್ತಿದ್ದಾರೆ! ಖುದ್ದ ಜಪಾನದ ಮೇಲೆ ದಾಳಿ ಮಾಡುವದಕ್ಕಾಗಿ ಅಮೇರಿಕೆಯು ೨೦ ಸಾವಿರ ಹಡಗಗಳನ್ನು, ೧೫ ವಿಮಾನ-ವಾಹಕ ಹಡಗಗಳನ್ನು, ೨ ದೊಡ್ಡ ಯುದ್ಧನೌಕೆಗಳನ್ನು ತಯಾರಿಸುತ್ತಿದೆ. ಇವುಗಳೊಂದಿಗೆ ಬ್ರಿಟಿಶ, ಫ್ರೆಂಚ, ಡಚ್ಚ, ಚೀನಿ ಬಲಗಳುಂಟು. ಈ ಎಲ್ಲ ಬಲಗಳ ಪ್ರಚಂಡ ಸ್ವರೂಪ ನೋಡಿ ಜಪಾನರ ಕೈ-ಕಾಲು ನಡುಗಬೇಕು! ಆದರೆ ಆ ಆತ್ಮಘಾತಕಿ ಶೂರರು ಇನ್ನೂ ಎದೆಗಟ್ಟಿ ಮಾಡಿಕೊಂಡು ನಿಂತಿದ್ದಾರೆ. ೩೦ ವರ್ಷ ಯುದ್ಧ ನಡೆದರೂ ತಾವು ಅದಕ್ಕೆ ಸಿದ್ಧರಿದ್ದೇವೆಂದು ಡಂಭ ಕೊಚ್ಚುತ್ತಿದ್ದಾರೆ! ತಮ್ಮ ಆತ್ಮಘಾತಕಿ ವಿಮಾನಗಳ ಮೇಲೆ ಅವರಿಗೆ ಅಚಲ ವಿಶ್ವಾಸವುಂಟು. ಇದಕ್ಕಿಂತ ಯುರೋಪದ ರಾಜಕೀಯ ಪರಿಸ್ಥಿತಿ ಅವರಿಗೆ ಧೈರ್ಯ ಕೊಡುತ್ತಿರಬೇಕು. ಮಿತ್ರರು ಬೇಗನೇ ತಮ್ಮತಮ್ಮೊಳಗೆ ಬಡಿದಾಡಲಿಕ್ಕೆ ಪ್ರಾರಂಭಿಸುವರೆಂದೂ ಆಗ ತಾವು ಸುರಕ್ಷಿತ ಹಿಂದೆಗೆಯಬಹುದೆಂದೂ ಅವರು ತಿಳಿಯುತ್ತಿರಬೇಕು. ಅವರ ಈ ಭಾವನೆ ತಪ್ಪೆಂದು ನಾ ಹೇಳಲಾರೆ. ಯುರೋಪದಲ್ಲಿ ನಡೆಯುತ್ತಿರುವ ಕಾರಸ್ಥಾನಗಳನ್ನು, ಘಟನೆಗಳನ್ನು, ಚಲನವಲನಗಳನ್ನು ಸೂಕ್ಷ್ಮವಾಗಿ ನೋಡಿದಲ್ಲಿ ಅಲ್ಲಿ ಬೇಗನೆ ಪುನಃ ರಣಸಂಗ್ರಾಮ ನಡೆಯಬಹುದೆಂಬ ಭೀತಿಯುಂಟಾಗುತ್ತದೆ. ಯುರೋಪದ ಸ್ಥಿತಿ ಹೀಗಿರುವದರಿಂದಲೇ ಟ್ರೂಮನ್ನರ ಬೆದರಿಕೆ ಬೋರ್ಗಲ್ಲ ಮೇಲೆ ಎರೆದ ನೀರಾಗಿದೆ!

(೨ನೇ ಪುಟದಿಂದ ಮುಂದರಿದದ್ದು.)

ಈ ವರ್ಷ ನಡೆದ ಹೆಣ್ಣು ಹುಡುಗಿಯರ ಕನ್ನಡ ಮುಲ್ಕೀ ಪರೀಕ್ಷೆಗೆ ಕಾರವಾರ ಕೇಂದ್ರದಲ್ಲಿ ಕೂತ ೪೧ ಹುಡುಗಿಯರಲ್ಲಿ ಬರೇ ೧೦ ಮಂದಿ ಉತ್ತೀರ್ಣರಾಗಿದ್ದಾರೆ. ಆದರೆ ಗೋಕರ್ಣ ಶಾಲೆಯಿಂದ ಕೂತ ೧೫ರಲ್ಲಿ ೭ ಮಂದಿ ಯಶಸ್ವಿಯಾಗಿದ್ದಾರೆ.

ಹೊನ್ನಾವರ— (ತಾ. ೨೭-೫-೪೫) ಅಲ್ಲಿಯ ಸೀಧಾ ಅಂಗಡಿಯ ಬಗ್ಗೆ ತಾ. ೨೦-೫-೪೫ರ "ವೃತ್ತ"ದಲ್ಲಿ ಬಂದ ಟೀಕೆ ಸುಳ್ಳು ಇರುತ್ತದಾಗಿ ಈಶ್ವರ ಸೀತಾರಾಮ ಹೆಗಡೆ ಎಂಬವರೊಬ್ಬರು ಬರೆಯುತ್ತಾರೆ [ಟೀಕೆಗೊಳಗಾದವರ ಪಕ್ಷವನ್ನು ಓದುಗರ ಮುಂದಿಡಬೇಕೆಂಬ 'ವೃತ್ತ'ದ ಪರಿಪಾಠಕ್ಕನುಸಾರವಾಗಿ ಹೆಗಡೆಯವರ ನಿರಾಕರಣೆಯನ್ನು ನಾವು ಮುದ್ರಿಸಿದ್ದೇವೆ. ಆದರೆ ನಮ್ಮ ಸುದ್ದಿಗಾರರು "ಬೇಜವಾಬದಾರ" ಇರುವದಿಲ್ಲೆಂದು ನಾವು ಹೆಗಡೆಯವರಿಗೂ ಅವರನ್ನು ಮುಂದೆ ಮಾಡಿದವರಿಗೂ ತಿಳಿಸಬಯಸುತ್ತೇವೆ. ಅಷ್ಟೇ ಅಲ್ಲ ಸೀಧಾ ಅಂಗಡಿಯವರ ರೀತಿಗಳನ್ನು ಕಣ್ಮುಚ್ಚಿ ನಡೆಯಗೊಟ್ಟಿರುವ ಅಧಿಕಾರಿಗಳಿಗಿಂತ ನಮ್ಮ ಸುದ್ದಿಗಾರರು ಎಷ್ಟೋ ಪಟ್ಟು ಹೆಚ್ಚಿಗೆ 'ಜವಾಬದಾರ' ಇರುತ್ತಾರೆಂದು ಉತ್ತರವಾದಿಗಳು ಅರಿಯಲಿ. —ಸಂಪಾದಕ.]

ಭಟಕಳ— (ತಾ. ೨೯-೫-೪೫) ಕಳೆದ ತಾ. ೨೫ಕ್ಕೆ ಕಲಗೋಡದಿಂದ ಒಂದು ಮದುವೆ ದಿಬ್ಬಣ ಮೂಡಭಟಕಳಕ್ಕೆ ಹೋಗುತ್ತಿತ್ತು. ಜಾತಿಯ ರಿವಾಜಿನಂತೆ ವಧುವರಗಳಿಗೆ ಬಳುವಳಿ ಕೊಟ್ಟ ಒಂದು ಅಕ್ಕಿಯ ಮಾನಗಿ ಆ ದಿಬ್ಬಣದಲ್ಲಿತ್ತು. ಅದನ್ನು ಸೀಧಾ-ಇನ್ಸಪೆಕ್ಟರರು ಇಲ್ಲಿಯ ಟಪಾಲಕಟ್ಟೆಯ ಸಮೀಪ ಹಿಡಿದು ಖಟ್ಲೆ ಮಾಡಿ ಕೊಟ್ಟಿದ್ದಾರೆ! ಇದೇ ಕಳೆದ ತಾ ೨೩ಕ್ಕೆ ಮೂಡಭಟಕಳದಿಂದ ಚೌತ್ನಿಮನೆಗೆ ಹೋದ ಇನ್ನೊಂದು ದಿಬ್ಬಣದಲ್ಲಿದ್ದ ಅಕ್ಕಿಮಾನಗಿಯನ್ನು ಮಾತ್ರ ಅವರು ಹಿಡಿಯದೆ ಬಿಟ್ಟುಕೊಟ್ಟರು! ಹೀಗೆ ಆಗುವ ಕಾರಣವೇನೆಂದು ಮೇಲಧಿಕಾರಿಗಳು ಚೌಕಶಿ ಮಾಡುವರೇ?

ಮೂಡಭಟಕಳ ಮ್ಯುನಿಸಿಪಲ್ ಶಾಲೆಯಲ್ಲಿ ಮ್ಯುನಿಸಿಪಲ್ ನೌಕರನೊಬ್ಬನು ಗಡಗಡೆ ಆಟ ನಡಿಸುತ್ತಿದ್ದನೆಂದು ಸುದ್ದಿಯುಂಟು. ಮ್ಯು| ಯವರು ಚೌಕಶಿ ಮಾಡಬೇಕು.

ಶಿರ್ಶಿ— (ತಾ ೨-೬-೪೫) ಮಾರಾಪ್ಪರ ಗಿರಣಿಯ ದಾಹವಿನ್ನೂ ಕಡಿದಿರುವದಿಲ್ಲ! ಊರೊಳಗೆ ಅವಲಕ್ಕಿ-ಮಂಡಕ್ಕಿ ಮಾಡುವ ಬಡವರನ್ನು ಅದು ಸುಡುತ್ತಿದೆ! ಗಿರಣಿಯು ಹೋಳಿಯಾದಾಗ ಹುಟ್ಟಿ ಹೋದ ಭತ್ತದ ಕೊರತೆಯನ್ನು ತುಂಬಿ ತರುವದಕ್ಕಾಗಿ ಅವಲಕ್ಕಿ-ಮಂಡಕ್ಕಿ ಮಾಡಲು ಅವರಿಗೆ ಇನ್ನು ಮುಂದೆ ಭತ್ತ ಕೊಡಬಾರದೆಂದು ಅಧಿಕಾರಿಗಳ ತೀರ್ಮಾನವಾಗಿದೆ!

ಸುಪಾ— (ತಾ. ೧-೬-೪೫) ಇತ್ತೀಚೆಗೆ ಈ ಭಾಗದಲ್ಲಿ ಗೋವಾ ಸರಾಯಿಯ ಆಮದು-ವಿಕ್ರಿಯ ಬಹಳವಾಗಿದೆ. [illegible] ಸುಪೆಯಂತಹ ಪಟ್ಟಣದೊಳಗೆ ಸರಾಯಿಯ ವ್ಯಾಪಾರವಾಗುತ್ತಿದೆ! ಅಬಕಾರಿ ಅಧಿಕಾರಿಗಳು ಕಣ್ಮುಚ್ಚಿ ತಿರುಗುತ್ತಿರುವರೋ ಯಾ ಕಂಡರೂ ಕಾಣದಂತೆ ಮಾಡುತ್ತಿರುವರೋ ದೇವರೇ ಬಲ್ಲನು!

ಇಲ್ಲಿಯ ಹೊಳೆಗೆ ಹೊಸ ದೋಣಿಗಳು ಇನ್ನೂ ಬಂದಿಲ್ಲ. ಟೆಂಡರದವರು ಎಲ್ಲಿದ್ದಾರೋ ಏನೋ?

ಸಿದ್ದಾಪುರ— (ತಾ. ೨೮-೫-೪೫) ಶಿರ್ಶಿ-ಸಿದ್ದಾಪುರ ನಡುವಿನ ಟಪಾಲ ತರ-ಒಯ್ಯುವಿಕೆಗೆ ಮೋಟಾರ ಬಂಡಿಗಳು ತೀರ ಹಳೆಯವಿರುತ್ತವೆ. ಅವು ಸರಿಯಾಗಿ ನಡೆಯುವದಿಲ್ಲ! ಅದನ್ನು ಹತ್ತಿದ ಪ್ರಯಾಣಿಕರು ಒಮ್ಮೊಮ್ಮೆ ಹಾದಿಯ ಮೇಲೆ ಉಳಿಯುವ ಪ್ರಸಂಗ ಬರುತ್ತದೆ! ಈ ಮಾರ್ಗದಲ್ಲಿ ಒಳ್ಳೇ ಬಂಡಿಗಳನ್ನಿಡುವಂತೆ ಕಂಟ್ರಾಕ್ಟರರಿಗೆ ತಿಳಿಸಬೇಕು. ಅದು ಅವರಿಂದ ಸಾಧ್ಯವಾಗದಿದ್ದರೆ ಟಪಾಲ ತರ-ಒಯ್ಯುವ ಕೆಲಸವನ್ನು ಬೇರೊಂದು ಮೋಟಾರ ಕಂಪನಿಗೆ ಕೊಡುವದೊಳಿತು.

ಮುಂಬಯಿಯ ಗೌ| ಸಾ| ಬ್ರಾ| ಸ್ಕಾಲರ ಶಿಪ್ ಲೀಗಿನಿಂದ ವಿದ್ಯಾರ್ಥಿ-ವೇತನ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳೂ ಡಾಂಗಿ ಸ್ಮಾರಕ ಇನಾಮು ಮತ್ತು ಔದ್ಯೋಗಿಕ ಶಿಷ್ಯವೃತ್ತಿ ಪಡೆಯಲಿಚ್ಛಿಸುವ ಉದ್ಯೋಗ-ಶಾಲಾ ವಿದ್ಯಾರ್ಥಿಗಳೂ ಇದೇ ಬರುವ ತಾ. ೩೦-೬-೪೫ ರೊಳಗಾಗಿ C/o ಸಾರಸ್ವತ ಬ್ರಾಹ್ಮಣ ಸಮಾಜ, ಖೇಟವಾಡಿ ಲೇನ, ಗಿರಗಾಂವ-ಮುಂಬಯಿ ಪತ್ತೆಗೆ ಅರ್ಜಿಗಳನ್ನು ಕಳಿಸಿಕೊಡಬೇಕಾಗಿ ಲೀಗದ ಕಾರ್ಯದರ್ಶಿಗಳು ತಿಳಿಸುತ್ತಾರೆ.

WANTED immediately literate Dais for a training course of six months and work at Civil Hospital, Karwar on a stipend of Rs. 25/- p. m. Apply to the Civil Surgeon, Karwar upto 25—6—1945 stating full name, age, caste, educational qualifications & address.

ಜಾಹೀರನಾಮೆ.

ಉತ್ತರ ಕಾನಡಾ ಜಿಲ್ಹಾ ಎಕ್ಝಿಕ್ಯೂಟಿವ್ಹ ಇಂಜಿನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:—

ಈ ಜಿಲ್ಹೆಯೊಳಗಿನ ದೀವಗಿ (ಮುಖ್ಯ) ತಾರೀ ಹಾಸಲು ವಸೂಲ ಮಾಡುವ ದೆಸೆಯಿಂದ ೧೯೪೫ನೇ ಇಸವಿಯ ಜುಲೈ ತಾ. ೧ರಿಂದ ಒಂಭತ್ತು ತಿಂಗಳ ಬಾಬತು ಮಕ್ತೆಯನ್ನು ತಾ. ೧೫-೬-೪೫ಕ್ಕೆ ಕುಮಟಾ ಮುಕ್ಕಾಮದಲ್ಲಿ ಮಧ್ಯಾಹ್ನ ೩ ಘಂಟೆಗೆ ಬಹಿರಂಗವಾಗಿ ಲಿಲಾವು ಮಾಡಲಾಗುವದು. ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಬಹುದು.

೨. ಮಕ್ತೆ ಬೇಡುವವರ ಹತ್ತಿರ ಅವರ ಲಾಯಕಿ ಬಗ್ಗೆ ಮಾಮಲೇದಾರರ ಅಥವಾ ಮಹಾಲ್ಕರಿಯವರ ಸಹಿಯ ಸರ್ಟಿಫಿಕೇಟು ಇರಬೇಕು; ಮತ್ತು ಅವರು ಮಕ್ತೆ ಬಾಬತು ಇನ್ನೂರು (೨೦೦-೦-೦) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಲು ಸಿದ್ಧರಾಗಿರಬೇಕು. ಸವಾಲ ಮಂಜೂರ ಆಗದಿದ್ದರೆ ನಗದಿಯಾಗಿ ಹಾಜರ ಮಾಡಿದ ಹಣ ಪರತ ಕೊಡಲ್ಪಡುವದು. ಮಂಜೂರ ಆದರೆ ಸದರ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತೂ ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವರೆಂಬ ಭದ್ರತೆಯ ಬಗ್ಗೆ ಅನಾಮತವಾಗಿ ಇಡಲ್ಪಡುವದು.

೩. ಲಿಲಾವಿನ ಉಳಿದ ಯಾವತ್ತು ಶರ್ತುಗಳು ಪ್ರತ್ಯೇಕವಾಗಿ ಛಾಪಿಸಿದ್ದ ಜಾಹೀರನಾಮೆಯಲ್ಲಿ ನಮೂದಿಸಿದಂತೆಯೇ ಇರುವವು. ಮಕ್ತೆ ಮಾಡುವ ಇಚ್ಛೆಯುಳ್ಳವರು ತಮಗೆ ಬೇಕಾದ ಎಲ್ಲ ಮಾಹಿತಿಯನ್ನು ಸಬ್-ಡಿವ್ಹಿಜನಲ ಆಫೀಸರ, ಪ. ವ. ಡಿ., ಕುಮಟಾ, ಅಥವಾ ಮೇ|| ಎ. ಇ. ಸಾಹೇಬ, ಕಾರವಾರ ಇವರ ಕಚೇರಿಯಲ್ಲಿ, ಕಚೇರಿಯ ವೇಳೆಯಲ್ಲಿ ತಿಳಕೊಳ್ಳಬಹುದು. ಲಿಲಾವಿನ ಯಾವತ್ತೂ ಶರ್ತುಗಳನ್ನು ಲಿಲಾವಿನ ಕಾಲಕ್ಕೆ ಓದಿ ಹೇಳುವದರಲ್ಲಿ ಬರುವದು.

Karwar,
2nd June, 1945.

G. N. GODSE,
Executive Engineer,
Kanara Division.

The Agricultural & Industrial Bank, Ltd
(Incorporated in British India, Liability of Members limited)
Head Office: COONDAPOOR. S. K

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR,
25—[illegible]—1945

K. VAMAN SHENAI
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಕೆಲವು ಭಾಗಗಳಲ್ಲಿ ಜನರು ನೀರಿನ ಬಗ್ಗೆ ಕಷ್ಟಪಡುತ್ತಿದ್ದಾರೆ. ಮೊನ್ನೆ ಶುಕ್ರವಾರ ರಾತ್ರಿ ೩ ತಾಸುಗಳ ವರೆಗೆ [illegible] ಮಳೆ ಸುರಿಯಿತು; ಆಮೇಲೆ ಏನೂ ಮಳೆಯಾಗಿಲ್ಲ.

ಬೇಸಿಗೆಯ ಬಿಡುವಿಗಾಗಿ ಮುಚ್ಚಲ್ಪಟ್ಟ ಜಿಲ್ಲೆಯ ದಿವಾಣಿ ಕೋರ್ಟುಗಳು ಇಂದು ತೆರೆಯಲ್ಪಡುತ್ತವೆ

[illegible] ಗುರಿಯಾದ [illegible] ಹೆಂಗಸು ಗಂಡನ [illegible] ದಿಂದ ಮೃತಪಟ್ಟಳಾಗಿ ಮೃತಳ ತವರುಮನೆಯವರು [illegible] ಮಾಡಿದ್ದಾರೆ. ಅವಳ ಲಗ್ನವಾಗಿ ೩ ವರ್ಷವಾಯಿತು. ಈ ೩ ವರ್ಷಗಳಲ್ಲಿ [illegible] ಗಂಡನು ಕ್ಷುಲ್ಲಕ ಕಾರಣಗಳಿಗಾಗಿ [illegible] ಹೊಡೆಯುತ್ತಿದ್ದನಂತೆ! [illegible] ಹೆಸರಾಂತ ಕಳ್ಳನಂತೆ! [illegible] ಅವಳು ಮೃತಪಟ್ಟ ದಿವಸ [illegible] ಮೇಲಿಂದ ಮೇಲೆ ಅವಳಿಗೆ ಹೊಡೆಯುತ್ತಿದ್ದನಂತೆ. ಹೀಗೆ ಅವನು ಹೊಡೆಯುತ್ತಿರುವಾಗ ಕೊಟ್ಟ ಒಂದು ಏಟು ಮರ್ಮಸ್ಥಾನದ ಮೇಲೆ ಬಿದ್ದು ಆಕೆ [illegible] ಅವಳ ಸಂಬಂಧಿಕರ [illegible] ಮೃತಳ ಗಂಡನು ಈಗ ತನ್ನ ಅಪರಾಧ [illegible] ಅವರವರ ಕಾಲು ಹಿಡಿಯುತ್ತಿದ್ದಾನಂತೆ! [illegible] ತಯಾರಾಗಿದ್ದಾನಂತೆ! [illegible] ಬಿಡಬೇಕೆಂದು ಕೋರಿಕೆಯುಂಟು

ಶ್ರೀ ಕ್ಷೇತ್ರ ಗೋಕರ್ಣದಲ್ಲಾದ ಯಜ್ಞದ ಕಾಲಕ್ಕೆ ನಡೆದ ಪಂಚಾಂಗ-ವಾದದ ಸಭೆಯನ್ನು ಕುರಿತು ಪ್ರತ್ಯಕ್ಷ ಕಂಡವರೊಬ್ಬರು ತಿಳಿಸಿದ ವೃತ್ತಾಂತ ನಿಜ ಸ್ಥಿತಿಯ [illegible] ದೆಂದು ಆ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ಎಮ್ ಜಿ. ಗೋಖಲೆಯವರು ಬರೆಯುತ್ತಾರೆ. ಸದರಿ ಸಭೆ ಬಾಹೇರ ಸಭೆಯಾಗಿತ್ತು; ೩೦೦-೪೦೦ ಜನರು ಕೂಡಿದ್ದರು, ಯಜ್ಞ ಸಮಾರಂಭದಲ್ಲಿ ತಮ್ಮ 'ದೃಕ್ ಪಂಚಾಂಗ-ಮಂಡನ' ಗ್ರಂಥವನ್ನು ಹಂಚುತ್ತಿದ್ದ ಮತ್ತು ಆ ಗ್ರಂಥ ಪ್ರಕಾಶಕ್ಕೆ ತಂದ ಶ್ರೀ [illegible] ರಾಮಚಂದ್ರ ಶಾಸ್ತ್ರಿಗಳಿಗೂ ಅವರ ಸಂಗಡಿಗರಿಗೂ ಈ ಸಭೆಗೆ ಬಂದು ತಮ್ಮ ಪಕ್ಷ ಮಂಡಿಸಲು ಆಹ್ವಾನಿಸಲಾಗಿತ್ತು; ಅದರಂತೆ ಅವರು [illegible] ತಮ್ಮ ಸಿದ್ಧಾಂತ ಪಕ್ಷ ಮಂಡಿಸಿದರು, [illegible] ಆ ಗ್ರಂಥ ಪ್ರಕಾಶಕ್ಕೆ [illegible] ಎಂದು ಬರೆದದ್ದು [illegible] ಶ್ರೀ ಗೋಖಲೆಯವರ [illegible] ಸಭೆಯು [illegible] ಬರೆಯಲ್ಲೆಂದೇ [illegible] ಶಾಸ್ತ್ರೀಯ ವಿಷಯದಲ್ಲಿ [illegible] ಬೀಜ ಸಂಸ್ಕಾರ "ವೆಂದರೇನು [illegible] ಶ್ರೀ ಶಾಸ್ತ್ರಿಯವರು ಸಮರ್ಥರಾದ್ದಿಲ್ಲೆಂದೂ ಅವರು "ಒಂದೇ, ಅಸಂಬದ್ಧ ವಾಕ್ಯಗಳನ್ನಾಡಿದರೆಂದೂ ಶ್ರೀ ಗೋಖಲೆಯವರೇ ಬರೆದಿದ್ದಾರೆ!— ಆ ಪಕ್ಷದ ವಿರುದ್ಧ ನಿರ್ಣಯ. ಪಾಸಾಯಿತು

ಎಲ್ಲಿಯ ನ್ಯಾಯ?" —ಸಂಪಾದಕ]

[illegible] ನೋಡಿರಿ)

ಬೇಕು— ಇಬ್ಬರು ತರಬೇತ ಪಡೆದ ಕನ್ನಡ ಟ್ರೇನ್ಡ ಶಿಕ್ಷಕರು ಇದೇ ಬರುವ ಜೂನ ೧ನೇ ತಾರೀಖಿನಿಂದ ಬೇಕಾಗಿದ್ದಾರೆ. ಸರಕಾರ ನಿಯಮ ಪ್ರಕಾರ ಸರ್ಟಿಫಿಕೇಟು ಸಹಿತ ಸತ್ವರ [illegible] ಕೆಳಗಿನ ಪತ್ತೆಯ ಮೇಲೆ [illegible] ಅರ್ಜಿ ಕಳಿಸಿರಿ.

ಪತ್ತೆ— ದಿ ಸೆಕ್ರೇಟರಿ, ಸೇಂಟ ಎಂಥನೀಸ ಎಜ್ಯುಕೇಶನಲ್ ಸೊಸಾಯಿಟಿ, ಹೊನ್ನಾವರ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.

ಆವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?

ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?

ಅದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತದೆ!

ಚಿನ್ನ ಬೆಳ್ಳಿ ರತ್ನಾಭರಣಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ ಸರ್ಟಿಫೀಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ. ೧೦ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[[illegible]]

NOTICE TO CONTRACTORS.

Sealed tenders in P 2 form are invited for the work of metal collection on Karwar [illegible] Road (1) in miles 21/0 to 47/8 estimated to cost Rs. [illegible] and (2) in miles [illegible] to 74 [illegible] estimated to cost Rs 73,945[illegible]
2 Applications for tender forms will be entertained upto 25-6-1945 Forms will be issued on 30-6-1945 and the tenders will be received upto 4 P. M. on 3-7-1945 The cost of the tender form is Rs 5/-each. Preference will be given to those contractors who have power crushers for crushing road metal
3 For further details apply to the undersigned

No. A-31
Executive Engineer's Office,
Camp, Yellapur [illegible] May 1945

G. N. GODSE,
Executive Engineer,
Kanara Division

N O T I C E.

Government of Bombay Finance Department (Supply),
Bombay 31st May 1945

Stock returns of yarn for the month ending 31st May, 1945

The [illegible] returns [illegible] by the 5th of June 1945 and is to be [illegible] to the Provincial Textile Controller, [illegible] Parel Road Bombay IF NO BUSINESS HAS BEEN DONE, BLANK RETURNS SHOULD BE SUBMITTED. Licence holders are requested to see that their stock returns are submitted in time.

J. K. THAKORE,
Provincial Textile Controller, Bombay

No. 3[illegible]

ORDER.

In exercise of the powers conferred by sub rule (2) of rule 81 of the Defence of India Rules read with Government Notification Home Department (Political-War) No. D 11 1370, dated 15th September 1941 and all other powers enabling him to do so the Collector and District Magistrate Kanara is hereby pleased to order that every merchant in the district holding stock of 10 maunds (of 82⅔ lbs each) or more of gur (jaggery) shall, on the 10th day of every month, furnish to the Mamlatdar or Mahalkary concerned in the form in the Schedule I hereto appended a full and correct statement of such stocks as on the last day of the month immediately preceding whether held on his own account or on account of or in partnership with any other person.

SCHEDULE I

1 Full name and address of the merchant
2 Article
3 The exact location of the godown or godowns or any other place or places where the stocks are kept
4 (i) The quantity of stock held (stock of each quality to be mentioned separately),
    (a) on his own account,
    (b) on account of any other person
    (c) in partnership with any other person
  (ii) Full names and addresses on account of whom stocks are held and the quantity of stock held on account of each such person
  (iii) Full names and addresses of persons in partnership with whom stocks are held and the quantity of stock held in partnership with each such person

Karwar,
[illegible] 5-1945.

V. NANJAPPA,
COLLECTOR & DISTRICT MAGISTRATE, KANARA

ಇದನ್ನು ಪಾಂಡುರಂಗ ಕೃಷ್ಣ ಕಾಮತರ್ (ಸಂಪಾದಕ), ಇವರು ಕುಮಟೆಯಲ್ಲಿರುವ ತಮ್ಮ "[illegible]"ದಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮುಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ಸೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡ ಕಳಿಸಬೇಕು

Reg. No. B. 1270. Monday, 11th June, 1945.

ಕಾನಡಾವೃತ್ತ

ವರ್ಷ ೨೬] THE KANARA NEWS. [ಸಂಚಿಕೆ ೪೯

ಕುಮುಟಾ:- ಸೋಮವಾರ, ತಾ. ೧೧ ಮಾಹೆ ಜೂನ ೧೯೪೫ನೇ ಇಸವಿ.

ಜಾಹೀರಾತುಗಳ ದರ:
[illegible] ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
[illegible] ೧೫ ಎಮ್ ಉದ್ದ
೧ ಸಾಲಿಗೆ ೫ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಚರ್ಚಿಲ್ಲರು ಕಳಿಸಿದ್ದೇನು?

(ನಿರೀಕ್ಷಕನು ಬರೆದುದು.)

ನಾನು ಈ ಹಿಂದೆ ಹೇಳಿರುವಂತೆ ಮಿತ್ರರ ಲಕ್ಷ್ಯವೀಗ ಜಪಾನದ ಕಡೆಗೆ ಹೊರಳಿದೆ. ಜಪಾನಿಯರ ವಿರುದ್ಧ ನಡೆದ ಯುದ್ಧದಲ್ಲಿ ಹಿಂದುಸ್ಥಾನಕ್ಕೆ ಪ್ರಾಮುಖ್ಯವುಂಟು. ಹಿಂದೀಯರ ಸಹಕಾರವಿಲ್ಲದೆ ಜಪಾನಿಯರನ್ನು ಹಡೆಬಡೆಯುವದು ಅಶಕ್ಯವಿಲ್ಲದಿದ್ದರೂ ಬಹಳ ಕಷ್ಟ. ಆದರಿಂದ ಹಿಂದುಸ್ಥಾನವನ್ನು ಸಂತೃಪ್ತಪಡಿಸಬೇಕಾಗಿದೆ. ಇನ್ನೊಂದು ಸಂಗತಿಯೆಂದರೆ ಮಿತ್ರರ ಯುದ್ಧ-ಕಾರಣಕ್ಕೆ ಸ್ವಾತಂತ್ರ್ಯದ ಬಣ್ಣ ಬಳಿಸಬೇಕಾಗಿದೆ. ಜಗತ್ತಿನ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ನಡಿಸಿದ ಯುದ್ಧವಿದೆಂದು ಮಿತ್ರರು ಲೋಕಕ್ಕೆ ಮನಗಾಣಿಸಿಕೊಡಬೇಕಾಗಿದೆ. ಆದರೆ ಹಿಂದುಸ್ಥಾನವನ್ನು ದಾಸ್ಯದಲ್ಲಿಟ್ಟು ಹಿಂದೀಯರ ಸ್ವಾತಂತ್ರ್ಯದ ಬೇಡಿಕೆಯನ್ನು ಕಡೆಗಣಿಸಿ ಬ್ರಿಟಿಶರು ತಾವು ಲೋಕಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇವೆಂದು ಹೇಳಿದರೆ ಕೇಳುವವರಾರು? ಹಿಂದುಸ್ಥಾನದ ಕಡೆಗೆ ಬೊಟ್ಟು ತೋರಿಸಿ ಈಗಾಗಲೇ ಅನೇಕ ಜನಾಂಗಗಳು ಮಿತ್ರರನ್ನು ಹೀಯಾಳಿಸುತ್ತಿವೆ. ಹಿಂದುಸ್ಥಾನದಂಥ ವಿಶಾಲ ಮತ್ತು ಪ್ರಮುಖ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಕೊಡದಿರುವ ಬ್ರಿಟಿಶರೂ ಅವರ ಗೆಳೆಯರೂ ಏಶಿಯಾ ಖಂಡದೊಳಗಿನ ಇತರ ಚಿಕ್ಕ ಪುಟ್ಟ ಜನಾಂಗಗಳಿಗೆ ಸ್ವಾತಂತ್ರ್ಯ ಕೊಡುವರೆಂದು ನಂಬುವದು ಹೇಗೆಂದು ಅವು ಕೇಳುತ್ತಿವೆ. ಆದರಿಂದಲೂ ಹಿಂದುಸ್ಥಾನದ ಸಮಸ್ಯೆಯನ್ನು ಸಮಾಧಾನಕರವಾಗಿ ಬಿಡಿಸುವದು ಬ್ರಿಟಿಶರಿಗೆ ಅಗತ್ಯದ್ದಾಗಿದೆ. ಅದಕ್ಕಾಗಿಯೇ ಸರ್ವಾಧಿಕಾರಿಗಳಾದ ವೆವ್ಹೆಲ್ಲ ದೊರೆಗಳು ಹಿಂದೀ ಸಮಸ್ಯೆಯನ್ನು ಭಾರತಮಂತ್ರಿ ಅಮೇರಿಯವರೊಡನೆಯೂ ಬ್ರಿಟಿಶ ಮಂತ್ರಿ ಮಂಡಳದೊಡನೆಯೂ ಚರ್ಚಿಸುವದಕ್ಕಾಗಿ ಕಳೆದ ಏಪ್ರಿಲ ತಿಂಗಳ ಪ್ರಾರಂಭಕ್ಕೆ ವಿಲಾಯತಿಗೆ ಪಯಣ ಬೆಳಸಿದ್ದರು. ವೆವ್ಹೆಲ್ಲ ದೊರೆಗಳು ಇಲ್ಲಿಂದ ಹೋಗುವಾಗ ಒಂದು ಬಗೆಯ ಯೋಜನೆಯನ್ನು ಕಲ್ಪಿಸಿಕೊಂಡು ಹೋಗಿದ್ದರಾಗಿ ಹೇಳುತ್ತಾರೆ. ಆ ಯೋಜನೆ ಕಾಬೀನ ಮಂತ್ರಿಗಳಿಗೂ ಬ್ರಿಟಿಶ ಮಹಾಮಂತ್ರಿ ಚರ್ಚಿಲ್ಲರಿಗೂ ಮಾನ್ಯವಾಗಲಿಲ್ಲವೆಂದೂ ವೆವ್ಹೆಲದೊರೆಗಳಷ್ಟು ಉದಾರರಾಗಲು ಚರ್ಚಿಲ್ಲ-ಅಮೇರಿಯವರು ಒಪ್ಪಲಿಲ್ಲವೆಂದೂ, ಆದರಿಂದ ಬೇಸರಗೊಂಡು ವೆವ್ಹೆಲ್ಲ ದೊರೆಗಳು ಸರ್ವಾಧಿಕಾರಕ್ಕೆ ರಾಜಿನಾಮೆ ಕೊಡುವ ವಿಚಾರದಲ್ಲಿದ್ದಾರೆಂದೂ ಕಳೆದ ತಿಂಗಳಲ್ಲಿ ಮೇಲಿಂದ ಮೇಲೆ ಸುದ್ದಿಗಳು ಬರುತ್ತಿದ್ದವು. ಆದರೆ ಚರ್ಚಿಲ್ಲ-ಅಮೇರಿ-ವೆವ್ಹೆಲ್ಲರ ನಡುವೆ ನಡೆದ ಚರ್ಚೆಯ ವಿಷಯವಾಗಲಿ, ಅವರು ಆಲೋಚಿಸುತ್ತಿದ್ದ ಯೋಜನೆಗಳ ರೂಪ-ರೇಷೆಗಳಾಗಲಿ ಎಳ್ಳಷ್ಟೂ ತಿಳಿಯುತ್ತಿದ್ದಿಲ್ಲ. ಎಲ್ಲವೂ ಗುಟ್ಟಾಗಿಯೇ ಉಳಿಯಿತು! ಈ ಗುಟ್ಟನ್ನು ರಟ್ಟು ಮಾಡಲಿಕ್ಕೆ ಪಾರ್ಲಮೆಂಟಿನ ಸದಸ್ಯರೂ ಜಾಣಾಕ್ಷ ಪತ್ರಿಕಾ ಪ್ರತಿನಿಧಿಗಳೂ ನಡಿಸಿದ ಎಲ್ಲ ಪ್ರಯತ್ನಗಳೂ ಅಯಶಸ್ವಿಯಾದವು. ವೆವ್ಹೆಲ್ಲ ದೊರೆಗಳು ಸಂಪೂರ್ಣ ಮೌನವನ್ನೇ ಆಚರಿಸಿದರು, ಅಮೇರಿಯವರು ಜಾರಿಕೆಯ ಉತ್ತರಗಳನ್ನು ಕೊಡುತ್ತ, ವೆವ್ಹೆಲ್ಲ ದೊರೆಗಳು ಹಿಂದುಸ್ಥಾನಕ್ಕೆ ಮರಳಿದ ಮೇಲೆ ಎಲ್ಲವೂ ಪ್ರಕಟವಾಗುವದಾಗಿ ತಿಳಿಸುತ್ತಲಿದ್ದರು; ಚರ್ಚಿಲ್ಲರಂತೂ ಹಿಂದುಸ್ಥಾನದ ಪ್ರಶ್ನೆಯನ್ನು ಎತ್ತಿ ಮಾತಾಡಲು ಪುರಸೊತ್ತಿಲ್ಲ! ನಡುವೆ ಒಮ್ಮೆ ವೆವ್ಹೆಲ್ಲ ದೊರೆಗಳು ಸರ್ ಸ್ಟೆಫೋರ್ಡ ಕ್ರಿಪ್ಸರ ಸಲಹೆಯನ್ನು ಪಡೆಕೊಂಡಿದ್ದರಂತೆ. ಆದರೆ ಚರ್ಚಿಲ್ಲ ಮಹಾಪ್ರಭುಗಳು ಕ್ರಿಪ್ಸರ ಸೂಚನೆಗಳನ್ನು ಅಟ್ಟನೆ ತಿರಸ್ಕರಿಸಿಬಿಟ್ಟರಂತೆ! ಅಂತು ಕೊನೆಗೆ ಏನೋ ಒಂದು ಯೋಜನೆಯನ್ನು ತಯಾರಿಸಿಕೊಂಡು ಸರ್ವಾಧಿಕಾರಿ ವೆವ್ಹೆಲ್ಲ ದೊರೆಗಳು ಕಳೆದ ಸೋಮವಾರ ಮರಳಿ ಬಂದಿದ್ದಾರೆ. ಅವರು ತಂದ ಚೀಲದಲ್ಲಿ ಏನಿರಬಹುದೆಂಬುದಾಗಿ ದೇಶದಲ್ಲೆಲ್ಲ ಈಗ ತರ್ಕ-ವಿತರ್ಕಗಳು ನಡೆದಿವೆ. ದೊರೆಗಳು ತಂದ ಯೋಜನೆ ತಾತ್ಪೂರ್ತಿಕವಾದದ್ದು. ಭವಿಷ್ಯ ಕಾಲದ ವ್ಯವಸ್ಥೆಯೇನೆಂಬುದೂ ಅದರಲ್ಲಿಲ್ಲ. ಈ ಯುದ್ಧಕಾಲದಲ್ಲಿ ಭಾರತೀಯರು ಬ್ರಿಟಿಶರೊಡನೆ ಮನೋವಾಕ್ಕಾಯಗಳಿಂದ ಸಹಕರಿಸುವಂತೆ ಮಾಡಲು ಕೇಂದ್ರದಲ್ಲಿ ಒಂದು ಬಗೆಯ ರಾಷ್ಟ್ರೀಯ ಸರಕಾರ ನಿರ್ಮಿಸಿಕೊಡುವದೇ ಈಗಿನ ಯೋಜನೆಯ ಮುಖ್ಯಸಾಧ್ಯ. ಸರ್ವಾಧಿಕಾರಿಗಳ ಯೋಜನೆ ನಾಳೆ ಬುಧವಾರ ಪ್ರಸಿದ್ಧವಾಗುವದೆಂತೆ. ಸಮಸ್ತರೂ ಅದನ್ನು ನೋಡಲು ಹಾತೊರೆಯುತ್ತಿದ್ದಾರೆ! ಕೆಲವರು ಅದನ್ನು ಸ್ವಾಗತಿಸಲಿಕ್ಕೆ ಮುಂದೊಡ್ಡಿಕೊಂಡು ಬಾಯ್ತೆರೆದು ಬಗ್ಗಾಲ ಮೇಲೆ ನಿಂತಿದ್ದಾರೆ! ಕೆಲವರು ಈಗಿನಿಂದಲೇ ಅದರ ನಿಷೇಧ ಮಾಡಲು ಕೊಡಗಿದ್ದಾರೆ! ದೊರೆಗಳು ದಿಲ್ಲಿಗೆ ಬಂದು ತಲ್ಪಿದ ಕೂಡಲೇ ತಮ್ಮ ಕಾರ್ಯಕಾರಿ ಮಂಡಳದ ಸಭೆ ಸೇರಿಸಿ, ಚರ್ಚಿಲ್ಲ-ಅಮೇರಿಯವರ ಅಂಕಿತವಿದ್ದ ತಮ್ಮ ಹೊಸ ಯೋಜನೆಯನ್ನು ಅದರ ಮುಂದಿಟ್ಟರಂತೆ. ಅದು ಅವರಿಗೆ ಸಮ್ಮತವಾಗಲಿಲ್ಲವೆಂದು ಒಂದು ಸುದ್ದಿಯಿದೆ. ಹೊಸ ಯೋಜನೆಯನ್ನು ಸ್ವೀಕರಿಸಲು ಕೊಂಗ್ರೆಸ್ಸ ಮತ್ತು ಮುಸ್ಲಿಮ್ ಲೀಗು ಒಪ್ಪಿಕೊಂಡರೆ, ಹಿಂದುಸ್ಥಾನ ಸರಕಾರದ ಈಗಿನ ಮಂತ್ರಿಗಳು ರಾಜಿನಾಮೆಯಿತ್ತು ಜನಮಾನ್ಯ ಲೋಕಪ್ರತಿನಿಧಿಗಳಿಗೆ ಸ್ಥಾನ ಬಿಟ್ಟುಕೊಡಬೇಕಾಗುವದು. ಅದ್ದರಿಂದ ಹೊಸ ಯೋಜನೆ ದೇಶವು ತಿರಸ್ಕರಿಸುವಂತೆ ಈ ಅಧಿಕಾರ-ಲೋಲುಪರು ಕುತಂತ್ರ ರಚಿಸಿದ್ದಾರೆಂದು ದಿಲ್ಲಿಯ ವಾರ್ತೆ! ಅದೇನಿದ್ದರೂ ಕೊಂಗ್ರೆಸ್ಸಿನ ಧೋರಣೆಯೇನೆಂಬುದೇ ಮಹತ್ವದ ಪ್ರಶ್ನೆ. ಕೊಂಗ್ರೆಸ್ಸಿಗರು ಈ ಯೋಜನೆಯನ್ನು ಸ್ವೀಕರಿಸಿದರೆ ಮಾತ್ರ ಬಂಧನದಲ್ಲಿದ್ದ ಲೋಕನಾಯಕರ ಬಿಡುಗಡೆಯಾಗುವದಾಗಿ ಮೊದಲು ಹೇಳುತ್ತಿದ್ದರು. ಹೊಸ ಯೋಜನೆ ಪ್ರಕಟವಾಗುತ್ತಲೇ ಅವರ ಬಿಡುಗಡೆಯಾಗುವದಾಗಿ ಈಗ ಕೆಲವರು ಹೇಳುತ್ತಾರೆ. ಇದೆಷ್ಟು ಸಟಿ ಯಾ ದಿಟವೆಂಬುದು ೩-೪ ದಿನಗಳಲ್ಲಿ ಹೊರಬೀಳುವದಿದೆ. ಅಲ್ಲಿಯತನಕ ನಾವು [illegible] ಹಾದಿ ನೋಡುವಾ. ಆದರೆ ಒಂದು ಮಾತು ಸ್ಪಷ್ಟವಿದೆ. ಚರ್ಚಿಲ್ಲರು ಹಿಂದೀ ಸ್ವಾತಂತ್ರ್ಯದ ಕಡು ವೈರಿಗಳು. ಬ್ರಿಟಿಶ ಸಾಮ್ರಾಜ್ಯದ ವಿಸರ್ಜನೆ ಮಾಡಲು ತಾವು ಮುಖ್ಯ ಪ್ರಧಾನರಾಗಿಲ್ಲವೆಂದು ಅವರು ಮೊನ್ನೆ ಮೊನ್ನೆ ಹೇಳಿದ್ದುಂಟು! ಇಂಥವರ ಒಪ್ಪಿಗೆಯಿಂದ ತಯಾರಾದ ಯೋಜನೆಯಲ್ಲಿ ಸ್ವರಾಜ್ಯ-ಸ್ವಾತಂತ್ರ್ಯಗಳ ತಿರುಳು ಹೆಚ್ಚಾಗಿ ಇರಲಾರದೆಂದೇ ನನ್ನ ಅಭಿಪ್ರಾಯ.

(೨ನೇ ಪುಟದಿಂದ ಮುಂದರಿಸಿದ್ದು.)

ಕುದ್ರಿಗೆ ಮತ್ತು ಸಂತಿ ಗ್ರಾಮಗಳ ಬಗ್ಗೆ ಕುದ್ರಿಗೆಯಲ್ಲಿ ಒಂದು ಯೋಗ್ಯ ದರದ ಅಂಗಡಿಯುಂಟು. ಈ ಅಂಗಡಿಯು ಮತ್ತೆ ನೂತನವಾಗಿ ಏರ್ಪಟ್ಟ ಹಿಂದು-ಕ್ರಿಶ್ಚನ-ಮುಸಲ್ಮಾನ ಸಂಘ (?) ಕ್ಕೆ ಒಪ್ಪಿಸಲ್ಪಟ್ಟಿದೆ. ಕುದ್ರಿಗೆ ಮತ್ತು ಸಂತಿಯಲ್ಲಿರುವ ಬಹುತೇಕ ಜನರು ಬಡವರು. ಅವರಿಗೆ ಯೋಗ್ಯ ದರದ ಅಂಗಡಿಯಲ್ಲಿ ಸಿಗಬೇಕಾದದ್ದು ಮುಖ್ಯವಾಗಿ ಅಕ್ಕಿ ಮತ್ತು ರಾಗಿ. ಆದರೆ ಅಂಗಡಿಯವರು ಅದನ್ನು ಒಯ್ಯುವದು ಅಪರೂಪ!! ಅದರಿಂದ ಜನರು ಅಕ್ಕಿ ಪ್ಯಾಲಿಗೆ ರೂ ೧-೬-೦ರ ತನಕ ಕೊಡಬೇಕಾಗುತ್ತದೆ! ಪ್ರತಿ ತಿಂಗಳಿಗೆ ೫ ಶೇರ ಸಕ್ಕರೆ ಮತ್ತು ೨೫ ಡಬ್ಬಿ ಚಿಮಣಿಎಣ್ಣೆ ಮಾತ್ರ ಈ ಅಂಗಡಿಗೆ ಬರುವದೇ ಹೋಗುತ್ತವೆ! ಮತ್ತು ಅದರಲ್ಲಿ ಬಹು ಭಾಗ ಕಳ್ಳ ಪೇಟೆ ಸೇರುತ್ತದೆ!! ಹೀಗೆ ಕಳ್ಳಪೇಟೆ ಮಾಡುವದಕ್ಕಾಗಿಯೇ ಮೇಲೆ ಹೇಳಿದ ಸಂಘ ಜನ್ಮವೆತ್ತಿದ್ದು, ಹೊರತು ಲೋಕೋಪಕಾರಕ್ಕಲ್ಲ! ಜಿಲ್ಹಾಧಿಕಾರು ಈ ಅಂಗಡಿಯನ್ನು [illegible].

ಶಿರಸಿ—(ತಾ. ೪-೬-೪೫) ಶಿರಸಿಯ ಮಹಾವೀರ ಗಿರಣಿಗೆ ಬೆಂಕಿ ಬಿದ್ದಾಗ ಗಿರಣಿಯಲ್ಲಿ ಚಿಮಣಿ ಎಣ್ಣೆ ಇದ್ದಿಲ್ಲಂತಲೂ, ಕ್ರೂಡ ಒಯ್ಲ ಮಾತ್ರ ಅದೂ ಕೂಡ ಅಗತ್ಯವಿದ್ದಷ್ಟೇ – ಇತ್ತಂತಲೂ, ಆದರೆ ಅದು ಉಗ್ರಾಣದಲ್ಲಿ ಇದ್ದಿಲ್ಲಂತಲೂ ಸದರ ಗಿರಣಿಯ ಒಡೆಯರಾದ ರಾ| ಎನ್. ಪಿ. ಆಲೂರ ಇವರು ತಿಳಿಸುತ್ತಾರೆ. ರಾ| ಆಲೂರರವರಾತು ನಂಬಿದರೆ ಬೆಂಕಿಯು ಹೇಗೆ ಒಮ್ಮೆಗಲೇ [illegible] ಒಂದು ದೊಡ್ಡ ಒಗಟು ಆಗಿಹೋಗುತ್ತದೆ. ರಾ| ಆಲೂರರು ಅದನ್ನು ಬಿಡಿಸಿರುವದಿಲ್ಲ. ಈ ಒಗಟಿನ ಜೊತೆಗೆ ಇನ್ನೂ ಕೆಲವು ಒಗಟುಗಳುದ್ಭವಿಸತಕ್ಕವೆ. ಸುಟ್ಟು ಹೋದ ಭತ್ತದಲ್ಲಿ ಸರಕಾರದವರ ಭತ್ತವಿದ್ದಿಲ್ಲವಂತೆ. ಹೆಚ್ಚೆಂದರೆ ೨-೩ ನೂರು ಖಂಡಿ ಭತ್ತ ಹೋಗಿರಬಹುದಾಗಿ ಹೇಳುತ್ತಾರೆ. ಇದು ನಿಜವಿದ್ದರೆ ಸುಟ್ಟು ಹೋದ ಭತ್ತವೆಷ್ಟು ಮತ್ತು ಯಾರದು ಎಂಬುದು ಒಂದು ದೊಡ್ಡ ಪ್ರಶ್ನೆ! ಅಧಿಕಾರಿಗಳೂ ಗಿರಣಿಗೆ ಸಂಬಂಧಪಟ್ಟವರೂ ಎಲ್ಲವನ್ನೂ ಗುಟ್ಟಾಗಿಟ್ಟುಕೊಂಡಿದ್ದಾರೆ.

ಸಿದ್ದಾಪುರ—(ತಾ. ೧-೬-೪೫) ಇಲ್ಲಿ ಸೀಧಾ-ಪದ್ಧತಿ ಅಮಲಿನಲ್ಲಿ ಬಂದ ತರುವಾಯ ಈಗ ೧-೨ ತಿಂಗಳಿಂದ ನಡೆದಿದೆ. ಆದರೆ ಇನ್ನೂ ಎಲ್ಲ ಜನರಿಗೆ ಸೀಧಾ-ಕಾರ್ಡುಗಳು ಸಿಕ್ಕಿರುವದಿಲ್ಲ. ಬಹಳಷ್ಟು ನಾಗರಿಕರಿಗೆ ಸಕ್ಕರೆ ಮತ್ತು ಚಿಮಣಿಎಣ್ಣೆ ಸಿಗುವದಿಲ್ಲ! ಅಧಿಕಾರಿಗಳಿಗೆ ಮತ್ತು ಅವರ ಗೆಳೆಯರಿಗೆ ಮಾತ್ರ ಬೇಕಷ್ಟು ಎಣ್ಣೆ-ಸಕ್ಕರೆಗಳು ಸಿಗುತ್ತಿವೆ! ಅವರಿಗೆ ಸ್ಪೇಶಲ್ ಪರವಾನಗಿಗಳು ಕೊಡಲ್ಪಡುತ್ತವೆಯಂತೆ!

ಸೋಮವಾರ ತಾ. ೧೪ನೇಗೆ ಇಲ್ಲಿ ವಿಜಯೋತ್ಸವವಾಯಿತು. ರಾತ್ರಿ ಹೋಳಿಯಾಯಿತು. ಹೋಳಿಯ ಬಗ್ಗೆಂತ ತೆಗೆದಿಟ್ಟ ಕೆಲವು ಸವದಿ ಅಧಿಕಾರಿಗಳ ಮನೆ ಸೇರಿತೆಂದು ಹೇಳುತ್ತಾರೆ.

ಹಳಿಯಾಳ—(ತಾ. ೧೪-೫-೪೫) ಮಿತ್ರರಿಗೆ ವಿಜಯವಾದಬಗ್ಗೆ ಕಳೆದ ವಾರ ಇಲ್ಲಿ ದೊಡ್ಡ ಉತ್ಸವವಾಯಿತು. ತಾ ೯-೧೦ಕ್ಕೆ ಊರೆಲ್ಲ ಸಿಂಗರಿಸಲ್ಪಟ್ಟಿತ್ತು. ರವಿವಾರ ತಾ. ೧೩ಕ್ಕೆ ಅಧಿಕಾರಿಗಳೂ ಊರ ಜನರೂ ಗುಡಿಗಳಿಗೆ ಹೋಗಿ ಪ್ರಾರ್ಥನೆ ಮಾಡಿದರು. ರಾ| ಸಾ| ಶಿಕ್ಕಾರ ಇವರು ೨-೩ ಸಾವಿರ ಜನರಿಗೆ ಅನ್ನಸಂತರ್ಪಣೆ ಮಾಡಿದರು. ಸೋಮವಾರ ತಾ ೧೪ನೇ ಮುಂಜಾನೆ ಸವ್ಯಾಟರ ಭಾಷಣ-ಚಿತ್ರದೊಂದಿಗೆ ಮೆರವಣಿಗೆಯಾಯಿತು; ಮಧ್ಯಾಹ್ನದಲ್ಲಿ ಶಿವಾಜಿ ವಿದ್ಯಾಲಯದ ಪಟಾಂಗಣದಲ್ಲಿ ಸಭೆಯಾಯಿತು, ಸಂಜೆ ೪ ಘಂಟೆಗೆ ಫಕೀರ ಪ್ರಾಂತಸಾಹೇಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ವಿದ್ಯಾರ್ಥಿಗಳ ಹಾಗೂ ಪೋಲೀಸರ ಆಟ-ಪಂದ್ಯಾಟಗಳಾದವು; ಕುಸ್ತಿ ನೆಲಾದವು; ಗೆದ್ದವರಿಗೆ ಅಧ್ಯಕ್ಷರ ಹಸ್ತದಿಂದ ಇನಾಮುಗಳನ್ನು ಕೊಡಿಸಲಾಯಿತು, ಹಳ್ಳಿಗರ ಒಂದು ನಾಟಕವೂ ಆಯಿತು. ಇಂಥ ವಿಜಯೋತ್ಸವ ಜಿಲ್ಹೆಯಲ್ಲಿ ಬೇರೆ ಯಾವ ಊರಲ್ಲೂ ಆಗಿರಲಿಕ್ಕಿಲ್ಲವೆಂದು ಇಲ್ಲಿಯವರು ಹೆಮ್ಮೆ ಪಡುತ್ತಾರೆ.

ಸುಂಕೇರಿ—(ತಾ. ೧೪-೫-೪೫) ೧೯೩೩ರಿಂದ ನಡೆಯುತ್ತಿರುವ ಶನಿವಾರ-ಫಂಡ ಸಂಸ್ಥೆಯವರು ಊರೊಳಗಿನ ರಸ್ತೆಗಳಲ್ಲಿ ೭ ದೀಪ ನಡಿಸುತ್ತ ಬಂದಿದ್ದಾರೆ. ಸಂಸ್ಥೆಯಲ್ಲೀಗ ೨೬ ಸದಸ್ಯರಿರುವರು. ೧೯೪೪-೪೫ರಲ್ಲಿ ಸಂಸ್ಥೆಗೆ ಸ್ಥಾನಿಕ ಸರಕಾರ ಸಂಘದಿಂದ ರೂ ೫೪|||, ಮಿ| ಆಲ್ಬರ್ಟ ಪಚೇಕೋರಿಂದ ರೂ ೫ ಮತ್ತು ಜೇ. ಪಿ. ಸಾವಕಾರರಿಂದ (೧ ದೀಪದ ಖರ್ಚ) ರೂ ೭-೧೨-೭, ಹಾಗೂ ಸದಸ್ಯರ ವಂತಿಗೆ ರಕಮು ೧೯-೧೩-೬ ಹಾಗೂ ತರಕಾರೀ ಉತ್ಪನ್ನ ೦-೧೦-೦ ಹೀಗೆ ಅಂತು ರೂ. ೮೮-೦-೧ ಉತ್ಪನ್ನ ಸಿಕ್ಕಿತು. ಅದರೊಳಗಿಂದ ಎಣ್ಣೆ, ದೀಪ ದುರುಸ್ತಿ ಮುಂತಾದವುಗಳ ಬಗ್ಗೆ ರೂ. ೬೬-೧-೦ ಖರ್ಚಾಗಿ ಉಳಿದ ಶಿಲ್ಕು ರೂ ೨೨-೧೫-೧ ಮತ್ತು ಹಿಂದಿನ ಶಿಲ್ಕು ರೂ. ೩೮-೬-೪ ಕೂಡಿ ರೂ ೬೧-೫-೯ ಸಂಸ್ಥೆಯ ಕಾರ್ಯದರ್ಶಿ ರಾ| ಜೇ. ಪಿ. ಸಾವಕಾರರ ಕಡೆಗೆ ಉಂಟು.

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR, 25-4-1945.

K. VAMAN SHENAI
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಸೋಮವಾರ ಸಂಜೆಯಿಂದ ಮಳೆಗಾಲಕ್ಕೆ ಪ್ರಾರಂಭವಾದಂತಾಗಿದೆ. ಮೇಲಿಂದ ಮೇಲೆ ಮಳೆಯಾಗುತ್ತಿದೆ. ಆದರೆ ಇನ್ನೂ ಮಾಗಿ ಕಳೆ ಕಂಡಿಲ್ಲ.

ಪರಕಡೆಯಲ್ಲಿ ಅಸ್ವಚ್ಛತೆಯಿಂದ ಕೀಟಕಗಳು ರೋಗಗಳ ಹರಡುವಿಕೆಗೆ ಅನುಕೂಲವಾಗಬಹುದು ಸ್ವಲ್ಪಮಟ್ಟಿಗಾದರೂ ಸರ್ಕಾರದ ಸಹಾಯ ದೊರೆಯದಿದ್ದರೂ ಜನರು ಸ್ವಚ್ಛತೆಯ ಕಡೆಗೆ ಲಕ್ಷ್ಯ ಕೊಡಬೇಕು. ಅಂಗಡಿಕಾರರು ತಮ್ಮ ಅಂಗಡಿಗಳ ಮುಂದಿನ ಕಸವನ್ನು ರಸ್ತೆಯ ಮೇಲೆ ಹಾಕುತ್ತಾರೆ. ಈ ಗಂಡಾಂತರ ತಪ್ಪಿಸಲು ಮ್ಯುನಿಸಿಪಾಲಿಟಿಯವರು ಲಕ್ಷ್ಯ ಕೊಡುವರೆಂದು ನಂಬುತ್ತೇವೆ. ಸದರಿ ಅಸ್ವಚ್ಛತೆ ಮುಂದುವರಿದರೆ ಸಾಂಕ್ರಾಮಿಕ ರೋಗಗಳ ಭೀತಿ ಹುಟ್ಟಿ ಜನರ ಆರೋಗ್ಯಕ್ಕೆ ಅಪಾಯ ತಟ್ಟದಿರದು!

ಈಗ ೮-೧೦ ದಿವಸಗಳಿಂದ ಕುಮಟಾ-ಬಸ್ತಿ ರಸ್ತೆಯ ಮೇಲಿನ ಸಂಕದ ದುರುಸ್ತಿ ನಡೆದಿದೆ. ಅದರ “ಉದ್ಧಾರ ಬೇನಾಮಿ”ಗಳು ತೆಗೆದು ಹೊಸ ತೊಲೆಗಳನ್ನು ಹಾಕಿದೆ (ಈಗಿದ್ದ ಕಲ್ಲಿನ ಕಂಬಗಳಿಗೆ ಪೂರ್ತಿ ಜಂಗು ಹಿಡಿದು ಅವುಗಳಲ್ಲಿ ದೊಡ್ಡ ದೊಡ್ಡ ತೂತುಗಳಾಗಿವೆ!), ಮೇಲಿನ ಮುಚ್ಚಿಗೆ ಹಲಗೆಗಳನ್ನಷ್ಟೇ ತೆಗೆದು ಹೊಸ ಹಲಗೆಗಳನ್ನು ಹಾಕಿ ಮುಚ್ಚುತ್ತಿದ್ದಾರೆ ಅಂದರೆ ಇಲಿ ಒಳನುಸುಳದಂತೆ ಮುಚ್ಚುತ್ತಿದ್ದಾರೆ! ಇದರಿಂದ ಒಂದಿಲ್ಲೊಂದು ದಿನ “ಭಾರವಾದ ವಾಹನಗಳು” ಈ ಸಂಕ ದಾಟುವಾಗ ಅಪಘಾತವಾಗುವ ಭೀತಿಯುಂಟು.

ಕನ್ನಡ ಮುಲ್ಕಿ ಪರೀಕ್ಷೆಯ ಪರಿಣಾಮ ಕಳೆದ ತಾ. ೩೧ಕ್ಕೆ ಪ್ರಕಟವಾಯಿತು. ಕುಮಟಾ ಕೇಂದ್ರದಲ್ಲಿ ಕೂತವರಲ್ಲಿ ನೂರಕ್ಕೆ ೭೫ರಷ್ಟು ತೇರ್ಗಡೆಯಾಗಿದ್ದಾರೆ. ಗೋಕರ್ಣದೊಳಗಿನ ೧ನೇ ನಂಬರ ಶಾಲೆಯಿಂದ ಕೂತ ಸುಧಾರ ನಾರಾಯಣ ರಾ. ಹಿರೇಗಂಗೆ ಇವನು ೪೧೧ ಗುಣಗಳನ್ನು ದೊರಕಿಸಿ ಇಡೀ ಜಿಲ್ಹೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ. ಸದರಿ ಶಾಲೆಯಿಂದ ಕೂತ ೧೯ರಲ್ಲಿ ೭ ಮಂದಿ ತೇರ್ಗಡೆಯಾಗಿದ್ದಾರೆ.

ಇದೇ ಬರುವ ತಾ. ೨೬-೬-೪೫ಕ್ಕೆ ಜಿಲ್ಹಾ ಲೋಕಲ್ ಬೋರ್ಡಿನ ಸಾರ್ವತ್ರಿಕ ಚುನಾವಣೆಗಳಾಗಲಿರುವದರಿಂದ ಜಿಲ್ಹಾಧಿಪರು ಅಂದು ಜಿಲ್ಹೆಯೊಳಗಿನ ಎಲ್ಲ ಕಚೇರಿಗಳಿಗೆ ರಜೆ ಕೊಡತಕ್ಕದ್ದೆಂದು ಅಪ್ಪಣೆ ಹೊರಡಿಸಿದ್ದಾರೆ.

ಹೊನ್ನಾವರ—(ತಾ. ೮-೬-೪೫) ನ್ಯೂ ಇಂಗ್ಲಿಷ ಸ್ಕೂಲಿನ ಹೊಸ ಕಟ್ಟಡ ಬಹುತೇಕ ತಯಾರಾಗಿದೆ. ಈ ತಿಂಗಳ ಕೊನೆಯೊಳಗಾಗಿ ಅಲ್ಲಿ ವರ್ಗಗಳನ್ನು ಸೇರಿಸಲು ಅನುಕೂಲವಾಗುವದಂತೆ.

ಇಲ್ಲಿಯ ಕನ್ನಡ ಮುಲ್ಕೀ ಪರೀಕ್ಷೆಗೆ ೪೪ ಮಂದಿ ಹುಡುಗರು ಕೂತಿದ್ದರು. ಅವರಲ್ಲಿ ೪ ಮಂದಿ ಉತ್ತೀರ್ಣರಾಗಿದ್ದಾರೆ!!

ಮ್ಯುನಿಸಿಪಾಲಿಟಿಯ ದೀಪದ ಕಂಬಗಳಲ್ಲಿ ಬಹಳಷ್ಟು ಕಂಬಗಳಿಗೆ ದೀಪವೇ ಕಾಣದು. ಬರೇ ೨೦-೨೫ ದೀಪಗಳು ಮಾತ್ರ ಉರಿಯುವದು ಕಾಣುತ್ತದೆ. ಎಷ್ಟು ಮಾತ್ರ ಎಷ್ಟು ಪೆಟ್ರೋಲ ಖರ್ಚಾಗುತ್ತದೆ ದೇವರೇ ಬಲ್ಲ!

(೧ನೇ ಪುಟದ ಮೇಲೆ ಮುಂದುವರಿದ)

ಈ ವರ್ಷದ ಮಳೆಯ ಭವಿಷ್ಯ.

ಬೇರೆಬೇರೆ ಗ್ರಹಗಳ ಯೋಗ-ಪ್ರತಿಯೋಗಗಳ ಮೇಲಿಂದ ಶ್ರೀ ಆ. ಸ. ಕಾಂಬಳೇಕರ ಇವರು ಮಳೆಯ ಭವಿಷ್ಯ ಪತ್ರಿಕೆ ‘ಕೇಸರಿ’ಯಲ್ಲಿ ಪ್ರಕಟಿಸುತ್ತಿದ್ದು ಈ ವರ್ಷದ ಬಗ್ಗೆ ಮಳೆ ತಡವಾಗಿ ಬರುವದೆಂದೂ, ಆದರೂ ಈ ಜೂನ ತಿಂಗಳಿಂದ ಡಿಸೆಂಬರ ತಿಂಗಳ ತನಕ ಸರಿಯಾಗಿ ಕಾಲಕಾಲಕ್ಕೆ ಮಳೆ ಬೀಳುವದೆಂತಲೂ ನಡುವೆ ಅತಿವೃಷ್ಟಿ-ಅನಾವೃಷ್ಟಿಗಳು ಸಂಭವಿಸಲಾರವೆಂತಲೂ ಅವರು ಭವಿಷ್ಯ ಪ್ರಕಟಿಸಿದ್ದುಂಟು. ಬೇಸಾಯಗಾರರು ಮಳೆಯ ಬಗ್ಗೆ ಭೀತಿ ಪಡುವ ಕಾರಣವಿಲ್ಲವಂತೆ.

— R —

ಇದರ ಮೂಲಕ ಗೋಕರ್ಣ ರೇಶನ್ ಕ್ಷೇತ್ರದಲ್ಲಿ ವಾಸ ಮಾಡುವಂಥ ಯಾವತ್ತೂ ಜನರಿಗೆ ಜಾಹೀರ ಮಾಡುವದೇನಂದರೆ.—

ನೆಲದಲ್ಲಿ ಮೂರು ದಿವಸಕ್ಕಿಂತ ಹೆಚ್ಚಿಗೆ ಮತ್ತು ೭ ದಿವಸಕ್ಕಿಂತ ಕಡಿಮೆ ದಿವಸ ವಾಸ ಮಾಡುವವರಿಗೆ ಶಿಧಾ-ಟಿಕೇಟುಗಳ ಮೇಲೆ ಧಾನ್ಯ ಮತ್ತು ಸಕ್ಕರೆ ಮಾತ್ರ ಕೊಡಲ್ಪಡುತ್ತಿದ್ದು ಚಿಮಣಿ ಎಣ್ಣೆಯನ್ನು ಕೊಡುತ್ತಿದ್ದಿಲ್ಲ. ಆದರೆ ಈಗ ತಾ. ೧-೫-೧೯೪೫ರಿಂದ ಇಂಥವರಿಗೆ ಚಿಮಣಿ ಎಣ್ಣೆಯನ್ನು ಕೊಡುವದರಲ್ಲಿ ಬರುವದು, ಎಂಬುದಾಗಿ ಮುಂಬಯಿ ರೇಶನಿಂಗ ರೆಗ್ಯುಲೇಶನ ಎನೆಕ್ಸ್‌ಚಿನ ಸಬ್‌ಕ್ಲಾಜ ೩ರ ಪ್ರೊವಿಜೋದಲ್ಲಿ ತಿದ್ದುಪಡಿಯಾಗಿರುತ್ತದೆ ತಾ. ೯-೬-೪೫,

P. M. Hegdekatti,
Rationing Officer, Gokarn.

ಮೆಟ್ರಿಕ್ ಪರೀಕ್ಷೆಯ ಫಲಿತಾಂಶ.

ಇದೇ ಕಳೆದ ಮಾರ್ಚ ತಿಂಗಳಲ್ಲಾದ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಗೆ ಒಟ್ಟು ೩೩೪೧೩ ವಿದ್ಯಾರ್ಥಿಗಳು ಕೂತಿದ್ದರು. ಅವರಲ್ಲಿ ೧೩೬೫೧ ಮಂದಿ ತೇರ್ಗಡೆಯಾಗಿದ್ದಾರೆ ಅಂದರೆ ನೂರಕ್ಕೆ ೪೬ ಜನರು ಮಾತ್ರ ತೇರ್ಗಡೆ ಹೊಂದಿದಂತಾಯಿತು. ಕಳೆದ ೬ ವರ್ಷಗಳಲ್ಲಿ ತೇರ್ಗಡೆಯಾದವರ ಸರಾಸರಿ ಪ್ರಮಾಣ ನೂರಕ್ಕೆ ೫೫ರಷ್ಟುಂಟು. ಈ ವರ್ಷದ ಪ್ರಮಾಣ ಮಾತ್ರ ಹಿಂದಿನವುಗಳಿಗಿಂತ ಬಹಳ ಕಡಿಮೆ ಯಾಕಾಯಿತೆಂಬುದು ಒಂದು ವಿಚಾರ ಮಾಡಬೇಕಾದ ವಿಷಯವಾಗಿದೆ. ನಮ್ಮ ಜಿಲ್ಲೆಯ ೧೨ ಹಾಯಸ್ಕೂಲುಗಳಿಂದ ಈ ಸಲ ೩೬೭ ವಿದ್ಯಾರ್ಥಿಗಳೂ ೭೦ ವಿದ್ಯಾರ್ಥಿನಿಗಳೂ ಕೂತಿದ್ದರು. ಅವರಲ್ಲಿ ೧೪೦ ವಿದ್ಯಾರ್ಥಿಗಳೂ ೩೦ ವಿದ್ಯಾರ್ಥಿನಿಗಳೂ ಯಶಸ್ವಿಯಾಗಿರುತ್ತಾರೆ. ಬೇರೆಬೇರೆ ಹಾಯಸ್ಕೂಲುಗಳಿಂದ ಕೂತವರ ಮತ್ತು ಉತ್ತೀರ್ಣರಾದವರ ಸಂಖ್ಯೆಗಳು ಈ ಕೆಳಗಿನಂತಿವೆ.— ಕಾರವಾರ ಹಾಯಸ್ಕೂಲ ೬೮-೨೯, ಹಿಂದು ಹಾಯಸ್ಕೂಲ ೯೭-೪೫, ಪ್ರಾಯವ್ಹೇಟ ಹಾಯಸ್ಕೂಲ, ಸದಾಶಿವಗಡ ೩೯-೬, ಸೇಂಟ ಮ್ಯಾಕೇಲ ಕೊನವ್ಹೆಂಟ, ಕಾರವಾರ ೪-೨, ಎಡವರ್ಡ ಹಾಯಸ್ಕೂಲ, ಅಂಕೋಲಾ ೬೬-೨೨, ಗಿಬ್ಬ ಹಾಯಸ್ಕೂಲ, ಕುಮಟಾ ೫೨-೨೮, ಶ್ರೀ ಮಾರಿಕಾಂಬಾ ಹಾಯಸ್ಕೂಲ, ಶಿರಸಿ ೪೯-೧೪, ನ್ಯೂ ಇಂಗ್ಲಿಷ ಸ್ಕೂಲ, ಹೊನ್ನಾವರ ೨೮-೧೯, ಸೇಂಟ ಥೋಮಸ್ ಹಾಯಸ್ಕೂಲ, ಹೊನ್ನಾವರ ೨೫-೧೩, ಇಸ್ಲಾಮಿಯಾ ಹಾಯಸ್ಕೂಲ, ಭಟಕಳ ೬-೧. ಹಿಂದೂ ಹಾಯಸ್ಕೂಲಿನ ೯, ಎಡವರ್ಡ ಹಾಯಸ್ಕೂಲಿನ ೪, ಗಿಬ್ಬ ಹಾಯಸ್ಕೂಲಿನ ೪, ಸೇಂಟ ಥೋಮಸ ಹಾಯಸ್ಕೂಲಿನ ೪, ಕಾರವಾರ ಹಾಯಸ್ಕೂಲಿನ ೨, ನ್ಯೂ ಇಂಗ್ಲಿಷ ಸ್ಕೂಲಿನ ೨ ಮತ್ತು ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ೧ ಹೀಗೆ ಒಟ್ಟು ೨೬ ವಿದ್ಯಾರ್ಥಿ-ವಿದ್ಯಾರ್ಥಿನಿಗಳು ಪ್ರಥಮ ಶ್ರೇಣಿಯ ಅಂದರೆ ನೂರಕ್ಕೆ ೬೦ಕ್ಕಿಂತ ಹೆಚ್ಚಿಗೆ ಗುಣಗಳನ್ನು ಸಂಪಾದಿಸಿದ್ದುಂಟು. ಅವರಲ್ಲಿ ಹಿಂದೂ ಹಾಯಸ್ಕೂಲಿನ ಕು॥ ವಿ. ಕೇ. ಕುಲಕರ್ಣಿ, ಕುಮಾರಿ ವಿಜಾಂಡ ಡಿ. ಕಸಬೇಕರ, ಕು॥ ಜಿ. ಎಮ್. ಚಕ್ರವರ್ತಿ ಮತ್ತು ಗಿಬ್ಬ ಹಾಯಸ್ಕೂಲಿನ ಕು॥ ವಿ. ಎಸ್. ಭಟ್ಟ ಇವರು ಅನುಕ್ರಮವಾಗಿ ೫೫೫, ೫೪೪, ೫೪೪, ೫೦೬ ಗುಣಗಳನ್ನು ಪಡೆದಿದ್ದಾರೆ. ಕುಮಾರಿ ವಿಜಾಂಡ ಕಸಬೇಕರರಿಗೆ ಚಿಟಣೀಸ ಇನಾಮು ಸಿಕ್ಕಿದೆ. ಮತ್ತು ಎಡ್ವರ್ಡ ಹಾಯಸ್ಕೂಲಿನ ಕು॥ ವ್ಹಿ. ಎಸ್. ಕುಲಕರ್ಣಿಗೆ ಸಾಗರಮಲ್ ಮೈಕಾನ ಸ್ಮಾರಕ ಶಿಷ್ಯವೃತ್ತಿಯಲ್ಲಿ ಅರ್ಧಾಂಶ ದೊರಕಿದೆ. [ಎಡವರ್ಡ ಹಾಯಸ್ಕೂಲಿನ ಕು॥ ಎಮ್ ಆರ್ ಇಡೂರಕರ ಎಂಬ ವಿದ್ಯಾರ್ಥಿಯು ಉತ್ತೀರ್ಣನಾಗಿದ್ದಾನೆ ನಮಗೆ ಬಂದ ತಂತಿಯಲ್ಲಿ ಅವನ ನಂಬರ ತಂತಿ-ಗ್ರಾಹಕರ ಪ್ರಮಾದದಿಂದ ಬಿಟ್ಟುಹೋದ ಕಾರಣ “ವೃತ್ತ”ದ ವಿಶೇಷಾಂಕದಲ್ಲಿ ಅವನ ಹೆಸರು ಮುದ್ರಿತವಾಗಲಿಲ್ಲ ಈ ಬಗ್ಗೆ ವ್ಯಸನವಾಗುತ್ತದೆ —ಸಂ॥]

ಜಾಹೀರ ನೋಟೀಸು.

ತಾ. ೯-೪-೪೫ ಮತ್ತು ತಾ. ೧೬-೪ ೪೫ರ “ಕಾನಡಾವೃತ್ತ”ದಲ್ಲಿ ನಮ್ಮ ಕುಟುಂಬದ ಮಾಲ್ಕಿಯ ಅಂಕೋಲಾ ತಾಲೂಕ ಸಗಡಗೇರಿ ಗ್ರಾಮದ ಆಸ್ತಿಯನ್ನು ಮಾರುವಂತೆಂದು ನಮ್ಮ ಅಣ್ಣ ಶ್ರೀ ಆರ್ ವ್ಹಿ ಕಾಮತ ಕಲಕತ್ತೆಗೆ ಇವರು ಜಾಹೀರ ಪಡಿಸುತ್ತಾರಷ್ಟೇ. ಸದರಿ ಆಸ್ತಿಯಲ್ಲಿ ನಾನೂ ನನ್ನ ತಮ್ಮ ರಾಮಕೃಷ್ಣನೂ ಹಕ್ಕುದಾರರಿದ್ದೇವೆ. ನಮ್ಮ ಸಮ್ಮತಿಯ ವಿನಹ ಈ ಆಸ್ತಿಯನ್ನಾಗಲಿ ಕುಟುಂಬದ ಬೇರೆ ಆಸ್ತಿಯನ್ನಾಗಲಿ ಮಾರಲು ನಮ್ಮ ಅಣ್ಣನಿಗೆ ಹಕ್ಕಿಲ್ಲ ಯಾರೂ ಅವರೊಬ್ಬರಿಂದೇ ಸ್ವಾಧೀನ ಮಾಡಿಕೊಂಡು ಲುಕ್ಸಾನಿಗೆ ಬೀಳಬಾರದಾಗಿ ಎಲ್ಲರಿಗೂ ಎಚ್ಚರಿಕೆ ಕೊಡುತ್ತೇನೆ

ಹಳಿಯಾಳ,
ತಾ. ೪-೬-೪೫ } (ಸಹಿ) G. V. Kamat.

ಜಾಹೀರ ನೋಟೀಸು.

ಈ ಮೂಲಕ ನಾನು ಯಾವತ್ತೂ ಜನರಿಗೆ ತಿಳಿಸುವದೇನಂದರೆ — ನನ್ನ ಪತಿಗಳಾದ ಸುಬ್ರಾಯ ಗಣಪತಿ ಪಂಡಿತ ಅಘನಾಶಿನಿ ಯಾನೆ ಗೋಕರ್ಣ ಇವರು ಅವಿಭಕ್ತ ಕುಟುಂಬದಿಂದ ಹತ್ತೆಂಟು ವರ್ಷಗಳ ಹಿಂದೆ ತಮ್ಮ ಪಾಲಿಗೆ ಒಪ್ಪಂದದ ಆಧಾರ ಎರಡು ನೂರು ರೂಪಾಯಿ ಕೀರ್ದಿ ತರುವ ಸ್ಥಿರಾಸ್ತಿಗಳನ್ನೂ ಮೂರು ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಚರಾಸ್ತಿಗಳನ್ನೂ ಪಡೆದುಕೊಂಡು ವಿಭಕ್ತರಾಗಿ ಕುಟುಂಬದ ಮನೆಯವರ ನಾತೆಯಿಂದ ವಹಿವಾಟು ನಡೆಸುತ್ತಾ ಬರುವಲ್ಲಿ ಇತ್ತೀಚೆಗೆ ದುಷ್ಟರ ಸಂಗ, ದುರ್ವ್ಯಸನಾದಿಗಳಿಂದ ಬಹಳಷ್ಟು ಆಸ್ತಿಗಳನ್ನು ಪರಾಧೀನ ಮಾಡಿದ್ದಾರೆಂತ ತಿಳಿಯುತ್ತದೆ. ಹಾಗೆ ಮಾಡಬಾರದಾಗಿ ನಾನು ಪರಿಪರಿಯಾಗಿ ಹೇಳಿದ್ದಕ್ಕೆ ಸಿಟ್ಟಿಗೆದ್ದು ಅವರು ನನಗೆ ಮಾರಹಾಣ ಕೊಟ್ಟು ಮನೆಯಿಂದ ಹೊರಗೆ ಹಾಕಿದರು. ಕಾರಣ ನಾನು ಕೇರಾ ಬಿದ್ದು ಹಾಲಿ ತವರುಮನೆ ಯಲ್ಲಿದ್ದೇನೆ. ನನಗೆ ೩ ವರ್ಷ ವಯಸ್ಸಿನ ಒಂದು ಹೆಣ್ಣು ಹುಡುಗಿಯುಂಟು ಹಾಲಿ ೪ ತಿಂಗಳ ಗರ್ಭಿಣಿ ಇರುತ್ತೇನೆ ಮನೆಯಲ್ಲಿ ನನ್ನ ಪತಿಗಳ ಹೊರಗೆ ಅವರ ತಾಯಿ ಮಾತ್ರ ಇದ್ದಾಳೆ ಇಷ್ಟು ಸಣ್ಣ ಸಂಸಾರದ ಬಗ್ಗೆ ಸಾಲ ಮಾಡುವ ಅಗತ್ಯವಿಲ್ಲ ಕಾರಣ ಸದರಿ ಸುಬ್ರಾಯ ಪಂಡಿತರಿಂದ ಯಾರಾದರೂ ಸ್ಥಿರ ಚರ ಆಸ್ತಿ ಕೊಂಡಲ್ಲಿ ಅದು ಕಾಯಿದೆಯಂತೆ ಸಿಂಧುವಾಗಲಾರದು ಹಾಗೂ ನನ್ನ ಮತ್ತು ನಮ್ಮ ಸಂತತಿಯವರ ಹಕ್ಕಿಗೆ ಎಂದೂ ಬಾಧಿಸಲಾರದು.

ಗುಡೇಅಂಗಡಿ, ತಾ ೯-೬-೧೯೪೫.

● ಈ ಎಡಗೈ ಹೆಬ್ಬೆಟ್ಟಿನ ಗುರ್ತು **ಅನಸೂಯಾ** ಕೋಂ ಸುಬ್ರಾಯ ಪಂಡಿತ ಇವಳದಾಗಿರುತ್ತದೆ.

ನೋ ಟೀ ಸು.

ಧಾರೇಶ್ವರ ಪರಸ್ಪರ ಸಹಕಾರ ಸಂಘದ ಚೆಅರಮನ್ನರ ಕಡೆಯಿಂದ ಯಾವತ್ತೂ ಜನರಿಗೆ ತಿಳಿಸುವದೇನಂದರೆ —

ಸದರಿ ಸಂಘದ ತಾಬೆಯಲ್ಲಿರುವ ಜಮೀನುಗಳನ್ನು ಇದೇ ಬರುವ ತಾ 17 6 1945ನೇ ದಿವಸ ಧಾರೇಶ್ವರ ಗ್ರಾಮಚಾವಡಿಯಲ್ಲಿ ಜಾಹೀರ ರೀತಿಯಿಂದ ಲಿಲಾಂವು ಮಾಡತಕ್ಕದ್ದಿದೆ. ಖಾಯಿಶ ಇದ್ದವರು ಲಿಲಾಂವಿನ ಶರ್ತಗಳಿಗೆ ಒಳಪಟ್ಟು ಸವಾಲು ಮಾಡಬಹುದು

ತಾ. 4-6-1945

ಗಣೇಶ ನರ್ಸ ಹೆಗಡೆ ಚಿತ್ರಗೇರಿ,
ಚೆಅರಮನ್, ಧಾರೇಶ್ವರ ಪರಸ್ಪರ ಸಹಕಾರ ಸಂಘ

ನೋಟೀಸು.

ಸರಕಾರದ ಹುಕುಂ ನಂ 9257/24 (a) ತಾ 22-5-1945ರದ್ದರ ಪ್ರಕಾರ ಮುಂಬಯಿ ಸರಕಾರದವರು “ಮುಂಬಯಿ ದನ-ಕುರಿ-ಆಡುಗಳ ವ್ಯಾಪಾರದ ಲಾಯಸನ್ಸ ಸಂಬಂಧ ಹುಕುಂ 1944”ನೇದನ್ನು ರದ್ದು ಮಾಡಿ ಅದರ ಬದಲು ಪ್ರತಿ ವಾರಕ್ಕೆ ಲಾಯಸನ್ಸ ಪಡೆದ ಕಸಾಯಿಖಾನೆಯಲ್ಲಿ ಕಡಿಯಬಹುದಾದ ಎಮ್ಮೆ, ಆಕಳು, ಹೋರಿ, ಎತ್ತು, ಆಡುಗಳ ಕರಮಾವಧಿ ಸಂಖ್ಯೆಯನ್ನು ತಮ್ಮ ಹುಕುಂ ನಂ. 9257/24(b) ತಾ 22-5-1945ರಲ್ಲಿ ನಿರ್ದಿಷ್ಟಪಡಿಸಿದ್ದಾರೆ

E. W. PERRY.
Chief Secretary to the Government of
Bombay Reconstruction Department

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.

ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಅದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ !

ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡ!

ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!

ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.

[illegible]ನೂ ಪ್ರತಿ[illegible] ಕೇಳ್ಳದೆ ಅವರು ನಿಮಗೆ ನೆರವಾಗುವರು.

ರೂ [illegible]ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.

[ಜಿಲ್ಹಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ].

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ “ಸ್ಟಾರ ಆಫ್ ಕೆನರಾ ಪ್ರೆಸ್ಸಿ”ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡಕೊಟ್ಟಿರತಕ್ಕದ್ದು.

Reg. No. B. 1270. Monday, 18th June, 1945.

ಕಾನಡಾವೃತ್ತ

ವರ್ಷ ೨೭.] THE KANARA NEWS. [ಸಂಚಿಕೆ ೫೦

ಕುಮಟಾ:- ಸೋಮವಾರ, ತಾ. ೧೮ ಮಾಹೆ ಜೂನ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪ್ಯಾಕಾ ೧೫ಎಮ್ಸ್ ಉದ್ದ
೧ ಸಾಲಿಗೆ ೪ ಆಣೆಯಂತೆ.
ವಿಶೇಷ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಚೇಳು ತುಂಬಿದ ಚೀಲ!

(ನಿರೀಕ್ಷಕನು ಬರೆದುದು.)

೧೦ ವಾರಗಳ ವರೆಗೆ ಚರ್ಚಿಲ್ಲ ಅಮೇರಿಯವರೊಡನೆ ಗುಪ್ತ ವಿಚಾರ-ವಿನಿಮಯ ಮಾಡಿ ಸರ್ವಾಧಿಪತಿ ವೆವ್ಹೆಲ್ಲ ದೊರೆಗಳು ತಯಾರಿಸಿ ತಂದ ಗುಪ್ತ ಯೋಜನೆಯ ಚೀಲವನ್ನು ಸ್ವತಃ ಸರ್ವಾಧಿಪತಿಗಳೇ ಕಳೆದ ಗುರುವಾರ ತ್ರಿಸಂಧ್ಯಾಕಾಲದಲ್ಲಿ ಆಕಾಶವಾಣಿಯ ಮೂಲಕ ಬಿಚ್ಚಿ ತೋರಿಸಿದರು. ಈ ಯೋಜನೆಯ ಸ್ವರೂಪ ಹೀಗುಂಟು - ಜಪಾನದ ವಿರುದ್ಧ ನಡೆದಿರುವ ಯುದ್ಧದಲ್ಲಿ ತಾತ್ಪರ್ಯದಿಂದ ದುಡಿಯಲೊಪ್ಪುವ ಕೇಂದ್ರ ಸರಕಾರವನ್ನು ರಚಿಸುವದಕ್ಕಾಗಿ ಸರ್ವಾಧಿಪತಿಗಳು ತಮ್ಮ ಕಾರ್ಯಕಾರಿ ಮಂಡಳದ ಪುನರ್ಘಟನೆ ಮಾಡಲಿಚ್ಛಿಸುತ್ತಾರೆ (ಈಗಣ ಕಾರ್ಯಕಾರಿ ಮಂಡಳದ ಸದಸ್ಯರು ವ್ಯವಹಾರ-ನಿಪುಣ ಮತ್ತು ದಕ್ಷರಿರುತ್ತಿದ್ದರೂ ಅವರಿಗೆ ದೇಶದಲ್ಲಿ ತಕ್ಕ ಮನ್ನಣೆ ಮತ್ತು ಬೆಂಬಲ ಸಿಗುವದಿಲ್ಲೆಂದು ಸ್ವತಃ ಭಾರತ ಮಂತ್ರಿಯವರೇ ಹೊಸ ಯೋಜನೆಯನ್ನು ಕಳೆದ ಗುರುವಾರ ಬ್ರಿಟಿಶ ಪಾರ್ಲಿಮೆಂಟಿಗೆ ಸಾದರಪಡಿಸುವಾಗ ಒಪ್ಪಿದ್ದಾರೆ!) ಹೊಸ ಕಾರ್ಯಕಾರಿ ಮಂಡಳದಲ್ಲಿ ಸರ್ವಾಧಿಪತಿಗಳು ಮತ್ತು ಮುಖ್ಯ ಸೇನಾಪತಿಗಳು ಇವರಿಬ್ಬರ ವಿನಹ ಎಲ್ಲರೂ ಹಿಂದೀಯರು ಇರತಕ್ಕದ್ದು. ಅವರನ್ನು ದೇಶದಲ್ಲಿರುವ ಪ್ರಮುಖ ರಾಜಕೀಯ ಪಕ್ಷಗಳಿಂದ ಆರಿಸಿ ತೆಗೆಯಲಾಗುವದು. ಹೊಸ ಕಾರ್ಯಕಾರಿ ಮಂಡಳದಲ್ಲಿ "ಸವರ್ಣ ಹಿಂದು"ಗಳಷ್ಟೇ ಮುಸಲ್ಮಾನ ಸದಸ್ಯರಿರತಕ್ಕದ್ದು. ಅಸ್ಪೃಶ್ಯರು, ಶೀಖರು ಮುಂತಾದ ಅಲ್ಪಸಂಖ್ಯಾಕ ಸಮಾಜಗಳಿಗೂ ಈ ಮಂಡಳದಲ್ಲಿ ತಕ್ಕ ಪ್ರಾತಿನಿಧ್ಯ ಕೊಡಲ್ಪಡುವದು. ಕಾರ್ಯಕಾರಿ ಮಂಡಳದ ಸದಸ್ಯರ ಸಂಖ್ಯೆ ಎಷ್ಟೆಂಬದು ಇನ್ನೂ ನಿಶ್ಚಿತವಾಗಿಲ್ಲ. ಅದನ್ನು ಸರ್ವಾಧಿಪತಿಗಳು ಇದೇ ಬರುವ ತಾ. ೨೫ಕ್ಕೆ ಸಿಮುಲಾದಲ್ಲಿ ಕರೆದಿರುವ ೨೧ ಮಂದಿ ಪ್ರಮುಖರ ಸಭೆಯಲ್ಲಿ ನಿರ್ಧರಿಸಲಾಗುವದು. ಯುದ್ಧ ಇಲಾಖೆಯೊಂದನ್ನು ಬಿಟ್ಟು ಇತರ ಎಲ್ಲ ಇಲಾಖೆಗಳನ್ನು — ಈ ತನಕ ಬ್ರಿಟಿಶ ಸದಸ್ಯರೇ ನೋಡಿಕೊಂಡು ಬರುತ್ತಿದ್ದ ಅರ್ಥಿಕ ಇಲಾಖೆ, ಗೃಹ ಇಲಾಖೆ ಮತ್ತು ವಿದೇಶ ಇಲಾಖೆಗಳನ್ನು ಕೂಡ — ಹಿಂದೀ ಸದಸ್ಯರಿಗೆ ಒಪ್ಪಿಸಲಾಗುವದು. ಸರ್ವಾಧಿಪತಿಗಳ "ಆಗಗೊಡದು" ಎಂದು ಹೇಳುವ (Veto) ಅಧಿಕಾರ ಹಾಗೆಯೇ ಊರ್ಜಿತ ಉಳಿಯುವದು. ಆದರೆ ಈ ಅಧಿಕಾರವನ್ನು ಯೋಗ್ಯ ಕಾರಣವಿಲ್ಲದೆ ಉಪಯೋಗಿಸಲಿಕ್ಕಿಲ್ಲೆಂದು ಸರ್ವಾಧಿಕಾರಿಗಳು ಭರವಸೆ ಕೊಟ್ಟಿರುತ್ತಾರೆ. ಹೊಸ ಕಾರ್ಯಕಾರಿ ಮಂಡಳಕ್ಕೆ ಆರಿಸಿಕೊಳ್ಳಬೇಕಾದ ಸದಸ್ಯರು ಕೇಂದ್ರ ಶಾಸನ ಮಂಡಳಗಳ ಸದಸ್ಯರೇ ಇರಬೇಕೆಂಬ ನಿರ್ಬಂಧವಿಲ್ಲ. ಆ ಮಂಡಳಗಳ ಹೊರಗಿನವರೂ ಇರಲಡ್ಡಿಯಿಲ್ಲ. ಈ ಯೋಜನೆಯನ್ನು ಪರ್ಯಾಲೋಚಿಸಲಿಕ್ಕೂ ಹೊಸ ಕಾರ್ಯಕಾರಿ ಮಂಡಳದ ಸದಸ್ಯರನ್ನು ಆರಿಸಲಿಕ್ಕೂ ಸರ್ವಾಧಿಪತಿಗಳು ೨೧ ಮಂದಿ ಪ್ರಮುಖರದೊಂದು ಪರಿಷತ್ತನ್ನು ಸಿಮುಲೆಯಲ್ಲಿ ಕರೆದಿದ್ದಾರೆ. ಈ ಪರಿಷತ್ತಿಗೆ ನಿಮಂತ್ರಿಸಲ್ಪಟ್ಟವರು ಯಾರೆಂದರೆ-(೧) ಕಾಂಗ್ರೆಸ ಪಕ್ಷದ ಪ್ರಮುಖರೆಂದು ಮಹಾತ್ಮಾ ಗಾಂಧಿಯವರು, (೨) ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ಬ್ಯಾ|| ಜಿನ್ನಾರವರು, (೩) ಶೀಖ ಸಮಾಜದ ಮುಂದಾಳುಗಳಾದ ಮಾಸ್ಟರ ತಾರಾಸಿಂಗರವರು, (೪) ಅಸ್ಪೃಶ್ಯ ಸಮಾಜದ ಪ್ರಮುಖರಾದ ರಾ|| ಬ|| ಶಿವರಾಜರು, (೫-೮) ಕೇಂದ್ರ ಎಸೆಂಬ್ಲಿಯೊಳಗಿನ ಕಾಂಗ್ರೆಸ, ಮುಸ್ಲಿಮ ಲೀಗ, ರಾಷ್ಟ್ರೀಯ ಮತ್ತು ಯುರೋಪಿಯನ್ ಪಕ್ಷಗಳ ಮುಂದಾಳುಗಳಾಗಿರುವ ಶ್ರೀ|| ಭುಲಾಭಾಯಿ ದೇಸಾಯಿ, ನವಾಬಜಾದಾ ಲಿಯಾಕತ ಅಲಿ ಖಾನ, ಶ್ರೀ|| ಪಿ. ಎನ್. ಬಾನರ್ಜಿ ಮತ್ತು ಸರ್ ಹೆನ್ರಿ ರಿಚರ್ಡಸನ್‌ರು, (೯-೧೦) ಕೇಂದ್ರದೊಳಗಿನ ಹಿರಿಯರ ಸಭೆಯಲ್ಲಿ ಕಾಂಗ್ರೆಸ ಮತ್ತು ಮುಸ್ಲಿಮ ಲೀಗ ಪಕ್ಷಗಳ ಧುರೀಣರಾದ ರಾಜಾ ಗೋವಿಂದಲಾಲ ಶಿವಲಾಲ ಮೋತಿಲಾಲ ಮತ್ತು ಜನಾಬ ಹುಸೇನ ಇಮಾಮ; (೧೧-೨೦) ಮುಂಬಯಿ, ಮದ್ರಾಸ ವಗೈರೆ ೧೧ ಪ್ರಾಂತಗಳ ವಿದ್ಯಮಾನ ಹಾಗೂ (ಈಗ ಮಂತ್ರಿಮಂಡಳಗಳಲ್ಲಿದ್ದ ಪ್ರಾಂತಗಳ) ಹಿಂದಿನ ಮಂತ್ರಿಗಳಾದ ಶ್ರೀ|| ಬಾಳಾ ಸಾಹೇಬ ಖೇರ, ಶ್ರೀ|| ಚಕ್ರವರ್ತಿ ರಾಜಗೋಪಾಲಾಚಾರ್ಯ, ಪಂ|| ಗೋವಿಂದ ವಲ್ಲಭ ಪಂತ, ಶ್ರೀ|| ಶ್ರೀಕೃಷ್ಣ ಸಿಂಹ, ಡಾ|| ಖಾನ ಸಾಹೇಬ, ಪಂ|| ರವಿಶಂಕರ ಶುಕ್ಲ (ಈ ೬ ಮಂದಿ ಕಾಂಗ್ರೆಸ ಪಕ್ಷೀಯರು), ಸರ್ ನಾಝಿಮುದ್ದೀನ, ಸರ್ ಘುಲಾಮ ಹುಸೇನ ಹಿದಾಯತುಲ್ಲಾ, ಸರ್ ಮಹಮ್ಮದ ಸಾದುಲ್ಲಾ ಮತ್ತು ಖಾರ್ಲಕಿಮೆಡಿಯ ರಾಜರು. ನಿಮಂತ್ರಿತರ ಈ ಯಾದಿಯಲ್ಲಿ ಹಿಂದು ಮಹಾಸಭೆಯವರಿಗೆ, ಭಾರತದ ಉದ್ಯೋಗಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಾಮುಖ್ಯ ಪಡೆದಿರುವ ಪಾರ್ಸಿ ಸಮಾಜಕ್ಕೆ, ವ್ಯಾಪಾರಿ ವರ್ಗಕ್ಕೆ ಸ್ಥಾನ ಸಿಕ್ಕಿಲ್ಲ! ಮುಸ್ಲಿಮ ಅಧ್ಯಕ್ಷರಿಗೆ ನಿಮಂತ್ರಣ ಕೊಟ್ಟಂತೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಿಗೆ ನಿಮಂತ್ರಣ ಕೊಟ್ಟಿಲ್ಲ! (ಅವರ ಬದಲು ತಾವು ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯರು ಸಹ ಇರುವದಿಲ್ಲೆಂದೂ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ವ್ಯವಹರಿಸಲು ಸಿದ್ಧರಿಲ್ಲೆಂದು ಒಂದಲ್ಲ, ಎರಡಲ್ಲ, ನೂರಾರು ಸಾರೆ ಸಾರಿರುವ ಮಹಾತ್ಮಾಜಿಯವರು ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದು ನಿಮಂತ್ರಿಸಲ್ಪಟ್ಟಿದ್ದಾರೆ!) ಈ ನಿಮಂತ್ರಿತರು ಹೊಸ ಯೋಜನೆಗೆ ಒಪ್ಪಿದಲ್ಲಿ, ಹೊಸ ಕಾರ್ಯಕಾರಿ ಮಂಡಳದಲ್ಲಿ ಸದಸ್ಯರೆಷ್ಟಿರಬೇಕೆಂಬದನ್ನೂ, ಶಾಸನ ಮಂಡಳಗಳ ಚುನಾವಣೆ ಯಾವಾಗ ಮಾಡಿಸಬೇಕೆಂಬುದನ್ನೂ ಗೊತ್ತುಪಡಿಸುವ ಕೆಲಸ ಅವರೇ ನಿರ್ವಹಿಸತಕ್ಕದ್ದು. ಕಾರ್ಯಕಾರಿ ಮಂಡಳದ ಸದಸ್ಯರು ಯಾರ್ಯಾರು ಆಗಬೇಕೆಂಬುದನ್ನೂ ಇವರೇ ಸೂಚಿಸತಕ್ಕದ್ದು. ಇವರು ಸೂಚಿಸಬಹುದಾದ ಜನರೊಳಗಿಂದ ಸಾರ್ವಭೌಮರ ಸರಕಾರವು ಕೊನೆಯ ಆಯ್ಕೆ ಮಾಡುವದು. ಈ ಹೊಸ ಸರಕಾರವು ತಾತ್ಪೂರ್ತಿಕ ಅಥವಾ ಮಧ್ಯಂತರದೊಳಗಿನ (interim) ಸ್ವರೂಪದ್ದೆಂದೆನಿಸಿಕೊಳ್ಳುವದು. ಹೊಸ ಶಾಶ್ವತ ರಾಜ್ಯಘಟನೆ ಸಿದ್ಧವಾಗುವ ವರೆಗೆ ಈ ಸರಕಾರ ಅಸ್ತಿತ್ವದಲ್ಲಿರುವದು. (೧) ಜಪಾನದ ಸಂಪೂರ್ಣ ಪರಾಭವವಾಗುವ ವರೆಗೆ ಯುದ್ಧಕಾರ್ಯವನ್ನು ಪರಮಾವಧಿಯ ಉತ್ಸಾಹದಿಂದ ಸಾಗಿಸಿಕೊಂಡು ಹೋಗುವದು, (೨) ಭಾರತೀಯರಿಗೆ ಸಮ್ಮತವಾಗುವ ಹೊಸ ರಾಜ್ಯಘಟನೆ ಸಿದ್ಧವಾಗುವ ವರೆಗೆ ರಾಜ್ಯಭಾರ ಸಾಗಿಸಿಕೊಂಡು ಯುದ್ಧೋತ್ತರ ಪ್ರವರ್ತನೆಯ ಮಹಾಕಾರ್ಯವನ್ನು ನಿರ್ವಹಿಸುವದು, (೩) ಮತ್ತು ಸಾಧ್ಯವಾದೀತೆಂದು ಎನಿಸಿದಾಗ, ಭಾರತೀಯರಲ್ಲಿ ಒಮ್ಮತವನ್ನುಂಟು ಮಾಡಿ ಹೊಸ ರಾಜ್ಯಘಟನೆ ರಚಿಸುವ ಮಾರ್ಗ ಹುಡುಕಿ ತೆಗೆಯುವದು ಈ ಸರಕಾರದ ಮುಖ್ಯ ಕರ್ತವ್ಯಗಳಾಗಿರುತ್ತವೆ. ಕಾನಡಾ, ಆಸ್ಟ್ರೇಲಿಯಾ, ಆಫ್ರಿಕಾ ವಗೈರೆ ಸ್ವಯಂಶಾಸಿತ ಸಾಮಂತ ರಾಜ್ಯಗಳಲ್ಲಿರುವಂತೆ ಭಾರತದಲ್ಲೂ ಬ್ರಿಟಿಶರ ವ್ಯಾಪಾರ ಹಾಗೂ ಇತರ ಹಿತಸಂಬಂಧಗಳ ಸಂರಕ್ಷಣೆಗಾಗಿ 'ಓರ್ವ ಹಾಯ್ ಕಮಿಶನರ' ನನ್ನು ಬ್ರಿಟಿಶ ಸರಕಾರವು ನೇಮಿಸುವದಂತೆ. ನಿಮಂತ್ರಿತ ೨೧ ಮಂದಿ ಪ್ರಮುಖರು ಹೊಸ ಯೋಜನೆಯನ್ನು ಸ್ವೀಕರಿಸದಿದ್ದಲ್ಲಿ ಹಾಲಿ ಅಸ್ತಿತ್ವದಲ್ಲಿದ್ದ ಸರಕಾರವೇ ಮುಂದರಿಯುವದೆಂದೂ ಸರ್ವಾಧಿಪತಿಗಳು ತಿಳಿಸಿದ್ದಾರೆ. ಕೇಂದ್ರದಲ್ಲಿ ಈ ಹೊಸ ಸರಕಾರ ಏರ್ಪಡಿಸಲು ನಿಮಂತ್ರಿತ ಪ್ರಮುಖರು ಒಪ್ಪಿಗೆ ಕೊಟ್ಟಲ್ಲಿ ಈಗ ಪ್ರಾಂತಾಧಿಪತೀ ಸ್ವತಃ ಆಡಳಿತೆಯನ್ನು ನಿರ್ವಹಿಸುತ್ತಿರುವ ಮುಂಬಯಿ, ಮದ್ರಾಸ, ಮಧ್ಯಪ್ರಾಂತ, ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲೂ ಮಂತ್ರಿ ಮಂಡಳವನ್ನು ರಚಿಸಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಲ್ಪಡುವದಂತೆ. ಆದರೆ ಈ ಮಂತ್ರಿಮಂಡಳಗಳು ಕೂಡ ಕೇಂದ್ರ ಮಂತ್ರಿ ಮಂಡಳದ ಮಾದರಿಯ ಮೇಲೆಯೇ ರಚಿಸಲ್ಪಟ್ಟ "ಸಂಯುಕ್ತ" (ಅಂದರೆ ಬೇರೆ ಬೇರೆ ಪಕ್ಷಗಳ ಪ್ರತಿನಿಧಿಗಳಿಂದ ಕೂಡಿದ) ಮಂತ್ರಿಮಂಡಳಗಳಾಗಬೇಕೆಂದು ಸರ್ವಾಧಿಪತಿಗಳ ಅಪೇಕ್ಷೆ

ಮೇಲೆ ಒಂದೆಡೆ ಸೂಚಿಸಿದಂತೆ ಇದು ತಾತ್ಪೂರ್ತಿಕ ಸರಕಾರದ ಯೋಜನೆ. ಹಿಂದೀಯರಿಗೆ ಒಪ್ಪಿಗೆಯಾಗುವ ಶಾಶ್ವತ ರಾಜ್ಯಘಟನೆಯನ್ನು ಯಾ ರಾಜ್ಯಘಟನೆಗಳನ್ನು ನಿರ್ಮಾಣ ಮಾಡಿಕೊಳ್ಳುವ ಹೊಣೆಗಾರಿಕೆ ೧೯೪೨ರ ಯೋಜನೆಯಂತೆ (ಕ್ರಿಪ್ಸ ಯೋಜನೆಯಂತೆ) ಹಿಂದೀಯರಿಗೆ ಬಿಟ್ಟುಕೊಡಲಾಗಿದೆಯೆಂದೂ, ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಯಬೇಕೋ ಅಥವಾ ಆ ಸಾಮ್ರಾಜ್ಯದಿಂದ ಹೊರಬಿದ್ದು ಬೇರೆಯಾಗಬೇಕೋ ಎಂಬುದನ್ನೂ ಒಂದಕ್ಕಿಂತ ಹೆಚ್ಚು ಸರಕಾರಗಳನ್ನು ನಿರ್ಮಿಸುವದಾದಲ್ಲಿ ಅವುಗಳ ಮಿತಿ-ಮೇರೆಗಳನ್ನೂ ಪರಸ್ಪರ ಸಂಬಂಧಗಳನ್ನೂ ನಿಶ್ಚಯಿಸುವ ಜವಾಬದಾರಿ ಕೂಡ ಹಿಂದೀ ಪ್ರಜಾ-ಪ್ರತಿನಿಧಿ ಸಭೆಗೆ ಒಪ್ಪಿಸಲ್ಪಡುವದೆಂದೂ ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಮಾಡಿದ ತಮ್ಮ ಘೋಷಣೆಯಲ್ಲಿ ಸಾರಿದ್ದಾರೆ. ಕ್ರಿಪ್ಸ-ಕೊಡುಗೆ ಇನ್ನೂ ಊರ್ಜಿತವಿರುತ್ತದೆಂತೆ. ಬೇಕಾದಾಗ ಆ ಕೊಡುಗೆಯನ್ನು ಭಾರತೀಯರು ಸ್ವೀಕರಿಸಬಹುದಾಗಿ ಅವರು ಸಾರಿದ್ದಾರೆ.

ಸರ್ವಾಧಿಪತಿಗಳ ಹೊಸ ಯೋಜನೆಯು ಮೇಲಿಂದ ಮೇಲೆ ನೋಡುವವರಿಗೆ ಮೋಹಕ ಮತ್ತು ಚಿತ್ತಾಕರ್ಷಕ ತೋರುತ್ತಿರಬಹುದು. ಆದರೆ ಸೂಕ್ಷ್ಮವಾಗಿ ಪರೀಕ್ಷಿಸುವವರು ಅದಕ್ಕೆಂದೂ ಮರುಳಾಗುವಂತಿಲ್ಲ. ಪ್ರಜಾಪ್ರಭುತ್ವ, ಲೋಕಪ್ರತಿನಿಧಿತ್ವ, ತತ್ವನಿಷ್ಠೆ, ನಿರ್ದಿಷ್ಟ ರಾಜನೀತಿ ಮೊದಲಾದ ಸನಾತನ ತತ್ವಗಳ ತಳಹದಿಯ ಮೇಲೆ ಅದು ಆಧರಿಸಲ್ಪಟ್ಟಿಲ್ಲ. ಜಾತೀಯತೆ, ಅಲ್ಪಸಂಖ್ಯರ ಪ್ರಾಬಲ್ಯ, ಬಹುಸಂಖ್ಯರ ಬಲ-ಘಾತ ಮೊದಲಾದ ವಿಷಮಯ ತತ್ವಗಳ ಅಧಿಷ್ಠಾನದ ಮೇಲೆ ರಚಿಸಲ್ಪಟ್ಟ ಈ ಯೋಜನೆಯು ಕಾರ್ಯರೂಪದಲ್ಲಿ ಬಂದರೆ ದೇಶದಲ್ಲಿ ಈಗಿನ ಜಾತೀಯತೆಯ ವಿಷವು ಇನ್ನೂ ಕರಾಳ ರೂಪ ಧರಿಸುವದು! ರಾಜ್ಯಭಾರದಲ್ಲಿ ಸುಸೂತ್ರತೆಯೂ, ಏಕರೂಪತೆಯೂ ಉಳಿಯದು! ಹೊರಗಿದ್ದ ಪಕ್ಷ-ಪಂಗಡಗಳೊಳಗಿನ ಅಸೂಯೆ, ಈರ್ಷೆ, ಪರಸ್ಪರ ಸಂಶಯ ಮತ್ತು ಕಲಹಗಳು ಸರಕಾರದ ಅಂತರ್ಗೃಹದಲ್ಲೂ ಸೇರಿಕೊಂಡು ಸರಕಾರದ ಸಾಮರ್ಥ್ಯವನ್ನು ಕುಗ್ಗಿಸುವದಲ್ಲದೆ ಭಾರತೀಯರು ತಮ್ಮ ರಾಜ್ಯಭಾರ ಸಾಗಿಸಲಿಕ್ಕೆ ಅಪಾತ್ರರಿರುತ್ತಾರೆಂದು ಜಗತ್ತಿನಲ್ಲಿ ಅಪಕೀರ್ತಿಯುಂಟಾಗುವದು. ಸಾರ್ವತ್ರಿಕ ಸಂಕಟದ ಕಾಲ ಬಿಟ್ಟು ಇತರ ಸಮಯದಲ್ಲಿ "ಸಂಯುಕ್ತ ಮಂತ್ರಿಮಂಡಳ"ಗಳು ಎಷ್ಟು ಅನಿಷ್ಟ ಮತ್ತು ಅಕಾರ್ಯಕ್ಷಮವಿರುತ್ತವೆಂಬದು ಬ್ರಿಟಿಶ ಮಂತ್ರಿಮಂಡಳದ ಇತ್ತೀಚಿನ ಇತಿಹಾಸ ಬಲ್ಲವರಿಗೆ ಹೇಳಬೇಕಾಗಿಲ್ಲ! ಈ ಎಲ್ಲ ವಿಚಾರ ಮಾಡಿಯೇ ನಾನು ಸರ್ವಾಧಿಪತಿಗಳ ಚೀಲದಿಂದ ಚೇಳುಗಳು ಹೊರಬಿದ್ದವೆಂದು ಹೇಳುತ್ತೇನೆ.

ಯಲ್ಲಾಪುರ— ಎರಡು ಯಾ ಹೆಚ್ಚು ತಾಲೂಕುಗಳ ಬಗ್ಗೆ ನೇಮಿಸಲ್ಪಟ್ಟ ಸಾಲ ನಿರ್ಣಯ ಮಂಡಳದ ಕಚೇರಿ ಯಾವದಾದರೂ ಸ್ಥಳದಲ್ಲಿ ತೆರೆಯಲ್ಪಡುವದರಿಂದ ಬೇರೆ ತಾಲೂಕುಗಳ ಸಾಲಗಾರರಿಗೆ ಅಡಚಣೆಯಾಗಬಹುದೆಂಬ ಸಂಗತಿಯನ್ನೊಪ್ಪಿ, ಮಂಡಳದವರು ಕಾಲಕಾಲಕ್ಕೆ ತಮ್ಮ ಕಕ್ಷೆಯೊಳಗಿನ ಎಲ್ಲ ತಾಲೂಕುಗಳ ಕೇಂದ್ರಗಳಲ್ಲಿ ತಮ್ಮ ಕಚೇರಿ ಮಾಡತಕ್ಕದ್ದೆಂದು ಮುಂಬಯಿ ಸರಕಾರವು ಅಪ್ಪಣೆ ಹೊರಡಿಸಿದೆ. ಇದರಿಂದ ಸಾಲ-ಪರಿಹಾರ ಮಾಡಿಕೊಳ್ಳಬಿಚ್ಛಿಸುವ ಯಲ್ಲಾಪುರದ ರೈತರು ಹಳಿಯಾಳಕ್ಕೆ ಹೋಗುವ ಪ್ರಸಂಗ ತಪ್ಪುವಂತಿದೆ

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K.

ANNOUNCEMENT.

The Board of Directors have pleasure to announce that a Branch of the Bank will be opened at SIRSI on Wednesday the 20th June 1945.

COONDAPOOR, 25-4-1945.
K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಆಚೆಯ ರವಿವಾರ ಸಾಯಂಕಾಲದಿಂದ ಗುರುವಾರ ರಾತ್ರಿಯ ವರೆಗೆ ಒಂದೇ ಸವನೆ ಮಳೆಗರೆಯಿತು ಸೋಮವಾರ ಮಧ್ಯಾಹ್ನವಷ್ಟೇ ಒಂದಿಷ್ಟು ಹೊಳವು ಬಿದ್ದಿತ್ತು. ಈ ನಾಲ್ಕು ದಿನಗಳಲ್ಲಿ ಬಿಸಿಲಿನ ಮೋರೆ ಸಹ ಕಾಣಸಿಗಲಿಲ್ಲ ಶುಕ್ರವಾರ, ಶನಿವಾರ ಮಳೆ ಸಂಪೂರ್ಣ ನಿಂತಿತ್ತು. ನಿನ್ನೆ ಮುಂಜಾನೆಯಿಂದ ಪುನಃ ಸುರಿಯತೊಡಗಿದೆ ಈ ಸನೆ ೧೩-೧೪ ಇಂಚು ಮಳೆಯಾಗಿದೆ

ಸೀಧಾ-ಅಂಗಡಿಗಳಲ್ಲಿ ಈಗ ಬಂಗಾರಕಡ್ಡಿ ವಗೈರೆ ಸಣ್ಣಕ್ಕಿಯ ಧಾರಣೆಯನ್ನು ಪಾಯಲಿ ೧ಕ್ಕೆ ರೂ ೧-೭-೬ ಇಟ್ಟಿದ್ದಾರೆ ಆದರೆ ಸಣ್ಣಕ್ಕಿ ಈಗ ಸಿಗುವದಿಲ್ಲ! ಸಣ್ಣಕ್ಕಿ ಶಿಲ್ಕು ಇಲ್ಲವಂತೆ

೧೫ ದಿನಗಳ ಹಿಂದೆ ಒಂದು ರಾತ್ರಿ ನೆಲ್ಲಿಕೇರಿಯಲ್ಲಿರುವ ಪರಕೆಗೋಳಿ (ವ್ಯ॥ ವಾ॥) ಸುಬ್ಬ ಕಾಮತರ ಅಂಗಡಿಯಲ್ಲಿ ಕಳ್ಳರು ನೆಂಟಿನ ಹಲಗೆಗಳನ್ನು ಕೊಯ್ದು ತೆಗೆದು ಅಂಗಡಿಯಲ್ಲಿದ್ದ ಹಣ, ಚಿನ್ನ ಬೆಳ್ಳಿ ಮುಂತಾದ ಅಜಮಾಸ ರೂ ೧೦೦೦ ಬೆಲೆ ಬಾಳುವ ಜಿಂದಗಿಯನ್ನು ಅಪಹರಿಸಿಕೊಂಡು ಹೋಗಿದ್ದರು ಪೋಲೀಸರು ಇನ್ನೂ ಈ ಕಳ್ಳರ ಪತ್ತೆ ಹಚ್ಚಲು ಶಕ್ಯರಾಗಿಲ್ಲವಂತೆ!

ಹೊನ್ನಾವರ—(ತಾ ೧೪ ೬ ೪೫) ಈ ಹೊತ್ತು ಹಳದೀಪುರ ಊರವರು ತಮ್ಮಲ್ಲಿಯ ಶ್ರೀ ಗೋಪಿನಾಥ ವೆಂಕಟರಮಣ ದೇವಸ್ಥಾನದ ಕಟ್ಟಡ ಮೇಲೆ ಒಂದು ಇಂಗ್ಲಿಷ ಶಾಲೆ ಸ್ಥಾಪಿಸಿದ್ದಾರೆ ಪ್ರಾರಂಭಕ್ಕೆ ೧೬ ಮಂದಿ ಹುಡುಗರು ಶಾಲೆಯಲ್ಲಿ ದಾಖಲ ಆಗಿರುವರು

ಭಟಕಳ—(ತಾ ೧೩-೬-೧೯೪೫) ಇಲ್ಲಿಯ ಸೀಧಾ ಕಚೇರಿಯಲ್ಲಿ ಮಿ॥ ಆದಮ ಸಾಹೇಬ ಎಂಬ ಇನ್ಸಪೆಕ್ಟರರಿದ್ದಾರೆ ಅವರಿಗೆ ಸರ್ಕಾರದಿಂದಾದರೆ ಸಿಕ್ಕಂತೆ ಸಂಬಳ ಬರುತ್ತದೆ! ಮೊನ್ನೆ ಅವರ ಕೆಲವು ಮಿತ್ರರು ಸೀಧಾ ಕಚೇರಿಯಲ್ಲಿ ಕೂಡಿದ್ದರಂತೆ ಅವರಿಗೆ ಚಹಾ ಕೊಡಿಸುವದಕ್ಕಾಗಿ ಆದಮ ಸಾಹೇಬರು ೧೫ "ಸಿಂಗಲ್" ಚಹಾ ಕಳಿಸಿರಿ ಎಂದು ತಮ್ಮ ಪೇದೆಯ ಹತ್ತಿರ ರಾಮ ನಾಯಕ ಕೃಷ್ಣ ಪ್ರಭುರ ಚಹಾ ಅಂಗಡಿಗೆ ಹೇಳಿಕಳಿಸಿದರು [illegible]

ಅಂಗಡಿಯ ಮಾಲೀಕರು ಅಂಗಡಿಯಲ್ಲಿಲ್ಲ, ಅವರು ಬಂದ ಮೇಲೆ ನೀವು ಬೇಕಾದ್ದನ್ನು ಮಾಡಬಹುದೆಂದು ಮಹಾಲೆಯು ಹೇಳಿಕೊಂಡನು. ಆಗ ಆದಮರಿಗೆ ಮತ್ತಿಷ್ಟು ಸಿಟ್ಟು ಬಂತು! ಆಗ ಅವರ ಕೈಯಲ್ಲಿ ಒಂದು ಪಿಸ್ತೂಲ ಇದ್ದರೆ ಮಹಾಲೆಯು ಗುಂಡಿಗೆ ಆಹುತಿಯಾಗುತ್ತಿದ್ದನೋ ಏನೋ! "ಈಗಲೇ ಇವರ ಅಂಗಡಿಗೆ ಹೋಗಿ ಅಂಗಡಿಯಲ್ಲಿ ಎಷ್ಟು ಸಕ್ಕರೆ ವಗೈರೆ ಉಂಟೆಂದು ತಪಾಸ ಮಾಡಿಕೊಂಡು ಬಾ" ಎಂದು ಅವರು ಪೇದೆಗೆ ಆಜ್ಞಾಪಿಸಿದರು ಅವನೂ ಕೂಡಿ ಆದಮ ಸಾಹೇಬರ ಪಿ ಎ! ಕೂಡಲೇ ಆತ ಯಾರೂ ಇಲ್ಲದ ಅಂಗಡಿಯಲ್ಲಿ ಹೊಕ್ಕು, ರೌಡಿತ್ವದ ನಾಟಕ ಮಾಡಿ ಅಂಗಡಿಯೊಳಗಿನ ಸರಕು-ಸಾಮಾನುಗಳನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿಬಿಟ್ಟನು! ಆದಮ ಸಾಹೇಬರ ಈ "ಅರೇರಾವಿ"ಯನ್ನು ಪ್ರತಿಬಂಧಿಸಲು ರಾ। ಕೃಷ್ಣ ಪ್ರಭುರು ಜಿಲ್ಲಾಧಿಕಾರಿಗೆ ಅರ್ಜಿ ಮಾಡಿಕೊಂಡಿದ್ದರು ಅಷ್ಟರಲ್ಲಿ ಆದಮ ಸಾಹೇಬರ ಗೆಳೆಯರ‍್ಯಾರೋ ಪ್ರಭುರಿಗೆ ಸಮಾಧಾನ ಹೇಳಿ ಪ್ರಕರಣವನ್ನು ರಾಜಿಯಿಂದ ಮುಗಿಸಿ ಮಾಡಿಸಿದ್ದಾರೆಂದು ತಿಳಿಯುತ್ತದೆ ಆದರೂ ಜಿಲ್ಲಾಧಿಕಾರರು ಚೌಕಶಿ ಮಾಡಿ ಸೀಧಾ-ಕಚೇರಿಯವರ ಈ ಉದ್ಧಟತನವನ್ನು ನಿರ್ಮೂಲಗೊಳಿಸುವದುಚಿತ

ಶಿರಸಿ—(ತಾ ೧೪-೬ ೪೫) ಈಗೊಂದು ತಿಂಗಳಿಂದ ಅಡಿಕೆಯ ವ್ಯಾಪಾರ ಪೂರ್ಣ ಕಟ್ಟಾಗಿಹೋಗಿದೆ ಇಲ್ಲಿಂದ ಪರಪೇಟೆಗಳಿಗೆ ಕಳಿಸಿದ ಅಡಿಕೆಯು ರೇಲ್ವೆ ವಾಹನಗಳು ಸಿಗದ್ದರಿಂದ ಹುಬ್ಬಳ್ಳಿ, ಹಾವೇರಿ, ಬ್ಯಾಡಗಿ ರೇಲ್ವೆ ಸ್ಟೇಶನಗಳಲ್ಲಿ ಬಿದ್ದುಕೊಂಡಿದೆ. ಮುಂಬಯಿಯಲ್ಲೂ ಬಹಳಷ್ಟು ಅಡಿಕೆಯು ಬೇರೆಬೇರೆ ಪೇಟೆಗಳಿಗೆ ರಫ್ತಾಗದೆ ರಾಶಿಯಾಗಿ ಬಿದ್ದಿದೆಯಂತೆ ಅಡಿಕೆಯ ದರ ಕಳೆದ ವರ್ಷದ ದರಕ್ಕಿಂತ ನೂರಕ್ಕೆ ೬೦ರಷ್ಟು ಇಳಿದಿದೆ! ಬಹುತೇಕ ವ್ಯಾಪಾರಸ್ಥರು ಸಾವಿರಾರು ರೂಪಾಯಿ ಹಣ ಕಳಕೊಂಡು ಕೂತಿದ್ದಾರೆ! ಅಡಿಕೆ ಶಿಲ್ಕು ಇದ್ದವರಂತೂ ಇನ್ನೂ ತಮಗೆ ಎಷ್ಟು ಹಾನಿಯಾಗುವದೆಂದು ತಿಳಿಯದೆ ಚಿಂತಾವಿಷ್ಟರಾಗಿರುವರು ಅಡಿಕೆಯ ವ್ಯವಹಾರ ಈ ಸರಿ ಕಟ್ಟಾಗಿಹೋದ್ದರಿಂದ ತೋಟಿಗರು ಘೋರ ಕಷ್ಟದಲ್ಲಿ ಬಿದ್ದಿದ್ದಾರೆ! ಅವರ ಅಡಿಕೆ ಕೊಳ್ಳುವವರಿಲ್ಲ! ಆ ಅಡಿಕೆಯ ಭದ್ರತೆಯ ಮೇಲೆ ಹಣ ಕೊಡುವವರೂ ಇಲ್ಲ! ಅದರಿಂದ ಮಳೆಗಾಲದ ಸಂಸಾರಕ್ಕೂ ತೋಟಗಳ ಸಾಗುವಳಿಗೂ ಹಣವಿಲ್ಲದ್ದರಿಂದ ತೋಟಗಳು ಈ ವರ್ಷ ಹಾಳು ಬೀಳುವ ಸಂಭವವಿದ್ದಂತಿದೆ ಶಿರಸಿ ಪೇಟೆಯೊಂದರಲ್ಲೇ ಈ ವರ್ಷ ಸರಕಾರಕ್ಕೆ ೧೫ ಲಕ್ಷ ರೂಪಾಯಿಗಳಷ್ಟು ಅಡಿಕೆ ಸುಂಕ ದೊರೆತಿದೆ ಕಾರಣ ತೋಟಿಗರ ಮತ್ತು ಅಡಿಕೆ ವ್ಯಾಪಾರಿಗಳ ಹಿತರಕ್ಷಣೆಯ ದೃಷ್ಟಿ ಮುಂದಿಟ್ಟಲ್ಲವಾದರೂ ತಮ್ಮ ಉತ್ಪನ್ನದ ಉದ್ಗಮವನ್ನು ಕಾಪಾಡುವ ದೃಷ್ಟಿಯಿಂದ ಸರಕಾರದವರು ಅಡಿಕೆ ವ್ಯಾಪಾರಸ್ಥರ ಮಾರ್ಗದೊಳಗಿನ ಅಡಚಣಿಗಳನ್ನು ತತ್ಪರತೆಯಿಂದ ಪರಿಹರಿಸಿ, ಅವರಿಗೆ ಬೇಕಾದ ವಾಹನ-ಸೌಕರ್ಯವನ್ನು ನಿರಾತಂಕವಾಗಿಯೂ ಅವಿಳಂಬವಾಗಿಯೂ ಒದಗಿಸಿಕೊಡಬೇಕು, ಅಡಿಕೆಗೆ ಇಂಥ ಅನುಕೂಲತೆ ಮಾಡಿಕೊಡಲು ರೇಲ್ವೆ ವಾಹನ ನಿಯಂತ್ರಣಾಧಿಕಾರಿಗಳ ಮನವೊಲಿಸುವದಕ್ಕಾಗಿ ತೋಟಿಗರ ಶಿಷ್ಟಮಂಡಳವೊಂದು ಈಗಾಗಲೇ ಮುಂಬಯಿಗೆ ರವಾನೆಯಾದದ್ದುಂಟು

ಸಿದ್ದಾಪುರ—(ತಾ ೧೫ ೬-೪೫) ಇಲ್ಲಿಯ ಗಂಡುಮಕ್ಕಳ ಕನ್ನಡ ಶಾಲೆಯಿಂದ ಕಳೆದ ಮುಲ್ಕಿ ಪರೀಕ್ಷೆಗೆ ೨೨ ಹುಡುಗರು ಕೂತಿದ್ದರು ಅವರಲ್ಲಿ ೯ ಮಂದಿ ಉತ್ತೀರ್ಣರಾಗಿದ್ದಾರೆ ಇಷ್ಟು ಉತ್ತಮ ಪರಿಣಾಮ ಜಿಲ್ಲೆಯೊಳಗಿನ ಬೇರೆ ಯಾವ ಶಾಲೆಯೂ ತೋರಿಸಿಲ್ಲ ಪ್ಲೇಗಿನ ಹಾವಳಿಯ ಮೂಲಕ ನಡುವೆ ೩ ೪ ತಿಂಗಳು ಶಾಲೆಯನ್ನು ಮುಚ್ಚಿದ್ದ ಪ್ರಸಂಗ ಒದಗಿದ್ದರೂ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಇಷ್ಟು ತಯಾರು ಮಾಡಿದ ಶಿಕ್ಷಕರು ಅಭಿನಂದನೆಗೆ ಪಾತ್ರರಿದ್ದಾರೆ

ಬೇರೆ ತಾಲೂಕುಗಳ ನಿಯಂತ್ರಣದ ಸಮೂನೆಗೂ ಸಿದ್ದಾಪುರ ತಾಲೂಕಿನ ನಿಯಂತ್ರಣದ ಸಮೂನೆಗೂ ಮಹದಂತರವಿದೆ ಬೇರೆ ತಾಲೂಕುಗಳಲ್ಲಿ ಬೇಕಾದವರಿಗೆ [illegible]

ಸಕ್ಕರೆಯ ಕಥೆಯೂ ಅಷ್ಟೇ ಉದ್ವೇಗಜನಕವುಂಟು. ಕುಮಟಾ, ಶಿರ್ಸಿ, ಹೊನ್ನಾವರ ಶಹರಗಳಲ್ಲಿ ಪ್ರತಿಯೊಬ್ಬರಿಗೆ ತಿಂಗಳಿಗೆ ೪೦ ತೊಲೆ ಸಕ್ಕರೆ ಕೊಡುತ್ತಿದ್ದರೆ ಈ ಊರಲ್ಲಿ ಬರೇ ೧೫ ತೊಲೆ ಕೊಡುತ್ತಾರೆ! ಅದರಿಂದ ೪ ತಿಂಗಳ ಬಗ್ಗೆಂದು ಬಂದು ಬಿದ್ದ ಸಕ್ಕರೆಯು ೧೦ ತಿಂಗಳಾದರೂ ಖರ್ಚಾಗಿ ಹೋಗಲಿಕ್ಕಿಲ್ಲ ಜಿಲ್ಲಾಧಿಕಾರರು ಇಲ್ಲಿಯ ನಿಯಂತ್ರಣಾಧಿಕಾರಿಗಳಿಗೆ ಸ್ವಲ್ಪ ಬುದ್ಧಿ ಹೇಳಿಕೊಡುವದೊಳಿತು

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ಗಣಪತಿ ವೆಂಕಟರಮಣ ಹೆಗಡೆ ಸಾ॥ ಹೊನ್ನಾವರ ತಾಲೂಕ ಸ್ಥಳ ಕಡ್ಲೆಕೊಪ್ಪ ಈತನು ಈ ಮೂಲಕ ಎಲ್ಲ ಜನರಿಗೆ ತಿಳಿಸುವದೇನಂದರೆ - ನಾನೂ ನನ್ನ ಅಣ್ಣ ತಿಮ್ಮಣ್ಣ ಹೆಗಡೆಯೂ ಸುಮಾರು ಮೂರು ತಿಂಗಳ ಹಿಂದೆ ತನಕ ಒಕ್ಕಟ್ಟಾಗಿ ಇದ್ದವು ಕುಟುಂಬದ ಹೊಲ-ಭೂಮಿಗಳ ಖಾತೆ ಅಣ್ಣನ ಹೆಸರಲ್ಲುಂಟು. ಇತ್ತೀಚೆಗೆ ನಮ್ಮೊಳಗೆ ಗೃಹಕಲಹವುಂಟಾಗಿ ನಾನು ಅಣ್ಣನಿಂದ ಬೇರೆಯಾಗಿದ್ದೇನೆ ಮತ್ತು ನಮ್ಮಲ್ಲಿ ವಾಂಟಣಿಯ ಪ್ರಸ್ತಾಪ ನಡೆದಿದೆ ನಮ್ಮ ಕುಟುಂಬಕ್ಕೆ ಯಾವದೇ ಸಾಲವಿಲ್ಲ ಕಾರಣ ಯಾರೂ ನನ್ನ ಅಣ್ಣನಿಂದ ಕುಟುಂಬದ ಆಸ್ತಿಯನ್ನು ಕ್ರಯ, ಆಧವು ವಗೈರೆ ಮಾಡಿಕೊಳ್ಳಬಾರದು. ಮಾಡಿಕೊಂಡಲ್ಲಿ ಅದು ನನ್ನ ಹಕ್ಕಿಗೆ ಬಾಧಕಲಾರದು ತಿಳಿದಿರಲಿ ತಾ ೧೭-೬-೧೯೪೫.

ಗಣಪತಿ ವೆಂಕಟರಮಣ ಹೆಗಡೆ.

—R—

ನೋಟೀಸು.

ಮುಂಬಯಿ ಚಾರಕೋಲ ಟ್ರೇಡ ಲ್ಯಾಸೆನ್ಸಿಂಗ ಹುಕುಮು, ೧೯೪೪ ಮತ್ತು ಮುಂಬಯಿ ಫಾಯರ್-ವುಡ್ ಟ್ರೇಡ ಲ್ಯಾಸೆನ್ಸಿಂಗ ಹುಕುಮು, ೧೯೪೪ ಇವುಗಳನ್ವಯ ಪ್ರೊಡ್ಯೂಸರನ ಲ್ಯಾಸೆನ್ಸನ್ನು ಸರಕಾರಿ ಫಾರೆಸ್ಟ ಕಂಟ್ರ್ಯಾಕ್ಟರರು ಪಡಕೊಳ್ಳುವದು ಅವಶ್ಯವಿಲ್ಲೆಂದು ಮುಂಬಯಿ ಸರಕಾರದವರು ಇಷ್ಟು ದಿನ ಅಪವಾದಾತ್ಮಕ ಸವಲತ್ತು ಕೊಟ್ಟಿದ್ದರು ಆದರೆ ತಾ ೪-೩-೧೯೪೫ಕ್ಕೆ ಹೊಸ ಹುಕುಮು ಹೊರಡಿಸಿ ಮುಂಬಯಿ ಸರಕಾರದವರು ಈ ಸವಲತ್ತನ್ನು ರದ್ದುಗೊಳಿಸಿದ್ದಾರೆ ಅದರಿಂದ ಅವಶ್ಯವುಳ್ಳ ಲ್ಯಾಸೆನ್ಸ ಪಡೆಯದೆ ಸರಕಾರಿ ಫಾರೆಸ್ಟ ಕಂಟ್ರ್ಯಾಕ್ಟರರು ಇನ್ನುಮುಂದೆ ತಮ್ಮ ವ್ಯವಹಾರ ಸಾಗಿಸಿದಲ್ಲಿ ಅದು ಕಾನೂನು-ವಿರುದ್ಧವಾಗುತ್ತದೆ ಕಾರಣ ಸರಕಾರಿ ಫಾರೆಸ್ಟ ಕಂಟ್ರ್ಯಾಕ್ಟರರು ಕೂಡಲೆ ತಮ್ಮ ತಮ್ಮ ಜಿಲ್ಹೆಗಳೊಳಗೆ ಲ್ಯಾಸೆನ್ಸ ಕೊಡಲು ಅಧಿಕಾರವುಳ್ಳ ಅಧಿಕಾರಿಯ ಕಡೆಗೆ ನಿರ್ದಿಷ್ಟ ಫಾರ್ಮಿನ ಮೇಲೆ ಅರ್ಜಿ ಮಾಡಿ ಅವಶ್ಯವುಳ್ಳ ಪರವಾನೆ ಪಡಕೊಳ್ಳುವದುಚಿತ ಕಂಟ್ರ್ಯಾಕ್ಟರರು ಈ ಬಗ್ಗೆ ಲ್ಯಾಸೆನ್ಸ ಫೀ ಕೊಡಬೇಕಾಗಿಲ್ಲ

(ಸರಕಾರಿ ಸುದ್ದಿ ಖಾತೆಯ ಪ್ರಕಟನೆ)

WANTED immediately literat
Dais for a training course of si
months and work at Civil Hospita
Karwar on a stipend of Rs 25/- p.
Apply to the Civil Surgeon, Karw
upto 25-6-1945 stating full nam
age caste educational qualificatio
& address

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೦ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತದೆ!
ಚಿನ್ನ ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಾರಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

PRESS NOTE.

No. 74 — Government have by notification dated 6-6-1945 authorised distribution of rationed articles against the existing ration cards and permits during the first ration period of the second Rationing year commencing from 1st June 1945 in the rationed areas of Karwar Kumta, Bhatkal, Gok[illegible] and Sirsi by amending the respective Rationing Regulations valid[illegible]g the coupons on the existing ration cards and permits for [illegible]he first [illegible]night of June 1944 for the respective fortnight of June [illegible]15

K[illegible]ar
8-6-1945.

V. NANJAPPA.
District Magistrate Kanara

ಇದನ್ನು ಪಾಂಡುರಂಗ ಕೇಶವ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸಾರಸ್ವತ್ ಕೆನರಾ ಪ್ರೆಸ"ದಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೧-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡಕೊಟ್ಟುಕೊಳ್ಳದ್ದು

Reg. No. B. 1270. Monday, 25th June, 1945

ಕಾನಡಾವೃತ್ತ

ವರ್ಷ ೨೭.] **THE KANARA NEWS.** [ಸಂಚಿಕೆ ೫೧.

ಕುಮಟಾ:- ಸೋಮವಾರ, ತಾ. ೨೫ ಮಾಹೆ ಜೂನ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ.
ಸ್ಕ್ವೇರ್ ಪ್ರತಿ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಹೊನ್ನಾವರ— (ತಾ ೨೧-೬-೪೫) ಊರಲ್ಲೀಗ ಹತ್ತೀಕಾಳು ಸಿಗದೆ ಕಷ್ಟವಾಗಿದೆ. ಕಳ್ಳ ಪೇಟೆಯಲ್ಲೂ ಕೂಡ ಈಗ ಹತ್ತೀಕಾಳು ಸಿಗುವದಿಲ್ಲವಂತೆ! ಹಾಲು ಕರೆಯುವ ದನಗಳನ್ನೂ, ಗಾಡಿಯ ಮತ್ತು ಹೂಡುವ ಎತ್ತುಗಳನ್ನೂ ಸಾಕುವವರು ಕಷ್ಟದಲ್ಲಿದ್ದಾರೆ. ಇಲ್ಲಿನ ಸಹಕಾರಿ ಬ್ಯಾಂಕಿನ ಅಜಾಗ್ರತೆ, ಅನಾಯಕತ್ವಗಳ ಪರಿಣಾಮವು ಇದು. ಬ್ಯಾಂಕಿಗೆ ೫೦೦೦ ಚೀಲ ಹತ್ತೀಕಾಳು ತರಿಸಲು ಕಳೆದ ಜನವರಿಯಲ್ಲೇ ಪರವಾನೆ ಸಿಕ್ಕಿತ್ತು. ಹುಬ್ಬಳ್ಳಿಯವರೊಬ್ಬರು ಆಗ ಚೀಲ ೧ಕ್ಕೆ ರೂ ೯॥ ಕ್ಕೆ ಒಂದು ಬೇಕಷ್ಟು ಹತ್ತೀಕಾಳು ಹೊನ್ನಾವರದಲ್ಲಿ ತಂದು ಪೂರೈಸುತ್ತೇವಾಗಿ ಹೇಳಿದ್ದಂತೆ. ಏಕೋ ಏನೋ! ಬ್ಯಾಂಕಿನವರು ಅವರಿಗೆ ಗುತ್ತಿಗೆ ಕೊಡಲು ತಯಾರಾಗಲಿಲ್ಲ! ಬೇರೆಯವರಿಗೆ ಗುತ್ತಿಗೆ ಕೊಟ್ಟು ೧೫೦೦ ಚೀಲ ಹತ್ತೀಕಾಳು ಮುರಗಾಂವ ಮಾರ್ಗವಾಗಿ ತರಿಸಿಕೊಂಡರು, ಮತ್ತು ಅದನ್ನು ೧೦। ರೂಗಳಿಗೆ ೧ ಚೀಲದಂತೆ ಮಾರಿದರು. ಮುಂದೆ ಬಾಕಿಯುಳಿದ ಹತ್ತೀಕಾಳನ್ನು ಮುರಗಾಂವಕ್ಕೆ ತರಿಸಲು ರೇಲ್ವೆ ಸೌಕರ್ಯ ಸಿಗಲಿಲ್ಲವಂತೆ. ಅದನ್ನು ಮೋಟಾರ ಬಂಡಿಗಳಲ್ಲಿ ತರಿಸಿಕೊಳ್ಳಬೇಕಾಗಿದೆ. ಮೋಟಾರ ಮೇಲೆ ತಂದ ಹತ್ತೀಕಾಳಿನ ಚೀಲಕ್ಕೆ ಅಸಲ ಖರ್ಚು ರೂ ೧೨॥ ಬೀಳುತ್ತದಂತೆ! ಅದರ ಮೇಲೆ ಬ್ಯಾಂಕಿಗೆ ೮ ಆಣೆಗಳಾದ್ದರೂ ಮುನಾಫೆ ಬೇಕು, ೬ ಆಣೆಯಾದ್ದರೂ ಬತ್ತಿ ಹುಟ್ಟಬೇಕು! ಅದ್ದರಿಂದ ಚೀಲ ೧ರ ನಿಯಂತ್ರಿತ ದರವನ್ನು ರೂ ೧೩ರಿಂದ ರೂ ೧೩॥ಕ್ಕೆ ಏರಿಸಿಕೊಳ್ಳಲು ಬ್ಯಾಂಕಿನವರು ಖಟಪಟಿ ಮಾಡುತ್ತಿದ್ದಾರೆ! ಅಗ್ಗ ದರದಿಂದ ಬಂದು ಬೀಳುತ್ತಿದ್ದ ಹತ್ತೀಕಾಳನ್ನು ತಿರಸ್ಕರಿಸಿ ಬ್ಯಾಂಕಿನವರು ಈಗ ಈ ಏರಿ ಹುಟ್ಟಿ ದರದಿಂದ ತರಿಸಿ ಜನರ ಕೊರಳಿಗೆ ಕಟ್ಟಲು ಹವಣಿಸುತ್ತಿದ್ದಾರೆ! ಬ್ಯಾಂಕುಗಳಂತಹ ಸಂಸ್ಥೆಗಳ ಕೈಯಲ್ಲಿ ವ್ಯಾಪಾರದ ಸೂತ್ರ ಕೊಟ್ಟರೆ ಹೀಗಾಗುವದೇ ಸೈ!

ಇತ್ತೀಚಿಗೆ ಕರ್ಕ ನಾಕೆಯಲ್ಲಿ ಮೋಟಾರ ಬಂಡಿಗಳಲ್ಲಿ ಬರುವ ಪ್ರಯಾಣಿಕರ ಸಾಮಾನಿನ ತಪಾಸಣೆ ಬಹಳ ಬಿರುಸಾಗಿದೆ. ನಾಕೆದಾರನು ಪ್ರತಿಯೊಬ್ಬರ ಬ್ಯಾಗ, ಟ್ರಂಕ, ಹಾಸಿಗೆ, ಪೆಟ್ಟಿಗೆಗಳನ್ನು ಬಿಚ್ಚಿಸಿ ತಪಾಸ ಮಾಡುತ್ತಾನೆ! ಇದರಿಂದ ಬಂದ ಬಂದ ಗಾಡಿಯೂ ಅರ್ಧ ತಾಸು, ಮುಕ್ಕಾಲು ತಾಸು ನಾಕೆಯ ಮುಂದೆ ನಿಲ್ಲಬೇಕಾಗುತ್ತದೆ! ಒಮ್ಮೊಮ್ಮೆ ೯ ದಾಟಿ ಭಟಕಳ, ಬೈಂದೂರ ಕಡೆ ಹೋಗುವ ಪ್ರವಾಸಿಗರಿಗೆ ಈ ತಪಾಸಣೆಯಿಂದ ತಡವಾಗಿ ಮುಂದಿನ ಗಾಡಿ ತಪ್ಪಿ ಹೋಗಿ ಸಂಕಟವಾಗುತ್ತಿದೆ. ಪ್ರಯಾಣಿಕರ ಸಾಮಾನಿನಲ್ಲಿ ಸುಂಕ ಕೊಡಬೇಕಾದ ಸಾಮಾನು ಇರುವದು ಬಹಳ ಅಪರೂಪ. ಇದ್ದವರು ಕೇಳಿದ ಕೂಡಲೇ ಇಂಥಿಂಥ ಸಾಮಾನು ಉಂಟೆಂದು ಹೇಳಿ ತಕರಾರ ಇಲ್ಲದೆ ಸುಂಕ ಕೊಟ್ಟಿದೆ. ಗುಜ್ಜರಿ ಹೀಗಿರುವಾಗ ಯುದ್ಧಪೂರ್ವದ ರಾಷ್ಟ್ರಗಳ ಗಡಿಯಲ್ಲಿ ಮಾಡುತ್ತಿರುವ ಕಠೋರ ತಪಾಸಣೆಯಂತಹ ತಪಾಸಣೆಯನ್ನು ಪ್ರಸ್ತುತ ನಾಕೆದಾರನು ಮಾಡುತ್ತಿರುವ ದೇಶೋದ್ದೇಶ ತಿಳಿಯದು. ಬೇರೆ ಯಾವ ಊರಲ್ಲೂ, ಯಾವ ನಾಕೆಯಲ್ಲೂ ಇಂಥ ತಪಾಸಣೆಯಿಲ್ಲ. ನಗರಾಧ್ಯಕ್ಷರು ಆ ನಾಕೆದಾರನಿಗೆ ತಾಸು ಬುದ್ಧಿ ಹೇಳಿಕೊಟ್ಟು ಪ್ರಯಾಣಿಕರಿಗಾಗುವ ಕಷ್ಟ ಪರಿಹರಿಸಬಾರದೇ?

ಶ್ರೀ ವಾ॥ ಮಹಾಬಲೇಶ್ವರ ಪಿ. ನಾಡಕರ್ಣಿ ಹೈಗುಂದ ಇವರ ಸ್ಮಾರಕ ಮಾಡುವದಕ್ಕಾಗಿ, ಆ ಬಗ್ಗೆ ಹಣ ಸಂಗ್ರಹಿಸುವದಕ್ಕಾಗಿ ಶ್ರೀ॥ ಶಿವರಾಮ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಮಂಡಳ ನೇಮಿಸಲ್ಪಟ್ಟಿದೆ. ಮಂಡಳದಲ್ಲಿ ಹಳ್ಳಿಗಳ ಪ್ರತಿನಿಧಿಗಳೂ ಇದ್ದಾರೆ. ರಾ॥ ಜಾಲಿಸಕ್ಕ ವಕೀಲರು ಅದರ ಕಾರ್ಯದರ್ಶಿಗಳು.

ಮಂಕಿ— (ತಾ ೨೧-೬-೪೫) ಈ ಊರಲ್ಲಿ ಸುಮಾರು ೫೦ರಷ್ಟು ಅಂಗಡಿಗಳುಂಟು. ಈ ಎಲ್ಲ ಅಂಗಡಿಗಳ ತೂಕಕಾಟಗಳನ್ನು ತಪಾಸಣೆಗಾಗಿ ಹೊನ್ನಾವರಕ್ಕೆ ತಾ ೨೮-೬-೪೫ಕ್ಕೆ ತಂದು ಮುದ್ರೆ ಹಾಕಿಸಿಕೊಳ್ಳಬೇಕಾಗಿ ತೂಕಕಾಟ-ತಪಾಸಣೆ ಅಧಿಕಾರಿಗಳ ಹುಕುಮಾಗಿದೆ. ಮೋಟಾರ ಬಂಡಿಯಲ್ಲಿ ಸ್ಥಳ ಸಿಗದ ಹಾಗೂ ಬೇಸಾಯದ ಹಂಗಾಮಾದ್ದರಿಂದ ಕೂಲಿಗಳು ಸಿಗದ ಈ ದಿನಗಳಲ್ಲಿ ಎಲ್ಲ ತೂಕಕಾಟಗಳನ್ನು ವರ್ತಕರು ಹೊನ್ನಾವರಕ್ಕೆ ಹೊತ್ತುಕೊಂಡು ಹೋಗುವದು ಸಾಧ್ಯವೇ? ಇದಕ್ಕಿಂತ ತೂಕಕಾಟಗಳ ತಪಾಸಕರೇ ೨ ದಿನ ಮಂಕಿಯಲ್ಲಿ ಮುಕ್ಕಾಮು ಮಾಡಿದರೆ ಆಗುವಂತಿಲ್ಲವೇ?

ಭಟಕಳ— (ತಾ ೨೦-೬-೪೫) ೩-೪ ದಿನಗಳಿಂದ ಬಹಳ ಮಳೆ ಸುರಿಯುತ್ತಿದೆ.

ಇಲ್ಲಿಯ ಪ್ರಮುಖ ನಾಗರಿಕರಾಗಿದ್ದ ಖಾ॥ ಸಾ॥ ಕಾಶಿಮಜಿ ಮೋಹೆದ್ದಿನ ಸಾಹೇಬರು ಮೊನ್ನೆ ತಾ ೧೮ನೇ ಸೋಮವಾರ ಮುಂಜಾನೆ ಕಫವಿಕಾರದಿಂದ ಪೈಗಂಬರವಾಸಿಗಳಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತಿದೆ. ಅವರ ನಿಧನದ ವಾರ್ತೆ ಊರಲ್ಲಿ ಹಬ್ಬಿದೊಡನೆ ಎಲ್ಲ ಶಾಲೆಗಳು ಮುಚ್ಚಲ್ಪಟ್ಟವು. ಸುಮಾರು ೩ ಸಾವಿರ ಜನರು ಅವರ ಸ್ಮಶಾನಯಾತ್ರೆಯಲ್ಲಿ ಸೇರಿದ್ದರು. ಮೃತಾತ್ಮರು ಬಡಬಗ್ಗರಿಗೆ ಬಹಳಷ್ಟು ದಾನ-ಧರ್ಮ ಮಾಡಿ ಲೋಕಪ್ರಿಯರಾಗಿದ್ದರು. ಜಿಲ್ಲಾ ಲೋಕಲ್ ಬೋರ್ಡಿನ ಸದಸ್ಯರಾಗಿ ಅವರು ಸಾರ್ವಜನಿಕ ಸೇವೆಯನ್ನೂ ಮಾಡಿದ್ದುಂಟು. ಮೃತಾತ್ಮರಿಗೆ ದೇವರು ಚಿರಶಾಂತಿಯನ್ನೀಯಲಿ!

ಜಾಹೀರ ನೋಟೀಸು.

ನನ್ನ ಹೆಂಡತಿಯು ಕಳೆದ ತಾ ೧೧-೬-೧೯೪೫ರ "ಕಾನಡಾವೃತ್ತ"ದಲ್ಲಿ ಕೊಟ್ಟ ನೋಟೀಸನ್ನು ನೋಡಿ ನನಗೆ ಸಖೇದಾಶ್ಚರ್ಯವಾಗುತ್ತದೆ. ಅವಳ ತಂದೆಯು ದುರ್ವ್ಯಸನ, ದುರ್ವರ್ತನೆಗಳಿಂದ ತನ್ನ ಸಕಲ ಆಸ್ತಿಗಳನ್ನು ಕಳಕೊಂಡು ನನ್ನ ವಿರುದ್ಧ ಮಗಳಿಗೆ ಪ್ರಚೋದನೆ ಕೊಟ್ಟು, ಅವಳ ಮುಖಾಂತರ ನನ್ನ ಆಸ್ತಿಯನ್ನು ಎತ್ತಿಹಾಕಲು ಹಲವು ಕುತಂತ್ರಗಳನ್ನು ನಡಿಸಿದ್ದನು. ಅದ್ಯಾವದಕ್ಕೂ ನಾನು ಬಲಿ ಬೀಳದ ಮೂಲಕ ಕಳೆದ ೧ ವರ್ಷದ ಹಿಂದೆ ಅಜಮಾಸು ರೂ. ೧೦೦೦ರ ಆಭರಣಗಳ ಸಮೇತ ಸಮೇತ ಅವಳನ್ನು ಕರಕೊಂಡು ಹೋದವನು ಪುನಃ ಪುನಃ ಹೇಳಿ ಕಳಿಸಿದರೂ ಅವಳನ್ನು ಮನೆಗೆ ಕಳಿಸಲಿಲ್ಲ. ಕಾರಣ ನಾನು ಬೇರೆ ಲಗ್ನ ಮಾಡಿಕೊಳ್ಳುವ ತಯಾರಿ ಮಾಡಿದೆ. ಅದನ್ನು ಕೇಳಿ ಅವನು ಈ ಸುಳ್ಳು ನೋಟೀಸು ಕೊಡಿಸಿದ್ದಾನೆ. ಕಳೆದ ೧ ವರ್ಷದಿಂದ ನನಗೂ ನನ್ನ ಹೆಂಡತಿಗೂ ಸಹವಾಸವಿರುವದಿಲ್ಲ. ನಾನು ಕುಟುಂಬದ ಯಾವದೇ ಚರ-ಸ್ಥಿರ ಆಸ್ತಿ ಹಾಳು ಮಾಡಿರುವದಿಲ್ಲ. ವೃಥಾ ದುರ್ವ್ಯಾಜ್ಯವನ್ನು ಎಬ್ಬಿಸುವ ವಿಚಾರದಿಂದ ನನ್ನ ಹೆಂಡತಿಯು ಕೊಟ್ಟ ನೋಟೀಸಿಗೆ ಯಾರೂ ಲಕ್ಷಗೊಡುವ ಕಾರಣವಿಲ್ಲ. ತಾ. 23—6—1945

ಸುಬ್ರಾಯ ಗಣಪತಿ ಪಂಡಿತ ಅಘನಾಶಿನಿ,
ಹಾಲಿ ಗೋಕರ್ಣ.

“ಸಹ್ಯಾದ್ರಿ”ಯು ಮಾಡಿರುವ ಪ್ರಗತಿಯು ಮತ್ತು ಸಂಪಾದಿಸಿರುವ
ಲೋಕವಿಶ್ವಾಸದ ಪೂರ್ಣ ಶ್ರೇಯಸ್ಸು **ನಿಮಗೇ ಸಲ್ಲುತ್ತಿದೆ.**
ಬಂದ ವ್ಯವಹಾರದ ಮೊತ್ತ ರೂ. ೩೧,೧೮,೯೩೮
ಮನ್ನಿಸಿದ ವ್ಯವಹಾರದ ಮೊತ್ತ „ ೨೮,೨೨,೭೬೯
ಪೂರ್ಣ ಪಡಿಸಿದ ವ್ಯವಹಾರದ ಮೊತ್ತ „ ೨೫,೧೪,೯೨೩
ಈ ಕಂಪನಿಯಲ್ಲೇ ನಿಮ್ಮ ಜೀವದ ವಿಮೆ ಇಳಿಸಿ, ನಿಮ್ಮ ಸಂಪತ್ತನ್ನೂ ಸೌಖ್ಯವನ್ನೂ ಸಮೃದ್ಧಗೊಳಿಸಿರಿ
☞ ಏಜಂಟರಾಗುವವರಿಗೆ ಭರಪೂರ ದಲಾಲಿ ಕೊಡಲಾಗುತ್ತಿದೆ.
ಸಹ್ಯಾದ್ರಿ ಇನ್ಶೂರನ್ಸ ಕಂ., ಲಿ., ನಾಸಿಕ.
ಜಿ. ಜಿ. ಸೌಂದಣಕರ,
ಮೆನೆಜಿಂಗ ಡ್ಯಾರೆಕ್ಟರ.

PRESS NOTE.

The Government of Bombay under clause 20 of the Bombay Rationing Order 1943 have authorised distribution of all rationed articles otherwise than on a ration document to the crew of any vessel in the harbours of Butkhol Kodibag, Kumta, Honavar, Bhatkal and Gokarn by authorised retail distributors duly approved by the Rationing officers concerned, to the holders of approved identity or provision cards

The distribution shall be subject to the conditions laid down in this behalf.

2 The necessary notifications in this connection have been published in part I of the Bombay Government Gazette, Extra-ordinary, dated 4th May 1945

Karwar,
14—6—1945

V. NANJAPPA,
DISTRICT MAGISTRATE, KANARA.

PRESS NOTE.

For the purpose of clause (f) of Section 6 of the Bombay Rationing Preparatory Measures Act, 1943 (Bom I of 1943) the Government of Bombay has fixed the 31st day of May 1946 as as the date before which the obliteration, removal etc of letters, marks or numbers painted on or affixed to the premises within the rationed areas of Gokarn and Sirsi are prohibited

The necessary notification in this connection has been published in part I of the Bombay Government Gazette dated 3rd May 1945.

KARWAR
14—6—1945

V. NANJAPPA,
Dist Magistrate, Kanara

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. K

ANNOUNCEMENT.

The Board of Directors have pleasure to announce that a Branch of the Bank has been opened at SIRSI on Wednesday the 20th June 1945.

COONDAPOOR,
25—4—1945

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭಕ್ಕೆ ೩-೪ ದಿನ ಬಿಸಿಲು ಬೀಳಗೊಡದ ಮಳೆ ಸುರಿಯಿತು. ಗುರುವಾರ ರಾತ್ರಿಯಿಂದ ಆರ್ದ್ರಾ ಮಳೆಗಾರಂಭ. ಈ ಮಳೆಯ ಆರ್ಭಾಟ ಏನೇನೂ ಕಂಡುಬರುವದಿಲ್ಲ !

ಲೋಕಲ್ ಬೋರ್ಡ ಚುನಾವಣೆ ಸಮೀಪಿಸಿದೆ. ಎಲ್ಲ ಹುರಿಯಾಳುಗಳು ರಭಸದ ಪ್ರಚಾರ ನಡಿಸಿದ್ದಾರೆ. ಚುನಾವಣೆಯು ಬಹಳ ಕಾರಸಿನದಾಗುವ ಲಕ್ಷಣಗಳುಂಟು. ಆದರೆ ಎಲ್ಲವೂ ಮಳೆಯ ಮೇಲೆ ಅವಲಂಬಿಸಿವೆ.

ಇಲ್ಲೊಂದು ಕಾಲೇಜು ತೆರೆಯುವ ವ್ಯವಸ್ಥೆ ಮಾಡುವದಕ್ಕಾಗಿ ತಾ. ೨೭-೫-೪೫ರ ಸಭೆಯಲ್ಲಿ ನೇಮಿಸಲ್ಪಟ್ಟ ಮಂಡಳದವರು ಕಾಲೇಜಿನ ಬಗ್ಗೆ ಒಂದು ಪ್ರಶಸ್ತ ಸ್ಥಳ ಹುಡುಕಿ ದೊರಕಿಸುವದಕ್ಕಾಗಿ ಒಂದು ಉಪಸಮಿತಿಯನ್ನೂ, ಕಾಲೇಜ ವ್ಯವಸ್ಥಾ ಮಂಡಳದ ಘಟನೆಯನ್ನು ತಯಾರಿಸುವದಕ್ಕಾಗಿ ಇನ್ನೊಂದು ಉಪಸಮಿತಿಯನ್ನೂ ನೇಮಿಸಿದ್ದಾರೆಂದು ತಿಳಿಯುತ್ತದೆ.

ಸನ್ಮಾನ್ಯ ಗೃಹಸ್ಥರೊಬ್ಬರು ಬರೆಯುತ್ತಾರೆ. ಈ ಜಿಲ್ಹೆಯ ಸರಕಾರಿ ವಕೀಲರ ನೇಮಣೂಕಿಯ ಅವಧಿ ಇನ್ನು ೨-೩ ತಿಂಗಳಲ್ಲಿ ಮುಗಿಯುತ್ತದೆ; ಮತ್ತು ಹೊಸ ನೇಮಣೂಕಿ ಮಾಡಬೇಕಾಗುತ್ತದೆ. ಸರಕಾರಿ ವಕೀಲರೆಂದರೆ ಕಾರವಾರದ ವಕೀಲ ಮಂಡಳದಲ್ಲಿ ಅಗ್ರಗಣ್ಯರು. ಆ ಅಗ್ರಸ್ಥಾನದಲ್ಲಿ ಮೆರೆಯುವಷ್ಟು ಯೋಗ್ಯತೆಯುಳ್ಳವರನ್ನೇ ಆ ಸ್ಥಾನಕ್ಕೆ ನೇಮಿಸಬೇಕಾದುದು ಕ್ರಮಪ್ರಾಪ್ತ. ಉಚ್ಚ ಶಿಕ್ಷಣ, ಅನುಭವ, ಕಾರ್ಯದಕ್ಷತೆ ಮತ್ತು ಕಾಯಿದೆ ಜ್ಞಾನ ಈ ಸದ್ಗುಣಗಳುಳ್ಳವರೇ ಆ ಸ್ಥಾನಕ್ಕೆ ಅರ್ಹರೆಂದು ಬೇರೆ ಹೇಳಬೇಕಾಗಿಲ್ಲ. ಈಗಿನ ಸರಕಾರಿ ವಕೀಲರಲ್ಲಿ ಆ ಎಲ್ಲ ಗುಣಗಳುಂಟೆಂದು ಹೇಳಬರುವಂತಿಲ್ಲ. ಅವರು ಪದವೀಧರರಲ್ಲ. ಈಗಂತೂ ಅವರು ವಯೋವೃದ್ಧರಾಗಿದ್ದಾರೆ. ಆದ್ದರಿಂದ ಹೊಸ ನೇಮಣೂಕಿ ಮಾಡುವಾಗ ಸರಕಾರದವರು ಯೋಗ್ಯ ಇಸಮನ್ನೇ ಆರಿಸಬೇಕಾಗಿ [illegible] ಮೇಲೆ ಹೇಳಿದ ನಾಲ್ಕು ಗುಣಗಳುಳ್ಳ ವಕೀಲರನೇಕರು ಕಾರವಾರದಲ್ಲಿದ್ದಾರೆ. ಇತ್ಯಾದಿ

ಪರೀಕ್ಷೆಗಳಲ್ಲಿ ಅಯಶಸ್ವಿಯಾದ್ದರಿಂದ ಆತ್ಮಹತ್ಯೆ ಮಾಡಿಕೊಂಡ ಸುದ್ದಿಗಳು ಬೇರೆ ಜಿಲ್ಹೆಗಳಲ್ಲಿ ಘಟಿಸಿವೆ. ನಮ್ಮ ಜಿಲ್ಹೆಯಲ್ಲಿ ಈ ವರೆಗೆ ಇಂಥ ಘಟನೆಗಳಾಗಿದ್ದಿಲ್ಲ. ಆದರೆ [illegible] ಎಂಬ ವಿದ್ಯಾರ್ಥಿಯು ಈ ಪ್ರಯತ್ನವನ್ನು ಮಾಡಿದ್ದಾನೆ. ಈತ ೩ ವರ್ಷಗಳಿಂದ ಸತತ ಮ್ಯಾಟ್ರಿಕ ಪರೀಕ್ಷೆಗೆ ಕೂತುಕೊಳ್ಳುತ್ತಿದ್ದನು. ಈ ವರ್ಷವೂ ಕೂತಿದ್ದನು. ಆದರೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವನೆಂಬ ಭರವಸೆ ಅವನಿಗಿದ್ದಿಲ್ಲ. ಅದರಿಂದ ಒಂದು ದಿನ ಅವನು ಅಂತರಂಗ ವಿಷ-ಪ್ರಾಶನ ಮಾಡಿ ಪ್ರಾಣಬಿಟ್ಟನಂತೆ. ಅವನಿಗೆ ತಂದೆ-ತಾಯಿಗಳಿಲ್ಲ. ಇದ್ದ ಒಬ್ಬ ಅಣ್ಣನೂ ಆ ಕಾಲಕ್ಕೆ ಶಿರ್ಸಿಯಲ್ಲಿದ್ದನಂತೆ.

(೧ನೇ ಪುಟದ ಮೇಲೆ ಮುಂದರಿಸಿದೆ.)

ಜಾಹೀರ ನೋಟೀಸು.

ನಾಗೇಶ ದತ್ತ ತಂದೆ ರಾಮರಾವ ಪೆಡ್ನೇಕರ [illegible] [illegible] ಇವರ [illegible] ವಕೀಲ [illegible] ನೋಟೀಸು ಕೊಡುವದೇನಂದರೆ —

ಸದರಿ ಅಪ್ರಾಯಸ್ಥ ನಾಗೇಶನ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಯಿಂದ ಪ್ರತಿ ವರ್ಷ ಅಜಮಾಸ ೮೦ ಮೂಡಿಗೆ ಅಕ್ಕಿ ಮತ್ತು ೩೦೦೦ ತೆಂಗಿನಕಾಯಿ ಉತ್ಪನ್ನ ಬರುತ್ತದೆ. ಅವರ ಕುಟುಂಬದಲ್ಲಿ ಅಜಮಾಸ ೬೦೦ (ಆರು ನೂರು) ರೂಪಾಯಿ ಬೆಲೆ ಬಾಳುವ ಮುತ್ತು, ರತ್ನ, ಬಂಗಾರ, ಬೆಳ್ಳಿ ದಾಗಿನೆಗಳೂ ಅಜಮಾಸ ೧೦೦೦ (ಒಂದು ಸಾವಿರ) ರೂಪಾಯಿ ಬೆಲೆ ಬಾಳುವ ವಸ್ತು-ತಾಮ್ರಗಳೂ ಇರುತ್ತವೆ. ಸದರಿ ಕುಟುಂಬಕ್ಕೆ ಯಾವದೇ ಸಾಲ ಇರುವದಿಲ್ಲ. ಸಾಲ ತೆಗೆಯುವ ಗರಜು ಸಹ ಇಲ್ಲ. ಸದರಿ ಕುಟುಂಬದ ಪಿತ್ರಾರ್ಜಿತ ಆಸ್ತಿಯಲ್ಲಿ 1/3 ನೆ ಉಮಾಂಶದ ಸ್ವಾರ್ಜಿತ ಆಸ್ತಿಯಲ್ಲಿ ಪೂರ್ಣ ಹಕ್ಕು ಅಪ್ರಾಯಸ್ಥನಿಗೆ ಇರುತ್ತದೆ. ಹೀಗಿರುವಲ್ಲಿ ಅಪ್ರಾಯಸ್ಥನಿಗೆ ಮೋಸ ಮಾಡಬೇಕು ಎಂಬ ದುಷ್ಟ ಇರಾದೆಯಿಂದ ಹಿರೇ ಅಂಬದಾಸ ಉತ್ತಮ ಸುಬ್ರಾಯ ವೆರ್ಣೇಕರ ವ ಪುತ್ರ ಲಕ್ಷ್ಮಣ ವೆರ್ಣೇಕರರ ಪತ್ನಿ ಅಂಬಾಬಾಯಿ ಇವರು ಲಾವಕರ ದುಬೋರ್ಧನೆಗೆ ಒಳಪಟ್ಟು ಖೋಟಾ ದಸ್ತು ವಗೈರೆ ಉಂಟು ಮಾಡಿ ಬೆಲೆ ಬಾಳುವ ಕುಟುಂಬದ ಆಸ್ತಿಯನ್ನು ಪರಾಧೀನ ಮಾಡುವ ತಯಾರಿಯಲ್ಲಿ ಇದ್ದದ್ದಾಗಿ ತಿಳಿದು ಬರುತ್ತದೆ. ಇಂಥ ಪರಾಧೀನತೆಯು ಅಪ್ರಾಯಸ್ಥನ ನ್ಯಾಯ್ಯವಾದ ಹಕ್ಕಿಗೆ ಬಾಧಕವಾಗುವಂತಿಲ್ಲ. ಅವು ಅಸಿಂಧು ಇರುತ್ತವೆ. ತಿಳಿಯುವದು.

ಹೊನ್ನಾವರ,
ತಾ. 18-6-1945 } **M. M. Jalisatgi.**

Gibb High School, Kumta.

Wanted a B A or B Sc. strong in English. Pay Rs 45/— (Hons Rs 48/-) plus dearness allowance. Apply immediately. Kumta, 22—6—1945

Mhalappa B. Pal,
Chairman, Governing Body

NOTICE.

No. 74— In exercise of the powers conferred by sub-rule (2) of rule 81 of the Defence of India Rules read with Government Notification, Home Department (Political-War), No S D II/1370, dated the 15th September 1944 and of all other powers enabling him in this behalf the District Magistrate, and the Controller of Prices, Kanara is pleased to amend the District Magistrate's orders No 74, dated 6th October 1944 and 5th January 1945 relating to the import and export of rationed articles into and outside the rationed areas of Karwar, Kumta, Honavar, Bhatkal, Gokarn and Sirsi in this district as follows, namely—

For the words "By road or rail" appearing in the first para of the District Magistrate's orders referred to above, the words "By road or rail or river or sea" shall be substituted.

Karwar.
11-6-1945 }

V. NANJAPPA.
District Magistrate, Kanara

NOTICE.

All Stage Carriage and Public Carriers Permit holders in the Karnatak Region are hereby informed that the Provincial Motor Transport Controller, Bombay will explain to them the details regarding Rail-Road Coordination Scheme at the Office of the undersigned on the dates and at the time specified below. All are requested to attend the meeting.

1—7—45 (Sunday) :— From 2 P M to 4 P M.
2—7—45 (Monday) :— From 11 A M onwards.

Belgaum,
19-6-1945 }

J. B. RABBITT.
Regional Transport Officer, BELGAUM.

Notice to Motor Owners in the Karnatak Region.

All owners of motor vehicles residing in the Karnatak Region, are hereby informed that tax in respect of motor vehicles bearing regional registration marks for one or more quarters during the current financial year from 1—7—1945, ***has to be paid so as to reach this office on or before 14—7—1945 (15th being Sunday).***

2 The payment should be made by cash, cheque, chalan or money order at the Regional Transport Office Belgaum. Cash will be accepted between hours 11-0 A M and 3-0 P M on week days and between 9-30 A M & 11-0 A M on Saturdays ***Crossed cheques drawn on the Imperial Bank of India, Belgaum only will be accepted and those drawn on any other Bank are liable to be refused.***

3 If the tax is paid by cash, the registration certificate of the vehicle must be produced with declaration in form "AT" duly completed. ***Tax will not be accepted without the registration certificate.***

4 When the amount of tax is paid by chalan, the owner of a vehicle must send the duplicate copy of the chalan along with the registration certificate and a declaration in form 'AT' duly signed so as to enable this office to issue tax tokens in time

5 Valid Insurance Policies in respect of Heavy Transport Vehicles including risk of drivers & attendants under Workmens' Compensation Act must be produced at the time of payment of tax

6 Owners of motor vehicles bearing extra-Provincial or State registration marks are informed that the concession of 15 days grace period does not apply to them and the tax due should be paid on or before the date of expiry of the tokens issued to them along with the registration certificates of the vehicles and a declaration in form "FT" for each vehicle duly completed

7 Attention is invited to Rule 26 of the Bombay Motor Vehicles Tax Rules 1940 requiring motor owners who intend to keep their vehicles unused, to intimate non-use in writing before the date of expiry of the period for which tax due has been paid

8 Limited Companies and Unions in Belgaum City and Camp areas are requested to remit tax a few days earlier instead of waiting till the last date of payment in order to prevent congestion at the counter on the last few days and to avoid inconvenience to other individual members of the public.

No 6066/2-K/KR of 45
Regional Transport Office
Belgaum, 19—6—1945. }

J. B. RABBITT.
Regional Transport Officer,
Karnatak Region, BELGAUM.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ !
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತಿವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರ[illegible] ಕೊಳ್ಳದೆ ಅವರು ನಿಮಗೆ ನೆರವಾಗುವರು.
[illegible] ೧೦ ರಿಂದ ರೂ. ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಹಾ ಸಣ್ಣ ಠೇವುಗಳ ಪ್ರಚಾರ-ಸಮಿತಿಯ ಪ್ರಕಟನೆ].

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸಾರ ಆರ್ಟ ಕೆನರಾ ಪ್ರೆಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೆರಬೇಕು.
ವರ್ಗಣಿ ಮುಂಗಡ ಕೊಟ್ಟಿಕೊಳ್ಳತಕ್ಕದ್ದು

Reg. No. B. 1270. Monday, 2nd July, 1945

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೧.

ಕುಮಟಾ:- ಸೋಮವಾರ, ತಾ. ೨ ನೆಯ ಜುಲೈ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರಾಕಾ ೧॥ ಎಮ್ ಉದ್ದ ೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪ್ರಾಕಾ ೧॥ ಎಮ್ ಉದ್ದ ೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಯಬೇಕು.

ಜಿನ್ನಾ-ಗರ್ವಭಂಗದ ಕಾಲ.

(ನಿರೀಕ್ಷಕನು ಬರೆದುದು.)

ವೆವ್ಹೆಲ ದೊರೆಗಳ ಯೋಜನೆ ಅದೊಂದು ಚೇಳು ತುಂಬಿದ ಬುಟ್ಟಿಯೆಂದು ನಾನು ಆಚೆಯ ವಾರ ನನ್ನ ಮತ ವ್ಯಕ್ತಗೊಳಿಸಿದ್ದೆನಷ್ಟೇ. ಮಹಾತ್ಮಾ ಗಾಂಧಿಯವರ ಮತವಾದರೂ ಹಾಗೆಯೇ ಇದ್ದಿರಬೇಕು. ಆದರಿಂದ ಅವರು ದೊರೆಗಳೊಡನೆ ತಂತಿ-ವ್ಯವಹಾರ ನಡಿಸಿ, ರಾಷ್ಟ್ರೀಯ ಸಭೆಯ ಪ್ರತಿನಿಧಿಯು ಸಿಮ್ಲಾ ಸಭೆಯಲ್ಲಿ ಬೇಕಾದರೆ ರಾಷ್ಟ್ರಪತಿ ಮೌಲಾನಾ ಆಝಾದರಿಗೆ ನಿಮಂತ್ರಣ ಕೊಡತಕ್ಕದ್ದೆಂದು ದೊರೆಗಳಿಗೆ ತಿಳಿಸಿ ಆ ಪ್ರಕಾರ ನಿಮಂತ್ರಣವನ್ನು ಕೊಡಿಸಿದರು; "ಸವರ್ಣ ಹಿಂದುಗಳು" ಎಂಬ ಶಬ್ದಯೋಜನೆಯಲ್ಲಿ ತಮ್ಮ ದುರುದ್ದೇಶ ಇಲ್ಲವೆ ದೂರೋದ್ದೇಶವೇನೂ ಇಲ್ಲವೆಂದು ಸರ್ವಾಧಿಪತಿಗಳಿಗೆ ಸ್ಪಷ್ಟೀಕರಿಸಹಚ್ಚಿದರು; ಮತ್ತು ಸಿಮಲಾ ಸಭೆಯ ನಿಮಂತ್ರಣವನ್ನು ಸ್ವೀಕರಿಸಿದ ಮಾತ್ರಕ್ಕೆ ಹೊಸ ಯೋಜನೆಯನ್ನು ಒಪ್ಪಿಕೊಂಡಂತಾಗುವದಿಲ್ಲೆಂದೂ, ಆ ಯೋಜನೆ ವಿಚಾರ ಮಾಡಲು ಅನಿರ್ಬಂಧಿತರೆಂದಿಷ್ಟೇ ಒಪ್ಪಿಕೊಂಡರೆಂದು ತಿಳಿಯಲಾಗುವದಾಗಿಯೂ ಸರ್ವಾಧಿಪತಿಗಳಿಂದ ಸ್ಪಷ್ಟೀಕರಣ ಮಾಡಿಕೊಂಡರು. ಇಷ್ಟೆಲ್ಲ ಸ್ಪಷ್ಟೀಕರಣವಾದ ಮೇಲೆಯೇ ಮಹಾತ್ಮರು ಸಿಮಲಾಕ್ಕೆ ಹೋಗಿ ಸರ್ವಾಧಿಪತಿಗಳನ್ನು ಕಾಣಲು ಒಪ್ಪಿಕೊಂಡರು. ಹಾಗೂ ತಾ. ೨೧-೨೨ಕ್ಕೆ ಮುಂಬಯಿಯಲ್ಲಿ ಕೂಡಿದ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಸಿಮಲಾ ಪರಿಷತ್ತಿನಲ್ಲಿ ಭಾಗ ವಹಿಸಲೊಪ್ಪಿ, ರಾಷ್ಟ್ರದ ಹಿತದ ದೃಷ್ಟಿಯಿಂದ ಅವಶ್ಯ ಕಂಡ ನಿರ್ಣಯಗಳನ್ನು ಕೈಕೊಳ್ಳುವ ಸರ್ವಾಧಿಕಾರ ಕೊಟ್ಟು ರಾಷ್ಟ್ರಪತಿ ಮೌಲಾನಾ ಆಝಾದರಿಗೆ ಕೊಂಗ್ರೆಸ ಪ್ರತಿನಿಧಿಯಾಗಿ ಪರಿಷತ್ತಿಗೆ ಕಳಿಸಿಕೊಟ್ಟಿತು. ಸಿಮಲಾ ಪರಿಷತ್ತಿಗೆ ಆರಂಭವಾದದ್ದು ತಾ. ೨೫ನೇ ಸೋಮವಾರಕ್ಕೆ. ಅದರ ಮುನ್ನಾಣ ದಿನವೇ ಸರ್ವಾಧಿಪತಿ ವೆವ್ಹೆಲ್ ದೊರೆಗಳು ಪೂರ್ವ ಸಂಕೇತದಂತೆ ಮಹಾತ್ಮಾಜಿಯವರಿಗೂ ಬ್ಯಾ॥ ಜಿನ್ನಾರವರಿಗೂ ಸಂದರ್ಶನವಿತ್ತರು. ರಾಷ್ಟ್ರಪತಿಗಳೂ ತಮಗೆ ಸಂದರ್ಶನ ಕೊಡಬೇಕಾಗಿ ಬೇಡಿದ್ದರು. ಅವರಿಗೂ ಅಂದು ಸಂದರ್ಶನ ಸಿಕ್ಕಿತು. ಮೂವರೂ ತಮ್ಮ ತಮ್ಮ ಭೂಮಿಕೆಗಳನ್ನು ದೊರೆಗಳಿಗೆ ನಿವೇದಿಸಿರಬೇಕು. ಮಹಾತ್ಮಾಜಿಯವರು ೨ ತಾಸು ತನಕ ದೊರೆಗಳೊಡನೆ ಇದ್ದರು. ತಾವು ಯಾವದೇ ಪಕ್ಷದ ಪ್ರತಿನಿಧಿಗಳಿರದ್ದರಿಂದ ಪರಿಷತ್ತಿನಲ್ಲಿ ತಮಗೆ ಸ್ಥಾನವಿಲ್ಲೆಂದು ಮಹಾತ್ಮರು ತಿಳಿಸಿದ್ದರಾಗಿಯೂ, ದೊರೆಗಳಿಗೂ ಆ ಮಾತು ಒಪ್ಪಿಗೆಯಾಯಿತೆಂತಲೂ, ಅವರೂ ಕೊಂಗ್ರೆಸ ಪ್ರತಿನಿಧಿಗಳಿಗೂ ತಮಗೂ (ಅಂದರೆ ಸರ್ವಾಧಿಪತಿಗಳಿಗೂ) ಬೇಕಾದಾಗ ಸಲಹೆ ಕೊಡಲು ಪರಿಷತ್ತು ಮುಗಿಯುವ ವರೆಗೆ ಮಹಾತ್ಮಾಜಿಯವರು ಸಿಮಲೆಯಲ್ಲೇ ಉಳಿಯಬೇಕೆಂದು ವೆವ್ಹೆಲ ದೊರೆಗಳು ಬಿನ್ನವಿಸಿದ್ದಾಗಿಯೂ ಸುದ್ದಿಗಾರರು ತಿಳಿಸುತ್ತಾರೆ. ಮಹಾತ್ಮರು ಅದಕ್ಕೊಪ್ಪಿ ಈಗ ಸಿಮಲೆಯಲ್ಲೇ ಇದ್ದಾರೆ. ಆದರೆ ಅವರು ಪರಿಷತ್ತಿನ ಸಭೆಗಳಿಗೆ ಹೋಗಲಿಲ್ಲ. ಸೋಮವಾರ ಪರಿಷತ್ತು ಆರಂಭವಾಗುತ್ತಲೇ ಸರ್ವಾಧಿಪತಿಗಳು ಪ್ರಾಸ್ತಾವಿಕ ಭಾಷಣ ಮಾಡಿ ತಮ್ಮ ಯೋಜನೆಯನ್ನು ಯಶಸ್ವಿಗೊಳಿಸಲು ಎಲ್ಲರೂ ತಮಗೆ ಪ್ರಾಮಾಣಿಕ ಸಹಕಾರವನ್ನೀಯಬೇಕಾಗಿ ಕಳಕಳಿಯಿಂದ ಬಿನ್ನವಿಸಿದರು. ಆನಂತರ ಚರ್ಚೆ ಆರಂಭವಾಯಿತು. ಏನೇನು ನಡೆಯಿತೆಂಬುದು ಗುಪ್ತವಾಗಿಡಲ್ಪಟ್ಟಿದೆ. ಆದರೂ ಎಲ್ಲ ಪಕ್ಷಗಳ ಪ್ರತಿನಿಧಿಗಳು ಯೋಜನೆಯ ಸ್ವರೂಪವನ್ನು ಮಾನ್ಯಮಾಡಿದ್ದಾರೆಂದು ಹೇಳಬಹುದು. ಪರಿಷತ್ತು ಮಂಗಳವಾರ ೧॥ ತಾಸು, ಬುಧವಾರ ೧ ತಾಸು ನಡೆಯಿತು. ಸರ್ವಾಧಿಪತಿಗಳ ಹೊಸ ಕಾರ್ಯಕಾರಿ ಮಂಡಳದ ಸಭಾಸದರ ಪಟ್ಟಿಯ ಸಂಬಂಧದಲ್ಲಿ ಮುಸ್ಲಿಮ ಲೀಗಪಕ್ಷ ಮತ್ತು ಲೀಗೇತರ ಪಕ್ಷಗಳೊಳಗೆ ಭಿನ್ನಾಭಿಪ್ರಾಯವಾಯಿತು. ಸರ್ವಾನುಮತದಿಂದ ಈ ಪಟ್ಟಿ ತಯಾರಿಸುವದುಚಿತವೆಂದು ದೊರೆಗಳ ಹಾಗೂ ಪರಿಷತ್ತಿನೊಳಗಿನ ಬಹುಸಂಖ್ಯ ಸದಸ್ಯರ ಅಭಿಪ್ರಾಯವಿತ್ತು. ಅನಂತರ ಲೀಗದ ಅಧ್ಯಕ್ಷ ಬ್ಯಾ॥ ಜಿನ್ನಾರವರೊಡನೆ ಸಂಧಾನ ಮಾಡಿ ಒಮ್ಮತ ಸಾಧಿಸುವದಕ್ಕೆ ದೊರೆಗಳು ಗುರುವಾರ ಪರಿಷತ್ತಿನ ಸಭೆಯು ಕೂಡಲಿಲ್ಲ. ಆದರೆ ಸಂಧಾನವೆಲ್ಲ ನಿರರ್ಥಕವಾಯಿತು. ಲೀಗದ ಹೊರಗೆ ಇರುವ ಮುಸಲ್ಮಾನರ ಪ್ರತಿನಿಧಿಗಳನ್ನು ಆರಿಸಲಿಕ್ಕೆ ಕೊಂಗ್ರೆಸ್ಸಿಗೆ ಹಕ್ಕಿಲ್ಲೆಂತಲೂ, ಎಲ್ಲ ಮುಸಲ್ಮಾನರನ್ನು ಲೀಗವೇ ಆರಿಸುವದೆಂತಲೂ ಜಿನ್ನಾರವರ ದುರಾಗ್ರಹ! ಗಡಿನಾಡಿನಲ್ಲಿ ಲೀಗಕ್ಕೆ ಬೆಂಬಲವಿಲ್ಲ; ಪಂಜಾಬದಲ್ಲೂ ಮನ್ನಣೆಯಿಲ್ಲ; [illegible]ನ, ಶಿಯಾ ವಗೈರೆ ಮುಸಲ್ಮಾನರು ಲೀಗದಿಂದ ಪ್ರತ್ಯೇಕ ಇದ್ದಾರೆ. ಆದರೂ ಲೀಗವೇ ಅಖಿಲ ಮುಸಲ್ಮಾನರ ಪ್ರತಿನಿಧಿಯೆಂದು ಬ್ಯಾ॥ ಜಿನ್ನಾರವರ ಪ್ರತಿಪಾದನೆ! ಜಿನ್ನಾರ ಈ ದುರಾಗ್ರಹ ಹಟವಾದಿತ್ವದ ಮೂಲಕ ದೊರೆಗಳು ಪರಿಷತ್ತನ್ನು ಜುಲೈ ತಾ. ೧೪ಕ್ಕೆ ಮುಂದರಿಸಿ, ಕಾರ್ಯಕಾರಿ ಮಂಡಳಕ್ಕೆ ಆರಿಸಬೇಕಾದ ಸದಸ್ಯರ ಪಟ್ಟಿಗಳನ್ನು ಪ್ರತಪ್ರತ್ಯೇಕವಾಗಿ ತಮಗೆ ಒಪ್ಪಿಸಲು ಎಲ್ಲ ಪಕ್ಷಗಳಿಗೂ ತಿಳಿಸಿದ್ದಾರೆ. ಈ ಪಟ್ಟಿಗಳನ್ನು ತಯಾರಿಸುವದಕ್ಕಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ನಾಳೆ ಮತ್ತು ಲೀಗ ಕಾರ್ಯಕಾರಿ ಮಂಡಳ ಬರುವ ಶುಕ್ರವಾರ ಸಿಮ್ಲಾದಲ್ಲಿ ಕೂಡಲಿವೆ. ಎಲ್ಲ ಪಕ್ಷಗಳು ತಮ್ಮ ಪಟ್ಟಿಗಳನ್ನು ಒಪ್ಪಿಸಿದ ಮೇಲೆ ಸರ್ವಾಧಿಪತಿಗಳು ಅವುಗಳೊಳಗಿಂದ ತಮಗೆ ಯುಕ್ತ ಕಂಡವರನ್ನು ಆರಿಸುವರು. ಬ್ಯಾ॥ ಜಿನ್ನಾರವರ ಮಾತಿಗೆ ಅಥವಾ ಬೆದರಿಕೆಗಳಿಗೆ ಈ ಸಾರೆ ಯಾರೂ ಸೊಪ್ಪು ಹಾಕುವಂತಿಲ್ಲ! ಜಿನ್ನಾರವರು ಮುದ್ದಣ್ಣನಂತೆ ಹಟವಾದಿಯಾಗಿ ಸಿಡಿದು ನಿಂತರೆ ಅವರನ್ನು ಅಲಕ್ಷಿಸಿ ಮುಂದರಿಯತಕ್ಕದ್ದೆಂದು ವಿಲಾಯತಿಯೊಳಗಿನ ರಾಜಕಾರಣಿಗಳೂ ಪತ್ರಿಕೆಗಳೂ ನುಡಿಯಲಾರಂಭಿಸಿವೆ. ಜಿನ್ನಾರವರು ಮೊತ್ತಗಾಗಿ ವಸ್ತುಸ್ಥಿತಿಯನ್ನೊಪ್ಪಿ ನಡೆಯಲು ಸಿದ್ಧರಾಗದಿದ್ದರೆ ಅವರು ಮೂಲೆಗುಂಪಾಗುವದು ಖಂಡಿತ! ಈ ರೀತಿ ಬ್ಯಾ॥ ಜಿನ್ನಾರವರ ಗರ್ವಭಂಗವಾಗುತ್ತಿದ್ದುದು ಒಂದು ಶುಭ ಲಕ್ಷಣ. ಬೇರಾವ ಲಾಭವಾಗದಿದ್ದರೂ ಲೀಗ ಮತ್ತು ಜಿನ್ನಾ ಇವರ ಬೆಲೆ ನಿರ್ಣಯಿಸಿ ಕೊಟ್ಟ ಬಗ್ಗೆ ವೆವ್ಹೆಲ-ಯೋಜನೆಯನ್ನು ನಾನು ಮನದಣಿ ಹರಸುವೆನು.

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಕಡೆಗಿರುವ ಅಂಜುಮಾನದ ೨ ಅಂಗಡಿಗಳನ್ನು ಸರಕಾರದವರ ಉಪಯೋಗಕ್ಕೆ ಸ್ವಾಧೀನಪಡಿಸಿಕೊಳ್ಳಬೇಕೆಂದು ಜಿಲ್ಹಾಧಿಪರ ಅಪ್ಪಣೆಯಾಗಿತ್ತಂತೆ. ಮಲ್ಕರು ತನಗೆ ಬೇರೆ ಎಲ್ಲೂ ಅಂಗಡಿ ಸಿಗುವದಿಲ್ಲವೆಂತಲೂ ತನ್ನ ಅಂಗಡಿಯ ಪಕ್ಕದಲ್ಲೇ ಇರುವ ಅಂಗಡಿಯನ್ನಾದರೂ ಕೊಡಿಸಿ ತನ್ನ ಅಂಗಡಿ ಬೇಕಾದರೆ ವಶಪಡಿಸಿಕೊಳ್ಳಬೇಕೆಂತಲೂ ಅಂಗಲಾಚಿ ಬೇಡಿಕೊಂಡರು. ಆದರೂ ಮಾಮಲೇದಾರರು ಕಿವಿಗೊಡದೆ ಅವನ ಅಂಗಡಿಯನ್ನು ಒತ್ತಾಯದಿಂದ ತಮ್ಮ ತಾಬೆ ಕೊಂಡರು. ಡಾ॥ ಬಟ್ಟವಿನಾರಾ ಇವರ ಅಂಗಡಿಯನ್ನು ಇನ್ನೂ ತೆರವು ಮಾಡಿಸಿದ್ದುದಿಲ್ಲ! ಇದರ ಗೂಢವೇನೆಂದು ತಿಳಿಯದು!

ಕಳೆದ ಶನಿವಾರ ಸೇರಿದ ಮ್ಯುನಿಸಿಪಾಲಿಟಿ ಸಭೆಯಲ್ಲಿ ಪಂ॥ ವಾ॥ ಮೋಹಿಯುದ್ದಿನ ಕಾಶಿಮಜಿಯವರ ನಿಧನದ ಬಗ್ಗೆ ದುಃಖಪ್ರದರ್ಶನದ ಗೊತ್ತುವಳಿಯಾಯಿತು. ಮೃತರು ೧೫ ವರ್ಷ ಮ್ಯುನಿಸಿಪಾಲಿಟಿಯ ಸದಸ್ಯರಿದ್ದರಂತೆ

ಕಳೆದ ತಾ. ೨೪ಕ್ಕೆ ಸೇಂಟ್ ಜೋನ್ನ ಇವರ ಹಬ್ಬ (ಫೆಸ್ತ) ವಿತ್ತು. ಆ ಬಗ್ಗೆ ಕ್ರಿಸ್ತೀ ಬಾಂಧವರು ೨ ಅಳವೇಕೋಡಿಯಲ್ಲಿ ಬಹಳಷ್ಟು ಸರಾಯ ತಯಾರಿಸಿದ್ದರು ಆದರೆ ಅದನ್ನು ಹೊನ್ನಾವರದ ಅಬಕಾರಿ ಇನ್ಸಪೆಕ್ಟರ ರಾ॥ ಕೊಡ್ಲೆಕೆರೆ ಮತ್ತು ಇಲ್ಲಿಯ ಸಬ ಇನ್ಸಪೆಕ್ಟರ ರಾ॥ ನಾಯಕರ ಇವರು ಹಬ್ಬದ ಮುಂಚೆಯೇ ಹಿಡಿದುಬಿಟ್ಟಿದ್ದರಿಂದ ಹಬ್ಬವು ಏನೂ ತಂಟೆ-ಧಾಂದಲೆ ಇಲ್ಲದ ಕೊನೆಗಂಡಿತು

ಘಟಕಗಳನ್ನು ದೊಡ್ಡ ಬಂದರವನ್ನಾಗಿ ಮಾರ್ಪಡಿಸಲು ಅನುಕೂಲವಾಗಬೇಕೆಂದು [illegible] ಸರಕಾರದವರು ಆಗ [illegible] ತಮಗೆ [illegible] ಮುಂಬಯಿ [illegible] ಹಿಂದುಸ್ಥಾನ ಸರಕಾರದ [illegible] ದ್ದಾರೆ. [illegible] ಆ ಉಭಯ ಸರಕಾರಗಳ [illegible] ಆಲೋಚನೆ ನಡೆಯುತ್ತಿರುವವೆಂತಲೂ [illegible] ಮೈಸೂರು ಕಾನೂನು-ಮಂಡಳದ-ಸಭೆಯ [illegible] ಪ್ರಶ್ನೋತ್ತರದಿಂದ ತಿಳಿದು ಬಂದಿದೆ.

ಶಿರಶಿ—(ತಾ. ೨೦-೬-೪೫) ಮಹಾವೀರ ಅಕ್ಕಿಯ ಗಿರಣಿಯಲ್ಲಿ ಏನೋ ಅವಘಡವುಂಟಾಗಿ ಎಣ್ಣೆಯ ಟಾಕಿಗೆ ಬೆಂಕಿ ಬಿದ್ದದರಿಂದಲೂ ಬೆಂಕಿಯು ಮೇಲ್ಛಾವಣಿಗೆ ಹಬ್ಬಿದ್ದರಿಂದಲೂ ಅದು ಕೈನಾ[illegible]ಗಿಯೂ, ಗಿರಣಿಗೆ ಬೆಂಕಿ ಬಿದ್ದಾಗ ಗಿರಣಿಯಲ್ಲಿ ಸರ[illegible]ರ ೪೧೦೦ ಚೀಲಗಳಷ್ಟು ಭತ್ತವಿತ್ತೆಂತಲೂ, ಅದರೊಳಗಿಂದ ೩೧೦೦ ಚೀಲ ಭತ್ತ ತಪ್ಪಿಸಲಾಗಿದೆಯೆಂತಲೂ, ಈ ಬಗ್ಗೆ ಪಂಚನಾಮೆಯಾದದ್ದುಂಟೆಂತಲೂ ಯಾರೂ ಏನೂ ಬಚ್ಚಿಟ್ಟಿದ್ದಿಲ್ಲವಾಗಿಯೂ ರಾ॥ ಬಸಪ್ಪಾ ವೀರಭದ್ರಪ್ಪಾ ಸರಶೆಟ್ಟಿಯವರು ತಿಳಿಸುತ್ತಾರೆ.

(ತಾ. ೨೪-೬-೪೫) ಸಿದ್ಧಾಪುರದ ಮಾಮಲೇದಾರ ರಾ॥ ಅಂಚನ್ಲಯವರು ರಜೆಯ ಮೇಲೆ ಹೋಗಿದ್ದಾರೆ. ಅವರು ಕಳೆದ ತಾ. ೨೦ಕ್ಕೆ ತಮ್ಮ ಸಾಮಾನು ತಕ್ಕೊಂಡು ಸಿದ್ಧಾಪುರದಿಂದ ಇಲ್ಲಿ ಬರುತ್ತಿದ್ದಾಗ ಕೆಲವರು ಮ್ಯುನಿಸಿಪಾಲಿಟಿಯ ನಾಕೆಯಲ್ಲಿ ಅವರ ಸಾಮಾನು ನಿಲ್ಲಿಸಿ ಅದರ ತಪಾಸಣೆಯಾಗಬೇಕೆಂದು ನಾಕೆದಾರನಿಗೆ ಒತ್ತಾಯ ಮಾಡಿದರು. ಆ ಸಾಮಾನಿನಲ್ಲಿ ನಿಯಂತ್ರಣಕ್ಕೂ ಅಬಕಾರಿ ಕಾನೂನಿಗೂ ಒಳಪಟ್ಟ ಸರಕುಗಳೇನಾದರೂ ಇರಬಹುದೆಂದು ಆ ಜನರ ತರ್ಕವಿತ್ತು. ಆದರೆ ಮಾಮಲೇದಾರರ ಸಾಮಾನು ತಪಾಸಿಸಲಿಕ್ಕೆ ನಾಕೆದಾರನಿಗೆ ಧೈರ್ಯವೆಲ್ಲಿಂದ ಬರಬೇಕು? ಅವನು ತಪಾಸ ಮಾಡಲಿಲ್ಲ! ಜನರೂ ಬಿಡಲಿಲ್ಲ! ಊರಿಗೆ ಹೋಗಿ ಮೇಲಧಿಕಾರಿಗಳನ್ನು ಕರೆತಂದರು. ಆದರೆ ಅವರೂ ತಪಾಸಣೆ ಮಾಡಲೊಪ್ಪಲಿಲ್ಲ! ಜನರು ಆಗ ಬಿಗಿಹಿಡಿದು ತಪಾಸಣೆಯಾಗದೆ ಸಾಮಾನು ಬಿಡಲಾಗುವದಿಲ್ಲೆಂದು ಸತ್ಯಾಗ್ರಹ ಮಾಡಿದರು! ೨-೩ ದಿನ ಆ ಸಾಮಾನು ನಾಕೆಯ ಮುಂದೆಯೇ ಉಳಿಯಿತು. ಈ ಹೊತ್ತು ಸಂಜೆಯೇನೋ ಆ ಸಾಮಾನಿಗೆ ಮುದ್ರೆ ಹಾಕಿ ಜಂಗಲ ಇಲಾಖೆಯ ಕಚೇರಿಯಲ್ಲಿಟ್ಟಿದ್ದಾರಂತೆ.

ಸಿದ್ಧಾಪುರ— (ತಾ ೨೯-೬-೪೫) ಊರೊಳಗಿನ ಮಾರ್ಗಗಳ ಮೇಲೆ ಹೊಲಸು ರಾಶಿಯಾಗಿ ಬಿದ್ದಿದೆ. ಕಾಲುವೆಗಳನ್ನು ಸ್ವಚ್ಛಗೊಳಿಸುವದಕ್ಕಾಗಿ ಅಲ್ಲಿಯ ಹೊಲಸನ್ನು ಸಹ ಮಾರ್ಗಗಳ ಮೇಲೆ ತೆಗೆದು ಹಾಕಿದ್ದಾರೆ! ಮಳೆಯಿಂದ ಅದು ಕೊಳೆಯುತ್ತ ನಾರುತ್ತಿದೆ! ಆದರೂ ಗ್ರಾಮ ಪಂಚಾಯತಿಯವರು ಈ ಹೊಲಸನ್ನು ತೆಗೆಸುವದಿಲ್ಲ! ಊರಲ್ಲಿ ರೋಗಗಳನ್ನು ತಂದು ಹಾಕಬೇಕೆಂದು ಅವರ ಬಯಕೆಯುಂಟೋ ಏನೋ!

ಕಾರವಾರ— (ತಾ ೨೭-೬-೪೫) ಇಲ್ಲಿಯ ಪ್ರಾಣಿದಯಾ ಸಂಘದವರ ನೇತೃತ್ವದಲ್ಲಿ ಬೇಗನೇ ಇಲ್ಲೊಂದು ಪಶುಚಿಕಿತ್ಸಾಲಯವು ತೆರೆಯಲ್ಪಡುವದು. ಚಿಕಿತ್ಸಾಲಯವನ್ನು ತಾತ್ಕಾಲಕ್ಕೆ ಜೈಲಿನ ಸಮೀಪವಿರುವ ಒಂದು ಇಮಾರತಿನಲ್ಲಿ ತೆರೆಯುವರಂತೆ ಇಲ್ಲಿಯ ಹಾಗೂ ನೆರೆಹೊರೆಯ ಹಳ್ಳಿಗಳ ದನಗಳಿಗೆ ಪುಕ್ಕಟೆಯಾಗಿ ಚಿಕಿತ್ಸೆ ಮಾಡಲಾಗುವದಂತೆ.

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. K.

ANNOUNCEMENT.

The Board of Directors have pleasure to announce that a Branch of the Bank has been opened at SIRSI on Wednesday the 20th June 1945.

COONDAPOOR, 22--6--1945.

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

ಕನ್ನಡ ಜಿಲ್ಲೆ ಖಾದಿಯ ಉದ್ಯೋಗವನ್ನೂ [illegible] ಗಳನ್ನೂ ರಕ್ಷಿಸಿ [illegible] ಕರ್ನಾಟಕದ ಹಾಗೂ [illegible] ಅವಿಶ್ರಾಂತ ಸೇವೆ ಮಾಡುತ್ತಿದ್ದ [illegible] ಶ್ರೀ ಹನುಮಂತರಾವ ಕೌಜಲಗಿಯವರು ಕಳೆದ [illegible] ದೇಗಿ ಅಕಸ್ಮಾತ್ ಹೃತ್ಕ್ರಿಯೆ ನಿಂತು ದಿವಂಗತರಾದ ಸುದ್ದಿಯನ್ನು ಓದುಗರು ಬಲ್ಲರು. ಶ್ರೀ ಕೌಜಲಗಿಯವರ [illegible] ನೆನೆಗೆ ತಕ್ಕ ಸ್ಮಾರಕವನ್ನು ರಚಿಸಿ ಅವರ ಪರಂಪರೆಯನ್ನು ಮುಂದುವರಿಸಬೇಕಾದುದು ಕನ್ನಡಿಗರ ಧರ್ಮವಿರುತ್ತದೆ. ಈ ಬಗ್ಗೆ ವಿಚಾರ ಮಾಡುವದಕ್ಕಾಗಿ ಕರ್ನಾಟಕ ಚರಖಾ ಸಂಘದ ಕಾರ್ಯದರ್ಶಿಗಳಾದ ಶ್ರೀ ವೆಂಕಟ[illegible]ನವರು ಇದೇ ಗುರುವಾರ ಸಂಜೆ ೪ಕ್ಕೆ ಹಳೇ ಹುಬ್ಬಳ್ಳಿಯಲ್ಲಿರುವ ಚರಖಾ ಸಂಘದ ಕಚೇರಿಯಲ್ಲಿ ದಿವಂಗತ ಕೌಜಲಗಿಯವರ ಗೆಳೆಯರ ಹಾಗೂ ಪ್ರಶಂಸಕರ ಸಭೆಯನ್ನು ಕರೆದಿದ್ದಾರೆ. ಸ್ಮಾರಕಕ್ಕೆ ಬೇಕಾಗುವ ನಿಧಿಯನ್ನು ಬರುವ ಗಾಂಧಿ ಜಯಂತಿಯೊಳಗಾಗಿಯೇ ಕೂಡಿಸಬೇಕಾಗಿ ವೆಂಕಟರಾಮಯ್ಯನವರ ಸೂಚನೆಯಿದೆ.

ಹೊನ್ನಾವರ— (ತಾ ೨೭-೬-೪೫) ಗೇರಸೊಪ್ಪೆಯ ಮೋಗ್ಗ ಧಣಿಯು ಅಂಗಡಿಯಲ್ಲಿ [illegible] ಬಹಳಷ್ಟು [illegible] ಟಿಕ ನಡೆಯುವ "ಮಾರುತಿ ಸ್ಟೋರ್ಸ" ಎಂದು [illegible] ಅಂಗಡಿಗೆ ಹೆಸರ ಇಟ್ಟುಕೊಂಡು ಅಂಗಡಿಯವರು ನಡೆಸುವ ಕಳ್ಳತನ [illegible] ಮತ್ತು ಸುಳ್ಳುತನ ನೋಡಿ [illegible] ದೇವರು ಎಷ್ಟು ಸಿಟ್ಟಿಗೆದ್ದವನೋ ಏನೋ! [illegible] ಸರಕು ಬಯ್ಯಲು ಬಂದಾಗ [illegible] ಅಂಗಡಿಯವರಿಗೆ ಎಷ್ಟು ಕೇಳಿದರೂ ಒಪ್ಪಿದರೆ [illegible] ಬಾಕಿ ಸರಕು ಸಿಗುತ್ತದೆ! ಇಲ್ಲ [illegible] ಎಂದು ಅವನನ್ನು ಅಂಗ[illegible] ಬಟ್ಟೆಯು ರಾಟೆಯೂ [illegible] ಬೆಕ್ಕಿಗೆ ಅಕ್ಕಿ [illegible] ಹಾಕಿ, [illegible] ೧೦ ರೂ ಗೆ ೧ [illegible] ವನೆ! ಇಲ್ಲಿ ಬರುವ [illegible] ಪ್ರೋತ್ಸಾಹಿಸುವದಕ್ಕಾಗಿ ಈ ಅಂಗಡಿಗೆ ಪ್ರತಿ [illegible] ಸಿಗುತ್ತದೆ. ಗಾಡಿಕಾರ [illegible] ಕೆಯಿಂದ ೨ ಅಡಿ ಕೊಡಲಿ [illegible] ಅವರಿಗೆ ಅಂಗಡಿಯ [illegible] ಕೊಡುತ್ತಾರೆ? ೨ ಅಡಿಗೆ ಇಷ್ಟೇ [illegible] ಯಾರಾದರೂ ಕೇಳಿದರೆ ಅವನ ಕಂದೀ [illegible] ರಂತೆ!! ಇಂಥಹ ಅಂಗಡಿಗೆ [illegible] ಹೆಸರು ಇಡ ಏನು ಕಾರಣವಿಲ್ಲ ಅದಕ್ಕೆ "[illegible]" ಎಂದು [illegible] ನಾಮಕರಣ ಮಾಡುವದೇ ಉಚಿತ [illegible] ಬಡವರಿಬ್ಬರು ಉದ್ವೇಗಗೊಂಡು [illegible]

[illegible] ಸ್ಟೋರ್ಸ, ಕುಮಟಾ.

[illegible] ವೇ ಇಲ್ಲಿ ಹೊಸದಾಗಿ ಅಂಗಡಿ ತೆರೆದಿದ್ದು [illegible] ಎಲ್ಲ ತರದ ಸ್ಟೇಶನರಿ, ಜನರಲ ಗುಡ್ಸ [illegible] ಉತ್ತಮ ಚಹಾ ಸೊಪ್ಪು [illegible] ಮೊದಲಾದ ಸರ್ವ ಸಾಮಾನುಗಳು ರೋಖ ಮತ್ತು [illegible] ಯೋಗ್ಯ ದರದಿಂದ ಸಿಗುತ್ತವೆ [illegible] ಪರೀಕ್ಷಿಸಿದಲ್ಲಿ ತಾನೇ ಖಾತ್ರಿಯಾಗುವದು

[illegible] 1 4 ಮಾಲಕ

ಭಟಕಳ— (ತಾ. ೨೯-೬-೪೫) [illegible] ಮಂಜು ಮಲ್ಯ ಮತ್ತು ಆರ್ ಎಮ್ [illegible] ಇವರ

(೧ನೇ ಪುಟದ ಮೇಲಿ ಮುಂದರಿಸಿದೆ)

ಜಾಹೀರ ನೋಟೀಸು.

ಶಿರ್ಶಿ ಕಸಬಾದಲ್ಲಿರುವ ಕೃಷ್ಣ ವಾಮನರಾವ ಬಾಳೂರ ಇವರು ಈ ನೋಟೀಸ ಮೂಲಕ ಯಾವತ್ತು ಜನರಿಗೆ ತಿಳಿಸುವದೇನಂದರೆ —

ಶಿರ್ಶಿ ತಾಲೂಕ ಕಾನಗೋಡ ಫಿರ್ಕಾ ಕೆರೆಸುಳ್ಳಿ ಗ್ರಾಮದ ಈ ಕೆಳಗೆ ಕಾಣಿಸಿದ ಆಸ್ತಿ ವ ಮನೆ ಇವುಗಳನ್ನು ನನಗೆ ಅಸ್ಸಾಳ ಮಾಲಿಕರಾದ ಶಂಕರನಾರಾಯಣ ಮಹಾಬಲೇಶ್ವರ ಭಟ್ಟ ಯಲಗಾರ ಸಾ॥ ಕೆರೆಸುಳ್ಳಿ ಇವರು ತಾ 23 6-1945ನೇ ದಿವಸ ನನ್ನಲ್ಲಿ ಆದ ಸಾಕ್ಷಿ ನಂತರ ರೂಪಾಯಿ ೮೦೦-೦ ಕ್ಕೆ ಖಂಡಿತ ಕ್ರಯಕ್ಕೆ ಕೊಟ್ಟು ದಸ್ತೈವಜು ಕೂಡ ಬರಕೊಟ್ಟಿರುತ್ತಾರೆ. ಆದರೆ ಸದರಿ ದಸ್ತೈವಜು ಇನ್ನೂ ರಿಜಿಸ್ಟ್ರ ಆದದ್ದು ಇರುವದಿಲ್ಲ. ಸದರಿ ಶಂಕರನಾರಾಯಣ ಭಟ್ಟರು ಇದರ ಫಾಯದೆ ತೆಗೆದುಕೊಂಡು ಬೇರೆಯವರಿಗೆ ಸರಂಧೀನ ಮಾಡುವವರಿದ್ದಾರೆಂಬ ತಿಳುವಳಿಕೆ ಬಂದಿರುತ್ತದೆ. ಕಾರಣ ಈ ನೋಟೀಸು ಕೊಟ್ಟ ನಂತರ ಸದರಿ ಆಸ್ತಿ ವ ಮನೆಯನ್ನು ಯಾರಾದರೂ ಸದರಿಯವರಿಂದ ಅಡವು ಕ್ರಯ, ಗೇಣಿ ವಗೈರೆ ಯಾವದೇ ವಿಧದಿಂದ ಪಡಕೊಂಡಲ್ಲಿ ಅದು ನನ್ನ ವಿರುದ್ಧ ಬಾಧಿಸಲಾರದು ತಿಳಿಯುವದು

ನಾನು ಕ್ರಯಕ್ಕೆ ಪಡಕೊಂಡ ಕೆರೆಸುಳ್ಳಿ ಗ್ರಾಮದ ಆಸ್ತಿಯ ತಪಶೀಲು —

ಸರ್ವೇ ನಂಬರ	ಕ್ಷೇತ್ರ	ಆಕಾರ
43	0 13—0	5—0—0
56	0—9—0	3—0—0
125	1—4—0	2—8—0
131	0 -1-10	0 -1—0
133/2	0—3 -4	0—2—0
137	0-15—0	1—0—0
152	0—5—6	0—4—0

ಮತ್ತು ಕೆರೆಸುಳ್ಳಿ ಗ್ರಾಮದೊಳಗಿರುವ ಬಟ್ಟೂರ ಅಂಕಣದ, ಹಂಚಿನಿಂದ ಇರುವಂಥ, ಸೋಗೆ ಹಾವಣಿಯ ವಾಸ್ತವ್ಯದ ಮನೆ, ಉಪಗೃಹಗಳು ಇವುಗಳ ಅಡಿಸ್ಥಳ ಹಿತ್ತಲು ಸಹಿತ ಈ ಪ್ರಕಾರ ಆಸ್ತಿ ಅದೆ

ಶಿರ್ಶಿ, ತಾ 23-6 1945

K V Balur.

ಹೊನ್ನಾವರ ಹವ್ಯಕ ಕೋ-ಓಪರೇಟಿವ್ಹ ಬೇಂಕ, ಲಿಮಿಟೆಡ್.

ನೋಟೀಸು.

ಈ ಬೇಂಕಿನ ಯಾವತ್ತು ಮೆಂಬರರಿಗೆ ತಿಳಿಸುವದೇನಂದರೆ ಹೊನ್ನಾವರ ತಾಲೂಕ (ಭಟಕಳ ಸಹಿತ) ಹವ್ಯಕ ಸಹಕಾರಿ ಬೇಂಕಿನ ೧೯೪೫—೧೯೪೬ನೇ ವರ್ಷದ ಮೆನೇಜಿಂಗ ಕಮಿಟಿಯ [illegible] ಚುನಾವಣೆ ಪದ್ಧತಿಯಂತೆ, ಇದೇ ಬರುವ ತಾರೀಖ ೧೬-೭-೧೯೪೫ನೇದಿಗೆ ಬೇಂಕಿನ [illegible] ೧೦ ಘಂಟೆಯಿಂದ ಮಧ್ಯಾಹ್ನ ೧೨ ಘಂಟೆಯ ವರೆಗೆ ಮತ್ತು ಮಧ್ಯಾಹ್ನ ೩ ಘಂಟೆಯಿಂದ [illegible] ೬ ಘಂಟೆಯ ವರೆಗೆ ನಡೆಯುವದು. [illegible] ವಾರ್ಷಿಕ ಮಹಾಸಭೆಯು ಅದೇ ಮುಂದಿನ ತಾರೀಖು ೨೨-೭-೧೯೪೫ನೇ ರವಿವಾರ ದಿವಸ ಹೊನ್ನಾವರ ಶ್ರೀ ಶಾರದಾಂಬಾ ದೇವಾಲಯದಲ್ಲಿ ಮಧ್ಯಾಹ್ನ ೩ ಘಂಟೆಗೆ [illegible] ನಡೆಯುತ್ತದೆ. ಬೇಂಕಿನ ಕಮಿಟಿಯ ಚುನಾವಣೆಯ ಬಗ್ಗೆ ಉಮೇದವಾರಿ ಅರ್ಜ ಕೊಡುವ ವಗೈರೆ [illegible] ಗಳನ್ನು ಬೇಂಕಿನ ಆಫೀಸಿನಲ್ಲಿ ಪ್ರಸಿದ್ಧಪಡಿಸಿದ ನೋಟೀಸಿನಿಂದ ತಿಳಕೊಳ್ಳಬಹುದು. ಕಾರಣ ಬೇಂಕಿನ ಸಭಾಸದರು [illegible] ಮೇಲೆ ಸದರಿ ಬೇಂಕಿನ ಆಫೀಸಿಗೆ ಅವಶ್ಯ ಬರಬೇಕಾಗಿ ವಿನಂತಿ

ವಾರ್ಷಿಕ ಮಹಾಸಭೆಯ ಕಾರ್ಯಕ್ರಮ.

೧ ೧೯೪೪ ೪೫ನೇ ಸಾಲಿನ ಅಢಾವೆ ಮಂಜೂರ ಮಾಡುವದು,

೨ [illegible] ಮೆಮೋ ವ ಮೇಲಾಧಿಕಾರಿಗಳಿಂದ ಬಂದ ಪತ್ರಗಳನ್ನು ಪರಿಶೀಲಿಸುವದು,

೩ ಬರೂ ವರ್ಷದ ಬಗ್ಗೆ ಹಿಶೋಬ ತಪಾಸಣೆದಾರರನ್ನು ನೇಮಿಸುವದು ಮತ್ತು ಅವರ ಪಗಾರ ವಗೈರೆ ನಿರ್ಣಯಿಸುವದು,

೪ ಈ ಸಾಲಿನ ಲಾಭ ಹಂಚುವದು,

೫ ಅಧ್ಯಕ್ಷರ ಪರವಾನಗಿಯಿಂದ ಸೂಚಿಸಿದ ಇತರೇ ವಿಷಯಗಳ ವಿಚಾರ

ಹೊನ್ನಾವರ
ತಾ ೧ ೭ ೧೯೪೫

P G KARKI,
Chairman The Honavar Havyak Co operative Bank Ltd

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ **ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು** ಕೊಂಡುಕೊಳ್ಳಿರಿ
ಇಂದಿನ ರೂ ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತಿದೆ !
ಚಿನ್ನ ಬೆಳ್ಳಿ ರತ್ನಾದಿಗಳಲ್ಲಿ ಮನೆ-ಮಠಗಳಲ್ಲಿ ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ ಸರ್ಟಿಫಿಕೇಟಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ವರೆಗೆ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

WANTED Matriculates or S L C holders for 2 temporary clerical posts in the District Local Board Kanara Pay Rs 30 p m plus D A Rs 11 p m Applications should reach the U/s by 15th July 194[illegible]

Karwar **A. C. KITTUR,**
29 6 45 President D L B Kanara

ಇದನ್ನು ಪಾಂಡುರಂಗ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ ಸ್ವಂತ ಆರ್ಯ ಕೇಸರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧ ೦
" ೬ ತಿಂಗಳಿಗೆ ೧ ೧೦ ೦
ಬಿಡಿ ಸಂಚಿಕೆಗೆ ೦ ೦-೯
ಹಳೇ ಸಂಚಿಕೆಗೆ ೦-೪ ೦
ವ್ಹಿ ಪಿ ಯಿಂದ ಹಣ ತರುವವರು
ವ್ಹಿ ಪಿ ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B 1270 Monday, 9th July, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೨.

ಕುಮಟಾ - ಸೋಮವಾರ, ತಾ ೯ ಮಾಹೆ ಜುಲೈ, ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ
ಸ್ಮಾಲ್ ಪ್ಯಾಕಾ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಅಲ್ಲದೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು

ಜಪಾನ ಯುದ್ಧದ ಕಷ್ಟ.

(ನಿರೀಕ್ಷಕನು ಬರೆದುದು)

ಈಗೊಂದು ತಿಂಗಳಿಂದ ನಾನು ಯುದ್ಧ-ನಿರೀಕ್ಷಣೆಯನ್ನು ಮಾಡಿಲ್ಲ. ಅದರ ಮೇಲಿಂದ ಆ ಯುದ್ಧ ನಿಂತಿರುವದೆಂದಾಗಲಿ, ಅದರ ಪ್ರಗತಿ ಕುಂಠಿತವಾಗಿದೆಯೆಂದಾಗಲಿ ಯಾರೂ ತಿಳಿಯಕೂಡದು. ಬ್ರಿಟನದಲ್ಲಿ ಪಾರ್ಲಿಮೆಂಟಿನ ಚುನಾವಣೆಯು ಅಭೂತಪೂರ್ವ ಕೋಲಾಹಲ ನಡೆಯುತ್ತಿದ್ದರೂ, ಚರ್ಚಿಲ್ಲ ಪ್ರಭೃತಿಗಳ ಸಂಪೂರ್ಣ ಲಕ್ಷವೀಗ ಆ ಚುನಾವಣೆಗಳ ಕಡೆಗೇ ವೇಧಿಸಲ್ಪಟ್ಟಿದ್ದರೂ ಮಿತ್ರಪಕ್ಷದ ಸೈನಿಕರೂ ನಾವಿಕರೂ ವೈಮಾನಿಕರೂ ಆಗ್ನೇಯ ಏಶಿಯಾದಲ್ಲೂ ಶಾಂತಸಾಗರದಲ್ಲೂ ತಮ್ಮ ಯುದ್ಧ-ಚಟುವಟಿಕೆಗಳಲ್ಲಿ ಎಳ್ಳಷ್ಟು ಅಜಾಗ್ರತೆ ಇಲ್ಲವೆ ಮಾಂದ್ಯ ತೋರ್ಪಡಿಸಿರುವದಿಲ್ಲ. ಬ್ರಿಟಿಶ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಒಂದೊಮ್ಮೆ ಪ್ರಧಾನಮಂತ್ರಿ ಚರ್ಚಿಲ್ಲರ ಪುರಾಣಮತವಾದಿ ಯಾನೆ ಬಂಡವಲಗಾರರ ಪಕ್ಷವು ಸೋತು — ಜರ್ಮನ ಯುದ್ಧ ಗೆದ್ದ ಪುಣ್ಯವೂ ಪರಾಕ್ರಮವೂ ಚರ್ಚಿಲ್ಲರ ಬೆಂಬಿನಲ್ಲಿದ್ದಾಗ್ಯೂ ಅವರು ವಿಲಾಯಿತಿಯ ಜನ-ಸಾಮಾನ್ಯರಲ್ಲಿ ಲೋಕಪ್ರಿಯತೆಯನ್ನೀಗ ಕಳಕೊಂಡಿರುವದರಿಂದ ಅವರ ಪಕ್ಷ ಚುನಾವಣೆಯಲ್ಲಿ ಗೆಲ್ಲಲಿಕ್ಕಿಲ್ಲವಾಗಿ ಇತ್ತೀಚೆಗೆ ಬಂದ ಚುನಾವಣೆ ವಾರ್ತೆಗಳ ಮೇಲಿಂದ ತೋರುತ್ತಿದೆ - ಕಾಮಗಾರ ಪಕ್ಷವು ಅಧಿಕಾರಾರೂಢವಾದರೂ ಜಪಾನರ ವಿರುದ್ಧ ನಡೆದಿರುವ ಯುದ್ಧದ ಕ್ರಮದಲ್ಲಾಗಲಿ, ಘೋರತೆಯಲ್ಲಾಗಲಿ ತೀವ್ರತೆಯಲ್ಲಾಗಲಿ ಏನೊಂದೂ ವ್ಯತ್ಯಾಸವಾಗುವಂತಿಲ್ಲ. ಆದರಿಂದ ಮಿತ್ರ ಸೇನಾಪತಿಗಳು ಬ್ರಿಟಿಶ ಚುನಾವಣೆಯ ಫಲಿತಾಂಶದ ಕಡೆಗೆ ಲಕ್ಷಗೊಡದೆ ಒಕ್ಕೊರಲಿಂದ ತಮ್ಮ ಕಾರ್ಯ ಸಾಗಿಸಿದ್ದಾರೆ. ಬ್ರಹ್ಮದೇಶವು ಹೆಚ್ಚುಕಡಿಮೆ ಸಂಪೂರ್ಣವಾಗಿ ಮಿತ್ರರ ಕೈಸೇರಿದೆ. ಫಿಲಿಪ್ಪೈನ ನಡುಗಡ್ಡೆಗಳು ಪೂರ್ಣವಾಗಿ ಮಿತ್ರರ ವಶವಾಗಿವೆ. ಓಕಿನಾವಾದಲ್ಲಿ ಜಪಾನರು ಪೂರ್ಣ ಸೋತಿದ್ದಾರೆ. ಬೋರ್ನಿಯೋದಿಂದಲೂ ಜಪಾನರು ಹೊರಗಟ್ಟಲ್ಪಡುವ ಪರಿಸ್ಥಿತಿಗೆ ಮುಟ್ಟಿದ್ದಾರೆ. ಅಮೇರಿಕೆಯ ಆಕಾಶದುರ್ಗಗಳಂತೂ ಜಪಾನದ ನಗರಗಳನ್ನೂ ಬಂದರಗಳನ್ನೂ ಕಾರಖಾನೆಗಳನ್ನೂ ನೆಲಸಮ ಮಾಡುವ ಉದ್ಯೋಗ ನಡಿಸಿವೆ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ, ಪ್ರತಿಯೊಂದು ಮಾರ್ಗದಲ್ಲಿ ಮಿತ್ರರ ಕೈ ಮೇಲುಂಟು. ಜಪಾನಿಗಳ ಪರಾಕ್ರಮದ ವಾರ್ತೆಗಳೇ ಕೇಳಬರುವದಿಲ್ಲ. ಆದರಿಂದ ಜಪಾನರು ಹತಬಲ, ಹತಾಶರಾಗಿರಬೇಕೆಂದು ಒಮ್ಮೊಮ್ಮೆ ವಿಚಾರತರಂಗಗಳು ಮನಸ್ಸಿನಲ್ಲಿ ಎದ್ದೇಳುತ್ತವೆ, ಮತ್ತು ಜಪಾನರು ಶಾಂತಿಯಾಚನೆ ಮಾಡುತ್ತಿದ್ದಾರೆಂದು ಬರುತ್ತಿರುವ ಸುದ್ದಿಗಳನ್ನು ನಂಬಲು ಮನಸ್ಸು ಎಳಸುತ್ತದೆ. ಆದರೆ ಬ್ರಿಟಿಶರ ೧೪ನೇ ದಂಡಿನ ಸೇನಾಪತಿಗಳಾದ ಸರ್ ವಿಲಿಯಮ್ ಜೊಸೆಫ್ ಸ್ಲಿಮ್ ಇವರು ಕಳೆದ ಗುರುವಾರ ರ್ಯೂಟರ ವಾರ್ತಾ ಸಂಸ್ಥೆಯ ವಿಶೇಷ ಸುದ್ದಿಗಾರನಿಗೆ ಕೊಟ್ಟ ಸಂದರ್ಶನದಲ್ಲಿ ಜಪಾನರು ಶಾಂತಿಯಾಚನೆ ಮಾಡಲಾರರೆಂತಲೂ ಕೊನೆಯ ತನಕ ಹೋರಾಡುವರೆಂತಲೂ ಸ್ಪಷ್ಟ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. "It is very unwise to calculate on any thing less than a fight to death & all our preparations for war with Japan must be made on this basis (ಮರಣಾಂತಿಕ ಯುದ್ಧವನ್ನು ನಾವು ಹೋರಾಡಬೇಕಾಗುವದೆಂದು ಎಣಿಸದಿದ್ದರೆ ಮೂರ್ಖತನವಾದೀತು, ಇಂಥ ಎಣಿಕೆ ಮಾಡಿಕೊಂಡೇ ನಾವು ಜಪಾನಯುದ್ಧದ ಸಿದ್ಧತೆಗಳನ್ನು ಮಾಡಬೇಕು) ಎಂದು ಅವರು ಸ್ವಾನುಭವದಿಂದ ಹೇಳುತ್ತಾರೆ. ಆದರೂ ಈ ಹೋರಾಟದ ಸ್ವರೂಪವನ್ನು ರಶ್ಯರು ಬದಲಿಸಬಲ್ಲರು. ಪೂರ್ವಾರ್ಣವದ ಯುದ್ಧದ ಸಂಬಂಧದಲ್ಲಿ ರಶ್ಯರ ಭೂಮಿಕೆಯೇನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇತ್ತೀಚೆಗೆ ಅವರು ಚೀನದ ರಾಜಕಾರಣದಲ್ಲಿ ಕೈಹಾಕಿದ್ದಾರೆ. ಚೀನದ ಮುಖ್ಯ ಮಂತ್ರಿಗಳಾದ ಡಾ॥ ಸೂಂಗರವರು ಈಗ ಮಾಸ್ಕೋದಲ್ಲಿದ್ದಾರೆ. ಚೀನವು ರಶ್ಯರ ಪ್ರಭುತ್ವಕ್ಕೆ ಒಳಪಡುವದಾಗಿ ಹೇಳುತ್ತಾರೆ. ಅದೇನಿದ್ದರೂ ಸ್ಟೆಲಿನ-ಟ್ರೂಮನ-ಚರ್ಚಿಲ್ಲ ತ್ರಿಮೂರ್ತಿಗಳ ಭೆಟ್ಟಿಯಾದನಂತರ ಯಾವದೂ ತಿಳಿಯಾಗುವಂತಿಲ್ಲ. ಈ ತ್ರಿಮೂರ್ತಿಗಳು ಇದೇ ತಿಂಗಳ ಕೊನೆಗೆ ಬರ್ಲಿನದಲ್ಲಿ ಕೂಡಲಿದ್ದು ಅದರಲ್ಲಿ ಏನೇನು ನಿರ್ಣಯವಾಗುತ್ತವೆಂದು ನಾವು ನಿರೀಕ್ಷಿಸುತ್ತಿರುವಾ

(೨ನೇ ಪುಟದಿಂದ ಮುಂದುವರಿದದ್ದು)

ಸೀಧಾ ಇನ್ಸಪೆಕ್ಟರ ಮಿ॥ ಆದಮ ಸಾಹೇಬ ಮತ್ತು ರಾ॥ ನವಾಬ ಕೃಷ್ಣ ಪ್ರಭು ಇವರ ಸಂಬಂಧದಲ್ಲಿ ತಾ ೧೬-೬-೧೯೪೫ರ "ವೃತ್ತ"ದಲ್ಲಿ ಪ್ರಕಟವಾದ ಕಥೆ ಬೇರೆ ವಿಷಯ ಸತ್ಯವಿರುತ್ತದೆಂದು ಓರ್ವ ಗಿರಾಯಿಕರು ತಿಳಿಸುತ್ತಾರೆ. ರಾ॥ ಪ್ರಭುಗಳವರು ತಮ್ಮ ಅಂಗಡಿಯಲ್ಲಿ ತಿಂಡಿ ಕೊಂಡುಕೊಳ್ಳುವವರಿಗಷ್ಟೇ ಚಹಾ ಕೊಡುತ್ತೇವೆಂದು ಹೇಳುತ್ತಾರೆ, ಚಹಾ ಮಾತ್ರ ಬೇಡಿದರೆ ಸಕ್ಕರೆ ಇಲ್ಲೆಂದು ನೆವ ಹೇಳುತ್ತಾರೆ ಎಂಬ ಮುಂತಾಗಿ ಸೀಧಾ ಕಚೇರಿಯವರ ಕಡೆ ದೂರು ಬಂದಿತ್ತು. ಅದರ ಸತ್ಯತ್ವ ಒರೆಗಲ್ಲಿಗೆ ಹಚ್ಚುವದಕ್ಕಾಗಿ ಮಿ॥ ಆದಮರು ೧೫ ಸಿಂಗಲ ಚಹಾ ಬೇಡಿದ್ದರು. ರಾ॥ ಪ್ರಭುರವರ ನೌಕರನು ಇತರರಿಗೆ ಹೇಳುವ ನೆವ ಹೇಳದೆ, ಅಂಗಡಿಯಲ್ಲಿ ಯಾರೂ ಇಲ್ಲದ ನೆವ ಹೇಳಿ ಶಿಪಾಯಿಗೆ ತಿರುಗಿ ಕಳಿಸಿಕೊಟ್ಟನು. ಆಗ ಮಿ॥ ಆದಮರು ಅಂಗಡಿಗೆ ಹೋಗಿ ಸಕ್ಕರೆಯ ಶಿಲ್ಕು ಎಷ್ಟುಂಟೆಂದು ನೋಡಿ ಸಕ್ಕರೆ ಶಿಲ್ಕು ಇರುವ ವರೆಗೆ ಚಹಾ ಕೊಡಲಾಗುವದಿಲ್ಲವಾಗಿ ಯಾರಿಗೂ ಹೇಳಿದರೆ ಖಟ್ಲೆ ಮಾಡಿಕೊಡಲಾಗುವದೆಂದು ಬೆದರಿಕೆ ಹಾಕಿದ್ದು ನಿಜ. ಆ ನೌಕರನಾದರೂ ಇನ್ನು ಮುಂದೆ ಕಳ್ಳತನ ಮಾಡುವದಿಲ್ಲವಾಗಿ ಹೇಳಿ ಪ್ರಕರಣ ಮುಗಿಸಿಕೊಂಡನು. ನಿಜವಾಗಿ ನಡೆದ ಕಥೆ ಇಂತಿರುತ್ತದೆಂದು ಗಿರಾಯಿಕರ ಅಂಬೋಣ.

ಶಿರ್ಸಿ— (ತಾ ೫-೭-೪೫) ರಾ॥ ಅಂಬ್ಲೇ ನಾಮಲೇದಾರರ ಸಂಬಂಧ ಕಳೆದ ವಾರದಲ್ಲಿ ಮುದ್ರೆ ಹಾಕಿ ಇಟ್ಟ ಸಂಘಾನಿನ ತಪಾಸಣೆ ಸನ್ಮಾ॥ ಅಂಬ್ಲೇಯವರ ಸಮಕ್ಷ ನಡೆಯಿತು. ೧೬ ಪೆಟ್ಟಿಗೆಗಳ ಪೈಕಿ ೧೦ ಪೆಟ್ಟಿಗೆಗಳಲ್ಲಿ ಆಕ್ಷೇಪಾರ್ಹ ಸಾಮಾನೇನೂ ಇದ್ದಿಲ್ಲ. ಅವನ್ನು ಬಿಟ್ಟುಕೊಡಲಾಗಿದೆ. ಇನ್ನುಳಿದ ೬ ಪೆಟ್ಟಿಗೆಗಳಲ್ಲಿ ೩। ಮಣ ಗಂಧದ ಕಟ್ಟಿಗೆ, ೨ ಮಣ ಅಡಿಕೆ, ೪ ರತ್ತಲ ಕ್ವಿನ್ಯಾನ ಗುಳಿಗೆಗಳು, ೪ ರತ್ತಲ ಪೊಟೆಶಿಯಮ ಪರಮಾಂಗನೇಟ, ೩ ಬಾಟ್ಲಿ ಮೈಸೂರ ಸ್ಪಿರಿಟ, ೪೯ ಕೋವಿ ಗುಂಡುಗಳು ಮತ್ತು ಆಕ್ಷೇಪಾರ್ಹ ಸಾಮಾನುಗಳು ಸಿಕ್ಕಿದವು. ಇವುಗಳ ಹೊರತು ಕಚೇರಿಯ ಉಪಯೋಗಕ್ಕೆ ಕೊಟ್ಟ ಸರಕಾರಿ ಕಾಗದ, ಫಾರ್ಮುಗಳು, ಬಾಳು ಕತ್ತರಿ ಮತ್ತು ಬರಹಕ್ಕೆ ಸ್ಟೇಶನರಿ ಸಿಕ್ಕಿರುವದಂತೆ. ಅವನ್ನೆಲ್ಲ ಪಂಚನಾಮೆ ಮಾಡಿ ಜಪ್ತ ಮಾಡಿಟ್ಟಿದ್ದಾರೆ. ಗಂಧದ ಕಟ್ಟಿಗೆಯ ಬಗ್ಗೆ ಜಂಗಲ ಇಲಾಖೆಯವರೂ, ಅಡಿಕೆಯ ಬಗ್ಗೆ ಕೇಂದ್ರ ಸರಕಾರದ ಎಕ್ಸೈಜ ಖಾತೆಯವರೂ ಸ್ಪಿರಿಟ ಇದ್ದ ಬಗ್ಗೆ ಆಬಕಾರಿ ಇಲಾಖೆಯವರೂ ರಾ॥ ಅಂಬ್ಲೇಯವರ ಮೇಲೆ ಖಟ್ಲೆ ಹಾಕುವವರೆಂದು ತಿಳಿಯುತ್ತದೆ. ಸರಕಾರಿ ಸ್ಟೇಶನರಿಯ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳ ನಿರ್ಣಯ ಏನಾಗುತ್ತದೆಂದು ನೋಡಬೇಕು. ಪಂಚನಾಮೆಯ ಕಾಲಕ್ಕೆ ಹಾಜರ ಇದ್ದ ಇಲ್ಲಿಯ ಸೀಧಾ ಅಧಿಕಾರಿಗಳು ಈ ಸ್ಟೇಶನರಿಯನ್ನು ಪಂಚನಾಮೆಯಲ್ಲಿ ಕಾಣಿಸುವದು ಬೇಡೆಂದು ಬಹಳವಾಗಿ ವಾದಿಸಿದರು! ಅದೇಕೋ ತಿಳಿಯದು!!

ಇಲ್ಲಿಯ ಶ್ರೀ ಮಾರಿಕಾಂಬಾ ಹೈಸ್ಕೂಲಿನ ಬ್ರಾಹ್ಮಣ ಶಿಕ್ಷಕರೋರ್ವರು ಕೆಲವು ಕಾಲದ ಹಿಂದೆ ಇಲ್ಲಿಯ ಸೀಧಾ ಕಚೇರಿಯಲ್ಲಿ ಕಾರಕೂನಿಯ ಕೆಲಸ ಮಾಡುತ್ತಿದ್ದ ಕಣ್ವಮಠ ಜಾತಿಯ ಕನ್ನಿಕೆಯೊಡನೆ ಪ್ರೇಮ-ವಿವಾಹ (ರಜಿಸ್ಟರ) ಮಾಡಿಕೊಂಡಿದ್ದರು. ನಗರ ಸಭೆಯ ಸದಸ್ಯರೂ ಊರೊಳಗಿನ ಕೆಲವು ಪ್ರತಿಷ್ಠಿತರೂ ಅವರನ್ನು ಈ ಸಾಮಾಜಿಕ ಸುಧಾರಣೆಯ ಸಾಹಸವನ್ನು ಮಾಡಿದ್ದಕ್ಕಾಗಿ ಆಗ ಹೊಗಳಿದ್ದರು! ಮುಂದೆ ಏನಾಯಿತೋ ಏನೋ! ಆ ಶಿಕ್ಷಕರನ್ನು ಈಗ ಶಾಲೆಯಿಂದ ಸೇವಾನಿವೃತ್ತಗೊಳಿಸಿದ್ದಾರೆ. ೨೦-೨೨ ವರ್ಷ ನೌಕರಿ ಮಾಡಿದ ಅನುಭವಿಕ ಶಿಕ್ಷಕರು ಈ ಸಲ ಶಾಲೆ ಬಿಟ್ಟುಹೋದ್ದರಿಂದ ಶಾಲೆಯ ಕೆಲಸಕ್ಕೆ ಹಾನಿಯಾಗುವದೆಂದು ಕೆಲವರು ದೂರುತ್ತಾರೆ.

ಯಲ್ಲಾಪುರ— (ತಾ ೭-೭-೪೫) ಮಳೆ ವಿಪರೀತ! ಆದರಿಂದ ಬತ್ತಗಳಿಗೂ ನೆಟ್ಟಿಗೂ ಅಡ್ಡಿಯಾಗಿದೆ.

ತಗಾವಿ ಬೇಡಿದವರಿಗೆ ಇನ್ನೂ ಹಣ ಸಿಕ್ಕಿಲ್ಲ! ಹಬ್ಬ ತೀರಿದ ಮೇಲೆ ಹೋಳಿಗೆಯ ಪ್ರಯೋಜನವೇನು?

ಜಿ. ಲೋ. ಬೋರ್ಡಿಗೆ ಈ ತಾಲೂಕಿನಿಂದ ಒಬ್ಬರನ್ನು ಆರಿಸತಕ್ಕದ್ದು. ಆ ಒಂದು ಆಸನಕ್ಕೆ ಮೊದಲು ೫ ಮಂದಿ ಹುರಿಯಾಳುಗಳಾಗಿದ್ದರು. ಹಿಂದಿನಿಂದ ಇಬ್ಬರು ತಮ್ಮ ಉಮೇದವಾರಿ ಹಿಂತೆಗೆದುಕೊಂಡರು. ಉಳಿದ ಮೂವರಲ್ಲಿ ಪೈಪೋಟಿಯಾಯಿತು. ಚುನಾವಣೆಯ ದಿನ ೭೪೫ ಜನರು ಮತ ಕೊಟ್ಟರು. ನಿನ್ನೆಯ ಎಣಿಕೆಯಲ್ಲಿ ರಾ॥ ಗಣಪತಿ ಕೃಷ್ಣ ಗಾಂವಕಾರ ಕಿಲಂಗಾರ ಇವರಿಗೆ ೪೯೦ ಮತಗಳು ಬಿದ್ದದ್ದು ಕಂಡುಬಂತು. ಶಿರ್ಸಿಯ ವಕೀಲ ರಾ॥ ಗಂಗೊಳ್ಳಿಯವರಿಗೆ ಸಂದಾಯದ ಮತಗಳ ಅಷ್ಟಮಾಂಶಕ್ಕಿಂತ ಕಡಿಮೆ (ಒಟ್ಟು ೮೮) ಮತಗಳು ಬಿದ್ದದ್ದರಿಂದ ಅವರ ಠೇವು ಸರಕಾರ ಜಮಾ ಆಗುವದು.

ಅಂಕೋಲಾ— (ತಾ ೭-೭-೪೫) ಜಿ॥ ಲೋ॥ ಬೋರ್ಡ ಚುನಾವಣೆಯಲ್ಲಿ ರಾ॥ ಸುಬ್ರಾಯ ವಿಟ್ಠಲ ಪ್ರಭು ಶಿರೂರ, ವೆಂಕಟೇಶ ದೇವಪ್ಪ ನಾಯಕ ಮತ್ತು ಹಾರಾಮ ನಾಯ್ಕ ಇವರು ಯಶಸ್ವಿಯಾಗಿ ಆರಿಸಿ ಬಂದಿದ್ದಾರೆ.

ಹಿಂದೆ ಈ ಊರಲ್ಲಿ ನೆರೆಹೊರೆಯ ೬೦೦ ಹಳ್ಳಿಗಳಿಗೂ ಕಾಡಿ ಸಕ್ಕರೆ ಮತ್ತು ಚಿಮಣಿ ಎಣ್ಣೆ ಹಂಚಿಕೊಡುವದಕ್ಕಾಗಿ ೨೫ ಅಂಗಡಿಗಳಿಗೆ ಪರವಾನೆ ಕೊಟ್ಟಿತ್ತು. ಅದರಿಂದ ಜನರಿಗೆ ತೊಂದರೆಯಿಲ್ಲದೆ ಸೀಧಾ ಸಿಗುತ್ತಿತ್ತು. ಆದರೂ ಮಾಮಲೇದಾರರು ಈ ತಿಂಗಳ ಪ್ರಾರಂಭಕ್ಕೆ ಆ ಎಲ್ಲ ಅಂಗಡಿಗಳ ಪರವಾನೆಗಳನ್ನು ರದ್ದುಗೊಳಿಸಿ ಆ ಎಲ್ಲ ಮಾಲ್ಕರನ್ನು ಸದ್ಯಕ್ಕೆ ಸ್ಥಾಪಿತವಾದ ಬಹುರೂಪಿ (ಮಲ್ಟಿ ಪರ್ಪಜ) ಸಂಘಕ್ಕೆ ಕೊಟ್ಟಿದ್ದಾರೆ! ಶಹರದವರೂ ಸುತ್ತು-ಮುತ್ತಲಿನ ೬೦೦ ಹಳ್ಳಿಗಳ ಜನರೂ ತಮ್ಮ ಎಣ್ಣೆ ಸಕ್ಕರೆಗಳನ್ನು ಈ ಸಂಘದ ಅಂಗಡಿಯಿಂದಲೇ ಒಯ್ಯಬೇಕು! ದಿನಾಲು ಅಂಗಡಿಯ ಮುಂದೆ ನೂರು ಗಟ್ಟಲೆ ಹೆಂಗಸರು, ಮಕ್ಕಳು, ಗಂಡಸರು ಕೂಡುತ್ತಾರೆ! ಬಹಳ ಗದ್ದಲವಾಗುತ್ತದೆ! ನಾ ಮುಂದೆ, ನೀ ಮುಂದೆ ಎಂಬ ಬಂದೋಬಸ್ತು ತಪ್ಪಿದವಾಗಿ ನುಗ್ಗಾಟ ಎಳೆದಾಟಗಳಾಗುತ್ತವೆ! ಹೊಡೆದಾಟ ಬಡಿದಾಟಗಳಾಗುವ ಸಂಭವವೂ ಉಂಟು. ಬಹುರೂಪಿ ಸಂಘದ ಪುರಸ್ಕರ್ತರು ಮಾಮಲೇದಾರರ ಪರಮ ಸ್ನೇಹಿತರಿರುತ್ತಿದ್ದರೂ ಅವರಿಂದ ಅಂಗಡಿಯ ಮುಂದಿನ ಗೊಂದಲ ನಿಲ್ಲಿಸಲಿಕ್ಕೆ ಆಗುವಂತಿಲ್ಲೆಂಬ ಮಾತನ್ನು ಮಾಮಲೇದಾರರು ಅರಿಯರೇ?

ಕಾರವಾರ— (ತಾ ೭-೭-೪೫) ಜಿ॥ ಬೋ॥ ಚುನಾವಣೆಯಲ್ಲಿ ರಾ॥ ಶಿವನಾಯ್ಕ ಮಾಜಾಳಿ, ಸುಬ್ಬಕೇಶವ ಗಾಯತೊಂಡೆ, ದತ್ತಾ ಸುಬ್ಬನಾಯ್ಕ ಮತ್ತು ಸ್ತ್ರೀಯರಿಗಾಗಿ ಕಾದಿಟ್ಟ ಆಸನಕ್ಕೆ ಸೌ॥ ಬಾಯಜಾಬಾಯಿ ನಾಯ್ಕ ಇವರು ಆರಿಸಿ ಬಂದಿದ್ದಾರೆ.

The Agricultural & Industrial Bank, Ltd.
(Incorporated in British India, Liability of Members limited)
Head Office COONDAPOOR. S. K

ANNOUNCEMENT.
The Board of Directors have pleasure to announce that a Branch of the Bank has been opened at SIRSI on Wednesday the 20th June 1945.

COONDAPOOR,
22-6-1945

K VAMAN SHENAI
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಗುರುವಾರ ರಾತ್ರಿ [illegible] ಸಾವಂದಿನಿಂದ ಗಾಳಿ ಬಹಳ [illegible] ಈ ತರಹ [illegible] ಆಗಿರಬೇಕು

[illegible] ಶುಕ್ರವಾರ ಮಧ್ಯಾಹ್ನ ನಡೆದು, "ವೃತ್ತ"ದ ಸುದ್ದಿಗಾರರು [illegible] ಕಂಡು ಬಂತು. ತಾಲೂಕಿನ ಉತ್ತರ ಭಾಗದಿಂದ [illegible] ವೆಂಕಟರಮಣ [illegible] ಮತ್ತು ಮುಪ್ಪು [illegible] ದಕ್ಷಿಣ ಭಾಗ [illegible] ಉತ್ತರ ಭಾಗದಲ್ಲಿ [illegible] ದಕ್ಷಿಣ ಭಾಗದಲ್ಲಿ [illegible] ಮತಗಳನ್ನು [illegible] ಅವರಿಗೆ ಬಿದ್ದ [illegible]

[illegible]

[illegible]

[illegible]

ದೇವರಿಗೆ [illegible]

The Karwar Urban Cooperative Bank, Ltd , Karwar

WANTED A SECRETARY.

A competent & experienced person for the post of the Secretary of the Bank *Only qualified men*, i e those who have passed B Com or G D A or any other equally well recognised & approved Accountancy test need apply with copies of testimonials of previous service & if any certificates regarding age examinations etc. The person selected will have to execute a surety ship bond to the extent of Rs 5000 The cadre of pay for a qualified person is 75—5 2 -100 exclusive of dearness allowance with the benefit of Staff Provident Fund Scheme Apply sharp enquiring for further particulars, if necessary, to the undersigned

Karwar
7—7—45

D S. NAIK,
CHAIRMAN

ಡಾ ಸಂಘಕ್ಕೆ ಕೊಡಬೇಕಾಗಿದೆ. ಈ ಸಂಘದವರು ಬಡವರಿಗೆ ದಹಿಸುತ್ತಾರೆಂತಲೂ ಕಳ್ಳಪೇಟೆ ವಹಿವಾಟು ನಡೆಸುತ್ತಾರೆಂತಲೂ ಕಡೆಗೋಡಿಯುವವರೊಬ್ಬರು ದೂರುತ್ತಾರೆ. ಸಕ್ಕರೆಯು ಸೀಧಾ ಕೊಳ್ಳಬಂದವರಿಗೆ ಸಂಜೆ ಬಾ, ನಾಳೆ ಬಾ ಎಂದು ಹೇಳುತ್ತಾರಂತೆ! ಸಂಘದವರ ಹತ್ತಿರ ಹಾಳಾದ ಚಹಾ ಸೊಪ್ಪು ಉಂಟಂತೆ. ಅದನ್ನು ಹೇಗಾದರೂ ಮಾರಿ ಹಣ ಮಾಡಬೇಕಾಗಿದೆ! ಅದರಿಂದ ಸಕ್ಕರೆ ಬೇಕಾದವರು ಚಹಾ ಸೊಪ್ಪು ಕೊಂಡುಕೊಳ್ಳಬೇಕೆಂದು ಅಂಗಡಿಯವರು ನಿಗ್ರಹಿಸುತ್ತಾರಂತೆ! ಸೀಧಾ ಚೀಟಿಯುಳ್ಳ ಎಷ್ಟೋ ಜನರಿಗೆ ಈಗ ಎರಡು ತಿಂಗಳಿಂದ ಸಕ್ಕರೆಯನ್ನೇ ಕೊಟ್ಟಿಲ್ಲವಂತೆ! ಅಕ್ಕಿಯ ಬಟವಡೆಯಲ್ಲೂ ಕಾರಸ್ಥಾನ! ಸಂಘದ ಸದಸ್ಯರಿಗೆ ಕೊಡುವ ಅಕ್ಕಿಯು ನಮೂನೆ ಒಂದಾದರೆ ಇತರೇ ಜನರಿಗೆ ಕೊಡುವ ಅಕ್ಕಿಯು ನಮೂನೆ ಬೇರೆ! ಒಮ್ಮೊಮ್ಮೆ ಕುಚ್ಚಿಗೆ ಅಕ್ಕಿ ಬೇಡಿದರೆ ಬೆಳ್ತಿಗೆ ಅಕ್ಕಿ ಕೊಡುತ್ತಾರೆ! ಬೆಳ್ತಿಗೆ ಅಕ್ಕಿ ಬೇಕಾದವರಿಗೆ ಕುಚ್ಚಿಗೆ ಅಕ್ಕಿ ಒಯ್ಯಿರಿ ಹೇಳುತ್ತಾರೆ! ಅಂಗಡಿಯಲ್ಲಿ ಹತ್ತಿಕಾಳು ಉಂಟು. ಅದು ಎಲ್ಲರಿಗೂ ಸಿಗುವದಿಲ್ಲ! ಹೂಡುವ ಎತ್ತುಗಳಿಗೆ ಹತ್ತಿಕಾಳು ಹಾಕುವದು ಇಲ್ಲಿಯ ಒಕ್ಕಲಿಗರ ರೂಢಿ ಅವರಿಗೆ ಹತ್ತಿಕಾಳು ಸಿಗುವದಿಲ್ಲ! ಅಂಗಡಿಯವರ ಕೃಪೆ ಸಂಪಾದಿಸಿದ ಪುಣ್ಯಶಾಲಿಗಳಿಗಷ್ಟೇ ಅದು ಸಿಗುತ್ತಿದೆ! ಅಂಗಡಿಯವರ ನೇಮಗಳೂ ಜನರಿಗೆ ಕಷ್ಟ ಕೊಡುತ್ತವೆ. ಜನರಿಗೆ ಅವರು ಎಲ್ಲ ಸೀಧಾ ಸಾಮಗ್ರಿಯನ್ನು ಒಂದೇ ದಿನ ಕೊಡುವದಿಲ್ಲ, ಸಕ್ಕರೆ ಬಟವಡೆಗೆ ಒಂದು ದಿನ, ಅಕ್ಕಿ-ಬಟವಡೆಗೆ ಇನ್ನೊಂದು ದಿನ, ಚಿಮಣಿ ಎಣ್ಣೆಗೆ ಮಗದೊಂದು ದಿನ, ಇನ್ನಿತರ ಸರಕುಗಳಿಗೆ ಬೇರೊಂದು ದಿನ ಹೀಗೆ ದಿನ ನೇಮಕವಾಗಿದ್ದರೆ! ಇದರಿಂದ ಸೀಧಾಸಾಮಗ್ರಿ ಪಡೆಯುವದೇ ಜನರಿಗೆ ಒಂದು ಉದ್ಯೋಗವಾಗಿದೆ! ಬೇರೆ ಉದ್ಯೋಗಕ್ಕೆ ಹೋಗತಕ್ಕವರಿಗೆ ಅನುಕೂಲವಾಗುವದಿಲ್ಲ! ಇನ್ನೂ ಒಂದು ನಿಯಮವುಂಟು. ಸೀಧಾ ಪಡೆಯಲು ಸೀಧಾ ಚೀಟಿಯಲ್ಲಿ ನಮೂದ ಇರುವ ಮನೆಯ ಯಜಮಾನನೇ ಅಂಗಡಿಗೆ ಬರಬೇಕು! ವಯೋವೃದ್ಧನಾದ್ದರಿಂದ, ಮೈಯಲ್ಲಿ ನೆಟ್ಟಗಿಲ್ಲದ್ದರಿಂದ, ಕಾರ್ಯಾರ್ಥಿಯಾಗಿ ಬೇರೂರಿಗೆ ಹೋದ್ದರಿಂದ ಇಲ್ಲವೆ ಬೇರಾವ ಕಾರಣದಿಂದ ಸೀಧಾ ಚೀಟಿಯಲ್ಲಿ ನಿರ್ದಿಷ್ಟವಿರುವ ವ್ಯಕ್ತಿಗೆ ಅಂಗಡಿಗೆ ಬರಲಾಗದಿದ್ದರೆ ಆ ಚೀಟಿಯ ಸೀಧಾ ಅಂಗಡಿಯವರು ಕೊಡುವದಿಲ್ಲ! ಅಧಿಕಾರಿಗಳು ಸೂಕ್ಷ್ಮ ಚೌಕಸಿ ಮಾಡಿ ಅಂಗಡಿಯವರಿಂದ ಜನರಿಗಾಗುವ ತೊಂದರೆಗಳನ್ನು ಪರಿಹರಿಸಬೇಕೆಂದು ದೂರುಗಾರರ ಬಿನ್ನಹವಿದೆ.

ಹೊನ್ನಾವರ—(ತಾ ೬-೭-೪೫) ಗೇರಸಪ್ಪೆಯ ಮಾರುತಿಸೊಸೈಟಿಅಂಗಡಿಯಲ್ಲಿ ಏನೇನೂ ಕಳ್ಳತನವಿಲ್ಲವಾಗಿ ಅಂಗಡಿಯವರು ಶ್ರೀ ಮಾರುತಿಯ ಭಕ್ತನಾಗಿ ತಿಳಿಸುತ್ತಾರೆ. ಸೀಧಾ-ಚೀಟಿಗಳಲ್ಲಿ ನಮೂದ ಇದ್ದಷ್ಟು ಸಾಮಾನು ತೊಂದರೆಯಿಲ್ಲದೆ ಸರಿಯಾಗಿ ಎಲ್ಲ ಜನರಿಗೆ ಸಿಗುತ್ತದೆಂದು ತಿಳಿಯಪಡಿಸುವ ಬೇರೊಂದು ಪತ್ರವೂ ಬಂದಿದೆ. ಅದಕ್ಕೆ ೪೬ ಜನರ ಸಹಿಗಳುಂಟು. ಅಂಗಡಿಯ ವ್ಯವಹಾರದಿಂದ ತಮ್ಮ ಕಳ್ಳ ವ್ಯಾಪಾರಕ್ಕೆ ತಡೆ ಬಿದ್ದದರಿಂದ ನೊಂದುಕೊಂಡವರ್‍ಯಾರೋ "ಈರ್ಷೆ ಬರವರ" ಕಣ್ಣಯಿಂದ "ವೃತ್ತ"ಕ್ಕೆ ಸುಳ್ಳು ವರದಿ ಕೊಡಿಸಿರಬೇಕೆಂದು ಅವರು ಹೇಳುತ್ತಾರೆ.

ಕಳೆದ ಸೋಮವಾರ ಇಡಗುಂಜಿಯಲ್ಲಿ ಶ್ರೀ ಶಿವರಾಮ ಹೆಗಡೆಯವರ ನೇತೃತ್ವದಲ್ಲಿ ಜರಾಸಂಧವಧೆಯೆಂಬ ಯಕ್ಷಗಾನ ಆಟವಾಯಿತು. ಆಟ ಬಹಳ ಸೊಗಸಾಗಿತ್ತು.

(ತಾ ೮-೭-೪೫) ಮಳೆಗಿಂತ ಗಾಳಿಯೇ ಹೆಚ್ಚು ಹೊಳೆಗೆ ನೆರೆ ಕಟ್ಟಿದೆ.

ಹತ್ತಿಕಾಳು ಈಗ ಸಿಗಹತ್ತಿದೆ ದರ ಚೀಲ ೧ಕ್ಕೆ ರೂ ೧೫! ಅದೂ ತಿಂಗಳಿಗೆ ೧ ಚೀಲಕ್ಕಿಂತ ಹೆಚ್ಚಿಗೆ ಸಿಗುವದಿಲ್ಲ! ಎಲ್ಲ ಹೆಚ್ಚುಳ್ಳವರು ಕಳ್ಳ ಪೇಟೆಗೆ ಹೋಗಬೇಕಂತೆ!

ಎಲೆ-ಅಡಿಕೆ ವ್ಯಾಪಾರಿಗಳ ಕಷ್ಟ ಇನ್ನು ನೀಗಿಲ್ಲ. ಹಣ್ಣು ಅಡಿಕೆ ನೋಡಿದ ಕೂಡಲೇ ಪೋಲೀಸರು ಬಂದು ಜಪ್ತ ಮಾಡುತ್ತಾರೆ! ಅಡಿಕೆ ಬೆಳೆದವರು ೧೦೦-೨೦೦ ಅಡಿಕೆ ತಂದರೂ ೪ ಆಣೆ ಸುಂಕ ಕೊಡಬೇಕಂತೆ!

ಬಹುತೇಕ ಎಲ್ಲ ಹಳ್ಳಿ, ಸೀಧಾ ಅಂಗಡಿಗಳೊಳಗೆ ಸಕ್ಕರೆ, ಕಲ್ಲೆಣ್ಣೆ ಸಂಬಂಧದಲ್ಲಿ ಕಳ್ಳಪೇಟೆ ನಡೆಯುತ್ತಿದೆ. ಈ ಎರಡು ಸರಕುಗಳನ್ನು ನಿಯಂತ್ರಿತ ದರದಿಂದಲೇ ಮಾರಿದರೆ ೧ ಪೈ ಸಹ ಲಾಭವುಳಿಯುವದಿಲ್ಲವಂತೆ, ಸರಕು ಒಯ್ಯುವ ಖರ್ಚು ಅಂಗಡಿಯವರ ಮೈಮೇಲೆ ಬೀಳುತ್ತದೆಯಂತೆ! ಅದು ಒಂದು ವೇಳೆ ನಿಜವಿದ್ದಲ್ಲಿ ಧಾರಣೆಗಳನ್ನು ಸರಿಪಡಿಸಿ ಕೊಟ್ಟು ಎಲ್ಲರಿಗೂ ಸರಿಯಾಗಿ ಮತ್ತು ಕಷ್ಟವಿಲ್ಲದೆ ಸಕ್ಕರೆ ಎಣ್ಣೆಗಳು ಸಿಗುವಂತೆ ಜಿಲ್ಲಾಧಿಪರು ವ್ಯವಸ್ಥೆ ಮಾಡಬೇಕಾಗಿ ಸೂಚನೆಯಿದೆ.

ಭಟಕಳ— (೬-೭-೪೫) ತಮ್ಮ ಸಂಬಳ ಏರಿಸಿಕೊಡಬೇಕಾಗಿ ನಗರ ಸಭೆಯ ಭಂಗಿ ನೌಕರರು ೨ ದಿನಗಳಿಂದ ಕೆಲಸ ಬಿಟ್ಟು ಮಾಡಿ ಕೂತಿರುತ್ತಾರೆ. ಅದರಿಂದ ಮಾರ್ಗಗಳಲ್ಲಿ ಹೊಲಸು ರಾಶಿಯಾಗಿ ಬಿದ್ದಿದೆ. ನಗರ ಸಭೆಯವರು ಬಡ ನೌಕರರನ್ನು ಸೌಹಾರ್ದದಿಂದ ನಡೆಸಬಾರದೇ?

೨-೩ ವರ್ಷಗಳ ಹಿಂದೆ ನಗರ ಸಭೆಯವರು ಹಂಗಾಮಿಯಾಗಿ ಕೆಲವು ತೆರಿಗೆಗಳನ್ನು ಏರಿಸಿದ್ದರು ಅದರ ಬಗ್ಗೆ ಜನರು ದೂರುತ್ತಿದ್ದರು ಆದರೂ ಈಗ ಪುನಃ ತೆರಿಗೆ ಏರಿಸುವ ಆಲೋಚನೆ ನಡೆದಿದೆ!

(೧ನೇ ಪುಟದ ಮೇಲೆ ಮುಂದರಿಸಿದೆ)

ಆಭಾರಮನ್ನಣೆ.

ಮೊನ್ನೆ ಜರುಗಿದ ಜಿಲ್ಲಾ ಲೋಕಲ್ ಬೋರ್ಡಿನ ಚುನಾವಣೆಯಲ್ಲಿ ನನ್ನನ್ನು ಬಹುಮತದಿಂದ ಆರಿಸಿಕೊಟ್ಟ ಮತದಾರರಿಗೂ ಸಹಾಯ ಮಾಡಿದ ಗೆಳೆಯರಿಗೂ ನಾ ಚಿರಋಣಿಯಾಗಿದ್ದೇನೆ ಇನ್ನು ಮುಂದೆ ಜನಸೇವೆ ಮಾಡುವಲ್ಲಿಯೂ ನನಗೆ ಸಕಲರೂ ಪ್ರೇಮದಿಂದ ಸಹಕಾರ ನೀಡುವರೆಂದು ಆಶಿಸುತ್ತೇನೆ ತಾ ೬-೭-೧೯೪೫.

ಸೀತಾರಾಮ ಗಣಪತ ಭಾಗವತ, ಕುಮಟಾ

ನೋಟೀಸು.

ಸನ್ 1945ನೇ ಇಸವಿಯ ಜೂನ ತಿಂಗಳ ಬಾಬ್ತು
ತಾ. 30-6-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು.

ಪ್ರೊವ್ಹಿನ್ಶಿಯಾಲ್ ಟೆಕ್ಸ್ಟೈಲ್ ಕಂಟ್ರೋಲರ, ಕಾಳಾ ಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller, Opposite Kalachowki Post Office Parel Road, Bombay) ಇವರಿಗೆ ನೂಲಿನ ಮಾರಾಟದ ಲಾಯಸನ್ಸದಾರರಿಂದ ಮೇಲೆ ನಮೂದಿಸಿದ ಮಾಹಿತಿಯು ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ ತಾ 5—7—1915 ನೇದರೊಳಗಾಗಿ ತಪ್ಪದೇ ಮುಟ್ಟತಕ್ಕದ್ದಿರುತ್ತದೆ ಮೇಲ್ಕಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ ನದಾರ ಮಾಹಿತಿಯನ್ನು ರವಾನಿಸತಕ್ಕದ್ದು [illegible] ನೂಲಿನ ಮಾರಾಟದ ಯಾವತ್ತೂ ಲಾಯಸನ್ಸದಾರರು ಸದರಿ ಮಾಹಿತಿಯನ್ನೂ ಮುದ್ದತ್ತಿನೊಳಗೆ ತಪ್ಪದೇ ಮುಟ್ಟುವಂತೆ ರವಾನಿಸಬೇಕು

Bombay
30 -6 - 1915

J K. THAKORE,
Provincial Textile Controller, Bombay

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಇದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತಿದೆ !
ಚಿನ್ನ ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು!
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ. ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ-ಸಮಿತಿಯ ಪ್ರಕಟನೆ]

ಇದನ್ನು ಪಾಂಡುರಂಗ ಕೃಷ್ಣ ಕಾನಡ್ಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲ ದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತರಬೇಕು
ವರ್ಗಣಿ ಮುಂಗಡ ಕಳಿಸಿಕೊಳ್ಳುವದು

Reg. No. B. 1270. Monday, 16th July, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೩.

ಕುಮಟಾ:- ಸೋಮವಾರ, ತಾ. ೧೬ ಮಾಹೆ ಜುಲೈ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲ್ ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ನಿಶ್ಚಿತ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಸಿಮಲಾ ಪರಿಷತ್ತಿನ ದುರಂತ!

(ನಿರೀಕ್ಷಕನು ಬರೆದುದು)

ವೆವ್ಹೆಲ್ ದೊರೆಗಳ ಯೋಜನೆಯಿಂದ ಸ್ವರಾಜ್ಯ-ಸ್ವಾತಂತ್ರ್ಯಗಳ ಅಂಶ ಸಹ ದೊರೆಯದಿದ್ದಾಗ್ಯೂ ಆ ಯೋಜನೆಯಂತೆ ಕೇಂದ್ರದಲ್ಲಿ ನಿಜವಾದ ಲೋಕಪ್ರತಿನಿಧಿಗಳಿಂದೊಡಗೂಡಿದ ರಾಷ್ಟ್ರೀಯ ಸರಕಾರವು ರಚಿತವಾದಲ್ಲಿ ರಾಷ್ಟ್ರವು ನೆಟ್ಟಗೆ ಸ್ವಾತಂತ್ರ್ಯದ ಮಾರ್ಗ ತುಳಿಯುತ್ತ ಮುಂದೆ ಹೋಗಬಹುದೆಂಬ ಅಪೇಕ್ಷೆಯಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳವೂ ರಾಷ್ಟ್ರದೊಳಗಿನ ಅನೇಕ ಸಂಘ-ಸಂಸ್ಥೆ, ಪಕ್ಷ-ಪಂಗಡಗಳೂ ಆ ಯೋಜನೆಯನ್ನು ಸ್ವಾಗತಿಸಿ, ಅದನ್ನು ಕಾರ್ಯಕಾರಿ ಮಾಡಲು ಒಪ್ಪಿಕೊಂಡಿದ್ದವು ಅದರಂತೆ ಕೇಂದ್ರದಲ್ಲಿ ಬೇಗನೆ ರಾಷ್ಟ್ರೀಯ ಸರಕಾರ ಅಸ್ತಿತ್ವದಲ್ಲಿ ಬರುವದೆಂದೂ, ದೇಶದೊಳಗೆ ಈವಾಗ ಎಲ್ಲೆಲ್ಲೂ ಹಬ್ಬಿಕೊಂಡಿರುವ ಲಂಚಗೋರತನವೂ ಹೊಣೆಗಾರಿಕೆಯಿಲ್ಲದ ಅಧಿಕಾರವೂ ಕೊನೆಗೊಂಡು ಜನಸಾಮಾನ್ಯರಿಗೆ ಕೆಲಮಟ್ಟಿಗಾದರೂ ಕ್ಷೇಮವಾಗುವದೆಂದೂ ಭಾರತೀಯರು ಆಶಾಭರಿತರಾಗಿದ್ದರು ಕೊಂಗ್ರೆಸ್ಸಿನ ಮುಂದಾಳುಗಳು ಅಧಿಕಾರಾರೂಢರಾದಲ್ಲಿ ತಮಗೆ ಉಳಿಗಾಲವಿಲ್ಲೆಂದು ಭಯಭೀತರಾದ ಲಂಚಗೋರರು, ಕೊಂಗ್ರೆಸ್ಸಿಗರಿಗೂ ಜನಸಾಮಾನ್ಯರಿಗೂ ಬಗೆಬಗೆಯ ಪೀಡನೆ ಕೊಟ್ಟು ಅಧಿಕಾರವನ್ನೂ ಪ್ರತಿಷ್ಠೆಯನ್ನೂ ಪಡೆಕೊಂಡಂಥ ದುಃಶೀಲರು, ಕಪ್ಪು-ಪೇಟೆಯ ವರ್ತಕ-ವ್ಯವಹಾರಕರು, ಲೋಕಪ್ರತಿನಿಧಿಗಳು ಅಧಿಕಾರ ವಹಿಸಲು ಮುಂದಾದಲ್ಲಿ ಅಧಿಕಾರ-ಪದ-ಭ್ರಷ್ಟರಾಗಬಹುದಾದ ಜನರು ಮತ್ತು ಕೊಂಗ್ರೆಸ್ಸನ್ನು ವ್ಯಕ್ತಿಶಃ ಇಲ್ಲವೆ ಅದರ ವಿರುದ್ಧ ಅಪ-ಪ್ರಚಾರ ಮಾಡಿದ್ದಕ್ಕೆ ಈಗಿನ ಸರಕಾರದಿಂದ ಅಂತರಂಗವಾಗಿಯೂ ಬಹಿರಂಗವಾಗಿಯೂ ಹೇರಳ ಹಣ ಪಡಕೊಂಡು ಯಥೇಚ್ಛ ಚೈನಿ ಮಾಡುತ್ತಿದ್ದ ದುರಾತ್ಮರು ಮಾತ್ರ ವೇವ್ಹೆಲ-ಯೋಜನೆಯು ಮುರಿದುಹೋಗಲೆಂದು ಪ್ರಾರ್ಥನೆ ನಡಿಸಿದ್ದರು. ದೊರೆಗಳ ಯೋಜನೆಯನ್ನು ಕೆಡಿಸುತ್ತಿದ್ದ ಈ ದೆವ್ವಗಳ ಪ್ರಾರ್ಥನೆಯೇ ಕೊನೆಗೆ ಸಫಲವಾಗಿ, ಕೋಟ್ಯಾವಧಿ ಹಿಂದೀಯರ ಆಶೆಯು ವಿಫಲವಾಯಿತೆಂದು ನಮೂದಿಸಲು ನನಗೆ ಅತ್ಯಂತ ವ್ಯಸನವಾಗುತ್ತಿದೆ ನಾನು ಈ ಹಿಂದೆ ತಿಳಿಸಿದಂತೆ, ಸಿಮಲಾ ಪರಿಷತ್ತಿನಲ್ಲಿ ಸೇರಿದ ಬೇರೆ ಬೇರೆ ಪಕ್ಷಗಳು ಸರ್ವಾಧಿಪತಿಗಳ ಕಾರ್ಯಕಾರಿ ಮಂಡಳಕ್ಕೆ ಆರಿಸಲ್ಪಡಬೇಕೆಂದು ಬಯಸುವ ಜನರ ಯಾದಿಗಳನ್ನು ಒಪ್ಪಿಸುವ ಕೊನೆಯ ದಿನ ಆಚೆಯ ಶುಕ್ರವಾರವಿತ್ತು ಅದರಂತೆ ರಾಷ್ಟ್ರಪತಿ ಮೌಲಾನಾ ಆಝಾದರವರು ಸಿಮ್ಲಾದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವನ್ನು ಸೇರಿಸಿ, ಅದರ ಆಲೋಚನೆಯನ್ನೂ ಕಾರ್ಯಕಾರಿ ಮಂಡಳದ ಹೊರಗಿನ ಕೊಂಗ್ರೆಸ ಮುಖಂಡರ ಸೂಚನೆಗಳನ್ನೂ ಮಹಾತ್ಮಾಜಿಯವರ ಸಲಹೆಯನ್ನೂ ಪಡೆಕೊಂಡು ೧೫ ಜನರದೊಂದು ಯಾದಿಯೊಂದನ್ನು ತಯಾರಿಸಿ ಸರ್ವಾಧಿಪತಿಗಳಿಗೆ ಒಪ್ಪಿಸಿದ್ದರು. ಆ ಪಟ್ಟಿಯು ಅಧಿಕೃತವಾಗಿ ಹೊರಬಿದ್ದಿಲ್ಲವಾದರೂ ಚಾಣಾಕ್ಷ ಪತ್ರಿಕಾ-ಪ್ರತಿನಿಧಿಗಳು ಆ ಪಟ್ಟಿಯಲ್ಲಿ (೧) ಮೌಲಾನಾ ಅಬುಲ ಕಲಂ ಆಝಾದ, (೨) ಪಂ॥ ಜವಾಹರಲಾಲ, (೩) ಸರದಾರ ವಲ್ಲಭಭಾಯಿ ಪಟೇಲ, (೪) ಡಾ॥ ರಾಜೇಂದ್ರ ಪ್ರಸಾದ, (೫) ಮಿ॥ ಅಸಫ್ ಅಲ್ಲಿ, (೬) ಡಾ॥ ಶ್ಯಾಮಪ್ರಸಾದ ಮುಕರ್ಜಿ (ಹಿಂದು ಮಹಾಸಭೆಯ ಈಗಿನ ಅಧ್ಯಕ್ಷರು), (೭) ಸರ್ ಚಿಂತಾಮಣ ದೇಶಮುಖ (ರಿಝರ್ವ ಬೇಂಕಿನ ಓವರ ಗವ್ಹರ್ನರರಾಗಿದ್ದಾರೆ), (೮) ಮಿ॥ ಜಿನ್ನಾ, (೯) ನವಾಬಜಾದಾ ಲಿಯಾಕತ ಅಲೀಖಾನ, (೧೦) ನವಾಬ ಮಹಮ್ಮದ ಇಸ್ಮಾಯಿಲಖಾನ, (೧೧) ಮಾಸ್ಟರ ತಾರಾಸಿಂಗ (ಶೀಖ), (೧೨) ಸರ್ ಅರ್ದೇಶಿರ ದಲಾಲ (ಪಾರಸಿ), (೧೩) ಶ್ರೀ॥ ಮುನುಸ್ವಾಮಿ ಪಿಳ್ಳೆ (ಹರಿಜನ), (೧೪) ಶ್ರೀ॥ ಬಿ. ಮಂಡಲ್ (ಹರಿಜನ) ಮತ್ತು (೧೫) ರಾಜಕುಮಾರಿ ಅಮೃತಕೌವರ (ಹಿಂದೀ ಕ್ರಿಶ್ಚನ ಸ್ತ್ರೀ) ಈ ಹೆಸರುಗಳಿದ್ದವೆಂದು ತಿಳಿಸಿದ್ದಾರೆ ಈ ಪಟ್ಟಿಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಎಲ್ಲ ಪಕ್ಷ-ಲಿಗಗಳ ಹಿತಸಂಬಂಧಗಳಿಗೂ ಸರಿಯಾದ ಮತ್ತು ನ್ಯಾಯ್ಯವಾದ ಪ್ರಾತಿನಿಧ್ಯ ಕೊಟ್ಟಿದೆಯೆಂದು ಅವಿಕೃತ ಬುದ್ಧಿಯುಳ್ಳ ಯಾವಾತನೂ ಒಪ್ಪುವನು ಈ ಪಟ್ಟಿಯನ್ನು ಪೃಥಕ್ಕರಿಸಿದಲ್ಲಿ ಅದರಲ್ಲಿ ೩ ಕೊಂಗ್ರೆಸ ಮತ್ತು ೨ ಕೊಂಗ್ರೆಸೇತರ ಹೀಗೆ ೫ " ಸವರ್ಣ ಹಿಂದು "ಗಳೂ, ೩ ಮುಸ್ಲೀಮ ಲೀಗಿನವರು ಮತ್ತು ೨ ಲೀಗೇತರರು (ರಾಷ್ಟ್ರೀಯ) ಹೀಗೆ ೫ ಮುಸಲ್ಮಾನರೂ, ೨ ಅಸ್ಪೃಶ್ಯ ಸಮಾಜದ ಪ್ರತಿನಿಧಿಗಳು, ೧ ಶೀಖ, ೧ ಪಾರ್ಸಿ ಮತ್ತು ೧ ಕ್ರಿಶ್ಚನ್ನ ಹೀಗೆ ೫ ಮಂದಿ ಪ್ರಮುಖ ಅಲ್ಪಸಂಖ್ಯಾಕ ಸಮಾಜಗಳ ಪ್ರತಿನಿಧಿಗಳೂ ಇದ್ದುದು ಕಂಡುಬರುತ್ತದೆ. ಸ್ತ್ರೀಯರಿಗೂ ಒಂದು ಸ್ಥಳ ಕೊಡಲಾಗಿತ್ತು. ಬೇರೆ ಪಕ್ಷದವರೂ - ಅಂದರೆ (೧) ಹರಿಜನ ಪ್ರತಿನಿಧಿ ರಾ॥ ಬ॥ ಶಿವರಾಜ, (೨) ರಾಷ್ಟ್ರೀಯ ಪಕ್ಷದ ಡಾ॥ ಬಾನರ್ಜಿ, (೩) ಪಂಜಾಬ ಯುನಿಯನಿಸ್ಟ ಪಕ್ಷದ ಮಲಿಕ ಖಿಜರ ಹಯಾತಖಾನ ಮತ್ತು (೪) ಶೀಖರ ಮುಖಂಡ ಮಾಸ್ಟರ ತಾರಾಸಿಂಗ ಇವರೂ ತಮ್ಮ ತಮ್ಮ ಯಾದಿಗಳನ್ನು ಒಪ್ಪಿಸಿದರು. ಯುರೋಪಿಯನ್ನ ಪಕ್ಷದ ಪ್ರತಿನಿಧಿಯೂ ಮುಸ್ಲೀಮ ಲೀಗ ಪಕ್ಷದ ಮಿ॥ ಜಿನ್ನಾರವರೂ ತಮ್ಮ ಯಾದಿಗಳನ್ನು ಒಪ್ಪಿಸಲಿಲ್ಲ. ಹೊಸ ಕಾರ್ಯಕಾರಿ ಮಂಡಳ ಅಸ್ತಿತ್ವದಲ್ಲಿ ಬರುವದಾದರೆ ಅದರಲ್ಲಿ ಯುರೋಪಿಯನ್ನರಿಗೆ ಸ್ಥಳವಿಲ್ಲದ್ದರಿಂದ ತಾವು ತಮ್ಮ ಪ್ರತಿನಿಧಿಗಳನ್ನು ಸೂಚಿಸುವದೇ ಉಳಿದಿರುವದಿಲ್ಲೆಂದು ಯುರೋಪಿಯನ್ನರ ಪ್ರತಿನಿಧಿಯ ಅಂಬೋಣ. ಅದು ಯಥಾರ್ಥವಿದೆ ಮುಸ್ಲಿಮ ಲೀಗಿನವರ ಅಂಬೋಣ ಮಾತ್ರ ಬೇರೆ! ಎಲ್ಲ ಮುಸಲ್ಮಾನರನ್ನು ಆರಿಸುವ ಹಕ್ಕು ಲೀಗಿದ್ದೇ ಎಂದು ಜಿನ್ನಾರವರ ಹಟ! ಮುಸ್ಲೀಮ ಲೀಗನ್ನು ಮನ್ನಿಸದಿರುವ ಕೋಟಿಗಟ್ಟಲೆ ಮುಸಲ್ಮಾನರು ಹಿಂದುಸ್ಥಾನದಲ್ಲಿದ್ದಾರೆ, ಪಂಜಾಬದಲ್ಲೂ ಗಡಿನಾಡಿನಲ್ಲೂ ಲೀಗಪಕ್ಷದ ವಂಗೆ ಕೇಳುವವರಿಲ್ಲ; ಮುಸಲ್ಮಾನರ ಬಹುಸಂಖ್ಯೆಯುಳ್ಳ ಸಿಂಧ, ಆಸಾಮ, ಬಂಗಾಲ ಪ್ರಾಂತಗಳಲ್ಲೂ ಮುಸ್ಲಿಮಲೀಗ ಪಕ್ಷಕ್ಕೆ ತನ್ನ ಕಾಲ ಮೇಲೆ ನಿಲ್ಲುವಷ್ಟು ಶಕ್ತಿಯಿಲ್ಲ, ಎಂದು ಎಷ್ಟೇ ಪ್ರಬಲ ಪುರಾವೆ ಕೊಟ್ಟಾಗ್ಯೂ ಭಾರತದೊಳಗಿನ ಸಮಸ್ತ ಮಹಮ್ಮದೀಯರ ಪ್ರತಿನಿಧಿ ಲೀಗೇ ಎಂದು ಮಿ॥ ಜಿನ್ನಾರವರ ವಿತಂಡವಾದ! ವೆವ್ಹೆಲ ದೊರೆಗಳಿಗೂ ಈ ವಾದ ಒಪ್ಪಿಗೆಯಾಗಲಿಲ್ಲ! ರಾಷ್ಟ್ರೀಯ ಮುಸಲ್ಮಾನರಿಗೆ ಒಂದುವೇಳೆ ಸ್ಥಳಕೊಡದಿದ್ದರೂ ಅಡ್ಡಿಯಿಲ್ಲ, ಪಂಜಾಬದ ಯುನಿಯನಿಸ್ಟ ಪಕ್ಷದ ಮುಸಲ್ಮಾನರಿಗೆ ೧ ಮುಸಲ್ಮಾನ ಸ್ಥಾನ ಕೊಡುವದು ನ್ಯಾಯ್ಯ ಮತ್ತು ಅವಶ್ಯವಿರುತ್ತದೆಂದು ದೊರೆಗಳು ಪ್ರತಿಪಾದಿಸಿದಾಗ್ಯೂ ಜಿನ್ನಾರವರು " ತಾನು ಹಿಡಿದ ಮೊಲಕ್ಕೆ ಮೂರೇ ಕಾಲ್ "ಎಂಬ ಹಟ ಬಿಟ್ಟುಗೊಡಲೊಪ್ಪಲಿಲ್ಲ! ಮತ್ತು, ಕೊನೆಯ ವರೆಗೂ ತಮ್ಮ ಪಟ್ಟಿಯನ್ನು ಒಪ್ಪಿಸಲಿಲ್ಲ! ಆದರಿಂದ ಶನಿವಾರ ಮಧ್ಯಾಹ್ನ ಪರಿಷತ್ತು ಪುನಃ ಕೂಡುತ್ತಲೇ ಸರ್ವಾಧಿಪತಿಗಳು ತಮ್ಮ ಯೋಜನೆ ಅಯಶಸ್ವಿಯಾಯಿತೆಂದು ಸಾರಿ ವ್ಯಸನಪ್ರದರ್ಶನ ಮಾಡಿದರು ಮತ್ತು ಈ ಅಯಶಸ್ವಿಯ ಹೊಣೆಯನ್ನೂ ತಮ್ಮ ತಲೆಯ ಮೇಲೆಯೇ ಹೊತ್ತರು! ಅಂತು ಮಿ॥ ಜಿನ್ನಾರವರ ಹಟಮಾರಿತನದಿಂದ ವೆವ್ಹೆಲ ಯೋಜನೆ ನಿರರ್ಥಕವಾಯಿತು!

(೭ನೇ ಪುಟದಿಂದ ಮುಂದುವರಿಸಿದ್ದು.)

ಇಲ್ಲಿಯ ಸರಕಾರ ಮಾನ್ಯ ಜವಳಿಯ ಅಂಗಡಿಯಲ್ಲಿ ಹೊಸ ಪದ್ಧತಿ ರೂಢವಾಗಿದೆ. ಗಿರಾಕಿಯವರು ಜವಳಿ ಕೇಳಲು ಹೋದಾಗ ೧ ಪಾಲು ಜಿನುಗು ಮತ್ತು ೯ ಪಾಲು ಒರಟು ಜವಳಿ ಕೊಡುತ್ತಾರೆ. ಈ ಬಾರಿ ಬಂದ ಜವಳಿಯೊಳಗಿಂದ ಮಹಿಳೆಯರ ಉದ್ಧಾರಕ್ಕಾಗಿ ಸದ್ಯಕ್ಕೇ ಸ್ಥಾಪನೆಯಾದ ಸಂಘದವರು ಜಿನುಗು ಜವಳಿಯನ್ನೆಲ್ಲ ಹೆಕ್ಕಿಕೊಂಡು ಹೋದರಂತೆ! ಉಳಿದ ಒರಟು ಜವಳಿಯಲ್ಲಿ ಇಲ್ಲಿಯ ಮಾಮಲೇದಾರರು ಪುನಃ ವರ್ಗೀಕರಣ ಮಾಡಿ ೩ರಲ್ಲಿ ೧ ಪಾಲನ್ನು ಪುನಃ ಜಿನುಗು ಜವಳಿಯನ್ನಾಗಿ ಮಾಡಿದ್ದಾರೆ! ಈ ಜವಳಿ ಬೇಕಾದವರು ಮಾಮಲೇದಾರರ ಪರವಾನೆ ಪಡೆಯಬೇಕಂತೆ! ಬೇಡಿದವರಿಗೆ ಪರವಾನೆ ಕೊಡುವದು ಯಾ ಕೊಡದಿರುವದು ಮಾಮಲೇದಾರರ ಮರ್ಜಿಯ ಮೇಲೆ ಅವಲಂಬಿಸಿದೆ! ಇನ್ನಾವ ಊರಲ್ಲೂ ಇಂತಹ ಕ್ರಮ ಕಂಡು ಬರುವದಿಲ್ಲ! ಈ ಊರಲ್ಲಿ ಮಾತ್ರ ಅದೇಕೆಂದು ನಾಗರಿಕರನೇಕರ ಪ್ರಶ್ನೆ.

ಹಳದೀಪುರದೊಳಗಿನ ಯೋಗ್ಯ ದರದ ಅಂಗಡಿಯನ್ನು ಕೂಡಲೇ ಜನರಿಂದ ಆರಿಸಲ್ಪಟ್ಟ ಸಂಘದ ಕಡೆ ಒಪ್ಪಿಸಬೇಕೆಂದು ಕಳೆದ ತಾ ೨೬ಕ್ಕೆ ಜಿಲ್ಲಾಧಿಕಾರ ಹುಕುಮು ಆದದ್ದುಂಟು ಆ ಹುಕುಮು ಇಲ್ಲಿಯ ಮಾಮಲೇದಾರರಿಗೆ ಒಪ್ಪಿಗೆಯಿಲ್ಲ ಅದನ್ನು ನಿರರ್ಥಕಗೊಳಿಸಲು ಅವರು ಹಂಚಿಕೆ ಹೂಡುತ್ತಿದ್ದಾರೆ! ಆಚೆಯ ರವಿವಾರ (ತಾ. ೮) ಅವರು ಹಳದೀಪುರ ಊರವರದೊಂದು ಸಭೆ ಸೇರಿಸಿದ್ದರು ಸಂಘದ ಸಂಬಂಧದಲ್ಲಿ ಊರೊಳಗೆ ಬಣಗಳುಂಟೆಂದು ನೆವ ಮಾಡಿ ಅಂಗಡಿಯನ್ನು ಜನರ ಪ್ರತಿನಿಧಿಗಳಿಗೆ ಒಪ್ಪಿಸದಿರಲು ಅವರು ಯತ್ನಿಸಿದರು! ಆದರೆ ಆ ಊರವರು ಈ ಮಾಮಲೇದಾರರನ್ನು ಚೆನ್ನಾಗಿ ಬಲ್ಲರು ಮಾಮಲೇದಾರರ ಆಟ ಅವರು ನಡೆಯಗೊಡಲಿಲ್ಲ. ನಾಳೆ ಸೋಮವಾರ ಅಂಗಡಿಯನ್ನು ಜನತೆಯ ಸಂಘವು ವಹಿಸಿಕೊಳ್ಳಬೇಕೆಂದು ಸಭಾಪತಿಗಳಾಗಿದ್ದ ಮಾಮಲೇದಾರರು ತೀರ್ಮಾನ ಮಾಡಿ ಅಂದಿನ ಸಭೆ ವಿಸರ್ಜಿಸಿದರು. ಮುಂದೆ ಪುನಃ ಏನು ತಲೆಯಲ್ಲಿ ಬಂತೋ ಏನೋ! ಅಂಗಡಿಯ ಬಗ್ಗೆ ವಿಚಾರ-ವಿನಿಮಯ ಮಾಡುವದಕ್ಕಾಗಿ ಈ ಸೋಮವಾರ ಸಂಜೆ ೪ ಘಂಟೆಗೆ ಊರ ಪ್ರಮುಖರ ಸಭೆಯನ್ನು ಕರೆಯಬೇಕೆಂತ ಆಜ್ಞಾಪತ್ರ ಹೊರಡಿಸಿದರು! ಗ್ರಾಮಸ್ಥರು ಅದರಂತೆ ಊರ ಮುಖಂಡರಿಗೆಲ್ಲ ತಿಳಿಸಿದರು. ಹಾಗೂ ನಿಯಮಿತ ಹೊತ್ತಿಗೆ ಎಲ್ಲರೂ ಮಿಶನ್ ಶಾಲೆಯಲ್ಲಿ ಕೂಡಿ ಮಾಮಲೇದಾರರ ಹಾದಿ ಕಾಯುತ್ತ ಕೂತರು ಆದರೆ ಮುಚ್ಚಂಜೆಯ ವರೆಗೂ ಮಾಮಲೇದಾರರು ಸಭೆಗೆ ಮುಟ್ಟಲಿಲ್ಲ! ಇನ್ನೊಮ್ಮೆ ಪುನಃ ೨ನೇ ಹುಕುಮು ಕೊಡುವ ವರೆಗೆ ಅಂಗಡಿಯನ್ನು ಬೇರೆ ಯಾರಿಗೂ ಒಪ್ಪಿಸಕೂಡದೆಂದು ಹಳೆಯ ಅಂಗಡಿಕಾರನಿಗೆ ತಿಳಿಸಿದ್ದಾರಂತೆ! ಮಾಮಲೇದಾರರು ಈ ಪರಿ ತಮ್ಮ ಹುಕುಮಿನ ಉಪಮರ್ದ ನಡಿಸಿದ್ದನ್ನು ನೋಡಿ ಜಿಲ್ಲಾಧಿಕಾರಿಗಳು ಏನು ಮಾಡುತ್ತಾರೆಂದು ನೋಡಬೇಕು.

ಇಲ್ಲಿಯ ಸೀಧಾ ಕಚೇರಿಯವರು ಈಗ ಖಟ್ಲೆಗಳನ್ನು ಹೂಡಲಾರಂಭಿಸಿದ್ದಾರೆ. ಈಗಾಗಲೇ ೪-೬ ಖಟ್ಲೆ ಮಾಡಿ ಕೊಟ್ಟಿದ್ದಾರಂತೆ! ಕಳೆದ ರವಿವಾರ ಸಂಜೆ ೮ಕ್ಕೆ ಸೀಧಾ ಅಧಿಕಾರಿಗಳೂ ಅವರ ಓವರ ಹಸ್ತಕರೂ ಓವರ ಸದ್ಗೃಹಸ್ಥರ ಮನೆಯಲ್ಲಿ ತಪಾಸಣೆಗೆ ಹೋಗಿದ್ದರಂತೆ. ಮನೆಯಲ್ಲಿ ಗಂಡಸರು ಯಾರೂ ಇದ್ದಿಲ್ಲ ಇದ್ದ ಹೆಂಗಸರಿಗೆ ಇವರಾರೆಂದು ತಿಳಿಯಲಿಲ್ಲ. ಇವರೂ ಹೇಳಲಿಲ್ಲವಂತೆ! ಅಧಿಕಾರಿಗಳು ಬೀದಿ ದೀಪದ ಸಹಾಯದಿಂದ ಮನೆಯ ಸಂದಿಗೊಂದಿಗಳೆಲ್ಲ ತಪಾಸಣೆ ಮಾಡಿದರಂತೆ. ಏನೇನೋ ಪ್ರಶ್ನೆ ಕೇಳಿದರಂತೆ. ಆದರೆ ಹೆಂಗಸರಿಗೆ ಇವರ ಕನ್ನಡ ಭಾಷೆ ತಿಳಿಯಲಿಲ್ಲ! ಹೆಂಗಸರ ಕೊಂಕಣಿ ಭಾಷೆ ಇವರಿಗೆ ತಿಳಿಯುತ್ತಿದ್ದಿಲ್ಲ! ಮನೆಯವರ ಮೇಲೆ ಖಟ್ಲೆ ಮಾಡುವದಕ್ಕಾಗಿ ಪುರಾವೆಯೇನಾದರೂ ಸಿಗುತ್ತದೋ ಎಂದು ಹುಡುಕಾಡಲಿಕ್ಕೆ ಈ ತಪಾಸಣೆಯಾಗಿರಬೇಕೆಂದು ಜನರ ತರ್ಕ. ಸೀಧಾ ಕಚೇರಿಯವರ ಕಾರ್ಯದಕ್ಷತೆಯನ್ನು ಬಣ್ಣಿಸುವದೇ ಬೇಡ ಪರಮಿಟ ಬೇಕಾದವರು ಅದು ಸಿಗುವ ವರೆಗೆ ೪-೬ ಬಾರಿಯಾದರೂ ಕಚೇರಿಯ ಮೆಟ್ಟಿಲುಗಳನ್ನು ಏರಬೇಕು, ಇಳಿಯಬೇಕು.

The Agricultural & Industrial Bank, Ltd.
[Incorporated in British India, Liability of Members limited]
Head Office: COONDAPOOR. S. K.

ANNOUNCEMENT.

The Board of Directors have pleasure
to announce that a Branch of the Bank
has been opened at SIRSI on Wednesday
the 20th June 1945.

COONDAPOOR,
22-6-1945.

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಯಿಲ್ಲದ ದಿನವಿಲ್ಲ, ಹೊತ್ತಿಲ್ಲ ಕಾಲು, ೨ ತಾಸಿಗೊಮ್ಮೆ ಮಳೆ ಸುರಿಯುತ್ತಲೇ ಇದೆ. ಬಿಸಿಲು ದರ್ಶನ ಅಪರೂಪ ಕಳೆದ ಮಂಗಳವಾರ ಅಘನಾಶಿನಿ ಹೊಳೆಗೆ ನೀರು ಬಹಳಷ್ಟು ಏರಿತ್ತು. ಈ ೨೦ ವರ್ಷಗಳಲ್ಲಿ ಇಷ್ಟು ನೀರು ಎಂದೂ ಏರಿದ್ದಿಲ್ಲವಂತೆ. ನೀರು ಏರಿದ್ದು ಹಗಲುಹೊತ್ತಾಗಿದ್ದರಿಂದ ಪ್ರಾಣಹಾನಿ ಏನೂ ಆಗಲಿಲ್ಲ ನೀರೂ ಸ್ವಲ್ಪ ಕಾಲದಲ್ಲೇ ಇಳಿದು ಹೋಯಿತು. ಈ ನೆರೆ ನೀರಿನ ಸೆಳೆತಕ್ಕೆ ಘಟ್ಟದಲ್ಲೋ ಸಿಕ್ಕಿದ್ದ ೧ ಕಾಡಾನೆಯೂ ಕೆಲವು ದನಗಳೂ ಸಮುದ್ರಕ್ಕೆ ಎಳೆದು ಹೋದವಾಗಿ ಕಂಗಾಲ ಬದಿಯ ಜನರು ಹೇಳುತ್ತಾರೆ. ಈ ತನಕ ಸುಮಾರು ೫೫ ಇಂಚು ಮಳೆಯಾಗಿದೆ

ಸರಾಯಿಯ ಖಟ್ಲೆಗಳಲ್ಲಿ ಈಗ ಮೆಜಿಸ್ಟ್ರೇಟರು ಆರೋಪಿಗಳಿಗೆ ಬರೀ ದಂಡದ ಶಿಕ್ಷೆಯ ಮೇಲೆ ಬಿಟ್ಟುಕೊಡದೆ ತುರಂಗವಾಸದ ಶಿಕ್ಷೆಯನ್ನೂ ವಿಧಿಸಲಾರಂಭಿಸಿದ್ದಾರೆ ೨ ವಾರಗಳ ಹಿಂದೆ ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರು ಸಿರಿಹಿತ್ತಲದೊಳಗಿನ ಓರ್ವ ಆರೋಪಿಗೆ ೨ ತಿಂಗಳ ಶಿಕ್ಷೆ, ಮತ್ತು ರೂ ೧೦೦ರ ದಂಡ ಹಾಗೂ ದಂಡ ತೆರದಿದ್ದರೆ ಮೇಲೆ ೧½ ತಿಂಗಳ ಶಿಕ್ಷೆಯನ್ನೂ ಓರ್ವ ಹೆಂಗಸಿಗೆ ೧ ತಿಂಗಳ ಶಿಕ್ಷೆ ಮತ್ತು ದಂಡವನ್ನೂ ವಿಧಿಸಿದ್ದರು ಈ ಶಿಕ್ಷೆ ಬಹಳವಾಯಿತೆಂದು ಎರಡೂ ಆರೋಪಿಗಳು ಜಿಲ್ಲಾ ನ್ಯಾಯಾಧೀಶರ ಕಡೆ ಅಪೀಲು ಮಾಡಿದ್ದರು ಮೆಜಿಸ್ಟ್ರೇಟರು ವಿಧಿಸಿದ ಶಿಕ್ಷೆ ಹೆಚ್ಚಾಗಿಲ್ಲೆಂದು ಅಭಿಪ್ರಾಯ ವ್ಯಕ್ತಗೊಳಿಸಿ ನ್ಯಾಯಾಧೀಶರು ಎರಡೂ ಅಪೀಲುಗಳನ್ನು ತಿರಸ್ಕರಿಸಿಬಿಟ್ಟಿದ್ದಾರೆ ಈ ಕಠೋರ ಶಿಕ್ಷೆಯ ಭೀತಿಯಿಂದಾದರೂ ಸರಾಯಿಗಳ್ಳರ ವ್ಯಾಪಾರ ಕುಗ್ಗುವದೋ ನೋಡಬೇಕು

ಶ್ರೀ ಸ್ವಾಮಿ ಅಲಿಕಾನಂದಜಿಯವರ ಬೋಧಾಮೃತದ ಸ್ವಾದವೂ ಲಾಭವೂ ಹೆಚ್ಚೆಚ್ಚು ಜನರಿಗೆ ಸಿಗಬೇಕಾದರೆ ಅದಕ್ಕೊಂದು ಸಿವಾಂತ ಆಶ್ರಮವಿರುವದು ಅವಶ್ಯವೆಂದು ಭಾವಿಸಿ ಸ್ಥಾನಿಕ ಪ್ರತಿಷ್ಠಿತರು ಕೆಲವರು ಒಂದು ಆಶ್ರಮ ಸ್ಥಾಪಿಸಿ ಅಲ್ಲಿ ಅಧ್ಯಾತ್ಮಜ್ಞಾನ-ಪ್ರಸಾರದ ಏರ್ಪಾಡು ಮಾಡಿಸಿದ್ದರಾಗಿದ್ದಾರೆ ಈ ಆಶ್ರಮದ ಕೆಲಸಕ್ಕೆ ರೂ ೩೦೦೦೦ರಷ್ಟು ಖರ್ಚು ಬೀಳುವದೆಂದು ಅಂದಾಜುಂಟು ಪ್ರಾರಂಭಿಕ ಕೆಲಸಕ್ಕೇ ರೂ ೧೦೦೦೦ ವೆಚ್ಚ ಬರುವದಂತೆ ಆಧ್ಯಾತ್ಮಿಕ ಜ್ಞಾನದ ಆಸಕ್ತಿ ಮತ್ತು ಅಭಿರುಚಿಯುಳ್ಳವರೆಲ್ಲರೂ ಯಥಾಶಕ್ತಿ ಈ ಕಾರ್ಯಕ್ಕೆ ನೆರವಾಗಬೇಕೆಂದು ಆಶ್ರಮ ಸಮಿತಿಯ ಅಧ್ಯಕ್ಷ ರಾ। ನರಸಿಂಹ ಕಾನಭಾಗ ವಕೀಲ ಇವರು ಬಿನ್ನವಿಸುತ್ತಾರೆ.

ಭಟಕಳ— (ತಾ ೧೨-೭-೪೫) ೨-೩ ದಿನಗಳಿಂದ ಮಳೆ ಬಹಳ ಸುರಿಯುತ್ತಿದೆ.

ಇಲ್ಲಿಯ ಸೀಧಾ ಅಂಗಡಿಗಳಲ್ಲಿ ಸಿಗುವ ಅಕ್ಕಿ (ಕುಚಗಿ ಹಾಗೂ ಬೆಳ್ತಿಗೆ) ಯಲ್ಲಿ ವಿಸಂಟಿ ಭತ್ತ ಕಂಡುಬರುತ್ತಿದೆ ಅಧಿಕಾರಿಗಳಿಗೆ ಅದು ಕಾಣದಿರುವದು ಆಶ್ಚರ್ಯ !

ಮುರ್ಡೇಶ್ವರದ ದೈವಜ್ಞನೊಬ್ಬನು ನಿನ್ನೆ ಇಲ್ಲಿ ಪ್ಲೇಗಿನಿಂದ ತೀರಿಕೊಂಡನು ಊರಲ್ಲಿ ೭೫-೮೦ರಷ್ಟು ದೈವಜ್ಞರ ಮನೆಗಳಿದ್ದರೂ ಮೃತನ ಶವ ತೆಗೆದು ವ್ಯವಸ್ಥೆ ಮಾಡಲಿಕ್ಕೆ ಯಾರೂ ಸಿಗಲಿಲ್ಲ ! ಎಲ್ಲರೂ ಅಡಗಿ ಕೊಂಡರು !! ಕೊನೆಗೆ ಮೃತನ ಹೆಂಡತಿ, ಭಾವ ಮತ್ತು ಇನ್ನೊಬ್ಬ ಹೀಗೆ ಮೂವರು ಶವವನ್ನು ಆ ಸ್ಮಶಾನಕ್ಕೆ ಒಯ್ದು ದಹನ ಮಾಡಿದರು !

ಶಿರ್ಸಿ— (ತಾ. ೮-೭-೪೫) ಅಡಿಕೆ ಬೆಳೆಗಾರರ ಸಂಘಕ್ಕೊಪ್ಪಿದ ಹಳ್ಳಿಯ ಸದಸ್ಯರ ಬಗ್ಗೆ ಜಿಲ್ಲಾಧಿಪರು ಧಾರವಾಡ ಜಿಲ್ಲೆಯಿಂದ ೧೮೫ ಟೇಲ ಹತ್ತಿಕಾಳು (ನಮ್ಮ ಜಿಲ್ಲೆಯ ಬಗ್ಗೆ ಕೊಡಲ್ಪಟ್ಟದ್ದರಲ್ಲಿ ಇಷ್ಟು ಟೇಲಗಳು ಮಾತ್ರ ಶಿಲ್ಕು ಇದ್ದವಂತೆ) ತರಿಸಿಕೊಳ್ಳಲು ಸಂಘದವರಿಗೆ ಪರವಾನೆಯನ್ನಿತ್ತಿದ್ದಾರೆ ಅದರಂತೆ ಹತ್ತಿಕಾಳು ತರಲಿಕ್ಕೆ ಸಂಘದ ಪ್ರತಿನಿಧಿಯು ಧಾರವಾಡಕ್ಕೆ ಹೋಗಿ ಅಲ್ಲಿಯ ಜಿಲ್ಲಾಧಿಪರ ಕಚೇರಿಯವರ ಆಜ್ಞೆ ಬೇಡಿದನು. ಇದೀಗ ಹುಬ್ಬಳ್ಳಿಯ ಪೇಟೆಯಲ್ಲಿ ರೂ ೧೫ ೨೨ ರತ್ತಲಿನಂತೆ ಹತ್ತಿಕಾಳು ಸಿಗುತ್ತಿದೆ. ಅಲ್ಲಿಂದಲೇ ಹತ್ತಿಕಾಳು ತರಿಸಲು ಸಂಘದ ಪ್ರತಿನಿಧಿಯು ಬಯಸಿದ್ದನು; ಆದರೆ ಧಾರವಾಡ ಜಿಲ್ಲಾಧಿಪರ ಕಚೇರಿಯವರು ಹುಬ್ಬಳ್ಳಿ ಪೇಟೆಯಲ್ಲಿ ಖರೀದಿಸಲು ಪರವಾನೆ ಕೊಡದೆ ಗದಗದೊಳಗಿನ ಕಮಿಶನ ಟ್ರೇಡಿಂಗ ಯೂನಿಯನ್ನಿನವರ ಹತ್ತಿಕಾಳು ಕೊಂಡುಕೊಳ್ಳಬೇಕೆಂದು ವಿಧಿಸಿದರಂತೆ ! ಈ ಯೂನಿಯನ್ನಿನವರ ಹತ್ತಿಕಾಳು ರೂ ೧೫ ೧೮½ ರತ್ತಲು ! ಯೂನಿಯನ್ನಿನವರಿಗೂ ಸದರಿ ಕಚೇರಿಯವರಿಗೂ ಸಂಬಂಧವೇನುಂಟೆಂದು ದೇವರೇ ಬಲ್ಲ !

ಸಿದ್ದಾಪುರದ ಮಾಮಲೇದಾರ ರಾ। ಪಂಡ್ಯೆಯವರು ರಜೆಯ ಮೇಲೆ ಹೋಗಿದ್ದಾರೆಂದು ಹಿಂದೆ ಪ್ರಕಟಿಸಿದ್ದು ತಪ್ಪು ಇರುತ್ತದೆ ಅವರಿಗೆ ರಜೆ ಮಂಜೂರ ಆಗಿತ್ತಷ್ಟೇ ಅದರಂತೆ ಅವರು ರಜೆಯ ಮೇಲೆ ಹೊರಗೆ ಹೋಗಲು ತಮ್ಮ ಸಾಮಾನು ಸಹ ಮೋಟಾರ ಬಂದಿಯಲ್ಲಿ ಕಳಿಸಿಬಿಟ್ಟಿದ್ದರು ಆದರೆ ಅಷ್ಟರಲ್ಲಿ ಯಾರೋ ಅವರ ನಿರ್ಗಮನದ ಬಗ್ಗೆ ಆನಂದೋದ್ಗಾರ ತೆಗೆದದ್ದು ಕೇಳಿ ಸಂತಪ್ತರಾಗಿ ಅವರು ರಜೆಯ ಮೇಲೆ ಹೋಗದೆ ಇದ್ದ ಸ್ಥಳಕ್ಕೇ ಅಂಟಿಕೊಂಡು ಕೂತಿದ್ದಾರಂತೆ ! ಅಥವಾ ಇಲ್ಲಿ ಶಿರ್ಸಿಯಲ್ಲಿ ಆದ ತಮ್ಮ ಸಾವಕಾಶಿನ ರೂಢಿ-ಪದ್ಧತಿಯಿಂದ ಉಂಟಾದ ಸಂಕಟವನ್ನು ನಿವೃತ್ತಿಗೊಳಿಸಲಿಕ್ಕೆ ರಜೆಯ ಮೇಲೆ ಇರುವದಕ್ಕಿಂತ ಅಧಿಕಾರ-ಪದದಲ್ಲಿರುವದೇ ಸಹಾಯಕಾರಿಯೆಂದು ಅವರು ಭಾವಿಸಿರಲಿಕ್ಕೂ ಸಾಕು ! ಈ ಮಾಮಲೇದಾರರ ಬಾಬ್ತು, ಇಲ್ಲಿ ಜವ್ವಾಜಿ ಸಾಹುಕಾರರುಗಳಲ್ಲಿ ೧೫-೨೦ ಸರಕಾರಿ ಕಾಯಿದೆ-ಭಂಗಗಳೂ ಉಂಟೆಂದು ಸುದ್ದಿಯಿದೆ

ಇಲ್ಲಿಯ ಸಿವ್ಹಿಲ್ ಕೋರ್ಟಿಗೆ ಸಾಕಷ್ಟು ಕೆಲಸ ಸಿಗುವದಿಲ್ಲ. ಇದ್ದ ಕೆಲಸವನ್ನು ೬ ತಿಂಗಳಲ್ಲಿ ಮುಗಿಸಲಬರುತ್ತದೆ. ಆದರಿಂದ ಇಲ್ಲಿಯ ನ್ಯಾಯಾಧೀಶರಿಗೆ ವರ್ಷದಲ್ಲಿ ಸರಾಸರಿ ೬ ತಿಂಗಳು ಹೊನ್ನಾವರ ಕೋರ್ಟಿಗೆ ಜತೆ-ನ್ಯಾಯಾಧೀಶರನ್ನಾಗಿ ನೇಮಿಸಬೇಕೆಂಬದೊಂದು ವಿಚಾರ ನಡೆದಿದೆಯಂತೆ. ಹೀಗೆ ಮಾಡುವದಕ್ಕಿಂತ ನ್ಯಾಯಾಧೀಶರಿಗೆ ಮೆಜಿಸ್ಟ್ರೇಟರ ಅಧಿಕಾರ ಕೊಟ್ಟು, ಫೌಜದಾರಿ ಮೊಕದ್ದಮೆಗಳನ್ನು ಅವರಿಗೊಪ್ಪಿಸಿದಲ್ಲಿ ಒಳಿತಾಗುವದಲ್ಲವೆ. ಅಂಥ ಮೊಕದ್ದಮೆಗಳು ಇಲ್ಲಿ ಬಹಳ ಇವೆ ಫೌಜದಾರಿ ಕೆಲಸ ನ್ಯಾಯಾಧೀಶರಿಗೆ ಒಪ್ಪಿಸಿದಲ್ಲಿ ಅವರಿಗೂ ತುಂಬ ಕೆಲಸ ಸಿಗುವದು ಫೌಜದಾರಿ ನ್ಯಾಯದಾನವೂ ಆದರ್ಶಭೂತವಾಗುವದು ಸೇವಾನಿವೃತ್ತ ಮಾಮಲೇದಾರರಿಗಿಂತ ಕಾಯಿದೆ ಪಂಡಿತ ಮೆಜಿಸ್ಟ್ರೇಟರ ಕೆಲಸ ತೀವ್ರ ಹಾಗೂ ಹೆಚ್ಚು ತೃಪ್ತಿಕರವಾಗುವದೆಂದು ಬೇರೆ ಹೇಳಬೇಕೇ ?

ಹೊನ್ನಾವರ— (ತಾ ೧೫-೭-೪೫) ಮಳೆ ಸಾಕಷ್ಟಿದೆ ಶರಾವತಿ ಹೊಳೆಗೆ ೨ ದಿನ ನೆರೆ ಬಂದಿತ್ತು ಆದರೆ ಶೀಘ್ರವೇ ನೀರು ಇಳಿದದ್ದರಿಂದ ವಿಶೇಷ ಹಾನಿಯಾಗಿಲ್ಲ.

(೧ನೇ ಪುಟದ ಮೇಲಿಂದ ಮುಂದರಿಸಿದ)

ಜಾಹೀರನಾಮೆ.

ಮುಂಬಯಿ ಇದ್ದಲಿ ವ್ಯಾಪಾರದ ಪರವಾನೆ ಕೊಡುವ ಹುಕುಮು, ೧೯೪೪ರನ್ವಯ ರೋಖ ವ್ಯಾಪಾರದ ಲೈಸನ್ಸ ಕೊಡುವ ಕ್ರಮದ ಪ್ರಾರಂಭ.

ನಂ 321/V -ಡಿ- ಇದ್ದಲಿ (ಚಾರಕೋಲ)ಯ ರೋಖ ವ್ಯಾಪಾರವನ್ನು ಕ್ರಮಬದ್ಧ ಮಾಡುವದಕ್ಕಾಗಿ ಹಾಗೂ ವ್ಯಾಪಾರಿ ಪದ್ಧತಿಗಳಿಗನುಸಾರವಾಗಿ ಆ ವ್ಯಾಪಾರ ನಡೆಯುವಂತೆ ಮಾಡುವದಕ್ಕಾಗಿ ಮುಂಬಯಿ ಸರಕಾರದವರು ೧೯೪೪ನೇ ಇಸವಿಯ ಇದ್ದಲಿ ವ್ಯಾಪಾರದ ಪರವಾನೆ ಕೊಡುವ ಹುಕುಮಿನಲ್ಲಿ ಕೆಲವೊಂದು ತಿದ್ದುಪಾಟ ಮಾಡಿ, ತಾ ೧-೮-೧೯೪೫ರಿಂದ ಮುಂದೆ ಮುಂಬಯಿ ನಗರ ಮತ್ತು ಮುಂಬಯಿ ಉಪನಗರ ಜಿಲ್ಲೆಗಳಲ್ಲೂ, ಠಾಣೆ, ಕುಲಾಬಾ, ಸೂರತ, ನಾಶಿಕ, ಪುಣೆ, ಸಾತಾರಾ, ಭಡೋಚ, ಪಂಚಮಹಾಲ, ವಿಜಾಪುರ, ಪಶ್ಚಿಮ ಖಾನದೇಶ, ಕಾನಡಾ ಮತ್ತು ಅಹಮ್ಮದನಗರ ಜಿಲ್ಲೆಗಳಲ್ಲೂ ಇದ್ದಲಿಯ ರೋಖ ವ್ಯಾಪಾರ ಮಾಡುವವರು ರೋಖ ವ್ಯಾಪಾರದ ಲೈಸನ್ಸ ಪಡಕೊಳ್ಳಬೇಕೆಂದು ವಿಧಿಸಿದ್ದಾರೆ.

ಈವಾಗ ಇದ್ದಲಿ ವ್ಯಾಪಾರಸ್ಥರ ಪರವಾನೆ ಪಡಕೊಂಡು **ಇದ್ದಲಿಯ ರೋಖ ವ್ಯಾಪಾರ ಮಾಡುತ್ತಿರುವ ಚಾರಕೋಲ ವ್ಯಾಪಾರಿಗಳು** ಸದರಿ ತಾರೀಖಿನ ನಂತರ ರೋಖ ವ್ಯಾಪಾರದ ಪರವಾನೆಯನ್ನು ಪಡಕೊಳ್ಳುವದವಶ್ಯವುಂಟು ತಿದ್ದುಪಡಿಯಾದ ಹುಕುಮಿನ ಮೇರೆಗೆ ಕೊಟ್ಟ ರೋಖ ವ್ಯಾಪಾರದ ಪರವಾನೆಯಿಲ್ಲದ ಯಾವದೇ ಇದ್ದಲಿ ವ್ಯಾಪಾರಿಯು ಮುಂದೆ ರೋಖ ವ್ಯವಹಾರ ಮಾಡುವದು ಕಾನೂನು-ವಿರುದ್ಧವಾದೀತು. ಇಂಥ ರೋಖ ವ್ಯವಹಾರದ ಪರವಾನೆ ಕೊಡುವ ಅಧಿಕಾರವು ಮುಂಬಯಿ ನಗರ ಮತ್ತು ಮುಂಬಯಿ ಉಪನಗರ ಜಿಲ್ಲೆಯ ಮಟ್ಟಿಗೆ ಅಸಿಸ್ಟಂಟ ಡೈರೆಕ್ಟರ ಆಫ್ ಸಿವ್ಹಿಲ ಸಪ್ಲಾಯಿಸ ಇವರಿಗೂ ಉಳಿದ ಜಿಲ್ಲೆಗಳ ಮಟ್ಟಿಗೆ ಆಯಾ ಜಿಲ್ಲೆಗಳ ಕಲೆಕ್ಟರರಿಗೂ ಕೊಡಲ್ಪಟ್ಟಿದೆ ಅರ್ಜಿಯ ನಮೂನೆಗಳನ್ನು ಈ ಅಧಿಕಾರಿಗಳ ಕಡೆಯಿಂದ ಪಡಕೊಂಡು, ಅವುಗಳನ್ನು ಸರಿಯಾಗಿ ತುಂಬಿ ರೂ ೨೦ರ ಲೈಸನ್ಸ ಫೀ ಸಹಿತ ಸಾದರಪಡಿಸಬೇಕು.

ಆಫೀಶ ಇಲಾಖೆ
(ಸೆಕ್ರೆಟೇ),
ಮುಂಬಯಿಕೋಟೆ,
೯-೭-೧೯೪೫.

ಮುಂಬಯಿ ಗವ್ಹರ್ನರರ
ಆಜ್ಞೆಯಂತೆ,
A D. Gorwala.
ಸರಕಾರದ ಸೆಕ್ರೆಟರಿ

ನೋಟೀಸು.

ನಂ. S 95/3.

ಮೆ|| ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ ಸಾ|| ಶಿರ್ಸಿ ಡಿವ್ಹಿಜನರವರು ಶಿರ್ಸಿ ಡಿವ್ಹಿಜನದಲ್ಲಿ ಶಾನಭೋಗಿ ಕೆಲಸ ಮಾಡಲಿಕ್ಕೆ 15 ಮಂದಿ ಉಮೇದವಾರರನ್ನು ಆರಿಸಿಕೊಳ್ಳುವರಿದ್ದಾರೆ. ಉತ್ತರ ಕಾನಡಾ ಜಿಲ್ಲೆಯ ರಹಿವಾಸಿಗಳಿದ್ದು ಕನ್ನಡ ಮುಲ್ಕಿ ಪರೀಕ್ಷೆ ಪಾಸಾದವರು ಯಾ ಅದಕ್ಕಿಂತ ಹೆಚ್ಚು ಕಲಿತವರು ತಾ 30-7-45ನೇ ದಿನದೊಳಗೆ ಈ ಆಫೀಸಿಗೆ ಮುಟ್ಟುವಂತೆ ಅರ್ಜಿ ಮಾಡಿಕೊಳ್ಳಬಹುದು ಮೇಲೆ ತೋರಿಸಿದ ತಾರೀಖಿನ ನಂತರ ಬಂದ ಅರ್ಜಿಗಳ ವಿಚಾರ ಮಾಡಲಿಕ್ಕಿಲ್ಲ.

ಅರ್ಜಿಯನ್ನು ಅರ್ಜಿದಾರನು ಸ್ವಂತ ಕನ್ನಡದಲ್ಲಿ ಬರೆಯಬೇಕು, ಮತ್ತು ಈ ಕೆಳಗಿನ ಮಾಹಿತಿಯನ್ನು ಪೂರೈಸಬೇಕು

(1) ಅರ್ಜಿದಾರನ ಪೂರ್ಣ ಹೆಸರು,
(2) ವಾಸಸ್ಥಳ (ಪತ್ತೆ ಸಹಿತ) ಮತ್ತು ಜನ್ಮಸ್ಥಳ;
(3) ಜಾತಿ ವ ಧರ್ಮ,
(4) ವಯಸ್ಸು (ಜನನ ದಾಖಲೆ ಲಗತ್ತು ಇಡತಕ್ಕದ್ದು),
(5) ಎಷ್ಟು ಕಲಿತಿದ್ದಾನೆ,
(6) ಸರಕಾರ ನೌಕರಿಯಲ್ಲಿ ಸಂಬಂಧಿಕರು ಇದ್ದರೆ ಅವರು,
(7) ಒಳ್ಳೇ ನಡತೆಯ ಕುರಿತು ಇಬ್ಬರು ಸಭ್ಯ ಗೃಹಸ್ಥರ ಶಿಫಾರಸುಪತ್ರಿಕೆಯ ನಕಲು.

ತಾರೀಖು 1—9—1945ನೇ ದಿವಸ ಅರ್ಜಿದಾರನಿಗೆ 18 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿರಬೇಕು. ಮತ್ತು, ಅವನು ಮುಂದುವರಿದ ವರ್ಗದವನಾದರೆ 22 ವರ್ಷಕ್ಕೆ ಕಡಿಮೆ ಮತ್ತು ಮಧ್ಯಮ ಯಾ ಹಿಂದುಳಿದವನಾದರೆ 25 ವರ್ಷಕ್ಕಿಂತ ಕಡಿಮೆ ಪ್ರಾಯದವನಿರಬೇಕು.

ಲಿಸ್ಟಿನಲ್ಲಿ ದಾಖಲ ಮಾಡಿದ ಉಮೇದವಾರನು ಖಾಲಿ ಜಾಗೆಯಲ್ಲಿ ನೇಮಣೂಕಿಯಾಗುವ ವರೆಗೆ ಯಾವದಾದರೂ ಶಾನಭೋಗರ ಕಡೆಗೆ ಸಂಬಳವಿಲ್ಲದೆ ಕೆಲಸ ಮಾಡಬೇಕಾಗುವದು.

ಆರಿಸಲಿಕ್ಕೆ ಯೋಗ್ಯರೆಂದು ತೋರಿದ ಅರ್ಜಿದಾರರನ್ನು ಅವರವರ ಖರ್ಚಿನಿಂದ ಭೆಟ್ಟಿಗೆ ಕರೆಯಲಾಗುವದು, ಆ ಕಾಲಕ್ಕೆ ಅವರು ಸರ್ಟಿಫಿಕೇಟುಗಳ ಅಸಲ ಪ್ರತಿಗಳನ್ನು ತಮ್ಮ ಸಂಗಡ ತಕ್ಕೊಂಡು ಬರಬೇಕು

ಆರಿಸದೆ ಇದ್ದ ಉಮೇದವಾರರಿಗೆ ಅಲಾಹಿದಾ ತಿಳಿಸುವದರಲ್ಲಿ ಬರಲಿಕ್ಕಿಲ್ಲ

ಕಾಯಂ ತರೀಕ ಶಾನಭೋಗಿ ಜಾಗೆ ಸಿಗುವದೆಂದು ಗ್ಯಾರಂಟಿ ಕೊಡಲಾಗುವದಿಲ್ಲ

ಹಾಲಿ ಎಡಿಶನಲ್ ಶಾನಭೋಗಿ ಲಿಸ್ಟಿನಲ್ಲಿದ್ದವರು ತಮ್ಮ ತಮ್ಮ ಮಾಮಲೇದಾರ ಯಾ ಮಹಾಲಕರಿ ಸಾಹೇಬರ ವಿದ್ಯಮಾನ ಅರ್ಜಿ ಮಾಡಿಕೊಳ್ಳಬೇಕು.

ಕಾರವಾರ,
ತಾ. 25-6-45

C. B. KURWATTI,
District Deputy Collector, S D, Kanara.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು.
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ !
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಾರಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ, ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ.
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು.
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ-ಸಮಿತಿಯ ಪ್ರಕಟನೆ]

ಇದನ್ನು ಪಾಂಡುರಂಗ ಕೃಷ್ಣ ಕಾಸಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಹೊರಊರವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೦-೯
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತೆರುವವರು ವ್ಹಿ. ಪಿ. ವೆಚ್ಚ ಅಧಿಕ ಹೆಚ್ಚಿಗೆ ತೆರಬೇಕು
ವರ್ಗಣಿ ಮುಂಗಡ ಕೊಡತಕ್ಕದ್ದು

ರಜಿ. No. B. 1270. Monday, 23rd July, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೪.

ಕುಮಟಾ:- ಸೋಮವಾರ ತಾ. ೨೩ ನೆಯ ಜುಲೈ, ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸ್ಥಾಯಿ ಜಾಹಿರಾತು ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ವೆವ್ಹೆಲ-ಯೋಜನೆ ಹೋಯಿತು! ಮುಂದೇನು?

(ನಿರೀಕ್ಷಕನು ಬರೆದುದು.)

ಮುಸ್ಲಿಮ ಲೀಗಿನ ಸರ್ವಾಧ್ಯಕ್ಷರಾದ ಬ್ಯಾ. ಜಿನ್ನಾರವರ ದುರಾಗ್ರಹ ಮತ್ತು ಹಟವಾದಿತ್ವದ ಮೂಲಕ ಸಿಮ್ಲಾ ಪರಿಷತ್ತು ನಿಷ್ಫಲವಾಯಿತೆಂದು ನಾನು ಕಳೆದ ವಾರವೇ ತಿಳಿಸಿದ್ದೇನೆ. ಜಿನ್ನಾರವರ ಭೂಮಿಕೆಯೇನೆಂಬುದು ಪತ್ರಿಕಾಪ್ರತಿನಿಧಿಗಳ ಸಭೆಯೊಂದರಲ್ಲಿ ಅವರು ಕೊಟ್ಟ ಹೇಳಿಕೆಯ ಮೂಲದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಸರ್ವಾಧಿಕಾರಿಗಳ ಕಾರ್ಯಕಾರಿ ಮಂಡಳಕ್ಕೆ ಆರಿಸಬೇಕಾದ ಎಲ್ಲ ಮುಸಲ್ಮಾನರನ್ನು ಆರಿಸುವ ಹಕ್ಕು ಮುಸ್ಲಿಮ ಲೀಗಿನದೇ ಎಂದು ಒಂದುವೇಳೆ ಇನ್ನಿತರ ಪ್ರತಿನಿಧಿಗಳು ಇಲ್ಲವೆ ಸ್ವತಃ ಸರ್ವಾಧಿಕಾರಿಗಳು ಒಪ್ಪಿಕೊಂಡಾಗ್ಯೂ ಜಿನ್ನಾರ ಸಮಾಧಾನವಾಗುತ್ತಿದ್ದಿಲ್ಲ! "ಕಾರ್ಯಕಾರಿ ಮಂಡಳದಲ್ಲಿ ನಾವು ಬರೇ ಒಂದುಮೂರಾಂಶದಷ್ಟಾಗಿ, ಯಾವಾಗಲೂ ಅಲ್ಪಸಂಖ್ಯಾಕರಾಗುಳಿಯಬೇಕಾಗುತ್ತದೆ. ಯಾಕೆಂದರೆ ಇನ್ನಿತರ ಅಲ್ಪ-ಸಂಖ್ಯಾಕರ ಪ್ರತಿನಿಧಿಗಳು ಯಾವಾಗಲೂ ಕಾಂಗ್ರೆಸ ಪ್ರತಿನಿಧಿಗಳಿಗೇ ಬೆಂಬಲ ಕೊಡುವರು!" ಎಂಬುದೇ ಬ್ಯಾ. ಜಿನ್ನಾರವರ ಮೇಲೆ ಹೇಳಿದ ಹೇಳಿಕೆಯ ಪಲ್ಲವಿಯಾಗಿತ್ತು! ಬ್ಯಾ. ಜಿನ್ನಾರವರು ಹಾಗೆ ಸ್ಪಷ್ಟ ಹೇಳಿದ್ದರೂ, ಲೀಗ ಸದಸ್ಯರಿಗೆ ಸರ್ವಾಧಿಕಾರಿಗಳ ಕಾರ್ಯಕಾರಿ ಮಂಡಳದಲ್ಲಿ ಅರ್ಧದಷ್ಟು ಸ್ಥಾನಗಳಾದರೂ ಸಿಗಬೇಕೆಂದು ಅವರ ಬೇಡಿಕೆಯಿರುತ್ತದೆಂದು ಈ ಪಲ್ಲವಿಯ ಮನನ ಮಾಡಿದವರು ತಿಳಿಯಲಡ್ಡಿಯಿಲ್ಲ! ಅಂತು ಮುಸ್ಲಿಮ ಲೀಗಿಗೆ ಬಹುಮತ ದೊರೆತರೆ ಮಾತ್ರ ಬ್ಯಾ. ಜಿನ್ನಾರವರಿಗೆ ಪೂರ್ಣ ಸಮಾಧಾನವಾದೀತೆಂದು ನಾನು ತಿಳಿಯುತ್ತೇನೆ. ಬ್ಯಾ. ಜಿನ್ನಾರವರ ಬೆಳೆಯುತ್ತಿರುವ ಈ ಬೇಡಿಕೆಗಳು ತಿರಸ್ಕಾರಾರ್ಹವಿರುತ್ತವೆಂದು ಕಾಂಗ್ರೆಸ್ಸಿಗರೂ ಹಿಂದುಗಳೂ ಹೇಳುವದವಶ್ಯವಿಲ್ಲ. ವಿಲಾಯತಿಯೊಳಗಿನ ಅನೇಕ ಪತ್ರಿಕೆಗಳೇ ಹಾಗೆ ಹೇಳಿದ್ದುಂಟು. ಇಂಥ ಬೇಡಿಕೆಗಳನ್ನು ವೆವ್ಹೆಲ ದೊರೆಗಳೂ ತಿರಸ್ಕರಿಸಿ, ಹಟವಾದಿ ಲೀಗದವರು ಕಾರ್ಯಕಾರಿ ಮಂಡಳದಲ್ಲಿ ಸೇರಲೊಪ್ಪದಿದ್ದರೆ ಚಿಂತೆಯಿಲ್ಲ, ಇತರ ಪಕ್ಷಗಳ ಸಹಾಯದಿಂದ ತಾವು ಸಂಕಲ್ಪಿಸಿದ ಕಾರ್ಯಕಾರಿ ಮಂಡಳದ ಪುನರ್ರಚನೆಯನ್ನು ಸಾಧಿಸುವವರೇ ಎಂದು ನಿರ್ಧರಿಸಿಬಿಡಬೇಕಿತ್ತು. ಹಾಗೆ ಅವರು ನಿರ್ಧರಿಸುವರೆಂದೂ ಅನೇಕರ ಅಪೇಕ್ಷೆಯಿತ್ತು. ಈ ಅಪೇಕ್ಷೆಗೆ ವಿರುದ್ಧವಾಗಿ ದೊರೆಗಳು ತಮ್ಮ ಯೋಜನೆಯನ್ನೇ ಹಿಂತೆಗೆದುಕೊಂಡದ್ದು ನೋಡಿ, ಈ ಪರಿಷತ್ತೆಂಬುದು ಲೋಕರಂಜನೆಗಾಗಿ ಹೂಡಿದ ಒಂದು ಆಟ ಇಲ್ಲವೆ ನಾಟಕವಿದ್ದಿರಬೇಕೆಂದು ಅನೇಕರು ಊಹಿಸುತ್ತಾರೆ. "ಭಾರತವನ್ನು ಬಿಟ್ಟು ನಡೆಯಿರಿ" ಎಂದು ಸಾರಿರುವ ೧೯೪೨ನೇ ಇಸವಿಯ ಆಗೋಸ್ತ ತಿಂಗಳ ಗೊತ್ತುವಳಿಯನ್ನು ಹಿಂದಿರುಗಿಕೊಂಡನಂತರ ಸ್ಥಾನಬದ್ಧತೆಯಲ್ಲಿಟ್ಟ ಕಾಂಗ್ರೆಸ ಮುಂದಾಳುಗಳನ್ನು ಬಂಧಮುಕ್ತ ಮಾಡಲಾಗುವದಿಲ್ಲೆಂದು ಭಾರತಮಂತ್ರಿಗಳೂ ಸರ್ವಾಧಿಕಾರಿಗಳೂ ತಿರುತಿರುಗಿ ಸಾರಿದ್ದನ್ನು ಜನರು ಮರೆತಿರಲಿಕ್ಕಿಲ್ಲ. ಆದರೆ ಈ ಮುಂದಾಳುಗಳನ್ನು ಹೀಗೆ ದೀರ್ಘ ಕಾಲದ ವರೆಗೆ ಬಂಧನದಲ್ಲಿಡುವದರಿಂದ — ವಿಶೇಷವಾಗಿ ಭಾರತದ ಮೇಲೆ ಬಿದ್ದ ಯುದ್ಧದ ನೆರಳು ದೂರವಾಗಿರುವ ಈ ಕಾಲದಲ್ಲಿ ಅವರನ್ನು ಸೆರೆಯಲ್ಲಿಡುವದರಿಂದ — ಅಮೇರಿಕೆಯಲ್ಲೂ ಇತರ ರಾಷ್ಟ್ರಗಳಲ್ಲೂ ಬ್ರಿಟಿಶ ಸರಕಾರದ ಮಾನಭಂಗವಾಗುವ ಪ್ರಸಂಗ ಬಂತು. ಅದರಿಂದ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸದಸ್ಯರ ಬಿಡುಗಡೆ ಮಾಡುವ ಬಗ್ಗೆ ಹೇಗೂ ಬ್ರಿಟಿಶರು ಅಧಿಕಾರ ಬಿಟ್ಟುಕೊಡತಕ್ಕವರಲ್ಲ. ಭಾರತೀಯ ಜನರ ಮೂಲಕ ಅದು ಅಸಾಧ್ಯವಾಗಿದೆಯೆಂದು ಪರಸ್ಪರರಿಗೆ ತೋರ್ಪಡಿಸುವದಕ್ಕಾಗಿ ಆಳರಸರು ಸಿಮ್ಲಾ ಪರಿಷತ್ತಿನ ನಾಟಕವನ್ನಾಡಿದ್ದಿರಬೇಕೆಂದು ಪುಣೆಯ 'ಕೇಸರಿ' ಪತ್ರಿಕೆಯು ಊಹಿಸಿದೆ. ಆ ಊಹೆ ತಪ್ಪೆಂದು ಹೇಳುವ ಧೈರ್ಯ ನನಗಿಲ್ಲ. ಬ್ಯಾ. ಜಿನ್ನಾರವರು ಅಲ್ಪಸಂಖ್ಯಾಕರಿಗೆ ಕಾರ್ಯಕಾರಿ ಮಂಡಳದಲ್ಲಿ ಸೇರಬಿಟ್ಟಿಲ್ಲೆಂಬ ವಿಶ್ವಾಸವನ್ನು ಕಳೆದೇ ಮತ್ತು ಅವರು ಒಪ್ಪದಿದ್ದಲ್ಲಿ ಹೊಸ ಯೋಜನೆಯನ್ನು ಬಿಟ್ಟುಕೊಡತಕ್ಕದ್ದೇ ಎಂದು ಸ್ಪಷ್ಟ ಸೂಚನೆ ಕೊಟ್ಟೇ ಚರ್ಚಿಲ್ಲ-ಅಮೇರಿಯವರು ವೆವ್ಹೆಲ ಯೋಜನೆಗೆ ತಮ್ಮ ಸಮ್ಮತಿ ಕೊಟ್ಟಿದ್ದಿರಬೇಕು. ಇಲ್ಲವಿದ್ದರೆ ಜಿನ್ನಾರವರು ಒಲ್ಲೆನ್ನುತ್ತಲೇ ತಮ್ಮ ಯೋಜನೆಯನ್ನು ವೆವ್ಹೆಲ ದೊರೆಗಳು ಹಿಂತೆಗೆದುಕೊಂಡಿದ್ದರ ಉದ್ದೇಶ ಸರಿಯಾಗಿ ಹತ್ತಬರುವದಿಲ್ಲ. ಆದರೂ ವೆವ್ಹೆಲ ದೊರೆಗಳ ಉದ್ದೇಶದ ಬಗ್ಗೆ ಸಂದೇಹಪಡಬೇಕಿಲ್ಲೆಂದು ಸರದಾರ ವಲ್ಲಭಭಾಯಿ ಪಟೇಲರು ನಮಗೆ ಬೋಧಿಸುತ್ತಾರೆ. ಪಂ. ಜವಾಹಿರಲಾಲರೂ ಹಾಗೆಯೇ ಹೇಳುತ್ತಾರೆ. ಇದರಿಂದ ಪುನಃ ಆಶೆಯುಂಟಾಗುತ್ತದೆ. ವೆವ್ಹೆಲ-ಯೋಜನೆ ಬಿಟ್ಟುಕೊಟ್ಟಾಗ್ಯೂ ತಮ್ಮ ಕಾರ್ಯಕಾರಿ ಮಂಡಳದಲ್ಲಿ ಪಂ. ನೆಹರು, ಶ್ರೀ. ಭುಲಾಭಾಯಿ ಪ್ರಭೃತಿ ಕಾಂಗ್ರೆಸ ಪ್ರಮುಖರನ್ನು ಸೇರಿಸಿಕೊಳ್ಳುವ ವಿಚಾರವನ್ನು ಸರ್ವಾಧಿಕಾರಿಗಳು ಮಾಡುತ್ತಿದ್ದಾರೆಂದು ಒಂದು ವಾರ್ತೆ ಬಂದಿತ್ತು. ಆದರೆ ಈ ವಿಚಾರ ರಾಷ್ಟ್ರಪತಿ ಮೌಲಾನಾ ಅಝಾದರಿಗೆ ಸಮ್ಮತವಿಲ್ಲ. ಕಳೆದ ೩ ವರ್ಷಗಳಿಂದ ದೇಶದಲ್ಲಿ ನಡೆದ ದಮನಕ್ಕೂ ಕಷ್ಟಗಳಿಗೂ ಅನಾಚಾರಗಳಿಗೂ ಕಾರಣರಾಗಿರುವ ಕಾರ್ಯಕಾರಿ ಮಂಡಳದ ಈಗಿನ ಸದಸ್ಯರೊಡನೆ ಕಾಂಗ್ರೆಸ್ಸಿಗರು ಸಹಕರಿಸುವದು ಸಾಧ್ಯವೇ ಇಲ್ಲೆಂದು ಅವರು ಸ್ಪಷ್ಟ ಮಾಡಿದ್ದಾರೆ. ಹಾಗಾದರೆ ಮುಂದೇನು? ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಈ ಪ್ರಶ್ನೆಗೆ ಉತ್ತರ ಸಿಗಲು ಇನ್ನೂ ಕೆಲ ದಿನಗಳು ಕಳೆಯಬೇಕು. ಬ್ರಿಟಿಶ ಪಾರ್ಲಿಮೆಂಟಿನ ಚುನಾವಣೆಯ ಪರಿಣಾಮ ಪ್ರಕಟವಾಗಿ— ಅಂದರೆ [illegible] — ಬ್ರಿಟನ್ನಿನಲ್ಲಿ ಯಾವ ಪಕ್ಷ ಅಧಿಕಾರಾರೂಢವಾಗುತ್ತದೆಂಬುದನ್ನು ನೋಡಬೇಕು. ಮುಂದಿನ ವಾರ ಸರ್ವಾಧಿಕಾರಿಗಳು ಎಲ್ಲ ಪ್ರಾಂತಾಧಿಪರ ಸಭೆಯನ್ನು ದಿಲ್ಲಿಯಲ್ಲಿ ಕರೆದಿದ್ದಾರೆ. ಅವರು ಸರ್ವಾಧಿಪತಿಗಳಿಗೆ ಏನು ಸಲಹೆ ಕೊಡುತ್ತಾರೆಂಬುದನ್ನು ನೋಡಬೇಕು. ಆದರೂ ವೆವ್ಹೆಲ ದೊರೆಗಳು ಸದ್ಯಕ್ಕೆ ರಾಷ್ಟ್ರೀಯ ಸಭೆಯನ್ನು ಸಂತೈಸುವ ಧೋರಣೆಯನ್ನು ಇಟ್ಟುಕೊಂಡಿದ್ದಾರೆಂದು ತಿಳಿಯಲಡ್ಡಿಯಿಲ್ಲ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಪುನರ್ವಸು ನಕ್ಷತ್ರದ ಪ್ರಭಾವ ಪೂರ್ಣವಾಗಿ ಪ್ರಕಟವಾಯಿತು! ಹೊಳೆಹಳ್ಳಗಳೆಲ್ಲ ತುಂಬಿ ಹರಿಯಹತ್ತಿದವು. ಗುರುವಾರ (ಇದು ಆ ನಕ್ಷತ್ರದ ಕೊನೆಯ ದಿನ) ನಂತರ ಎಡೆಬಿಡದೆ ಮಳೆಗರೆಯಿತು. ಆ ದಿನ ೬-೮ ಇಂಚು ಮಳೆಯಾಗಿರಬೇಕು. ಪುಷ್ಯಾ ನಕ್ಷತ್ರವೂ ಕಣ್ಣುಬಿಟ್ಟು ನೋಡುತ್ತಿದೆ. ಈ ವರೆಗೆ ಅಂತು ೭೫-೭೬ ಇಂಚು ಮಳೆಯಾಗಿರಬಹುದು.

ದೇವಗಿರಿಯೊಳಗಿನ ಯೋಗ್ಯ ಧಾರಣೆಯ ಅಂಗಡಿಯಲ್ಲಿ ಕಳ್ಳತನ ನಡೆದಿದೆಯೆಂಬುದು ಸುಳ್ಳಿರುತ್ತದೆಂತಲೂ, ಕುಮಟೆಯಿಂದ ಸಾಮಾನು ತರಿಸಲಿಕ್ಕೆ ೧-೨ ದಿನ ಎಲ್ಲಾದರೂ ತಡವಾಗಿರಬಹುದಾಗಿದ್ದರೂ ಸೀದಾ ಚೀಟಿ-ಧಾರಕರಿಗೆ ಕಾಲಕಾಲಕ್ಕೆ ಚೀಟಿಯಲ್ಲಿ ನಮೂದಿದ್ದಷ್ಟು ಸೀದಾ ಸರಕು ತಪ್ಪದೆ ಕೊಡಲಾಗುತ್ತದೆಯೆಂತಲೂ, ಅಕ್ಕಿ ಹಂಚುವಲ್ಲಿ ಭೇದಭಾವ ಮಾಡಿಲ್ಲೆಂತಲೂ, ಸೀದಾ-ಸರಕು ಒಯ್ಯಲು ಚೀಟಿಯಲ್ಲಿ ನಮೂದಿಸಲ್ಪಟ್ಟ ಮನೆಯ ಯಜಮಾನನೇ ಬರಬೇಕೆಂದು ನಿಯಮವಿಲ್ಲೆಂತಲೂ, ಮನೆಯವರು ಯಾರು ಬಂದರೂ ಸರಕು ಕೊಡಲ್ಪಡುತ್ತದೆಂತಲೂ, ಅಂಗಡಿ ತೆರೆದಿದ್ದಾಗ ಬಂದು ಹತ್ತಿಕಾಳು ಬೇಡಿದವರಿಗೆ ಮಾರಿಯೊಂದಕ್ಕೆ ೨ ಮುಣ್ಣಂತೆ ಹತ್ತಿಕಾಳು ಕೊಡಲ್ಪಡುತ್ತದೆಂತಲೂ, ಇಂಥಿಂಥ ಸರಕಿನ ಬಟವಡೆಗೆ ಇಂಥಿಂಥ ದಿನವೇ ಬರಬೇಕೆಂಬ ಕಟ್ಟು ಇಲ್ಲೆಂತಲೂ ಅಂಗಡಿಯ ಚಾಲಕರಾಗಿರುವ ದೇವಗಿರಿಯ ವಿವಿಧೋದ್ದೇಶಗಳ ಸಂಘದ ಚೇರಮನ್ನರು ತಿಳಿಸುತ್ತಾರೆ. ತಮ್ಮ ಮಾತಿಗೆ ಪುಷ್ಟಿ ಕೊಡುವದಕ್ಕಾಗಿ ೨೦-೨೫ ಜನ [illegible]ಗಳ ಸಹಿಯುಳ್ಳ ಒಂದು ಶಿಫಾರಸು ಪತ್ರವನ್ನು ಅವರು ಕಳಿಸಿಕೊಟ್ಟಿದ್ದಾರೆ.

ಕಳೆದ ಮಾರ್ಚ ತಿಂಗಳಲ್ಲಾದ ಗಂಡು ಮಕ್ಕಳ ಮುಲ್ಕಿ ಪರೀಕ್ಷೆಯ ಪರಿಣಾಮ ಮೇ ತಾ. ೩೧ಕ್ಕೆ ಪ್ರಕಟವಾಗಿತ್ತು. ಅದರೊಳಗಿನ ತೇರ್ಗಡೆಯಾದವರ [illegible] ಯಾಯಿತೆಂದೋ ಏನೋ ವಿದ್ಯಾರ್ಥಿಗಳು ತೇರ್ಗಡೆಯಾಗದವರ ಉತ್ತರ-ಪತ್ರಗಳನ್ನು ಪುನಃ ಪರಿಶೀಲಿಸಿಕೊಂಡು ಮೊನ್ನೆ ಸದರಿ ಪರೀಕ್ಷೆಯ ಪುರವಣಿ-ಫಲಿತಾಂಶವನ್ನು ಪ್ರಕಟಿಸಿಕೊಟ್ಟಿದ್ದಾರೆ. ನಮ್ಮ ಜಿಲ್ಹೆಯೊಳಗಿಂದ ಈ ಕೆಳಗೆ ಕಾಣಿಸಿದ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ—

ಕುಮಟಾ ಕೇಂದ್ರ:— ಕೃಷ್ಣ ಬಿ. ಗಾಂವಕರ, ಕೃಷ್ಣ ಪಟ್ಟು (ಪರೀಕ್ಷೆಯಲ್ಲಿ ತಾನು ಉತ್ತೀರ್ಣನಾಗಲಿಕ್ಕಿಲ್ಲೆಂಬ ತಿಳುವಳಿಕೆಯಿಂದ ವಿಷ ಸೇವಿಸಿ ಪ್ರಾಣತ್ಯಾಗ ಮಾಡಿದ ಮಾಲಕ್ಕಿಯ ಚಮಗಾರ ಹುಡುಗನಿವನು), ನಾಗಭೂಷಣ ಎಸ್. ಹೆಗಡೆ, ನಾಗೇಶ ಎಚ್. ನಾಯಕ, ನಾರಾಯಣ ಸಿ. ಶೆಟ್ಟಿ, ಪಾಂಡುರಂಗ ಪಿ ಶೇಟ, ಪುರುಷೋತ್ತಮ ವ್ಹಿ. ಹೆಗಡೆ, ಫ್ರಾನ್ಸಿಸ್ ಎಮ್ ಫರ್ನಾಂಡೀಸ, ಬಾಳಾ ಪಿ. ನಾಯಕ, ಮಾಧವ ಯಾನೆ ವೈಕುಂಠ ಬಾಬ ಭಟ್ಟ, ಮನೋಹರ ಆರ್ ಕುದ್ರಿಗಿ, ರಾಮಚಂದ್ರ ಮಾಧವ ಭಟ್ಟ, ರಾಮದಾಸ ಎಲ್. ಶಿವರ್ಣಕರ, ರಾಮಾ ದಾಸಪ್ಪ ವೈದ್ಯ, ರುಕ್ಮಾರ ಎಮ್ ಉದ್ರಿಗ, ರಂಗಾ ಡಿ ನಾಯಕ, ವಾಸುದೇವ ಆರ್. ಶೇಟ, ಶಿವರಾಮ ಎಸ್. ಹೆಗಡೆ, ಶಿವಪ್ಪ ಎಸ್. ನಾಯಕ, ಹನುಮಂತ ಜಿ ಪಟಗಾರ.

ಸಿರ್ಸಿ ಉಪಕೇಂದ್ರ:— ನಾಗೇಶ ಡಿ. ಶೆಟ್ಟಿ, ನಾಗೇಶ್ವರ ಪಿನ್ ಬಾಳ ನಾಯಕ, ಕುಮಾರಿ ಹರೋಹಳ್ಳಿಬಾಯಿ ಜೇ ಮೆಂಡೋಜ.

ಕಾರವಾರ ಕೇಂದ್ರ:— ಈರಪ್ಪ ಪಿ ನಾಯ್ಕ, ಗೋವಿಂದ ಪಿ. ಗಾಂವಕಾರ, ತಿಮ್ಮಪ್ಪ ವ್ಹಿ. ನಾಯ್ಕ, ನಾಗಪ್ಪ ಪಿ ನೇವಾಡಿಕರ, ನಾರಾಯಣ ಎಮ್ ನಾಯ್ಕ, ಬೀರಪ್ಪ ವ್ಹಿ ನಾಯ್ಕ, ರಾಮಕೃಷ್ಣ ಜಿ ಶೆಟ್ಟಿ, ವಿಶ್ವನಾಥ ಡಿ ಶೇಣ್ವಿ, ಶಾಲಿನೀಬಾಯಿ ಎಮ್ ದೇಸಾಯಿ, ಸೋಮ ಎಚ್ ಆಗೇರ.

ಹೊನ್ನಾವರ— (ತಾ. ೧೪-೭-೪೫) ಇಲ್ಲಿಯ ಸೀದಾ ಅಂಗಡಿಗಳಲ್ಲಿ ಈಗ ಗೋದಿಯ ದರವನ್ನು [illegible] ೩ ಆಣೆಯಂತೆ ಹೆಚ್ಚಿಸಿ ರೂ ೧-೧-೦ ಮಾಡಿದ್ದಾರೆ. ಆದರೆ ಈಗ ಕೊಡುವ ಗೋದಿ ಹೀನ ತರಗತಿಯದು! ಭಟಕಳದಲ್ಲಿ ಖರಾಬಾಗಿದೆ; ಅದು ಇಲ್ಲಿಗೆ ಬಂದಿರುತ್ತದಂತೆ.

ಬೇಂತಿಸವರ ಹತ್ತೀಕಾಳು ಮಳೆಯಲ್ಲಿ ತೊಯ್ದು ಬಂದಿರುವದರಿಂದ ಕಪ್ಪಾಗಿರುತ್ತದೆಂದು ಜನರ ದೂರು. ಆದರೂ ಅದನ್ನೇ ಒಯ್ಯಬೇಕಾಗಿದೆ. ಬೇರೆ ಹತ್ತೀಕಾಳು ಹೆಚ್ಚಿಗೆ ದುಡ್ಡು ಕೊಡಬಲ್ಲಷ್ಟವರಿಗೂ ಕೂಡ ಎಲ್ಲೂ ಸಿಗುವದಿಲ್ಲ!

ಬೈಲೂರ— (ತಾ. ೧೬-೭-೪೫) ಇಲ್ಲಿಯ ಶ್ರೀ ಚಿದಾನಂದೇಶ್ವರ ವಾಚನಾಲಯಕ್ಕೆ ಕಳೆದ ವರ್ಷ ಹಿಂದಿನ ಶಿಲ್ಕು ರೂ ೩೩-೯-೩ ಕೂಡಿ ರೂ. ೧೧೭-೩-೩ ಉತ್ಪನ್ನ ಸಿಕ್ಕಿತು. ಅದರೊಳಗಿಂದ ರೂ. ೮೮-೧೩-೩ ಖರ್ಚಾಗಿ ವರ್ಷದ ಕೊನೆಗೆ ರೂ. ೨೮-೧೦-೦ ಶಿಲ್ಕು ಇದೆ. ವಾಚನಾಲಯದ ಪುಸ್ತಕ ಭಾಂಡಾರದಲ್ಲಿ ೩೧ ಹೊಸ ಪುಸ್ತಕಗಳು ಕೂಡಿ ಒಟ್ಟು ಪುಸ್ತಕಗಳು ಈಗ ೩೫೦ ಆಗಿವೆ.

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. K

ANNOUNCEMENT.
The Board of Directors have pleasure
to announce that a Branch of the Bank
has been opened at SIRSI on Wednesday
the 20th June 1945.

COONDAPOOR,
22-6-1945.

K VAMAN SHENAI,
CHAIRMAN

ಜಪಾನದೊಡನೆ ಒಪ್ಪಂದವೇ?

(ನಿರೀಕ್ಷಕನು ಬರೆದುದು)

ಶಾಂತಸಾಗರದಲ್ಲಿ ಅಮೇರಿಕೆಯ ನೌಕಾದಳವು ಜಪಾನ ನಗರಗಳ ಮೇಲೆ ನಡೆಸುವ ಮಹೋಗ್ರ ಚಟುವಟಿಕೆಗಳನ್ನು ಪರಿಶೀಲಿಸಿದರೆ ಜಪಾನದ ಪತನ ತೀರ ಸಮೀಪ ಬಂದಿದೆಯೆಂದು ಭಾವನೆಯಾಗುತ್ತಿದೆ. ಇಷ್ಟು ದಿನ ಅಮೇರಿಕೆಯ ವಿಮಾನದಳಗಳಷ್ಟೇ, ಆ ವಿಭಾಗಗಳ ಆಕಾಶಮಾರ್ಗ ವಿಮಾನಗಳು ಜಪಾನಿನ ನಡುಗಡ್ಡೆಗಳ ಮೇಲೆ — ಜಪಾನ ದೇಶವು ಅನೇಕಾನೇಕ ನಡುಗಡ್ಡೆಗಳ ಸಾಲೆಂಬುದನ್ನು ವಾಚಕರು ನೆನಪಿನಲ್ಲಿಟ್ಟುಕೊಳ್ಳಬೇಕು — ಹಗಲು ರಾತ್ರಿ ಬಾಂಬು ಗುಂಡುಗಳನ್ನೆಸೆಯುತ್ತ ನಗರಗಳನ್ನು, ಕಾರಖಾನೆಗಳನ್ನು ನೆಲಸಮ ಮಾಡುವ ಉದ್ಯೋಗವನ್ನು ನಡೆಸಿದ್ದವು. ಈ ವಿಮಾನದಾಳಿಗಳು ಸೈನ್ಯ ಸ್ಥಾನಗಳ ಮೇಲೆ ಇಲ್ಲವೆ ಯುದ್ಧೋಪಯೋಗಿ ಸಾಹಿತ್ಯ ತಯಾರ ಮಾಡುತ್ತಿರುವ ಕಾರಖಾನೆಗಳ ಮೇಲಷ್ಟೇ ಆಗದೆ ನಾಗರಿಕರ ವಸತಿಸ್ಥಾನಗಳ ಮೇಲೂ ಆಗುತ್ತಿವೆಯೆಂಬುದನ್ನು ಸಮರ್ಥಿಸಲು ನನಗೆ ಅತ್ಯಂತ ವ್ಯಸನವಾಗುತ್ತಿದೆ! ೬ ದಿನಗಳ ಹಿಂದೆ ಕಾಂಟನ ಹತ್ತಿರದ ಮೇಲಾದ ಬಾಂಬು-ಮಳೆಯಲ್ಲಿ ಜಪಾನಿಯರಿಗೆ ವಿಶೇಷ ನಷ್ಟವಾಗದೆ ನೂರಾರು ಚೀನಿಯರೇ ಸಾವು ನೋವುಗಳಿಗೀಡಾದರೆಂದು ವರದಿಯಾಗಿದೆ! ಹಿಂದೆ ಲಂಡನದ ಮೇಲೂ ಬ್ರಿಟನ್ನಿನ ಇನ್ನಿತರ ನಗರಗಳ ಮೇಲೂ ಹಿಟ್ಲರನು ಬಾಂಬು ವೃಷ್ಟಿ ಮಾಡಿಸಿದಾಗ ಅವನನ್ನು ಜರೆಯುತ್ತಿದ್ದ ಮಿತ್ರರು ಅವಿವೇಕದ ಈ ದಾಳಿಗಳನ್ನು ಹೇಗೆ ಸಮರ್ಥಿಸುವರೋ ಕಾಣೆನಯ್ಯಾ! ಅದೇನೂ ಇರಲಿ. ವಿಮಾನದಾಳಿಗಳ ಜೊತೆಗೆ ಈಗ ಅಮೇರಿಕೆಯ ನೌಕಾದಳಗಳ ದಾಳಿಗಳೂ ಪ್ರಾರಂಭವಾಗಿವೆ. ಅಮೇರಿಕೆಯ ಯುದ್ಧನೌಕೆಗಳೀಗ ಜಪಾನದ ರಾಜಧಾನಿಯಾದ ಟೋಕಿಯೋ ನಗರದಿಂದ ೫೦ ೬೦ ಮೈಲು ಅಂತರದಲ್ಲಿ ಸಂಚರಿಸಲಾರಂಭಿಸಿವೆಯೆಂದೂ ಕಳೆದ ಬುಧವಾರ ರಾತ್ರಿ ಅವು ಟೋಕಿಯೋದಿಂದ ೯೦ ಮೈಲು ದಕ್ಷಿಣಕ್ಕಿರುವ ಯೋಕೋಹಾಮಾ ಎಂಬ ಬಂದರದ ಮೇಲೆ ಗುಂಡುಗಳನ್ನೆಸೆಯುತ್ತಿದ್ದವೆಂದೂ ಸುದ್ದಿ ಬಂದಿದೆ! ಅಮೇರಿಕೆಯ ವಿಮಾನಗಳ ಜೊತೆಗೆ ಈಗ ಬ್ರಿಟಿಶ ವಿಮಾನಗಳೂ ದಾಳಿ ಮಾಡಲು ಹೋಗಹತ್ತಿವೆಯಂತೆ. ಇದೆಲ್ಲ ಪರಿಸ್ಥಿತಿಯನ್ನು ನೋಡಿದರೆ, ಇನ್ನೊಂದು ತಿಂಗಳಲ್ಲಿ ಮಿತ್ರರ ದಂಡುಗಳು ಜಪಾನದಲ್ಲಿಳಿದು, ಮೂರೇ ತಿಂಗಳಲ್ಲಿ ಇಡೀ ಜಪಾನದೇಶವನ್ನು ರಾಕ್ಷಸರಂತೆ ಹೊಕ್ಕು ಹಿಡಿದಾವವೆಂದು ಅಮೇರಿಕೆಯ ನೌದಂಡಿನ ದಳಪತಿಗಳಾದ ಎಡ್ಮಿರಲ್ ಹಾಲ್ಸಿಯವರು ಹೇಳುವ ಮಾತಿನಲ್ಲಿ ನಂಬಿಗೆಯನ್ನಿಡಲು ಮನಸ್ಸಿನ ಪ್ರವೃತ್ತಿಯಾಗುತ್ತಿದೆ. ಈ ವರುಷದ ಕೊನೆಯೊಳಗಾಗಿ ಇಲ್ಲವೆ ೧೯೪೬ನೇ ಇಸವಿಯ ಪ್ರಾರಂಭಕ್ಕೆ ಯುದ್ಧ ಮುಕ್ತಾಯವಾಗುವದೆಂದು ಚೀನದ ಪ್ರಧಾನ ಮಂತ್ರಿಗಳಾದ ಡಾ|| ಸೂಂಗರವರು ಮೊನ್ನೆ ಶುಕ್ರವಾರವೇ ಚೀನೀ ಪ್ರಜಾಪ್ರತಿನಿಧಿಗಳ ಸಭೆಗೆ ಹೇಳಿದ್ದುಂಟು. ಆದರೆ ಡಾ|| ಸೂಂಗರ ಮಾತನ್ನು ನಂಬಿ ಯುದ್ಧ ಮುಕ್ತಾಯದ ದಿನ ಸಮೀಪ ಬಂತೆಂದು ನಾವು ತಳೆದ ಉಲ್ಲಾಸವು ಅಮೇರಿಕೆಯ ಯುನಾಯಟೆಡ್ ಪ್ರೆಸ್ಸಿನ ವಾಶಿಂಗ್ಟನ ಸುದ್ದಿಗಾರನು ವರದಿ ಮಾಡಿರುವ ಮಾತೇಯನ್ನೋದಿ ತೀರ ತಣ್ಣಗಾಗಿ ಹೋಗಿದೆ! ಚೀನದೊಳಗಿನ ಜಪಾನಿ ಸೈನ್ಯಗಳ ಚಲನ-ವಲನಗಳ ಹಾಗೂ ವ್ಯೂಹಗಳ ಬಗ್ಗೆ ಸಿಕ್ಕ ತಾಜಾ ವರ್ತಮಾನಗಳನ್ನು ಪರಿಶೀಲಿಸಿ, ಜಪಾನಿನ ಯುದ್ಧವು ಇನ್ನು ೩ ೪ ವರ್ಷಗಳ ವರೆಗೆ ನಡೆಯುವದಾಗಿ ಓರ್ವ ಕಾರ್ಯದಕ್ಷ ತಜ್ಞ ಸೈನ್ಯಾಧಿಕಾರಿಯು ಆ ಸುದ್ದಿಗಾರನಿಗೆ ತಿಳಿಸಿದ್ದಾನಂತೆ. ಕೊನೆಯ ವರೆಗೂ ಹೋರಾಡತಕ್ಕದ್ದೆಂದು ಜಪಾನಿಗಳ ನಿರ್ಧಾರವಾಗಿದೆ, ಜಪಾನಿ ನಡುಗಡ್ಡೆಗಳು ಬಂದುವೇಳೆ ಜಪಾನಿಯರಿಗೆ ಬಿಟ್ಟರೂ ಉತ್ತರ ಚೀನದಲ್ಲೂ, ಮಂಚೂರಿಯದಲ್ಲೂ ನಿಂತು ಯುದ್ಧ ಮುಂದೆ ಸಾಗಿಸುವ ಬಗ್ಗೆ ಅವರು ಮನೋನಿರ್ಧಾರ ಮಾಡಿ ಆ ರೀತಿ ಅವರು ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಮಧ್ಯ ಚೀನದಲ್ಲೂ ಚೀನದ ಸಮುದ್ರ ತೀರಾವಳಿಯಲ್ಲೂ ಅವರು ಆಯಕಟ್ಟಿನ ಸ್ಥಳಗಳಲ್ಲಿ ಸಂರಕ್ಷಣೆಯ ಭದ್ರ ಕೋಟೆ ಕೊತ್ತಲಗಳನ್ನು ಕಟ್ಟಲಾರಂಭಿಸಿದ್ದಾರೆ, ಜಪಾನದ ಮೇಲೆ ಮಿತ್ರರ ಉಗ್ರ ವೈಮಾನಿಕ ದಾಳಿಗಳು ಪ್ರಾರಂಭವಾದರೂ ಅವರು ಚೀನದಲ್ಲಿಯ ಮಂಚೂಕೋದಲ್ಲಿಯ ತಮ್ಮ ವೈಮಾನಿಕ ಬಲವನ್ನು ಸ್ವದೇಶ ರಕ್ಷಣೆಯ ಸಲುವಾಗಿ ಹಿಂತೆಗೆದುಕೊಂಡಿಲ್ಲ. ಈ ಪ್ರದೇಶದಲ್ಲಿ ಕಡಿಮೆಯೆಂದರೆ ೩೦ ಲಕ್ಷದಷ್ಟು ಜಪಾನಿ ಸೈನ್ಯವಿದೆ, ಎಂದು ಮುಂತಾಗಿ ಮೇಲೆ ಹೇಳಿದ ತಜ್ಞ ಸೈನ್ಯಾಧಿಕಾರಿಯು ವಾದಿಸುತ್ತಾನೆ. ಇತ್ತ ಬ್ರಹ್ಮದೇಶ, ಬೋರ್ನಿಯೋಗಳೊಳಗಿನ ಪರಿಸ್ಥಿತಿಯನ್ನು ನೋಡಿದರೆ ಜಪಾನಿಯರು ಎಲ್ಲೂ ಒತ್ತಾಯಕ್ಕೆ ಹಿಂದೆಗೆಯಲಾರರೆಂದು ತಿಳಿಯಬೇಕು. ರಂಗೂನ ಬಂದರಿನ ಪೂರ್ವಕ್ಕೆ ಮಾರ್ತಾಬಾನ ಆಖಾತಕ್ಕೆ ಕೂಡುವ ಸಿತಾಂಗ ನದಿಯ ಬಳಿಯಲ್ಲೀಗ ಜಪಾನಿಯರು ಭದ್ರವಾಗಿ ತಳವೂರಿದ್ದಾರೆ. ಬೋರ್ನಿಯೋದಲ್ಲೂ ಜಪಾನಿಯರ ಪ್ರತಿಭಟನೆ ಬಿರುಸಾಗಿದೆ. [illegible] ಆಸ್ಟ್ರೇಲಿಯಾದವರ ಪ್ರಗತಿ ಅಲ್ಲಿ ಕುಂಠಿತವಾಗಿ ನಿಂತಿದೆ. ಈ ಎಲ್ಲ ಪರಿಸ್ಥಿತಿಯನ್ನು ಕಂಡೇ ಜಪಾನದೊಡನೆ ಒಪ್ಪಂದ ಮಾಡಿಕೊಂಡು ಬೇಸರಗೊಳಿಸಿಬಿಟ್ಟಿರುವ ಈ ಯುದ್ಧವನ್ನು ಹೇಗಾದರೂ ಕೊನೆಗೊಳಿಸಿಕೊಳ್ಳುವ ಆಲೋಚನೆಯನ್ನು ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಮಾಡಿರಬೇಕು. ಬರ್ಲಿನದ ಹತ್ತಿರ ಪೋಟ್ಸಡೆಮ್ ಎಂಬಲ್ಲಿ ಈಗ ಸ್ಟೆಲಿನ-ಟ್ರೂಮಾನ-ಚರ್ಚಿಲ್ಲ ತ್ರಿಕೂಟದ ಸಭೆ ಸೇರಿದೆ. ಈ ತ್ರಿಕೂಟದ ಸಭೆಗೆ ಬರುವಾಗ ಟ್ರೂಮನ್ನರು ಜಪಾನದೊಡನೆ ಮಾಡಿಕೊಳ್ಳಬಹುದಾದ ಒಪ್ಪಂದದ ಕರಡು ಮಸೂದೆಯನ್ನು ತಮ್ಮ ಹಸ್ತಕರಾದ ಜೋಸೆಫ್ ಗ್ರ್ಯೂ ಇವರ ಕಡೆಯಿಂದ ತಯಾರಿಸಿಕೊಂಡು ಬಂದಿದ್ದಾರೆಂದೂ, ಈ ಮಸೂದೆಯನ್ವಯ ಜಪಾನರ ಸಾಮ್ರಾಜ್ಯ ಹಾಗೆಯೇ ಉಳಿಯಗೊಡಲ್ಪಡುವದೆಂದೂ, ಜಪಾನರು "ನಿಮಗೆ ಸಾವು ಶರಣು ಬಂದಿದ್ದೇವೆ" ಎಂದು ಹೇಳಿದರೆ ಅಷ್ಟರಿಂದಲೇ ಮಿತ್ರರು ಸಮಾಧಾನಪಡುವರೆಂದೂ ರಾಜಕೀಯ ಅಂತರಂಗಗಳನ್ನು ಪ್ರಯತ್ನಪೂರ್ವಕ ತಿಳಕೊಂಡು ಅವನ್ನು ಧಿಟ್ಟತನದಿಂದ ಪ್ರಕಟಗೊಳಿಸಿದಾವ ಖ್ಯಾತ ಅಮೇರಿಕನ್ ಪತ್ರಿಕಾ ಲೇಖಕರಾದ ಡ್ರ್ಯೂ ಪಿಯರಸನ್‌ರವರು ಕಳೆದ ಬುಧವಾರವೇ ಒಂದು ಮಹತ್ವದ ಗೌಪ್ಯ ಸ್ಫೋಟ ಮಾಡಿದ್ದಾರೆ. ಜಪಾನಿಯರಾದರೂ ರಶ್ಯರ ಸಹಾಯದಿಂದ ಮಿತ್ರರೊಡನೆ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದು ಕಂಡುಬರುತ್ತದೆ. ಮೊಸ್ಕೋದಲ್ಲಿದ್ದ ಜಪಾನಿ ರಾಯಭಾರಿಯು ಕೆಲವು ದಿನಗಳ ಹಿಂದೆ ಜಪಾನಕ್ಕೆ ಹೋಗಿ, ಜಪಾನ ಸರಕಾರದೊಡನೆ ಮಾತಾಡಿಕೊಂಡು ತಿರುಗಿ ಮೊಸ್ಕೋಕ್ಕೆ ಹೋಗಿದ್ದನು. ತ್ರಿಕೂಟದ ಬರ್ಲಿನ ಸಭೆಗಾಗಿ ಬರ್ಲಿನಕ್ಕೆ ಹೊರಡುವ ಮುಂಚೆ ರಶ್ಯರ ವಿದೇಶ ಸಚಿವರಾದ ಮೊಲೊಟೊವ್ಹರವರು ಈ ರಾಯಭಾರಿಯೊಡನೆ ದೀರ್ಘ ಕಾಲ ವಿಚಾರ-ವಿನಿಮಯ ಮಾಡಿದ ವಾರ್ತೆಯೂ ಉಂಟು. ಈ ವಿಚಾರವಿನಿಮಯದ ಕಾಲಕ್ಕೆ ಮೊಲೊಟೋವ್ಹರವರು, ಒಪ್ಪಂದದಿಂದ ಯುದ್ಧ ಮುಕ್ತಾಯ ಮಾಡುವಂತಿದ್ದರೆ ಜಪಾನರು ಎಂತಹ ಒಪ್ಪಂದವನ್ನು ಬಯಸುತ್ತಾರೆಂದು ತಿಳಕೊಂಡಿರಬೇಕಾಗಿಯೂ ತ್ರಿಕೂಟದ ಸಭೆಯಲ್ಲಿ ರಶ್ಯರು ಜಪಾನಿಯರೊಳಗೂ ಮಿತ್ರರೊಳಗೂ ಒಪ್ಪಂದ ಮಾಡಿಸಲು ಪ್ರಯತ್ನ ಮಾಡುವರೆಂದೂ ಪಾರ್ಲಿಮೆಂಟ ಪಕ್ಷದವರು ಊಹಿಸುತ್ತಾರೆ. ಜಾಗತಿಕ ಪರಿಸ್ಥಿತಿಯನ್ನೂ ಮಿತ್ರರನ್ನು ಅಲ್ಲಲ್ಲಿ ಕಾಡುತ್ತಿರುವ ಕಷ್ಟಗಳನ್ನೂ ನೋಡಿದರೆ ಮಿತ್ರರಿಂದಲೂ ರಶ್ಯರ ಸಲಹೆಯಂತೆ ವರ್ತಿಸಿ ಜಪಾನದೊಡನೆ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾಗಬಹುದೆಂದು ನನ್ನ ಅಂತರಂಗವು ಹೇಳುತ್ತದೆ. ಬ್ರಿಟಿಶರು ತಿರುಗಿ ಸ್ವಾಧೀನಪಡಿಸಿಕೊಂಡ ಬ್ರಹ್ಮದೇಶದಲ್ಲಿ ಬ್ರಿಟಿಶರಿಗೆ ಸಂಕಟವಾಗಿದೆ. ಜಪಾನಿಯರನ್ನು ಹೊಡೆದೋಡಿಸಿರೆಂದು ಬ್ರಿಟಿಶರು ಬ್ರಹ್ಮೀಯರಿಗೆ ಶಸ್ತ್ರಾಸ್ತ್ರಗಳನ್ನು ಹಂಚಿದ್ದರು. ಈಗ ಜಪಾನಿಯರು ಹೊರಬಿದ್ದು ಹೋದದ್ದರಿಂದ ಬ್ರಿಟಿಶರು ಆ ಜನರನ್ನು ನಿಃಶಸ್ತ್ರಗೊಳಿಸಲಾರಂಭಿಸಿದ್ದಾರೆ! ಆದರೆ ಬಹಳಷ್ಟು ಬ್ರಹ್ಮೀಯರು ತಮ್ಮ ಕಡೆಗಿರುವ ಶಸ್ತ್ರಾಸ್ತ್ರಗಳನ್ನು ತಿರುಗಿ ಒಪ್ಪಿಸಲು ಸಿದ್ಧರಿಲ್ಲ. ಅವರಿಗೂ ಬ್ರಿಟಿಶ ಸೈನಿಕರಿಗೂ ಕಾದಾಟಗಳಾಗಹತ್ತಿವೆಯಂತೆ. ಈ ಕಾದಾಟಗಳಲ್ಲಿ ಬ್ರಹ್ಮದೇಶದಲ್ಲಿದ್ದ ಅಮೇರಿಕೆಯ ಸೈನಿಕರು ತಟಸ್ಥರಾಗುಳಿದು ಬ್ರಿಟಿಶರಿಗೆ ನೆರವಾಗಲೊಪ್ಪುವದಿಲ್ಲೆಂಬ ಸುದ್ದಿಯಿದೆ. ಅತ್ತ ಯುರೋಪದಲ್ಲಿ, ಮಿತ್ರರ ಅಧೀನವಿರುವ ಉತ್ತರ ಇಟಾಲಿಯಲ್ಲಿ ಗಲಭೆಗಳಾಗಹತ್ತಿವೆ! ಯುರೋಪ ಮತ್ತು ಏಶಿಯಾ ಖಂಡವನ್ನು ವಿಂಗಡಿಸುವ ಡಾರ್ಡನೆಲಿಸ ಸಾಮುದ್ರಧುನಿಯ ಬಗ್ಗೆ ರಶ್ಯರೊಳಗೂ ತುರ್ಕರೊಳಗೂ ತಿಕ್ಕಾಟವುಂಟಾಗಿದೆ. ಈ ತಿಕ್ಕಾಟವು ವಿಕೋಪಕ್ಕೆ ಹೋದರೆ ಯುರೋಪದಲ್ಲಿ ಪುನಃ ರಣದುಂದುಭಿ ಮೊಳಗುವದೆಂಬ ಭೀತಿಯುಂಟು. ಯುರೋಪದ ರಾಜಕಾರಣದಲ್ಲಿ ಈಗ ರಶ್ಯರ ಪ್ರಭಾವ ಬಹಳ ಅವರು ಹೇಳಿದ್ದೇ ಪೂರ್ವಸಂಧಿ ಒಪ್ಪುವ ಕಾಲ ಬಂದಿದೆಯೆಂದೂ ಹೇಳಬಹುದು. ಕಳೆದ ಮಂಗಳವಾರ ರಶ್ಯರು ಆಕ್ರಮಿಸಿರುವ ಬರ್ಲಿನ ನಗರದ ಭಾಗದಲ್ಲಿ ಮೂರು ಪ್ರಚಂಡ ಸ್ಫೋಟಗಳಾದವಂತೆ. ಇವೆಂಥ ಸ್ಫೋಟಗಳೆಂದು ಮಿತ್ರ ಸೈನಿಕರಿಗೆ ತಿಳಿಯಬರಲಿಲ್ಲದ್ದರಿಂದ ಅವರು ತಮ್ಮ ಪಕ್ಕಕ್ಕೆ ಏನಾದರೂ ತರ್ಕಮಾಡಿಕೊಂಡು ಆತ್ಮಸಮಾಧಾನ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಅವರಿಗಾಗಲಿ ಮಿತ್ರಪಕ್ಷೀಯ ಪತ್ರಿಕಾ ಸುದ್ದಿಗಾರರಿಗಾಗಲಿ ರಶ್ಯರ ಪ್ರದೇಶಗಳಲ್ಲಿ ಪ್ರವೇಶ ಮಾಡಲು ಇನ್ನೂ ಅಪ್ಪಣೆಯಿಲ್ಲ! ಹೀಗೆಲ್ಲ ಸಂಕಟಗಳಿಗೀಡಾದ ಮತ್ತು ರಶ್ಯರ ಮುಂದೆ ಮಂದ ಪ್ರಭರಾದ ಮಿತ್ರರು ಜಪಾನದೊಡನೆ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾದಲ್ಲಿ ಯಾರೂ ಆಶ್ಚರ್ಯಗೊಳ್ಳಬೇಕಾಗಿಲ್ಲ. ಅದ್ದರಿಂದ ಜಪಾನ ಯುದ್ಧವು ಬೇಗನೆ ಮುಗಿಯಬಹುದೆಂದು ಚೀನ ಪ್ರಧಾನಮಂತ್ರಿ ಡಾ|| ಸೂಂಗರಂತೆ ನಾನೂ ಭವಿಷ್ಯ ಹೇಳುತ್ತೇನೆ. ಆದರೆ ಅವರು ಕಾಣುವ ಯುದ್ಧ ಮುಕ್ತಾಯದ ಬಗೆ ಬೇರೆ, ನಾನು ಕಾಣುವ ಬಗೆ ಬೇರೆ.

ಸಿದ್ದಾಪುರ—(ತಾ: ೧೩-೭-೪೫) ಸಿದ್ದಾಪುರ ರಹಿವಾಸಿ (ಸಿಥಾ) ಅಂಗಡಿಯಲ್ಲಿ ಕೊಟ್ಟ ೧ ರತ್ತಲ ೫ ತೊಲೆ ಸಕ್ಕರೆಯು ಬೇರೆ ಅಂಗಡಿಯಲ್ಲಿ ತೂಗಿ ನೋಡಿದಕ್ಕೆ ೧ ರತ್ತಲ ೨ ತೊಲೆಯಾಗುತ್ತದೆಂಬಲೂ, ||| ಪ್ಯಾಂಟ ಎತ್ತಿಗೆ ೨| ಆಣೆ ತಕ್ಕೊಳ್ಳುತ್ತಾರೆಂಬಲೂ, ೧ ಪೈ ತಿರುಗಿ ಕೊಡುವದಿಲ್ಲೆಂಬಲೂ ಈರಾ ಕನ್ನಾ ಎಂಬವನು ದೂರುತ್ತಾನೆ. ಹುಲೇಕಲ್ಲ ಎಂಬವರ ಅಂಗಡಿಯಲ್ಲಿ ೧ ರತ್ತಲ ೩೫ ತೊಲೆ ಸಕ್ಕರೆಗೆ ೮|| ಆಣೆ ತಕ್ಕೊಳ್ಳುತ್ತಾರೆಂಬ ಮೇಲಧಿಕಾರಿಗಳು ಚೌಕಶಿ ಮಾಡಿ ಬಡವರನ್ನು ಕಾಯಬೇಕೆಂದು ಊರವರ ಬಿನ್ನಹ.

ಶಿರಸಿ—(ತಾ ೧೫-೭-೪೫) ಜಿಲ್ಹಾ ಲೋಕಲ್ ಬೋರ್ಡಿನ ಚುನಾವಣೆಗೆ ಈ ತಾಲೂಕಿನಲ್ಲಿ ಮುಂಚೆ ೬ ಹುರಿಯಾಳುಗಳಿದ್ದರು ಅವರಲ್ಲಿಬ್ಬರು ತಮ್ಮ ಹುರಿಯಾಳು ಪತ್ರ ಹಿಂತೆಗೆದುಕೊಂಡರು. ಮತ್ತು ಉಳಿದ ಐವರಲ್ಲಿ ಹೋರಾಟವಾಯಿತು. ಕೊನೆಗೆ ರಾ|| ಮಧುಕೇಶ್ವರ ಚನ್ನವೀರ ಒಡೆಯರ, ಹುಡಿಪಾಳಪ್ಪ ಚನ್ನಪ್ಪ ಹೇಮಶೆಟ್ಟಿ ಮತ್ತು ಕೃಷ್ಣ ಸುಬ್ಬಾ ಭಟ್ಟ ಸುಗಾವಿ ಇವರು ಆರಿಸಿ ಬಂದಿದ್ದಾರೆ.

ಕಾರವಾರ—(ತಾ. ೧೬-೭-೪೫) ಈ ತಾಲೂಕಿನ ಜನರು ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ ಪಶು-ಚಿಕಿತ್ಸಾಲಯವು ನಿನ್ನೆಯಿಂದ ತೆರೆಯಲ್ಪಟ್ಟಿದೆ. ಅದರ ಉದ್ಘಾಟನ ಸಮಾರಂಭವು ಜಿಲ್ಹಾಧಿಕಾರಿಗಳಾದ ಶಿಪ್ನಾಪ್ಪಿ ನಂಜಪ್ಪ ಇವರ ಹಸ್ತದಿಂದ ಜರುಗಿತು. ಈ ಚಿಕಿತ್ಸಾಲಯದ ಮೂಲ ಕಲ್ಪನೆಯನ್ನು ಹೊರಡಿಸಿದವರು ಇಲ್ಲಿಯ ಸರಕಾರಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿರುತ್ತಿದ್ದ ರಾ|| ದಿವೇಕರ ಇವರು. ಅವರು ಆ ಕಾಲದಲ್ಲಿ ನಗರ ಸಭಾಧ್ಯಕ್ಷರಾಗಿದ್ದ ರಾ|| ಸಾ|| ಶೇಲಂಗರವರ ಸಹಾಯ ಪಡೆದು ಪಶುಚಿಕಿತ್ಸಾಲಯ-ಸ್ಥಾಪನೆಯ ಪ್ರಯತ್ನ ಮಾಡಲು ಒಂದು ಸಮಿತಿಯನ್ನು ನೇಮಿಸಿಕೊಂಡರು. ಸಮಿತಿಯ ಪ್ರಯತ್ನದಿಂದ ಊರಲ್ಲಿ ರೂ ೨೫೦೦ಗಳಷ್ಟು ಕೂಡಿತು. ಮುಂಬಯಿಯ ಪಾರ್ಸಿಯ ಚಾರಿಟೀಜ ಎಂಬ ದಾನ-ಶೂರ ಸಂಸ್ಥೆಯವರು ರೂ ೧೦,೦೦೦ ಕೊಟ್ಟರು. ಇಲ್ಲಿಯ ನಗರ ಸಭೆಯವರೂ ಕೂಡ ಯೋಗ್ಯ ಧಾರಣೆಯ ಅಂಗಡಿಯ ಬಾಬತೊಳಗಿಂದ ರೂ ೧೦೦೦೦ ಕೊಟ್ಟರು. ಈಗಿನ ಜಿಲ್ಹಾಧಿಪರು ತಮ್ಮ ಅಧಿಕಾರದೊಳಗಿನ ನಿಧಿಯೊಳಗಿಂದ ರೂ ೨೦೦೦ ಕೊಟ್ಟಿದ್ದಾರೆ. ಜಿಲ್ಹಾಧಿಪರ ಪ್ರಯತ್ನದಿಂದ ರಾ: ಸಿ ಎಫ್ ಗುಂಜಾಳ ಎಂಬ ತರುಣ ಮತ್ತು ಉತ್ಸಾಹಿ ಪಶು ವೈದ್ಯರು ಈ ಚಿಕಿತ್ಸಾಲಯಕ್ಕೆ ದೊರೆತಿದ್ದಾರೆ. ಕಾಳಿ ನದಿಯ ಉತ್ತರಕ್ಕಿರುವ ಭಾಗದವರ ಅನುಕೂಲತೆಗಾಗಿ ಈ ಚಿಕಿತ್ಸಾಲಯದ ಒಂದು ಶಾಖೆಯನ್ನು ಆ ಭಾಗದಲ್ಲೊಂದು ಕಡೆ ತೆರೆಯುವ ಸಂಕಲ್ಪವುಂಟೆಂದು ಉದ್ಘಾಟನ ಸಮಾರಂಭದ ಪ್ರಾಸ್ತಾವಿಕ ಭಾಷಣದಲ್ಲಿ ರಾ| ಸಾ| ಶೇಲಂಗರವರು ತಿಳಿಸಿದ್ದಾರೆ.

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ!
ಚಿನ್ನ-ಬೆಳ್ಳಿ ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಧಡಧಡನೆ ಕುಗ್ಗುವದು!
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಹಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟಾದಲ್ಲಿ
ವರ್ಷಕ್ಕೆ ರೂ ೩ ೪-೦
ಬೇರೆ ಊರಿಗೆ ವರ್ಷಕ್ಕೆ ೩-೮-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೧-೬
ಹಳೇ ಸಂಚಿಕೆಗೆ ೦ ೪ ೦
[illegible]
[illegible]
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B 1270 Monday, 30th July, 1945.

ಕಾನಡಾವೃತ್ತ

ವರ್ಷ ೨೬.] THE KANARA NEWS [ಸಂಚಿಕೆ ೫

ಕುಮಟಾ - ಸೋಮವಾರ, ತಾ ೩೦ ಮಾಹೆ ಜುಲೈ ೧೯೪೫ನೇ ಇಸವಿ.

ಜಾಹೀರಾತುಗಳ ದರ.
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸ್ಥಳೀಯ [illegible]
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ಚರ್ಚಿಲ್ಲರಿಗ ಅರ್ಧಚಂದ್ರ ! ಅಮೆರಿಗೆ ಅಪಮಾನ ! !

(ಸಂಗ್ರಹಕನು ಬರೆದುದು)

ಬ್ರಿಟಿಶ ಪಾರ್ಲಿಮೆಂಟಿನ ಚುನಾವಣೆಯ ಫಲಿತ ೨೬ ರಂದು ಹೊರಬೀಳುವಂತೆ ಕಳೆದ ಗುರುವಾರ ಹೊರಬಿತ್ತು. ನಾವು ಕಳೆದ ತಾ ೧೯ರ "ವೃತ್ತ"ದಲ್ಲಿ ನಾವು ಭವಿಷ್ಯ ವರ್ತಿಸಿದಂತೆ ಚರ್ಚಿಲ್ಲರ ಪ್ರಾಣಮಿತ್ರವಾದ ಟೋರಿ ಬಂಡವಲಗಾರ ಪಕ್ಷಕ್ಕೆ ಪ್ರಚಂಡ ಸೋಲು ಉಂಟಾದದ್ದು ಕಂಡು ಬಂತು! ಪಾರ್ಲಿಮೆಂಟಿನ ಒಟ್ಟು ೬೪೦ ಸ್ಥಾನಗಳಲ್ಲಿ ಈವರೆಗೆ ೬ ೭ ಸ್ಥಾನಗಳ ಚು [illegible] ಸಂಖ್ಯೆ ಮಾತ್ರ ಪ್ರಕಟವಾಗಿದೆ ಅದರಲ್ಲಿ ೩೯೦ ಸ್ಥಾನಗಳು ಕಾರ್ಮಿಕರ ಪಕ್ಷಕ್ಕೆ ಮತ್ತು ೨೭ ಸ್ಥಾನಗಳು ಲಿಬರಲ್, ಸ್ವತಂತ್ರ ಮತ್ತು ಚರ್ಚಿಲ್ಲ ಸರಕಾರದ ವಿರೋಧಿಗಳಾಗಿದ್ದ ಇನ್ನಿತರ ಪಕ್ಷಗಳಿಗೆ ಸಿಕ್ಕಿದ್ದು, ಚರ್ಚಿಲ್ಲರ ಪುಂಡಾಟಿಕೆ ಪಕ್ಷಕ್ಕೆ ಸ್ವತಃ ೧೯೫ ಮಾತ್ರ. ಆ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದ [illegible] ಪಕ್ಷಕ್ಕೆ ೧೫ ಹೀಗೆ ೨೧೦ ಸ್ಥಾನಗಳಷ್ಟೇ ಚರ್ಚಿಲ್ಲ ಸರಕಾರದ ಪಕ್ಷಕ್ಕೆ ಸಿಕ್ಕಿವೆ. ಜರ್ಮನ ಯುದ್ಧ ಗೆದ್ದ ಪುಣ್ಯವನ್ನು ಬೆನ್ನಿಗೆ ಕಟ್ಟಿ ಮತದಾರ ಲೋಕದ ಬೆಂಬಲವನ್ನು ಅತ್ಯಧಿಕವಾಗಿ ದೊರಕಿಸಿಕೊಂಡ ಚರ್ಚಿಲ್ಲರಿಗೆ ಬ್ರಿಟಿಶ ಜನತೆಯು ಈ ಪರಿ ಅರ್ಧಚಂದ್ರ ಕೊಟ್ಟು ಸ್ವೇಚ್ಛೆಯಿಂದ ಹೊರತಳ್ಳುವದೆಂದು ಯಾರೂ ಕನಸು-ಮನಸುಗಳಲ್ಲಿ ಕೂಡ ಭಾವಿಸಿದ್ದಿಲ್ಲ ಸ್ವತಃ ಚರ್ಚಿಲ್ಲರಿಗೂ ಅನಿಸಿದ್ದಿಲ್ಲ! ಒಂದು ವೇಳೆ ತಮಗೆ ಎಷ್ಟು [illegible] ಹೊಸ ಪಾರ್ಲಿಮೆಂಟಿನಲ್ಲಿ ತಮಗೆ ಬಹುಮತವಾಗದ ವರೆಗೂ ತಾವು ರಾಜೀನಾಮೆ ಕೊಡಲಿಕ್ಕಿಲ್ಲೆಂದು ಅವರು ಬಳಿಯಿದ್ದವರಿಂದು ಕಳೆದ [illegible] ಸುದ್ದಿ ಬಂದಿತ್ತು. ತಮ್ಮನ್ನು ಪರಾಭವಗೊಳಿಸುವಷ್ಟು ಶಕ್ತಿ ವಿರೋಧಿ ಪಕ್ಷಕ್ಕೆ ಬರಲಿಕ್ಕಿಲ್ಲೆಂದು ಆಗ ಅವರ ವಿಶ್ವಾಸವಾಗಿ ಇದರ ಸೋಲಿನಿಂದ ಕಂಡುಬರುತ್ತದೆ. ಆದರೆ ಅವರ ಆ ಆಶೆಯಲ್ಲಿ ಹಿಟ್ಲರನ ವಿಷಯದ ಅತಿ ಮಹತ್ವಾಕಾಂಕ್ಷೆಯೇ ವಿಫಲವಾಗಿ, ಅವರಿಗೆ ಕಳೆದ ಗುರುವಾರ ರಾಜೀನಾಮೆಯೇ ಅರಸರ ಕೈಯ್ಯಲ್ಲಿ ಅಧಿಕಾರ ತ್ಯಾಗದ ಪತ್ರವನ್ನಿಟ್ಟು ಗಂಟುಮೂಟೆ ಕಟ್ಟಿಕೊಂಡು ಸ್ವೇಚ್ಛ ಭವನದಿಂದ ಹೊರಬೀಳುವ ದುರ್ಧರ ಪ್ರಸಂಗ ಬಂತು! ಚರ್ಚಿಲ್ಲರ ಕೊನೆಯ ಮಂತ್ರಿಮಂಡಳ (ಕಾರ್ಮಿಕರ ಸದಸ್ಯರನ್ನೊಳಗೊಂಡ ಸಂಯುಕ್ತ ಮಂತ್ರಿಮಂಡಳವನ್ನು ವಿಸರ್ಜಿಸಿ, ಚುನಾವಣೆಗೆ ಬಂದ ತಿಂಗಳು ಅವಧಿಯವರೆಗೆ ತಮ್ಮವರನ್ನೇ ಕೂಡಿಸಿ ಚರ್ಚಿಲ್ಲರು ನಿರ್ಮಿಸಿದ ಮಂತ್ರಿಮಂಡಳ) ದೊಳಗಿನ ೧೨ ಮಂದಿ ಮಂತ್ರಿಗಳು ಉರುಳಿಹೋಗಿದ್ದಾರೆ! ಅವರಲ್ಲೊಬ್ಬರು ಭಾರತ-ಮಂತ್ರಿ ಅಮೆರಿಯವರು! ಸತತ ೩೪ ವರ್ಷಗಳಷ್ಟು ಕಾಲ ಅಮೆರಿಯವರು ಬರ್ಮಿಂಘೆಮ ಜಿಲ್ಲೆಯ ಸ್ಪಾರ್ಕಬ್ರೂಕ ಎಂಬ ಮತದಾರ ಸಂಘದಿಂದ ಆರಿಸಿಬರುತ್ತಿದ್ದರು. ಅಮೆರಿಯವರ ಹಿಂದಿನ ಸ್ಥಾನ ಸಂಬಂಧದ ಬೋಲ್‌ಶೆವಿಗೂ ನೀಗಿಲ ಬೀಳಿತ್ತು. ಅವರನ್ನು ಈ ಚುನಾವಣೆಯಲ್ಲಿ ಉರುಳಿಸಿಯೇ ಬಿಡಬೇಕೆಂದು ಕಾರ್ಮಿಕ ಪಕ್ಷದೊಳಗಿದ್ದ ಹಿಂದೀಯರೆಲ್ಲ ಟೊಂಕ ಕಟ್ಟಿ, ಶ್ರೀ ರಜನೀ ಪಾಮ ದತ್ತ ಎಂಬ ಹಿಂದೀ ಪ್ರಮುಖರಿಗೆ ಅಮೆರಿಯವರ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದ್ದರು. ಆದರೆ ಶ್ರೀ ದತ್ತರು ಕಮ್ಯುನಿಸ್ಟ ಪಕ್ಷಕ್ಕೆ ಸೇರಿದವರು. ಆದರಿಂದ ಕಾರ್ಮಿಕರ ಪಕ್ಷವು ತಮ್ಮ ಪಕ್ಷದ ಓರ್ವರ [illegible] ಎಂಬವರನ್ನು ಇನ್ನೊಬ್ಬ ಹುರಿಯಾಳಾಗಿ ನಿಲ್ಲಿಸಿದ್ದರು. ಶ್ರೀ ದತ್ತರು ನಿ [illegible] ಯಾರಿಗೆ ವಿಶೇಷ ಮತ ಸಿಗಲಿಲ್ಲ! ಹಿಂದುಸ್ಥಾನದಲ್ಲಿ ಮಾಡಿದ ಅವರ ಪಾಪಗಳನ್ನೆಲ್ಲ ಚುಚ್ಚಿ ಹೇಳಿದರು [illegible] ಮತದಾರ ಸಂಘದಲ್ಲಿ ಅಮೆರಿಯವರ ಬಗ್ಗೆ ತೀವ್ರತರ ಅಸಂತೋಷವು ಉತ್ಪನ್ನವಾಗಿ, ಕಥೆಯಲ್ಲಿ ಅಮೆರಿಯ ಪರಿಗೆ [illegible] ತಮ್ಮ ಸಹನೆಯೂ ತಾಳ್ಮೆಯೂ ಜನರಲ್ಲುಳಿಯದೆ ಹೋದವು ಆದರೂ ತಾವು ವಿಜಯಿಯಾಗುವೆವೆಂಬ ಭರವಸೆ ಅಮೆರಿಯವರಿಗಿತ್ತು! ವಿರೋಧಿ-ಪಕ್ಷದವರ ಮತಗಳು ಕಮ್ಯುನಿಸ್ಟ ಮತ್ತು ಲೇಬರ ಇವರಿಬ್ಬರಲ್ಲಿ ಹಂಚಿಹೋಗಿ ತಾವು ಸುರಕ್ಷಿತ ಆರಿಸಿ ಬರುವೆವೆಂದು ಅವರು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದರು! ಕೊನೆಗೆ ಅವರ ಅದೃಷ್ಟ ಹೊರಬಿತ್ತು! ಕಾರ್ಮಿಕರ ಪಕ್ಷದ ಹುರಿಯಾಳರಿಗೆ ಅವರಿಗಿಂತ ೫೦೦೦ ಸಾವಿರ ಹೆಚ್ಚು ಮತಗಳು ಬಿದ್ದು ಅಮೆರಿಯವರಿಗೆ ಅರಣ್ಯವಾಸಕ್ಕೆ ಹೋಗುವ ಕಷ್ಟಕಾಲ ಬಂತು! ಇಂಥ ಪ್ರಚಂಡ ಪರಾಭವ ಎಂದ ಚರ್ಚಿಲ್ಲರಿಗೆ ಎಷ್ಟು ವ್ಯಥೆ ವಾಗಿತ್ತು, ಪರಾಭವಗೊಂಡ ಗಣಿಯೊಂದಾದವನ್ನು ಬಿಟ್ಟು ಕಲಿಸಿದಳು ಈ ವರೆಗೆ ಯುದ್ಧ ಕಾರಣದ ಸೂತ್ರಗಳನ್ನು ಚಲಿಸಿದ ಹಾಗೂ ಸ್ಟಾಲಿನ-ರೂಜ್ವೆಲ್ಟ ಮನ್ನಣೆಯೊಡನೆ ವ್ಯವಹರಿಸಿದ ಅವರೂ ಅವರ ವಿದೇಶ ಮಂತ್ರಿಗಳಾದ ಮಿ|| ಈಡನ್‌ರೂ ಹೊಸ ಕಾರ್ಮಿಕರ ಮುಖ್ಯ ಮಂತ್ರಿಗಳಾದ ಕ್ಲೆಮೆಂಟ ಅಟ್ಲೀಯವರೊಡನೆ ಬರ್ಲಿನದಲ್ಲಿ ಕೂಡಿರುವ ತ್ರಿಮೂರ್ತಿಗಳ ಪರಿಷತ್ತಿಗೆ ತಿರುಗಿ ಹೋಗದವರು ನ್ಯಾಯ್ಯ ಮತ್ತು ಕ್ರಮಪ್ರಾಪ್ತವಿತ್ತು. ಆದರೆ ಚುನಾವಣೆಯಲ್ಲಿ ಮುಖಭಂಗ ಹೊಂದಿದ ಈ ಈರ್ವರ ಮಹಾಶಯರೂ ಬರ್ಲಿನಕ್ಕೆ ತಿರುಗಿ ಹೋಗಲು ನಿರಾಕರಿಸಿರುವರೆಂದು ವಾರ್ತೆ ಬಂದಿದೆ. ಅದರಿಂದ ಅಟ್ಲೀಯವರು ಮೊನ್ನೆ ಹೊಸ ವಿದೇಶ ಸಚಿವರಾಗಿರುವ ಅರ್ನೆಸ್ಟ ಬೆವಿನ್ನರ ಇವರೊಬ್ಬರನ್ನೇ ಜೊತೆಗೆ ಕರೆದುಕೊಂಡು ಬರ್ಲಿನ್ನಿಗೆ ಹೋಗಿದ್ದಾರೆ. ಚರ್ಚಿಲ್ಲರ ಈ ಪರಾಭವದಿಂದ ಯುರೋಪದಲ್ಲಿ ಹಿಟ್ಲರನ ಪತನ ಪೂರ್ತಿಯಾದಂತೆ ಮಿಕ್ಕ ಹಿಟ್ಲರನಿಗೆ ಹಿಂದೆ ಪ್ರೋತ್ಸಾಹ ಕೊಟ್ಟು ಅವನ ಸಾಮ್ರಾಜ್ಯ ಗಳಿಗೆ ತಕ್ಕವ ಮಾಡಿಕೊಟ್ಟವರು ಚರ್ಚಿಲ್ಲರ ಪುಂಡ ಮಿತ್ರ ಬಾಲ್ಡವಿನ ಪಕ್ಷ. ಜಪಾನು ದೇಶವನ್ನು ಮುಂಗಡವಾಗಿ ಮುಸೋಲಿನಿಗೆ ಉತ್ತೇಜನ ಕೊಟ್ಟವರೂ ಅವರೇ, ಸ್ಪೇನದೇಶದ ಪ್ರಜೆಗಳ ಸರಕಾರದ ವಿರುದ್ಧ ಬಂಡಾಯ ವೆಬ್ಬಿಸಿ ಅಲ್ಲಿ ಸರ್ವಾಧಿಕಾರಿ ಸರಕಾರವನ್ನು ರಚಿಸಲು ಜೆ|| ಫ್ರ್ಯಾಂಕೋನಿಗೆ ಆಸು ಪ್ರ ಮಾಡಿಕೊಟ್ಟವರೂ ಅವರೇ! ಹಿಟ್ಲರನು ಹೊಸ ಜರ್ಮನ ಸಾಮ್ರಾಜ್ಯ ಕಟ್ಟಲು ಹೊರಟಿದನು, ಇವರು ಇದ್ದ ಸಾಮ್ರಾಜ್ಯವನ್ನು ಕಾಪಾಡಿಕೊಂಡ ಅದನ್ನು ಭದ್ರಗೊಳಿಸಲು ಯತ್ನಿಸುತ್ತಿದ್ದವರು ಹಿಟ್ಲರನಿಗೂ ಚರ್ಚಿಲ್ಲರಿಗೂ ಭೇದವಿದ್ದದ್ದು ಇಷ್ಟೇ! ಈ ಯುದ್ಧದಲ್ಲಿ ಎರಡುಗಡೆಯವರ ಕಷ್ಟದ ನಷ್ಟ ಸಹಿಸಿದ ಬ್ರಿಟಿಶ ಜನಸಾಮಾನ್ಯರು ಜರ್ಮನಿಯ ಹಿಟ್ಲರನನ್ನಷ್ಟೇ ಸಮೂಲವಾಗಿ ಕಿತ್ತೆಸೆದು ತಮ್ಮ ಗುಲಾಮ ಸ್ಥಿತಿ ತಪ್ಪಿಸಿಕೊಳ್ಳದೆ ಯುರೋಪದಲ್ಲಿ ಪ್ರೇಮವಾಗುತ್ತಿದ್ದ ಹಿಟ್ಲರನ ಮನೆಯಲ್ಲೇ ಸಾಕ್ಷಾತ್ ವಾಸಿಸಿಕೊಂಡಿದ್ದ ಹಿಟ್ಲರನು ಬೇಗನೇ ಪ್ರತಿ ಒಂದು ದಿನ ಅವರನ್ನು ಇನ್ನೊಂದು ರೂಪದಲ್ಲಿ ನಾಶಮಾಡುತ್ತಿದ್ದನು. ಆ ಇಬ್ಬರನ್ನೂ ಅವರು ಹಿಟ್ಲರನ ಪತನದ ಈ ಸಂಧಿಕಾಲದಲ್ಲೇ ಅಧಿಕಾರ ಪದಭ್ರಷ್ಟರನ್ನಾಗಿ ಮಾಡಿ ಪರಾಭವದ ಶಿಕ್ಷೆ ಕೊಟ್ಟರು.

(೬ನೇ ಪುಟದಿಂದ ಮುಂದುವರಿದುದು)

ಊರವರ ಸಂಘ ನಿರ್ಮಿಸಿದ ಪ್ರಮುಖರಿಗೆ ಭವಿಷ್ಯ ಹೇಳಿದ್ದುದೊಂದು ಈ ಫಲಿಸ್ಥದೇ ಸಿಜವಾಗುತ್ತಿರಬಹುದೇ ?

ಹೊನ್ನಾವರ ಕುಮಟಾ ಮಾರ್ಗದಲ್ಲಿ ಅಲ್ಲಲ್ಲಿ ಕೊರಕ ಬಿಂದು ಗಿದೆ ಅಪಘಾತ ಮರುಸ್ತು ಆಗುವವೆಂದು ?

ಹಳದೀಪುರ ಹೊನ್ನಾವರ ರಸ್ತೆಯಲ್ಲಿರುವ ಸಂಕದಲ್ಲಿ ಅಲ್ಲಲ್ಲಿ [illegible], ಅವೆ ಈ ತೆಯು ಕಟ್ಟುವಿದಲ್ಲ [illegible] ದನ ಸಂಕದ [illegible] ಹೋಗುವ ಚಿಕ್ಕ ಮಕ್ಕಳೂ [illegible] ಅರ್ಧ ಮಳೆಗಾಲ ಮುಗಿದ ಆದರೂ [illegible] ವ್ಯಕನಕರ ಜಿಲ್ಲಾ ಲೋಕಲ್ ಬೋರ್ಡದವರು ಹೀಗೇಕೆ ದುರ್ಲಕ್ಷ್ಯ ಮಾಡುತ್ತಿದ್ದಾರೆ?

ಮುರ್ಡೇಶ್ವರ— (ತಾ ೨೬-೭-೪೫) ಇತ್ತೀಚೆಗೆ ಹುಲಿ ಹಾವಳಿ ಹೆಚ್ಚಾಗಿದೆ ಇದೇ ಕಳೆದ ತಾ ೧೦ ರಂದ ನಿಶ್ಚಯ ತನಕ ೮ ಆಕಳುಗಳು, ೨ ಎಮ್ಮೆಗಳು ಮತ್ತು ೧ ಎತ್ತು ಹೀಗೆ ೧೧ ದನಗಳು ಹುಲಿಯಿಂದ ಹತವಾಗಿವೆ! ಎಷ್ಟೋ ದನಗಳ ಪತ್ತೆಯಿಲ್ಲ! ಅವನ್ನೂ ಹುಲಿಯೇ ತಿಂದಿರಬೇಕು. ಜಿಲ್ಲಾಧಿಕಾರಿಗಳು ಹುಲಿ ಬೇಟೆಯ ವ್ಯವಸ್ಥೆ ಮಾಡಿ ಕೃಷಿಕರನ್ನೂ ಅವರ ದನಗಳನ್ನೂ ಕಾಯಬೇಕಾಗಿ ಅರಿಕೆ.

ಬಟಕಳ— (ತಾ ೨೭-೭-೪೫) ೩-೪ ದಿನಗಳಿಂದ ಮಳೆ ಬಹಳ ಸುರಿಯುತ್ತಿದೆ ಹೊಳೆಗೆ ನೆರೆ ಬಂದಿದೆ. ೪ ದಿನಗಳ ಹಿಂದೆ ಪೇಟೆಯಲ್ಲಿರುವ ೨-೩ ಅಂಗಡಿಗಳ ಬೀಗಗಳನ್ನು ಕಳ್ಳರು ಮುರಿದ ಸುದ್ದಿಯುಂಟು ಆದರೆ ಕಳ್ಳಗಿರುವ [illegible] ಮುನಿಸಿಪಾಲಿಟಿಯ ಮುಂದಿನ ರಸ್ತೆ ತೀರ ಹಾಳಾಗಿದೆ ಬೋರ್ಡಿನವರು ಅತ್ತ ಲಕ್ಷ ಕೊಡಬೇಕು.

ಶಿರಶಿ— (ತಾ ೨೮ ೭ ೪೫) ಎಮ್ ಎಸ್ ಎಮ್ ರೇಲ್ವೆ ಕಂಪನಿಯವರ ಔಟ ಏಜನ್ಸಿಯು ಪುನಃ ಇದೇ ಕಳೆದ ತಾ ೧೦ರಿಂದ ತೆರೆಯಲ್ಪಟ್ಟಿದೆ ಆದರಿಂದ ವ್ಯಾಪಾರಿಗಳಿಗೆ ಬೇಕಾದ ಸರಕು ತರಿಸಿಕೊಳ್ಳಲಿಕ್ಕೂ ಇಲ್ಲಿಯ ರೇಲ್ವೆ ಮಾರ್ಗವಾಗಿ ಪರಸ್ಥಳಗಳಿಗೆ ಕಳಿಸಿಕೊಡಲಿಕ್ಕೂ ಅನುಕೂಲವಾಗಿದೆ.

ಸಿದ್ದಾಪುರ— (೨೫ ೭-೪೫) ಸೀಧಾ ಅಂಗಡಿಯಲ್ಲಿ ಸಕ್ಕರೆಯನ್ನು ಸರಿಯಾಗಿ ಕೂಡಿ ಕೊಡುತ್ತಾರೆಂತಲೂ, ಸಾಲ್ಪಯವರ ಸಕ್ಕರೆಯನ್ನು ಇಲ್ಲಿಯ ಕಳ್ಳ ಪೇಟೆಯವರು ಪತ್ತೆಗೆ ೮ ಆಣೆಯ ವರೆಗೆ ಹಣ ಕೊಟ್ಟು ಕೊಂಡು ಕೊಳ್ಳುತ್ತಾರೆಂತಲೂ, ಸಕ್ಕರೆ ಕೊಡದಿಂದ ಗಿರಾಕಿಗಳಿಗೆ ಈ ವ್ಯಾಪಾರಿಗಳು ಕಳಿಸು ಹಣ ಕೊಡುವದಕ್ಕಾಗಿ ತುಂಬ ಕಡಿಮೆ ಬಂದಿದೆಯೆಂದು ಹೇಳುತ್ತಾರೆಂತಲೂ ಸೀಧಾ ಅಂಗಡಿಯ ವ್ಯವಸ್ಥಾಪಕರು ತಿಳಿಸುತ್ತಾರೆ ಬೇರೆ ಬಜಾರ ಎಲ್ಲೆಯ ಪ್ಯಾಂಟೆ ೧೮ ದರ ೨||| ಆಣೆ ಉಂಟು. ಅದರಂತೆ ಮುಕ್ಕಾಲು ಪ್ಯಾಂಟಿಗೆ ೨ ಆಣೆ ೧೧ ಪೈ ಬೀಳುತ್ತದೆ, ಹೀಗೆ ಮುಕ್ಕಾಲು ಪೌಂಟಿ ಎಳ್ಳ ಕೊಂಡು ಕೊಂಡ ಗಿರಾಕಿಗಳ ಕಡೆಗೆ ಪೈ ಇಲ್ಲದಿದ್ದಾಗ ಹಾಗೂ ನಮ್ಮ ಕಡೆಗೂ ೨ ಪೈ ತಿರುಗಿ ಕೊಡಲು ಪೈಗಳು ಇಲ್ಲದಿದ್ದಾಗ ಗಿರಾಕಿಗಳಿಂದ ನಾವೆ ೩| ಆಣೆ ಇಸಗೊಳ್ಳಬೇಕಾಗುತ್ತದೆ, ಆದಕ್ಕೆ ನಮ್ಮ ಉಪಾಯವಿಲ್ಲ, ಎಂದು ಎಳ್ಳೆಯ ಬೆಲೆಯ ಸಂಬಂಧದಲ್ಲಿ ಬಂದ ದೂರಿಗೂ ಅವರು ಪ್ರತ್ಯುತ್ತರ ಕಳಿಸಿದ್ದಾರೆ (ಈಗಾ ಕನ್ನಡ ಇನ್ನೊಂದು ದೂರು ೮ ಮಕ್ಕಳು ಹುಲೇಕಲ್ಲ ಎಂಬವರ ಅಂಗಡಿಯ ಬಗ್ಗೆಂಟು ೦.| ನಾಗೇಶ ಹುಲೇಕಲ್ಲ ಇವರ ಅಂಗಡಿಯ ಬಗ್ಗಲ್ಲ —ಸಂಪಾದಕ)

ಅಂಕೋಲಾ— (ತಾ ೧೯-೭-೪೫) ಅಖಿಲ ಭಾರತ ರಾಷ್ಟ್ರೀಯ ಮಹಿಳೆಯ ಸಂಸ್ಥೆಯ ಸಾಮಾನ್ಯ ಕಾರ್ಯದರ್ಶಿಗಳೂ, ಜಾಗತಿಕ ನಾಸ್ತಿ ಸಮಿತಿಯ ಸಂಘಟಿತ ಕಾರ್ಯದರ್ಶಿಗಳೂ ಆಗಿರುವ ಮಿ|| ಅದಿಲ್ ಇವರು ಬರುವ ತಾ. ೨೫ರ ಸುಮಾರಿಗೆ ಇಲ್ಲಿ ಬಂದು ೨ ವಾರ ಇಲ್ಲುಳಿಯುವರೆಂದು ತಿಳಿಯುತ್ತದೆ

Estd 1934

The Agricultural & Industrial Bank, Ltd.

[Incorporated in British India, Liability of Members limited]

Head Office - "**LAXMI NIVAS**" Buildings **COONDAPOOR.** S K

Savings Bank Accounts are opened and interest allowed at 2% with drawable by cheques

Current Accounts are opened and interest allowed at 1%

Deposits for fixed periods are accepted on terms which may be ascertained on application

All Sorts of Banking Business Transacted

The Bank has branches in HUBLI, DHARWAR HAVERI BELGAUM, KARWAR SIRSI ANKOLA KUMTA GOKARN SHIMOGA NAGAR SOMWARPET VIRAJPET COONDAPOOR and MANGALORE

Constituents are invited to ascertain at all Braches the facilities that are available

COONDAPOOR,
1-7-1945

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಈಗೀಗ [illegible] ದ ಪವೇ ಸಿಂತ [illegible] ಈ ವರೆಗೆ [illegible] ನೆಟ್ಟ [illegible] ಗಿದೆ.

[illegible] ದ ಚಿತ್ತ [illegible] ಪ್ರವೃತ್ತಿಗಳಿಸಿ [illegible] ಬಂದ [illegible] ಹೊಸ ಮಾಡುತ್ತಿ [illegible] ಬಡವ [illegible] ವರೆಂದು ಹೇಳುತ್ತಿದೆ.

[illegible] ಬಡವ [illegible] ಆಗಿದ [illegible]

ರೇಲ್ವೆ [illegible] ತ್ತರದ [illegible] ಭಾಗವನ್ನು [illegible] ಸರಕಾರದವರ [illegible] ನಿಯಂತ್ರಣ [illegible] ಮಾಡಿರುತ್ತಾರೆ. ಈ ಬಗ್ಗೆ [illegible] ಒಂದು ಯೋಜನೆಯು [illegible] ಸಮಾಂತರವಾಗಿ ಮೋಟಾರು [illegible] ಒಂದು ರೇಲ್ವೆ [illegible] ನಿಲ್ದಾಣಕ್ಕೆ [illegible] ಇದೇ [illegible] ಮಾಡಿ, ಪ್ರತಿ [illegible] ಮೋಟಾರ [illegible] ರೇಲ್ವೆ ಕಂಪನಿ ಮತ್ತು [illegible] ಇವರಿಂದ ಕೂಡಿ [illegible] ಈ ಕಂಪ [illegible] (ಅಂದರೆ ರೇಲ್ವೆ ಕಂಪನಿಯನ್ನು [illegible] ಸರಕಾರದ್ದು) [illegible]

[illegible] ಉಭಯ ಜಿಲ್ಲೆಗಳ [illegible] ಹೊಸ ಕಂಪನಿಯ [illegible] ಆರಿಸುವಂತೆ ಇಲ್ಲಿ ಮೋಟಾರ ಕಂಪನಿಗಳ [illegible] ಶಿಫಾರಸು ಮಾಡಬೇಕೆಂತಲೂ [illegible] ಬಯಸುತ್ತಾರೆ.

ಇಲ್ಲಿಯ ಸರ್ಕಾರಿ [illegible] ಗಳಲ್ಲಿ [illegible] ತಿಂಗಳಿಂದ ಸಂಬಳ ಸಿಕ್ಕಿಲ್ಲವಂತೆ! [illegible] ಜನಗಳಂತೆ ಸಂಬಳವಿಲ್ಲದೆ ಹೊಟ್ಟೆ ತುಂಬಿಕೊಳ್ಳಬಲ್ಲ [illegible] ಈ ಬಡಪಾಯಿಗಳ ತಿಂಗಳೊಂದರ ಸಂಬಳ [illegible] ತಿಂಗತಿಂಗಳಿಗೆ ಸಲ್ಲಿಸಲಾಗದಷ್ಟು ಸರಕಾರವು ಬಡವಾಗಿ ಎಂದಿರುವದೇ?

ಇದೇ ಬರುವ [illegible] ನಲ್ಲಿ [illegible] ಪ್ರಾರಂಭವಾಗುವದೆಂದು [illegible] ಈ ಬಗ್ಗೆ [illegible] ಬಿಟ್ಟುಕೊಟ್ಟಿದ್ದಾರಂತೆ.

ಹೊನ್ನಾವರ— (ತಾ. ೨೩ ೭ ೪೫) [illegible]

[illegible] ತಿಂಗಳ [illegible] ಸ್ಥಾನಿಕ [illegible] ಗೊಂದಲವನ್ನೆಬ್ಬಿಸಿದ್ದರು [illegible] ಪಂಡಿತನೇನೋ ಈ [illegible] ಯಲ್ಲಿ ಬಹಳ ಧಾಂದಲೆ ಮಾಡುತ್ತಾರೆಂದು ಪೋಲೀಸರ ಕಡೆ ದೂರುಕೊಂಡಿದ್ದನಂತೆ. [illegible] ಪಂಡಿತನ ಸಮಾಚಾರ ತಕ್ಕೊಳ್ಳಲಿಕ್ಕೆ ಮುಂದಾಗಿದ್ದರಂತೆ! ಪಂಡಿತನು ಆವಾಗ [illegible] ಮನೆಯೊಳಗೆ [illegible] ಒಳಹೊಕ್ಕರು! [illegible] ಒಳಗಿದ್ದ ಪಂಡಿತನು ತನ್ನ [illegible] ರಕ್ಷಣೆಗಾಗಿ [illegible] ಅದನ್ನು ನೋಡಿ [illegible] ಮುಂದೆ [illegible] ಆ ಬಗ್ಗೆ ಇಲ್ಲಿಯ [illegible] ಆ ಪಂಡಿತನ [illegible] ಮಾಡಿದ [illegible] ಆ ಮಿಲ್ಲಿಯು [illegible] ನ್ಯಾಯಾಧೀಶರೂ ಅಭಿಪ್ರಾಯಪಟ್ಟು ಪಂಡಿತನಿಗೆ ನಿರಪರಾಧಿಯೆಂದು ಬಿಟ್ಟುಕೊಟ್ಟಿದ್ದಾರೆ.

[illegible] ಟಿಕೇಟುಗಳ [illegible] ಬಹಳವಾಗಿದೆ. [illegible] ಕಂಪನಿಯ ಚಾಲಕರು [illegible] ಜನರು [illegible] ದೊಡ್ಡ [illegible] ಟಿಕೇಟುಗಳನ್ನು [illegible] ದಿನಗಳಿಂದ ಇಲ್ಲಿಯ [illegible] ಜನರು [illegible] ಒಂದು [illegible] ಟಿಕೇಟು [illegible] ಕೊಂಡಿದ್ದ [illegible] ಆ ಟಿಕೇಟಿಗೆ [illegible] ಟಿಕೇಟು [illegible] ಜನರೂ [illegible] ಕಂಪನಿಯ [illegible] ಏಜಂಟ [illegible] ಇಲ್ಲಿಯ [illegible] ಏಜಂಟ [illegible] ಇವರೂ [illegible] ಹೋಗಿ ನೋಡಿ ಕಂಪನಿಯ [illegible] ಹತ್ತಿರ ಜಗಳ [illegible] ದಂತೆ [illegible] ಇವರಿಗೆ “[illegible]” ಎಂದು ಹೇಳುತ್ತ [illegible] ಮಾಡಿದನಂತೆ! [illegible] ತನ್ನ [illegible] ಕಡೆಯಿಂದ [illegible] ಕೊನೆಗೆ ಎಂದ [illegible] ಹಣ ಕರೆಲು [illegible] ಜನರು [illegible] ಬಂದಿದ್ದಾರೆ!

[illegible] ಧಾರಣೆ ಬಹ ಬಗ್ಗೆ [illegible] ಅಕ್ಕಿಯ [illegible] ಅಕ್ಕಿಯಲ್ಲಿ [illegible] ಪ್ರಯತ್ನ ಮಾಡ ಬೇಕಾಗಿ [illegible]

(ತಾ. ೨೬ ೭ ೪೫) ಹೊನ್ನಾವರ ಮ್ಯುನಿಸಿಪಾಲಿಟಿಯವರದ್ದು [illegible] ದೊಡ್ಡಿಯುಂಟು. ಅವಕ್ಕೆ ದೊಡ್ಡಿಯೆಂದು [illegible] “ [illegible] ” ಎಂದು [illegible] ಸರಿಯಾಗುವಂತಿದೆ! ದೊಡ್ಡಿಯಲ್ಲಿ [illegible] ದನಗಳಿಗೆ ಸರಿಯಾಗಿ ಹುಲ್ಲೂ ಸಿಗುವದಿಲ್ಲ, ನೀರೂ [illegible] ವದಿಲ್ಲ! ಮಾಲಿಕರು ಬಿಡಿಸಿಕೊಂಡು ಹೋಗದ ದನಗಳು ಸೊರಗಿ ಸಾಯುವದೇ ಸೈ! ಕೆಲವು ದಿವಗಳ ಹಿಂದೆ ಈ ದೊಡ್ಡಿಯಲ್ಲಿ [illegible] ಬಿದ್ದಿತ್ತು. ಅದನ್ನು ಯಾರೂ ಬಿಡಿಸಿಕೊಂಡು ಹೋಗಲಿಲ್ಲ. ಅದರಿಂದ ಅದನ್ನು [illegible] ಮಾಡುವದಾಗಿ [illegible] ಆದರೆ [illegible] ದಿನ ಬರುವ ಮುಂಚೆಯೇ [illegible] ಆ ಎಮ್ಮೆಯು ಸತ್ತು ಹೋಯಿತು. ನಗರ [illegible] ಹೀಗೇಕಾಯಿತೆಂದು ಚೌಕಶಿ ಮಾಡುವರೇ?

ಶಿರಸಿ [illegible] ಯೋಗ್ಯ ಧಾರಣೆ ಅಂಗಡಿಯು ಪ್ರಾರಂಭವಾದ [illegible] ಪ್ರಕಟವಾಗಿದೆ [illegible] ಉತ್ತರ [illegible] ಊರವರು [illegible] ಮಾಮಲೇದಾರರು ಅಂದೇ [illegible] ಜನರು ಕೂಡಿದರು. ಸಭೆಯಲ್ಲಿ [illegible] ತಮ್ಮ ಊರೊಳಗಿನ ಎರಡೂ ಅಂಗಡಿಗಳಲ್ಲಿ ಹೇಗೆ [illegible] ಮತ್ತು [illegible] ನಡೆದಿದೆ ಎಂದು, ಅಂಥ [illegible] ಪ್ರಮಾಣಗಳನ್ನೂ ಕೊಟ್ಟು ಮಾಮಲೇದಾರರ ಮುಂದೆ [illegible] ಅಂಗಡಿಯವರು [illegible] ಅಕ್ಕಿಯನ್ನು [illegible] ಆಗುತ್ತಿದೆ! [illegible] ಅಂಗಡಿಗಳ ಚಾಲಕರು [illegible] ಪೂರೈಸುವದಿಲ್ಲ! (ಯಾಕಂದರೆ ಅವನ್ನು [illegible] ಲಾಭ ಮಾಡಿಕೊಳ್ಳಲಾಗುವದಿಲ್ಲ!) [illegible] ಮತ್ತು ಸಕ್ಕರೆ [illegible] ಸಿಗವದಿಲ್ಲ [illegible] ಮಾಮಲೇದಾರರೇ ಇವನ್ನು [illegible] ಸರಿಯಾಗಿ ಪೂರೈಸುವದಿಲ್ಲವೆಂಬ [illegible] ನುಡಿಯುತ್ತಾರೆ! [illegible] ಸಕ್ಕರೆಯನ್ನು ಸಕ್ಕರೆಯನ್ನು ಉಪಯೋಗಿಸದ [illegible] ಹೆಸರಲ್ಲಿ [illegible] ಗಿಸಿಬಿಡುತ್ತಾರೆ! [illegible] ದಿನಗಳಲ್ಲಿ [illegible] ಸಕ್ಕರೆ ಹೇಗೆ [illegible] ಉದಾಹರಣೆಗಳಿವೆ! ಹೀಗಿಲ್ಲ [illegible] ಅಂಗಡಿಯನ್ನು ಊರವರು [illegible] ಸಂಘಕ್ಕೆ ಒಪ್ಪಿಸಬೇಕಾಗಿ ಬೇಡಿಕೊಂಡರು. ಅದಕ್ಕೆ ಉತ್ತರವೆಂದು ಮಾಮಲೇದಾರರು ಈಗಣ ಅಂಗಡಿಯವರ ಪರವಾಗಿ [illegible] ಎಂದಿದ್ದ ಒಂದು ಅರ್ಜಿಯನ್ನು ಓದಿದರು. [illegible] ಅಂಗಡಿಯನ್ನು ನಡಿಸಲು ಒಂದು ಹೊಸ [illegible] ಆ ಅರ್ಜಿಯಲ್ಲಿ ಬರೆದಿತ್ತು! [illegible] ಅಂಗಡಿಯನ್ನು ತಮ್ಮ ಕೈಯ್ಯಲ್ಲೇ ಇಟ್ಟುಕೊಳ್ಳುವದಕ್ಕೆ ಈಗಣ ಅಂಗಡಿಯವರು [illegible] ಮಾಡುತ್ತಿದ್ದಾರೆಂದೂ ಮಾಮಲೇದಾರರು ಅವರ ಪಕ್ಷಹಿಡಿದು [illegible] ದ್ದಾರೆಂದೂ ಊರವರಿಗೆ ಅಂಗಡಿಯನ್ನೊಪ್ಪಿಸುವದಕ್ಕಾಗಿ ಸಭೆ ಸೇರಿ [illegible] ಸಭೆಯಲ್ಲಿದ್ದವರಿಗೆ [illegible] ಮತ್ತು ಇಂಥ ಸಭೆಯಲ್ಲಿ ಕೂಡ್ರುವದು [illegible] ಎಂದು [illegible] ಅವರು ಹೊರಟುಹೋದರು. ಅಂಗಡಿಯ ಚಾಲಕರು ಮತ್ತು ಅವರ ಪಕ್ಷದವರು ಮಾತ್ರ ಸಭಾಸ್ಥಾನದಲ್ಲುಳಿದರು! ಅಂಗಡಿಯನ್ನು ಒಪ್ಪಿಸಿಕೊಳ್ಳುವಿರಾ ಎಂದು ಮಾಮಲೇದಾರರು ಗ್ರಾಮಪಂಚಾಯತನವರಿಗೆ ಕೇಳಿದ್ದರು. ಜಿಲ್ಲಾಧಿಪರ ಅಪ್ಪಣೆಯಂತೆ ಊರವರ ಸಂಘಕ್ಕೇ ಒಪ್ಪಿಸಿರೆಂದು ಅವರು [illegible] ಕೊಟ್ಟರೆಂದು ತಿಳಿಯುತ್ತದೆ. ಈಗೇನೋ ಮಾಮಲೇದಾರರು ಸಹಕಾರಿ ಸಂಘಕ್ಕೆ ಅಂಗಡಿ ಕೊಡಬಹುದೆಂದು ಜಿಲ್ಲಾಧಿಪರ ಕಡೆ ಶಿಫಾರಸು ಮಾಡಿದ್ದಾರಂತೆ. ಸಹಕಾರಿ ಸಂಘದವರೂ ಗ್ರಾಮಪಂಚಾಯತಿನವರೂ ಕೂಡಿ ಊರವರ ಸಂಘ [illegible] ದ್ದುಂಟು. [illegible] ಮಾಮಲೇದಾರರು ಸಹಕಾರಿ ಸಂಘದ ಸೂಚನೆ ಮಾಡುತ್ತಿದ್ದುದು ಕೇಳಿ ಕೆಲವರು ಆಶ್ಚರ್ಯಪಡಬಹುದು. ಆದರೆ ಹಾಗೆ ಆಶ್ಚರ್ಯಪಡುವ ಕಾರಣವಿಲ್ಲ. ಸಹಕಾರಿ ಸಂಘದ ಸೂಚನೆ ಮಾಡಿದ್ದು [illegible] ಕೇವಲ [illegible] ಮಾಡುವದಕ್ಕಾಗಿಯೇ ಈ ಸೂಚನೆಯೆಂದು ಬಲ್ಲವರು ಹೇಳುತ್ತಾರೆ. ಜಿಲ್ಲಾಧಿಪರಾದರೂ ಮಾಮಲೇದಾರರ ಈ ಆಟವನ್ನು ಹೇಗೆ [illegible] ಯಿಂದ ನೋಡುತ್ತಿರುವರೋ ತಿಳಿಯದು! ಮಾಮಲೇದಾರರು ಜಿಲ್ಲಾಧಿಪರ ಅಪ್ಪಣೆಯನ್ನು ಹೇಗೆ [illegible] ತಿಳಿಯುತ್ತದ್ದಾರೆಂಬುದನ್ನು ಊರವರ ಸಂಘದವರು ತಾ. [illegible] ಮತ್ತು ತಾ. [illegible] ಸಮಾಕ್ಷ ಬೆಟ್ಟಿಯಲ್ಲಿ ಅರ್ಜಿ ಕೊಟ್ಟು ಜಿಲ್ಲಾಧಿಪರಿಗೆ [illegible] ದ್ದರಂತೆ. ಈ ಅರ್ಜಿಗಳಿಗೆ ಅವರು ಇನ್ನೂ ಉತ್ತರ ಕೊಟ್ಟಿಲ್ಲವಂತೆ! “ [illegible] ನಿಮಗೆ ಮಾಮಲೇದಾರರು ಎಂದೆಂದೂ ಅಂಗಡಿಯನ್ನು ಸಿಗಗೊಡಲಿಕ್ಕಿಲ್ಲ! ” ಎಂದು [illegible]

([illegible] ಪುಟದ ಮೇಲೆ ಮುಂದರಿಸಿದೆ)

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು [illegible] ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು

ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಇದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ್ ಸರ್ಟಿಫಿಕೇಟ ಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ [illegible] ವರ್ಷಗಳ ಮೇಲೆ ರೂ. ೧೫ ಕೊಡುತ್ತಿವೆ!

ಚಿನ್ನ-ಬೆಳ್ಳಿ ರತ್ನಾದಿಗಳಲ್ಲಿ, ಮನೆ-ಮಾರಗಳಲ್ಲಿ [illegible] ಹಣ ಹಾಕಬೇಡಿ!

ಯುದ್ಧಾನಂತರ ಅವುಗಳ ಬೆಲೆ [illegible] ವದು!

ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ

ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ಸಹಾಯವಾಗುವರು

[illegible] ರಿಂದ ರೂ. ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು

[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟಣೆ]

ಇದನ್ನು ಪಾಂಡುರಂಗ ಕೃಷ್ಣ ಕಾನಡೆ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ ಸ್ವಂತ [illegible] ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲ ಖರ್ಚು ಸಹಿತ ವರ್ಷಕ್ಕೆ ೪-೦-೦
" ೬ ತಿಂಗಳಿಗೆ ೧-೧೨-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು ವ್ಹಿ. ಪಿ. ಖರ್ಚು ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B 1270. Monday, 6th August, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೬.

ಕುಮಟಾ - ಸೋಮವಾರ, ತಾ ೬ ನೆಯ ಅಗಸ್ಟ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಕನ್ನಡಲಿಪ್ಯಾದಿ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು

ಜಪಾನದ ಹುಚ್ಚಾಟ!

(ನಿರೀಕ್ಷಕನು ಬರೆದುದು)

"ಕೂಡಲೆ ಶರಣು ಬನ್ನಿರಿ ಇಲ್ಲವೆ ಸರ್ವನಾಶಕ್ಕೆ ಸಿದ್ಧರಾಗಿರಿ!" ಎಂದು ಆಚೆಯ ಗುರುವಾರ ಟ್ರೂಮನ್, ಚರ್ಚಿಲ್ಲ ಮತ್ತು ಚಾಂಗ ಕೈ ಶೇಕ ಈ ತ್ರಿಮೂರ್ತಿಗಳು ಜಪಾನಿಯರಿಗೆ ಕೊಟ್ಟ ಗಂಭೀರ ಕೊನೆಯ ಎಚ್ಚರಿಕೆ [illegible] ನಮ್ಮ ಮನೆಯಲ್ಲಿ [illegible] ನಡುಗು ಹುಟ್ಟಿಸಿತು! ನಾಲ್ಕೂ ಬದಿಯಿಂದ ಸುತ್ತುಗಟ್ಟಲ್ಪಟ್ಟ ಹಾಗೂ ಸಾವಿರಗಟ್ಟಲೆ ವಿಮಾನಗಳಿಂದ ಸುರಿಯಲ್ಪಡುತ್ತಿರುವ ಬಾಂಬು ಗುಂಡುಗಳ ಆಘಾತಗಳಿಂದ ಬೆಂದು ಬೆಂಡಾಗಿರುವ ಜಪಾನವು ಈ ಎಚ್ಚರಿಕೆಯನ್ನಾದರೂ ಕೇಳಿ ತನ್ನ ಹೋರಾಟ ಕೂಡಲೆ ನಿಲ್ಲಿಸುವದೆಂದು ನಾ ನಂಬಿದ್ದೆ. ಆದರೆ ಆ ಹುಚ್ಚ ರಾಷ್ಟ್ರವು ಮಿತ್ರರಿಗೆ ನಿರ್ಬಂಧ ಶರಣು ಬರಲು ನಿರಾಕರಿಸಿಬಿಟ್ಟಿದೆ! ಮಿತ್ರರ ನೌಕಾಬಲವೀಗ ಜಪಾನದ ಸುತ್ತುಮುತ್ತಲಿನ ಸಮುದ್ರಗಳಲ್ಲೂ ಆಖಾತ-ಉಪಸಾಗರಗಳಲ್ಲೂ ಸುರಂಗಗಳನ್ನು ಚೆಲ್ಲಿ ಜಪಾನಿ ಹಡಗಗಳ ಓಡಾಟವನ್ನು ನಿರ್ಬಂಧಿಸಿದಮೇಲಂತೂ, ಚೀನ, ಕೋರಿಯಾ, ಮಂಚೂಕೋ ಕಡೆಯಲ್ಲಿರುವ ಸೈನ್ಯವನ್ನಾಗಲಿ ಯುದ್ಧಸಾಹಿತ್ಯವನ್ನಾಗಲಿ ಜಪಾನಕ್ಕೆ ತರಿಸಿಕೊಳ್ಳುವದು ಈವಾಗ ಅಸಾಧ್ಯವಾಗಿದೆಯೆಂತಲೂ, ಜಪಾನದಲ್ಲಿ ಆಹಾರದ ಕೊರತೆಯುಂಟಾಗಿದೆಯೆಂತಲೂ ರೊಯಿಟರ ಸುದ್ದಿ ಸಂಸ್ಥೆಯ ವಿಶೇಷ ಸುದ್ದಿಗಾರರು ತಿಳಿಸುತ್ತಾರೆ. ಬೇಗನೇ ಮಿತ್ರದಂಡುಗಳು ಚೀನದಲ್ಲಾಗಲಿ ಕೋರಿಯಾದಲ್ಲಾಗಲಿ ಜಪಾನದ ಕ್ಯೂಶು ಪ್ರದೇಶದಲ್ಲಾಗಲಿ ಇಳಿದು ಜಪಾನಿಯರನ್ನು ನೆಲದ ಮೇಲೆ ಎದುರಿಸುವ ಪ್ರಸಂಗವುಂಟೆಂತೆ. ಮಿತ್ರರು ಈ ಪರಿ ಮರಣಾಂತಿಕ ಪೆಟ್ಟು ಕೊಡಲು ಸಿದ್ಧರಿರುವಾಗ್ಯೂ ಜಪಾನಿಯರು ಶರಣು ಬರುವ ವಿಚಾರವನ್ನು ಮಾಡದಿರುವ ಕಾರಣವೇನೆಂದು ತಿಳಿಯುವಂತಿದೆ. ಶಾಂತಸಾಗರದ ಯುದ್ಧದ ಸಂಬಂಧದಲ್ಲಿ ಮಿತ್ರರೊಳಗೆ ಸಹಕಾರವಿಲ್ಲದ್ದು ನೋಡಿ ಅವರು ಧೈರ್ಯದಿಂದ ಕುಳಿತಿರಬಹುದೇ? ಬ್ರಿಟಿಶರು ಶಾಂತಿಸಾಗರದ ಯುದ್ಧದಲ್ಲಿ ಪೂರ್ಣ ಪ್ರಮಾಣದಲ್ಲಿ [illegible] ನಡೆಸಿಲ್ಲವಾಗಿಯೂ ಅಮೇರಿಕೆಯೇ ಆ ಯುದ್ಧದ ಪೂರ್ಣ ಭಾರ ಹೊರಬೇಕಾಗಿದೆಯೆಂದೂ ಅಮೇರಿಕೆಯವರು ದೂರುತ್ತಿದ್ದಾರೆ. ಜಪಾನ ಯುದ್ಧದಲ್ಲಿ ಚೀನದಷ್ಟೇ ಆಸ್ಟ್ರೇಲಿಯಾಕ್ಕೂ ಹಿತಸಂಬಂಧವಿರುತ್ತಿದ್ದಾಗ್ಯೂ ಮಿತ್ರರು ಜಪಾನಕ್ಕೆ ಕೊನೆಯ ಎಚ್ಚರಿಕೆ ಕೊಡುವಾಗ ಆಸ್ಟ್ರೇಲಿಯವನ್ನೂ ತಮ್ಮೊಳಗೆ ಸೇರಿಸಿಕೊಳ್ಳಲಿಲ್ಲವೆಂದು ಆಸ್ಟ್ರೇಲಿಯಾದವರಿಗೆ ಸಿಟ್ಟು ಬಂದಿದೆ! ರುಶ್ಯರ ಭೂಮಿಕೆಯಂತೂ ತಿಳಿಯದಾಗಿದೆ. ಬರ್ಲಿನ ತ್ರಿಕೂಟದ ಸಭೆಯನ್ನು ಮುಗಿಸಿ ಮೊಸ್ಕೋಕ್ಕೆ ಮರಳುತ್ತಲೇ ರುಶ್ಯ ಮಹಾಪ್ರಭು ಸ್ಟೆಲಿನ್ನರು ಮಿತ್ರರಿಗೆ ಶರಣು ಬರುವಂತೆ ಜಪಾನಿಯರಿಗೆ ಎಚ್ಚರಿಕೆ ಕೊಡುವರೆಂದೂ ಜಪಾನಿಯರು ಹಾಗೆ ಮಾಡಲು ಒಪ್ಪದಿದ್ದರೆ ರುಶ್ಯರು ಕೂಡ ಈ ಯುದ್ಧದಲ್ಲಿ ಧುಮುಕುವರೆಂದೂ ವಾಶಿಂಗ್ಟನದಿಂದ ಸುದ್ದಿ ಬಂದಿತ್ತು. ಆದರೆ ಸ್ಟೆಲಿನ್ನರು ಹಾಗೇನೂ ಮಾಡಿದ್ದು ತೋರಬರುವದಿಲ್ಲ. ಸ್ಟೆಲಿನ್ನರು ಈ ಯುದ್ಧದಲ್ಲಿ ಬೀಳುವ ಭೀತಿಯಿದ್ದಿದ್ದರೆ ಜಪಾನಿಯರು ಎಂದೋ ಬಗ್ಗುತ್ತಿದ್ದರೆಂದು ನನ್ನ ಅಭಿಪ್ರಾಯ. ರುಶ್ಯರು ಅಲಿಪ್ತರಾಗಿಯೇ ಉಳಿಯುವರೆಂದು ವಿಶ್ವಾಸವಿದ್ದದರಿಂದಲೇ ಜಪಾನಿಯರು ಮಿತ್ರರ ಬೆದರಿಕೆಗೆ ಸೊಪ್ಪು ಹಾಕದೆ ಅವರ ದಾಳಿಯನ್ನು ಎದುರು ನೋಡುತ್ತಿದ್ದಾರೆಂದು ನಾನು ಎಣಿಸುತ್ತೇನೆ. ಆದರೂ ಜಪಾನವು ಈ ಯುದ್ಧದಲ್ಲಿ ಬಹಳ ಕಾಲ ತಡೆಯುವದಿಲ್ಲ. ಜಪಾನಿಯರ ಹತ್ತಿರ ಹೇಳತಕ್ಕ ಹಡಗುಪಡೆ ಇಲ್ಲವಂತೆ. ಬರೇ ೩ ಯಾ ೪ ವಿಮಾನ ವಾಹಕ ಹಡಗಗಳು ಮತ್ತು ೨ ಅಥವಾ ೩ ಜಲಾಂತರ್ಗಾಮಿಗಳು ಅವರ ಕಡೆ ಉಳಿದಿರಬಹುದೆಂದು ನೇವಿ ಮೇಜರ ಜನರಲರು ಹೇಳುತ್ತಾರೆ. ಅವರ ವೈಮಾನಿಕ ಬಲವೂ ವಿಶೇಷ ಲೆಕ್ಕಕ್ಕೆ ಬೀಳುವದಿಲ್ಲ. ಅದನ್ನು ಕೊನೆಯ ಕಾಳಗಕ್ಕಾಗಿ ಕಾದಿಟ್ಟಿದ್ದಾರೆಂದು ಕೆಲವರ ತರ್ಕ. ಆದರೆ ಅದರಲ್ಲಿ ಹುರುಳುಂಟೆಂದು ನಾವು ತಿಳಿಯುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜಪಾನವು ಯುದ್ಧವನ್ನು ಮುಂದರಿಸುತ್ತಿರುವದು ಬರೇ ಹುಚ್ಚಾಟವಲ್ಲವೇ?

(೩ನೇ ಪುಟದಿಂದ ಮುಂದರಿದದ್ದು)

ಸಂಘ ಮಾಡಿಕೊಂಡಿದ್ದಾರೆಂತಲೂ ಹೀಗೆ ಬಣ ಮಾಡಿಕೊಂಡು ಬಡಿದಾಡುವದು ಅನಿಷ್ಟವೆಂದು ಉಪದೇಶಿಸಲು ಮಾಮಲೇದಾರರು ತಾ ೧೮-೭-೪೫ಕ್ಕೆ ಊರವರ ಸಭೆ ಕರೆದಿದ್ದರೆಂತಲೂ, ಅವರ ಜೊತೆಯಲ್ಲಿ ಹೋಗಿದ್ದ ವಕೀಲ ರಾ. ಬ. ಜಿ. ಕರ್ಕಿಯವರು ಸ್ವಾರ್ಥಕ್ಕಾಗಿ ಬಡಿದಾಡಬೇಡಿರೆಂದು ಸಭೆಯಲ್ಲಿ ಬೋಧಿಸಿದರೆಂತಲೂ, ಅದನ್ನು ಕೇಳಿ "ಊರವರ ಸಂಘ" ದವರು ಸಭೆಯಿಂದ ಎದ್ದು ಹೋದರೆಂತಲೂ, ಅವರು ಕೊಡುವ ಸುದ್ದಿಗಳನ್ನು ನಂಬಬಾರದೆಂತಲೂ ರಾ. ಎಸ್ [illegible] ವಗೈರೆ ೮ ಜನರ ಸಹಿಗಳುಳ್ಳ ಒಂದು ಪತ್ರ "ಸ್ವತಂತ್ರ"ಕ್ಕೆ ಬಂದಿದೆ.

ಮುರ್ಡೇಶ್ವರ—(ತಾ ೩-೮-೪೫) ಹುಲಿಯು ದನಗಳ ರಕ್ತ-ಮಾಂಸಗಳಿಂದಲೇ ತೃಪ್ತನಾಗದೆ ಈಗ ಮಾನವನ ರಕ್ತವನ್ನು ಬೇಡುತ್ತಿದೆ! ನಿನ್ನೆ ಬೆಳಿಗ್ಗೆ ಸೊಪ್ಪು ತರಲಿಕ್ಕೆ ಗುಡ್ಡಕ್ಕೆ ಹೋಗಿದ್ದ ಮೊಗೇರ ಜಾತಿಯ ಸೋಮಯ್ಯನೆಂಬವನ ಮೈಮೇಲೆ ಹುಲಿಯು ಹಾರಿ ಬಂದು ಅವನ ಬಲಗಡೆಯ ತೋಳಿನ ಮಾಂಸವನ್ನು ಕಿತ್ತು ತೆಗೆಯಿತು. ಅಷ್ಟರಲ್ಲಿ ಸೋಮಯ್ಯನ ಆಕ್ರೋಶ ಕೇಳಿದ ನೆರೆಹೊರೆಯ ಜನರು ಓಡಿ ಹೋಗಿ ಕೂಗನ್ನೆಬ್ಬಿಸಿದ್ದರಿಂದ ಅದು ಓಡಿ ಹೋಯಿತಂತೆ. ಇಲ್ಲದಿದ್ದರೆ ಸೋಮಯ್ಯನು ಅಲ್ಲೇ ಸತ್ತು ಹೋಗುತ್ತಿದ್ದನು. ಸರಕಾರದವರು ತತ್ಕ್ಷಣ ಈ ಹುಲಿರಾಯನನ್ನು ಬೇಗನೇ ಕೊಲ್ಲಿಸುವ ವ್ಯವಸ್ಥೆಯಾಗಬೇಕು.

ಭಟಕಳ—(ತಾ ೨-೮-೪೫) ಮುಂಡಳ್ಳಿ ಗ್ರಾಮದ ಕೆಲವು ಗದ್ದೆಗಳಿಗೆ ನೆರೆಯಿಂದ ಬಹಳ ಪೆಟ್ಟಾದ ಸುದ್ದಿಯಿದೆ. ಅಧಿಕಾರಿಗಳು ಚೌಕಶಿ ಮಾಡಿ ಹಾನಿಗೊಂಡವರಿಗೆ ತಕ್ಕ ಪರಿಹಾರ ಒದಗಿಸಿಕೊಡಬೇಕು.

ಸೀಧಾ ಅಂಗಡಿಗಳಲ್ಲಿ ಕೊಡುವ ಅಕ್ಕಿಯಲ್ಲಿ ಭತ್ತ, ಕಲ್ಲು, ನುಚ್ಚು ವಿಶೇಷವಿರುತ್ತವಾಗಿ ಜನರು ದೂರುತ್ತಾರೆ. ಅಧಿಕಾರಿಗಳು ಅತ್ತ ಗಮನಿಸಬೇಕಾಗಿ ಸೂಚನೆಯಿದೆ. ಕಾರವಾರ ವಗೈರೆ ಸೀಧಾ ಕ್ಷೇತ್ರಗಳಲ್ಲಿ ಕೊಡುವ ಚಿಮಣಿ ಎಣ್ಣೆಯಷ್ಟು ಎಣ್ಣೆ ಇಲ್ಲಿ ಕೊಡುವದಿಲ್ಲ. ಇಲ್ಲಿ ಕೊಡುತ್ತಿರುವ ಎಣ್ಣೆ ಏನೇನೂ ಸಾಕಾಗುವದಿಲ್ಲೆಂದು ಜನರು ದೂರುತ್ತಿದ್ದಾರೆ. ಜಿಲ್ಲಾಧಿಪರು ಈ ದೂರನ್ನೂ ಪರಿಹರಿಸಬೇಕಾಗಿ ಅರಿಕೆಯುಂಟು.

ಶಿರಶಿ—(ತಾ ೪-೮-೪೫) ಜನಾಬ ವೀರ ಗಿರಣಿಯಲ್ಲಿ ಬೆಂಕಿಯ ಅನಾಹುತವಾದಂದಿನಿಂದ ಅವಲಕ್ಕಿಯವರಿಗೆ ಭತ್ತ ಕೊಡುತ್ತಿದ್ದಿಲ್ಲ. ಕಳೆದ ವಾರ ಜಿಲ್ಲಾಧಿಪತಿಗಳು ಸ್ಥಳೀಕ ಪರಿಸ್ಥಿತಿಯನ್ನು ಪರಾಂಬರಿಸಿ ಅವರಿಗೆ ಭತ್ತ ಕೊಡಲು ಅಪ್ಪಣೆ ಮಾಡಿದ್ದಾರೆ.

ಊರಲ್ಲಿ ಹುರಿಗಾಳು ಸಿಗುವದು ಕಷ್ಟವಾಗಿದೆ. ಜಿಲ್ಲಾಧಿಪರು ಹುರಿಗಾಳಿನ ಪೂರೈಕೆ ಬಗ್ಗೆ ಪ್ರಯತ್ನ ಮಾಡಬೇಕು.

ಊರೊಳಗಿನ ಕಾಲುವೆಗಳಲ್ಲಿ ಹೊಲಸು ತುಂಬಿದೆ. ನಗರ ಸಭೆಯವರು ಅತ್ತ ಲಕ್ಷ ಪೂರೈಸಬೇಕು.

ಮ್ಯುನಿಸಿಪಾಲಿಟಿಯ ಪ್ಯೂನರು ತಮ್ಮದೊಂದು ಸಂಘ ಮಾಡಿಕೊಂಡಿದ್ದು, ಮ್ಯುನಿಸಿಪಾಲಿಟಿಯು ಇತರ ನೌಕರರಿಗೆ ಕೊಡುವಂತೆ ತಮಗೂ ಯುದ್ಧ ಭತ್ತೆ ಕೊಡಬೇಕೆಂದೂ ಇಲ್ಲದಿದ್ದರೆ ಕೆಲಸ ಬಿಡುವ ತಮಗೆ ನೋಟೀಸ ಕೊಡಬೇಕೆಂತಲೂ ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಿದ್ದಾರೆ.

ಮ್ಯುನಿಸಿಪಾಲಿಟಿಯ ಆಡಳಿತಕ್ಕೊಳಪಟ್ಟ ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ಹಾಗೂ ಪಂಡಿತ ಚಿಕಿತ್ಸಾಲಯದ ನೌಕರರಿಗೂ ಯುದ್ಧ ಭತ್ತೆ ಕೊಟ್ಟಿಲ್ಲೆಂದು ತಕ್ರಾರು ಕೇಳಿ ಬರುತ್ತಿದೆ. ಈ ಜನರಿಗೆ ಯುದ್ಧ ಭತ್ತೆ ಕೊಡುವ ಸಲುವಾಗಿ ಸರಕಾರದವರು ಕೊಡಮಾಡಿದ ಧನಸಹಾಯವನ್ನು ಸಹ ಮ್ಯುನಿಸಿಪಾಲಿಟಿಯವರು ಸ್ವೀಕರಿಸಲಿಲ್ಲವಂತೆ! ಸರಕಾರದವರಾದರೂ ತಮ್ಮ ಕರ್ತವ್ಯ ಪರಿಶೀಲಿಸಬೇಕಾಗಿ ಸದರ ನೌಕರರ ಪ್ರಾರ್ಥನೆಯಿದೆ.

ಇಲ್ಲಿಯ ೧ನೇ ನಂಬರಿನ ಸೀಧಾ ಅಂಗಡಿಯಲ್ಲಿ ೧ನೇ ತರಗತಿಯದೆಂದು ಮಾರಲ್ಪಡುವ ಅಕ್ಕಿಯು ಹೀನ ತರಗತಿಯದೆಂದು ಸೀಧಾ ಇನ್ಸಪೆಕ್ಟರರು ೩ ವಾರಗಳ ಹಿಂದೆ ಪಂಚನಾಮೆ ಮಾಡಿದ್ದರು. ಆದರೂ ಈವರೆಗೆ ಅದೇ ಅಕ್ಕಿ ಮಾರಲ್ಪಡುತ್ತಿದೆ! ಪಂಚನಾಮೆ ಏನಾಯಿತೆಂದು ತಿಳಿಯದು.

ಶ್ರೀ ನೆಲೆಮಾವಿನ ಮಠದ ಶ್ರೀ ಪುರುಷೋತ್ತಮತೀರ್ಥ ಶ್ರೀಪಾದಂಗಳವರು ನೆಲೆಮಾವಿನ ಶ್ರೀ ಲಕ್ಷ್ಮೀನರಸಿಂಹ ಶ್ರೀ ರಾಜರಾಜೇಶ್ವರಿಯ ಸನ್ನಿಧಾನದಲ್ಲೇ ಚಾತುರ್ಮಾಸ ವ್ರತ ಕೈಕೊಂಡಿದ್ದಾರೆ.

ಸಿದ್ದಾಪುರ—(ತಾ ೧-೮-೪೫) ತಮ್ಮ ಅಂಗಡಿಯಲ್ಲಿ ೧ ರತ್ತಲ ೩/೪ ತೊಲೆ ಸಕ್ಕರೆಗೆ [illegible] ಆಣೆ ತಕ್ಕೊಂಡದ್ದು ನಿಜವಲ್ಲೆಂದು ರಾ. [illegible] ಪಾಲೇಕರರು ತಿಳಿಸುತ್ತಾರೆ. ತಾ. ೨೧-೬-೪೫ಕ್ಕೆ ಈರಾ ಕನ್ನನು [illegible] ಆಣೆ ಕೊಟ್ಟು ೨ ರತ್ತಲ ಸಕ್ಕರೆ ಕೊಂಡುಕೊಂಡದ್ದುಂಟು, ಹಾಲೀಯ ತಿಂಗಳಲ್ಲಿ ಅವನಿಗೆ ಸಕ್ಕರೆ ಕೊಟ್ಟಿದ್ದಿಲ್ಲ, ಎಂದೂ ಅವರು ಬರೆಯುತ್ತಾರೆ. (೧ ರತ್ತಲ ೩/೪ ತೊಲೆ ಸಕ್ಕರೆ ತನಗೆ ಕೊಟ್ಟಿತ್ತೆಂದು ಈರನ ಅಂಬೋಣವಿತ್ತು —ಸಂ)

ಕಾರವಾರ—(ತಾ ೪-೮-೧೯೪೫) ಇಲ್ಲಿಯ ರಾ| ಪ್ರಭಾಕರ ಪಾಂಡುರಂಗ ಕುಲಕರ್ಣಿ ಎಂಬವರ ಮನೆಯ ೩ ಜನರು ಬೇರೆಯೂರಿಗೆ ಹೋದ ಸಂಗತಿಯನ್ನು ಸೀಧಾ ಕಚೇರಿಗೆ ತಿಳಿಸದೆ ಆ ಮೂರು ಜನರ ಬಾಬತು ಸಹ ಸೀಧಾ ಪದಾರ್ಥ ಪಡಕೊಂಡ ಬಗ್ಗೆ ಖಟ್ಲೆಯಾಗಿತ್ತು. ರಾ| ಕುಲಕರ್ಣಿಯವರು ಅಪರಾಧ ಒಪ್ಪಿಕೊಂಡರು. ರೆಸಿಡೆಂಟ ಮೆಜಿಸ್ಟ್ರೇಟರು ಅವರಿಗೆ ರೂ ೨೫ ದಂಡ ವಿಧಿಸಿದ್ದಾರೆ.

ಊರೊಳಗಿನ ಕಾಲುವೆಗಳಲ್ಲಿ ಹೊಲಸು ರಾಶಿಯಾಗಿ ನಿಂತಿದೆ. ಅದರಿಂದ ನೆರೆಹೊರೆಯ ಬಾವಿಗಳ ನೀರೂ ಕೆಟ್ಟಿವೆ, ಕ್ರಿಮಿಗಳಿಂದಾಗಿ ಹವೆಯೂ ಕೆಟ್ಟಿದೆ, ಮತ್ತು ಊರಲ್ಲಿ ಜ್ವರಾದಿ ಬೇನೆಗಳು ಉದ್ಭವಿಸಿವೆ. ನಗರ ಸಭೆಯವರು ಕೂಡಲೇ ಕಾಲುವೆಗಳನ್ನು ಸ್ವಚ್ಛಗೊಳಿಸಬೇಕು. ಹಾಗೂ ನಗರ-ರಚನೆಯ (ಟೌನ-ಪ್ಲೆನಿಂಗ) ಕಾನೂನು ಜಾರಿಯಲ್ಲಿ ತಂದು ಹೊಲಸು ಕಾಲುವೆಗಳ ಹರಿದಾಟವನ್ನು ಸರಿಪಡಿಸುವ ಆಲೋಚನೆಯನ್ನು ಅವರು ಈ ಸಂದರ್ಭದಲ್ಲೇ ಮಾಡಬೇಕಾಗಿ ಸೂಚನೆಯಿದೆ.

ಸೀಧಾ ಅಂಗಡಿಗಳಲ್ಲಿ ಈಗ ೨ ತಿಂಗಳಿಂದ ಸಣ್ಣಕ್ಕಿಯ ಧಾರಣೆಯನ್ನು ಪಾಯಲಿ ಒಂದಕ್ಕೆ ರೂ ೧-೬-೬ಕ್ಕೆ ಏರಿಸಿದ್ದಾರೆ. ಆದರೆ ಆ ಮಾನದಿಂದ ದೊಡ್ಡಕ್ಕಿಯ ದರ ಇಳಿಸಿರುವದಿಲ್ಲ. ಮೈಸೂರ ಪ್ರಾಂತದಲ್ಲಿ ಈಗ ಕರಾಚಿಯಿಂದ ತರಿಸಿದ ಅಕ್ಕಿಯನ್ನು ರೂ. ೧ಕ್ಕೆ [illegible] ೬ ಶೇರುಗಳಂತೆ (ಅಂದರೆ ರೂ ೦-೯-೧ಕ್ಕೆ [illegible] ೧ ಪಾಯಲಿಯಂತೆ) ಮಾರುತ್ತಿದ್ದಾರೆಂದು ಸುದ್ದಿಯುಂಟು. ಅದು ನಿಜವಿರುತ್ತದ್ದಾಗೆ ಆ ಪ್ರಾಂತಕ್ಕೆ ಹೊಂದಿಕೊಂಡಿರುವ ನಮ್ಮ ಬಡ ಜಿಲ್ಲೆಯಲ್ಲಿ ಅಕ್ಕಿಯ ದರ ಇಮ್ಮಡಿ ಇರುವದು ಭೂಷಣವೂ ಅಲ್ಲ, ನ್ಯಾಯ್ಯವೂ ಅಲ್ಲ. ಸರಕಾರದವರು ಪರಿಸ್ಥಿತಿಯ ಪುನರಾಲೋಚನೆ ಮಾಡಿ ಬಡವರ ಅಕ್ಕಿಯ ದರವನ್ನು ಬಡವರಿಗೆ ಒಗ್ಗುವ ಮಟ್ಟಿಗಾದರೂ ಇಳಿಸಬೇಕಾಗಿ ಅರಿಕೆಯಿದೆ.

ಉರುವಲದ ದರವನ್ನು ಇನ್ನೂ ಏರಿಸುವ ಆಲೋಚನೆ ನಡೆದಿದೆಯಾಗಿ ಒಂದು ದುರ್ವಾರ್ತೆ ಕೇಳಿಬರುತ್ತಿದೆ. ಉರುವಲ ತುಟ್ಟಿ ಮಾಡುವದು ಎಂದೆಂದೂ ಸರಿಯಲ್ಲ.

Estd 1934

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR. S. K.

ANNOUNCING

The Opening of three more Branches simultaneously at

BOMBAY,

BHATKAL & HONAVAR (North Kanara Dt.)

shortly.

Watch for further announcements for dates of opening.

RESOURCES NEARLY HALF A CRORE.

COONDAPOOR,
1-8-1945.

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆ ಕಡಿಮೆ. ಇದೀ ವಾರದಲ್ಲಿ ೪ ೯ ಇಂಚು ಬಿದ್ದಿರುತ್ತದೆ.

ಸಂಡುವಾಕ್ಕೇರಿ ಗ್ರಾಮದ ಜನಸಂಖ್ಯೆ ೧೫೦೦೦ದಷ್ಟಿ[illegible] ಇದ್ದರೂ ಅಲ್ಲೊಂದು ಯೋಗ್ಯ ದರದ ಅಂಗಡಿಯಿಲ್ಲ. ಆ ಊರಿನ ೪ ಮೈಲು ದೂರದಲ್ಲಿರುವ ಹನೇಹಳ್ಳಿಯೊಳಗಿನ ಅಂಗಡಿಯಿಂದ ತಮಗೆ ಬೇಕಾದ ಸೀಧಾ ಸರಕು ಒಯ್ಯಬೇಕಾಗಿದೆ. ಮಳೆಗಾಲದಲ್ಲಿ ಇದಕ್ಕೆ ಬಹಳ ಕಷ್ಟವಾಗುತ್ತದೆಂಬುದನ್ನು ಆ ಕಷ್ಟ ಅನುಭವಿಸಿದವರೇ ಬಲ್ಲರು. ಅಧಿಕಾರಿಗಳು ಆ ಊರಲ್ಲೊಂದು ಅಂಗಡಿ ತೆರೆಯಬಾರದೇ?

ಹೊನ್ನಾವರ—(ತಾ ೪-೮-೪೫) ಹಳದೀಪುರ ಗ್ರಾಮ ಪಂಚಾಯತಿಯ ಸರ ಪಂಚರ ಆಯ್ಕೆಯ ಕಾಲಕ್ಕೆ ಊರಲ್ಲಿ ೨ ಬಣಗಳುಂಟಾಗಿದ್ದು, ಆ ಆಯ್ಕೆಯಲ್ಲಿ ಸೋಲ

ನಂ ಕಾ೭೩ ಟಿ ೬ (ಪೂರೈಕೆ ವಿಭಾಗ)
ಮುಂಬಯಿ ಕೋಟೆ, ೩ ಜುಲೈ, ೧೯೪೫

ನೋಟೀಸು.

ಮುಂಬಯಿ ಪೆಟ್ರೋಲಿಯಂ ಟ್ರೇಡ ಲೈಸೆನ್ಸಿಂಗ ಆರ್ಡರ ೧೯೪೧ರಲ್ಲಿಯ ರಿಟೇಲ ವ್ಯಾಪಾರಿಗಾರರ ಲೈಸನ್ಸನ್ನು ಜಾರಿಯಲ್ಲಿ ತರುವಿಕೆ—

ನಂ ೩೨/೪ ಡಿ ಪೆಟ್ರೋಲ ರಿಟೇಲ ವ್ಯಾಪಾರವನ್ನು ಕ್ರಮಗೊಳಿಸುವ ಮತ್ತು ವ್ಯಾಪಾರ-ರೂಢಿಗಳನ್ನು ಕಾಯ್ದುಕೊಂಡು ಹೋಗುವ ದೃಷ್ಟಿಯಿಂದ ಮುಂಬಯಿ ಸರಕಾರದವರು ೧೯೪೪ನೇ ಮುಂಬಯಿ ಪೆಟ್ರೋಲ ಟ್ರೇಡ ಲೈಸೆನ್ಸಿಂಗ ಆರ್ಡರವನ್ನು ಸುಧಾರಿಸಿದ್ದಾರೆ, ಮತ್ತು ೧೯೪೫ ಅಗಸ್ಟ ೧ನೇ ತಾರೀಖಿನಿಂದ ಮುಂದೆ ಮುಂಬಯಿ ಪಟ್ಟಣ ಮತ್ತು ಮುಂಬಯಿ ಉಪನಗರ ಜಿಲ್ಲೆ ಹಾಗೂ ಠಾಣಾ, ಕುಲಾಬಾ, ಸೂರತ, ನಾಸಿಕ, ಪುಣೆ, ಸಾತಾರಾ, ಭಡೋಚ, ಪಂಚಮಹಾಲ, ವಿಜಾಪುರ, ಪಶ್ಚಿಮ ಖಾನದೇಶ ಕಾರವಾರ ಮತ್ತು ಅಹಮದನಗರ ಜಿಲ್ಲೆಗಳಲ್ಲಿ ಪೆಟ್ರೋಲಿಯಂ ರಿಟೇಲ ವ್ಯವಹಾರವನ್ನು ಕೈಕೊಳ್ಳುವ ಬಗ್ಗೆ ಹೊಸ ಪೆಟ್ರೋಲ ರಿಟೇಲ ವ್ಯಾಪಾರಗಾರರ ಲೈಸನ್ಸನ್ನು ಅಮಲಿನಲ್ಲಿ ತಂದಿದ್ದಾರೆ. ಪೆಟ್ರೋಲ ಡೀಲರ್ಸ್ ಲೈಸನ್ಸಗಳನ್ನೂ ಪೆಟ್ರೋಲಿಯದ ರಿಟೇಲ ವ್ಯಾಪಾರವನ್ನು ಈಗ ಕೈಕೊಂಡಂಥ ಪೆಟ್ರೋಲ ವ್ಯಾಪಾರಸ್ಥರು ಈ ತಾರೀಖಿನ ನಂತರ ಪೆಟ್ರೋಲ ರಿಟೇಲ ವ್ಯಾಪಾರಗಾರರ ಲೈಸನ್ಸಗಳನ್ನು ಪಡೆದುಕೊಳ್ಳಬೇಕಾಗುವದು. ಸುಧಾರಿಸಿದ ಅರ್ಜಿಯ ನಮೂನೆಗಳನ್ನೂ ಕೊಡಲ್ಪಡುವ ಪೆಟ್ರೋಲ ರಿಟೇಲ ವ್ಯಾಪಾರಗಾರರ ಲೈಸನ್ಸ ಇಲ್ಲದೆ ಯಾವನೇ ಪೆಟ್ರೋಲ ವ್ಯವಹಾರಸ್ಥನು ತನ್ನ ರಿಟೇಲ ವ್ಯವಹಾರವನ್ನು ನಡೆಸುವದು ಬೇಕಾಯಿದೇಶೀರವಾಗುವದು. ಪೆಟ್ರೋಲ ರಿಟೇಲ ವ್ಯಾಪಾರಗಾರರ ಲೈಸನ್ಸಗಳನ್ನು ಕೊಡಲು ಅಧಿಕಾರ ಹೊಂದಿದ ಅಧಿಕಾರಿಗಳೆಂದರೆ ಮುಂಬಯಿ ಪಟ್ಟಣ ಹಾಗೂ ಮುಂಬಯಿ ಉಪನಗರ ಜಿಲ್ಲೆಯಲ್ಲಿ ನಾಗರಿಕ ಪೂರೈಕೆ ಖಾತೆಯ (ಪೆಟ್ರೋಲ ಮತ್ತು ಉರುವಲ) ಅಸಿಸ್ಟಂಟ ಡೈರೆಕ್ಟರರು ಮತ್ತು ಉಳಿದ ಜಿಲ್ಲೆಗಳಲ್ಲಿ ಕಲೆಕ್ಟರರು. ಲೈಸನ್ಸ ಅರ್ಜಿಯ ನಮೂನೆಗಳನ್ನು ಈ ಅಧಿಕಾರಿಗಳಿಂದ ಪಡೆಯಬಹುದು ಮತ್ತು ಅವುಗಳನ್ನು ಸರಿಯಾಗಿ ತುಂಬಿ ೨೦ ರೂ ಲೈಸನ್ಸ ಫೀಯೊಂದಿಗೆ ಅವರ ಕಡೆಗೆ ಒಪ್ಪಿಸತಕ್ಕದ್ದು.

ಮುಂಬಯಿ ಗವ್ಹರ್ನರರ ಅಪ್ಪಣೆಯ ಮೇರೆಗೆ,
ವಿ. ಬಿ ಗೋರೆವಾಲಾ,
ಸರಕಾರದ ಕಾರ್ಯದರ್ಶಿ

NOTICE.

Applications are invited for the posts of Welfare Workers to work under the District Soldiers Sailors and Airmens' Board in connection with the Welfare Work of Soldiers and their families Age to be between 18 and 40 years Qualifications B.A, B Sc., LL B or Matriculation Pay upto Rs. 150/- p. m. according to qualifications Applications should contain name, caste, age, qualification, and previous experience of office work, if any

The applications should reach this office on or before 15—8—45

Appointments will be made after interview of the candidates who will have to come to Karwar at their own cost

V. NANJAPPA,
Collector and
President, D S. S A Bd, KARWAR

ಬಾರದವರು ಸೀಧಾ ಅಂಗಡಿಯನ್ನಾದರೂ ಕೈವಶಪಡಿಸಿಕೊಳ್ಳುವಾ ಎಂದು ಬಯಸಿ "ಊರವರ ಸಂಘ" ವೆಂಬ

(೧ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಗುಂಡಬಾಳೆಯಲ್ಲಿರುವ ಕೃಷ್ಣಾ ಹನುಮಂತ ಭಟ್ಟ ಇವನು ಇದರ ಮೂಲಕ ಯಾವತ್ತ್ರ ಜನರಿಗೆ ತಿಳಿಸುವದೇನಂದರೆ — ಭಟಕಳ ಪೇಟಾ ಶಿರಾಲಿ ಗ್ರಾಮದಲ್ಲಿದ್ದ ಮೃತ ಶ್ರೀನಿವಾಸ ರಾಮ ಶಾಳ ಇವರು ತನ್ನ ಬಾಬ್ತು ಶಿರಾಲಿ ಗ್ರಾಮದ ಸರ್ವೆ ನಂ. 341/2 ಕ್ಷೇ 0-35-0 ಆ 6 1-0 ಮತ್ತು 342/1 ಕ್ಷೇ 0-3-10 ಆ 0 10 0 ಈ ರೀತಿ ೨ ಸ್ಥಳಗಳನ್ನು ರೂ. ೧೪೦೦ಕ್ಕೆ ನನಗೆ ಮುದ್ದತ-ಕ್ರಯಕ್ಕೆ ಕೊಟ್ಟು ತರುವಾಯ ಸದ್ರಿ ಶ್ರೀನಿವಾಸ ಶಾಳರು ಮರಣಪಟ್ಟು ಅವರ ವಾರಿಸದಾರ ಅಪ್ರಾಯಸ್ಥ ಮಗ ಮಂಜುನಾಥನ ರಕ್ಷಕನಾತೆಯಿಂದ ಅವನ ತಾಯಿ ಅಪ್ರಬುದ್ಧಾಬಾಯಿ ಯಾನೆ ಲಕ್ಷ್ಮೀಬಾಯಿ ಕೋಂ ಶ್ರೀನಿವಾಸ ಶಾಳ ಇವಳು ಸದ್ರಿ ಆಸ್ತಿಯನ್ನು ನನಗೆ ರೂ ೩೪೦೦ಕ್ಕೆ ಖಂಡಿತ-ಕ್ರಯಕ್ಕೆ ಕೊಡುವ ಕರಾರು ಮಾಡಿ, ಸದ್ರಿ ಕ್ರಯದ ಪೋಟಾತ್ತೆಯಲ್ಲಿ ನನಗೆ ಸಲ್ಲತಕ್ಕ ಮುದ್ದತ-ಕ್ರಯದ ಪೋಟಾತ್ತೆ ರೂ ೧೪೦೦ ಮುಜರೆ ಕೊಟ್ಟು, ಉಳಿದ ರೂ ೨೦೦೦ದಲ್ಲಿ ಕ್ರಯದ ಕರಾರು ಆದ ಕಾಲಕ್ಕೆ ಗೃಹಸ್ಥರ ಸಮಕ್ಷಮ ರೂ ೧೬೦೦ (ಹದಿನಾರು ನೂರು) ಪಡಕೊಂಡಿರುತ್ತಾಳೆ ಇನ್ನು ಅವರಿಗೆ ಬರೇ ರೂ ೪೦೦ (ನಾಲ್ಕು ನೂರು) ಮಾತ್ರ ಸಲ್ಲಬೇಕು ಅದು ಕ್ರಯದಸ್ತೈವಜಿನ ಕಾಲಕ್ಕೆ ಕೊಡುವರೆ ನಾನು ತಯಾರಿದ್ದೆನು ಆ ನಂತರ ಅವಳು ತನ್ನ ಸಂಬಂಧಿಕರ ದುರ್ಬೋಧನೆಗೆ ಒಳಗಾಗಿ ಕ್ರಯದಸ್ತೈವಜು ಇನ್ನೂ ಮಾಡಿಕೊಡಲಿಲ್ಲ ಅವಳಿಗೂ ನನಗೂ ಟಪಾಲ ನೋಟೀಸುಗಳು ಜರಿಗಿರುತ್ತವೆ ಅದಲ್ಲದೆ ಅವಳು ನನ್ನ ಸದ್ರಿ ಕ್ರಯದ ಕರಾರ ರೂ ೧೬೦೦ ಸಂದದ್ದು ಕಬೂಲ ಮಾಡಿ ಬಾಕಿ ಉಳಿಯುವ ಹಣ ೪೦೦ ತನಗೆ ಕೊಡಬೇಕಾಗಿ ನೋಟೀಸು ಕೊಟ್ಟದ್ದುಂಟು ಈ ರೀತಿ ನನ್ನ ಕ್ರಯದ ಆಸ್ತಿಯನ್ನು, ಸದ್ರಿಯವಳು ಈ ನಿಜವಾದ ಸಂಗತಿ ತಿಳಿಸದೆ ಪರರಿಗೆ ಕ್ರಯಕ್ಕೆ ಕೊಟ್ಟು ಮೋಸ ಮಾಡುವ ಇರಾದೆ ಮಾಡಿರುತ್ತಾಳೆಂದು ತಿಳಿಯುತ್ತದೆ ಆದ್ದರಿಂದ ಈ ಮೂಲಕ ಎಲ್ಲ ಜನರಿಗೆ ತಿಳಿಸುವದೇನಂದರೆ — ಸದ್ರಿಯವಳಿಂದ ಸದ್ರಿ ಆಸ್ತಿ ಯಾವದೇ ವಿಧದಿಂದ ಸ್ವಾಧೀನ ಮಾಡಿಕೊಳ್ಳಬಾರದು. ಇದಕ್ಕೆ ವಿರುದ್ಧವಾಗಿ ಮಾಡಿಕೊಂಡ ಪಕ್ಷಕ್ಕೆ ಅದರಿಂದ ನನ್ನ ಹಕ್ಕಿಗೆ ಬಾಧೆ ಬರುವಂತಿಲ್ಲವ ಮಾಡಿಕೊಂಡ ಕ್ರಯಪತ್ರ ಸಿಂಧುವಾಗಲಾರದು ಎಂತ ಇದರ ಮೂಲಕ ಜಾಹೀರ ಮಾಡಿದ್ದೇನೆ ತಿಳಿಯುವದು ತಾ. ೨-೮-೪೫

ಕೃಷ್ಣ ಹನುಮಂತ ಭಟ್ಟ, ಗುಂಡಬಾಳಾ

ಜಾಹೀರ ನೋಟೀಸು.

ಈ ಕೆಳಗೆ ಸಹಿ ಮಾಡಿದ ಹೊನ್ನಯ್ಯಾ ವೆಂಕಟೇಶ ಶೆಟ್ಟಿ ಸಾ॥ ಕೆಳಗನೂರು (ತಾ ಹೊನ್ನಾವರ) ಇವನು ಈ ಮೂಲಕ ಜಾಹೀರಪಡಿಸುವದೇನಂದರೆ - ನಾನು ಮತ್ತು ನನ್ನ ದೊಡ್ಡಪ್ಪ ನಾರಾಯಣ ಹೊನ್ನಯ್ಯ ಶೆಟ್ಟಿ ಅವಿಭಕ್ತರಿದ್ದು ಕುಟುಂಬದ ಭೂಮಿಗಳ ಖಾತೆ ದೊಡ್ಡಪ್ಪನ ಹೆಸರಲ್ಲುಂಟು ದೊಡ್ಡಪ್ಪನು ೭೦ ವರ್ಷಗಳ ಮುದುಕನಾಗಿದ್ದು ಇತ್ತ ಕೆಲವು ಕಾಲದಿಂದ ಭ್ರಾಂತ ಸ್ಥಿತಿಯಲ್ಲಿದ್ದಾನೆ ಆದರಿಂದ ಕುಟುಂಬದ ಆಸ್ತಿಗಳ ವಹಿವಾಟು ನಾನೇ ಮಾಡುತ್ತೇನೆ ನಮಗೆ ಸಾಲ ವಗೈರೆ ಇಲ್ಲ ದೊಡ್ಡಪ್ಪನ ಭ್ರಾಂತತ್ವದ ಲಾಭ ತೆಗೆದುಕೊಂಡು ಕೆಲವು ಜನರು ಅವನ ಕಡೆಯಿಂದ ಕ್ರಯ, ಗೇಣಿ ವಗೈರೆ ರೀತಿಯಿಂದ ನಮ್ಮ ಆಸ್ತಿ ಎತ್ತಿ ಹಾಕುವ ಹೊಂಚು ನಡಿಸಿದ್ದು ಕಂಡು ಬರುತ್ತದೆ ಇಂತಹದೇನಾದರೂ ಮಾಡಿಕೊಂಡಲ್ಲಿ ಯಾರಿಗೂ ಏನೂ ಸಿಗಲಿಕ್ಕಿಲ್ಲ ದೊಡ್ಡಪ್ಪನ ಸ್ವಾಧೀನತೆಗಳು ಸಿಂಧುವಾಗಲಾರವು ಎಂದು ಈ ಮೂಲಕ ಎಲ್ಲಾ ಜನರಿಗೆ ಎಚ್ಚರಿಕೆ ಕೊಟ್ಟಿರುತ್ತೇನೆ ತಾ ೩-೮-೧೯೪೫

ಹೊನ್ನಯ್ಯಾ ವೆಂಕಟೇಶ ಶೆಟ್ಟಿ ಕೆಳಗನೂರು

The Agricultural & Industrial Bank, Ltd.

(Incorporated in British India)

ನೋಟೀಸು.

ಈ ಮೂಲಕ ತಿಳಿಯಪಡಿಸುವದೇನಂದರೆ - ಈ ಕೆಳಗೆ ಕಾಣಿಸಿದ ದತ್ತಾ ಅನಂತ ದೇಶಭಂಡಾರಿ ಕುಮಟಾ ಈತನು ನಮ್ಮ ಆಫೀಸಿನಲ್ಲಿ ಭಂಗಾರದ ಆಡವಿನ ಮೇಲೆ ತಕ್ಕೊಂಡ ಸಾಲದ ಅಸಲು ವ ಬಡ್ಡಿಯನ್ನು ಠರಾವು ಸಮಯದ ವರೆಗೆ ಕೊಡದೆ ಇದ್ದು, ಅನೇಕ ಸರ್ತಿ ಪತ್ರ ವ ರಜಿಸ್ಟ್ರಿ ನೋಟೀಸ ಕೊಟ್ಟಾಗ್ಯೂ ಏನೊಂದೂ ಕರದ ಭರ್ತಿ ಮಾಡದೆ ಇದ್ದ ಕಾರಣ ಆತನು ಅಡವಿಟ್ಟ ಆಭರಣಗಳನ್ನು ಬೇಂಕಿನ ಆಫೀಸಿನಲ್ಲಿ ಇದೇ ತಾ 25-8 45ನೇ ಶನಿವಾರ ಆದರಾತ್ರ ಘಂಟೆ ೩ಕ್ಕೆ ಯಾ ನಮಗೆ ಯೋಗ್ಯ ತೋರುವ ಬೇರೆ ಯಾವದಾದರೊಂದು ದಿವಸದಲ್ಲಿ ಬೇರೊಂದು ನೋಟೀಸು ಕೊಡದನೇ ಬಹಿರಂಗವಾಗಿ ಲಿಲಾಂವ ಮಾಡಲಾಗುವದು ತಿಳಿದಿರಲಿ

ಅಡವಿಟ್ಟ ಮಾಲೀಕರು ಮೃತರಾಗಿದ್ದ ಕಾರಣ ಅವರ ನಿಜವಾದ ವಾರಸದಾರರು ಆ ಬಗ್ಗೆ ತಕ್ಕ ಪ್ರಮಾಣವನ್ನು ತೋರಿಸಿ ನಿವೃತ್ತಿಯನ್ನು ಪಡೆಯಬಹುದು.

ಲಿಲಾಂವದಲ್ಲಿ ಹುಟ್ಟುವ ಹಣವನ್ನು ಸಾಲದ ಅಸಲು ವ ಬಡ್ಡಿಯ ಲೆಕ್ಕಕ್ಕೆ ತೆಗೆದುಕೊಂಡು ಬಾಕಿ ಉಳಿದರೆ ಅವರವರ ಲೆಕ್ಕಕ್ಕೆ ಸೇರಿಸಲಾಗುವದು.

ಲೋನ ನಂ	ಹೆಸರು	ಸಾಲದ ರಕಮ
J L 213/44	ದತ್ತಾ ಅನಂತ ದೇಶಭಂಡಾರಿ, ಕುಮಟಾ	25—0—0
J L. 276/44	—ಡಿ—	10—0—0
J.L 344/44	—ಡಿ—	15—0—0
J L 350/44	—ಡಿ—	15—0—0
J L 338/44	—ಡಿ—	15—0—0
J L 413/44	—ಡಿ—	20—0—0
J.L 444/44	—ಡಿ—	10—0—0

ಕುಮಟಾ, ತಾ 4-8 45. } ಏಜಂಟ.

ಜಾಹೀರ ನೋಟೀಸು.

ನಾಗಮ್ಮಾ ಕೋಂ ಗೋವಿಂದ ಭಟ್ಟ, ಹವೀಕ, ಸಾಕಿನ ಬಾಂಕೂರ ತಾಲೂಕ ಕುಮಟಾ ಇವರು ಇದರ ಮೂಲಕ ಯಾವತ್ತ್ರ ಜನರಿಗೆ ಜಾಹೀರ ಮಾಡುವದೇನಂದರೆ —

ನನಗೆ ೧ ಲಕ್ಷ್ಮೀನಾರಾಯಣ, ೨ ಅಪ್ರಾಯಸ್ಥ ಗಜಾನನ ಮತ್ತು ೩ ಈಶ್ವರ ಎಂಬ ೩ ಮಂದಿ ಮಕ್ಕಳಿದ್ದಾರೆ ಅವರಲ್ಲಿ ಪ್ರಾಯಸ್ಥ ಲಕ್ಷ್ಮೀನಾರಾಯಣನು ಹಿರಿ ಕಡೆಗೆ ದುಂದುಗಾರಿಕೆಗೆ ಬಿದ್ದು ತನ್ನ ಅಪ್ರಾಯಸ್ಥ ತಮ್ಮಂದಿರಿಗೆ ಮೋಸ ಮಾಡಿ ಸ್ವಾರ್ಥ ಸಾಧಿಸುವ ದುರಾಲೋಚನೆಯಿಂದ ಕೇವಲ ಸುಳ್ಳು ಸಾಲಗಳನ್ನು ಕಲ್ಪಿಸಿ ಕುಟುಂಬದ ಚರ ಸ್ಥಿರ ಆಸ್ತಿಗಳನ್ನು ಪರೋಕ್ಷ ಸ್ವಾಧೀನ ಮಾಡಲು ಹವಣಿಸುತ್ತಿದ್ದಾನೆಂದು ತಿಳಿಯುತ್ತದೆ, ಮತ್ತು ವಿದ್ಯಾಭ್ಯಾಸಕ್ಕಾಗಿ ಬೇರೆ ಕಡೆಗೆ ವಾಸಿಸುತ್ತಿದ್ದ ಅಪ್ರಾಯಸ್ಥ ತಮ್ಮಂದಿರಿಗೂ ನನಗೂ ಕುಟುಂಬದ ಮನೆಗೆ ಬರಗೊಡದೆ, ಮನೆಯಲ್ಲಿರುವ ನನ್ನ ಮತ್ತು ಕುಟುಂಬದ ಬಾಬತು ಬಂಗಾರ, ಬೆಳ್ಳಿ, ಕಂಚು, ತಾಮ್ರ ವಗೈರೆ ಸಾಮಾನುಗಳನ್ನೂ ತನ್ನ ಸ್ವತಂತ್ರ ತಾಬಾ ಇಟ್ಟು ಮೋಸ ವ ವಂಚನೆ ಮಾಡಹತ್ತಿದ್ದಾನೆ ಕುಟುಂಬಕ್ಕೆ ಬರತಕ್ಕ ಹೇರಳ ಉತ್ಪನ್ನ ಮತ್ತು ಬರುವಂಗಳನ್ನು ವಸೂಲ ಮಾಡಿ, ಹೊರಗೆ ಕೊಡುವ ಗೇಣಿ ವಗೈರೆ ಕೊಡದೆ ಬುದ್ಧ್ಯಾ ಬಾಕಿ ಇಟ್ಟು, ಕುಟುಂಬದ ಆಸ್ತಿಗಳನ್ನು ಲಿಲಾಂವ ಮಾಡಿಸಿ ತಾನೇ ಪಡೆಯುವ ಹಂಚಿಕೆಯಲ್ಲೂ ಇದ್ದಾನೆ ನಮ್ಮ ಕುಟುಂಬಕ್ಕೆ ಏನನ್ನೂ ಸಾಲ ಮಾಡುವ ಯಾ ಆಸ್ತಿ ಸ್ವಾಧೀನ ಮಾಡುವ ಅವಶ್ಯಕತೆಯಿಲ್ಲ ಕಾರಣ ಸದ್ರಿ ಲಕ್ಷ್ಮೀನಾರಾಯಣನು ಯಾವದೇ ಚರ-ಸ್ಥಿರ ಆಸ್ತಿಗಳನ್ನು ಯಾವದೇ ರೀತಿ ಸ್ವಾಧೀನ ಮಾಡಿದಲ್ಲಿ ಅದು ನನಗೆ ವ ನನ್ನ ಸದ್ರಿ ಅಪ್ರಾಯಸ್ಥ ಮಕ್ಕಳಿಗೆ ಬಾಧಕವಂತಿಲ್ಲ ತಾ ೪—೮—೧೯೪೫

●ಇದು ನಾಗಮ್ಮಾ ಗೋವಿಂದಭಟ್ಟ ಇವಳ ಗ ರುಜು

ನೋಟೀಸು.

ಸನ್ 1945ನೇ ಇಸವಿಯ ಜುಲೈ ತಿಂಗಳ ಬಾಬ್ತು
ತಾ. 31-7-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು

ಪ್ರಾವ್ಹಿನ್ಸಿಯಲ್ ಟೆಕ್ಸ್ಟೈಲ್ ಕಂಟ್ರೋಲರ, ಕಾಲಾ ಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller opposite to Kalachowki Post Office Parel Road, Bombay) ಇವರಿಗೆ ನೂಲಿನ ವ್ಯಾಪಾರದ ಲಾಯಸನ್ಸದಾರರಿಂದ ಮೇಲೆ ನಮೂದಿಸಿದ ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ, ತಾ 5—8—1945 ನೇದರೊಳಗಾಗಿ ತಪ್ಪದೇ ಮುಟ್ಟಿಸತಕ್ಕದ್ದಿರುತ್ತದೆ ಮೇಲ್ಕಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ ನಿಲ್ ಮಾಹಿತಿಯನ್ನು ರವಾನಿಸತಕ್ಕದ್ದು ಕಾರಣ ನೂಲಿನ ವ್ಯಾಪಾರದ ಯಾವತ್ತ್ರ ಲಾಯಸನ್ಸದಾರರು ಸದರಿ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೇ ಮುಟ್ಟುವಂತೆ ರವಾನಿಸಬೇಕು

Bombay }
31—7—1945 }

J. K. THAKORE,
Provincial Textile Controller Bombay

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ,, ೦-೦-೪
ಹಳೇ ಸಂಚಿಕೆಗೆ ೦-೬-೦
ವ್ಹಿ.ಪಿ.ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡ ಕೊಟ್ಟುಕೊಳ್ಳದ್ದು

Reg. No. B. 1270. Monday, 13th August, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೭.

ಕುಮಟೆ:- ಸೋಮವಾರ, ತಾ ೧೩ ಮಾಹೆ ಅಗಸ್ಟ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾರಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲ್ಪ್ಯಾರಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಯುದ್ಧ ಮುಗಿದಂತೆಯೇ !

(ನಿರೀಕ್ಷಕನು ಬರೆದುದು.)

ನನ್ನ, ನಿಮ್ಮ ನಿರೀಕ್ಷೆಯೂ ಜಪಾನರ ಅಪೇಕ್ಷೆಯೂ ಸಟೆಯಾಗಿ, ಕೊನೆಗೆ ರುಶ್ಯರು ಕಳೆದ ಗುರುವಾರ ಜಪಾನದ ವಿರುದ್ಧ ಯುದ್ಧ ಸಾರಿದ್ದಾರೆ. ಮಿತ್ರರ ಮಾತು ನಿರಾಕರಿಸಲಾಗದೆ, ರಣಪಿಶಾಚಿಗೆ ಬಲಿ ಬೀಳುತ್ತಿರುವ ಮಾನವರ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆಗಿ ಮತ್ತು ಜಗತ್ತಿನೊಳಗೆ ಬೇಗನೇ ಶಾಂತಿಯನ್ನು ನೆಲೆಗೊಳಿಸುವದಕ್ಕಾಗಿ ರುಶ್ಯರು ೯-೮ ದಿನದಿಂದ ಜಪಾನದ ವಿರುದ್ಧ ರಣರಂಗಕ್ಕಿಳಿಯುವರೆಂದು ಮುನ್ನಾಣ ದಿನ ಸಂಜೆ ರುಶ್ಯರ ವಿದೇಶ ಸಚಿವರಾದ ಮೊಲೊಟೊವ್ಹರವರು ಮೊಸ್ಕೋದಲ್ಲಿದ್ದ ಜಪಾನಿ ರಾಯಭಾರಿಗೆ ಸಮಕ್ಷ ಭೆಟ್ಟಿಯಲ್ಲಿ ತಿಳಿಸಿದರು. ಇದೇ ಕಳೆದ ಜುಲೈ ತಾ ೨೬ಕ್ಕೆ ಟ್ರೂಮನ್-ಚರ್ಚಿಲ್ಲ-ಚಾಂಗ್‌ಕೈಶೇಕರು ಜಪಾನಕ್ಕೆ ಕೊಟ್ಟ ಕೊನೆಯ ಎಚ್ಚರಿಕೆಗೆ ರುಶ್ಯರ ಪೂರ್ಣ ಸಮ್ಮತಿಯುಂಟೆಂದೂ ಅವರು ತಿಳಿಸಿದರು. ಆದರಂತೆ ಮಾರನೇ ದಿನವೇ ರುಶ್ಯ ಸೇನೆಗಳು, ೧೩ ವರ್ಷಗಳ ಹಿಂದೆ ಜಪಾನಿಯರು ಚೀನದ ಮೇಲೆ ಬಲಾತ್ಕಾರ ಮಾಡಿ ಕಸಕೊಂಡು ಆಕ್ರಮಿಸಿಕೊಂಡ ಧಾನ್ಯ-ಧನ-ಸಂಪತ್ತಿನ್ನುಳ್ಳ ಮಂಚೂಕೋ ಯಾನೆ ಮಂಚೂರಿಯಾ ದೇಶದ ಮೇಲೆ ಪೂರ್ವದಿಂದಲೂ ಪಶ್ಚಿಮದಿಂದಲೂ ದಾಳಿ ಮಾಡಿ ಒಂದೇ ದಿನದಲ್ಲಿ ೧೩-೧೪ ಮೈಲುಗಳಷ್ಟು ಒಳನುಗ್ಗಿದವೆಂತಲೂ ಅನೇಕ ಪಟ್ಟಣಗಳನ್ನು ಕೈವಶಪಡಿಸಿಕೊಂಡಿವೆಯೆಂತಲೂ ಸುದ್ದಿಗಳು ಬಂದಿವೆ. ಅತ್ತ ಮಿತ್ರರೂ ಜಪಾನದಲ್ಲಿಳಿಯುವ ಹೊಂಚು ಹಾಕಿ ಮುಹೂರ್ತ-ಪರೀಕ್ಷಣೆಯನ್ನು ಮಾಡುತ್ತಿದ್ದಾರೆ. ಈ ದಾಳಿಯ ನೇತೃತ್ವ ಸೇನಾಪತಿ ಮೆಕಾರ್ಥರರಿಗೆ ಒಪ್ಪಿಸಲ್ಪಟ್ಟಿದೆ. ರುಶ್ಯರ ರಣರಂಗ ಪ್ರವೇಶದಿಂದ ಯುದ್ಧಾವಧಿ ಬಹಳಷ್ಟು ಕಡಿಮೆಯಾಗುವದೆಂದು ಮೊಲೊಟೊವ್ಹರವರು ಹೇಳಿದ್ದರಲ್ಲಿ ನಿಜಾಂಶವಿರುತ್ತಿದ್ದಾಗ್ಯೂ ಇಷ್ಟು ಬೇಗ ಜಪಾನಿಯರು ಮಣಿಯುತ್ತಿದ್ದಿಲ್ಲ, ಸಾವಿರಾರು ತಿಂಗಳಾದರೂ ಅವರು ಪ್ರತಿಭಟಿಸದೆ ಬಿಡುತ್ತಿದ್ದಿಲ್ಲ. ಆದರೆ ಮಿತ್ರರು ಕಳೆದ ಸೋಮವಾರ ಮುಂಜಾನೆಯಿಂದ " ಎಟಂ ಬೊಂಬ " (ಅಣುಶಕ್ತಿಯ ಬಾಂಬು) ಎಂಬ ನೂತನ ಅಸ್ತ್ರದ ಉಪಯೋಗ ಮಾಡಹತ್ತಿದ್ದರಿಂದ ಜಪಾನರು ತೀರ ಕಂಗಾಲಾಗಿದ್ದಾರೆ. ಈ ಎಟಂ ಬಾಂಬೆಂಬುದು ಸಣ್ಣ ಹುಡುಗರಾಡುವ ಒಂದು ಸಣ್ಣ ರಬ್ಬರ ಚೆಂಡಿನ ಆಕಾರದ್ದಿರುತ್ತಿದ್ದರೂ ಅದರ ದಾಹಕ ಶಕ್ತಿ ೨೨,೦೦೦ ಟನ್ನುಗಳ ಕಲ್ಲಿದ್ದಲಿಯಷ್ಟು ಇರುತ್ತದಂತೆ. ಈ ಬಾಂಬಿನ ಆಘಾತವಾದರೆ ಬಾಂಬು ಬಿದ್ದ ಸ್ಥಳದ ಸುತ್ತಮುತ್ತಲಿನ ೬.೭ ಮೈಲು ಪ್ರದೇಶವೆಲ್ಲ ಸುಟ್ಟುಬೂದಿಯಾಗಿ ಮರುಭೂಮಿಯಾಗುತ್ತದೆಂತಲೂ ೧೫-೨೦ ಮೈಲು ಅಂತರದಲ್ಲಿರುವ ಕಟ್ಟಡಗಳು ಕೂಡ ನಡುಗುತ್ತವೆಂತಲೂ ಬಲ್ಲವರು ಬಣ್ಣಿಸುತ್ತಾರೆ. ನಮ್ಮ ಪುರಾಣಗಳಲ್ಲಿ ಅನೇಕಾನೇಕ ಮಾರಕ ಅಸ್ತ್ರಗಳ ವರ್ಣನೆಯುಂಟು. ಆದರೆ ಅನ್ಯಾವವೂ ಈ ಎಟಂ ಬಾಂಬನ್ನು [illegible] ರವು ಕೊಟ್ಟಿರೆ [illegible] ಹೊರಬಿದ್ದ [illegible] ಈ ಬಾಂಬಿಗೆ ಕೊಡಬಹುದು. ಹಿಟ್ಲರನು ತಯಾರಿಸಿದ್ದ — ಆದರೆ ಮುಂದೆ ಇತಿಹಾಸದಲ್ಲಿ ಇಂಥ ರಾಕ್ಷಸೀ ಅಸ್ತ್ರಗಳನ್ನು ಉಪಯೋಗಿಸಿ ಅತಿ ರಾಕ್ಷಸರೆಂದು ತನ್ನ ಹೆಸರು ಉಳಿಯಬಾರದೆಂಬ ವಿಚಾರದಿಂದ ಅದ ಉಪಯೋಗಿಸದಿದ್ದ. ಆ ಭಯಂಕರ ವಿಮಾನಾಯುಧಗಳು ಕೂಡ ಈ ಎಟಂ ಬಾಂಬಿನ ಮುಂದೆ [illegible]ಗಳೇ. ಹಿಟ್ಲರಾದಿ ರಾಕ್ಷಸರ ನಿರ್ಮೂಲನ ಮಾಡಿ ಮಾನವ ಜಾತಿ ರಕ್ಷಣೆ ಮಾಡಲು ಬದ್ಧಕಂಕಣರಾಗಲು ಮಿತ್ರರು ಇಂಥ ಅಸುರೀ ಅಸ್ತ್ರದ ಪ್ರಯೋಗ ಮಾಡಿದ್ದು ದಾರುಣ ದೈವದುರ್ವಿಲಾಸವನ್ನ ಬೇಕೋ ಅಥವಾ ಏನನ್ನ ಬೇಕೆಂದು ನಮಗೇನೂ ಸೂಚಿಸುವದಿಲ್ಲ! ಮಿತ್ರರ ಎಟಂ ಬಾಂಬಿನ ಪ್ರಯೋಗದಿಂದ ಲಕ್ಷಾವಧಿ ಜನವಸತಿಯುಳ್ಳ ಹಿರೋಶಿಮಾ ನಗರವೂ ನಾಗಾಸಾಕಿ ಬಂದರವೂ ಸಂಪೂರ್ಣವಾಗಿ ಉದ್ಧ್ವಸ್ತವಾಗಿವೆಯಂತೆ! ಮಿತ್ರರು ಈ ಪರಿ ಅಸುರೀ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಲಾರಂಭಿಸಿದ್ದರಿಂದ ಜಪಾನರು ಹತಾಶರಾಗಿ ಮೊನ್ನೆಯೇ ಶಾಂತಿಯಾಚನೆಯನ್ನು ಮಾಡಿದ ವರ್ತಮಾನ ಬಂದಿದೆ. ತಮ್ಮ ಚಕ್ರವರ್ತಿಗಳ ಪ್ರತಿಷ್ಠೆಗೂ ಗೌರವಕ್ಕೂ ಕುಂದು ತರಲಾರೆವೆಂದು ಮಿತ್ರರು ಆಶ್ವಾಸನೆ ಕೊಟ್ಟರೆ, ಜುಲೈಯ ತಾ ೨೬ಕ್ಕೆ ಮಿತ್ರರು ಕೊಟ್ಟ ಕೊನೆಯ ಎಚ್ಚರಿಕೆಯೊಳಗಿನ ಬೇರೆ ಎಲ್ಲ ಕರಾರುಗಳಿಗೂ ಸಹ ತಾವು ಬದ್ಧರಾಗಿ ಶರಣು ಬರುವದಾಗಿ ಅವರು ತಿಳಿಸಿದ್ದಾರಂತೆ. ಜಪಾನರ ಈ ಶಾಂತಿಯಾಚನೆಯ ಬಿನ್ನಹ ಪತ್ರದಲ್ಲಿ ಬೇಡಿರುವ ಆಶ್ವಾಸನೆಯ ಬಗ್ಗೆ ಮಿತ್ರ-ಪ್ರಮುಖರು ಆಲೋಚಿಸುತ್ತಿದ್ದಾರಾದ್ದರಿಂದಲೇ ಯುದ್ಧ ನಿಂತಿಲ್ಲ. ಅದು ನಿಂತ ವಾರ್ತೆ ಇಂದು-ನಾಳೆ ಬಂದೇ ಬರುವದು.

ಸ್ಥಾನಿಕ ವೃತ್ತಾಂತ.

(೩ನೇ ಪುಟದಿಂದ ಮುಂದುವರಿದದ್ದು)

ನಾಯ್ಕ ಮತ್ತು ಮಂಜನಾಯ್ಕ ಎಂಬುವರಿಗೂ ತನ್ನ ಕೈಯ್ಯಲ್ಲಿದ್ದ ದಂಟಿನಿಂದ ಚೆನ್ನಾಗಿ ಥಳಿಸಿದನೆಂತಲೂ ರಾಮನಾಯ್ಕನ ಮೇಲಿನ ಸಿಟ್ಟು ಈ ಬಡವನ ಮೇಲೆ ತೆಗೆದನೆಂತಲೂ ತಿಳಿಯುತ್ತದೆ! ಅಧಿಕಾರಿಗಳು ಚೌಕಶಿ ಮಾಡಿ ವಿಶ್ರಾಮನನ್ನು ಅಂಕೆಯಲ್ಲಿಟ್ಟುಕೊಳ್ಳಬೇಕಾಗಿ ಅರಿಕೆಯಿದೆ.

(ತಾ ೩-೮-೪೫) ನಮ್ಮ ಜಿಲ್ಲೆಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಗಡಿಯಲ್ಲಿರುವ ದಿವ್ಗಿಲ ಎಂಬಲ್ಲಿ ಒಂದು ನಾಕೆಯುಂಟು. ಆ ನಾಕೆಯಲ್ಲಿದ್ದ ನಾಕೆದಾರನು ಬೈಂದೂರ, ಗಂಗೊಳ್ಳಿಯತ್ತಕಡೆಯಿಂದ ಬರುವ ಎಲ್ಲ ಗಾಡಿಗಳಲ್ಲಿ ತಪಾಸಣೆ ಮಾಡಿ ಕೆಲವೊಂದು ಸರಕುಗಳಿಗೆ ಸುಂಕ ವಸೂಲ ಮಾಡುತ್ತಾನೆ. ಆದರೆ ಯಾವ ಯಾವ ಸರಕಿಗೆ ಸುಂಕ ವಸೂಲ ಮಾಡತಕ್ಕದ್ದು ಇಲ್ಲವೆ ಎಷ್ಟು ವಸೂಲ ಮಾಡತಕ್ಕದ್ದು ಎಂದು ಕಾಣಿಸುವ ಅಧಿಕೃತ ಪಟ್ಟಿಯಾ ಯಾದಿ ಆ ನಾಕೆಯಲ್ಲಿ ಎಲ್ಲೂ ಕಂಡು ಬರುವದಿಲ್ಲ! ನಾಕೆದಾರನು ಹೇಳಿದ್ದೇ ಸುಂಕ ಮತ್ತು ಅವನು ರಿಯಾಯಿಸಿದ್ದೇ ಸಂತಕ್ಕೆ ಪಾತ್ರ ಸರಕು ಎಂಬ ಸ್ಥಿತಿಯಾಗಿದೆ! ಹಸಿಶುಂಠಿ, ತರಕಾರಿಗಳಿಗೂ ಅವ ಸುಂಕ ಕೇಳುತ್ತಾನೆ. ಮೊನ್ನೆ ೧ ಮಣ ಕಣದಿನ ಬೀಜಕ್ಕೆ ಆತನು ೨ ರೂ ಸುಂಕ ವಸೂಲ ಮಾಡಿದ್ದಾನಂತೆ. ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಗಳು ಚೌಕಶಿ ಮಾಡಿ ನಿಮ್ಮ ನಾಕೆಯಲ್ಲಿ ಸುಂಕ ಕೊಡಬೇಕಾದ ವಸ್ತು ಪದಾರ್ಥಗಳ ಹಾಗೂ ಸುಂಕದ ದರವಾರುಗಳ ಯಾದಿಯೊಂದನ್ನು ಎಲ್ಲರಿಗೂ ಕಾಣುವಂತೆ ತೂಗಹಾಕಿಸಿ, ನಾಕೆದಾರನ ಸರ್ವಾಧಿಕಾರ ನಿಯಂತ್ರಿಸಬೇಕಾಗಿ ಸೂಚನೆಯಿದೆ.

ಅವಲಕ್ಕಿ ಇದು ಇಲ್ಲಿಯ ಜನಸಾಮಾನ್ಯರ ನಿತ್ಯ ಬಳಕೆಯ ಜೀನಸಾಗಿದೆ. ಅದೊಂದು ಅವಶ್ಯಕ ಆಹಾರ-ಸಾಮಗ್ರಿಯೆಂದು ಹೇಳಿದರೂ ಹೇಳಬಹುದು. ಆದ್ದರಿಂದ ಅವಲಕ್ಕಿ ಉದ್ಯೋಗದವರಿಗೆ ಭತ್ತದ ಪೂರೈಕೆ ಮಾಡುವದು ಅವಶ್ಯವುಂಟು. ಅದರಂತೆ ಇಲ್ಲಿ ಅವಲಕ್ಕಿಯವರಿಗೆ ಕೊಡಲು ಕೆಲವು ಭತ್ತ ಇಟ್ಟಿದ್ದರಂತೆ. ಆದರೆ, ಅದೇಕೋ ತಿಳಿಯದು, ಅಧಿಕಾರಿಗಳು ಆ ಭತ್ತವನ್ನು ಗಿರಣಿಗೆ ಕಳಿಸಿ ಅಕ್ಕಿ ಮಾಡಿ ತರಿಸಿದ್ದಾರಂತೆ! ಆದರಿಂದ ಅವಲಕ್ಕಿಯವರಿಗೆ ಈಗ ನಿಯಂತ್ರಿತ ದರದಿಂದ ಭತ್ತ ಸಿಗದಂತಾಗಿದೆ. ಜಿಲ್ಲಾಧಿಕಾರಿಗಳು ಇತ್ತ ಗಮನ ಕೊಟ್ಟು ಭತ್ತ ಕುಟ್ಟಿ ಜೀವನ ಮಾಡುವ ಬಡವರನ್ನೂ ಅವಲಕ್ಕಿಯಿಂದಲೇ ತಮ್ಮ ತಿಂಡಿ-ತಿನಸುಗಳನ್ನು ಪೂರೈಸಿಕೊಳ್ಳುವ ಬಡ ಜನಸಾಮಾನ್ಯರನ್ನೂ ಕಾಯಬೇಕಾಗಿ ಬೇಡಿಕೆಯಿದೆ.

ಭಟಕಳ— (ತಾ ೬-೮-೪೫) ಇಲ್ಲಿಯ ನಗರಸಭೆಯ ವಯೋವೃದ್ಧ ಚೀಲ ಪಸಾಲಿಯ ಕಾರಕೂನರಿಗೆ ಮೊನ್ನೆ ಪುನಃ ಇನ್ನೂ ೧ ವರ್ಷ ನೌಕರಿಯಲ್ಲಿಟ್ಟುಕೊಳ್ಳಬೇಕಾಗಿ ನಗರಸಭೆಯವರು ಠರಾಯಿಸಿದ್ದಾರೆ! ಸದರಿ ಮುದುಕರ ಮೇಲೆ ನಗರ ಸಭೆಗೆ ಅಷ್ಟು ಮಮತೆಯಿರುತ್ತಿದ್ದರೆ ಅವರಿಗೆ ಏನಾದರೂ ಉಂಬಳಿ ಕೊಟ್ಟು ಕೆಲಸಕ್ಕೆ ಹೊಸ ಹುರುಪಿನ ಹರೆಯದವನೊಬ್ಬನಿಗೆ ನೇಮಿಸಿಕೊಂಡರೆ ಆಗುವಂತಿಲ್ಲವೇ? ಎಂದು ತೆರಿಗೆದಾರರೊಬ್ಬರು ಕೇಳುತ್ತಾರೆ

ಶಿರಸಿ— (ತಾ ೧೦-೮-೪೫) ನಿನ್ನೆ ಸ್ವಾತಂತ್ರ್ಯ ಸಪ್ತಾಹದ ಪ್ರಾರಂಭದ ದಿನ, ರಾಷ್ಟ್ರೀಯ ಸೇವಾದಲದವರು ಘಂಟಾಂಡಿಕರ ಮೈದಾನದಲ್ಲಿ ಮುಂಜಾನೆ ೮ ಘಂಟೆಗೆ ಧ್ವಜವಂದನ ಮಾಡಿದರು. ಆ ಮೇಲೆ ಸ್ವಾತಂತ್ರ್ಯ ಸಪ್ತಾಹದ ಮಹತ್ವವನ್ನು ಕುರಿತು ಭಾಷಣಗಳಾದವು. ಹುತಾತ್ಮರ ಸ್ಮರಣಾರ್ಥ ೨ ನಿಮಿಷ ಮೌನವೂ ಆಚರಿಸಲ್ಪಟ್ಟಿತು. ಸಂಜೆಯಲ್ಲಿ ಪುನಃ ಈ ಸೇವಾದಲದವರೂ ವಿದ್ಯಾರ್ಥಿಗಳೂ ಊರ ಹೊರಗಿನ ಬೈಲೊಳಗೆ ಕೂಡಿ ಮುಂಜಾನೆಯ ಕಾರ್ಯಕ್ರಮವನ್ನೇ ತಿರುಗಿ ಆಚರಿಸಿದರು. ಊರಲ್ಲೀಗ ಸ್ವಯಂಸೇವಕರು ರಾಜಬಂದಿಗಳ ಕುಟುಂಬಗಳ ಸಹಾಯಕ್ಕೆ ನಿಧಿಯನ್ನು ಕೂಡಿಸುತ್ತಿದ್ದಾರೆ

ಸೆಂಟ್ರಲ ಬ್ಯಾಂಕಿನವರು ೧೭೦ ಪೆಟ್ಟಿ ನೂಲು ತರಿಸಿದ್ದಾರೆ. ನೂಲಿನ ದರವನ್ನು ತಿಳಿಸಿಲ್ಲವಂತೆ. ಆದರೂ ಮುಂಗಡ ರೊಕ್ಕ ತಕ್ಕೊಂಡು ನೇಯ್ಗೆಯವರಿಗೆ ಬೇಕಷ್ಟು ನೂಲು ಕೊಡುವ ವ್ಯವಸ್ಥೆಯನ್ನು ಬ್ಯಾಂಕಿನವರು ಮಾಡಿದ್ದಾರೆ. ಈ ಜಿಲ್ಲೆಯಲ್ಲಿ ಅಂತು ೭೫೦ ಮಗ್ಗಗಳುಂಟೆಂದು ಸರಕಾರಿ ಕಾಗದ ಪತ್ರಗಳ ಮೇಲಿಂದ ಕಂಡು ಬರುತ್ತದೆ. ಈ ಎಲ್ಲ ಮಗ್ಗಗಳು ಚಾಲೂ ಆದರೆ ಜಿಲ್ಲೆಯವರ ಬಟ್ಟೆ ಪೂರೈಕೆ ಸಮಸ್ಯೆಯೂ ಸ್ವಲ್ಪಮಟ್ಟಿಗೆ ಬಿಡಿಸಲ್ಪಡುವದು, ಸಾವಿರಾರು ಜನರಿಗೆ ಉದ್ಯೋಗವೂ ದೊರೆಯುವಂತಿದೆ

ಸಿದ್ದಾಪುರ— (ತಾ. ೯-೮-೧೯೪೫) ಹಲಗೇರಿಯಲ್ಲಿ ಒಂದು ಗ್ರಾಮ-ವಾಚನಾಲಯ ತೆರೆಯಲ್ಪಟ್ಟಿದೆ

ಬಾಳೂರದೊಳಗಿನ ಗಾಂಧಿ ಶಾಲೆ ಈಗ ಮುಚ್ಚಲ್ಪಟ್ಟಿದೆಯಂತೆ ಅದರ ಹಣವೂ ಉಪಕರಣಗಳೂ ಎಲ್ಲಿವೆಯೆಂಬುವದರ ಚೌಕಶಿಯಾಗಬೇಕು

ಮಂಚಿಕೇರಿ— (ತಾ ೫-೮-೪೫) ಇಲ್ಲಿಯ ಕನ್ನಡ ಶಾಲೆಯಲ್ಲಿ ಹಿಂದೆ ೩ ಶಿಕ್ಷಕರಿದ್ದರು ಈಗ ಒಬ್ಬರೇ ಇದ್ದಾರೆ! ಅವರೂ ಉಮೇದವಾರ ಶಿಕ್ಷಕರು, ಅನುಭವಿಕರಲ್ಲ! ಊರವರ ಪ್ರಯತ್ನದಿಂದ ಶಾಲೆಯಲ್ಲೀಗ ೬೦-೬೫ ಹುಡುಗರು ಸೇರಿದ್ದಾರೆ ಆದರೆ ಅಷ್ಟು ಮಂದಿಗೆ ಶಾಲೆಯಲ್ಲಿ ಸ್ಥಳವಿಲ್ಲ! ಬರೇ ೪೦ ಹುಡುಗರು ಕೂಡ್ರಬಹುದಾದಷ್ಟು ಸ್ಥಳವುಂಟು ಮಂಚಿಕೇರಿಯು ಈ ತಾಲೂಕಿನಲ್ಲಿ ದೊಡ್ಡ ಊರು ಇಂಥ ಸ್ಥಳದಲ್ಲಿ ಮುಲ್ಕೀ ತನಕ ಕಲಿಸುವ ಶಾಲೆಯಿರಬೇಕಿತ್ತು, ಅದು ಹೋಗಲಿ, ಇದ್ದ ಶಾಲೆಯನ್ನಾದರೂ ಸರಿಯಾಗಿ ನಡಿಸುವ ವ್ಯವಸ್ಥೆಯನ್ನು ಶಾಲಾ ಬೋರ್ಡಿನವರು ಮಾಡಬಾರದೇ?

ಕಾರವಾರ— (ತಾ ೧೧-೮-೪೫) ಇಲ್ಲಿನ ಊರವರ ಆಗ್ರಹವಾದ್ದರಿಂದ ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶರು ಚಾತುರ್ಮಾಸವನ್ನು ಇಲ್ಲಿಯೇ ಕಳೆಯಲು ನಿಶ್ಚಯಿಸಿ ಇಲ್ಲಿಯೇ ಪ್ರತಿಷ್ಠರಾಗಿದ್ದಾರೆ

ಮುಂಬಯಿ ಸರಕಾರದವರು ಈಗ ಇಮಾರತಿ ಕಟ್ಟಿಗೆಯ ದರವನ್ನು ನಿಯಂತ್ರಿಸಿ, ಆ ದರಕ್ಕಿಂತ ಹೆಚ್ಚಿಗೆ ದರದಿಂದ ಮಾರಾಟ ಮಾಡುವದು ಗುನ್ಹೆಯಾಗುತ್ತದೆಂದು ವಿಧಿಸಿದ್ದಾರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ದರಗಳೂ ಬೇರೆ ಬೇರೆ ಜಾತಿಯ ಕಟ್ಟಿಗೆಗೆ ಬೇರೆ ಬೇರೆ ದರಗಳೂ ನಿರ್ಧರಿಸಲ್ಪಟ್ಟಿವೆ ಅವು ತಾ ೧೮-೭-೪೫ರ ಸರಕಾರಿ ಗಾಝೆಟದಲ್ಲಿ ಪ್ರಕಟವಾಗಿವೆ.

Estd 1934.

The Agricultural & Industrial Bank, Ltd.

(Incorporated in British India, Liability of Members limited)

Head Office COONDAPOOR. S. K.

ANNOUNCING

The Opening of three more Branches simultaneously at

BOMBAY,

BHATKAL & HONAVAR (North Kanara Dt.)

shortly.

Watch for further announcements for dates of opening.

RESOURCES NEARLY HALF A CRORE.

COONDAPOOR,
1-8-1945.

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಸಮಾಧಾನಕರವಿದೆ ಕಳೆದ ಇಡೀ ವಾರದಲ್ಲಿ ೬-೮ ಇಂಚು ಮಳೆಯಾಗಿರಬೇಕು. ಈ ವರೆಗೆ ಬಿದ್ದ ಮಳೆ ೯೫ ೯೬ ಇಂಚು ಆಗಿರಬಹುದು

ಶ್ರೀ ಮಹಾಮಳೇಶ್ವರಂದ ರಾ। ಕಾಮಾರರವರು ಕಳೆದ ಬುಧವಾರದಿಂದ ತಮ್ಮ ಕೆಲಸಕ್ಕೆ ಹಾಜರ ಆಗಿದ್ದಾರೆ ಇಲ್ಲೀ ಮಾಮಲೇದಾರ ರಾ। ವೆಂಕಟರಮಣ ದಾಬಾ ಮಾಮಲೇದಾರರಿಗೆ ವರ್ಗವಾದ ಬಗ್ಗೆ ಎಲ್ಲರಲ್ಲೂ ವ್ಯಸನವುದೋರುವದು ಕಂಡುಬರುತ್ತದೆ. ತಮ್ಮ ಕಾರಕೀರ್ದಿಯಲ್ಲಿ ರಾ। ಮಾಮಲೇದಾರರು ಇಡೀ ತಾಲೂಕಿನೊಳಗೆ ಆಹಾರ ಸಾಮಗ್ರಿಯ ಪೂರೈಕೆಯನ್ನು ದಕ್ಷತೆಯಿಂದಲೂ ತತ್ಪರತೆಯಿಂದಲೂ ಮಾಡುತ್ತ ಜನರಿಗೆ ಆಗುತ್ತಿರುವ ಕಷ್ಟನಷ್ಟಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಕಡಿಮೆ ಮಾಡಿರುವರೆಂದು ಎಲ್ಲರೂ ಹೊಗಳುತ್ತಾರೆ. ಹಳ್ಳಿ ಪಟ್ಟಣಗಳೊಳಗಿನ ಭಿನ್ನ ಭಿನ್ನ ವರ್ಗಗಳ ರೂಢಿ-ರಿವಾಜುಗಳ ಹಾಗೂ ಬೇಕು ಬೇಡಗಳ ನಿಕಟ ಪರಿಚಯವಿದ್ದುದರಿಂದ ನಿಯಂತ್ರಣ ನಿಯಮಗಳ ಪಾಲನೆಯಲ್ಲಿ ಅವರು ಸ್ವವಿವೇಚನಾಸ್ವಾತಂತ್ರ್ಯದ ಪೂರ್ಣ ಉಪಯೋಗ ಮಾಡುತ್ತಿದ್ದುದರಿಂದ ನಿಯಂತ್ರಣದ ಅದರಕ ಬೇರೆ ಕಡೆಗಳಲ್ಲಾಗುತ್ತಿದ್ದಷ್ಟು ಕಷ್ಟವು ಈ ತಾಲೂಕಿನಲ್ಲಿ ಆಗುತ್ತಿದ್ದಿಲ್ಲ. ಕಳ್ಳ ಸಂತೆಯ ವ್ಯಾಪಾರವೂ ಹರಿದಾಟವೂ ಈ ಭಾಗದಲ್ಲಿ ಹೆಚ್ಚುವದು ಕಂಡು ರಾ। ಮಾಮಲೇದಾರರು ಬಹಳ ನೊಂದುಕೊಂಡಿದ್ದರು ಆ ವ್ಯಾಪಾರದ ಹೆಚ್ಚಳಕ್ಕೆ ಕಾರಣರಾರು, ಹೊಣೆಗಾರರಾರು ಎಂಬುದನ್ನು ಅವರು ಪೂರ್ಣ ತಿಳಕೊಂಡಿದ್ದರು ಅದರಂತೆ ಅವರು ಆಬಕಾರಿ ಖಟ್ಲೆಗಳಲ್ಲಿ ಆರೋಪಿತರ ವಿರುದ್ಧ ಒಂದಿಷ್ಟು ಪುರಾವೆ ಕಂಡುಬರುತ್ತಲೇ ಕಠೋರವಾದ ಶಿಕ್ಷೆ ವಿಧಿಸುತ್ತಿದ್ದರು ಅಧಿಕಾರದ ದರ್ಪ ಆಡಂಬರ ಅಥವಾ ಗೌರವ ಇದ್ಯಾವದೂ ಅವರಲ್ಲಿ ಇದ್ದಿಲ್ಲ. ಹಾದಿಯ ಮೇಲೆ ನಡೆಯುತ್ತಿರುವಾಗ, ಮೋಟಾರ ಬಂಡಿಯಲ್ಲಿ ಕೂತು ಪ್ರವಾಸ ಮಾಡುತ್ತಿದ್ದಾಗ, ಅತ್ತಿತ್ತ ಓಡಾಡುತ್ತಿದ್ದಾಗ ಸಹ ಜನರ ಅರ್ಜಿಗಳನ್ನು ಸ್ವೀಕರಿಸಿ ಅಲ್ಲಿಂದಲ್ಲೇ ಹುಕುಮುಗಳನ್ನೂ ಪರವಾನಗೆಗಳನ್ನೂ ಕೊಡುವ ಪರಿಪಾಠವನ್ನು ಅವರು ಇಟ್ಟಿದ್ದರು ಅವರು ನ್ಯಾಯನಿಷ್ಠುರರೂ ಆಗಿದ್ದರು ಯಾರ ಒಡೆ ಮುರವತ್ತುಗಳನ್ನು ಲಕ್ಷಿಸುತ್ತಿದ್ದಿಲ್ಲ [illegible] ಇಂತಹ ಮಾಮಲೇದಾರರು ತಮ್ಮನ್ನು ಬಿಟ್ಟುಹೋಗುವಾಗ ಯಾರಿಗೆ ತಾನೇ ವ್ಯಸನವಾಗದೆ ಉಳಿದೀತು?

ರಾಷ್ಟ್ರಪತಿಗಳ ಆಜ್ಞೆಯಂತೆ ಇಲ್ಲಿಯ ಕೊಂಗ್ರೆಸ ಭಕ್ತರು ಸ್ವಾತಂತ್ರ್ಯ ಸಾರವನ್ನು ಆಚರಿಸುತ್ತಿದ್ದಾರೆ ಕಳೆದ ಗುರುವಾರ ಮುಂಜಾನೆ ಆಸ್ಪತ್ರೆಯ ಬಳಿಯಲ್ಲಿರುವ ಒಂದು ಖಾಸಗಿ ಸ್ಥಳದಲ್ಲಿ ಸೇರಿ ಅವರು ಧ್ವಜವಂದನೆ ಮಾಡಿದರು [illegible] ಕಾರ್ಯಕರ್ತರಾತ್ ಅಂದು ಇಲ್ಲಿ ಬಂದು ತಲ್ಪಿದ ಅಖಿಲ ಭಾರತ ರಾಷ್ಟ್ರೀಯ ಮುಸಲ್ಮಾನ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ। ಅದಮ ಅಲಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ೧೯೪೨ರ ಆಗೋಸ್ತ ತಿಂಗಳ ಚಳವಳಿಯಲ್ಲಿ ಆತ್ಮತ್ಯಾಗ ಮಾಡಿದವರ ಪುಣ್ಯಸ್ಮರಣೆಯನ್ನು ಮಾಡಿದರು ಸ್ವಾತಂತ್ರ್ಯವಾರದಲ್ಲಿ ನಿತ್ಯವೂ ೧ ತಾಸು ಸೂತ್ರಯಜ್ಞ ನಡೆಯುತ್ತದೆ ವಿದ್ಯಾರ್ಥಿ ಸಂಘದವರು ಊರೊಳಗೆ ರಾಜಕೀಯ ಕೈದಿಗಳ ಕುಟುಂಬಗಳಿಗೆ ಸಹಾಯ ಮಾಡುವ ಬಗ್ಗಾಗಿ ನಿಧಿಯನ್ನು ಕೂಡಿಸುತ್ತಿದ್ದಾರೆ ಮೊನ್ನೆಯ ವರೆಗೆ ಅವರ ಪಟ್ಟಿಯಲ್ಲಿ ರೂ ೧೩೪-೧ ೩ ಕೂಡಿವೆಯಂತೆ

ಮೇಲೆ ಹೇಳಿದ ಗುರುವಾರದ ಧ್ವಜವಂದನೆಯ ಕಾಲಕ್ಕೆ ಇಲ್ಲಿಯ ಫೌಜದಾರರೂ ಕೆಲವು ಬಾರಿ ಫೌಜ ಪೋಲೀಸರೂ ಧ್ವಜವಂದನೆ ನಡೆಯುವ ಸ್ಥಳಕ್ಕೆ ಹೋಗಿದ್ದರು ಆದರೆ ಖಾಸಗಿ ಸ್ಥಳದಲ್ಲಿ ಖಾಸಗಿ ಸಭೆ ಸೇರಲಿಕ್ಕೆ ಕಾಯಿದೆಯಂತೆ ಪ್ರತಿಬಂಧವಿಲ್ಲೆಂದೂ ಅಷ್ಟು ಮಂದಿ ಒಟ್ಟಿಗೆ ಸೇರಿ ಧ್ವಜವಂದನೆ ಮಾಡಲಿಕ್ಕೆ ಅಡ್ಡಿಯಿಲ್ಲೆಂದೂ ಅವರಿಗೆ ಮನವರಿಕೆ ಮಾಡಿಕೊಟ್ಟ ಮೇಲೆ ಅವರು ಹೊರಟು ಹೋದರು

ಹೊನ್ನಾವರ— (ತಾ ೯-೮-೪೫) ಇಂದು ಶ್ರೀ। ಶಿವರಾಮ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಖಾಸಗಿ ಸಭೆಯಾಗಿ ಸ್ವಾತಂತ್ರ್ಯವಾರದ ಮಹತ್ವದ ಬಗ್ಗೆ ಭಾಷಣಗಳು ವಷ್ಟ ೩ ವರ್ಷಗಳ ಹಿಂದೆ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಆತ್ಮಬಲಿ ಕೊಟ್ಟ ಹುತಾತ್ಮರಿಗೆ ವಂದನೆ ಮಾಡಿ ಹಾಗೂ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಸಭೆಯು ವಿಸರ್ಜನೆಯಾಯಿತು

ನಗರೆಯ ರಾಮನಾಯ್ಕನೆಂಬವನು ಸೈನ್ಯಕ್ಕೆ ಸೇರಿದ್ದನು ಅವನು ಇತ್ತ ೨ ವರ್ಷಗಳಿಂದ ಸೈನ್ಯ ಶಿಬಿರದಿಂದ ಪರಾರಿಯಾಗಿದ್ದಾನಂತೆ ಅವನನ್ನು ಪೋಲೀಸರು ಹುಡುಕುತ್ತಿದ್ದರು ಕಳೆದ ಗುರುವಾರ ಅವನು ನಗರೆಯಲ್ಲೇ ವಿಶ್ರಾಮ ಎಂಬ ಪೋಲೀಸ ಶಿಪಾಯಿಗೆ ಸಿಕ್ಕಿದನಂತೆ ಕೈಗೆ ವಿಶ್ರಾಮನು ಕೂಡಲೇ ಅವನನ್ನು ಬಂಧಿಸಿದನು. ಅವನ ಬೇಡಿಗಳನ್ನು ಹಾಕುತ್ತಿದ್ದಾಗ ಆ ಫರಾರಿ ಸೈನಿಕನು ವಿಶ್ರಾಮನ ಕೈಯಿಂದ ಜಾರಿಕೊಂಡು ಬೇಡಿ ಸಹಿತ ಓಡಿಹೋದನು! ಎಷ್ಟೇ ಹುಡುಕಿದರೂ ತಿರುಗಿ ಸಿಗಲಿಲ್ಲ ಓಡಿ ಹೋಗುವಾಗ ರಾಮನಾಯ್ಕನು ದಾರಿಯಲ್ಲಿ ಬೀಸಾಡಿದ ಬೇಡಿಯನ್ನು ಸುಬ್ಬಯ್ಯನೆಂಬವನು ಎತ್ತಿ ತಂದು ವಿಶ್ರಾಮನಿಗೆ ಕೊಟ್ಟನಂತೆ ಅವನ ಆ ಉಪಕಾರಕ್ಕೆ ವಿಶ್ರಾಮನು ಅವನಿಗೂ ರಾಮನಾಯ್ಕನ ಸಂಬಂಧಿಕನಾದ ಗಣಪತಿ

(೧ನೇ ಪುಟದ ಮೇಲೆ ಮುಂದರಿಸಿದೆ)

ಜಾಹೀರ ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ - ನನ್ನ ಮಗ ಸುಬ್ರಾಯನು ಇತ್ತ ಒಂದು ವರ್ಷದಿಂದ ಕೆಲ ಸಂಗಡಿಗರ ದುರ್ಬೋಧನೆಯಿಂದ ದುರ್ಮಾರ್ಗಿಯಾಗಿದ್ದಾನೆ ಅವನಿಗೆ ನನ್ನ ಅನುಮತಿ ವಿನಹಾ ಯಾರೂ ಸಾಲ, ಕಡ ವಗೈರೆ ಕೊಟ್ಟರೆ ಅದಕ್ಕೆ ನಾನು ಜವಾಬದಾರನಲ್ಲ ತಿಳಿಯುವದು

ಹೊಸಾಡ, ತಾ 9-8 1945

ರಾಮಕೃಷ್ಣ ಅನಂತ ಭಟ್ಟ ಕಾಶೀಕರ,
ಹೊಸಾಡ ತಾಲೂಕ ಹೊನ್ನಾವರ

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು.

ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಅದಕ್ಕೊಂದೇ ಮಾರ್ಗವುಂಟು.

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ !

ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ,
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ನೋಟೀಸು.

೩೧ನೇ ಜುಲಾಯಿ ೧೯೪೫ಕ್ಕೆ ಅಂತ್ಯವಾಗುವ ತ್ರೈಮಾಸಿಕದ ಬಟ್ಟೆಯ ಸಂಗ್ರಹದ ರಿಟರ್ನ:—

ಯಾವತ್ತೂ ಬಟ್ಟೆಯ ಲಾಯಸನ್ಸಧಾರಕದಾರರಿಂದ ಮೇಲೆ ಕಾಣಿಸಿದ ರಿಟರ್ನ ಒಪ್ಪಿಸತಕ್ಕ ಕೊನೆಯ ಅವಧಿಯು ೧೦ನೇ ಅಗಸ್ಟ ೧೯೪೫ನೇ ಇದ್ದು, ಅದನ್ನು ಮುಂಬಯಿ ಪಟ್ಟಣ ಮತ್ತು ಮುಂಬಯಿ ಉಪನಗರ ಜಿಲ್ಹೆಯಲ್ಲಿಯ ಲಾಯಸನ್ಸಗಳಿಗೆ ಸಂಬಂಧಿಸಿದ್ದರೆ ಪ್ರಾಂತಿಕ ಟೆಕ್ಸಟಾಯಿಲ ಕಂಟ್ರೋಲರ, ಕಾಳಾಚೌಕಿ, ಪರೇಲ, ಮುಂಬಯಿ ಇವರ ಕಡೆಗೆ ಹಾಗೂ ಇತರ ಸ್ಥಳಗಳಲ್ಲಿಯ ಲಾಯಸನ್ಸಗಳಿಗೆ ಆದರೆ ಸಂಬಂಧಿಸಿದ ಜಿಲ್ಲಾ ಮೆಜಿಸ್ಟ್ರೇಟರ ಕಡೆಗೆ ನಿರ್ದಿಷ್ಟವಾದ ನಮೂನೆಗಳಲ್ಲಿ ಒಪ್ಪಿಸತಕ್ಕದ್ದು.

೨ ೩೧ನೇ ಜುಲಾಯಿ ೧೯೪೫ನೇ ದಿನ ವರದಿ ಮಾಡಲು ಏನೂ ಸಂಗ್ರಹವಿಲ್ಲದಿದ್ದರೂ ಸಹ ಖುಲ್ಲಾ ರಿಟರ್ನ ಒಪ್ಪಿಸತಕ್ಕದ್ದು

ಮುಂಬಯಿ,
ತಾ ೩೧-೭ ೧೯೪೫

ಜೆ. ಕೆ. ಠಾಕೂರ,
ಪ್ರಾಂತಿಕ ಟೆಕ್ಸಟಾಯಿಲ ಕಂಟ್ರೋಲರ ಮುಂಬಯಿ

NOTICE.

Provisional Tour Programme of **T T Kothawala**, Esq C. I E, M A, B Sc. Provincial Motor Transport Controller, Bombay during August 1945, in connection with the Rail-Road Co ordination Scheme

22nd Evening	Arrive Belgaum
23rd	Belgaum
24th Morning	Leave for Bagalkot 1 P M meeting at Bagalkot to explain the Scheme 5 P M Take up promotion of Bijapur District
25th Morning	Bagalkot 9-30 A M Take up Promotion of Bijapur District
Evening	5 P M Leave Bagalkot for Belgaum
26th	Belgaum. Promotion Belgaum District
27th	Dharwar 1 P M Explain Scheme Return to Belgaum same evening
28th Morning	Leave Belgaum
28th Afternoon	Arrive Yellapur. 2 PM Explain Scheme
28th Evening	6 P M Take up Promotion
29th Morning	9 A M Take up Promotion
29th Evening	4 P M Leave Yellapur
30th	Belgaum
31st	Leave Belgaum for Bombay

1 All persons who have submitted applications to the Provincial Motor Transport Controller, to be Promoters in the proposed Rail-Road joint stock Company for Zone 9 should be present at Bagalkot on the 24th instant and 25th instant and at Belgaum on the 26th instant and for Zone 10 at Yellapur on the 28th & 29th instant

2 All operators of Goods Vehicles who hold valid public carrier permits issued before 31-12-42 and all operators of Stage Carriages who hold valid permits should attend the meetings as under, **with part 'A' of their permits**

Bijapur District Operators - At Bagalkot on the 24th & 25th instant at 'Basweshwar Talkies

Belgaum & Dharwar District Operators in Zone 9:- at Belgaum on the 26th instant at 10 A M at 'Ritz Theatre

Dharwar District Operators - at Dharwar on the 27th instant at 1 P M at Vijay Theatre Dharwar

North Kanara & Dharwar District Operators in Zone 10 - at Yellapur District Bungalow on 28th and 29th instant at times given in above programme

Belgaum,
3-8-1945

J. B. RABBITT,
Regional Transport Officer, Karnatak Region, BELGAUM.

ಇದನ್ನು ಪಾಂಡುರಂಗ ಕೃಷ್ಣ ಕಾಸಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲಖರ್ಚುಸಹ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೦-೬
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ಕಳುಹಿಸುವ
ವ್ಹಿ. ಪಿ. ಖರ್ಚು ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡಕೊಡತಕ್ಕದ್ದು

Reg. No. B 1270. Monday, 20th August, 1945.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೮.

ಕುಮಟಾ:- ಸೋಮವಾರ, ತಾ ೨೦ ಮಾಹೆ ಅಗಸ್ಟ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸ್ಮಾಲ್ ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೪ ಆಣೆಯಂತೆ

ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಜಪಾನಿ ಸಾಮ್ರಾಜ್ಯದ ಇತಿಶ್ರೀ

(ನಿರೀಕ್ಷಕನು ಬರೆಯು...)

ಕಳೆದ ವಾರದ "ವೃತ್ತ'ದಲ್ಲಿ ನಾವು ತಿಳಿಸಿದಂತೆ, ಜಪಾನಿ ಚಕ್ರವರ್ತಿಗಳಾದ ಹಿರೋ ಹಿಟೋರವರ ಆಜ್ಞೆಯ ಮೇರೆಗೆ ಜಪಾನ ಸರಕಾರವು ಸಂಪೂರ್ಣ ಶರಣಾಗತಿಯ ಪತ್ರವನ್ನು ಕಳೆದ ಮಂಗಳವಾರ ರಾತ್ರಿಯೇ ಮಿತ್ರರಿಗೆ ತಲ್ಪಿಸಿದ್ದರಿಂದ ಬುಧವಾರ ಸಕಲ ಜಾಗತಿಕ ಯುದ್ಧ ಮುಕ್ತಾಯದ ಸುವಾರ್ತೆಯನ್ನು ಲಂಡನದಿಂದ ಬ್ರಿಟಿಶ ಮಹಾ ಪ್ರಧಾನ ಶ್ರೀ ಮಿಂಟ ಆಟ್ಲಿಯವರೂ ವಾಶಿಂಗಟನ್ನದಿಂದ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರವರೂ ನಭೋವಾಣಿಯದ್ವಾರಾ ಜಗತ್ತಿಗೆಲ್ಲ ಸಾರಿ, ಜಪಾನ ಸರಕಾರದ ಪ್ರತಿನಿಧಿಗಳ ಕಡೆಯಿಂದ ಶರಣಾಗತಿಯ ಒಪ್ಪಂದಕ್ಕೆ ಸಹಿ ಮಾಡಿಸಿಕೊಳ್ಳಲಿಕ್ಕೆ ದ. ಪೆಸಿಫಿಕದೊಳಗಿನ ರಣರಂಗದ ಸರ್ವಸೇನಾಪತಿಗಳಾಗಿ ನೇಮಿಸಲ್ಪಟ್ಟ ಜನರಲ್ ಡೌಗ್ಲಾಸ ಮೆಕಾರ್ಥರರಿಗೆ ಅಧಿಕಾರ ಕೊಟ್ಟಿರು. ಜಪಾನ ಚಕ್ರವರ್ತಿಗಳೂ ಕೂಡ ಅಂದೇ ಜಪಾನಿ ಆಕಾಶವಾಣಿಯಲ್ಲಿ ತಮ್ಮ ಪ್ರಜೆಗಳನ್ನುದ್ದೇಶಿಸಿ ಭಾಷಣ ಮಾಡಿ,—ಆಕಾಶವಾಣಿಯಲ್ಲಿ ಅವರು ಮಾತಾಡಿದ್ದು ಇದೇ ಮೊದಲು ಬಾರಿ,—ಪೋಟ್ಸ್‌ಡಾಮದಿಂದ ಬ್ರಿಟನ್, ಅಮೇರಿಕಾ, ಚೀನ ರಾಷ್ಟ್ರಗಳ ಪ್ರಮುಖರು ಕೊಟ್ಟ ಎಚ್ಚರಿಕೆಯೊಳಗಿನ ಕರಾರುಗಳನ್ನು ಜಪಾನ ತಾವು ಒಪ್ಪಿದ ಬಗ್ಗೆಯ ಪತ್ರ ಮಿತ್ರ ರಾಷ್ಟ್ರಗಳಿಗೆ ಕಳಿಸಿಕೊಡಲು ತಮ್ಮ ಸರಕಾರಕ್ಕೆ ತಿಳಿಸಿದ್ದನ್ನು ಸಂಕ್ಷೇಪದಿಂದ ವಿವರಿಸಿ, ಸ್ವಾರ್ಥಬುದ್ಧಿಯಿಂದಲೂ ನಿಶ್ಚಲ ಬುದ್ಧಿಯಿಂದಲೂ ಎದುರು ಬಂದ ಪರಿಸ್ಥಿತಿಗೆ ತಲೆಬಾಗಿರೆಂದು ನಿಶಬ್ದನೆ ಉಪದೇಶ ಮಾಡಿದರು "ನಮ್ಮ ಸೈನಿಕರೂ ಅಧಿಕಾರಿಗಳೂ ೧೦ ಕೋಟಿ ಪ್ರಜೆಗಳೂ ಕೈಲಾದ ಮಟ್ಟಿಗೆ ಸಾಹಸ ಮಾಡಿ ಹೋರಾಡಿದ್ದಾರೆ ಆದರೆ ಯುದ್ಧ-ಪರಿಸ್ಥಿತಿ ನಮಗೆ ಅನುಕೂಲವಾಗಿ ಪರಿಣಮಿಸಲಿಲ್ಲ ಜಗತ್ತಿಗೆ ಜಗತ್ತೇ ನಮ್ಮ ವಿರುದ್ಧ ನಿಂತಿತು ಅದರಲ್ಲೂ ಈಗ ಶತ್ರುವು ಹೊಸ ನಮೂನೆಯ ಒಂದು ಪ್ರಳಯಕಾರಿ ಅಸ್ತ್ರವನ್ನು ಪ್ರಯೋಗಿಸ ಹತ್ತಿದ್ದಾನೆ ಅದರ ವಿನಾಶಕ ಶಕ್ತಿಯನ್ನು ಕಲ್ಪಿಸಲು ಸಹ ಸಾಧ್ಯವಿಲ್ಲ ಯುದ್ಧಕಾರ್ಯಕ್ಕೆ ಸಂಬಂಧವಿಲ್ಲದ ಅಸಂಖ್ಯ ಜನರನ್ನೂ ಅದು ನಾಶ ಮಾಡುತ್ತಿದೆ! ಇನ್ನೂ ನಾವು ನಮ್ಮ ಹೋರಾಟ ಮುಂದುವರಿಸಿದರೆ ನಮ್ಮ ಜಪಾನ ರಾಷ್ಟ್ರ ಕೇವಲ ನಾಶವಾಗುವದಲ್ಲದೆ ಮಾನವ ಜಾತಿಯ ನಾಗರಿಕತೆಯೂ ಜಗತ್ತಿನಿಂದ ನಾಶವಾಗಿ ಹೋಗುವ ಭೀತಿಯುಂಟು" ಹೀಗೆ ಚಕ್ರವರ್ತಿಗಳು ನ್ನು ಈ ಭಾಷಣದಲ್ಲೊಂದು ಕಡೆ ಹೇಳಿ ಅಟಂ ಬಾಂಬಿನ ದ ಪಾಲಿಯನ್ನೂ ಅದರಿಂದಾಗಬಹುದಾದ ದುಷ್ಪರಿಣಾಮಗಳನ್ನೂ ಚಿತ್ರಿಸಿದ್ದಾಗಿ ಎಸ್ಸಿದ್ದ' ಈ ತಮ್ಮ ಪ್ರಜೆಗಳ ಕ್ಷೇಮಕ್ಕೆಂದು ಶಸ್ತ್ರವನ್ನು ಕೆಳಗಿಡಲು ಒಪ್ಪಿದ್ದು ಬೇರೆ ಬೇರೆ ರಣರಂಗಗಳೊಳಗಿನ ಜಪಾನಿ ಸೈನಿಕರಿಗೆ ಹೋರಾಟ ನಿಲ್ಲಿಸಲು ತಿಳಿಸಿದಂತೆ ತಾವು ತಮ್ಮ ರಾಜಮನೆತನದ ಗೌರವವನ್ನು ಉಳಿಸಿಕೊಂಡಿರುವುದಾಗಿಯೂ ಚಕ್ರವರ್ತಿಗಳು ಮಿತ್ರರಿಗೆ ತಿಳಿಸಿದ್ದುಂಟು. ಜಪಾನದ ಅರಸರೇ ಸ್ವತಃ ಈ ಬಗ ಶರಣಾಗತಿಯ ಆಜ್ಞೆ ಮಾಡಿದರಾದರೂ, ಕೆಲೇಕ ಜಪಾನಿ ಅಧಿಕಾರಿಗಳಿಗೆ ಶರಣಾಗತಿಯು ಒಪ್ಪಿಗೆಯಿಲ್ಲವೆಂಬಂತೆ ತೋರುತ್ತಿದೆ. ಯುದ್ಧ-ಮಂತ್ರಿಯಾದ ಜನರಲ ಅನಾಮಿಯವರು ಮರಣ ಹೊಂದಿದ ಕೆಲವೇ ತಾಸುಗಳಲ್ಲಿ ಜಪಾನಿಯರ ಸರ್ವ ಸೇನಾಪತಿಗಳಾದ ಜ. ಮಿಯಾಮರೂ ಐವರ ಪದದಲ್ಲಿದ್ದ ಜಪಾನಿ ರಾಜಕುಮಾರಿಯೂ ಹರಾಕಿರಿ (ದೇಹಾಂತಪೂರ್ವ ಚಕ್ರವರ್ತಿಗಳ ಸೇವೆ ತಮ್ಮಿಂದ ಸರಿಯಾಗಿ ಆಗಿಲ್ಲೆಂದು ಕಂಡರೆ ಜಪಾನಿ ಅಧಿಕಾರಿಗಳು ಆತ್ಮಹತ್ಯೆಯು ಮಾಡಿಕೊಳ್ಳುತ್ತಾರೆ, ಅದಕ್ಕೇ "ಹರಾಕಿರಿ" ಅನ್ನುತ್ತಾರೆ) ಮಾಡಿಕೊಂಡ ವಾರ್ತೆಯುಂಟು. ಇನ್ನೂ ಇಂತಹ ಎಷ್ಟು ಹರಾಕಿರಿಗಳು ಆಗಲಿವೆಯೋ ದೇವರೇ ಬಲ್ಲ! ಚಕ್ರವರ್ತಿಗಳ ಆಜ್ಞೆಯಂತೆ ಅಲ್ಲಲ್ಲಿಯ ಜಪಾನಿ ಸೇನಾಪತಿಗಳು ಅಲ್ಲಲ್ಲಿಯ ಶತ್ರು ಸೇನಾಪತಿಗಳಿಗೆ ಶರಣು ಬರುತ್ತಿದ್ದಾರೆ ಆದರೆ ರುಶ್ಯ ಜಪಾನಿ ರಣಭೂಮಿಯಲ್ಲಿ ಇನ್ನೂ ಯುದ್ಧ ನಿಂತಿಲ್ಲ! ರುಶ್ಯ ದಂಡುಗಳು ಮುಂದೆ ಮುಂದೆ ಒತ್ತುತ್ತಿವೆ! ರುಶ್ಯರಿಗೆ ಯುದ್ಧ ನಿಲ್ಲಿಸಲು ಮನಸ್ಸಿಲ್ಲದಿರೆಂದು ಜಪಾನಿಗಳು ಜ.! ಮೆಕಾರ್ಥರರಿಗೆ ದೂರಿಡುತ್ತಿದ್ದಾರೆ ಆದರೆ ಜಪಾನರ ಶರಣಾಗತಿಯ ವಿಷಯದಲ್ಲಿ ಮೋಸವುಂಟೆಂದೂ, ರುಶ್ಯ ಆಮೇರಿಕೆಯವರೊಳಗೆ ಒಡಕು ಹುಟ್ಟಿಸಲು ಜಪಾನಿಯರು ಯತ್ನಿಸುತ್ತಿದ್ದಾರೆಂದೂ ರುಶ್ಯರು ಜಪಾನಿಯರ ವಿರುದ್ಧ ಪ್ರತ್ಯಾರೋಪ ಮಾಡುತ್ತಿದ್ದಾರೆ! ಯುದ್ಧ ನಿಲ್ಲಿಸಲು ಅವರು ತಮಗೆ ಬದ್ಧವಿಸಿದ ಜ. ಮೆಕಾರ್ಥರರ ಮಧ್ಯಸ್ಥಿಕೆಯನ್ನೇಕೆ ಒಯಸಬೇಕೆಂದು ಅವರ ಪ್ರಶ್ನೆ! ಜ.! ಮೆಕಾರ್ಥರರ ಕಡೆಗಷ್ಟೇ ಜಪಾನವು ಶಾಂತಿದೂತರನ್ನು ಕಳಿಸಿ ಶರಣಾಗತಿಯ ಒಪ್ಪಂದಕ್ಕೆ ಸಹಿ ಮಾಡಿದರೆ ರುಶ್ಯರಿಗೆ ಒಪ್ಪಿಗೆಯಿಲ್ಲ ತಮ್ಮ ಕಡೆಗೂ ಅವರು ಶಾಂತಿದೂತರನ್ನು ಕಳಿಸಿಕೊಡಬೇಕಾಗಿ ರುಶ್ಯರ ಹಟವಿದ್ದಂತೆ ಕಾಣುತ್ತಿದೆ ಮೊನ್ನೆ ಸಾಯಂಕಾಲ ಮಧ್ಯ ಮಂಚೂರಿಯಾದಲ್ಲಿರುವ ಹಾರ್ಬಿನ ನಗರದ ಬಳಿ ಇಳಿದ ರುಶ್ಯ ಪ್ರತಿನಿಧಿಗಳು ವಿಮಾನದಿಂದ ಇಳಿದಿರುವರೆಂದೂ, ಜಪಾನರ ಪ್ರತಿನಿಧಿಗಳು ಅವರೊಡನೆ ರುಶ್ಯ ಸೇನಾಪತಿಗಳ ಕೇಂದ್ರ ಕಚೇರಿಗೆ ಮುಂದಿನ ಮಾತುಕತೆಗಳಿಗಾಗಿ ತೆರಳಬೇಕೆಂದೂ, ರವಿವಾರ (ನಿನ್ನೆ) ದೊಳಗಾಗಿ ಜಪಾನಿ ಶಾಂತಿದೂತರು ರುಶ್ಯರ ವಶವಾಗಬೇಕೆಂದೂ ರುಶ್ಯರ ನಭೋವಾಣಿಯು ಕೊಟ್ಟ ಎಚ್ಚರಿಕೆಯೇ ಈ ಮಾತಿಗೆ ಸಾಕ್ಷಿ. ಶತ್ರು ಜಪಾನರು ಮಿತ್ರರ ಪರವಾಗಿ ಯಾರೊಬ್ಬರಿಗೆ ಶರಣು ಬಂದರೆ ಸಾಕೆಂಬ ಭಾವನೆ ಇನ್ನೂ ತನ 'ಮಿತ್ರ'ರಲ್ಲೂ ಕಂಡುಬರುವದಿಲ್ಲ! ಜಪಾನಿಯರ ಶರಣಾಗತಿಯ ಒಪ್ಪಂದಕ್ಕೆ ತಾವು ಪಕ್ಷಗಾರರಾಗಿ ಸೇರಿಸಿಕೊಳ್ಳಲ್ಪಡಬೇಕೆಂದು ಉತ್ತರ ಚೀನದಲ್ಲಿ ಹೋರಾಡುತ್ತಿರುವ ಚೀನ ಕಮ್ಯುನಿಸ್ಟರೂ, ಇಂಡೋ ಚೀನದಲ್ಲಿ ಹಕ್ಕು ಹೇಳುವ ಫ್ರೆಂಚರೂ ಆಸ್ಟ್ರೇಲಿಯಾದವರೂ ವಾದಿಸುತ್ತಿದ್ದಾರೆ! ಚೀನದಲ್ಲಿ ಇಲ್ಲ ದಗಳುಂಟು ಉತ್ತರ ಭಾಗದಲ್ಲಿ ಚೀನ ಕಮ್ಯುನಿಸ್ಟರ ಪ್ರಾಬಲ್ಯ, ದಕ್ಷಿಣದಲ್ಲಿ ಜ. ಚಿಯಾಂಗ-ಕೈ-ಶೇಕರ ರಾಷ್ಟ್ರೀಯ ಪಕ್ಷದ ಪ್ರಾಬಲ್ಯ! ಇವರೊಳಗೆ ಸಾಮರಸ್ಯವಿಲ್ಲ, ಸಹಕಾರವಿಲ್ಲ, ಸಮ ವಿಚಾರವಿಲ್ಲ! ಆದರಿಂದ ಚೀನದಲ್ಲಿ ಯಾದವಿ ಜಗಳವುಂಟಾಗುವ ಭಯವುಂಟು. ಈ ಯಾದವಿಯನ್ನು ಪರಸ್ಪರ ವಿಚಾರವಿನಿಮಯದಿಂದ ಪರಿಹರಿಸಿಕೊಳ್ಳುವದಕ್ಕಾಗಿ ಜ. ಚಿಯಾಂಗ ಕೈ-ಶೇಕರು ಕಮ್ಯುನಿಸ್ಟ ಪಕ್ಷದ ಅಧ್ಯಕ್ಷರಿಗೆ ತಮ್ಮನ್ನು ಭೆಟ್ಟಿಯಾಗಬೇಕೆಂದು ಕರೆ ಕಳಿಸಿದ್ದರು ಆದರೆ ಆ ಭೆಟ್ಟಿಯಿಂದ ವಿಶೇಷ ಪ್ರಯೋಜನವಾಗಲಿಕ್ಕಿಲ್ಲವೆಂದು ಇದೀಗ ಸುದ್ದಿ ಬಂದಿದೆ. ಚೀನದೊಳಗಿನ ಈ ಯಾದವಿಯು ಬೆಳೆಯುತ್ತ ವಿಕೋಪಕ್ಕೆ ಹೋದರೆ ಆ ದುರ್ದೈವಿ ರಾಷ್ಟ್ರವು ಪರಕೀಯರ ಕ್ರೀಡಾಂಗಣ ಲೀಲಾ ಭೂಮಿಯಾಗಿ ಪರಿಣಮಿಸುವದೆಂದು ನಾವು ಹೇಳಬೇಕಾಗಿಲ್ಲ! ರುಶ್ಯರಿಗೂ ಚೀನಿಯರಿಗೂ ವಿಶೇಷ ಒಪ್ಪಂದಗಳಾದ ವಾರ್ತೆಗಳು ಬರುತ್ತಿವೆ ಅದರಿಂದ ಚೀನದಲ್ಲಿ ರುಶ್ಯರೇ ಮೊದಲು ತಮ್ಮ ಪ್ರಭಾವ ಬೆಳೆಸಿಕೊಳ್ಳುವ ಸುಯೋಗ ರಚಿಸಿಕೊಳ್ಳಬೇಕೆಂದು ನನಗೆ ಸಂಶಯ ಬಂದಿದೆ. ಜಪಾನ-ಆಕ್ರಮಿತ ಪ್ರದೇಶವನ್ನು ಆಕ್ರಮಿಸಿಕೊಳ್ಳುವಲ್ಲೂ ಮಿತ್ರರೊಳಗೆ ಕಚ್ಚಾಟ ನಡೆಯುವ ಪ್ರಸಂಗವುಂಟು. ಆಸ್ಟ್ರೇಲಿಯಾಕ್ಕೆ ಸನಿಯದಲ್ಲಿರುವ ಸುಮಾತ್ರಾ, ಜಾವಾ, ಮಲಾಯಾ ಮೊದಲಾದ ಪ್ರದೇಶವನ್ನು ತಾವು ಆಕ್ರಮಿಸುವವರಾಗಿ ಆಸ್ಟ್ರೇಲಿಯನ್ನರು ವಾದಿಸುತ್ತಾರೆ! ಮಂಚೂರಿಯಾ, ಕೊರಿಯಾ ಪ್ರದೇಶವನ್ನು ರುಶ್ಯರು ಆಕ್ರಮಿಸದೆ ಬಿಡಲಿಕ್ಕಿಲ್ಲ! ಜಪಾನಿಯರು ಈ ಎಲ್ಲ ಪ್ರದೇಶಗಳಿಗೆ ತೋರಿಕೆಯ ಮಟ್ಟಿಗಾದರೂ ಸ್ವಾತಂತ್ರ್ಯ ಕೊಟ್ಟಿದ್ದರು. ಜಪಾನಿಯರನ್ನು ಮಿತ್ರರು ಆ ಪ್ರದೇಶಗಳಿಂದ ಹೊರಗಟ್ಟಿ ಅಟ್ಲಾಂಟಿಕ ಘೋಷಣೆಯಲ್ಲಿ ಕೊಟ್ಟ ಆಶ್ವಾಸನಗಳನ್ನನುಸರಿಸಿ ಅಲ್ಲಿಯ ಜನರಿಗೆ ತಮಗೆ ಬೇಕಾದಂತಹ ಸ್ವತಂತ್ರ ಸರಕಾರಗಳನ್ನು ರಚಿಸಿಕೊಳ್ಳಲು ಬಿಡುವರೋ ಇಲ್ಲವೆ ಆ ಪ್ರದೇಶಗಳಲ್ಲಿ ಹಿಂದೆ ಸಾಮ್ರಾಜ್ಯ ಮಾಡುತ್ತಿದ್ದ ಡಚ್ಚ, ಫ್ರೆಂಚ ಜನರಿಗೇ ಅವನ್ನು ಒಪ್ಪಿಸುವರೋ ಅಥವಾ "Might is Right" (ಬಲವಂತನು ಮಾಡಿದ್ದೇ ನ್ಯಾಯ) ಎಂಬ ತತ್ವಕ್ಕನುಸಾರವಾಗಿ ಬಲವಂತರೇ ಅವನ್ನು ಆಕ್ರಮಿಸುತ್ತಾರೋ ನೋಡಬೇಕು. ಈ ಯುದ್ಧದಲ್ಲಿ ಭಾರತೀಯ ಸೈನಿಕರು ಬಹಳ ಸಾಹಸ ಮಾಡಿದ್ದುಂಟು ಅದರ ಪ್ರತಿಫಲವೇನು ಸಿಗುತ್ತದೆಂದು ನೋಡಬೇಕು. ಪರರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯರಿಗೆ ಸ್ವಾತಂತ್ರ್ಯ ಸಿಗಬೇಕಾದದ್ದು ನ್ಯಾಯ ಅದು ಸಿಗದಿದ್ದರೆ ಜಗತ್ತಿನಲ್ಲಿ ಶಾಂತತೆ ನೆಲಸುವಂತಿಲ್ಲೆಂದು ರಾಷ್ಟ್ರಪತಿ ಆಝಾದರು ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ. ಯುದ್ಧ-ಮುಕ್ತಾಯದಿಂದ ಉಂಟಾದ ಆನಂದವು ಮುಂದಿನ ಘಟನೆಗಳ ಕಲ್ಪನೆ ಬಂದ ಕೂಡಲೆ ನಾಶವಾಗುತ್ತಿದೆ. ಅಮೇರಿಕೆಯಲ್ಲಿ ಇನ್ನೂ ಎಟಂ ಬಾಂಬುಗಳನ್ನು ತಯಾರಿಸುತ್ತಿದ್ದಾರಂತೆ!! ಯಾರ ಮೇಲೆ ಉಪಯೋಗಿಸುವದಕ್ಕೆ ಈ ಬಾಂಬುಗಳನ್ನು ಮಾಡುತ್ತಿರುವರೋ ನಾ ಕಾಣೆ! ಈ ಜಾಗತಿಕ ಯುದ್ಧ ಸಮಾಪ್ತಿಯಿಂದಾದ ನನ್ನ ಆನಂದವೆಲ್ಲ ಮುಂಜಾವಿನ ಮಂಜಿನಂತೆ ಅಡಗಿಹೋಗಿದೆ! ದೇವರಿಟ್ಟ ಏನುಂಟೆಂದು ಯಾರು ಬಲ್ಲರು?

(೩ನೇ ಪುಟದಿಂದ ಮುಂದರಿಸಿದ್ದು)

ಬಿ. ಮೋಹನರಾವರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಮಿತ್ರರಿಗಾದ ವಿಜಯದ ಬಗ್ಗೆ ಆನಂದ ಪ್ರದರ್ಶಿಸುವ ಭಾಷಣಗಳಾದವು ಸಭೆಗೆ ಬಂದವರಿಗೆ ಮಿಠಾಯಿ ಹಂಚಿದರು ಸಂಜೆಯಲ್ಲಿ ಬಹಳ ಕಡೆ ದೀಪಾರಾಧನೆಯಾಯಿತು. ದೀಪೋತ್ಸವಕ್ಕೆ ಖರ್ಚು ಮಾಡಿದ ಹಣದಿಂದ ತಮಗಿಷ್ಟು ಅಕ್ಕಿ ಕೊಡಿಸಿದ್ದರಾಗುತ್ತಿದ್ದಿಲ್ಲವೇ ಎಂದು ಬಡವರನೇಕರು ಮರುಗುತ್ತಿದ್ದರು

ಕಾರವಾರ— (ತಾ. ೧೮-೮-೪೫) ನಿನ್ನೆ ಈ ಊರಲ್ಲಿ ವಿಜಯೋತ್ಸವದ ಕಾರ್ಯಕ್ರಮವು ವಿಜೃಂಭಣೆಯಿಂದ ನಡೆಯಿತು. ಬೆಳಿಗ್ಗೆ ೮ ಘಂಟೆಗೆ ಶಾಲೆಯ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದರು. ೧೧ ಘಂಟೆಗೆ ಶಿರಿನ ಚಿತ್ರ-ಮಂದಿರದಲ್ಲಿ ಜಿಲ್ಲಾಧಿಕಾರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ, ರಾ. ಸಾ. ಕೇಣಿ, ರಾ| ಹಳದೀಪುರಕರ, ಮಾಧವ ಕುರ್ಲೆ, ಬಾಪಟ ಇವರ ಸಮಯೋಚಿತ ಭಾಷಣಗಳಾದವು. ಸಂಜೆ ೬ಕ್ಕೆ ಇಲ್ಲಿಯ ಸೈನಿಕರಿಗೆ ಮಿತ್ರಸಮಾಜದ ಮಂದಿರದಲ್ಲಿ ಆದರ್ಶೋಪಹಾರ ಕೊಡಲಾಯಿತು. ಪೋಲೀಸರ ಕವಾಯತಿನ ಮೈದಾನದಲ್ಲಿ ಪೋಲೀಸರ ಆಟಪಾಟಗಳಾದವು. ಮೊನ್ನೆ ಜಿಲ್ಲಾಧಿಕಾರ ಕಚೇರಿಯಲ್ಲಿ ಬಡವರಿಗೆ ಅಕ್ಕಿಯ ಧರ್ಮ ಕೊಟ್ಟಿದ್ದರು

ಹೊಸ ಜಿಲ್ಲಾ ಲೋಕಲ ಬೋರ್ಡಿನ ಮೊದಲಿನ ಸಭಾ ಸದಿ ೬ ಬುಧವಾರ ಸೇರಿ ರಾ|| ದತ್ತಾತ್ರಯ ಸುಬ್ಬ ನಾಯ್ಕ ಇವರು ಅಧ್ಯಕ್ಷರಾಗಿಯೂ ರಾ|| ಗಿರಿಕರೀಯ ಗಣಪತಿ ಭಾಗವತರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು [illegible] ಮುಂದೆ ಬರಲಿದ್ದ ಬೋರ್ಡನ್ನು ಸರಕಾರವು ರದ್ದು ಪಡಿಸಿದ್ದಲ್ಲಿ ತಾವು ಅಧಿಕಾರ [illegible] ಜನಪ್ರತಿನಿಧಿಗಳ [illegible] ಕೈಕೊಳ್ಳುತ್ತೇನೆಂದು [illegible] ಮುಂದಿನ ತಿಂಗಳಲ್ಲಾಗುವ ಸ್ಥಳೀಯ [illegible] ಚುನಾವಣೆಯಲ್ಲಿ [illegible] ಆ ಬೋರ್ಡಿನ ಅಧ್ಯಕ್ಷರಾಗುವರೆಂದು ಹೇಳುತ್ತಾರೆ

Estd· 1934

The Agricultural & Industrial Bank, Ltd.

(Incorporated in British India, Liability of Members limited)

Head Office· COONDAPOOR. S. K.

ANNOUNCING

The Opening of three more Branches simultaneously at

BOMBAY,

BHATKAL & HONAVAR (North Kanara Dt.),

shortly.

Watch for further announcements for dates of opening.

RESOURCES NEARLY HALF A CRORE.

COONDAPOOR, 1-8-1945

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಶನಿವಾರ [illegible] ಪೆಟ್ಟಿ [illegible] ತರಗತಿಗಳು [illegible]

[illegible] ಸಂಜೆ [illegible] ಇಲ್ಲಿ [illegible] ಅಧ್ಯಕ್ಷತೆಯಲ್ಲಿ [illegible] ವಿಜಯೋತ್ಸವ [illegible] ಸಭೆಯಾಗಿ [illegible] ಕಚೇರಿಯಲ್ಲಿ [illegible] ಮುಂದೆ [illegible]

[illegible] ತಿಂಗಳ [illegible] ಮಾರ್ಗದಲ್ಲಿ [illegible] ಉತ್ಪನ್ನವಾ [illegible] ಆಫೀಸ [illegible] ಬಂದಿದೆ

ಕಳೆದ ಆಗಸ್ಟ ತಿಂಗಳಿಂದ ಇಲ್ಲಿ [illegible] ಹೊರಿಂದ ತೆರೆಯಲ್ಪಟ್ಟಿದೆ [illegible] ಧರ್ಮಶಾಲೆಯ [illegible] ಉಪಯೋಗಿಸಿಕೊಳ್ಳುವ [illegible] ಸಭೆಯ [illegible] ಕೊಟ್ಟಿತ್ತಂತೆ

ಉತ್ತರ ಕನ್ನಡ ಜಿಲ್ಲಾ [illegible] ಸೇವಾ ಸಮಿತಿಯ [illegible] ಸಭೆ ಇದೇ ಬರುವ [illegible] ಇಲ್ಲಿಯ [illegible] ಸಮಿತಿಯ [illegible] ಸಮಿತಿಯ [illegible] ಆಸ್ಥೆಯುಳ್ಳ [illegible] ಈ ಸಭೆಗೆ ಬರುವ [illegible] ನಿಮಂತ್ರಿಸಲಾಗಿದೆಯಂತೆ

[illegible] ಉದ್ಯೋಗಗಳೊಳಗಿನ [illegible] ಇವರಿಗೆ [illegible] ದಿನ [illegible] ತಿಂಗಳ [illegible] ಬರುವದಿಲ್ಲವಂತೆ [illegible] ಜಿಲ್ಲಾಧಿಕಾರರು ಅವರ ಸಂಬಳ ಕೂಡಲೇ ಕೊಡಿಸಿಯಾರೇ ?

ಶಿರಶಿಯಲ್ಲಿ ಠಿಕಾ ಬುರುಂ ಹುಕ್ಕು ಕಲ್ಲುಸಕ್ಕರೆಗಳನ್ನು ಚಹದಂಗಡಿಕಾರರಿಗೂ ಸೋಡಾ-ಲಿಂಬಿಸರಬತ್ ಅಂಗಡಿಕಾರರಿಗೂ ಬಿಸ್ಕಿಟ ಮಾಡುವವರಿಗೂ ಸೀಧಾ ಸಕ್ಕರೆಗೆ ಮಿಕ್ಕಿ ಹಂಚುತ್ತಾರೆ. ಕಾರವಾರ, ಗೋಕರ್ಣ, ಕುಮಟಾ, ಹೊನ್ನಾವರ, ಭಟಕಳ ಸೀಧಾ ಪ್ರದೇಶಗಳಲ್ಲಿ ಮಾತ್ರ ಈ ಸಕ್ಕರೆಗಳನ್ನು ಸೀಧಾ ಚೀಟಿಯಲ್ಲಿನಷ್ಟೇ ಕೊಡುತ್ತಾರೆ. ಜಿಲ್ಲಾಧಿಕಾರಿಗಳು ಈ ಭೇದಭಾವವನ್ನು ನಿಲ್ಲಿಸಬೇಕಾಗಿ ನಾಗರಿಕರೊಬ್ಬರು ಸೂಚಿಸುತ್ತಾರೆ

ಹೊನ್ನಾವರ— (ತಾ ೧೨ ಆ ೪೫) ಊರಿನ ಬಜಾರಿನ ಯೋಗ್ಯ ದರದ ಅಂಗಡಿಯವರು ಅಕ್ಕಿ ಮತ್ತು ರಾಗಿ ಮಾರಾಟಕ್ಕೆ ದಾಸ್ತಾನ ಇಡುವದಿಲ್ಲ, ಬಹಳಷ್ಟು ಸಕ್ಕರೆ ಮತ್ತು ಚಹಾದ ಎಲೆ ಕಳ್ಳಪೇಟೆಗೆ ಹೋಗುತ್ತಿದೆ, ಆದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಕಳ್ಳಪೇಟೆ ಮಾಡುವದಕ್ಕಾಗಿಯೇ ಈ ಅಂಗಡಿಯ ನಿರ್ಮಾಣವಾಗಿದೆ ಎಂದು ಮುಂತಾಗಿ ತಾ ೧೧-೬-೪೫ರ "ವೃತ್ತ"ದಲ್ಲಿ ಪ್ರಕಟವಾದ ಟೀಕೆ ಸುಳ್ಳು, ಆಧಾರರಹಿತವೆಂದು ಜಿಲ್ಲಾಧಿಕಾರ ಕಚೇರಿಯಲ್ಲಿ ತಿಳಿದುಬಂದಿದೆಯಂತೆ

ಭಟಕಳ— (ತಾ ೧೬-೮-೪೫) ಈ ಹೊತ್ತು ಇಲ್ಲಿ ವಿಜಯೋತ್ಸವ [illegible] ಸಭಾಮಂದಿರದಲ್ಲಿ [illegible]

(೧ನೇ ಪುಟದ ಮೇಲೆ ಮುಂದರಿಸಿದೆ)

ಪ್ರಕಟಣೆ.

ಸಾಲಗಾರರ ಯಾದಿಗಳು ಪ್ರತಿ ತಿಂಗಳಿನ ಮೊದಲು ಡಿಸ್ಟ್ರಿಕ್ಟ [illegible] ಸಾಹೇಬ ಕಾರವಾರ ಇವರಿಗೂ, [illegible] ಸಾಹೇಬ ಕಾರವಾರ ಇವರಿಗೂ ಹಳಿಯಾಳ ಪ್ರತ್ಯೇಕ ತಾಲೂಕಿನ ಮಾಮಲೇದಾರ ಸಾಹೇಬರಿಗೂ ಮತ್ತು ಯಾವ ಯಾವ ಹಳ್ಳಿಗಳಿಂದ ಸಾಲ ವಿಮೋಚನೆಯ ಅರ್ಜಿಗಳು ಬರುತ್ತವೆಯೋ ಆ ಆ ಹಳ್ಳಿಗಳ ಠಾಣೆಯೋರಿಗೂ ಅವರವರ ಆಫೀಸುಗಳ ನೋಟೀಸ ಬೋರ್ಡಿಗೆ ಅಂಟಿಸಿ ಪ್ರಸಿದ್ಧ ಮಾಡಲಿಕ್ಕೆ ಕಳಿಸಲ್ಪಟ್ಟಿರುತ್ತದೆ

ತಾ 17 8-1945

M V Yettinmani,
Chairman
Debt Adjustment Board, Haliyal

ಆಜ್ಞೆ.

ನಂ 6

ಸರಕಾರಿ ಪ್ರಕಟಿತ ಗೃಹಖಾತೆ (ಪೊಲಿಟಿಕಲ್ ಖಾತೆ) ನಂಬರ ಎಸ್ ಡಿ II/1370 ತಾರೀಖು 15ನೇ ಸಪ್ಟಂಬರ 1911ನೇದರ ಜೊತೆಗೆ ಹಿಂದುಸ್ಥಾನ ಸಂರಕ್ಷಣ ನಿಯಮಗಳ ನಿಯಮ 81ರ ಪೋಟ ನಿಯಮ 2ರನ್ವಯ ಮತ್ತು ಆ ಬಗ್ಗೆ ಹೀಗೆ ಮಾಡುವ ಶಕ್ತಿಯಿಂದ ಸಹಾಯಕವಾಗುವ ಎಲ್ಲ ಅಧಿಕಾರಗಳ ಮೇಲಿಂದ ಜಿಲ್ಲಾ ಮೆಜಿಸ್ಟ್ರೇಟ ಮತ್ತು ಧಾರಣೆ ನಿಯಂತ್ರಕ ಕಾನಡಾ, ಇವರು ಆಜ್ಞೆ ಮಾಡುವದೇನೆಂದರೆ —

(1) ತಾ 15 ಆಗಸ್ಟ 1915ನೇ ದಿವಸದಿಂದ ಕಾನಡಾ ಜಿಲ್ಲೆಯ ಯಾವದೇ ಸ್ಥಳದಲ್ಲಿ ಇದಕ್ಕೆ ಜೋಡಿಸಿದ ಪರಿಶಿಷ್ಟದಲ್ಲಿ ತೋರಿಸಿದ ದರಕ್ಕಿಂತ ಹೆಚ್ಚಿಗೆ ದರದಿಂದ ಉರುವಲ ಕಟ್ಟಿಗೆ ಮತ್ತು ಇದ್ದಲಿಯನ್ನು ಯಾವನೂ ಸಹ ಮಾರಕೂಡದು ಯಾ ಮಾರಲಿಕ್ಕೆ ಇಡಬಾರದು

(2) ಸದ್ರಿ ಸಾಮಾನುಗಳ ವ್ಯವಹಾರಸ್ಥರು ಮಾರಲಿಕ್ಕೆ ಇಟ್ಟ ಸದ್ರಿ ಸಾಮಾನುಗಳನ್ನು, ಪರಿಶಿಷ್ಟದಲ್ಲಿ ತೋರಿಸಿದ ದರದಂತೆ ಆಗಾಗ ತಮ್ಮಲ್ಲಿಗೆ ಕೇಳಿದ ಯಾರಿಗೂ ಮಾರಾಟ ಮಾಡದೆ ಇಟ್ಟುಕೊಳ್ಳಲು ಬರಲಾರದು

(3) ಈ ಆಜ್ಞೆಯ ಒಂದು ನಕಲನ್ನು ಸದ್ರಿ ವ್ಯವಹಾರಸ್ಥರು ತಮ್ಮ ತಮ್ಮ ಸಂಗ್ರಹ ಸ್ಥಳಗಳಲ್ಲಿ ಯಾ ವ್ಯವಹಾರದ ಸ್ಥಳಗಳಲ್ಲಿ ಎಲ್ಲರಿಗೆ ಕಾಣುವಂಥ ಸ್ಥಳದಲ್ಲಿ ಇಡತಕ್ಕದ್ದು ಯಾ ಅಂಟಿಸತಕ್ಕದ್ದು

(4) ಸದ್ರಿ ವ್ಯವಹಾರಸ್ಥರು ಪ್ರತಿ ಒಬ್ಬ ಗಿರಾಕಿದಾರನು ಕೇಳಿದಲ್ಲಿ ಖರೇದಿಗೆ ಸಂಬಂಧಿಸಿದ ನಗದಿ ಪಾವತಿಯನ್ನು ಯಾ ಬೇರೆ ಪಾವತಿಯನ್ನು ಕೊಡತಕ್ಕದ್ದು ಮತ್ತು ಅದರಲ್ಲಿ ಈ ಕೆಳಗಿನ ತಪಶೀಲುಗಳನ್ನು ತೋರಿಸತಕ್ಕದ್ದು

(i) ಮಾರಿದ ಸಾಮಾನಿನ ಪರಿಮಾಣ ಯಾ ಪರಿಮಾಣಗಳು
(ii) ಯಾವ ರೇಟಿ ಯಾ ರೇಟಗಳಿಗೆ ಮಾರಾಟ ಮಾಡಿತೋ ಅವುಗಳು

ಪರಿಶಿಷ್ಟ

ಕ್ಷೇತ್ರ	ಸಾಮಾನಿ	ಠೋಕ ದರ	ಕಿರಕೋಳ ದರ
	ಉರುವಲ ಕಟ್ಟಿಗೆ		
ಕಾನಡಾ ಜಿಲ್ಲೆಯ ಎಲ್ಲ ಸ್ಥಳಗಳು	ಎಲ್ಲ ತರದ ಉರುವಲ ಕಟ್ಟಿಗೆ	ಪ್ರತಿ ಟನ್ನಿಗೆ ರೂ 17-8 0	ಪ್ರತಿ ಬಂಗಾಲಿ ಮಣಕ್ಕೆ ರೂ 0 10 6
	ಇದ್ದಲಿ		
ಕಾನಡಾ ಜಿಲ್ಲೆಯ ಪಶ್ಚಿಮ ಅರಣ್ಯ ಭಾಗದಲ್ಲಿ ಬರುವ ಎಲ್ಲ ಸ್ಥಳಗಳು	ಎಲ್ಲ ತರದ ಇದ್ದಲಿ	ಪ್ರತಿ ಟನ್ನಿಗೆ ರೂ 100/-	ಪ್ರತಿ ಬಂಗಾಲಿ ಮಣಕ್ಕೆ ರೂ 4/-
ಕಾನಡಾ ಜಿಲ್ಲೆಯ ಪೂರ್ವ ಅರಣ್ಯ ಭಾಗದಲ್ಲಿ ಬರುವ ಎಲ್ಲ ಸ್ಥಳಗಳು	— ಡಿ —	ಪ್ರತಿ ಟನ್ನಿಗೆ ರೂ 84/	ಪ್ರತಿ ಬಂಗಾಲಿ ಮಣಕ್ಕೆ ರೂ 3-8-0
ಕಾನಡಾ ಜಿಲ್ಲೆಯ ಉತ್ತರ ಅರಣ್ಯ ಭಾಗದಲ್ಲಿ ಬರುವ ಎಲ್ಲ ಸ್ಥಳಗಳು	— ಡಿ —	ಪ್ರತಿ ಟನ್ನಿಗೆ ರೂ 84/	ಪ್ರತಿ ಬಂಗಾಲಿ ಮಣಕ್ಕೆ ರೂ 3 8 0
ಬೆಳಗಾಂವ ಅರಣ್ಯ ಭಾಗದಲ್ಲಿ ಬರುವ ಕಾನಡಾ ಜಿಲ್ಲೆಯ ಎಲ್ಲ ಸ್ಥಳಗಳು	— ಡಿ —	ಪ್ರತಿ ಟನ್ನಿಗೆ ರೂ 63/-	ಪ್ರತಿ ಬಂಗಾಲಿ ಮಣಕ್ಕೆ ರೂ 2 12-0

ಟಿಪ್ಪಣಿ ಧಾರಣೆಯ ಬಗ್ಗೆ ಒಂದೇ ವ್ಯವಹಾರದಲ್ಲಿ ಒಂದು ಟನ್ ಅಥವಾ ಹೆಚ್ಚಿಗಿನ ಉರುವಲ ಯಾ ಇದ್ದಲಿ ಕೊಡಕೊಳ್ಳುವ ವ್ಯವಹಾರ ಠೋಕ ವ್ಯವಹಾರವೆಂದು ಗಣಿಸಲ್ಪಡುವದು

ಈ ಆಜ್ಞೆಯನ್ನು ಯಾರಾದರೂ ಯಾವದೇ ತರದಿಂದ ಉಲ್ಲಂಘನೆ ಮಾಡಿದಲ್ಲಿ ಆಗ ಅವನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾಗುವದಲ್ಲದೆ ಈ ಗುನ್ಹೆಯನ್ನು ವಿಚಾರ ಮಾಡುವ ಯಾವದೇ ನ್ಯಾಯಸ್ಥಾನವು ಸದ್ರಿ ಗುನ್ಹೆಗೆ ಸಂಬಂಧಿಸಿದವೆಂದು ಅದಕ್ಕೆ ಖಾತ್ರಿಯಾದ ಸದ್ರಿ ಉರುವಲ ಕಟ್ಟಿಗೆ ಮತ್ತು ಇದ್ದಲಿ ಮತ್ತು ಅವುಗಳ ಕಟ್ಟೋಣ ಮತ್ತು ಆಚ್ಛಾದನ ಸಹಿತ ಸರಕಾರ ಜಮಾ ಮಾಡಿಸಲ್ಪಡಲಿಕ್ಕೆ ಆಜ್ಞಾಪಿಸಬಹುದು

ಕಾರವಾರ,
ತಾ 3ನೇ ಆಗಸ್ಟ, 1945

V. NANJAPPA.
ಜಿಲ್ಲಾ ಮೆಜಿಸ್ಟ್ರೇಟ ಮತ್ತು ಧಾರಣೆ ನಿಯಂತ್ರಕ, ಕಾನಡಾ

—R—

ಕುಮಟಾ ಸೀಧಾ ಕ್ಷೇತ್ರದೊಳಗಿನ ಜಮೀನುಗಳನ್ನು ಸಾಗುಮಾಡುವ ರೈತರು ಮತ್ತು ಜಮೀನದಾರರು ತಮ್ಮ ಹೊಲಗಳ ಬೆಳೆ ಕೊಯ್ದು ಒಡೆದ ಮೇಲೆ ತಮಗೆ ಎಷ್ಟು ಬೇಕೆಂಬ ಮಾಹಿತಿಯನ್ನು ರೇಶನಿಂಗ ಆಫೀಸರರಿಗೆ ಪ್ರತಿ ವರ್ಷ ಫೆಬ್ರುವರಿ ತಿಂಗಳ ತಾ ೧೫ನೇ ದರೊಳಗೆ ತಪ್ಪದೆ ತಿಳಿಸಿ ತಮ್ಮ ಸೀಧಾ ಕಾರ್ಡುಗಳೊಳಗಿನ ಭತ್ತದ ಸೀಧೆಯನ್ನು ರದ್ದುಪಡಿಸಿಕೊಳ್ಳಬೇಕು ಹಾಗೆ ಮಾಡದೆ ಫೆಬ್ರುವರಿ ತಿಂಗಳ ೧೫ನೇ ತಾರೀಖಿನ ನಂತರ ಬೆಳೆ ಒಡೆದವರೆ ಅಂಥ ಭತ್ತವನ್ನು ಅವರು ತಮ್ಮ [illegible]ಗಾಗಿ ಉಪಯೋಗಿಸಿಕೊಳ್ಳದೆ ಸರಕಾರಕ್ಕೆ ಮಾರಬೇಕಾಗುವದು ತಾ 18—8—1915

R B Naik
Rationing Officer, Kumta

ರೂ. ೫ ಇನಾಮು !

ನಮ್ಮ ಒಬ್ಬ [illegible] ಇಂದು [illegible] ನೆಟ್ಟಿಗಿರುವ ಕೋಟಿನ [illegible] ಬಣ್ಣದ [illegible] ಗಟ್ಟಿ [illegible] ಹೋದಷ್ಟು ಕಳೆದ [illegible] ಅದನ್ನು ಹುಡುಕಿ ತಂದು ಕೊಟ್ಟವರಿಗೆ ೫ ರೂ ಇನಾಮು ಕೊಡಲಾಗುವದು

ತಾ 18—8—1945

ಬಿ ವಿ ಪ್ರಭು,
ಸೆಕ್ರೆಟರಿ ಕುಮಟಾ ಮ್ಯುನಿಸಿಪಾಲಿಟಿ

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು

ಆವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?

ಇಂದು ನೀವು ದುಡಿಯುತ್ತೀರಿ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು!

ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?

ಅದಕ್ಕೊಂದೇ ಮಾರ್ಗವುಂಟು

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ

ಇಂದಿನ ರೂ ೧೦ ೧೨ ವರ್ಷಗಳ ಮೇಲೆ ರೂ ೧೫ ಕೊಡುತ್ತದೆ!

ಚಿನ್ನ ಬೆಳ್ಳಿ ರತ್ನಾದಿಗಳಲ್ಲಿ ಮನೆ-ಮಠಗಳಲ್ಲಿ ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ ಸ್ವಂತ ಆರ್ಟ ಕೆನರಾ ಪ್ರೆಸ್ಸಿನಲ್ಲಿ [illegible]

ವರ್ಗಣಿಯ ದರ
ಇಂಡಿಯಾದಲ್ಲಿ
ವರ್ಷಕ್ಕೆ ರೂ ೩ ೪-೦
ಓದ ವಿದ್ಯಾರ್ಥಿ ವರ್ಷಕ್ಕೆ ೩ ೦
೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦ ೦ ೯
ಹಳೇ ಸಂಚಿಕೆಗೆ ೦ ೪ ೦
ವ್ಹಿ ಪಿ ಮುಂದ ಹಣ ಕಳುಹದವರು
ವ್ಹಿ ಪಿ ವೆಚ್ಚ ಅವರೆ ಹೆಚ್ಚಿಗೆ
ಕೊಡಬೇಕು
ವರ್ಗಣಿ ಮುಂಗಡವಾಗಿ ಕೊಡತಕ್ಕದ್ದು

Reg. No. B 1270 Monday, 27th August, 1945

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೯

ಕುಮಟಾ – ಸೋಮವಾರ, ತಾ ೨೭ ಮಾಹೆ ಅಗಸ್ಟ ೧೯೪೫ನೇ ಇಸವಿ.

ಜಾಹೀರಾತುಗಳ ದರ
ಸ್ಥಳ ೧ ಇಂಚ್ ಉದ್ದ
೧ ಸಾರಿಗೆ ೩ ಆಣೆಯಂತೆ
ಸ್ಥಳ ೧ ಇಂಚ್ ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲದ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು

ಹಿಂದೀ ಬಿಕ್ಕಟ್ಟು ಬಿಡಿಸಲೇಬೇಕು.

(ನಿರೀಕ್ಷಕನು ಬರೆದುದು)

ಪೂರ್ವ ಪಶ್ಚಿಮ ಯುದ್ಧಗಳಲ್ಲಿ ವಿಜಯಿಗಳಾದ ಬ್ರಿಟಿಶರಿಗೆ ಇದೀಗ ಹಿಂದೀ ಬಿಕ್ಕಟ್ಟು ಬಿಡಿಸುವ ಉತ್ಕಂಠತೆಯಾಗಲಿ ಆತುರತೆಯಾಗಲಿ ಅಷ್ಟೇನು ಇರಲಿಕ್ಕಿಲ್ಲವಾಗಿಯೂ, ಹಿಂದೀಯರು ಅವರಿಗೆ ಇಲ್ಲದ ಆತಂಕತೋರಿಸಲಿಕ್ಕೆ ಅವರು ಈಗೇನು ಬೆದರುವಂತಿಲ್ಲ ಯಾ ಸಹಿಸುವಂತಿಲ್ಲವಾಗಿಯೂ ಕೆಲವರು ಭಾವಿಸಿ ನಿರಾಶೆಯ ನಿಟ್ಟುಸಿರು ಬಿಡ ಹತ್ತಿರುವದು ಕಂಡುಬರುತ್ತಿದೆ ಇಂಥವರಿಗೆ ಜಾಗತಿಕ ಪರಿಸ್ಥಿತಿಯ ಸರಿಯಾದ ಜ್ಞಾನವಿಲ್ಲೆಂದು ನಾನು ಹೇಳಬಲ್ಲೆ ಜರ್ಮನ, ಜಪಾನ ಯುದ್ಧಗಳು ಈಗ ಮುಗಿದಿರುವದಾದಾಗ್ಯೂ ಬ್ರಿಟನದ ದಿನ ಕಷ್ಟಗಳೇನೂ ಕಡಿಮೆಯಾಗಿಲ್ಲ ಅವು ಕೆಲ ಮಟ್ಟಿಗೆ ಹೆಚ್ಚಿವೆಯೆಂದೇ ಹೇಳಬಹುದು ಇಷ್ಟು ದಿನ ಪರಕೀಯರೊಡನೆ ಹೋರಾಡುವದರಲ್ಲಿ ಮಿತ್ರರು ತೊಡಗಿದ್ದರಿಂದ ಅವರೊಳಗಿನ ಮತಭೇದಗಳೂ, ಅಸೂಯ-ಮಾತ್ಸರ್ಯಗಳೂ, ಒಗ್ಗಟ್ಟು ತಪ್ಪುವಿಕೆಗಳೂ ಅಷ್ಟು ಎದ್ದು ಕಾಣುತ್ತಿದ್ದಿಲ್ಲ ಜಪಾನ ಯುದ್ಧ ಮುಗಿದಂದಿನಿಂದ ಅವು ಎದ್ದು ತೋರಲಾರಂಭಿಸಿವೆ ಜರ್ಮನಿಯ ಪತನವಾಗುವ ವರೆಗೆ ಒಂದಾಗಿ ರಷ್ಯರು ಮತ್ತು ಇಂಗ್ಲಂಡದ ಬ್ರಿಟಿಶ ಅಮೇರಿಕೆಯವರು ಹೇಗೆ ಎಂದೇ [illegible] ಇರುತ್ತಿದ್ದವು ಜರ್ಮನಿಯ ಪತನದ ದಿನದಿಂದ ಪ್ರತಿ ಪಕ್ಷ ರಾಜ್ಯವರಲ್ಲೂ ಮತ ಭೇದಗಳುಂಟಾಗಿ ಈಗ ೨೦ ಬದಲು ೩ ಪಟಗಳಾಗಿವೆ ಪೂರ್ವ ಯುರೋಪವನ್ನೆಲ್ಲ ರಷ್ಯರು ತಮ್ಮ ಅಂಕಿತದಲ್ಲಿಟ್ಟುಕೊಳ್ಳಬಯಸುತ್ತಾರೆ ಅಲ್ಲಿ [illegible] ಅಲ್ಲ ಮಿತ್ರಪಕ್ಷೀಯ ಸುದ್ದಿಗಾರರೂ ಕೂಡ ಮುಕ್ತದ್ವಾರ ಹೋಗುವದು ಶಕ್ಯವಾಗಿದೆ ಬಲ್ಕನ ದೇಶಗಳನ್ನೇ ನೋಡಿರಿ ಯುಗೋಸ್ಲಾವಿಯಾದಲ್ಲಿ ಸಹ (ಟಿಟೋನ ಮಾಂತ್ರಿಕ ಮಂಡಳದಲ್ಲಿ ಅಲ್ಲಿಯ ಪೀಟರ ಅರಸನ ಸೇರಿಸಲಾಗಿಲ್ಲ ಆದರಿಂದ ಅರಸರು ಟಿಟೋನ ರಾಜೀನಾಮೆ ಬೇಡುತ್ತಿದ್ದಾರೆ ಈ ಅರಸನಿಗೆ ಬ್ರಿಟಿಶ ಅಮೇರಿಕೆಯವರ ಬೆಂಬಲವುಂಟು ತದ್ವಿರುದ್ಧ ಟಿಟೋನಿಗೆ ರಷ್ಯ ಪ್ರಭು ಸ್ಟಾಲಿನ್ನರ ಆಧಾರವಿದೆ ಆದರಿಂದಲೇ ಟಿಟೋನು ಅರಸರ ಮನೋರಥವನ್ನು ಕಡೆಗಣಿಸಿ ಧನ್ಯನಾಗಿ ಅಧಿಕಾರಕ್ಕೆ ಅಂಟಿಕೊಂಡಿದ್ದಾನೆ ಬಲ್ಗೇರಿಯಾದ ತಾತ್ಪೂರ್ತಿಕ ಸರಕಾರವು ಇದೀಗ ಚುನಾವಣೆಗಳನ್ನು ನಡೆಸಿದೆ ಈ ಸರಕಾರವು ರಷ್ಯರ ಪ್ರಭಾವ [illegible] ವಿರೋಧಿ ಪಕ್ಷಕ್ಕೆ [illegible] ಈ ಚುನಾವಣೆಯು ಪಕ್ಷಪಾತಿಯಾಗಿದೆಯೆಂದು ಬ್ರಿಟಿಶ ಅಮೇರಿಕೆಯವರ ಅಭಿಪ್ರಾಯ ಈ ಚುನಾವಣೆಯನ್ನು ರದ್ದುಗೊಳಿಸಬೇಕಾಗಿಯೂ ಈ ಚುನಾವಣೆಯಲ್ಲಿ ಆರಿಸಿಬಂದ ಸರಕಾರವನ್ನು ತಾವು ಮನ್ನಿಸಲಿಕ್ಕಿಲ್ಲವಾಗಿಯೂ ಬ್ರಿಟಿಶ-ಅಮೇರಿಕೆಗಳ ಸರಕಾರಗಳು ಬೆದರಿಕೆ ಕೊಟ್ಟಿವೆ! ಆದರೆ ಬಲ್ಗೇರಿಯಾದ ಸರಕಾರವು ಈ ಬೆದರಿಕೆಯನ್ನು ಕಡೆಗಣಿಸಿ ಮುಂದೆ ಸಾಗಿದೆ! ರಷ್ಯರ ಪ್ರಭಾವ ಈ ಪರಿ ದೃಢವಾಗುತ್ತಿದ್ದುದು ಬ್ರಿಟಿಶರಿಗೆ ಅಸಹ್ಯವಾಗಿದೆ ಪೋಟ್ಸಡಮ್ ಪರಿಷತ್ತಿನ ಕಾಲಕ್ಕೆ ಚರ್ಚಿಲ್ಲರಿಗೂ ಸ್ಟಾಲಿನ್ನರಿಗೂ ಒಳ್ಳೆ ಘರ್ಷಣೆಯಾಗಿತ್ತಂತೆ ಚರ್ಚಿಲ್ಲರ ಸ್ಥಾನದಲ್ಲಿ ಹೊಸ ಬ್ರಿಟಿಶ ವಿದೇಶ ಮಂತ್ರಿ ಶ್ರೀ ಅರ್ನೆಸ್ಟ ಬೆವಿನ್ನರ ಆ ಪರಿಷತ್ತಿನಲ್ಲಿ ಸೇರಿದ ಮೇಲಂತೂ ಆ ಘರ್ಷಣೆ ಮಿಗಿಲಾಯಿತಾಗಿ ಕೇಳುತ್ತೇನೆ ರಷ್ಯರು ಈಗ ಪೂರ್ವದಲ್ಲೂ ತಮ್ಮ ಜಪಾನ ಮಂಚೂರಿಯಾವನ್ನು ಬಿಟ್ಟು ಸಂಪೂರ್ಣ ಮಂಚೂರಿಯಾ ಮಂಗೋಲಿಯಾ ದೇಶಗಳನ್ನು ಆಕ್ರಮಿಸಿದ್ದಾರೆ ಚೀನದಲ್ಲಿ ಚಾಂಗ ಕೈ ಶೇಕರ ರಾಷ್ಟ್ರೀಯ ಪಕ್ಷ ಮತ್ತು ಉತ್ತರದಲ್ಲಿ ಕಮ್ಯುನಿಸ್ಟ ಪಕ್ಷ ಹೀಗೆ ೨ ಪಕ್ಷಗಳುಂಟು ಈ ಎರಡೂ ಪಕ್ಷಗಳಲ್ಲಿ ಯಾದವೀ ಕಲಹ ಹುಟ್ಟುವ ಸಂಭವವಿದೆ ಆ ಕಾಲದಲ್ಲಿ ರಷ್ಯರು ಕಮ್ಯುನಿಸ್ಟರನ್ನು ತಮ್ಮ ಬಗಲೊಳಗೆ ಹಾಕಿ ಇಡೀ ಚೀನವನ್ನಲ್ಲದಿದ್ದರೂ ಅದರ ಬಹು ಭಾಗವನ್ನು ತಮ್ಮ ಅಂಕಿತದಲ್ಲಿ ಹಾಕಿಕೊಳ್ಳುವರೆಂದು ಭವಿಷ್ಯ ಹೇಳಿದರೆ ಅದು ೧೮ ಆಣೆಯಷ್ಟಾದರೂ ನಿಜವಾಗುವದು ರಷ್ಯರ ಪ್ರಭಾವದ ಈ ವಿಸ್ತಾರವು ಬ್ರಿಟನ-ಅಮೇರಿಕೆಯವರಲ್ಲಿ ಮಾತ್ಸರ್ಯವನ್ನುಂಟು ಮಾಡಿದೆ ರಷ್ಯ ಬ್ರಿಟಿಶರೊಳಗಿನ ಈ ಕಿತ್ತಾಟವು ಯುದ್ಧದಲ್ಲಿ ಪರ್ಯವಸಾನ ಹೊಂದುವ ಧೋಕೆಯುಂಟು ಪಶ್ಚಿಮ ಆಫ್ರಿಕೆಯ ಹೋಹೆಗಿನ ರಾಜಕಾರಣಿಗಳೊಬ್ಬರು ಕಳೆದ ವಾರವೇ ರಷ್ಯರ ವಿರುದ್ಧ ಕಠೋರ ಟೀಕೆ ಮಾಡಿ, ಅವರ ವಿರುದ್ಧ ಬ್ರಿಟಿಶರು ಶಕ್ತಿ ಹಿರಿಯುವ ಕಾಲ ಸಮೀಪ ಬಂದಿದೆಯೆಂದು ಸ್ಪಷ್ಟ ಭಾಷೆಯಲ್ಲಿ ಬರೆದದ್ದುಂಟು ಅಮೇರಿಕೆಯವರ ಕೈಯಲ್ಲಿದ್ದ "ಎಟಂ ಬಾಂಬು" ನೋಡಿ ರಷ್ಯರು ತಣ್ಣಗಾಗಬಹುದೆಂದು ಇಷ್ಟು ದಿನ ನಮ್ಮದೊಂದು ಮೂಢ ನಂಬಿಗೆಯಿತ್ತು ಆದರೆ ಆ ಬಾಂಬು ತಯಾರಿಸಿದ ಶಾಸ್ತ್ರಜ್ಞರು ಈಗ ಹೊಸಕೆಲಸಕ್ಕೆ ಹೋಗಿದ್ದಾರೆಂತೆ ಎಟಂ ಬಾಂಬು ಅಮೇರಿಕೆಯವರೊಬ್ಬರ ಗುಟ್ಟು ಸ್ವಾಮ್ಯವಾಗುಳಿಯುವ ಆಶೆಯಿಲ್ಲ ಅದನ್ನು ಯಾವ ಬೇಕಾದ ದೇಶದವರು ತಯಾರ ಮಾಡಬಹುದೆಂದು ಆ ಬಾಂಬಿನ ಶೋಧ ಮಾಡಿದ ತಜ್ಞರೊಬ್ಬರು ನುಡಿಯುತ್ತಾರೆ ಅಂತು ಎಟಂ ಬಾಂಬಿನ ಅಸ್ತ್ರ ಬೇಗನೇ ರಷ್ಯರ ಕೈಯಲ್ಲಿಯೂ ಬೀಳುವದೆಂದು ತಿಳಿಯಲಡ್ಡಿಯಿಲ್ಲ ಬ್ರಿಟಿಶ ಅಮೇರಿಕೆಯವರೊಳಗೂ ಈಗ ವಿಘ್ನವುಂಟಾಗಹತ್ತಿದೆ ಶಾಂತಸಾಗರದಲ್ಲಿ ಪೂರ್ಣವಾಗಿ ತಮ್ಮ ಪ್ರಭುತ್ವವನ್ನೇ ಸ್ಥಾಪಿಸಲು ಅಮೇರಿಕೆಯವರು ಹವಣಿಸುತ್ತಾರೆ ಚೀನದ ಪೂರ್ವ ದಂಡೆಯಲ್ಲಿದ್ದ ಹೊಂಗಕೊಂಗ ನಡುಗಡ್ಡೆ ಈಗ ನೂರು ವರ್ಷಗಳಿಂದ ಬ್ರಿಟಿಶರ ವಶವಿತ್ತು ಅದು ತಮಗೆ ಸಲ್ಲತಕ್ಕದ್ದೆಂದು ಚೀನಿಯರ ವಾದ ಅಮೇರಿಕೆಯವರು ಅವರ ಈ ವಾದವನ್ನು ಎತ್ತಿಹಿಡಿದಿದ್ದಾರೆ ಆದರೆ ಬ್ರಿಟಿಶರು ಅದನ್ನು ಬಿಟ್ಟುಕೊಡಲು ಸರ್ವಥಾ ಒಪ್ಪುತಿಲ್ಲ ಫ್ರಾನ್ಸದ ಸೇನಾ ನಾಯಕರು ಈಗ ಅಮೇರಿಕೆಗೆ ಹೋಗಿದ್ದು ಅಲ್ಲಿಯ ಅಧ್ಯಕ್ಷರೊಡನೆ ಏನೋ ಸಂಧಾನ ನಡೆಸಿದ್ದಾರೆ ಸ್ಪೇನದ ಸಂಬಂಧದಲ್ಲಿ ತಮ್ಮ ಧೋರಣೆ ಬ್ರಿಟಿಶರ ಧೋರಣೆಗಿಂತ ಬೇರೆಯಾಗಿ ಅಮೇರಿಕೆಯ ವಿದೇಶ ಸಚಿವ ಬಾಯರ್ನ್ಸ್‌ರವರು ಮೊನ್ನೆಯೇ ಹೇಳಿದ್ದಾರೆ ಅತ್ತ ಫ್ರಾನ್ಸಕ್ಕೂ ಬ್ರಿಟನಕ್ಕೂ ತಿಕ್ಕಾಟವುಂಟು ಜಪಾನಿಯರಿಂದ ವಿಮೋಚಿತಗೊಂಡ ಇಂಡೋಚೀನದ ಭವಿಷ್ಯದ ಬಗ್ಗೆ ಫ್ರಾನ್ಸ-ಬ್ರಿಟನಗಳೊಳಗೆ ವಿಭೇದವುಂಟು ಈ ಪ್ರಕಾರ ಈ ವರೆಗೆ ಬ್ರಿಟಿಶರ ಮಿತ್ರರಿದ್ದವರು ಒಬ್ಬೊಬ್ಬರಾಗಿಯೇ ಹಿಂದು ಸರಿಯುತ್ತಿರುವದರಿಂದ ಬ್ರಿಟಿಶರ ಬಲ ಕುಗ್ಗಲಾರಂಭಿಸಿದೆ ಅವರ ಭವಿಷ್ಯ ಅಂಧಕಾರಮಯವುಂಟು ಅದನ್ನು ಎದುರಿಸಬೇಕಾದರೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಐಕಮತ್ಯವಿರಬೇಕಾದುದು ತೀರ ಅವಶ್ಯ ಹಿಂದೀ ಬಿಕ್ಕಟ್ಟು ಹಾಗೆಯೇ ಉಳಿದರೆ ಬ್ರಿಟಿಶರಿಗೆ ಹಿಂದೀಯರ ಸಹಕಾರವನ್ನು ಯಥೇಷ್ಟವಾಗಿ ಪಡೆಯಲು ಶಕ್ಯವಾಗುವಂತಿಲ್ಲ ಆದರಿಂದ ಹಿಂದೀ ಸಮಸ್ಯೆಯನ್ನು ಬಿಡಿಸಿ ೪೦ ಕೋಟಿ ಹಿಂದೀಯರನ್ನು ಸಂತೃಪ್ತಿ ತಮ್ಮ ಪಕ್ಷದಲ್ಲಿಟ್ಟುಕೊಳ್ಳುವದು ಬ್ರಿಟಿಶರಿಗೆ ಅಗತ್ಯವುಂಟು ಆದ್ದರಿಂದಲೇ ಬ್ರಿಟಿಶ ಸರಕಾರವು ಈ ಪ್ರಶ್ನೆಯನ್ನು ಆದರದಿಂದ ಕೈಯಲ್ಲಿ ತಕ್ಕೊಂಡು, ವಿಲ ಸನಿ ನಿಮ್ಯರ್ವಾಗಿ ಸಸ ಕಾರ್ಯಕಾರಿ ಮಂಡಲ ರಚನೆಯನ್ನು ಕಾರ್ಯರೂಪಕ್ಕೆ ತರಲಿಕ್ಕೆ, ಕಾಂಗ್ರೆಸ ಮೇಲಿನ ನಿರ್ಬಂಧಗಳನ್ನು ರದ್ದುಗೊಳಿಸಿದೆ, ಇದೇ ಬರುವ ಡಿಸೆಂಬರ ಜನವರಿ ತಿಂಗಳಲ್ಲಿ ಕೇಂದ್ರ, ಎಸೆಂಬ್ಲಿಯ ಹಾಗೂ ಪ್ರಾಂತಿಕ ಕಾಯದೆ ಮಂಡಳಗಳ ಚುನಾವಣೆ ನಡೆಸಲುದ್ದೇಶ ವಾಗಿದೆ ಮುಂಬಯಿ ಪ್ರಾಂತಾಧಿಕಾರ ಸ– ತಾನೆ ಕೋಟವಿಲ್ಲ ವಂತೂ ತಮ್ಮ ಪ್ರಾಂತದಲ್ಲಿ ಮಂತ್ರಿಮಂಡಳ ರಚಿಸಲು ಬೇಗನೇ ಉತ್ಸುಕರಾಗಿದ್ದಾರೆ ಚುನಾವಣೆಯಾಗುವ ವರೆಗೂ ಹಾದಿ ನೋಡದೆ ತಾವು ಅಧಿಕಾರ ವಹಿಸಿಕೊಳ್ಳಬೇಕೆಂದು ಕ ಪ್ರಾಂತಗಳಲ್ಲಿ [illegible] ಧನೆಯನ್ನು ರಚಿಸುವದಕ್ಕೆ ವಿರುದ್ಧವೆಂಬಲೂ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ಮತವಿದೆ ಶ್ರೀ ಬಾಳಾ ಸಾಹೇಬ ಖೇರರ ಮತವೂ ಹಾಗೆಯೇ ಇರಬೇಕು ಇದರಿಂದ ಇದೇ ಬರುವ ತಾ ೨೧, ೨೨, ೨೩ಕ್ಕೆ ಮುಂಬಯಿಯಲ್ಲಿ ಕೂಡಬಹುದಾದ ಅ॥ ಭಾ॥ ಕಾಂಗ್ರೆಸ ಸಮಿತಿಯಲ್ಲಿ ಅಧಿಕಾರ ಸ್ವೀಕಾರದ ನಿರ್ಣಯವಾಗಬಹುದಾಗಿ ನಾನೆಣಿಸುತ್ತೇನೆ ಅಂತು ಜಾಗತಿಕ ಪರಿಸ್ಥಿತಿಯ ಮೂಲಕ ಹಿಂದೀ ಬಿಕ್ಕಟ್ಟು ಬೇಗನೇ ಬಿಡಿಸುವದು ಬ್ರಿಟಿಶರಿಗೂ ಅಗತ್ಯವಿದೆ, ಅದನ್ನು ಬಿಡಿಸಿಕೊಳ್ಳುವದು ಹಿಂದೀಯರಿಗೂ ಅಷ್ಟೇ ಅಗತ್ಯವುಂಟು

ಸ್ಥಾನಿಕ ವೃತ್ತಾಂತ

(೨ನೇ ಪುಟದಿಂದ ಮುಂದರಿಸಿದ್ದು)

ಸತ್ತವರು, ಹುಚ್ಚರಾಗಿ ಬೇರೆ ಮನೆಗೆ ಹೋದ ಹುಡುಗಿಯರು, ಪರಸ್ಥಳಕ್ಕೆ ಹೋದವರು ಹೀಗೆ ಸೀಧಾ ಪಡೆಯಲು ಅಪಾತ್ರರಿದ್ದವರ ಸೀಧಾ ಒಯ್ದ ಬಗ್ಗೆ ಸೀಧಾ ಅಧಿಕಾರಿಗಳು ಹೂಡಿದ ೫ ಖಟ್ಲೆಗಳ ನ್ಯಾಯವಿಚಾರಣೆಯಾಗಿ ಮೆಜಿಸ್ಟ್ರೇಟರು ಆರೋಪಿಗಳಿಗೆ ೧೫ರಿಂದ ೨೫ ದಂಡ ವಿಧಿಸಿದ್ದಾರೆ ಒಬ್ಬನಿಗೆ ದಂಡದ ಬದಲು ೧ ತಿಂಗಳ ಶಿಕ್ಷೆಯೂ ವಿಧಿಸಲ್ಪಟ್ಟಿದೆ! ಇಂಥಾ ಗುನ್ಹೆಗಳಿಗಿಂತ ಸೀಧಾ ಗುನ್ಹೆಗಳು ಹೆಚ್ಚಿಗೆ ಘೋರವಾದವುಗಳೇ ಎಂದು ಜನರು ಪರಿಹಾಸ್ಯ ಮಾಡುತ್ತಾರೆ!

ಕಳೆದ ವರ್ಷ ಕೆಕ್ಕಾರ ಗ್ರಾಮಸುಧಾರಣಾ ಮಂಡಳವು ಉತ್ತಮ ಗ್ರಾಮಸುಧಾರಣಾ ಕೆಲಸ ಮಾಡಿ ತೋರಿಸಿದ ಬಗ್ಗೆ ಜಿಲ್ಲಾಧಿಪರು ಆ ಗ್ರಾಮಕ್ಕೆ ವಿಂಟಿಯ ಢಾಲು ಕೊಟ್ಟಿದ್ದರೆ ಈ ಗಣನೇಗೆ ಅದನ್ನು ಅಲ್ಲಿಯ ಮಾಮಲೇದಾರರು ಸಮಾರಂಭದಿಂದ ಮಂಡಳಕ್ಕೆ ಅರ್ಪಿಸಿದರು

ಕರ್ಕಿಯಲ್ಲಿ ೫–೬ ವರ್ಷಗಳಿಂದ ಶ್ರೀ ಶಂಕರಾನಂದ ಸಂಸ್ಕೃತ ಪಾಠಶಾಲೆ ಎಂಬ ಶಾಲೆ ನಡೆಯುತ್ತಿದ್ದು, ಅಲ್ಲಿ ವಿದ್ಯಾಲಂಕಾರ ರಾಮಚಂದ್ರ ಶಾಸ್ತ್ರಿ ಹಾಡಿ ಎಂಬ ಚತುರಸ್ತ್ರ ಗಂಡಿತರು ವೇದ, ವೇದಾಂತ, ವೇದಾಂಗಗಳನ್ನೂ ಕರ್ಮಕಾಂಡವನ್ನೂ ಧರ್ಮಾರ್ಥ ಕಲಿಸುತ್ತಿದ್ದಾರೆ ಇಂಗ್ಲಿಷ ಶಾಲೆಯ ವಿದ್ಯಾರ್ಥಿಗಳಿಗೆ ಬೇಕಾದ ಸಂಸ್ಕೃತ ಕಲಿಸುವ ಏರ್ಪಾಟು ಸಹ ಈ ಶಾಲೆಯಲ್ಲಿ ಮಾಡಲ್ಪಟ್ಟಿದೆ

ಭಟಕಳ—(೫೭ ೨೪–೮ ೪೫) ಊರಲ್ಲಿ ವ್ಹೆರಿಯಂಟು

ಹಿಂದುಗಳ ಕೇರಿಯೊಳಗಿನ ಮ್ಯುನಿಸಿಪಲ್ ರಸ್ತೆ ಹಾಳಾಗಿದೆ ಅದರ ದುರುಸ್ತಿ ಮಾಡಿಸುವ ಬುದ್ಧಿ ಹಿಂದು ಸದಸ್ಯರಿಗೆ ಆಗಲೊಲ್ಲದೇ ?

ಇಲ್ಲಿಯ ಕಟುಕರು ಪಧಾಲಿಯಲ್ಲಿ ಸಿಕ್ಕ ಸಿಕ್ಕ ದನಗಳನ್ನು ಕೊಲ್ಲುತ್ತಾರೆಂದು ಪ್ರಮಾದಕೇಳಿ ಬರುತ್ತಿವೆ ನಗರಸಭೆಯವರೂ ಅಧಿಕಾರಿಗಳೂ ಅವರನ್ನು ನಿಯಂತ್ರಿಸಬೇಕು

ಸರಕಾರವಮಾನ್ಯ ಜವಳಿ ಅಂಗಡಿಯಲ್ಲಿ ಬಂದಬಂದ ಜವಳಿ ಯಾರಿಗೆ ಹೋಗುತ್ತದೋ ದೇವರೇ ಬಲ್ಲ ! ಜಿಲ್ಲಾಧಿಪರು ಇನ್ನು ಮುಂದೆ ಸೀಧಾಕ್ರಮವನ್ನು ಜಾರಿಯಲ್ಲಿ ತರುವದೊಳಿತು

Estd 1934

The Agricultural & Industrial Bank, Ltd.

(Incorporated in B tish India Liability of Members limited)

Head Office COONDAPOOR S K

ANNOUNCING

The Opening of three more Branches simultaneously at

BOMBAY,

BHATKAL & HONAVAR (North Kanara Dt)

shortly.

Watch for further announcements for dates of opening

RESOURCES NEARLY HALF A CRORE

COONDAPOOR,
1–8–1945

K VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟೆ — [illegible]

[illegible]

ಜವಾಬ್ದಾರ ನೋಟೀಸು.

ನಮ್ಮ ಪತಿಗಳಾದ ಗಣಪತಿ ವಿಶ್ವೇಶ್ವರ ಭಟ್ಟ [illegible] [illegible]

ಅನಸೂಯಾ [illegible] ಗಣಪತಿಭಟ್ಟ ಶಂಕರಲಿಂಗ

NOTICE

[illegible] of Trade or Producers Asso[illegible] [illegible] in the District is required [illegible] [illegible] the District M[illegible] [illegible] order issued under Defence of India Rules [illegible] to send [illegible] such Asso[illegible] [illegible] the particulars [illegible]

[illegible] thereof [illegible] registered [illegible] the purpose [illegible]

K[illegible] 2[illegible]-5-194[illegible]

R M HEGDE,
for District Magistrate K[illegible]ara

[illegible]

ಹುಕುಮು.

[illegible]

" ೧೦ ಈ ಸಗಟಿ ಮಾರಾಟ [illegible] —

[illegible]

ಮುಂಬಯಿ ಸರಕಾರದ ಗವ್ಹರ್ನರರ ಅಪ್ಪಣೆಯಿಂದ,

A. D. GORWALA,
ಸರಕಾರದ ಸೆಕ್ರೆಟರಿ

[illegible]

(ನಂತರ ಪುಟದಲ್ಲಿ ನೋಡಿ [illegible])

ಪ್ರಕಟನೆ.

ಕಾನಡಾ ಜಿಲ್ಲಾ ಒಕ್ಕಲತನದ [illegible] ದನಗಳ ಪ್ರದರ್ಶನ

[illegible]

V NANJAPPA,
Collector of Kanara &
Chairman Rural Development Board
& District Show Committee

ಕಾನಡಾ ಜಿಲ್ಲಾ [illegible] ಶಿಕ್ಷಕ [illegible]
ಬೆಂಚ, ೧, [illegible] ಅಂಕೋಲಾ.

ನೋಟೀಸು.

[illegible]

(೧) ಶ್ರೀ [illegible] (೨) ಶ್ರೀ [illegible] (೩) ಶ್ರೀ [illegible] (೪) ಶ್ರೀ [illegible]

[illegible]

ಇದನ್ನು [illegible] ಕೃಷ್ಣ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ [illegible] ಮುದ್ರಿಸಿ ಪ್ರಕಟಿಸಿದರು

ವಣಾತ್ಯ ಇತ್ತ ಬರುತ್ತಾರೆ. ಸೀಧಾ, ಸಾಖರ್ ಕೊಡುವಗಳಿಗೆ ಅವರ ಸಹಿ ಬೇಕಾಗುತ್ತದೆ ಅದನ್ನು ಪಡೆಯಬೇಕಾದರೆ ಜನರು ೪ ಮೈಲು ಅಲೆಯುದುವ ಅವರ ಬಿಡಾರಿಗೆ ಹೋಗಬೇಕು! ಅದರಲ್ಲೂ ಒಂದು ತಿರುಗಾಟದಿಂದ ಕೆಲಸವಾಗುವದಿಲ್ಲ ಈ ಗ್ರಾಮಸ್ಥರಿಗೆ ಊರ ಉಸಾಬರಿಗಳು ಬಹಳವಂತೆ ಅದರಿಂದ ಅವರು ಸಿಗಬೇಕಾದರೆ ೨-೩ ಸಾರಿಗೆಗಳನ್ನಾದರೂ ಮಾಡಬೇಕಾಗುತ್ತದೆ ಮೇಲಧಿಕಾರಿಗಳು ಇತ್ತ ಲಕ್ಷಕೊಟ್ಟು ಬೈಲೂರಲ್ಲೇ ಬಿಡಾರ ಮಾಡುವಂತೆ ಅವರಿಗೆ ವಿಧಿಸಬೇಕಾಗಿ ಓರ್ವ ನಾಗರಿಕರು ಬಿನ್ನವಿಸುತ್ತಾರೆ.

ಭಟಕಳ— (ತಾ ೩೦ ೮ ೪೫) ವರ್ಷಾಸನದಂತೆ ಈ ವರ್ಷವೂ ಸಾರ್ವಜನಿಕ ಗಣಪತಿ ಉತ್ಸವ ಮಾಡಲು ರಾ॥ ಅಪ್ಪಣ್ಣ ಶೆಟ್ಟರು ತಯಾರಿ ನಡಿಸಿದ್ದಾರೆ ಧರ್ಮಾಭಿಮಾನಿಗಳು ಅವರಿಗೆ ಶಕ್ತ್ಯಾನುಸಾರ ಸಹಾಯ ಮಾಡಬೇಕು

ಸೀಧಾ ಅಂಗಡಿಗಳಲ್ಲೀಗ ಚಲೋ ಅಕ್ಕಿ ಸಿಗುತ್ತಿದೆ ಅದರ ದರ ಮಾತ್ರ ಹೆಚ್ಚು

ಹಿಂದುಗಳ ವಸತಿಯ ಭಾಗದಲ್ಲಿ ದೀಪಗಳ ವ್ಯವಸ್ಥೆ ಸರಿಯಿಲ್ಲ ನಗರ ಸಭೆಯವರು ಆ ಕಡೆ ಲಕ್ಷ್ಯ ನೋಡಬೇಕಾಗಿ ಅರಿಕೆಯಿದೆ

(ತಾ ೨೪-೮ ೪೫) ಊರಲ್ಲಿ ಸ್ವಸ್ಥಿಯುಂಟು

ಹಿಂದುಗಳ ಕೇರಿಯೊಳಗಿನ ಮ್ಯುನಿಸಿಪಲ್ ರಸ್ತೆ ಹಾಳಾಗಿದೆ ಅದರ ದುರುಸ್ತಿ ಮಾಡಿಸುವ ಬುದ್ಧಿ ಹಿಂದು ಸದಸ್ಯರಿಗೆ ಆಗಲಿಲ್ಲವೇ?

ಇಲ್ಲಿಯ ಕಟುಕರು ವಧಶಾಲೆಯಲ್ಲಿ ಸಿಕ್ಕ ಸಿಕ್ಕ ದನಗಳನ್ನು ಕೊಲ್ಲುತ್ತಾರೆಂದು ಪ್ರವಾದ ಕೇಳಬರುತ್ತದೆ ನಗರ ಸಭೆಯವರೂ ಅಧಿಕಾರಿಗಳೂ ಅವರನ್ನು ನಿಯಂತ್ರಿಸಬೇಕು

ಶಿರಾಲಿ— (ತಾ ೧-೯-೪೫) ಊರಲ್ಲಿ ಸಿಡುಬಿನ ಬೇನೆಯುಂಟು

ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮಂಡಳಿಯಿಂದ ಶ್ರೀಕೃಷ್ಣ ಜಯಂತಿ ಉತ್ಸವವು ವಿಜೃಂಭಣೆಯಿಂದ ಜರುಗಿತು ಉತ್ಸವದ ಕೊನೆಗೆ "ದಾಮಾಜಿ" ಎಂಬ ನಾಟಕದ ಪ್ರಯೋಗವೂ ನಡೆಯಿತು

ಕಳೆದ ಶ್ರಾವಣ ಶುದ್ಧ ೧೧ರಿಗೆ ಹರಂಪಳ್ಳಿ ಕ್ಷೇತ್ರದ ಶ್ರೀ ಹನುಮಂತ ದೇವರ ಗುಡಿಯಲ್ಲಿ ರಾ॥ ವಿಟ್ಠಲ ಮಾಡ ಭಟಕಳ ಇವರು ಅಹೋರಾತ್ರ ಭಜನದ ಉತ್ಸವ ಜರುಗಿಸಿದರು

ಶಿರ್ಸಿ— (೧೬-೮-೪೫) ಜಪಾನರ ಶರಣಾಗತಿಯ ಸಂತೋಷ ಕೇಳಿ ಗುರುವಾರ, ಶುಕ್ರವಾರ ಸರಕಾರಿ ಕಚೇರಿಗಳಿಗೂ ಶಾಲೆಗಳಿಗೂ ರಜವು ಕೊಟ್ಟಿದ್ದರು ಕೋರ್ಟ ಕಚೇರಿಗಳಲ್ಲಿ ತೋರಣಗಳು ಶೃಂಗರಿಸಲ್ಪಟ್ಟವು ಸಂಜೆಯಲ್ಲಿ ದೀಪಮಾಲೆಗಳು ವಿಜೃಂಭಿಸಿದವು ತಾಲೂಕ ಕಚೇರಿಯಲ್ಲಿ ಸಭೆಯಾಗಿ ಮಿತ್ರರ ಅಭಿನಂದನೆ ಮಾಡಲ್ಪಟ್ಟಿತು ಮಿಠಾಯಿಯನ್ನೂ ಹಂಚಿದರು ಗುರುವಾರ ಸಂಜೆ ಚಿತ್ರ ಮಂದಿರದವರು ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿ ಚಿತ್ರ ತೋರಿಸಿದರು ನಿನ್ನೆ ಮುಂಜಾನೆ ಕಚೇರಿಯಲ್ಲಿ ಹನುಮಾನ ವ್ಯಾಯಾಮ ಶಾಲೆಯವರ ಶಕ್ತಿ ಪ್ರಯೋಗಗಳಾದವು

ಕಳೆದ ತಾ. ೧೩ನೇಗೆ ಇಲ್ಲಿಯ ಪೋಲೀಸರು ಕುಮಟೆಯಿಂದ ಬಂದ ಮೋಟಾರ ಒಂದರೊಳಗಿನ ಮೀನಿನ ಟ್ರಂಕುಗಳನ್ನು ಜಪ್ತ ಮಾಡಿದರಂತೆ ಯಾಕೆಂಬುದು ತಿಳಿಯಲಿಲ್ಲ! ಜಪ್ತ ಮಾಡಿದ ಮೀನಿನ ವ್ಯವಸ್ಥೆ ಮುಂದೇನಾಯಿತೆಂಬುದೂ ತಿಳಿಯುವದಿಲ್ಲ!

ಸಿದ್ದಾಪುರ— (ತಾ ೨೨-೮-೪೫) ತಾ. ೧೭ಕ್ಕೆ ಇಲ್ಲಿ ವಿಜಯೋತ್ಸವವಾಯಿತು. ಆ ಬಗ್ಗೆ ಊರಲ್ಲಿ ವರ್ಗಣಿ ಕೂಡಿಸಿದ್ದರಂತೆ ಮೆರವಣಿಗೆ, ಗಾಯನ ಕೂಟ, ವಿದ್ಯಾರ್ಥಿಗಳ ಆಟ ಪಾಟಿಗಳು, ಸಭೆ ಮುಂತಾದ ಕಾರ್ಯಕ್ರಮಗಳು ನಡೆದವು ಸಾಮ್ರಾಜ್ಯವಾದಿಗಳ ಈ ಉತ್ಸವದಲ್ಲಿ ಸೇರಬೇಡಿರೆಂದು ಬೋಧಿಸುವ ಭಿತ್ತಿಪಟಗಳೂ ಅಲ್ಲಲ್ಲಿ ಕಂಗೊಳಿಸುತ್ತಿದ್ದವು

ಕಳೆದ ವಾರ ಅರ್ಬನ ಬೇಂಕಿನವರು ಸರಕಾರದಿಂದ ಜವಳಿ ತಂದು ವ್ಯಾಪಾರ ಮಾಡಿದರು ತಂದ ಬಹುತೇಕ ಜವಳಿ ಬೇಂಕಿನವರ ನೆಂಟರಿಗೇ ಮಾರಿಯಾಗಿದ್ದು ಬಡವರಿಗೆ ವಿಶೇಷ ಸಿಕ್ಕಿಲ್ಲೆಂಬಲೂ ದೂರು ಕೇಳಬರುತ್ತಿದೆ

ತಾಲೂಕಿನ ಪ್ರತಿಯೊಂದು ಹಳ್ಳಿಯಲ್ಲಿ ಯೋಗ್ಯ ಧಾರಣೆಯ ಅಂಗಡಿ ತೆರೆಯುವ ಸಂಕಲ್ಪವುಂಟು ಈಗಾಗಲೇ ಕೆಲವು ಹಳ್ಳಿಗಳಲ್ಲಿ ಅಂಗಡಿಗಳಾಗಿವೆ ಆದರೆ ಸರಕು ಪೂರೈಕೆಯ ಕ್ರಮ ಸಮಾಧಾನಕರವಿಲ್ಲ ವಿಶೇಷವಾಗಿ ಸಕ್ಕರೆಯ ಪೂರೈಕೆ ಅಂಗಡಿಗಳಿಗೆ ಕಳಿಸಿಕೊಟ್ಟ ಸಕ್ಕರೆಯ ಅರ್ಧವಷ್ಟು ಹಾದಿಯಲ್ಲೇ ಬಟವಡೆಯಾಗಿ ಹೋಗುತ್ತದಂತೆ ಇದರ ಕಾರಣ ಸ್ಪಷ್ಟವಿದೆ ಎಲ್ಲಿ ಏನೇನು ಮತ್ತು ಎಷ್ಟಷ್ಟು ಬೇಕು ಎಂಬುದರ ವ್ಯವಹಾರ ವಿಚಾರವಿಲ್ಲದೆ ಅಧಿಕಾರಿಗಳು ಸರಕು ಹಂಚುತ್ತಿರುವದೇ ಬಹಳಷ್ಟು ಕಳ್ಳತನ ಸಾಗಲು ಕಾರಣವಾಗುತ್ತದೆ

ಇತ್ತೀಚೆಗೆ ಇಲ್ಲಿ ಒಂದು ನೂಲುವ ವರ್ಗ ತೆರೆಯಲ್ಪಟ್ಟಿದೆ ಕನ್ನಡ ಶಾಲೆಯ ಬಹಳಷ್ಟು ವಿದ್ಯಾರ್ಥಿಗಳು ಭಕ್ತಿಯಿಂದಲೂ ಉತ್ಸಾಹದಿಂದಲೂ ಅದರಲ್ಲಿ ಸೇರಿದ್ದಾರೆ ಅವರ ಶಿಕ್ಷಕರೇನೋ ಆ ಬಗ್ಗೆ ಅವರನ್ನು ಪೀಡಿಸುತ್ತಾರೆಂದು ಲೋಕವಾರ್ತೆಯುಂಟು ಬೇಗನೇ ಕೊಂಗ್ರೆಸ ಸರಕಾರ ಬರುವದೆಂಬುದನ್ನು ಈ ಶಿಕ್ಷಕರು ನೆನಪಿಡಲಿ

ಅಂಕೋಲಾ— (ತಾ ೨೫ ೮ ೪೫) ಸರಕಾರದವರು ಪ್ರಯೋಗಾರ್ಥ ಮೂರು ವರ್ಷಗಳ ತನಕ ಅಲ್ಲೊಂದು ಮೀನಿನ ವ್ಯವಸಾಯದ ಶಿಕ್ಷಣ ಕೊಡುವ ವರ್ಗ ತೆರೆಯಬೇಕೆಂದು ನಿಶ್ಚಯಿಸಿದ್ದಾರೆ

ಕಾರವಾರ— (ತಾ ೩೦-೮-೪೫) ಇಲ್ಲಿಯ ಮುಖ್ಯ ಪೋಲೀಸ ಕಚೇರಿಯೊಳಗಿನ ಫೌಜದಾರ ರಾ॥ ನಲವಡೆಯವರು ಕಳೆದ ಮಂಗಳವಾರ ಸಂಜೆ ೬ ಘಂಟೆಯ ಸುಮಾರಿಗೆ ಇಲ್ಲಿಯ ಮಸಣದ ಬಳಿಯಲ್ಲಿ ಪಿಸ್ತೂಲಿನಿಂದ ತಲೆಗೆ ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ ಅವರು ಹೀಗೆ ಆತ್ಮಘಾತ ಮಾಡಲು ಕಾರಣವೇನೆಂಬುದು ತಿಳಿಯಲಿಲ್ಲ

ಲೋಕಲ್ ಫಂಡ ತೆರಿಗೆಯನ್ನು ಏರಿಸದಿದ್ದಲ್ಲಿ ಜಿ॥ ಲೋಕಲ್ ಬೋರ್ಡನ್ನು ರದ್ದುಗೊಳಿಸಬೇಕಾದೀತೆಂದು ಕಮಿಶನರ ಸಾಹೇಬರು ಎಚ್ಚರಿಕೆಕೊಟ್ಟಿದ್ದುಂಟು ಸದರಿ ತೆರಿಗೆಯನ್ನು ಬೋರ್ಡ ಏರಿಸಲು ಒಪ್ಪುತ್ತದೋ ಇಲ್ಲವೋ ಎಂಬುದನ್ನು ಬೇಗನೇ ಸರಕಾರಕ್ಕೆ ತಿಳಿಸಬೇಕಂತೆ ಅದರಿಂದ ಈ ಸೂಚನೆಯ ವಿಚಾರ ಮಾಡಲು ಇದೇ ಬರುವ ತಾ ೧೭-೯-೪೫ಕ್ಕೆ ಬೋರ್ಡಿನ ಸಭೆ ಕರೆಯಲಿದ್ದಾರೆಂದು ವಾರ್ತೆಯುಂಟು ಬೋರ್ಡಿನ ಹೊಸ ಅಧ್ಯಕ್ಷ ರಾ॥ ದಕ್ಷನಾಯ್ಕರು ಈ ಬಗ್ಗೆ ಸದಸ್ಯರ ಮನದೊಲವು ತಿಳಿದುಕೊಳ್ಳಲು (?) ಜಿಲ್ಲೆಯಲ್ಲೆಲ್ಲ ಸಂಚಾರಕ್ಕೆ ಹೋಗಿ

(೧ನೇ ಪುಟದ ಮೇಲೆ ಮುಂದರಿದಿದೆ)

ಜಾಹೀರಾತು.

ಮುಂಬಯಿ ಸರಕಾರದವರು ಕಾರವಾರ ಜಿಲ್ಹೆಯಲ್ಲಿ ಒಕ್ಕಲಿಗರ ಋಣ-ವಿಮೋಚನೆ ಕಾಯಿದೆಯನ್ನು ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಿಗೆ ಲಾಗು ಮಾಡಿ ಇವೆರಡೂ ತಾಲೂಕುಗಳ ಬಗ್ಗೆ, ಒಂದು ಸಾಲ ಸರಿಪಡಿಸುವ ಬೋರ್ಡ (Debt Adjustment Board) ನ್ನು ತಾ 1—5—45ಕ್ಕೆ ಹಳಿಯಾಳದಲ್ಲಿ ಸ್ಥಾಪನೆ ಮಾಡಿದ್ದಾರೆ ಈ ಎರಡೂ ತಾಲೂಕಿನ ಸಾಲಗಾರ ಒಕ್ಕಲಿಗರು ತಾರೀಖು ೩೧ ೧೦ ೪೫ರ ಅವಧಿಯೊಳಗಾಗಿ ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ತಮ್ಮ ಸಾಲ ಸರಿಪಡಿಸುವ ಬಗ್ಗೆ ಅರ್ಜಿ ಮಾಡತಕ್ಕದ್ದು ಅರ್ಜಿ ಮಾಡಿಕೊಳ್ಳುವ ಅವಧಿಯು ಆರು ತಿಂಗಳ (ತಾ. ೧-೫-೧೯೪೫ರಿಂದ, ೩೧-೧೦-೪೫ರ ವರೆಗೆ) ಇದ್ದು ಸದರಿ ಅವಧಿಯನ್ನು ಸರಕಾರದವರು ಯಾವದೇ ಕಾರಣದಿಂದ ಹೆಚ್ಚಿಸಲಾರರು ಈ ಸಂಗತಿಯನ್ನು ಒಕ್ಕಲಿಗರು ಚನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದು, ಮತ್ತು ಈ ಸುಸಂಧಿಯನ್ನು ಕಳೆದುಕೊಳ್ಳಬಾರದಾಗಿ ವಿನಂತಿ

ಅರ್ಜಿಯನ್ನು ಸಾಲ ಸರಿಪಡಿಸುವ ಬೋರ್ಡಿನ ಆಫೀಸಿನ ವೇಳೆಯಲ್ಲಿ ಕೊಡಬಹುದು ಅಥವಾ ರಜಿಸ್ಟರ್ಡ ಪೋಸ್ಟಿನಿಂದ ಬೋರ್ಡಿಗೆ ಕಳಿಸಬಹುದು ಅರ್ಜಿಗೆ ಎಂಟು ಆಣೆಯ ಕೋರ್ಟ ಫೀ ಸ್ಟಾಂಪು ಹಚ್ಚಬೇಕು

ಕಾಯಿದೆಯ ಪ್ರಚಾರಕ್ಕಾಗಿ ಅಂದರೆ ಕಾಯಿದೆಯ ಫಾಯದೆಯನ್ನು ರೈತರಿಗೆ ತಿಳಿಹೇಳಲಿಕ್ಕೆ ಮತ್ತು ಅರ್ಜಿಗಳನ್ನು ಅವಧಿಯಲ್ಲಿಯೇ ಮಾಡಲಿಕ್ಕೆ ತಿಳಿಹೇಳುವದಕ್ಕಾಗಿ ಸಹಕಾರೀ ಖಾತೆಯ ಪ್ರಚಾರಕ ಆಫೀಸರ ಸಬ್ ಆಡಿಟರ ಡೆಟ್ ರಿಲೀಫ್, ಕಾರವಾರ ಮತ್ತು ಅಸಿಸ್ಟಂಟ ಡಿಸ್ಟ್ರಿಕ್ಟ ಕೋ ಓಪರೇಟಿವ್ಹ ಆಫೀಸರ ಹಳಿಯಾಳ ಇವರು ಮತ್ತು ಒನರರಿ ಓರ್ಗನೈಝರರು ತಾಲೂಕಿನ ಹಳ್ಳಿಗಳಿಗೆ ಹೋಗಿ ರೈತರ ಸಭೆಗಳನ್ನು ಕರೆದು ಪ್ರಚಾರ ಕಾರ್ಯವನ್ನು ನಡಿಸಿದ್ದಾರೆ ಕೆಲಸದ ಅನುಕೂಲತೆಗಾಗಿ ಕೆಲವು ಕೇಂದ್ರ ಹಳ್ಳಿಗಳನ್ನು ಆರಿಸಿ, ಅವುಗಳಿಗೆ ಸುತ್ತುಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ ಆ ಕೇಂದ್ರ ಹಳ್ಳಿಯನ್ನು ಪ್ರಚಾರಕ್ಕಾಗಿ ಕೇಂದ್ರವಂತ ಗೊತ್ತುಮಾಡಿದ್ದಾರೆ ಈ ಕೇಂದ್ರವಲ್ಲಿಯ ಹಳ್ಳಿಗಳನ್ನು ಬಿಟ್ಟು ಉಳಿದ ಹಳ್ಳಿಗಳಿಗೆ ಅವರು ಪ್ರತ್ಯೇಕವಾಗಿ ಹೋಗುವರು ಇದಲ್ಲದೆ ತಾಲೂಕಿನ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ಆಗಾಗ್ಗೆ ರೈತರ ಸಭೆಗಳನ್ನು ಕರೆದು ಋಣ ವಿಮೋಚನೆಯ ಕಾಯಿದೆಯ ಪ್ರಚಾರವನ್ನು ಮಾಡಲಿಕ್ಕೆ ಮತ್ತು ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ಅರ್ಜಿಗಳನ್ನು ಮಾಡಲಿಕ್ಕೆ ಸಾಲಗಾರ ಒಕ್ಕಲಿಗರಿಗೆ ತಿಳಿಹೇಳಲಿಕ್ಕೆ ಮೆ॥ ಕಲೆಕ್ಟರ ವ ಮೆ॥ ಮಾಮಲೇದಾರ ಸಾಹೇಬರ ಮುಖಾಂತರ ಸರ್ಕ್ಯುಲರ ಮೂಲಕ ತಿಳಿಸಿದ್ದಾರೆ ಇವರ ಉದ್ದೇಶ ಗ್ರಾಮಸ್ಥರ ಮತ್ತು ತಲಾಟಿಯವರ ಕಡೆಗೆ ಸಹಕಾರಿ ಸಂಘದ ಖಾತೆಯಿಂದ ಹೊರಡಿಸಿದ ಹಸ್ತಪತ್ರಿಕೆ ಮುಂತಾದವುಗಳನ್ನು ಅವರ ಮಾಹಿತಿಗಾಗಿ ಪೂರೈಸಿಕೊಟ್ಟಿದ್ದಾರೆ ವಿಶೇಷ ಮಾಹಿತಿ ಬೇಕಾದಲ್ಲಿ ಒಕ್ಕಲಿಗರು ಆ ಹಸ್ತಪತ್ರಿಕೆ ಮುಂತಾದವುಗಳನ್ನು ಓದಿಕೊಳ್ಳತಕ್ಕದ್ದು ಅರ್ಜಿ ನಮೂನೆಯನ್ನು ತುಂಬಲಿಕ್ಕೆ ಏನಾದರೂ ಅಡಚಣಿ ಬಂದಲ್ಲಿ ಅರ್ಜಿದಾರರಿಗೆ ಸಹಾಯ ಮಾಡಲಿಕ್ಕೆ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ತಿಳಿಸಿದ್ದಾರೆ

ಆದ್ದರಿಂದ ಹಳಿಯಾಳ ಮತ್ತು ಯಲ್ಲಾಪೂರ ತಾಲೂಕಿನ ಒಕ್ಕಲಿಗರು ಆಯಾ ಕೇಂದ್ರಸ್ಥಾನ ಮತ್ತು ಹಳ್ಳಿಗಳಲ್ಲಿ ಕರೆಯುವ ಸಭೆಗಳಿಗೆ ಹಾಜರಾಗಿ ಕಾಯಿದೆಯ ಫಾಯದೆಗಳನ್ನು ತಿಳಕೊಂಡು ಸಾಲ ಸರಿಪಡಿಸುವ ಬೋರ್ಡ (Debt Adjustment Board) ಗೆ ಅವಧಿಯೊಳಗಾಗಿ (ತಾ ೩೧ ೧೦ ೪೫) ಅರ್ಜಿ ಮಾಡಿಕೊಳ್ಳತಕ್ಕದ್ದು ಈ ಸುಸಂಧಿಯ ಫಾಯದೆಯನ್ನು ಪೂರ್ಣ ಪಡಕೊಂಡು ಒಕ್ಕಲಿಗರು ಋಣಮುಕ್ತರಾಗಬೇಕೆಂದು ವಿನಂತಿ ತಿಳಿಯುವದು

ಹಳಿಯಾಳ ತಾಲೂಕಿನ ಕೇಂದ್ರ ಸ್ಥಾನಗಳು

(೧) ಹಳಿಯಾಳ (೨) ಸಾಂಬ್ರಾಣಿ (೩) ದಾಂಡೇಲಿ (೪) ತೇರಗಾಂವ (೫) ಮದನಳ್ಳಿ (೬) ಮಂಗಳವಾಡ (೭) ಎಡೋಗಾ (೮) ಮುರ್ಕವಾಡ (೯) ನಂದಿಗದ್ದೆ (೧೦) ಹೊಸೂರ (೧೧) ಬುಝೂರಕಂಚನಳ್ಳಿ ಮತ್ತು (೧೨) ಬೊಮ್ಮನಳ್ಳಿ

ಯಲ್ಲಾಪೂರ ತಾಲೂಕಿನ ಕೇಂದ್ರ ಸ್ಥಾನಗಳು

(೧) ಯಲ್ಲಾಪೂರ (೨) ಇಡಗುಂದಿ (೩) ಅರಬೈಲ (೪) ವಜ್ರಳ್ಳಿ (೫) ಮಾವಿನಮನೆ (೬) ದೇಹಳ್ಳಿ (೭) ಮಂಚಿಕೇರಿ (೮) ಹಿತ್ಲಳ್ಳಿ (೯) ಭರ್ತನಳ್ಳಿ (೧೦) ನಂದೊಳ್ಳಿ ಮತ್ತು (೧೧) ಕಿರವತ್ತಿ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮೇಲೆ ಹೇಳಿದ ಪ್ರಚಾರಕ ಆಫೀಸರರ ಕಡೆಯಿಂದ ತಿಳಿದುಕೊಳ್ಳತಕ್ಕದ್ದು

ಈ ಮೊದಲೇ ಕೆಲವು ಕೇಂದ್ರ ಸ್ಥಳಗಳಲ್ಲಿ ರೈತರ ಸಭೆಗಳನ್ನು ಕರೆದು ಕಾಯಿದೆಯ ಫಾಯದೆಗಳನ್ನು ತಿಳಿಸಿಹೇಳಿದ್ದಾಗಿದೆ

ಹಳಿಯಾಳ ತಾಲೂಕ

(೧) ಹಳಿಯಾಳ (೨) ತೇರಗಾಂವ (೩) ಸಾಂಬ್ರಾಣಿ (೪) ಮಂಗಳವಾಡ (೫) ದಾಂಡೇಲಿ (೬) ಮದನಳ್ಳಿ

ಯಲ್ಲಾಪೂರ ತಾಲೂಕ

(೧) ಯಲ್ಲಾಪುರ (೨) ಮಂಚಿಕೇರಿ (೩) ಇಡಗುಂದಿ (೪) ಕಿರವತ್ತಿ ಮತ್ತು (೫) ನಂದೊಳ್ಳಿ

S B. GODHI,
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ಸದರ್ನ ಡಿವ್ಹಿಜನ್ ಬೆಳಗಾಂವ

ಬೆಳಗಾಂವಿ
ತಾ ೨೨—೮—೪೫

ಇದನ್ನು ಪಾಂಡುರಂಗ ಕೃಷ್ಣ ಕಾಸಭಾರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್'ನಲ್ಲಿ ಮುದ್ರಿಸಿ ಪ್ರಕಟಿಸಿದರು

[illegible] ಪ್ರಕಟಿತ ಸಂಗತಿಗಳ ಕಡೆಗೆ ಲಕ್ಷ ಕೊಟ್ಟು ನೇಮಣೂಕಿ ಪತ್ರ [illegible] ತೆ ಯಾರಿಗ [illegible] ಹಿತಗಳ ಬಗ್ಗೆ ಇರುವ ಸ್ಥಳಗಳಿಗೆ ಮತ್ತು [illegible] ಮ್ಯುನಿಸಿಪಾಲಿಟಿಯವರು ಚುನಾಯಿಸಿ ಕೊಡುವ ಸ್ಥಳದ ಬಗ್ಗೆ [illegible] ಎಜ್ಯುಕೇಶನ್ ಆಕ್ಟ ಕಲಂ 3 (4)ರ ಕೆಳಗಿನ ಸ್ಪಷ್ಟೀಕರಣ [illegible] ಪ್ರೈಮರಿ ಎಜ್ಯುಕೇಶನ್ ರೂಲ 17 (2) ವ 17 (3)ರ ಕಡೆಗೆ ಲಕ್ಷ ಕೊಟ್ಟು ನೇಮಣೂಕಿ ಪತ್ರಗಳನ್ನು ಕೊಡಬೇಕು

೬ ನೇಮಣೂಕಿ ಪತ್ರದ ಫಾರ್ಮ ಯಾ ನಮೂನೆಯು ವೈಸ ಪ್ರೆಸಿಡೆಂಟ ಸಾ॥ ಡಿ. ಲೋ. ಬೋರ್ಡ ಕೆನರಾ ಇವರ ಕಚೇರಿಯಲ್ಲಿ (ಕಾರವಾರದಲ್ಲಿ) ಸಿಗುವದು

೭ ಸ್ಕೂಲ ಬೋರ್ಡಿನ ಮೆಂಬರರಾಗಿ ಆರಿಸಲ್ಪಡಬೇಕೆಂದು ಇಚ್ಛಿಸುವ ಉಮೇದವಾರರು (ಮ್ಯುನಿಸಿಪಾಲಿಟಿಯಿಂದ [illegible] ನಿಲ್ಲುವ ಉಮೇದವಾರರ ಹೊರತು) ಕೊಡತಕ್ಕ ನೇಮಣೂಕಿ ಪತ್ರದಲ್ಲಿ ಲೋಕಲ್ ಬೋರ್ಡಿನ ಒಬ್ಬ ಮೆಂಬರನಿಂದ ಸೂಚಿಸಲ್ಪಡಬೇಕು, ಮತ್ತು ಇನ್ನೊಬ್ಬ ಮೆಂಬರನಿಂದ ಅನುಮೋದಿಸಲ್ಪಡಬೇಕು. ಹೀಗೆ ಸೂಚಿಸುವ ಮತ್ತು ಅನುಮೋದಿಸುವ ಮೆಂಬರರು ಸದರ ನೇಮಣೂಕಿ ಪತ್ರ ಕೊಡುವ ಕಾಲಕ್ಕೆ ಹಾಜರ ಇರತಕ್ಕದ್ದು. ನೇಮಣೂಕಿ ಪತ್ರಗಳನ್ನು ಕೊಡುವದು ಮ್ಯುನಿಸಿಪಾಲಿಟಿಗಳ ಕಡೆಯಿಂದ ನಿಲ್ಲುವ ಉಮೇದವಾರರಿಗೂ ಲಾಗು ಇರುತ್ತದೆ. ಅಂಥ ಉಮೇದವಾರರ ಹೆಸರು ಸೂಚಿಸುವ ಯಾ ಅನುಮೋದಿಸುವ ಮೆಂಬರರು ನಾನ್ ಲೋಕಲ್ ಬೋರ್ಡ ಮ್ಯುನಿಸಿ[illegible] ಯಾವದಾದರೂ ಮ್ಯುನಿಸಿಪಾಲಿಟಿಯ ಮೆಂಬರರಾಗಿರಬೇಕು, ಮತ್ತು ಅವರು ನೇಮಣೂಕಿ ಪತ್ರ ಕೊಡುವ ಕಾಲಕ್ಕೆ ಹಾಜರ ಇರಬೇಕು. ಉಮೇದವಾರರು ತಮ್ಮ ನೇಮಣೂಕಿ ಪತ್ರ ಸ್ವತಃ ಯಾ ತಮ್ಮ ಸೂಚಕ ಮತ್ತು ಅನುಮೋದಕರ ಕಡೆಯಿಂದ ರಿಟರ್ನಿಂಗ ಆಫೀಸರರ ಕಡೆಗೆ ಕೊಡತಕ್ಕದ್ದು. ಉಮೇದವಾರರಿಗೆ ಮೆಂಬರರಾಗಲಿಕ್ಕೆ ಯೋಗ್ಯತೆ ಪ್ರಾಥಮಿಕ ಶಿಕ್ಷಣ ಕಾಯಿದೆ [illegible] ಪ್ರಕಾರ ಇದೆ ಬಗ್ಗೆ ಪ್ರಮಾಣ ಕೊಡಬೇಕಾಗಿ ರಿಟರ್ನಿಂಗ ಆಫೀಸರರಿಗೆ ಅವಶ್ಯ ಕಂಡಲ್ಲಿ [illegible] ಪ್ರಮಾಣವನ್ನು ನೇಮಣೂಕಿ ಪತ್ರಗಳ ತಪಾಸಣೆ ಕಾಲಕ್ಕೆ ಕೊಡಬೇಕಾಗುವದು.

೮ [illegible] ತಾಲೂಕಿನ ಮಾಮಲೇದಾರರು [illegible] ರಿಟರ್ನಿಂಗ ಆಫೀಸರರಾಗುವರು

ಕಾರವಾರ } N. P. Pai, C. O., D. L. B., Kanara. D. S. NAIK, President, D. L. B., Kanara.
ತಾ 21-8-1945 }

ಜಾಹೀರಾತು.

ಈ ಜಾಹೀರಾತ ಮೂಲಕ ತಿಳಿಸುವದೇನಂದರೆ .—

[illegible] ಸಾಲ ಸರಿಪಡಿಸುವ (ಡೆಟ್ ಎಜಸ್ಟಮೆಂಟ) ಬೋರ್ಡಿಗೆ ಸಾಲ [illegible] ಒಪ್ಪಿಸಿಕೊಡುವದರ ಬಗ್ಗೆ ಆಯಾ ಸಾಲ ಸರಿಪಡಿಸುವ ಬೋರ್ಡಿಗೆ [illegible] ಬರೆಯುವವರನ್ನು (ಪಿಟಿಶನ್ ರೈಟರ) ನೇಮಿಸಲಿಕ್ಕೆ ಆಯಾ ಬೋರ್ಡಿನ ಚೇರಮನ್ನರ [illegible] ಅಧಿಕಾರವನ್ನು ಕೊಟ್ಟಿದ್ದಾರೆ. [illegible] ಬರೆಯುವವರ ಸ್ಥಳಕ್ಕೆ ಅರ್ಜಿ ಮಾಡಿಕೊಳ್ಳುವವರು [illegible] ಸಾಲ ಸರಿಪಡಿಸುವ ಬೋರ್ಡಿನ (Debt Adjustment Board) ಚೇರಮನ್ನರ [illegible] ಅರ್ಜಿ ಮಾಡಿಕೊಳ್ಳತಕ್ಕದ್ದು. ಸಾಲಗಾರ ಒಕ್ಕಲಿಗರ ಕಾಯಿದ ಕಲಮು [illegible] ರನ್ವಯ ಮಾ[illegible] ಅರ್ಜಿಗಳನ್ನು [illegible] ಬರಿಲಿಕ್ಕೆ ಒಂದವಿದ್ದ ಸಂಗತಿಗಳಲ್ಲಿ, ಅರ್ಜಿ ಬರೆಯುವ ವರಿಂದ (Petition writers) ತುಂಬಿಸಿಕೊಳ್ಳತಕ್ಕದ್ದು ತಿಳಿಯುವದು.

ಸಾಲ ಸರಿಪಡಿಸುವ ಬೋರ್ಡ. (Debt Adjustment Board)	ಸಾಲ ಸರಿಪಡಿಸುವ ಆಫೀಸಿನ ಸ್ಥಳ.
ಕಾರವಾರ ಜಿಲ್ಹಾ	
– ಹಳಿಯಾಳ ತಾಲೂಕ – ಯಲ್ಲಾಪೂರ	ಹಳಿಯಾಳ
ವಿಜಾಪುರ ಜಿಲ್ಹಾ	
– ವಿಜಾಪೂರ ತಾಲೂಕ ಬೀಳಗಿ ಪೇಟಾ	ವಿಜಾಪೂರ.
– ಮುದ್ದೇಬಿಹಾಳ ತಾಲೂಕ ಬಾಗೇವಾಡಿ ತಾಲೂಕ	ಮುದ್ದೇಬಿಹಾಳ

ಬೆಳಗಾಂವ, } S. B. Godhi.
[illegible] } ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ದಕ್ಷಿಣ ಭಾಗ, ಬೆಳಗಾಂವ

ಸನ್ 1945ನೇ ಇಸವಿಯ ಅಗಸ್ಟ ತಿಂಗಳ ಬಾಬ್ತು
ತಾ. 31-8-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು.

ಪ್ರೊವ್ಹಿನ್ಶಿಯಲ್ ಟೆಕ್ಸ್‌ಟೈಲ ಕಂಟ್ರೋಲರ, ಕಾಳಾಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller opposite to Kalachowki Post Office Parel Road, Bombay) ಇವರಿಗೆ ನೂಲಿನ ಮಾರಾಟದ ಲಾಯಸನ್ಸದಾರರಿಂದ ಮೇಲೆ [illegible] ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ, ತಾ 5—9—1945 ನೇದರೊಳಗಾಗಿ ತಪ್ಪದೆ ಮುಟ್ಟತಕ್ಕದ್ದಿರುತ್ತದೆ ಮೇಲ್ಕಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ ನಪಾರ ಮಾಹಿತಿಯನ್ನು ರವಾನಿಸತಕ್ಕದ್ದು. ಕಾರಣ ನೂಲಿನ ಮಾರಾಟದ ಯಾವತ್ತೂ ಲಾಯಸನ್ಸದಾರರು ಸದರ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೆ ಮುಟ್ಟುವಂತೆ ರವಾನಿಸಬೇಕು.

Bombay } J. K. THAKORE.
31-8-1945 } Provincial Textile Controller Bombay

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೫ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು.

ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ.

ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತದೆ !

ಚಿನ್ನ-ಬೆಳ್ಳಿ ದಾಗಿನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ!
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ. ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು.
ರೂ ೧೦ ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಹಾ ಸಣ್ಣ ಠೇವುಗಳ ಪ್ರಚಾರ-ಸಮಿತಿಯ ಪ್ರಕಟನೆ]

ಸ್ಥಾನಿಕ ವೃತ್ತಾಂತ.

(೨ನೇ ಪುಟದ ೧ನೇ ಕಾಲಮಿನಿಂದ ಮುಂದರಿಸಿದ್ದು.)

ಹಳದೀಪುರದೊಳಗಿನ ಯೋಗ್ಯ ದರದ ಅಂಗಡಿಯನ್ನು ಇನ್ನೂ ಊರವರ ಸಂಘಕ್ಕೆ ಒಪ್ಪಿಸಿರುವದಿಲ್ಲ! ಹಿಂದಿನ ಅಂಗಡಿಯವರ ಅನಿಯಂತ್ರಿತ ಕಾರಭಾರ ಹಾಗೆಯೇ ಮುಂದೆ ಸಾಗಿದೆ! ಪ್ರಾಂತ ಸಾಹೇಬರು ಕಳೆದ ಸೋಮವಾರ ತಾ. ೨೭ಕ್ಕೆ ಹಳದೀಪುರಕ್ಕೆ ಹೋಗಿದ್ದರು. ಅವರಾದರೂ ಅಲ್ಲಿಯ ಪರಿಸ್ಥಿತಿಯನ್ನೂ ಹಿಂದಣ ಅಂಗಡಿಯವರ ಕುಹಕ-ಕುತಂತ್ರ-ಕಾರಸ್ಥಾನಗಳನ್ನೂ ಪರಾಂಬರಿಸಿ ಊರವರ ಸಂಘಕ್ಕೆ ಅಂಗಡಿಯನ್ನು ಒಪ್ಪಿಸುವರೆಂದು ಕೆಲವರ ನಂಬಿಕೆಯಿತ್ತು. ಆದರೆ ಪ್ರಾಂತ ಸಾಹೇಬರು ಮಾಮಲೇದಾರರ ಮಾತು ಮೀರಿ ನಡೆಯಲು ಧೈರ್ಯಪಡಲಿಲ್ಲ! ಜಿಲ್ಹಾಧಿಕಾರಿ ಅಪ್ಪಣೆಯಂತೆ ಮಾಮಲೇದಾರರು ನಡೆಯದಿರುವ ಕಾರಣವೇನು? ಊರವರ ಸಂಘಕ್ಕೆ ಊರಲ್ಲಿ ಬೆಂಬಲ ಮತ್ತು ಮನ್ನಣೆ ಎಷ್ಟುಂಟು? ಈಗಿದ್ದ ಅಂಗಡಿಯವರ ವಿರುದ್ಧ ಜನರು ದೂರುತ್ತಿರುವದೇಕೆ? ಎಂಬ ಯಾವ ಸಂಗತಿಗಳನ್ನೂ ಪ್ರಾಂತ ಸಾಹೇಬರು ತಿಳಕೊಳ್ಳುವ ಯತ್ನ ಮಾಡಿದ್ದು ಕಂಡುಬರಲಿಲ್ಲ! ಗ್ರಾಮ-ಪಂಚಾಯತಿನವರೂ ಸಹಕಾರಿ ಸಂಘದವರೂ ಸದರಿ ಅಂಗಡಿಯನ್ನು ಊರವರ ಸಂಘಕ್ಕೇ ಒಪ್ಪಿಸಿರಿ, ಅಂಗಡಿ ನಡಿಸಲು ತಮಗಿಂತ ಆ ಸಂಘದವರೇ ಅರ್ಹರು ಎಂದು ಹೇಳುತ್ತಿರುವದರ ಮರ್ಮವನ್ನು ಸಾಹೇಬರು ಆಲೋಚಿಸಬೇಕಿತ್ತು! ಆದರೆ ಹಾಗೇನೂ ಮಾಡದೆ ಈಗ ಅಂಗಡಿ ನಡಿಸುತ್ತಿರುವ ಕೆಲವರ ಜೊತೆಗಿ ಅವರೊಡನೆ ಸಹಕರಿಸಬಲ್ಲ ಬೇರೆ ಕೆಲವರನ್ನು ಸೇರಿಸಿ ಹೊಸ ಸಂಸ್ಥೆಯೊಂದನ್ನು ನಿರ್ಮಿಸಿದ್ದಾರೆ! ಪಟೇಲ ರಾ॥ ಚನ್ನಪ್ಪ ನಾಯ್ಕರು ಈ ಸಂಘದ ಚೇರಮನ್ನರಂತೆ! ಬೇರೆ ಬೇರೆ ಜಾತಿಯವರನ್ನು ಸೇರಿಸಿ ಅದಕ್ಕೊಂದು ಪ್ರಾತಿನಿಧಿಕ ಸ್ವರೂಪದ ಬಣ್ಣ ಕೊಡುವ ಪ್ರಯತ್ನ ಮಾಡಲಾಗಿದೆ! ಆದರೆ ಊರಲ್ಲಿ ಮನ್ನಣೆಯುಳ್ಳವರಾರೂ ಈ ಸಂಘದಲ್ಲಿ ಸೇರಲು ಒಪ್ಪಲಿಲ್ಲ. ಸಂಘ ಸ್ಥಾಪನೆಯ ಕಾಲಕ್ಕೆ ಅಲ್ಲಿದ್ದ ಶಿವು ಗೌಡನೆಂಬವನಿಗೆ ಸಂಘದ ಮೆಂಬರನಾಗಲು ಕೇಳಿಕೊಂಡಿದ್ದರಂತೆ. ಅವನು 'ತಾನಾಗಲಾರೆ' ಎಂದು ತಟ್ಟನೆ ನಿರಾಕರಿಸಿದನಂತೆ! ಇದರ ಮೇಲಿಂದಾದರೂ ಪ್ರಾಂತ ಸಾಹೇಬರು ಬೆಳಕು ಕಾಣಬಹುದಿತ್ತು. ಹಿಂದಿನ ಅಂಗಡಿಯವರಿಗೆ ಆದ ಲಾಭದಲ್ಲಿ ರೂ ೨೫೦ ಬಡವರಿಗೆ ಧರ್ಮ ಮಾಡಲು ವಿನಿಯೋಗಿಸಲ್ಪಟ್ಟಿದೆ ಎಂಬ ಮಾತು ಕೇಳಿ ಜನರು ದಿಗಿಲುಗೊಂಡಿದ್ದಾರೆ! ಏಕೆಂದರೆ ಹಳದೀಪುರ ಊರಲ್ಲಿ ಎಲ್ಲೂ ಯಾರಿಗೂ ಧರ್ಮ ಮಾಡಿದ್ದು ಆ ಊರವರಾರೂ ನೋಡಿಲ್ಲವಂತೆ. ಅಧಿಕಾರಿಗಳ ಸಂಬಳವೇ ಇದೊಂದೇ ಅಂಗಡಿಯವರು ಮಾಡಿದ ಧರ್ಮವೆಂದು ಬಲ್ಲವರು ಹೇಳುತ್ತಾರೆ.

ಇಲ್ಲಿಯ ಫೌಜದಾರ ರಾ॥ ಪರಮೇಶ್ವರರು ಕಳೆದ ರವಿವಾರ ಕಾಸರಕೋಡದಲ್ಲಿ ಒಂದು ಮನೆಗೆ ಆಕಸ್ಮಾತ್ ಮುತ್ತಿಗೆ ಹಾಕಿ ಒಂದು ದೊಡ್ಡ ಜೂಗಾರ ಮಂಡ ಹಿಡಿದಿದ್ದಾರೆ. ೯ ಮಂದಿ ಊರ ಪ್ರಮುಖರು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವರಂತೆ

ನವಿಲಗೋಣ ಸೀಮೆಯ ಸೀಧಾ ಅಂಗಡಿಯನ್ನು ನವಿಲಗೋಣ ಗ್ರಾಮಪಂಚಾಯತಿನವರು ನಡಿಸುತ್ತಾರೆ ಅಂಗಡಿಯಲ್ಲಿ ಹೇರಳ ಲಾಭವುಳ್ಳದ್ದಿರಬೇಕು ಆದರೆ ಪಂಚಾಯತಿಯ ವಾರ್ಷಿಕ ಜಮಾ-ಖರ್ಚಿನ ಪತ್ರಿಕೆಯಲ್ಲಿ ಅಂಗಡಿಯ ಲಾಭಾಂಶವೇನೂ ಕಂಡು ಬರುವದಿಲ್ಲವಂತೆ! ಅದನ್ನು ಪಂಚಾಯತಿನವರು ತಮ್ಮೊಳಗೇ ಹಂಚಿಕೊಂಡರೋ ಏನೋ ಎಂದು ಜನರು ಗುಣುಗುಣಿಸುತ್ತಿದ್ದಾರೆ. ಕಳೆದ ತಿಂಗಳಿಂದ ಚಿಮಣಿಎಣ್ಣೆಯನ್ನು ರೇಶನ್ ಧಾರಿಗಳ ಮನೆಯ ಜನಸಂಖ್ಯೆಯ ಪ್ರಮಾಣದಿಂದ ಹಂಚಿಹಾಕುತ್ತೇವೆಂದು ಅಂಗಡಿಯವರು ಹೇಳಿ, ಕೆಲವರ ಎಣ್ಣೆಯ ಸೀಘೆಯನ್ನು ಹೆಚ್ಚಿಸಿದ್ದಾರೆ, ಕೆಲವರ ಎಣ್ಣೆಯನ್ನು ಕಡಿಮೆ ಮಾಡಿದ್ದಾರೆ ಆದರೆ ಎಣ್ಣೆ ಹೆಚ್ಚಿಸಿದವರಿಗೆ ಹಿಂದಿನಷ್ಟೇ ಎಣ್ಣೆ ಕೊಡುತ್ತಾರಂತೆ! ಈ ಅಂಗಡಿಯಲ್ಲಿ ಗೋದಿ, ಅಕ್ಕಿ, ಬೇಳೆ ವಗೈರೆ ಮಾರುವ ವ್ಯವಸ್ಥೆಯಲ್ಲಿ ಈ ಸಡಿಲು ಕಂಡು ಬರುತ್ತಿದೆ. ಇದರ ಬಗ್ಗೆ ಜನರು ಅಸಮಾಧಾನ ವ್ಯಕ್ತ ಮಾಡಿಕೊಳ್ಳಲೆಂದು ಅಂಗಡಿಯವರು ರೇಶನ್ ಧಾರಿಗಳ ಕಡೆಯಿಂದ ಲೆ-ಲೆ ಆಣೆಯಂತೆ ಹಣ ಎತ್ತುವಳಿ ಮಾಡಿದ್ದರಂತೆ. ಆ ಹಣ ಎಲ್ಲಿ ಹೋಯಿತೆಂದು ಜನರು ಕೇಳುತ್ತಾರೆ

ಹೊಸಪಟ್ಟಣ ಗ್ರಾಮದ ಪಟೇಲರೂ ಶಾನಭೋಗರೂ ಕೂಡಿ ಕಳೆದ ಜೂನ ತಿಂಗಳಲ್ಲಿ ಅಲ್ಲಿಯ ಮಂಜುಗೌಡ ಎಂಬ ರೈತನ ಮನೆಯಲ್ಲಿ ಅಕ್ಕಿ-ಜಪ್ತಿಯ ನಾಟಕ ಮಾಡಿ ಆ ಬಡ ಒಕ್ಕಲಿಗನಿಂದ ೧೦೦ ರೂ ಲಂಚ ಸುಲಿದುಕೊಂಡರೆಂಬ ಪ್ರಕರಣವೊಂದು ಈಗ ಬಯಲಿಗೆ ಬಂದಿದೆ. ಪ್ರಾಂತ ಸಾಹೇಬರು ಸದರಿ ಪಟೇಲರಿಗೆ ಈಗ ಸಸ್ಪೆಂಡ ಮಾಡಿಟ್ಟಿದ್ದಾರೆ. ಈ ತಾಲೂಕಿನಲ್ಲಿ ಇಂಥ ಅನೇಕ ಪ್ರಕರಣಗಳು ಇನ್ನೂ ಬಯಲಿಗೆ ಬರಲಿವೆಯಂತೆ.

ಬೈಲೂರ— (ತಾ ೧೪-೮-೪೫) ಇಲ್ಲಿಯ ಈಗಿನ ಶಾನಭೋಗರು ಮುರ್ಡೇಶ್ವರದವರು ಅವರು ತಮ್ಮ ಬಿಡಾರ ತಮ್ಮ ಊರಲ್ಲೇ ಇಟ್ಟಿದ್ದಾರೆ. ತಿಂಗಳಿಗೆ ೧-೨ ಸಲ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಗುರುವಾರದಿಂದ ಪುಬ್ಬಾ ನಕ್ಷತ್ರಪ್ರಾರಂಭವಾಗಿದೆ ಆದರೆ ಮಳೆ ತೀರ ಕಡಿಮೆ. ಈ ನಾಲ್ಕು ದಿನಗಳಲ್ಲಿ ಅರ್ಧ ಇಂಚು ಸಹ ಮಳೆಯಾಗಿಲ್ಲ ಮಕ್ಕಿಗದ್ದೆಗಳು ದೀನಮುದ್ರೆಯಿಂದ ಆಕಾಶವನ್ನು ನೋಡುತ್ತಿವೆ.

ದೇಶಗೌರವ ಸುಭಾಷಚಂದ್ರ ಬೋಸರು ಜಪಾನದಲ್ಲಿ ವಿಮಾನ ಅಪಘಾತದಿಂದ ಕಳೆದ ತಾ ೧೯ನೇಗೆ ದಿವಂಗತರಾದರೆಂಬ ಸುದ್ದಿಯನ್ನು ಜಪಾನಿ ಆಕಾಶವಾಣಿಯು ಸಾರಿದೆ ಆ ಸುದ್ದಿ ನಿಜವಿರಬೇಕೆಂದು ನಂಬಿ ದೇಶದೊಳಗಿನ ಅನೇಕ ಊರುಗಳಲ್ಲಿ ಹರತಾಳಗಳಾಗಿವೆ; ಪಂ॥ ಜವಾಹಿರಲಾಲ, ಗಡಿನಾಡ ಗಾಂಧಿ ವಗೈರೆ ಪ್ರಮುಖರು ದುಃಖೋದ್ಗಾರಗಳನ್ನು ತೆಗೆದಿದ್ದಾರೆ, ದೇಶದೊಳಗಿನ ಬಹುತೇಕ ವೃತ್ತಪತ್ರಿಕೆಗಳು ಮೃತ್ಯುಲೇಖಗಳನ್ನೂ ಬರೆದಿವೆ ಅದರಂತೆ ಇಲ್ಲಿಯ ವ್ಯಾಪಾರಿಗಳು ಕಳೆದ ಮಂಗಳವಾರ ದಿವಂಗತರ ನಿಧನದ ಪ್ರೀತ್ಯರ್ಥ ಊರಿನ್ನೆಲ್ಲ ಹರತಾಳವನ್ನು ಆಚರಿಸಿದ್ದರು

ಮೂರೂರಲ್ಲಿ ಹುಲಿ-ಹಂದಿಗಳ ಕಾಟವು ಬಹಳವಾಗಿದೆ ಹುಲಿಯು ಇತ್ತೀಚಿಗೆ ೪೦-೫೦ ದನಗಳನ್ನು ಮುರಿದು ಹಾಕಿದೆ ಕಾಡು-ಹಂದಿಗಳು ಊರೊಳಗಿನ ೧೦ ೧೨ ಕದ್ದಿನ ಹಿತ್ತಲುಗಳನ್ನು ಹಾಳು ಮಾಡಿ ರೈತರಿಗೆ ಏನಿಲ್ಲೆಂದರೂ ರೂ. ೫೦೦೦ದಷ್ಟು ಹಾನಿಯನ್ನು ಮಾಡಿವೆ ಊರಲ್ಲಿ ಕೋವಿ-ಪರವಾನಿಗೆಯಿದ್ದವರು ಇದ್ದಾರೆ. ಆದರೆ ಅವರ ಕೋವಿಗಳು ಕಾಗೆಗಳನ್ನು ಓಡಿಸುವ ಉಪಯೋಗಕ್ಕೆಷ್ಟೇ ಬರುತ್ತವಂತೆ! ಸರಕಾರ ಬೇಗ್ನೆ ಧ್ಯಾನ ಈ ಹುಲಿ-ಹಂದಿಗಳ ಬೇಟೆ ಮಾಡಲು ಚಲೋ ಕೋವಿಗಳನ್ನು ಕೊಟ್ಟು ಮುಂತ ಬೇಟೆಗಾರರಿಗೆ ಕಳಿಸಿಕೊಡಬೇಕಾಗಿ ಅರಿಕೆಯುಂಟು

ನೆಲ್ಲಿಕೇರಿ ಶಾಲೆಯಲ್ಲಿ ಮೊನ್ನೆಯ ವರೆಗೆ ೩೫ರಷ್ಟು ಹೆಣ್ಣುಮಕ್ಕಳು ಕಲಿಯುತ್ತಿದ್ದರು ಆದರೆ ೩ರಿಂದ ೭ನೆಯ ವರೆಗಿನ ಇಯತ್ತೆಗಳಲ್ಲಿ ಕಲಿಯುತ್ತಿರುವ ಹುಡುಗಿಯರಿಗೆ ಈಗ ಆ ಶಾಲೆ ಬಿಟ್ಟು ಪೇಟೆಯಲ್ಲಿರುವ (ಕನ್ನಡ) ಹೆಣ್ಣು ಹುಡುಗಿಯರ ಶಾಲೆಗೆ ಹೋಗುವಂತೆ ಒತ್ತಾಯವಾಗುತ್ತಿದೆ! ಮೇಲಧಿಕಾರಿಗಳೇ ಹಾಗೆ ಯಾಕೆ ಮಾಡಿದ್ದರಂತೆ! ಕೇರಿಯಲ್ಲಿರುವ ಶಾಲೆ ಬಿಟ್ಟು ಅರ್ಧ ಮೈಲು ದೂರದಲ್ಲಿರುವ ಶಾಲೆಗೆ ಹೋಗಬೇಕಾಗಿ ಚಿಕ್ಕ ಪ್ರಾಯದ ಹೆಣ್ಣು ಹುಡುಗಿಯರ ಮೇಲೆ ಒತ್ತಾಯ ಮಾಡುವದು ಎಷ್ಟು ಜಾಣತನವೆಂದು ವಿದ್ಯಾಧಿಕಾರಿಗಳಿಗೇ ಗೊತ್ತು! ಪೇಟೆಯೊಳಗಿನ ಶಾಲೆಯು [illegible] ಸಾಕಷ್ಟು ಸ್ಥಳವಿರುತ್ತಿದ್ದರೆ, ಆ ಶಾಲೆ ಅಷ್ಟು ಭವ್ಯವಿರುತ್ತಿದ್ದರೆ, ಹಾಗೂ ಅಲ್ಲಿಯ ಶಿಕ್ಷಣವೂ ಅಷ್ಟು ಒಳ್ಳೆಯದಿರುತ್ತಿದ್ದರೆ ಒಂದು ವೇಳೆ ಈ ಒತ್ತಾಯವನ್ನು ಆಕ್ಷೇಪಿಸದೆ ಇರಬಹುದಿತ್ತು. ವಿದ್ಯಾಧಿಕಾರಿಗಳು ಒಮ್ಮೆ ಪೇಟೆಯೊಳಗಿನ ಆ ಶಾಲೆಯನ್ನು ಕಣ್ಣಾರೆ ನೋಡಿ ಅದರಲ್ಲಿ ಯಾವ ಯಾವ ಗುಣಗಳುಂಟೆಂಬುದನ್ನು ಬಹಿರಂಗಗೊಳಿಸುವರೇ ?

ಹೊನ್ನಾವರ— (ತಾ ೧-೯-೪೫) ಕರ್ನಾಟಕ ಪ್ರಾಂ॥ ಕಾಂ॥ ಕಮಿಟಿಯ ಅಪ್ಪಣೆಯ ಮೇರೆಗೆ ಇಂದು ಇಲ್ಲಿ ಶ್ರೀ॥ ಸುಭಾಷಚಂದ್ರ ಬೋಸರ ಆಕಸ್ಮಿಕ ಹಾಗೂ ದುಃಖಜನಕ ನಿಧನದ ಬಗ್ಗೆ ಊರಲ್ಲಿ ಹರತಾಳವಾಚರಿಸಲ್ಪಟ್ಟಿತು ಸಂಜೆಯಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಮಠದೊಳಗೆ ಸಭೆಯಾಗಿ, ಮೃತಾತ್ಮರ ಗುಣಗಾನವೂ ಅವರ ಆತ್ಮಕ್ಕೆ ಶಾಂತಿಯಾಗಲೆಂಬ ಪ್ರಾರ್ಥನೆಯೂ ನಡೆದವು

(೩ನೇ ಪಾನಿನ ೩ನೇ ಕೊಲಂ ನೋಡಿರಿ.)

ಜಾಹೀರಾತು.

ಕೆಲವು ಕಡೆಯಲ್ಲಿ ಋಣ ವಿಮೋಚನೆ ಕಾಯಿದೆಯ ೬ ತಿಂಗಳ (೧-೫-೪೫ರಿಂದ ೩೧-೧೦-೪೫ರ ವರೆಗೆ) ಅವಧಿಯನ್ನು ಸರಕಾರದವರು ಬೆಳಸಲಿದ್ದಾರೆಂಬ ಸುದ್ದಿಯನ್ನು ಪ್ರಚುರಗೊಳಿಸಲಾಗಿದೆಯೆಂದು ತಿಳಿದು ಬಂದಿದೆ ಆದರೆ ಈ ೬ ತಿಂಗಳ ಅವಧಿಯನ್ನು ಯಾವದೇ ಕಾರಣದಿಂದ ಸರಕಾರದವರು ಬೆಳಸಲಾರರು ಇದನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು. ಈ ಅವಧಿಯನ್ನು ಸರಕಾರದವರು ಬೆಳಸುವರೆಂದು ಮಾಡುತ್ತಲಿರುವ ಪ್ರಚಾರವು ಸುಳ್ಳು ಮತ್ತು ನಿರಾಧಾರವಾದದ್ದು ಇರುತ್ತದೆ ಸಾಲಗಾರ ಒಕ್ಕಲಿಗರು ಇಂಥ ಪ್ರಚಾರದ ಕಡೆಗೆ ಲಕ್ಷ್ಯ ಕೊಡದೆ ತಮ್ಮ ಸಾಲ ಸರಿಪಡಿಸಿಕೊಳ್ಳುವ ಬಗ್ಗೆ ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ಅವಧಿ (ತಾ. ೩೧-೧೦-೪೫ರೊಳಗೆ) ಯೊಳಗಾಗಿ ತಮ್ಮ ಅರ್ಜಿಗಳನ್ನು ಮಾಡಿಕೊಳ್ಳತಕ್ಕದ್ದು ತಿಳಿಯುವದು. ತಾ. ೩೧-೮-೪೫

S. B GODHI,
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ಸದರ್ನ ಡಿವಿಜನ್, ಬೆಳಗಾಂವ.

ಕಾನಡಾ ಜಿಲ್ಲಾ ಸ್ಕೂಲ ಬೋರ್ಡ ಚುನಾವಣೆಯ ನೋಟೀಸು ಮತ್ತು ಕಾರ್ಯಕ್ರಮ.

ಕಾನಡಾ ಜಿಲ್ಹೆಯ ಸ್ಥಾನಿಕ ಅಧಿಕಾರಿ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಮೆ॥ ಪ್ರಸಿಡೆಂಟ ಸಾ॥ ಬ॥ ಇವರ ಕಡೆಯಿಂದ ಈ ಜಿಲ್ಹೆಯ ಲೋಕಲ್ ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಹದ್ದಿನೊಳಗಿನ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ :—

1. ತಾರೀಖ 25-2-1926 ನೇ ದಿವಸ ಮುಂಬಯಿ ಸರಕಾರಿ ಗೆಝೆಟಿನಲ್ಲಿ ಪ್ರಸಿದ್ಧಪಡಿಸಿದ 3608A 24—2—1926 ನೇ ಜಾಹೀರನಾಮೆಯಲ್ಲಿದ್ದ ಹುಕುಮಿನಗನುಸರಿಸಿ ಈ ಸ್ಥಾನಿಕ ಅಧಿಕಾರಿಯು ಸ್ಕೂಲ ಬೋರ್ಡಿನ ಮುಖಾಂತರವಾಗಿ ತಾರೀಕು 1—3—1926 ನೇ ದಿವಸದಿಂದ ಪ್ರಾಥಮಿಕ ಶಿಕ್ಷಣದ ಹವಾಲೆಯನ್ನೂ ಅಧಿಕತೆಯನ್ನೂ ತೆಗೆದುಕೊಂಡಂತೆ ಸ್ಥಾನಿಕ ಅಧಿಕಾರಿಯ ಅವಧಿಯು ತಾರೀಕು 31—7—1945 ನೇಗೆ ಮುಗಿದಿರುವದರಿಂದ ಮತ್ತು ಸ್ಕೂಲ ಬೋರ್ಡಿನ ಅವಧಿಯು ಸ್ಥಾನಿಕ ಅಧಿಕಾರಿಯದಷ್ಟೇ ಏಕಕಾಲೀಯವಾಗಬೇಕಾದ್ದರಿಂದ ಸ್ಕೂಲ ಬೋರ್ಡನ್ನು ತಾ 1-8-1945 ನೇಯಿಂದ ಶುರುವಾಗುವ ಮೂರು ವರ್ಷಗಳ ಮುದ್ದತ್ತಿನ ಬಗ್ಗೆ ಪುನಃ ರಚಿಸತಕ್ಕದ್ದಿರುತ್ತದೆ. (ಆದರೆ ಈಗಿನ ಸ್ಕೂಲ ಬೋರ್ಡ ಮೆಂಬರರು ಹೊಸ ಸ್ಕೂಲ ಬೋರ್ಡಿನ ನೇಮಣೂಕಿ ಆಗುವ ತನಕ ತಮ್ಮ ಸ್ಥಾನದಲ್ಲಿರುವರು)

2. ಸ್ಕೂಲ ಬೋರ್ಡಿನಲ್ಲಿ 13 ಮಂದಿ ಸಭಾಸದರಿರಲಿಕ್ಕೆ ಬೇಕು.

3 ಸ್ಕೂಲ ಬೋರ್ಡಿಗೆ ಚುನಾಯಿಸಲ್ಪಡುವ 13 ಮಂದಿ ಸಭಾಸದರಲ್ಲಿ 6 ಸಭಾಸದರ ಸ್ಥಾನಗಳು ಕೆಳಗೆ ತೋರಿಸಿದಂತೆ ಜನರ ವಿಶೇಷ ಹಿತಗಳನ್ನು ತೋರಿಸುವ ಬಗ್ಗೆ ಕಾದಿಡಲ್ಪಟ್ಟಿವೆ ಉಳಿದ 7 ಸ್ಥಾನಗಳಲ್ಲಿ 6 ಸ್ಥಾನಗಳು ಸಾಮಾನ್ಯ ಹಿತದ ಬಗ್ಗೆ ಅವೆ ಒಂದು ಸ್ಥಾನವು ನೊನ್‌ಲೋಕಲ್ ಒಥೋರಿಟಿ ಮ್ಯುನಿಸಿಪಾಲಿಟಿಗಳ ಪ್ರತಿನಿಧಿಯ ಬಗ್ಗೆ ಇದೆ ಈ ಸಭಾಸದರು ಸ್ಥಾನಿಕ ಅಧಿಕಾರಿಯ ಸಭಾಸದರೇ ಇರಬೇಕೆಂತಿಲ್ಲ. ಈ ಬಗ್ಗೆ ಪ್ರಾಥಮಿಕ ಶಿಕ್ಷಣದ ಕಾಯದೆಯಂತೆ ಇದ 17ನೇ ನೇಮ ನೋಡಬಹುದು.

	ಸ್ಥಾನಗಳ ಸಂಖ್ಯೆ
1, ಶಿಕ್ಷಣದಲ್ಲಿ ಅನುಭವವುಳ್ಳವರು.	2
2. ಸ್ತ್ರೀಯರು	1
3. ಕಡಿಮೆ ಸಂಖ್ಯೆಯ ವರ್ಗದ ಪ್ರತಿನಿಧಿಗಳು	
(ಅ) ಮುಸಲ್ಮಾನ ಜನರು	1
(ಬ) ಇಂಡಿಯನ್ ಕ್ರಿಶ್ಚನರು . . .	1
4 ಹಿಂದುಳಿದ ಜಾತಿಯ ಜನರು	1
ವಿಶೇಷ ಹಿತಗಳ ಬಗ್ಗೆ ಕಾದಿಟ್ಟ ಒಟ್ಟು ಜಾಗೆಗಳು	6
ಸಾಮಾನ್ಯ ಹಿತಗಳ ಬಗ್ಗೆ	6
ನೊನ್‌ಲೋಕಲ್ ಒಥೋರಿಟಿ ಮ್ಯುನಿಸಿಪಾಲಿಟಿಗಳ ಪ್ರತಿನಿಧಿ ಬಗ್ಗೆ	1
ಅಂತು....	13

ಟೀಪು.— ಮ್ಯುನಿಸಿಪಾಲಿಟಿಗಳ ಬಗ್ಗೆ ಆರಿಸಲ್ಪಡುವ ಪ್ರತಿನಿಧಿಯು ಮ್ಯುನಿಸಿಪಾಲಿಟಿಯ ಮೆಂಬರನೇ ಇರಬೇಕೆಂತಿಲ್ಲ.

4. 1923 ನೇ ಇಸ್ವಿ ಮುಂಬಯಿ ಪ್ರಾಯಮರಿ ಎಜ್ಯುಕೇಶನ್ ಎಕ್ಟ IV ನೇದರಂತೆ ಮಾಡಿದ ನೇಮುಗಳಲ್ಲಿ 17 (4) ನೇ ನೇಮಕ್ಕೆ ಅನುಸರಿಸಿ ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿದ ಚುನಾವಣೆ ನೇಮ 1-2ನೇದರ ಅನ್ವಯ.

ಇದರ ಮೂಲಕವಾಗಿ ಕಾನಡಾ ಡಿಸ್ಟ್ರಿಕ್ಟ ಲೋಕಲ್‌ಬೋರ್ಡ ಸ್ಥಾನಿಕ ಅಧಿಕಾರಿಗೆ ಒಪ್ಪಿದ ಸ್ಕೂಲ ಬೋರ್ಡ ಚುನಾವಣೆಯ ಬಗ್ಗೆ ಈ ಕೆಳಗಿನಂತೆ ಕಾರ್ಯಕ್ರಮ ರಚಿಸಲ್ಪಟ್ಟಿರುತ್ತದೆ:—

ತಪಶೀಲು:—	ಸ್ಥಳ:—	ತಾರೀಕು ವ ಘಂಟೆ.-
1. ನೇಮಣೂಕಿ ಪತ್ರಗಳನ್ನು ಸ್ವೀಕರಿಸುವದು ವಿಶಿಷ್ಟ ಹಿತಗಳ ಸಂಬಂಧ, ಜನರಲ್ ಮತ್ತು ನೊನ್‌ಲೋಕಲ ಒಥೋರಿಟಿ ಮ್ಯುನಿಸಿಪಾಲಿಟಿ ಪ್ರತಿನಿಧಿ ಸ್ಥಳಗಳ ಬಗ್ಗೆ (ಚುನಾವಣೆ ನೇಮ 4,	ಕಾನಡಾ ಡಿಸ್ಟ್ರಿಕ್ಟ ಲೋಕಲ ಬೋರ್ಡ ಆಫೀಸಿನ ಮಾಳಿಗೆಯ ಮೇಲೆ, ಕಾರವಾರದಲ್ಲಿ	18 9 45ನೇ ಮಂಗಳವಾರ ಬೆಳಿಗ್ಗೆ 9½ಯಿಂದ 12 ರ ವರೆಗೆ (ಸ್ಟೆಂ. ಟ್ಯಾ)
2. ನೇಮಣೂಕಿಯ ಪತ್ರಗಳನ್ನು ತಪಾಸ ಮಾಡುವದು (ಅ) ವಿಶಿಷ್ಟ ಹಿತಸಂಬಂಧ (ಬ) ಜನರಲ್ ಡಿ. (ಕ) ನೊನ್‌ಲೋಕಲ್ ಒಥೋರಿಟಿ ಮ್ಯುನಿಸಿಪಾಲಿಟಿ ಪ್ರತಿನಿಧಿ ಸ್ಥಳದ ಸಂಬಂಧ. (ಚುನಾವಣೆ ನೇಮ 5, 6, 7)	— ಡಿ —	ಡಿ. ಸಂಜೆ ಘಂಟೆ 4ರಿಂದ ಮುಂದೆ. (ಸ್ಟೆಂ. ಟ್ಯಾ)
3 ವಿಶಿಷ್ಟ ಹಿತಗಳ ಬಗ್ಗೆ ನಿಂತ ಉಮೇದವಾರರಿಗೆ ಮತಗಳನ್ನು ಕೊಡುವದು. (ನೇಮ 14)	— ಡಿ —	ತಾ. 9-10-1945ನೇ ಮಂಗಳವಾರ ಬೆಳಿಗ್ಗೆ 9ರಿಂದ 11ರ ವರೆಗೆ (ಸ್ಟೆಂ. ಟ್ಯಾ)
4 ಇಂಥ ಮತಗಳನ್ನು ಎಣಿಸುವದು (ನೇಮ 15) ಮತ್ತು ಪರಿಣಾಮ ಪ್ರಕಟಿಸುವದು (ನೇಮ 16)	— ಡಿ —	ಅದೇ ದಿವಸ ಬೆಳಿಗ್ಗೆ ಘಂಟೆ 11ರಿಂದ12ರವರೆಗೆ(ಸ್ಟೆಂ.ಟ್ಯಾ)
5. ಸಾಮಾನ್ಯ ಹಿತಗಳಬಗ್ಗೆ ನಿಂತ ಉಮೇದ್ವಾರರಿಗೆ ಮತಗಳನ್ನು ಕೊಡುವದು (ಚುನಾವಣೆ ನೇಮ 14)	— ಡಿ —	ಅದೇ ದಿವಸ ಸಂಜೆ ಘಂಟೆ 3 ರಿಂದ 4ರ ವರೆಗೆ (ಸ್ಟೆಂ. ಟ್ಯಾ.)
6. ಇಂಥ ಮತಗಳನ್ನು ಎಣಿಸುವದು (ನೇಮ 15) ಮತ್ತು ಪರಿಣಾಮ ವ್ಯಕ್ತ ಮಾಡುವದು (ನೇಮ 16)	— ಡಿ —	ಅದೇ ದಿವಸ ಸಂಜೆ ಘಂಟೆ 4 ರಿಂದ 5 ರವರೆಗೆ (ಸ್ಟೆಂ. ಟ್ಯಾ.)
7. ನೊನ್‌ಲೋಕಲ್ ಒಥೋರಿಟಿ ಮ್ಯುನಿಸಿಪಾಲಿಟಿ ಕಡೆಯಿಂದ ಬಂದ ಮತದಾನ ಪತ್ರಿಕೆಗಳಂತೆ ಮತಗಳನ್ನು ಎಣಿಸುವದು (ನೇಮ 15) ಮತ್ತು ಅವರ ಪರಿಣಾಮ ವ್ಯಕ್ತಪಡಿಸುವದು. (ನೇಮ 16)	— ಡಿ —	ಅದೇ ದಿವಸ ಸಂಜೆ ಘಂಟೆ 5 ರಿಂದ 6ರ ವರೆಗೆ (ಸ್ಟೆಂ ಟ್ಯಾ)

5 ಯಾವ ಉಮೇದವಾರರಿಗೆ ಸದ್ರಿ ಸ್ಕೂಲ ಬೋರ್ಡಿನ ಮೇಲೆ ವಿಶಿಷ್ಟ ಹಿತಗಳ ಬಗ್ಗೆ ಇರುವ ಜಾಗಾಗಳ ಬಗ್ಗೆ ನಿಲ್ಲುವದಿದೆಯೋ ಅವರು ಪ್ರಾಯಮರಿ ಎಜ್ಯುಕೇಶನ ಅಕ್ಟ ಕಲಂ 3 A ವ ಪ್ರಾಯಮರಿ

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ [illegible]
[illegible]
[illegible]
[illegible]
[illegible]
ಹೊರ ಊರುಗಳಿಗೆ [illegible]
[illegible]
ತೆರಬೇಕು
ವರ್ಗಣಿ ಮುಂಗಡಕೊಟ್ಟಿರತಕ್ಕದ್ದು

Reg. No. B 1270 Monday, 3rd September, 1945.

ಕಾನಡಾವೃತ್ತಂ

ವರ್ಷ ೩೮] THE KANARA NEWS. [ಸಂಚಿಕೆ ೧೦.

ಕುಮಟಾ.- ಸೋಮವಾರ, ತಾ ೩ ನೆಯ ಸಪ್ಟೆಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಸ್ಥಾಳಾ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸಿದ್ಧ ಅಕ್ಷರಾ ೧೫ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ನಿಶ್ಚಿತ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದುವರಿದುದು)

ದ್ವಾರೆ ಬೋರ್ಡು ರದ್ದಾದಲ್ಲಿ ತೀವ್ರ ಅಧಿಕ ರಭ್ರಷ್ಟಾಚಾರ [illegible] ಆಂದೋಲನದಿಂದ ಅವರು ಬೇಗ ದೊಡ್ಡ ಮಾಡಿ ಆದೆ ಪಟ್ಟಿಯನ್ನು ಎರಡನೆಗೆ ಹಾಕುವ ಹಾಗೆ ಬೋರ್ಡು ರದ್ದಾಗದಂತೆ ಮಾಡುವ ಪ್ರಯತ್ನ ನಡಿಸಿದರಂತೆ ಯುದ್ಧಕಾಲದಲ್ಲಿ ಬೋರ್ಡಿನ ಅನುಕೂಲ [illegible] ಆದೆ ಪಟ್ಟಿ [illegible] ಅದರೆ ಈಗ ಯುದ್ಧ ಮುಗಿದ್ದರಿಂದ ಮತ್ತೆ ಕ್ರಮೇಣ ಕಡಿಮೆಯಾಗುವವೆಂದಲೂ ಆದೆ ಪಟ್ಟಿ ಎಂಬುವದು ಅಷ್ಟೇನು ಅವಶ್ಯವಿಲ್ಲೆಂದಲೂ ಕೆಲವರು ವಾದಿಸುತ್ತಾರೆ ಆದೆಪಟ್ಟಿಯನ್ನು ವಸೂಲು ಮಾಡಿಸಿ [illegible] ಬಂದ ಹಣದಿಂದ ಊರ ಶಿಕ್ಷಣದ ಕೆಲಸ ಮಾಡುವಲ್ಲಿ ಇಲ್ಲವೆ ಜನರಿಗೆ ಯಾವ ಹೆಚ್ಚಿನ ಸೌಕರ್ಯ ಒದಗಿಸಿಕೊಡುವರಿ ಎಂಬುದನ್ನು ಬೋರ್ಡು ಸ್ಪಷ್ಟ ತಿಳಿಸಿರಿ ಎಂದು ಕೆಲವರು ಕೇಳುತ್ತಾರೆ ಆದ್ಯಾವದನ್ನೂ ಆಲೋಚಿಸದೆ ಅಧ್ಯಕ್ಷರು ಬೋರ್ಡಿನ [illegible] ತನ್ನ ಒಬ್ಬರೇ ಇದ್ದಾಗಿ ಸಾಧಿಸ [illegible] ಪ್ರಯತ್ನ ನಡಿಸಿದ್ದಾರೆ ಕೆಲವರಿಗೆ [illegible] ಸದಸ್ಯತ್ವದ ಆಮಿಷವನ್ನು ತೋರಿಸುತ್ತ [illegible] ಬೋರ್ಡಿನ [illegible] ಮೊದಲು ಜರುಗಿದಲ್ಲಿ ಆದೆಪಟ್ಟಿ [illegible] ಸೂಚನೆಗೆ ಬೆಂಬಲ ಸಿಗದೆ ಹೋದೀತೆಂಬ ಹೆದರಿಕೆಯಿಂದಲೇ ಅವರು [illegible] ಸಭೆಯ ಕೆಲಸವನ್ನು ಮೊದಲು ತೆಗೆಯದೆ [illegible] ಬೋರ್ಡಿನ [illegible] ಮುಂದಿಟ್ಟಿದ್ದಾರಂತೆ [illegible] ಯಾವ ಯಾವ ಸದಸ್ಯರು ಅವರ ಬಲಕ್ಕಿದ್ದಾರೆಂಬುದು ಬೇಗನೇ ತಿಳಿಯುವದು

(ತಾ ೨ ೯ ೪೫) ಗೋಕರ್ಣದ ಚಳವಳಿಯ ಕಾಲಕ್ಕೆ ಹಳಿಯಾಳ ತಾಲೂಕ ದೋಣಗಿ ಗ್ರಾಮದ ಪೋಲೀಸ ಪಟೇಲರ ಕೋವಿಯನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋದರೆಂಬ ಆರೋಪವನ್ನಿಟ್ಟು ೨ ಗಂಗಯ್ಯ ಚಕ್ಕಮದ್ದೂರಿ ಮತ್ತಿತರೆ ೧೩ ಜನರ ವಿರುದ್ಧ ಇದ್ದ ಮೊಕದ್ದಮೆಯು ಸ್ಪೆಶಲ್ ಕೋರ್ಟಿನಲ್ಲಿ ಕಳೆದ ಸೋಮವಾರದಿಂದ ಜಟ್ಟಿ ನಡೆದಿತ್ತು ನಿನ್ನೆ ಅದರ ನಿಕಾಲವಾಗಿ ಎಲ್ಲ ಆರೋಪಿಗಳೂ ನಿರಪರಾಧಿಗಳೆಂದು ಬಿಡುಗಡೆ ಮಾಡಲ್ಪಟ್ಟಿದ್ದಾರೆ ಆರೋಪಿಯರು ಬರೆಯಿಸಿದ್ದರೆಂಬ ಕಬೂಲಿ ಜಬಾಬುಗಳು ಸ್ವಸಂತೋಷದಿಂದ ಬರೆಯಿಸಲ್ಪಟ್ಟಿದ್ದಲ್ಲವೆಂದು ಕೋರ್ಟಿನ ಅಭಿಪ್ರಾಯವಾಯಿತು.

ಯಲ್ಲಾಪೂರ— (ತಾ ೩೧-೮-೪೫) ಮೋಟಾರ ವ್ಯವಹಾರವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ರೇಲ್ವೆಯೊಡನೆ ಮೋಟಾರ ಉದ್ದಿಮೆಯವರು ಸ್ಪರ್ಧೆ ನಡಿಸದಂತೆ ಮಾಡುವದಕ್ಕಾಗಿ ಮುಂಬಯಿ ಸರಕಾರದವರು ಇಡೀ ಮುಂಬಯಿ ಪ್ರಾಂತವನ್ನು ೧೧ ವಿಭಾಗಗಳಲ್ಲಿ ವಿಭಾಗಿಸಿ ಪ್ರತಿಯೊಂದು ಭಾಗದ ಮೋಟಾರ ರಹದಾರಿಯನ್ನು ಒಂದೊಂದು ಕಂಪನಿಗೆ ಒಪ್ಪಿಸಬೇಕೆಂದು ಒಂದು ಯೋಜನೆ ತಯಾರಿಸಿರುವರಷ್ಟೇ ಈ ಕಂಪನಿಯಲ್ಲಿ ಸರಕಾರದವರು ಮತ್ತು ರೇಲ್ವೆಯವರು ನೂರಕ್ಕೆ ೬೦ರಷ್ಟು ಪಾಲುಗಳನ್ನು ಕೊಳ್ಳುವರು, ಕಂಪನಿಯ ಸ್ಥಾಪನೆಯ ಬಗ್ಗೆ ಮುಂದಾಗುವ ಪ್ರಮೋಟರ ಯಾನೆ ಪುರಸ್ಕರ್ತರಿಗೆ ೧೦ ಪಾಲು ಕೊಡುವರು, ಮತ್ತು ಉಳಿದ ೩೦ ಪಾಲುಗಳನ್ನು ಆಯಾ ವಿಭಾಗದ ಮೋಟಾರ ವ್ಯವಸಾಯಿಗಳಿಗೆ ಹಂಚಿ ಕೊಡುವರು, ಯಾವ ಮೋಟಾರ ವ್ಯವಸಾಯಿಯು ಈ ಕಂಪನಿಯಲ್ಲಿ ಸೇರಲು ಒಪ್ಪುವದಿಲ್ಲವೋ ಅಂಥವನಿಗೆ ಮುಂದೆ ಮೋಟಾರ ರಹದಾರಿಯ ಪರವಾನೆ ಸಿಗುವಂತಿಲ್ಲವೆಂದು ವಾಹನ ನಿಯಂತ್ರಣ ಇಲಾಖೆಯವರು ತಿಳಿಸಿದ್ದಾರೆ ಸರಕಾರದವರ ಹೊಸ ಯೋಜನೆ ಅಮಲಿನಲ್ಲಿ ಬಂದರೆ ಈಗ ಮೋಟಾರ ಉದ್ದಿಮೆಯಲ್ಲಿ ತೊಡಗಿದವರೆಲ್ಲ ಹೊಸ ಕಂಪನಿಯ ಕೈಗೊಂಬೆಗಳಾಗಿ ಸಾಯಬೇಕಾಗುವ ಪ್ರಸಂಗ ಬರುವದೆಂದು ಆ ಯೋಜನೆಯ ಅಭ್ಯಾಸ ಮಾಡಿದವರು ಹೇಳುತ್ತಾರೆ! ಅದರಿಂದ ಸರಕಾರದ ಯೋಜನೆಯನ್ನು ಎಲ್ಲ ಮೋಟಾರ ಉದ್ದಿಮೆಯವರು ವಿರೋಧಿಸಬೇಕೆಂದು ಧಾರವಾಡ- ಹುಬ್ಬಳ್ಳಿಯ ಕಡೆಯವರು ದೊಡ್ಡ ಚಳವಳಿಯನ್ನು ಎಬ್ಬಿಸಿದ್ದಾರೆ ನಮ್ಮ "ಉತ್ತರ ಜಿಲ್ಲೆಯೂ ನೆರೆಯ ಧಾರವಾಡ ಜಿಲ್ಲೆಯೂ ಸರಕಾರದವರ ಸದರಿ ಯೋಜನೆಯಲ್ಲಿ ಒಂದೇ ವಿಭಾಗ (೧೧ನೇ ವಿಭಾಗ) ಮಾಡಲ್ಪಟ್ಟಿದ್ದು ಈ ಎರಡೂ ಜಿಲ್ಲೆಗಳ ಬಗ್ಗೆ ಒಂದೇ ಕಂಪನಿ ಮಾಡಲು ಸರಕಾರದವರು ಯೋಚಿಸಿದ್ದಾರೆ ಅದರಿಂದ ಉಭಯ ಜಿಲ್ಲೆಗಳೊಳಗಿನ ಮೋಟಾರ ಉದ್ದಿಮೆಯವರ ಹಿತಸಂಬಂಧಗಳು ಒಂದೇ ಆಗಿವೆ ಅದರಂತೆ ಹೊಸ ಯೋಜನೆಯಿಂದಾಗುವ ಹಿತಾಹಿತಗಳನ್ನೂ ಲಾಭ ನಷ್ಟಗಳನ್ನೂ ಆಲೋಚಿಸಿ, ಆ ಯೋಜನೆಯ ಸಂಬಂಧದಲ್ಲಿ ಸ್ಥಾನಿಕ ಮೋಟಾರ ವ್ಯವಸಾಯಿಗಳು ಯಾವ ಧೋರಣೆ ಅನುಸರಿಸಬೇಕೆಂಬುದನ್ನು ನಿರ್ಧರಿಸುವದಕ್ಕಾಗಿ ಕಳೆದ ತಾ ೨೩ನೇಗೆ ಹುಬ್ಬಳ್ಳಿಯಲ್ಲಿ ರಾ|| ಹಿರೇಕೆರೂರ ಅಧ್ಯಕ್ಷತೆಯಲ್ಲಿ ಎರಡೂ ಜಿಲ್ಲೆಗಳ ಮೋಟಾರ ಉದ್ಯೋಗದವರ ಸಭೆ ಕೂಡಿತ್ತು, ಆ ಸಭೆಯಲ್ಲಿ ಕೂಲಂಕಷ ಚರ್ಚೆಯಾಗಿ, ಮೋಟಾರ-ವ್ಯವಸಾಯಿಗಳೆಲ್ಲರೂ ಹೊಸ ಯೋಜನೆಯನ್ನು ಬಲವಾಗಿ ನಿಷೇಧಿಸತಕ್ಕದ್ದೆಂತಲೂ ಪುರಸ್ಕರ್ತರಾಗಲು ಮುಂದಾದವರು ತಮ ತಮ್ಮ ಹಿರಿಯಾಳುತನ ಬಿಟ್ಟುಕೊಡಬೇಕೆಂತಲೂ, ವಾಹನ ನಿಯಂತ್ರಣಾಧಿಕಾರಿಗಳಾದ ಮಿ|| ಕೋರಾವಾಲಾರವರು ಕಂಪನಿಯ ಸ್ಥಾಪನೆಗಾಗಿ ಯಲ್ಲಾಪುರಕ್ಕೆ ತಾ ೨೯ಕ್ಕೆ ಬಂದಾಗ ಅವರ ಸಭೆಗೆ ಸಮಸ್ತ ಮೋಟಾರ-ಉದ್ಯೋಗದವರು (ಒಪರೇಟರರು) ಬಹಿಷ್ಕಾರ ಹಾಕತಕ್ಕದ್ದೆಂತಲೂ ಠರಾಯಿಸಿತು ಹಾಗೂ ಸರಕಾರದವರ ಯೋಜನೆಯನ್ನು ಧಿಕ್ಕರಿಸುವ ಒಂದು ಅರ್ಜಿಯನ್ನು ತಯಾರಿಸಿ ಅದನ್ನು ಎಲ್ಲ ಒಪರೇಟರರ ಸಹಿಯಿಂದ ಮಿ|| ಕೋರಾವಾಲಾರವರಿಗೆ ಒಪ್ಪಿಸಬೇಕೆಂದು ಠರಾಯಿಸಿತು ಇದೆಲ್ಲ ಒಮ್ಮತದಿಂದ ನಡೆದ ಕೆಲಸ ಕಂಪನಿಯ ಪುರಸ್ಕರ್ತರಾಗಲು ಅರ್ಜಿ ಕೊಟ್ಟ ೨೫ ಮಂದಿ ಕೂಡ ಈ ನಿರ್ಣಯಗಳಿಗೆ ತಮ್ಮ ಸಾಧಾರ ಸಮ್ಮತಿ ಕೊಟ್ಟಿದ್ದರು ಆದರೆ ಮುಂದೆ ಕಂಪನಿಯ ಪುರಸ್ಕರ್ತರಾಗಿ ಆರಿಸಲ್ಪಡಲು ಓರ್ವ ಹಿರಿಯಾಳುಗಳಾಗಿದ್ದ ಮಾಗಾವಿಯವರಿಗೆ ಸ್ವಾರ್ಥವುಂಟಾಯಿತು. ಇತರರು ಬಹಿಷ್ಕಾರ ಹಾಕಿದಾಗಲೇ ತಮ್ಮ ಬೇಳೆ ಬೇಯಿಸಿ ಸ್ವಾರ್ಥ ಸಾಧಿಸುವಾ ಎಂಬ ದುರಾಲೋಚನೆ ಅವರಲ್ಲುಂಟಾಯಿತು ಮತ್ತು ಅವರು ಕೆಲವರಿಗೆ ಪುರಸ್ಕರ್ತ ಹುದ್ದೆಯಲ್ಲಿ ಪಾಲು ಕೊಡುವ ಆಮಿಷ ತೋರಿಸಿ ಅನೇಕ ಒಪರೇಟರರನ್ನು ತಮ್ಮ ಪಕ್ಷಕ್ಕೆ ಎಳೆಕೊಂಡರು! ಕಳೆದ ಬುಧವಾರ ಸಂಜೆ ೩ಕ್ಕೆ ಮಿ|| ಕೋರಾವಾಲಾರವರು ಉಭಯ ಜಿಲ್ಲೆಗಳೊಳಗಿನ ಒಪರೇಟರರ ಸಭೆಯನ್ನು ಪುರಸ್ಕರ್ತರ ಚುನಾವಣೆಗಾಗಿ ಇಲ್ಲಿ ಕರೆದಿದ್ದರು ಅದರಂತೆ ಆ ದಿನ ಮುಂಜಾವಿನಿಂದಲೂ ರಾ|| ಮಾಗಾವಿಯವರ ನಾಟಕದರೂ ಯೋಜನೆಯನ್ನು ವಿರೋಧಿಸಬೇಕೆಂಬ ಪಕ್ಷದವರೂ ಈ ಊರಲ್ಲಿ ಕೂಡಿದರು ಸಂಜೆ ೩ಕ್ಕೆ ಸಭೆಗೆ ಆರಂಭವಾಯಿತು ಅಧಿಕಾರಿಗಳ ಹೊರಗೆ ಸದರಿ ಸಭೆಯಲ್ಲಿ ೧೪ ೧೫ ಮಂದಿ ಮಾತ್ರ ಹಾಜರ ಇದ್ದರು (ಒಪರೇಟರರ ಸಂಖ್ಯೆ ೪೦ಕ್ಕೆ ಮಿಕ್ಕಿದೆ) ಆ ೧೪-೧೫ ಮಂದಿಯಲ್ಲಿ ೩-೪ ಮಂದಿ ಮಾತ್ರ ಮೋಟಾರ ವ್ಯವಸಾಯಿಗಳಿದ್ದರು! ಉಳಿದವರೆಲ್ಲ ಪತ್ರಿಕಾ ಪ್ರತಿನಿಧಿಗಳು ಮತ್ತು "ಮೋಟಾರ-ಉದ್ಯೋಗದಲ್ಲಿ ಆಸ್ಥೆಯುಳ್ಳವರು"! ಮಿ|| ಕೋರಾವಾಲಾರವರಿಗೆ ಈ ದೃಶ್ಯ ಕಂಡು ವ್ಯಸನವಾಯಿತು ಆದರೂ ತಮ್ಮ ಯೋಜನೆಯನ್ನು ಇವರ ಕೊರಳಿಗೆ ಕಟ್ಟಬೇಕೆಂಬ ಹಟವನ್ನು ಅವರು ಬಿಡಲಿಲ್ಲ ಕೈಕೆಳಗಿನ ಅಧಿಕಾರಿಗಳಿಗೆ ಕಳಿಸಿ ಊರಲ್ಲೇ ತಿರುಗಾಡುತ್ತಿದ್ದ ಬೇರೆ ಕೆಲವು ಒಪರೇಟರರಿಗೆ ಅವರು ಸಭೆಗೆ ಕರೆತರಿಸಿದರು ಮತ್ತು ಪುರಸ್ಕರ್ತರ ಚುನಾವಣೆಯನ್ನು ನಡಿಸಿದರು! ಎಲ್ಲ ಮತಗಳು ರಾ|| ಮಾಗಾವಿಯವರಿಗೇ ಬಿದ್ದವೆಂದು ಹೇಳುವದವಶ್ಯವಿಲ್ಲ ಚಿತ್ರಾಪುರ ಎಕ್ಸಪ್ರೆಸ್ ಕಂಪನಿಯ ರಾ|| ಶಂಕರ ಮಿಜಾರ್ನಕರರು ಹುಬ್ಬಳ್ಳಿಯ ಸಭೆಯೊಳಗಿನ ತಮ್ಮ ಬಣ್ಣವನ್ನು ಸಂಪೂರ್ಣ ಬದಲಿಸಿ ಇಲ್ಲಿಯ ಸಭೆಯಲ್ಲಿ ಮಿ|| ಕೋರಾವಾಲಾರವರ ವಕೀಲರಾದದ್ದೂ ಒಂದು ಮುದ್ದಾಮ ನಮೂದಿಸತಕ್ಕ ವಿಷಯ ಸರಕಾರದ ಹೊಸ ಯೋಜನೆಯನ್ನು ಸ್ವೀಕರಿಸದೊಪ್ಪದ ಮೋಟಾರ - ಉದ್ದಿಮೆಯವರನ್ನು ತಾವು ನಿರ್ದಯತನದಿಂದ ಬಗ್ಗುಬಡಿಯುವೆವೆಂದು ರಾ|| ಕೋರಾವಾಲಾರವರು ಬೆದರಿಕೆ ಕೊಟ್ಟಿದ್ದಾರಂತೆ. ಈ ಸಂಗತಿಯನ್ನು ನಮೂದಿಸಿ, ಇವರಿಗೆ ಬೇಗನೇ ಬೇರೆ ಸ್ಥಳಕ್ಕೆ ವರ್ಗಾಯಿಸಬೇಕೆಂದು ಹುಬ್ಬಳ್ಳಿ, ಧಾರವಾಡ ಎದಿಯ ಪ್ರಮುಖ ಮೋಟಾರ-ವ್ಯವಸಾಯಿಗಳು ಭಾರತ-ಮಂತ್ರಿಗಳಿಗೂ, ಸರ್ವಾಧಿಕಾರಿಗಳಿಗೂ, ಮುಂಬಯಿ ಪ್ರಾಂತಾಧಿಪರಿಗೂ ತಂತಿಯಿಂದ ಬಿನ್ನವಿಸಿದ್ದಾರೆ. ಮುಂದೇನಾಗುತ್ತದೆಂದು ನೋಡಬೇಕು

ವಾರ್ತೆಗಳು

— ದೇಶದೊಳಗಿನ ಪರಿಸ್ಥಿತಿಯನ್ನೂ ಭಾವಿ ಚುನಾವಣೆಗಳ ಸಂಬಂಧದಲ್ಲಿ ಕಾಂಗ್ರೆಸ್ಸು ಮಾಡಬೇಕಾದ ಪೂರ್ವ ಸಿದ್ಧತೆಗಳನ್ನೂ ಆಲೋಚಿಸುವದಕ್ಕಾಗಿ ಕಾಂಗ್ರೆಸ ಕಾರ್ಯಕಾರಿ ಮಂಡಳದ ಅಧಿವೇಶನವು ಇದೇ ಬರುವ ತಾ ೧೨ಕ್ಕೆ ಪುಣೆಯಲ್ಲಿ ಕೂಡಲಿದೆ ಹಾಗೂ ಅಖಿಲ ಭಾರತೀಯ ಕಾಂಗ್ರೆಸ ಸಮಿತಿಯ ಸಭೆ ಇದೇ ಬರುವ ತಾ ೨೧ಕ್ಕೆ ಮುಂಬಯಿಯಲ್ಲಿ ಕೂಡಲಿಕ್ಕಿದೆ

— ಕಾಂಗ್ರೆಸ ಸಂಸ್ಥೆಗಳ ಮೇಲಿನ ನಿರ್ಬಂಧಗಳು ಈಗ ದೂರವಾದಾಗ್ಯೂ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಎಷ್ಟೋ ಮಂದಿ ಸದಸ್ಯರು ಇನ್ನೂ ಬಂಧನದಲ್ಲಿದ್ದಾರೆ ಕಾಂಗ್ರೆಸದಲ್ಲೇ ಸೇರಿರುವ, ಆದರೆ ಬೇರೊಂದು ಒಳಪಕ್ಷ ಕಟ್ಟಿಕೊಂಡಿರುವ ಕಾಂಗ್ರೆಸ ಸಮಾಜ ಸತ್ತಾವಾದಿ ಪಕ್ಷದ ಮೇಲಿನ ನಿರ್ಬಂಧವೂ ಹಾಗೆಯೇ ಉಂಟು ಆದರಿಂದ ಕಾಂಗ್ರೆಸ್ಸಿನ ಸ್ವತಂತ್ರ ವ್ಯವಹಾರಕ್ಕೆ ಅಡ್ಡಿಯಾಗಿದೆಯೆಂದು ರಾಷ್ಟ್ರಪತಿಗಳು ದೂರಿಕೊಂಡಿದ್ದಾರೆ.

— ಹಿಂದೀ ಸಮಸ್ಯೆಯನ್ನು ಕುರಿತು ಭಾರತ ಮಂತ್ರಿ, ಸರ್ ಸ್ಟೆಫರ್ಡ ಕ್ರಿಪ್ಸ್, ವಿದೇಶ ಸಚಿವರಾದ ಮಿ|| ಅರ್ನೆಸ್ಟ ಬೆವ್ಹಿನ ಮತ್ತು ಸರ್ವಾಧಿಕಾರಿ ವೆವ್ವೆಲ ದೊರೆಗಳು ಇವರಲ್ಲಿ ಲಂಡನದೊಳಗೆ ಮಾತುಕತೆಗಳು ನಡೆದಿವೆ ಹೀಗೆ ಗಾಂಧಿ. ಇರ್ವಿನ ಒಪ್ಪಂದ ಮಾಡಿಸಿದ [illegible] ದೊರೆಗಳೂ ಈ ಚರ್ಚೆಯಲ್ಲಿ ಸೇರುವರೆಂದು ಒಂದು ವಾರ್ತೆಯುಂಟು

— ನಿನ್ನೆ ಮುಂಜಾನೆ ೮ ಘಂಟೆಗೆ ಟೋಕಿಯೋ ಅಖಾತದಲ್ಲಿ ಮಿಸ್ಸೂರಿ ಎಂಬ ಅಮೇರಿಕೆಯ ಯುದ್ಧಹಡಗದಲ್ಲಿ ಜಪಾನ ಸರಕಾರದ ಪರವಾಗಿ ಜಪಾನಿ ವಿದೇಶ ಮಂತ್ರಿ ಶಿಗೆಮಿಟ್ಸು ಇವರು ಶರಣಾಗತಿಯ ಪತ್ರಕ್ಕೆ ಸಹಿ ಹಾಕಿದರೆಂದು ಸುದ್ದಿ ಬಂದಿದೆ

The Agricultural & Industrial Bank, Ltd.
(Incorporated in British India, Liability of Members limited)
Head Office COONDAPOOR S. I
Branches -
ANKOLA
BELGAUM,
COONDAPOOR
DHARWAR,
GOKARN
HAVERI,
HUBLI
KARWAR
KUMTA
MANGALORE
NAGAR
SHIMOGA,
SIRSI,
SOMWARPET
VIRAJPET.
All kinds of Banking Business transacted.
Paid-up Capital & Reserves exceed Rs. 4 LAKHS
Please apply for particulars.
1—9—1945

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ .. ೦-೦-೯
ಹಳೇ ಸಂಚಿಕೆಗೆ .. ೦-೪-೦
ವ್ಹಿ.ಪಿ ಯಿಂದ ಹಣ ತರುವವರು
ಪ್ಲ ೩ ಪೈಸ್ತ್ರ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡಕಟ್ಟತಕ್ಕದ್ದು

Reg. No. B 1270. Monday, 10th September, 1945.

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೧೧.

ಕುಮಟಾ.- ಸೋಮವಾರ, ತಾ. ೧೦ ನೇ ಸಪ್ಟಂಬರ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಪ್ಯಾರಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಪೆಶಲ ಪ್ಯಾರಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ತ್ವರೆ ಮಾಡಿರಿ!

ಮತಾಧಿಕಾರ ಪಡೆಯಿರಿ

ಬರುವ ಚಳಿಗಾಲದಲ್ಲಿ ಪ್ರಾಂತಿಕ ಹಾಗೂ ಮಧ್ಯವರ್ತಿ ಕಾಯದೆ ಮಂಡಳಗಳ ಚುನಾವಣೆಗಳಾಗಲಿವೆ ಪ್ರಾಂತಿಕ ಕಾಯದೆ ಮಂಡಳಗಳ ಮತದಾರ ಯಾದಿಗಳು ೧೯೪೧ರಲ್ಲಿ ಸಿದ್ಧಪಡಿಸಲ್ಪಟ್ಟಿವೆಯೆಂದೂ ಅವನ್ನೀಗ ಪುನಃ ತಯಾರಿಸಲು ಸಾಧ್ಯವಿಲ್ಲೆಂದೂ ಮುಂಬಯಿ ಸರಕಾರದವರು ಪ್ರಕಟಿಸಿದ್ದಾರೆ ಈ ಯಾದಿಗಳನ್ನೇ ಅವಲಂಬಿಸಿಕೊಂಡು ಹಾಗಾದಲ್ಲಿ ೧೯೪೧ ರಿಂದ ಈಚೆ ಮತಾಧಿಕಾರ ಪ್ರಾಪ್ತವಾದ ಲಕ್ಷಗಟ್ಟಲೆ ಜನರ ಮತದಾನದ ಹಕ್ಕು ಕಸಿದುಕೊಂಡು ಘೋರ ಅನ್ಯಾಯ ಮಾಡಿದಂತಾಗುವದೆಂದು ಜನರು ನಾಲ್ಕೂ ದಿಕ್ಕಿನಿಂದ ಗಲಬೆಯನ್ನೆಬ್ಬಿಸಲಾಗಿ, ೧೯೪೧ರ ಮತದಾರ ಯಾದಿಯಲ್ಲಿ ಹೆಸರಿಲ್ಲದ, ಆದರೆ ಮತಾಧಿಕಾರವುಳ್ಳ ಜನರು ಇದೇ ಬರುವ ತಾ. ೧೫-೯-೧೯೪೫ರೊಳಗಾಗಿ ಯೋಗ್ಯ ಅಧಿಕಾರಿಗಳಿಗೆ ಅರ್ಜಿ ಮಾಡಿದಲ್ಲಿ ಪುರವಣಿ ಮತದಾರ ಯಾದಿಗಳನ್ನು ಹೊರಡಿಸಿ ಆ ಅರ್ಜಿದಾರರ ಹೆಸರುಗಳನ್ನು ಆ ಯಾದಿಗಳಲ್ಲಿ ಸೇರಿಸಲಾಗುವದೆಂದು ಮೊನ್ನೆಯೇ ಮುಂಬಯಿ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ ಜಾಹೀರ ಮಾಡಿದ್ದಾರೆ ಈ ಸಂಧಿಯ ಲಾಭ ತಕ್ಕೊಂಡು ಮತಾಧಿಕಾರವುಳ್ಳ (ಆದರೆ ೧೯೪೧ರ ಯಾದಿಗಳಲ್ಲಿ ಹೆಸರು ನಮೂದಾಗದ) ಸಕಲ ಸ್ತ್ರೀ ಪುರುಷರು ಈ ಕೂಡಲೆ ಮೆ॥ ಕಲೆಕ್ಟರ ಸಾಹೇಬ ಕಾನಡಾ ಇವರಿಗೆ ಅರ್ಜಿ ಮಾಡಿ, ತಮ್ಮ ಹೆಸರುಗಳನ್ನು ಹೊಸ ಪುರವಣಿ ಮತದಾರ ಯಾದಿಗಳಲ್ಲಿ ಸೇರಿಸಲು ಬಿನ್ನವಿಸಬೇಕಾಗಿ ಆಗ್ರಹದ ಸೂಚನೆಯಿದೆ ನಮ್ಮ ಜಿಲ್ಹೆಯಲ್ಲಿ ಈಗ ಮತಾಧಿಕಾರ ಸಿಕ್ಕ ಪರಂತು ಯಾದಿಗಳಲ್ಲಿ ಹೆಸರು ಇಲ್ಲದ ಸಾವಿರಗಟ್ಟಲೆ ಜನರು ಇದ್ದಾರೆಂದು ಕಂಡುಬಂದಿದೆ ಅಲ್ಲಲ್ಲಿಯ ಕೊಂಗ್ರೆಸ ಕಾರ್ಯಕರ್ತರೂ ಇನ್ನಿತರ ಲೋಕಸೇವಕರೂ ಕೂಡಲೆ ಟೊಂಕ ಕಟ್ಟಿ ಇಂತಹ ಜನರಿಂದ ಅರ್ಜಿಗಳನ್ನು ಬರೆಯಿಸಿಕೊಂಡು ಅವನ್ನು ಬರುವ ಶುಕ್ರವಾರ ಸಂಜೆ ೫ ಘಂಟೆಯೊಳಗಾಗಿ ಜಿಲ್ಹಾಧಿಕಾರಿಗಳ ಕಚೇರಿಗೆ ತಲ್ಪಿಸುವ ವ್ಯವಸ್ಥೆ ಮಾಡಬೇಕೆಂತಲೂ ಸೂಚನೆಯಿದೆ ಭಾವಿ ಹಿಂದೀರಾಜ್ಯಘಟನೆಯನ್ನು ತಯಾರಿಸುವದಕ್ಕಾಗಿ ಪ್ರಜಾಪ್ರತಿನಿಧಿ ಸಭೆಯನ್ನು ಆರಿಸುವ ಅತ್ಯಂತ ಮಹತ್ವದ ಹೊಣೆ ಪ್ರಾಂತಿಕ ಕಾಯದೆ ಮಂಡಳಗಳ ಸದಸ್ಯರ ಮೇಲೆ ಬೀಳುವದು ಆದರಿಂದ ಮುಂಬರುವ ಚುನಾವಣೆಗಳಿಗೆ ಅತಿಶಯ ಮಹತ್ವವಿದೆ ಕಾರಣ ಯಾರೂ ಅಜಾಗ್ರತೆ ಮಾಡದೆ ಕೂಡಲೆ ಮತದಾರ ಯಾದಿಯಲ್ಲಿ ತಮ್ಮ ಹೆಸರು ನೋಂದಿಸಿಕೊಳ್ಳಲು ಪ್ರಯತ್ನ ಮಾಡಬೇಕಾಗಿ ಆಟಕೆಯಿದೆ

ಮತಾಧಿಕಾರ ಯಾರಿಗುಂಟು ?

(೧) ರೂ ೮ ಯಾ ಹೆಚ್ಚು ಕೀರ್ವೆ ತೆರುವ ಖಾತೆದಾರರು, (೨) ರೂ ೮ ಯಾ ಹೆಚ್ಚಿಗೆ ಕೀರ್ವೆಯುಳ್ಳ ಭೂಮಿ ಗೇಣಿಗೆ ಹಿಡಿದವರು, (೩) ನಗರಗಳಲ್ಲಿ ರೂ ೧೮ ಯಾ ಹೆಚ್ಚು ವಾರ್ಷಿಕ ಬಾಡಿಗೆಯುಳ್ಳ ಮನೆಗಳಲ್ಲಿ ವಾಸಿಸುವರು, (೪) ರೂ ೭೫೦ ಯಾ ಹೆಚ್ಚಿಗೆ ಬೆಲೆಯುಳ್ಳ ಮನೆಗಳ ಮಾಲಿಕರು, (೫) ಮೆಟ್ರಿಕ್ ಯಾ ತತ್ಸಮ ಪರೀಕ್ಷೆ ಕೊಟ್ಟವರು, (೬) ಓದು ಬರಹ ಬಲ್ಲ ಹೆಂಗಸರು, (೭) ಓದು ಬರಹ ಬಲ್ಲ ಹಿಂದುಳಿದ (ಶೆಡ್ಯೂಲ್ಡ) ವರ್ಗದವರು. ಮೇಲಿನ ಪೈಕಿ ಯಾವದೇ ಒಂದು ಪಾತ್ರತೆಯುಳ್ಳ ೨೧ ವರ್ಷ ಪ್ರಾಯದವರಿಗೆ ಮತಾಧಿಕಾರದ ಹಕ್ಕು ಉಂಟು

ಶಿರಸಿ— (ತಾ ೮-೯-೪೫) ಕಳೆದ ಬುಧವಾರ ದಾಸನಕೊಪ್ಪದಿಂದ ಸರಕಾರಿ ಭತ್ತ ಏರಿಕೊಂಡು ಇಲ್ಲಿಗೆ ಬರುತ್ತಿದ್ದ ಮೋಟಾರ ಬಂಡಿಯು ದಾಸನಕೊಪ್ಪದಿಂದ ೩-೪ ಮೈಲು ಈಚೆಗೆ ಒಂದುಕಡೆ ತಲೆ ಕೆಳಗಾಗಿ ಮಗುಚಿ ಒಂದು ದೊಡ್ಡ ಅನಾಹುತವಾಯಿತು ಬಂಡಿಯಲ್ಲಿ ಆಗ ಡ್ರಾಯ್ವರ, ಕ್ಲೀನರ ಮತ್ತು ೬ ಮಂದಿ ಹಮಾಲರಿದ್ದರಂತೆ ೪ ಮಂದಿ ಹಮಾಲರು ಅಲ್ಲಿಂದಲ್ಲೇ ಮೃತಪಟ್ಟರು! ಉಳಿದವರನ್ನು ಹಿಂದಿನಿಂದ ಬಂದ ಬೇರೊಂದು ಮೋಟಾರ ಬಂಡಿಯವರು ಇಲ್ಲಿಯ ಆಸ್ಪತ್ರೆಗೆ ತಂದು ಮುಟ್ಟಿಸಿದರು ಅವರಲ್ಲೊಬ್ಬ ಹಮಾಲನು ಮರುದಿನ ಸತ್ತನು ಡ್ರಾಯ್ವರ, ಕ್ಲೀನರ ಮತ್ತು ಇನ್ನೊಬ್ಬ ಹಮಾಲ ಹೀಗೆ ಮೂವರು ಮಾತ್ರ ಬದುಕಿದ್ದು ಇನ್ನೂ ಆಸ್ಪತ್ರೆಯಲ್ಲಿದ್ದಾರೆ ಈ ಅಪಘಾತಕ್ಕೆ ಕಾರಣವೇನಾಯಿತೆಂಬುದರ ತಪಾಸಣೆ ನಡೆದಿದೆ

ಯುದ್ಧ ಮುಗಿದರೂ ಯುದ್ಧದ ಬೀಜ ಸತ್ತಿಲ್ಲ!

(ನಿರೀಕ್ಷಕನು ಬರೆದುದು)

ಸಂಯುಕ್ತ ರಾಷ್ಟ್ರಗಳೆಂಬ ನಾಮಾಭಿಧಾನದಿಂದ ಲೋಕದಲ್ಲಿ ಎಲ್ಲೆಲ್ಲೂ ಲೋಕಸ್ವಾತಂತ್ರ್ಯ ಪ್ರಸ್ಥಾಪಿಸುವದಕ್ಕೂ, ಆ ಸ್ವಾತಂತ್ರ್ಯದ ಕಡು ವೈರಿಗಳಾದ ಜರ್ಮನಿ-ಜಪಾನಗಳ ರಣಸೊಕ್ಕು ಮುರಿಯಲಿಕ್ಕೂ ಒಟ್ಟುಗೂಡಿದ ಮಿತ್ರರು ಈಗ ಆ ಪ್ರಬಲ ವೈರಿಗಳ ಪತನವಾದ ಕೂಡಲೇ ತಮ್ಮೊಳಗೇ ಕಚ್ಚಾಟ ಮಾಡಲಿಕ್ಕೆ ಅಣಿಯಾಗಿದ್ದಾರೆ ಎಲ್ಲ ಜನಾಂಗಗಳಿಗೆ ಸ್ವಾತಂತ್ರ್ಯ ಕೊಡುವ ಮಾತು ಈಗ ಎಲ್ಲೂ ಕೇಳಬರುವದಿಲ್ಲ! ರುಶ್ಯರೂ ಬ್ರಿಟಿಶರೂ, ಫ್ರೆಂಚರೂ ಅಮೇರಿಕೆಯವರೂ ತಮ್ಮ ರಾಜ್ಯ ವಿಸ್ತಾರ ಮಾಡಿಕೊಳ್ಳಲಿಕ್ಕೆ ಇಲ್ಲವೆ ಇದ್ದ ಸಾಮ್ರಾಜ್ಯವನ್ನು ಭದ್ರವಾಗಿ ಕಾಪಾಡಿಕೊಳ್ಳಲಿಕ್ಕೆ ಹೆಣಗಾಡುತ್ತಿದ್ದಾರೆ ಶಾಂತಸಾಗರದೊಳಗೆ ಜಪಾನಿಯರಿಂದ ಕಸಕೊಂಡ ನಡುಗಡ್ಡೆಗಳೆಲ್ಲ ಅಮೇರಿಕೆಗೆ ಬೇಕಂತೆ! ಅಮೇರಿಕೆಯ ಭದ್ರತೆಗೆ ಹಾಗೂ ಆ ಕಡೆಯ ಶಾಂತಿ-ಸುರಕ್ಷಿತತೆಗಳ ಭದ್ರತೆಗೆ ಅವು ಅಮೇರಿಕೆಯವರ ಕೈಯಲ್ಲಿರಬೇಕು! ಅಮೇರಿಕೆಯ ಪೂರ್ವ ಕರಾವಳಿಗೆ ಹೊಂದಿ ಬ್ರಿಟಿಶರ ಬರ್ಮುಡಾ ದ್ವೀಪವುಂಟು ಯುದ್ಧ ಕಾಲದಲ್ಲಿ ಅಲ್ಲಿ ಅಮೇರಿಕೆಯವರಿಗೆ ವಿಮಾನ ಠಾಣ್ಯಗಳನ್ನು ಹಾಕಲು ಬ್ರಿಟಿಶರು ಆಸ್ಪದ ಕೊಟ್ಟಿದ್ದರು ಅಮೇರಿಕೆಯವರು ಈಗ ಈ ನಡುಗಡ್ಡೆಯನ್ನು ತಮ್ಮ ಜೇಬಿನಲ್ಲಿ ಹಾಕಿಕೊಳ್ಳಬಯಸುತ್ತಿದ್ದಾರೆ! ಆಫ್ರಿಕೆಯೊಳಗಿನ ಇಟಾಲಿಯ ವಸಾಹತುಗಳ ಮೇಲೆ ಬ್ರಿಟಿಶರ ಕಣ್ಣುಂಟು! ಬ್ರಿಟಿಶ ಸಾಮ್ರಾಜ್ಯದ ಹೆದ್ದಾರಿಯಾದ ಕೆಂಪು ಸಮುದ್ರದ ಸುತ್ತಲು ಬ್ರಿಟಿಶರದೇ ಸತ್ತೆ ಉಳಿಯಬೇಕಂತೆ ಸುಯೇಝು ಕಾಲುವೆಯು ಬಳಿ ಇಜಿಪ್ತದಲ್ಲಿ ಆ ಕಾಲುವೆಯ ಸಂರಕ್ಷಣೆಗಾಗಿ ಬ್ರಿಟಿಶರ ಸೈನ್ಯವುಂಟು ಅದನ್ನು ತೆಗೆಯಲು ಇಜಿಪ್ತ ಸರಕಾರವು ಕೇಳಿಕೊಂಡರೂ ಬ್ರಿಟಿಶರು ಒಪ್ಪುವದಿಲ್ಲ! ಇದೀಗ ಬ್ರಿಟನ್ನಿನಲ್ಲಿ ಕೂಲಿಕಾರ ಪಕ್ಷದ ಸರಕಾರ ಸತ್ತಾಧಿಕಾರಿಯಾಗಿರುವದರಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗಲು ಅಡ್ಡಿಯಾಗಲಿಕ್ಕಿಲ್ಲೆಂದು ನಂಬುವವರಿಗೆ ನಾನೊಂದು ಎಚ್ಚರಿಕೆ ಕೊಡುತ್ತೇನೆ ಹಿಂದುಸ್ಥಾನದ ಸಂಬಂಧದಲ್ಲಿ ಬ್ರಿಟಿಶ ಕೂಲಿಕಾರರೂ ಪುರಾಣ ಮತವಾದಿಗಳೂ ಒಂದೇ! ಪುರಾಣ ಮತವಾದಿಗಳಷ್ಟೇ ಕೂಲಿಕಾರರಿಗೂ ಸಾಮ್ರಾಜ್ಯದ ಅಭಿಮಾನ ಅಭಿಲಾಷೆಗಳುಂಟು! ಇಲ್ಲದಿದ್ದರೆ ಹೊಂಗಕೊಂಗದಂತಹ ಚಿಕ್ಕ ನಡುಗಡ್ಡೆಯ ಸಲುವಾಗಿ ಹೊಸ ಮುಖ್ಯಮಂತ್ರಿ ಕ್ಲೆಮೆಂಟ ಅಟ್ಲೀ [illegible] ಚೀನದೊಡನೆ ಜಗಳಾಡುತ್ತಿದ್ದಿಲ್ಲ! ರುಶ್ಯರಂತೂ ಸದ್ದಿ-ಸಪ್ಪಳಿಲ್ಲದೆ ತಮ್ಮ ವಿಶಾಲ ರೆಕ್ಕೆಗಳನ್ನು ಅತ್ತ ಪೂರ್ವದಲ್ಲೂ ಇತ್ತ ಪಶ್ಚಿಮದಲ್ಲೂ ಪಸರಿಸಿ ಹೆಚ್ಚೆಚ್ಚು ಪ್ರದೇಶವನ್ನೂ ಜನಾಂಗಗಳನ್ನೂ ತಮ್ಮ ಪ್ರಭಾವಳಿಯಲ್ಲಿ ಸೇರಿಸಿಕೊಳ್ಳುತ್ತಿದ್ದಾರೆ! ಇಡೀ ಜರ್ಮನಿಯನ್ನು ರುಶ್ಯರೇ ಆಳುವಂತೆ ತೋರುತ್ತಿದೆ ಬಾಲ್ಕನ ದೇಶಗಳೆಲ್ಲವೂ ಅವರ ಕೈಯೇ ಮೇಲಾಗಿದೆ ಇಂಡೋ ಚೀನದಲ್ಲಿ ಹಿಂದೆ ಫ್ರೆಂಚರ ಅಧಿರಾಜ್ಯವಿತ್ತು ಜಪಾನರ ಶರಣಾಗತಿಯ ನಂತರ ಅಲ್ಲಿಯ ಪ್ರಜೆಗಳು ಪ್ರಜಾ-ಸತ್ತಾತ್ಮಕ ಸರಕಾರ ಸ್ಥಾಪಿಸಿಕೊಂಡಿದ್ದಾರೆ ಫ್ರೆಂಚರು ಈ ಸರಕಾರವನ್ನು ಮನ್ನಿಸುವ ಲಕ್ಷಣಗಳಿಲ್ಲ! ಅವರಿಗೂ ಸಾಮ್ರಾಜ್ಯ ಬೇಕು! ಈ ಸಾಮ್ರಾಜ್ಯತೃಷ್ಣೆಯೇ ಯುದ್ಧಗಳಿಗೆ ಕಾರಣ ಇಂದು ಲಂಡನದಲ್ಲಿ ಮಿತ್ರರಾಷ್ಟ್ರಗಳ ವಿದೇಶ-ಸಚಿವರ ಪರಿಷತ್ತು ಕೂಡಲಿದೆ. ಅದರಲ್ಲಿ ಮಿತ್ರರೊಳಗಿನ ತಕರಾರಿಯ ಅನೇಕ ಪ್ರಶ್ನೆಗಳು ಚರ್ಚೆಗೆ ಬರಲಿವೆಯಂತೆ ಚರ್ಚೆಯ ಕಾಲಕ್ಕೆ ಪರಿಷತ್ತಿನಲ್ಲೇ ಘರ್ಷಣೆ ಹೆಚ್ಚಾಗಿ ಸ್ಫೋಟವಾಗದಿದ್ದರೆ ಸಾಕು! ಬಲವಂತರು ಸಾಮ್ರಾಜ್ಯ ತೃಷ್ಣೆಯನ್ನು ಬಿಡದಿದ್ದರೆ ಮೂರನೆಯ ಮಹಾಯುದ್ಧ ಕಟ್ಟಿಟ್ಟದ್ದೇ!

ವಿಘ್ನೇಶ್ವರನಿಗೆ ವಂದನೆ.

ಮಂಗಲಾತ್ಮನೇ, ಜಗತ್ತಿಗೆ ಮಂಗಲ ನೀಡು
ಭಾರತಕ್ಕೆ ಸ್ವರಾಜ್ಯ-ಸುಖ ಕೊಡು
ಎಲ್ಲೆಲ್ಲೂ ಶಾಂತಿಯನ್ನುಂಟು ಮಾಡು

ಸ್ಥಾನಿಕ ವೃತ್ತಾಂತ.

(೪ನೇ ಪುಟದಿಂದ ಮುಂದರಿಸಿದ್ದು)

ಕಾಸರಕೋಡ, ಕೆಳಗನೂರ ಹೊಸಪಟ್ಟಣ ವಗೈರೆ ೬ ಗ್ರಾಮಗಳ ಬಗ್ಗೆ ಸರಿದ ಯೋಗ್ಯ ದರದ ಅಂಗಡಿಯನ್ನು ಈಗ ೨ ವರ್ಷಗಳಿಂದ ಕೆಳಗನೂರ ಗ್ರಾಮಸುಧಾರಣಾ ಕಮಿಟಿಯ ಪರವಾಗಿ ಚೇರಮನ್ನ ಪಟೇಲರು ನಡಿಸುತ್ತಿದ್ದಾರೆ ಈ ಪಟೇಲರು ಅಂಗಡಿ ನಡಿಸಲಿಕ್ಕೆ ಅಪಾತ್ರರೆಂದು ಹಿಂದೊಮ್ಮೆ ಇಲ್ಲಿಯ ಮಾಮಲೇದಾರರು [illegible] ಆ ಅಂಗಡಿಯನ್ನು ನಡಿಸಲು ಹೊಸದೊಂದು ಪ್ರತ್ಯೇಕ ಮಂಡಳವನ್ನು ಏರ್ಪಡಿಸಿದ್ದರಂತೆ ಮುಂದೇನಾಯಿತೆಂದು ಆ ಪಟೇಲರಿಗೆ ಗೊತ್ತು, ಮಾಮಲೇದಾರರಿಗೆ ಗೊತ್ತು, ಅಂಗಡಿ ಪಟೇಲರ ಕಡೆಗೇ ಉಳಿಯಿತು! ಅಂಗಡಿಯಲ್ಲಿ ಉಳಿಯಬಹುದಾದ ಲಾಭ-ಹೇರಳವಾಗಿರಬೇಕೆಂದು ಜನರ ಊಹೆಯುಂಟು.— ಗ್ರಾಮಪಂಚಾಯತಿನ ಲೆಕ್ಕದಲ್ಲಿ ಜಮೆಯಾಗುತ್ತಿದ್ದರೆ ಒಂದು ವೇಳೆ ಅಂಗಡಿಯಲ್ಲಾಗುವ ಕಷ್ಟ-ಪೀಡೆಗಳನ್ನು ಜನರು ಮರೆಯಬಹುದಾಗಿತ್ತು, ಆ ಲಾಭವೆಲ್ಲೂ ಕಣ್ಣಿಗೆ ಬೀಳುವದಿಲ್ಲವಂತೆ! ಈಗ ಆ ಪಟೇಲರಿಗೆ ಲಂಚ ತಕ್ಕೊಂಡ ಆರೋಪವಿಟ್ಟು ಸಸ್ಪೆಂಡ ಮಾಡಿದ್ದಾರೆ ಇಂಥವರ ಕಡೆ ಅಂಗಡಿಯನ್ನು ಇನ್ನೂ ಇಡಬಹುದು

ಭಟಕಳ— (ತಾ ೭-೯-೪೫) ಊರ ತುಂಬ ಸರಾಯಿಯ ವ್ಯಾಪಾರ ನಡೆಯುತ್ತಿದ್ದರೂ ಅಬಕಾರಿ ಶಿಬಂದಿಯು ಎಲ್ಲೋ ಕಣ್ಣುಮುಚ್ಚಿಕೊಂಡು ಕುಳಿತಿದೆ! ಮದ್ಯನಿರೋಧದ ಬರುವ ಮುಂಚೆ ಇಷ್ಟು ಸರಾಯಿಯ ಪ್ರಚಾರವಿದ್ದಿಲ್ಲವಂತೆ ಕಳೆದ ವಾರ ಮಹಾಲ್ಕರಿಯವರ ಕಚೇರಿಯಲ್ಲಿ ಒಂದು ಖಟ್ಲೆ ವಿಚಾರ ನಡೆಯುತ್ತಿರುವಾಗ ಮೆಜಿಸ್ಟ್ರೇಟ ಕಾರಕೂನನಿಗೆ ಸರಾಯಿಯ ಅಮಲೇರಿ ಆತನು ಮಹಾಲ್ಕರಿಯವರಿಗೂ ಕಂಡಕಂಡವರಿಗೂ ಬಾಯಿಗೆ ಬಂದಂತೆ ಬೈದು ಕಚೇರಿ ತುಂಬ ಗೊಂದಲವನ್ನುಂಟುಮಾಡಿದ್ದರು ಇವರ ಸಹಾಯದಿಂದ ಕಳ್ಳ ಸರಾಯಿ ಪತ್ತೆ ಹಿಡಿಯಲು ಬಹಳ ಅನುಕೂಲವುಂಟು ([illegible]ನೇ ಕಾಲಂ ನೋಡಿರಿ)

The Agricultural & Industrial Bank, Ltd.
[Incorporated in British India, Liability of Members limited]
Head Office COONDAPOOR. S. I.
Branches -
ANKOLA
BELGAUM
COONDAPOOR
DHARWAR
GOKARN,
HAVERI,
HUBLI
KARWAR
KUMTA,
MANGALORE
NAGAR,
SHIMOGA
SIRSI
SOMWARPET
VIRAJPET.
All kinds of Banking Business transacted.
Paid-up Capital & Reserves exceed Rs 4 LAKHS
Please apply for particulars.
1-9-1945

ಜಿಲ್ಲಾ ಲೋಕಲ್‌ಬೋರ್ಡಿನ ಸಭಾಸದರ ಪರಾಂಬರಿಕೆಗಾಗಿ—

ಲೋಕಲ್ಫಂಡನ್ನು ಏರಿಸಬೇಡಿ! ಈಗಿದ್ದ ಹೊರೆಯೇ ಹೆಚ್ಚು!

ಗಳೆಯರೇ,

೧ [illegible] ೩೦-೯-೪೫ನೇಯ ದಿನಕ್ಕೆ ಕೂಡುವ ಬೋರ್ಡಿನ ವಿಶೇಷ ಸಭೆಯಲ್ಲಿ ಲೋಕಲ್ಫಂಡು ಏರಿಸುವ ಸೂಚನೆಯು ಬರುವದಿದೆ ಲೋಕಲ್ಫಂಡನ್ನು ಏರಿಸಿಕೊಳ್ಳಬೇಕಾಗಿ ಅಧ್ಯಕ್ಷರು ತಮ್ಮ ಅಭಿಪ್ರಾಯ [illegible] ಕಾರಣ [illegible] ವರ್ತಮಾನ ಪತ್ರದ ದ್ವಾರಾ ತಿಳಿಸಿರುತ್ತಾರೆ ಈ ಸಂಬಂಧವಲ್ಲಿ ನನ್ನ [illegible] ಕೆಲವು ಮಾತುಗಳನ್ನು ತಿಳಿಸಬಯಸುತ್ತೇನೆ ಅವನ್ನು ನೀವು ಅವಶ್ಯ ಪರಾಂಬರಿಸಬೇಕು

೨ ಲೋಕಲ್ಫಂಡು ಈಗಿನ [illegible] ಅದನ್ನು ಇಮ್ಮಡಿ ಮಾಡುವ ಅಧಿಕಾರ ಬೋರ್ಡಿಗಿದೆ ಆದರೆ [illegible] ಬೋರ್ಡಿಗೆ [illegible] ಒಮ್ಮೆ ಏರಿಸಿಕೊಂಡರೆ ಅದನ್ನು ಪುನಃ ಇಳಿಸಲಿಕ್ಕೆ ಬೋರ್ಡಿಗೆ ಅಧಿಕಾರವಿಲ್ಲ!

೩ ಅಧ್ಯಕ್ಷರು ತಮಗೆ ಕೊಟ್ಟ ವಾರ್ಷಿಕ ಪತ್ರಿಕೆಯಂತೆ ಬೋರ್ಡಿನ ದಿನಚರಿ ಖರ್ಚಿಗೆ ಇನ್ನು ರೂ ೭೩೬೪೪ [illegible] ತೆಗೆದ [illegible] ರೂ ೧೭೦೦೦, ಮಂಜೂರಾದ ಕಾಮಗಾರಿಗಳನ್ನು ಪೂರ್ಣಮಾಡಲಿಕ್ಕೆ ರೂ ೧೪ [illegible], ಸರಕಾರದ ಆಜ್ಞೆಯಂತೆ ಮ್ಯುನಿಸಿಪಾಲಿಟಿಗಳಿಗೆ ವರ್ಗಣಿ ಕೊಡಲು ರೂ [illegible], [illegible] ಗಳನ್ನು ಕಟ್ಟಿಸಲಿಕ್ಕೆ ರೂ ೧೦೫೦೦, ಮೋಟಾರ್ ಮಾರ್ಗಗಳ ದುರುಸ್ತಿ [illegible] ರೂ ೧,೦೭ ೦೦೦ ಬೇಕು ಕಾರಣ ಬೋರ್ಡಿಗೆ ರೂ [illegible] ಕೊರತೆ ಬೀಳುತ್ತದೆಂದು ಅಧ್ಯಕ್ಷರು ಹೇಳುತ್ತಾರೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತುಟ್ಟಿ ಭತ್ಯ, ಕಟ್ಟಡದ ಭತ್ಯ ಕೊಡಲು [illegible] ರೂ [illegible] ಬೇಕಾದರೆ ಲೋಕಲ್ಫಂಡನ್ನು ಏರಿಸಿದಲ್ಲಿ ಬರುವದೆಂದರೆ ರೂ ೫೬೦೦೦ [illegible] ಅದರಲ್ಲಿ [illegible] ಬೋರ್ಡಿಗೆ ರೂ ೧೯೩೩೪ ಮತ್ತು ಲೋಕಲ್ಬೋರ್ಡಿಗೆ ರೂ ೩೪೪೬೭ ದೊರೆಯುವ [illegible] ಮ್ಯುನಿಸಿಪಾಲಿಟಿಗಳಿಗೆ ಪಾವತಿಯಾಗುತ್ತದೆ ಲೋಕಲ್ಫಂಡನ್ನು ಏರಿಸಿದಲ್ಲಿ ರೂ ೨೦೦೦೦ [illegible] ಉತ್ಪನ್ನ [illegible] ಅಧ್ಯಕ್ಷರಿಗೆ ಜಿಲ್ಹಾಧಿಪರು ಅತಿ ಕೋರಿ [illegible] ಲೋಕಲ್ಫಂಡನ್ನು [illegible] ಬೋರ್ಡಿನ ವಾರ್ಷಿಕ ಉತ್ಪನ್ನ ರೂ ೩೪೪೬೭ ರಿಂದಲೂ [illegible] ಬೋರ್ಡಿನ ಉತ್ಪನ್ನ ರೂ [illegible] ಹೆಚ್ಚುವದು ಜಿಲ್ಹಾಧಿಪರ ಸಹಾನುಭೂತಿಯ ಸಹಾಯದ ರೂ ೨೦೦೦೦ [illegible] ರೂ ೫೪೪೬೭ಕ್ಕೆ ಮಿಕ್ಕಿ ಬೋರ್ಡಿಗೆ ಪ್ರಾಪ್ತಿಯಾಗಲಿಕ್ಕಿಲ್ಲ ಈ ರೂ [illegible] ಸಿಗುವದೆಂಬ ಹಂಚಿಕೆಯನ್ನು ಅಧ್ಯಕ್ಷರು ಹೇಳಿಲ್ಲ! [illegible] ಬೋರ್ಡಿಗೆ [illegible] ರೂ [illegible] ಭತ್ತೆಯನ್ನು ಶಿಕ್ಷಕರಿಗೆ ಹಂಚುವ ಬಗೆ ಹೇಳುವದೂ ಅವರು ತಿಳಿಸಿಲ್ಲ!

೪ ಈ ವಿವರದಿಂದ ಲೋಕಲ್ಫಂಡನ್ನು ಇಮ್ಮಡಿಗೆ ಏರಿಸಿಕೊಂಡರೂ ಬೋರ್ಡಿನ ಬಡಸ್ಥಿತಿ ನೀಗುವದಿಲ್ಲೆಂಬ ಮಾತು ತಿಳಿದೀತು [illegible] ಇಮ್ಮಡಿ ಲೋಕಲ್ಫಂಡ ತೆರುವ ಸಾಮರ್ಥ್ಯ ರೈತರಲ್ಲಿ ಬಂದಿರಾನುವೇಳೆ ಇರುತ್ತದೆ [illegible] ಲೋಕಲ್ಬೋರ್ಡುಗಳ ಸಾಂಪತ್ತಿಕ ಸ್ಥಿತಿ ಸುಧಾರಿಸುವ ಮಾರ್ಗಗಳನ್ನು [illegible] ಮುಂಬಯಿ ಸರಕಾರವು ಶಾಲೇ ಮಂಡಳವನ್ನು ನೇಮಿಸಿತ್ತು ಈ ಮಂಡಳವು [illegible] ತೆರಿಗೆ [illegible] ಶಕ್ತಿ [illegible] ಕರ ಕಡಿಮೆಯೆಂದೂ, ಕೇಂದ್ರ [illegible] ಪ್ರಾಂತಿಕ ಸರಕಾರಗಳು [illegible] ತೆರಿಗೆಗಳನ್ನು [illegible] ಜನಸಾಮಾನ್ಯರ ತೆರಿಗೆ ತೆರುವ ಶಕ್ತಿಯ [illegible] ಪ್ರಯೋಜನ [illegible], ಜಂಗಲ ಇಲಾಖೆಯ ಉತ್ಪನ್ನದ ಮೇಲೆ ಆಣೆಪಟ್ಟಿ [illegible] ಭೂಕಂದಾಯದ [illegible] ಬೋರ್ಡುಗಳ ಉತ್ಪನ್ನ ಬೆಳೆಸಿಕೊಡಬೇಕೆಂದು ಸೂಚಿಸಿದ್ದುಂಟು ಸರಕಾರವು [illegible] ಈ ಪ್ರಸಂಗದಲ್ಲಿ ಮಾತ್ರ ಲೋಕಲ್ಫಂಡನ್ನು ೧ ಆಣೆಯಿಂದ ೨ [illegible] ಎಲ್ಲ ಜಿಲ್ಹೆಗಳ ಪರಿಸ್ಥಿತಿ ಒಂದೇ ಇರುವದಿಲ್ಲ [illegible] ತಮ್ಮ ತಮ್ಮ [illegible] ಏರಿಸಿಕೊಳ್ಳಬೇಕೆಂತಲೂ ಮಂಡಳವು ಸ್ಪಷ್ಟ ನಮೂದಿಸಿದ್ದುಂಟು

೫ ಇಡೀ ಪ್ರಾಂತದಲ್ಲಿ ನಮ್ಮ ಜಿಲ್ಹೆ ತೀರ ಬಡ ಜಿಲ್ಹೆ ಬೇಸಾಯವೇ ಇಲ್ಲಿಯ ಮುಖ್ಯ ಹೊರೆ ಜಿಲ್ಹೆಯ [illegible] ಅಡವಿ [illegible] ಬೇಸಾಯಕ್ಕೂ ಬಹಳ ಕಷ್ಟಗಳು ಒದಗುತ್ತಿವೆ ಇಡೀ ಜಿಲ್ಹೆಯ ವಿಸ್ತಾರ ೩೯೪೬ ಚದುರ ಮೈಲುಗಳಷ್ಟು ಇರುತ್ತದ್ದು, ಅದರಲ್ಲಿ ೩೦೦೦ ಚದುರ ಮೈಲು ಅಡವಿಯಾಗಿರುತ್ತದೆ ಕೀರ್ದಿಯ ಮಾನ ಈ ಜಿಲ್ಹೆಯ [illegible] ಭಾಗಗಳಲ್ಲಿ ಸರಾಸರಿ ಎಕರೆ ೧ಕ್ಕೆ ರೂ ೧೪ ಮತ್ತು [illegible] ಭಾಗದಲ್ಲಿ ರೂ ೪೦ರಿಂದ [illegible] ಉಂಟು [illegible] ಕೀರ್ದಿಯ ಮಾನ [illegible] ಜಿಲ್ಹೆಯಲ್ಲೂ ಇಲ್ಲ ಬೇರೆ ಜಿಲ್ಹೆಗಳೊಳಗಿನ ಕೀರ್ದಿಯ ಮಾನವನ್ನು [illegible] ಲೋಕಲ್ಫಂಡು ರೂ [illegible] ಆಣೆಗೂ [illegible] ಜಿಲ್ಹೆಯಲ್ಲಿ ಹುಟ್ಟುವಳಿ ಕಡಿಮೆ, ಆದರೆ ಎಷ್ಟು [illegible] ಹೀಗಿರಲು ಇಲ್ಲಿಯ ರೈತರು ಬಹಳ ಕಂಗೆಟ್ಟಿದ್ದಾರೆ! ತೋಟ [illegible] ಕೆರೆ ಬಂದಂತಾ ತೋಟಿಗರು ಗತಿಗೆಟ್ಟಿದ್ದಾರೆ! ತೆರಿಗೆಗಿಂತ ಬೆರಿಗೆ [illegible] ಉಪಟಳವೇ ಹಿರಿದಾಗಿದೆ! ಶಾಲೇ ಮಂಡಳದ ಶಿಫಾರಸಿನಂತೆ ಭೂಕಂದಾಯದಲ್ಲಿ ಅಂಶ ಪಡೆಯಲು ಬೋರ್ಡಿಗೆ ಹಕ್ಕುಂಟು ಅಡವಿ ಉತ್ಪನ್ನದಲ್ಲಿ ಆಣೆಪಟ್ಟಿ ಪಡೆಯಲಿಕ್ಕೂ ಹಕ್ಕುಂಟು ಸರಕಾರವು ಅವನ್ನು ಕೊಡಲು ಮೊಂಡತನದಿಂದ ನಿರಾಕರಿಸುತ್ತಿದೆ! ಪ್ರಾಥಮಿಕ ಶಿಕ್ಷಣದ ಖರ್ಚಿನಲ್ಲಿ ಬೇರೆ ಬೇರೆ ನಮೂನೆಗಳ ಮುಂದೊಡ್ಡಿ ಹಲವು [illegible] ಅನ್ಯಾಯ ಮಾಡಿ ಬೋರ್ಡಿಗೆ ಸಂಕಟಪಡಿಸಿದೆ! ಇಂಥ ಪರಿಸ್ಥಿತಿಯಲ್ಲಿ ಲೋಕಲ್ಫಂಡನ್ನು ಏರಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಅದನ್ನು ಏರಿಸಿಕೊಂಡರೂ ಪ್ರಯೋಜನವಿಲ್ಲ ಆದರಿಂದ ಲೋಕಲ್ಫಂಡಿನ ಏರಿಕೆಗೆ ನೀವೆಲ್ಲ ಬಲವಾದ ವಿರೋಧ ಮಾಡಬೇಕಾಗಿ ನನ್ನ ಬಿನ್ನಹವಿದೆ

೬ ಲೋಕಲ್ಫಂಡಿನ ಏರಿಕೆಗೆ ನೀವು ಒಪ್ಪದೆ ಬೋರ್ಡನ್ನು ಸರಕಾರವು ತನ್ನ ಆಧೀನ ಪಡಿಸಿಕೊಳ್ಳುವಂತೆ ಮಾಡಿದರೆ, ನೀವು ಲೋಕ-ಸೇವೆ ಮಾಡಿದಂತಾಗುವದು ಬೋರ್ಡಿಗೆ ಒಪ್ಪಿಸಿದ ಕೆಲಸಗಳನ್ನು ಸಾಗಿಸುವ ಪ್ರಥಮ ಹೊಣೆ ಸರಕಾರದ್ದು ಅದನ್ನು ಸರಕಾರವು ಬೋರ್ಡಿಗೆ ಒಪ್ಪಿಸಿ ತಾನು ನಾಮೆಯಾಗಿದೆ ನಮ್ಮ ಬ್ರಿಟಿಷ ಆಳರಸರ ಸ್ವದೇಶದಲ್ಲಿ ಈ ಕೆಲಸಗಳನ್ನು ಬೋರ್ಡಿನಂತಹ ಸ್ಥಾನಿಕ ಸಂಸ್ಥೆಗಳು ಮಾಡುತ್ತಿವೆಂಬುದು ನಿಜ ಆದರೆ ಆ ಸಂಸ್ಥೆಗಳಿಗೆ [illegible] ಪೂರ್ಣ ಭೂಕಂದಾಯ ಸಿಗುತ್ತದೆ ಸರಕಾರದ ಸಹಾಯ ಸಹಾನುಭೂತಿಗಾಗಿ ಭಿಕ್ಷೆ ಬೇಡುವ ಪ್ರಸಂಗ ಅವಕ್ಕಿಲ್ಲ ಈ ಸಂಗತಿ ಶಾಲೇ ಮಂಡಳದ ವರದಿಯಲ್ಲಿ ನಮೂದ ಮಾಡಿದ್ದುಂಟು ನಮ್ಮಲ್ಲಿಯ ಬೋರ್ಡು ಮ್ಯುನಿಸಿಪಾಲಿಟಿಗಳು ಹುಟ್ಟು ನಿಟ್ಟಿಗೂ ಕಲೆಕ್ಟರ-ಕಮೀಶನರರ ನಿಗ್ರಹಾನುಗ್ರಹಗಳಿಗೆ ಭೂಮಿಯಾಗಿವೆ! [illegible] ಅವರ ಕಡೆ [illegible] ಬೋರ್ಡನ್ನು ಸರಕಾರಕ್ಕೇ ಒಪ್ಪಿಸಿಬಿಡುವದು ಯಾವಾಗಲೂ ಶ್ರೇಯಸ್ಕರ ಜಿಲ್ಹೆಯ [illegible] ಆಡಳಿತೆಯನ್ನು ಸರಕಾರವೇ ನಡಿಸುತ್ತಿದೆ ಅದರಂತೆ ಬೋರ್ಡಿನ ಆಡಳಿತೆಯನ್ನೂ ಅದು ನಡಿಸಲಿ ಸರಕಾರದವರ ಕೂಡ ಜಗಳಾಡಲಿಕ್ಕೆ ಜನರಿಗೆ ಅನುಕೂಲವುಂಟು ಈಗ ಬೋರ್ಡಿನ ಕಡೆ ಏನಾದರೂ ದೂರು ಹೇಳಿಕೊಂಡರೆ, ಹಣದ ಅಡಚಣ, ಸರಕಾರದ [illegible] ಅಡಚಣಗಳನ್ನು ಕೇಳಬೇಕಾಗುತ್ತದೆ ಮತ್ತು ನಮ್ಮವರೇ ಅವನ್ನು ಹೇಳುವದರಿಂದ ನಾವು ಸುಮ್ಮಗಾಗಬೇಕಾಗುತ್ತದೆ! ಸರಕಾರದವರ ಕಡೆ ಬೋರ್ಡು ಹೋದರೆ ಮತ್ತು ಬೋರ್ಡನ್ನು ಅವರು ನಡಿಸಬೇಕಾದರೆ, ಆಯಾ ನ್ಯಾಯಗಳನ್ನು ಅವರು ಬಾಯಿಗೂಡಿಸಲೇಬೇಕಾದೀತು ಲೋಕಲ್ಫಂಡನ್ನು ಏರಿಸುವ ಹಕ್ಕು ಸರಕಾರಕ್ಕೆ ಇರುವದಾಗಿ [illegible] ೨ ಆಣೆಗಳಿಗೂ ಮಿಕ್ಕಿ ಏರಿಸಲಿಕ್ಕೆ ಅದಕ್ಕೆ ಹಕ್ಕಿಲ್ಲ ಸರಕಾರವೇ ಬೇಕಾದರೆ [illegible] ಮಾಡಲಿ ನಮ್ಮವರಾದ ನೀವು ಮಾತ್ರ ಬಲಾತ್ಕಾರ ಮಾಡಕೂಡದೆಂದು ನನ್ನ ಅರಿಕೆಯುಂಟು

೭ ಮುಂಬಯಿ ಪ್ರಾಂತದಲ್ಲಿ ೨೦ ಬೋರ್ಡುಗಳಿವೆ ಅವುಗಳಲ್ಲಿ ೬ ಬೋರ್ಡುಗಳಷ್ಟೇ ಲೋಕಲ್ಫಂಡನ್ನು ೨ ಆಣೆಗೆ ಏರಿಸಿವೆ ೩ ಬೋರ್ಡುಗಳು ೧ [illegible] ಆಣೆಗೂ, ಒಂದು ಬೋರ್ಡು ೧ [illegible] ಆಣೆಗೂ ಏರಿಸಿವೆ ಉಳಿದ ೯ ಬೋರ್ಡುಗಳು ಒಂದಾಣೆಯಷ್ಟೇ ಕಾಯಮಿಡಿಕೊಂಡಿವೆ ಇಂಥ ಬೋರ್ಡುಗಳಲ್ಲಿ ನಮ್ಮದೂ ಒಂದು ಶಾಲೇ ವರದಿಯಲ್ಲಿ ಈ ಪ್ರಕಾರ ಉಲ್ಲೇಖ ಉಂಟು ನಮ್ಮ ಬೋರ್ಡಿನ ವಿನಹ ಉಳಿದ ಎಲ್ಲ ಬೋರ್ಡುಗಳು ಆಣೆಪಟ್ಟಿ ಏರಿಸಿಕೊಂಡು ಸರಕಾರದಿಂದ ಬಹಳ ಪ್ರಯೋಜನ ಪಡೆದಿವೆಯೆಂದು ಅಧ್ಯಕ್ಷರು ಬರೆಯುತ್ತಾರೆ ಇದಕ್ಕೆ ಆಧಾರವೇನೆಂದು ತಿಳಿಯಲಿಲ್ಲ ಆಣೆಪಟ್ಟಿ ಏರಿಸಿಕೊಂಡ ಬೋರ್ಡುಗಳಿಗೆ ಸರಕಾರವು ಕೈಬಿಟ್ಟು ಸಹಾಯಮಾಡುತ್ತಿದ್ದ ಸಂಗತಿ ಶಾಲೇ ಮಂಡಳದ ವರದಿಯಲ್ಲಿಲ್ಲ ಅಧ್ಯಕ್ಷರ ವಿಧಾನಗಳನ್ನು ನೀವು ನಂಬಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ

೮ ಸರಕಾರಕ್ಕೆ ಬೋರ್ಡುಗಳ ಪ್ರಪಂಚದ ಅನುಭವವಿಲ್ಲ ಬೋರ್ಡಿಗೆ ಸಿಗಬಹುದಾದ ಉತ್ಪನ್ನದ ದಾರಿಗಳನ್ನು ಸರಕಾರವು ಆಕ್ರಮಿಸಿಕೊಂಡು ಅವುಗಳಿಗೆ ಉಪವಾಸ ಹಾಕುತ್ತಿದೆ ತನಗೆ ಸಿಗುವ ಉತ್ಪನ್ನ ತನ್ನ ಸ್ವಂತದ್ದೆಂದೂ ಅದರೊಳಗೆ ಪಾಲು ಕೇಳುವ ಹಕ್ಕು ಬೋರ್ಡುಗಳಿಗೆ ಇಲ್ಲೆಂದೂ ತಾನು ಸಹಾನುಭೂತಿಯಿಂದ ಕೊಟ್ಟಷ್ಟು ಹಣ ತಕ್ಕೊಂಡು ತನ್ನ ಉಪಕಾರಸ್ಮರಣ ಮಾಡುತ್ತಿರಬೇಕೆಂದೂ ಸರಕಾರದ ಅಂಬೋಣ ನಮ್ಮಲ್ಲಿಯ ಅಡವಿಯಿಂದ ಕೋಟ್ಯಾವಧಿ ಹಣ ಸರಕಾರಕ್ಕೆ ಪ್ರಾಪ್ತಿಯಾಗಿದೆ ಅದರಲ್ಲಿ ಏನೇನೂ ಪಾಲು ಕೊಡಲಿಕ್ಕೆ ಅದಕ್ಕೆ ಮನಸ್ಸಿಲ್ಲ! ಆದಾಯ ತೆರಿಗೆಯಿಂದ ಹಿಂದುಸ್ಥಾನ ಸರಕಾರಕ್ಕೆ ಲಕ್ಷಾವಧಿ ರೂಪಾಯಿಗಳ ಉತ್ಪನ್ನ ಸಿಗುತ್ತಿದೆ ಅದರಲ್ಲಿ ನಮ್ಮ ಪ್ರಾಂತಿಕ ಸರಕಾರಕ್ಕೆ ಪಾಲುಂಟು ಆದರೂ ಪ್ರಾಂತಿಕ ಸರಕಾರವು ಆ ತೆರಿಗೆಯೊಳಗಿಂದ ನಮ್ಮ ಬೋರ್ಡಿಗೆ ಏನೂ ಪಾಲು ಕೊಡುವದಿಲ್ಲ! ಇಂಥ ಶಾಸನಕ್ರಮದಲ್ಲಿ ಇಂದಲ್ಲ ನಾಳೆ ಬೋರ್ಡನ್ನು ಸರಕಾರಕ್ಕೆ ಒಪ್ಪಿಸುವ ಪ್ರಸಂಗ ಬಂದೇ ಬರುವದು ಲೋಕಲ್ಫಂಡು ಏರಿಸಿದ ಕೂಡಲೇ ಬೋರ್ಡಿನ ಆರ್ಥಿಕ ಸಮಸ್ಯೆ ಬಗೆಹರಿಯುವಂತಿಲ್ಲ ಅಂದಮೇಲೆ ಸರಕಾರವು ತಾನಾಗಿ ಬೋರ್ಡನ್ನು ಒಪ್ಪಿಸಿಕೊಳ್ಳುತ್ತೇನೆಂದು ಮುಂದಾದಾಗ ನೀವು ಆ ಸಂಧಿಯನ್ನು ಕಳಕೊಳ್ಳುವದೇಕೆ? ನಮ್ಮ ಬೋರ್ಡು ಸರಕಾರದ ವಶವಾದರೆ ಬೋರ್ಡುಗಳ ಆಡಳಿತೆಯ ಅಡಚಣೆಗಳಾದರೂ ಸರಕಾರಕ್ಕೆ ತಿಳಿದು ಬಂದು ಅವುಗಳ ಸುಧಾರಣೆಯ ಬಗ್ಗೆ ತಕ್ಕ ಉಪಾಯ-ಯೋಜನೆ ಮಾಡುವ ಬುದ್ಧಿ ಸರಕಾರಕ್ಕೆ ಆಗುವಂತುಂಟು ಶಾಲೇ ವರದಿಯ ವಾಚನದಿಂದ ದೊರೆತ ಅನುಭವಕ್ಕಿಂತ ಈ ಅನುಭವ ಹಿರಿದಾದದ್ದು

೯ ಯಾವ ದೃಷ್ಟಿಯಿಂದ ವಿಚಾರಿಸಿದರೂ ಲೋಕಲ್ಫಂಡನ್ನು ಏರಿಸಿಕೊಳ್ಳುವದು ಹಿತಕರವೆಂದು ನನಗೆ ತೋರುವದಿಲ್ಲ ಸರಕಾರವು ಸರಿಯಾಗಿ ಬೋರ್ಡುಗಳ ಜೋಪಾನ ಮಾಡುವದಿಲ್ಲ ಬೋರ್ಡು ಈ ಹಿಂದೆ ಬೇರೆ ಬೇರೆ ಪ್ರಕಾರಗಳಿಂದ ಆರ್ಥಿಕ ಸುಧಾರಣೆಯ ಬಗ್ಗೆ ಮಾಡಿದ ಪ್ರಯತ್ನಗಳೆಲ್ಲ ಅಧಿಕಾರಿಗಳ ಅವಿವೇಕದಿಂದ ನಿರರ್ಥಕವಾಗಿವೆ ಈ ಎಲ್ಲ ಹೊಟ್ಟೆಯಲ್ಲುಂಟು ಅದನ್ನು ಕೈದಪ್ಪಿಯಲ್ಲಿ ತಂದು ಸರಕಾರಕ್ಕೆ ಬುದ್ಧಿಗಲಿಸುವ ಸುಸಂಧಿ ಇದೀಗ ಒದಗಿಬಂದಿದೆ ಬೋರ್ಡು ರದ್ದಾಗುವದೆಂಬ ಭೀತಿಯನ್ನು ಬಿಟ್ಟುಬಿಡಿರಿ ಅದು ರದ್ದಾಗಬೇಕೆಂದೇ ನಿಶ್ಚಯ ಹಿಡಿಯಿರಿ ಈಗಿನ ಪರಿಸ್ಥಿತಿಯಲ್ಲಿ ಬೋರ್ಡನ್ನು ಸುಸೂತ್ರ ನಡಿಸಲಿಕ್ಕೆ ಹೇಗೂ ಸಾಧ್ಯವಿಲ್ಲ ಕಾರಣ ಲೋಕಲ್ಫಂಡು ಏರಿಸುವ ಸೂಚನೆಯನ್ನು ಆಮೂಲಾಗ್ರ ವಿರೋಧಿಸಿರಿ ಜಿಲ್ಹೆಯ ಜನರು ನಿಮ್ಮಿಂದ ಅಪೇಕ್ಷಿಸುವ ಸೇವೆ ಇದೇ

ಕುಮಟಾ, } ತಮ್ಮ ವಿಧೇಯ,
೮-೯-೪೫ } ನರಸಿಂಹ ಗೋವಿಂದ ಶಾನಭಾಗ

ಜಾಹೀರಾತು.

ಕೆಲವು ಕಡೆಯಲ್ಲಿ ಋಣ-ವಿಮೋಚನೆ ಕಾಯದೆಯ ೬ ತಿಂಗಳ (೧ [illegible] ರಿಂದ ೩೧-೧೦-೪೫ರ ವರೆಗೆ) ಅವಧಿಯನ್ನು ಸರಕಾರದವರು ಬೆಳಿಸಲಿದ್ದಾರೆಂಬ ಸುದ್ದಿಯನ್ನು ಪ್ರಚುರಗೊಳಿಸಲಾಗಿದೆಯೆಂದು ತಿಳಿದು ಬಂದಿದೆ ಆದರೆ ಈ ೬ ತಿಂಗಳ ಅವಧಿಯನ್ನು ಯಾವುದೇ ಕಾರಣದಿಂದ ಸರಕಾರದವರು ಬೆಳಿಸಲಾರರು ಇದನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು ಈ ಅವಧಿಯನ್ನು ಸರಕಾರದವರು ಬೆಳೆಸುವರೆಂದು ಮಾಡುತ್ತಲಿರುವ ಪ್ರಚಾರವು ಸುಳ್ಳು ಮತ್ತು ನಿರಾಧಾರವಾದದ್ದು ಇರುತ್ತದೆ ಸಾಲಗಾರ ಒಕ್ಕಲಿಗರು ಇಂಥ ಪ್ರಚಾರದ ಕಡೆಗೆ ಲಕ್ಷ್ಯ ಕೊಡದೆ ತಮ್ಮ ಸಾಲ ಸಂಪಡಿಸಿಕೊಳ್ಳುವ ಬಗ್ಗೆ ಸಾಲ ಪರಿಹರಿಸುವ ಬೋರ್ಡಿಗೆ (Debt Adjustment Board) ಅವಧಿ (ತಾ [illegible] ರೊಳಗೆ) ಯೇ ಬೇಗನೆ ತಮ್ಮ ಅರ್ಜಿಗಳನ್ನು ಮಾಡಿಕೊಳ್ಳತಕ್ಕದ್ದು ತಿಳಿಯುವದು ತಾ [illegible]

S. B GODHI,
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ಸದರ್ನ ಡಿವಿಜನ, ಬೆಳಗಾಂವ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ಗುರುವಾರದಿಂದ ಚಳೀ ಮಳೆಯಾಗಹತ್ತಿದೆ, ಮತ್ತು ಗದ್ದೆಗಳು ಚೇತರಿಸಿಕೊಂಡಿವೆ.

ಈಗ ೨-೩ ವಾರಗಳಿಂದ ಇಲ್ಲಿಯ ತಾಲೂಕ ಕಚೇರಿಯಲ್ಲಿ ೩, ೪, ೬, ೮, ೧೨ ಆಣೆಗಳ ಕೋರ್ಟ ಫೀ ಸ್ಟ್ಯಾಂಪುಗಳು ಸಿಗುವದಿಲ್ಲ. ಇದರಿಂದ ಕೋರ್ಟ-ಕಚೇರಿಗಳ ವ್ಯವಹಾರಕ್ಕೆ ಬಹಳ ತೊಂದರೆಯಾಗಿದೆ. ವಕಾಲತು, ಅರ್ಜಿ ಮೊದಲಾದವುಗಳಿಗೂ ಭಕ್ತಿ ಕೊಡಬೇಕಾಗಿ ೧ ಆಣೆಯ ಇಲ್ಲವೆ ೨ ಆಣೆಯ ೮ ೧೦ ಸ್ಟ್ಯಾಂಪುಗಳನ್ನು ಅಂಟಿಸಬೇಕಾಗುತ್ತದೆ. ಇದರಿಂದ ಕೋರ್ಟ-ವ್ಯವಹಾರಸ್ಥರಿಗೂ ಕಷ್ಟ. ಸ್ಟ್ಯಾಂಪುಗಳನ್ನು ತಯಾರ ಮಾಡಬೇಕಾದ ಅಧಿಕಾರಿಗಳಿಗೂ ತೊಂದರೆ! ಆಯಾ ಸ್ಥಳಗಳಲ್ಲಿ ಬೇಕಾಗುವ ಬೇರೆ ಬೇರೆ ವರ್ಗದ ಸ್ಟ್ಯಾಂಪುಗಳನ್ನು ಕಾಲಕಾಲಕ್ಕೆ ತರಿಸಿ ಕೊಡಲು ಜಿಲ್ಲಾಧಿಕಾರಿಗಳಿಂದ ಆಗುವದಿಲ್ಲವೇ?

ಮರದ ಮೇಲಿಂದ ತೆಗೆದ ಅಡಿಕೆಯನ್ನು (ಸೀಳಿಗೆ ಹಾಕುವದು, ಒಣಗಿಸುವದು ವಗೈರೆ "ಕ್ಯೂರಿಂಗ" ಸಂಸ್ಕಾರ ಮಾಡದ ಅಡಿಕೆಯನ್ನು) ಯಾರು ಬೇಕಾದವನು ಮತ್ತು ಬೇಕಾದಷ್ಟು ಮಾರಿದರೂ ಅದಕ್ಕೆ ಸುಂಕ ಕೊಡಬೇಕಾಗಿಲ್ಲವೆಂದು ಕೇಂದ್ರ ಕಾನೂನು ಮಂಡಳದ ಸಭೆಯೊಳಗೆ ಇದೇ ಕಳೆದ ಮಾರ್ಚ ತಿಂಗಳಲ್ಲಿ ಅರ್ಥ-ಖಾತೆಯ ಸರ್ ಜೆರಿಮಿ ರೇಜಮನ್ಸರು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಜಿನರಾಜ ಹೆಗಡೆಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಸ್ಪಷ್ಟವಾಗಿ ವಿವರಿಸಿದ್ದರು. ಆದರೂ ನಮ್ಮತ್ತ ಕಡೆಯ ಅಡಿಕೆ ತೆರಿಗೆ ಅಧಿಕಾರಿಗಳು "ಸ್ವತಃ ತೋಟಿಗರು ನೇರವಾಗಿ ಅಡಿಕೆ ತಿನ್ನುವ ಗಿರಾಕಿಗಳಿಗೆ ಹೆಚ್ಚೆಂದರೆ ೧೫ ದಿನಗಳಿಗೆ ಸಾಕಾಗುವಷ್ಟು ಪರಿಮಾಣದಲ್ಲಿ (ಅಂದರೆ ಚಿಲ್ಲರೆಯಾಗಿ) ಯಾವದೇ ಸಂಸ್ಕಾರ ಮಾಡದ ಅಡಿಕೆಯನ್ನು ಮಾರಿದಲ್ಲಿ ಮಾತ್ರ ತೆರಿಗೆ ಆಕರಣೆ ಮಾಡತಕ್ಕದ್ದಲ್ಲವೆಂದು ತೆರಿಗೆ-ಬೋರ್ಡಿನ ಠರಾವು ಉಂಟು" ಎಂದು ವಾದಿಸುತ್ತ ಚರಕೋಳೆ ಅಡಿಕೆ ವ್ಯಾಪಾರಿಗಳು ವ್ಯಾಪಾರಕ್ಕಿಟ್ಟ ಅಡಿಕೆಗೂ ೧೦೦ಕ್ಕೆ ನಾಲ್ಕಾಣೆಯಂತೆ ಸುಂಕ ವಸೂಲಿ ಮಾಡುತ್ತಿದ್ದರು. ಸ್ವತಃ ತೋಟಿಗಾರನೇ ತಲೆ-ಹೊರೆಯಿಂದ ತಂದು ಗಿರಾಕಿಗಳಿಗೆ ಚಿಲ್ಲರೆ ಅಡಿಕೆ ಮಾರುವಲ್ಲಿ ಮಾತ್ರ ಅವರು ಸುಂಕ ಕೇಳುತ್ತಿದ್ದಿಲ್ಲ. ಈಗ ೨-೩ ದಿನಗಳಿಂದ ತೋಟಿಗರ ಕಡೆಯಿಂದಲೂ ನೂರಕ್ಕೆ ೪ ಆಣೆಯಂತೆ ಸುಂಕ ವಸೂಲ ಮಾಡ

(೪ನೇ ಪಾನಿನ ಮೇಲೆ ಮುಂದರಿಸಿದೆ)

ಜಾಹೀರ ಪ್ರಕಟನೆ.

೧೯೪೪ರ ಗೋಕರ್ಣ ಸೀಧಾ ನೇಮಗಳಲ್ಲಿ ಯಾತ್ರಿಕರಿಗೆ ಕೊಡುವ ಸೀಧಾ-ಚೀಟಿಗಳ ಸಂಬಂಧದಲ್ಲಿ ಮಾಡಿರುವ ತಿದ್ದುಪಡಿ

ಆರ್ಥಿಕ ಇಲಾಖೆ (ಪೂರೈಕೆ)

ಮುಂಬಯಿ ಕೋಟೆ, ತಾ. ೨೯-೮-೧೯೪೫

ಮುಂಬಯಿ ರೇಶನಿಂಗ ಹುಕುಮು, ೧೯೪೩.

ನಂ ೧೬೯ (೧೭)/ ಡಿ ಆರ್ — ೧೯೪೩ನೇ ಇಸವಿಯ ಮುಂಬಯಿ ರೇಶನಿಂಗ ಹುಕುಮಿನ ಕಲಂ ೧೨ ರನ್ವಯ ಮುಂಬಯಿ ಸರಕಾರದವರು ೧೯೪೪ರ ಗೋಕರ್ಣ ಸೀಧಾ ನಿಯಮಾವಳಿ (ರೆಗ್ಯುಲೇಶನ್ಸ)ಯಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಿದ್ದಾರೆ —

ಸದರಿ ನಿಯಮಾವಳಿಯ ೧೧ನೇ ಕಲಮಿನ (೧)ನೇ ಉಪಕಲಮಿಗೆ ಈ ಕೆಳಗಿನ ಅಪವಾದ (ಪ್ರೊವಿಜೊ) ಸೇರಿಸಲ್ಪಡತಕ್ಕದ್ದು —

'ಜಿಲ್ಹಾ ಮ್ಯಾಜಿಸ್ಟ್ರೇಟರು ಅಧಿಕೃತ (ಒಫಿಶಿಯಲ್) ಗೆಝೆಟಿನಲ್ಲಿ ಜಾಹೀರಪಡಿಸಿದ ಯಾವದೇ ಸೀಧಾ ಅವಧಿಯ (ಪಕ್ಷದ) ಲ್ಲ ೭ ದಿನಗಳಿಗೆ ನಿಕ್ಕಿ ಮಾಡಲ್ಪಟ್ಟ ವಸತಿಯ ಅವಧಿಯ ಬಗ್ಗೆ ಸೀಧಾ-ಚೀಟಿಯನ್ನು ಕೊಡತಕ್ಕದ್ದಲ್ಲ, ಮತ್ತು ಇಂಥ ಸೀಧಾ ಅವಧಿಯೊಳಗೆ ೭ ದಿನಗಳಿಗಿಂತ ಕಡಿಮೆಯಿರುವ ವಸತಿಯ ಅವಧಿಯ ಭಾಗದ ಬಗ್ಗೆ (೨)ನೆಯ ಯಾ (೩) ನೆಯ ಉಪಕಲಮಿನನ್ವಯ ಯಾವ ಸೀಧಾ-ಸಾಮಗ್ರಿಯನ್ನು ಕೊಡಕೂಡದು "

ಟಿಪ್ಪಣೆ — ಭಾರತ ರಕ್ಷಣ ನಿಯಮಾವಳಿಯೊಳಗಿನ ೧೧೯ನೇ ನಿಯಮದ (೧)ನೇ ಉಪನಿಯಮಕ್ಕನುಸಾರವಾಗಿ ಈ ಪ್ರಕಟನೆಯ ಪ್ರತಿಗಳನ್ನು ಮುಂಬಯಿ ಸರಕಾರದ ಗೆಝೆಟದಲ್ಲೂ ಈ ಪ್ರಕಟನೆಯೊಡನೆ ಸಂಬಂಧ ಬರುವ ಗೋಕರ್ಣ ಸೀಧಾ ಕ್ಷೇತ್ರದೊಳಗೆ ಪ್ರಸಾರವುಳ್ಳ ವೃತ್ತಪತ್ರಿಕೆಗಳಲ್ಲೂ ಪ್ರಕಟಿಸತಕ್ಕದ್ದು. ಹಾಗೂ ಸದರಿ ಕ್ಷೇತ್ರದೊಳಗಿನ ಮುಲ್ಕೀ-ಕಚೇರಿಗಳಲ್ಲಿರುವ ನೋಟೀಸಬೋರ್ಡುಗಳಿಗೆ ಅಂಟಿಸತಕ್ಕದ್ದು. ಈ ರೀತಿ ಈ ಪ್ರಕಟನೆಯ ಪ್ರತಿಗಳನ್ನು ನೋಟೀಸ-ಬೋರ್ಡುಗಳಿಗೆ ಹಚ್ಚಿಟ್ಟ ಸಂಗತಿಯನ್ನು ಟಮಕಿ ಹೊಡೆದು ಜನರಿಗೂ ತಿಳಿಸತಕ್ಕದ್ದು.

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,
ಎ ಡಿ ಗೋರೆವಾಲಾ, ಕಾರ್ಯದರ್ಶಿ

ಜಾಹೀರಾತು.

ಮುಂಬಯಿ ಸರಕಾರದವರು ಕಾರವಾರ ಜಿಲ್ಹೆಯಲ್ಲಿ ಒಕ್ಕಲಿಗರ ಋಣ-ವಿಮೋಚನ ಕಾಯಿದೆಯನ್ನು ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಿಗೆ ಲಾಗು ಮಾಡಿ ಇವೆರಡೂ ತಾಲೂಕುಗಳ ಬಗ್ಗೆ, ಒಂದು ಸಾಲ ಪರಿಹರಿಸುವ ಬೋರ್ಡ (Debt Adjustment Board) ನ್ನು ತಾ 1—5—45ಕ್ಕೆ ಹಳಿಯಾಳದಲ್ಲಿ ಸ್ಥಾಪನೆ ಮಾಡಿದ್ದಾರೆ. ಈ ಎರಡೂ ತಾಲೂಕಿನ ಸಾಲಗಾರ-ಒಕ್ಕಲಿಗರು ತಾರೀಖು ೩೧-೧೦-೪೫ರ ಅವಧಿಯೊಳಗಾಗಿ ಸಾಲ ಪರಿಹರಿಸುವ ಬೋರ್ಡಿಗೆ (Debt Adjustment Board) ತಮ್ಮ ಸಾಲ ಪರಿಹರಿಸುವ ಬಗ್ಗೆ ಅರ್ಜಿ ಮಾಡತಕ್ಕದ್ದು. ಅರ್ಜಿ ಮಾಡಿಕೊಳ್ಳುವ ಅವಧಿಯು ಆರು ತಿ[illegible] ೧-೫-೪೫ರಿಂದ, ೩೧-೧೦-೪೫ರ ವರೆಗೆ) ಇದ್ದು ಸದರಿ ಅವಧಿಯನ್ನು ಸರಕಾರದ[illegible]ವದೇ ಕಾರಣದಿಂದ ಹೆಚ್ಚಿಸಲಾರರು. ಈ ಸಂಗತಿಯನ್ನು ಒಕ್ಕಲಿಗರು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು, ಮತ್ತು ಈ ಸುಸಂಧಿಯನ್ನು ಕಳೆದುಕೊಳ್ಳಬಾರದಾಗಿ ವಿನಂತಿ.

ಅರ್ಜಿಯನ್ನು ಸಾಲ ಪರಿಹರಿಸುವ ಬೋರ್ಡಿನ ಆಫೀಸಿನ ವೇಳೆಯಲ್ಲಿ ಕೊಡಬಹುದು ಅಥವಾ ರಜಿಸ್ಟರ್ಡ ಪೋಸ್ಟಿನಿಂದ ಬೋರ್ಡಿಗೆ ಕಳಿಸಬಹುದು. ಅರ್ಜಿಗೆ ಎಂಟು ಆಣೆಯ ಕೋರ್ಟ-ಫೀ ಸ್ಟ್ಯಾಂಪು ಹಚ್ಚಬೇಕು.

ಕಾಯಿದೆಯ ಪ್ರಚಾರಕ್ಕಾಗಿ ಅಂದರೆ ಕಾಯಿದೆಯ ಫಾಯದೆಯನ್ನು ರೈತರಿಗೆ ತಿಳಿಹೇಳಲಿಕ್ಕೆ ಮತ್ತು ಅರ್ಜಿಗಳನ್ನು ಅವಧಿಯಲ್ಲಿಯೇ ಮಾಡಲಿಕ್ಕೆ ತಿಳಿಹೇಳುವದಕ್ಕಾಗಿ ಸಹಕಾರೀ ಖಾತೆಯ ಪ್ರಚಾರಕ ಆಫೀಸರ, ಸಬ್ ಆಡಿಟರ ಡೆಟ್ ರಿಲೀಫ, ಕಾರವಾರ ಮತ್ತು ಅಸಿಸ್ಟಂಟ ಡಿಸ್ಟ್ರಿಕ್ಟ ಕೊ-ಒಪರೇಟಿವ್ಹ ಆಫೀಸರ ಹಳಿಯಾಳ ಇವರ ಮತ್ತು ಒವರರ ಒರ್ಗನೈಝರರು ತಾಲೂಕಿನ ಹಳ್ಳಿಗಳಿಗೆ ಹೋಗಿ ರೈತರ ಸಭೆಗಳನ್ನು ಕರೆದು ಪ್ರಚಾರ ಕಾರ್ಯವನ್ನು ನಡಿಸಿದ್ದಾರೆ. ಕೆಲಸದ ಅನುಕೂಲತೆಗಾಗಿ ಕೆಲವು ಕೇಂದ್ರ ಹಳ್ಳಿಗಳನ್ನು ಆರಿಸಿ, ಅವುಗಳಿಗೆ ಸುತ್ತುಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ ಆ ಕೇಂದ್ರ ಹಳ್ಳಿಯನ್ನು ಪ್ರಚಾರಕ್ಕಾಗಿ ಕೇಂದ್ರವೆಂತ ಗೊತ್ತುಮಾಡಿದ್ದಾರೆ. ಈ ಕೇಂದ್ರದಲ್ಲಿಯ ಹಳ್ಳಿಗಳನ್ನು ಬಿಟ್ಟು ಉಳಿದ ಹಳ್ಳಿಗಳಿಗೆ ಅವರು ಪ್ರತ್ಯೇಕವಾಗಿ ಹೋಗುವರು. ಇದಲ್ಲದೆ ತಾಲೂಕಿನ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ಆಗಾಗ್ಗೆ ರೈತರ ಸಭೆಗಳನ್ನು ಕರೆದು ಋಣ-ವಿಮೋಚನೆಯ ಕಾಯಿದೆಯ ಪ್ರಚಾರವನ್ನು ಮಾಡಲಿಕ್ಕೆ ಮತ್ತು ಸಾಲ ಪರಿಹರಿಸುವ ಬೋರ್ಡಿಗೆ (Debt Adjustment Board) ಅರ್ಜಿಗಳನ್ನು ಮಾಡಲಿಕ್ಕೆ ಸಾಲಗಾರ ಒಕ್ಕಲಿಗರಿಗೆ ತಿಳಿಹೇಳಲಿಕ್ಕೆ ಮೆ॥ ಕಲೆಕ್ಟರ ವ ಮೆ॥ ಮಾಮಲೇದಾರ ಸಾಹೇಬರ ಮುಖಾಂತರ ಸರ್ಕ್ಯೂಲರ ಮೂಲಕ ತಿಳಿಸಿದ್ದಾರೆ. ಇದರ ಉದ್ದಿಷ್ಟ ಗ್ರಾಮಸ್ಥರ ಮತ್ತು ತಲಾಟಿಯವರ ಕಡೆಗೆ ಸಹಕಾರಿ ಸಂಘದ ಖಾತೆಯಿಂದ ಹೊರಡಿಸಿದ ಹಸ್ತಪತ್ರಿಕೆ ಮುಂತಾದವುಗಳನ್ನು ಅವರ ಮಾಹಿತಿಗಾಗಿ ಪೂರೈಸಿಕೊಟ್ಟಿದ್ದಾರೆ. ವಿಶೇಷ ಮಾಹಿತಿ ಬೇಕಾದಲ್ಲಿ ಒಕ್ಕಲಿಗರು ಆ ಹಸ್ತಪತ್ರಿಕೆ ಮುಂತಾದವುಗಳನ್ನು ಓದಿಕೊಳ್ಳತಕ್ಕದ್ದು. ಅರ್ಜಿ ನಮೂನೆಯನ್ನು ತುಂಬಲಿಕ್ಕೆ ಏನಾದರೂ ಅಡಚಣಿ ಬಂದಲ್ಲಿ ಅರ್ಜಿದಾರರಿಗೆ ಸಹಾಯ ಮಾಡಲಿಕ್ಕೆ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ತಿಳಿಸಿದ್ದಾರೆ.

ಆದ್ದರಿಂದ ಹಳಿಯಾಳ ಮತ್ತು ಯಲ್ಲಾಪೂರ ತಾಲೂಕಿನ ಒಕ್ಕಲಿಗರು ಆಯಾ ಕೇಂದ್ರಸ್ಥಾನ ಮತ್ತು ಹಳ್ಳಿಗಳಲ್ಲಿ ಕರೆಯುವ ಸಭೆಗಳಿಗೆ ಹಾಜರಾಗಿ ಕಾಯಿದೆಯ ಫಾಯದೆಗಳನ್ನು ತಿಳಕೊಂಡು ಸಾಲ ಪರಿಹರಿಸುವ ಬೋರ್ಡಿ (Debt Adjustment Board) ಗೆ ಅವಧಿಯೊಳಗಾಗಿ (ತಾ ೩೧-೧೦-೪೫) ಅರ್ಜಿ ಮಾಡಿಕೊಳ್ಳತಕ್ಕದ್ದು. ಈ ಸುಸಂಧಿಯ ಫಾಯದೆಯನ್ನು ಪೂರ್ಣ ಪಡೆಕೊಂಡು ಒಕ್ಕಲಿಗರು ಋಣಮುಕ್ತರಾಗಬೇಕೆಂದು ವಿನಂತಿ. ತಿಳಿಯುವದು

ಹಳಿಯಾಳ ತಾಲೂಕಿನ ಕೇಂದ್ರ-ಸ್ಥಾನಗಳು.

(೧) ಹಳಿಯಾಳ (೨) ಸಾಂಬ್ರಾಣಿ (೩) ದಾಂಡೇಲಿ (೪) ತೇರಗಾಂವ (೫) ಮುದನಳ್ಳಿ (೬) ಮಂಗಳವಾಡ (೭) ಎಡೋಗಾ (೮) ಮುರ್ಕವಾಡ (೯) ನಂದಿಗದ್ದೆ (೧೦) ಹೊಸೂರ (೧೧) ಬುರ್ಘಾರಕಂಚನಳ್ಳಿ ಮತ್ತು (೧೨) ಬೊಮ್ಮನಳ್ಳಿ

ಯಲ್ಲಾಪೂರ ತಾಲೂಕಿನ ಕೇಂದ್ರ ಸ್ಥಾನಗಳು

(೧) ಯಲ್ಲಾಪೂರ (೨) ಇಡಗುಂದಿ (೩) ಆರಬೈಲ (೪) ವಜ್ರಳ್ಳಿ (೫) ಮಾವಿನಮನೆ (೬) ದೇಹಳ್ಳಿ (೭) ಮಂಚಿಕೇರಿ (೮) ಹಿತ್ಲಳ್ಳಿ (೯) ಭರ್ತನಳ್ಳಿ (೧೦) ನಂದೊಳ್ಳಿ ಮತ್ತು (೧೧) ಕಿರವತ್ತಿ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮೇಲೆ ಹೇಳಿದ ಪ್ರಚಾರಕ-ಆಫೀಸರರ ಕಡೆಯಿಂದ ತಿಳಿದುಕೊಳ್ಳತಕ್ಕದ್ದು

ಈ ಮೊದಲೇ ಕೆಲವು ಕೇಂದ್ರ ಸ್ಥಳಗಳಲ್ಲಿ ರೈತರ ಸಭೆಗಳನ್ನು ಕರೆದು ಕಾಯಿದೆಯ ಫಾಯದೆಗಳನ್ನು ತಿಳಿಸಿಹೇಳಿದ್ದಾಗಿದೆ

ಹಳಿಯಾಳ ತಾಲೂಕ

(೧) ಹಳಿಯಾಳ (೨) ತೇರಗಾಂವ (೩) ಸಾಂಬ್ರಾಣಿ (೪) ಮಂಗಳವಾಡ (೫) ದಾಂಡೇಲಿ (೬) ಮುದನಳ್ಳಿ

ಯಲ್ಲಾಪೂರ ತಾಲೂಕ

(೧) ಯಲ್ಲಾಪುರ (೨) ಮಂಚಿಕೇರಿ (೩) ಇಡಗುಂದಿ (೪) ಕಿರವತ್ತಿ ಮತ್ತು (೫) ನಂದೊಳ್ಳಿ.

S. B. GODHI,
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ಸದರ್ನ ಡಿವ್ಹಿಜನ್, ಬೆಳಗಾಂವ

ಬೆಳಗಾವಿ,
ತಾ ೨೨—೮—೪೫

ಇಂದು ಚಿಕ್ಕ ಬಾಲೆಯಾದ ನಿಮ್ಮ ಹುಡುಗಿ ಇನ್ನು ೧೨ ವರ್ಷಗಳಲ್ಲಿ ವಿವಾಹಯೋಗ್ಯಳಾಗುವಳು
ಅವಳ ಮದುವೆಯ ವೆಚ್ಚದ ವ್ಯವಸ್ಥೆ ಹೇಗೆ ಮಾಡುವಿರಿ ?
ಇಂದು ನೀವು ದುಡಿಯುತ್ತೀರಿ ! ಮುಪ್ಪಿನ ಕಾಲದಲ್ಲಿ ದುಡಿಯಲಾಗದು !
ಆಗ ನಿಮ್ಮ ಸಂಸಾರ ಹೇಗೆ ಸಾಗಬೇಕು ?
ಅದಕ್ಕೊಂದೇ ಮಾರ್ಗವುಂಟು
ಕೂಡಲೆ ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳಿರಿ
ಇಂದಿನ ರೂ. ೧೦ ೧೨ ವರ್ಷಗಳ ಮೇಲೆ ರೂ. ೧೫ ಕೊಡುತ್ತಿದೆ !
ಚಿನ್ನ-ಬೆಳ್ಳಿ-ರತ್ನಾದಿಗಳಲ್ಲಿ, ಮನೆ-ಮಠಗಳಲ್ಲಿ, ಸರಕುಗಳಲ್ಲಿ ಹಣ ಹಾಕಬೇಡಿ !
ಯುದ್ಧಾನಂತರ ಅವುಗಳ ಬೆಲೆ ಭರಭರನೆ ಕುಗ್ಗುವದು !
ನೆಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳು ಎಲ್ಲೆಲ್ಲೂ ಸಿಗುತ್ತವೆ ಪ್ರತಿ ಊರಲ್ಲಿ ಅಧಿಕೃತ ಏಜಂಟರಿದ್ದಾರೆ
ಏನೂ ಪ್ರತಿಫಲ ಕೊಳ್ಳದೆ ಅವರು ನಿಮಗೆ ನೆರವಾಗುವರು
ರೂ ೧೦ರಿಂದ ರೂ ೫೦೦೦ ತನಕ ಈ ಸರ್ಟಿಫಿಕೇಟುಗಳಲ್ಲಿ ತೊಡಗಿಸಬಹುದು
[ಜಿಲ್ಲಾ ಸಣ್ಣ ಠೇವುಗಳ ಪ್ರಚಾರ ಸಮಿತಿಯ ಪ್ರಕಟನೆ]

ಪತ್ರಿಕೆಯಲ್ಲಿ [illegible] ಬಂದಿದೆಯಂತೆ! ತೆಂಗಿನ [illegible] ಕಳೆದೊಯ್ದು [illegible] ಮಾಡುತ್ತೇನೆಂದು ಗದ್ದರಿಸುತ್ತಾರೆ [illegible] ಮಾಡಿದ [illegible] ಅವರನ್ನು [illegible]ದಿಷ್ಟ! ಈ ಪೆಂಥಾರಿಗಳ [illegible] ಹೇಗೆಂಬು ಮೇಲಧಿಕಾರಿಗಳು ಪ್ರಕಟಿಸಬೇಕು.

ರವಿವಾರ ತಾ ೯-೯-೪೫ರಂದು ಇಲ್ಲಿ ಕೂಡಿದ ಜಿಲ್ಲಾ ಕೊಂಗ್ರೆಸ ಕಾರ್ಯಕರ್ತರ ಸಭೆಗೆ [illegible] ಬೇರೆ ಭಾಗಗಳಿಂದ ೬೦-೭೦ ಜನರು ಬಂದಿದ್ದರು. ಶ್ರೀ ಶಿವರಾವ [illegible] ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮೊದಲು ದಿವಂಗತ ಸುಭಾಷಚಂದ್ರ ಬೋಸ, ಶ್ರೀ ನಾರಾಯಣರಾವ [illegible], [illegible] ಬೆಳಗಾಂವ ಮಧ್ವರಾವ ಕಟ್ಟಾರ ಧಾರವಾಡ, ಗುರುಪ್ಪ ಗೋಕಾಕಿ, ಪರಮೇಶ್ವರ ಮುದ್ದೇಬಾಲ (ಯಲ್ಲಾಪುರದ ಶಾನುಭೋಗ) ಇವರ ನಿಧನದ ಬಗ್ಗೆ ದುಃಖಪ್ರದರ್ಶನದ ಠರಾವು ಮಾಡಿತು. ಜಿಲ್ಹೆಯ ಇಂದಿನ ಸಭೆಯು ವರದಿ ಮತ್ತು ಅವರೆಗಿನ ಲೆಕ್ಕಪತ್ರಗಳನ್ನು ಪರಿಶೀಲನ ಸಮಿತಿ ಮತ್ತು ವಿದ್ಯಾರ್ಥಿ ಸಂಘಟನೆ ಮುಂತಾದವುಗಳ ವರದಿಗಳನ್ನು ಪರಿಶೀಲಿಸಿ, ಪ್ರತಿ ತಾಲೂಕಿನಲ್ಲಿ ಸ್ವಯಂಸೇವಾ ದಲಗಳನ್ನು ಸಂಘಟಿಸಲು ಪ್ರತಿ ತಾಲೂಕಿಗೆ ಕಾರ್ಯಕರ್ತರನ್ನು ನೇಮಿಸಲಾಯಿತು. [illegible] ದಯಾನಂದ ಪ್ರಭುರವರು ಇಡೀ ಜಿಲ್ಹೆಯ [illegible] ಅದರಂತೆ ಪ್ರತಿ ತಾಲೂಕಿನಲ್ಲಿ ಕೊಂಗ್ರೆಸ ಸಂಘಟನೆ ಮಾಡುವದಕ್ಕಾಗಿ ಸಂಚಾಲಕರನ್ನು ನೇಮಿಸಲಾಯಿತು. ೧೯೪೨ ರಲ್ಲಿ ಈ ಜಿಲ್ಹೆಯಲ್ಲಿ ನಡೆದ ಆಂದೋಲನದ ಸಮಗ್ರ ವರದಿಯನ್ನು ತಯಾರಿಸಲು ದಯಾನಂದ ಪ್ರಭುರವರ ನಾಯಕತ್ವದಲ್ಲಿ ೬ ಜನರದೊಂದು ಸಮಿತಿಯನ್ನು ನೇಮಿಸಲಾಗಿದೆ. ರೈತರ ಗೇಣಿಯ ಪ್ರಶ್ನೆಯ ಮೇಲೂ ಕೆಲ ಕಾಲ ಚರ್ಚೆಯಾಗಿ, ಕರಾವಳಿಯ ಪ್ರದೇಶದಲ್ಲಿ ಗೇಣಿಯ ಮಾನ ಭಾರವಾಗಿರುವದರಿಂದ ಲಾವಣಿ (ಟೆನನ್ಸಿ) ಕಾಯದೆಯನ್ನು ಬೇಗನೇ ಈ ಭಾಗಕ್ಕೆ ಅನ್ವಯಿಸಿ, ಆ ಕಾನೂನಿನ ೧೫ನೇ ಕಲಮಿನಲ್ಲಿ ವಿಧಿಸಿದ ಪ್ರಕಾರ ಸರಕಾರದವರೇ ಗೇಣಿಯ ಪರಮಾವಧಿಯ ಮಾನ ಗೊತ್ತುಪಡಿಸಬೇಕೆಂದೂ, ಹೊಲದ ಉತ್ಪನ್ನದ ಮೇಲೆ ಹೊಲದೊಳಗೆ ಪ್ರತ್ಯಕ್ಷ ದುಡಿಯುವವರದೇ ಅಗ್ರಹಕ್ಕು ಇರುವಂತೆ ವ್ಯವಸ್ಥೆ ಮಾಡಬೇಕೆಂದೂ ಸರಕಾರಕ್ಕೆ ಶಿಫಾರಸು ಮಾಡುವ ಠರಾವು ಪಾಸಾಯಿತು. ಗೇಣಿಯ ಮಾನವನ್ನು ೧೦೦ಕ್ಕೆ ೩೫ರಂತೆ, ಸ್ಥಾನಿಕ ಪರಿಸ್ಥಿತಿಗನುಸಾರವಾಗಿ ಇಳಿಸುತ್ತ ಹೋಗಬೇಕೆಂದು ಕೆಲಸಭಿಕರು ಪ್ರತಿಪಾದಿಸಿದರು ಕೊಂಗ್ರೆಸ್ಸಿನವರು ರೈತರಿಗೆ ನ್ಯಾಯ್ಯ ಉತ್ಪನ್ನ ದೊರಕಿಸಿಕೊಡಬೇಕೆಂದು ಸಾಮಾನ್ಯ ನಿರ್ಣಯವಾಗಿದೆ. ಅಡಿಕೆ ಸುಂಕದ ಪ್ರಶ್ನೆಯೂ ಚರ್ಚೆಗೆ ಬಂದಿತ್ತು. ಈಗ ಯುದ್ಧ ನಿಂತಿರುವದರಿಂದ ಯುದ್ಧ ಕಾಲದ ಅಡಚಣೆ ನೀಗಿಸಲು ಹೇರಲ್ಪಟ್ಟ ಅಡಿಕೆ ತೆರಿಗೆಯನ್ನು ಕೂಡಲೆ ರದ್ದುಗೊಳಿಸಬೇಕೆಂದೂ, ಬರುವ ಬೇಸಿಗೆಯಲ್ಲಿ ಮಲಾಯಾ, ಸಿಂಗಾಪೂರ ಬದಿಯ ಅಡಿಕೆ ಈ ದೇಶಕ್ಕೆ ಬಂದು ಅಡಿಕೆಯ ಧಾರಣೆ ಕುಸಿದು ದೇಶದೊಳಗಿನ ತೋಟಿಗರಿಗೆ ಹಾನಿಯಾಗುವಂತಿರುವದಾದ್ದರಿಂದ ಹೊರಗಿಂದ ಬರುವ ಅಡಿಕೆಯ ಮೇಲೆ ಆಯಾತ ತೆರಿಗೆ ಹೇರಿ ತೋಟಿಗರನ್ನು ಸರಕಾರವು ಸಂರಕ್ಷಿಸಬೇಕೆಂದೂ ಗೊತ್ತುವಾಯಿತು. ಇದೀಗ ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಲ್ಲಿ ಜಾರಿಯಲ್ಲಿ ಬಂದಿರುವ ರೈತರ ಋಣ-ವಿಮೋಚನೆಯ ಕಾನೂನಿನ ಪೂರ್ಣ ಲಾಭ ರೈತರಿಗೆ ಸಿಗುವಂತೆ ಕೊಂಗ್ರೆಸ ಕಾರ್ಯಕರ್ತರು ಯತ್ನಿಸಬೇಕೆಂದೂ ಒಂದು ನಿರ್ಣಯವಾಗಿದೆ. ಅದಲ್ಲದೆ ಕೊಂಗ್ರೆಸ ಕಾರ್ಯಕ್ಕೆ ಹಣದ ಅಡಚಣೆಯಿರುವದರಿಂದ ತುರ್ತಕ್ಕೆ ರೂ ೧೦೦೦ಗಳಷ್ಟು ನಿಧಿಯನ್ನಾದರೂ ಕೂಡಿಸಬೇಕೆಂದು ಠರಾವ ಆಗಿದೆ.

ಬರುವ ಗಾಂಧಿ ಜಯಂತಿಯ ಕಾಲಕ್ಕೆ ಅಂದರೆ ತಾ ೨-೧೦-೪೫ರಿಂದ ತಾ ೧೫-೧೦-೪೫ರ ತನಕ ಧಾರವಾಡ ಜಿಲ್ಹಾ ಲೋಕಲ್ ಬೋರ್ಡಿನವರು ಧಾರವಾಡದೊಳಗೆ ಅಖಿಲ ಕರ್ನಾಟಕದೊಳಗಿನ ಹಳ್ಳಿಯ ಕೈಗಾರಿಕೆಗಳದೊಂದು ಪ್ರದರ್ಶನ ಜರಗಿಸುವ ಏರ್ಪಾಟು ಮಾಡಿದ್ದಾರೆ. ಈ ಪ್ರದರ್ಶನದಲ್ಲಿ (೧) ನೂಲುವ, ನೇಯುವ ಉಪಕರಣಗಳು, ಬಟ್ಟೆಗೆ ಬಣ್ಣ ಕೊಡುವ ಇಲ್ಲವೆ ಅಚ್ಚು ಹಾಕುವ ಉಪಕರಣಗಳು ಮತ್ತು ಕೈಮಗ್ಗಗಳ ಮೇಲೆ ಸಿದ್ಧವಾದ ಬಟ್ಟೆ-ಕಂಬಳಿ-ಜಮಖಾನ ಮೊದಲಾದವುಗಳು, (೨) ಚೂರಿ, ಕತ್ತರಿ, ಪೆಟ್ಟಿಗೆಗಳು, ಸಟ್ಟು, ನೇಗಿಲು, ಕೊಡಲಿ ವಗೈರೆ ಮನೆಗೆಲಸಗಳಿಗೂ ಬಡಿಗ, ಸಿಂಪಿಗ, ಒಕ್ಕಲಿಗ ಮೊದಲಾದವರಿಗೂ ಬೇಕಾಗುವ ಲೋಹದ ಸಾಮಾನುಗಳು ಹಾಗೂ ಕಂಚು-ತಾಮ್ರ ಹಿತ್ತಾಳೆಯ ಪಾತ್ರೆಗಳು (೩) ಕಟ್ಟಿಗೆಯ ಸಾಮಾನು, (೪) ಮಣ್ಣಿನ ಸಾಮಾನು, (೫) ಪಾಟಿ ಪೆನ್ಸಿಲು ದೌತಿ ಮೊದಲಾದ ಬರೆಯುವ ಉಪಯೋಗದ ಸಾಮಾನುಗಳು, (೬) ಕೋಡು, ಹಸ್ತಿ-ದಂತ, ಗಂಧದ ಕಟ್ಟಿಗೆಗಳಿಂದ ತಯಾರಿಸಿದ ಸಾಮಾನುಗಳು, (೭) ಚಿತ್ರದ ಸಾಮಾನುಗಳು, (೮) ಲಲಿತ ಕಲೆಯ ವಸ್ತುಗಳು, (೯) ತೆಂಗಿನ ನಾರಿನಿಂದ ತಯಾರಿಸಿದ ಸಾಮಾನು, (೧೦) ಚರ್ಮದಿಂದ ತಯಾರಿಸಿದ ಸಾಮಾನು ಮೊದಲಾದ ಹಳ್ಳಿಯ ಕೈಗಾರಿಕೆಗಳನ್ನು ಇಡುವ ವ್ಯವಸ್ಥೆ ಮಾಡಲಾಗಿದೆ ನಮ್ಮಾ ಜಿಲ್ಹೆಯೊಳಗಿನ ಕೈಗಾರಿಕೆಯವರು ಈ ಪ್ರದರ್ಶನದ ಪೂರ್ಣ ಲಾಭ ಪಡೆಕೊಳ್ಳಬೇಕೆಂದು ಸೂಚನೆಯಿದೆ. ಜಿಲ್ಹಾ ಗ್ರಾಮೋದ್ಯೋಗ ಸಮಿತಿಯವರು ಅವರಿಗೆ ಈ ಕುರಿತು ನೆರವಾಗುವರೆಂದು ಕೋರಿಕೆಯೂ ಉಂಟು

ಹೊನ್ನಾವರ— (ತಾ ೯-೯-೪೫) ಜಿಲ್ಹಾಧಿಕಾರಿ ತಾ ೧೬ಕ್ಕೆ ಇಲ್ಲಿ ಬರುವವರಿದ್ದಾರೆಂತೆ ಆಗ ಅವರು ಸೀಧಾ-ಸಾಮಗ್ರಿಯ ಬಗ್ಗೆ ಜನರು ಹೇಳುವ ದೂರುಗಳನ್ನು ಕೇಳಿಕೊಳ್ಳಬೇಕಾಗಿ ಅರಿಕೆ.

೨-೩ ದಿನಗಳ ಹಿಂದೆ ಇಲ್ಲಿಯ ಓರ್ವ ಪ್ರಾರ್ಥಿಕ ಅಧಿಕಾರಿಗಳಾದ ಮಿ॥ ಪಿಂಟೋ ಎಂಬವರು ಹಳದೀಪುರ ಅಗ್ರಹಾರದೊಳಗಿನ ಯೋಗ್ಯದರದ ಅಂಗಡಿಗೆ ಹೋಗಿದ್ದರಂತೆ ಅಲ್ಲಿ ಆಗ ಮುಕ್ರಿ ಜಾತಿಯ ಹುಡುಗನೊಬ್ಬನು ರಾಗಿಯ ಸೀಧಾ ಕೊಂಡುಕೊಳ್ಳಲು ಅಂಗಡಿಗೆ ಬಂದಿದ್ದನಂತೆ; « ನಿಮ್ಮ ಸಕ್ಕರೆ ಯಾರಿಗೆ ಕೊಟ್ಟೆ ? » ಎಂದು ಮಿ॥ ಪಿಂಟೋ ಇವರು ಆತಗೆ ಕೇಳಿದರಂತೆ "ಅಣ್ಣನಿಗೆ ಗೊತ್ತು, ನಾನರಿಯೆ" ಎಂದು ಹುಡುಗ ಉತ್ತರ ಕೊಟ್ಟನು "ಸುಳ್ಳು ಹೇಳುತ್ತೀಯಾ ?" ಎಂದು ಆಗ ಪಿಂಟೋ ಇವರು ಅವನಿಗೊಂದು ಏಟು ಕೊಟ್ಟರು! ಆಗ ಆ ಹುಡುಗನು ಬೆದರಿ, « ಕೆಲವು ಸಕ್ಕರೆಯು ಪಾಯಸ ಮಾಡಿ ಉಂಡೆವು, ಉಳಿದ ಸಕ್ಕರೆಯನ್ನು ಅಣ್ಣ ಯಾರಿಗೋ ಕೊಟ್ಟ " ಎಂದು ವಿವರಿಸಿದನು. " ಈ ಸಂಗತಿ ಮೊದಲು ಯಾಕೆ ಹೇಳಲಿಲ್ಲ ? ಯಾಕೆ ಸುಳ್ಳು ಹೇಳಿದೀ ? ಸಕ್ಕರೆ ಬೇರೆಯವರಿಗೆ ಕೊಡಲಿಕ್ಕೆ ನಿಮಗೆ ಯಾರು ಹೇಳಿದರು ? " ಎಂದು ಮುಂತಾಗಿ ಮಿ॥ ಪಿಂಟೋ ಇವರು ಆ ಹುಡುಗನಿಗೆ ಚನ್ನಾಗಿ ಥಳಿಸಿದರೆಂದು ತಿಳಿಯುತ್ತದೆ ತಮಗೆ ಸಕ್ಕರೆ ಕೊಡದೆ ಅದನ್ನು ಕೊಂಡುಕೊಂಡು ಬೇರೊಬ್ಬರಿಗೆ ಕೊಟ್ಟನೆಂಬ ಸಿಟ್ಟಿನಿಂದ ಅಂಗಡಿಕಾರರೇ ಮಿ॥ ಪಿಂಟೋರವರಿಗೆ ಚುಚ್ಚಿಕೊಟ್ಟು, ಮೇಲಿನಂತೆ ಆ ಹುಡುಗನಿಗೆ ಹೊಡೆಯಿಸಿದರೆಂದು ಒಳಗುಟ್ಟು, ಕಂಡುಹಿಡಿದವರು ಹೇಳುತ್ತಾರೆ ಪಿಂಟೋರವರ ನಡತೆ ಕಾನೂನಿಗೆ ಒಪ್ಪಿದ್ದೋ ಹೇಗೆಂಬುದರ ವಿಚಾರವನ್ನು ಮೇಲಧಿಕಾರಿಗಳು ಮಾಡಬೇಕು

(೧ನೇ ಪುಟದ ಮೇಲಿ ಮುಂದರಿಸಿದೆ)

ವಿದ್ಯಾರ್ಥಿ, ಶಿಕ್ಷಕ ಮತ್ತು ಉದ್ಯೋಗಸ್ಥರಿಗೆ
ಸ್ಟೇಶನರಿ, ಮೈಸೂರ ಕಾಗದ, ಡೆಕ್ಕನ ಮಿಲ್ಲಿನ ಕಾಗದ (ಬಿಳೇ ಹಾಗೂ ಬಳ್) ವಗೈರೆ ಸವಲತ್ತಿನ ದರದಿಂದ, ರೋಖ ಹಾಗೂ ತಿರಕೋಳ ಸಿಗುತ್ತವೆ
ಬಾಲಕೃಷ್ಣ ಸ್ಟೋರ್ಸ, ಕುಮಟಾ.

ಎಂಪಾಯರ ಆಫ್ ಇಂಡಿಯಾ ಲೈಫ ಇನ್ಶುರನ್ಸ ಕಂಪನಿಯಲ್ಲೇ
ವಿಮೆ ಇಳಿಸಿರಿ ನಾವು ನೆರವಾಗುವೆವು.
ಗೋವಿಂದ ಶ್ರೀಧರ ನಾಯಕ,
C/o ಬಾಲಕೃಷ್ಣ ಸ್ಟೋರ್ಸ, ಕುಮಟಾ.

ಜಾಹೀರ ನೋಟೀಸು.

ದಿ ಅಂಕೋಲಾ ಅರ್ಬನ್ ಕೊ-ಓಪರೇಟಿವ ಕ್ರೆಡಿಟ್ ಬೇಂಕ, ಲಿಮಿಟೆಡ್‌ದ 1914-45ನೇ ಸಾಲಿನ ವಾರ್ಷಿಕ ಸಾಧಾರಣ ಸಭೆಯು ಇದೇ ತಿಂಗಳ ಶನಿವಾರ ತಾ. 29-9-1945ನೇ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಬೇಂಕಿನ ಇಮಾರತಿನಲ್ಲಿ ಕೂಡಬೇಕೆಂದು ಠರಾಯಿಸಿದೆ ಕಾರಣ ಯಾವತ್ತೂ ಮೆಂಬರರು ಸದರಿ ಸಭೆಗೆ ಹಾಜರ ಇರಬೇಕಾಗಿ ವಿನಂತಿ ಸಭೆಯ ಕಾರ್ಯಕ್ರಮವನ್ನು ವಾರ್ಷಿಕ ರಿಪೋರ್ಟಿನಲ್ಲಿ ಸೂಚಿಸಿ ಮೆಂಬರರಿಗೆ ಕಳಿಸಿದೆಯಲ್ಲದೆ ಬೇಂಕಿನ ಆಫೀಸ ಬೋರ್ಡಿಗೂ ಸಹ ಅಂಟಿಸಲಾಗಿದೆ

ಅಂಕೋಲಾ, ತಾ 5—9—1945

S. N. Shetgeri,
Chairman,
The Ankola Urban
Co operative Credit Bank, Ltd.

ನೋಟೀಸು.

ಕಾನಡಾ ಜಿಲ್ಹೆಯಲ್ಲಿಯ ಯಾವತ್ತೂ ಅರಿವೆಯ ಲೈಸೆನ್ಸದಾರರಿಗೆ ತಿಳಿಸುವದೇನಂದರೆ -

ಮುಂಬಯಿ ಕೊಟನ್ ಕ್ಲೋಥ ಟ್ರೇಡ ರೆಗ್ಯುಲೇಶನ್ ಆರ್ಡರ 1945ನೇದು 1945ನೇ ಸಪ್ಟಂಬರ 1ನೇ ತಾರೀಖಿನಿಂದ ಕಾನಡಾ ಜಿಲ್ಹೆಯಲ್ಲಿ ಅಮಲಿನಲ್ಲಿ ಬಂದಿರುತ್ತದೆ. ಅದರ ಪ್ರಕಾರ ಮುಂಬಯಿ ಕೊಟನ್ ಕ್ಲೋಥ ಡೀಲರ್ಸ ಲೈಸೆನ್ಸಿಂಗ ಆರ್ಡರ 1943ನೇದು 1945ನೇ ಸಪ್ಟಂಬರ 1ನೇ ತಾರೀಖಿನಿಂದ ರದ್ದ ಆಗಿರುತ್ತದೆ, ಮತ್ತು ಈಗ ಚಾಲೂ ಇರುವ ಎಲ್ಲ ಅರಿವೆಯ ಲೈಸೆನ್ಸಗಳು 1945ನೇ ಸಪ್ಟಂಬರ ಆಖೈರಿಗೆ ರದ್ದು ಆಗುತ್ತವೆ ಕಾರಣ ಅರಿವೆಯ ಎಲ್ಲಾ ವ್ಯಾಪಾರಸ್ಥರು ತಾ 30-9-1945ನೇದರೊಳಗೆ ಹೊಸ ಆರ್ಡರ ಪ್ರಕಾರ ಲೈಸೆನ್ಸ ಪಡೆಕೊಳ್ಳುವ ಬಗ್ಗೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಕಾನಡಾ ಇವರ ಕಡೆಗೆ ಅರ್ಜಿಮಾಡಬೇಕು

ಹೊಸ ಲೈಸನ್ಸಗಳ ಸಲುವಾಗಿ ಅರ್ಜಿ ಮಾಡುವ ಕ್ರಮ ಲೈಸೆನ್ಸ ಫೀ ವಗೈರೆ ಮಾಹಿತಿಯ ಬಗ್ಗೆ ತಾಲೂಕ ಯಾ ಪೇಟಾ ಕಚೇರಿಯಲ್ಲಿ ಚೌಕಶಿ ಮಾಡಬೇಕು

Karwar
1—9—1945

V. NANJAPPA,
District Magistrate Kanara

ಜಾಹೀರಾತು.

ಈ ಜಾಹೀರಾತ ಮೂಲಕ ತಿಳಿಸುವದೇನಂದರೆ :—

ಮುಂಬಯಿ ಸರಕಾರದವರು ಸಾಲ ಸರಿಪಡಿಸುವ (ಡೆಟ್ ಎಡಜಸ್ಟಮೆಂಟ) ಬೋರ್ಡಿಗೆ ಸಾಲಗಾರ-ಒಕ್ಕಲಿಗರ ಸಲುವಾಗಿ ಅರ್ಜಿಗಳನ್ನು ಬರೆಕೊಡುವದರ ಬಗ್ಗೆ ಆಯಾ ಸಾಲ ಸರಿಪಡಿಸುವ ಬೋರ್ಡಿಗೆ ಅರ್ಜಿ ಬರೆಯುವವರನ್ನು (ಪಿಟಿಶನ್ ರೈಟರ) ನೇಮಿಸಲಿಕ್ಕೆ ಆಯಾ ಬೋರ್ಡಿನ ಚೇರಮನ್ನರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ ಅರ್ಜಿ ಬರೆಯುವವರ ಸ್ಥಳಕ್ಕೆ ಅರ್ಜಿ ಮಾಡಿಕೊಳ್ಳುವವರು ಆಯಾ ಸಾಲ ಸರಿಪಡಿಸುವ ಬೋರ್ಡಿನ (Debt-Adjustment Board) ಚೇರಮನ್ನರ ಕಡೆಗೆ ಅರ್ಜಿ ಮಾಡಿಕೊಳ್ಳತಕ್ಕದ್ದು. ಸಾಲಗಾರ-ಒಕ್ಕಲಿಗರು ಕಾಯದೆ ಕಲಮು ೧೭ (೧) ರನ್ವಯ ಮಾಡುವ ತಮ್ಮ ಅರ್ಜಿಗಳನ್ನು, ಸ್ವತಃ ಅರ್ಜಿಗಳನ್ನು ತುಂಬಲಿಕ್ಕೆ ಬಾರದಿದ್ದ ಸಂಗತಿಗಳಲ್ಲಿ, ಅರ್ಜಿ ಬರೆಯುವವರಿಂದ (Petition-writers) ತುಂಬಿಸಿಕೊಳ್ಳತಕ್ಕದ್ದು ತಿಳಿಯುವದು

ಸಾಲ ಸರಿಪಡಿಸುವ ಬೋರ್ಡ. (Debt Adjustment Board)	ಸಾಲ ಸರಿಪಡಿಸುವ ಆಫೀಸಿನ ಸ್ಥಳ.
ಕಾರವಾರ ಜಿಲ್ಹಾ	
೧ ಹಳಿಯಾಳ ತಾಲೂಕ ೨ ಯಲ್ಲಾಪೂರ ,,	ಹಳಿಯಾಳ
ವಿಜಾಪುರ ಜಿಲ್ಹಾ	
೧ ವಿಜಾಪುರ ತಾಲೂಕ ಬೀಳಗಿ ಪೇಟಾ	ವಿಜಾಪೂರ.
೨ ಮುದ್ದೇಬಿಹಾಳ ತಾಲೂಕ ಬಾಗೇವಾಡಿ ತಾಲೂಕ	ಮುದ್ದೇಬಿಹಾಳ

ಬೆಳಗಾಂವ,
[illegible]

S B. Godhi.
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ದಕ್ಷಿಣ ಭಾಗ, ಬೆಳಗಾಂವ

ಇದನ್ನು ಪಾಂಡುರಂಗ ಕೃಷ್ಣ ಶಿರಸಿಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೩
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು

Reg. No. B. 1270. Monday, 17th September, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೧೨.

ಕುಮಟಾ:- ಸೋಮವಾರ, ತಾ. ೧೭ ಮಾಹೆ ಸಪ್ಟಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರಾರಂಭ—೧ ಇಂಚ್ ಉದ್ದ
೧ ಸಾರೆಗೆ ೬ ಆಣೆಯಂತೆ
ನಂತರದ್ದಕ್ಕೆ ೧ ಇಂಚ್ ಉದ್ದ
೧ ಸಾರೆಗೆ ೪ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಹಿಂದೀ ರಾಜಕಾರಣ.

(ನಿರೀಕ್ಷಕನು ಬರೆದುದು)

ಹಿಂದೀ ರಾಜಕಾರಣಕ್ಕೆ ಈವಾಗ ಒಳ್ಳೇ ಕಳೆ ಬಂದಿದೆ. ಕಳೆದ ಮೂರು ವರ್ಷಗಳ ಘೋರ, ಘನಘೋರ ದಬ್ಬಾಳಿಕೆಯಿಂದ ಹಿಂದೀ ರಾಷ್ಟ್ರೀಯ ಸಭೆಯು ಶಕ್ತಿಹೀನ ಇಲ್ಲವೆ ನಿಷ್ಪ್ರಭವಾಗದೆ, ಆ ದಿವ್ಯದಿಂದ ಅದರ ತೇಜಸ್ಸು ವರ್ಚಸ್ಸು ಬಹಳಷ್ಟು ಬೆಳೆದಿವೆ. ರಾಷ್ಟ್ರೀಯ ಸಭೆಯವರ ಗಾಡುಗಾಗಳೀಗ ಘೋರಾರಣ್ಯದೊಳಗಿನ ಹುಲಿ-ಸಿಂಹಗಳ ಗಾಡುಗಾಗಳಾಗಿರದೆ, ಊರೊಳಗೆ ಪ್ರವೇಶ ಮಾಡಿದ ವನರಾಜರ ಗರ್ಜನೆಗಳಷ್ಟೇ ಗಂಭೀರ ಮತ್ತು ಪರಿಣಾಮಕಾರಿಗಳಾಗಹತ್ತಿವೆ. ಕಳೆದ ಆಗೋಸ್ಟ ತಾ. ೭ನೇಗೆ ದಿವಾನ ಕರುಣ ಮಹೇಂದ್ರ ಚೌಧರಿಯನ್ನು ಗಲ್ಲಿಗೇರಿಸಿದ ವೃತ್ತಾಂತವನ್ನು ಓದಿ ಸಂತಪ್ತರಾದ ವೀರ ವಲ್ಲಭಭಾಯಿ ಪಟೇಲರು ಅದೇ ತಾ. ೯ನೇದು ಮಾಡಿದ ಉಗ್ರ ಭಾಷಣದಿಂದ ಆಳರಸರು ಒಮ್ಮೆಲೇ ಎಚ್ಚತ್ತು, ಕೂಡಲೇ ಅಷ್ಟಿ-ಚಿಮೂರ, ಕುಲಶೇಖರಪಟ್ಟಿಣ ಮೊದಲಾದ ಕಡೆಯ ಗಲಭೆಗಳ ಮೊಕದ್ದಮೆಗಳಲ್ಲಿ ವಧೆಯ ಶಿಕ್ಷೆ ವಿಧಿಸಲ್ಪಟ್ಟ ಕರುಣ ಆರೋಪಿಗಳ ಶಿಕ್ಷೆಯನ್ನು ಆಮರಣ ಕರಿನೀರಿನ ಶಿಕ್ಷೆಗಿಳಿಸಿಬಿಟ್ಟರು! ಇದೇ ಬರುವ ಛಳಿಗಾಲದಲ್ಲಿ ಸರಕಾರದವರು ಕೇಂದ್ರ ಶಾಸನ-ಮಂಡಳಿಗಳ ಹಾಗೂ ಬೇರೆ ಬೇರೆ ಪ್ರಾಂತಿಕ ಶಾಸನ-ಮಂಡಳಿಗಳ ಚುನಾವಣೆಗಳನ್ನು ನಡಿಸಲಿದ್ದಾರಷ್ಟೇ. ಈ ಮಂಡಳಿಗಳ ಮತದಾರ ಯಾದಿಗಳು ೧೯೪೧ರಲ್ಲಿ ಸಿದ್ಧಗೊಳಿಸಲ್ಪಟ್ಟದ್ದವು. ಅವು ತೀರ ಅಪೂರ್ಣ ಮತ್ತು ಸದೋಷವಿರುತ್ತವೆ. ಆದರೂ ಅವನ್ನೇ ಆಧರಿಸಿ ಚುನಾವಣೆಗಳನ್ನು ನಡಿಸುವದಾಗಿ ಬೇರೆ ಬೇರೆ ಪ್ರಾಂತ್ಯ ಸರಕಾರಗಳು ಜಾಹೀರನಾಮೆ ಹೊರಡಿಸಿದವು! ಆಗ ಇಂತಹ ಅಪೂರ್ಣ ಮತ್ತು ದೋಷ-ಪೂರ್ಣ ಮತದಾರ ಯಾದಿಗಳನ್ನು ಅವಲಂಬಿಸಿ ಚುನಾವಣೆಗಳನ್ನು ನಡಿಸುವದಾದಲ್ಲಿ ರಾಷ್ಟ್ರೀಯ ಸಭೆಯು ಅವನ್ನು ಬಹಿಷ್ಕರಿಸಬೇಕಾದೀತಾಗಿ ರಾಷ್ಟ್ರಪತಿ ಮೌಲಾನಾ ಅಬುಲ ಕಲಂ ಆಝಾದರು ಎಚ್ಚರಿಕೆ ಕೊಟ್ಟುಬಿಟ್ಟರು. ಆ ಎಚ್ಚರಿಕೆ ಕೇಳಿದ ಆಳರಸರು ಈಗ ಹೊಸತಾಗಿ ಮತದಾರ ಯಾದಿಗಳ ತಿದ್ದುಪಡಿ ಮಾಡಲು ಸಿದ್ಧರಾಗಿದ್ದಾರೆ! ಸರ್ವಾಧಿಕಾರಿ ವೆವ್ಹೆಲ ದೊರೆಗಳು ೩ ವಾರಗಳ ವರೆಗೆ ಲಂಡನದಲ್ಲಿ ಬ್ರಿಟಿಶ ಮಂತ್ರಿಮಂಡಳದೊಡನೆ ಹಿಂದೀ ಸಮಸ್ಯೆಯನ್ನು ಕುರಿತು ವಿಚಾರ-ವಿನಿಮಯ ಮಾಡಿ ಮೊನ್ನೆ ಸಂಜೆ ಹಿಂತಿರುಗಿ ಬಂದಿದ್ದಾರೆ. ಅವರು ವಿಲಾಯತಿಯಿಂದ ಹೊಸದೇನೂ ತರುವಂತಿಲ್ಲೆಂದೂ, ಬ್ರಿಟಿಶ ಮಂತ್ರಿಮಂಡಳದವರು ಮುಂಬರುವ ಚುನಾವಣೆಗಳ ಪರಿಣಾಮವೇನಾಗುತ್ತದೆಂದು ನೋಡಿ ಮುಂದಿನ ಆಲೋಚನೆ ಮಾಡುವದಾಗಿ ತೀರ್ಮಾನಿಸಿದ್ದಾರೆಂದೂ, ಚುನಾವಣೆಗಳು ಮುಗಿಯುವ ವರೆಗೆ ಈಗಿನ ರಾಜಚಕ್ರವೇ ಮುಂದರಿಯುವದೆಂದೂ ಲಂಡನದಿಂದ ಸುದ್ದಿಗಳು ಬರುತ್ತವೆ. ತನ್ಮಧ್ಯೇ ಸರದಾರ ವಲ್ಲಭಭಾಯಿಯವರು ಅಸೋಸಿಯೇಟೆಡ್ ಪ್ರೆಸ್" ಸುದ್ದಿಸಂಸ್ಥೆಯ ಸುದ್ದಿಗಾರರಿಗೆ ಕೊಟ್ಟ ಒಂದು ಸಂದರ್ಶನದಲ್ಲಿ, ಬ್ರಿಟಿಶ ಕಾರ್ಮಿಕ ಮಂತ್ರಿಮಂಡಳವು ಭಾರತೀಯರಿಗೆ ರಾಜ್ಯಾಧಿಕಾರ ಬಿಟ್ಟುಕೊಡಲೊಪ್ಪದಿದ್ದಲ್ಲಿ ಭಾರತೀಯರು ಅದನ್ನು ಕಸಿದುಕೊಳ್ಳುವ ಪ್ರಸಂಗ ಬರಬಹುದಾಗಿ ಒಂದು ಎಚ್ಚರಿಕೆ ಕೊಟ್ಟಿದ್ದರು. ಈ ಎಚ್ಚರಿಕೆ ಕೂಡಲೆ ಪರಿಣಾಮಕಾರಿ ಸರದಾರರು ಗಾಬರಿ ಮಾಡಕೂಡದೆಂತಲೂ ವೆವ್ಹೆಲ ದೊರೆಗಳು ಭಾರತಕ್ಕೆ ಹಿಂತಿರುಗುತ್ತಲೇ ಒಂದು ಘೋಷಣೆ ಹೊರಡಿಸುವವರಿದ್ದಾರೆಂತಲೂ, ರಾಜ್ಯಾಧಿಕಾರ ಕಸಿದುಕೊಳ್ಳುವ ಆಲೋಚನೆ ಮಾಡುವ ಮೊದಲು ಸರದಾರರು ಆ ಘೋಷಣೆಯನ್ನು ಎದುರು ನೋಡುವದು ಉಚಿತವೆಂತಲೂ ಬ್ರಿಟಿಶ ಮಂತ್ರಿ-ಮಂಡಳದ ಓರ್ವ ಪ್ರಮುಖ ಸಭಾಸದರು ನುಡಿದಿರುವರೆಂಬ ಈಗ ವಾರ್ತೆ ಬಂದಿದೆ. ಇವೆಲ್ಲ ಚಿನ್ಹೆಗಳ ಮೇಲಿಂದ ರಾಷ್ಟ್ರೀಯ ಸಭೆಯವರ ಪ್ರಭಾವವೂ ಅಧಿಕಾರವೂ ಎಷ್ಟು ಬೆಳೆದಿವೆಯೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ರಾಷ್ಟ್ರೀಯ ಸಭೆಯವರನ್ನು ಕಣಕುವ ಇಲ್ಲವೆ ಅವರನ್ನು ರೇಗಿಸಿಬಿಡುವ ಧೈರ್ಯ ಸರ್ವಾಧಿಕಾರಿಗಳಿಗಾಗಲಿ ಬ್ರಿಟಿಶ ಮಂತ್ರಿಮಂಡಳಕ್ಕಾಗಲಿ ಈಗ ಇಲ್ಲ. ಸರ್ವಾಧಿಕಾರಿಗಳು ನಿನ್ನೆ ಮುಂಜಾನೆ ದಿಲ್ಲಿಗೆ ತಲ್ಪಿದ್ದಾರೆ. ಅವರು ಕೂಡಲೇ ತಮ್ಮ ಕಾರ್ಯಕಾರಿ ಮಂಡಳಕ್ಕೆ ಲಂಡನ ಮಾತುಕತೆಗಳಲ್ಲೇನಾಯಿತೆಂಬುದನ್ನು ತಿಳಿಸಿ ಇಂದು ನಾಳೆ ಒಂದು ಮಹತ್ವದ ಘೋಷಣೆ ಮಾಡಲಿದ್ದಾರೆಂದು ಲಂಡನದಿಂದ ರಾಯ್ಟರ ಸುದ್ದಿಗಾರನು ತಿಳಿಸಿದ್ದಾನೆ. ಬ್ರಿಟಿಶ ಕಾರ್ಮಿಕ ಪಕ್ಷದವರು ಈ ವರೆಗೆ ಭಾರತದ [illegible] ತ್ತ ಬಂದಿದ್ದಾರೆ. ಭಾರತದ ಸಮಸ್ಯೆಯನ್ನು ಬಿಡಿಸುವವರೆಗೆ ಅಟ್ಲೀ-ಮಂತ್ರಿಮಂಡಳಕ್ಕೆ ತಾವು ವಿಶ್ರಾಂತಿಯನ್ನು ಕೊಡಲಾರೆವೆಂದು ಬ್ರಿಟಿಶ ಕಾರ್ಮಿಕ ಪಕ್ಷದ ಅಧ್ಯಕ್ಷರಾದ ಪ್ರೊ॥ ಹೆರೊಲ್ಡ ಲಾಸ್ಕಿಯವರು ಕಳೆದ ವಾರವೇ ಘೋಷಣೆ ಮಾಡಿದ್ದುಂಟು. ಕಾರ್ಮಿಕ ಪಕ್ಷದವರು ತಮ್ಮ ಈ ವಚನ-ಆಶ್ವಾಸನೆಗಳನ್ನು ಯಾವ ಬಗೆಯಿಂದ ಮತ್ತು ಎಷ್ಟರ ಮಟ್ಟಿಗೆ ಪ್ರತ್ಯಕ್ಷ ಕಾರ್ಯರೂಪಕ್ಕೆ ತರಬಲ್ಲರು ಇಲ್ಲವೆ ತರಬಯಸುತ್ತಾರೆಂಬುದು ಸರ್ವಾಧಿಕಾರಿಗಳ ಈ ಘೋಷಣೆಯಿಂದ ಸಿದ್ಧವಾಗುವದು.

ಇತ್ತ ರಾಷ್ಟ್ರೀಯ ಸಭೆಯವರೂ ತಮ್ಮ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ಇದೇ ಬರುವ ಶುಕ್ರವಾರ ಮುಂಬಯಿಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭೆ ಕೂಡಲಿದೆ. ೧೯೪೨ನೇ ಇಸವಿಯ ಆಗೋಸ್ಟ ೮ರ ಬಳಿಕ ಈ ಸಮಿತಿಯು ಕೂಡುವದು ಇದೇ ಮೊದಲು ಬಾರಿ. ಅದರಿಂದಲೂ ದೇಶದೊಳಗಿನ ಪರಿಸ್ಥಿತಿಯು ಅಷ್ಟೇ ಗಂಭೀರವಾಗಿರುವದರಿಂದಲೂ ಈ ಸಭೆಗೆ ರಾಷ್ಟ್ರೀಯ ಸಭೆಯ ಮಹಾಧಿವೇಶನದಷ್ಟೇ ಮಹತ್ವ ಬಂದಿದೆ. ಮುಂಬಯಿ ಪ್ರಾಂ॥ ಕಾಂ॥ ಕಮಿಟಿಯವರು ಈ ಸಭೆಯ ಅಧಿವೇಶನಕ್ಕಾಗಿ ನಿರ್ಮಿಸಿರುವ ಸಭಾಮಂಟಪದಲ್ಲಿ ೨೫೦೦೦ ಪ್ರೇಕ್ಷಕರಿಗಷ್ಟೇ ಕೂಡ್ರುವ ಅನುಕೂಲತೆ ಮಾಡಲು ಸಮರ್ಥರಾಗಿದ್ದಾರೆ. ಆ ಪ್ರೇಕ್ಷಕ-ತಿಕೀಟುಗಳೆಲ್ಲ ಈಗಲೇ ಖರ್ಚಾಗಿ ಹೋಗಿವೆ. ಆದರೂ ದೇಶದ ಮೂಲೆಮೂಲೆಗಳಿಂದ ತಿಕೀಟುಗಳಿಗಾಗಿ ಬೇಡಿಕೆ ಬರುತ್ತಿದೆಯಂತೆ. ಅದರಿಂದ ಮುಂಬಯಿ ಪ್ರಾಂ॥ ಕಾಂ॥ ಕಮಿಟಿಯ ಕಾರ್ಯದರ್ಶಿಗಳು ಒಂದು ಪ್ರಕಟನೆಯನ್ನು ಹೊರಡಿಸಿ ತಿಕೀಟು ಸಿಕ್ಕ ನಿಶ್ಚಿತ ವರ್ತಮಾನ ತಿಳಿದ ಹೊರತಿನವರು ಮುಂಬಯಿಗೆ ಬರಬಾರದೆಂದು ಎಚ್ಚರಿಕೆ ಕೊಟ್ಟಿರುತ್ತಾರೆ. ಮುಂಬಯಿಯ ಸಭೆಗೆ ಎಷ್ಟು ಮಹತ್ವ ಬಂದಿದೆಯೆಂಬುದು ಇದರ ಮೇಲಿಂದ ತಿಳಿದು ಬರುವಂತಿದೆ. ೧೯೩೫ರಲ್ಲಿ ಹಿಂದೀ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ಕಾಲಕ್ಕೆ ರಾಷ್ಟ್ರೀಯ ಸಭೆಯ ಇತಿಹಾಸವನ್ನು ಬರೆದು ಪ್ರಕಟಿಸಿದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಅಹಮ್ಮದನಗರ ಕೋಟೆಯೊಳಗಿನ ತಮ್ಮ ಬಂಧೀವಾಸದಲ್ಲಿ ೧೯೩೫ರಿಂದ ೧೯೪೫ರ ವರೆಗಿನ ಮುಂದಿನ ಇತಿಹಾಸವನ್ನು ಬರೆದುತೆಗೆದಿದ್ದಾರಂತೆ. ೧೨೦೦ರಷ್ಟು ಪುಟಗಳುಳ್ಳ ಆ ಗ್ರಂಥವನ್ನು ಈ ಸಭೆಯ ಕಾಲಕ್ಕೇ ಪ್ರಕಟಿಸಲು ಮುಂಬಯಿ ಪ್ರಾಂ॥ ಕಾಂ॥ ಕಮಿಟಿಯವರು ಅನುವಾಗಿದ್ದಾರೆ.

ಮುಂಬಯಿಯಲ್ಲಿ ಕೂಡುವ ಅ॥ ಭಾ॥ ಕಾಂ॥ ಸಮಿತಿಯ ಮುಂದ ಅನೇಕ ಮಹತ್ವದ ಗೊತ್ತುವಳಿಗಳನ್ನೂ ವಿಷಯಗಳನ್ನೂ ತಯಾರಿಸಲಿದ್ದು ದೇಶದೊಳಗಿನ ಪರಿಸ್ಥಿತಿಯನ್ನು ಪರಾಂಬರಿಸಿ ಅವಶ್ಯವಿದ್ದ ನಿರ್ಣಯಗಳನ್ನು ಮಾಡಲಿದ್ದಾರೆ. ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಕಳೆದ ಬುಧವಾರದಿಂದ ಪುಣೆಯಲ್ಲಿ ಸೇರಿದೆ. ಮಂಡಳದ ಸದಸ್ಯರಲ್ಲದ ಅನೇಕ ಪ್ರಮುಖರಿಗೂ ಈ ಸಭೆಗೆ ಇರಲು ಆಮಂತ್ರಣವಾದಂತೆ ಅವರೂ ಪುಣೆಗೆ ಬಂದಿದ್ದಾರೆ. ಸರ್ವಾಧಿಕಾರಿಗಳ ಲಂಡನ ಟಿಪ್ಪಣಿಯು, ಪರಿಣಾಮ ಮತ್ತು ವ್ಯಾಪ್ತಿ, ಭಾವಿ ಚುನಾವಣೆಗಳು, ಕಾಂಗ್ರೆಸ ಸಂಸ್ಥೆಯ ಪುನರ್ಘಟನೆ, ಪಾಕಿಸ್ತಾನ-ಸಮಸ್ಯೆ, ಭಾರತದ ಭಾವಿ ಸಂಯುಕ್ತ ಘಟನೆಯಲ್ಲಿ ಸೇರುವ, ಸೇರದಿರುವ ಇಲ್ಲವೆ ಸೇರಿ ಹೊರಬೀಳುವ ಅಧಿಕಾರವನ್ನು —ಇವಕ್ಕೇ ಸ್ವಯಂನಿರ್ಣಯಾಧಿಕಾರವೆಂದು ಹೆಸರು ಬಿದ್ದಿದೆ— ಪ್ರಾಂತಗಳಿಗೆ ಕೊಡಬಹುದೋ ಹೇಗೆ ಮತ್ತು ಕೊಟ್ಟರೆ ಅದರ ವ್ಯಾಪ್ತಿಯೆಷ್ಟಿರಬೇಕು ಎಂ[illegible] ಇವೇ ಮೊದಲಾದ ಪ್ರಶ್ನೆಗಳ ಚರ್ಚೆ [illegible] ಕಾರಿ ಮಂಡಳದಲ್ಲಿ ನಡೆದಿದೆ. ಮಂಡಳದ ಸಭೆ ನಾಳೆ ಮಂಗಳವಾರ ಸಂಜೆಯ ವರೆಗೆ ನಡೆಯುವದೆಂದು ಹೇಳುತ್ತಾರೆ. ಅ॥ ಭಾ॥ ಕಾಂ॥ ಸಮಿತಿಯ ಸಭೆಯ ಮಂಜೂರಿಗಾಗಿ ಇಡಲು ಮಂಡಳವು ತಯಾರಿಸಿರುವ ನಾಲ್ಕು ಮಹತ್ವದ ಗೊತ್ತುವಳಿಗಳ ಕರಡುಗಳು ಈಗಾಗಲೇ ಪ್ರಕಟವಾಗಿವೆ. ೧ನೇಯ ಗೊತ್ತುವಳಿಯಲ್ಲಿ, ತಾ. ೮-೮-೧೯೪೨ರಿಂದ ಮುಂದೆ ಮೂರು ವರ್ಷಗಳ ವರೆಗೆ ಸರಕಾರದವರು ನಡಿಸಿದ ದಾರುಣ ದಬ್ಬಾಳಿಕೆಗೆ ಜನರು ಧೈರ್ಯದಿಂದ ಎದುರಾಗಿ, ಆ ಅಗ್ನಿ ಪರೀಕ್ಷೆಯಲ್ಲೂ ಕೂಡ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯಕ್ಕೆ ಅಂಟಿಕೊಂಡಿರುವ ಬಗ್ಗೆ ಜನರನ್ನು ಅಭಿನಂದಿಸಿ, ಮೂರನೆಯ ಮಹಾಯುದ್ಧದ ಸಾಧ್ಯಾಸಾಧ್ಯತೆಗಳ ಚರ್ಚೆ ನಡೆದ "ಎಟಂ ಬಾಂಬಿ"ನ ಈ ಯುಗದಲ್ಲಿ ಸಾಮ್ರಾಜ್ಯವಾದಿ ರಾಷ್ಟ್ರಗಳು ತಮ್ಮ ಸಾಮ್ರಾಜ್ಯ ತೃಷ್ಣೆಯನ್ನು ಬಿಟ್ಟುಕೊಟ್ಟು ಹಿಂದುಸ್ತಾನದ ಹಾಗೂ ಇನ್ನುಳಿದ ಅಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಮನ್ನಿಸುವದು ಅವಶ್ಯವಿರುತ್ತದೆಂದು ಸಾರಲಾಗಿದೆ. ೨ನೆಯ ಗೊತ್ತುವಳಿಯಲ್ಲಿ ಮುಂಬರುವ ಕೇಂದ್ರ ಹಾಗೂ ಪ್ರಾಂತಿಕ ಶಾಸನ-ಮಂಡಳಿಗಳ ಚುನಾವಣೆಗಳ ಸಂಬಂಧದಲ್ಲಿ ರಾಷ್ಟ್ರೀಯ ಸಭೆಯ ಮಾರ್ಗದಲ್ಲಿ ಒಡ್ಡಲ್ಪಟ್ಟಿರುವ ಹಲವಾರು ಅಡೆತಡೆಗಳನ್ನು ಲಕ್ಷಿಸಿ, ಆ ಅಡೆತಡೆಗಳಿದ್ದಾಗ್ಯೂ ಕಾಂಗ್ರೆಸ್ಸಿಗೂ ಕಾಂಗ್ರೆಸ್ಸಿನ ಸ್ವಾತಂತ್ರ್ಯದ ಧ್ಯೇಯಕ್ಕೂ ಭಾರತದಲ್ಲಿ ಎಷ್ಟು ಬೆಂಬಲವುಂಟೆಂಬುದನ್ನು ಜಗತ್ತಿಗೆ ತೋರಿಸಿಕೊಡುವದಕ್ಕಾಗಿ ಕಾಂಗ್ರೆಸ್ಸು ಭಾವಿ ಚುನಾವಣೆಗಳಲ್ಲಿ ಸೇರಿ ಹೋರಾಡಬೇಕೆಂದು ನಿರ್ಧರಿಸಲಾಗಿದೆ (ರಾಷ್ಟ್ರೀಯ ಸಭೆಯ ಚುನಾವಣೆಯ ಪ್ರಕಟನೆಯನ್ನು ತಯಾರಿಸುವ ಕೆಲಸ ಪಂ॥ ಜವಾಹರಲಾಲರಿಗೆ ಒಪ್ಪಿಸಲ್ಪಟ್ಟದೆಯಂತೆ. ಸಾಧ್ಯವಾದರೆ ಅವರು ಅದನ್ನು ಅ॥ ಭಾ॥ ಕಾಂ॥ ಸಮಿತಿಯ ಸಭೆಯ ಮುಂಚೆ ಬರೆದು ತೆಗೆದು ಆ ಸಭೆಯ ಮುಂದಿಡುವರೆಂತಲೂ, ಇಲ್ಲದಿದ್ದರೆ ಅದನ್ನು ಮಂಜೂರ ಮಾಡುವದಕ್ಕಾಗಿ ಹಿಂದಿನಿಂದ ಅ॥ ಭಾ॥ ಕಾಂ॥ ಸಮಿತಿಯ ಸಭೆ ಕೂಡಿಸಲಾಗುವದೆಂದೂ ವರದಿಯಾಗಿದೆ. ಚುನಾವಣೆಗಳ ಹೋರಾಟದ ವ್ಯವಸ್ಥೆ ಸರದಾರ ಪಟೇಲ—ಮೌಲಾನಾ ಆಝಾದ— ಡಾ॥ ರಾಜೇಂದ್ರಪ್ರಸಾದ ಈ ಮೂವರ ಪಾರ್ಲಿಮೆಂಟರಿ ಬೋರ್ಡಿಗೆ ಒಪ್ಪಿಸಲ್ಪಟ್ಟದೆಯಂತೆ. ಚುನಾವಣೆಯ ಪ್ರಚಾರಕ್ಕಾಗಿ ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಮುಖಂಡರು ಸಂಚರಿಸುವರೆಂತಲೂ ಸುದ್ದಿ ಪ್ರಕಟವಾಗಿದೆ.) ೩ನೇಯ ಗೊತ್ತುವಳಿಯಲ್ಲಿ, ರಾಷ್ಟ್ರೀಯ ಸಭೆಯ ಪ್ರಾರಂಭದಿಂದ ಈ ವರೆಗೆ ಅದರ ಧ್ಯೇಯ — ಧೋರಣೆಗಳಲ್ಲಾದ ವಿಕಾಸ ವಿವರಣೆಗಳನ್ನು ವಿವರಿಸಿ, ಸಂಪೂರ್ಣ ಸ್ವಾತಂತ್ರ್ಯವೇ ರಾಷ್ಟ್ರೀಯ ಸಭೆಯ ಸಾಧ್ಯವಾಗಿರುತ್ತದೆಂದೂ, ಸಾಧ್ಯವಿದ್ದಲ್ಲಿ ಸದಾಚಾರ ಸಂಧಾನಗಳಿಂದ ಮತ್ತು ಅವಶ್ಯವೆನಿಸಿದಾಗ ಅಸಹಕಾರ-ಸತ್ಯಾಗ್ರಹ-ಕಾನೂನ ಭಂಗಗಳಿಂದ ಅದನ್ನು ಸಾಧಿಸುವದೆಂತಲೂ ಸ್ಪಷ್ಟಪಡಿಸಲಾಗಿದೆ. ೪ನೇ ಗೊತ್ತುವಳಿಯಲ್ಲಿ, ಜಗತ್ತಿನಲ್ಲೆಲ್ಲ ವಿಸ್ತೃತ ರಾಷ್ಟ್ರಸಂಘಗಳ ನಿರ್ಮಾಣದ ವಿಚಾರ ನಡಿಯುತ್ತಿರುವ ಈ ಯುಗದೊಳಗೆ ಭಾರತದ ವಿಭಜನೆ ಮಾಡುವ ಕಲ್ಪನೆ ಅಸಹನೀಯವಿರುತ್ತದೆಂತಲೂ ಆದರೂ ಯಾವದೊಂದು ಘಟಕ ಪ್ರಾಂತವು ಸಂಯುಕ್ತ ಭಾರತದಲ್ಲಿ ಉಳಿಯಲು ಬಯಸದಿದ್ದರೆ ಅದರ ಮೇಲೆ ಒತ್ತಾಯ ಮಾಡಲಿಕ್ಕಿಲ್ಲೆಂದೂ ಸ್ಪಷ್ಟೀಕರಣ ಮಾಡಲಾಗಿದೆ.

The Agricultural & Industrial Bank, Ltd.
[Incorporated in British India, Liability of Members limited]
Head Office **COONDAPOOR. S. I.**
Branches:-

ANKOLA,	HAVERI,	NAGAR,
BELGAUM	HUBLI	SHIMOGA,
COONDAPOOR	KARWAR,	SIRSI,
DHARWAR,	KUMTA,	SOMWARPET,
GOKARN,	MANGALORE,	VIRAJPET.

All kinds of Banking Business transacted.
Paid-up Capital & Reserves exceed Rs. 4 LAKHS.
Please apply for particulars.
1—9—1945

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ರಾತ್ರಿ [illegible] ತಕ್ಕ ಮಳೆ [illegible] ಪ್ರಾರಂಭದಿಂದ ಈ [illegible] ಇಂತು ಆಗಿ [illegible] ಬೆಳೆಗಳ [illegible]

ಇದೇ [illegible] ಒಂದು [illegible] ಮಾಡಿದ [illegible] ಬುದ್ಧಿ [illegible] ಅಕ್ಕಿಯ [illegible]

ಮುಂಬಯಿ ಸರಕಾರದ [illegible] ಹಾಕಿದ್ದರೆ [illegible] ಕಾಂಗ್ರೆಸ್ [illegible] ಜನರ [illegible]

[illegible] ಮುಂಬಯಿ ಅಸೆಂಬ್ಲಿ [illegible] ಚುನಾವಣೆ [illegible] ಈಗ [illegible] ಬಹಿರಂಗ [illegible]

ಮುಂಬಯಿಯ [illegible] ರಾತ್ರಿ [illegible] ಧೈನ [illegible] ತಿಳಿಸಲು ವ್ಯಸನವಾಗುತ್ತದೆ. ವ್ಯಾಪಾರಸ್ಥರು [illegible] ಕಾಂಗ್ರೆಸ ಅಭಿಮಾನಿಗಳೂ ಆಗಿದ್ದರು. ವೃತಾತ್ಮರಿಗೆ ಶ್ರೀ [illegible] ಚಿರಂತನ ಶಾಂತಿಯನ್ನೀಯಲಿ! (೩ನೇ ಪುಟ ನೋಡಿರಿ)

ಜಾಹೀರ ನೋಟೀಸು.

ಕಾನಡಾ ಜಿಲ್ಹೆಯೊಳಗಿನ [illegible] ಬಾಂಧವರಿಗೆ ಕಾನಡಾ ಜಿಲ್ಹಾ ದೈ. ಬ್ರಾ. ಸಂಘದ ಅಧ್ಯಕ್ಷರವರಿಂದ ತಿಳಿಸುವದೇನಂದರೆ —

ಮೆ ರಜಿಸ್ಟ್ರಾರ ಆಫ್ ಪ್ಲಿಕ ಟ್ರಸ್ಟ್ಸ್, ಕಾನಡಾ [illegible] ಆಪ್ಪಣೆಯ ಮೇರೆಗೆ ನಮ್ಮ ಸಂಘದ ಲೆಕ್ಕ [illegible] ವಾಸ್ತವಿಕ [illegible] ರಿಪೋರ್ಟನ್ನು [illegible] ಸಂಘದ [illegible] ಬಾಂಧವರು ತಮ್ಮ ಹತ್ತರ ಇರುವ [illegible] ಬುಕ್ಕುಗಳನ್ನು ಅವರಲ್ಲಿ [illegible] ಇದೇ ಸಪ್ಟಂಬರ ತಿಂಗಳ ಅಂತ್ಯದೊಳಗಾಗಿ ನಮ್ಮ ಕಡೆಗೆ ತಪ್ಪದೆ ಮು[illegible] ಕಳಿಸಬೇಕು. ತಪ್ಪಿದಲ್ಲಿ "ದಿ ಪಬ್ಲಿಕ್ ಟ್ರಸ್ಟ ರಜಿಸ್ಟ್ರೇಶನ್" ಕಾಯಿದೆಯಂತೆ ಆಗಬಹುದಾದ ಅಪರಾಧಕ್ಕೆ ಅವರು ಪಾತ್ರರಾಗಬಹುದು. ತಾ. ೧೪ [illegible]

ಯು. ಬಾ. ರಾಯಕರ, | ಯು. ಬಿ. ವೀಟ ಬ್ಯಾಕೇರಿಕರ,
ಸೆಕ್ರೆಟರಿ, | ಅಧ್ಯಕ್ಷ, ಕಾ. ಜಿ. ದೈ. ಬ್ರಾ. ಸಂಘ,
ಕಾ. ಜಿ. ದೈ. ಬ್ರಾ. ಸಂಘ, | ಪ್ರೋ. ಬಾಡ,
ಮು. ಕಾಜುಬಾಗ, ಪೋ. ಕಾರವಾರ | ತಾ. ಕಾರವಾರ

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ವಂದೂರ ಗ್ರಾಮದ ವೆಂಕಟ್ರಮಣ [illegible] ಭಟ್ಟ ಇವರಿಗೆ ನಾನು ಕೊಡ [illegible] ಗಂಡು ಮಕ್ಕಳಿದ್ದು, ನಮ್ಮ ಪೈಕಿ ಹಿರೇಯವನಾದ ಗಜಾನನ ವೆಂಕಟ್ರಮಣ ಭಟ್ಟ ಇವರು ವಿವಾಹಿತ ಮನೆಯಲ್ಲಿ [illegible] ಮಾಡಿಕೊಂಡಿದ್ದಾರೆ. ನಮ್ಮ ಕುಟುಂಬಕ್ಕೆ ಸರಾಸರಿ ವರ್ಷಕ್ಕೆ ರೂ ೨೦೦೦ರಷ್ಟು ಉತ್ಪನ್ನ ಬರುತ್ತಿದ್ದು [illegible] ಕಡಿಮೆ ಇಲ್ಲ. ಆದರೂ [illegible] ದುರುದ್ದೇಶದಿಂದ ಬಾಕಿ ಉಳಿದ ನಮ್ಮ [illegible] ಸಾಲ ಹೇರುವ [illegible] ಅದಕ್ಕೆ ಈ ಹಿಂದೆ ಯಾ ಮುಂದೆ ಗದ್ರಿ [illegible] ಸಾಲ ಮಾಡಿದ್ದು ನಮ್ಮ ಕುಟುಂಬದ ಸಲುವಾಗಿ [illegible] ಅದು ನಮಗೆ ಬಾಧಕವಿದ್ದು ಅಲ್ಲ. ಈ ನೋಟೀಸನ್ನು ನನ್ನ ಅಣ್ಣ ರಾಮಚಂದ್ರ ವೆಂಕಟ್ರಮಣ ಭಟ್ಟ ಮತ್ತು ತಮ್ಮ [illegible] ವೆಂಕಟ್ರಮಣ ಭಟ್ಟ ಇವರ ಅನುಮತಿಯಿಂದಲೂ ಒತ್ತಾಯದಿಂದಲೂ ಜಾಹೀರಪಡಿಸಿದ್ದೇನೆ.

ವಂದೂರ ತಾಲೂಕ ಹೊನ್ನಾವರ, ತಾ. ೧೫ ೯ ೪೫

ನಾರಾಯಣ ವೆಂಕಟ್ರಮಣ ಭಟ್ಟ

ಸರಕಾರಿ ಹುಕುಮು.

ಆಧಿಕ ಇಲಾಖೆ (ಪೂರೈಕೆ)

ಮುಂಬಯಿ ಕೋಟೆ, ತಾ. ೨೪-೮-೧೯೪೫.

ಮುಂಬಯಿ ಸೀಧಾ ಹುಕುಮು, ೧೯೪೩.

ನಂ ೧೬೫ (೭೭)/ಡಿ. ಆರ್ — ೧೯೪೩ನೇ ಇಸವಿಯ ಮುಂಬಯಿ ರೇಶನಿಂಗ ಹುಕುಮಿನ ೨ನೇ ಕಲಮಿನನ್ವಯ ದೊರೆತ ಅಧಿಕಾರವನ್ನು ಉಪಯೋಗಿಸಿ, ಮುಂಬಯಿ ಸರಕಾರದವರು ವಿಧಿಸುವದೇನಂದರೆ — ಈ ಕೆಳಗೆ ಜೋಡಿಸಿದ (ಅ) ಪರಿಶಿಷ್ಟದಲ್ಲಿ ವಿವರಿಸಿದ ಯಾವದೇ ಸೀಧಾ-ಸಾಮಾನುಗಳನ್ನು (ಈ ಕೆಳಗೆ ಇವು ಸದರಿ ಸಾಮಾನುಗಳೆಂದು ಸಂಬೋಧಿಸಲ್ಪಟ್ಟಿವೆ) ಈ ಕೆಳಗೆ ಜೋಡಿಸಿದ (ಬ) ಪರಿಶಿಷ್ಟದ ೧ನೇ ಸ್ತಂಭದಲ್ಲಿ ತೋರಿಸಿರುವ ಕ್ಷೇತ್ರಗಳಲ್ಲಿ (ಇವು ಕೆಳಗೆ ಸದರಿ ಕ್ಷೇತ್ರಗಳೆಂದು ನಿರ್ದೇಶಿಸಲ್ಪಟ್ಟಿವೆ), ಇದರಡಿ ಕೊಟ್ಟ ಶರತ್ತುಗಳಗೊಪ್ಪಿ, ಯಾವದೇ ಮನುಷ್ಯನು ಸೀಧಾ ಪತ್ರವಿಲ್ಲದೆ ಸಹ ಬಟವಡೆ ಮಾಡಲಿಕ್ಕಿಯಿಲ್ಲ. ಮೇಲ್ಕಾಣಿಸಿದ ಶರತ್ತುಗಳು ಯಾವವೆಂದರೆ —

(೧) ಸದರಿ ಸಾಮಾನುಗಳ ಬಟವಡೆಯನ್ನು ಮುಜರಾ, ಗೇಣಿ ಇಲ್ಲವೆ ಪೂರ್ವ-ವಹಿವಾಟಿಯಂತೆ ಕೊಡತಕ್ಕದ್ದನ್ನು ಕೊಡುವದಕ್ಕಾಗಿ ಮಾಡತಕ್ಕದ್ದು, ಆದರೆ ಈ ಬಟವಡೆ ಬಿಂದೇ ವ್ಯವಹಾರದಲ್ಲಿ ಸಾಗಬೇಕು,

(೨) ಹೀಗೆ ಬಟವಡೆ ಮಾಡುವ ಮುಂಚೆ ಬಟವಡೆ ಮಾಡುವಾತನು, ಸದರಿ (ಬ) ಪರಿಶಿಷ್ಟದ ೨ನೇ ಸ್ತಂಭದಲ್ಲಿ ಆಯಾ ಕ್ಷೇತ್ರದ ಎದುರಿಗೆ ಕೊಟ್ಟಿರುವ ಅಧಿಕಾರಿಗಳ ಪೈಕಿ (ಈ ಕೆಳಗೆ ಸದರಿ ಅಧಿಕಾರಿಯೆಂದು ಕರೆಯಲ್ಪಟ್ಟ) ಯಾವ ಅಧಿಕಾರಿಯು ಅಧಿಕಾರ-ಕ್ಷೇತ್ರದಲ್ಲಿ ತನ್ನ [illegible] ಆ ಅಧಿಕಾರಿಗೆ ತಾನು ಬಟವಡೆ ಮಾಡಲಿದ್ದ ಸದರಿ ಸಾಮಾನಿನ ಪರಿಮಾಣವನ್ನೂ ಯಾವಾತನಿಗೆ ಅದು ಕೊಡಲ್ಪಡುವದೋ ಆತನ ಹೆಸರು-ವಿಳಾಸಗಳನ್ನೂ ಬರವಣಿಗೆಯಿಂದ ತಿಳಿಸಬೇಕು,

(೩) ಸದರಿ ಕ್ಷೇತ್ರದಲ್ಲಿ ಸದರಿ ಸಾಮಾನು ಕಾನೂನ-ಬದ್ಧ ರೀತಿಯಲ್ಲಿ ತನ್ನ ಕಡೆಗೆ ಬಂದಿರುವದಾಗಿಯೂ, ವ [illegible] ಇಲ್ಲವೆ ಗೇಣಿಯ ರೂಪದಿಂದ ಬಟವಡೆ ಮಾಡುವದಾದಲ್ಲಿ ಸದರಿ ಸಾಮಾನು ತನ್ನ ಸ್ವಂತ ಹೊಲದಲ್ಲಿ ಬೆಳೆದಿದ್ದಾಗಿರುತ್ತದೆಂಬುದಾಗಿಯೂ ಬಟವಡೆ ಮಾಡುವ ತಾನು ಸದರಿ ಅಧಿಕಾರಿಗೆ ಖಾತರಿ ಮಾಡಿಕೊಡಬೇಕು, ಮತ್ತು

(೪) ಸದರಿ ಸಾಮಾನು ಸ್ವೀಕರಿಸುವ ಮೊದಲು ಅದನ್ನು ಸ್ವೀಕರಿಸುವಾತನು ಸದರಿ ಅಧಿಕಾರಿಗಳಲ್ಲಿ ಯಾವಾತನ ಅಧಿಕಾರ ಕ್ಷೇತ್ರದಲ್ಲಿ ವಾಸಿಸುತ್ತಾನೋ ಅಂಥ ಅಧಿಕಾರಿಯ ಕಡೆಗೆ ತನ್ನ ಸೀಧಾ ಕಾರ್ಡನ್ನು ಇಲ್ಲವೆ ತನ್ನ ಹೆಸರಿನ್ನೂ ಸಿಗೊಂಡ ಸೀಧಾ ಕಾರ್ಡನ್ನು ಹಾಜರಪಡಿಸಬೇಕು, ಆಗ ಸದರಿ ಅಧಿಕಾರಿಯು ಈ ಸಂಬಂಧದಲ್ಲಿ ತನಗೆ ಯುಕ್ತ ಕಂಡ ದರದಿಂದ ಆ ಕಾರ್ಡಿನೊಳಗಿನ ಸಂಬಂಧಪಟ್ಟ ಕೋಟಾ (ಕೂಪನ) ಯಾ ಕೋಟಾಗಳನ್ನು ರದ್ದುಗೊಳಿಸುವನು.

ಪರಿಶಿಷ್ಟ (ಅ)

ಸೀಧಾ-ಸಾಮಾನುಗಳು

೧ ಅಕ್ಕಿ, ಭತ್ತ ಮತ್ತು ಅಕ್ಕಿ ಹಿಟ್ಟು
೨ ಗೋದಿ, ಗೋದಿ-ಹಿಟ್ಟು, ಸೋಜಿ, ರವೆ, ಮೈದಾ ಹಾಗೂ ಆಟ್ಟು
೩ ಜೋಳ ಮತ್ತು ಜೋಳದ ಹಿಟ್ಟು
೪ ನಾಗಲಿ (ನಾಚಣಿ) ಮತ್ತು ಅದರ ಹಿಟ್ಟು.

ಪರಿಶಿಷ್ಟ (ಬ)

ಕ್ಷೇತ್ರಗಳು ೧	ಅಧಿಕಾರಿಗಳು ೨
ಕಾರವಾರ ಮ್ಯುನಿಸಿಪಲ ಹದ್ದು ಹಾಗೂ ಬೈತಕೋಲ, ಕೋಡಿಬಾಗ ಮತ್ತು ಬಾಡ ಗ್ರಾಮಗಳನ್ನೊಳಗೊಂಡ ಸೀಮೆ	ಕಾರವಾರ ರೇಶನಿಂಗ ಆಫಿಸರ
ಕುಮಟಾ ಮ್ಯುನಿಸಿಪಲ ಹದ್ದು	ಕುಮಟಾ ರೇಶನಿಂಗ ಆಫಿಸರ
ಹೊನ್ನಾವರ ಮ್ಯುನಿಸಿಪಲ ಹದ್ದು	ಹೊನ್ನಾವರ ರೇಶನಿಂಗ ಆಫಿಸರ
ಭಟಕಳ ಮ್ಯುನಿಸಿಪಲ ಹದ್ದು	ಭಟಕಳ ರೇಶನಿಂಗ ಆಫಿಸರ
ಗೋಕರ್ಣ ಮ್ಯುನಿಸಿಪಲ ಹದ್ದು	ಗೋಕರ್ಣ ರೇಶನಿಂಗ ಆಫಿಸರ
ಶಿರ್ಶಿ ಮ್ಯುನಿಸಿಪಲ ಹದ್ದು	ಶಿರ್ಶಿ ರೇಶನಿಂಗ ಆಫಿಸರ

ಟಿಪ್ಪಣಿ.— ಭಾರತ ರಕ್ಷಣಾ ನಿಯಮಾವಳಿಯ ೧೧೯ನೇ ನಿಯಮದ (೧)ನೇ ಉಪನಿಯಮಕ್ಕನುಸಾರವಾಗಿ, ಈ ಹುಕುಮನ್ನು ಮುಂಬಯಿ ಸರಕಾರದ ಗೆಝೇಟಿನಲ್ಲೂ ಮೇಲೆ (ಬ) ಪರಿಶಿಷ್ಟದ ೧ನೇ ಸ್ತಂಭದಲ್ಲಿ ನಿರ್ದೇಶಿಸಿರುವ ಕ್ಷೇತ್ರಗಳಲ್ಲಿ ಪ್ರಸಾರದಲ್ಲಿರುವ ಇಂಗ್ಲಿಷ ಹಾಗೂ ಸ್ಥಾನಿಕ ಭಾಷೆಯ ಪತ್ರಿಕೆಗಳಲ್ಲೂ ಪ್ರಕಟಿಸತಕ್ಕದ್ದು. ಈ ಹುಕುಮಿನ ಪ್ರತಿಗಳನ್ನು ವಿಶೇಷ ಸಂಬಂಧಪಟ್ಟವರಿಗೂ ಹಂಚಬೇಕಲ್ಲದೆ, ಮೇಲ್ಕಾಣಿಸಿದ ಕ್ಷೇತ್ರಗಳೊಳಗಿನ ಸ್ಥಾನಿಕ ಸರಕಾರಿ ಕಚೇರಿಗಳಲ್ಲಿರುವ ನೋಟೀಸ ಬೋರ್ಡುಗಳಿಗೂ ಅಂಟಿಸಬೇಕು, ಹಾಗೂ ಈ ರೀತಿ ಹುಕುಮಿನ ಪ್ರತಿಗಳು ನೋಟೀಸ ಬೋರ್ಡುಗಳಿಗೆ ಅಂಟಿಸಲ್ಪಟ್ಟ ಸಂಗತಿ ಟಮಟೆ ಹೊಡೆದು ಜಾಹೀರಪಡಿಸಬೇಕು.

ಮುಂಬಯಿ ಗವ್ಹರ್ನರರ ಆಜ್ಞೆಯಂತೆ,

ಎ. ಡಿ. ಗೋರವಾಲಾ,
ಸೆಕ್ರೆಟರಿ

ಜಾಹೀರಾತು.

ಈ ಜಾಹೀರಾತ ಮೂಲಕ ತಿಳಿಸುವದೇನಂದರೆ :—

ಮುಂಬಯಿ ಸರಕಾರದವರು ಸಾಲ ಸಂಪಡಿಸುವ (ಡೆಟ್ ಎಜಸ್ಟಮೆಂಟ) ಬೋರ್ಡಿಗೆ ಸಾಲಗಾರ-ಒಕ್ಕಲಿಗರ ಸಲುವಾಗಿ ಅರ್ಜಿಗಳನ್ನು ಬರಕೊಡುವದರ ಬಗ್ಗೆ ಆಯಾ ಸಾಲ ಸಂಪಡಿಸುವ ಬೋರ್ಡಿಗೆ ಅರ್ಜಿ ಬರೆಯುವವರನ್ನು (ಪಿಟಿಶನ್ ರೈಟರ) ನೇಮಿಸಲಿಕ್ಕೆ ಆಯಾ ಬೋರ್ಡಿನ ಚೆಅರಮನ್ ರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅರ್ಜಿ ಬರೆಯುವವರ ಸ್ಥಳಕ್ಕೆ ಅರ್ಜಿ ಮಾಡಿಕೊಳ್ಳುವವರು ಆಯಾ ಸಾಲ ಸಂಪಡಿಸುವ ಬೋರ್ಡಿನ (Debt Adjustment Board) ಚೆಅರಮನ್ನರ ಕಡೆಗೆ ಅರ್ಜಿ ಮಾಡಿಕೊಳ್ಳತಕ್ಕದ್ದು. ಸಾಲಗಾರ-ಒಕ್ಕಲಿಗರು ಕಾಯಿದೆ ಕಲಮ ೧೭ (೧) ರನ್ವಯ ಮಾಡುವ ತಮ್ಮ ಅರ್ಜಿಗಳನ್ನು ಸ್ವತಃ ಅರ್ಜಿಗಳನ್ನು ತುಂಬಲಿಕ್ಕೆ ಬಾರದಿದ್ದ ಸಂಗತಿಗಳಲ್ಲಿ, ಅರ್ಜಿ ಬರೆಯುವವರಿಂದ (Petition-writers) ತುಂಬಿಸಿಕೊಳ್ಳತಕ್ಕದ್ದು ತಿಳಿಯುವದು.

ಸಾಲ ಸಂಪಡಿಸುವ ಬೋರ್ಡ. (Debt Adjustment Board)	ಸಾಲ ಸಂಪಡಿಸುವ ಆಫೀಸಿನ ಸ್ಥಳ
ಕಾರವಾರ ಜಿಲ್ಹಾ	
೧ ಹಳಿಯಾಳ ತಾಲೂಕ ೨ ಯಲ್ಲಾಪೂರ ,,	ಹಳಿಯಾಳ
ವಿಜಾಪೂರ ಜಿಲ್ಹಾ	
೧ ವಿಜಾಪೂರ ತಾಲೂಕ ಬೀಳಗಿ ಪೇಟಾ	ವಿಜಾಪೂರ.
೨ ಮುದ್ದೇಬಿಹಾಳ ತಾಲೂಕ ಬಾಗೇವಾಡಿ ತಾಲೂಕ	ಮುದ್ದೇಬಿಹಾಳ

ಬೆಳಗಾಂವ,
[illegible]

S. B Godhi
ಅಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ ದಕ್ಷಿಣ ಭಾಗ ಬೆಳಗಾಂವ

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದುವರಿಸಿದ್ದು.)

ತಾ ೨೫-೯-೪೫ಕ್ಕೆ ಇಲ್ಲಿಯ ಹ್ಯಾಡಿಲಿ ಧರ್ಮಶಾಲೆಯಲ್ಲಿ ಸೇರಿದ ಉತ್ತರ ಕನ್ನಡ ಜಿಲ್ಲಾ ಗ್ರಾಮಸೇವಾ ಸಮಿತಿಯ ಸಭೆಗೆ ಸದಸ್ಯರಲ್ಲದೆ ಬೇರೆ ಬೇರೆ ತಾಲೂಕುಗಳಿಂದ ೩೨ ಜನ ಆಮಂತ್ರಿತರೂ ಬಂದಿದ್ದರು. ರಾ|| ತಿ ಶ್ರೀ ನಾಯಕರು ಸಭಾಧ್ಯಕ್ಷತೆ ವಹಿಸಿದ್ದರು. ಸಭೆಯು ಪ್ರಾರಂಭದಲ್ಲಿ ದಿವಂಗತ ಹನುಮಂತರಾವ ಕೌಜಲಗಿ ಮತ್ತು ಯಲ್ಲಾಪುರದ ಮುದ್ದೇಬಾಲ ಇವರ ಅಕಾಲಿಕ ನಿಧನದ ಬಗ್ಗೆ ಶೋಕ-ವ್ಯಂಜಕ ಗೊತ್ತುವಳಿಯಾಯಿತು. ಆಮೇಲೆ ಕಳೆದ ಜೂನ ತಿಂಗಳ ಕೊನೆಯ ವರೆಗಿನ ಸಮಿತಿಯ ಕಾರ್ಯದ ವರದಿಯೂ ಲೆಕ್ಕಪತ್ರ ಓದಿಹೇಳಲ್ಪಟ್ಟಿತು. ಸಮಿತಿಯವರು ಮೊದಲು ತಮ್ಮ ಕಾರ್ಯವನ್ನು ಅಂಕೋಲಾ ತಾಲೂಕಿನಲ್ಲೇ ನಡಿಸಿದ್ದರು. ಈಗ ಅದನ್ನು ಕುಮಟಾ, ಕಾರವಾರ ತಾಲೂಕುಗಳಲ್ಲೂ ಪ್ರಾರಂಭಿಸಿದ್ದಾರೆ. ಯೋಗ್ಯ ಕಾರ್ಯಕರ್ತರು ದೊರೆತರೆ ಬೇರೆ ತಾಲೂಕುಗಳಲ್ಲೂ ಅದನ್ನು ಪ್ರಾರಂಭಿಸಬೇಕೆಂದು ಸಮಿತಿಯವರ ಮನೋಗತವಿದೆ. ಸಮಿತಿಯವರು ಅಂಕೋಲೆಯಲ್ಲಿ ನೇಯಿಗೆಯ ಶಾಲೆಯೊಂದನ್ನು ತೆರೆದದ್ದುಂಟು. ಬೇಗನೇ ಹೆಗಡೆಯಲ್ಲೂ ಒಂದು ಕೇಂದ್ರ ತೆರೆಯಬೇಕೆಂದು ನಿರ್ಣಯವಾಗಿದೆ. ಕುಮಟಾ, ಶಿರ್ಸಿ, ಸಿದ್ದಾಪುರ ತಾಲೂಕುಗಳೊಳಗಿನ ಚಿತ್ರದ ಕೈಗಾರಿಕೆಯನ್ನು ಹೇಗೆ ಸುಧಾರಿಸಿ ಸುವ್ಯವಸ್ಥಿತಗೊಳಿಸಬಹುದೆಂಬುದರ ಆಲೋಚನೆ ಮಾಡಿ ವರದಿಯನ್ನೊಪ್ಪಿಸಲು ೫ ಜನರದೊಂದು ಉಪಸಮಿತಿಯನ್ನು ನೇಮಿಸಲಾಗಿದೆ. ಘಟ್ಟದ ಮೇಲಿನ ತಾಲೂಕುಗಳಲ್ಲಿ ಸಮಿತಿಯವರು ತಮ್ಮ ಸಮಿತಿಯೊಳಗೆ ಯಾವ ಯಾವ ಉದ್ಯೋಗಗಳನ್ನು ಸಂಘಟಿಸಬಹುದೆಂಬುದರ ಚೌಕಶಿ ಮಾಡಿ ವರದಿಯನ್ನೊಪ್ಪಿಸಲಿಕ್ಕೆ ೬ ಜನರ ಇನ್ನೊಂದು ಉಪಸಮಿತಿಯೂ ನೇಮಿಸಲ್ಪಟ್ಟಿದೆ. ಅಂಕೋಲಾ ತಾಲೂಕಿನಲ್ಲಿ ಚಿತ್ರದ ಕೈಗಾರಿಕೆಯನ್ನು ಸಂಘಟಿಸಲು ಕಾರ್ಯಕರ್ತರಾರಾದರೂ ಮುಂದೆ ಬಂದಲ್ಲಿ ಅವರಿಗೆ ರೂ. ೨೫೦ರ ವರೆಗೆ ಸಹಾಯ-ಧನ ಕೊಡಬೇಕೆಂದೂ ಸಭೆಯಲ್ಲಿ ಗೊತ್ತಾಗಿದೆ. ಸಮಿತಿಯ ಪಕ್ಕಾ ಘಟನೆಯೊಂದನ್ನು, ಅ|| ಭಾ|| ಚರಖಾ ಸಂಘದ ನಾಂತ್ರಿಗಳ ಸಲಹೆಯಂತೆ, ತಯಾರಿಸಲಿಕ್ಕೂ ಒಂದು ಮಂಡಳ ಆರಿಸಲ್ಪಟ್ಟಿತು. ಕೊನೆಗೆ ಸಮಿತಿಯ ನಿಧಿಗೆ ಈಹಿಂದೆ ಸಹಾಯದ ಅಭಿವಚನಕೊಟ್ಟವರೆಲ್ಲರೂ ತಮ್ಮ ಸಹಾಯ ಬೇಗನೇ ಸಲ್ಲಿಸಬೇಕಾಗಿಯೂ ಸಮಿತಿಯ ಕಾರ್ಯದ ಬಗ್ಗೆ ಆಸ್ಥೆ ಮತ್ತು ಸಹಾನುಭೂತಿಯುಳ್ಳ ಇತರರೂ ಮುಕ್ತಹಸ್ತದಿಂದ ನೆರವಾಗಬೇಕಾಗಿಯೂ ಬಿನ್ನೈಸುವ ಗೊತ್ತುವಳಿಯೊಂದು ಸಭೆಯಲ್ಲಿ ಸ್ವೀಕೃತವಾಗಿದೆ. ಸಭೆಯ ಮುಕ್ತಾಯ ಮಾಡುವ ಮೊದಲು ಸಭಾಧ್ಯಕ್ಷರಾದ ರಾ|| ನಾಯಕರು ಉಪಸಂಹಾರಾತ್ಮಕ ಭಾಷಣ ಮಾಡಿ, ಸಮಿತಿಗೆ ನೆರವಾದ ಸಕಲರ ಆಭಾರ ಮನ್ನಿಸಿ, ಜಿಲ್ಲೆಯ ಪ್ರತಿಯೊಂದು ಭಾಗದ ಕಾರ್ಯಕರ್ತರು ಮುಂದೆ ಬಂದು ಸಮಿತಿಗೆ ನೆರವಾಗಬೇಕೆಂತಲೂ, ಸಮಿತಿಯ ಕಾರ್ಯ ಒಂದು ಮಾದರಿಯಾಗುವಂತೆ ಪ್ರಯತ್ನಿಸಬೇಕೆಂತಲೂ ಬಿನ್ನವಿಸಿದರು.

ಗೋಕರ್ಣ-ಮೊಳಗಿನ ಸರಕಾರ-ಮಾನ್ಯ ಜವಳ ಅಂಗಡಿಯಲ್ಲಿ ಕಳೆದ ತಾ. ೯ನೇಗೆ ಹೊಸ ಜವಳ ಗಂಟು ಬಂದಿತ್ತಾಗಿಯೂ ಅದು ಒಡೆಯಲ್ಪಟ್ಟ ಕೆಲವೇ ತಾಸುಗಳಲ್ಲಿ ಧೋತರ-ಜೋಡು ೧ ಕೊಂಡುಕೊಳ್ಳಲು ಬಂದ ಓರ್ವನಿಗಾತನಿಗೆ 'ಧೋತಿ ಎಲ್ಲ ಖರ್ಚಾಯಿತೆಂದು" ಉತ್ತರ ಸಿಕ್ಕಿತೆಂಬಲ್ಲಿ ದೂರು ಬಂದಿದೆ. ಅವರಿಗೂ ಶೀಘ್ರ ಕ್ರಮ ಅನ್ವಯಿಸುವದವಶ್ಯವಿರುತ್ತದೆಂದೂ ಇಲ್ಲವಾದರೆ ಈ ಕಂಪ್ಲೇಟ ಕಡಿಮೆಯಾಗದೆಂದೂ ಕೆಲವರ ಅಭಿಪ್ರಾಯವಿದೆ

ಭಟಕಳ— (ತಾ ೧೩-೯-೪೫) ಸಾರ್ವಜನಿಕ ಗಣಪತಿ-ಉತ್ಸವವು ಭಜನೆ, ಕೀರ್ತನೆ ಇತ್ಯಾದಿಗಳಿಂದ ಸಡಗರದಿಂದ ನೆರವೇರಿತು. ಮಂಗಲಮೂರ್ತಿಯ ವಿಸರ್ಜನೆಯ ಮೆರವಣಿಗೆಯಲ್ಲಿ ಸಾವಿರಾರು ಜನರು ಸೇರಿದ್ದರು

ಶಿರ್ಶಿ—(ತಾ ೮-೯-೪೫) ದಿವಂಗತ ಕಮಲಾ ನೆಹರೂ ಸ್ಮಾರಕ ರುಗ್ಣಾಲಯದ ಬಗ್ಗಾಗಿ ಪಂಡಿತ ಜವಾಹರಲಾಲ ನೆಹರೂರವರಿಗೆ ಒಂದು ನಿಧಿಯನ್ನರ್ಪಿಸಲು ಕರ್ನಾಟಕ ವಿದ್ಯಾರ್ಥಿ ಸಂಘದವರು ನಿಶ್ಚಯಿಸಿದ ಪ್ರಕಾರ ಇಲ್ಲಿಯ ವಿದ್ಯಾರ್ಥಿ ಸಂಘದವರು ಕಮಲಾ ಜವಾಹರರ ಭಾವಚಿತ್ರಗಳನ್ನು ಸಂಬ್ಯಾಹಗೊಂಡರಂತೆ ಊರಲ್ಲಿ ಮಾರಿ ನಿಧಿಸಂಗ್ರಹಿಸಲಾರಂಭಿಸಿದ್ದಾರೆ. ಸಮಸ್ತರೂ ಈ ನಿಧಿಗೆ ಸಹಾಯ ಮಾಡಬೇಕಾಗಿ ಸಂಘದವರ ವಿನಂತಿಯುಂಟು

ಸಿದ್ದಾಪುರ— (ತಾ ೫-೯-೪೫) ನಿಯಂತ್ರಿತ ಹತ್ತಿಕಾಳಿನ ದರವೀಗ ಬೇಲ ೧ಕ್ಕೆ ರೂ ೧೫೧-೪-೦ ಮತ್ತು ಚಿಲ್ಲರೆ ಹತ್ತಿಕಾಳಿನ ದರ ರೂ ೧ಕ್ಕೆ ೬|| ಪೌಂಡು ಆಗಿದೆ. ಹಿಂದೆ ಬೇಲ ೧ರ ದರ ರೂ ೧೧೨-೩-೦ ಇತ್ತು. ಕಳ್ಳಪೇಟೆಯಲ್ಲಿ ಸಹ ರೂ ೧೭೦-೧೨ಕ್ಕೆ ಬೇಲ ಸಿಗುತ್ತಿತ್ತು. ಕಳ್ಳ ಪೇಟೆಯ ಧಾರಣೆಗಿಂತ ನಿಯಂತ್ರಿತ ಧಾರಣೆ ಹೆಚ್ಚಿಗೆ ಆಗುವದು ಹೇಗೆಂದು ಯಾರಿಗೂ ತಿಳಿಯದು !

ತಾ ೨೮-೮-೪೫ಕ್ಕೆ ದಿವಂಗತ ಸುಭಾಷಚಂದ್ರರ ಅಕಾಲಿಕ ನಿಧನದ ಬಗ್ಗೆ ಊರಲ್ಲಿ ಹರತಾಳವಾಯಿತು. ಸಾಮೂದಾಯಿಕ ಪ್ರಾರ್ಥನೆಗಳೂ ನಡೆದವು.

ಆಗಸ್ಟ ಚೌತಿಗೆ ಕಳೆದ ತಿಂಗಳಲ್ಲಿ ಬಂದ ಸರಕಾರ-ಮಾನ್ಯ ಜವಳಿ ಗಂಟುಗಳಲ್ಲಿದ್ದ ಎಲ್ಲ ಧೋತರಗಳು ಇಲ್ಲಿಯ ಪೇಟೆಯವರ ಪಾಲಿಗೇ ಹೋದವಂತೆ. ಹಳ್ಳಿಯವರಿಗಾರಿಗೂ ಒಂದು ಜೋಡು ಧೋತರ ಸಿಕ್ಕಿಲ್ಲವಂತೆ !

ಈ ತಾಲೂಕಿನ ಕ್ಯಾದ್ಗಿ ಗ್ರಾಮದಲ್ಲಿರುವ ಶ್ರೀ ಗಂಗಾ-ವಿಶ್ವೇಶ್ವರ ಮಠದ ಸ್ವಾಮಿಗಳು ಮುಕ್ತರಾಗಿ ೪ ೫ ವರ್ಷಗಳಾದವು. ಹೊಸ ಸ್ವಾಮಿಗಳ ನೇಮಣೂಕಿ ಇನ್ನೂ ಆಗಿಲ್ಲ. ಹೊಸ ಸ್ವಾಮಿಗಳ ಆಯ್ಕೆಯಾಗುವ ವರೆಗೆ ಮಠದ ವಹಿವಾಟನ್ನು ಮಠದ ಅರ್ಚಕರೇ ನಡಿಸಬೇಕೆಂದು ಗೊತ್ತಾಗಿತ್ತು. ಆದರೆ ಈ ಅರ್ಚಕರು ಮಠದ ಆಸ್ತಿಗಳ ಬಾಬತು ಸರಕಾರಕ್ಕೆ ಸಲ್ಲತಕ್ಕ ತೀರ್ವೆ ತರದೆ ಲಿಲಾಂವ ಮಾಡಿಸಿಕೊಂಡಿದ್ದಾರಂತೆ, ಕೆಲವು ಆಸ್ತಿಗಳನ್ನು ಮನಸೋಇಚ್ಛೆಯಂತೆ ಕ್ರಯ, ಮೂಲಗೇಣಿ ವಗೈರೆ ರೀತಿಯಿಂದ ಸ್ವಾಧೀನಗೊಳಿಸಿದ್ದಾರಂತೆ. ಕಾರಣ ಮಠದ ಭಕ್ತರು ಕಣ್ತೆರೆದು ಮಠದ ವಹಿವಾಟು ಸರಿಗೊಳಿಸಬೇಕಾಗಿ ರಾ|| ಮಂಜಾ ಶಿವಾ ನಾಯ್ಕ ಹೆಗ್ಗರಿ ಇವರು ಬರೆಯುತ್ತಾರೆ

ನೂಲುವ ವರ್ಗದಲ್ಲಿ ಸೇರಿದ ವಿದ್ಯಾರ್ಥಿಗಳಿಗೆ ಕನ್ನಡ ಶಾಲಾ-ಶಿಕ್ಷಕರು ಪೀಡಿಸಿಲ್ಲವೆಂದೂ, ಅಂಥ ಹುಡುಗರಿಗೆ ಪ್ರೋತ್ಸಾಹವನ್ನೇ ಕೊಡುತ್ತಿರುವರೆಂದೂ ಶಿಕ್ಷಕರ ಗೆಳೆಯರೊಬ್ಬರು ಬರೆಯುತ್ತಾರೆ

ಅಂಕೋಲೆ [illegible] ೭-೯-೪೫) ವರ್ತಕರು ಬಾಧ ಬರದ [illegible] ಕಡೆಗಿರುವ ಸರಕುಗಳ ಧಾರಣೆಗಳನ್ನು ಏರಿಸಿ [illegible] ಜನರನ್ನು ದೋಚುತ್ತಾರೆಂದು ಸರಕಾರದವರು ನಿಯಂತ್ರಣವನ್ನು ಕೈಕೊಂಡಿರುತ್ತಾರೆಂದು ಹೇಳಲಾಗುತ್ತದೆ. ಈ ಮಾತು ನಿಜವಿರುತ್ತಿದ್ದರೆ ಸರಕಾರ-ನಿಯಂತ್ರಿತ ಧಾರಣೆಗಳು ವರ್ತಕರ ಧಾರಣೆಗಳಿಗಿಂತಲೂ ಕಡಿಮೆಯಿರಬೇಕು. ಆದರೆ ಇತ್ತೀಚಿಗೆ ಹತ್ತಿಕಾಳಿನ ಮಾರಾಟದ ಬಗ್ಗೆ ಜಿಲ್ಲಾಧಿಪರು ಹಾಕಿಕೊಟ್ಟ ಹತ್ತಿಕಾಳಿನ ಧಾರಣೆ

ಜಾಹೀರಾತು.

ಮುಂಬಯಿ ಸರಕಾರದವರು ಕಾರವಾರ ಜಿಲ್ಲೆಯಲ್ಲಿ ಒಕ್ಕಲಿಗರ ಋಣ-ವಿಮೋಚನೆ ಕಾಯಿದೆಯನ್ನು ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಿಗೆ ಲಾಗು ಮಾಡಿ ಇವೆರಡೂ ತಾಲೂಕುಗಳ ಬಗ್ಗೆ, ಒಂದು ಸಾಲ ಸರಿಪಡಿಸುವ ಬೋರ್ಡ (Debt Adjustment Board)ನ್ನು ತಾ 1—5—45ಕ್ಕೆ ಹಳಿಯಾಳದಲ್ಲಿ ಸ್ಥಾಪನೆ ಮಾಡಿದ್ದಾರೆ. ಈ ಎರಡೂ ತಾಲೂಕಿನ ಸಾಲಗಾರ-ಒಕ್ಕಲಿಗರು ತಾರೀಖು ೩೧-೧೦-೪೫ರ ಅವಧಿಯೊಳಗಾಗಿ ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ತಮ್ಮ ಸಾಲ ಸರಿಪಡಿಸುವ ಬಗ್ಗೆ ಅರ್ಜಿ ಮಾಡತಕ್ಕದ್ದು. ಅರ್ಜಿ ಮಾಡಿಕೊಳ್ಳುವ ಅವಧಿಯು ಆರು ತಿಂಗಳ (ತಾ ೧-೫-೧೯೪೫ರಿಂದ, ೩೧-೧೦-೪೫ರ ವರೆಗೆ) ಇದ್ದು ಸದರಿ ಅವಧಿಯನ್ನು ಸರಕಾರದವರು ಯಾವದೇ ಕಾರಣದಿಂದ ಹೆಚ್ಚಿಸಲಾರರು. ಈ ಸಂಗತಿಯನ್ನು ಒಕ್ಕಲಿಗರು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು, ಮತ್ತು ಈ ಸುಸಂಧಿಯನ್ನು ಕಳೆದುಕೊಳ್ಳಬಾರದಾಗಿ ವಿನಂತಿ

ಅರ್ಜಿಯನ್ನು ಸಾಲ ಸರಿಪಡಿಸುವ ಬೋರ್ಡಿನ ಆಫೀಸಿನ ವೇಳೆಯಲ್ಲಿ ಕೊಡಬಹುದು ಅಥವಾ ರಜಿಸ್ಟರ್ಡ ಪೋಸ್ಟಿನಿಂದ ಬೋರ್ಡಿಗೆ ಕಳಿಸಬಹುದು ಅರ್ಜಿಗೆ ಎಂಟು ಆಣೆಯ ಕೋರ್ಟ-ಫೀ ಸ್ಟಾಂಪು ಹಚ್ಚಬೇಕು.

ಕಾಯಿದೆಯ ಪ್ರಚಾರಕ್ಕಾಗಿ ಅಂದರೆ ಕಾಯಿದೆಯ ಫಾಯದೆಯನ್ನು ರೈತರಿಗೆ ತಿಳಿಹೇಳಲಿಕ್ಕೆ ಮತ್ತು ಅರ್ಜಿಗಳನ್ನು ಅವಧಿಯಲ್ಲಿಯೇ ಮಾಡಲಿಕ್ಕೆ ತಿಳಿಹೇಳುವದಕ್ಕಾಗಿ ಸಹಕಾರೀ ಖಾತೆಯ ಪ್ರಚಾರಕ ಆಫೀಸರ, ಸಬ್ ಆಡಿಟ ಡೆಟ್ ರಿಲೀಫ್, ಕಾರವಾರ ಮತ್ತು ಅಸಿಸ್ಟಂಟ ಡಿಸ್ಟ್ರಿಕ್ಟ ಕೋ-ಒಪರೇಟಿವ್ಹ ಆಫೀಸರ ಹಳಿಯಾಳ ಇವರು ಮತ್ತು ಒನರರಿ ಒರ್ಗನೈಝರರು ತಾಲೂಕಿನ ಹಳ್ಳಿಗಳಿಗೆ ಹೋಗಿ ರೈತರ ಸಭೆಗಳನ್ನು ಕರೆದು ಪ್ರಚಾರ ಕಾರ್ಯವನ್ನು ನಡಿಸಿದ್ದಾರೆ. ಕೆಲಸದ ಅನುಕೂಲತೆಗಾಗಿ ಕೆಲವು ಕೇಂದ್ರ ಹಳ್ಳಿಗಳನ್ನು ಆರಿಸಿ, ಅವುಗಳಿಗೆ ಸುತ್ತುಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ ಆ ಕೇಂದ್ರ ಹಳ್ಳಿಯನ್ನು ಪ್ರಚಾರಕ್ಕಾಗಿ ಕೇಂದ್ರವೆಂತ ಗೊತ್ತುಮಾಡಿದ್ದಾರೆ. ಈ ಕೇಂದ್ರದಲ್ಲಿಯ ಹಳ್ಳಿಗಳನ್ನು ಬಿಟ್ಟು ಉಳಿದ ಹಳ್ಳಿಗಳಿಗೆ ಅವರು ಪ್ರತ್ಯೇಕವಾಗಿ ಹೋಗುವರು. ಇದಲ್ಲದೆ ತಾಲೂಕಿನ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ಆಗಾಗ್ಗೆ ರೈತರ ಸಭೆಗಳನ್ನು ಕರೆದು ಋಣ-ವಿಮೋಚನೆಯ ಕಾಯಿದೆಯ ಪ್ರಚಾರವನ್ನು ಮಾಡಲಿಕ್ಕೆ ಮತ್ತು ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ಅರ್ಜಿಗಳನ್ನು ಮಾಡಲಿಕ್ಕೆ ಸಾಲಗಾರ-ಒಕ್ಕಲಿಗರಿಗೆ ತಿಳಿಹೇಳಲಿಕ್ಕೆ ಮೆ|| ಕಲೆಕ್ಟರ ಮ ಸಾ|| ಮಾಮಲೇದಾರ ಸಾಹೇಬರ ಮುಖಾಂತರ ಸರ್ಕ್ಯೂಲರ ಮೂಲಕ ತಿಳಿಸಿದ್ದಾರೆ. ಇವರ ಉದ್ದಿಶ್ಯ ಗ್ರಾಮಸ್ಥರ ಮತ್ತು ತಲಾಟಿಯವರ ಕಡೆಗೆ ಸಹಕಾರಿ ಸಂಘದ ಖಾತೆಯಿಂದ ಹೊರಡಿಸಿದ ಹಸ್ತಪತ್ರಿಕೆ ಮುಂತಾದವುಗಳನ್ನು ಅವರ ಮಾಹಿತಿಗಾಗಿ ಪೂರೈಸಿಕೊಟ್ಟಿದ್ದಾರೆ. ವಿಶೇಷ ಮಾಹಿತಿ ಬೇಕಾದಲ್ಲಿ ಒಕ್ಕಲಿಗರು ಆ ಹಸ್ತಪತ್ರಿಕೆ ಮುಂತಾದವುಗಳನ್ನು ಓದಿಸಿಕೊಳ್ಳತಕ್ಕದ್ದು. ಅರ್ಜಿ ನಮೂನೆಯನ್ನು ತುಂಬಲಿಕ್ಕೆ ಏನಾದರೂ ಅಡಚಣಿ ಬಂದಲ್ಲಿ ಅರ್ಜಿದಾರರಿಗೆ ಸಹಾಯ ಮಾಡಲಿಕ್ಕೆ ಗ್ರಾಮಸ್ಥರಿಗೂ ಮತ್ತು ತಲಾಟಿಯವರಿಗೂ ತಿಳಿಸಿದ್ದಾರೆ

ಅದ್ದರಿಂದ ಹಳಿಯಾಳ ಮತ್ತು ಯಲ್ಲಾಪೂರ ತಾಲೂಕಿನ ಒಕ್ಕಲಿಗರು ಆಯಾ ಕೇಂದ್ರಸ್ಥಾನ ಮತ್ತು ಹಳ್ಳಿಗಳಲ್ಲಿ ಕರೆಯುವ ಸಭೆಗಳಿಗೆ ಹಾಜರಾಗಿ ಕಾಯಿದೆಯ ಫಾಯದೆಗಳನ್ನು ತಿಳಕೊಂಡು ಸಾಲ ಸರಿಪಡಿಸುವ ಬೋರ್ಡ (Debt Adjustment Board)ಗೆ ಅವಧಿಯೊಳಗಾಗಿ (ತಾ. ೩೧-೧೦-೪೫) ಅರ್ಜಿ ಮಾಡಿಕೊಳ್ಳತಕ್ಕದ್ದು. ಈ ಸುಸಂಧಿಯ ಫಾಯದೆಯನ್ನು ಪೂರ್ಣ ಪಡೆಕೊಂಡು ಒಕ್ಕಲಿಗರು ಋಣಮುಕ್ತರಾಗಬೇಕೆಂದು ವಿನಂತಿ ತಿಳಿಸುವದು

ಹಳಿಯಾಳ ತಾಲೂಕಿನ ಕೇಂದ್ರ-ಸ್ಥಾನಗಳು

(೧) ಹಳಿಯಾಳ (೨) ಸಾಂಬ್ರಾಣಿ (೩) ದಾಂಡೇಲಿ (೪) ತೇರಗಾಂವ (೫) ಮುದನಳ್ಳಿ (೬) ಮಂಗಳವಾಡ (೭) ಎಡೋಗಾ (೮) ಮುರ್ಕವಾಡ (೯) ನಂದಿಗದ್ದೆ (೧೦) ಹೊಸೂರ (೧೧) ಬುಘಾರಕಂಚನಳ್ಳಿ ಮತ್ತು (೧೨) ಬೊಮ್ಮನಳ್ಳಿ

ಯಲ್ಲಾಪೂರ ತಾಲೂಕಿನ ಕೇಂದ್ರ ಸ್ಥಾನಗಳು

(೧) ಯಲ್ಲಾಪುರ (೨) ಇಡಗುಂದಿ (೩) ಅರಬೈಲ (೪) ವಜ್ರಳ್ಳಿ, (೫) ಮಾವಿನಮನೆ (೬) ದೇಹಳ್ಳಿ (೭) ಮಂಚಿಕೇರಿ (೮) ಹಿತ್ಲಳ್ಳಿ (೯) ಬರ್ಕನಳ್ಳಿ (೧೦) ಸಂದೊಳ್ಳಿ ಮತ್ತು (೧೧) ಕಿರವತ್ತಿ

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮೇಲೆ ಹೇಳಿದ ಪ್ರಚಾರಕ ಆಫೀಸರರ ಕಡೆಯಿಂದ ತಿಳಕೊಳ್ಳತಕ್ಕದ್ದು

ಈ ಮೊದಲು ಕೆಲವು ಕೇಂದ್ರ ಸ್ಥಳಗಳಲ್ಲಿ ರೈತರ ಸಭೆಗಳನ್ನು ಕರೆದು ಕಾಯಿದೆಯ ಫಾಯದೆಗಳನ್ನು ತಿಳಿಸಿಹೇಳಲಾಗಿದೆ

ಹಳಿಯಾಳ ತಾಲೂಕ.

(೧) ಹಳಿಯಾಳ (೨) ತೇರಗಾಂವ (೩) ಸಾಂಬ್ರಾಣಿ (೪) ಮಂಗಳವಾಡ (೫) ದಾಂಡೇಲಿ (೬) ಮುದನಳ್ಳಿ

ಯಲ್ಲಾಪೂರ ತಾಲೂಕ

(೧) ಯಲ್ಲಾಪುರ (೨) ಮಂಚಿಕೇರಿ (೩) ಇಡಗುಂದಿ (೪) ಕಿರವತ್ತಿ ಮತ್ತು (೫) ಸಂದೊಳ್ಳಿ

S. B. GODHI,
ಆಸಿಸ್ಟಂಟ ರಜಿಸ್ಟ್ರಾರ,
ಡೆಟ್ ರಿಲೀಫ, ಸದರ್ನ ಡಿವ್ಹಿಜನ್, ಬೆಳಗಾಂವ

ಬೆಳಗಾವಿ,
ತಾ. ೨೭—೮—೪೫

ಕಲ್ಯಪೇಟೆಯ ವರ್ತಕರು ಆರಂಭಿಸುತ್ತಿದ್ದ ಧಾರಣೆಗಿಂತ ಎಷ್ಟೋ ಹೆಚ್ಚಿಗೆಯಾಗಿದೆ! ಹತ್ತಿಕಾಳಿನ ದರವೇರಲು ಮೂಲತಃ ಧಾರವಾಡ ಜಿಲ್ಲೆಯವರು ಅದರ ಪತ್ತಿನ ಮೇಲೆ ಹಾಕಿದ ನಿಯಂತ್ರಣವೇ ಕಾರಣವಂತೆ ಈ ನಿಯಂತ್ರಣವಿರುತ್ತಿದ್ದಿಲ್ಲ ವಾದರೆ ಹತ್ತಿಕಾಳಿನ ದರ ಬೇಲ ೧ಕ್ಕೆ ರೂ ೧೦-೧೧ ಎಂದೂ ಆಗುತ್ತಿದ್ದಿಲ್ಲವಂತೆ ಅದಂತಿರಲಿ ಧಾರವಾಡ ಜಿಲ್ಲೆಯ ಅಧಿಕಾರಿಗಳ ನಿಯಂತ್ರಣವಿದ್ದಾಗ್ಯೂ ಕಳೆದ ಜನವರಿಯಲ್ಲಿ ಇಲ್ಲಿಯ ಅರ್ಬನ್ ಬ್ಯಾಂಕಿನವರು ಅಲ್ಲಿಂದ ತರಿಸಿದ ಹತ್ತಿಕಾಳನ್ನು ರೂ ೧೦-೧೪-೦ಕ್ಕೆ ಬೇಲ (೫ ಮಣಗಳನ್ನು) ೧೦ರಂತೆ ಮಾರಿದ್ದರು. ೩ ವಾರಗಳ ಹಿಂದೆ ಈ ಕಡೆಯ ಕಲ್ಯ ಸೆ[illegible] ಹತ್ತಿಕಾಳಿನ ಧಾರಣೆ ರೂ ೧೩-೧೯ ಇತ್ತು [illegible] ಮೇಲೆ ನಿಯಂತ್ರಣವಿದ್ದದ್ದರಿಂದ ಮತ್ತು ಕಲ್ಯತಿಸದಿಂದ ಹತ್ತಿಕಾಳು ತರುವಾಗ ಪರ್ಮಿಟ ಬರಲು ಬಹುತ್ತ ಭಯವಿರುವದರಿಂದಲೂ ಇಷ್ಟು ಕಟ್ಟ ದರವಿಂದ ಮಾರಬೇಕಾಗುತ್ತದೆಂದೂ ಹತ್ತಿಕಾಳಿನ ವ್ಯಾಪಾರದ ಒಕ್ಕೈ ಮಕ್ಕೆಯನ್ನು ತೆಗೆದೊಗೆದು ಊರದ ಬೇಕಾದ ವ್ಯಾಪಾರಿಯು ಹತ್ತಿಕಾಳು ಖರೀದಿಸಿ ತರುವದು ಸಾಧ್ಯವಾಗಲೆಂದು ಜಿಲ್ಹಾಧಿಕಾರಿಗಳು ಜಿಲ್ಹಾಧಿಕಾರಿ ಮಾತ್ರ ವಾರ ಮಾಡಿಕೊಟ್ಟರೆ ತಾವು ರೂ ೧೧-೧೧ಕ್ಕೆ ಬೇಲ ೧ರಂತೆ ಮಾರಾಟ ಮಾಡಲು ಸಿದ್ಧರಿದ್ದೇವೆಂತಲೂ ವರ್ತಕರು ಹೇಳು ತ್ತಿದೆ. ಹೀಗಿರುವಾಗ ಇತ್ತೀಚೆಗೆ ಜಿಲ್ಹಾಧಿಕಾರಿಯವರು ಹತ್ತಿಕಾಳಿನ ಖರೀದಿ-ಪೂರೈಕೆ ಒಟ್ಟಿನೆಯ ಸಂಪೂರ್ಣ ಮಕ್ತೆಯನ್ನು ಕಾರವಾರದ ಸೈಪಸ್ಲೈಕೋಪ್ಪಿಗೆ ಕೊಟ್ಟು ಬೇಲ ೧ರ ಧಾರಣೆಯನ್ನು ಒಮ್ಮೆಲೇ ಸಾ ಸಿರರೂ ೪ ೪ರಿಂದ ಏರಿಸಿಕೊಟ್ಟಿದ್ದಾರೆ! ಇಲ್ಲಿಯ ಧಾರಣೆ ರೂ ೧೫-೯-೬ ಇಡಲ್ಪಟ್ಟಿದೆ. ಹೀಗೆ ದರವನ್ನು ವಿಪರೀತ ಏರಿಸುವ ಕಾರಣ ವೇನಾಯಿತೆಂದು ಯಾರಿಗೂ ತಿಳಿಯುವದಿಲ್ಲ! ಧಾರವಾಡ ಜಿಲ್ಲೆಯಲ್ಲಿ ಹತ್ತಿಕಾಳಿಗೆ ಬರಗಾಲ ಬಂದಿದೆ ಇಲ್ಲವೆ ಅಲ್ಲಿ ಯವರು ದರವನ್ನೇರಿಸಿ ಕೊಡುತ್ತಿದ್ದಾರೆ, ಹೀಗೇನಾದರೂ ಇದ್ದರೆ ಹೊಸ ಧಾರಣೆಯ ಸಮರ್ಥನೆ ಮಾಡಬಹುದಾಗಿತ್ತು. ಆದರೆ ಧಾರವಾಡ ಜಿಲ್ಲೆಯಲ್ಲಿ ಇಂತಹ ಸ್ಥಿತ್ಯಂತರಗಳೇನೂ ಆಗಿಲ್ಲವೆಂದು ಅತ್ತ ಸಂಚರಿಸಿ ಹಲವಾರು ಪೇಟೆಗಳ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬಂದ ವ್ಯಾಪಾರಿಗಳೂ ಬೇರೆ ಮಾರ್ಗದಿಂದ ಮೇಲಾಧಿಕಾರಿಗಳಿಗೆ ಅಂದ ಮೇಲೆ ಗಿರಾಕಿಗಳು ಈ ತರಬೇಕಾದ ಹೆಚ್ಚಿಗೆ ಹಣ (ಬೇಲ ೧ಕ್ಕೆ ಸರಾಸರಿ ರೂ ೪-೮) ಯಾರಿಗೆ ಸಲ್ಲುತ್ತಿದೆ ಮತ್ತು ಅದನ್ನು ಅವರು ಯಾಕೆ ತೆರಬೇಕು ಎಂಬುದರ ಚೌಕಶಿಯಾಗುವದಪೇಕ್ಷ್ಯವುಂಟು ಇನ್ನೊಂದು ಮಾತು ನಿಯಂತ್ರಿತ ಸರಕುಗಳ ಖರೇದಿ ಪೂರೈಕೆಯ ಮಕ್ತೆಯನ್ನು ಶಕ್ಯವಿದ್ದಲ್ಲಿ ಸಹಕಾರಿ ಇಲ್ಲವೆ ಸರಕಾರ ನಿಯಂತ್ರಿತ ಸಂಸ್ಥೆಗಳಿಗೆ ಕೊಡಬೇಕೆಂಬ ತತ್ವ ಈ ವರೆಗೆ ಅನುಸರಿಸಲ್ಲಿತ್ತು. ಆ ತತ್ವವನ್ನೀಗ ಬಿಟ್ಟುಕೊಡ ಲಾಗಿದೆಯೋ ಏನೋ ತಿಳಿಯದು ಇಂತಹ ಸಂಸ್ಥೆಗಳಿಗೆ ಆ ಮಕ್ತೆ ಕೊಟ್ಟಲ್ಲಿ ತಮಗೇನೂ ನಡುವೆ ಲಾಭವಾಗುವದಿಲ್ಲೆಂದು ತಮ್ಮಲ್ಲಿಯ ನಿಯಂತ್ರಣಾಧಿಕಾರಿಗಳು ವ್ಯಕ್ತಿಗಳಿಗೇ ಮಕ್ತೆ ಕೊಡುವ ಕುಹಕವನ್ನು ಪ್ರಾರಂಭಿಸಿದ್ದಾರೆಂದು ನಡೆದಿರುವ ಜಿಲ್ಲೆ ಬೋಳ ಅನಂತರಾಮಯ್ಯನವರ ಕೇಸಿನಲ್ಲಿ ದೊರೆತದ್ದುಂಟು ಗಡಗ ಬದಿಯ ಗಾಳಿ ಇಲ್ಲಿಯೂ ಬೀಸಹತ್ತಿದೆಯೆಂದು ಜನರು ಭಾವಿಸಬೇಕೇನು? ಮುಂಬಯಿ ಸರಕಾರದವರು ಇತ್ತ ಶೀಘ್ರವೇ ಗಮನ ಕೊಟ್ಟು ಜನರನ್ನು ತಾಳಗೆಟ್ಟ ಅನಿಯಂತ್ರಿತ ನಿಯಂತ್ರಣದೊಳಗಿಂದ ಪಾರುಮಾಡಬೇಕಾಗಿ ಅರಿಕೆಯಿದೆ

ಬಾಡ (ತಾ. ಕಾರವಾರ)— (ತಾ. ೫-೯-೪೫) ಇಲ್ಲಿಯ ಸಮ್ಮ ಇಂಗ್ಲಿಷ ಸ್ಕೂಲಿನ ಶಿಕ್ಷಕ ರಾಜೆ ಪಟ್ಟೆಲ ಮಂಗೇಶ ಭೂಪೋ ಇವರು ಕಳೆದ ವಾರ ಮುಂಬಯಿಯಲ್ಲಿ ಹೃದಯವಿಕಾರದಿಂದ ತೀರಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ. ಅವರ ಅಕಾಲಿಕ ನಿಧನದ ಸ್ಮರಣಾರ್ಥ ಮೊನ್ನೆ ಸದರಿ ಶಾಲೆ ಮುಚ್ಚಲ್ಪಟ್ಟಿತ್ತು. ಅಂದು ಶಾಲೆಯ ಶಿಕ್ಷಕರೂ ವಿದ್ಯಾರ್ಥಿಗಳೂ ಸಭೆಸೇರಿ ದುಃಖಪ್ರದರ್ಶನ ಮಾಡಿದರೆಂದು ತಿಳಿಯುತ್ತದೆ

ವಿದ್ಯಾರ್ಥಿ ಶಿಕ್ಷಕ ಮತ್ತು ಉದ್ಯೋಗಸ್ಥರಿಗೆ

ಸ್ಲೇಟಪಟಿ, ಪ್ಯಾಡ, ಹಾಳಗದ, ಡೆಸ್ಕನ ಮಿಲ್ಲನ ಕಾಗದ

ಬರೇ ಹಾಗೂ ಬುಕ್ಕ) ವಗೈರೆ ಸವಲತ್ತಿನ ದರದಿಂದ,

ಸಾಕಷ್ಟು ತರತರದ ಸಿಗುತ್ತವೆ

ಬಾಲಕೃಷ್ಣ ಸ್ಟೋರ್ಸ್, ಕುಮಟಾ.

ನೆಂಶಾಯರ ಆಫ್ ಇಂಡಿಯಾ ಲೈಫ ಇನ್ಸುರನ್ಸ ಕಂಪನಿಯಲ್ಲೇ

ವಿಮೆ ಇಳಿಸಿರಿ ಬಲ್ಲಿ ಕರಾರು ಗಳಿಗಿಂತ ಕಂತುಗಳು

ತೀರು ಸುಲಭವಿವೆ ವಿಚಾರಿಸಿರಿ —

ಗೋವಿಂದ ಶ್ರೀಧರ ನಾಯಕ, ಏಜಂಟ

(ಬಾಲಕೃಷ್ಣ ಸ್ಟೋರ್ಸ್, ಕುಮಟಾ.

ಮತಾಧಿಕಾರಿಗಳಿಗೆ ಎಚ್ಚರಿಕೆ.

ಪ್ರಾಂತಿಕ ಎಸೆಂಬ್ಲಿ ಕೌನ್ಸಿಲುಗಳ ಚುನಾವಣೆಗಳು ಬೇಗನೇ ಜರುಗಲಿದೆಂದೂ ಮುಂಬಯಿ ಸರಕಾರದವರು ದಯಪಾಲಿಸಿರುವ ಸವಲತ್ತಿನ ಲಾಭ ಪಡೆಕೊಂಡು, ಈಗ ಎಸೆಂಬ್ಲಿ-ಕೌನ್ಸಿಲುಗಳ ಮತದಾರರಾಗಲು ಪಾತ್ರತೆಯುಳ್ಳ ವಿದ್ಯಮಾನ (ಅಂದರೆ ೧೯೪೧ರಲ್ಲಿ ಸಿದ್ಧಗೊಳಿಸಲ್ಪಟ್ಟ) ಮತದಾರ-ಯಾದಿಗಳಲ್ಲಿ ಸೇರಿಲ್ಲದ ಜನರು ತಾ ೧೫-೯-೪೫ರೊಳಗೆ ಜಿಲ್ಲೆಯ ಕಲೆಕ್ಟರರಿಗೆ ಅರ್ಜಿ ಮಾಡಿಕೊಳ್ಳಬೇಕಾಗಿಯೂ ಕಳೆದ ವಾರದ "ವೃತ್ತ"ದಲ್ಲಿ ತಿಳಿಸಿತ್ತಷ್ಟೇ ಆದರೆ ಯಾವದೋ ಕಾರಣದಿಂದ ಮುಂಬಯಿ ಸರಕಾರದವರು ತಮ್ಮ ಮೂಲ ಪ್ರಕಟಣೆಯೊಳಗಿನ ಕಲ್ಪಗಳ ಅರ್ಜದ ಮ್ಯಾದೆಯನ್ನು ಬೆಳಿಸಿ, ಸದ್ಯದ ಮತದಾರ ಯಾದಿಗಳು ಅಪೂರ್ಣವಿರುವದರಿಂದ ಅವನ್ನು ತಿದ್ದುಪಡಿ ಮಾಡಬೇಕಾಗಿ ಒಪ್ಪಿಟ್ಟರು ತಾ ೧೫-೯-೪೫ರೊಳಗೆ ಜಿಲ್ಹಾಧಿಕಾರಿಗೆ ಅರ್ಜಿ ಮಾಡಿದರೆ ಸಾಕೆಂದೂ, ಹಾಗೆ ಅರ್ಜಿ ಬಂದಲ್ಲಿ ಸರಕಾರದವರು ಮತದಾರ ಯಾದಿಗಳ ಪುರವಣಿಯ ಒಗ್ಗೆ ಆಜ್ಞೆ ಹೊರಡಿಸುವರೆಂದೂ ಅಂಥ ಆಜ್ಞೆ ಹೊರಬಿದ್ದ ತಾ ೧೫-೧೦-೪೫ರ ವರೆಗೆ ಮತಾಧಿಕಾರದ ಅರ್ಹತೆಯುಳ್ಳವರು ತಮ್ಮ ಹೆಸರು ದಾಖಲಪಡಿಸಿಕೊಳ್ಳುವದಕ್ಕಾಗಿ ಅರ್ಜಿ ಮಾಡಬಹುದೆಂದೂ ತಿಳಿಸುವ ಹೊಸ ಪ್ರಕಟನೆಯೊಂದನ್ನು ಕಳೆದ ಸೋಮವಾರ ಪ್ರಕಟಿಸಿದ್ದಾರೆ ನಮ್ಮ ಜಿಲ್ಲೆಯಲ್ಲಿ ಕೆಲವರು ಹೀಗೆ ಕಳೆದ ಚುನಾವಣೆಗೆ ಅರ್ಜಿ ಮಾಡಿ ಮತದಾರ-ಯಾದಿಗಳ ತಿದ್ದುಪಡಿ ಮಾಡಬೇಕೆಂದು ಬಿನ್ನವಿಸಿದ್ದಾರೆ ಅದರಿಂದ ಮತಾಧಿಕಾರದ ಅರ್ಹತೆಯುಳ್ಳ ಜನರಿಗೆ ಅರ್ಜಿಗಳನ್ನು ಮಾಡಲು ಈಗ ಅಕ್ಟೋಬರ ತಿಂಗಳ ತಾ ೧೫ರ ವರೆಗೆ ಅವಕಾಶ ಸಿಕ್ಕಿದೆ ಈ ಅವಧಿಯ ಲಾಭ ತಕ್ಕೊಂಡು ಮತಾಧಿಕಾರ ಪಡೆಯಲು ಅರ್ಹತೆಯುಳ್ಳ ಪ್ರತಿಯೊಬ್ಬ ಪ್ರಜೆಯೂ ತಮ್ಮ ಹೆಸರು ಈಗಿನ ಯಾದಿಗಳಲ್ಲಿ ಇಲ್ಲದಿದ್ದರೆ ಅವನ್ನು ದಾಖಲಪಡಿಸಿಕೊಳ್ಳಬೇಕಾಗಿ ಸೂಚನೆಯಿದೆ ಭಾವೀ ಚುನಾವಣೆಗಳ ಮಹತ್ವವನ್ನು ಉಂಟೆಂಬುದು ಕಾಂಗ್ರೆಸ ಕಾರ್ಯಕಾರಿ ಮಂಡಳದ ನಿರ್ಣಯದಿಂದ ಸ್ಪಷ್ಟವಾಗುತ್ತದೆ ಚುನಾವಣೆಗಳನ್ನು ಹೋರಾಡಲು ಹಲವಾರು ಅಡತಡೆಗಳಿದ್ದಾಗ್ಯೂ "ಜನ ಸಾಮಾನ್ಯರ ಅಭಿಪ್ರಾಯವೇನುಂಟೆಂಬುದನ್ನೂ ಹಿಂದೀ ಪ್ರಜೆಗಳಿಗೆ ರಾಜ್ಯಾಧಿಕಾರ ಒಪ್ಪಿಸಬೇಕೆಂಬುದರ ಬಗ್ಗೆ ಜನಮತ ಹೇಗುಂಟೆಂಬುದನ್ನೂ ಜಗತ್ತಿಗೆ ನಿಚ್ಚಳವಾಗಿ ತೋರಿಸಿಕೊಡುವದಕ್ಕಾಗಿ" ಕಾಂಗ್ರೆಸ್ಸು ಈ ಚುನಾವಣೆಗಳಲ್ಲಿ ಹೋರಾಡತಕ್ಕದ್ದೆಂದು ಕಾಂಗ್ರೆಸ ಕಾರ್ಯಕಾರಿ ಮಂಡಳದ ತೀರ್ಮಾನವಾಗಿದೆ ಅದ್ದರಿಂದ ಯಾರೂ ಮತಾಧಿಕಾರದ ಮಹತ್ವದ ಹಕ್ಕನ್ನು ಅಜಾಗ್ರತೆಯಿಂದ ಕಳಕೊಳ್ಳಬಾರದಾಗಿ ಅರಿಕೆಯಿದೆ

ಮತಾಧಿಕಾರ ಯಾರಿಗುಂಟು ?

ಪ್ರಾಂತಿಕ ಕೌನ್ಸಿಲಿಗೆ

(೧) ರೂ ೩೫೦ ಯಾ ಹೆಚ್ಚು ಕಿರ್ದಿಯುಳ್ಳ ಭೂಮಿ ಧಾರಣೆ ಮಾಡುವವರು,

(೨) ರೂ ೧೫೦೦೦ ಯಾ ಹೆಚ್ಚಿಗೆ ಉತ್ಪನ್ನದ ಮೇಲೆ ಇನ್ಕಮ್‌ಟ್ಯಾಕ್ಸ ಕರ ತೆರುವವರು,

(೩) ಜಿ ಲೋ ಬೋರ್ಡಿನ ಹಿಂದಿನ ಹಾಗೂ ವಿದ್ಯಮಾನ ಅಧ್ಯಕ್ಷರು

ಪ್ರಾಂತಿಕ ಎಸೆಂಬ್ಲಿಗೆ.

(ಅ) ಮ್ಯುನಿಸಿಪಲ್ ಇಲ್ಲವೆ ನೋಟಿಫಾಯ್ಡ ಏರಿಯಾ ಹದ್ದುಗಳಲ್ಲಿ ವರ್ಷ ೧೮ ರೂ ೧೮ ಯಾ ಹೆಚ್ಚು ಭಾಡಿಗೆಯುಳ್ಳ ಮನೆಯಲ್ಲಿ ಇಲ್ಲವೆ ರೂ ೭೫೦ ಯಾ ಹೆಚ್ಚಿಗೆ ಬೆಲೆಯುಳ್ಳ ಮನೆಯಲ್ಲಿ ವಾಸ ಮಾಡುವ ಮಾಲೀಕರು ಯಾ ಭಾಡಿಗೆದಾರರು

(ಬ) ೧೯೪೪-೪೫ರಲ್ಲಿ ಇನ್ಕಮ್‌ಟ್ಯಾಕ್ಸ ಕರ ತೆರಬೇಕೆಂದು ಆಕರಣೆಯಾದವರು,

(ಕ) ಮಿಲಿಟರಿ ಪೆನಶನ್ ಪಡೆಯುವವರು,

(ಡ) ರೂ ೮ಕ್ಕಿಂತ ಹೆಚ್ಚಿಗೆ ಕಿರ್ದಿ ತೆರುವ ಭೂಮಿ ಧಾರಣ ಮಾಡುವ ಖಾತೆದಾರರು ಯಾ ಸಾಗುವಳಿ ಮಾಡುವ ರೈತರು,

(ಗ) ಮೆಟ್ರಿಕ್ ಇಲ್ಲವೆ ಎಸ್ ಎಲ್ ಸಿ ಪರೀಕ್ಷೆ ಉತ್ತೀರ್ಣರಾದವರು, (ವಿ ಸೂ. ಇಂಥವರು ವಿಶ್ವವಿದ್ಯಾಲಯದಿಂದ ಸಿಕ್ಕ ಮೆಟ್ರಿಕ್-ಸರ್ಟಿಫಿಕೇಟುಗಳ ಮೂಲವನ್ನು ಅದರದೊಂದು ಪ್ರತಿಯನ್ನೂ ಅರ್ಜಿಯ ಸಂಗಡ ಇಡಬೇಕು ಮೂಲವು ಅವರಿಗೆ ಹಿಂದಿನಿಂದ ತಿರುಗಿ ಸಿಗುವದು ಜೆ ಪಿ ವಗೈರೆ ಪರೀಕ್ಷೆಯ ಸರ್ಟಿಫಿಕೇಟ ತೋರಿಸಿ ತಾವು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇವೆಂದು ವಾದಿಸಿದರೆ ಪ್ರಯೋಜನವಾಗಲಾರದು. ಅಂತಿಲ್ಲದ್ದುರ್ದೈವದಿಂದ ಮೆಟ್ರಿಕ್-ಸರ್ಟಿಫಿಕೇಟ ಕಳಕೊಂಡವರು ವಿಶ್ವವಿದ್ಯಾಲಯದ ರಜಿಸ್ಟ್ರಾರರಿಗೆ ಅರ್ಜಿ ಮಾಡಿ ಮೂಲ ಸರ್ಟಿಫಿಕೇಟಿನ ಮಂಜೂರಿ ಉತಾರ ತರಿಸಿಕೊಂಡು ಹಾಜರ ಮಾಡಬೇಕಾಗುವದು)

(ಹ) ರೂ ೩೨ ಯಾ ಹೆಚ್ಚಿಗೆ ಕಿರ್ದಿ ತೆರುವ ಭೂಮಿ ಉಳ್ಳವರ ಯಾ ಸಾಗುವಳಿ ಮಾಡುವವರ ಹೆಂಡಂದಿರು,

(ಕ) ಇನ್ಕಮ್‌ಟ್ಯಾಕ್ಸ ಕರ ತೆತ್ತವರ ಹೆಂಡಂದಿರು,

(ಲ) ಮಿಲಿಟರಿ ಪೆನ್ಶನದಾರರ ಹೆಂಡಂದಿರು,

(ಮ) ರೂ ೩೬ ಯಾ ಹೆಚ್ಚಿಗೆ ವಾರ್ಷಿಕ ಭಾಡಿಗೆಯುಳ್ಳ ಇಲ್ಲವೆ ರೂ ೧೫೦೦ಕ್ಕಿಂತ ಹೆಚ್ಚಿಗೆ ಬೆಲೆಯುಳ್ಳ ಮನೆಯ ಮಾಲೀಕರ ಹಾಗೂ ಅಂಥ ಮನೆಯ ಭಾಡಿಗೆದಾರರ ಹೆಂಡಂದಿರು,

(ನ) ಓದು ಬರಹಬಲ್ಲ ಹೆಂಗಸರು, (ವಿ ಸೂ.— ಇಂಥವರ ಅರ್ಜಿಯ ಕೆಳಗೆ ಇಲ್ಲವೆ ಜೊತೆಗೆ ಅರ್ಜಿದಾರಳಾದ ಇಂಥವರು ಇಂತಹ ಭಾಷೆಯಲ್ಲಿ ಓದು-ಬರಹ ಬಲ್ಲವಳಿದ್ದಾಳೆಂದು ಯಾವದೊಂದು ಸರಕಾರ ಮಾನ್ಯತೆ ಪಡೆದ ಶಾಲೆಯ ಮುಖ್ಯಾಧ್ಯಾಪಕನ ಇಲ್ಲವೆ ಮುಖ್ಯಾಧ್ಯಾಪಿಕೆಯ ಪ್ರಶಸ್ತಿಪತ್ರವನ್ನಾಗಲಿ, ತಮ್ಮ ಊರ ಗ್ರಾಮಸ್ಥರ ಮತ್ತು ತಾಲೂಕ ಹೇರಿಗಳ ರಿಂಸ್ತೇದಾರರ ಸಹಿಗಳುಳ್ಳ ಪ್ರಮಾಣಪತ್ರವನ್ನಾಗಲಿ ಪಡಕೊಂಡು ಇಡಬೇಕು ಇಂತಹ ಪ್ರಶಸ್ತಿಪತ್ರವಿಲ್ಲದ ಅರ್ಜಿಗಳು ತಿರಸ್ಕರಿಸಲ್ಪಡುವವೆಂದು ಬೇರೆ ಹೇಳಬೇಕಾಗಿಲ್ಲ)

(ಓ) ಮಿಲಿಟರಿ ಅಧಿಕಾರಿಗಳ ವಿಧವೆಗಳು ಇಲ್ಲವೆ ತಾಯಂದಿರು,

(ಪ) ಓದು-ಬರಹ ಬಲ್ಲ ನಿಕೃಷ್ಟ ಜಾತಿಯವರು,

(ಕ್ಷ) ಪ್ರತ್ಯಕ್ಷ ಹಳ್ಳಿಯ ನೌಕರಿ ಮಾಡುತ್ತಿರುವ ನಿಕೃಷ್ಟ ಜಾತಿಯವರು, (ನಿಕೃಷ್ಟ ಜಾತಿಗಳಲ್ಲಿ ನಮ್ಮಲ್ಲಿಯ ಆಗೇರ, ಹಳ್ಳೇರ, ಮಹಾರ, ಮುಕ್ರಿ, ಚಮಗಾರ, ಸುಣ್ಣಗಾರ ಮತ್ತು ಕೊಟ್ಟೆಗಾರ ಜಾತಿಗಳು ಮಾತ್ರ ಬರುತ್ತವೆ)

(ಯ) ಮುಂಬಯಿ ಲೆಜಿಸ್ಲೇಟಿವ್ಹ ಕೌನ್ಸಿಲಿನ ಮತದಾರರಾಗಲು ಪಾತ್ರತೆಯುಳ್ಳವರ ಹೆಂಡಂದಿರು

ವಿ ಸೂ — ಮೇಲಿನ ಪೈಕಿ ಯಾವದೊಂದು ಪಾತ್ರತೆಯುಳ್ಳ, ೨೧ ಯಾ ಹೆಚ್ಚು ವರ್ಷ ಪ್ರಾಯದ ಮತ್ತು ೧೯೪೪ ೪೫ರಲ್ಲಿ ಈ ಜಿಲ್ಲೆಯೊಳಗೆ ೧೮೦ ಯಾ ಹೆಚ್ಚಿಗೆ ದಿನ ವಾಸ್ತವ್ಯವಿದ್ದ ಜನರಿಗೆ ಮಾತ್ರ ಮತಾಧಿಕಾರ ಸಿಗುತ್ತದೆ ಕಲೆಕ್ಟರರಿಗೆ ಮಾಡುವ ಅರ್ಜಿಯಲ್ಲಿ ಅರ್ಜದಾರರ ಹೆಸರು, ಊರು, ತಾಲೂಕು ಇವುಗಳನ್ನು ಸ್ಪಷ್ಟವಾಗಿ ಬರೆಯಬೇಕಲ್ಲದೆ ಮೇಲಿನ ಮಾಹಿತಿ ಅಂಶಗಳನ್ನೂ ಕಾಣಿಸಬೇಕು

ಜಾಹೀರಾತು.

ಕೆಲವು ಕಡೆಯಲ್ಲಿ ಋಣ-ವಿಮೋಚನೆ ಕಾಯಿದೆಯ ೬ ತಿಂಗಳ (೧೮-೨-೪೫ರಿಂದ ೩೧-೧೦-೪೫ರ ವರೆಗೆ) ಅವಧಿಯನ್ನು ಸರಕಾರದವರು ಬೆಳೆಸಲಿದ್ದಾರೆಂಬ ಸುದ್ದಿಯನ್ನು ಪ್ರಚಾರಗೊಳಿಸಲಾಗಿದೆಯೆಂದು ತಿಳಿದು ಬಂದಿದೆ. ಆದರೆ ಈ ೬ ತಿಂಗಳ ಅವಧಿಯನ್ನು ಯಾವದೇ ಕಾರಣದಿಂದ ಸರಕಾರದವರು ಬೆಳೆಸಲಾರರು. ಇದನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು ಈ ಅವಧಿಯನ್ನು ಸರಕಾರದವರು ಬೆಳೆಸುವರೆಂದು ಮಾಡುತ್ತಲಿರುವ ಪ್ರಚಾರವು ಸುಳ್ಳು ಮತ್ತು ನಿರಾಧಾರವಾದದ್ದು ಇರುತ್ತದೆ. ಸಾಲಗಾರ ಒಕ್ಕಲಿಗರು ಇಂಥ ಪ್ರಚಾರದ ಕಡೆಗೆ ಲಕ್ಷ್ಯಕೊಡದೆ ತಮ್ಮ ಸಾಲ ಸರಿಪಡಿಸಿಕೊಳ್ಳುವ ಬಗ್ಗೆ ಸಾಲ ಸರಿಪಡಿಸುವ ಬೋರ್ಡಿಗೆ (Debt Adjustment Board) ಅವಧಿ (ತಾ ೩೧-೧೦-೪೫ರೊಳಗೆ) ಯೊಳಗಾಗಿ ತಮ್ಮ ಅರ್ಜಿಗಳನ್ನು ಮಾಡಿಕೊಳ್ಳತಕ್ಕದ್ದು ತಿಳಿಯುವದು. ತಾ ೩೧-೮-೪೫

S B GODHI,

ಅಸಿಸ್ಟಂಟ ರಜಿಸ್ಟ್ರಾರ,

ಡೆಟ್ ರಿಲೀಫ, ಸದರ್ನ ಡಿವಿಜನ್, ಬೆಳಗಾಂವ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೧-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ಕಳುಹುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡ ಕೊಟ್ಟಿರತಕ್ಕದ್ದು

Reg. No. B 1270. Monday, 24th September, 1945.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೧೩.

ಕುಮಟೆ:- ಸೋಮವಾರ, ತಾ ೨೪ ಮಾಹೆ ಸಪ್ಟಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಅಖಿಲ ಭಾರತೀಯ ಕೊಂಗ್ರೆಸ ಸಮಿತಿಯ ಸಭೆ.

ಈ ಹಿಂದೆ ತಿಳಿಸಿದಂತೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ ಮೊನ್ನೆ ಶುಕ್ರವಾರದಿಂದ ಮುಂಬಯಿಯಲ್ಲಿ ಸೇರಿದೆ ೧೯೪೨ನೇ ಇಸವಿಯ ಆಗೋಸ್ಟ ೮, ೯ರ ತರುವಾಯ ಈ ಸಮಿತಿಯು ಕೂಡುತ್ತಿದ್ದುದು ಇದೇ ಮೊದಲನೇ ಸಲ. ಈ ೩೭॥ ತಿಂಗಳಲ್ಲಿ ಭಾರತದಲ್ಲಿ ಜಗತ್ತಿನಲ್ಲಿಯೂ ಅನೇಕಾನೇಕ ಸ್ಥಿತ್ಯಂತರಗಳಾಗಿವೆ ಇದೀಗ ಹೊಸ ಹೊಸ ಸ್ಥಿತ್ಯಂತರಗಳೂ ಮಾರ್ಪಾಟುಗಳೂ ಆಗಲಿವೆ. ಆದುದರಿಂದ ಈ ಸಭೆಗೆ ವಿಶೇಷ ಮಹತ್ವ ಬಂದಿದೆ

ಸಮಿತಿಯು ಈಗಿನ ಸಭೆಗಾಗಿ ೧೯೪೨ರ ಆಗೋಸ್ಟ ತಿಂಗಳ ಸಭೆ ಸೇರಿದ ಸ್ಥಳವನ್ನೇ (ಗೋವಾಲಿಯಾ ಟ್ಯಾಂಕ ಪ್ಯಾಲೆಸ್ನೇ) ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಆರಿಸಿ, ಅಲ್ಲಿ ಸಭೆಯ ಗೌರವಕ್ಕೂ ಮಹತ್ವಕ್ಕೂ ಅನುರೂಪವಾದ ವಿಶಾಲ ಸಭಾಮಂಟಪವನ್ನು ರಚಿಸಿದ್ದಾರೆ ಮಂಟಪವು ಪೂರ್ವಾಭಿಮುಖವಾಗಿದ್ದು, ಹೆಚ್ಚು-ಕಡಿಮೆ ಚಚ್ಚೌಕ ಆಕಾರದ್ದಾಗಿ ಸಭಾಗೃಹವು ೨೫೦೦೦ ಜನರನ್ನು ಹಿಡಿಯುವಷ್ಟು ವಿಶಾಲವುಂಟು ಮಂಟಪದ ಪಶ್ಚಿಮ ಬದಿಯಲ್ಲಿ ಸರಿ-ನಡುವೆ ಅಧ್ಯಕ್ಷರ ಬಗ್ಗೆ ಕಾರ್ಯಕಾರಿ ಮಂಡಳದ ಸದಸ್ಯರ ಬಗ್ಗೂ ಉಚ್ಚ ವೇದಿಕೆಯನ್ನು ನಿರ್ಮಿಸಿದ್ದಾರೆ. ಈ ವೇದಿಕೆಯ ಮುಂದುಗಡೆಯೇ ಅ॥ ಭಾ॥ ಕೊಂಗ್ರೆಸ ಸಮಿತಿಯ ಸದಸ್ಯರು ಕೂಡ್ರುವರು, ವೇದಿಕೆಗೆ ಹೊಂದಿ ಅದರ ಬಲಗಡೆಯಲ್ಲಿ ಭಾಷಣಕಾರರ ಬಗ್ಗೆ ಎತ್ತರವಾದ ಬೇರೊಂದು ವೇದಿಕೆ (Rostrum) ಯುಂಟು. ಈ ವೇದಿಕೆಯ ಬಲಗಡೆಗೆ ಸನ್ಮಾನ್ಯ ಅಭ್ಯಾಗತರು ಕೂಡ್ರುವ ವ್ಯವಸ್ಥೆ ಮಾಡಲಾಗಿದೆ ಈ ಅಭ್ಯಾಗತರಲ್ಲಿಯೂ ಅ, ಬ, ಕ ಎಂಬ ಮೂರು ವರ್ಗಗಳನ್ನು ಮಾಡಿ ಅವರಿಗಾಗಿ ಪ್ರತ್ಯ-ಪ್ರತ್ಯೇಕ ವ್ಯವಸ್ಥೆ ಮಾಡಲ್ಪಟ್ಟಿದೆ ಸನ್ಮಾನ್ಯ ಅಭ್ಯಾಗತರಿಗಾಗಿ ಕಾಯ್ದಿರಿಸಿಟ್ಟ ವೇದಿಕೆಯ ಎದುರಿಗೆ ಪತ್ರಿಕಾ ಪ್ರತಿನಿಧಿಗಳ ಬಗ್ಗಾಗಿ ಟೇಬಲಗಳನ್ನು ಹಾಕಿಟ್ಟಿದ್ದಾರೆ ಅವರ ಹಿಂದೆ ಪರ-ಪ್ರಾಂತಗಳಿಂದ ಬಂದ ಕೊಂಗ್ರೆಸ ಕಾರ್ಯಕರ್ತರು ಕೂಡ್ರಬೇಕು ಅಧ್ಯಕ್ಷರ ವೇದಿಕೆಯ ಎಡಬದಿಗೆ ಹಾಕಿದ ಉದ್ದನ್ನ ಪೀಠದಲ್ಲಿ ಮುಂಬಯಿ ಪ್ರಾಂ॥ ಕೊಂ॥ ಸಮಿತಿಯ ಸದಸ್ಯರು ಕೂಡ್ರುತ್ತಾರೆ ಇವರ ಮುಂದುಗಡೆಯಲ್ಲೂ ಅ॥ ಭಾ॥ ಕೊಂ॥ ಸಮಿತಿಯ ಸದಸ್ಯರ ಹಿಂಬದಿಯಲ್ಲೂ ೧೦೦ ರೂ ಗಳ ಪ್ರೇಕ್ಷಕ-ತಿಕೀಟು ಕೊಂಡುಕೊಂಡವರು ಕೂಡ್ರಬೇಕು ಅವರ ಹಿಂದೆ ರೂ ೨೫ರ ತಿಕೀಟು ತಕ್ಕೊಂಡವರು, ಮತ್ತು ಈ ಎಲ್ಲರ ಹಿಂದೆ ರೂ. ೧೦ರ ತಿಕೀಟು ತಕ್ಕೊಂಡವರು. ಪ್ರೇಕ್ಷಕ ತಿಕೀಟುಗಳು ಎಂದೋ ಮಾರಾಟವಾಗಿ ಹೋಗಿದ್ದವು. ತಿಕೀಟು ಸಿಗದೆ ನಿರಾಶೆಪಟ್ಟವರು ಸಹಸ್ರಾವಧಿ ಜನರಿದ್ದಾರೆ ಅದರಿಂದ ಎಷ್ಟೋ ಜನರು ಹಿಂದೆ ತಿಕೀಟು ಪಡಕೊಂಡವರ ಪಾಲುಗಾರರಾಗಿ ಪಾಳಿಯಂತೆ ಸಭೆ ಸೇರುವ ವ್ಯವಸ್ಥೆ ಮಾಡಿಕೊಂಡ ವರ್ತಮಾನವಿದೆ

ಸಭೆಯ ವ್ಯವಸ್ಥೆ ಬಹಳ ಚೊಕ್ಕಟವಾಗಿದೆ ೨೫೦೦ ವಿದ್ಯುದ್ದೀಪಗಳು ಸಭೆಯನ್ನು ಬೆಳಗುತ್ತವೆ, ೨೦೦೦ರಷ್ಟು ವಿದ್ಯುತ್ತಿನ ಬೀಸಣಿಗೆಗಳು ಸಭಿಕರಿಗೆ ತಂಗಾಳಿ ಪೂರೈಸುತ್ತವೆ ಭಾಷಣಕಾರರ ಭಾಷಣಗಳು ಸಭಾಗೃಹದಲ್ಲೂ ಹೊರಗೂ ಕೇಳಬರುವಂತೆ ಧ್ವನಿವಾಹಕ ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ ಕೇಸರಿ ಬಣ್ಣದ ಸೀರೆಗಳನ್ನುಟ್ಟುಕೊಂಡ ೨೦೦೦ ಸ್ವಯಂಸೇವಿಕೆಯರು ಸಭಾಮಂಟಪದ ಬೇರೆ ಬೇರೆ ಬಾಗಿಲುಗಳಲ್ಲೂ ಸಭೆಯಲ್ಲೂ ವ್ಯವಸ್ಥಿತರಾಗಿಯೂ ಶಿಸ್ತಿನಿಂದಲೂ ನಿಂತು ಕಾವಲು ಇರುತ್ತಿದ್ದಾರೆ ಅವರಿಗೆ ನೆರವಾಗಲು ೨೦೦೦ ಸ್ವಯಂಸೇವಕರು ಬಳಿಯಲ್ಲೇ ಸಿದ್ಧರಾಗಿ ನಿಲ್ಲುತ್ತಾರೆ ಮಂಟಪದ ಪೂರ್ವ ಮಹಾದ್ವಾರದ ಮುಂದೆಯೇ ನೆಟ್ಟಿಟ್ಟ ಎತ್ತರವಾದ ಧ್ವಜಸ್ತಂಭದಲ್ಲಿ ತ್ರಿವರ್ಣ ರಾಷ್ಟ್ರಧ್ವಜವು ಅಭಿಮಾನದಿಂದ ಪಟಪಟನೆ ಹಾರಾಡುತ್ತ ರಾಷ್ಟ್ರಸ್ವಾತಂತ್ರ್ಯಕ್ಕಾಗಿ ದುಡಿಯಲು ಎಲ್ಲರಿಗೂ ಸ್ಫೂರ್ತಿಗೊಳಿಸುತ್ತಿದೆ ಈ ಸುಂದರ ವ್ಯವಸ್ಥೆಯನ್ನು ಕಂಡು ಸ್ವರ್ಗದಲ್ಲಿದ್ದ ದೇವರು ಅಸೂಯೆಗೊಂಡಿರಬೇಕು ಅವರು ಮೋಡರಾಜನಿಗೆ ಮುಂದೆ ಮಾಡಿ, ಅವನ ಕಡೆಯಿಂದ ಮೇಲಿಂದ ಮೇಲೆ ಮಳೆಗರೆಯಿಸಿ ಸಭೆಯ ಕಾರ್ಯಕ್ಕೆ ವ್ಯತ್ಯಯ ಮಾಡುವ ಪ್ರಯತ್ನ ನಡಿಸಿದ್ದಾರೆ ಆದರೂ ಸಭೆಗೆ ಬರುವ ಸದಸ್ಯರಾಗಲಿ, ಪ್ರೇಕ್ಷಕರಾಗಲಿ, ಅತಿಥಿ ಅಭ್ಯಾಗತರಾಗಲಿ, ವ್ಯವಸ್ಥಾಪಕ ಸ್ವಯಂಸೇವಕರಾಗಲಿ ಎಳ್ಳಷ್ಟೂ ಧೈರ್ಯಗುಂದದೆ ಉತ್ಸಾಹದಿಂದ ತಮ್ಮ ತಮ್ಮ ಕೆಲಸ ಸಾಗಿಸಿದ್ದಾರೆ

ಅ॥ ಭಾ॥ ಕೊಂ॥ ಸಮಿತಿಯ ಸಭೆಗೆ ಆರಂಭವಾಗುವದು ಶುಕ್ರವಾರ ಮಧ್ಯಾನ್ಹ ೩ ಘಂಟೆಗೆ ಇತ್ತು. ಸಭೆಯ ಮುಂದಿಡುವ ಕೆಲವು ಗೊತ್ತುವಳಿಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಪುಣೆಯ ಸಭೆಯಲ್ಲೇ ತಯಾರಿಸಿಟ್ಟಿದ್ದರು ಇನ್ನುಳಿದ ಕೆಲವು ವಿಷಯಗಳ ಹಾಗೂ ಪುಣೆಯ ಸಭೆಯ ನಂತರ ತೋರಿಬಿದ್ದ ಸರ್ವಾಧಿಕಾರಿಗಳ ಹೊಸ ಯೋಜನೆಯ ಚರ್ಚೆ ಮಾಡಿ ಹೊಸ ಗೊತ್ತುವಳಿಗಳನ್ನು ಸಿದ್ಧಪಡಿಸಲು ಕೊಂಗ್ರೆಸ ಕಾರ್ಯಕಾರಿ ಮಂಡಳವು ಶುಕ್ರವಾರದಿಂದ ದಿನಾಲು ಮುಂಜಾನೆ ೮॥ ಘಂಟೆಯಿಂದ ಮಧ್ಯಾನ್ಹದ ವರೆಗೆ, ರಾಷ್ಟ್ರಪತಿ ಮೌಲಾನಾ ಅಬುಲ ಕಲಾಮ ಆಝಾದರು ಇಳಕೊಂಡಿರುವ ಶ್ರೀ॥ ಭುಲಾಭಾಯಿ ದೇಸಾಯಿಯವರ ಬಂಗಲೆಯಲ್ಲಿ ಕೂಡುತ್ತಿದೆ ಮಹಾತ್ಮರು ಅ॥ ಭಾ॥ ಕೊಂ॥ ಸಮಿತಿಯ ಸಭೆಯಲ್ಲಿ ಹಾಜರಿದ್ದು ಮಾರ್ಗದರ್ಶನ ಮಾಡುವದಕ್ಕೆಂದು ಪುಣೆಯಿಂದ ಶುಕ್ರವಾರ ಮುಂಜಾವಿಗೇ ಮುಂಬಯಿಗೆ ಬಂದು ತಲ್ಪಿದ್ದಾರೆ. ಆದರೆ ಹಾದಿಯಲ್ಲಿ ಅವರಿಗೆ ನೆಗಡಿಯಾಗಿ ಜ್ವರ ಬರುತ್ತಿದೆ ಅವರಿಗೆ ಇನ್ಫ್ಲುಯೆಂಝಾ ಬೇನೆಯ ಬಾಧೆಯಾಗಿದೆಯಂತೆ ಡಾ॥ ಗಿಲ್ಡರ, ಡಾ॥ ಜೀವರಾಜ ಮೇಹ್ತಾ ವಗೈರೆ ಡಾಕ್ಟರರು ಮೇಲಿಂದ ಮೇಲೆ ಅವರ ಆರೋಗ್ಯದ ತಪಾಸಣೆ ಮಾಡುತ್ತಿದ್ದಾರೆ ಮಹಾತ್ಮರು ಸಂಪೂರ್ಣ ವಿಶ್ರಾಂತಿ ತಕ್ಕೊಳ್ಳಬೇಕಾಗಿ ಅವರ ಅಭಿಪ್ರಾಯ ಅದರಿಂದ ಮಹಾತ್ಮರು ಕಾರ್ಯಕಾರಿ ಮಂಡಳದ ಸಭೆಗಳಿಗೆ ಹೋಗುವದಿಲ್ಲ ಅವಶ್ಯವೆನಿಸಿದಾಗ ರಾಷ್ಟ್ರಪತಿಗಳೂ ಮಂಡಳದ ಸದಸ್ಯರೂ ಅವರಿದ್ದಲ್ಲಿ ಹೋಗಿ ಬೇಕಾದ ಸಲಹೆಗಳನ್ನು ಪಡಕೊಳ್ಳುತ್ತಿದ್ದಾರೆ ಈ ಅಸ್ವಸ್ಥತೆಯ ಮೂಲಕ ಮಹಾತ್ಮರು ಅ॥ ಭಾ॥ ಕೊಂ॥ ಸಮಿತಿಯ ಸಭೆಗೆ ಹೋಗುವಂತಿಲ್ಲ ಅದರಿಂದ ಸಭೆಯ ಕಾರ್ಯಕಲಾಪಗಳಲ್ಲಿ ದೊಡ್ಡದೊಂದು ನ್ಯೂನತೆಯುಂಟಾಗುವದು ಸಭೆಯಲ್ಲಿ ಮಹಾತ್ಮರನ್ನು ನೋಡಬೇಕು, ಅವರ ಮಾತುಗಳನ್ನು ಕೇಳಿ ಕೃತಕೃತ್ಯರಾಗಬೇಕು ಎಂದು ಆಶೆಪಟ್ಟ ಪ್ರೇಕ್ಷಕ ಸದಸ್ಯ-ಕಾರ್ಯಕರ್ತರಿಗೆ ಮಾತು ನಿರಾಶೆಯಾಗದೆ ಉಳಿಯಲಿಕ್ಕಿಲ್ಲ

ಸಭೆಯ ವೃತ್ತಾಂತ

ಅ॥ ಭಾ॥ ಕೊಂ॥ ಸಮಿತಿಯ ಸಭೆಗೆ ಶುಕ್ರವಾರ ಅಪರಾಹ್ನ ೩ ಘಂಟೆಗೆ ಪ್ರಾರಂಭವಾಯಿತು ಸಮಿತಿಯ ಒಟ್ಟು ಸದಸ್ಯರು ೩೫೦ ಅವರಲ್ಲಿ ೫ ಮಂದಿ ಕಳೆದ ೩ ವರ್ಷಗಳಲ್ಲಿ ಇಹಲೋಕ ಬಿಟ್ಟು ಹೋಗಿದ್ದಾರೆ ೩೫ ಮಂದಿ ಇನ್ನೂ ಬಂದಿವಾಸದಲ್ಲಿದ್ದಾರೆ ಇನ್ನುಳಿದವರಲ್ಲಿ ೨೧೦ ಮಂದಿ ಮಾತ್ರ ಈ ಸಭೆಗೆ ಬಂದು ತಲ್ಪಿದ್ದಾರೆ.

ಸರಿಯಾಗಿ ೩ ಘಂಟೆಗೆ ರಾಷ್ಟ್ರಪತಿಗಳೂ ಕಾರ್ಯಕಾರಿ ಮಂಡಳದ ಸದಸ್ಯರೂ ಸಭಾಸ್ಥಾನಕ್ಕೆ ಮೆರವಣಿಗೆಯಿಂದ ಬಂದು ತಲ್ಪಿದರು ಕೂಡಲೇ ರಾಷ್ಟ್ರಗೀತವಾಗಿ ಸಭೆಯ ಕೆಲಸಕ್ಕೆ ಪ್ರಾರಂಭವಾಯಿತು ರಾಷ್ಟ್ರಪತಿಗಳು ಚಿಕ್ಕದೊಂದು ಪ್ರಾಸ್ತಾವಿಕ ಭಾಷಣ ಮಾಡಿ, ೧೯೪೨ರ ಸಭೆಯ ನಂತರ ಒದಗಿದ ರಾಜಕೀಯ ಸ್ಥಿತ್ಯಂತರಗಳನ್ನು ವಿವರಿಸಿದರು ಅದಾದ ಮೇಲೆ ಕಳೆದ ೩ ವರ್ಷಗಳ ಅವಧಿಯಲ್ಲಿ ದಿವಂಗತರಾದ ಪ್ರಮುಖ ಕೊಂಗ್ರೆಸ್ಸಿಗರಾದ ಶ್ರೀ॥ ವಿಜಯರಾಘವಾಚಾರ್ಯ (ನಾಗಪೂರ ಕೊಂಗ್ರೆಸ್ಸಿನ ಅಧ್ಯಕ್ಷರು,) ಶ್ರೀಮತಿ ಕಸ್ತೂರಬಾ ಗಾಂಧಿ, ಬೇಗಮ್ ಆಝಾದ (ರಾಷ್ಟ್ರಪತಿಗಳ ಪತ್ನಿ), ಶ್ರೀ॥ ಸತ್ಯಮೂರ್ತಿ, ಶ್ರೀ॥ ಮಹಾದೇವ ಭಾಯಿ ದೇಸಾಯಿ, ಶ್ರೀ॥ ಎಸ್, ಆರ್ ಪಂಡಿತ (ಪಂ॥ ನೆಹರುವರ ಭಾವಂದಿರು), ಡಾ॥ ಪ್ರಫುಲ್ಲಚಂದ್ರ ರಾಯ (ಜಗದ್ವಿಖ್ಯಾತ [illegible] ರಸಾಯನ ಶಾಸ್ತ್ರಜ್ಞರು ಮತ್ತು ಖಾದಿ-ಪ್ರಚಾರಕರು) ಶ್ರೀ॥ ರಾಮದಾಸ ಪಂತಲು, ಶ್ರೀ॥ ಕೇ. ಎಸ್ ನೆಸ್ತ (ಕೇಂದ್ರ ಎಸೆಂಬ್ಲಿಯಲ್ಲಿ ಬರಗಾಲ ಪರಿಸ್ಥಿತಿಯ ಮೇಲೆ ಆವೇಶದಿಂದ ಮಾತಾಡುತ್ತಿರುವಾಗ ನಿಧನ ಹೊಂದಿದ ಕೊಂಗ್ರೆಸ-ಪಕ್ಷೀಯ ಸದಸ್ಯರು) ಇವರ ನಿಧನದ ಬಗ್ಗೆ ದುಃಖಪ್ರದರ್ಶಕ ಗೊತ್ತುವಳಿಯನ್ನು, ಅಧ್ಯಕ್ಷರ ಅಪ್ಪಣೆಯ ಮೇರೆಗೆ, ಆಚಾರ್ಯ ಕೃಪಾಲಾನಿಯವರು ಸಭೆಯ ಮುಂದಿಟ್ಟರು ಮೃತರ ಯಾದಿಯಲ್ಲಿ ಶ್ರೀ॥ ಸುಭಾಸಚಂದ್ರರ ಹೆಸರೇಕಿಲ್ಲೆಂದು ಓರ್ವರು ಕೇಳಲಾಗಿ, ಸುಭಾಸರ ನಿಧನವಾದುದು ನಿಶ್ಚಿತವಿಲ್ಲದ್ದರಿಂದ ಸೇರಿಸಿಲ್ಲವೆಂದು ರಾಷ್ಟ್ರಪತಿಗಳು ಸಮಾಧಾನ ಹೇಳಿದರು. ದುಃಖಸೂಚಕ ಗೊತ್ತುವಳಿಯಾದ ನಂತರ ಕೊಂಗ್ರೆಸ ಘಟನೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವದಕ್ಕಿರುವದೆಂದು ಹೇಳಿ ಆಚಾರ್ಯರು ಆ ಬಗ್ಗೆ ಒಂದು ಉಪಸಮಿತಿ ನೇಮಿಸಬೇಕಾಗಿ ಸೂಚಿಸಿದರು. ಆ ಸೂಚನೆಯೂ ಸ್ವೀಕೃತವಾಯಿತು ಇಷ್ಟಾದ ಮೇಲೆ ಫಲಾಹಾರಕ್ಕಾಗಿ ಸಭೆಯು ಅರ್ಧ ಘಂಟೆ ಮುಂದರಿಯಿತು

ಫಲಾಹಾರವಾದ ನಂತರ ಸಭೆಯು ಪುನಃ ಪ್ರಾರಂಭವಾಯಿತು ೧೯೪೨ರ ಚಳವಳಿಯಿಂದೀಚೆಯ ವರೆಗೆ ನಡೆದ ಘಟನೆಗಳನ್ನು ಪರಿಶೀಲಿಸುವ ಗೊತ್ತುವಳಿಯನ್ನು ಆಗ ಸಭೆಯ ಮುಂದೆ ಇಡಲು ಪಂಡಿತರು ಮುಂದೆ ಬಂದರು ಆದರೆ ಅಷ್ಟರಲ್ಲಿ ಧ್ವನಿವಾಹಕ ಯಂತ್ರಗಳು ಕೆಟ್ಟದ್ದರಿಂದ, ಸಭೆಯನ್ನು ಅಧ್ಯಕ್ಷರು ಶನಿವಾರ ಮಧ್ಯಾನ್ಹ ೨ರ ತನಕ ಮುಂದರಿಸಿದರು

WANTED a Graduate or Matriculate holding L S G D Diploma for the post of the Secretary of the Bhatkal Municipality on the of scale pay Rs 40-3/1-61-2/1-30 Persons having previous experience will be preferred Apply with testimonials to THE PRESIDENT, BHATKAL MUNICIPALITY, Bhatkal before 25th October, 1945

NOTIFICATION.

Applications are invited from Matriculate candidates preferably S T C for a post of an English class teacher at Supa on a starting pay of Rs 30 – P M plus dearness allowance at the rate sanctioned for D L B employees, stating therein the date of birth, qualification and caste

Office of the District School Board,
Kanara, Karwar, 19-9-1945

V. S NADKARNY.
Administrative Officer, D S B, Kanara

The Agricultural & Industrial Bank, Ltd.

(Incorporated in British India, Liability of Members limited)

Head Office· COONDAPOOR. S I

Branches -

ANKOLA,
BELGAUM,
COONDAPOOR
DHARWAR,
GOKARN,
HAVERI,
HUBLI,
KARWAR,
KUMTA,
MANGALORE,
NAGAR,
SHIMOGA,
SIRSI,
SOMWARPET,
VIRAJPET.

All Kinds of Banking Business transacted.
Paid-up Capital & Reserves exceed Rs 4 LAKHS
Please apply for particulars.

1-9-1945

ಅಟ್ಲೀ ಮಂತ್ರಿಮಂಡಳದ ಅಪ್ಲಿಕಾಯಿ !

(ನಿರೀಕ್ಷಕನು ಬರೆದುದು)

ಸರ್ವಾಧಿಪತಿಗಳ ದ ಪೆಟ್ಟಿಲ ದೊರೆಗಳು ಕಳೆದ ತಿಂಗಳಲ್ಲಿ ಲಂಡನ್ನಿಗೆ ಹೋಗಿದ್ದಾಗ [illegible] ವರ್ಷಗಳ [illegible] ಹೊಸ ಕಾರ್ಮಿಕ ಮಂಡಳದವರೊಡನೆ ಆಲೋಚನೆ ಮಾಡಿ, ಅಲ್ಲಿಂದ ಕಟ್ಟಿ ತಂದ [illegible] ಬುಧವಾರ ರಾತ್ರಿ ಫೋನಿಗೆ ಭಾರತೀಯರ [illegible] ತು. ಈ ಗಂಟು ಬಿಡಿಸಲ್ಪಡುವ ವರೆಗೆ [illegible] ದ ದಳದವರೆಂದ ಬ್ರಿಟಿಶ ಮಂತ್ರಿಮಂಡಳದವರೊ [illegible] ನಡೆದ ವರ್ತನ ಬಂದದ್ದರಿಂದ ಈ [illegible] ತನ್ನ [illegible] ರವಿಲ್ಲದಿದ್ದರೂ ಬನ್ನದಂತೆ ಹೊಳೆಯ [illegible] ಕಾರಣಗಳಿಂದ [illegible] ನನ್ನ ಕಲ್ಪನೆಯಾಗಿತ್ತು. ಆ ನನ್ನ ಮೂಲ ಕಲ್ಪನೆ ಸಂಪೂರ್ಣ ಸರಿಯಾಗಿದೆ ಎಂದು ನಾನು ಒಪ್ಪುತ್ತೇನೆ. ಸರ್ವಾಧಿಪತಿಗಳ [illegible] ಅಟ್ಲೀ [illegible] ಹೊರಬಿದ್ದ [illegible] ಸನೆ [illegible] ಅತ್ಯಂತ [illegible] ಮಂತ್ರಿ [illegible] ಆಲೋಚನೆ [illegible] ಕಟ್ಟಿ [illegible] ಸಕ್ಕರೆ [illegible] ಕ್ರಿಯ [illegible] ಸರ್ವಾಧಿಪತಿಗಳ ಹೊಸ ಯೋಜನೆಯನ್ನು ಕಂಡ ಹಿಂದೆ ಬಿಡಿಸಲ್ಪಟ್ಟ ಕಾಂಗ್ರೆಸ ಮಂತ್ರಿಮಂಡಳದಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ವಿಶ್ವನಾಥ ದಾಸರವರು [illegible] ವ್ಯಕ್ತಗೊಳಿಸಿ [illegible] ಸರ್ವಾಧಿಕಾರಿಗಳ ಈ ಸೂಚನೆಗಳು ಅಸಪ್ಪ [illegible] ಮತ್ತು ಅಸಮಾಧಾನಕರವೆಂದು ಕಾಂಗ್ರೆಸ ಕಾರ್ಯಕಾರಿ ಮಂಡಳದವರು [illegible] ದ್ದಾರೆ. ಈಗ ಯುದ್ಧ [illegible] ದಿದ್ದರೂ, ಬ್ರಿಟನದಲ್ಲಿ [illegible] ಚರ್ಚಿಲ್ ಸರಕಾರ ಹೋಗಿ [illegible] ಅಟ್ಲೀ ಸರಕಾರ [illegible] ವಾಗಿರುತ್ತಿದ್ದರೂ ಭಾರತದ ಪ್ರಗತಿಯ ಪಥದಲ್ಲಿ [illegible] ಲ್ಲೊಂದು ಬಗೆಯ ತೊಡಕುಗಳನ್ನೊಡ್ಡುವ ಬ್ರಿಟಿಶ ನೀತಿಯು ಹಿಂದಿನಂತೆಯೇ [illegible] ಕಾರ್ಯಕಾರಿ ಮಂಡಳದವರು ಸ್ಪಷ್ಟ ಶಬ್ದಗಳಲ್ಲಿ [illegible] ಸರ್ವಾಧಿಪತಿಗಳು [illegible] ಹೊಸ ಯೋಜನೆಯಿಂದ ಇಲ್ಲದೆ ಆ ಯೋಜನೆಯನ್ನು [illegible] ದಲ್ಲಿ [illegible] ದಿಂದ [illegible] ಶಕ್ತಿಯಿಂದ [illegible] ಸಮಾಧಾನವಾಗುವಂತಿಲ್ಲ. ಅಂದ ಆ ಯೋಜನೆಯ ಸ್ವರೂಪವೇನುಂಟೆ [illegible] ಅದನ್ನೇ ನೋಡಿ [illegible] ದಿಂದ ವಿವರಿಸುವೆನು. (೧) ಎಲ್ಲ ಪ್ರಾಂತಿಕ ಹಾಗೂ ಮಧ್ಯವರ್ತಿ ಶಾಸನ ಮಂಡಳಗಳ ಚುನಾವಣೆಗಳನ್ನು ನಡೆಸಲು ಈಗ ಸರಕಾರದವರು ನಿರ್ಧರಿಸಿದ್ದರಷ್ಟೇ. ಆ ಚುನಾವಣೆಗಳು [illegible] ವರೆಗೆ ಯಾವ ಸರಕಾರದಲ್ಲೂ ಬದಲಾವಣೆಗಳು [illegible] ಹಿಂದೀ [illegible] ಕೆಲವು ಪ್ರಾಂತಗಳಲ್ಲಿ [illegible] ನಡೆದಿರುವ ಗವರ್ನರರ ನಿರಂಕುಶ [illegible] ಚುನಾವಣೆ ಮುಗಿಯುವ ವರೆಗೆ ಹಾಗೆಯೇ ನಡೆಯತಕ್ಕದ್ದೆಂದು ಇದರ ಅರ್ಥ. ಚುನಾವಣೆಗಳು ಮುಗಿದ ಮೇಲೆಯೇ ಪ್ರಾಂತಗಳಲ್ಲಿ ಲೋಕಪ್ರತಿನಿಧಿ ಮಂತ್ರಿಮಂಡಳಗಳ ಸ್ಥಾಪನೆಯಾಗುವದು. (೨) [illegible] ಭಾರತದ ಭಾವಿ [illegible] ವನ್ನು ಸಿದ್ಧಪಡಿಸುವದಕ್ಕಾಗಿ ಪ್ರಜಾಪ್ರತಿನಿಧಿ [illegible] ಸಮಿತಿಯನ್ನು ಕರೆಯಬೇಕೆಂದು [illegible] ಆ ದಿಶೆಯಲ್ಲಿ ಪ್ರಯತ್ನ ಮಾಡಬೇಕೆಂದು, ಮೇಲೆ ಹೇಳಿದ ಚುನಾವಣೆಗಳು ಮುಗಿದ ಕೂಡಲೇ ಸರ್ವಾಧಿಪತಿಗಳು ಪ್ರಾಂತಗಳ ಪ್ರತಿನಿಧಿಗಳೊಡನೆ [illegible] ರಂಭಿಸಿ, [illegible] ದಲ್ಲಿ [illegible] ಯೋಜನೆಗೆ ಅವರ ಒಪ್ಪಿಗೆ [illegible] ದರ [illegible] ಗಳಿಂದು ಅವರನ್ನು [illegible] ಇಲ್ಲವೆ ಕ್ರಿಪ್ಸ [illegible]

[illegible] ಯೋಜನೆಯ [illegible] ದಲು ಬೇರೊಂದು ಹೊಸ ಯೋಜನೆ ಅವರ [illegible] ಎಂಬದನ್ನು ತಿಳಿದುಕೊಳ್ಳಲು ಪ್ರಯತ್ನಿಸುವರು. (೩) ಈ ಘಟನಾ ಸಮಿತಿಯಲ್ಲಿ ಸಂಸ್ಥಾನಿಕರು ಸೇರಬಹುದು ಇಲ್ಲವೋ ಹೇಗೆಂಬುದನ್ನು ಅವರೊಡನೆ ಚರ್ಚೆ ಮಾಡಿ ಸರ್ವಾಧಿಪತಿಗಳು ತಿಳಿದುಕೊಳ್ಳುವರು. (೪) ತತ್ಪೂರ್ವ ಹಿಂದುಸ್ಥಾನ ಸರಕಾರವು ಅತ್ಯವಶ್ಯಕ [illegible] ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸಬೇಕಾಗುವದರಿಂದಲೂ ಜಗತ್ತಿನೊಳಗೆ ಹೊಸ ಮನ್ವಂತರ ಸ್ಥಾಪಿಸುವ ಮಹಾ ಕಾರ್ಯದಲ್ಲಿ ಹಿಂದುಸ್ಥಾನವು ಯೋಗ್ಯ ಭಾಗವನ್ನು ವಹಿಸಬೇಕಾಗುವದರಿಂದಲೂ ಪ್ರಾಂತಿಕ ಚುನಾವಣೆಗಳ ಪರಿಣಾಮ ತಿಳಿದುಬಂದ ಕೂಡಲೆ ಸರ್ವಾಧಿಪತಿಗಳು ತಮ್ಮ ಹಳೆಯ ಕಾರ್ಯಕಾರಿ ಮಂಡಳವನ್ನು [illegible] ಭಾರತದೊಳಗಿನ ಪ್ರಮುಖ ಪಕ್ಷಗಳ [illegible] ಜನರನ್ನು ಆ ಮಂಡಳದಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸುವರು. (೫) ಮುಂದೆ ಅಂದರೆ ಪ್ರಜಾಪ್ರತಿನಿಧಿಗಳ [illegible] ಸಮಿತಿಯು ಸರ್ವಮಾನ್ಯ ಘಟನೆಯನ್ನು ಸಿದ್ಧಪಡಿಸಿದ ನಂತರ ಆ ಘಟನೆಯಂತೆ ರಚಿತವಾಗುವ ಸರಕಾರಕ್ಕೆ ಬ್ರಿಟನವು ರಾಜ್ಯಾಧಿಕಾರ ಒಪ್ಪಿಸಿಕೊಡುವ ಕಾಲಕ್ಕೆ ಹಿಂದುಸ್ಥಾನ ಮತ್ತು ಬ್ರಿಟನ ಇವುಗಳ ನಡುವೆ ಆಗಬೇಕಾಗುವ ಒಪ್ಪಂದದಲ್ಲಿ ಎಂಥೆಂಥ ಕರಾರುಗಳನ್ನು ಹಾಕಬೇಕಾಗುವದು ಎಂಬ ಬಗ್ಗೆ ಆಲೋಚನೆಯನ್ನು ಬ್ರಿಟಿಶ ಸರಕಾರವು ಈಗಿನಿಂದಲೇ ಮಾಡುವದು.

ಸರ್ವಾಧಿಪತಿಗಳೂ, ಅವರ ಹಿಂದಿನಿಂದ ಬ್ರಿಟಿಶ ಆಕಾಶವಾಣಿ [illegible] ಮಾಡಿ ತಮ್ಮ ಮಂತ್ರಿಮಂಡಳದ [illegible] ಧೋರಣೆಯನ್ನು [illegible] ಬ್ರಿಟಿಶ ಪ್ರಧಾನಮಂತ್ರಿ [illegible] ಅಟ್ಲೀಯವರೂ ಬರೆದ [illegible] ಸಹಾಯದಿಂದ ತಯಾರಿಸಿದ ಯೋಜನೆಯ ಅಥವಾ ಕಾರ್ಯಕ್ರಮದ ಶುದ್ಧಸ್ವರೂಪ ಹೀಗುಂಟು.

ಮೇಲಿನಂತೆ ಹೊಸ ಯೋಜನೆಯನ್ನು ವಿವರಿಸಿ, ಬೇರೆ ಅನೇಕ ಮಹತ್ವದ ಕೆಲಸಗಳಿದ್ದಾಗ್ಯೂ ಬ್ರಿಟಿಶ ಸರಕಾರವು ಹಿಂದೀ ಸಮಸ್ಯೆಗೆ ಪ್ರಾಧಾನ್ಯ ಮತ್ತು ಪ್ರಥಮ ಸ್ಥಾನ ಕೊಟ್ಟದ್ದೆಂತಲೂ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಲು [illegible] ನಿರ್ಧರಿಸಿರುವರೆಂತಲೂ ದೊರೆಗಳು [illegible] ಹೊಸ ಘಟನೆ ತಯಾರಿಸುವ ಮೊದಲು ಲೋಕಾಭಿಪ್ರಾಯ ತಿಳಕೊಳ್ಳುವದಕ್ಕಾಗಿ ಘಟನಾ ಸಮಿತಿಯ [illegible] ಅಧಿಕಾರ ಮತ್ತು ಕಾರ್ಯಪದ್ಧತಿಗಳನ್ನು ಸರ್ವಾಧಿಪತಿಗಳ ಲೋಕಪ್ರತಿನಿಧಿಗಳೊಡನೆಯೂ ನರೇಂದ್ರರೊಡನೆಯೂ ಚರ್ಚೆ ಮಾಡಿ ನಿರ್ಧರಿಸಲಿದ್ದಾರೆ. ಈ ಘಟನಾ ಸಮಿತಿ ರಚನೆ ಹೇಗಾಗಬೇಕೆಂಬದು ಕ್ರಿಪ್ಸ ಯೋಜನೆಯಲ್ಲಿ ವಿವರಿಸಿದ್ದುಂಟು. ಆ ಯೋಜನೆಯನ್ನು ಬ್ರಿಟಿಶ ಸರಕಾರವು ಈಗಲೂ ಮನ್ನಿಸುತ್ತದೆ. ಆದರೆ ಘಟನಾ ಸಮಿತಿಯ ರಚನೆಯಲ್ಲಿ ಅಲ್ಪಸಂಖ್ಯಾಕರ ಪ್ರಶ್ನೆ ವಗೈರೆ ಮಹತ್ವದ ಸಮಸ್ಯೆಗಳು ಉದ್ಭೂತವಾಗುತ್ತವಾದ್ದರಿಂದ ಅವುಗಳ ಕುರಿತು ನಿರ್ಣಯ ಮಾಡುವ ಮೊದಲು ಸರ್ವಾಧಿಪತಿಗಳು ಲೋಕ ಪ್ರತಿನಿಧಿಗಳ ಅಭಿಪ್ರಾಯ ತಿಳಕೊಳ್ಳುವದು ಅವಶ್ಯವುಂಟೆಂತ. ಮಾರ್ಗದಲ್ಲಿ ಅನೇಕ ತೊಂದರೆಗಳುಂಟು. ಅವನ್ನೆಲ್ಲ ಪರಿಹರಿಸಲು ಸರಕಾರವು ನಿರ್ಧರಿಸಿದೆ ಹೀಗೆಲ್ಲ ಟೀಕೆ ಮಾಡಿ, "ಹಿಂದೀಯರು ಯುದ್ಧದಲ್ಲಿ ಬಹಳ ಸಹಾಯ ಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಹಿಂದೀ ಸಮಸ್ಯೆ ಬಿಡಿಸುವಲ್ಲಿ ಸಹಾಯ ಮಾಡಲು ಬ್ರಿಟಿಶರೂ ಬ್ರಿಟಿಶ ಸರಕಾರವೂ [illegible] ಹಿಂದೀಯರಿಗೆ ತಮ್ಮ ಗುರಿ ಮುಟ್ಟುವಂತೆ ಸರ್ವ ವಿಧದಿಂದ ಸಹಾಯ ಮಾಡಲು ನಾನಂತೂ ವ್ಯಕ್ತಿಶಃ ಸಿದ್ಧನಿದ್ದೇನೆ. [illegible] ಈ ಪ್ರಯತ್ನದಲ್ಲಿ ನನಗೆ ಯಶಸ್ಸು ಸಿಗುವದೆಂಬ ವಿಶ್ವಾಸ ನನಗುಂಟು" ಎಂದು ಸರ್ವಾಧಿಪತಿಗಳು ಜೇನಿಗಿಂತಲೂ ಸವಿಯಾದ ಮಾತುಗಳಿಂದ ತಮ್ಮ ಭಾಷಣದ ಮುಕ್ತಾಯ ಮಾಡಿದ್ದಾರೆ.

ಈ ಭಾಷಣವನ್ನು ಯೋಜನೆಯನ್ನೂ ಪೃಥಕ್ಕರಿಸಿ ನೋಡಿದರೆ ಯಾವ ಸಂಗತಿಯೂ ಸ್ಪಷ್ಟವಾಗುವದಿಲ್ಲ. ಅಲ್ಪಸಂಖ್ಯಾಕರ ಪ್ರಶ್ನೆ ಯಾವ ಬಗೆಯಿಂದ ಬಿಡಿಸಲಾದೀತೆಂಬ ನಿರ್ದೇಶವಿಲ್ಲ! ಘಟನಾ ಸಮಿತಿಯನ್ನು ಎಂದು ಸೇರಿಸಲಾದೀತೆಂಬ ಸ್ಪಷ್ಟತೆಯಿಲ್ಲ! ಎಲ್ಲವೂ ಹಿಂದಿನಿಂದ ತಿಳಿಸಲಾದೀತು. ತುರ್ತ ಚುನಾವಣೆಗಳನ್ನಷ್ಟು ನಡಿಸುವ ಎಂದಿಷ್ಟೇ ಸರ್ವಾಧಿಪತಿಗಳ ಭಾಷಣದ ತಾತ್ಪರ್ಯ. ಈ ಯೋಜನೆಯೇ ಕೊನೆಯ ಯೋಜನೆಯಾದರೆ ಹಿಂದೀಯರು ತಮ್ಮ ಗುರಿ ಮುಟ್ಟುವಂತೆ ಸಹಾಯ ನೀಡಲು ಸರ್ವಾಧಿಪತಿಗಳು ಎಷ್ಟೇ ನಿರ್ಧಾರ ಮಾಡಿರುತ್ತಿದ್ದರೂ ಹಿಂದೀಯರಿಗೆ ರಾಜ್ಯಾಧಿಕಾರ ಒಪ್ಪಿಸಿಕೊಡುವ ಭಾಗ್ಯ ಸರ್ವಾಧಿಪತಿಗಳಿಗಾಗಲಿ ಇರದು ಅಟ್ಲೀ ಮಂತ್ರಿಮಂಡಳಕ್ಕಾಗಲಿ [illegible] ಎಂದು ನಾನು ಖಂಡಿತ ಹೇಳುತ್ತೇನೆ.

ಸ್ಥಾನಿಕ ವೃತ್ತಾಂತ

(೩ನೇ ಪುಟದಿಂದ ಮುಂದರಿಸಿದ್ದು)

ಬರಿ ಕೊಟ್ಟು ಸಕ್ಕರೆ ಸಂಪಾದಿಸಿ ವ್ಯಾಪಾರ ನಡಿಸಿದ್ದರು. ಈಗ ಎಲ್ಲರೂ ಒಕ್ಕಟ್ಟಾಗಿ ತಮ್ಮದೊಂದು ಸಂಘ ಮಾಡಿಕೊಂಡಿದ್ದಾರೆ, ಮತ್ತು ಕಳ್ಳ ಪೇಟೆಯಲ್ಲಿ ಸಕ್ಕರೆ ಕೊಂಡುಕೊಳ್ಳತಕ್ಕದ್ದಿಲ್ಲವೆಂದು ನಿರ್ಧಾರ ಮಾಡಿದ್ದಾರೆ. ಹಾಗೂ ಬೇಕಷ್ಟು ಸಕ್ಕರೆಯನ್ನು ಸರಕಾರದವರು ಪೂರೈಸಲು ಒಪ್ಪುವ ವರೆಗೆ ಚಹಾ ಅಂಗಡಿಗಳನ್ನು ಮುಚ್ಚಬೇಕೆಂದು ನಿಶ್ಚಯಿಸಿ ಕಳೆದ ರವಿವಾರದಿಂದ ಎಲ್ಲ ಅಂಗಡಿಗಳನ್ನು ಮುಚ್ಚಿಟ್ಟಿದ್ದಾರೆ. ಆದರಿಂದ ಸ್ಥಾನಿಕ ಚಹಾಭಕ್ತರಿಗೂ ಇಲ್ಲಿಗೆ ಬರುವ ಪ್ರವಾಸಿಗಳಿಗೂ ಊರಲ್ಲೆಲ್ಲೂ ಚಹಾ-ಕಾಫಿ-ತಿಂಡಿಗಳು ಸಿಗದಂತಾಗಿವೆ.

ಕುಮಟೆಯಲ್ಲಿ ಸೇರಿದ ಕಾಂಗ್ರೆಸ ಕಾರ್ಯಕರ್ತರ ಸಭೆಯೊಳಗೆ ಜಿಲ್ಲೆಯಲ್ಲೆಲ್ಲ ಸ್ಥಾಪಿತವಾಗುವ ರಾಷ್ಟ್ರಸೇವಾದಳಗಳ ದಳಪತಿಯನ್ನಾಗಿ ರಾ॥ ದಯಾನಂದ ಪ್ರಭುರವರನ್ನು ಆರಿಸಲಾಗಿತ್ತಷ್ಟೇ. ಕೆಲವೊಂದು ಅನನುಕೂಲತೆಗಳ ಮೂಲಕ ರಾ॥ ಪ್ರಭುರವರು ಆ ಹುದ್ದೆಯನ್ನು ಸ್ವೀಕರಿಸಲಿಲ್ಲ. ಆದರಿಂದ ಕಾರವಾರದ ವಕೀಲ ರಾ॥ ಭವಾನೀಶಂಕರ ಮೂಡಿನಕೂರ್ವೆಯವರಿಗೆ ಆ ಹುದ್ದೆ ಕೊಡಲ್ಪಟ್ಟಿದೆ.

ಇಲ್ಲಿಯ ಮಾರ್ಕರಿ ಹುಡಗಿಯರ ಶಾಲೆಯ ಮುಖ್ಯಾಧ್ಯಾಪಿಕೆಯ ನಡತೆಯಿಂದ ಹುಡುಗಿಯರಲ್ಲೂ ಅವರ ಪಾಲಕರಲ್ಲೂ ಬಹಳ ಅಸಂತೋಷವುಂಟಾಗಿದೆ. ತಮ್ಮ ಮನಸ್ಸಿಗೆ ಸೇರದ ಹುಡುಗಿಯರನ್ನು ಈ ಶಿಕ್ಷಕಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗಗೊಡದೆ ೨, ೨, ೩-೩ ವರ್ಷ ಅದೇ ವರ್ಗದಲ್ಲಿ ಇಡುತ್ತಾರೆಂತೆ. ಮನಸ್ಸಿಗೆ ಸೇರುವ ಹುಡುಗಿಯರು ಅಯೋಗ್ಯರಿದ್ದಾಗ್ಯೂ ಅವರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮೇಲೆ ಹೋಗುತ್ತಾರೆ! ಈ ಕುರಿತು ಅರ್ಜಿಗಳಾಗಿ ಮೇಲಧಿಕಾರಿಗಳು ಬಂದು, ಅವರ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಬಹಳಷ್ಟು ಹುಡುಗಿಯರ ಪರೀಕ್ಷೆ ಕೊಂಡರು. ಆ ಹುಡುಗಿಯರಿಗೆ ಈಗ ಮೇಲಿನ ವರ್ಗಗಳಿಗೆ ಹಾಕಿದ್ದಾರೆ. ಆದರೆ ಈ ಶಿಕ್ಷಕಿಯನ್ನು ಈ ಶಾಲೆಯಲ್ಲೇ ಇಟ್ಟಲ್ಲಿ ಆ ಹುಡುಗಿಯರಿಗೆ ಎಂದೂ ಸುಖ ಸಿಗುವಂತಿಲ್ಲ. ಕಾರಣ ಮೇಲಧಿಕಾರಿಗಳು ಅವರಿಗೆ ಬೇರೆ ಎಲ್ಲಾದರೂ ವರ್ಗ ಮಾಡುವದು ಅವಶ್ಯವಿರುತ್ತದೆಂದು ಪಾಲಕರೋರ್ವರು ಬರೆಯುತ್ತಾರೆ.

ಶಿರಸಿ—— ಬರುವ ನವರಾತ್ರಿಯ ಹಬ್ಬದ ಕಾಲಕ್ಕೆ ಇಲ್ಲಿಯ ಕರ್ನಾಟಕ ಸಂಘದವರೂ ಶ್ರೀ ಮಾರಿಕಾಂಬಾ ದೇವಾಲಯದವರೂ ಕೂಡಿ ನಾಡಹಬ್ಬವನ್ನಾಚರಿಸಲು ನಿಶ್ಚಯಿಸಿದ್ದು, ಹಬ್ಬದಲ್ಲಿ ಶ್ರೀ ರಾಜರತ್ನಂ, ಬಸವನಾಳ, ಸಿಂಪಿ, ಮಾಸ್ತಿ ವಗೈರೆ ಕನ್ನಡ ಸಾಹಿತಿಗಳ [illegible] ಬಹುಮಾನಾಳ, ಸಂಪತ್ಕುಮಾರಾಚಾರ್ಯ, ಕಸ್ತೂರಿ, ಆ ನ ಕೃಷ್ಣರಾಯ ವಗೈರೆ ಹೆಸರಾಂತ ಕನ್ನಡ ಸಾಹಿತಿಗಳ ಭಾಷಣ ಪ್ರವಚನಗಳನ್ನು ಮಾಡಿಸುವ ಆಲೋಚನೆ ನಡಿಸಿದ್ದಾರೆ.

ಸುಪಾ—— ಈ ಪೇಟೆಯವರು ಒಂದು ಕಿಸಾನ (ರೈತ) ಸಂಘವನ್ನು ಏರ್ಪಡಿಸಿಕೊಂಡಿದ್ದಾರೆ. ಮುಂಬರುವ ಪ್ರಾಂತಿಕ ಎಸೆಂಬ್ಲಿಯ ಚುನಾವಣೆಯಲ್ಲಿ ಕಾರವಾರ ಜಿಲ್ಲೆಯ ಪಾಲಿನ ೩ ಆಸನಗಳಲ್ಲಿ ಒಂದು ಆಸನವನ್ನು ಸುಪಾ ಪೇಟೆಯವರಿಗೆ ಅಂದರೆ (ಕಿಸಾನ) ಸಂಘದವರು ಆರಿಸಿ ಕೊಡುವ ಪ್ರತಿನಿಧಿಗೆ ಸಿಗುವಂತೆ ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನವರು ನೋಡಬೇಕೆಂದು ಈ ಸಂಘದವರ ಬೇಡಿಕೆಯುಂಟು. ೧೮೭೧ನೇ ಇಸ್ವಿಯಲ್ಲಿ ೮೦೦೦೦ ಜನರಿಂದ ತುಂಬಿದ ಈ ಸಂಪತ್ಸಮೃದ್ಧ ಪೇಟೆಯು ಕಾಡು ಕಾಡು ಪಶುಗಳು ಮತ್ತು ಚಳಿಜ್ವರಾದಿ ಬೇನೆಗಳು ಇವುಗಳ ಕಾಟದಿಂದ ಕ್ರಮೇಣ ಸೊರಗಿ, ಕರಗಿ ಈಗ ಬರೀ ೧೪೦೦೦ ಜನವಸತಿಯುಳ್ಳ ಅರಣ್ಯಮಯ ಪೇಟೆಯಾಗಿದೆಯೆಂದೂ, [illegible] ಕಷ್ಟ ಪರಿಹಾರದ ಗಡಿಬಿಡಿ ನೀಗಿಸುವ ರೋಗಳಿಂದಲೇ ಸಮಾಜಸೇವಕ ಪ್ರಚಾರಕರನ್ನು ತಯಾರಿಸುವದವಶ್ಯವಿರುತ್ತದೆಂತಲೂ, ಪೇಟೆಯವರನ್ನೊಬ್ಬರನ್ನಾದರೂ ಎಸೆಂಬ್ಲಿಗೆ ಆರಿಸಿ ಕಳಿಸಿದರ ಮಾತ್ರ ಪೇಟೆಯ ಉದ್ಧಾರವಾಗುವಂತುಂಟೆಂತಲೂ ಸದರಿ ಸಂಘದವರು ಪ್ರತಿಪಾದಿಸುತ್ತಾರೆ.



ಸ್ಥಾನಿಕ ವೃತ್ತಾಂತ.

ಕುಮಟಾ— ದಿನಾಲೂ ಎಂಬಂತೆ ಮಳೆ ಬೀಳುತ್ತಿದೆ ಮಳೆಯಾಗುವದು ಹೆಚ್ಚಾಗಿ ರಾತ್ರಿಯ ಕಾಲಕ್ಕೆ ಊರಲ್ಲಿ ಬಗೆಬಗೆಯ ಬೇನೆ-ಬೇಸರಿಕೆಗಳುಂಟು

ಎಸೆಂಬ್ಲಿ-ಕೌನ್ಸಿಲುಗಳ ಮತದಾರ ಯಾದಿಗಳ ತಿದ್ದುಪಡಿಯ ಕಾರ್ಯಕ್ರಮದಲ್ಲಿ ಮುಂಬಯಿ ಸರಕಾರದವರು ಪುನಃ ಆಮೂಲಾಗ್ರ ಬದಲಾವಣೆ ಮಾಡಿ, ಪೂರ್ಣ ಯಾದಿಗಳ ಪುನರ್ವಿಮರ್ಶೆ ಮಾಡಲು ಆಜ್ಞೆ ಹೊರಡಿಸಿದ್ದಾರೆ ಹೊಸ ಮತದಾರ ಯಾದಿಗಳ ಪ್ರಥಮ ಮತ್ತು ದ್ವಿತೀಯ ಪ್ರಕಟನೆಗಳನ್ನು ಅನುಕ್ರಮವಾಗಿ ಡಿಸೆಂಬರ ತಾ ೩ ಮತ್ತು ಜನವರಿ ತಾ ೨೧ಕ್ಕೆ ಮಾಡತಕ್ಕದ್ದೆಂದು ಹುಕುಮು ಮಾಡಿದ್ದಾರೆ ನಮ್ಮ ತ್ರ ಕಡೆಯ ಗ್ರಾಮಸ್ಥರು ಈಗಾಗಲೇ ಮತದಾರ ಯಾದಿಗಳ ಪುನರ್ವಿಮರ್ಶೆ ಮಾಡಲಾರಂಭಿಸಿದ್ದಾರೆ ಈಗಲಾದರೂ ಮತಾರ್ಹತೆಯುಳ್ಳ ಸಮಸ್ತ ಸ್ತ್ರೀ ಪುರುಷರು ಅಜಾಗ್ರತೆ ಮಾಡದೆ ತಮ್ಮ ಹೆಸರುಗಳನ್ನು ಹೊಸ ಮತದಾರ ಯಾದಿಗಳಲ್ಲಿ ದಾಖಲ ಮಾಡಿಸಿಕೊಳ್ಳುವರೆಂದು ಕೋರಿಕೆ

ಗೋಕರ್ಣದೊಳಗಿನ ಸರಕಾರ-ಮಾನ್ಯ ದರದ ಅಂಗಡಿಗಳ ಪೈಕಿ ಒಂದರಲ್ಲಿ ಜವಳಿಗಂಟು ಒಡೆದ ಕೆಲವೇ ತಾಸುಗಳಲ್ಲಿ ಧೋತಿಗಳು ಸಿಗದಂತಾದವೆಂದು ಓರ್ವರು ಕಳೆದ "ವೃತ್ತ"ದಲ್ಲಿ ದೂರಿಕೊಂಡಿದ್ದರಷ್ಟೇ ಇನ್ನೋರ್ವರು ಇನ್ನೂ ದೂರ ಹೋಗಿ, ಗಂಟು ಒಡೆಯುತ್ತಿರುವಾಗಲೇ ತಾವು ಒಂದು ಧೋತರ ಜೋಡಿ ಕೊಂಡುಕೊಳ್ಳಲು ಆ ಅಂಗಡಿಗೆ ಹೋಗಿದ್ದೆವೆಂತಲೂ, ಗಂಟಿನಲ್ಲಿ ೧೨ ೧೪ ಧೋತರ ಜೋಡಿಗಳಿದ್ದವೆಂತಲೂ, ಆದರೂ ತಮಗೆ ಒಂದು ಜೋಡಿ ಕೊಡಲು ಅಂಗಡಿಕಾರರು ಒಪ್ಪಲಿಲ್ಲವೆಂತಲೂ, ಮೊದಲೇ ಅವನ್ನು ಬೇರೆಯವರಿಗೆ ಕೊಟ್ಟಾಗಿದೆಯೆಂದು ಹೇಳಿದರೆಂತಲೂ ದೂರುತ್ತಾರೆ ಗಂಟು ಬರುವ ಮುಂಚೆಯೇ ಧೋತರ ಜೋಡಿಗಳನ್ನು ಮಾರಾಟ ಮಾಡಿಬಿಡುವ ಈ ಕ್ರಮ ಅದ್ಭುತ ರಮ್ಯವೇ ಸರಿ! ಇನ್ನೊಂದು ಅಂಗಡಿಯವರ ಕಥೆ ಇದಕ್ಕೂ ಹೆಚ್ಚು ಸ್ವಾರಸ್ಯವಾಗಿದೆ ಅಂಗಡಿಯವರ ವಿರುದ್ಧ ದೂರು ಕೇಳಿಕೊಂಡೋ ಏನೋ ಒಂದು ದಿನ ಓರ್ವ ನಿಯಂತ್ರಣಾಧಿಕಾರಿಗಳು ಅಂಗಡಿಗೆ ಹೋಗಿ ಧೋತರ ಜೋಡಿಗಳೆಷ್ಟು ಉಂಟೆಂದು ಪ್ರಶ್ನಿಸಿದರು ಎಲ್ಲ ಧೋತಿಗಳು ಖರ್ಚಾಗಿ ಹೋಗಿವೆಯೆಂದು ಅಂಗಡಿಕಾರನು ಮಾರುತ್ತರವನ್ನಿತ್ತನು ಆಗ ಆ ಅಧಿಕಾರಿಗಳು ಶಿಲ್ಕು ಇದ್ದ ಜವಳಿಯ ಲೆಕ್ಕ ಮಾಡತೊಡಗಿದರು ಈ ಲೆಕ್ಕ ನಡೆವಾಗ ಒಂದು ಟೇಕಿಯಲ್ಲಿ ಮರೆ ಮಾಡಿಟ್ಟ ೧೨ ಧೋತರ ಜೋಡಿಗಳು ಹೊರಬಿದ್ದವು! ಇದೇನೆಂದು ಅಂಗಡಿಕಾರನಿಗೆ ಕೇಳಲಾಗಿ, ಅವನ ತುಟಿಗಳು ಬಿಚ್ಚಲಾರದಂತಾದವು! ಅಷ್ಟರಲ್ಲಿ ಆ ಅಂಗಡಿಯ ಹುಡುಗನೊಬ್ಬನು ಬಂದು, "ನಾನು ಅವನ್ನು ಅಲ್ಲಿಟ್ಟಿದ್ದೆ ಗಿರಾಕಿಗಳು ಬಂದು ಬಹಳ ತೊಂದರೆ ಕೊಡುತ್ತಾರೆಂದು ಅಲ್ಲಿಟ್ಟಿದ್ದೆ ಯಜಮಾನರಿಗೆ ಈ ಸಂಗತಿ ಗೊತ್ತಿಲ್ಲ" ಎಂದು ನುಡಿದನು! ಮತ್ತು ತನ್ನ ಯಜಮಾನರಿಗೆ ಬಂದ ಕಷ್ಟದೆಶೆಯಿಂದ ಪಾರಾಗುವ ಮಾರ್ಗ ತೋರಿಸಿಕೊಟ್ಟನು! ಯಜಮಾನನು ಆಗ "ನಾನು ಅಂಗಡಿಯಲ್ಲಿರುವದು ಕಡಿಮೆ ಧೋತಿಗಳನ್ನು ಹುಡುಗನು ತೆಗೆದಿಟ್ಟ ಸಂಗತಿ ನನಗೆ ಗೊತ್ತಿದ್ದಿಲ್ಲ ಧೋತಿಗಳು ಕಣ್ಣಿಗೆ ಬೀಳದ್ದರಿಂದ ಅವು ಖರ್ಚಾಗಿ ಹೋಗಿರಬೇಕೆಂದು ನನ್ನ ತಿಳುವಳಿಕೆಯಾಯಿತು" ಎಂದು ಗುಣುಗುಣಿಸುತ್ತಿದ್ದನು ಅಂಗಡಿಯ ಯಜಮಾನನ ಈ ಹೇಳಿಕೆಯಿಂದ ಆ ಅಧಿಕಾರಿಗಳ ಸಮಾಧಾನವಾಯಿತೋ ಏನೆಂಬುದು ತಿಳಿದಿಲ್ಲ ಹೊರಗಿನವರಿಗೆ ಮಾತ್ರ ಯಾರಿಗೂ ಸಮಾಧಾನವಾಗಿಲ್ಲ

ಕುಮಟಾ ತಾಲೂಕ ಹವ್ಯಕ ವಿದ್ಯಾವರ್ಧಕ ಸಂಘದ ಈ ವರ್ಷದ ಹುಟ್ಟುಹಬ್ಬದ ಉತ್ಸವ ರವಿವಾರ ತಾ ೧೪-೧೦-೪೫ (ದಸರೆಯ ದಿನ)ನೇ ಸಂಜೆ ಹೊಳೆಗದ್ದೆಯೊಳಗಿನ ಶ್ರೀ ಶಾಂತಿಕಾ ಪರಮೇಶ್ವರಿ ಅಮ್ಮನವರ ಗುಡಿಯಲ್ಲಿ ಜರಗುವದೆಂತಲೂ ಸಂಘದ ಸದಸ್ಯರೆಲ್ಲ ಉತ್ಸವಕ್ಕೆ ಬರಬೇಕೆಂತಲೂ ಸಂಘದ ಅಧ್ಯಕ್ಷರು ಬಿನ್ನವಿಸುತ್ತಾರೆ

ಮೂರೂರದಲ್ಲಿ ಕಳೆದ ಸೋಮವಾರ ರಾತ್ರಿ ತೋಡಸೇರಿ ಘಟ್ಟದ ಒಂದು ಹುಲಿಯು ಬೇಟೆ ಮಾಡಿದ ಸುದ್ದಿಯಿದೆ

ಕುಮಟಾ ಅರ್ಬನ್ ಸಹಕಾರಿ ಬೇಂಕಿನ ವಾರ್ಷಿಕ ಮಹಾಸಭೆ ಆಜೆಯ ರವಿವಾರ ಕೂಡಿತ್ತು ಬೇಂಕಿನ ವಾರ್ಷಿಕ ವರದಿಯ ಮೇಲಿಂದ ೧೯೪೪-೪೫ನೇ ಸಾಲಿನಲ್ಲಿ ಬೇಂಕಿಗೆ ೪೫೪೩ ರೂ ಲಾಭವಾಗಿದೆಯೆಂದೂ ಪಿಟ್ಟಿಬಾಕಿ ಸಾಲದ ರಕಮು ೧೦ ವರ್ಷಗಳ ಹಿಂದೆ ರೂ ೧೦೬೧೦೩ ಇದ್ದದ್ದು ಈಗ ರೂ ೧೬೭೯೬ಕ್ಕೆ ಇಳಿದಿದೆಯೆಂದೂ ಕಂಡುಬರುತ್ತಿದೆ ಈ ವರ್ಷ ಶೇರುದಾರರಿಗೆ ೬॥ ಸಲಿಯಂತೆ ಲಾಭ ಹಂಚಿಕೊಡಬೇಕಾಗಿ ಕಾರ್ಯವಾಹಕರ ಸೂಚನೆಯುಂಟು

ಶಿರ್ಸಿಯ ಮಹಾವೀರ ಗಿರಣಿಗೆ ಬೆಂಕಿ ಬಿದ್ದಾಗ ಅರ್ಧ-ಮರ್ಧ ಸುಟ್ಟ ಭತ್ತದ ಅಕ್ಕಿಯನ್ನು ದನಗಳ ಬಗ್ಗೆ ಉಪಯೋಗಿಸಲಡ್ಡಿಯಿಲ್ಲೆಂದು ಭಾವಿಸಿ ಸರಕಾರದವರು ಅದನ್ನು ಲಿಲಾಂವ ಮಾಡಿದ್ದರೆಂದು ತಿಳಿಯುತ್ತದೆ ಈ ಅಕ್ಕಿಯನ್ನು ಕೂಡ ಸ್ಥಾನಿಕ ಆಹಾರಾಧಿಕಾರಿಗಳ ಪರವಾನಗಿ ತಕ್ಕೊಂಡು ಮತ್ತು ಅವರು ಹಾಕಿಕೊಡಬಹುದಾದ ದರದಿಂದ ಮಾರತಕ್ಕದ್ದೆಂಬ ಕರಾರು ಹಾಕಲ್ಪಟ್ಟಿತ್ತಾಗಿಯೂ ಸುದ್ದಿಯುಂಟು ಆದರೆ ಲಿಲಾಂವಿನಲ್ಲಿ ಆ ಅಕ್ಕಿ ಕೊಂಡವರು ಈಗ ಹೆಗಡೆ ವಗೈರೆ ಹಳ್ಳಿಗಳಲ್ಲಿ ತಾಲೂಕಾಧಿಕಾರಿಗಳ ಪರವಾನಗಿಯಿಲ್ಲದೆ ಮನುಷ್ಯರು ತಿನ್ನುವ ಅಕ್ಕಿಯೆಂದೇ ಮಾರಾಟ ಮಾಡುತ್ತಿದ್ದಾರೆಂಬ ದೂರು ಕೇಳಬರುತ್ತದೆ ಕೆಲವು ಕಡೆ ಈ ಅಕ್ಕಿಯನ್ನು ಒಳ್ಳೇ ಅಕ್ಕಿಯೊಡನೆ ಬೆರಸಿ ಮಾರುತ್ತಿದ್ದಾರಂತೆ ಅಧಿಕಾರಿಗಳು ಚೌಕಶಿ ಮಾಡಿ ಈ ಕಳ್ಳಾಟಿಕೆ ನಡಿಸಿದವರನ್ನು ದಂಡಿಸಬೇಕಾಗಿ ಸೂಚನೆಯಿದೆ

ಶ್ರೀ ಮಾನವೇಂದ್ರನಾಥ ರಾಯರ ರೆಡಿಕಲ್ ಡೆಮೊಕ್ರೆಟಿಕ್ ಪಕ್ಷದ ಕೆಲವು ಸದಸ್ಯರು ಕೊಂಗ್ರೆಸ್ಸಿನ ವಿರುದ್ಧ ಅಪಪ್ರಚಾರ ಮಾಡುವದಕ್ಕಾಗಿ ಈ ಜಿಲ್ಹೆಯಲ್ಲಿ ಈಗಾಗಲೇ ಸಂಚರಿಸುತ್ತಿದ್ದ ವಾರ್ತೆಯುಂಟು ಈ ಪಕ್ಷದವರ ಪ್ರಚಾರದ ಖರ್ಚಿಗಾಗಿ ಪ್ರತಿ ತಿಂಗಳಿಗೆ ಭಾರತ ಸರಕಾರದಿಂದ ರೂ ೧೨೦೦೦ ಸಿಗುತ್ತಿದೆ ಸರಕಾರಿ ಹಣದ ಸಹಾಯದಿಂದ ಪ್ರಚಾರಕ್ಕೆ ಹೊರಟ ಈ ಪಕ್ಷದವರು ಭಾರತಕ್ಕೆ ಎಷ್ಟು ಹಿತ ಮಾಡಬಲ್ಲರೆಂಬುದನ್ನು ಯಾರಿಗೂ ಹೇಳಬೇಕಾಗಿಲ್ಲ ಮುಂಬರುವ ಚುನಾವಣೆಗಳಲ್ಲಿ ಈ ಪಕ್ಷದವರು ಕೊಂಗ್ರೆಸ್ಸಿನ ವಿರುದ್ಧ ಹೋರಾಡುವ ಲಕ್ಷಣಗಳುಂಟು

ಹೊನ್ನಾವರ— (ತಾ ೧೫-೯-೪೫) ಇಂದು ಇಲ್ಲಿ ಜೇನು ಸಂವರ್ಧನ ಸಂಘ ಮತ್ತು ಮಹಿಳಾ ಸಂಘಗಳ ಸಭೆಗಳು ಕೂಡಿದ್ದವು ಜಿಲ್ಹಾಧಿಪರಾದ ಶ್ರೀ॥ ನಂಜಪ್ಪನವರು ಈ ಸಭೆಗಳಿಗಾಗಿಯೇ ಕಾರವಾರದಿಂದ ಮುದ್ದಾಮ ಬಂದಿದ್ದರು ನೆರೆಹೊರೆಯ ಹಳ್ಳಿಗಳಿಂದಲೂ ನೂರಾರು ಜನರು ಸಭೆಗಳಿಗೆ ಬಂದಿದ್ದರು ಎರಡೂ ಸಂಘಗಳ ಕೆಲಸ ನೋಡಿ ಜಿಲ್ಹಾಧಿಪರಿಗೆ ಸಂತೋಷವಾಯಿತು ಜೇನು ವ್ಯವಸಾಯದ ಪ್ರಚಾರ ಮಾಡಿ ಅನೇಕ ಬಡವರಿಗೆ ಒಂದು ಉದ್ಯಮ ಕಲ್ಪಿಸಿಕೊಟ್ಟ ಬಗ್ಗೆ ಅವರು ಜೇನು ಸಂವರ್ಧನ ಸಂಘದವರನ್ನು ಅಭಿನಂದಿಸಿ ತಮ್ಮಿಂದ ಶಕ್ಯವಿದ್ದಷ್ಟು ಸಹಾಯ ಸಂಘಕ್ಕೆ ನೀಡುವದಾಗಿ ಆಶ್ವಾಸನೆಯನ್ನಿತ್ತಿದ್ದಾರೆ ಒಬ್ಬನು ಜೇನು ಪೆಟ್ಟಿಗೆಗಳ ಸಹಾಯದಿಂದ ಒಂದೇ ವರ್ಷದಲ್ಲಿ ೬೦೦ ರತ್ತಲು ಜೇನು ತುಪ್ಪ ಸಂಪಾದಿಸಿದ್ದನು ಅವನಿಗೂ ಬೇರೆ ೯ ಜನರಿಗೂ ಕೂಡಿ ರೂ ೩೦೦೦ರ ಪಾರಿತೋಷಕಗಳು ಸಿಕ್ಕಿವೆ

— (ತಾ ೨೨-೯-೪೫) ಕಳೆದ ಬುಧವಾರ ಇಲ್ಲಿಯ ಫೌಜದಾರರು ಮಂಕಿಯಲ್ಲಿ ಒಂದು ಕಡೆ ಮುತ್ತಿಗೆ ಹಾಕಿ ಬೆಲ್ಲದಿಂದ ಸಾರಾಯಿ ಮಾಡುತ್ತಿದ್ದ ನಾಲ್ವರನ್ನು ಸೆರೆ ಹಿಡಿದು ತಂದಿದ್ದಾರೆ ಈ ಮುತ್ತಿಗೆಯ ಕಾಲಕ್ಕೆ ಸಾರಾಯಿಯಿಂದ ತುಂಬಿದ ೨೪ ಗಡಿಗೆಗಳೂ ೨ ಹಂಡೆಗಳೂ ಪೋಲೀಸರಿಗೆ ಸಿಕ್ಕಿವೆಯಂತೆ

ಭಟಕಳ— (ತಾ ೧೯-೯-೪೫) ಕಳೆದ ತಾ. ೭ಕ್ಕೆ ಇಲ್ಲಿ ಒಂದಾದ ಕ್ಷತ್ರಿಯ ನಾಮಧಾರಿ ಸಮಾಜ ಸುಧಾರಣಾ ಸಂಘದ ೬ನೆಯ ವಾರ್ಷಿಕ ಮಹಾಸಭೆ ರಾ॥ ಎಸ್ ಎಸ್ ಮನಿ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು ೨-೩ ಸಾವಿರ ಜನರು ಸಭೆಗೆ ಕೂಡಿದ್ದರು ಶಿಕ್ಷಣ ಪ್ರಸಾರ, ಸಮಾಜ ಸುಧಾರಣೆ ಮುಂತಾದ ವಿಷಯಗಳ ಮೇಲೆ ಹಲವರ ಭಾಷಣಗಳಾದವು

ಇಲ್ಲಿಯ ಅಬಕಾರಿ ಅಧಿಕಾರಿಗಳು ಪೋಲೀಸರ ಸಹಾಯದಿಂದ ಬೈಲೂರದಲ್ಲಿ ಭಟ್ಟಿಸಾರಾಯಿ ತಯಾರಿಸುತ್ತಿದ್ದ ಇಬ್ಬರ ಮನೆಗಳಿಗೆ ಮುತ್ತಿಗೆ ಹಾಕಿ, ಹೊತ್ತಿಸಿಟ್ಟ ಭಟ್ಟಿಯನ್ನೂ ಬೆಲ್ಲವನ್ನೂ ಸಾರಾಯಿಯನ್ನೂ ಜಪ್ತಿ ಮಾಡಿ ತಂದಿದ್ದಾರೆ

ಅಂಕೋಲಾ— (ತಾ ೨೨-೯-೪೫) ಇಲ್ಲಿಯ ಚಹಾ ಅಂಗಡಿಯವರಿಗೆ ಕೊಡತಕ್ಕ ಸಕ್ಕರೆಯ ಪರಿಮಾಣವನ್ನು ಕಳೆದ ವರ್ಷ ಕೊಡುತ್ತಿದ್ದುದರ ಅರ್ಧಕ್ಕೆ ಇಳಿಸಿದ್ದಾರಂತೆ ಇಷ್ಟು ಸಕ್ಕರೆಯಿಂದ ತಿಂಗಳಲ್ಲಿ ೩-೪ ದಿನ ಸಹ ವ್ಯಾಪಾರ ಮಾಡುವದು ಸಾಧ್ಯವಿಲ್ಲೆಂದು ಅಂಗಡಿಯವರ ದೂರು ಹಿಂದೆ ಈ ಅಂಗಡಿಕಾರರು ಕಳ್ಳಪೇಟೆಯಲ್ಲಿ ಇಮ್ಮಡಿ, ಮುಮ್ಮಡಿ

(೨ನೇ ಪುಟದ ಮೇಲೆ ಮುಂದರಿಸಿದೆ)

— R —

NOTIFICATION.

RD

Amendment of the Gokarn Rationing Regulation 1944

೧೯೪೪ನೇ ಇಸವಿಯ ಗೋಕರ್ಣ ರೇಶನಿಂಗ ರೆಗ್ಯುಲೇಶನಿನಲ್ಲಾದ ಸುಧಾರಣೆಯ ಸಂಬಂಧದ ಜಾಹೀರನಾಮೆ.

ತಾ ೨೯ ಆಗೋಸ್ಟ, ೧೯೪೫ನೇ ದಿವಸ ಮುಂಬಯಿ ಸರಕಾರದವರು ೧೯೪೩ನೇ ಇಸವಿಯ ಮುಂಬಯಿಯ ಸೀಧಾ ಹುಕುಮಿನ ಮೇರೆಗೆ ೧೯೪೪ನೇ ಇಸವಿಯ ಗೋಕರ್ಣ ರೆಗ್ಯುಲೇಶನಿನಲ್ಲಿ ಕೆಳಗೆ ಕಾಣಿಸಿದಂತೆ ತಿದ್ದುಪಡಿ ಮಾಡಿರುತ್ತಾರೆ —

ನಂಬರ ೧೬೯ (೧೬) ಡಿ ಆರ್ — ೧೯೪೩ನೇ ಇಸವಿಯ ಮುಂಬಯಿಯ ಸೀಧಾ ಹುಕುಮಿನ ೧೨ನೇ ರಕಮಿನನುಸಾರವಾಗಿ ಮುಂಬಯಿ ಸರಕಾರದವರು ೧೯೪೪ನೇ ಇಸವಿಯ ಗೋಕರ್ಣದ ರೇಶನಿಂಗ ರೆಗ್ಯುಲೇಶನದಲ್ಲಿ ಈ ಕೆಳಗಿನಂತೆ ಸುಧಾರಣೆ ಮಾಡಿದ್ದಾರೆ —

ಸದರಿ ರೆಗ್ಯುಲೇಶನಿನ ೧೧ನೇ ಕಲಮಿನ (೧)ನೇ ಪೋಟ ಕಲಮಿಗೆ ಈ ಕೆಳಗಿನ ಅಪವಾದವನ್ನು ಜೋಡಿಸತಕ್ಕದ್ದು —

"ಆದರೆ ಗೊತ್ತುಪಡಿಸುವದೇನಂದರೆ, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಸರಕಾರಿ ಗಾಝೇಟಿನಲ್ಲಿ ಜಾಹೀರ ಮಾಡಿದ ಯಾವದೇ ಸೀಧಾ ಅವಧಿ (ಪಕ್ಷ) ಯಲ್ಲಿ ಏಳು ದಿವಸಗಳಿಗಿಂತ ಹೆಚ್ಚಿಗೆ ಇರುವ ಸಂಭವವಿಲ್ಲದ ಯಾವದೊಂದು ವಿಶಿಷ್ಟವಾದ ಅವಧಿಯ ಬಗ್ಗೆ ಸೀಧಾ-ಚೀಟಿ ಕೊಡತಕ್ಕದ್ದಲ್ಲ ಮತ್ತು ಇಂಥ ಸೀಧಾ ಅವಧಿಯಲ್ಲಿ, ಏಳು ದಿವಸಗಳಿಗಿಂತ ಕಡಿಮೆ ಇರುವ ವಾಸ್ತವ್ಯದ ಅವಧಿಯ ಯಾವದೇ ಭಾಗದ ಬಗ್ಗೆ (೨)ನೇ ಅಥವಾ (೩)ನೇ ಕಲಮಿನನ್ವಯ ಸೀಧಾ ವ್ಯವಸ್ಥೆಗೊಳಪಟ್ಟ ವಸ್ತುಗಳನ್ನು ಹಂಚತಕ್ಕದ್ದಲ್ಲ"

ಟಿಪ್ಪಣಿ — ಹಿಂದುಸ್ಥಾನ ಸಂರಕ್ಷಣ ನಿಯಮಾವಳಿಯ ೧೧೯ನೇ ನಿಯಮದ (೧)ನೇ ಉಪನಿಯಮಕ್ಕನುಸಾರವಾಗಿ ಈ ಜಾಹೀರನಾಮೆಯ ಪ್ರತಿಗಳು ಗೋಕರ್ಣ ಸೀಧಾ ಕ್ಷೇತ್ರದೊಳಗೆ ಪ್ರಚಾರದಲ್ಲಿರುವ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಿಸಲ್ಪಟ್ಟಿವೆ, ಮತ್ತು ಸದರಿ ಕ್ಷೇತ್ರದೊಳಗಿನ ಮುಖ್ಯ ಕಚೇರಿಗಳಲ್ಲಿರುವ ನೋಟಿಸ ಬೋರ್ಡುಗಳ ಮೇಲೂ ಹಚ್ಚಲ್ಪಟ್ಟಿವೆ ಹಾಗೂ ಸದರಿ ಜಾಹೀರನಾಮೆಯ ಪ್ರತಿಗಳನ್ನು ಹೀಗೆ ನೋಟೀಸ ಬೋರ್ಡುಗಳ ಮೇಲೆ ಹಚ್ಚಿದ್ದ ಸಂಗತಿಯನ್ನು ತಾ ೧೯-೯-೧೯೪೫ ನೇ ದಿವಸ ಡಂಗುರ ಸಾರಿ ಜಾಹೀರ ಮಾಡಲ್ಪಟ್ಟಿದೆ

ಗೋಕರ್ಣ, } P. M Hagdekatte,
೨೨-೯-೧೯೪೫ } ರೇಶನಿಂಗ ಆಫೀಸರ, ಗೋಕರ್ಣ.

ಕಾರವಾರದ ಸುದ್ದಿಯೋಲೆ.

ಲೋಕಲ್ಫಂಡು ಇಮ್ಮಡಿಯಾಯಿತು !

(ನಮ್ಮ ಸುದ್ದಿಗಾರರಿಂದ)   ಕಾರವಾರ, ತಾ ೧೮-೯-೪೫.

ಲೋಕಲ್ಫಂಡಿನ ಏರಿಕೆಯು ವಿಚಾರ ಮಾಡುವದಕ್ಕೆ ಜಿಲ್ಲಾ ಲೋಕಲ್ ಬೋರ್ಡಿನ ಸಭೆ ನಿನ್ನೆ ಸೋಮವಾರ ಕೂಡುವದಿತ್ತು. ಆದರೆ ಮೊದಲಿನಿಂದಲೇ ಗಡಿಬಿಡಿಗೆ ಪ್ರಾರಂಭ! ಏರಿಕೆಗೆ ಬ[illegible]ರಿಸಲು ಅಧ್ಯಕ್ಷರು ವಿಶ್ವಪ್ರಯತ್ನ ನಡಿಸಿದ್ದರು ಬೋ[illegible]ದರೆ ತಾವು ಸ್ಥಾನಭ್ರಷ್ಟರಾಗುವೆವೆಂಬ ಭೀತಿ ಅವರನ್ನು ಬಾಧಿಸಿತ್ತು. ರವಿವಾರ ಸಂಜೆ ಹಲವು ಸಭಾಸದರನ್ನು ಕೂಡಿಸಿಕೊಂಡು ಅಧ್ಯಕ್ಷರು ಆಲೋಚನೆ ಮಾಡಿದರು ಅವರಲ್ಲಿ ಬಹು ಮಂದಿ ಏರಿಕೆಗೆ ಒಳಗಾಗಲಿಲ್ಲ ಮುಂದೆ ರಾತ್ರಿ ಹೊತ್ತಿನಲ್ಲಿ ಕಾರಸ್ಥಾನ ನಡೆಯಿತು! ಏರಿಸಿದರೆ ಶಿಕ್ಷಕರಿಗೆ ತುಟ್ಟಿ ಭತ್ತೆ ದೊರಕುವದೆಂಬ ಬೆಲ್ಲದ ಬೊಟ್ಟನ್ನು ಅಧ್ಯಕ್ಷರು ಮೊದಲೇ ಹಚ್ಚಿದ್ದರು ಅದಕ್ಕೆ ಮರುಳುಗೊಂಡ ಕೆಲ ಪ್ರಮುಖ ಶಿಕ್ಷಕರು ಸಭಾಸದರಿಗೆ ತಮ್ಮ ವ್ಯಥೆ ಹೇಳಿಕೊಂಡರಂತೆ! ಆಗ ಕೆಲ ಸಭಾಸದರಿಗೆ ಲೋಕಧರ್ಮಬುದ್ಧಿ ಸೂಚಿಸಿತಂತೆ! ಪರಸ್ಪರ ಲೋಕಲ್ಫಂಡನ್ನು ಏರಿಸಿ ಮಾಸ್ತರ ಜನರಿಗೆ ಉಪಕಾರ ಮಾಡಿ ಧರ್ಮರಾಯರಾಗಲು ೩-೪ ಸದಸ್ಯರು ತಯಾರಾದರು! ಇಷ್ಟಾಗುವಷ್ಟರಲ್ಲಿ ನಿನ್ನೆಯ ದಿನ ಬೆಳಗಿನ ೯ ಘಂಟೆಗೆ ಸರಿಯಾಗಿ ಸಭೆ ಕೂಡಿತು ಸಭೆಗೆ ಅಂತು ೨೪ ಸಭಾಸದರು ಬಂದಿದ್ದರು. ೬ ಜನರು ಬಂದಿರಲಿಲ್ಲ ಅವರಲ್ಲಿ ಕೆಲವರು ಏರಿಕೆಯ ಸೂಚನೆಗೆ ವಿರೋಧ ಮಾಡಿ ಅಧಿಕಾರಿಗಳ ಅವಕೃಪೆಗೆ ತಾವು ಪಾತ್ರರಾಗುವದೂ ಬೇಡ, ವಿರೋಧ ಮಾಡದೆ ಜನರ ವಿರೋಧ ಕಟ್ಟಿಕೊಳ್ಳುವದೂ ಬೇಡ ಎಂಬ ಧೂರ್ತ ವಿಚಾರದಿಂದ ಸಭೆಗೆ ಬಂದಿರಲಿಲ್ಲವೆಂದು ಸುದ್ದಿಯುಂಟು ಸಭೆಯ ಪ್ರಾರಂಭಕ್ಕೆ ಅಧ್ಯಕ್ಷರು ರೀತಿಯಂತೆ ಸಭೆಯ ಉದ್ದೇಶ ತಿಳಿಸಿ ಹೇಳಿದರು ಲೋಕಲ್ಫಂಡು ಏರಿಸದಿದ್ದರೆ ಬೋರ್ಡು ರದ್ದಾಗುವದೆಂದೂ ಸಭಿಕರಿಗೆ ಎಚ್ಚರಿಕೆ ಕೊಟ್ಟರು! ಅಧ್ಯಕ್ಷರ ಮುಖದಲ್ಲಿ ಆ ಕಾಲಕ್ಕೆ ಭೀತಿ ಒಡೆದು ಕಾಣಿಸುತ್ತಿತ್ತು. ಅಧ್ಯಕ್ಷರು ಕಮಿಶನರರ ಹುಕುಮನ್ನೂ ಓದಿಸಿದರು. ಲೋಕಲ್ಫಂಡನ್ನು ೧॥ ಆಣೆಗೆ ಏರಿಸಬೇಕೆಂದು ಆ ಹುಕುಮಿನಲ್ಲಿ ವಿಧಿಸಿದ್ದುಂಟು.

ಹೀಗೆ ಸಭೆ ಪ್ರಾರಂಭವಾದೊಡನೆಯೇ ಅಂಕೋಲೆಯ ರಾ॥ ಸುಬ್ರಾಯ ಪ್ರಭುರವರು, ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡಿದ ಸುಭಾಸಚಂದ್ರ ಬೋಸರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲು ಸಭೆಯ ಕೆಲಸ ೧೫ ನಿಮಿಷ ನಿಲ್ಲಿಸತಕ್ಕದ್ದೆಂದು ಸೂಚನೆ ತಂದರು ಅದಕ್ಕೆ ಅನುಮೋದನವೂ ದೊರೆಯಿತು ಆದರೆ ಆ ಸೂಚನೆ ನಿಯಮಬಾಹ್ಯವಿರುತ್ತದೆಂದು ಅಧ್ಯಕ್ಷರು ತೀರ್ಮಾನಿಸಿ ಅದನ್ನು ಮತಕ್ಕೆ ಹಾಕಲೊಪ್ಪಲಿಲ್ಲ! ಆದರಿಂದ ಸಭೆಯೊಳಗೆ ಸಂತಾಪ ಹುಟ್ಟಿತು. ಅಧ್ಯಕ್ಷರ ವರ್ತನೆಯ ನಿಷೇಧ ಮಾಡುವದಕ್ಕಾಗಿ ೧೪ ಸದಸ್ಯರು ಸಭೆ ಬಿಟ್ಟು ಹೊರಗೆ ನಡೆದರು ಅದರಿಂದ ಸಭೆಯಲ್ಲಿ ಆರೇ ಜನ ಉಳಿದರು ಕನಿಷ್ಠ ೧೦ ಸದಸ್ಯರಾದರೂ ಸಭೆಯಲ್ಲಿರಬೇಕೆಂದು ಕಾನೂನಿನಲ್ಲಿದೆ ಅಷ್ಟು ಸದಸ್ಯರಿಲ್ಲದಿದ್ದರೆ ಸಭೆಯು ವಿಸರ್ಜನೆಯಾಗಬೇಕು ಈ ಸಂಗತಿ ಗೊತ್ತಿದ್ದರೂ ಅಧ್ಯಕ್ಷರು ಸಭೆಯನ್ನು ವಿಸರ್ಜಿಸಲಿಲ್ಲ! ನಾಲ್ವರಿಗೆ ಹೇಗಾದರೂ ಕರೆತಂದು ಸಭೆಯ ಕೆಲಸ ಮುಂದರಿಸಿದರು ಇದು ಕಾನೂನಿಗೆ ಅಸಮ್ಮತವಾದುದೆಂದು ಕಾಯಿದೆ-ಪಂಡಿತರ ಅಭಿಪ್ರಾಯ

ಸಭಿಕರ ಸಂಖ್ಯೆ ಪುನಃ ೧೦ ಆದ ಬಳಿಕ ಲೋಕಲ್ಫಂಡನ್ನು ೨ ಆಣೆಗೆ ಏರಿಸಬೇಕಾಗಿ ಅಂಕೋಲೆಯ ರಾ॥ ಏಗಳರು ಸೂಚನೆ ತಂದರು ಅದಕ್ಕೆ ಅನುಮೋದನೆ ದೊರೆಯಿತು ಇನ್ನೊಬ್ಬರು ೧॥ ಆಣೆಗೆ ಏರಿಸಬೇಕಾಗಿ ಉಪಸೂಚನೆ ತಂದರು ಇಷ್ಟರೊಳಗೆ ಹೊರಗಿದ್ದ ೧೪ ಮಂದಿ ಸಭಾಸದರೂ ಒಳಗೆ ಬಂದು ತಾವೆಲ್ಲ ಹೊರಗೆ ಹೋದ ಸಂಗತಿಯನ್ನು ಸಭೆಯ ವೃತ್ತಾಂತದಲ್ಲಿ ನಮೂದಿಸಬೇಕಾಗಿ ಅಧ್ಯಕ್ಷರಿಗೆ ವಿನಂತಿ ಮಾಡಿದರು ನೀವು ಹೊರಗೆ ಹೋದದ್ದು ನಮ್ಮ ಲಕ್ಷದಲ್ಲಿ ಬರಲಿಲ್ಲವೆಂದು ಅಧ್ಯಕ್ಷರು ಹೇಳಿ ಸಭಾಕಾರ್ಯವನ್ನು ಮುಂದರಿಸಿದರು! ಆಮೇಲೆ ಲೋಕಲ್ಫಂಡನ್ನು ಏರಿಸಬಾರದಾಗಿ ಬರ್ಗಿಯ ರಾ॥ ಶ್ರೀಪಾದ ಪಂಡಿತರು ೨ನೇ ಉಪಸೂಚನೆ ಮಂಡಿಸಿದರು. ಈ ಉಪಸೂಚನೆ ಮೂಲ ಠರಾವಿಗೆ ಸರಿ ವಿರುದ್ಧವಿರುವದರಿಂದ ಇದು ನಿಯಮಬಾಹ್ಯವಿರುತ್ತದಾಗಿ ಅಧ್ಯಕ್ಷರು ತೀರ್ಮಾನಿಸಿದರು ಮುಂದಿನ ವರ್ಷದ ಜಮಾ-ಖರ್ಚಿನ ಚರ್ಚೆಯ ವರೆಗೆ ಲೋಕಲ್ಫಂಡ ಏರಿಕೆಯ ವಿಷಯವನ್ನು ಮುಂದೂಡಬೇಕಾಗಿ ಹೊನ್ನಾವರದ ರಾ॥ ಈಶ್ವರ ಭಟ್ಟರು ಸೂಚಿಸಿ ೨೫ನೇ ನಿಯಮದಂತೆ ತಮ್ಮ ಸೂಚನೆ ಗ್ರಾಹ್ಯವಿರುತ್ತದೆಂದು ಪ್ರತಿಪಾದಿಸಿದರು ಇದಕ್ಕೆ ಅನುಮೋದನೆಯೂ ದೊರೆಯಿತು; ಚರ್ಚೆಯೂ ನಡೆಯಿತು ಅಷ್ಟರಲ್ಲಿ ಈ ಸೂಚನೆ ಲೋಕಲ ಬೋರ್ಡ ಕಾಯಿದೆಯ ೩೫ನೇ ಕಲಮಿಗೆ ವಿರುದ್ಧವಿರುತ್ತದೆಂದೂ ಕಟ್ಟಳೆಗೂ ನಿಯಮಕ್ಕೂ ವಿರೋಧವುಂಟಾದಾಗ ಕಟ್ಟಳೆಯನ್ನು ಮಾನ್ಯ ಮಾಡಬೇಕೆಂದೂ ಅಧ್ಯಕ್ಷರು ಪ್ರತಿಪಾದಿಸಿ ರಾ॥ ಭಟ್ಟರ ಸೂಚನೆಯನ್ನು ನಿರಾಕರಿಸಿದರು ಇಷ್ಟು ಚರ್ಚೆ ಮುಗಿದ ನಂತರ ೧॥ ಆಣೆಯ ಸೂಚನೆ ಹಿಂತೆಗೆದುಕೊಳ್ಳಲ್ಪಟ್ಟಿತು ಮತದಾರರ ಅಂಬೋಣ ತಿಳಕೊಳ್ಳಲಿಕ್ಕೆ ಸಾಕಷ್ಟು ಅವಕಾಶ ಸಿಗದ್ದರಿಂದ ಚರ್ಚೆಯ ವಿಷಯವನ್ನು ೩ ತಿಂಗಳ ತನಕ ಮುಂದೆ ಹಾಕಬೇಕಾಗಿ ಕುಮಟೆಯ ರಾ॥ ಬಸ್ತಿ ಮುಹಮ್ಮದ ಸಾಹೇಬರು ಸೂಚನೆ ತಂದರು ಈ ಸೂಚನೆಯನ್ನೂ ಅಧ್ಯಕ್ಷರು ನಿಯಮಬಾಹ್ಯ ಮಾಡಿ, ಲೋಕಲ್ಫಂಡನ್ನು ೨ ಆಣೆಗೆ ಏರಿಸಬೇಕೆಂಬ ಸೂಚನೆಯನ್ನಷ್ಟೇ ಮತಕ್ಕೆ ಹಾಕಿ, ಸೂಚನೆಗೆ ೧೨ ಅನುಕೂಲ ಮತಗಳು ಬಿದ್ದವೆಂದೂ ೧೧ ಪ್ರತಿಕೂಲ ಬಿದ್ದವೆಂದೂ ಲೆಕ್ಕ ಹೇಳಿ ಲೋಕಲ್ಫಂಡನ್ನು ೨ ಆಣೆಗೆ ಏರಿಸಬೇಕೆಂಬ ತೀರ್ಮಾನ ಸ್ವೀಕೃತವಾಯಿತೆಂದು ಜಾಹೀರಪಡಿಸಿದರು ಏರಿಕೆಯ ಸೂಚನೆಗೆ ಅನುಕೂಲ ಮತ ಕೊಟ್ಟವರು – (೧) ಅಧ್ಯಕ್ಷ ರಾ॥ ದತ್ತು ನಾಯ್ಕರು, (೨) ಸೀತಾರಾಮ ಭಾಗವತ, (೩) ಶ್ರೀ ಬಾಯಿಜಿಬಾಯಿ ನಾಯ್ಕ, (೪) ಏಗಳ, (೫) ಶಿವಾನಾಯ್ಕ, (೬) ಹಾಸಿ ರಾಮ ನಾಯ್ಕ, (೭) ಹನುಮಂತ ನಾಯ್ಕ, (೮) ದೇವ ನಾಯ್ಕ, (೯) ಫರ್ನಾಂಡಿಸ, (೧೦) ಚವಗಾರ, (೧೧) ಒಡೆಯರ ಮತ್ತು (೧೨) ಪಾಟೀಲ. ಪ್ರತಿಕೂಲ ಮತ ಕೊಟ್ಟವರು .— (೧) ರಾ॥ ಗಾಯತೊಂಡೆ, (೨) ಪ್ರಭು, (೩) ಮುದ್ದನಾಯ್ಕ (೪) ಪಂಡಿತ, (೫) ಬಸ್ತಿ ಮುಹಮ್ಮದ ಸಾಹೇಬ, (೬) ಈಶ್ವರ ಭಟ್ಟ, (೭) ಭಟಕಳ ಸಾಹೇಬ, (೮) [illegible], (೯) ಐನಕೈ ಹೆಗಡೆ, (೧೦) ಹೋಬಳಿ ಗಣಪತಿ ಭಟ್ಟ ಮತ್ತು (೧೧) ಗಣಪತಿ ಹೆಗಡೆ ಸುಬಾ ಹಳದೀಪುರದ ರಾ॥ ಸುಬ್ರಾಯ ನಾಯ್ಕರು ತಟಸ್ಥವಿದ್ದರು ಸಭೆಯ ಕಾರ್ಯವನ್ನು ನಿಲ್ಲಿಸಿ, ಸಭೆಯ ಮುಂದಿನ ವಿಷಯದ ಪೂರ್ಣ ವಿಚಾರಕ್ಕೆ ಅವಧಿ ಕೊಡಬೇಕೆಂದು ತಂದ ಉಪಸೂಚನೆಗಳನ್ನು ಅಧ್ಯಕ್ಷರು ಸ್ವೀಕರಿಸಿ ಅವುಗಳ ಮೇಲೆ ಮತಗಣನೆ ಮಾಡಲು ಕಾನೂನಿನಂತೆ ಬದ್ಧರಿದ್ದರಿಂದಲೂ ಅವರ ನಡಾವಳಿಯು ಮೂಲತಃ ಆದ ತೀರ್ಮಾನ ಅಸಿಂಧುವಾಗುತ್ತದೆಂದೂ ಪ್ರಾಜ್ಞರ ಅಭಿಪ್ರಾಯವುಂಟು. ಸರಕಾರವು ಯಾವ ಅಭಿಪ್ರಾಯಪಡುತ್ತದೆಂದು ನೋಡಬೇಕು. ಈ ಪ್ರಕರಣ ದಿವಾಣಿ ಕೋರ್ಟಿನ ಮೆಟ್ಟಿಲು ಏರುವದೆಂದೂ ಲೋಕವಾರ್ತೆಯಿದೆ.

ORDER.

No. 35

In exercise of the powers conferred by sub-rule (2) of rule 82 of the Defence of India Rules read with Government Notification, Home Department (Political-War) No S D II/1370, dated 15th September 1944, and of all other powers enabling him to do so, the District Magistrate, Kanara is hereby pleased to order that with effect from 1—10—1945 every diesel oil agent in the district shall on the 1st day of every month furnish to the District Magistrate, Kanara in the form in Schedule I given below, a full and correct statement of the stock of diesel oil held by him as on the last day of the month immediately preceding so as reach the District Magistrate precisely on the 5th of every month

SCHEDULE I

(1) Full name and addess of the agent
(2) Stock of diesel oil held by the agent on the first day of the preceding month (in imperial gallons)
(3) New stock received during the month (in imperial gallons)
(4) Quantity sold during the month (in imperial gallons)
(5) Balance on the last day of the month (in imperial gallons)

With reference to sub-rule (1) of rule 119 of the Defence of India Rules, the District Magistrate, Kanara hereby direct that the order shall be published in the Bombay Government Gazette and in all the local newspapers and copies thereof shall be affixed to the notice boards in the offices of the Collector and Mamlatdars and Mahalkarys in the district Copies shall also be supplied to all the oil agents in the district

Karwar, 17—9—1945

V. NANJAPPA,
District Magistrate, Kanara

Notice to Motor Owners in the Karnatak Region.

Owners of motor vehicles residing in the Karnatak Region are informed that tax for the remaining one or two quarters of the current financial year ending 31-3-46 should be paid on or before 15-10-45 for vehicles registered in the Bombay Province and on or before 30-9-45 for vehicles registered elsewhere, respectively Tax should be paid in cash **Crossed Cheques drawn on the Imperial Bank of India only,** chalans or by money orders at the Regional Transport Office Belgaum, between 11-00 A M and 3-00 P M on week days and 9-30 A M and 11-00 A M on Saturdays

2 Payment of tax should be accompanied by (i) Registration Certificates of the vehicles and (ii) valid Insurance Policies in the case of heavy transport vehicles namely Goods Vehicles and Passenger Buses

3 Non-use intimation for vehicles which are kept idle should be submitted before the date on which tax tokens already issued for such vehicles expire, as required by Rule 26 of the B M V Tax Rules 1940

Belgaum, 18—9—1945

J B. RABBITT,
Regional Transport Officer, Karnatak Region Belgaum

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಹೊರಊರವರಿಗೆ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ .. ೦-೪-೦
ವ್ಹಿ. ಪಿ. ಯಿಂದ ಹಣ ತೆರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿಮುಂಗಡ ಕಟ್ಟತಕ್ಕದ್ದು

Regd. No. B 1270. Monday, 1st October, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೧೪.

ಕುಮಟಾ:- ಸೋಮವಾರ, ತಾ ೧ ಮಾಹೆ ಅಕ್ಟೋಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಸ್ಮಾಲ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪೈಕಾ ೧೫ಎಮ್ ಉದ್ದ
೧ ಸಾಲಿಗೆ ೫ ಆಣೆಯಂತೆ
ವಿಶಿಷ್ಟ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಅ॥ ಭಾ॥ ಕೊಂಗ್ರೆಸ ಸಮಿತಿಯ ಸಭೆಯ ವರದಿ.

ಶನಿ-ರವಿವಾರಗಳ ವೃತ್ತಾಂತ.

ಆಚೆಯ ವಾರದ ಕೊನೆಗೆ ಮುಂಬಯಿಯಲ್ಲಿ ಸೇರಿದ ಅ। ಭಾ। ಕೊಂಗ್ರೆಸ ಸಮಿತಿಯ ಪ್ರಥಮ ದಿನದ ಅಂದರೆ ಶುಕ್ರವಾರದ ವೃತ್ತಾಂತ ಕಳೆದ ವಾರದ "ವೃತ್ತ"ದಲ್ಲಿ ಪ್ರಕಟವಾಗಿದೆ ಮುಂದಿನ ವೃತ್ತಾಂತ ಇದರಡಿ ಕೊಡಲಾಗಿದೆ

ಶನಿವಾರ (೨ನೆಯ ದಿನ) ಸಭೆಯ ಕೆಲಸ ಮಧ್ಯಾಹ್ನ ೨ ಘಂಟೆಗೆ ಪ್ರಾರಂಭವಾಯಿತು ಅಂದು ಸಹ ಮೇಲಿಂದ ಮೇಲೆ ಮಳೆಯಾಗುತ್ತಲಿತ್ತು. ಆದರೂ ಜನತೆಯ ಉತ್ಸಾಹ ಕುಗ್ಗಲಿಲ್ಲ. ವಿಶಾಲ ಸಭಾಮಂಟಪವು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ಮಂಟಪದ ಹೊರಗೂ ಸಾವಿರಗಟ್ಟಲೆ ಜನರು ಮಳೆಯನ್ನು ಲೆಕ್ಕಿಸದೆ ಕೂಡಿದ್ದರು.

ಸಭೆಗೆ ಆರಂಭವಾಗುತ್ತಲೇ ಅಧ್ಯಕ್ಷರು ಸಭೆಯ ಕಾರ್ಯಕ್ರಮವನ್ನು ಆದಷ್ಟು ಬೇಗ ಮುಗಿಸಲು ನೆರವಾಗಬೇಕೆಂದು ಸಭಿಕರಿಗೆ ಬಿನ್ನವಿಸಿದರು. ಆ ಮೇಲೆ ಪಂ॥ ಜವಾಹಿರಲಾಲರು ಎದ್ದು, ತಾ. ೮-೮-೧೯೪೨ರಿಂದ ಮುಂದೆ ಮೂರು ವರುಷಗಳ ವರೆಗೆ ನಡೆದ ದಬ್ಬಾಳಿಕೆಗೆ ಎದೆಗೊಟ್ಟ ವೀರರನ್ನು ಅಭಿನಂದಿಸುವ, ಸ್ವಾತಂತ್ರ್ಯ-ಸಂಪಾದನೆಯನ್ನು ಕುರಿತು ಜನರಲ್ಲಿ ತೋರಿಬರುವ ಮನೋನಿರ್ಧಾರವನ್ನು ವ್ಯಕ್ತಗೊಳಿಸುವ, ಈಗ ಯುದ್ಧ-ಮುಕ್ತಾಯವಾಗಿರುತ್ತಿದ್ದರೂ ಹಳೆಯ ಸಾಮ್ರಾಜ್ಯವಾದಿ ರಾಷ್ಟ್ರಗಳು ತಮ್ಮ ಸಾಮ್ರಾಜ್ಯತೃಷ್ಣೆಯನ್ನು ಬಿಡದಿರುವದನ್ನೂ ೩ನೆಯ ಮಹಾಯುದ್ಧದ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸುತ್ತಿರುವದನ್ನೂ ಉಲ್ಲೇಖಿಸುವ ಮತ್ತು ಏಶಿಯಾ ಖಂಡದೊಳಗಿನ ಹಾಗೂ ಇನ್ನಿತರ ಅಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಹಿಂದೀ ರಾಷ್ಟ್ರದ ಸ್ವಾತಂತ್ರ್ಯವೇ ಸೋಪಾನವಾಗಬೇಕಾಗಿರುವದರಿಂದ ಹಿಂದೀ ರಾಷ್ಟ್ರದ ಸ್ವಾತಂತ್ರ್ಯವನ್ನು ಒಪ್ಪಿ ಜಾಗತಿಕ ಸಂಸ್ಥೆಯ ಸ್ಥಾಪನೆಯ ಮಹಾಕಾರ್ಯದಲ್ಲಿ ಅದಕ್ಕೂ ಸಮಾನಸ್ಕಂಧತೆಯ ಸ್ಥಾನ ಕೊಡಬೇಕೆಂದು ಸಾರುವ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು. ಪಂಡಿತಜಿಯವರು ತಮ್ಮ ಭಾಷಣದಲ್ಲಿ ಕಳೆದ ಮೂರು ವರ್ಷಗಳಲ್ಲಾದ ಘಟನೆಗಳನ್ನೆಲ್ಲ ಪರಾಂಬರಿಸಿ, ಜನರು ತೋರಿಸಿದ ಧೈರ್ಯ-ಸಾಹಸಗಳನ್ನು ತುಂಬಾ ಹೊಗಳಿದರು. ಮುಂದಾಳುಗಳನ್ನೆಲ್ಲ ಸುರಂಗಕ್ಕಟ್ಟಿದ್ದರಿಂದ ಅನಾಯಕರಾದ ಜನರು ತಾವೇ ನಾಯಕರಾಗಿ ತಮಗೆ ಸರಿದೋರಿದ ಮಾರ್ಗ ತುಳಿದ ಬಗ್ಗೆ ನ್ಯಾಯಾನ್ಯಾಯಗಳ ನಿರ್ಣಯ ಕೊಡುವ ಅಧಿಕಾರ ಯಾರಿಗೂ ಇಲ್ಲವೆಂದು ಅಭಿಪ್ರಾಯ ವ್ಯಕ್ತಗೊಳಿಸಿದರು ಈ ಗೊತ್ತುವಳಿಗೆ ಅನುಮೋದನೆ ಕೊಟ್ಟವರು ಸರದಾರ ವಲ್ಲಭಭಾಯಿಯವರು ಅವರ ಭಾಷಣ ವೀರಾವೇಶದಿಂದ ತುಂಬಿತ್ತು "೧೯೪೨ರ ಚಳವಳಿಯು ಎಂಥಾಯುದ್ಧದ ಸ್ವರೂಪವಿತ್ತು. ಆದರೆ ಮುಂದಾಳುಗಳೆಲ್ಲ ಒಮ್ಮಿಗಲೇ ಸೆರೆಮನೆಗೆ ಸಾಗಿಸಲ್ಪಟ್ಟದ್ದರಿಂದ ಅದು ಸಂಘಟಿತವಿದ್ದಿಲ್ಲ, ಸಂಘಟಿತವಿರುತ್ತಿದ್ದರೆ ಇನ್ನೂ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾದ ಅವಶ್ಯಕತೆಯೇ ಇರುತ್ತಿದ್ದಿಲ್ಲ. ಆದರೂ ಆ ಚಳವಳಿಯಿಂದ ರಾಷ್ಟ್ರೀಯ ಸಭೆಯ ಶಕ್ತಿಯೆಷ್ಟಿರುತ್ತದೆಂಬದು ಸರಕಾರಕ್ಕೆ ತಿಳಿದು ಬಂದಿದೆ" ಎಂದು ಅವರು ಚಳವಳಿಯನ್ನು ಸಮರ್ಥಿಸಿ, ಬಂಗಾಲ-ಬರಗಾಲದ ಕಾಲಕ್ಕೆ ಲಕ್ಷಗಟ್ಟಲೆ ಜನರು ಹಸಿವೆಯಿಂದ ಬಳಲಿ ಸಾಯುತ್ತಿದ್ದರೂ ಆಗಿನ ಸರ್ವಾಧಿಪತಿಗಳಾದ ಲಿನಲಿಥಗೋ ದೊರೆಗಳು ಆ ಪ್ರಾಂತಕ್ಕೆ ಭೆಟ್ಟಿ ಸಹ ಕೊಡದಿದ್ದದ್ದನ್ನು ಉಲ್ಲೇಖಿಸಿ, ಇಂಥ ಸರಕಾರಕ್ಕೆ ಅಸ್ತಿತ್ವದಲ್ಲುಳಿಯಲು ಎಳ್ಳಷ್ಟೂ ಅಧಿಕಾರವಿಲ್ಲವೆಂದರು. ಹಾಗೆಯೇ ಮುಂದೆ ಸಾಗಿ ಯುದ್ಧಮುಕ್ತಾಯದಿಂದ ಉದ್ಭೂತವಾದ ಪರಿಸ್ಥಿತಿಯನ್ನು ಪರಾಂಬರಿಸುತ್ತ, ಯಾವುದೇ ದೇಶದ ಶಕ್ತಿ ಎಷ್ಟೇ ಪ್ರಚಂಡವಾಗಿರುತ್ತಿದ್ದಾಗ್ಯೂ ಎಟಂ ಬಾಂಬಿನ ಮುಂದೆ ಅದರ ಆಟ ಸಾಗುವಂತಿಲ್ಲವೆಂದೂ, ಜಗತ್ತು ಮಹಾತ್ಮರ ಅಹಿಂಸೆಯ ತತ್ವವನ್ನು ಅಂಗೀಕರಿಸಿದನಕ ತರಣೋಪಾಯವಿಲ್ಲೆಂದೂ ಅಭಿಪ್ರಾಯಪಟ್ಟರು ಮುಂದುವರಿಯುತ್ತ ಸರದಾರರು ೧೯೪೨ರ ಆಗೋಸ್ತ ತಿಂಗಳಲ್ಲಿ ಕೈಕೊಂಡ "ಭಾರತ ಬಿಟ್ಟು ಹೋಗಿರಿ" ಎಂಬ ತೀರ್ಮಾನದೊಳಗಿನ ಒಂದಕ್ಷರವನ್ನೂ ಕೂಡ ಕೊಂಗ್ರೆಸ್ಸು ಬದಲಿಸಬಯಸುವದಿಲ್ಲೆಂದೂ, ಬೇಗನೇ "ಏಶಿಯಾ ಖಂಡ ಬಿಟ್ಟು ಹೋಗಿರಿ" ಎಂದು ರಾಜ್ಯಕರ್ತರಿಗೆ ಎಚ್ಚರಿಕೆ ಕೊಡುವ ಪ್ರಸಂಗ ಬರಲಿದೆಯೆಂತಲೂ, ಹಿಂದುಸ್ತಾನವು ಸ್ವತಂತ್ರವಾಗುವ ವರೆಗೆ ಏಶಿಯಾ ಖಂಡದ ಜನಾಂಗಗಳಿಗೆ ಸ್ವಾತಂತ್ರ್ಯ ಲಭಿಸದೆಂತಲೂ, ಏಶಿಯಾದಲ್ಲಿ ಸ್ವಾತಂತ್ರ್ಯ ನೆಲಸಿದನಕ ಜಗತ್ತಿನಲ್ಲಿ ಸ್ವಾತಂತ್ರ್ಯ-ಸ್ವಾಸ್ಥ್ಯಗಳು ನೆಲಸಲಾರವೆಂತಲೂ ನಿರ್ಧಾರದಿಂದ ನುಡಿದರು. ಮುಂದೆ ಅವರು ಇದೀಗ ಮುಗಿದ ಯುದ್ಧವು ಸ್ವಾತಂತ್ರ್ಯ-ಪ್ರಜಾಸತ್ತೆಗಳ ಯುದ್ಧವಾಗಿತ್ತೆಂದು ವಾದಿಸುವವರ ಮಾತನ್ನು ಹಳಿಯುತ್ತ, ಅವರು ಹೇಳುವಂತೆ ಅದು ನಿಜವಾಗಿ ಸ್ವಾತಂತ್ರ್ಯದ ಯುದ್ಧವಾಗಿರುತ್ತಿದ್ದರೆ, ಈಗ ಆ ಯುದ್ಧ ನಿಂತ ಮೇಲೆ ಭಾರತಕ್ಕೆ ಸ್ವಾತಂತ್ರ್ಯವೇಕೆ ಸಿಗಲಿಲ್ಲೆಂದು ಪ್ರಶ್ನೆ ಮಾಡಿದರು. ಮತ್ತು "ಕೊಂಗ್ರೆಸ್ಸು ಇಂದು ಸ್ವಾತಂತ್ರ್ಯ ದೊರಕಿಸಲು ನಿಶ್ಚಯಿಸಿದೆ. ನಮ್ಮನ್ನು ಯಾರೂ ತಡೆಯಲಾರರು. ನಾವು ಈಗ ಸ್ವಾತಂತ್ರ್ಯ ಸಂಪಾದಿಸಿಯೇ ತೀರುವೆವು" ಎಂದು ಹೇಳಿ ತಮ್ಮ ಭಾಷಣ ಮುಗಿಸಿದರು ಗೊತ್ತುವಳಿಗೆ ಬೆಂಬಲ ಕೊಡುತ್ತ ಆಚಾರ್ಯ ನರೇಂದ್ರ ದೇವರು ನುಡಿದದ್ದೇನಂದರೆ- "ನಮಗೆ ಪೂರ್ಣ ಸ್ವಾತಂತ್ರ್ಯ ಬೇಕು ತುಸು ಕಡಿಮೆಯಾದರೆ ಅದನ್ನು ನಾನು ಸ್ವೀಕರಿಸುವಂತಿಲ್ಲ! ಸ್ವಾತಂತ್ರ್ಯಕ್ಕಾಗಿ ನಾನು ಒಂದು ದಿನ ಸಹ ಹಾದಿ ನೋಡುವಂತಿಲ್ಲ ಸಾಮ್ರಾಜ್ಯಸತ್ತೆ ಹ [illegible] ವಂತರ ಕೈಚಳಕ ನಡೆಯುತ್ತಿರುವ ವರೆಗೆ ಜಗತ್ತಿಗೆ ಸುಖವಾಗದು. ಜಗತ್ತಿನಲ್ಲಿ ಶಾಂತಿ ನೆಲಿಯಬೇಕಾದರೆ ಪ್ರತಿಯೊಂದು ಜನಾಂಗವು ಸ್ವತಂತ್ರವಾಗಬೇಕು." ಸಂಯುಕ್ತ ಪ್ರಾಂತದ ಪಂ॥ ಬಾಲಕೃಷ್ಣ ಶರ್ಮಾ ಇವರು ೧೯೪೨ರಲ್ಲಿ "ಭಾರತ ಬಿಟ್ಟು ಹೋಗಿರಿ" ತೀರ್ಮಾನಕ್ಕೆ ವಿರೋಧ ಮಾಡಿದ್ದರು. ಅವರು ಅದು ತಮ್ಮ ತಪ್ಪಾಯಿತೆಂದು ಪ್ರಾಂಜಲ ಬುದ್ಧಿಯಿಂದ ಒಪ್ಪಿಕೊಂಡು ಪ್ರಕೃತ ಗೊತ್ತುವಳಿಗೆ ಹಾರ್ದಿಕ ಬೆಂಬಲ ಕೊಟ್ಟರು. ಈ ಗೊತ್ತುವಳಿಯೊಳಗಿಂದ ಕೆಲವು ಜನರು ೧೯೪೨ರ ಚಳವಳಿಯ ಕಾಲಕ್ಕೆ ಅಹಿಂಸೆಯ ಎಲ್ಲೆ ಮೀರಿದ ಬಗ್ಗೆ ವಿಷಾದ ವ್ಯಕ್ತ ಮಾಡುವ ಭಾಗವನ್ನು ತೆಗೆದು ಹಾಕಬೇಕೆಂದು ಶ್ರೀ॥ ರಘುನಾಥರಾಯರು ತಿದ್ದುಪಡಿ ಸೂಚಿಸಿದರು. "ವಿಷಾದ ವ್ಯಕ್ತ ಮಾಡುತ್ತಿದೆ" ಎಂಬ ಶಬ್ದಗಳ ಬದಲು ಅಹಿಂಸೆಯ ಎಲ್ಲೆ "ಮೀರಿದ್ದರೆಂದು ಸಮಿತಿಯು ಒಪ್ಪುತ್ತಿದೆ" ಎಂಬ ಶಬ್ದಗಳನ್ನು ಹಾಕಬೇಕಾಗಿ ಶ್ರೀ॥ ಚತರ್ಜಿ ಎಂಬವರು ಸೂಚಿಸಿದರು. ಶ್ರೀ॥ ದುಭಾಷಿ ಎಂಬವರು ಈ ಉಪಸೂಚನೆಗಳನ್ನು ಸಮರ್ಥಿಸಿ, ೧೯೪೨ರ ಚಳವಳಿಯು ಭಾರತದ ಇತಿಹಾಸದಲ್ಲಿ ದಪ್ಪ ಅಕ್ಷರಗಳಿಂದ ಬರೆಯಲ್ಪಡುವದೆಂದೂ, ಆ ಚಳವಳಿಯನ್ನು ನಡಿಸಿದವರನ್ನು ಯಾವದೇ ಬಗೆಯಿಂದ ಖಂಡಿಸುವದು ಅನ್ಯಾಯವಾಗುವದೆಂದೂ ನುಡಿದರು ಗೊತ್ತುವಳಿಯಲ್ಲಿ ಏಶಿಯಾದ ಜೊತೆಗೆ ಆಫ್ರಿಕಾ ಖಂಡದ ಹೆಸರನ್ನೂ ಸೇರಿಸಬೇಕೆಂದು ಪ್ರೊ॥ ರಂಗಾ ಇವರು ಸೂಚಿಸಿದರು. ಪಂ॥ ನೆಹರುರವರು ಚರ್ಚೆಯನ್ನು ಮುಗಿಸುತ್ತ, ಅಹಿಂಸೆಯ ಎಲ್ಲೆ ಮೀರಿದವರನ್ನು ಗೊತ್ತುವಳಿಯು ದೂಷಿಸುವದಿಲ್ಲೆಂದು ಸಮಾಧಾನ ಹೇಳಲಾಗಿ ಉಪಸೂಚನೆಗಳು ತಿರಸ್ಕರಿಸಲ್ಪಟ್ಟು ಮೂಲ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಇಷ್ಟಕ್ಕೆ ಚಹಾಪಾನದ ಹೊತ್ತಾದ್ದರಿಂದ ಸಭೆಯು ಮುಂದರಿಸಲ್ಪಟ್ಟಿತು.

ಉಪಹಾರ ಮುಗಿದ ನಂತರ ರಾಷ್ಟ್ರೀಯ ಸಭೆಯ ಧೋರಣೆಯನ್ನು ವಿವರಿಸುವ ತೀರ್ಮಾನವನ್ನು ಆಚಾರ್ಯ ಕೃಪಲಾನಿಯವರು ಸಭೆಯ ಮುಂದಿಟ್ಟರು. ಈ ಗೊತ್ತುವಳಿಯಲ್ಲಿ ರಾಷ್ಟ್ರೀಯ ಸಭೆಯು ಪ್ರಾರಂಭದಿಂದ ಈ ವರೆಗೆ ಇಟ್ಟುಕೊಂಡ ಮತ್ತು ಕಾಲಕಾಲಕ್ಕೆ ಅನುಸರಿಸಿದ ನೀತಿಯನ್ನು ವಿವರಿಸಿ, ಆಳರಸರು ಇನ್ನೂ ತಮ್ಮ ಕಸಿಮುಷ್ಟಿಯನ್ನು ಸಡಲಿಸುವ ಇಚ್ಛೆಯುಳ್ಳದಿದ್ದುದು ಕಂಡುಬರುತ್ತಿದೆ ಎಂತಲೂ, ಆದರೂ ಸಾಧ್ಯವಿರುವ ಮಟ್ಟಿಗೆ ಕೊಂಗ್ರೆಸ್ಸು ಸಂಧಾನ-ಮಾರ್ಗದಿಂದ ತನ್ನ ಗುರಿಯನ್ನು

The Agricultural & Industrial Bank, Ltd.
[Incorporated in British India, Liability of Members limited]
Head Office. OONDAPOOR. S I
Branches:-
ANKOLA, BELGAUM, COONDAPOOR, DHARWAR, GOKARN,
HAVERI, HUBLI, KARWAR, KUMTA, MANGALORE,
NAGAR, SHIMOGA, SIRSI, SOMWARPET, VIRAJPET.
All kinds of Banking Business transacted.
Paid-up Capital & Reserves exceed Rs 4 LAKHS
Please apply for particulars.

ಸಾಧಿಸುವರೆಂತಲೂ, "ಸಾಧ್ಯವಿದ್ದಲ್ಲಿ ಸಂಧಾನ-ಸಹಕಾರ-ಸಹವಿಚಾರ ಮತ್ತು ಅವಶ್ಯವಿದ್ದಲ್ಲಿ ಅಸಹಕಾರ ಮತ್ತು ಸತ್ಯಾಗ್ರಹ ಇದೇ ಕಾಂಗ್ರೆಸ್ಸಿನ ಧೋರಣೆ"ಯಾಗಿರುವದೆಂತಲೂ ಸ್ಪಷ್ಟಪಡಿಸಲಾಗಿದೆ. ಈ ಗೊತ್ತುವಳಿಯನ್ನು ಸ್ವೀಕರಿಸಲು ಸಭಿಕರಿಗೆ ಅರುಹುತ್ತ ಆಚಾರ್ಯರು ಹೇಳಿದ್ದೇನೆಂದರೆ — ೧೯೪೨ರಲ್ಲಿ ನಾಡಿನಲ್ಲಿ ಹಿಂಸಾತ್ಮಕ ಚಟುವಟಿಕೆಗಳು ನಡೆದದ್ದರ ಹೊಣೆ ಎಲ್ಲ [illegible] ಬಂಧಿಸಿಟ್ಟ ಸರಕಾರದ ಮೇಲುಂಟು. ಆದೇ[illegible] ಇಡೀ ಪ್ರಪಂಚವನ್ನು ರಕ್ತಮಯ ಸಮರದಲ್ಲಿ ಧುಮುಕಿಸಿದ ರಾಷ್ಟ್ರಕ್ಕೆ (ಬ್ರಿಟನ್ನಿಗೆ) ಭಾರತದಲ್ಲಿ ಹಿಂಸೆ ನಡೆಯಿತೆಂದು ದೂರಲು ಲವಮಾತ್ರ ಅಧಿಕಾರವಿಲ್ಲ. ಆದರೂ ಅಹಿಂಸೆಯಿಂದಲೇ ನಮಗೆ ಜಯವಾಗುವದು, ಅಹಿಂಸೆಯೇ ನಮ್ಮ ಏಕಮಾತ್ರ ಸಾಧನವಾಗಿರಬೇಕು, ಎಂದು ನಾನು ಮನಗಂಡಿದ್ದೇನೆ. ಸಿಮ್ಲಾ ಪರಿಷತ್ತಿನಲ್ಲಿ ಕಾಂಗ್ರೆಸ್ಸು ಸಹಕಾರದ ಹಸ್ತವನ್ನು ಮುಂದ ಮಾಡಿತ್ತು. ಆದರೆ ಸರ್ವಾಧಿಪತಿಗಳು ಅವನ್ನು ಸ್ವೀಕರಿಸದೆ ಬೆ। ಜಿನ್ನಾರವರೊಬ್ಬರ ದೆಸೆಯಿಂದ ಪರಿಷತ್ತನ್ನು ಮುರಿದರು! ಒಬ್ಬರ ದೆಸೆಯಿಂದ ಪರಿಷತ್ತು ಮುರಿದ ಉದಾಹರಣ ಇನ್ನಲ್ಲೂ ಸಿಗಲಾರದು! ಬೆ। ಜಿನ್ನಾರಿಗೆ ಹೆದರಿ ಪರಿಷತ್ತು ಮುರಿಯಿತೆಂದು ನಾನು ತಿಳಿಯುವದಿಲ್ಲ. ಬ್ರಿಟಿಶ ಸರಕಾರಕ್ಕೆ ಆ ಪರಿಷತ್ತು ಒಂದಿಲ್ಲೊಂದು ನೆವ ಮುಂದೊಡ್ಡಿ ಮುರಿಯುವದು ಬೇಕಾಗಿತ್ತೆಂದು ನಾನು ತಿಳಿಯುತ್ತೇನೆ. ಕಾಂಗ್ರೆಸು ಇನ್ನೂ ಸಂಘಟಿತವಾಗಬೇಕು. ಶಾಸನ-ಸಭೆಗಳಲ್ಲಿ ಅದು ಪ್ರವೇಶ ಮಾಡಬೇಕು. ಆದರೆ ಹಾಗೆ ಮಾಡುವದು ಅಧಿಕಾರ-ಸ್ವೀಕಾರಕ್ಕಲ್ಲ, ಅಲ್ಲೂ ನಮ್ಮ ಸ್ವಾತಂತ್ರ್ಯದ ಹೋರಾಟ ಸಾಗಿಸುವದಕ್ಕಾಗಿ. ಸ್ವಾತಂತ್ರ್ಯ ದೊರಕಿಸಲು ನಮಗೆ ಎಟಂ ಬಾಂಬು ಬೇಡ. ಮಹಾತ್ಮರು ಹೇಳುವಂತೆ ನಾವು ನಡೆದರೆ ನಮಗೆ ಸ್ವಾತಂತ್ರ್ಯ ಸಿಕ್ಕೇ ತೀರುವದು. ಆಚಾರ್ಯರ ಗೊತ್ತುವಳಿಗೆ ಅನುಮೋದನ ಕೊಡುತ್ತ ಡಾ। ರಾಜೇಂದ್ರ ಪ್ರಸಾದರು 'ಅಹಿಂಸೆಯು ರಾಷ್ಟ್ರೀಯ ಸಭೆಯ ಪರಮ ಧರ್ಮ. ಅದು ಅವಿಚ್ಛಿನ್ನವಾದುದು. ರಾಷ್ಟ್ರವು ಸ್ವತಂತ್ರವಾಗುವವರೆಗೆ ಕೈಗೆ ಸಿಕ್ಕ ಉಪಾಯಗಳನ್ನೆಲ್ಲ ನಾವು ಉಪಯೋಗಿಸುವಾ. ಅಂತಹ ಪ್ರಸಂಗ ಬಂದಾಗ ನಾವು ಹಿಂದೆ ಸರಿಯತಕ್ಕದ್ದಲ್ಲ" ಎಂದು ಹೇಳಿದರು. ಗೊತ್ತುವಳಿಗೆ ಬೆಂಬಲ ಕೊಡುತ್ತ ಪಾ। ನ ಸುಪ್ರೀನ ಬಿಹಾರಿಯವರು ಹೇಳಿದ್ದೇನೆಂದರೆ ೧೯೪೨ರಲ್ಲಿ ಕ್ರಾಂತಿ ಹೂಡಲು ಕಾಂಗ್ರೆಸ್ಸಿಗೆ ಇಚ್ಛೆಯಿದ್ದಿಲ್ಲ. ಸರಕಾರವೇ ಜನತೆಯನ್ನು ರೊಚ್ಚಿಗೆಬ್ಬಿಸಿತು. ಸಮಯ ಸಾಧಿಸಿ ಕಾಂಗ್ರೆಸ್ಸು ಕ್ರಾಂತಿ ಹೂಡಿದರೆ ಅದನ್ನು ಹತ್ತಿಕ್ಕುವದು ಯಾವ ರಾಷ್ಟ್ರಕ್ಕೂ ಸಾಧ್ಯವಿಲ್ಲ. ಕಳೆದ ೩ ವರ್ಷ ಸರಕಾರವು ದಾರುಣ ದಬ್ಬಾಳಿಕೆಯನ್ನು ನಡಿಸಿತು. ಆದರೂ ಜನ ಎದೆಗುಂದಿಲ್ಲ. ಆ ದಬ್ಬಾಳಿಕೆಯಿಂದ ಭಾರತ-ಬ್ರಿಟನಗಳ ಸಂಬಂಧ ಮಾತ್ರ ಕೆಟ್ಟುಹೋಯಿತು.' ಬ್ರಿಟಿಶ ಸರಕುಗಳಿಗೆ ಬಹಿಷ್ಕಾರ ಹಾಕಬೇಕಾಗಿ ಶ್ರೀ। ಮಹೇಶ್ವರ ದತ್ತರು ಹೇಳಿದರು. ಶ್ರೀ। ಮಹಾವೀರ ತ್ಯಾಗಿ ಮತ್ತು ರಾಧಾಕೃಷ್ಣ ಅಗ್ರವಾಲರವರು ಗೊತ್ತುವಳಿಯನ್ನು ವಿರೋಧಿಸಿದರು. ಸರಕಾರದೊಡನೆ ಸಂಧಾನ ಸಹಕಾರ ಮಾಡಿಕೊಳ್ಳುವದು ಸಾಧ್ಯವಿಲ್ಲೆಂದು ಒಂದು ಕಡೆ ಹೇಳಿ, ಪುನಃ ಆ ಸಂಧಾನ ಮಾರ್ಗಕ್ಕೆ ಅಂಟಿಕೊಳ್ಳುವದು ಉಚಿತವಲ್ಲವಾಗಿ ಅವರ ಮತ. ಕಿಸಾನ(ಒಕ್ಕಲಿಗ)ಮತ್ತು ವಿದ್ಯಾರ್ಥಿಗಳ ಸಂಘಟನೆಯನ್ನು ಕಾಂಗ್ರೆಸು ಕೈಕೊಳ್ಳಬೇಕೆ? ಶ್ರೀ। ಶಿವನಾಶಲಿಂಗಂ ಚೆಟ್ಟಿಯವರೆಂದರು. ೧೯೪೨ರ ಚಳವಳಿಯ ಕಾಲಕ್ಕೆ ದೇಶದಲ್ಲಿ ಮುಖಂಡರಿಲ್ಲದಂಥ ಭಾಗಕ್ಕೆ ಶ್ರೀ। ಶ್ರೀಪ್ರಕಾಶರವರು ಆಕ್ಷೇಪ ತಕ್ಕೊಂಡರು. ಸತ್ಯಾಗ್ರಹಪ್ರಧಾನವೇ ಕಾಂಗ್ರೆಸಿನ ಚಳವಳಿಯ ಧೋರಣೆಯಿರಬೇಕೆಂದು ಉಪಸೂಚನೆಯನ್ನು ಶ್ರೀ। ಸುರೇಶ ಚತರ್ಜಿಯವರು ಸೂಚಿಸಿದರು. ಅವರು ಹೇಳಿದ್ದೇನೆಂದರೆ "ಯಾವ ದಾಸ ರಾಷ್ಟ್ರವು ಹಿಂದೆ ಸಹಕಾರ ನೀತಿಯಿಂದ ಸ್ವಾತಂತ್ರ್ಯ ಸಂಪಾದಿಸಿದೆ? ಯಾವ ಸಾಮ್ರಾಜ್ಯರಾಷ್ಟ್ರವೂ ತಾನಾಗಿ ಅಧಿಕಾರ ಬಿಟ್ಟುಕೊಡಲಿಕ್ಕಿಲ್ಲ. ಸಂಧಾನಕ್ಕಾಗಿ ಇನ್ನೊಮ್ಮೆ ನಮ್ಮ ರಾಷ್ಟ್ರಪತಿಗಳು ಸಿಮಲೆಗೆ ಹೋಗಿ ಅವಮಾನಿತರಾಗಕೂಡದು. ಸಂಧಾನಮಾರ್ಗದಿಂದ ಏನೇನೂ ಪ್ರಯೋಜನವಾಗುವಂತಿಲ್ಲ." ಬಾಬು ಸಂಪೂರ್ಣಾನಂದರೂ ಅದೇ ಮಾದರಿಯ ಇನ್ನೊಂದು ಉಪಸೂಚನೆಯನ್ನು ಮಂಡಿಸಿ "ರಾಷ್ಟ್ರೀಯ ಸಭೆಯ ಸಹಕಾರ ಸರಕಾರಕ್ಕೆ ಬೇಕಾಗಿಲ್ಲ! ಹೀಗಿರುವಾಗ ನಾವು ಯಾರೊಡನೆ ಸಂಧಾನ ಮಾಡಿಕೊಳ್ಳುವದು? ಇದುವರೆಗೆ ಸಂಧಾನ ಪ್ರಯತ್ನಗಳು ಸಫಲಕಾರಿಯಾಗಿಲ್ಲ. ಸರಕಾರದ ಧೋರಣೆ ಸಂಧಾನಕ್ಕೆ ಪ್ರೋತ್ಸಾಹಕರವಿಲ್ಲ" ಎಂದು ನಿಶ್ಚಯಾತ್ಮಕವಾಗಿ ಸಾರಿದರು. ಈ ಉಪಸೂಚನೆಗಳಿಗೆ ಉತ್ತರ ಕೊಡುತ್ತ ಆಚಾರ್ಯ ಕೃಪಲಾನಿಯವರು ನುಡಿದದ್ದೇನೆಂದರೆ — ಕಾಂಗ್ರೆಸು ತನ್ನ ಅಸಹಕಾರದ ನೀತಿಯನ್ನು ಬಿಟ್ಟುಕೊಟ್ಟಿದೆಯೆಂಬುದು ಶುದ್ಧ ಸುಳ್ಳು. ಸಂಧಾನ ವಿಫಲವಾದರೆ ಇಲ್ಲವೆ ಆಳರಸರು ನಮ್ಮನ್ನು ವಂಚಿಸಿದರೆ ನಾವು ಅಸಹಕಾರವನ್ನೇ ಸಾರುವೆವು. ಬಲಿಷ್ಠ ರಾಷ್ಟ್ರಗಳು ಕೂಡ ಸಂಧಾನಕ್ಕೆ ಸಿದ್ಧವಾಗುತ್ತಿವೆ. ಅಸಹಕಾರದಿಂದ ವಿಜಯ ಸಿಕ್ಕ ಮೇಲಾದರೂ ನಾವು ಸಂಧಾನಕ್ಕೆ ಸಿದ್ಧರಾಗಬೇಕಲ್ಲವೇ? ಬ್ರಿಟಿಶರು ಭಾರತ ಬಿಟ್ಟು ಹೋಗಲು ಒಪ್ಪಿಕೊಂಡರೆ ನಾವು ಅವರಿಗೆ ಬೇಕಾಗುವ ವಾಹನ ಸೌಕರ್ಯ ಒದಗಿಸಿಕೊಡಬೇಕಲ್ಲವೇ? ಆಚಾರ್ಯರು ಹೀಗೆ ಉತ್ತರ ಕೊಟ್ಟ ಮೇಲೆ ಉಪಸೂಚನೆಗಳು ನಿರಾಕರಿಸಲ್ಪಟ್ಟು ಮೂಲ ಗೊತ್ತುವಳಿಯು ವಿರೋಧವಿಲ್ಲದೆ ಅಂಗೀಕರಿಸಲ್ಪಟ್ಟಿತು. ಇಷ್ಟಕ್ಕೆ ರಾತ್ರೆ ೮ ಘಂಟೆಯಾದ್ದರಿಂದ ಸಭೆ ಮರುದಿನ ಮಧ್ಯಾಹ್ನದ ವರೆಗೆ ಮುಂದರಿಯಿತು.

ರವಿವಾರದ ಸಭೆ

ರವಿವಾರದಿನ ಸಹ ಹವೆ ಸುಧಾರಿಸಿದ್ದಿಲ್ಲ. ಆದರೂ ಸಭೆ ನೋಡಬಂದ ಜನರ ಸಂಖ್ಯೆ ಕಡಿಮೆಯಿರಲಿಲ್ಲ, ರವಿವಾರದ ಬಿಡುವು ಇದ್ದುದರಿಂದ ಕೆಲಮಟ್ಟಿಗೆ ಹೆಚ್ಚಿಗೆಯಾಗಿತ್ತು. ಮಹಾತ್ಮರಿಗೆ ಅಂದು ಜ್ವರವಿದ್ದಿಲ್ಲ. ಆದರೂ ವೈದ್ಯರ ಸಲಹೆಯಂತೆ ಅವರು ಸಭೆಗೆ ಬರುವ ಪರಿಶ್ರಮ ತಕ್ಕೊಳ್ಳಲಿಲ್ಲ. ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಸಭೆ ಪ್ರಾರಂಭವಾಯಿತು. ಅಧ್ಯಕ್ಷರು ಸಣ್ಣದೊಂದು ಪ್ರಾಸ್ತಾವಿಕ ಭಾಷಣ ಮಾಡಿ, ಅಂದೇ ಅಧಿವೇಶನದ ಮುಕ್ತಾಯ ಮಾಡಬೇಕಾದ್ದರಿಂದ ಪ್ರತಿಯೊಬ್ಬರು ತಮಗೆ ಕೊಟ್ಟಷ್ಟು ಅವಧಿಯಲ್ಲಿ ತಮ್ಮ ಭಾಷಣ ಮುಗಿಸಬೇಕಾಗಿ ಬಿನ್ನವಿಸಿದರು. ಮತ್ತು (೧) ಹಿಂದುಸ್ಥಾನದ ಖಾತೆಗೆ ವಿಲಾಯತಿಯಲ್ಲಿ ಜಮೆಯಾಗಿರುವ (ಬ್ರಿಟಿಶ ಸರಕಾರದ ಸಾಲಪತ್ರಗಳ ರೂಪದಲ್ಲಿ — ಇವಕ್ಕೇ ಸ್ಟರ್ಲಿಂಗ ಶಿಲ್ಕುಗಳೆಂದು ಹೇಳುತ್ತಾರೆ) ಹಣಕ್ಕೆ ಕತ್ತರಿ ಹಾಕುವದು ನ್ಯಾಯ್ಯವಲ್ಲ. ಈ ಹಣದ ಸಂಬಂಧವಾಗಿ ಹಿಂದುಸ್ಥಾನ ಸರಕಾರವು ಬ್ರಿಟಿಶ ಸರಕಾರದೊಡನೆ ಭಾರತಕ್ಕೆ ಹಾನಿಯಾಗುವಂತಹ ಒಪ್ಪಂದ ಮಾಡಿಕೊಂಡಲ್ಲಿ ಅದನ್ನು ಭಾರತವು ಮನ್ನಿಸುವಂತಿಲ್ಲ. (೨) ಬ್ರಹ್ಮದೇಶ ಮಲಯಾ ವಗೈರೆ ಜನಾಂಗಗಳಲ್ಲಿ ಹಿಂದೀಯರು ತಮ್ಮ ಶ್ರಮ ಮತ್ತು ಸಂಪತ್ತು ವ್ಯಯೀಕರಿಸಿರುವದರಿಂದ ಹಿಂದೀಯರಿಗೆ ಯೋಗ್ಯ ರಕ್ಷಣೆ ಸಿಗಬೇಕು. ಆದರೆ ಆ ಜನಾಂಗಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರಕೂಡದು. ಇಂಥ ಸಮಸ್ಯೆಗಳನ್ನು ಭಾರತದ ಪ್ರತಿನಿಧಿಗಳು ಸಂಬಂಧಪಟ್ಟ ಜನಾಂಗಗಳ ಪ್ರತಿನಿಧಿಗಳೊಡನೆ ಪರಸ್ಪರ ವಿಚಾರ ವಿನಿಮಯದಿಂದ ಬಿಡಿಸತಕ್ಕದ್ದು. (೩) ಬಲೂಚಿಸ್ಥಾನದ ಅಂಜುಮಾನ ಇ ವತನ ಸಂಸ್ಥೆಯನ್ನು ಕಾಂಗ್ರೆಸಿಗೆ ಜೋಡಿಸಿಕೊಳ್ಳತಕ್ಕದ್ದು, ಎಂಬ ಅರ್ಥದ ಮೂರು ಗೊತ್ತುವಳಿಗಳನ್ನು ಕಾರ್ಯದರ್ಶಿಗಳ ಕಡೆಯಿಂದ ಓದಿಸಿ ಅಧ್ಯಕ್ಷಪೀಠದಿಂದಲೇ ಅವನ್ನು ಸೂಚಿಸಿ ಮನ್ನಿಸಿಕೊಂಡರು. ಆ ನಂತರ ೧೯೪೨ನೇ ಇಸ್ವಿಯಲ್ಲಿ ಮಲಯಾ ಮತ್ತು ಬ್ರಹ್ಮದೇಶಗಳಲ್ಲಿ ಬಾಬು ಸುಭಾಸಚಂದ್ರರ ನೇತೃತ್ವದಲ್ಲಿ ಸಂಘಟಿಸಲ್ಪಟ್ಟ ಹಿಂದೀ ರಾಷ್ಟ್ರೀಯ ಸೇನೆಯವರನ್ನು ಯುದ್ಧ ಬಂದಿಗಳಂತೆ ನಡಿಸಿಕೊಳ್ಳಬೇಕು, ಅವರಿಗೆ ಕಷ್ಟ ಕೊಡಕೂಡದು, ಕಷ್ಟ ಕೊಟ್ಟರೆ ಹಿಂದುಸ್ಥಾನ-ಇಂಗ್ಲಂಡಗಳ ನಡುವಿನ ವಿತುಷ್ಟ ವಿಕೋಪಕ್ಕೆ ಹೋಗುವದು, ಯಾರಿಗಾದರೂ ಈ ಹಿಂದೆ ಮರಣದಂಡನೆ ಕೊಟ್ಟದ್ದಿದ್ದರೆ ಅದನ್ನು ಜಾರಿಯಲ್ಲಿ ತರಕೂಡದು, ಎಂದು ಸಾರುವ ಗೊತ್ತುವಳಿಯನ್ನು ಪಂ। ಜವಾಹರಲಾಲರು ಮುಂದಿಟ್ಟರು. ತಮ್ಮ ಗೊತ್ತುವಳಿಯನ್ನು ಸಮರ್ಥಿಸುತ್ತ ಪಂಡಿತಜಿಯವರು ನುಡಿದದ್ದೇನೆಂದರೆ — ಬ್ರಿಟಿಶರು ಮಲಯಾ ಬ್ರಹ್ಮದೇಶ, ಸಿಂಗಾಪುರಗಳನ್ನು ಬಿಟ್ಟುಬರುವಾಗ "ನಿಮ್ಮ ಹಿತರಕ್ಷಣೆ ನೀವು ಮಾಡಿಕೊಳ್ಳಿರಿ" ಎಂದು ಅಲ್ಲಿದ್ದ ಹಿಂದೀ ಸೈನಿಕರಿಗೆ ಹೇಳಿಬಂದರು. ಈ ಹಿಂದೀಯರಲ್ಲಿ ಕೆಲವರು ಜಪಾನಿಯರು ರಚಿಸಿದ ಸೈನ್ಯದಲ್ಲಿ ಸೇರಿಕೊಂಡರು. ಅದು ಅವರ ಅಪರಾಧವೇ? ಈಗ ಅವರ ವಿರುದ್ಧ ರಾಜದ್ರೋಹದ ಆರೋಪ ಹೊರಿಸಿ ದಂಡಿಸುವ ವಿಚಾರ ನಡೆದಿದೆ! ಅದಾಗದೆಂದು ನಾವು ಕೇಳಿಕೊಳ್ಳುತ್ತೇವೆ. ಅವರ ಮೇಲೆ ಖಟ್ಲೆಗಳಾಗಲಿವೆ. ಆ ಖಟ್ಲೆಗಳಲ್ಲಿ ಅವರ ಸಂರಕ್ಷಣೆ ಮಾಡುವದಕ್ಕಾಗಿ ಕಾಂಗ್ರೆಸ ಕಾರ್ಯಕಾರಿ ಮಂಡಳವು ಒಂದು ಸಮಿತಿಯನ್ನು ರಚಿಸಿದೆ. ಸುಭಾಸರ ಸೈನಿಕರು ಎಷ್ಟೇ ತಪ್ಪುಗಾರರಿದ್ದಾಗ್ಯೂ ಅವರು ಉಜ್ವಲ ದೇಶಪ್ರೇಮಿಗಳಿದ್ದರೆಂಬುದು ನಿಸ್ಸಂಶಯ. ಇಂತಹ ತರುಣರನ್ನು ಹಿಂಸಿಸಿದರೆ ಭಾರತಕ್ಕೆ ಬರೆ ಕೊಟ್ಟಂತಾಗುವದು. ಶ್ರೀ। ಪ್ರಫುಲ್ಲಚಂದ್ರ ಘೋಷರು ಗೊತ್ತುವಳಿಗೆ ಅನುಮೋದನೆ ಕೊಟ್ಟರು. ದಿಲ್ಲಿಯ ಲಾಲಾ ದೇಶಬಂಧು ಗುಪ್ತರು ಒಂದು ಉಪಸೂಚನೆ ತಂದು, ವಿದೇಶಗಳಿಗೆ ಹೋಗಲು ಒಪ್ಪದೆ ದೀರ್ಘ ಕಾಲದ ಶಿಕ್ಷೆಗೆ ಒಳಪಟ್ಟ ಸೈನಿಕರನ್ನೂ ಗೊತ್ತುವಳಿಯಲ್ಲಿ ಸೇರಿಸಬೇಕೆಂದು ಸೂಚಿಸಿದರು. ಸಿಂಧದ ಶ್ರೀ। ಘನಶ್ಯಾಮ ಜೇಠಾನಂದರು ಇದೇ ಅರ್ಥದ ಇನ್ನೊಂದು ಉಪಸೂಚನೆ ತಂದರು. ಗೊತ್ತುವಳಿಯಲ್ಲಿ ಸುಭಾಸರ ಸೈನಿಕರ ಬಗ್ಗೆ "ಎಷ್ಟೇ ತಪ್ಪುಗಾರರಿದ್ದಾಗ್ಯೂ" ಎಂದು ಹಾಕಿದ ಶಬ್ದಾವಳಿಯನ್ನು ತೆಗೆದುಹಾಕಬೇಕೆಂದು ಶ್ರೀ। ಶ್ರೀಚಂದ್ರ ಚತರ್ಜಿಯವರು ತಿದ್ದುಪಡಿ ಸೂಚಿಸಿದರು. ಶಿಕ್ಷಿಸಲ್ಪಟ್ಟವರ ಬಿಡುಗಡೆ ಕೂಡಲೇ ಆಗಬೇಕೆಂಬ ಅರ್ಥದ ವಾಕ್ಯವನ್ನು ಗೊತ್ತುವಳಿಯಲ್ಲಿ ಸೇರಿಸಬೇಕಾಗಿ ಸರದಾರ ಪ್ರತಾಪಸಿಂಹರು ಇನ್ನೊಂದು ಉಪಸೂಚನೆ ತಂದರು. ಪಂ। ನೆಹರು ಇವರು ಶ್ರೀ। ಚತರ್ಜಿಯವರ ತಿದ್ದುಪಡಿಯನ್ನು ಬಿಟ್ಟು, ಉಳಿದ ಎಲ್ಲ ಉಪಸೂಚನೆಗಳನ್ನು ಸ್ವೀಕರಿಸಿದ್ದರಿಂದ ಆ ತಿದ್ದುಪಡಿಗಳೊಂದಿಗೆ ಗೊತ್ತುವಳಿಯು ಸ್ವೀಕೃತವಾಯಿತು. ಶ್ರೀ। ಚತರ್ಜಿಯವರ ತಿದ್ದುಪಡಿ ಬಿದ್ದುಹೋಯಿತು.

ಆ ನಂತರ ಸರದಾರ ಪಟೇಲರು ಮುಂದೆ ಬಂದು ಸರ್ವಾಧಿಪತಿಗಳ ಹೊಸ ಘೋಷಣೆಯ ಬಗ್ಗೆ ಅಸಮಾಧಾನ ವ್ಯಕ್ತಗೊಳಿಸುವ ಗೊತ್ತುವಳಿಯನ್ನು ಸಭೆಯ ಮುಂದೆ ಮಂಡಿಸಿದರು. ಈ ಹೊಸ ಘೋಷಣೆಯಲ್ಲಿ ಹೊಸದೇನೂ ಇಲ್ಲ. ೧೯೪೨ರಲ್ಲಿ ಎಲ್ಲ ಭಾರತೀಯರು ತ್ಯಾಜ್ಯವೆಂದು ತಿರಸ್ಕರಿಸಿದ ಕ್ರಿಪ್ಸ ಯೋಜನೆಯಲ್ಲೇ ಕೆಲವು ಕಿರಕುಳ ತಿದ್ದುಪಡಿಗಳನ್ನು

ಮಾಡಿ ಈ ಯೋಜನೆ ತಯಾರಿಸಲ್ಪಟ್ಟಿದೆ, ಇದರಲ್ಲಿ ಸ್ವಾತಂತ್ರ್ಯದ ಮಾತಿಲ್ಲ, ಪ್ರಾಂತಿಕ ಸ್ವಾತಂತ್ರ್ಯದ ವಿನಹ ಬೇರೆ ಏನೂ ಸ್ವೀಕರಿಸಲಿಕ್ಕೆ ರಾಷ್ಟ್ರಸಭೆಯಾಗಲಿ ದೇಶವಾಗಲಿ ಒಪ್ಪುವಂತಿಲ್ಲ, ಸರಕಾರದವರು ಈಗ ಚುನಾವಣೆಗಳನ್ನು ನಡಿಸಲು ಸಿದ್ಧರಾಗಿದ್ದಾರೆ, ಆದರೆ ಅದರಲ್ಲಿ ಅನೇಕ ಅಡಚಣೆಗಳನ್ನು ಒಡ್ಡಿದ್ದಾರೆ ಅನೇಕ ಪತ್ರಗಳ ಮೇಲಿನ ನಿರ್ಬಂಧಗಳು ಇನ್ನೂ ತೆಗೆಯಲ್ಪಟ್ಟಿಲ್ಲ, ಬಂಗಾಲ ಬರಗಾಲ, ಲಂಚಗೋಳಿತನ ಮತ್ತು ಅನ್ನ ವಸ್ತ್ರಗಳ ಪೂರೈಕೆಯ ಅವ್ಯವಸ್ಥೆಗಳಿಗೆ ಹೊಣೆಗಾರವಾದ ಹಿಂದುಸ್ಥಾನ ಸರಕಾರದಲ್ಲಿ ತುಸಕ್ಕೆ ಏನೂ ಬದಲಾವಣೆಯಾಗುವದಿಲ್ಲವಂತೆ ಇದರ ಮೇಲಿಂದ ಶಕ್ಯವಿದ್ದ ಎಲ್ಲ ಉಪಾಯಗಳಿಂದ ಕೈಯಲ್ಲಿದ್ದ ಸತ್ತೆಯನ್ನು ಬ್ರಿಟಿಶರು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬಯಸುತ್ತಾರೆಂದು ಸ್ಪಷ್ಟವಾಗುತ್ತಿದೆ ಆದರೂ ರಾಜ್ಯಾಧಿಕಾರ ಕಿತ್ತುಕೊಳ್ಳಬೇಕೆಂಬ ಜನರ ಉತ್ಕಂಠೆಯನ್ನೂ ನಿರ್ಧಾರವನ್ನೂ ಸಿದ್ಧಪಡಿಸುವದಕ್ಕಾಗಿ ಕೊಂಗ್ರೆಸ್ಸು ಬರುವ ಚುನಾವಣೆಗಳನ್ನು ಹೋರಾಡಬೇಕೆಂದು ನಿಶ್ಚಯಿಸಿದೆ, ಮತ್ತು ಸಮಸ್ತರೂ ಕೊಂಗ್ರೆಸ್ಸಿಗೆ ಬೆಂಬಲ ಕೊಟ್ಟು ಅದರ ಬಲ ಬೆಳಿಸುವರೆಂದು ಆಶಿಸುತ್ತಿದೆ ಎಂಬುದೇ ಈ ಗೊತ್ತುವಳಿಯ ಸಾರ

ಗೊತ್ತುವಳಿಯನ್ನು ಸಮರ್ಥಿಸುವಾಗ ಸರದಾರ ವಲ್ಲಭಭಾಯಿಯವರು ನುಡಿದದ್ದೇನಂದರೆ — ೧೯೪೨ರಲ್ಲಿ ಎಲ್ಲ ಹಿಂದೀ ಪಕ್ಷಗಳು ಕ್ರಿಪ್ಸರ ಯೋಜನೆಯನ್ನು ತಿರಸ್ಕರಿಸಿದ್ದರು ಮೂರು ವರುಷಗಳ ತರುವಾಯ ಅದೇ ಯೋಜನೆ ತಿರುಗಿ ಮುಂದೆ ಬಂದಿದೆ! ಬ್ರಿಟಿಶ ಸರಕಾರದ ಹೃದಯದಲ್ಲಿ ಬದಲಾವಣೆಯಾಗಿದೆಯೋ ಎಂದು ಪರೀಕ್ಷಿಸಲಿಕ್ಕೆ ನಾವು ಸಿಮುಲಾ ಪರಿಷತ್ತಿನಲ್ಲಿ ಸೇರಿದೆವು ಆದರೆ ಬ್ರಿಟಿಶರ ಚಾಣಕ್ಯ-ನೀತಿ ಇನ್ನೂ ಹಾಗೆಯೇ ಇದೆ! ಹಿಂದು-ಮುಸಲ್ಮಾನರ ಮತಭೇದದ ನೆವವನ್ನು ಮುಂದೆ ಮಾಡಿ ಅವರು ಪರಿಷತ್ತು ಮುರಿದರು ಮುಸ್ಲಿಮ ಲೀಗದ ಕೂಡ ಸಂಧಾನ ಮಾಡಿಕೊಳ್ಳಲು ನಾವು ಈವರೆಗೆ ಹಲವಾರು ಸಾರೆ ಪ್ರಯತ್ನಿಸಿದೆವು ಅದಕ್ಕಾಗಿ ತ್ಯಾಗವನ್ನೂ ಮಾಡಿದೆವು ಆದರೆ ಅವೆಲ್ಲ ನಿರುಪಯೋಗಿಯಾಯಿತು! ಇನ್ನು ಮುಂದೆ ನಾವು ಲೀಗಿಗೆ ಏನೂ ಕೊಡಲೊಪ್ಪಲಾರೆವು ಮೂರನೆಯ (ಆಂಗ್ಲರ) ಪಕ್ಷವು ಹಿಂದುಸ್ಥಾನದಲ್ಲಿರುವ ತನಕ, ಹಿಂದು ಮುಸಲ್ಮಾನ ತಂಟೆ ಬಗೆಹರಿಯುವಂತಿಲ್ಲವೆಂದು ನಾವು ಮನಗಂಡಿದ್ದೇವೆ ಸರಕಾರದವರು ಈಗ ಚುನಾವಣೆಗಳ ಆಟ ಹೂಡಿದ್ದಾರೆ ಈಗಿನ ಕಾನೂನು ಮಂಡಳಗಳು ತೀರ ಹಳೆಯವಂತೆ! ಈ ಆಟ ಹೂಡಿದ್ದು ಬರೇ ಕಾಲಹರಣಕ್ಕಾಗಿ! ಕೆಲವು ಪ್ರಾಂತಗಳಲ್ಲಿ ಅವಸರದಿಂದ ಕಾನೂನ-ಮಂಡಳಗಳನ್ನು ವಿಸರ್ಜಿಸಿ ಲೋಕ ಪ್ರತಿನಿಧಿಗಳ ಮಂತ್ರಿಮಂಡಳಗಳು ಸ್ಥಾಪಿತವಾಗದಂತೆ ಮಾಡಿದ್ದಾರೆ! ಇದರಲ್ಲಿ ಆಶ್ಚರ್ಯವಿಲ್ಲ ರಾಷ್ಟ್ರೀಯ ಸಭೆಯವರ "ಭಾರತ ಬಿಟ್ಟು ನಡೆಯಿರಿ ಗೊತ್ತುವಳಿಯು ಊರ್ಜಿತವಿರುವಾಗ ಐ. ಸಿ. ಎಸ್. ಅಧಿಕಾರಿಗಳು ಲೋಕನಿರ್ವಾಚಿತ ಮಂತ್ರಿಮಂಡಳಗಳನ್ನು ಸ್ವಾಗತಿಸುವದೆಂತು? ಬ್ರಿಟಿಶ ಸರಕಾರದ ಹೃದಯದಲ್ಲಿ ಬದಲಾವಣೆಯಾಗಿಲ್ಲ ಆದರೂ ಕೊಂಗ್ರೆಸು ಚುನಾವಣೆಗಳನ್ನು ಬಹಿಷ್ಕರಿಸಿ, ಪಂಚಮ ದಲದವರಿಗೆ ಮಂತ್ರಿಗಳಾಗಲು ಬಿಡುವಂತಿಲ್ಲ ಮುಂಬರುವ ಚುನಾವಣೆಗಳಲ್ಲಿ ಪಕ್ಷ ಸಂಘಟನೆಯನ್ನು ಮರೆತು ಕೊಂಗ್ರೆಸ್ಸಿಗೆ ಪೂರ್ಣ ಬೆಂಬಲ ಕೊಡಿರಿ ವೈಕ್ತಿಕ ಸ್ವಾರ್ಥ ಬಿಟ್ಟು, ನಿರ್ಮಲ ಮನಸ್ಸಿನಿಂದ ಹೋರಾಡಿದರೆ ಕೊಂಗ್ರೆಸಿಗೆ ಪ್ರಚಂಡ ವಿಜಯವಾಗುವದು ಈಗ ವಿಲಾಯತಿಯಲ್ಲಿ ಅಧಿಕಾರಕ್ಕೆ ಬಂದ ಕೂಲಿಕಾರ ಪಕ್ಷದ ಬಗ್ಗೆ ನಮ್ಮಲ್ಲಿ ಒಬ್ಬನೇನು ಪ್ರೇಮವಿಲ್ಲ ಕೂಲಿಕಾರರೂ ಪುರಾಣಮತವಾದಿಗಳೂ ನಮ್ಮ ದೃಷ್ಟಿಯಿಂದ ಒಂದೇ ನಾವು ಸ್ವಾತಂತ್ರ್ಯ ದೊರಕಿಸಲು ದೃಢ ನಿರ್ಧಾರ ಮಾಡಿದ್ದೇವೆ ಇನ್ನು ೩ ವರ್ಷಗಳಲ್ಲಿ ನಾವು ಸ್ವತಂತ್ರರಾಗಿಯೇ ತೀರುವೆವು

ಪಂ॥ ಗೋವಿಂದ ವಲ್ಲಭ ಪಂತರು ಗೊತ್ತುವಳಿಯನ್ನು ಅನುಮೋದಿಸುತ್ತ, ಬ್ರಿಟಿಶ ಕೂಲಿಕಾರ ಪಕ್ಷದವರು ಈಗ ಅಧಿಕಾರಕ್ಕೆ ಬಂದಾಗ ಹಿಂದಿನ ವಚನಗಳನ್ನೂ ಮಾತುಗಳನ್ನೂ ಮರೆತಿದ್ದಾರೆಂತಲೂ, "ಭಾರತ ಬಿಟ್ಟು ನಡೆಯಿರಿ" ಎಂಬ ಸೂತ್ರಕ್ಕೆ ಅಂಟಿಕೊಂಡರೆನೇ ಸ್ವಾತಂತ್ರ್ಯ ಸಿಗುವದೆಂತಲೂ ನುಡಿದರು

ಡಾ॥ ಜೊಯಿಥರಾಮ ಗಿಡವಾನಿ, ಮೌ॥ ಹಫೀಝುರ ರಹಿಮಾನ ಮತ್ತು ಶ್ರೀ॥ ಕೇದಾರನಾಥ ಸೈಗಲ ಇವರು ಗೊತ್ತುವಳಿಗೆ ಬೆಂಬಲ ಕೊಟ್ಟರು ರಹಿಮಾನರು ತಮ್ಮ ಭಾಷಣದಲ್ಲಿ, ಮುಸ್ಲಿಮ ಲೀಗು ಹಿಂದೀ ಮುಸಲ್ಮಾನರ ಪ್ರತಿನಿಧಿಯಲ್ಲೆಂದೂ ಬಂಗಾಲದಲ್ಲಿ ಲಕ್ಷಗಟ್ಟಲೆ ಮುಸಲ್ಮಾನರು ಹಸಿವೆಯಿಂದ ಸಾಯುತ್ತಿರುವಾಗ ಲೀಗದ ಅಧ್ಯಕ್ಷರು ಅವರ ಬಗ್ಗೆ ಏನೊಂದೂ ಕೆಲಸ ಮಾಡಿಲ್ಲೆಂದೂ ಪ್ರತಿಪಾದಿಸಿದರು, ಮತ್ತು ಬ್ರಿಟಿಶರು ಹಿಂದುಸ್ಥಾನದಿಂದ ಹೊರಬಿದ್ದ ೧೫ ದಿನಗಳಲ್ಲಿ ಹಿಂದು-ಮುಸ್ಲಿಮ ಸಮಸ್ಯೆ ಬಿಡಿಸಲ್ಪಡುವದೆಂದು ಹೇಳಿದರು ಇಷ್ಟರಲ್ಲಿ ಉಪಹಾರದ ಸಮಯವಾದ್ದರಿಂದ ಸಭೆ ಮುಂದರಿಯಿತು

ಮಹಾತ್ಮರಿಗೆ ಮಂಗಳವಾಗಲಿ!

ನಾಳೆ ಮಹಾತ್ಮರ ಹುಟ್ಟುಹಬ್ಬ ನಾಳೆ ಅವರು ೭೬ ವರ್ಷಗಳನ್ನು ಮುಗಿಸಿ ೭೭ನೇ ವರ್ಷದಲ್ಲಿ ಪದಾರ್ಪಣ ಮಾಡುತ್ತಾರೆ ಹಿಂಸೆಯ ಬೆನ್ನು ಹಿಡಿದು ಜರ್ಜರವಾದ ಜಗತ್ತಿಗೆ ಅಹಿಂಸೆಯ ಪಾಠವನ್ನು ಕಲಿಸಿಕೊಡಲಿಕ್ಕೂ, ವಿಶ್ವಬಂಧುತ್ವದ ಸಕ್ರಿಯ ಬೋಧೆ ಮಾಡಲಿಕ್ಕೂ ಅವರೊಬ್ಬರೇ ಈಗ ಈ ಪ್ರಪಂಚದಲ್ಲಿ ಅರ್ಹ ಅಧಿಕಾರಿಗಳಿರುತ್ತಾರೆ ಜಗತ್ಪಾಲಕನು ಮಹಾತ್ಮರಿಗೆ ದೀರ್ಘಾಯುಷ್ಯವನ್ನೂ ಅಖಂಡ ಆರೋಗ್ಯ ಸಂಪತ್ತಿಯನ್ನೂ ದಯಪಾಲಿಸಿ ಅವರ ಕಡೆಯಿಂದ ಅಮೂಲ್ಯ ವಿಶ್ವಸೇವೆಯನ್ನು ಮಾಡಿಸಲೆಂದು "ವೃತ್ತ"ವು ಭಕ್ತಿಪುರಃಸರವಾಗಿ ಪ್ರಾರ್ಥಿಸುತ್ತಿದೆ

ಪುನಃ ಸಭೆ ಕೂಡಿದ ಮೇಲೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಒಂದು ತಿದ್ದುಪಡಿ ಸೂಚಿಸಿ, (೧) ಯಾವ ತತ್ವದಂತೆ ಘಟನಾ ಸಮಿತಿಯ ಆಯ್ಕೆಯಾಗುವದು? (೨) ಘಟನಾ ಸಮಿತಿಯ ಅಧಿಕಾರವೇನು? (೩) ಘಟನಾ-ಸಮಿತಿಯ ಸದಸ್ಯರಾರಾಗುವರು? ಎಂಬುದರ ಸ್ಪಷ್ಟೀಕರಣವಾಗಬೇಕೆಂದು ನುಡಿದರು ಶ್ರೀ॥ ಶಹೀದ ಅನಸಾರಿಯವರು ಮಾತಾಡಿ ಚುನಾವಣೆಗಳಾಗುವ ಮುಂಚೆ ಶ್ರೀ॥ ಜಯಪ್ರಕಾಶ ನಾರಾಯಣ ಮೊದಲಾದವರ ಬಿಡುಗಡೆಯಾಗಬೇಕೆಂದರು ಕಮ್ಯುನಿಸ್ಟ ಪಕ್ಷದ ಡಾ॥ ಅಶ್ರಫರು ತಮ್ಮ ಉಪಸೂಚನೆ ಮಂಡಿಸಲು ಮುಂದಾದಾಗ ಸಭೆಯಲ್ಲಿ ಬಹಳ ಗದ್ದಲವಾಯಿತು ಅಧ್ಯಕ್ಷರು ಬಿನ್ನವಿಸಿದಾಗ್ಯೂ ಗದ್ದಲ ಶಾಂತವಾಗಲಿಲ್ಲ! ಕೊನೆಗೆ ಡಾಕ್ಟರರಿಗೆ ತಮ್ಮ ಭಾಷಣ ಮುಗಿಸಲು ಅಧ್ಯಕ್ಷರು ಕೇಳಿಕೊಳ್ಳಬೇಕಾಯಿತು ಶ್ರೀ॥ ಪ್ರತಾಪಸಿಂಗರು ಘಟನಾ ಸಮಿತಿಯಲ್ಲಿ ಸಂಸ್ಥಾನಿ ಪ್ರಜೆಗಳಿಗೆ ಪ್ರಾತಿನಿಧ್ಯವಿರಬೇಕೆಂದು ಪ್ರತಿಪಾದಿಸಿದರು ಪಂಜಾಬದ ಮಿಯಾಂ ಇಫ್ತಿಕರುದ್ದೀನರು (ಇವರು ಮೊನ್ನೆಯೇ ಕೊಂಗ್ರೆಸದಿಂದ ಹೊರಬಿದ್ದು ಲೀಗಿಗೆ ಸೇರಿದ್ದಾರೆ!) ತಮ್ಮದೊಂದು ತಿದ್ದುಪಡಿ ಸೂಚಿಸುತ್ತ, ಮುಸಲ್ಮಾನರು ಬಹುಸಂಖ್ಯಾಕರಿರುವ ಭಾಗಗಳಿಗೆ ಸ್ವಯಂನಿರ್ಣಯಾಧಿಕಾರ ಕೊಡಬೇಕೆಂದೂ, ಮುಸ್ಲಿಮ ಲೀಗಿನೊಡನೆ ಕೊಂಗ್ರೆಸ್ಸು ಸಂಧಾನ ಮಾಡಿಕೊಳ್ಳಬೇಕೆಂದೂ ಸೂಚಿಸಿದರು ೧೯೪೨ರ ಚಳವಳಿಯಲ್ಲಿ ತ್ಯಾಗ ಮಾಡಿದ ವೀರರನ್ನೇ ಚುನಾವಣೆಗೆ ನಿಲ್ಲಿಸಬೇಕಾಗಿ ಶ್ರೀ॥ ಸದ್ಗುರು ಶರಣರು ಪ್ರತಿಪಾದಿಸಿದರು ಆಚಾರ್ಯ ನರೇಂದ್ರ ದೇವರು ಶ್ರೀಮತಿ ಕಮಲಾದೇವಿಯವರ ಉಪಸೂಚನೆಯನ್ನು ಎತ್ತಿ ಹಿಡಿದರು ಹಿಂದೀ ಸೈನಿಕರ ಮತಗಳು ಕೊಂಗ್ರೆಸ್ಸಿಗೇ ಸಿಗುವವೆಂದು ಪಂಜಾಬದ ಶ್ರೀ॥ ನೇಕೀರಾಮ ಶರ್ಮಾರ[illegible]ದರು. ಕೊಂಗ್ರೆಸ್ಸು ಮುಸಲ್ಮಾನರೊಡನೆ ವಿಶೇಷ ಸಂಬಂಧವಿಟ್ಟುಕೊಂಡಿಲ್ಲೆಂದು ಇಫ್ತಿಕರುದ್ದೀನರು ಮಾಡಿದ ಟೀಕೆಗೂ ಕಮಲಾದೇವಿಯವರ ಉಪಸೂಚನೆಗೂ ಪ್ರತ್ಯುತ್ತರ ಕೊಡುತ್ತ ಪಂ॥ ಜವಾಹರಲಾಲ ನೆಹರುರವರು ತಿಳಿಸಿದ್ದೇನಂದರೆ — ಕೊಂಗ್ರೆಸ್ಸು ಎಲ್ಲ ಜಾತಿ ವರ್ಗಗಳ ಸಂಬಂಧ ಬೆಳಿಸಲು ಯತ್ನಿಸಿಲ್ಲೆಂಬ ಮಾತು ನಿರಾಧಾರವಾದುದು ಮುಸ್ಲಿಮ ಲೀಗಿನೊಡನೆ ಸಂಧಾನ ಮಾಡಿಕೊಳ್ಳಲು ನಾವು ಶತಪ್ರಯತ್ನ ಮಾಡಿದ್ದೇವೆ ಇನ್ನು ಮುಂದೆ ಮಾತ್ರ ಅದನ್ನು ಕಡೆಗಣಿಸಿ ನಡೆಯುವದೇ ಶ್ರೇಯಸ್ಕರವೆಂದು ನನ್ನ ಮತ ಲೀಗದವರು ನಮ್ಮ ರಾಷ್ಟ್ರಪತಿಗಳ ಅಪಮಾನ ಮಾಡಿದ್ದಾರೆ ಆ ಬಗ್ಗೆ ಲೀಗದವರು ಕ್ಷಮೆ ಬೇಡಿದನಕ ಅವರೊಡನೆ ನಾನು ಮಾತಾಡಲಾರೆ! ಆದರೆ ಮುಸಲ್ಮಾನ ಜನತೆಯನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಲಿಕ್ಕೆ ನಾವು ಸದಾ ಸಿದ್ಧರಿದ್ದೇವೆ ಅವರನ್ನು ಒಲಿಸಿಕೊಳ್ಳಲು ಅವಶ್ಯ ಯತ್ನಿಸುವೆವು ಲೀಗದವರ ಬೆನ್ನು ಮಾತ್ರ ಎಂದಿಗೂ ಹತ್ತುವಂತಿಲ್ಲ! ಚುನಾವಣೆಯ ಸಂಬಂಧದಲ್ಲಿ ಕೆಲವು ಮಾತುಗಳು ಬಂದಿವೆ ಅವನ್ನು ಈ ಗೊತ್ತುವಳಿಯಲ್ಲಿ ಸೇರಿಸುವದು ಅವಶ್ಯವಿಲ್ಲ ಹಿಂದಿನಿಂದ ಅವನ್ನು ಚುನಾವಣೆಯ ಘೋಷಣೆಯಲ್ಲಿ ಸೇರಿಸಲಾದೀತು ಸರದಾರ ವಲ್ಲಭಭಾಯಿಯವರು ಚರ್ಚೆಯ ಸಮಾರೋಪ ಮಾಡುವಾಗ ಪಂಡಿತಜಿಯವರ ಮಾತುಗಳಿಗೇ ಪುಷ್ಟಿ ಕೊಟ್ಟರು ಕೊನೆಗೆ ತಿದ್ದುಪಡಿಗಳೆಲ್ಲ ನಿರಾಕರಿಸಲ್ಪಟ್ಟು ಮೂಲ ಗೊತ್ತುವಳಿ ಮತಗಣನೆಯಿಲ್ಲದೆ ಮಾನ್ಯವಾಯಿತು

ತದನಂತರ ಚುನಾವಣೆ-ಸಮಿತಿಯ (ಪಾರ್ಲಿಮೆಂಟರಿ ಬೋರ್ಡಿನ) ರಚನೆ ಚುನಾವಣೆ ಘೋಷಣೆಯ ತಯಾರಿ ಸಂಸ್ಥಾನಿ ಪ್ರಜೆಗಳ ಸ್ಥಾನ ಮಾನ ಮತ್ತು ಹಿಂದ ದಳ-ವಿಧ ರಚನಾತ್ಮಕ ಕಾರ್ಯಕ್ರಮ ಈ ಸಂಬಂಧದ ನಾಲ್ಕು ಗೊತ್ತುವಳಿಗಳನ್ನು ಅಧ್ಯಕ್ಷರ ಪೀಠದಿಂದಲೇ ಸೂಚಿಸಿ ಮನ್ನಿಸಿಕೊಳ್ಳಲಾಯಿತು

ಆ ಮೇಲೆ ಅಧ್ಯಕ್ಷರು ಒಂದು ಉಜ್ವಲ ಭಾಷಣ ಮಾಡಿ ಚರ್ಚೆಯ ಸಮಾರೋಪ ಮಾಡಿದರು '೧೯೪೨ರಲ್ಲಿ ಹೊತ್ತಿಸಿದ ಸ್ವಾತಂತ್ರ್ಯದ ಜ್ವಾಲೆ ಇನ್ನೂ ಉರಿಯುತ್ತಿದೆ ಅದನ್ನು ಆರಿಸಬೇಕೆಂದು ಆಂಗ್ಲರು ಮಾಡಿದ ಪ್ರಯತ್ನ ಸಫಲವಾಗಿಲ್ಲ ಸ್ವಾತಂತ್ರ್ಯಾಭಿಲಾಷೆಯನ್ನು ಎಂದೂ ದಬ್ಬುವದು ಶಕ್ಯವಿಲ್ಲ ೧೯೪೨ರಲ್ಲಿ ಬಿತ್ತಿದ ಬೀಜವು ಈಗ ಫಲ ಕೊಡುವದು' ಎಂದು ನುಡಿದು ಅಧಿವೇಶನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಇಟ್ಟ ಬಗ್ಗೆ ಮುಂಬಯಿ ಪ್ರಾಂ॥ ಕೊಂ॥ ಕಮಿಟಿಯವರನ್ನೂ ದೇಶಸೇವಿಕೆಯರನ್ನೂ ಸ್ವಯಂಸೇವಕರನ್ನೂ ಅವರು ಅಭಿನಂದಿಸಿದರು

ಕೊನೆಗೆ ಆಭಾರ ಮನ್ನಣೆ, ರಾಷ್ಟ್ರಗೀತಗಳಾಗಿ ಸಭೆಯು ರಾತ್ರಿ ೮॥ ಘಂಟೆಗೆ ಮುಕ್ತಾಯವಾಯಿತು ಅ. ಭಾ. ಕೊಂ. ಸಮಿತಿಯ ಇಷ್ಟು ದೊಡ್ಡ ಅಧಿವೇಶನ ಇಂದೆಂದೂ ಸೇರಿದ್ದಿಲ್ಲ ಇನ್ನು ಮುಂದೆ ಸಮಿತಿಯ ಪ್ರದರ್ಶನಾತ್ಮಕ ಸಭೆಗಳನ್ನು ಸೇರಿಸಬಾರದೆಂದು ರಾಷ್ಟ್ರಪತಿಗಳ ನಿರ್ಣಯವಾಗಿದೆ ಸಾವಿರಾರು ಪ್ರೇಕ್ಷಕರು ಸೇರಿದಲ್ಲಿ ಸಮಿತಿಯ ಕೆಲಸಕ್ಕೆ ತೊಂದರೆಯಾಗುತ್ತಿದೆಯೆಂದೂ ಸಭೆಯಲ್ಲಿ ಮಾತಾಡುವ ಸದಸ್ಯರು ವಿವಾದ್ಯ ವಿಷಯಗಳ ಚರ್ಚೆ, ತರ್ಕಗಳ

[illegible] ಮಾಡುವದ [illegible] ವಿಶೇಷ ಲಕ್ಷ್ಯ [illegible] ದರೂ [illegible] ಪ್ರತಿ [illegible] ಗಮನ [illegible] [illegible] ಬಂದಿದೆ.

[illegible] ಅಮೇರಿಕಾ ದೇಶ [illegible] ಪ್ರಮುಖ [illegible] ಬಂದಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible]

[illegible]

[illegible] ಕೆಲವು [illegible]

ಈ ಜಿಲ್ಲೆಯ [illegible] ಅವರಿಗೆ [illegible]

ಇಲ್ಲಿಯ ಚೆಹ (?) [illegible] ಕೆಲವು ವ್ಯಾಪಾರಿಗಳು [illegible] ಜಿಲ್ಲಾಧಿಪರ [illegible] ಇದರಿಂದ [illegible] ಬಡವರ [illegible] ಜಿಲ್ಲಾಧಿಪರ ಮುಂದೆ [illegible]

ಅವರು ಆ [illegible] ಯಲ್ಲಿ ತಂದು ಬಡ ಜನಗಾರರನ್ನು [illegible] ಆಶೆಯುಂಟು.

ಸೀಥ ಅಂಗಡಿಗಳಲ್ಲಿ ಈಗ ಅಮೇರಿಕನ್ ಗೋಧಿಯು [illegible] ಅದರ ಧಾರಣ [illegible] ಇರುತ್ತದೆ.

ಸರಕಾರಿ ಉಗ್ರಾಣಗಳೊಳಗಿನವರ ಅಳತೆಯ ಕೈಚಳಕ [illegible] ಅವರು ಅಳತೆ [illegible] ಚೀಲವನ್ನು ಸೀಥಾ ಅಂಗಡಿಯವರು [illegible] ಅಳೆದರೆ ಅವರೊಳಗಿನ [illegible] ಉಗ್ರಾಣಗಳಲ್ಲಿ [illegible] ಸ್ವಭಾವಿಕವಿತ್ತು. [illegible] ಕೈಚಳಕದಿಂದ ಆ ಸಂಗ್ರಹದಲ್ಲಿ [illegible] ಸುದ್ದಿ! [illegible] ಎಂದೂ ಅಳತೆ [illegible] ಮಾಡುವದಿಲ್ಲವಂತೆ!

[illegible] ಈಗ ಬಹಳ [illegible] ಆದೇ, ಭತ್ತ ಮುಂತಾದವು [illegible] ಸಿಗುವದಿಲ್ಲ! [illegible] ಒಂದು ದಿನ [illegible] ನಿದ್ರಿಸುತ್ತಿದ್ದಿಲ್ಲ!

ಶಿರಸಿ— [illegible] ನೊಬ್ಬಯಿಂದ [illegible] ಶ್ರೀವಿಠೋಬ [illegible] ನಡೆದಿದೆ ಮುಂಜಾನೆ [illegible] ಜನರು ನೋಡುತ್ತಾರೆ [illegible]

[illegible] ಶ್ರೀ ವಿಷ್ಣು ಮಂದಿರದಲ್ಲಿ [illegible] ನಡೆಯುವವಂತೆ.

[illegible] ದೇವಸ್ಥಾನದ ಪ್ರಾಕಾರದಲ್ಲಿ [illegible] ಅಪ್ಪಣೆ [illegible] ದಿಂದ [illegible] ಮುಂದೆ [illegible] ತಿಳಿಯುತ್ತದೆ [illegible] ಕಾರಣ [illegible]

ಅಂಕೋಲಾ— [illegible] ಇಲ್ಲಿಯ [illegible] ಸೋಮವಾರ [illegible] ತಮ್ಮ [illegible] ಜಿಲ್ಲಾಧಿಪರು ಅವರ [illegible] ಸಕ್ಕರೆಯು [illegible] ಚಹಾ ಅಂಗಡಿಯವರಿಗೆ ಸಕ್ಕರೆ [illegible] ಅಂಕೋಲೆಯವರ ವಿಶಿಷ್ಟ [illegible] ಅಧಿಕಾರದಲ್ಲಿ ಸಾಧ್ಯವಿದ್ದಷ್ಟು ಸಕ್ಕರೆ ಕೊಡಿಸುತ್ತೇವೆಂಗಿ ಆಶ್ವಾಸನೆ ಕೊಟ್ಟರಂತೆ. ಇನ್ನೆರಡು ತಿಂಗಳುಗಳಲ್ಲಿ ಸಕ್ಕರೆಯ ಪರಿಸ್ಥಿತಿಯು ಸುಧಾರಿಸುವದೆಂತಲೂ ಅಲ್ಲಿಯವರೆಗೆ ಹೇಗಾದರೂ ಸುಧಾರಿಸಿಕೊಳ್ಳಬೇಕೆಂತಲೂ ಜಿಲ್ಲಾಧಿಪರು ಹೇಳಿದ್ದಾರೆಂದು ಸುದ್ದಿಯುಂಟು! ಕಳೆದ ಬುಧವಾರದಿಂದ ಅಂಗಡಿಯವರಿಗೆ ೧೧೦೦ರಷ್ಟು ಹೆಚ್ಚಿಗೆ ಸಕ್ಕರೆ ಸಿಗುತ್ತಿದೆ. ಅಂದಿನಿಂದ ಚಹಾ ಅಂಗಡಿಗಳು ತೆರೆಯಲ್ಪಟ್ಟವು.

ಜಿಲ್ಲಾಧಿಪರು ಮೇಲಿನಂತೆ ಚಹಾ ಅಂಗಡಿಕಾರರಿಗೆ ದಯೆತೋರಿಸಿದರೇನೋ ಆಯಿತು. ಆದರೆ ಅವರ ಮನಸ್ಸನ್ನು ಈ ಬಡ ಅಂಗಡಿಕಾರರ ಬಗ್ಗೆ ಕಲುಷಿತಗೊಳಿಸಲಿಕ್ಕೂ, ಅಂಗಡಿಕಾರರನ್ನು ಬೆದರಿಸಲಿಕ್ಕೂ ಕೆಲವರು ಘೋರ ಪ್ರಯತ್ನ ನಡಿಸಿದ್ದರು. ಹೀಗೆ ಪ್ರಯತ್ನ ಮಾಡಿದವರಲ್ಲಿ ಅತಿ ಪ್ರಮುಖರೆಂದರೆ ಯೋಗ್ಯ ಧಾರಣೆಯ ಅಂಗಡಿಯವರು! ಕಳ್ಳಪೇಟೆಯಲ್ಲಿ ಸಕ್ಕರೆ ಕೊಳ್ಳಬಾರದೆಂದು ಚಹಾ ಅಂಗಡಿಕಾರರು ಮಾಡಿರುವ ನಿರ್ಧಾರದಿಂದ ಈ ಅಂಗಡಿಯವರಿಗೆ ನಷ್ಟ— ಕಳ್ಳಪೇಟೆಯಲ್ಲಿ ಇಮ್ಮಡಿ, ಮುಮ್ಮಡಿ ದರದಿಂದ ಮಾರಾಟ ಮಾಡಿ ಸಿಗುತ್ತಿದ್ದ ಲಾಭಕ್ಕೆ ಕುತ್ತು ಬಿದ್ದುದೇ ಆ ನಷ್ಟ, ಹೊರತು ನಿಜವಾದ ನಷ್ಟವಲ್ಲ— ಆಗುತ್ತಿದೆ. ಈ ವರೆಗೆ ಅವರು ಬಡವರು [illegible] ಬಂದಾಗ [illegible] ಅವರ ಸೀಥಾ ಚೀಟಿಯಲ್ಲಿ ಸಕ್ಕರೆ ಖರ್ಚು ಬರೆದು, ಅದನ್ನು ಚಹಾ ಅಂಗಡಿಯವರಿಗೆ ಮಣ ಒಕ್ಕೆ ರೂ ೧೬-೧೭ ತಕ್ಕೊಂಡು ಪೂರೈಸುತ್ತಿದ್ದರಂತೆ. ಈ ಕಳ್ಳವ್ಯಾಪಾರಕ್ಕೆ ಗಧೆ ಬಂತೆಂದು ಅವರಿಗೆ ಘೋರ ಚಿಂತೆಯುಂಟಾಗಿದೆ! ತಮ್ಮ ಸ್ವಾರ್ಥಕ್ಕಾಗಿ ಇವರು ಜಿಲ್ಲಾಧಿಪರ ಕಡೆ ಚಹಾ ಅಂಗಡಿಕಾರರ ವಿರುದ್ಧ ಏನಾದರೂ ಚಾಡಿ ಹೇಳಿಕೊಂಡರೆ ಅದರಲ್ಲಿ ವಿಶೇಷ ಆಶ್ಚರ್ಯಪಡತಕ್ಕದ್ದೇನೂ ಇಲ್ಲ. ಅದು ಮನುಷ್ಯಸ್ವಭಾವ. ಸುಮಾರು [illegible] ಪರುಳೇಕರರು [illegible] ಕಾರವಾರದಲ್ಲಿ ಕೂಡಿದ ಜಿಲ್ಲಾ ಆಹಾರ ಸಲಹೆಗಾರ ಸಮಿತಿಯ ಸಭೆಯಲ್ಲಿ ಒಂದು ಚಿಕ್ಕ ಕತೆ ರಚಿಸಿ ಹೇಳಿದ್ದು ಮಾತ್ರ ಅತಿಶಯ ಆಶ್ಚರ್ಯಕಾರಕವಾದುದು! "ಏನು ಹೇಳಲಿ! ಅಂಕೋಲೆಯಲ್ಲಿ ನನಗೆ ಚಹಾ ಸಿಗಲಿಲ್ಲ! ಕೊನೆಗೆ ಓರ್ವ ಅಂಗಡಿಕಾರನು ೨ ಆಣೆ ತಕ್ಕೊಂಡು ಒಂದು ಕಪ್ ಚಹಾ ಮಾಡಿಕೊಟ್ಟನು! ಕೂಡಲೇ ಊರೊಳಗಿನ ಕೆಲವು [illegible] ಅವನನ್ನು ಮುತ್ತಿ ಅವನಿಗೆ ೨ ರೂ ದಂಡ ಮಾಡಿದರು!" ಎಂದು ಅವರು ರಸಭರಿತವಾಗಿ ವರ್ಣಿಸಿದರೆಂದು ವಾರ್ತೆಯಿದೆ! ಚಹಾ ಅಂಗಡಿಕಾರರ ಸಂಘದವರು ಊರಲ್ಲಿ [illegible] ಪರುಳೇಕರರ ಕತೆ ಸಂಪೂರ್ಣ ಸುಳ್ಳೆಂದು ತಿಳಿಸುತ್ತಾರೆ. ರಾ॥ ಪರುಳೇಕರರು ಇಂಥ ಕಟ್ಟುಕತೆಗಳನ್ನು ರಚಿಸಿದ್ದೇಕೆ? ಮತ್ತು ಅದನ್ನು ಜಿಲ್ಲಾಧಿಪರ ಎದುರಿನಲ್ಲಿ ಹೇಳಿದ್ದೇಕೆ? ಎಂಬುದು ತಿಳಿಯದು!

WANTED a Graduate or Matriculate holding L S G D Diploma for the post of the Secretary of the Bhatkal Municipality on the scale of pay Rs 41-[illegible]-61-[illegible]-30 Persons having previous experience will be preferred. Apply with testimonials to THE PRESIDENT, BHATKAL MUNICIPALITY BHATKAL before [illegible]th October, 1945

ನೋಟೀಸು.

ನೂಲಿನ ಲಾಯಸೆನ್ಸಿಂಗ ಆರ್ಡರ 1942ನೇ ಪ್ರಕಾರ ಲಾಯಸೆನ್ಸ ಫೀ ಭರಣಾ ಮಾಡುವ ವಿಷಯ.

ನೂಲಿನ ಲಾಯಸೆನ್ಸದಾರರು ಈಗ ಜಾರಿ ಇದ್ದ ಲಾಯಸೆನ್ಸ ಅವಧಿ [illegible] ಬಗ್ಗೆ ಲಾಯಸೆನ್ಸ ಫೀಯನ್ನು, ಈ ವಿಷಯದಲ್ಲಿ ಮುಂದೆ ನೋಟೀಸು ಕೊಡುವ ವರೆಗೆ, ಕಳುಹಿಸಬಾರದಾಗಿ ವಿನಂತಿ.

ತಾ [illegible]-[illegible]-45

J. K. THAKORE.
Provincial Textile Controllr Bombay

ನೋಟೀಸು.

ಸನ್ 1945ನೇ ಇಸವಿಯ ಸಪ್ಟಂಬರ ತಿಂಗಳ ಬಾಬ್ತು ತಾ 30-9-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು

ಪ್ರೊವ್ಹಿನ್ಶಿಯಲ್ ಟೆಕ್ಸ್ಟೈಲ್ ಕಂಟ್ರೋಲರ, [illegible] ಪೋಸ್ಟ ಆಫೀಸಿನ ಎದುರು [illegible] (Provincial Textile Controller opposite to Kalachowki Post Off. Patel Road, Bombay) ಇವರಿಗೆ ನೂಲಿನ ಮಾರಾಟದ ಲಾಯಸೆನ್ಸದಾರರಿಂದ [illegible] ಮಾಹಿತಿಯು, ನಿರ್ದಿಷ್ಟಗೊಳಿಸಿದ ಫಾರ್ಮಿನಲ್ಲಿ ತಾ 5-10-1945 ನೇದರೊಳಗಾಗಿ [illegible] ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ [illegible] ಕಾರಣ ನೂಲಿನ ಮಾರಾಟದ ಯಾವತ್ತೂ ಲಾಯಸೆನ್ಸದಾರರು ಸದರಿ ಮಾಹಿತಿಯನ್ನು [illegible] ತಪ್ಪದೆ ಮುಟ್ಟುವಂತೆ ದಯಮಾಡಬೇಕು.

[illegible]
21 [illegible] 1945

J. K THAKORE,
Provincial Textile Controller Bombay



ಇದನ್ನು ಪಾಂಡುರಂಗ ಕೃಷ್ಣ [illegible] (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೦-೬
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು
ವರ್ಗಣಿ ಮುಂಗಡ ಕೊಟ್ಟತಕ್ಕದ್ದು

Reg. No. B 1270. Monday, 8th October, 1945.

ಕಾನಡಾವೃತ್ತ

ವರ್ಷ ೩೮.] THE KANARA NEWS. [ಸಂಚಿಕೆ ೧೫.

ಕುಮಟಾ:- ಸೋಮವಾರ, ತಾ. ೮ ಮಾಹೆ ಅಕ್ಟೋಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಕಾಲಮ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ
ಸ್ಪೆಶಲ ಕಾಲಮ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
[illegible] ಇಲ್ಲವೆ ಪತ್ರದ್ವಾರಾ
ಠರಿಸಲಾದೀತು.

ಯುದ್ಧಕಾಲದ ತತ್ವಗಳೆಲ್ಲ ಮಣ್ಣುಪಾಲಾಗಿ ಹೋಗಿವೆ!

(ನಿರೀಕ್ಷಕನು ಬರೆದುದು)

ಯುದ್ಧದೊಳಗಿನ ವಿಜಯವು ಜೋಕಾಲಿ ಹೊಡೆಯುತ್ತಿದ್ದಾಗ, ಚಿಕ್ಕ-ದೊಡ್ಡ ರಾಷ್ಟ್ರಗಳ ಸಹಾಯ-ಸಹಾನುಭೂತಿಗಳನ್ನು ದೊರಕಿಸಿಕೊಳ್ಳುವದಕ್ಕಾಗಿ ಹಾಗೂ ಶತ್ರು-ರಾಷ್ಟ್ರಗಳೊಳಗಿನ ಜನಸಾಮಾನ್ಯರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವದಕ್ಕಾಗಿ, ಮಿತ್ರಪಕ್ಷದ ಪ್ರಮುಖರು, ವಿಶೇಷವಾಗಿ ಅಮೇರಿಕೆಯ ಅಧ್ಯಕ್ಷರಾಗಿದ್ದ ಫ್ರೆಂಕಲಿನ್ ರೂಝುವೆಲ್ಟರೂ ಬ್ರಿಟಿಶ ಸರಕಾರದ ಧುರೀಣರಾಗಿದ್ದ ಚರ್ಚಿಲ್ಲ-ಅಟ್ಲಿಯವರೂ ಎಲ್ಲ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ತಾವು ಯುದ್ಧ ಮಾಡುತ್ತಿದ್ದೇವೆಂತಲೂ, ವಿಜಯ ಸಿಕ್ಕ ಮೇಲೆ ಎಲ್ಲೆಲ್ಲೂ ತಾವು ಸ್ವಾತಂತ್ರ್ಯ ಮತ್ತು ಶಾಂತತೆಯನ್ನು ಪ್ರಸ್ಥಾಪಿಸಬಯಸುತ್ತೇವೆಂತಲೂ ಉದ್ದುದ್ದ ಜಾಹೀರನಾಮೆಗಳನ್ನು ಹೊರಡಿಸುತ್ತಿದ್ದರು, ಉದ್ದುದ್ದ ಭಾಷಣಗಳನ್ನೂ ಮಾಡುತ್ತಿದ್ದರು. ಚರ್ಚಿಲ್ಲ-ರೂಝುವೆಲ್ಟರು ಅಟ್ಲಾಂಟಿಕ ಮಹಾಸಾಗರದಲ್ಲೊಂದು ಕಡೆ ಕೂಡಿ ತಯಾರಿಸಿದ ಅಟ್ಲಾಂಟಿಕ ಘೋಷಣೆಯನ್ನು ವಾಚಕರು ಮರೆತಿರಲಿಕ್ಕಿಲ್ಲ ಈಗ ಶತ್ರುಗಳ ಪರಾಜಯವಾಗಿ ವಿಜಯಮಾಲೆಯು ಮಿತ್ರರ ಕೊರಳಿಗೆ ಬಿದ್ದ ಮೇಲೆ ಆ ಅಟ್ಲಾಂಟಿಕ ಘೋಷಣೆಯ ನೆನಹು ಯಾರಿಗೂ ಆಗುವದಿಲ್ಲ! ದಿವಂಗತ ರೂಝುವೆಲ್ಟರ ಚತುರ್ವಿಧ ಸ್ವಾತಂತ್ರ್ಯದ ಸ್ಮರಣೆಯೂ ಮಿತ್ರ-ಪ್ರಮುಖರಿಗೆ ಆಗುವದಿಲ್ಲ! "Everything is fair in love & election" (ಪ್ರೇಮಯಾಚನೆಯ ಕಾಲಕ್ಕೆ ಇಲ್ಲವೆ ಚುನಾವಣೆಯ ಪ್ರಚಾರದಲ್ಲಿ ಪಾಲಿಸಲಾಗದ ಅಥವಾ ಪಾಲಿಸಲಿಚ್ಛೆಯಿಲ್ಲದ ವಚನಗಳನ್ನು ಬೇಕಷ್ಟು ಕೊಡಬಹುದು) ಎಂಬುದಾಗಿ ಇಂಗ್ಲಿಷ ಭಾಷೆಯಲ್ಲಿ ಒಂದು ನಾಣ್ಣುಡಿಯುಂಟು ಆ ನಾಣ್ಣುಡಿಯಲ್ಲಿ wai (ಯುದ್ಧ) ಎಂಬ ಶಬ್ದವೊಂದನ್ನು ಸೇರಿಸಿದರೆ ಸರಿಯಾದೀತೆಂದು ನನಗನಿಸುತ್ತದೆ ಮಿತ್ರ-ರಾಷ್ಟ್ರಗಳೀಗ ಯುದ್ಧಕಾಲದ ಧ್ಯೇಯ, ತತ್ವ, ಉದ್ದೇಶಗಳನ್ನೆಲ್ಲ ಸಂಪೂರ್ಣವಾಗಿ ಮರೆತು, ತಮ್ಮ ಸಾಮ್ರಾಜ್ಯವನ್ನೂ, ವ್ಯಾಪಾರ-ಸಂಪತ್ತಿಗಳನ್ನೂ ಶಕ್ತಿ-ಸಾಮರ್ಥ್ಯಗಳನ್ನೂ ಬೆಳಸಿಕೊಳ್ಳುವದರಲ್ಲಿ ಮಗ್ನವಾಗಿವೆ ರಶ್ಯ, ಬ್ರಿಟನ, ಅಮೇರಿಕೆಯವರು ತಮ್ಮ ಬಾಹುಬಲದಿಂದ, ಬುದ್ಧಿಬಲದಿಂದ ಇಲ್ಲವೆ ಚಾಣಕ್ಯ-ನೀತಿಯ ಬಲದಿಂದ ಯುದ್ಧ ಗೆದ್ದವರು ಇವರಲ್ಲಿ ಒಂದೊಮ್ಮೆ ಸಾಮ್ರಾಜ್ಯತೃಷ್ಣೆ ಮೂಡಿದರೆ ಯಾ ಪ್ರಬಲವಾದರೆ ಯಾರೂ ಅಷ್ಟೊಂದು ಅಚ್ಚರಿಗೊಳ್ಳಬೇಕಾಗಿಲ್ಲ ಆದರೆ ಹಿಟ್ಲರನು ಕೊಟ್ಟ ವಜ್ರಾಘಾತವನ್ನು ತಾಳಲಾರದೆ ನಾಲ್ಕು ವರ್ಷಗಳಷ್ಟು ಕಾಲ ಮಣ್ಣುಮುಕ್ಕುತ್ತಿದ್ದ ಮತ್ತು ಗುಲಾಮಗಿರಿಯ ಗರ್ತೆಯಲ್ಲಿ ನರಳುತ್ತಿದ್ದ ಮತ್ತು ಮಿತ್ರ ಪ್ರಮುಖರ ನೆರವಿನಿಂದ ತಮ್ಮ ಕಾಲುಗಳ ಮೇಲೆ ಎದ್ದುನಿಂತ ಫ್ರಾನ್ಸ, ಹೊಲಂಡದಂತಹ ದೇಶಗಳೂ ಹಿಂದಿನಂತೆ ಸಾಮ್ರಾಜ್ಯ ಕಟ್ಟಲು ಅಣಿಯಾಗುತ್ತಿದ್ದುದು ಅತಿಶಯ ಸೋಜಿಗದ ಮಾತಲ್ಲವೇ? ಹಿಂದೆ ಫ್ರಾನ್ಸದ ಅಧಿಪತ್ಯದಲ್ಲಿದ್ದ ಉತ್ತರ ಆಫ್ರಿಕೆಯೊಳಗಿನ ಅಲ್ಜೀರಿಯಾ ಮತ್ತು ತುರ್ಕಸ್ಥಾನದ ಗಡಿಯಲ್ಲಿರುವ ಸೀರಿಯಾ ಮತ್ತು ಲೆಬನಾನ ಜನಾಂಗಗಳಿಗೆ ಫ್ರಾನ್ಸದ ಪತನವಾದ ನಂತರ ಸ್ವಾತಂತ್ರ್ಯದ ಆಮಿಷ ತೋರಿಸಿ ಆ ಜನಾಂಗಗಳನ್ನು ಮಿತ್ರರು ತಮ್ಮ ಪಕ್ಷದಲ್ಲಿ ಸೇರಿಸಿಕೊಂಡರು, ಮತ್ತು ಅವರಿಂದ ಅದಷ್ಟು ಯುದ್ಧ-ಸಹಾಯವನ್ನೂ ಪಡಕೊಂಡರು. ಆದರೆ ಮುಂದೆ ಜರ್ಮನರು ಹಿಂದೆ ಹಿಂದೆ ಸರಿಯುತ್ತ ನಡೆದ ಹಾಗೆ ಸ್ವತಂತ್ರ ಫ್ರಾನ್ಸದ ಅಧ್ವರ್ಯುಗಳೆಂದು ಎನಿಸಿಕೊಳ್ಳುವ ಜೇ॥ ಡಿಗೊಲೆಯವರ ಸರಕಾರವು ಆ ಜನಾಂಗಗಳಿಗೆ ಕೊಟ್ಟ ವಚನಗಳನ್ನೂ ಆಶ್ವಾಸನೆಗಳನ್ನೂ ಕಡೆಗಣಿಸಿ ಅಲ್ಲಿ ತಮ್ಮ ಸಾಮ್ರಾಜ್ಯವನ್ನೇ ಸ್ಥಾಪಿಸಹವಣಿಸಿದರು! ಅಲ್ಜೀರಿಯಾದೊಳಗೆ ಕಳೆದ ಏಪ್ರಿಲ್, ಮೇ ತಿಂಗಳಲ್ಲಿ ಜನರು ದಂಗೆಯನ್ನೆಬ್ಬಿಸಿದರೆಂದು ನೆವ ಮಾಡಿ ಸಾವಿರಾರು ಜನರನ್ನು ಡಿಗೊಲೆಯವರ ಫ್ರೆಂಚ ಸರಕಾರವು ಯಮಸದನಕ್ಕಟ್ಟಿದ ಕಥೆ ನೆನೆದರೆ, ನಾಝಿಗಳ ಕಾಲಡಿ ಹೊರಳುತ್ತ ನರಳುತ್ತ ಬಿದ್ದಿದ್ದ ಫ್ರಾನ್ಸವು ಇನ್ನೂ ಕೆಲವು ವರ್ಷ ಹಾಗೆಯೇ ಬಿದ್ದುಕೊಂಡು ಪಾರತಂತ್ರ್ಯದ ಸವಿ ಅನುಭವವನ್ನು ಅನುಭವಿಸುತ್ತಿದ್ದರೆ ಚೆನ್ನಾಗುತ್ತಿತ್ತೆಂದು ಒಂದು ಭಾವನೆಯುಂಟಾಗುತ್ತದೆ! ಇದೀಗ ಇಂಡೋ-ಚೀನದಲ್ಲೂ ಫ್ರೆಂಚರು ತಮ್ಮ ಸಾಮ್ರಾಜ್ಯ-ತೃಷ್ಣೆಯ ತಾಂಡವವನ್ನಾಡಲು ಉದ್ಯುಕ್ತರಾಗಿದ್ದಾರೆ ಇಂಡೋ ಚೀನ ದೇಶ ಬ್ರಹ್ಮದೇಶ-ಮಲಾಯಾಗಳ ಪೂರ್ವಕ್ಕೆ ಮತ್ತು ಚೀನದ ದಕ್ಷಿಣಕ್ಕುಂಟು ೧೫೦೦ ವರ್ಷಗಳ ಹಿಂದೆ ಆ ದೇಶದಲ್ಲಿ ಹಿಂದು ಅರಸರ ರಾಜ್ಯವಿತ್ತು ಈ ಹೊತ್ತಿಗೂ ಅಲ್ಲಿ ಹಿಂದಿನ ಹಿಂದುಗಳು ಕಟ್ಟಿದ ಗುಡಿ-ಗೋಪುರಗಳ ಅವಶೇಷಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದೆ ಹಿಂದುಗಳ ಹಿಂದಿನಿಂದ ಬುದ್ಧ ಅರಸರು ಅಲ್ಲಿ ಸಾಮ್ರಾಜ್ಯ ಮಾಡಿದರು ಮುಂದೆ ನಿಸರ್ಗದ ಕೋಪಕ್ಕೆ ಗುರಿಯಾಗಿ, ಆ ದೇಶದ ರಾಜಧಾನಿಯಾದ ಅಂಕೋರ ಮಹಾನಗರವು ಮೆಕಾಂಗ ನದಿಯ ನೀರಿನ ಸೆಳತಕ್ಕೆ ಬಲಿಯಾದ್ದರಿಂದ ಕೆಲ ಕಾಲ ಆ ಪ್ರದೇಶವು ನಿರ್ಜನ ಕಾಡಾಗಿ ಉಳಿಯಿತು ಅರ್ವಾಚೀನ ಕಾಲದಲ್ಲಿ ಫ್ರೆಂಚರು ಆ ದೇಶವನ್ನಾಕ್ರಮಿಸಿಕೊಂಡು ಆ ದೇಶದ ವಿವಿಧ ಸಂಪತ್ತನ್ನೆಲ್ಲ ಸೂರೆ ಮಾಡುತ್ತಿದ್ದರು ೧೯೪೧ರಲ್ಲಿ ಜಪಾನಿಯರು ಮೆಲ್ಲಗೆ ಆ ದೇಶವನ್ನಾಕ್ರಮಿಸಿದರು. ನಿರ್ಜೀವವಾಗಿ ನರಳುತ್ತಿದ್ದ ಫ್ರೆಂಚರಿಂದ ಜಪಾನಿಯರನ್ನು ಪ್ರತಿಭಟಿಸಲಾಗಲಿಲ್ಲ! ಮುಂದೆ ಜಪಾನಿಯರ ಶರಣಾಗತಿ ಬಂತು. ಶರಣಾಗತಿಯ ಕರಾರಿನಂತೆ ಇಂಡೋ-ಚೀನದಲ್ಲೂ ಅವರು ಶಸ್ತ್ರವನ್ನಿಟ್ಟು ಬದಿಗೆ ಸರಿಯಬೇಕಾಯಿತು. ಜಪಾನಿಯರ ಶರಣಾಗತಿಯು ಇಷ್ಟು ಬೇಗ ಒದಗಿಬರುವದೆಂದು ಯಾರೂ ಭಾವಿಸಿದ್ದಿಲ್ಲ ಆದರಿಂದ ಜಪಾನಿಯರಿಂದ ಇಂಡೋ-ಚೀನದ ರಾಜದಂಡವನ್ನು ಒಪ್ಪಿಸಿಕೊಳ್ಳಲು ಫ್ರೆಂಚರ ತಯಾರಿಯಾಗಿದ್ದಿಲ್ಲ. ಹೀಗಾಗಿ ಜಪಾನಿಯರು ರಾಜ್ಯತ್ಯಾಗ ಮಾಡಿದ ಕೂಡಲೇ ಇಂಡೋ-ಚೀನವು ರಾಜ (ಸರಕಾರ) ನಿಲ್ಲದ ರಾಜ್ಯವಾಯಿತು ಜಗತ್ತಿನಲ್ಲೆಲ್ಲ ಈವಾಗ ಭರದಿಂದ ಬೀಸುತ್ತಿರುವ ಸ್ವಾತಂತ್ರ್ಯ-ಪ್ರಿಯತೆಯ ಗಾಳಿ ಇಂಡೋ-ಚೀನದಲ್ಲೂ ಬೀಸುತ್ತಿದೆ. ಅಲ್ಲಿಯ ಜನರಿಗೂ ಸ್ವಾತಂತ್ರ್ಯ ಬೇಕಾಗಿದೆ. ಆ ಸ್ವಾತಂತ್ರ್ಯವನ್ನು ಸುಲಭವಾಗಿ ಸಂಪಾದಿಸಲು ರಾಜನಿಲ್ಲದ ಈ ಸಮಯವೇ ಸುವರ್ಣ-ಸಂಧಿಯೆಂದು ತಿಳಿದು ಅಲ್ಲಿಯ ಜನರು ತಮ್ಮ ಸ್ವತಂತ್ರ ಸರಕಾರವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸರಕಾರವನ್ನು ಪ್ರತಿಭಟಿಸಲು ೮ ಸಾವಿರ ಮೈಲು ದೂರದಲ್ಲಿರುವ ಫ್ರಾನ್ಸಕ್ಕೆ ಸಾಧ್ಯವಾಗಲಿಲ್ಲ. ಆದರಿಂದ ತಮಗೆ ನೆರವನ್ನೀಯಬೇಕೆಂದು ಫ್ರೆಂಚರು ಬ್ರಿಟಿಶ ಮಿತ್ರರಿಗೆ ಬಿನ್ನವಿಸಿರಬೇಕು! ಬ್ರಿಟಿಶರು ಇಂಡೋಚೀನದ ರಾಜಧಾನಿಯಾದ ಸಾಯಗಾಂವದಲ್ಲಿ ಬ್ರಿಟಿಶ ಮತ್ತು ಹಿಂದೀ ಸೈನ್ಯವನ್ನಿಳಿಸಿ ಸ್ಥಾನಿಕ ಸ್ವಾತಂತ್ರ್ಯ-ಪ್ರಿಯರೊಡನೆ ಹೋರಾಡುತ್ತಿದ್ದಾರೆ! ಇಂಡೋ ಚೀನದಲ್ಲಿದ್ದ ಜಪಾನಿಯರನ್ನು ನಿಃಶಸ್ತ್ರಗೊಳಿಸಲಿಕ್ಕೂ ಅಲ್ಲಿದ್ದ ಯುದ್ಧಕೈದಿಗಳನ್ನು ವಿಮೋಚನಗೊಳಿಸಲಿಕ್ಕೂ ತಾವು ಸೈನ್ಯ ತಂದಿದ್ದೇವಾಗಿ ಬ್ರಿಟಿಶರ ಪ್ರತಿಪಾದನೆ! ಇಂಡೋ ಚೀನ ಜನಾಂಗದವರ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಹಿಂದೀ ಸೈನಿಕರನ್ನು ಉಪಯೋಗಿಸತಕ್ಕದ್ದಲ್ಲವೆಂದು ವಿಲಾಯತಿಯೊಳಗಿನ "ಇಂಡಿಯಾ ಲೀಗ"ದವರು ಬ್ರಿಟಿಶ ಮಂತ್ರಿಮಂಡಳಕ್ಕೆ ನಿಷೇಧಪತ್ರ ಕಳಿಸಿಕೊಟ್ಟರೆ ಹಿಂದೀ ಸೈನಿಕರನ್ನು ತಾವು

The Agricultural & Industrial Bank, Ltd.
[Incorporated in British India, Liability of Members limited]
Head Office OONDAPOOR. S. I
Branches:-
ANKOLA, HAVERI, NAGAR,
BELGAUM, HUBLI SHIMOGA,
COONDAPOOR KARWAR, SIRSI,
DHARWAR, KUMTA, SOMWARPET,
GOKARN, MANGALORE VIRAJPET.
All kinds of Banking Business transacted.
Paid-up Capital & Reserves exceed Rs 4 LAKHS
Please apply for particulars.
1-9-1945

ಈ ಹೊಲಸು ಕೆಲಸಕ್ಕೆ ಉಪಯೋಗಿಸಿಕೊಳ್ಳಲಿಕ್ಕಿಲ್ಲೆಂದು ಮಂತ್ರಿಮಂಡಳದವರು ನುಡಿಯುತ್ತಾರೆ ಆದರೆ ಇಂಡೋಚೀನದಿಂದ ಬರುವ ವಾರ್ತೆಗಳನ್ನು ಪರಿಶೀಲಿಸಿದರೆ ಬ್ರಿಟಿಶ ಮಂತ್ರಿಗಳ ಮಾತಿಗೆ ಎಷ್ಟು ಬೆಲೆ ಕೊಡಬೇಕೆಂದೇ ನನಗೆ ತಿಳಿಯದು ಈಗೇನೋ ಇಂಡೋಚೀನದಲ್ಲಿ ಸಂಪೂರ್ಣ [illegible]ಕ್ಕಾಗಿ ಯುದ್ಧ ಸ್ಥಾನಿಕ ಸ್ವಾತಂತ್ರ್ಯ[illegible]ಗೂ ಅದನ್ನು ಪ್ರತಿಬಂಧಿಸುತ್ತಿರುವ ಫ್ರೆಂಚ ಮತ್ತು ಫ[illegible]ರ ಮಿತ್ರರಿಗೂ ನಡೆದಿರುವ ಯುದ್ಧ - ನಿಂತಿದೆಯಂತೆ ಈ ಸಂಧಿ ನಮೆಂಬುದು ಬರೀ ಕಾಲಹರಣಯ ಹಂಚಿಕೆಯಿರಬೇಕಾಗಿ ನನಗೊಂದು ಸಂದೇಹವುಂಟಾಗಿದೆ ಫ್ರಾನ್ಸದಿಂದ ಕಳಿಸುವ ನೌಕಾಬಲ ವಿಮಾನ ಬಲ ಮತ್ತು ಸೈನಿಕ ಬಲ ಬಂದು ಮುಟ್ಟುವ ವರೆಗೆ ಈ ಸಂಧಾನದ ಮಾತ ಕತೆ ನಡೆದ[illegible] ಅದು ಮುರಿದು ಹೋಗುವದೆಂದೂ ಬೇಗನೇ ಫ್ರೆಂಚರಿಗೂ ಇಂಡೋಚೀನಿಯರಿಗೂ ಹೋರಾಟವಪ್ರ[illegible] ನಾನು ಮೇಲ ಹೇಳಿದಂತೆ ಬಹಳ [illegible]ಯನ್ನು ಹೊರಡಿಸಿ ಎಲ್ಲೆಲ್ಲೂ ಸ್ವತಂತ್ರ ಸ್ಥಾಪಿಸಲು ಸಂಕಲ್ಪಿಸಿದ ಬ್ರಿಟಿಶರು ಫ್ರೆಂಚರು ಕೈಕೊಳ್ಳುತ್ತಿರುವ ಸ್ವಾತಂತ್ರ್ಯಾಪಹರಣದ ಈ ಘಾತಕಮಾರ್ಗದಲ್ಲಿ ಅಂತರಂಗದಿಂದಲೂ ಬಹಿರಂಗದಿಂದಲೂ ಸಹಾಯ ನೀಡುತ್ತಿದ್ದಾರೆ! ಚತುರ್ವಿಧ ಸ್ವಾತಂತ್ರ್ಯದ ಜಪ ಮಾಡುತ್ತಿದ್ದ ರೂಸ್ವೆಲ್ಟರ ಉತ್ತರಾಧಿಕಾರಿಗಳ ಟ್ರೂಮೆನ್ನರು ಮೌನದಿಂದ ಈ ಅನ್ಯಾಯವನ್ನು ನೋಡುತ್ತಿದ್ದಾರೆ!

ಇಂಡೋಚೀನದ ದಕ್ಷಿಣಕ್ಕೆ ಜಾವಾ ಸುಮಾತ್ರಾ ಬೋರ್ನಿಯೋ ಮೊದಲಾದ ಸಾವಿರಾರು ದ್ವೀಪಗಳಿವೆ ಈ ಎಲ್ಲ ಭಾಗಕ್ಕೆ ಪಾಶ್ಚಾತ್ಯರು ಇಂಡೋನೇಶಿಯಾ ಎಂದು ಹೆಸರಿಟ್ಟಿದ್ದಾರೆ ಇದರೊಳಗಿನ ಮಹತ್ವದ ಭಾಗವನ್ನು ಹಾಲಂಡದವರ (ಡಚ್ಚರ) ಕಳೆದ ೩೦೦-೩೫೦ ವರ್ಷಗಳಿಂದ ಆಳುತ್ತ ಬಂದಿದ್ದರು ಡಚ್ಚರ ಈ ಸಾಮ್ರಾಜ್ಯದಲ್ಲಿ ೭ ಕೋಟಿಯಷ್ಟು ಜನಸಂಖ್ಯೆಯುಂಟು ಜಾವಾ ನಡುಗಡ್ಡೆ ಒಂದರಲ್ಲೇ ೪ ಕೋಟಿಯುಂಟು ಬಹಳ ಸಂಪತ್ತು ಸಮೃದ್ಧ ದೇಶವಿದು ಪೆಟ್ರೋಲ ಕಲ್ಲಿದ್ದಲಿ ಚಹಾ ಕಾಫಿ, ಅಕ್ಕಿ ರಬ್ಬರ ಅಲ್ಲಿ ವಿಪುಲವಾಗಿ ಸಿಗುತ್ತವೆ ಅಲ್ಲಿ ಸಿಗುತ್ತಿರುವ ರಬ್ಬರು ಇಡೀ ಜಗತ್ತಿಗೆ ಸಾಕಾಗುವಷ್ಟುಂಟು ಆ ಸಂಪತ್ತನ್ನೆಲ್ಲ ಸೂರೆ ಮಾಡುತ್ತ ಡಚ್ಚರು ದೇಶೀಯರನ್ನು ಕೇವಲ ಗುಲಾಮಗಿರಿಯಲ್ಲಿಟ್ಟಿದ್ದರು! ೧೯೪೨ರಲ್ಲಿ ಜಪಾನಿಯರು ಡಚ್ಚರನ್ನು ಓಡಿಸಿ ಆ ಪ್ರದೇಶವನ್ನೆಲ್ಲ ತಮ್ಮ ವಶಕ್ಕೆ ತಕ್ಕೊಂಡರು ಇದನ್ನೀಗ ಯುದ್ಧದಲ್ಲಿ ಸೋತ ಜಪಾನಿಯರು ಬಿಡಬೇಕಾಗಿದೆ, ಬಿಡುತ್ತಿದ್ದಾರೆ ಇದೇ ಸಂದರ್ಭದಲ್ಲಿ ತಾವು ಸ್ವತಂತ್ರರಾಗುವದೊಳಿತೆಂದು ಜಾವಾ ಜನರು ಭಾವಿಸಿ, ಡಾ ಸೂಯಿಕರ್ನೋ ಮತ್ತು ಮಹಮ್ಮದ ಹಾಟಾ ಇವರ ನೇತೃತ್ವದಲ್ಲಿ ಸ್ವಾತಂತ್ರ್ಯದ ಬಾವುಟವನ್ನು ಏರಿಸಿದ್ದಾರೆ ಜಪಾನಿಯರನ್ನು ನಿರಸ್ತ್ರಗೊಳಿಸಿ ಅಲ್ಲಿ ಶಾಂತತೆ-ಸುವ್ಯವಸ್ಥೆಯನ್ನಿಡಲು ಹೋಗಿರುವ ಬ್ರಿಟಿಶ ಸೈನಿಕರೊಡನೆ ಅವರ ಹೋರಾಟವಿಲ್ಲ! ಹಿಂದೀ ರಾಷ್ಟ್ರೀಯ ಸಭೆಯ ಮಾರ್ಗವನ್ನು ತುಳಿದು ಅಹಿಂಸಾಮಯ-ಸತ್ಯಾಗ್ರಹದ ಅಮೋಘ ಅಸ್ತ್ರದಿಂದಲೇ ತಾವು ಸ್ವಾತಂತ್ರ್ಯ ಸಂಪಾದಿಸುವವಾಗಿ ಡಾ|| ಸೂಯಿಕರ್ನೋರವರು ಜಗಜ್ಜಾಹೀರ ಮಾಡಿದ್ದಾರೆ ಜಾವಾದ ಒಟ್ಟು ಜನಸಂಖ್ಯೆಯಲ್ಲಿ ೧೦೦ಕ್ಕೆ ೯೦ರಷ್ಟು ಜನರು ಡಾ|| ಸೂಯಿಕರ್ನೋರವರ ಅನುಯಾಯಿಗಳು ಅಟ್ಲಾಂಟಿಕ ಸನದಿಗೆ ಬೆಂಬಲ ಕೊಟ್ಟು ಹಾಲಂಡವು ಜಾವಾ ಜನರ ಸ್ವಾತಂತ್ರ್ಯದ ಈ ಚಳವಳಿಯನ್ನು ದಬಾಯಿಸಲು ಸಿದ್ಧವಾಗುತ್ತಿದೆ ಡಚ್ಚ ಮುಖ್ಯ ಪ್ರಧಾನ ಡಾ|| ವ್ಹಾನ ಮುಕ್ ಇವರು ಈವಾಗ ಜಾವಾದ ಮುಖ್ಯ ಸ್ಥಳವಾದ ಬಟೇವ್ಹಿಯಾಕ್ಕೆ ಹೋಗಿದ್ದಾರೆ ಅಮೇರಿಕೆಯಿಂದಲೂ ಇನ್ನಿತರ ಕಡೆಯಿಂದಲೂ ಡಚ್ಚ ಸೈನ್ಯ ಜಾವಾಕ್ಕೆ ತೆರಳದ ವಾರ್ತೆಯುಂಟು ಜಾವಾ ಪ್ರಜೆಯ ಮುಂದಾಳುಗಳು ಡಚ್ಚ ಸರಕಾರದೊಡನೆ ಸ್ನೇಹ-ಬುದ್ಧಿಯಿಂದ ವಿಚಾರ ವಿನಿಮಯ ಮಾಡಲು ಸಿದ್ಧರಿದ್ದಾಗ್ಯೂ ಸರಕಾರದವರು ಅದಕ್ಕೆ ಸಿದ್ಧರಿಲ್ಲ! ಡಾ| ಸೂಯಿಕರ್ನೋರವರು ಜಪಾನಿಯರ ಒಳಸಂಚಿನಲ್ಲಿ ಸೇರಿ ಪ್ರಸ್ತುತ ಚಳವಳಿಯನ್ನು ಹೂಡಿರುವರೆಂದೂ ಶತ್ರು ಪಕ್ಷದ [illegible]ಳೊಡನೆ ತಾವು ವ್ಯವಹರಿಸಬಯಸುವದಿಲ್ಲವೆಂದು ಡಚ್ಚ ಸರಕಾರದ ಅಂಬೋಣ! ಬ್ರಿಟಿಶರಾಗಲಿ ಅಮೇರಿಕೆಯವರಾಗಲಿ ಹಾಲಂಡ ಸರಕಾರದ ನೀತಿ ಹಿಂಡಲು ಇಲ್ಲವೆ ಉದ್ದಾಮತನವನ್ನು ನಿರ್ಬಂಧಿಸಲು ಸ್ವಲ್ಪವೂ ಯತ್ನಿಸುವದಿಲ್ಲ

ವಿಶ್ವ ಮಹಾರಾಷ್ಟ್ರಗಳಲ್ಲಿ ಇಂಥಹ ಸ್ವಾರ್ಥ ಸಾಮ್ರಾಜ್ಯಾಭಿಲಾಷೆ ಮತ್ತು ತತ್ವಶೂನ್ಯ ಪ್ರವೃತ್ತಿ ಹೆಚ್ಚು ನೆಲೆ ನಿಂತಿರುವದರಿಂದಲೇ ಯುರೋಪದೊಳಗಿನ ವಿವಾದ ವಿಷಯಗಳನ್ನು ಬಗಹರಿಸಿ ಭಾವಿ ಶಾಂತತೆ ಸಂಪತ್ತಿನ ಕಾರ್ಯವನ್ನು ಸುಕರಗೊಳಿಸುವದಕ್ಕೋಸ್ಕರ ಲಂಡನದಲ್ಲಿ ಸೇರಿದ ಪಂಚ ಮಹಾರಾಷ್ಟ್ರಗಳ (ಅಂದರೆ ರಶಿಯಾ ಅಮೇರಿಕಾ, ಬ್ರಿಟನ, ಫ್ರಾನ್ಸ ಹಾಗು ಚೀನಗಳ) ವಿದೇಶ ಸಚಿವರು ಯಾವ ವಿವಾದವನ್ನು ಬಗೆಹರಿಸದೆ ಒಬ್ಬರ ಮೇಲೊಬ್ಬರು ಆರೋಪ ಪ್ರತ್ಯಾರೋಪ ಮಾಡುತ್ತ ಕಳೆದ ವಾರ ಸ್ವದೇಶಗಳಿಗೆ ತಿರುಗಿ ಹೋಗಬೇಕಾಯಿತು! ವಿಶೇಷವಾಗಿ ಈ ಸಭೆಯಲ್ಲಿ ಪರಾಜಿತ ಜರ್ಮನಿ, ಮತ್ತು ಇತರ ದೇಶಗಳ ವ್ಯವಸ್ಥೆ ಹೇಗೆ ಮಾಡಬೇಕೆಂಬುದರ ವಿಚಾರವಾಗುವದಿತ್ತು ಈ ಸಭೆಯು ರಶಿಯಾ ಬ್ರಿಟಿಶ ಅಮೇರಿಕೆಗೆ ಅಷ್ಟೇ ಸಂಬಂಧಪಟ್ಟಿರಬೇಕೆಂದು ಮೊಟ್ಟಮೊದಲು ವಾದವುಂಟಾಯಿತು ಬ್ರಿಟಿಶರು ಎಷ್ಟೆಂದರೂ ಅಪ್ರತಿಮ ಧೂರ್ತರು ಮತ್ತು ಕಾರಸ್ಥಾನಿಗಳು ರಾಜಕಾರಣದಲ್ಲಿ ಅವರ ಕೈ ಹಿಡಿಯುವದು ಯಾರಿಗೂ ಸಾಧ್ಯವಿಲ್ಲ! ಚೀನ ಮತ್ತು ಫ್ರಾನ್ಸ ಈ ರಾಷ್ಟ್ರಗಳ ಪ್ರತಿನಿಧಿಗಳು ಈ ಸಭೆಯಲ್ಲಿದ್ದರೆ ತಮಗೆ ಬೆಂಬಲ ಸಿಗುವದೆಂಬ ದೂರಾಲೋಚನೆಯಿಂದ ಅವರು ಚೀನ-ಫ್ರಾನ್ಸಗಳಿಗೆ ಈ ಸಭೆಗೆ ನಿಮಂತ್ರಿಸಬೇಕಾಗಿ ವಾದಿಸಿದರು, ಮತ್ತು ಆ ವಾದದ ಮೇಲೆ ಗೆದ್ದರು ಅದರಂತೆ ಐದೂ ರಾಷ್ಟ್ರಗಳ ಪ್ರತಿನಿಧಿಗಳು ಸಭೆ ಸೇರಿದರು ಸಭೆಯಲ್ಲಿ ಮೊದಲು ಇಟಾಲಿಯ ವಸಾಹತ್ಯದ ಪ್ರಶ್ನೆ ಬಂತು ಆದರೆ ಇಟಾಲಿಗೆ ಹೊಂದಿ ಬಾಲ್ಕನ ದೇಶಗಳಿವೆ, ಭೂಮಧ್ಯ ಸಮುದ್ರವಿದೆ ಅದರಿಂದ ಇಟಾಲಿಯ ಸಮಸ್ಯೆಯೊಡನೆ ಅನುಷಂಗಿಕವಾಗಿ ಈ ಪ್ರಶ್ನೆಗಳನ್ನೂ ಆಲೋಚಿಸಬೇಕಾಯಿತು ರಶ್ಯರು ಈಗಾಗಲೇ ಬಾಲ್ಕನ ದೇಶಗಳಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದಾರೆ ಬ್ರಿಟಿಶರಿಗೆ ಅದರಿಂದ ಹೊಟ್ಟೆಯಲ್ಲಿ ಉರಿಯುತ್ತಿದೆ! ತಮ್ಮ ಪ್ರಭಾವವೂ ಆ ಪ್ರದೇಶದಲ್ಲುಳಿಯಬೇಕೆಂದು ಬ್ರಿಟಿಶರ ಹವಣಿಕೆ ಅಮೇರಿಕೆಗೆ ಈ ಬಾಲ್ಕನ ಸಮಸ್ಯೆಯಲ್ಲಿ ಅಷ್ಟೇನು ಹಿತಸಂಬಂಧವಿಲ್ಲ ಈ ಚರ್ಚೆಯಲ್ಲಿ ಅದು ಒಂದೇ ತಟಸ್ಥವುಳಿಯುವದು ಇಲ್ಲವೆ ರಶ್ಯರ ಭಿಡೆಗೆ ಬಲಿಯಾಗಿ ಅವರಿಗೆ ಬೆಂಬಲ ಕೊಡಬಹುದು ಫ್ರಾನ್ಸ ಮತ್ತು ಚೀನಗಳಿಗೆ ಈ ಚರ್ಚೆಯಲ್ಲಿ ಸೇರಿಸಿಕೊಂಡರೆ ಮಾತ್ರ ಬ್ರಿಟಿಶರಿಗೆ ಅನುಮೋದಕ-ಬೆಂಬಲಿಗರು ಸಿಗುತ್ತಾರೆ ರಶ್ಯರ ಜಾಣ ಪರದೇಶ ಮಂತ್ರಿ ಮೋಲೋಟೋವ್ಹರಿಗೆ ಇದು ತಿಳಿದು ಬಂದು, ಬಾಲ್ಕನ ಸಮಸ್ಯೆಗೂ ಫ್ರಾನ್ಸ ಚೀನಗಳಿಗೂ ಸಂಬಂಧವಿಲ್ಲದ್ದರಿಂದ ಅವಕ್ಕೆ ಚರ್ಚೆಯ ಕಾಲಕ್ಕೆ ಮತಾಧಿಕಾರವಿರಬಾರದೆಂದು ಅವರು ವಾದವನ್ನೆಬ್ಬಿಸಿದರು ಈ ವಾದ ವಿಕೋಪಕ್ಕೆ ಹೋಗಿ, ಬ್ರಿಟಿಶ ವಿದೇಶ ಮಂತ್ರಿ ಬೆವ್ಹಿನ ಮತ್ತು ಮೊಲೊಟೋವ್ಹರೊಳಗೆ ಮಾತಿನ ಮಲ್ಲಯುದ್ಧ ನಡೆಯಿತೆಂದು ಬಲ್ಲವರು ಹೇಳುತ್ತಾರೆ ಮಿತ್ರರೊಳಗೆ ಈ ತಿಕ್ಕಾಟ ದಿನೇ ದಿನೇ ಬೆಳೆಯುತ್ತಲಿದೆ ಅದರಿಂದ ಯುರೋಪದಲ್ಲಿ ಶಾಂತತೆಯುಂಟಾಗುವದರ ಬದಲು ಬೇಗನೇ ಪುನಃ ರಣಭೈರವಿಯ ಪ್ರತಾಪ ಕಂಡುಬರುತ್ತದೋ ಏನೋ ಎಂದು ಅಂಜಿಕೆಯುಂಟಾಗಿದೆ

ಸ್ಥಾನಿಕ ವೃತ್ತಾಂತ

(೫ನೇ ಪುಟದಿಂದ ಮುಂದರಿಸಿದ್ದು)

ಯರಲ್ಲಿ ನವಚೈತನ್ಯವನ್ನುಂಟು ಮಾಡುವ ಭಾಷಣ ಮಾಡಿದರು ಅವರು ಹೇಳಿದ್ದೇನೆಂದರೆ ಇಲ್ಲಿಯ ಹೆಂಗಸರ ಸ್ಥಿತಿ ಬಹಳ ಕರುಣಾಸ್ಪದವಿದೆ ೧೦೦ರಲ್ಲಿ ೯೮ ಸ್ತ್ರೀಯರು ನಿರಕ್ಷರಿಗಳು ಹಳ್ಳಿಯ ಪ್ರದೇಶಗಳಲ್ಲಿ ಹೆಂಗಸರ ಬಗ್ಗೆ ಯಾವ ಸೌಕರ್ಯವೂ ಇರುವದಿಲ್ಲ ಹಿಂದುಸ್ಥಾನದಲ್ಲಿ ಪ್ರತಿ ವರ್ಷ ಸರಾಸರಿ ೨ ಲಕ್ಷ ಸ್ತ್ರೀಯರು ಯೋಗ್ಯ ಉಪಚಾರದ ಅನುಕೂಲತೆ ಇಲ್ಲದ್ದರಿಂದ ಪ್ರಸವಕಾಲದಲ್ಲಿ ಸಾಯುತ್ತಾರೆ! ಸ್ತ್ರೀ ವರ್ಗಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಅವರ ಸುಧಾರಣೆ ಮಾಡಿಸಲಿಕ್ಕೆ ನಾವು ಮಹಿಳೆಯರೇ ಮುಂದಾಗಬೇಕು ದಾರಿದ್ರ್ಯವೇ ಸ್ತ್ರೀವರ್ಗದ ಅವನತಿಗೆ ಒಂದು ಕಾರಣ ಹೆಂಗಳೆಯರು ಹೊತ್ತು ಹೋಗದ ನೂಲುವದು ಮುಂತಾದ ಕೈಗಾರಿಕೆಯ ಉದ್ದಿಮೆಗಳನ್ನು ಕೈಕೊಂಡು ತಮ್ಮ ಉತ್ಪನ್ನ ಕಲಮುಟ್ಟಿಗಾದರೂ ಬೆಳಸಿಕೊಳ್ಳುವ ಪ್ರಯತ್ನ ಮಾಡಬೇಕು ಹೊಲಗಿತ್ತಿಯ ಮತ್ತು ದಾದಿಯ ಕೆಲಸ ಮಾಡಲಿಕ್ಕೂ ನಾವು ಮುಂದಾಗಬೇಕು ಅದು ಹೀನ ತರಗತಿಯ ಕೆಲಸವೆಂದು ತಿಳಿಯುವದು ತೀರ ತಪ್ಪು ನಮ್ಮ ಮತ್ತು ನಮ್ಮವರ ಸೇವೆ ಶುಶ್ರೂಷೆಗಳನ್ನು ನಾವೇ ಮಾಡಬೇಕು ಸಧ್ಯಕ್ಕೆ ಕಸ್ತೂರಬಾ ಸ್ಮಾರಕ ನಿಧಿಯ ವಿಶ್ವಸ್ತರು ಬೆಂಗಳೂರಿನಲ್ಲಿ ಹೆಂಗಳೆಯರಿಗೆ ಗ್ರಾಮಸೇವೆ, ಲೋಕಸೇವೆ ಕಲಿಸುವದಕ್ಕಾಗಿ ಒಂದು ಶಿಕ್ಷಣ ಶಿಬಿರವನ್ನು ತೆರೆದಿದ್ದಾರೆ ಅನುಕೂಲವಿದ್ದವರು ಅಲ್ಲಿ ಹೋಗಿ ಶಿಕ್ಷಣ ಪಡೆದು ತಮ್ಮ ತಮ್ಮ ಊರಲ್ಲಿ ಕಾರ್ಯವನ್ನಾರಂಭಿಸಬೇಕು ಓದು ಬರೆಯಲು ಬಾರದ ಭಗಿನಿಗಳಿಗೆ ನಾವು ಅಕ್ಷರಜ್ಞಾನ ಮಾಡಿಕೊಟ್ಟು ದೇಶದಲ್ಲೂ ಜಗತ್ತಿನಲ್ಲೂ ಏನೇನೂ ನಡೆದಿದೆಯೆಂಬುದನ್ನು ತಿಳಕೊಳ್ಳುವ ಪ್ರವೃತ್ತಿಯನ್ನು ಅವರಲ್ಲುಂಟುಮಾಡಬೇಕು ಇದೀಗ ಹಿಂದು ಕಾಯದೆಯಲ್ಲಿ ಕೆಲವೊಂದು ಸುಧಾರಣೆ ಮಾಡಿ ಮಹಿಳಾ ವರ್ಗಕ್ಕೆ ಕೆಲವೊಂದು ಹಕ್ಕು ಸವಲತ್ತುಗಳನ್ನು ಕೊಡುವ ಉದ್ಯೋಗ ನಡೆದಿದೆ ಕೆಲವು ಹೆಂಗಳೆಯರು ಈ ಸುಧಾರಣೆಗಳನ್ನು ತಿಳುವಳಿಕೆಯಿಲ್ಲದೆ ವಿರೋಧಿಸುತ್ತಿದ್ದುದು ಶೋಚನೀಯ ಇತ್ಯಾದಿ

ಈಹೊತ್ತು ಮುಂಜಾನೆ ಶ್ರೀ ಕಮಲಾದೇವಿಯವರು ರಾಷ್ಟ್ರಸೇವಾ ದಲದವರ ಧ್ವಜವಂದನೆಯ ಕಾರ್ಯಕ್ರಮಕ್ಕೆ ಹೋಗಿದ್ದರು ಅಲ್ಲಿ ಅವರು ಚಿಕ್ಕದೊಂದು ಭಾಷಣ ಮಾಡಿದರು ಅದರ ಸಾರ ಹೀಗಿದೆ — ಈ ಧ್ವಜವು ನಮ್ಮದು, ನಮ್ಮ ರಾಷ್ಟ್ರದ್ದು ಅದು ನಮ್ಮ ಸ್ವಾತಂತ್ರ್ಯಾಭಿಲಾಷೆಯ ಪ್ರತೀಕ ಆದರೆ ಈಗಿನ ಪರಿಸ್ಥಿತಿಯಲ್ಲಿ ಅದನ್ನು ಎಂದು ಬೇಕಾದಾಗ ಮತ್ತು ಎಲ್ಲಿ ಬೇಕಾದಲ್ಲಿ ಹಾರಿಸಲು ನಮಗೆ ಸ್ವಾತಂತ್ರ್ಯವಿಲ್ಲ! ಸರಕಾರದವರು ಅದರ ಮೇಲಿನ ಬಂದಿಯನ್ನು ಈಗ ತೆಗೆದದ್ದರಿಂದ ನಾವು ಅದನ್ನಿಲ್ಲಿ ಹಾರಿಸುತ್ತಿದ್ದೇವೆ ಪ್ರಸಂಗ ಬಂದರೆ ನಾವು ರಾಷ್ಟ್ರಕ್ಕಾಗಿ ಸಾಯಲು ಸಿದ್ಧರಾಗಿರಬೇಕೆಂಬುದೇ ರಾಷ್ಟ್ರಸೇವಾ ದಲದ ಹೆಗ್ಗುರಿ ಜಪಾನದಲ್ಲಿ ಪ್ರತಿಯೊಂದು ತಾಯಿಯು ತನ್ನ ಮಕ್ಕಳಿಗೆ ಕಲಿಸಿಕೊಡುತ್ತಿದ್ದ ಮಂತ್ರ ಇದೇ ಅದರಿಂದಲೇ ಜಪಾನ ಜನರು ತಮ್ಮ ರಾಷ್ಟ್ರಕ್ಕಾಗಿ ಸಂತೋಷದಿಂದ ಪ್ರಾಣಾರ್ಪಣೆ ಮಾಡುತ್ತಿರುವದನ್ನು ನಾವು ನೋಡುತ್ತಿದ್ದೇವೆ ಇತ್ಯಾದಿ. ಈಹೊತ್ತು ಮಧ್ಯಾಹ್ನ ಶ್ರೀಮತಿಯವರು ಅಂಕೋಲೆಯ ಮಾರ್ಗವಾಗಿ ಕುಮಟೆಗೆ ಹೊರಟು ಹೋಗಿದ್ದಾರೆ

ವಿದ್ಯಾರ್ಥಿ, ಶಿಕ್ಷಕ ಮತ್ತು ಉದ್ಯೋಗಸ್ಥರಿಗೆ

ಸ್ಟೇಶನರಿ, ಮೈಸೂರ ಕಾಗದ ಹೆಚ್ಚಿನ ವಿಲ್ಲಿನ ಕಾಗದ (ಬಿಳೀ ಹಾಗೂ ಬಫ್) ವಗೈರೆ ಸವಲತ್ತಿನ ದರದಿಂದ, ರೋಖ ಹಾಗೂ ಕಿರಕೋಳ ಸಿಗುತ್ತವೆ

ಬಾಲಕೃಷ್ಣ ಸ್ಟೋರ್ಸ, ಕುಮಟಾ

ತಂಬಾಕು ಸೇಲ ನೋಟ ಬೂಕುಗಳು

ನಮ್ಮಲ್ಲಿ ಮಾರಾಟಕ್ಕೆ ಸಿಗುತ್ತವೆ

ಬರೆಯಿರಿ —

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆಯಾಗಿಲ್ಲ ಈಗ ರಾತ್ರಿ ಮಂಜು ಬೀಳುತ್ತಿದೆ, ಮುಂಜಾವಿನಲ್ಲಿ ಮೋಡಗಾಳಿ ಬೀಸುತ್ತಿದೆ ಊರಲ್ಲಿ ಚಳಿಜ್ವರ, ವಿಷಮಜ್ವರ ಮೊದಲಾದ ಬೇನೆಗಳ ಹಾವಳಿ ನಡೆದಿದೆ ಮೊನ್ನೆಯೇ ಮೂರು ಮಂದಿ ಪ್ರೌಢ ಮಕ್ಕಳು ವಿಷಮಜ್ವರದಿಂದ ತೀರಿಕೊಂಡರು

ಕಳೆದ ವಾರ ತಿಳಿಸಿದಂತೆ ಬುಧವಾರ ತಾ ೩ನೇಗೆ ಊರಲ್ಲಿ ಗಾಂಧಿ-ಜಯಂತೀ ಉತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯಿತು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ "ಗಾಂಧಿ ಚೌಕ" ಪಟಾಂಗಣವನ್ನೆಲ್ಲ ತಳಿರು ತೋರಣಗಳಿಂದ ಸಿಂಗರಿಸಿದ್ದರು. ಮಧ್ಯಾನ್ಹ ೪॥ ಘಂಟೆಗೆ ಸರಿಯಾಗಿ ಅಲ್ಲಿಂದ ಮಹಾತ್ಮರ ಭಾವಚಿತ್ರವನ್ನು ಅಂದವಾಗಿ ಅಲಂಕರಿಸಿದ ರಥದಲ್ಲಿಟ್ಟುಕೊಂಡು ಮೆರವಣಿಗೆ ಹೊರಟಿತು ರಥಕ್ಕೆ ೭ ಎತ್ತಿನ ಜೋಡಿಗಳನ್ನು ಕಟ್ಟಿದ್ದರು ಈ ಬದಿಗೆ ಇಂಥ ನೋಟ ಅಪೂರ್ವವೇ! ಮೆರವಣಿಗೆಯ ಮುಂಭಾಗದಲ್ಲಿ ೩ ಬೇಂಡುವಾದ್ಯಗಳು ಮೊಳಗುತ್ತಿದ್ದವು ಅವರ ಹಿಂದಿನಿಂದ ಶಾಲೆಗಳ ವಿದ್ಯಾರ್ಥಿಗಳೂ ರಾಷ್ಟ್ರ ಸೇವಾ ದಲದ ಸ್ವಯಂಸೇವಕರೂ ಶಿಸ್ತಿನಿಂದ ಕವಾಯಿತು ಮಾಡುತ್ತಿದ್ದರು. ಮೆರವಣಿಗೆಯ ಮಾರ್ಗದಲ್ಲೆಲ್ಲ ಬಗೆಬಗೆಯ ತೋರಣಗಳು ಕಂಗೊಳಿಸುತ್ತಿದ್ದವು ಕಾರ್ತಿಕ ಹುಣ್ಣಿಮೆಯ ವನಭೋಜನದ ಮಹೋತ್ಸವವೊಂದನ್ನು ಬಿಟ್ಟರೆ ಇಷ್ಟು ತೋರಣಗಳು ಬೇರೆ ಯಾವ ಉತ್ಸವಕ್ಕೂ ಬೀಳುವದಿಲ್ಲ ಹೆಚ್ಚು-ಕಡಿಮೆ ೧೦೦೦ದಷ್ಟು ಸ್ತ್ರೀ-ಪುರುಷರು ಮೆರವಣಿಗೆಯಲ್ಲಿ ಸೇರಿದ್ದರು ಅಲ್ಲಲ್ಲಿ ಆರತಿಗಳನ್ನು ಕೊಳ್ಳುತ್ತ ಉತ್ಸವವು ಎಸ್ತಪೇಟೆ, ನೆಲ್ಲಿಕೇರಿ, ಮಣಕಿ ಸಾಲೆ, ಕಚೇರಿ-ರಸ್ತೆ, ಕೋರ್ಟ-ರಸ್ತೆ, ಗಾಡಗಾರ ಪೇಟೆ, ತಾಂಬ್ರದ ಪೇಟೆ, ಕಾರೀಬಾಗಿಲ ರಸ್ತೆ, ಹೊನ್ನಾವರ ಕಮಾನ-ರಸ್ತೆ ಮತ್ತು ದೊಡ್ಡ ಪೇಟೆಗಳ ಮಾರ್ಗವಾಗಿ ಸಂಜೆ ೭೦ ಸುಮಾರಿಗೆ ತಿರುಗಿ ಗಾಂಧಿ ಚೌಕಿಗೆ ಬಂತು ಪಟಾಂಗಣವೂ ಮುಂದಿನ ರಸ್ತೆಯೂ ಜನರಿಂದ ಕಿಕ್ಕಿರಿದು ತುಂಬಿ ಹೋಗಿತ್ತು ಅಲ್ಲಿ ಮೊದಲು ರಾಷ್ಟ್ರೀಯ ವ್ಯಾಯಾಮ ಶಾಲೆಯವರು ಕೆಲವು ಪ್ರೇಕ್ಷಣೀಯ ಶಕ್ತಿ-ಪ್ರಯೋಗಗಳನ್ನು ಮಾಡಿ ತೋರಿಸಿದರು ಆಮೇಲೆ ವೇ॥ ಸಾವಳಾ ಭಟ್ಟ ಮತ್ತು ರಾ॥ ವಾಮನರಾವ ಹೊಡಿಕೆ ಮಾಸ್ತರ ಇವರು ಭಾಷಣ ಮಾಡಿ, ಗಾಂಧಿ ಮಾಹಾತ್ಮ್ಯದ ರಹಸ್ಯವನ್ನು ತಿಳಿಸಿ ಹೇಳಿದರು ಕಳೆದ ೩ ವರ್ಷಗಳ ದಬ್ಬಾಳಿಕೆಯಿಂದ ಮಹಾತ್ಮರ ಬಗ್ಗೂ ಹಿಂದೀ ರಾಷ್ಟ್ರೀಯ ಸಭೆಯ ಬಗ್ಗೂ ಜನರಲ್ಲಿದ್ದ ಭಕ್ತಿ ಗೌರವ-ಅಭಿಮಾನಗಳು ಎಳ್ಳಷ್ಟೂ ಕುಗ್ಗದೆ ಈಗ ಅವು ಇಮ್ಮಡಿಯಾಗಿವೆಯೆಂಬುದನ್ನು ಈ ಉತ್ಸವವನ್ನೂ ಜನರ ಉತ್ಸಾಹವನ್ನೂ ನೋಡಿಕೊಂಡು ಅಧಿಕಾರಿಗಳು ಮನವರಿಕೆ ಮಾಡಿಕೊಳ್ಳಬೇಕೆಂದು ರಾ॥ ಹೊಡಿಕೆಯವರು ಆಳರಸರಿಗೆ ಸೂಚನೆ ಕೊಟ್ಟರು ಭಾಷಣಗಳ ನಂತರ ಮಂಗಳಾರತಿ, ಪ್ರಸಾದ ಹಂಚಾಣಿಕೆ, ಧ್ವಜಾರೋಹಣ, ರಾಷ್ಟ್ರಗೀತ ಮೊದಲಾದ ಕಾರ್ಯಕ್ರಮವಾಗಿ ರಾತ್ರಿ ೯ ಘಂಟೆಯ ಸುಮಾರಿಗೆ ಉತ್ಸವದ ಪರಿಸಮಾಪ್ತಿಯಾಯಿತು ಹಲಕೆಲವು ಹಳ್ಳಿಗಳಲ್ಲೂ ಮಂಗಳವಾರ ಇಲ್ಲವೆ ಬುಧವಾರ ಜಯಂತಿ ಉತ್ಸವವಾದ ಸುದ್ದಿಯುಂಟು

ಬಸ್ತಿಪೇಟೆಯ ರಾ॥ ಶಿವಪ್ಪ ಮಾಲಿಷನಾಥ ಪ್ರಭು ಇವರು ೪ ೬ ದಿನಗಳ ಕಾಹಿಲೆಯಿಂದ ಕಳೆದ ಗುರುವಾರ ನಸಕಿಗೆ ವೈಕುಂಠವಾಸಿಗಳಾದರೆಂದು ನಮೂದಿಸಲು ವ್ಯಸನವಾಗುತ್ತಿದೆ ಇಲ್ಲಿಯ ಗಾಂಧಿ ಭಕ್ತರಲ್ಲೊಬ್ಬರಿವರು. ೭೫ ವರ್ಷಗಳ ಮುದುಕರಾದಾಗ್ಯೂ ೩೫ ವರ್ಷಗಳ ತರುಣನ ಉತ್ಸಾಹ ಶಕ್ತಿ ಅವರಲ್ಲಿತ್ತು! ಹಳೆಯ ಕಾಲದ ಅನುಭವ ಮಾಹಿತಿಗಳನ್ನೂ ಅವರಿಂದ ಪಡೆಯಬಹುದಾಗಿತ್ತು ವೈಕುಂಠಾಧಿಪತಿಯು ಅವರಿಗೆ ಸದ್ಗತಿಯನ್ನೀಯಲಿ!

ಹೊಸಕೇರಿಯ ನಾರಾಯಣ ಶೇಟ ಪಟ್ಟೆ ಇನ್ನು ಇವರು ಕಳ್ಳತನದಿಂದ ದೊಡ್ಡ ಪ್ರಮಾಣದ ಮೇಲೆ ಗಾಂಜಾ ವ್ಯಾಪಾರ ಮಾಡುತ್ತಿದ್ದರೆಂದು ಪ್ರವಾದ ಕೇಳಿ ಬರುತ್ತಿತ್ತು ಆದರೆ ಅವರ ಗುನ್ಹೆ ಹಿಡಿಯುವದು ಕಷ್ಟವಾಗಿತ್ತು. ಮೊನ್ನೆ ತಾ ೬ಕ್ಕೆ ಗೋಕರ್ಣದೊಳಗಿನ ಅಬಕಾರಿ ಅಧಿಕಾರಿಗಳಾದ ರಾ॥ ಕುಲಕರ್ಣಿಯವರು ತಮ್ಮ ಸಿಬಂದಿ ಸಹಿತ ಬಾತಮಿಯಿಂದ ಅವರ ಮನೆಗೆ ಮುತ್ತಿಗೆ ಹಾಕಿ, ೧೬.೩ ತೊಲೆಯಷ್ಟು ಗಾಂಜಾ ಜಪ್ತ ಮಾಡಿದ್ದಾರೆ ಇಷ್ಟು ಪರಿಮಾಣದ ಕಳ್ಳ ಗಾಂಜಾ ಇನ್ನಾವ ಪ್ರಕರಣದಲ್ಲೂ ಸಿಕ್ಕಿಲ್ಲವಂತೆ

ನಾಡುಮಾಸ್ಕೇರಿಯಲ್ಲಿ ಕಳೆದ ಮಂಗಳವಾರ ಗಾಂಧಿ-ಜಯಂತಿ ಉತ್ಸವವಾಯಿತು. ೩ ವರ್ಷಗಳ ಹಿಂದೆ ಇದ್ದ ಧ್ವಜಸ್ತಂಭವನ್ನು ಸರಕಾರದವರು ಕಡಿದೊಗೆದಲ್ಲೇ ಹೊಸ ಕಂಬ ನೆಟ್ಟು ಧ್ವಜ ಹಾರಿಸಲಾಯಿತು

ಹೊನ್ನಾವರ— ಕಳೆದ ತಾ ೨೬ರಿಂದ ಬುಧವಾರ ತಾ ೩ರ ವರೆಗೆ ಇಲ್ಲಿ ಗಾಂಧಿ-ಜಯಂತಿ ಸಪ್ತಾಹವಾಚರಿಸಲ್ಪಟ್ಟಿತು ತಾ ೨೬ಕ್ಕೆ ರಾಷ್ಟ್ರ ಸೇವಾದಲದವರು ಪ್ರಭಾತಫೇರಿ, ಧ್ವಜವಂದನೆಗಳನ್ನು ಮಾಡಿ ಮುಂದೆ ಸೂತ್ರಯಜ್ಞ ನಡಿಸಿದರು ಸೂತ್ರಯಜ್ಞದಲ್ಲಿ ಹೆಂಗಳೆಯರೂ ಸೇರಿದ್ದರು ತಾ ೩೦ಕ್ಕೆ ಮಾಸಿಕ ಧ್ವಜವಂದನೆಯಾಯಿತು ಸಪ್ತಾಹದ ಕಾಲದಲ್ಲಿ ದಿನಾಲೂ ಸಂಜೆ ಗಾಂಧಿಜಿಯವರ ಕಾರ್ಯದ ತಿಳುವಳಿಕೆ ಮಾಡಿಕೊಡುವ ಭಾಷಣಗಳಾಗುತ್ತಿದ್ದವು. ಸೂತ್ರಯಜ್ಞ ನಡೆದಾಗಲೂ ಮಹಾತ್ಮರ ವ್ರತಗಳ ಬಗ್ಗೆ ಮಾಹಿತಿ ಕೊಡಲ್ಪಡುತ್ತಿತ್ತು ಬುಧವಾರ ಮಹಾತ್ಮರ (ಹಿಂದುಗಳ ಪಂಚಾಂಗದಂತೆ) ಜನ್ಮದಿನ ಅಂದು ಪುನಃ ಪ್ರಭಾತಫೇರಿ, ಧ್ವಜವಂದನೆಗಳಾದವು ಸಂಜೆ ೫।ಕ್ಕೆ ಮಹಾತ್ಮರ ಭಾವಚಿತ್ರದ ಮೆರವಣಿಗೆ-ಉತ್ಸವವಾಯಿತು ಹೆಣ್ಣು ಗಂಡು ವಿದ್ಯಾರ್ಥಿಗಳು ಕೂಡಿ ಸಾವಿರಾರು ಜನರು ಕೂಡಿದ್ದರು ಊರೊಳಗಿನ ಮುಖ್ಯ ಮುಖ್ಯ ಬೀದಿಗಳೊಳಗಿಂದ ಹಾದು ಮೆರವಣಿಗೆ ಟಪ್ಪಾಲ-ಹೊರಗೆ ಬಂದ ಮೇಲೆ ಅಲ್ಲಿ ಸಭೆಯಾಗಿ ಶ್ರೀ॥ ಶಿವರಾವ ಶಾಸ್ತ್ರಿ, ರಾ॥ ಫಿಲಿಪೋಸ ವಗೈರೆರು ಮಹಾತ್ಮರ ಗುಣಗಾನ ಮಾಡುವ ಭಾಷಣಗಳನ್ನು ಮಾಡಿದರು ಯಾರೋ ಕುಚೋದ್ಯ ಮಾಡಿ ಇಟ್ಟ ಚಮಗಾರ ಬಾಂಧವರಿಗೆ ಕಲಿಸಿಕೊಟ್ಟು ಈ ಸಭೆಯಲ್ಲಿ ಮಾತಾಡಲಿಕ್ಕೆ ಕಳಿಸಿದ್ದರು ಅವರು ಮುಂದೆ ಬಂದು ತಮಗೆ ಪೇಟೆಯಲ್ಲಿ ಯಾರೂ ಒಂದು ಅಂಗಡಿಯನ್ನು ಭಾಡಿಗೆಗೆ ಕೊಡುವದಿಲ್ಲೆಂದೂ ತಮ್ಮನ್ನು ಕೂಡಿಕೊಂಡು ನಡೆಯುವದಿಲ್ಲೆಂದೂ ದೂರಿಕೊಂಡರು. ಆ ಮಾತಿಗೆ ರಾ॥ ಡಾಲಿಸಕ್ರಿ ವಕೀಲರು ಉತ್ತರ ಕೊಟ್ಟು ಮ್ಯುನಿಸಿಪಾಲಿಟಿಯ ಕಡೆಯಿಂದ ಚಮಗಾರ ಬಾಂಧವರಿಗೆ ಅಂಗಡಿ ಕಟ್ಟಿಸಿಕೊಡುವ ವ್ಯವಸ್ಥೆ ಮಾಡುತ್ತೇವೆಂದು ಭರವಸೆ ಕೊಟ್ಟರು. ಇಲ್ಲಿಯ ಗ್ರಾಮೋದ್ಯೋಗ ಶಾಲೆಯಲ್ಲಿ ಹರಿಜನರೊಬ್ಬರಿಗೂ ಪ್ರವೇಶ ಸಿಕ್ಕಿಲ್ಲವಂಬದೊಂದು ದೂರಿತ್ತು ಅದನ್ನು ತಾವು ಪರಿಹರಿಸುತ್ತೇವಾಗಿ ರಾ॥ ಕಲ್ಲಾಪುರ ವಕೀಲರು ಆಶ್ವಾಸನೆ ಕೊಟ್ಟರು ಕೊನೆಗೆ ರಾಷ್ಟ್ರಗೀತ ಮುಂತಾದವಾಗಿ ಉತ್ಸವದ ಸಮಾಪ್ತಿಯಾಯಿತು ಹಳದೀಪುರದಲ್ಲೂ ಗಾಂಧಿ ಜಯಂತಿ ಸಪ್ತಾಹ ಆಚರಿಸಲ್ಪಟ್ಟಿತೆಂದು ವರದಿ ಬಂದಿದೆ ಅಲ್ಲಿ ಕಳೆದ ತಾ ೨೩ರಿಂದ ರಾಷ್ಟ್ರಸೇವಾದಲದ ಒಂದು ಶಾಖೆ ತೆರೆಯಲ್ಪಟ್ಟಿದೆ ಕಾಸರಕೋಡದಲ್ಲೂ ಬುಧವಾರ ಪ್ರಭಾತಫೇರಿ, ಧ್ವಜವಂದನೆ, ಭಾಷಣಗಳಾದವಂತೆ ಇಲ್ಲಿಯ ಸೂತ್ರಯಜ್ಞದಲ್ಲಿ ನೂತವರಿಂದ ೭೬ ಮತ್ತು ಹಳದೀಪುರದಲ್ಲಿ ನೂತವರಿಂದ ೩೧ ಲಾಡಿಗಳು ಮಹಾತ್ಮಾಜಿಯವರಿಗೆ ಕಾಣಿಕೆಯಾಗಿ ಬಂದಿವೆ ಇನ್ನೂ ನೂಲು ಬರುತ್ತಿದೆಯಂತೆ

ಇದೇ ಕಳೆದ ತಾ ೩೦ಕ್ಕೆ ಕೂಡಿದ ಹೊನ್ನಾವರ ತಾಲೂಕ ಅಡಿಕೆ ಬೆಳೆಗಾರರ ಸಂಘದ ಮಹಾಸಭೆಯಲ್ಲಿ, ಜಿಲ್ಲಾ ಲೋಕಲ್ ಬೋರ್ಡಿನವರು ಲೋಕಲ್ ಫಂಡನ್ನು ರೂಪಾಯಿಗೆ ೩ ಆಣೆ ಮಾಡಿದ್ದರ ಖಂಡನೆ ಮಾಡಿ, ಅರ್ಧಕ್ಕಿಳಿಸುವ ಸೂಚನೆಗೆ ಅನುಕೂಲ ಮತ ಕೊಟ್ಟ ಸದಸ್ಯರ ತೀವ್ರ ನಿಷೇಧ ಮಾಡುವ ಗೊತ್ತುವಳಿಯೊಂದು ಸ್ವೀಕೃತವಾಗಿದೆ

ಬೈಲೂರ— (ತಾ ೩-೧೦-೪೫) ಇಲ್ಲಿಯ ಕನ್ನಡ ಶಾಲೆಯಲ್ಲಿ ಹಿಂದೆ ೩ ಮಂದಿ ಶಿಕ್ಷಕರಿದ್ದರು ಇತ್ತಲಾಗಿ ಮುಖ್ಯಾಧ್ಯಾಪಕರಾದ ರಾ॥ ಶಂಕರ ನಾಯ್ಕ ಮತ್ತು ಸಹಾಯಕ ಶಿಕ್ಷಕ ರಾ॥ ವಾಸುದೇವ ಕಾಮತ ಹೀಗೆ ಇಬ್ಬರೇ ಶಿಕ್ಷಕರಿದ್ದರು ಈಗ ರಾ॥ ನಾಯ್ಕರೊಬ್ಬರನ್ನೇ ಇಲ್ಲಿಟ್ಟು ರಾ॥ ಕಾಮತರಿಗೆ ಭಟಕಳಕ್ಕೆ ವರ್ಗ ಮಾಡಿದ್ದಾರೆ. ಈ ವರ್ಗಾವರ್ಗಿಯ ಸುದ್ದಿ ಬಂದಂದಿನಿಂದ ಊರಲ್ಲೆಲ್ಲ ಅಸಮಾಧಾನವುಂಟಾಗಿದೆ ರಾ॥ ಕಾಮತರ ಕೆಲಸಕ್ಕೆ ಊರವರು ಬಹಳ ಮೆಚ್ಚಿದ್ದಾರೆ ಮನಮುಟ್ಟಿ ದುಡಿದು ಅವರು ಮುಲ್ಕಿಯವರೆಗೆ ಕಲಿಸುತ್ತಿದ್ದರು. ರಾ॥ ನಾಯ್ಕರ ಬಗ್ಗೆ ಜನಾಭಿಪ್ರಾಯ ಅಷ್ಟು ಅನುಕೂಲವಿಲ್ಲ. ರಾ॥ ನಾಯ್ಕರಿಗೆ ಶಾಲೆಯ ವ್ಯವಹಾರದ ವಿನಹ ಇನ್ನಿತರ ವ್ಯವಹಾರಗಳೂ ಉಂಟು ಆದರಿಂದ ಶಿಕ್ಷಣದ ಕಡೆಗೆ ಅವರ ಲಕ್ಷ ಕಡಿಮೆ ಆದರಿಂದ ವಿದ್ಯಾರ್ಥಿಗಳು ಬೇಸರಗೊಳ್ಳುತ್ತಾರೆ ಸರಿಯಾಗಿ ವರ್ಗಗಳಿಗೆ ಹೋಗಿ ಕಲಿಯಬೇಕೆಂಬ ಉತ್ಸಾಹ ವಿದ್ಯಾರ್ಥಿಗಳಲ್ಲಿ ಉಂಟಾಗುವದಿಲ್ಲ ಆದಾಗ್ಯೂ ರಾ॥ ಕಾಮತರು ತಮ್ಮ ಪರಿಶ್ರಮದಿಂದ ಆ ಕೊರತೆಯನ್ನು ಶಕ್ಯವಿದ್ದಷ್ಟು ತುಂಬಿ ತರುತ್ತಿದ್ದರು. ಹೀಗೆ ವಿದ್ಯಾರ್ಥಿಗಳಲ್ಲಿ ಪ್ರಿಯರಾಗಿದ್ದ ಶಿಕ್ಷಕರನ್ನು ಬೇರೆಡೆಗೆ ಕಳಿಸಿ ವಿದ್ಯಾರ್ಥಿಗಳಿಗೆ ಬೇಸರ ಹುಟ್ಟಿಸುವಂಥ ಶಿಕ್ಷಕರೊಬ್ಬರನ್ನು ಇಲ್ಲಿಟ್ಟರೆ ಶಾಲೆ ಮುಚ್ಚುವ ಪ್ರಸಂಗ ಬರಬಹುದೆಂದು ಊರವರು ಭೀತಿಗೊಂಡಿದ್ದಾರೆ ಇಬ್ಬ ಶಿಕ್ಷಕರಿದ್ದದ್ದನ್ನು ಕಡಿಮೆ ಮಾಡಿ ರಾ॥ ಕಾಮತರನ್ನು ವರ್ಗ ಮಾಡಲು ಕಾರಣವೆಂದರೆ ಶಾಲೆಯಲ್ಲಿ ಹುಡುಗರ ಸಂಖ್ಯೆ ಕಳೆದ ಬೇಸಿಗೆಯಲ್ಲಿ ಕಡಿಮೆಯಾದದ್ದು ಕಳೆದ ಚಳಿಗಾಲದಲ್ಲೂ ಬೇಸಿಗೆಯಲ್ಲೂ ಈ ಊರಲ್ಲಿ, ವಿಶೇಷವಾಗಿ ಶಾಲೆಯ ನೆರೆಹೊರೆಯಲ್ಲಿ, ಜ್ವರ ಬೇನೆಯ ಹಾವಳಿ ಹೆಚ್ಚಾದ್ದರಿಂದ ಶಾಲೆಯ ಹುಡುಗರ ಸಂಖ್ಯೆ ಬಹಳಷ್ಟು ಕುಗ್ಗಿತ್ತು. ಆದರೆ ಈ ಸ್ಥಿತಿ ಕಾಯಂ ಅಲ್ಲ, ಬಹಳ ಕಾಲ ಉಳಿಯುವಂತಹದೂ ಅಲ್ಲ ಆದ್ದರಿಂದ ರಾ॥ ಕಾಮತರ ವರ್ಗಾವರ್ಗಿಯನ್ನು ರದ್ದುಗೊಳಿಸಿ, ಇಬ್ಬರೂ ಶಿಕ್ಷಕರನ್ನು ಇಲ್ಲಿಡಬೇಕಾಗಿಯೂ, ಒಂದು ವೇಳೆ ಒಬ್ಬನೇ ಶಿಕ್ಷಕನನ್ನು ಇಲ್ಲಿಡುವದಾಗಿ ಶಾಲಾ ಬೋರ್ಡಿನವರ ನಿರ್ಣಯವಾಗುವಲ್ಲಿ ರಾ॥ ಕಾಮತರನ್ನು ಇಲ್ಲಿಟ್ಟು ರಾ॥ ನಾಯ್ಕರನ್ನು ವರ್ಗ ಮಾಡಬೇಕಾಗಿಯೂ ಊರವರು ಶಾಲಾ ಬೋರ್ಡಿನ ಆಡಳಿತ ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ ಆ ಅಧಿಕಾರಿಗಳು ಊರವರ ಪ್ರಾರ್ಥನೆಯನ್ನು ಮನ್ನಿಸುತ್ತಾರೋ ಅಥವಾ ಸರ್ವಾಧಿಕಾರ ನಡಿಸುತ್ತಾರೋ ನೋಡಬೇಕಾಗಿದೆ

ಭಟಕಳ— (ತಾ ೪-೧೦-೪೫) ಸೀಧಾ ಕ್ಷೇತ್ರದಲ್ಲಿ ನಿಯಮಗಳಂತೆ ಎಲ್ಲರಿಗೂ ಸೀಧಾ ಸಿಗಬೇಕು, ಅದನ್ನು ಕೊಡುವದು ಯಾ ಕೊಡದಿರುವದು ಸೀಧಾ-ಅಧಿಕಾರಿಯ ಮರ್ಜಿಯ ಮೇಲೆ ಅವಲಂಬಿಸಿಲ್ಲ, ಹೀಗೆ ಬಲ್ಲವರು ಹೇಳುತ್ತಾರೆ ಆದರೆ ಕಾಸ್ಕಿಡಿ ನಾಕೆಯ ಬಳಿಯಲ್ಲಿ ಮಹಾದೇವ ಶೆಟ್ಟಿ ಎಂಬವನ ಚಹಾ ಅಂಗಡಿಯುಂಟು ಅವನು ಅರ್ಜಿ ಮಾಡಿಕೊಂಡರೂ ಇಲ್ಲಿಯ ಸೀಧಾ ಅಧಿಕಾರಿಗಳು ಸಕ್ಕರೆಯ ಸೀಧಾ ಕೊಡಿಸಿಲ್ಲವಂತೆ ಅಲ್ಲೇ ಸಮೀಪದಲ್ಲಿ ಮೋಟಾರ ಗೆರೇಜ ಬಳಿ ಮೊನ್ನೆ ಮೊನ್ನೆ ಒಂದು ಚಹಾ ಅಂಗಡಿ ತೆರೆಯಲ್ಪಟ್ಟಿದೆ ಆ ಅಂಗಡಿಯವನಿಗೆ ಕೂಡಲೇ ಸಕ್ಕರೆ ಸಿಕ್ಕಿತಂತೆ! ಹೀಗೇಕಾಗುತ್ತದೆಂಬುದರ ಚೌಕಶಿಯನ್ನು ಜಿಲ್ಲಾಧಿಪರು ಮಾಡಬೇಕಾಗಿ ಅರಿಕೆಯಿದೆ

ಕ್ರಿಸ್ತೀ-ಬಾಂಧವರ ಕಳ್ಳ ಸರಾಯಿಯ ವ್ಯಾಪಾರವೀಗ ನಿಂತಿದೆಯಂತೆ ಆದರೆ ನಾಮಧಾರಿ-ಬಾಂಧವರ ವ್ಯಾಪಾರ ಮಿಗಿಲಾಗಿದೆಯೆಂಬ ಊರ ತುಂಬ ವಾರ್ತೆ ಕೇಳಿ ಬರುತ್ತಿದೆ ಕಾವಾರ ಕ್ಷೇತ್ರಿಯ ನಾಮಧಾರಿ ಸುಧಾರಣಾ ಸಂಘದವರು ಪ್ರಯತ್ನ ಮಾಡಿದಲ್ಲಿ ಈ ಹೊಲಸು ತೊಳೆದು ಹೋಗಬಲ್ಲದು

ಶಿರಸಿ— (ತಾ ೫-೧೦-೪೫) ಈ ವರ್ಷ ಮಹಾತ್ಮರ ಜಯಂತಿಯು ಕ್ರಿಸ್ತಿ ಪಂಚಾಂಗದಂತೆ ತಾ ೨ಕ್ಕೆ ಮತ್ತು ಹಿಂದು ಪಂಚಾಂಗದಂತೆ ತಾ ೩ಕ್ಕೆ (ಭಾದ್ರಪದ ವ॥ ೧೨) ಬಂದಿತು ಆದರಿಂದ ಇಲ್ಲಿಯ ಕಾಂಗ್ರೆಸ ಕಾರ್ಯಕರ್ತರು ಎರಡೂ ದಿನ ಜಯಂತಿಯ ಉತ್ಸವದ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು ಮಂಗಳವಾರ ತಾ

ನೇ ಮುಂಜಾನೆ ೯ರಿಂದ ಬುಧವಾರ ಸಂಜೆ ೬ರ ತನಕ ಅಖಂಡ ೩೧ ತಾಸು ಸೂತ್ರಯಜ್ಞ ನಡೆಯಿತು ನೂರಾರು ಸ್ತ್ರೀ ಪುರುಷರೂ ಬಾಲ ಬಾಲಿಕೆಯರೂ ಅದರಲ್ಲಿ ಉತ್ಸಾಹದಿಂದ ಸೇರಿದ್ದರು ಬುಧವಾರ ಮುಂಜಾನೆ ನಗರ ಸಂಕೀರ್ತನೆ ಮತ್ತು ಧ್ವಜವಂದನೆಗಳಾದವು ಸಂಜೆಯಲ್ಲಿ ಮಹಾತ್ಮರ ಭಾವಚಿತ್ರದ ಉತ್ಸವವಾಯಿತು ಉತ್ಸವದ ಮೆರವಣಿಗೆಯು ಗಾಂಧಿ ಚೌಕಿ[illegible]ಮುಟ್ಟಿ ಬರುತ್ತ ಅಲ್ಲಿ ಸಭೆಯಾಗಿ, ರಾ॥ ರಾ॥ ತಿಮ್ಮ ಶೇಷಪ್ಪನ ಭೂಷಾ, ಬೋಮುಂಡೇ ಇವರು ಮಹಾತ್ಮರ ಗುಣಗಾನ ಮಾಡಿ ಅವರಿಗೆ ದೀರ್ಘಾಯುರಾರೋಗ್ಯ ದಯಪಾಲಿಸಲು ದಯಾಘನ ದೇವರನ್ನು ಪ್ರಾರ್ಥಿಸಿದರು ಮಹಾತ್ಮರಿಗೆ ಕಾಣಿಕೆಯಾಗಿ ೨೮೩ ಲಡಿಗಳೂ ರೂ ೩೩೦ರಷ್ಟು ನಗದಿ ಹಣವೂ ಕೂಡಿದ್ದು ಕಾಣಿಕೆಯಾಗಿ ಬಂದ ಒಂದು ತೆಂಗಿನ ಕಾಯಿಯನ್ನು ಲಿಲಾಂವ ಮಾಡಿಸಲಾಗಿ ರಾ॥ ನೋಟೆನವರು ಅದನ್ನು ರೂ ೪೧ಕ್ಕೆ ಕೊಂಡುಕೊಂಡರು

ಇಲ್ಲಿಯ ಹನುಮಾನ ವ್ಯಾಯಾಮ ಶಾಲೆಗೆ ದಿ॥ ಸೀತಾರಾಮ ನಾರಾಯಣಭಟ್ಟ ಅಕ್ಷೇಕರ (ಸರಜ್ಞ) ಇವರು ತಮ್ಮ ಪೂಜ್ಯ ಅಗ್ರಜರ ಸ್ಮರಣಾರ್ಥ ದಾನ ಕೊಟ್ಟ ಕಟ್ಟಡವು ಶಾಲೆಯ ಚಟುವಟಿಕೆಗಳಿಗೆ ಅನುಕೂಲವಿಲ್ಲದ ಕಂಡು ಬಂದದ್ದರಿಂದ ಅದನ್ನು ಶಾಲೆಯ ಅಧಿಕಾರಿಗಳು ಕಳೆದ ವರ್ಷ, ರಾ॥ ಅಕ್ಷೇಕರ ಸಮ್ಮತಿಯಿಂದಲೇ ಲಿಲಾಂವಿಗೆ ಇಟ್ಟಿದ್ದರು ಲಿಲಾಂವಿನಲ್ಲಿ ಅದನ್ನು ರಾ॥ ಗಣಪತಿ ಜಿಗಳ ಅಲೇಕರ ಇವರು ರೂ ೬೧೦ಕ್ಕೆ ಕೊಂಡುಕೊಂಡಿದ್ದರು ಈ ಹಣದಿಂದ ಶಾಲೆಯ ವರೆಗ ಶ್ರೀಮತಿ ಜಿ ಎವಾ ಫರ್ನಾಂಡಿಸ ಇವರು ತಮ್ಮ ಕ್ರಿಸ್ತಲೋಕವಾಸಿ ಪತಿಗಳ ಸ್ಮರಣಾರ್ಥ ಸಂಸ್ಥೆಗೆ ದಾನ ಕೊಟ್ಟ ವಿಶಾಲ ಸ್ಥಳದಲ್ಲಿ ವ್ಯಾಯಾಮ ಶಾಲೆಗೆ ಅನುಕೂಲವಾಗುವಂಥ ಹೊಸ ಕಟ್ಟಡವನ್ನು ಕಟ್ಟಿಸಲಾಯಿತು ಈ ಕಟ್ಟಡಕ್ಕೆ ರಾ॥ ಅಕ್ಷೇಕರರೊಡನೆ ಅವರ ಇಚ್ಛೆಯಂತೆ ನಾರಾಯಣ ಭಟ್ಟ ಅಕ್ಷೇಕರ ವ್ಯಾಯಾಮ ಮಂದಿರ ಎಂದೇ ಹೆಸರಿಡಲಾಗಿದೆ ಕಳೆದ ತಾ ೯ಕ್ಕೆ ರಾ॥ ಕೇಶವೈನ ಶೇಣವಿ ರಾಯರ ಹಸ್ತದಿಂದ ಅದರ ಉದ್ಘಾಟನೆಯಾಯಿತು ರಾ॥ ಅಕ್ಷೇಕರ ಸೀತಾರಾಮ ಭಟ್ಟರು ಈ ಸಮಾರಂಭಕ್ಕೆ ಬಂದಿದ್ದರು ಅವರು ಅದೇ ಸಮಾರಂಭದಲ್ಲಿ ಶ್ರೀ ವಿ. ಎಫ್ ಎಸ್ ಫರ್ನಾಂಡೀಸರ ಭಾವಚಿತ್ರದ ಅನಾವರಣವನ್ನು ಮಾಡಿದರು ಕಳೆದ ವರುಷ (೧೯೪೪-೪೫) ದ ಬಗೆಗೆ ಶ್ರೀ ಮಾರುತಿ ದೇವ ಗುಡಿಯ ಫಂಡಿನಿಂದ ರೂ ೧೦೦ ಆಡಿಕೆ ವ್ಯಾಪಾರಿಗಳ ಸಂಘದಿಂದ ರೂ ೫೦, ಡಿಸ್ಟ್ರಿಕ್ಟ ಬೋರ್ಡಿನಿಂದ ರೂ ೪, ಸರಕಾರದಿಂದ ರೂ ೩೦ ಹೀಗೆ ದೇಣಿಗೆಗಳು, ಫೀ ಹಣ ಮತ್ತು ಸದಸ್ಯ ವರ್ಗಣಿ ಮುಂತಾದವುಗಳಿಂದ ೧೬೩ ೧೪ ೧೧ರಷ್ಟು ಹಣ ಪ್ರಾಪ್ತಿಯಾಗಿದ್ದು, ಶಿಕ್ಷಕರ ಸಂಬಳ ಮಾಸಿಕ ದುರುಸ್ತಿ ವಗೈರೆಗಳ ಬಗ್ಗೆ ರೂ ೬೯ ೧೪ ೯ ಖರ್ಚು ಬಂದಿದೆ ನಾಗರಿಕರು ಸಂಸ್ಥೆಗೆ ತಕ್ಕ ಸಹಾಯ ಮಾಡಿ ಅದರ ಅ[illegible]ಗಳನ್ನು [illegible] ತರಲು ನೆರವಾಗಬೇಕಾಗಿ ಅಪೇಕ್ಷೆಯುಂಟು

ಲೆವೀಸ್ ಫಂಡನ್ನು ಅ[illegible]ಡಿ ಮಾಡಿ, ಬೋರ್ಡಿನ ಲೋಕೋಪಯೋಗಿ ಕಾಮಗಾರಿಗಳ ಸಲುವಾಗಿ ಹಣದ ಪೂರೈಕೆ ಮಾಡಬೇಕೆಂದು ಡಿ ಎಲ್ ಬೋರ್ಡಿನ ಸದಸ್ಯರು ವಾದಿಸುವಂತೆ ಇದೇ ಬರುವ ತಾ ೯ಕ್ಕೆ ಕೂಡುವ ಸಭೆಯಲ್ಲಿ ಅಧ್ಯಕ್ಷ ಉಪಾಧ್ಯಕ್ಷರೂ ಸದಸ್ಯರೂ ಪ್ರವಾಸ ಭತ್ತೆ, ಸಭೆಯ ಹಾಜರಿ ಭತ್ತೆ ವಗೈರೆ ತೆಗೆದುಕೊಳ್ಳಕೂಡದೆಂದು ಒಂದು ಠರಾವನ್ನು ಮಾಡಬೇಕಾಗಿ ಹುಲೇಕಲ್ಲ ಸೀಮೆಯ ಜನರು ಜಿಲ್ಲಾ ಬೋರ್ಡಿಗೆ ಒಂದು ಅರ್ಜಿ ಮಾಡಿದ್ದಾರೆ ಸದಸ್ಯರಿಗೆ, ಅಧ್ಯಕ್ಷ ಉಪಾಧ್ಯಕ್ಷರಿಗೆ ಭತ್ತೆಯ [illegible] ನಿಂತು [illegible] ಬಂದದ್ದಲ್ಲಿ ಆ ಹಣವು [illegible] ಅವರ [illegible] ಬೇಕಾದ್ದು ಇಲ್ಲ ಹೀಗೆ ಆ ಅರ್ಜಿದಾರರು ವಾದಿಸಿ, ಭತ್ತೆ ಬಿಟ್ಟುಕೊಡುವ ತೀರ್ಮಾನವಾದಲ್ಲಿ ಬೋರ್ಡಿಗೆ ರೂ ೧೩೦೦೦-೧೫೦೦೦ ರಷ್ಟು ಉಳಿತಾಯವಾಗುವದೆಂದು ಲೆಕ್ಕ ಹಾಕಿದ್ದಾರೆ ಬೋರ್ಡಿನ ಸದಸ್ಯರ ಸತ್ವ-ಪರೀಕ್ಷೆ ಮಾಡಲು ಹುಲೇಕಲ್ಲಿನವರು ಈ ಅರ್ಜಿ ಮಾಡಿದಂತೆ ತೋರುತ್ತಿದೆ ! ಆದರೆ ಬೋರ್ಡಿನ ಸದಸ್ಯರು ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರೆಂದು ಹೇಳಬರುವಂತಿಲ್ಲ

ಸಿದ್ದಾಪುರ— (ತಾ ೩-೧೦-೪೫) ಅರ್ಬನ್ ಬ್ಯಾಂಕಿನವರು ಕಳೆದ ತಿಂಗಳಲ್ಲಿ ತರಿಸಿದ ಸರಕಾರದವರಾಸ್ಕೃ ಜವಳಿಯಲ್ಲಿ ಒಕ್ಕೇ ಅರಿವೆಯಲ್ಲಿ ಬ್ಯಾಂಕಿನವರ ಬಳಗದವರಿಗೇ ಸಿಕ್ಕಿತೆಂದು 'ವೃತ್ತ'ದಲ್ಲಿ ಪ್ರಕಟವಾದ ಟೀಕೆ ನಿರಾಧಾರವಾದದೆಂದು ಬ್ಯಾಂಕಿನ ಕಾರ್ಯದರ್ಶಿಗಳು ತಿಳಿಸುತ್ತಾರೆ ಸದರಿ ಜವಳಿಯಲ್ಲಿ ೪ ಜೋತರ ಜೋಡಿಗಳಿದ್ದವೆಂತಲೂ ಮಾಮಲೇದಾರರು ಲೇಖಿ ಶಿಫಾರಸು ಮಾಡಿದ ಜನರಿಗೆ ಅವನ್ನು ಮಾರಿದ್ದಾರೆಂತಲೂ ಅವರ ಅಂಬೋಣ

ಯಲ್ಲಾಪುರ— ಇದೇ ಬರುವ ತಾ ೧೪ಕ್ಕೆ ಇಲ್ಲಿಯ ಕನ್ನಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಧಾರವಾಡದ ರಾ॥ [illegible] ಶಾಲಕಳ್ಳಿಯವರ ಅಧ್ಯಕ್ಷತೆಯಲ್ಲಿ ನಡಸಲ್ಪಡುವ ಪರೀಕ್ಷೆಯೆಂದು ವ್ಯವಸ್ಥೆ ಮಾಡಿದ್ದಾರೆ ಸಂವಾದಗಳು ಒಂದು ನಾಟಕವನ್ನೂ ಆಡಿತೋರಿಸಲು ತಯಾರು ನಡಿಸಿದ್ದಾರೆ

ಅಂಕೋಲಾ— ತಾ ೨ ರಿಂದ ೮ ರ ವರೆಗೆ ಇಲ್ಲಿ ಗಾಂಧಿ ಜಯಂತಿಯು ಆಚರಿಸಲಾಯಿತು ೧ನೆಯ ದಿನ ಪ್ರಭಾತಫೇರಿ ಧ್ವಜವಂದನೆ ಸಭೆಗಳು ದವು ೨ನೆಯ ದಿನ ಹರಿಜನರ ಇತರ ಕೇರಿ ಹರಿಜನರ ಉದ್ಧಾರದ ಯೋಜನೆಯನ್ನು ಸಿದ್ಧಪಡಿಸಿದ ೩ನೆಯ ದಿನ ಹರಿಜನ ಕೇರಿಗಳ ಇತರ ಕೇರಿಗಳ ಸ್ವಚ್ಛ ಕಾರ್ಯಗಳಾದವು ೪ನೆಯ ದಿನ ರಾಷ್ಟ್ರ ಸೇವಾ ದಳದ ಬಗ್ಗೆ ಊರಲ್ಲಿ ಭಿಕ್ಷೆ ಕೂಡಿಸಲಾಯಿತು, ೫ ೬ನೆಯ ದಿನಗಳಲ್ಲಿ ನೂಲುವ ಯಜ್ಞ ನಡೆಯಿತು ಮತ್ತು ಕೊನೆಯ ದಿನ ಅಂದರೆ ಬುಧವಾರ ಪ್ರಭಾತ ಪ್ರದಕ್ಷಿಣೆ ಧ್ವಜ ವಂದನೆ, ಮಹಾತ್ಮರ ಭಾವಚಿತ್ರದ ಉತ್ಸವ ಹರಿಜನ ವಿದ್ಯಾರ್ಥಿ ನಿಲಯದಲ್ಲಿ ಮಾವಿನ ಗಿಡ ನೆಡುವದು ವಗೈರೆ ಕಾರ್ಯಕ್ರಮಗಳಾದವು ಈ ಸಪ್ತಾಹದ ಎಲ್ಲಾ ದಿನಗಳಲ್ಲಿ ರಾ॥ [illegible] ಕೀರ್ತನಕಾರರ ದಾ॥ ಹರಿವರ್ಧನರ ಕೀರ್ತನೆಗಳಾದವು ಮಹಾತ್ಮರಿಗೆ ಕಾಣಿಕೆಯೆಂದು ಹತ್ತಿ ನೂಲಿನ ಲಡಿಗಳು ಬಂದಿವೆ

ಕಾರವಾರ— (ತಾ ೨೯ ೯ ೪೫) ಜಿಲ್ಲೆಯೊಳಗಿನ ರಾಷ್ಟ್ರಸೇವಾ ದಳಗಳ ಸಂಘಟನೆಯನ್ನು ವ್ಯವಸ್ಥಿತ ಮತ್ತು ಕ್ರಮಬದ್ಧಗೊಳಿಸುವದಕ್ಕಾಗಿ ಇದೇ ಬರುವ ತಾ ೨೫ ೧೦ ೪೫ರಿಂದ ತಾ ೧೦ ೧೧ ೪೫ರ ವರೆಗೆ ಇಲ್ಲೊಂದು ಶಿಕ್ಷಣ ಶಿಬಿರ ತೆರೆಯಲಿದ್ದಾರೆ ಸೇವಾ ದಳದ ಪ್ರತಿಯೊಂದು ಶಾಖೆಯವರು ಈ ಶಿಬಿರಕ್ಕೆ ಕನಿಷ್ಟ ಪಕ್ಷಕ್ಕೆ ೨-೩ ಮಂದಿಯನ್ನಾದರೂ ಕಳಿಸಿಕೊಡಬೇಕಾಗಿಯೂ ಶಾಖೆಯಿಲ್ಲದ ಸ್ಥಳಗಳಿಂದ ಸಹ ಬರುವ ಜನರನ್ನು ಶಿಬಿರದಲ್ಲಿ ಸೇರಿಸಿಕೊಳ್ಳಲಾಗುವದೆಂತಲೂ, ಶಿಬಿರದಲ್ಲಿ ಸೇರಬಯಸುವವರು ತಾ ೧೦ರೊಳಗೆ ತಮಗೆ ತಿಳಿಸಬೇಕೆಂತಲೂ ಸೇವಾದಳದ ದಳಪತಿಗಳಾದ ರಾ॥ ಮಾವಿನಕುರ್ವೆಗರು ಬಿನ್ನವಿಸುತ್ತಾರೆ

ಹತ್ತಿಕಾಳಿನ ನಿಯಂತ್ರಿತ ಧಾರಣೆಯನ್ನು ಏರಿಸಿದ ಬಗ್ಗೆ ಅಂಕೋಲೆಯ ಸುದ್ದಿಗಾರರು "ವೃತ್ತ"ಕ್ಕೆ ಕಳಿಸಿದ ಟೀಕೆಯನ್ನು ಅನುಲಕ್ಷಿಸಿ ಕಾರವಾರದ ಗೃಹಸ್ಥರೊಬ್ಬರು ಬರೆಯುತ್ತಾರೆ ಬೇರೆ ಬೇರೆ ಬ್ಯಾಂಕಿನವರು ತಮಗೆ ಹಂಚಿಕೊಟ್ಟ ಕೋಟಾ ಪ್ರಕಾರ ಕಳೆದ ವರ್ಷ ಪೂರ್ತಿ ಹತ್ತಿಕಾಳು ತರಿಸದ್ದರಿಂದ ಜಿಲ್ಹಾಧಿಪರು ಅವರ ಮಕ್ತೆಗಳನ್ನು ರದ್ದುಪಡಿಸಿ, ಇಡೀ ಜಿಲ್ಹೆಗೆ ಹತ್ತಿಕಾಳು ಪೂರೈಸುವ ಮಕ್ತೆಯನ್ನು ರಾ॥ ಹಳದೀಪುರಕರರಿಗೆ ಕೊಟ್ಟಿದ್ದಾರೆ ಬ್ಯಾಂಕಿನವರಿಗೆ ಪ್ರತಿ ಚೀಲದ ಮೇಲೆ ರೂ ೧ ಲಾಭ ಸಿಗುವಂತೆ ದರ ನಿಶ್ಚಯಿಸಿ ಕೊಡಲ್ಪಟ್ಟಿತ್ತು, ಹಳದೀಪುರಕರರಿಗೆ ಬರೇ ೧೨ ಆಣೆ ಮುನಾಫೆ ಉಳಿಯುವಂತೆ ದರ ಹಾಕಿಕೊಟ್ಟಿದ್ದಾರೆ ಹಿಂದೆ ಬಂದ ಹತ್ತೀಕಾಳು ಹುಬ್ಬಳ್ಳಿಪೇಟೆಯೊಳಗಿನದು, ಹೋದ ವರ್ಷ ಅಲ್ಲಿಯ ನಿಯಂತ್ರಿತ ಧಾರಣೆ ರೂಪಾಯಿಗೆ ೨೫ ರತ್ತಲು ಇತ್ತು, ಈ ವರ್ಷ ೧೬॥ ರತ್ತಲು ಆಗಿದೆ ಖಾಸಗಿ ಗ್ರ್ಯಾಮಗಳಲ್ಲೇನೋ ೨೦ ರತ್ತಲುಗಳಂತೆ ಸಿಗುತ್ತಿದೆಯಂತೆ ಆದರೆ ಆ ಹತ್ತೀಕಾಳು ಧಾರವಾಡ ಜಿಲ್ಹೆಯಿಂದ ಹೊರಗೆ ಒಯ್ಯಲು ಅಪ್ಪಣೆ ಸಿಗವದಿಲ್ಲ ಅದರಿಂದ ರಾ॥ ಹಳದೀಪುರಕರರು ಬೆಳಗಾಂವ ಜಿಲ್ಹೆಯ ಬೈಲಹೊಂಗಲದಲ್ಲಿ ೧೬॥ ರತ್ತಲುಗಳಂತೆ ಖರೀದಿಸಬೇಕಾಯಿತು ಅಲ್ಲಿಂದ ತರುವ ಖರ್ಚು ಬಹಳ ಬರುತ್ತದೆ ದರವೇರಿಸಲಿಕ್ಕೆ ಕಾರಣವಿದೇ ಈಗೇನೋ ಹುಬ್ಬಳಿಯ ಹತ್ತಿಕಾಳು ಹೊರಗೆ ಒಯ್ಯಲು ಅಪ್ಪಣೆ ಸಿಕ್ಕಿದೆಯಂತೆ ಆ ಹತ್ತಿಕಾಳನ್ನು ಯಲ್ಲಾಪುರದಲ್ಲಿ ರೂ ೧೦॥ರಂತೆ ಮತ್ತು ಹೊನ್ನಾವರದಲ್ಲಿ ರೂ ೧೨-೧೪-೦ರಂತೆ ಮಾರುತ್ತಾರಂತೆ ಇತ್ಯಾದಿ

ತಾ ೧೨-೧೦ ೪೫ರಿಂದ ೨೧-೧೦-೪೫ರ ತನಕ ಜಿಲ್ಹಾಧಿಪರು [illegible]ಯಲ್ಲಿ ಮುಕ್ಕಾಮು ಮಾಡುವರು

(ತಾ ೫-೧೦-೪೫) ಸದಾಶಿವಗಡದ ಓರ್ವ ಜಮೀನದಾರನು ಜಿಲ್ಹಾಧಿಪರ ಕಡೆ ಒಂದು ಅರ್ಜಿಯನ್ನಿತ್ತು, ಯಾವುದೋ ಒಂದು ರೈತ ಸಂಘವು (ಕಳೆದ ಬೇಸಿಗೆಯಲ್ಲಿ ಹಿರೇಗುತ್ತಿಯೊಳಗೆ ಜಿಲ್ಹಾ ಪರಿಷತ್ತು ಸೇರಿಸಿದ ರೈತ ಸಂಘವಿದಾಗಿರಬಹುದೇ ?) ಈ ಭಾಗದಲ್ಲಿ ಪ್ರತಿಸರಕಾರ ಸ್ಥಾಪಿಸುವ ಸೋಗು ಹಾಕಿಕೊಂಡಿರಬೇಕೆಂದೂ ಈ ಪ್ರವೃತ್ತಿಯನ್ನು ಈಗಲೇ ದಬ್ಬಿಹಾಕದಿದ್ದರೆ ಮುಂದ ಅನರ್ಥಗಳಾಗಬಹುದೆಂದೂ ಸೂಚಿಸಿದ್ದಾರೆ ಈ ಜಮೀನದಾರರು ಇಲ್ಲಿಯ ಮಾಮಲೇದಾರ ಕೋರ್ಟಿನಲ್ಲಿ ತನ್ನ ಓರ್ವ ಒಕ್ಕಲಿಗನ ವಿರುದ್ಧ ೨ ದಾವೆಗಳನ್ನು ದಾಖಲಿಸಿದ್ದನು ಅವುಗಳ ನಿಕಾಲೆಯಾಗಿ ದಾವೆಯಂತೆ ಫೈಸಲಯಾಗಿದೆ ಈ ದಾವೆಗಳೊಳಗಿನ ವಿವಾದ ವಿಷಯವನ್ನು ಬಗೆಹರಿಸಿಕೊಳ್ಳುವದಕ್ಕಾಗಿ ಸದರಿ ರೈತ ಸಂಘದ ಕಚೇರಿಯಲ್ಲಿ ಹಾಜರಿರತಕ್ಕದ್ದೆಂದು ಈ ಜಮೀನದಾರನಿಗೆ ಸಂಘದ ಅಧ್ಯಕ್ಷರಿಂದ ಟಪಾಲ ದ್ವಾರಾ ನೋಟೀಸೊಂದು ಬಂದಿದೆಯಂತೆ! ಜಮೀನದಾರನು ಕೈಕೊಂಡ ಕ್ರಮದ ನ್ಯಾಯಾನ್ಯಾಯ್ಯತೆಯ ವಿಚಾರವನ್ನು ಸಂಘದವರು ಮಾಡಲಿದ್ದಾರಂತೆ ಜಮೀನದಾರನ ಪ್ರತಿವಾದಿಯು ಸದರಿ ಸಂಘಕ್ಕೆ ಸೇರಿದವನಿದ್ದಾನೆಂದು ವಾರ್ತೆ

(ತಾ ೭-೧೦-೪೫) ಅ॥ ಭಾ॥ ಮಹಿಳಾ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೂ ಹುಬ್ಬಳ್ಳಿಯ ಶ್ರೀಮತಿ ಉಮಾಬಾಯಿ ಕುಂದಾಪುರರೂ ನಿನ್ನೆ ಸಂಜೆ ಇಲ್ಲಿ ಕಸ್ತೂರಬಾ ಸ್ಮಾರಕ ನಿಧಿಯ ಕಾರ್ಯದ ಪ್ರಚಾರಾರ್ಥ ಈ ಊರಿಗೆ ತಲ್ಪಿದರು ಕೂಡಲೇ ಇಬ್ಬರೂ ಶ್ರೀಮತಿ ಅಮರಾವತಿ ಪೈ ಇವರು ನಡಿಸುತ್ತಿದ್ದ ಖಾದಿ ಕಾರ್ಯಾಲಯಕ್ಕೆ ಸಂದರ್ಶನವಿತ್ತು, [illegible] ೬॥ ಘಂಟೆಗೆ ಮಹಿಳಾ ಪರಿಷತ್ತಿನ ಇಲ್ಲಿಯ ಶಾಖೆಯ ಕಾರ್ಯದರ್ಶಿನಿಗಳಾದ ಸೌ॥ ಉಷಾದೇವಿ ಮುಜುಮುದಾರ ಇವರು ಜಿ॥ ಲೋ॥ ಬೋರ್ಡ ಕಚೇರಿಯ ಅಟ್ಟದ ಮೇಲೆ ಏರ್ಪಡಿಸಿದ ಮಹಿಳೆಯರ ಸಭೆಗೆ ಹೋದರು ಸೌ॥ ಶಾಂತಾಬಾಯಿ ಗಂಗೊಳ್ಳಿಯವರು ಸಭಿಕರಿಗೆ ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟ ಮೇಲೆ ಕಮಲಾದೇವಿಯವರು ಹೆಂಗೆ

(೨ನೇ ಪುಟದ ಮೇಲೆ ಮುಂದರಿಸಿದೆ)

ಎಂಪಾಯರ ಆಫ್ ಇಂಡಿಯಾ ಲೈಫ ಇನ್ಶ್ಯುರನ್ಸ
ಕಂಪನಿಯಲ್ಲೇ
ವಿಮೆ ಇಳಿಸಿರಿ ಎಲ್ಲ ಕಂಪನಿಗಳಿಗಿಂತ ಕಂತುಗಳು
ಅತಿ ಸುಲಭವಿವೆ ವಿಚಾರಿಸಿರಿ—
ಏಜಂಟ, ಗೋವಿಂದ ಶ್ರೀಧರ ನಾಯಕ,
C o ಬಾಲಕೃಷ್ಣ ಸ್ಟೋರ್ಸ, ಕುಮಟಾ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೮-೦
ಟಪಾಲದ್ವಾರಾ ವರ್ಷಕ್ಕೆ ೪ ೦ ೦
" ೬ ತಿಂಗಳಿಗೆ ೧ ೧೦-೦
ಬಿಡಿ ಸಂಚಿಕೆಗೆ ,, ೦-೦-೯
ವಿಶೇಷ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ವರ್ಗಣಿಯು ಮುಂಗಡ ಕಟ್ಟತಕ್ಕದ್ದು

Reg. No. B 1270 Monday, 15th October, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೧೬.

ಕುಮಟಾ:- ಸೋಮವಾರ, ತಾ ೧೫ ಮಾಹೆ ಅಕ್ಟೋಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ.
ಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದರಿಸಿದ್ದು)

ಯನಾಗಿ ರಾ|| ಸುಬ್ರಾಯ ಭಟ್ಟ, ಕಲ್ಲಾಳ ಭಟ್ಟ ಪ್ರಭೃತಿಗಳ ಭಾಷಣಗಳಾದವು ಸಾಯಂಕಾಲಕ್ಕೆ ಉತ್ಸವ ಮಂಟಪದಲ್ಲಿ ದೀಪೋತ್ಸವವೂ ವಿನೋದಾವಳಿಗಳೂ ನಡೆದವು ಕೆಲವರು ಮಹಾತ್ಮರ ಮೂರುತಿಗೆ ಪೇಢೆಗಳನ್ನೂ ಬಾಳೆಹಣ್ಣುಗಳನ್ನೂ ಕಾಣಿಕೆಯಾಗಿ ಅರ್ಪಿಸಿದ್ದರು ಅವುಗಳ ಲಿಲಾಂವು ಆಯಿತು ಇದು ಮಹಾತ್ಮರ ೭೬ನೇ ಹುಟ್ಟುಹಬ್ಬವಾದ್ದ ಎಲ್ಲವೂ ೭೬ರ ಅಂಕೆಯಲ್ಲೇ ನಡೆಯಿತು ಕಾಣಿಕೆಯಾಗಿ ಬಂದ ಪೇಢೆಗಳು ೭೬, ಅವನ್ನು ಸವಾಲಿನಲ್ಲಿ ಕೊಂಡುಕೊಂಡವರು ೭೬ ರ ಪಾವಲಿ, ಚವಲಿ, ಆಣೆ ಯಾ ದುಡ್ಡುಗಳಿಗೆ ಕೊಂಡುಕೊಂಡರು, ಕಾಣಿಕೆ ಸಲ್ಲಿಸಿದವರು ಕೂಡ ೭೬ ೭೬ ಸಂಖ್ಯೆಗಳನ್ನು ಸಲ್ಲಿಸುತ್ತಿದ್ದರು ಮಂಟಪದ ಬಳಿಯಲ್ಲಿರುವ ಚೌಕಿಗೂ ೭೬ನೇ ಜಯಂತಿಯ ಚೌಕ ಎಂದು ಹೆಸರಿಸಲಾಗಿದೆ ಈ ಸಪ್ತಾಹದಲ್ಲಿ ೪೫೦ ಗುಂಡಿ ನೂಲು ಮತ್ತು ರೂ ೪೦೭-೧೨-೯ ಕಾಣಿಕೆ ವಸೂಲ ಬಂದಿರುತ್ತದಂತೆ

ಮೂಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರಾಗಿದ್ದು ಇತ್ತಲಾಗಿ ಕೆಲವು ಕಾಲದಿಂದ ಇಲ್ಲಿ ವೈದ್ಯಕೀ ವ್ಯವಸಾಯವನ್ನು ಮಾಡುತ್ತಿದ್ದ ಮತ್ತು ೧೯೪೨ನೇ ಆಗೋಸ್ತ ತಿಂಗಳ ಚಳವಳಿಯಲ್ಲಿ ಸೇರಿ ಕಣ್ಮರೆಯಾಗಿದ್ದ ಡಾ|| ಗಣೇಶ ಪೈ ಇವರು ಕಳೆದ ತಿಂಗಳಲ್ಲಿ ಅ|| ಭಾ|| ಕಾಂ|| ಸಮಿತಿಯ ಸಭೆಗಾಗಿ ಮುಂಬಯಿಗೆ ಹೋಗಿದ್ದರು ಅಲ್ಲಿ ಅವರಿಗೆ ಕಫಜ್ವರದ ಬಾಧೆಯಾಗಿ, ಕೊನೆಗೆ ತಾ ೬ನೇಗೆ ಅವರು ಮುಂಬಯಿಯಲ್ಲೇ ನಿಧನ ಹೊಂದಿದರೆಂದು ತಿಳಿಸಲು ತೀವ್ರ ವ್ಯಸನವಾಗುತ್ತದೆ ಬಂಗಾಲದಲ್ಲಿ ಬರಗಾಲದ ಹಾವಳಿ ನಡೆಯುತ್ತಿದ್ದಾಗ ಮೃತಾತ್ಮರು ಕಾಯಿಲೆಯಿಂದ ನರಳುತ್ತಿದ್ದವರ ಶುಶ್ರೂಷೆ ಮಾಡುತ್ತ ಊರಿಂದೂರಿಗೆ ಸಂಚರಿಸುತ್ತಿದ್ದರಂತೆ ಆ ಕಾಲಕ್ಕೆ ಅವರಿಗೆ ಹಿಡಿದ ಚಳಿಜ್ವರದ ಬಾಧೆಯು ಅವರ ಬೆನ್ನು ಬಿಡಲಿಲ್ಲ ಅದೇ ಬೇನೆ ಮುಂಬಯಿಯಲ್ಲಿ ಕಫಜ್ವರದಲ್ಲಿ ಪರಿಣಮಿಸಿ ಅವರ ಬಲಿಯನ್ನು ತಕ್ಕೊಂಡಿತು! ಅವರ ಅಕಾಲಿಕ ನಿಧನದಿಂದ ಅವರ ಚಿಕ್ಕಮಕ್ಕಳ ಮೇಲೂ, ಹೆಂಡತಿಯ ಮೇಲೂ, ಮುದಿ ತಾಯಿಯ ಮೇಲೂ ಆಕಾಶವೇ ಕಳಚಿ ಬಿದ್ದಂತಾಗಿದೆ ಅವರನ್ನು ಕಾಪಾಡುವ ಭಾರ ಅನಾಥಬಂಧು ಜಗನ್ನಾಥನ ಮೇಲಿದೆ ಮೃತಾತ್ಮರಿಗೂ ಅನಂತ ಚಿರಶಾಂತಿಯನ್ನೀಯಲೆಂದು ಹಾರೈಕೆ

ಕಾರವಾರ— (ತಾ ೧೩ ೧೦-೪೫) ಜಿಲ್ಲಾ ಲೋ ಬೋರ್ಡಿನ ಸಭಾಸದರ ತುರ್ತು ಸಭೆಯು ಕಳೆದ ಮಂಗಳವಾರ ನಡೆಯಿತು ಈ ಚುನಾವಣೆಯಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಕಟ್ಟಿಕೊಂಡ ಪಕ್ಷವು ಪೂರ್ಣ ಒಡೆದು ಹೋಗಿ, ಅಧ್ಯಕ್ಷರಿಗೆ ಪ್ರತಿಯೊಂದು ಸಂಗತಿಯಲ್ಲಿ ಸೋಲು ಪ್ರಾಪ್ತವಾಯಿತು! ಬೋರ್ಡಿನ ೩೦ ಸದಸ್ಯರಲ್ಲಿ ೧೮ ಮಂದಿ ಬಹಿರಂಗವಾಗಿ ಅವರ ವಿರುದ್ಧರಿದ್ದಾರೆ ಉಳಿದ ೧೨ ಸದಸ್ಯರಲ್ಲಿ ೬-೮ ಮಂದಿ ಮಾತ್ರ ಅಧ್ಯಕ್ಷರನ್ನು ಎತ್ತಿ ಹಿಡಿಯಬಹುದು ಅಧ್ಯಕ್ಷರ ಏಕಂತಾಂಶ ವರ್ತನೆ ಮತ್ತು ಅವರು ತೋರುತ್ತಿರುವ ಅನುಚಿತ ಪಕ್ಷಪಾತವೇ ಅವರ ಮಿತ್ರರನ್ನು ಶತ್ರುಗಳನ್ನಾಗಿ ಮಾಡಿದೆ! ಅಧ್ಯಕ್ಷರಿಗೆ ದೈವಬಲವೂ ಕಡಿಮೆ. ಶಿಕ್ಷಣ ತಜ್ಞರ ಆಯ್ಕೆಯಲ್ಲಿ ಇದು ಸ್ಪಷ್ಟವಾಯಿತು ಶಿಕ್ಷಣ ತಜ್ಞರ ೨ ಆಸನಗಳಿಗಾಗಿ ೩ ಮಂದಿ ಹುರಿಯಾಳುಗಳಿದ್ದರು ಒಬ್ಬರಿಗೆ ೧೯ ಮತಗಳು ಬಿದ್ದವು, ಇನ್ನಿಬ್ಬರಿಗೆ ಸಮ ಸಮಾನ ಮತಗಳು ಬಿದ್ದವು. ಹೀಗೆ ಸರಿ ಮತಗಳು ಬಿದ್ದವರಲ್ಲಿ ಒಬ್ಬನು ಅಧ್ಯಕ್ಷರ ಪಕ್ಷದವನು ಸರಿ ಮತಗಳು ಬಿದ್ದಾಗ ಚೀಟಿ ಹಾಕಿ ನಿರ್ಣಯ ಮಾಡಬೇಕಾಗುತ್ತದೆ ಹೀಗೆ ಚೀಟಿ ಹಾಕಿದಾಗಲೂ ಅಧ್ಯಕ್ಷರ ಹುರಿಯಾಳುವಿಗೆ ದೈವವು ನಿರ್ಗದ್ದ ಕೈ ತೋರಿಸಿ ಬಿಟ್ಟಿತು! ಅಂತು ಈಗ ಆರಿಸಿ ಬಂದವರಲ್ಲಿ ಒಟ್ಟು ೧೫ ಜನರಲ್ಲಿ- ಬರೇ ೩ ಮಂದಿ ಮಾತ್ರ ಅಧ್ಯಕ್ಷರ ಪಕ್ಷದವರು ಉಳಿದವರು ವಿರುದ್ಧ ಪಕ್ಷದವರು ಈ ಕೆಳಗೆ ಕಾಣಿಸಿದವರು ೨ ಲೋ ಬೋರ್ಡಿಗೆ ಆರಿಸಿ ಬಂದವರು ಇರುತ್ತಾರೆ — ರಾ|| (೧) ಗಣೇಶ ಭಟ್ಟ ಕೆಕ್ಕಾರ (೨) ಸಣ್ಣಪ್ಪಾ ಪರಮೇಶ್ವರ ಗಾಂವಕಾರ (ಶಿಕ್ಷಣ ತಜ್ಞರು)(೩) ಶ್ರೀ ಪರಮೇಶ್ವರಿ ಪಂಡಿತ ಗೋಕರ್ಣ (ಸ್ತ್ರೀ) (೪) ರಾ|| ಗ್ಯಾಬ್ರಿಯೆಲ ಪಿಣಗಿ (ಕ್ರಿಶ್ಚನ್) (೫) ರಾ| ಬೋರಕರ (ಹರಿಜನ) (೬) ರಾ ಮುಗದ (ಮುಸಲ್ಮಾನ) (೭) ರಾ|| ಗೋವಿಂದ ವೆಂಕಪ್ಪಾಪೈ ಕುಮಟಾ ನಗರಾಧ್ಯಕ್ಷರು (ನಗರಸಭೆಗಳ ಪ್ರತಿನಿಧಿ) (೮-೧೩) ರಾ|| ಹೆಗ್ಡೇಡಮನೆ, ತಟ್ಟಿಭಟ್ಟ, ಗಣಪತ ಹೆಗಡೆ ಸಾಪ, ಹೊನ್ನಪ್ಪಾ ಮಾರ್ಕಂಡಿ ನಾಯ್ಕ ತೆರ್ಸೆ, ಭರಮಾ ಸುಬ್ರಾಯ ನಾಯ್ಕ ಮತ್ತು ಫರ್ನಾಂಡಿಸ

ತಾ ೧೧ನೇಗೆ ಆದ ಜಿಲ್ಲಾ ಬೋರ್ಡಿನ ಸ್ಥಾಯಿ ಸಮಿತಿಯ ಚುನಾವಣೆಯಲ್ಲೂ ಅಧ್ಯಕ್ಷರಿಗೆ ಪೂರ್ಣ ಪರಾಜಯವಾಯಿತು. ಅವರ ಪಕ್ಷದವರಾರೂ ಸ್ಥಾಯಿ ಸಮಿತಿಗೆ ನೇಮಿಸಲ್ಪಟ್ಟಿಲ್ಲ! ತನ್ನವನೊಬ್ಬನನ್ನಾದರೂ ಆರಿಸಿರೆಂದು ಅಧ್ಯಕ್ಷರು ಅಂಗಲಾಚಿ ಬೇಡಿದರೂ ವಿರೋಧಿಗಳು ಒಪ್ಪಲಿಲ್ಲ

ಲೋಕಲ್ ಫಂಡು ಬೋರ್ಡನ್ನೂ ತನ್ನ ಅಧ್ಯಕ್ಷತನವನ್ನೂ ಕಾಪಾಡಿಕೊಳ್ಳಲು ರಾ|| ದತ್ತ ನಾಯ್ಕರು ಮಾಡಿದ ಪ್ರಯತ್ನವೆಲ್ಲ ಈಗ ನೀರು ಪಾಲಾಗುವ ಲಕ್ಷಣಗಳು ತೋರುತ್ತಿವೆ ಆಕಪಟ್ಟಿಯನ್ನು ಇಮ್ಮಡಿ ಮಾಡುವ ಬೋರ್ಡಿನ ಗೊತ್ತುವಳಿಯು ಕಾನೂನಿನಂತೆ ಆಗಿರುವದಿಲ್ಲವೆಂದೂ ಆದ್ದರಿಂದ ಆ ಕಾನೂನ ಬಾಹ್ಯ ತೀರ್ಮಾನವನ್ನು ಆಚರಣೆಯಲ್ಲಿ ತರಕೂಡದೆಂದೂ ಕುಮಟೆಯ ತೆರಿಗೆದಾರರೊಬ್ಬರು ಬೋರ್ಡಿನ ಅಧ್ಯಕ್ಷರಿಗೆ ನೋಟೀಸು ಕೊಟ್ಟಿದ್ದುಂಟು ಆ ನೋಟೀಸು ಸಭೆಯ ಮುಂದೆ ಬಂದಾಗ, ೧೫ ಮಂದಿ ಸದಸ್ಯರು ನೋಟೀಸಿನೊಳಗಿನ ವಿವರಗಳನ್ನು ಮನ್ನಿಸಿ ಸದರಿ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರಕೂಡದೆಂದೂ ಹೀಗೆ ಬೋರ್ಡಿನ ನಿರ್ಣಯವಾದ ಸಂಗತಿಯನ್ನು ಜಿಲ್ಲಾಧಿಕಾರಿ ತಿಳಿಸಬೇಕೆಂದೂ ಸೂಚನೆ ತಂದರು ಅಧ್ಯಕ್ಷ ಪಕ್ಷೀಯರು ಒಂದು ಉಪಸೂಚನೆ ತಂದು, ಬೋರ್ಡಿನ ತೀರ್ಮಾನ ಕ್ರಮಬದ್ಧವಿರುತ್ತದೆಂತಲೂ, ನೋಟೀಸ ಕೊಟ್ಟ ತೆರಿಗೆದಾರರು ದಾವೆ ಮಾಡಿದಲ್ಲಿ ಆ ತೀರ್ಮಾನವನ್ನು ಸಮರ್ಥಿಸಿಕೊಳ್ಳಬೇಕೆಂತಲೂ, ಆ ಬಗ್ಗೆ ತಗಲುವ ವೆಚ್ಚವನ್ನು ಬೋರ್ಡಿನ ಬೊಕ್ಕಸದಿಂದ ಪೂರೈಸಬೇಕೆಂತಲೂ ಸೂಚಿಸಿದರು ಈ ಉಪಸೂಚನೆ ೧೫ ಸದಸ್ಯರ ಮೂಲ ಸೂಚನೆಗೆ ಸರಿ ವಿರುದ್ಧವಿರುತ್ತದೆಂದೂ ಅದು ಗ್ರಾಹ್ಯವಲ್ಲೆಂದೂ ಆಕ್ಷೇಪ ಬಂತು ಆಗ ಅಧ್ಯಕ್ಷರು ಮೂಲ ಸೂಚನೆಯೇ ಆಕ್ಷೇಪ ಸ್ವರೂಪವಿರುತ್ತದೆಂದು ಸ್ವಂತ ಬುದ್ಧಿಯಿಂದ ನಿರ್ಣಯ ಕೊಟ್ಟು ಉಪಸೂಚನೆಯನ್ನು ಸೂಚನೆಯನ್ನಾಗಿ ಪರಿವರ್ತಿಸಿ ಅದನ್ನು ಮತಕ್ಕೆ ಹಾಕಿದರು! ಆ ಸೂಚನೆಗೆ ೭ ಮತಗಳು ಅನುಕೂಲ ಮತ್ತು ೧೫ ಮತಗಳು ಪ್ರತಿಕೂಲ ಬಿದ್ದು ಸೂಚನೆ ಧಿಕ್ಕರಿಸಲ್ಪಟ್ಟಿತು ಅಧ್ಯಕ್ಷರ ನಡತೆಯಿಂದ ಸದಸ್ಯರೊಳಗೆ ತೀವ್ರ ಅಸಮಾಧಾನದ ಸ್ವರಗಳು ಉಂಟಾದವು ಆ ಉತ್ಸಾಹದೊಳಗೆ ಸದಸ್ಯರು ವಿಷಯ ಪತ್ರಿಕೆಯೊಳಗಿನ ಪೂರ್ಣ ವಿಷಯಗಳ ವಿಚಾರ ಮಾಡದೆ ಸಂಜೆಯೊಳಗೆ ಸಭೆಯನ್ನು ಮುಗಿಸಿಬಿಟ್ಟರು ಆಕಪಟ್ಟಿಯನ್ನು ಏರಿಸುವ ತೀರ್ಮಾನದ ಪುನರ್ವಿಚಾರ ಮಾಡುವದಕ್ಕಾಗಿ ಬೋರ್ಡಿನ ವಿಶೇಷ ಸಭೆಯನ್ನು ಸೇರಿಸಬೇಕಾಗಿ ೧೫ ಮಂದಿ ಸದಸ್ಯರು ಅಧ್ಯಕ್ಷರಿಗೆ ಬಿನ್ನವಿಸಿದ್ದಾರೆ ಅಧ್ಯಕ್ಷರು ತಮ್ಮ ನಡತೆಯನ್ನು ಸುಧಾರಿಸದಿದ್ದರೆ ಮುಂದಿನ ವರ್ಷದ ಆಯ-ವ್ಯಯ ಪತ್ರಿಕೆಯನ್ನು ಬಾಗಗೂಡಿ ತಿರಸ್ಕರಿಸಿ ಬೋರ್ಡಿನ ಕಾರಭಾರಕ್ಕೆ ಕೀಲಿ ಹಾಕುವ ಉಗ್ರ ಉಪಾಯ ಯೋಜನೆಯನ್ನೂ ಸದಸ್ಯರು ಕೈಕೊಳ್ಳುವರೆಂದು ಬಲ್ಲವರು ಹೇಳುತ್ತಾರೆ ಅಂತು ರಾ|| ದತ್ತ ನಾಯ್ಕರಿಗೆ ಈ ಅಧ್ಯಕ್ಷಪದವಿಯು ಗೌರವ ಮರ್ಯಾದೆಗಳ ಸುಖ ಶಯ್ಯೆಯಾಗುವ ಬದಲು ಮುಳ್ಳಿನ ಹಾಸಿಗೆಯಾಗಿದೆ! ಜಿಲ್ಲಾಧಿಪರಾಗಲಿ ಕಾರ್ಯಕರ್ತರಾಗಲಿ ಅವರನ್ನು ಹೇಗೆ ಕಾಪಾಡಿಕೊಂಡು ಹೋಗುತ್ತಾರೆಂಬದನ್ನು ನೋಡಬೇಕು

ಬರುವ ರವಿ ಸೋಮ ಮಂಗಳವಾರ ಇಲ್ಲಿಯ ಕರ್ನಾಟಕ ಸಂಘದವರು ನಾಡಹಬ್ಬ ಆಚರಿಸುವವರಿದ್ದಾರೆ ಜಿಲ್ಲಾ ಜಜ್ಜ ರಾ|| ಗುಂಡಾಚಾರರವರ ಹಸ್ತದಿಂದ ಉತ್ಸವದ ಉದ್ಘಾಟನೆಯಾಗುವದು ರಾ|| ರಾ ವೆ ಕರಗುದರಿ, ದ ಪ ಕರಮರಕರ, ಬಡಕಲಿ ಕೃಷ್ಣ ಭಟ್ಟ, ನರೇಗಲ್ಲ ಮೊದಲಾದವರ ಕೀರ್ತನೆ-ಭಾಷಣಾದಿಗಳೂ ವಿನೋದಾವಳಿಗಳೂ ಒಂದು ನಾಟಕದ ಪ್ರಯೋಗವೂ ನಡೆಯಲಿವೆ

ಅಂಗಡಿ ಎಜ್ಯುಕೇಶನ ಸೊಸಾಯಿಟಿಯ ಚೇರಮನ್ನ ರಾ|| ಆರ್ ಬಿ ದುಬೆ ಇವರು ದಕ್ಷಿಣ ಭಾಗದ ಕಮಿಶನರ ಹಾಗೂ ಹಿಂದಿನ ಕಲೆಕ್ಟರರ ಶಿಫಾರಸಿನಂತೆ ಅಂಗಡಿಯಲ್ಲಿ ಕಳೆದ ತಾ ೧೧ರಿಂದ ಒಂದು ಸರಕಾರಿ ಚಿಕಿತ್ಸಾಲಯವನ್ನು ಸ್ಥಾಪಿಸಿದ್ದಾರೆ ಅದರಿಂದ ಅಂಗಡಿಯ ಸೀಮೆಯ ಜನರದೊಂದು ಕೊರತೆ ಕಡಿಮೆಯಾಗಿದೆ

ಅಂಕೋಲಾ— (ತಾ ೧೩-೧೦ ೪೫) ಮೊನ್ನೆ ಇಲ್ಲಿಯ ಅರ್ಬನ ಸಹಕಾರಿ ಬೇಂಕಿನ ವಾರ್ಷಿಕ ಸಭೆಯಾಯಿತು ಬೇಂಕಿನಿಂದ ಹಣ ಪಡೆದು ವ್ಯಾಪಾರ ಮಾಡುತ್ತಿದ್ದ ವರ್ತಕರ ವ್ಯಾಪಾರವೆಲ್ಲ ಈಗ ನಿಯಂತ್ರಣದ ಮೂಲಕ ನಿಂತು ಹೋದಂತಾಗಿದೆ ಅದರಿಂದ ಬೇಂಕಿನ ಹಣ ಪಡೆಯುವವರು ಕಡಿಮೆಯಾಗಿದ್ದಾರೆ ಬೇಂಕಿನ ಹಣ ಈಗ ೬೦-೬೫ ಸಾವಿರ ರೂಪಾಯಿ ಉಪಯೋಗವಿಲ್ಲದೆ ಬಿದ್ದುಕೊಂಡಿದೆಯಂತೆ ಅದನ್ನು ಸಕ್ಕರೆ, ಹತ್ತಿಕಾಳು, ಕೊಬ್ಬರಿ ಎಣ್ಣೆ ಮುಂತಾದವುಗಳ ಪೂರೈಕೆ ಮತ್ತು ರೋಕ ವ್ಯಾಪಾರದಲ್ಲಿ ತೊಡಗಿಸಲಿಕ್ಕೆ ಬೇಂಕಿನವರ ಸಿದ್ಧತೆಯುಂಟು ಬೇಂಕಿನವರು ಹಾಗೆ ಮಾಡಿದಲ್ಲಿ ಊರವರಿಗೆ ಈ ಸರಕುಗಳು ಅಗ್ಗದಲ್ಲಿ ದೊರೆತು ಕೆಲ ಮಟ್ಟಿಗೆ ಸೋಯಿಯಾದೀತೆಂಬ ಜನರಾದವರೂ ಅಂಬೋಣವುಂಟು ಆದರೆ ಅಧಿಕಾರಿಗಳ ದೃಷ್ಟಿಯೇ ಬೇರೆ! ಬೇಂಕಿನಂತಹ ಸಂಘಟಿತ ಮತ್ತು ಸರಕಾರ ನಿಯಂತ್ರಿತ ಸಂಸ್ಥೆಗಳಿಗೆ ಇಂತಹ ವ್ಯಾಪಾರದ ಹಕ್ಕನ್ನು ಅವರು ಕೊಡಲೊಪ್ಪುವದಿಲ್ಲವಂತೆ! ಅಧಿಕಾರಿಗಳ ಮಮತೆಯಲ್ಲಿ ಅವರ ಬಗಲಗೂಸುಗಳ ಮೇಲೆಯೇ ಕೇಂದ್ರೀಕೃತವಾಗಿದೆ!

ಹಳಿಯಾಳ—(ತಾ ೧ ೧೦-೪೫) ಈ ತಾಲೂಕಿನಲ್ಲೂ ಯಲ್ಲಾಪೂರ ತಾಲೂಕಿನಲ್ಲೂ ರೈತರ ಋಣ-ವಿಮೋಚನೆಯ ಕಾನೂನಿನ ಅನುಷ್ಠಾನವು ನಡೆದಿದೆಯಷ್ಟೇ ಈ ಕಾನೂನಿನ ಪೂರ್ಣ ಲಾಭ ಪಡೆಯಲು ಹಳ್ಳಿ ಹಳ್ಳಿಗಳೊಳಗಿನ ರೈತರಿಗೆ ಕಾನೂನಿನ ಸಹಕಾರಿ ಸಂಘಗಳ ಸಂಘಟಕರಾದ ರಾ|| ಆರ್ ಬಿ ಶೇಟ ಮುದಿಯವರು ಪ್ರಚಾರ ನಡೆಸಿದ್ದಾರೆ ಈ ಪ್ರಚಾರದ ಸಂಗಡ ಮುದಿಯವರು ಸಹಕಾರಿ ಸಂಘಗಳಿಲ್ಲದ ಸೀಮೆಗಳಲ್ಲಿ ಅಂಥ ಸಂಘಗಳನ್ನು ಸ್ಥಾಪಿಸಲಿಕ್ಕೂ, ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಗ್ರಾಂಥಿಕ ಶಾಲೆಗಳನ್ನು ಸ್ಥಾಪಿಸಲಿಕ್ಕೂ ಯತ್ನಿಸುತ್ತಿದ್ದಾರೆ

The Agricultural & Industrial Bank, Ltd.
[Incorporated in British India Liability of Members limited]
Head Office COONDAPOOR. S I
Branches -
ANKOLA
BELGAUM
COONDAPOOR
DHARWAR
GOKARN
HAVERI
HUBLI
KARWAR
KUMTA
MANGALORE
NAGAR
SHIMOGA
SIRSI
SOMWARPET
VIRAJPET
All kinds of Banking Business transacted
Paid-up Capital & Reserves exceed Rs 4 LAKHS
Please apply for particulars
1-9-1945

ಸ್ಥಳಿಕ ವಿಷಯಗಳು.

ಲೇಖಕ ಸ್ಥಳವಂತಿಕ

ಈ ವರ್ಷ [illegible] ಯಾಗಿರ ವದಾಗಿ ಒಂದು ಭಾವನೆಯುಂಟು [illegible] ತನ್ನಾಗಿ ಬಿದ್ದಿದೆ ಸರಿಯಾಗಿ [illegible] ಬೆಳೆದಿದೆ [illegible] ಗ್ರಹಿಕೆಯುಂಟು ನಮ್ಮ [illegible] ಒಂದೇ ಪ್ರಕಾರದ ಪ್ರದೇಶವಲ್ಲ ಪಟ್ಟದ ಮೇಲಿನ [illegible] ಬೇ[illegible] [illegible] ಆಯಾ [illegible] ಗದ ಸ್ಥ[illegible] [illegible] [illegible] ಕಳವಳಿಯಲ್ಲಿ ಈಗ [illegible] ದಪ್ಪವಾ[illegible] [illegible] ಘಟ್ಟ [illegible] ಸೇದ [illegible] ಭೂಮಿಗಳನ್ನು [illegible] ಭೂಮಿಗಳಲ್ಲಿ ಬೆಳೆ [illegible] ಮಾನ [illegible] [illegible] [illegible] ನಡೆ [illegible] ಲ್ಲಿ [illegible] ಕೆ[illegible] ಗಳೂ [illegible] ಎರಡೂ [illegible] [illegible] ಪ್ರದೇಶದ [illegible] ಬೇ[illegible] [illegible] [illegible] ಇನ್ನ [illegible] [illegible] [illegible] [illegible] [illegible] ಮಾತ್ರ [illegible] [illegible]

ಬದಿ ಘಟ್ಟದ [illegible] ಗದ ಬೆಳೆ [illegible] ಪ್ರ[illegible] [illegible] ಪ್ರದೇಶದಲ್ಲಿ [illegible] ಕಡಿಮೆ [illegible] ಜನರ [illegible] ಗಿ ಕೆಲಸ ಮಾಡಿಸುವ ಪರಿಪಾಠವುಂಟು [illegible] ಮತ್ತಿಗೆ ಸಟ್ಟಿಗಳ [illegible] ಗಾಲಿಯಾ [illegible] ನಡೆಯಬೇಕು ಈ ಕೂಲಿಯಾಳುಗಳು ತಮ್ಮ [illegible] [illegible] ಪ್ರದೇಶಕ್ಕೆ ಹೋಗುತ್ತಾರೆ ಆದರಿಂದ ಘಟ್ಟದ ಮೇಲಿನ ಬಿತ್ತಿಗೆ [illegible] ಘಟ್ಟದ ಕೆಳಗಿನ ಬಿತ್ತಿಗೆ ಸಟ್ಟಿಗಿಂತ ವಿಳಂಬವಾಗಿ ಆಗುತ್ತಿವೆ ಆದ[illegible] ಮೇಲಾಗದಲ್ಲಿ ನ [illegible] ಮಳೆ ಕಡಿಮೆ [illegible] ಇಡಿಯಿಲ್ಲ ಆದ[illegible] ತನಕ ಮಳೆ [illegible] ಕಂಡವೇ ಇಲ್ಲ ಈಗ ಮಳೆ ಬೇಡ ಆದರೆ ಘಟ್ಟದ ಕೆಳಗಿನ ಭಾಗದಲ್ಲಿ ಅತಿ ಅವಶ್ಯ [illegible] ಹಳಿಯಾಳ ತಾಲೂಕಿನಲ್ಲಿ [illegible] ತೆ ಹೊಂಬ[illegible] ಮಳೆಗಾಗಿ ತನ ಬಾಯಿ ಒಡೆತ್ತದ, ಆದರೆ ಹನಿ ಸಿಕ್ಕಿಲ್ಲ! ಅದೇ ಸಮ[illegible] ಯಲ್ಲಾಪುರ ತಾಲೂಕಗಳಲ್ಲಿ ನಟ್ಟಿ ತೀರಿ ಈಗ ಒಂದು ತಿಂಗಳಾದರೆ ದೊಡ್ಡ ದು ಕಂಪಡೆ ತೆನೆ ಹೊರಬೀಳುತ್ತಿದೆ ಹಲವೆಡೆ ತೆನೆ ಹೊರಬಿದ್ದಿದೆ ಎರಡೂ ಬಗೆಯ ಹೊಲಗಳು ಮಳೆಯನ್ನು ಅಪೇಕ್ಷಿಸುತ್ತಿವೆ ಆದರೆ ಮಳೆಯಿಲ್ಲ! ಇತ್ತ [illegible] ದಿವಸಗಳಿಂದ ಮಳೆಯ ಮೋರೆಯೇ ಇಲ್ಲ ದಟ್ಟ ಮಂಜು ರಾತ್ರಿ ಬೀಳುತ್ತಿದೆ ಆದರೆ ಮಂಜಿನಿಂದ ಭೂಮಿಗೆ ತಂಪು ಸಿಗುವದಿಲ್ಲ ಬಿಸಿಲು ತಾಪಕ್ಕೆ ಭೂಮಿ ಕಾಯು ಒಡೆಯುತ್ತಿದೆ ಆದರಿಂದ ಅಲ್ಲಲ್ಲಿ ತೆನೆಗಳು ಹೊರಬೀಳದೆ ಒಳಗಿಂದೊಳಗೆ ಒಣಗಿ ಹೋಗುವ ಪ್ರಸಂಗವುಂಟು ಇನ್ನು ೧೦-೧೨ ದಿವಸಗಳೊಳಗೆ ಮಳೆಯಾಗದಿದ್ದರೆ ಕೈಗೆ ಬಂದ ತುತ್ತು ಬಾಯಿಗೆ [illegible] ಪರಮಾತ್ಮನು ಈ ಪ್ರಸಂಗದಿಂದ ತಮ್ಮನ್ನು ಕಾಯಬೇಕೆಂದು ಕೃಷಿಕರು ಪ್ರಾರ್ಥನೆ ಮಾಡುತ್ತಾರೆ

⁂

ಹೊಸ [illegible] ಸಮೀಪ ಬಂದಿದೆ ಮತದಾರ ಪಟ್ಟಿಗಳು ತಯಾರ ಆಗತೊಡಗಿವೆ ಮತಾಧಿಕಾರ ಉಳ್ಳವರು ತಮ್ಮ ತಮ್ಮ ಹೆಸರುಗಳನ್ನು ದಾಖಲ ಮಾಡಿಸಿಕೊಳ್ಳುವ ರಭಸ ನಡೆದಿದೆ ಚುನಾವಣೆಯಲ್ಲಿ ಬೇರೆ ಬೇರೆ ಪಕ್ಷ ಸಂಗಡಗಳು ಹೋರಾಡುವವಿದ್ದು ಪ್ರ[illegible] ರಾಜ್ಯಾಧಿಕಾರ ಪಡೆಯಲೋಸುಗ ರಾಷ್ಟ್ರೀಯ ಸಭೆಯವರು ಚುನಾವಣೆಯಲ್ಲಿ ಸೇರ್ಪಡೆಯಾಗಿದ್ದಾರೆ ರಾಷ್ಟ್ರೀಯ ಸಭೆಗೂ ಸರಕಾರಕ್ಕೂ ಇತ್ತ ೬೦ ವರ್ಷಗಳಿಂದ ಹೋರಾಟ ನಡೆದಿದೆ ಈಗಿನ ರಾಜ್ಯದಾಡಳಿತೆಯಿಂದ ಪ್ರಜೆಗಳಿಗೆ ಸುಖವಿಲ್ಲ, ಪ್ರಜೆಗಳು ಸುಲಿಯಲ್ಪಡುತ್ತಾರೆ, ಪ್ರಜೆಗಳು ಹೀನ ದೆಸೆಗೆ ಇಳಿದರು ಪ್ರಜೆಗಳ ಉನ್ನತಿಗೆ ಪ್ರಜಾಸ್ವಾತಂತ್ರ್ಯ ಬೇಕು ಅದನ್ನು ರಾಜ್ಯಕರ್ತರಾದ ಬ್ರಿಟಿಶರಿಂದ ಕೇಳಿಕೊಳ್ಳಬೇಕು ಹೀಂಗೆ ರಾಷ್ಟ್ರೀಯ ಸಭೆಯ ಸಿದ್ಧಾಂತವಾಗಿದೆ ಬ್ರಿಟಿಶರು ಸುಖದಿಂದ ರಾಜ್ಯಾಧಿಕಾರವನ್ನು ಬಿಟ್ಟುಕೊಡುವವರಲ್ಲದ್ದರಿಂದ ಅವರ ಹಿಂದುಸ್ಥಾನವನ್ನು ಬಿಟ್ಟು ಸ್ವದೇಶಕ್ಕೆ ಮರಳಲು ಒತ್ತಾಯಪಡಿಸಬೇಕು ಹೀಗೆ ರಾಷ್ಟ್ರೀಯ ಸಭೆಯವರು ಒಂದು ಉಗ್ರ ಕ್ರಮವನ್ನೂ ಕೈಕೊಂಡಿದ್ದಾರೆ ತಮ್ಮ ಸ್ವಾರ್ಥಕ್ಕೆ ಹೀಗೆ ರಾಷ್ಟ್ರೀಯ ಸಭೆಯವರು ಅಡ್ಡಬರುವದರಿಂದ ಬ್ರಿಟಿಶರು ರಾಷ್ಟ್ರೀಯ ಸಭೆಯವರನ್ನು ಹಲವು ತರದಿಂದ ಹಿಂದೆ ಕಾಡಿದ್ದುಂಟು ಇನ್ನು ಮುಂದೂ ಕಾಡುವದುಂಟು ಚುನಾವಣೆಯ ಕಾಲಕ್ಕ ಅಧಿಕಾರಿಗಳು ರಾಷ್ಟ್ರೀಯ ಸಭೆಯವರನ್ನು ತೊಂದರೆಗೀಡುಮಾಡುವ ಪ್ರಸಂಗಗಳವೆ ಮತದಾರರ ಪಟ್ಟಿಯಲ್ಲಿ ರಾಷ್ಟ್ರೀಯ ಸಭಾಭಿಮಾನಿಗಳ ಹೆಸರುಗಳನ್ನು ಲೋಪ ಮಾಡುವದೊಂದು ಪ್ರಕಾರ ರಾಷ್ಟ್ರೀಯ ಸಭೆಯ ಪ್ರಚಾರಕರನ್ನು ಉಪದ್ರಪಡಿಸುವದು ಇನ್ನೊಂದು ಪ್ರಕಾರ! ರಾಷ್ಟ್ರೀಯ ಸಭೆಗೆ ವಿರೋಧ ಬಗೆಯುವ ಲೀಗ ಪಕ್ಷ ರಾಯ ಪಂಥ —ಸಾನ ಸಂಗಡ ಮೊದಲಾದ ಸಂಗಡದವರನ್ನು ಮುಂದೆಳೆಯುವದು ಮಗದೊಂದು ಪ್ರಕಾರ! ರಾಷ್ಟ್ರೀಯ ಸಭೆಯವರಿಗೆ ಮತ ಕೊಟ್ಟರೆ ದೇಶ ಘಾತ ಲೋಕ ಘಾತವಾಗುವದೆಂದು ಜನರಿಗೆ ಹೇಳಿ ಸರ್ವಘಾತ ಮಾಡುವ ಲೀಗಾದಿ ಪಕ್ಷ ಸಂಗಡದವರಿಗೆ ಬೆಂಬಲ ಕೊಡಬೇಕೆಂದು ಹೇಳುವದೂ ಬೇರೊಂದು ಪ್ರಕಾರ ನಮ್ಮಲ್ಲಿಯ ಸರ್ವ ಮಾಮಲೇದಾರರು ಎಲ್ಲಿ ಗ್ರಾಮಸ್ಥರಿಗೆ [illegible]ದಿಂದ ಕೂಡಿಸಿ, ರಾಷ್ಟ್ರೀಯ ಸಭೆಯವರನ್ನು ಸಂಕಟಕ್ಕೀಳಪಡಿಸಲು ದುಷ್ಪ್ರೇರಣೆ ಕೊಟ್ಟ ಸುದ್ದಿ ಬಂದಿದೆ! ಈ ಮಾಮಲೇದಾರರಿಗೆ ಬುದ್ಧಿ ಕಡಿಮೆ, ವಿಶಾಲ ವಿಚಾರವಿಲ್ಲ ರಾಷ್ಟ್ರೀಯ ಸಭೆಯವರು ಅಗ್ನಿಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಈಗ ಚುನಾವಣೆಯಲ್ಲಿ ಹೋರಾಡಲಣಿಯಾಗಿದ್ದಾರೆ ಸರ್ ಸ್ಟಾಫರ್ಡ ಕ್ರಿಪ್ಸರು ೧೯೪೨ನೇ ಇಸ್ವಿಯಲ್ಲಿ ಮುಂದಿಟ್ಟ ಮಾಟದ ಮನೆಯನ್ನು ರಾಷ್ಟ್ರೀಯ ಸಭೆಯವರು ಧಿಕ್ಕರಿಸಿದಾಗ ರಾಜ್ಯಧರ್ಮ ಮಾಡಬಂದ ಲೋಕಧರ್ಮರಾಯ ಸರ್ ಸ್ಟೆಫರ್ಡ ಕ್ರಿಪಸರಿಗೆ ಬಲು ಕ್ಲೇಶ ಬಂತು! ಸರಕಾರವು ಘೋರ ದಬ್ಬಾಳಿಕೆಯನ್ನಾರಂಭಿಸಿ ರಾಷ್ಟ್ರೀಯ ಸಭೆಯವರನ್ನು ಮಣ್ಣುಗೂಡಿಸುವದಾಗಿ ಕ್ರಿಪ್ಸರು ಆಗ ಇಬ್ಬ ಹಿಂದೀ ಮಹಾನುಭಾವರೊಡನೆ ಮಾತಾಡುವಾಗ ಮುಂದಾಗ್ರತೆ ಕೊಟ್ಟಿದ್ದರಂತೆ! Before he departed he told two Indians that India would witness a measure and kind of repression the like of which she had not seen before ಹೀಗೆ ದ|| ಪಟ್ಟಾಭಿಸೀತ ರಾಮಯ್ಯನವರ ಸದ್ಯಕ್ಕೆ ಪ್ರಕಟಿಸಿದ ರಾಷ್ಟ್ರೀಯ ಸಭೆಯ ಇತಿಹಾಸದ ಪುಸ್ತಿಕೆಯಲ್ಲಿ ಬರೆದಿದ್ದಾರೆ ಹೆದರಿಕೆಗೆ ಬೆದರಿ ರಾಷ್ಟ್ರೀಯ ಸಭೆಯವರು ತಮ್ಮ ಧರ್ಮವನ್ನು ಸ್ವೀಕರಿಸಿ ಘನತೆ ಪಡೆಯುವರೆಂಬದೊಂದು ಭಾವನೆ ಕ್ರಿಪ್ಸರಲ್ಲಿ ಇದ್ದಿರಬಹುದು ಆದರೆ ರಾಷ್ಟ್ರೀಯ ಸಭೆಯವರು ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬ ಭಾವನೆಯಿಂದ ಸರಕಾರವನ್ನು ಇದಿರುಗೊಂಡು ೩ ವರ್ಷಗಳ ಕಾಲ ಸತತವಾಗಿ ಬಗೆಬಗೆಯ ಆತ್ಮಕ್ಲೇಶಗಳನ್ನು ಬರಮಾಡಿಕೊಂಡು, ಸರಕಾರಕ್ಕೆ ಪ್ರಜಾಕ್ಷೋಭದ ಮಾದರಿಯನ್ನು ಪ್ರದರ್ಶಿಸಿ, ರಾಷ್ಟ್ರೀಯ ಸಭೆಯ ದುರ್ದಮ್ಯಶಕ್ತಿಯನ್ನು ತೋರ್ಪಡಿಸಿದ್ದಾರೆ ಅದರಿಂದ ಸರ್ವಾಧಿಪತಿ ವೆವ್ಹೆಲ ದೊರೆಗಳು ೨ ಬಾರಿ ಸ್ವದೇಶದ ಯಾತ್ರೆ ಮಾಡುವ ಪ್ರಸಂಗ ಬಂತು, ಸಿಮ್ಲಾದೊಳಗೆ ಗುಪ್ತ ಆಪ್ತಾಲೋಚನೆ ಮಾಡುವ ಕಾಲ ಬಂತು ರಾಷ್ಟ್ರೀಯ ಸಭೆಯವರು ಕೊಟ್ಟ ಆಘಾತದಿಂದ ಭದ್ರವಾದ ದಿಲ್ಲಿಕೋಟೆಗೆ ಈಗ ಬಿರುಕು ಬಿದ್ದಿದೆ ಚುನಾವಣೆಗಳು ಮುಗಿದೊಡನೆ ಆ ಕೋಟೆ ಕುಸ್ಸರಿಸಿ ಬೀಳುವ ಲಕ್ಷಣಗಳುಂಟು ಇಂಥ ಅದ್ಭುತ ಶಕ್ತಿಯ ಮುಂದೆ, ರಾಷ್ಟ್ರೀಯ ಸಭೆಯಂತಹ ಪರಾಕ್ರಮಶಾಲಿ ಸಂಸ್ಥೆಯ ಮುಂದ ಯಾವ ಕಿಲ್ಲೇದಾರನ ಆರ್ಭಟವೂ ನಡೆಯದು! ರಾಷ್ಟ್ರೀಯ ಸಭೆಯವರು ಇಂಥ ವಿಘ್ನಗಳಿಗೆ ಲಕ್ಷ ಕೊಡುವದಿಲ್ಲ ಅವುಗಳಿಂದ ರಾಷ್ಟ್ರಕಾರ್ಯಕ್ಕೆ ಎಳ್ಳಷ್ಟೂ ಬಾಧೆಯಾಗುವದಿಲ್ಲವೆಂದು ಅವರ ನಂಬಿಗೆಯುಂಟು ಪ್ರತಿಯೊಬ್ಬರಿಗೂ ರಾಷ್ಟ್ರೀಯ ಸಭೆಯ ಉದ್ದೇಶ ಮತ್ತು ಕಾರ್ಯಗಳು ಗೊತ್ತುಂಟು ಗ್ರಾಮಸ್ಥರು ಕಿಡಿಗೇಡಿ ಆಗಿ ರಾಷ್ಟ್ರೀಯ ಸಭೆಯವರನ್ನು ಕಾಡಿದರೆ ಆ ಗ್ರಾಮಸ್ಥರು ಮಾತ್ರ ಸ್ವತಃ ಕಷ್ಟಕ್ಕೆ ಗುರಿಯಾಗುವರು

⁂

ಹತ್ತಿಕಾಳಿನ ನಿಯಂತ್ರಣ ತಳ ತಪ್ಪಿದೆ ಕಳ್ಳಪೇಟೆಯ ವರ್ತಕರು ಜನರಿಗೆ ಸುಲಿಯುತ್ತಾರೆಂದು ಸರಕಾರವು ಬೇಂಕುಗಳಿಗೆ ಹತ್ತಿಕಾಳನ್ನು ತರಿಸಲು ಅಪ್ಪಣೆ ಕೊಟ್ಟಿತು ನಮ್ಮ ಜಿಲ್ಹೆಗೆ ಹತ್ತಿಕಾಳು ಬರುವದು ಧಾರವಾಡ ಜಿಲ್ಹೆಯಿಂದ ಹಳಿಯಾಳ ಸೀಮೆಗೆ ಧಾರವಾಡದಿಂದಲೂ ಮತ್ತು ಯಲ್ಲಾಪುರದಿಂದ ಸಿದ್ಧಾಪೂರವರೆಗಿನ ಘಟ್ಟದ ಭಾಗಕ್ಕೂ ಕಾರವಾರದಿಂದ ಭಟಕಳವರೆಗಿನ ಕರಾವಳಭಾಗಕ್ಕೂ ಹುಬ್ಬಳ್ಳಿ ಪೇಟೆಯಿಂದ ಹತ್ತಿಕಾಳು ಬರುತ್ತದೆ ಬೇಂಕಿನವರು ನಮ್ಮಲ್ಲಿಯ ಜಿಲ್ಹಾಧಿಕಾರಿಗಳಿಂದ ಅಪ್ಪಣೆ ಪಡೆದರೂ ಧಾರವಾಡ ಜಿಲ್ಹೆಯೊಳಗಿನ ನಿಯಂತ್ರಣಾಧಿಕಾರಿಗಳು ಸುಖದಿಂದ ಅವರಿಗೆ ಹತ್ತಿಕಾಳನ್ನು ಕೊಡುತ್ತಿರಲಿಲ್ಲ ಒಳಗುಟ್ಟು ಬೇರೆಯೇ ಉಂಟೆಂದು ಲೋಕಪ್ರವಾದವುಂಟು! ಬೇಂಕಿನವರ ಕಡೆಗೆ ಕಳ್ಳ ಲೆಕ್ಕವಿಲ್ಲ ಇಡಲಿಕ್ಕೂ ಅನುಕೂಲವಿಲ್ಲ ಅದರಿಂದಲೇ ಹತ್ತಿಕಾಳಿನ ವ್ಯವಹಾರಕ್ಕೆ ತೊಂದರೆಯಾಗುತ್ತದಾಗಿ ಹೇಳುತ್ತಾರೆ ನಮ್ಮ ಜಿಲ್ಹಾಧಿಕಾರಿಗಳು ದೊರೆತನಕ ದೂರಿಕೊಂಡರು ಆದರೂ ಧಾರವಾಡದ ನಿಯಂತ್ರಣಾಧಿಕಾರಿಗಳನ್ನು ನಿಯಂತ್ರಿಸಲಾಗಲಿಲ್ಲ! ಆದರಿಂದ ಬೆಳಗಾಂವ ಜಿಲ್ಹೆಯ ಬೈಲಹೊಂಗಲದಿಂದ ಹತ್ತಿಕಾಳನ್ನು ತರಿಸಿಕೊಳ್ಳಬೇಕಾಯಿತು ಈ ಬಗೆ ಯಾರದೂ ಆಕ್ಷೇಪ ಇಲ್ಲ ರಾ|| ಹಳದೀಪುರಕರರು ಚೀಲಗಕ್ಕೆ ೦—೧—೦ ಯಂತೆ ಲಾಭ ಪಡಕೊಂಡು ಹತ್ತಿಕಾಳನ್ನು ಪೂರೈಸುವ ಮಕ್ತೆ ಪಡೆದ ಬಗ್ಗೆ ಜನರು ಅವರ ಉಪಕಾರ ಸ್ಮರಿಸುತ್ತಾರೆ ಆದರೆ ರಾ|| ಹಳದೀಪುರಕರರಂತೆ ಜಿಲ್ಹೆಯೊಳಗಿನ ಇತರ ವರ್ತಕರಿಗೂ ಹತ್ತಿಕಾಳು ತರಿಸಲು ಅಪ್ಪಣೆ ಕೊಟ್ಟಿದ್ದರೆ ಹತ್ತಿಕಾಳು ಚೀಲಗಕ್ಕೆ ರೂ ೧೩ ೦ ರಕ್ಕ ಮಿಕ್ಕಿ ಮಾರಾಟವಾಗುತ್ತಿದ್ದಿಲ್ಲವೆಂದು ಬಹಳ ಜನರು ಹೇಳುತ್ತಾರೆ ಹಳಿಯಾಳದವರೊಬ್ಬರು [illegible]೦೦೦ ಚೀಲ ಹತ್ತಿಕಾಳು ಚೀಲಗಕ್ಕೆ ರೂ ೧೩-೦ ರಂತೆ ಕಾರವಾರದಲ್ಲಿ ತಂದು ಮಾರಾಟ ಮಾಡಲು ಈಗಲೂ ಸಿದ್ಧರಿದ್ದಾ

ರಂತೆ ಆದರೆ ಅವರಿಗೆ ಸ್ಥಳಿಕ ನಿಯಂತ್ರಣಾಧಿಕಾರಿಗಳ ಅಪ್ಪಣೆ ಸಿಗಲೊಲ್ಲದು! ಜೀಲಗೆಕ್ಕೆ ಈಗ ಕಾರವಾರದಲ್ಲಿ ರೂ ೧೬-೩-೬ ದರವಿದೆ ಹತ್ತಿಕಾಳಿನ ಒಕ್ಕಿ, ಬೇಲದ ಬೆಲೆ, ಕರುವ ಖರ್ಚು ಮುಂತಾದ್ದರ ಲೆಕ್ಕ ಮಾಡಿದರೆ ೧॥ ಹಳದೀಪುರಕರರ ದಲ್ಲಾಲಿ ರೂ ೦-೧೨-೦, ಅವರಿಂದ ಹತ್ತಿಕಾಳು ಪಡೆದು ಮಾರಾಟ ಮಾಡುವ ವರ್ತಕರಿಗೆ ಲಾಭ ರೂ ೦-೧೨-೦ ಹೀಗೆ ರೂ ೧-೮-೦ ಬೇಲಗೆ ಹಿಂದೆ ನಿಕ್ಕಿ ಲಾಭ ದೊರೆಯುತ್ತದೆ ಈ ಖರ್ಚಿನಲ್ಲಿ ಉಳಿತಾಯ ಮಾಡಲಿಕ್ಕೆ ಅವಕಾಶವುಂಟು ೧॥ ಹಳದೀಪುರಕರರಿಗೆ ಇಡೀ ಜಿಲ್ಲೆಯ ಮಕ್ತೆಯನ್ನು ಕೊಡದೆ, ಅದನ್ನು ಅಲ್ಲಲ್ಲಿಯ ಸ್ಥಳಿಕ ಸಂಸ್ಥೆಗಳಿಗೆ ಇಲ್ಲವೆ ಸಭ್ಯ ವರ್ತಕರಿಗೆ ಹಂಚಿಕೊಟ್ಟಿದ್ದರೆ, ರೂ ೧೩-೦ ರಕ್ಕೆ ಮಿಕ್ಕಿ ಹತ್ತಿಕಾಳಿನ ದರ ಆಗುತ್ತಿದ್ದಿಲ್ಲ ಜೀನಸು ಅಗ್ಗ ದೊರೆಯಬೇಕು ಕ್ರಮಬದ್ಧವಾಗಿ ಅದರ ವ್ಯವಹಾರ ನಡೆಯಬೇಕು, ಇದು ನಿಯಂತ್ರಣದ ಉದ್ದೇಶ ನಮ್ಮ ಜಿಲ್ಲೆ ಮತ್ತು ಧಾರವಾಡ ಜಿಲ್ಲೆ ಒಂದೇ ಮುಂಬಯಿ ಆಧಿಪತ್ಯಕ್ಕೆ ಒಳಪಟ್ಟಿವು ಹುಬ್ಬಳ್ಳಿ ಪೇಟೆಯಲ್ಲಿ ಈಗ ರೂ ೧೬ ರತ್ತಲು ಹತ್ತಿಕಾಳು ದೊರೆಯುತ್ತಿದ್ದು ಲಕ್ಷಾವಧಿ ಹತ್ತಿಕಾಳಿನ ಬೇಲಗಳು ಗಿರಾಕಿಗಳಿಲ್ಲದೆ ರಾಶಿಯಾಗಿ ಬಿದ್ದಿರುತ್ತಿದ್ದರೂ ಮತ್ತು ಅವನ್ನು ಜಿಲ್ಲೆಯಿಂದ ಹೊರಕಳಿಸಲು ವರ್ತಕರು ಸಂಘಟಿತವಾಗಿ ಗಲಾಟೆ ಮಾಡುತ್ತಿದ್ದರೂ ಧಾರವಾಡದ ನಿಯಂತ್ರಣಾಧಿಕಾರಿಗಳು ಕಿವಿ ಮುಚ್ಚಿಕೊಂಡಿದ್ದಾರೆ! ಪ್ರಾಂತಿಕ ಅಧಿಕಾರಿಗಳೂ ಕಿವುಡರಾಗಿದ್ದಾರೆ!! ಇದರ ರಹಸ್ಯ ಜನರಿಗೆ ಗೊತ್ತುಂಟು, ಆದರೆ ಬಾಯಿಂದ ಹೇಳಲಿಕ್ಕೆ ಮಾತ್ರ ಉಪಾಯವಿಲ್ಲ!

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಪೂರ್ಣ ನಿಂತಿದೆ ಆದರೆ ಹಗಲಿರುಳು ಸೆಕೆಯಾಗುತ್ತಿರುವದರಿಂದ ಬೇಗನೇ ಮಳೆಯಾಗುವ ಸಂಭವವುಂಟಂತೆ ನಿನ್ನೆ ಸಂಜೆ ಚಲೋ ಮಳೆ ಸುರಿಯಿತು ಮಕ್ಕಿಗದ್ದೆಗಳಲ್ಲಿ ಕೊಯಿಲಿಗಾರಂಭವಾಗಿದೆ ಊರಲ್ಲಿ ಇನ್ನೂ ಆರೋಗ್ಯವಿಲ್ಲ ವಿಷಮ ಜ್ವರಾದಿ ಬೇನೆಗಳು ನಿಂತಿಲ್ಲ

ರಾಷ್ಟ್ರ ಸೇವಾದಳದವರು ಅಗ್ರಹದ ನಿಮಂತ್ರಣ ಕಳಿಸಿದ್ದರಿಂದ ಕಸ್ತೂರಬಾ ಸ್ಮಾರಕ ನಿಧಿಯ ಕೆಲಸಕ್ಕಾಗಿ ಅಂಕೋಲೆಗೆ ಬಂದಿದ್ದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಶ್ರೀಮತಿ ಉಮಾಬಾಯಿ ಕುಂದಾಪುರ ಇವರೂ ಆಚೆಯ ರವಿವಾರ ರಾತ್ರಿ ಇಲ್ಲಿಗೆ ಬಂದಿದ್ದರು ಶ್ರೀಮತಿಯವರು ೭॥ ಘಂಟೆಗೆ ಈ ಊರಿಗೆ ತಲ್ಪುವರೆಂದು ತಂತಿಯಿಂದ ಸುದ್ದಿ ಬಂದಿದ್ದರಿಂದ ೯ ಘಂಟೆಗೆ ಗಾಂಧಿ ಚೌಕದಲ್ಲಿ ಸಾರ್ವಜನಿಕ ಸಭೆ ಸೇರುವದಾಗಿ ಡಂಗುರ ಸಾರಲಾಗಿತ್ತು ಅದರಂತೆ ನೂರಾರು ಜನರು ಗಾಂಧಿ ಚೌಕದಲ್ಲಿ ಕೂಡಿದ್ದರು, ನೂರಾರು ಜನರು ಮೋಟಾರ ನಿಲ್ದಾಣದಲ್ಲಿ ಶ್ರೀಮತಿಯವರ ಸ್ವಾಗತಕ್ಕಾಗಿ ನೆರೆದಿದ್ದರು ಆದರೆ ರಾತ್ರಿ ೧೧ ಘಂಟೆಯಾದರೂ ಮಾನ್ಯ ಅಭ್ಯಾಗತರ ಮೋಟಾರ ಬಂದು ತಲ್ಪಲಿಲ್ಲ! ಆದರೂ ಗಾಂಧಿ ಚೌಕದಲ್ಲೂ ನೆರೆಹೊರೆಯಲ್ಲೂ ಕೂಡಿದ ಜನರು [illegible] ಅತಿಥಿಗಳ ಆಗಮನವನ್ನು ನಿರೀಕ್ಷಿಸುತ್ತ ಕುಳಿತರು ಕೊನೆಗೆ ೧೧॥ ಸುಮಾರಿಗೆ ಅತಿಥಿಗಳು ಬಂದು ತಲ್ಪಿದರು ಅವರನ್ನು ಮೆರವಣಿಗೆಯಿಂದ ಸಭಾಸ್ಥಾನಕ್ಕೆ ಕರೆತರಲಾಯಿತು ಇಡೀ ಗಾಂಧಿ ಚೌಕು ಸ್ತ್ರೀ ಪುರುಷ ಮಕ್ಕಳಿಂದ ಕಿಕ್ಕಿರಿದು ತುಂಬಿಹೋಗಿತ್ತು ಜಿಲ್ಲಾಧ್ಯಕ್ಷ ಶ್ರೀ॥ ಶಿವರಾಮ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಕೆಲಸಕ್ಕೆ ಆರಂಭವಾಗಿ ಮೊದಲು ಶ್ರೀ ಕಮಲಾದೇವಿಯವರ ಭಾಷಣವಾಯಿತು ನೊಟ್ಟಮೊದಲು ಅವರು ಮುಂಬರುವ ಚುನಾವಣೆಯ ಉಲ್ಲೇಖ ಮಾಡಿ ಮತದಾರ ಅರ್ಹತೆಯುಳ್ಳವರೆಲ್ಲರೂ ತಮ್ಮ ಹೆಸರುಗಳನ್ನು ಮತದಾರ ಯಾದಿಗಳಲ್ಲಿ ದಾಖಲಿಸಿಕೊಳ್ಳಬೇಕೆಂದು ಸೂಚನೆ ಕೊಟ್ಟರು ನಂತರ ಅವರು ೧೯೪೨ರಿಂದ ಮುಂದೆ ನಡೆದ ಸ್ವಾತಂತ್ರ್ಯ ಚಳವಳಿಯನ್ನು ಕುರಿತು, ಭಾರತೀಯರ ಸ್ವಾತಂತ್ರ್ಯಪ್ರಿಯತೆಯನ್ನು ಶೌರ್ಯ ಧೈರ್ಯಗಳನ್ನೂ ಹೊಗಳಿದರು ಹಿಟ್ಲರನ ಆಕ್ರಮಣಕ್ಕೆ ಒಳಗಾದ ಯುರೋಪದ ಹಲವು ರಾಷ್ಟ್ರಗಳ ಜನರು ಶಸ್ತ್ರಾಸ್ತ್ರಗಳ ವಿದ್ಯೆಯನ್ನರಿತವರಿದ್ದಾಗ್ಯೂ ಕಳೆದು ಹೋದ ಸ್ವಾತಂತ್ರ್ಯವನ್ನು ಪುನಃ ಗಳಿಸುವ ಪ್ರಯತ್ನ ಮಾಡದೆ ದಿಙ್ಮೂಢರಾಗಿ ಕೂತು ಕೊಳ್ಳುತ್ತ ಶಸ್ತ್ರಾಸ್ತ್ರಗಳ ಪರಿಚಯವೇನೇನೂ ಇಲ್ಲದ ಹಿಂದೀಯರು ಸ್ವಾತಂತ್ರ್ಯಪ್ರಾಪ್ತಿಗಾಗಿ ಬಂಡಾಯವನ್ನು ಹೂಡಿ ಜಗತ್ತಿಗೆ ಒಂದು ಆದರ್ಶ ಹಾಕಿಕೊಟ್ಟಿದ್ದಾರೆಂದು ಅವರ ಮತ ಆದರೂ ಕಾಂಗ್ರೆಸ್ಸಿನ ಘಟನೆಯಲ್ಲಿ ದೋಷಗಳಿದ್ದುದರಿಂದ ಕಾಂಗ್ರೆಸ್ಸಿನ ಕಾರ್ಯ ಯಶಸ್ವಿಯಾಗಲಿಲ್ಲವೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿ, ಬರೀ ಸಭೆ, ಜಯಜಯಕಾರ ಇಲ್ಲವೆ ಪ್ರಾಸಂಗಿಕ ಉತ್ಸಾಹ ಪ್ರದರ್ಶನದಿಂದ [illegible], ಮಹಾತ್ಮರ ಹಂಚಿದ ಪರವಿಧ ರಚನಾತ್ಮಕ ಕಾರ್ಯಕ್ರಮವನ್ನು ನಿಷ್ಠೆಯಿಂದಲೂ ತತ್ಪರತೆಯಿಂದಲೂ ಆಚರಣೆಯಲ್ಲಿ ತಂದು ರಾಷ್ಟ್ರೀಯ ಸಭೆಯ ಶಕ್ತಿಯನ್ನು ಬೆಳೆಸಬೇಕೆಂದು ವಿಸ್ತಾರವಾಗಿ ನಿವರಿಸಿದರು, ಮತ್ತು ಮುಂಬರುವ ಚುನಾವಣೆಗಳಲ್ಲಿ ಸ್ವಾತಂತ್ರ್ಯವನ್ನೊಂದೇ ಕೇಳುವ ಪ್ರತಿನಿಧಿಗಳನ್ನೇ ಆರಿಸಬೇಕಾಗಿ ಬೋಧಿಸಿದರು ಶ್ರೀ॥ ಕಮಲಾದೇವಿಯವರ ಹಿಂದಿನಿಂದ ಶ್ರೀಮತಿ ಉಮಾಬಾಯಿಯವರೂ ಭಾಷಣ ಮಾಡಿ, ಸಂಘಟನೆಯ ಮಹತ್ವವನ್ನು ಬಣ್ಣಿಸಿದರು, ಸಂಘಟನೆಯಾದರೆ ನಮ್ಮ ಅನೇಕಾನೇಕ ಕಷ್ಟಗಳು ದೂರಸಾಗುವಂತುಂಟೆಂದು ಹಲವು ಉದಾಹರಣೆಗಳನ್ನು ಕೊಟ್ಟು ವಿವರಿಸಿದರು ಅಧ್ಯಕ್ಷರ ಸಮಾರೋಪ ಮಾಡಿದ ಮೇಲೆ, ಅಭಾರಮನ್ನಣೆ ಮುಗಿದ್ದಾಗ ರಾತ್ರಿ ೧೨ ಘಂಟೆಯ ಸುಮಾರಿಗೆ ಸಭೆ ಮುಗಿಯಿತು ಅತಿಥಿಗಳಿಬ್ಬರೂ ಮರುದಿನ ಮುಂಜಾನೆ ಶಿರ್ಶಿ ಮಾರ್ಗವಾಗಿ ಹುಬ್ಬಳ್ಳಿಗೆ ಹೊರಟು ಹೋದರು

ಇತ್ತಲಾಗಿ ಹಳ್ಳಿಗಳೊಳಗಿನ ಯೋಗ್ಯ ಧಾರಣೆ ಅಂಗಡಿಗಳಿಗೆ ಅಕ್ಕಿ, ಸಕ್ಕರೆ ಮುಂತಾದ ವಸ್ತುಗಳ ಪೂರೈಕೆ ಕಾಲಕಾಲಕ್ಕೆ ಆಗುವದಿಲ್ಲೆಂದು ದೂರು ಕೇಳಿ ಬರುತ್ತದೆ ಕಳೆದ ರವಿವಾರ ಉಪ್ಪಿನಪಟ್ಟಣದವರೊಬ್ಬರು ೨ ದಿನಗಳಿಂದ ತಮ್ಮಲ್ಲಿ ಅಕ್ಕಿ ಸಿಗುವದಿಲ್ಲೆಂತಲೂ ಅನೇಕರು ಉಪವಾಸ ಬೀಳುವ ಪ್ರಸಂಗ ಬಂದಿದೆಯೆಂತಲೂ ದೂರುತ್ತಿದ್ದರು ಚೌಕಶಿ ಮಾಡಿದಲ್ಲಿ ಅಲ್ಲಿಯ (ಕತಗಾಲ) ಸರಕಾರಿ ಉಗ್ರಾಣದಲ್ಲಿ ಅಕ್ಕಿ ಶಿಲ್ಲಕ್ಕ ಇದ್ದಿಲ್ಲವಂತೆ ಅಕ್ಕಿ ಕಳಿಸಿಕೊಡಲು ಕೂಡಲೆ ಪತ್ರಬರೆದರೆ ೪-೫ ದಿನಗಳ ವರೆಗೆ ಜವಾಬ ಬಂದು ಕಚೇರಿಯಿಂದ ಇನ್ನೊಂದು ಕಚೇರಿಗೆ ಒಂದು ಅಧಿಕಾರಿಯಿಂದ ಇನ್ನೊಂದು ಅಧಿಕಾರಿಗೆ ಮುಂದೆ ಸಾಗಿಯಂತ ಹೋಗುತ್ತದಾಗಿಯೂ ನಿಯಂತ್ರಣಾಧಿಕಾರಿಗಳ ವರ್ಗದಲ್ಲಿ ಇತ್ತೀಚೆ ದೀರ್ಘಸೂತ್ರತನ (red tapism) ಮನೆ ಮಾಡಿಕೊಂಡಿದೆಯೆಂದೂ ಕಂಡುಬರುತ್ತದೆ ಆಹಾರ ಸಾಮಗ್ರಿಗಳ ಪೂರೈಕೆಯ ಬಗೆ ತಂಟೆಗಳು ಬಂದಾಗ್ಯೂ ಈ ದೀರ್ಘಸೂತ್ರತನ ಬಿಡುವದಿಲ್ಲವಂತೆ! ಆಹಾರ ಪೂರೈಕೆಯ ಬೇಡಿಕೆಗಳು ಬಂದಲ್ಲಿ ನಿಮಿಷಾರ್ಧದ ವಿಳಂಬ ಮಾಡದೆ ಅವನ್ನು ಪೂರೈಸತಕ್ಕದ್ದೆಂದು ಮೇಲಿಂದ ಕಟ್ಟಪ್ಪಣೆಯಾಗುವದು ಅವಶ್ಯವುಂಟು

ಮಾದನಗೇರಿ ಊರವರು ತಮ್ಮ ಹಣದಿಂದ ಶಾಲೆಯ ಕಟ್ಟಡ ಕಟ್ಟಿಸಿಕೊಟ್ಟದ್ದರಿಂದ ಅಲ್ಲಿ ಈಗ ೫-೬ ವರ್ಷಗಳಿಂದ ಒಂದು ಕನ್ನಡ ಶಾಲೆಯುಂಟು ೫೦ರಷ್ಟು ಹುಡುಗರು ಶಾಲೆಯಲ್ಲಿ ಕಲಿಯುತ್ತಿದ್ದಾರೆ ಶಾಲೆ ಕಟ್ಟಿಸಲಿಕ್ಕೂ ಊರ್ಜಿತಗೊಳಿಸಲಿಕ್ಕೂ ರಾ॥ ಮಂಜನಾಥ ಕೃಷ್ಣ ಶಾನಭಾಗರೆಂಬ ಶಿಕ್ಷಕರು ಪರಿಶ್ರಮಪಟ್ಟಿದ್ದರು ಆದರೆ ಊರವರ ದುರ್ದೈವದಿಂದ ಅವರಿಗೆ ಬೇರೆ ಊರಿನ ಕೆಲವು ಕಾಲದಲ್ಲೇ ವರ್ಗವಾಗಿ ರಾ॥ ಈಶ್ವರ ನಾಯ್ಕರೆಂಬ ಹೊಸ ಶಿಕ್ಷಕರು ಬಂದರು ಇವರೂ ಕೆಲದಿನ ಮನ ಮುಟ್ಟಿ ಮಾಡಿದರು ಆದರೆ ಇತ್ತಲಾಗಿ ಅವರಿಗೆ ಬೇಸರ ಬಂದಂತೆ ಕಾಣುತ್ತದೆ ಅವರು ಮುಂಜಾನೆ ೯॥ಗೆ ಮತ್ತು ಸಂಜೆ ೪ಗೆ ಶಾಲೆಗೆ ಬರುತ್ತಾರೆ ಹುಡುಗರ ಅಭ್ಯಾಸದ ಕಡೆಗೆ ಅವರ ಲಕ್ಷವಿಲ್ಲ ಆದರಿಂದ ಶಾಲೆಗೆ ಬರುವ ಹುಡುಗರ ಸಂಖ್ಯೆ ಈದಿನ ೧೬-೧೭ಕ್ಕೆ ಇಳಿದಿದೆ ಎಷ್ಟೋ ಹುಡುಗರು ೧॥ ಮೈಲು ದೂರದಲ್ಲಿರುವ ಹಿರೇಗುತ್ತಿ ಶಾಲೆಗೆ ಹೋಗುತ್ತಾರೆ ಶಾಲೆ ಹೀಗೇಕೆ ನಡೆಯುತ್ತಿದೆ ಎಂಬುದರ ಕಡೆ ಶಾಲೆಯ ತಪಾಸಣೆಗಾಗಿ ಬರುತ್ತಿರುವ ತಪಾಸಣೆದಾರರೂ ನೋಡುವದಿಲ್ಲ! ತಮ್ಮ ಪೂಜೆ ಸರಿಯಾಗಿ ಆಗುತ್ತಿದ್ದ ಮೇಲೆ ಅವರು [illegible]ಕದ ಸ್ಥಳಿಕ ವಿಷಯಗಳನ್ನೇಕೆ ನೋಡುವರು? ಅದೇನೂ ಇರಲಿ ರಾ॥ ಈಶ್ವರನಾಯ್ಕರು ಮಾದನಗೇರಿಯಲ್ಲೇ ಉಳಿದರೆ ಇಲ್ಲವೆ ಅವರು ತಮ್ಮ ನಡಾವಳಿಯನ್ನು ತಿದ್ದದಿದ್ದರೆ ಶಾಲೆ ಮುಚ್ಚುವ ಪ್ರಸಂಗ ಬರುವದು ಖಂಡಿತ ಎಂದು ಮಾದನಗೇರಿಯ ನಿವಾಸಿಗಳೊಬ್ಬರು ದೂರುತ್ತಾರೆ

ಈ ಜಿಲ್ಲೆಯಲ್ಲಿ — ಅದರಲ್ಲೂ ಹೆಚ್ಚಾಗಿ ಕುಮಟೆಯಲ್ಲಿ ಇಲ್ಲವೆ ಅದರ ನೆರೆಹೊರೆಯಲ್ಲಿ — ಒಂದು ಕಾಲೇಜು ತೆರೆಯಬೇಕೆಂಬ ವಿಚಾರ ಈಗ ನಾಲ್ಕಾರು ತಿಂಗಳಿಂದ ನಡೆಯುತ್ತಿದೆಯಷ್ಟೇ ಈ ವಿಚಾರಕ್ಕೆ ಮೂರ್ತ ಸ್ವರೂಪ ಕೊಡುವದಕ್ಕಾಗಿ ಹಿಂದೆ ನೇಮಿಸಲ್ಪಟ್ಟ ತಾತ್ಪೂರ್ತಿಕ ಮಂಡಳದವರು ನಿನ್ನೆ ಸಂಜೆ ಜ್ಯೂಬಿಲಿ ಧರ್ಮಶಾಲೆಯ ಅಟ್ಟದ ಮೇಲೆ ಜಿಲ್ಲೆಯ ಪ್ರಮುಖ ಶಿಕ್ಷಣಾಭಿಮಾನಿಗಳ ಸಭೆ ಕರೆದಿದ್ದರು ಮುಂಬಯಿಯ ಹಾಯ ಕೋರ್ಟ ವಕೀಲ ರಾ॥ ಜಿ ಎ ಮುಡೇಶ್ವರ, ಮುಂಬಯಿಯ ಕರ್ನಾಟಕ ಪ್ರೆಸ್ಸಿನ ಒಡೆಯರಾಗಿದ್ದ ರಾ॥ ಎಮ್ ಎನ ಕುಲಕರ್ಣಿ ಇವರು ಈ ಸಭೆಗಾಗಿ ಮುದ್ದಾಂ ಮುಂಬಯಿಯಿಂದ ಬಂದಿದ್ದರು ಅಂಕೋಲೆಯ ರಾ॥ ಶಿರೂರ ಮುಕುಂದಪ್ರಭು, ಕಾರವಾರದ ವಕೀಲ ರಾ॥ ಹಳದೀಪುರ ಮತ್ತು ರಾ॥ ಬಿ ಚಂದಾವರ, ಹೊನ್ನಾವರದಿಂದ ವಕೀಲ ರಾ॥ ಲಕ್ಷ್ಮಣ ಪ್ರಭು ರಾ॥ ಎನ್ ಪಿ ಫರ್ನಾಂಡೀಸ ವಗೈರೆ ಹಲವರೂ ಬಂದಿದ್ದರು ರಾ॥ ಮುಡೇಶ್ವರರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಕಾಲೇಜು ತೆರೆಯಲಿಕ್ಕೆ ಕುಮಟೆಯಂತಹ ಕಾರವಾರವೇ ಹೆಚ್ಚು ಪ್ರಶಸ್ತ ಸ್ಥಳವೆಂದು ಕಾರವಾರದ ವಕೀಲರು ವಾದಿಸಿದರು ಕಾರವಾರವು ಸುಸಂಸ್ಕೃತರ ಕೇಂದ್ರವೆಂದೂ, ಜಿಲ್ಲಾಧಿಕಾರಿಗಳ ಮುಖ್ಯಸ್ಥಳವೆಂದೂ ಅವರು ಪ್ರತಿಪಾದಿಸಿದರು! ಆದರೆ ಜಿಲ್ಲಾಧಿಕಾರಿಗಳಿಗೂ ಕಾಲೇಜಿಗೂ ಏನು ಸಂಬಂಧವುಂಟೆಂಬುದಾಗಲಿ, ಕಾರವಾರದೊಳಗಿನ ಸಂಸ್ಕೃತಿಯ ಸ್ವರೂಪವನ್ನಾಗಲಿ ಅವರು ಸ್ಪಷ್ಟೀಕರಿಸಲಿಲ್ಲ! ಅವರ ಪ್ರತಿಪಾದನೆ ಯಾರಿಗೂ ಮೆಚ್ಚಿಗೆಯಾಗಲಿಲ್ಲ ಜಿಲ್ಲೆಯ ಕೇಂದ್ರವಾದ ಎಂದರೆ ಕುಮಟೆಯೇ ಕಾಲೇಜಿಗೆ ಪ್ರಶಸ್ತ ಸ್ಥಳವೆಂದು ಸಭೆಯ ಅಭಿಪ್ರಾಯವಾಗಿ, ತಾತ್ಪೂರ್ತಿಕ ಮಂಡಳದವರು ಸಿದ್ಧಪಡಿಸಿದ ಘಟನೆ ಸ್ವೀಕೃತವಾಯಿತು ಮತ್ತು ರಾ॥ ಜಿ ಎ ಮುಡೇಶ್ವರ ಇವರ ಅಧ್ಯಕ್ಷತೆಯಲ್ಲಿ ಒಂದು ಕೌನ್ಸಿಲು ಮತ್ತು ರಾ॥ ನಾರಾಯಣ ತಿ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಮಂಡಳ (ಗವ್ಹರ್ನಿಂಗ ಬಾಡಿ) ನೇಮಿಸಲ್ಪಟ್ಟವು ರಾ॥ ನಾರಾಯಣ ಹೆಗಡೆಯವರು ಕಾಲೇಜು ನಿಧಿಗೆ ರೂ ೧೦೦೦ ದಾನ ಕೊಡುತ್ತೇನೆಂದು ಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ

ಹೊನ್ನಾವರ— (ತಾ ೧೪ ೧೦ ೪೫) ಇಲ್ಲಿಯ ಪ್ರಮುಖ ವರ್ತಕರೂ ನಗರ ಧುರೀಣರೂ ಆಗಿರುತ್ತಿದ್ದ ರಾ॥ ಪರಮೇಶ್ವರ ಗಣೇಶ ಶೆಟ್ಟಿ ಇವರು ನಿನ್ನೆ ರಾತ್ರಿ ಕುಮಟೆಯಲ್ಲಿ ಜಲೋದರದ ವ್ಯಾಧಿಯಿಂದ ಸ್ವರ್ಗಸ್ಥರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ ತಮ್ಮ ನ[illegible] ಚಾತುರ್ಯದಿಂದಲೂ ಬುದ್ಧಿಸಾಮರ್ಥ್ಯದಿಂದಲೂ ಮೃತರು ಪ್ರಾರಂಭದಿಂದಲೇ ವರ್ತಕಿಯ ವ್ಯವಸಾಯದಲ್ಲಿ ಕೀರ್ತಿ ಸಂಪಾದಿಸಿ ಜನರೊಳಗೂ ಪ್ರತಿಷ್ಠೆಯನ್ನು ಸಂಪಾದಿಸಿದ್ದರು ಯಥಾವಕಾಶ ಸಾರ್ವಜನಿಕ ಸೇವೆಯನ್ನು ಮಾಡುತ್ತಿದ್ದರು ನಡುಪ್ರಾಯದಲ್ಲಿ ಅವರನ್ನು ಆಹ್ವಾನಿಸಿ ಕಾಲನು ಅವರ ಕುಟುಂಬದವರ ಮೇಲೂ ಆಪ್ತೇಷ್ಟರ ಮೇಲೂ ವಜ್ರಾಘಾತ ಮಾಡಿದ್ದಾನೆ ಆದರೆ ಈಶ್ವರೇಚ್ಛೆಯ ಮುಂದೆ ಯಾರ ಉಪಾಯವೂ ನಡೆಯದು ಎಂಬುದನ್ನು ನೆನೆದು ಅವರು ಸೈರಿಸಿಕೊಳ್ಳಲೆಂದು ಮೃತಾತ್ಮನಿಗೆ ಸದ್ಗತಿಯಾಗಲಿ

ಮನ್ನು [illegible] ತೆಂಕ [illegible] ಕಾಲದಲ್ಲಿ [illegible] ವರ್ಗ [illegible] ಮಾಡಿದ [illegible] ಕಂಡು [illegible]

[illegible] ಸೂತ್ರ-ಯಜ್ಞ [illegible] ನಗರ ಸಭೆಯ [illegible]

[illegible] ನಗರ ಸಭೆಯು ಸಂಕ [illegible] ಆದನ್ನು [illegible]

ಇಲ್ಲಿ ಕಳೆದ ವರ್ಷ [illegible] ಅವಧಿಯಲ್ಲಿ ಒಂದು ಕೂಡಲೇ ತಮ್ಮಲ್ಲಿದ್ದ [illegible] ಮಾಡಕೂಡದೆಂದು [illegible] ಆದರೆ ಅದನ್ನು [illegible] ಸಿಗುವದಿಲ್ಲ! ಸರಕಾರದವರಿಗೆ [illegible] ಇದರಿಂದ ತಮಗೆ [illegible] ಎಂದು [illegible]

ಕಳೆದ [illegible] ಜಿಲ್ಲೆ [illegible] ಇಲ್ಲಿ [illegible] ಅವರದೊಂದು [illegible] ದೇಶ ಪ್ರೇಮ [illegible] ಆವಾಗ [illegible] ಅಂದರೆ [illegible] ಮತ್ತು [illegible] ಮತ್ತು ಅವರನ್ನು ಜನತೆಯ [illegible] ಗುರಿಯಾಗಿದ್ದ [illegible] ಮಾಡಿ ಅವರು [illegible] ಅವರ [illegible] ಕೆಲಸ [illegible]

[illegible] ಸಂಬಂಧದಲ್ಲಿ [illegible] ವೃತ್ತ"ದಲ್ಲಿ [illegible] ಹುಕುಮಿನ ಪ್ರಕಾರ ಅವರವರ ಮನೆಗಳ [illegible] ಅವರವರಿಗೆ ಕೊಡುತ್ತಾರಂತೆ [illegible] ಮಾಡಿದ್ದ [illegible] ಸದರಿಯ [illegible]

ಶಿರಾಲಿ— (ತಾ ೧೨-೧೦-೪೫) ಮಳೆಯಿಲ್ಲ [illegible]

[illegible] ಅಂಗಡಿಗಳಲ್ಲಿ [illegible] ಜನರ [illegible] ಹೆಚ್ಚಿಗೆ [illegible] ಸಕ್ಕರೆಯ ಪ್ರಮಾಣವೂ [illegible] ಸಕ್ಕರೆ [illegible]

ಭಟಕಳ— (ತಾ [illegible] ೪೫) [illegible] ಹೊನ್ನಾ [illegible] ತೆಂಗಿನ [illegible] ಕೆಲವು ಮನೆ [illegible] ಸುದ್ದಿಯುಂಟು.

ಸಿದ್ದಾಪುರ— [illegible] ಅಕ್ಟೋಬರ [illegible] ಉತ್ಸವ [illegible] ಗುರುವಾರ [illegible]

ಸಿಂಗರಿಸಲ್ಪಟ್ಟಿತ್ತು. ಬೆಳಗುಮುಂಜಾನೆ ನೂರಾರು ಜನರು ರಾ॥ ದೊಡ್ಡನೆಯವರ ಪಟಾಂಗಣದಲ್ಲಿ ಸೇರಿ ಸಾಮುದಾಯಿಕ ಪ್ರಾರ್ಥನೆ ಮಾಡಿದರು. ಮುಂದೆ ಅಲ್ಲಿಂದ ಪ್ರಭಾತಫೇರಿ ಹೊರಡಿಸಿ, ಊರೊಳಗಿಂದ ಹಾದು ರಾ॥ ಚಂದ್ರಘಟಗಿಯವರ ಪಟಾಂಗಣದಲ್ಲಿ, ಈ ಉತ್ಸವಕ್ಕೆಂದೇ ರಾ॥ ವೆಂಕಟಗಿರಿ ಗೌಡಚಿತ್ರಿಕರು ತಯಾರಿಸಿಟ್ಟ ಮಹಾತ್ಮರ ಮೂರುತಿಯ ಸನ್ಮುಖದಲ್ಲಿ ಧ್ವಜವಂದನೆಯ ಕಾರ್ಯ ಮಾಡಿದರು. ರಾ॥ ಮುಡಗಾಂವಕರರು ಆಗ ಧ್ವಜದ ಮಹತ್ವವನ್ನು ತಿಳಿಸಿ ಹೇಳಿದರು. ರಾ॥ ಚಂದ್ರಘಟಗಿಯವರು ನೂಲು ಮತ್ತು ನಗದಿ ಹಣದ ಕಾಣಿಕೆಯನ್ನು ಸಲ್ಲಿಸಿದ ಮೇಲೆ, ಮಹಾತ್ಮಾಜಿಯವರ ಮೂರುತಿಯನ್ನೂ ಭಾರತಾಂಬೆಯ ಭಾವ-ಚಿತ್ರವನ್ನೂ ಕೈ-ರಾಟಿಯನ್ನೂ ಸಿಂಗರಿಸಿದ ರಥದಲ್ಲಿ ಕೂಡ್ರಿಸಿ ಉತ್ಸವ ಹೊರಡಿಸಲಾಯಿತು. ಅಲ್ಲಲ್ಲಿ ಜನರು ಆರತಿಗಳನ್ನೆತ್ತಿ, ಮಹಾತ್ಮರಿಗೆ ಫಲ ಪುಷ್ಪಗಳನ್ನರ್ಪಿಸುತ್ತಿದ್ದರು. ಉತ್ಸವವು ಊರನ್ನೆಲ್ಲ ಸುತ್ತಿ ರಾ॥ ದೊಡ್ಡನೆಯವರ ಮನೆಯ ಮುಂದಿನ ಉತ್ಸವ ಮಂಟಪಕ್ಕೆ ಮುಟ್ಟಲು ೨॥ ತಾಸು ತಗಲಿತು. ಅಲ್ಲಿ ಮುಂದೆ ಸೂತ್ರಯಜ್ಞ ನಡೆಯಿತು. ಸಾಯಂಕಾಲದಲ್ಲಿ ಪುನಃ ಸಾಯಂ-ಫೇರಿ, ಧ್ವಜಾವರೋಹಣ, ಭಾಷಣಗಳಾದವು. ಶುಕ್ರವಾರದಿಂದ ಮಂಗಳವಾರದ ವರೆಗೆ ದಿನಾಲೂ ನಗರ-ಸಂಕೀರ್ತನೆ, ಧ್ವಜವಂದನೆ, ಸೂತ್ರಯಜ್ಞ, ಭಾಷಣಗಳು, ಪ್ರವಚನಗಳು ಈ ರೀತಿ ಕಾರ್ಯಕ್ರಮಗಳು ನಡೆದವು. ಮಂಗಳವಾರ ತಿರುಗಿ ಗುರುವಾರದಂತೆಯೇ ಮಹಾತ್ಮರ ಮೂರ್ತಿಯ ಉತ್ಸವವಾಯಿತು. ಉತ್ಸವಕ್ಕೆ ೪-೫ ಸಾವಿರ ಜನರು ಕೂಡಿದ್ದರು. ಬುಧವಾರ ಸಪ್ತಾಹದ ಕೊನೆಯ ದಿನ. ಅಂದು ನಿತ್ಯಕ್ರಮಗಳೆಲ್ಲ ನಡೆದ ಬಳಿಕ ಸಂಜೆಯಲ್ಲಿ ಶ್ಯಾಂವಾ ಚೌಕಿನಲ್ಲಿ ಜಾಹೀರ ಸಭೆ

(೧ನೇ ಪುಟದ ಮೇಲೆ ಮುಂದರಿಸಿದೆ.)

ಆಜ್ಞೆ.

ನಂಬರು 30

ಸರಕಾರಿ ಪ್ರಕಟನೆ ಗೃಹಖಾತೆ (ಪೊಲಿಟಿಕಲ್ ಯುದ್ಧ) ನಂಬರ ಎಸ್ ಡಿ. II/370 ತಾರೀಖು 15ನೇ ಸಪ್ಟಂಬರ 1944ನೇದರ ಜೊತೆಗೆ ಭಾರತ ಸಂರಕ್ಷಣೆ ನಿಯಮ 81 ಉಪನಿಯಮ 2 ರ ನ್ಯಾಯ ಮತ್ತು ಹೀಗೆ ಮಾಡುವ ಮೊದಲಿಂದ ಸಹಾಯಕವಿರುವ ಎಲ್ಲ ಅಧಿಕಾರಗಳ ಮೇಲಿಂದ ಕಲೆಕ್ಟರ ವ ಜಿಲ್ಹಾ ಮಾಜಿಸ್ಟ್ರೇಟ ಕಾನಡಾರವರು ಆಜ್ಞೆ ಮಾಡುವದೇನಂದರೆ:—

(1) ತಾರೀಖು 15ನೇ ಆಗಸ್ಟ 1945ನೇ ದಿವಸದಿಂದ ಕಾನಡಾ ಜಿಲ್ಹೆಯಲ್ಲಿ ಯಾವನೇ ಬೆಲ್ಲದ ವ್ಯಾಪಾರಿಯು (a) ಹೊರಗಿನ ಜಿಲ್ಹೆಯಿಂದ ತಂದ ಬೆಲ್ಲವನ್ನು ಇದಕ್ಕೆ ಜೋಡಿಸಿದ ಪರಿಶಿಷ್ಟದಲ್ಲಿ ತೋರಿಸಿದ ದರಕ್ಕಿಂತ ಹೆಚ್ಚಿಗೆ ದರದಿಂದ ಮಾರಬಾರದು ಯಾ ಮಾರಗೊಡಬಾರದು (b) ಭಾರತ ಸಂರಕ್ಷಣೆ ಕಾಯದೆಯು ಅನ್ವಯ ಯೋಗ್ಯ ಅಧಿಕಾರಿಯು ಹೊರಡಿಸಿದ ವ ಆಯಾ ವೇಳೆಯಲ್ಲಿ ಅಮಲಿನಲ್ಲಿ ಇದ್ದ ಬೇರೆ ಯಾವದಾದರೊಂದು ಹುಕುಮಿನ ಆಧಾರದ ವಿನಃ ಗಿರಾಕಿಯರು ಪರಿಶಿಷ್ಟದಲ್ಲಿ ತೋರಿಸಿದ ಕಿಮ್ಮತ್ತು ಕೊಟ್ಟು ಬೆಲ್ಲವನ್ನು ಬೇಡಿದಲ್ಲಿ ಬೆಲ್ಲದ ವ್ಯಾಪಾರಿಯು ಅದನ್ನು ಅವರಿಗೆ ಮಾರಲಿಕ್ಕೆ ತಕರಾರ ಮಾಡಬಾರದು (2) ಈ ಜಿಲ್ಹೆಯಲ್ಲಿ ಪ್ರತಿ ಒಬ್ಬ ಬೆಲ್ಲದ ವ್ಯಾಪಾರಿಯು (a) ತನ್ನ ದುಕಾನದ ಯಾ ವ್ಯವಹಾರ ನಡಿಸುವ ಸ್ಥಳದ ಪ್ರಸಿದ್ಧ ಭಾಗದಲ್ಲಿ ಈ ಆಜ್ಞೆಯ ಒಂದು ಪ್ರತಿಯನ್ನು ಬಹಿರಂಗವಾಗಿ ಕಾಣುವಂತೆ ಇಡತಕ್ಕದ್ದು (b) ಬೆಲ್ಲದ ವ್ಯಾಪಾರಿಯು ಪ್ರತಿ ಒಂದು ಸಲದ ಬೆಲ್ಲದ ವ್ಯಾಪಾರದ ಬಗ್ಗೆ ಖರೀದಿದಾರನು ಬೇಡಿದಲ್ಲಿ ಆತನಿಗೆ ಮಾರಿದ ಬೆಲ್ಲದ ಗುಣ ಮತ್ತು ಪರಿಮಾಣ ಇವುಗಳ ಪೂರ್ಣ ಮತ್ತು ಸರಿಯಾದ ವಿವರಗಳನ್ನೂ ಹಾಗೂ ಮಾರಾಟ ಮೊದಲಾದ ದರವನ್ನೂ ನಮೂದಿಸಿ ಖರೀದಿದಾನಿಗೆ ರೋಖಡಿ ಬಿಲ್ಲನ್ನು ಅಥವಾ ಇತರ ಪಾವ್ತಿಯನ್ನು ಕೊಡತಕ್ಕದ್ದು (3) ಸದರಿ ಹುಕುಮಿನ ಕಲಮ (1) (b) ನೇದರ ಉಲ್ಲಂಘನೆಯ ಇಲಜಾಮು ಮಾಡುವ ಯಾವದೇ ಕೋರ್ಟಿಗೆ ಸದರಿ ಹುಕುಮಿನ ಉಲ್ಲಂಘನೆ ಮಾಡಿದ ಬಗ್ಗೆ ಮನದಟ್ಟಾದರೆ ಸದರಿ ಕೋರ್ಟು ಸದರಿ ಉಲ್ಲಂಘನೆಗೆ ಸಂಬಂಧಿಸಿದ ಬೆಲ್ಲವನ್ನು ಆದರ ಕಟ್ಟೋಣ ಮತ್ತು ಆಚ್ಛಾದನೆ ಸಮೇತ ಸರಕಾರಕ್ಕೆ ದಾಖಲ ಮಾಡಲಿಕ್ಕೆ ಆಜ್ಞಾಪಿಸಬಹುದು.

ಸ್ಪಷ್ಟೀಕರಣ — ಈ ಆಜ್ಞೆ ಸಲುವಾಗಿ (a) ವ್ಯಾಪಾರಿ (dealer) ಇದರ ಅರ್ಥ ಬರೇ ಬೆಲ್ಲದ ವ್ಯಾಪಾರ ಮಾಡುವವನು ಯಾ ಬಾಕಿ ಜೀನಸುಗಳ ಜೊತೆಗೆ ಬೆಲ್ಲದ ವ್ಯಾಪಾರ ಮಾಡುವವನು ಎಂತ ತಿಳಕೊಳ್ಳತಕ್ಕದ್ದು

(b) ರೋಖ ವಿಕ್ರಿ ಅಂದರೆ ಒಂದು ಸಲ ಒಂದು ಬಂಗಾಲಿ ಮಣ (ಎಂಬತ್ತೆರಡು ಪೌಂಡು) ಯಾ ಅದಕ್ಕಿಂತ ಹೆಚ್ಚು ಮಾರಾಟ ಮಾಡುವದು.

(c) ಪ್ರತಿ ಸಲದ ಬೆಲ್ಲದ ವಿಕ್ರಿಯ ಬಾಬ್ತು ಖರೀದಿದಾರನ ಕಡೆಯಿಂದ ಬರತಕ್ಕ ಒಟ್ಟು ರಕಮಿನಲ್ಲಿ ಚಿಲ್ಲರೆ 15 ಪೈ ಅಥವಾ ಅದಕ್ಕಿಂತ ಹೆಚ್ಚು ಇದ್ದಲ್ಲಿ ಸದರಿ ಚಿಲ್ಲರೆಯನ್ನು ಒಂದು ಬಿಲ್ಲಿಯೆಂತಾ ಹಿಡಿಯಬಹುದು ಮತ್ತು 15 ಪೈಗಿಂತಾ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡಬೇಕು

ಟೀಪು — ಭಾರತ ಸಂರಕ್ಷಣೆ ಕಾಯಿದೆಯ 119ನೇ ನಿಯಮದಲ್ಲಿಯ ಉಪನಿಯಮ 1ರಂತೆ ಈ ಆಜ್ಞೆಯನ್ನು ಮುಂಬಯಿ ಸರಕಾರದ 'ಗ್ಯಾಝೇಟದಲ್ಲಿ" ವ ಇದರ ಕನ್ನಡ ಭಾಷಾಂತರವನ್ನು 'ವಿಚಾರಿ' ಮತ್ತು 'ಕಾನಡಾವೃತ್ತ" ಗಳಲ್ಲಿ ಪ್ರಸಿದ್ಧ ಮಾಡತಕ್ಕದ್ದು ಮತ್ತು ಇದರ ನಕಲುಗಳನ್ನು ಈ ಜಿಲ್ಹೆಯೊಳಗಿನ ತಾಲೂಕ ವ ಮಹಾಲ ಆಫೀಸಗಳ ನೋಟೀಸು ಬೋರ್ಡುಗಳಿಗೆ ಮತ್ತು ಚಾವಡಿಗಳಿಗೆ ಅಂಟಿಸತಕ್ಕದ್ದು ಮತ್ತು ಅದರ ಮಜಕೂರನ್ನು ಡಂಗುರಿಸಿ ಜಾಹೀರ ಮಾಡತಕ್ಕದ್ದು

ಪರಿಶಿಷ್ಟ

ತಾಲೂಕ ಯಾ ಪೇಟೆಯ ಹೆಸರು	ಪ್ರತಿ ಬಂಗಾಲಿ ಮಣಕ್ಕೆ (೮೨ ಪೌಂಡಿಗೆ) ರೋಖ ದರ	2 (ಎರಡು) ಪೌಂಡುಗಳಿಗೆ ಕಿರಕೋಳ ದರ
	ರೂ ಆ ಪೈ	ರೂ ಆ ಪೈ
ಕಾರವಾರ ತಾಲೂಕ	17—7—0	0—7—0
ಅಂಕೋಲಾ	17—4—0	0—7—0
ಕುಮಟಾ "	17—7—0	0—7—0
ಹೊನ್ನಾವರ "	17—9—0	0—7—0
ಭಟಕಳ ಪೇಟಾ	18—0—0	0—7—3
ಸಿದ್ದಾಪುರ ತಾಲೂಕ	18—0—0	0—7—3
ಶಿರಸಿ "	17—7—0	0—7—0
ಯಲ್ಲಾಪುರ "	15 12—0	0—6—6
ಮುಂಡಗೋಡ "	15-12—0	0—6—6
ಹಳಿಯಾಳ "	14-11 3	0—6—0
ಸುಪಾ ಪೇಟಾ	14 11—0	0—6—0
ಕೆಸಲ್‌ರೋಕ	15-10—0	0—6—6

Karwar
7-8 1945

V NANJAPPA,
Collector and D M Kanara

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ್ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೩-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ,, ೦-೦-೯
ಹಳೇ ಸಂಚಿಕೆಗೆ ,, ೦ ೪ ೦
ವ್ಹಿ.ಪಿ ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತರಬೇಕು
ವರ್ಗಣಿಮುಂಗಡ ಕಟ್ಟತಕ್ಕದ್ದು

Reg. No. B 1270. Monday, 22nd October, 1945.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೧೭

ಕುಮಟಾ:- ಸೋಮವಾರ, ತಾ ೨೨ ಮಾಹೆ ಅಕ್ಟೋಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಸ್ವ್ಯಾ ಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸೆನ್ನ ಲಡ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲದ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬೇಕು.

೩ನೇ ಮಹಾಯುದ್ಧದ ಕಾರ್ಮೋಡ.

(ಸಮೀಕ್ಷಕನು ಬರೆದುದು)

ಜರ್ಮನಿ-ಜಪಾನಗಳ ಯುದ್ಧ ಮುಕ್ತಾಯವಾದಂದಿನಿಂದ ಮಿತ್ರರೊಳಗೆ ವೈಷಮ್ಯ, ಅಸೂಯೆ, ಸಂಶಯ, ಕಿರ್ಕ್ಯಾಟ, ಕಚ್ಚಾಟಗಳು ತಲೆದೋರಿವೆಯೆಂದೂ, ದುರ್ದೈವಿ ಯುರೋಪಕ್ಕೆ ಇನ್ನೊಮ್ಮೆ ರಕ್ತಸ್ನಾನವಾಗುವ ಭೀತಿಯುಂಟೆಂದೂ ನಾನು ಈ ಹಿಂದೆಯೇ ಹೇಳಿಟ್ಟಿದ್ದೇನೆ. ಜಪಾನ-ಯುದ್ಧದ ಮುಕ್ತಾಯದ ಕಾಲಕ್ಕೆ ಬೆಂಗಳೂರ ಕಡೆಯ ಜ್ಯೋತಿಷಿಗಳೊಬ್ಬರು ೧೦-೧೫ ದಿನಗಳಲ್ಲಿ ಜಪಾನ ಯುದ್ಧ ಮುಗಿಯುವದೆಂದೂ, ಮುಂದೆ ೧೯೪೭ರಲ್ಲಿ ಶನಿ ಮಹಾರಾಯನು [illegible] ರಾಶಿಯಲ್ಲಿ ಪ್ರವೇಶ ಮಾಡುವ ಕಾಲಕ್ಕೆ ೩ನೆಯ ಮಹಾಯುದ್ಧವೆಸಗಿ ಜಪಾನವು ಸಂಕಟಮುಕ್ತವಾಗುವದೆಂದೂ ಒಂದು ಭವಿಷ್ಯ ವರ್ತಿಸಿದ್ದರು. ಆಕಾಶದೊಳಗಿನ ಗ್ರಹಗಳನ್ನು ನೋಡಿ ವರ್ತಿಸಿದ ಆ ಭವಿಷ್ಯಗಳ ಮೇಲೆ ನನಗೆ ಅಷ್ಟು ನಂಬಿಗೆಯಿಲ್ಲ. ಭೂಲೋಕದೊಳಗಿನ, ಅದರಲ್ಲೂ ಭೂಪೃಷ್ಠದ ಮೇಲೆ ಕುಣಿದಾಡುವ ಗ್ರಹಗಳನ್ನೇ ನೋಡಿ, ಲೆಕ್ಕ ಹಾಕಿ ಭವಿಷ್ಯ ವರ್ತಿಸಬೇಕೆಂದು ನನ್ನ ಅಭಿಮತ. ಅಂಥ ಭವಿಷ್ಯಗಳೇ ಹೆಚ್ಚಾಗಿ ಸತ್ಯವಾಗುತ್ತಿವೆ. ಅದರಂತೆಯೇ ನಾನು ಭೂಲೋಕದ ಗ್ರಹಗಳಂತಿರುವ ಬ್ರಿಟನ, ಅಮೇರಿಕಾ, ರಶಿಯಾ, ಫ್ರಾನ್ಸ ಮೊದಲಾದ ಗ್ರಹಗಳ ಚಲನ-ವಲನ, ಅವುಗಳ ದೃಷ್ಟಿ-ಕೋನ, ತತ್ವಜ್ಞಾನ ಮತ್ತು ಸಾಮರ್ಥ್ಯ ನೋಡಿ ನನ್ನ ಭವಿಷ್ಯ ವರ್ತಿಸುತ್ತೇನೆ. ರುಶ್ಯರು ಬೊಲ್ಶೆವಿಕ್ ಯಾನೆ ನಿತಾಂತ ಸಮಾಜಸತ್ತಾವಾದಿಗಳೆಂಬುದನ್ನು ಎಲ್ಲರೂ ಬಲ್ಲರು. ಈ ಸಮಾಜಸತ್ತಾವಾದವು ಬ್ರಿಟಿಶ ಬಂಡವಲಗಾರರಿಗೂ ಅಮೇರಿಕೆಯ ನವಕೋಟಿ-ನಾರಾಯಣರಿಗೂ ಸೇರುವಂತಿಲ್ಲ. ರುಶ್ಯರನ್ನು ಬ್ರಿಟಿಶರು ೧೯೧೭ರಿಂದ ೧೯೩೯ರ ವರೆಗೂ ಕಣ್ಣಲ್ಲಿ ಎಣ್ಣೆ ಹಾಕಿ ನೋಡುತ್ತಿದ್ದರು. ಬ್ರಿಟಿಶರು ಹಿಟ್ಲರನಿಗೆ ಬಲಶಾಲಿಯಾಗಗೊಟ್ಟಿದ್ದಾದರೂ ರುಶ್ಯರ ದ್ವೇಷದಿಂದಲೇ. ಸನ ೧೯೩೯ರಲ್ಲಿ ರುಶ್ಯರು ಪೋಲಂಡಕ್ಕೆ ಕೆಲವೊಂದು ಕರಾರುಗಳ ಮೇಲೆ ನೆರವಾಗಲು ಸಿದ್ಧರಾದಾಗ್ಯೂ ಬ್ರಿಟಿಶರು ಆ ಸಹಾಯವನ್ನು ನಿರಾಕರಿಸಿದ ಕಥೆಯನ್ನು ನಾವು ಮರೆಯಲಾಗದು. ಮುಂದೆ ೧೯೪೧ರಲ್ಲಿ ಹಿಟ್ಲರನು ರುಶ್ಯರ ವಿರುದ್ಧ ಯುದ್ಧ ಸಾರಿದ್ದರಿಂದ ಜರ್ಮನರ ಶತ್ರುತ್ವವೆಂಬ ಸಮಾನ ಅಧಿಷ್ಠಾನದ ಮೇಲೆ ರುಶ್ಯ ಬ್ರಿಟಿಶರ ಗೆಳೆತನವುಂಟಾಯಿತು. ' Adversity makes strange bed-fellows" (ಸಂಕಟದಲ್ಲಿ ತೀರ ಭಿನ್ನ ಪ್ರಕೃತಿಯವರೂ ಒಟ್ಟಾಗುತ್ತಾರೆ) ಎಂದು ಇಂಗ್ಲಿಶ ಭಾಷೆಯಲ್ಲಿ ಒಂದು ಗಾದೆಯುಂಟು. ಆ ಗಾದೆಯಂತೆ ಪರಿಸ್ಥಿತಿ ಮಾರ್ಪಟ್ಟಿತು, ಮತ್ತು ಶತ್ರುಗಳು ಮಿತ್ರರಾದರು. ಆದರೆ ಆ ಸಾಮಾನ್ಯ ಸಂಕಟ ಹಿಂದಾದ ಮೇಲೆ ಅವರು ಪುನಃ ಪೂರ್ವಸ್ಥಿತಿಗೆ ಹೋಗದೆ ಉಳಿಯುವರೇ? ಈ ಮಾತು ಗೊತ್ತಿದ್ದರಿಂದಲೇ ಹಿಂದೆ ಚರ್ಚಿಲ್ಲರು ರುಶ್ಯರಿಗೆ ಅವಶ್ಯವಿದ್ದಷ್ಟೇ ಸಹಾಯ ಮಾಡುತ್ತ ಬಂದಿದ್ದರು. ವಿನಹ ಕೈಬಿಟ್ಟು ಎಂದೂ ಸಹಾಯ ಮಾಡಿಲ್ಲ. ಈಗ ಬ್ರಿಟನದಲ್ಲಿ ಸಮಾಜಸತ್ತಾವಾದಿ ಕೂಲೀಕಾರ ಪಕ್ಷದ ಸರಕಾರವುಂಟಲ್ಲ, ಅವರು ರುಶ್ಯರ ದ್ವೇಷ ಕಟ್ಟಿಕೊಳ್ಳುವ ಬಗೆಯೆಂತು! ಎಂದು ಯಾರಾದರೂ ಕೇಳಬಹುದು. ಇಂಥವರಿಗೆ ನಾನು ಒಂದು ಮಾತು ಹೇಳುತ್ತೇನೆ. ಬ್ರಿಟಿಶ ಸಮಾಜಸತ್ತಾವಾದಿಗಳ ಸಮಾಜಸತ್ತಾವಾದವು ಸಂಕುಚಿತವಾದುದು. ಬ್ರಿಟನ್ನಿನ ಚತುರ್ಗಡಿಯೊಳಗಷ್ಟೇ ಅವರ ಸಮಾಜಸತ್ತಾವಾದ! ಬ್ರಿಟನ್ನಿನ ಹೊರಗೆ ಅವರು ಚರ್ಚಿಲ್ಲ ಚೇಂಬರಲೇನರಷ್ಟೇ ಸಾಮ್ರಾಜ್ಯವಾದಿಗಳು! ಬ್ರಿಟಿಶ ಜನತೆ ಸಮಾಜ-ಸತ್ತಾವಾದಿಯಿರಬಹುದು, ಆದರೆ ಇಡೀ ಬ್ರಿಟನ್ನ ದೇಶ ಬಂಡವಲಗಾರ ರಾಷ್ಟ್ರವಿರುತ್ತಿದೆ, ಸಾಮ್ರಾಜ್ಯವಾದಿ ದೇಶವಿರುತ್ತದೆ. ಆದ್ದರಿಂದ ರುಶ್ಯರಿಗೂ ಬ್ರಿಟಿಶ ಕೂಲಿಕಾರ ಸರಕಾರಕ್ಕೂ ಸ್ನೇಹವುಂಟಾದೀತೆಂಬ ಕಲ್ಪನೆಯನ್ನು ನೀವು ಬಿಟ್ಟುಕೊಡಬೇಕು. ಹೊಂಗ-ಕೊಂಗದ ಸಂಬಂಧದಲ್ಲಿ ಅಟ್ಲೀ ಸರಕಾರದ ಸಾಮ್ರಾಜ್ಯನೀತಿ ಹಿಂದೆ ಹೊರಬಿದ್ದಿದೆ, ಹಿಂದುಸ್ಥಾನದ ಸಂಬಂಧದಲ್ಲಿ ಇದೀಗ ಹೊರಬೀಳುತ್ತಲಿದೆ. ಜಾವಾ ಮತ್ತು ಇಂಡೋಚೀನಗಳಲ್ಲಿ ತಮ್ಮ ಸಾಮ್ರಾಜ್ಯ ತಿರುಗಿ ಸ್ಥಾಪಿಸಬೇಕೆನ್ನುವ ಫ್ರೆಂಚರಿಗೂ ಡಚ್ಚರಿಗೂ ಅವರು ನೆರವನ್ನೀಯುತ್ತಿರುವದರ ಮೇಲಿಂದಲೂ ಅದರ ಸಾಮ್ರಾಜ್ಯಪ್ರೇಮ ಮತ್ತು ಸಾಮ್ರಾಜ್ಯವಾದಿ ಮಿತ್ರರ ಅಭಿಮಾನ ಬಯಲಿಗೆ ಬರುತ್ತಲಿವೆ. ಇಂಡೋಚೀನದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಅನಾಮಿ ಜನರ ವಿರುದ್ಧ ಗುಂಡು ಹಾರಿಸಲು ಒಲ್ಲಿದ್ದ ಹಿಂದೀ ಸೈನಿಕರಿಗೆ ಅಪ್ಪಣೆಯಾಗಿತ್ತೆಂತಲೂ, ಯುದ್ಧಕಲೆಯನ್ನರಿಯದ ನಿಃಶಸ್ತ್ರ ಅನಾಮಿ ಜನರ ವಿರುದ್ಧ ತಾವು ಶಸ್ತ್ರವನ್ನೆತ್ತಲೊಲ್ಲೆವೆಂದು ಹಿಂದೀ ಸೈನಿಕರು ನುಡಿದು ಸೇನಾಪತಿಯ ಅಪ್ಪಣೆಯನ್ನು ಉಲ್ಲಂಘಿಸಿದರೆಂತಲೂ, ಆ ಬಗ್ಗೆ ಅಪ್ಪಣೆಯನ್ನುಲ್ಲಂಘಿಸಿದ ಸೈನಿಕರ ವಿಚಾರಣೆ ಲಷ್ಕರೀ ನ್ಯಾಯಾಸನದೆದುರು ನಡೆಯುತಿದೆಯೆಂದೂ ಮೊನ್ನೆಯೇ ಒಂದು ಸುದ್ದಿ ಬಂದಿದೆ. ಜಾವಾದಲ್ಲಿ ಇಡೀ ಜನಾಂಗವೇ ಸೊಯಿಕರ್ನೋ ಮತ್ತು ಹಾಟ್ಟಾ ಇವರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಮರಕ್ಕೆ ಸಿದ್ಧವಾದುದು ಕಂಡುಬಂದಾಗ್ಯೂ, ಒಮ್ಮೆ ಸೊಯಿಕರ್ನೋರವರು ಜಪಾನಿಯರೆಬ್ಬಿಸಿಕೊಟ್ಟ ಸೂತ್ರಗೊಂಬೆಗಳೆಂದೂ, ಇನ್ನೊಮ್ಮೆ ಅವರಿಗೆ ಜನತೆಯ ಬೆಂಬಲವಿಲ್ಲೆಂದೂ ವಾದಿಸುವ ಕ್ಲೆಮೆಂಟ ಅಟ್ಲೀಯವರಿಗೂ ಚರ್ಚಿಲ್ಲರಿಗೂ ಭೇದವಿಲ್ಲ. ಆದ್ದರಿಂದಲೇ ಬ್ರಿಟನದಲ್ಲೀಗ ಕೂಲಿಕಾರ ಸರಕಾರವಿರುವದಾಗ್ಯೂ ಬ್ರಿಟನ-ರುಶ್ಯರೊಳಗಿನ ವೈಷಮ್ಯ ದಿನೇ ದಿನೇ ಬೆಳೆಯುತ್ತಲಿದೆ. ಲಂಡನ್ನಿನಲ್ಲಿ ಸೇರಿದ ಪಂಚ ಮಹಾರಾಷ್ಟ್ರಗಳ ವಿದೇಶ ಸಚಿವರ ಪರಿಷತ್ತಿನಲ್ಲಿ ತೀಕ್ಷ್ಣ ವಾಗ್ವಾದವಾದದ್ದೂ ಮಾತಿನ ಮಲ್ಲಯುದ್ಧ ನಡೆದದ್ದೂ ರುಶ್ಯ ಪ್ರತಿನಿಧಿ ಮೊಲೊಟೋವ್ಹ ಮತ್ತು ಬ್ರಿಟಿಶ ವಿದೇಶ ಮಂತ್ರಿ ಅರ್ನೆಸ್ಟ ಬೆವ್ಹಿನರೊಳಗಿರುತ್ತದೆಂಬುದನ್ನು ಓದುಗರು ಮರೆಯಕೂಡದು. ಪೂರ್ವ ಯುರೋಪದಲ್ಲಿ ರುಶ್ಯರು ತಮ್ಮ ಪ್ರಭಾವ ಬೀರಿಟ್ಟಿದ್ದಾರೆಂದು ನಾನು ಹಿಂದೆಯೇ ತಿಳಿಸಿದ್ದುಂಟು. ರುಶ್ಯರ ಆ ಪ್ರಭಾವದ ತೆರೆಗಳು ಪಶ್ಚಿಮಕ್ಕೆ ಹರಿದಂತೆ ಅಡ್ಡಗಟ್ಟಲು ಬ್ರಿಟಿಶರು ಪಶ್ಚಿಮ ಯುರೋಪದಲ್ಲಿ ತಮ್ಮ ಪ್ರಭಾವಕ್ಕೆ ಒಳಪಟ್ಟ ರುಶ್ಯ-ವಿರೋಧಿ ಜನಾಂಗಗಳ ವ್ಯೂಹ ರಚಿಸಲಾರಂಭಿಸಿದ್ದಾರೆ. ಹಿಟ್ಲರ ಮುಸೊಲಿನಿಯವರ ಜೀವದ ಗೆಳೆಯನಾದ ಸ್ಪೇನದ ಫ್ರೆಂಕೋನಿಗೆ ಪದಭ್ರಷ್ಟ ಮಾಡಬೇಕೆಂಬ ವಿಚಾರ ಪೊಟ್ಸಡೆಮ್‌ದಲ್ಲಿ ಸೇರಿದ ತ್ರಿಕೂಟದ ಸಭೆಯ ಕಾಲಕ್ಕೆ ನಡೆದಿತ್ತು. ರುಶ್ಯರು ಅವನ ಬೆನ್ನು ಹಿಡಿದಿದ್ದರು. ಆದರೆ ಅವನ ರುಶ್ಯ-ವಿರೋಧ ಬ್ರಿಟಿಶರಿಗೆ ಇಷ್ಟವಿರುವದರಿಂದ ಫ್ರೆಂಕೋನ ಆಸನವೀಗ ಸ್ಥಿರವಾಗಿದೆ! ರುಶ್ಯ-ಬ್ರಿಟಿಶರೊಳಗಿನ ಈ ತಿಕ್ಕಾಟವು — ಅಮೇರಿಕೆಯವರು ಈ ತಿಕ್ಕಾಟದಲ್ಲಿ ತಮ್ಮ ರಕ್ತ ಸಂಬಂಧಿಗಳಾದ ಬ್ರಿಟಿಶರ ಪಕ್ಷಕ್ಕೆ ಸೇರುವರೆಂದು ನಾನು ಬೇರೆ ಹೇಳಬೇಕಾಗಿಲ್ಲ — ಈಗ ಉಗ್ರ ರೂಪ ತಳೆದಿದೆಯಾಗಿಯೂ, ರುಶ್ಯರು ಪೂರ್ವ ಯುರೋಪದಲ್ಲಿದ್ದ ತಮ್ಮ ಸೈನ್ಯ-ಶಿಬಿರಗಳನ್ನು ಭದ್ರಪಡಿಸುತ್ತಿದ್ದಾರೆಂತಲೂ, ಅದರಂತೆ ಪಶ್ಚಿಮ ಯುರೋಪದಲ್ಲಿರುವ ಬ್ರಿಟಿಶ-ಅಮೇರಿಕೆಯವರೂ ತಮ್ಮ ಸೈನ್ಯಗಳನ್ನು ಸಜ್ಜುಗೊಳಿಸುತ್ತಿರುವರೆಂತಲೂ, ರುಶ್ಯರು ಎಲ್ಲ ವಿಷಯಗಳಲ್ಲಿ ಬ್ರಿಟಿಶ ಅಮೇರಿಕೆಯವರ ಕೂಡ ಅಸಹಕಾರ ಮಾಡಿರುವರೆಂತಲೂ ಲಂಡನ್ನಿನಿಂದ ಮೊನ್ನೆಯೇ ಯುನೈಟೆಡ್ ಪ್ರೆಸ್ ಸುದ್ದಿ ಸಂಸ್ಥೆಯ ರಾಜಕೀಯ ಚಿತ್ರಗುಪ್ತನು ವರದಿ ಮಾಡಿದ್ದಾನೆ. ಆದ್ದರಿಂದ ಯುರೋಪದಲ್ಲಿ ಬೇಗನೇ ಎಟಂ ಬಾಂಬಿನ ಸ್ಫೋಟವಾಗಬಹುದೆಂದು ನನಗೆ ಭಯವುಂಟಾಗಿದೆ.

*

The Agricultural & Industrial Bank, Ltd.
[Incorporated in British India, Liability of Members limited]
Head Office COONDAPOOR. S. I
Branches -
ANKOLA
BELGAUM,
COONDAPOOR
DHARWAR,
GOKARN,
HAVERI
HUBLI
KARWAR,
KUMTA,
MANGALORE
NAGAR,
SHIMOGA,
SIRSI,
SOMWARPET,
VIRAJPET
All kinds of Banking Business transacted
Paid-up Capital & Reserves exceed Rs 4 LAKHS
Please apply for particulars
1—9—1945

ಸ್ಥಾನಿಕ ವೃತ್ತಾಂತ

(ಒನೇ ಪುಟದಿಂದ ಮುಂದರಿಸಿದ್ದು)

ತಿರುಗ ಹೋಗುವದಿತ್ತು. ಆದ್ದರಿಂದ ಅವರು ಇದೇನು ಪ್ರಕರಣವೆಂದು ಚೌಕಶಿ ಮಾಡಲು ಅಲ್ಲಿಯ ಫೌಜದಾರ ರಾ॥ ಶರವೋಕರರಿಗೆ ಅಪ್ಪಣೆ ಸಿದರು ಆದರೆ ಶರವೋಕರರು ವಿಶೇಷ ಚೌಕಶಿ ಮಾಡಲಿಲ್ಲ! ಯಾಕೆಂದು ದೇವರಿಗೇ ಗೊತ್ತು! ರಾ॥ ಶಾನಭೋಗರು ಅಷ್ಟಕ್ಕೆ ಬಿಡಲಿಲ್ಲ. ಜಿ[illegible] ಪೋಲೀಸ ಸುಪರಿಂಟರಿಗೆ ಅ[illegible]ಮಾಡಿ ಎಲ್ಲ ವಿಷಯಗಳನ್ನು ತಿಳಿಸಿದರು ಕಳೆದ ವಾರ ಜಿಲ್ಲಾ ಪೋಲೀಸ ಸುಪರಿಂಟರು ಇಲ್ಲಿ ಬಂದಾಗ ಸ್ವತಃ ಸೂಕ್ಷ್ಮ ಮತ್ತು [illegible] ಚೌಕಶಿ [illegible] ದಾರನ ಮೇಲೆ ಫಿರ್ಯಾದು ಮಾಡಿ ಕೊಡುವವರೆಂದು ಬಲ್ಲವ[illegible] ಹೇಳುತ್ತಾರೆ ಈ ಪ್ರಕರಣದಿಂದ ಇಲ್ಲಿಯ ಪೋಲೀಸ ವರ್ಗದಲ್ಲಿ ಬಹಳ ಚಿಂತೆಯು ಹುಟ್ಟಿದೆ [illegible] ಎಲ್ಲಿ ಹೊರಬೀಳುತ್ತದೋ ಎಂದ [illegible] ಆತಂಕಗೊಂಡಿದ್ದಾರೆ [illegible] ಯ ಭಂಗ ಮಾಡಿದ [illegible] ಅವನ್ನು [illegible] [illegible] ಬೆಳಕಿಗೆ [illegible] ಅವರ ಪೂರ್ಣ ವಿವರಗಳು ಇನ್ನೂ ತಿಳಿದ ಬಂದಿಲ್ಲ

ಕೆಲ್ಲ[illegible] ಶ್ರೀ [illegible] ಕಳೆದ [illegible] ಸದ್ದರಿಂದ ಜರುಗಿತ

ಇಲ್ಲಿಯ [illegible] ಶ್ರೀ [illegible] ದೇವಸ್ಥಾನಗಳ [illegible] ದಿಗೆ ಸನ್ನಿಧಿಯಲ್ಲಿ [illegible]

ಭಟ್ಕಳ— (ತಾ [illegible]) ಇಲ್ಲಿಯ ಶ್ರೀ [illegible] ಸಂಜೀವರಾವ [illegible] ಮಾಡಿ [illegible] ದನು ಎಲ್ಲ [illegible] ಕೇಳಲು ಜನರು ಕಿಕ್ಕಿರಿದು ಕೂಡಿದ್ದರು

[illegible] ಹಿಡಿದವನು [illegible] ವರಿಯುತ್ತಾರೆ ಹೊಸ್ಸ ನವರ [illegible] ತೆರೆಯುವದಿಲ್ಲ

ಶಿರಸಿ— (ತಾ [illegible]) ಇಲ್ಲಿಯ ಶ್ರೀ ಮಾರಿಕಾಂಬಾ ದೇವ[illegible] ನಡೆದಿದೆ ಹೆಸರುಗೊಂಡ [illegible] ಮಂಟಪವನ್ನು [illegible] ಶಿವರಾತ್ರಿಗೂ [illegible] ರಾದ್ಯಂಟಾಗಿದೆ ನಗರ ಸಂಕೀರ್ತನೆಯು [illegible] ಬನ್ನದ ರಾಷ್ಟ್ರಧ್ವಜವನ್ನೇ [illegible] ಪಟ, ಕರ್ನಾಟಕ [illegible] ಕಾಗಿ [illegible] ಕಾರ್ಯಕರ್ತರ [illegible]! [illegible] ಕಿಕ್ಕಿರಿದಿಂದ [illegible] ಯಾವ ತಂಟೆ [illegible]

ಶ್ರೀ ವಿಷ್ಣು ದೇವಸ್ಥಾನದಲ್ಲಿ [illegible] ಭಜನೆ ಸಪ್ತಾಹ ನಡೆದಿದೆ ಭಜನೆಯು [illegible] ಕೋಲಾಟ ಮತ್ತಿತರ ಮನರಂಜನೆಯ ಕಾರ್ಯಕ್ರಮವೂ ನಡೆಯುತ್ತಿದೆ

ಇಂದು ಇಲ್ಲಿಯ ಹೊಸ ಫೌಜದಾರ ರಾ॥ [illegible] ಅವರ [illegible] ಗಡಿಮನೆ [illegible] ರ ಹೆಗ್ಗಡೆಯವರ ಮನೆಗೆ [illegible] ಹಾಕಿ, ಮನೆಯ [illegible] ದ ಮೇಲೆ [illegible] ಮಂದಿಯ ದೊಡ್ಡ ದೊಂದು ಮಂಡಲವನ್ನು ಹಿಡಿದಿದ್ದಾರೆ ಈ ಮಂಡಲದಲ್ಲಿ ಮೈಸೂರ ಕಡೆಯ ಜನರೂ ಇದ್ದರಂತೆ

ಎಂಪಾಯರ ಆಫ್ ಇಂಡಿಯಾ ಲೈಫ ಇನ್ಶ್ಯುರನ್ಸ ಕಂಪನಿಯಲ್ಲೀ

ವಿಮೆ ಇಳಿಸಿ ಎಲ್ಲ ಕಂಪನಿಗಳಿಗಿಂತ ಕಂತುಗಳು ಅತಿ ಸುಲಭವಿದೆ ವಿಚಾರಿಸಿ

ಏಜಂಟ, ಗೋವಿಂದ ಶ್ರೀಧರ ನಾಯಕ,

([illegible]) ಬಾಲಕೃಷ್ಣ ಸ್ಟೋರ್ಸ, ಕುಮಟಾ

ತಂಬಾಕು ಸೇಲ ನೋಟ ಬೂಕುಗಳು

ನಮ್ಮಲ್ಲಿ ಮಾರಾಟಕ್ಕೆ ಸಿಗುತ್ತವೆ

ಬರೆಯಿರಿ —

ಸ್ಟಾರ ಆಫ್ ಕೆನರಾ ಪ್ರೆಸ್, ಕುಮಟಾ

ಅ[illegible] ಮಹಿಳಾ ಪರಿಷತ್ತಿನ ಅಧ್ಯಕ್ಷರಾಗಿರುವ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೂ ಹುಬ್ಬಳ್ಳಿಯ ಕೊಂಗ್ರೆಸ ಕಾರ್ಯಕರ್ತರಾದ ಶ್ರೀಮತಿ ಉಮಾಬಾಯಿ ಕುಂದಾಪುರ ಇವರೂ ಕಳೆದ ಸೋಮವಾರ ಮಧ್ಯಾಹ್ನ ಕುಮಟೆಯಿಂದ ಹುಬ್ಬಳ್ಳಿಗೆ ಹೋಗಲು ಇಲ್ಲಿಗೆ ಬಂದಿದ್ದರು [illegible] ಸಭೆಯಾಗಿ ಅವರ ಭಾಷಣಗಳಾದವು [illegible] ಉಪಸ್ಥಿತರಿದ್ದ [illegible] ಜನರು ಕೂಡಿದ್ದರು ಕಮಲಾದೇವಿಯವರು ತಮ್ಮ ಭಾಷಣದಲ್ಲಿ, ಮಹಾತ್ಮಾಜಿ ಯವರ ರಚನಾತ್ಮಕ ಕಾರ್ಯಕ್ರಮವನ್ನು ನಿಷ್ಠೆಯಿಂದ ನಡೆ ಸಬೇಕೆಂದೂ ಮುಂಬರುವ ಚುನಾವಣೆಯಲ್ಲಿ ಕೊಂಗ್ರೆಸ ದ [illegible] ಗೇ ಮತ ಕೊಟ್ಟು, ದೇಶದಲ್ಲಿ ಕೊಂಗ್ರೆಸ್ಸಿನ ಪ್ರತಿಷ್ಠೆಯೂ ಸಾಮರ್ಥ್ಯವೂ ಎಷ್ಟೆಂಬುದನ್ನು [illegible] ತೋರಿಸಬೇಕಾಗಿಯೂ ಬೋಧಿಸಿದರು

ಹರಿಜನರಿಗೆ ವಿದ್ಯಾಲಯಗಳಲ್ಲಿ ಪ್ರವೇಶ ದೊರೆಯಿಸಿ ಕೊಡುವ ಬಗೆ ಕಲವರು ಚಳವಳಿ ಮಾಡುತ್ತಿದ್ದಾರೆ

ಸಿದ್ದಾಪುರ— (ತಾ ೧೬–೧೦ ೪೫) ಊರಲ್ಲಿ [illegible] ವ್ಯಾಪಾರ ಹೆಚ್ಚಿಗಿದೆ [illegible] ಅಂಗಡಿಗಳು ತೆರೆಯಲ್ಪಟ್ಟವೆಯೆಂದು ಹೇಳಿದರೂ ಅಡ್ಡಿ [illegible] ಈ [illegible] ನೂರು [illegible] ವ್ಯಾಪಾರ [illegible]ವಾಗುತ್ತಿದೆಯಂತೆ!

ಕಳೆದ [illegible] ಹೊಸಪೇಟೆ ಗಲ್ಲಿಯಲ್ಲಿ ದೊಡ್ಡ ಬಡಿ [illegible] ಈ ಬಡಿದಾಟದಲ್ಲಿ ಗಾಯಗೊಂಡ ಕೆಲ [illegible] ಉಪಚಾರ ಹೊಂದುತ್ತಿದ್ದಾರೆ

ಬೇರಳ[illegible] ಕನ್ನಡ ಶಾಲೆಯಲ್ಲಿ ಕಳೆದ ಶನಿವಾರ ತಾ [illegible] ಘಟಸ್ಥಾಪನೆ [illegible] ಪೂಜೆಯಾಯಿತು [illegible] ನಾಟಕಗಳೂ, ಗಾಯನ ಸಂಭಾಷಣೆಗಳೂ [illegible] ಎಂಬ ಚಿಕ್ಕ ನಾಟಕವೂ ನಡೆದ[illegible] ಉತ್ಸವದ ಅಧ್ಯಕ್ಷರಾಗಿದ್ದ [illegible] ಚೆನ್ನಬಸಪ್ಪ [illegible] ಶಾಲೆಯ ಪುಸ್ತಕಾಲಯಕ್ಕೆ ರೂ [illegible] ದಾನ ಕೊಟ್ಟಿದ್ದಾರೆ

ಬಿಳಗಿ (ಸಿದ್ದಾಪುರ ತಾಲೂಕ)– (ತಾ. ೧೩–[illegible]) ಇಂದು ಇಲ್ಲಿಯ ಕನ್ನಡ ಶಾಲೆಯಲ್ಲಿ ಶ್ರೀ[illegible] [illegible] ಸಡಗರದಿಂದ ಜರುಗಿತು [illegible] ಹಾಡು-ಸಂಭಾಷಣೆಗಳ [illegible] ಶಾನಭೋಗ [illegible] ಪಕ್ಕದೊಂದು [illegible] ಶಾಲೆಯ [illegible] ಕಡೆ [illegible] ಸಭೆಯಲ್ಲೇ [illegible] ಸಂಜೆಯಲ್ಲಿ [illegible] ನಡೆದವು

ಮುಲ್ಲಾಪುರ— (ತಾ ೧೯–೧೦–೪೫) ಇಲ್ಲಿ ಕಳೆದ [illegible] ಬುಧವಾರ [illegible] [illegible] ಸಿನೋದಾವಳಿಗಳೂ [illegible] ರಾ॥ ಪಂಡಿತರ ಉಪ[illegible] ಮಂಗಳವಾರ ರಾತ್ರಿ [illegible] ಸಾಹಿತ್ಯ[illegible] ರಾ॥ [illegible] ಭಟ್ಟ [illegible] ಇವರದೊಂದು ಸಮಯೋಚಿತ ಭಾಷಣ [illegible] ರಾ॥ [illegible] (ಹುಬ್ಬಳ್ಳಿ) ಇವರ ಕೀರ್ತನೆಯಾಯಿತು

ಅಂಕೋಲಾ— (ತಾ ೧೯ ೧೦–೧೯೪೫)

ಈ ಜಿಲ್ಲೆಯ [illegible] ಕೊಂಗ್ರೆಸ ಕಾರ್ಯಕರ್ತ[illegible] [illegible] ಗಂಗಾಧರ [illegible] ಬಹಳ ಕಾಲದಿಂದ [illegible] ತುರುಂಗದಲ್ಲಿ [illegible] ಅವರ ಪ್ರಕೃತಿ ಬಹಳ ಕೆಟ್ಟಿ[illegible] ಅಲ್ಲಿ ಅವರಿಗೆ [illegible] ಮಾಡಿದರಂತೆ ಹೊರಗೆ ಬಿಡಲಿಲ್ಲ! [illegible] ಳ ಹಿಂದೆ ಅವರ ಹೆಂಡತಿಗೆ ವಿಷಮಜ್ವರದ ಬಾಧೆಯಾಗಿತ್ತು. ಔಷಧೋಪಚಾರಕ್ಕೆ ಅವರಿಗೆ ರೂ [illegible]ದಷ್ಟು ಖರ್ಚು ಬಂತು ಆಗ ಅವಳು ತನ್ನ ಗಂಡನನ್ನು ವಿಚಾರವಿಲ್ಲದೆ ತುರಂಗದಲ್ಲಿಟ್ಟಿದ್ದರಿಂದ ನಿರಾಧಾರಿಯಾದ ತನಗೆ ಔಷಧೋಪಚಾರದ ಖರ್ಚು ಸರಕಾರದಿಂದ ಕೊಡಿಸಬೇಕಾಗಿ ಅರ್ಜಿ ಮಾಡಿದಳು. ಆ ಅರ್ಜಿ ಮಂಜೂರಾಗಲಿಲ್ಲ! ತನ್ನಷ್ಟೇ ಹೆಂಡತಿಯ ಜಡ್ಡಿನ ಮೂಲಕ ರಾ॥ ಶಾನಭೋಗರಿಗೆ ಪೆರೋಲ (ಪೋಲೀಸರಲ್ಲಿ ಹಾಜರಿ ಕೊಡುವ ಕರಾರಿನ) ಮೇಲೆ ಬಿಟ್ಟಿದ್ದರು ಕಳೆದ ತಾ. ೮ನೇಗೆ ಅವರ ಪೆರೋಲ ಅವಧಿ ಮುಗಿಯಿತು ಆದರೆ ಹಣದ ಅಡಚಣಿಯ ಮೂಲಕ ನಾಸಿಕಕ್ಕೆ ಹೋಗಿ ತುರಂಗದಲ್ಲಿ ಸೇರಲು ಅವರಿಗೆ ಅಸಾಧ್ಯವಾಯಿತು ಆದ್ದರಿಂದ ತಾವು ಇಲ್ಲೇ ಅಧಿಕಾರಿಗಳ ವಶವಾಗುತ್ತೇವೆಂದು ಅವರು ಜಿಲ್ಹಾಧಿಪತಿಗಳಿಗೂ ಮುಂಬಯಿ ಸರಕಾರಕ್ಕೂ ತಿಳಿಸಿ ಅಂಕೋಲೆಯ ಮೆಜಿಸ್ಟ್ರೇಟರಲ್ಲಿ ಹಾಜರಾದರು ಆದರೆ ಆ ಮೆಜಿಸ್ಟ್ರೇಟರು ಅವರನ್ನು ತಮ್ಮ ವಶಕ್ಕೆ ತೆಕ್ಕೊಳ್ಳಲಿಲ್ಲ! ಸರಕಾರದವರೂ ಅವರ ಅರ್ಜಿಯನ್ನು ತಿರಸ್ಕರಿಸಿದರಂತೆ!! ಆಗ ರಾ॥ ಶಾನಭೋಗರು ನಿರುಪಾಯವಾಗಿ ತಾವು ಪೆರೋಲ ಕರಾರು ಮುರಿದು ಇಲ್ಲೇ ಉಳಿಯಬೇಕಾಯಿತೆಂದು ಸರಕಾರಕ್ಕೆ ಪುನಃ ತಿಳಿಸಿದರು ನಿನ್ನೆ ಅವರಿಗೆ ಹಿಂದುಸ್ಥಾನ ರಕ್ಷಣೆಯ ಕಾಯಿದೆಯ ೧೨೯ನೇ ನಿಯಮದಂತೆ ಬಂಧಿಸಿ ಇಲ್ಲಿಯ ಉಪ-ತುರಂಗದಲ್ಲಿಟ್ಟಿದ್ದಾರೆ ರಾ॥ ಶಾನಭೋಗರು ಹಿಂಸಾವಾದಿಗಳಲ್ಲ, ಹಿಂಸೆಯ ಆರೋಪವೂ ಅವರ ಮೇಲಿಲ್ಲ ಆದರೂ ಅವರನ್ನು ತುರಂಗದಲ್ಲಿ ಕೊಳೆಸುತ್ತಿದ್ದಾರೆ! ಹಿಂಸಾಮಾರ್ಗ ಆಶ್ರಯಿಸಿದವರನ್ನು ಬಿಟ್ಟು ಉಳಿದ ಎಲ್ಲ ಸ್ಥಾನಬದ್ಧರನ್ನು ಸರಕಾರದವರು ಬಿಡುಗಡೆ ಮಾಡಿದ್ದಾರೆಂದು ಉಪ-ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ನುಡಿದ ವಚನ ತೀರ ಸುಳ್ಳುಂಟೆಂಬುದಕ್ಕೆ ರಾ॥ ಶಾನಭೋಗರದೊಂದು ಉದಾಹರಣೆ ತಕ್ಕ ಪ್ರಮಾಣವಿರುತ್ತದೆ.

ಅವರ್ಸೆಯಲ್ಲಿ ೧೧ದಷ್ಟು ಜನರಿಗೆ ಈ ತಿಂಗಳಲ್ಲಿ ಚಿಮಣಿ ಎಣ್ಣೆ ಸಿಕ್ಕಿಲ್ಲವಂತೆ ಎಣ್ಣೆ ಕಡಿಮೆ ಬಂದಿರುವದಾಗಿ ಅಂಗಡಿಕಾರರು ಹೇಳುತ್ತಾರಂತೆ ಯುದ್ಧವೀಗ ನಿಂತಿದ್ದರಿಂದ ಎಣ್ಣೆ ಬೇಕಷ್ಟು ಸಿಗುವದಾಗಿ ವಾರ್ತೆ ಹಬ್ಬಿತ್ತು. ಬೇಕಷ್ಟು ಎಣ್ಣೆ ಕೊಡದ ಮಾತು ತುತ್ತಕ್ಕೆ ಒಪ್ಪಟ್ಟಿಗಿರಲಿ, ನೇಮಿಸಿ ಕೊಟ್ಟ ಎಣ್ಣೆಯನ್ನೂ ಜನರಿಗೆ ಪೂರೈಸಲು ಅಧಿಕಾರಿಗಳಿಂದ ಆಗದೇ?

ಕಾರವಾರ— (ತಾ ೧೯–೧೦–೪೫) ಇಲ್ಲಿ ತೆರೆಯಲ್ಪಡುವದೆಂದು ಹಿಂದೆ ಜಾಹೀರಾದ ರಾಷ್ಟ್ರಸೇವಾ ದಲದ ಶಿಕ್ಷಣ ಶಿಬಿರವು ತಾ. ೨೫ಕ್ಕೆ ಪ್ರಾರಂಭವಾಗುವದೆಂದೂ ಶಿಬಿರದಲ್ಲಿ ಸೇರುವವರು ತಾ ೨೪ರ ಸಂಜೆಯೊಳಗಾಗಿ ಇಲ್ಲಿ ಬಂದು ತಲುಪಬೇಕೆಂದೂ ಜಿಲ್ಹಾ–ದಳಪತಿಗಳಾದ ರಾ॥ ಮಾಧವರಾವ [illegible]ಯವರು ತಿಳಿಸುತ್ತಾರೆ ಶಿಬಿರದಲ್ಲಿ ಸಾಕಷ್ಟು ತರುಣರು ಸೇರುವರೆಂದು ಅವರು ಅಂದಾಜು ಮಾಡಿದ್ದಾರೆ ನವಂಬರ ತಾ ೧೧ ರ ವರೆಗೆ ಶಿಬಿರವು ನಡೆಯುವದಂತೆ ರಾಷ್ಟ್ರಸೇವಾ ದಲದ ಅಭಿಮಾನಿಗಳು ಶಿಬಿರಕ್ಕೆ ದರ್ಶನ ಕೊಟ್ಟು ಪ್ರೋತ್ಸಾಹಿಸಬೇಕಾಗಿ ದಳಪತಿಗಳ ಬಿನ್ನಹವಿದೆ



ಜಾಹೀರನಾಮೆ.

ಮಿಲ್ಲಿನಲ್ಲಿ ತಯಾರಿಸಿದ ಅರಿವೆಯ ಪೈಕಿ ಕೆಲವು ಸ್ಟಾಕು ತದಡಿ ಗೋಡೌನದಲ್ಲಿ ಇರುತ್ತದೆ ಮತ್ತು ಅದನ್ನು ಅರಿವೆಯ ಲೈಸೆನ್ಸದಾರರಿಗೆ ಕೊಡುವದು ನಿಶ್ಚೈಸಿರುತ್ತದೆ. ಕಾರಣ ಸದ್ರಿ ಅರಿವೆಯ ಪೈಕಿ ಮಾಲು ಯಾರಿಗೆ ಬೇಕೋ ಅವರು ಈ ಕೆಳಗಿನ ತಪಶೀಲು ಸಹಿತ ಮೆ॥ ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ ಇವರ ಕಡೆಗೆ ಅರ್ಜಿಗಳನ್ನು ತಾ [illegible] ನೇದರೊಳಗ ತಲ್ಪುವಂತೆ ಕಳುಹಿಸಬೇಕು. ಎಲ್ಲ ನಮೂನೆಯ ಮಾಲು ಸ್ಟಾಕ ಪ್ರಕಾರ ಸಮ ಪ್ರಮಾಣದಲ್ಲಿ ಹಂಚಲಾಗುವದು

೧. ಅರ್ಜಿದಾರರ ಹೆಸರು ಮತ್ತು ವಿಳಾಸ;
೨. ಲೈಸೆನ್ಸ ನಂಬರು,
೩. ಬೇಕಾದ ಮಾಲಿನ ಕಿಮ್ಮತು

ರೂ. ೩೦೦/– ಯಾ ಅದಕ್ಕಿಂತ ಹೆಚ್ಚಿಗೆ ಕಿಮ್ಮತ್ತಿನ ಅರಿವೆ ಬೇಕಾದವರು ಮಾತ್ರ ಅರ್ಜಿ ಮಾಡತಕ್ಕದ್ದು

ಕಾರವಾರ, } V. NANJAPPA,
20 10 45 } DistrictMagistrate Kanara

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದ ಪ್ರಾರಂಭಕ್ಕೆ ೨-೩ ದಿನ ಚಳಿಯ ಮಳೆ ಸುರಿಯಿತು. ಮೊನ್ನೆಯಿಂದಲೂ ಪುನಃ ಮಳೆಯಾಗುತ್ತಿದೆ ಅದರಿಂದ ಕೊಯ್ಲಿಗೆ ತೊಂದರೆಯಾಗಿದೆ ಹಸ್ತಾಗಿ ಅರ್ಧ ಬಿದ್ದ ಭತ್ತದ ಪೈರಿಗೂ ಪೆಟ್ಟು ಆಗುತ್ತಿದೆ. ಹೊಲದಲ್ಲಿ ಬೆಳೆದ ಪೂರ್ಣ ಬೆಳೆ ಮನೆ ಸೇರುವಾತದೆಂದು ಜಾಲೀಸ್ಟೋಯಿಂಟೋ ಏನೋ!

ಆಟೆಯ ಶನಿವಾರ ಇಲ್ಲಿಯ ಬೇಸಾಯ ಪ್ರಯೋಗ ಹೊಲದಲ್ಲಿ 'ಆಫಿಸರ್ಸ ಡೇ' (ಅಧಿಕಾರಿಗಳ ದಿನ) ವೆಂಬ ಸಮಾರಂಭವಾಯಿತು ಜಿಲ್ಲಾಧಿಪರೂ ಬೇರೆ ಬೇರೆ ಜಿಲ್ಲಾಧಿಕಾರಿಗಳೂ ಸರಕಾರದ ಪ್ರಮುಖ ಖವಿನಾನದಾರರೂ ಸ್ಥಾನಿಕ ಅಧಿಕಾರಿಗಳೂ ಪ್ರಮುಖರೂ ಈ ಸಮಾರಂಭಕ್ಕೆ ಕೂಡಿದ್ದರು ಹೊಲದ ಅಧಿಕಾರಿಗಳು ಕಳೆದ ವರ್ಷ ನಡೆದ ಪ್ರಯೋಗಗಳ ಪ್ರಗತಿಯನ್ನೂ ಕಂಡುಬಂದ ಅನುಭವವನ್ನೂ ಸಭಿಕರಿಗೆ ನಿವೇದಿಸಿ, ಹೊಲದಲ್ಲಿ ನಡೆದಿರುವ ಕಾರ್ಯವನ್ನು ತೋರಿಸಿದರು ಈ ಸಮಾರಂಭದ ಅಂಬಕ್ಕೆ ಸಭಿಕರಿಗೆ ಚಹಾ ನೀರಿನ ಏರ್ಪಾಟು ಮಾಡಲಾಗಿತ್ತು. ಈ ವ್ಯವಸ್ಥೆಯಲ್ಲಿ ಎಲ್ಲ ಸಭಿಕರಿಗೆ ಒಂದೇ ಬಗೆಯ ವ್ಯವಸ್ಥೆ ಮಾಡದೆ ಆರಿಸಿದ ಕೆಲವರ ಬಗ್ಗೆ ಪ್ರತ್ಯೇಕ ವಿಶೇಷ ವ್ಯವಸ್ಥೆ ಮತ್ತು ಇತರರ ಬಗ್ಗೆ ಬೇರೊಂದು ವ್ಯವಸ್ಥೆ ಹೀಗೆ ಪಂಕ್ತಿ ಪ್ರಪಂಚ ಮಾಡಿದ್ದರಿಂದ ಕೆಲವರು ಅಸಮಾಧಾನಗೊಂಡರೆಂದು ತಿಳಿಯುತ್ತದೆ

ಕಳೆದ ವಾರ ಮಿರ್ಜಾನದೊಳಗಿದ್ದ ಸರಕಾರಿ ಉಗ್ರಾಣದೊಳಗಿನ ಕೆಲವು ಅಕ್ಕಿಯು ಸರಕಾರಿ ಚೀಲಗಳಲ್ಲಿ ತುಂಬಿ ತಾರಿ ದಾಟಿ ಹೆಗಡೆ ಬದಿಗೆ ಒಯ್ಯಲು ಹೊರಟಾಗ ಕುಮಟೆಯ ಮಾಮಲೇದಾರರೂ ಪೂರೈಕೆಯ ಅಧಿಕಾರಿಗಳೂ ಅಕಸ್ಮಾತ್ ಅಲ್ಲಿ ಬಂದು ತಲ್ಪಿದರು. ಅವರನ್ನು ನೋಡಿ ಅಕ್ಕಿ ಹೊರುತ್ತಿದ್ದವರು ಹೊರೆಗಳನ್ನು ಧಕ್ಕೆಯಲ್ಲೇ ಚೆಲ್ಲಿ ಪಲಾಯನವಾದರು! ಉಗ್ರಾಣದಾತನು ಆಗ ಅಲ್ಲೇ ಸಮೀಪದಲ್ಲಿ ಒಂದು ಅಂಗಡಿಯೊಳಗಿದ್ದನಂತೆ ಅವನಿಗೆ ಈ ಅಕ್ಕಿ ಅಲ್ಲಿ ಹೇಗೆ ಮತ್ತು ಎಲ್ಲಿಂದ ಬಂತೆಂದು ಅಧಿಕಾರಿಗಳು ಕೇಳಲಾಗಿ ತಾನರಿಯೆನೆಂದು ಆತ ಪ್ರತ್ಯುತ್ತರ ಕೊಟ್ಟನಂತೆ ಸರಕಾರಿ ಚೀಲಗಳಿದ್ದರಿಂದ ಅಧಿಕಾರಿಗಳು ಸಂಶಯಗೊಂಡು ಉಗ್ರಾಣದೊಳಗಿನ ಅಕ್ಕಿಯ ಶಿಲ್ಕು ತಪಾಸಿಸಿದರು ಲೆಕ್ಕಕ್ಕೂ ಶಿಲ್ಕಿಗೂ ಮೇಳಗೂಡಿ ಬಂತಂತೆ. ಇದೇನು ಚೋದ್ಯವೆಂದು ಅಧಿಕಾರಿಗಳಿಗೆ ತಿಳಿಯಲಿಲ್ಲವಂತೆ! (ಘಟ್ಟದ ಮೇಲಿಂದ ಈ ಉಗ್ರಾಣಕ್ಕೆ ಬಂದ ಚೀಲಗಳು ಯಾವ ಅಳತೆಯ — ತಲೆ ತುಂಬಿದ ಯಾ ತಲೆ ಹೊಡೆದ — ಸೇರಿನಿಂದ ಅಳೆದು ಬಂದಿದ್ದವು ಮತ್ತು ಇಲ್ಲಿಯ ತಲೆ ಕೊಯ್ದ ಸೇರಿನಿಂದ ಅವು ಎಷ್ಟಾಗಬೇಕಿತ್ತು ಎಂಬುದರ ಲೆಕ್ಕ ಹಾಕಿದರೆ ಮಾತ್ರ ಈ ಕಳ್ಳತನದ ಜೋಡ್ಯ ತಿಳಿಯುವಂತಿದೆ ಘಟ್ಟದ ಮೇಲೆ ಪ್ರತಿ ಚೀಲದಲ್ಲಿ ೪೨ ಪಾಯಲಿ ಅಕ್ಕಿ ತುಂಬಿಕೊಂಡು ಬಂದ ೫೦ ಚೀಲಗಳು ಇಲ್ಲಿಯ ಅಳತೆಯಂತೆ ೬೮ ಚೀಲಗಳಾಗಬೇಕೆಂಬುದನ್ನು ಅಧಿಕಾರಿಗಳು ಮರೆಯದಿರಲಿ) ಆದರೂ ಉಗ್ರಾಣದಾರನ ಬಗ್ಗೆ ಸಂಶಯಗೊಂಡು ಅವನನ್ನು ಅಲ್ಲಿಂದಲ್ಲೇ ಕೆಲಸದಿಂದ ತಳ್ಳಹಾಕಿ, ಉಗ್ರಾಣವನ್ನು ತಾತ್ಕಾಲಿಕ ಹೆಗಡೆಯ ಪಟೇಲರ ವಶಕ್ಕೆ ಕೊಟ್ಟಿದ್ದಾರೆ

ಈ ಹಿಂದೆ ತಿಳಿಸಿದಂತೆ ಕುಮಟಾ ತಾಲೂಕಿನ ಹವ್ಯಕ ವಿದ್ಯಾವರ್ಧಕ ಸಂಘದ ಜಯಂತೀ ಉತ್ಸವ ಕಳೆದ ದಸರೆಯಾಗಿನ ಕೆಂಪ ಹೊಳೆಗದ್ದೆಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಿಯ ಗುಡಿಯಲ್ಲಿ ಜರುಗಿತು ಮೊದಲು ರಾ| ಕೃಷ್ಣ ಭಟ್ಟ ಧಾರೇಶ್ವರ ಇವರ ಅಧ್ಯಕ್ಷತೆಯೊಳಗೆ ಸಭೆಯಾಗಿ, ಸಂಘದ ಉನ್ನತಿಯ ಬಗ್ಗೆ ರಾ|| ತಿಮ್ಮಣ್ಣ ಹೆಗಡೆ ವಕೀಲ, ಸಿದ್ಧೇಶ್ವರ (ಗೋಕರ್ಣ), ಮಂಜಪ್ಪ ಹೆಗಡೆ (ಹೆಗಡೆ) ಮೊದಲಾದವರ ಭಾಷಣಗಳಾದವು ಸಭೆ ಮುಗಿದ ಮೇಲೆ ದೇವರಲ್ಲಿ ಮಂಗಳಾರತಿ, ಪ್ರಾರ್ಥನೆ, ಪ್ರಸಾದ ಸ್ವೀಕಾರ ವಗೈರೆ ಕಾರ್ಯಕ್ರಮಗಳಾಗಿ ಉತ್ಸವದ ಸಮಾಪ್ತಿಯಾಯಿತು

ಅಂತ್ರವಳ್ಳಿ ಸೀಮೆಯಲ್ಲಿ ಈ ವರ್ಷ ಅಡಿಕೆ ಮರಗಳಿಗೆ ಕೊಳೆರೋಗ ಬಾಧಿಸಿದ್ದರಿಂದ ಅಡಿಕೆ ಬೆಳೆ ಬಹಳ ಕಡಿಮೆ ಬಂದಿದೆಯಂತೆ ಈಗ ಅಡಿಕೆ ಮಣ ೧ಕ್ಕೆ ರೂ ೮ ರಷ್ಟು ದರವುಂಟು ಅದರೊಳಗಿಂದ ಅಡಿಕೆ ತೆರಿಗೆ ರೂ ೩|| ವಜಾ ಹೋಗಲಾಗಿ ರೂ ೪|| ಮಾತ್ರ ತೋಟಿಗರಿಗೆ ಸಿಗುತ್ತಿದೆ. ಆದರೆ ೧ ಮಣ ಅಡಿಕೆ ಬೆಳೆ ತೆಗೆದುಕೊಳ್ಳಬೇಕಾದರೆ ವರ್ಷದಲ್ಲಿ ೧೨ ತಿಂಗಳು ದುಡಿಯಬೇಕು ಮತ್ತು ಸಂಸಾರ ರೂ ೩-೩|| ಖರ್ಚು ಮಾಡಬೇಕು. ಅಂದ ಮೇಲೆ ತೋಟಿಗರ ಶ್ರಮಕ್ಕೆ ಏನು ಪ್ರತಿಫಲ ಸಿಗುತ್ತದೆಂಬುದನ್ನು ವಾಚಕರೂ ತೆರಿಗೆ ಹೇರಿದ ಸರಕಾರವೂ ಲೆಕ್ಕ ಹಾಕಿ ನೋಡಲಿ. ಸರಕಾರದವರ ತಲೆಭಾರವಾದ ಅಡಿಕೆ ತೆರಿಗೆಯಿಂದ ಅಡಿಕೆ ತೋಟಿಗರು ಬೇಗನೇ ಹಾಳುಬೀಳುವವರಾಗಿ ಬಲ್ಲವರು ಹೇಳುತ್ತಾರೆ

ಕಳೆದ ತಾ ೧೩, ೧೪, ೧೫ ಹೀಗೆ ೩ ದಿವಸಗಳ ವರೆಗೆ ಧಾರೇಶ್ವರ ಕನ್ನಡ ಶಾಲೆಯ ವಿದ್ಯಾರ್ಥಿಗಳು ಶ್ರೀ ಶಾರದಾ ಪೂಜೆಯ ಉತ್ಸವವನ್ನು ವಿಜೃಂಭಣೆಯಿಂದ ನಡಿಸಿದರು ಆ ವೇಳೆ ಇನ್ಸಪೆಕ್ಟರ ರಾ|| ಸಿದ್ಧೇಶ್ವರ, ಧಾರೇಶ್ವರ ಕೃಷ್ಣ ಭಟ್ಟ ಮತ್ತು ಕುಮಟೆಯ ವಕೀಲ ರಾ|| ವಿಶ್ವೇಶ್ವರ ಹೆಗಡೆ ಇವರು ಒಂದೊಂದು ದಿನ ಒಬ್ಬೊಬ್ಬರಂತೆ ಅಧ್ಯಕ್ಷರಾಗಿ

ನಂಬರು 74

ಆಜ್ಞೆ.

ಸರಕಾರಿ ಪ್ರಕಟಣೆ ಗ್ಯಾಝೆಟ (ಪೊಲಿಟಿಕಲ್-ಪುರವಣಿ) ನಂ S D II'1370 [illegible] 15ನೇ ಸಪ್ಟಂಬರ 1944ನೇದರ ಜೊತೆಗೆ ಭಾರತ ಸಂರಕ್ಷಣ ನಿಯಮಗಳ ಪೈಕಿ ನಿಯಮ 81 ರ ಉಪ-ನಿಯಮ 2 ರನ್ವಯ ವ ಅತನಿಗೆ ಹೀಗೆ ಮಾಡುವದಕ್ಕೋಸ್ಕರ ಸಹಾಯಕವಿರುವ ಎಲ್ಲ ಅಧಿಕಾರಗಳ ಮೇಲಿಂದ ಮತ್ತು ಇದರ ಸಂಬಂಧ ಈ ಮೊದಲು ಹೊರಡಿಸಿದ ಆಜ್ಞೆಗಳನ್ನೆಲ್ಲ ರದ್ದುಪಡಿಸಿ ಜಿಲ್ಲಾ ಮೆಜಿಸ್ಟ್ರೇಟ ವ ಧಾರಣ ನಿಯಂತ್ರಕ ಕಾನಡಾ ಇವರು ಆಜ್ಞೆ ಮಾಡುವದೇನಂದರೆ —

1945ನೇ ಇಸವಿಯ ಸಪ್ಟಂಬರ ತಿಂಗಳ 16ನೇ ತಾರೀಖಿನಿಂದ ಯಾವಾತನೂ ಜಿಲ್ಲಾ ಮೆಜಿಸ್ಟ್ರೇಟ ವ ಧಾರಣ ನಿಯಂತ್ರಕ ಕಾನಡಾ ಇವರ ಯಾ ಇವರ ಸಂಬಂಧ ಹೇಳಿದ 2 ನೇ ಪ್ರೊವಿಜೋ ಲಾಗು ಆಗುವ ಆಯಾ ಸೀಧಾ ಕ್ಷೇತ್ರಗಳ ಸೀಧಾ-ಅಧಿಕಾರಿಗಳ (ರೇಶನಿಂಗ ಆಫೀಸರ) ಪರವಾನಗಿಯನ್ನು ಪಡೆಯದೆ ಇದಕ್ಕೆ ಜೋಡಿಸಿದ ಪರಿಶಿಷ್ಟ I ರಲ್ಲಿ ತೋರಿಸಿದ ಸೀಧಾ ಕ್ಷೇತ್ರಗಳ ಒಳಗೆ (ಈ ಕೆಳಗೆ "ಸದರಿ ಕ್ಷೇತ್ರಗಳು" ಎಂದು ಕರೆಯಲ್ಪಟ್ಟಿವೆ) ಇದಕ್ಕೆ ಜೋಡಿಸಿದ ಪರಿಶಿಷ್ಟ II ನೇದರಲ್ಲಿ ತೋರಿಸಿದ ಸೀಧಾ ಜಿನಸುಗಳನ್ನು (ಈ ಕೆಳಗೆ "ಸದರಿ ಜಿನಸುಗಳು" ಎಂದು ಕರೆಯಲ್ಪಟ್ಟಿವೆ) ಹೊರಗಿನಿಂದ ನೆಲ-ಮಾರ್ಗ, ಉಗಿಬಂಡಿ, ನದಿ ಯಾ ಸಮುದ್ರ ಮಾರ್ಗದ ಮೂಲಕ ತರಲು ಮನಾಯಿ ಇರುತ್ತದೆ

ಸದರೀ ಜಿನಸುಗಳಲ್ಲಿಯ ಯಾವ ಜಿನಸನ್ನು ಸರಕಾರದಿಂದ ಯಾ ಸರಕಾರದ ವತಿಯಿಂದ, ಮಿಲಿಟರಿ ಕ್ರೆಡಿಟ ನೋಟುಗಳನ್ವಯ ಯಾ ಅವುಗಳ ಪ್ರಕಾರ ತರಲು ಪರವಾನಗಿಯು ಬೇಕಾಗಿಲ್ಲ

ಸದರೀ ಕ್ಷೇತ್ರಗಳ ಒಳಗೆ ತರುವಂಥ ಸದರೀ ಜಿನಸುಗಳು 1946ನೇ ಇಸವಿಯ ಏಪ್ರಿಲ ತಿಂಗಳ ಮೂವತ್ತನೇ ತಾರೀಖಿನ ಒಳಗೆ ಮಾತ್ರ ಸಾಕಾಗುವ ಪರಿಮಾಣವನ್ನು ಮೀರದೆ ಇದ್ದರೆ, ಸದರಿ ಕ್ಷೇತ್ರಗಳಲ್ಲಿ ಕಾಯಿದೇಶೀರ ಉಪಯೋಗ ಮಾಡಲ್ಪಡುವ ಸೀಧಾ ಕಾರ್ಡುಗಳ ಮೇಲೆ ಪಕ್ಷಗಳನ್ನು ತೋರಿಸುವ ಕೋಟ (ಕೂಪನ್) ಗಳನ್ನು ಎಲ್ಲಿಯ ವರೆಗೆ ರದ್ದುಗೊಳಿಸಲ್ಪಟ್ಟಿರುವವೋ ಅಲ್ಲಿಯ ವರೆಗೆ ಮಾತ್ರ ಸಾಕಾಗುವಷ್ಟು ಸದರೀ ಜಿನಸುಗಳನ್ನು ಸದರೀ ಕ್ಷೇತ್ರಗಳೊಳಗೆ ತರಲು ಪರವಾನಗಿ ಕೊಡಲ್ಪಡತಕ್ಕದ್ದು

ಸೀಧಾ ಟಿಕೆಟುಗಳ ಮೇಲೆ ಮಂಜೂರಾದ ಸೀಧಾ ಜಿನಸುಗಳ ಎಲ್ಲ ಪರಿಮಾಣವನ್ನು ಯಾ ಅದರ ಎಷ್ಟೇ ಪಾಲಿನಷ್ಟು ಸದರಿ ಕ್ಷೇತ್ರಗಳೊಳಗೆ ತರಲು ಸೀಧಾ ಟಿಕೇಟುಗಳನ್ನು ಧಾರಣ ಮಾಡುವವರಿಗೆ ಸಹ ಪರವಾನಗಿ ಕೊಡಲ್ಪಡತಕ್ಕದ್ದು.

ಸದರಿ ಕ್ಷೇತ್ರಗಳೊಳಗೆ ಮೂರು (3) ದಿವಸಗಳ ವರೆಗೆ ಸಾಕಾಗುವ ಸದರಿ ಜಿನಸುಗಳನ್ನು ತರಲು ಪರವಾನಗಿ ಬೇಕಾಗಿಲ್ಲ ಮೂರು ದಿವಸಗಳ ವರೆಗೆ ಸಾಕಾಗುವ ಜಿನಸುಗಳೆಂದರೆ ಎಷ್ಟು ಎಂಬುದನ್ನು ಕೆಳಗೆ ಹೇಳಿದೆ.

I) ಎಲ್ಲ ಸೀಧಾ ಆಹಾರ ಧಾನ್ಯಗಳು ಅಥವಾ ಅವುಗಳ ಹಿಟ್ಟು ಒಟ್ಟುಗೂಡಿ ಅಥವಾ ಬೇರೆ ಬೇರೆಯಾಗಿ	ಪ್ರತಿಯೊಬ್ಬ ಆರು ವರ್ಷದ ಅಥವಾ ಮೇಲ್ಪಟ್ಟ ಮನುಷ್ಯನಿಗೆ ತಲಾದಿಂದ 3 ಪೌಂಡು
II) ಸಕ್ಕರೆ	4 ಔಂಸು
III) ಚಿಮಣಿ ಎಣ್ಣೆ	1 ಪಾಯಿಂಟ

6 ವರ್ಷಕ್ಕಿಂತ ಕೆಳಗಿನವರಿಗೆ ಮೇಲೆ ಹೇಳಿದ ಅರ್ಧ ಪ್ರಮಾಣವನ್ನು ತರಲು ಅಡ್ಡಿಯಿಲ್ಲ

ಯಾವದೇ ಮನುಷ್ಯನು ಈ ಆಜ್ಞೆಯಲ್ಲಿಯ ಯಾವದಾದರೊಂದು ಸಂಕೇತ (ಪ್ರಾವಿಜನ್) ಉಲ್ಲಂಘಿಸಿದರೆ ಅಂಥ ಉಲ್ಲಂಘನೆಯ (ಗುನ್ಹೆಯ) ಇನಸಾಫ ಮಾಡುವ ಯಾವದೇ ನ್ಯಾಯಸ್ಥಾನವು, ಉಲ್ಲಂಘನ ಮಾಡಿದ ಮನುಷ್ಯನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾಗಬಹುದಾದಲ್ಲಿ, ಅದನ್ನು ಹೊರ್ತುಪಡಿಸಿ ಉಲ್ಲಂಘನೆಯಾದ ಬಗ್ಗೆ ಮನದಟ್ಟಾದಲ್ಲಿ ಉಲ್ಲಂಘನೆಗೆ ಸಂಬಂಧಪಟ್ಟ ಸದರಿ ಜಿನಸುಗಳ ಪೈಕಿ ಯಾವದೇ ಜಿನಸಿನ ಎಷ್ಟೇ ಸಂಗ್ರಹವನ್ನು (ಸ್ಟಾಕನ್ನು) ಅದರ ಕಟ್ಟೋಣ ಮತ್ತು ಆಚ್ಛಾದನ ಸಮೇತ ಸರಕಾರಕ್ಕೆ ದಾಖಲ ಮಾಡಲಿಕ್ಕೆ ಆಜ್ಞಾಪಿಸಬಹುದು

ಟೀಪು:— ಹಿಂದುಸ್ಥಾನದ ಸಂರಕ್ಷಣೆಯ ವಿಷಯದ ಕಾನೂನುಗಳ ಪೈಕಿ 119ನೇ ಕಾನೂನಿನ (1)ನೇ ಪೋಟ ಕಾನೂನಿನ ಮೇರೆಗೆ ಈ ಆಜ್ಞೆಯ ಪ್ರತಿಗಳು ಮುಂಬಯಿ ಸರಕಾರಿ ಗೆಝೆಟಿನಲ್ಲೂ ಯಾ "ವಿಚಾರಿ" ವ 'ಕಾನಡಾ ವೃತ್ತ" ವರ್ತಮಾನ ಪತ್ರಗಳಲ್ಲೂ ಪ್ರಸಿದ್ಧಪಡಿಸತಕ್ಕದ್ದು, ಮತ್ತು ಜಿಲ್ಹೆಯಲ್ಲಿಯ ಸೀಧಾ ಕ್ಷೇತ್ರಗಳಲ್ಲಿಯ ಸೀಧಾ ಅಂಗಡಿಗಳಲ್ಲಿಯ ವ ಪೋಲೀಸ ಕಚೇರಿಗಳಲ್ಲಿಯ ನೋಟೀಸ ಬೋರ್ಡುಗಳ ಮೇಲೆ ಹಚ್ಚಲ್ಪಡತಕ್ಕದ್ದು. ಈ ಆಜ್ಞೆಯ ಪ್ರತಿಗಳು ಹೀಗೆ ನೋಟೀಸ ಬೋರ್ಡುಗಳ ಮೇಲೆ ಹಚ್ಚಲ್ಪಟ್ಟಿವೆಯೆಂದು ಡಂಗುರ ಸಾರಿ ತಿಳಿಸಲ್ಪಡತಕ್ಕದ್ದು ಸದರ ಆಜ್ಞೆಯ ಒಂದು ಪ್ರತಿಯನ್ನು ಕಾನಡಾ ಜಿಲ್ಹೆಯ ಕಲೆಕ್ಟರ ಕಚೇರಿಯ ಪೂರೈಕೆ ಖಾತೆಯ ನೋಟೀಸ ಬೋರ್ಡನ ಮೇಲೆಯೂ ಹಚ್ಚಲಾಗುವದು

ಪರಿಶಿಷ್ಟ I ನೇದು

(1) ಕಾರವಾರ ಮ್ಯುನಿಸಿಪಲ್ ಕ್ಷೇತ್ರ ಮತ್ತು ಬೈತಖೋಲ, ಕೋಡಿಬಾಗ, ಬಾಡ ಗ್ರಾಮಗಳನ್ನೊಳಪಡಿಸಿದ ಕ್ಷೇತ್ರ,
(2) ಕುಮಟಾ ಮ್ಯುನಿಸಿಪಲ್ ಕ್ಷೇತ್ರ,
(3) ಹೊನ್ನಾವರ ಮ್ಯುನಿಸಿಪಲ್ ಕ್ಷೇತ್ರ,
(4) ಭಟಕಳ ಮ್ಯುನಿಸಿಪಲ್ ಕ್ಷೇತ್ರ,
(5) ಗೋಕರ್ಣ ಮ್ಯುನಿಸಿಪಲ್ ಕ್ಷೇತ್ರ,
(6) ಶಿರಸಿ ಮ್ಯುನಿಸಿಪಲ್ ಕ್ಷೇತ್ರ

ಪರಿಶಿಷ್ಟ II

(1) ಅಕ್ಕಿ ವ ಅಕ್ಕಿಯಿಂದ ತಯಾರ ಮಾಡಿದ ಜಿನಸುಗಳು,
(2) ಭತ್ತ,
(3) ಗೋದಿ, ಗೋದಿ ಹಿಟ್ಟು, ಸುಜಿ, ರವಾ, ಮೈದಾ ವ ಆಟ್ಟಾ ಸಮೇತ,
(4) ಜೋಳ ವ ಜೋಳದ ಹಿಟ್ಟು ಸಮೇತ,
(5) ರಾಗಿ ವ ರಾಗಿ ಹಿಟ್ಟು,
(6) ಸಕ್ಕರೆ, ಹರಳು ಸಕ್ಕರೆ, ಹಿಟ್ಟು ಸಕ್ಕರೆ, ಕಲ್ಲು ಸಕ್ಕರೆ, ಲಿಸಂ ಸಕ್ಕರೆ, ಬೂರಾ ಸಕ್ಕರೆ ಸಮೇತ,
(7) ಚಿಮಣಿ ಎಣ್ಣೆ

ಕಾನಡಾ ಜಿಲ್ಲಾ ಮೆಜಿಸ್ಟ್ರೇಟ ಕಚೇರಿ,
ಕಾರವಾರ, ತಾ 27—8—1945.

V. NANJAPPA,
ಜಿಲ್ಲಾ ಮೆಜಿಸ್ಟ್ರೇಟ ವ ಧಾರಣ ನಿಯಂತ್ರಕ, ಕಾನಡಾ.

ವ್ವರು. ಉತ್ಸವದಲ್ಲಿ ಹುಡುಗ-ಹುಡುಗಿಯರ ವಿನೋದಾವಳಿಗಳೂ ನಾಟಕಗಳೂ ವಾದ್ಯ-ಸಂಭಾಷಣೆಗಳೂ ಆದವು ಹಲವು ಹಿರಿಯರ ಭಾಷಣಗಳೂ ಆದವು. ಊರ ಜನರೂ ಉತ್ಸವದಲ್ಲಿ ಸೇರಿದ್ದರು

ಮಾದನಗೇರಿ ಶಾಲೆಯು ಹಾಗೂ ಅದರ ಈಗಣ ಶಿಕ್ಷಕರ ಬಗ್ಗೆ ಕಳೆದ ವಾರದ "ವೃತ್ತ'ದಲ್ಲಿ ಬಂದ ಟೀಕೆ ನಿರಾಧಾರವಿರುತ್ತದೆಂದು ಶಾಲಾ ಪಂಚರಿಬ್ಬರು ತಿಳಿಸುತ್ತಾರೆ ಈ ಶಾಲೆ ೪೦ ವರ್ಷಗಳಿಂದುಂಟು. ಶಾಲೆಯ ಕಟ್ಟಡ ೧೯೪೨ರಲ್ಲಿ ತಯಾರಾದದ್ದು. ರಾ॥ ಮಂಜನಾಥ ಕಾನಭಾಗರಿಗೆ ೮ ವರ್ಷಂಟೆಯೇ ವರ್ಗವಾಗಿತ್ತು ಶಾಲೆಯಲ್ಲಿ ಹಿಂದೆಂದೂ ಇಂದಿಷ್ಟು ಹುಡುಗರು ಸೇರಿದ್ದಿಲ್ಲ ಈಗ ಪಟದ ಮೇಲೆ ೩೫-೩೬ ಹುಡುಗರು ದಾಖಲ ಇದ್ದಾರೆ ದಿನ-ಹಾಜರಿಯ ಪ್ರಮಾಣ ಸರಾಸರಿ ೨೭ ಬೀಳುತ್ತದೆ ಈ ಶಾಲೆಯಲ್ಲಿ ೪ನೇ ಇಯತ್ತೆಯ ವರೆಗೆ ಮಾತ್ರ ಕಲಿಸುತ್ತಾರೆ. ಈ ವರ್ಗಗಳಲ್ಲಿ ಕಲಿಯುವ ಯಾವ ಹುಡುಗರೂ ಹಿರೇಗುತ್ತಿಗೆ ಹೋಗುವದಿಲ್ಲ ೫-೬-೭ನೇ ಇಯತ್ತೆಯಲ್ಲಿ ಕಲಿಯುವವರು ಮಾತ್ರ ಹಿರೇಗುತ್ತಿ ಶಾಲೆಗೆ ಹೋಗುತ್ತಾರೆ ರಾ॥ ಈಶ್ವರ ನಾಯ್ಕರು ಅಧಿಕಾರಿಗಳ ಪೂಜೆ ಮಾಡಿ ತಮ್ಮ ತಪ್ಪು ಮುಚ್ಚಿಕೊಳ್ಳುತ್ತಾರೆಂಬುದು ಸುಳ್ಳು ಎಂದು ಮುಂತಾಗಿ ಈ ಪಂಚರು ಬರೆಯುತ್ತಾರೆ

ಹೊನ್ನಾವರ— (ತಾ ೧೮ ೧೦-೪೩) ದಸರೆಯ ದಿನ ಇಲ್ಲಿಯ ಶ್ರೀ ದುರ್ಗಾದೇವಿಯ ಸನ್ನಿಧಾನದಲ್ಲಿ ಕುರಿ-ಕೋಣಗಳ ಬಲಿ ಕೊಡುವ ಪರಿಪಾಠವಿತ್ತು. ಅದನ್ನು ನಿಲ್ಲಿಸುವದಕ್ಕೆ ಈ ಹಿಂದೆ ಪ್ರಯತ್ನ ನಡೆದಿತ್ತು, ಆದರೆ ಅದು ಯಶಸ್ವಿಯಾಗಲಿಲ್ಲ ಈ ವರ್ಷವೂ ವಕೀಲ ರಾ॥ ಜಾಲಿಸತ್ಗಿಯವರ ನೇತೃತ್ವದಲ್ಲಿ ಕೆಲವು ಪ್ರಯತ್ನ ಮಾಡಿದರು ದೇವಸ್ಥಾನದಲ್ಲಿ ಹಿಂಸೆ ಮಾಡುವದು ಸಲ್ಲದೆಂದು ಅವರು ಹಿಂಸಾವಾದಿಗಳಿಗೆ ಸಾಮರಿಯಿಂದ ಕೇಳಿಕೊಂಡರು ಹಿಂಸಾವಾದಿಗಳು ಒಪ್ಪಲಿಲ್ಲ! ಪೋಲೀಸರನ್ನು ಕರೆತಂದು ಅಹಿಂಸಾವಾದಿಗಳನ್ನು ಬಂಧಿಸುವದಾಗಿ ಅವರು ಬೆದರಿಕೆ ಹಾಕಹತ್ತಿದರು! ಆಗ ಪದ್ಮಾಕರ ಮತ್ತು ವಸಂತ ಎಂಬ ಇಬ್ಬ ಹುಡುಗರು ಮುಂದಾಗಿ, ತಾವು ಸತ್ಯಾಗ್ರಹ ಮಾಡುವೆವಾಗಿಯೂ ಮೂಕ ಪ್ರಾಣಿಗಳನ್ನು ಕೊಲ್ಲುವದೇ ಆದಲ್ಲಿ ತಮ್ಮನ್ನು ಮೊದಲು ಕೊಂದು ಹಿಂದಿನಿಂದ ಆ ಪ್ರಾಣಿಗಳನ್ನು ಕೊಲ್ಲತಕ್ಕದ್ದಾಗಿಯೂ ನಿರ್ಧಾರಪೂರ್ವಕ ನುಡಿದು ಸತ್ಯಾಗ್ರಹಕ್ಕೆ ಸಿದ್ಧರಾದರು ಇಷ್ಟರಲ್ಲಿ ಮಾಮಲೇದಾರ ರಾ। ಶೆಟ್ಟಿಯವರು ದೇವಸ್ಥಾನಕ್ಕೆ ಬಂದು, ಹಿಂಸೆ ಮಾಡುವದು ಅನುಚಿತವೆಂತಲೂ ಶಿರ್ಸಿಯ ಶ್ರೀ ಮಾರಿಯಮ್ಮನವರ ಮುಂದೆ ಹಿಂಸೆ ನಿಲ್ಲಿಸಿದ ಉಜ್ವಲ ಉದಾಹರಣೆ ನಮ್ಮ ಮುಂದಿರುವಾಗ ಅದನ್ನು ನಾವು ಅನುಸರಿಸುವದು ಧರ್ಮವೆಂತಲೂ ಹಿಂಸಾವಾದಿಗಳಿಗೆ ಬೋಧ ಮಾಡಿದರು ಹಿಂಸಾವಾದಿಗಳು ಅವರ ಮಾತಿಗೆ ತಲೆಬಾಗಿ ಕೊನೆಗೆ ಹಿಂಸೆ ಮಾಡುವದಿಲ್ಲವಾಗಿ ವಚನ ಕೊಟ್ಟರು ಆ ಮೇಲೆ ರಾ॥ ಜಾಲಿಸತ್ಗಿಯವರು ಹಿಂಸೆ ನಿಲ್ಲಿಸಿದ ಬಗ್ಗೆ ಎಲ್ಲರನ್ನೂ ಅಭಿನಂದಿಸಿ ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡರು ಕೆಲವರು ಕುಮಾರ ಪದ್ಮಾಕರ ಮತ್ತು ವಸಂತ ಇವರ ಮೆರವಣಿಗೆ ಮಾಡಿ ಅವರನ್ನು ಸತ್ಕರಿಸಿದರು

ತಾ. ೧೬ನೇಗೆ ಟಪ್ಪರ ಸಭಾಮಂದಿರದಲ್ಲಿ ಹೆಣ್ಣು ಹುಡುಗಿಯರ ಶಾಲೆಯ ಶಾರದಾ-ಉತ್ಸವವಾಯಿತು ಹಾಡು, ಸಂಭಾಷಣೆ, ಕೋಲಾಟ ವಗೈರೆ ವಿನೋದಾವಳಿಗಳು ನಡೆದವು ರಾ॥ ಜಾಲಿಸತ್ಗಿ ವಕೀಲರು ಒಂದು ಭಾಷಣ ಮಾಡಿ ಸ್ತ್ರೀಯರು ರಾಷ್ಟ್ರೀಯ ಚಟುವಟಿಕೆಗಳಲ್ಲಿ ಸೇರಬೇಕೆಂತಲೂ ನೂಲುವ ಉದ್ಯೋಗವನ್ನು ಕೈಕೊಳ್ಳಬೇಕಾಗಿಯೂ ಉಪದೇಶ ಮಾಡಿದರು

ನಗರಿಯಲ್ಲಿ ಬಂಧಿಸಿದ ಓರ್ವ ಫರಾರಿ ಸೈನಿಕನು ಬೇಡಿಸಹಿತ ಪಾರಾ ಓಡಿಹೋದ ಸಮಯದಲ್ಲಿ, ಹಾದಿಯಲ್ಲಿ ಸಿಕ್ಕ ಆ ಬೇಡಿಯನ್ನು ತಂದು ಕೊಟ್ಟ ನಿರಪರಾಧಿ ಮನುಷ್ಯನಿಗೆ ಹೊಡೆದು ಥಳಿಸಿದ ಶಿಪ್ರಾಯಿ ಹವಾಲದಾರನಿಗೆ ಪೋಲೀಸ ಸಾಹೇಬರು ಹಿಂಬಡತಿ ಕೊಟ್ಟು ಈಗ ಸಾದಾ ಪೋಲೀಸನನ್ನಾಗಿ ಮಾಡಿದ್ದಾರೆಂದು ಸುದ್ದಿ.

ಪೋಲೀಸರಲ್ಲಿ ಹಬ್ಬಿಕೊಂಡಿರುವ ಲಂಚಗುಳಿತನದ ಒಂದು ಕಥೆ ಈಗ ಹೊರಬಿದ್ದಿದೆ. ಮಾವಿನಕುರ್ವೆಯ ರಾ॥ ರಾಮಚಂದ್ರ ಕಾನಭಾಗರು ತಮ್ಮ ಬಾಬ್ತು ಕೆಲವು ಅಕ್ಕಿಯನ್ನು ದೋಣಿಯಲ್ಲಿ ಹೇರಿ ಶಿರಳಗಿಯಿಂದ ಗೇರಸಪ್ಪೆಯೊಳಗಿನ ಸರಕಾರಿ ಉಗ್ರಾಣಕ್ಕೆ ಒಯ್ಯುತ್ತಿದ್ದಾಗ ಹಾದಿಯಲ್ಲಿ ಓರ್ವ ಹವಾಲದಾರನು ಅದನ್ನು ಹಿಡಿದು ಪಂಚನಾಮೆ ಮಾಡಿಸಿದನು ಊರ ಶಾನಭೋಗ-ಪಟೇಲರು ಊರಲ್ಲಿಲ್ಲದ್ದರಿಂದ ಪರವಾನೆ ತಕ್ಕೊಳ್ಳಲಾಗಲಿಲ್ಲೆಂದೂ ಅಕ್ಕಿಯನ್ನು ತಾವು ಸರಕಾರಿ ಉಗ್ರಾಣಕ್ಕೇ ಒಯ್ಯುತ್ತಿರುವೆವಾಗಿಯೂ ರಾ॥ ರಾಮಚಂದ್ರ ಕಾನಭಾಗರು ಹೇಳಿದಾಗ್ಯೂ, ಸರಕಾರಕ್ಕೆ ಕೊಡುವದಾದರೂ ಗ್ರಾಮಾಂತರ ಮಾಡಲು ಪರವಾನಗಿಯು ಬೇಕೆಂದು ಹೇಳಿ ಆ ಹವಾಲದಾರನು ಮುಂದಿನ ಕ್ರಮ ಆರಂಭಿಸಿದ್ದನು. ಆಗ ಓರ್ವರು ನಡುವೆ ಮಧ್ಯಸ್ಥಿಕೆ ಮಾಡಿ ಆ ಹವಾಲದಾರನಿಗೆ ೧೦೦ ರೂ. ಕೊಡಿಸಿದರಂತೆ! ಪಂಚನಾಮೆಯು ಆಗ ಹರಿಯಲ್ಪಟ್ಟಿತು ಅಕ್ಕಿಯು ಗೇರಸಪ್ಪೆಗೆ ಸಾಗಿತು! ರಾ॥ ಕಾನಭಾಗರು ಸುಮ್ಮಗುಳಿಯಲಿಲ್ಲ. ಅದೇ ಕಾಲಕ್ಕೆ ಹೊನ್ನಾವರ ಕಡೆ ಬಂದು ಕಲ್ಪಿದ ಪೋಲೀಸ ಇನ್ಸಪೆಕ್ಟರ ರಾ॥ ಇನಾಮದಾರರಿಗೆ ನಡೆದ ಕಥೆಯನ್ನೆಲ್ಲ ಅವರು ತಿಳಿಸಿ, ತಮ್ಮ ೧೦೦ ರೂ. ತಿರುಗಿ ಕೊಡಿಸಬೇಕಾಗಿ ವಿನ್ನವಿಸಿದರಂತೆ. ಇನಾಮದಾರರಿಗೆ ಆಗ ಲಗು ಕಾರವಾರಕ್ಕೆ

(೨ನೇ ಪುಟದ ಮೇಲೆ ಮುಂದರಿಸಿದೆ)

ನಂಬರು 74

ಆಜ್ಞೆ.

ಸರಕಾರಿ ಪ್ರಕಟನೆ ಗೃಹಖಾತೆ (ಪೊಲಿಟಿಕಲ್-ಪೊರ) ನಂ. S. D. II/1370 ತಾರೀಖು ೨೯ನೇ ಸಪ್ಟಂಬರ ೧೯೪೩ರ ಜೊತೆಗೆ ಭಾರತ ಸಂರಕ್ಷಣ ನಿಯಮಗಳ ಪೈಕಿ ನಿಯಮ ೮೧ ರ ಉಪ-ನಿಯಮ ೨ ರನ್ವಯ ವ ಆತನಿಗೆ ಹೀಗೆ ಮಾಡುವದಕ್ಕೋಸ್ಕರ ಸಹಾಯಕವಿರುವ ಎಲ್ಲ ಅಧಿಕಾರಗಳ ಮೇಲಿಂದ ಮತ್ತು ಇದರ ಸಂಬಂಧ ಈ ಮೊದಲು ಹೊರಡಿಸಿದ ಆಜ್ಞೆಗಳನ್ನೆಲ್ಲ ರದ್ದುಪಡಿಸಿ ಜಿಲ್ಹಾ ಮೆಜಿಸ್ಟ್ರೇಟ ವ ಧಾರಣೆ-ನಿಯಂತ್ರಕ ಕಾನಡಾ ಇವರು ಆಜ್ಞೆ ಮಾಡುವದೇನಂದರೆ:—

೧೯೪೩ನೇ ಇಸವಿಯ ಸಪ್ಟಂಬರ ತಿಂಗಳ ೧೬ನೇ ತಾರೀಖಿನಿಂದ ಯಾವಾತನೂ, ಜಿಲ್ಹಾ ಮೆಜಿಸ್ಟ್ರೇಟ ವ ಧಾರಣೆ-ನಿಯಂತ್ರಕ ಕಾನಡಾ ಇವರ ಯಾ ಅಂಥಾ ಸೀಧಾ-ಕ್ಷೇತ್ರದ ಅಧಿಕಾರಿ (ರೇಶನಿಂಗ ಆಫೀಸರ) ಯ. ಪರವಾನಗಿಯನ್ನು ಪಡೆಯದೆ ಇದಕ್ಕೆ ಜೋಡಿಸಿದ ಪರಿಶಿಷ್ಟ ೧ನೇದರಲ್ಲಿ ಹೇಳಿದ ಸೀಧಾ ಜಿನಸುಗಳನ್ನು (ಈ ಕೆಳಗೆ ಇಂಥ ಸೀಧಾ-ಜಿನಸುಗಳು "ಸದರಿ ಜಿನಸುಗಳೆಂ"ತ ಕರೆಯಲ್ಪಟ್ಟಿವೆ) ಇದಕ್ಕೆ ಜೋಡಿಸಿದ ಪರಿಶಿಷ್ಟ ೨ನೇದರಲ್ಲಿ ಹೇಳಿದ ಸೀಧಾ ಕ್ಷೇತ್ರಗಳಲ್ಲಿಂದ (ಇದರ ನಂತರ ಸದರಿ ಕ್ಷೇತ್ರ ಎಂದು ಕರೆಯಲ್ಪಟ್ಟಿವ) ಹೊರಗೆ ನೆಲ-ಮಾರ್ಗ, ಉಗಿಬಂಡಿ, ನದಿ ಯಾ ಸಮುದ್ರ ಮಾರ್ಗದ ಮೂಲಕ ಒಯ್ಯಲಿಕ್ಕೆ ಮನಾಯಿ ಇರುತ್ತದೆ.

ಸದರಿ ಜಿನಸುಗಳಲ್ಲಿಯ ಯಾವ ಜಿನಸನ್ನು ಸರಕಾರದಿಂದ ಯಾ ಸರಕಾರದ ವತಿಯಿಂದ ಮಿಲಿಟರಿ ಕ್ರೆಡಿಟ್ ನೋಟುಗಳನ್ವಯ ಯಾ ಅವುಗಳ ಪ್ರಕಾರ ಒಯ್ಯಲು ಈ ಆಜ್ಞೆಯಲ್ಲಿಯ ಯಾತರದೂ ಅಡ್ಡಿ ಇರುವದಿಲ್ಲ. ಯಾವನೇ ಮನುಷ್ಯನು ಸದರಿ ಕ್ಷೇತ್ರಗಳಲ್ಲಿಂದ ಯಾ ಕ್ಷೇತ್ರಗಳೊಳಗಿಂದ ಹಾಯ್ದು ಸದರಿ ಜಿನಸುಗಳನ್ನು ಮೂರು ದಿವಸಗಳ ವರೆಗೆ ಸಾಕಾಗುವಷ್ಟು ಪರವಾನಗಿ ಪಡೆಯದೆ ಒಯ್ಯಲು ಅಡ್ಡಿಯಿಲ್ಲ. ಮೂರು ದಿವಸಗಳ ವರೆಗೆ ಸಾಕಾಗುವ ಜಿನಸುಗಳೆಂದರೆ ಎಷ್ಟು ಎಂಬುದನ್ನು ಕೆಳಗೆ ಹೇಳಿದೆ.

೧) ಎಲ್ಲ ಸೀಧಾ ಆಹಾರ ಧಾನ್ಯಗಳು ಅಥವಾ ಅವುಗಳ ಹಿಟ್ಟು ಒಟ್ಟುಗೂಡಿ ಅಥವಾ ಬೇರೆ ಬೇರೆಯಾಗಿ	ಪ್ರತಿಯೊಬ್ಬ ಆರು ವರ್ಷದ ಅಥವಾ ಮೇಲ್ಪಟ್ಟ ಮನುಷ್ಯನಿಗೆ ತೂಕದಿಂದ ೩ ಪೌಂಡು.
೨) ಸಕ್ಕರೆ	೮ ಔಂಸು
೩) ಚಿಮಣಿ ಎಣ್ಣೆ	೧ ಪಾಯಿಂಟ

೬ ವರ್ಷಕ್ಕಿಂತ ಕೆಳಗಿನವರಿಗೆ ಮೇಲೆ ಹೇಳಿದ್ದರ ಅರ್ಧ ಪ್ರಮಾಣವನ್ನು ತರಲು ಅಡ್ಡಿಯಿಲ್ಲ.

ಈ ಆಜ್ಞೆಯಲ್ಲಿಯ ಮನಾಯಿಯು ಸದರಿ ಜಿನಸುಗಳನ್ನು ಸದರಿ ಕ್ಷೇತ್ರಗಳೊಳಗಿಂದ ಹಾಯ್ದು ಒಯ್ಯುವದಕ್ಕೂ ಲಾಗು ಇರುತ್ತದೆ.

ಯಾವದೇ ಮನುಷ್ಯನು ಈ ಆಜ್ಞೆಯಲ್ಲಿಯ ಯಾವದಾದರೊಂದು ಸಂಕೇತ (ಪ್ರಾವಿಜನ್) ವನ್ನು ಉಲ್ಲಂಘಿಸಿದರೆ ಅಂಥ ಉಲ್ಲಂಘನೆಯು (ಗುನ್ಹೆಯ) ಇನಸಾಫ ಮಾಡುವ ಯಾವದೇ ನ್ಯಾಯಸ್ಥಾನವು, ಉಲ್ಲಂಘನೆ ಮಾಡಿದ ಮನುಷ್ಯನು ಬೇರೆ ಯಾವದೇ ಶಿಕ್ಷೆಗೆ ಪಾತ್ರನಾಗಬಹುದಾದಲ್ಲಿ ಅದನ್ನು ಪೂರ್ತಿಪಡಿಸಿ ಉಲ್ಲಂಘನೆಯಾದಬಗ್ಗೆ ಮನದಟ್ಟಾದಲ್ಲಿ ಉಲ್ಲಂಘನೆಗೆ ಸಂಬಂಧಪಟ್ಟ ಸದರಿ ಜಿನಸುಗಳ ಪೈಕಿ ಯಾವದೇ ಜಿನಸಿನ ಎಷ್ಟೇ ಸಂಗ್ರಹವನ್ನು (ಸ್ಟಾಕನ್ನು) ಅದರ ಕಟ್ಟೋಣ ಮತ್ತು ಆಚ್ಛಾದನ ಸಮೇತ ಸರಕಾರಕ್ಕೆ ದಾಖಲ ಮಾಡಲಿಕ್ಕೆ ಆಜ್ಞಾಪಿಸಬಹುದು.

ಟಿಪ್ಪಣಿ.— ಹಿಂದುಸ್ಥಾನದ ಸಂರಕ್ಷಣೆಯ ವಿಷಯದ ಕಾನೂನುಗಳ ಪೈಕಿ ೧೧೯ನೇ ಕಾನೂನಿನ (೧) ನೇ ಪೋಟ ಕಾನೂನಿನ ಮೇರೆಗೆ ಈ ಆಜ್ಞೆಯ ಪ್ರತಿಗಳು ಮುಂಬಯಿ ಸರಕಾರಿ ಗ್ಯಾಝೀಟಿನಲ್ಲೂ 'ವಿಚಾರಿ' ವ 'ಕಾನಡಾ ವೃತ್ತ" ವರ್ತಮಾನಪತ್ರಗಳಲ್ಲೂ ಪ್ರಸಿದ್ಧಪಡಿಸತಕ್ಕದ್ದು ಮತ್ತು ಜಿಲ್ಹೆಯಲ್ಲಿಯ ಸೀಧಾ ಕ್ಷೇತ್ರಗಳಲ್ಲಿಯ ಸೀಧಾ ಕಚೇರಿಗಳಲ್ಲಿಯ ವ ಮುಲ್ಕಿ ಕಚೇರಿಗಳಲ್ಲಿಯ ನೋಟೀಸ ಬೋರ್ಡುಗಳ ಮೇಲೆ ಹಚ್ಚಲ್ಪಡತಕ್ಕದ್ದು. ಈ ಆಜ್ಞೆಯ ಪ್ರತಿಗಳು ಹೀಗೆ ನೋಟೀಸ ಬೋರ್ಡುಗಳ ಮೇಲೆ ಹಚ್ಚಲ್ಪಟ್ಟವೆಯೆಂದು ಡಂಗುರ ಸಾರಿ ತಿಳಿಸಲ್ಪಡತಕ್ಕದ್ದು. ಸದರ ಆಜ್ಞೆಯ ಒಂದು ಪ್ರತಿಯನ್ನು ಕಾನಡಾ ಜಿಲ್ಹೆಯ ಕಲೆಕ್ಟರ ಕಚೇರಿಯ ಪುರೈಕೆ ಖಾತೆಯ ನೋಟೀಸ ಬೋರ್ಡಿನ ಮೇಲೆಯೂ ಹಚ್ಚಲಾಗುವದು

ಪರಿಶಿಷ್ಟ ೧

೧) ಅಕ್ಕಿ ವ ಅಕ್ಕಿಯಿಂದ ತಯಾರ ಮಾಡಿದ ಜಿನಸುಗಳು,
೨) ಭತ್ತ;
೩) ಗೋದಿ, ಗೋದಿ, ಹಿಟ್ಟು, ಸುಜಿ, ರವಾ, ಮೈದಾ ವ ಆಟ್ಟಾ ಸಮೇತ;
೪) ಜೋಳ ವ ಜೋಳದ ಹಿಟ್ಟು ಸಮೇತ;
೫) ರಾಗಿ ವ ರಾಗಿ ಹಿಟ್ಟು;
೬) ಸಕ್ಕರೆ, ಹರಳು ಸಕ್ಕರೆ, ಹಿಟ್ಟು ಸಕ್ಕರೆ, ಕಲ್ಲು ಸಕ್ಕರೆ, ಲೀಸಾ ಸಕ್ಕರೆ, ಬೂರಾ ಸಕ್ಕರೆ ಸಮೇತ;
೭) ಚಿಮಣಿ ಎಣ್ಣೆ

ಪರಿಶಿಷ್ಟ ೨

೧) ಕಾರವಾರ ಮ್ಯುನಿಸಿಪಲ್ ಕ್ಷೇತ್ರ ಮತ್ತು ಬೈತಖೋಲ, ಕೋಡಿಬಾಗ, ಬಾಡ ಗ್ರಾಮಗಳನ್ನೊಳಪಡಿಸಿದ ಕ್ಷೇತ್ರ;
೨) ಕುಮಟಾ ಮ್ಯುನಿಸಿಪಲ್ ಕ್ಷೇತ್ರ;
೩) ಹೊನ್ನಾವರ ಮ್ಯುನಿಸಿಪಲ್ ಕ್ಷೇತ್ರ;
೪) ಭಟಕಳ ಮ್ಯುನಿಸಿಪಲ್ ಕ್ಷೇತ್ರ;
೫) ಗೋಕರ್ಣ ಮ್ಯುನಿಸಿಪಲ್ ಕ್ಷೇತ್ರ;
೬) ಸಿರ್ಸಿ ಮ್ಯುನಿಸಿಪಲ್ ಕ್ಷೇತ್ರ.

ಕಾನಡಾ ಜಿಲ್ಹಾ ಮ್ಯಾಜಿಸ್ಟ್ರೇಟ ಕಚೇರಿ,
ಕಾರವಾರ, ತಾ. ೨೭-೮-೧೯೪೩.

V. NANJAPPA.
ಜಿಲ್ಹಾ ಮೆಜಿಸ್ಟ್ರೇಟ ವ ಧಾರಣೆ ನಿಯಂತ್ರಕ, ಕಾನಡಾ.

ಇದನ್ನು ಪಾಂಡುರಂಗ ಕೃಷ್ಣ ಕಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ.ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು.
ವರ್ಗಣಿಮುಂಗಡ ಕಳಿಸತಕ್ಕದ್ದು

Reg. No. B. 1270. Monday, 29th October, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೧೮.

ಕುಮಟಾ:- ಸೋಮವಾರ, ತಾ. ೨೯ ಮಾಹೆ ಅಕ್ಟೋಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ರುಂದ
೧ ಸಾಲಿಗೆ ೬ ಆಣೆಯಂತೆ
ಸ್ಮಾಲಪ್ಯಾಕಾ ೧೫ಎಮ್ ರುಂದ
೧ ಸಾಲಿಗೆ ೪ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತೀರಿಸಲಾದೀತು.

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಗಳು ಹುಲಿಯ ಪಾಲಾದವು, ಜನವಸತಿಯ ಭಾಗಕ್ಕೆ ಹೊಂದಿ ಬೆಟ್ಟವಿದ್ದುದರಿಂದ ಹುಲಿಗೆ ಚನ್ನಾಗಿ ಆಶ್ರಯ ಸಿಗುತ್ತಿದೆ! ರಾ| ತಿಮ್ಮಣ್ಣ ಹೆಗಡೆ ಎಂಬವರು ತಮ್ಮ ಮನೆಯ ಸಮೀಪದ ಬೆಟ್ಟದಲ್ಲಿ ೫೦ ಮಾರು ಅಗಲ ಪಟ್ಟಿ (ಸ್ಟ್ರಿಪ್) ಸ್ವಚ್ಛಗೊಳಿಸಿಕೊಳ್ಳಲು ಅಪ್ಪಣೆ ಕೊಡಬೇಕಾಗಿ ಒಂದು ವರ್ಷದ ಹಿಂದೆ ಅರ್ಜಿ ಮಾಡಿದ್ದರಂತೆ. ೧೧ ಮಾರು ಅಗಲ ಪಟ್ಟಿಯನ್ನು ಸ್ವಚ್ಛಗೊಳಿಸಿಕೊಳ್ಳಬಹುದಾಗಿ ಮೊನ್ನೆ ಅವರಿಗೆ ಉತ್ತರ ಬಂದಿದೆಯಂತೆ! ಜಂಗಲ-ಇಲಾಖೆಯವರಿಗೆ ತಮ್ಮ ಜಂಗಲದ ಮೇಲೂ ಹುಲಿ-ಹಂದಿಗಳ ಮೇಲೂ ಎಷ್ಟು ಮಮತೆ ನೋಡಿರಿ! ರಾ| ಹೆಗಡೆಯವರು ಕಡಿಸಬೇಕೆಂದು ಹವಣಿಸಿದ ಪಟ್ಟಿಯ ಭಾಗದಲ್ಲೇ ಕಳೆದ ವಾರ ಒಂದು ಹಗಲು ಹೊತ್ತಿನಲ್ಲಿ ಅವರದೊಂದು ಆಕಳನ್ನೂ ಎರಡು ಕರುಗಳನ್ನೂ ಹುಲಿಯು ಫಲಾಹಾರ ಮಾಡಿದೆ.

ಕಳೆದ ಬುಧವಾರ ರಾತ್ರಿ ಅಘನಾಶಿನಿಯೊಳಗಿನ ಶ್ರೀ ಚಿಂತಾಮಣಿ-ಗಣಪತಿ ದೇವಸ್ಥಾನದಲ್ಲಿ ರಾ| ಗ. ನ. ಶೆಟ್ಟಿ, ವಾ. ಸು. ಸಾವಡಾ, ಗಜಾನನ ಸಭಾಹಿತ ಮತ್ತು ರಾಮಾ-ನಾವಡಾ ಹೀಗೆ ನಾಲ್ವರು ಬೇರೆಬೇರೆ ಕೀರ್ತನೆಗಳನ್ನು ಮಾಡಿ ತೋರಿಸಿದರು ಜನರು ಮೆಚ್ಚಿದರು.

ಮತಾಧಿಕಾರವುಳ್ಳವರು ತಮ್ಮ ಹೆಸರು ಮುಂಬಯಿ ಪ್ರಾಂತಿಕ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಮತದಾರ ಯಾದಿಗಳಲ್ಲಿ ದಾಖಲುಪಡಿಸಿಕೊಳ್ಳಲು ಅರ್ಜಿ ಮಾಡುವ ಅವಧಿ ಕಳೆದ ತಾ. ೨೭ಕ್ಕೆ ಮುಗಿಯಿತು ಈ ಅವಧಿಯಲ್ಲಿ ಈ ತಾಲೂಕಿನಿಂದ ೩೦೦೦ದಷ್ಟು ಅರ್ಜಿಗಳಾಗಿವೆಯೆಂದು ತಿಳಿಯುತ್ತದೆ

ಹೊನ್ನಾವರ—(ತಾ. ೨೫-೧೦-೪೫) ಪ್ರಾಂತ ಸಾಹೇಬರ ಅನುಜ್ಞೆಯಂತೆ ಇಲ್ಲಿಯ ಮಾಮಲೇದಾರರು ಹಳದೀಪುರದಲ್ಲಿ ಕಳೆದ ತಾ. ೨೦ಕ್ಕೆ ಊರವರ ಸಭೆ ಸೇರಿಸಿ, ಈಗಿದ್ದ ಅಂಗಡಿಯವರನ್ನು ಊರವರ ಸಂಘದಲ್ಲಿ ಸೇರ್ಪಡೆ ಮಾಡಿಕೊಳ್ಳಲು ಸಂಘದವರ ಮನವೊಲಿಸಿದರು. ಸಂಘದವರೂ ಅದಕ್ಕೊಪ್ಪಿದರು; ಮತ್ತು ಹೊಸ ಕಾರ್ಯಕಾರಿ ಮಂಡಳವನ್ನು ಆರಿಸಿದರು. ಹೀಗಾಗಿ ನಿನ್ನೆಯಿಂದ ಉತ್ತರ ಭಾಗದ ಸೀಧಾ ಅಂಗಡಿಯು ಸಂಘದ ವಶ ಬಂದಿದೆ. ಈ ಪ್ರಕಾರ ಸೀಧಾ ಅಂಗಡಿಯ ತಂಟೆಯನ್ನು ಜಾಣ್ಮೆಯಿಂದ ಬಗೆಹರಿಸಿದ ಬಗ್ಗೆ ಊರ ಜನರು ಮಾಮಲೇದಾರರನ್ನೂ ಪ್ರಾಂತ ಸಾಹೇಬರನ್ನೂ ಕೊಂಡಾಡುತ್ತಾರೆ ಊರ ಸಂಘದವರು ತಮ್ಮ ವಶ ಸಿಕ್ಕ ಅಂಗಡಿಯನ್ನು ಸರ್ವಸಮ್ಮತವಾಗುವಂತೆ ನಡಿಸಿ ಬೇರೂರಿನವರಿಗೆ ಒಂದು ತಕ್ಕ ಪಾಠ ಕೊಡಬೇಕಾಗಿ ಸೂಚನೆಯಿದೆ.

ಇಲ್ಲಿಯ ಪರ್ಣಕುಟಿ (ಇದೊಂದು ತರುಣ ಬರಹಗಾರರ ಸಂಸ್ಥೆ) ಯವರು ಕಳೆದ ತಾ ೨೩-೨೪-೨೫ಕ್ಕೆ ರಾ| ದಿ ಪಿಟ್, ಶ್ರೀಧರ ಭಟಕಳ ಇವರ ಅಧ್ಯಕ್ಷತೆಯಲ್ಲಿ ನಾಡಹಬ್ಬವನ್ನು ಆಚರಿಸಿದರು. ಕಾಂಪಿಕ ಆಟಗಳು, ಗಾಯನ, ಕಾವ್ಯಗಾಯನ, ನಾಟ್ಯಕಲೆಯ ಪ್ರದರ್ಶನ ವಗೈರೆ ಕಾರ್ಯಕ್ರಮಗಳು ನಡೆದವಂತೆ.

ಭಟಕಳ—(ತಾ. ೨೩-೧೦-೪೫) ಭಟಕಳ ನಗರ ಸಭೆಯವರು ತಮ್ಮ ನಾಕೇದಾರರಿಂದ ದಿವಸದಲ್ಲಿ ೨೪ ತಾಸು ದುಡಿಸಿಕೊಳ್ಳುತ್ತಾರಂತೆ! ನಾಕೇದಾರರು ಕಾಯಿಲೆಯಿಂದ ಬಿದ್ದರೂ ರಜೆ ಕೊಡುವದಿಲ್ಲವಂತೆ! ರಜೆ ಸಿಗಬೇಕಾದರೆ ೭-೮ ಸಾರೆ ಬರೆಕೊಳ್ಳಬೇಕಾಗುತ್ತದಂತೆ! ಇದೆಲ್ಲದಕ್ಕೆ ಸೆಕ್ರೆಟರಿಗಳೇ ಕಾರಣರೆಂದು ಹೇಳುತ್ತಾರೆ ನಗರ ಸಭೆಗೆ ಬೇರೆ ಪಾತ್ರತೆಯುಳ್ಳ ಸೆಕ್ರೆಟರಿ ಯಾರೂ ಸಿಗುವದಿಲ್ಲವೇ?

ಕಾರವಾರ—(ತಾ ೨೫-೧೦-೧೯೪೫) ರಾಷ್ಟ್ರೀಯ ಸೇವಾ ದಳದ ಶಿಕ್ಷಣ ಶಿಬಿರವು ಇಂದಿನಿಂದ ನಡೆಯಲ್ಪಟ್ಟಿದೆ ರಾ| ಶ. ಪ. ಗಾಂವಕಾರರು ಪ್ರಾರಂಭೋತ್ಸವ ಮಾಡಿದರು. ೬೫ ಮಂದಿ ವಿದ್ಯಾರ್ಥಿಗಳು ಶಿಬಿರದಲ್ಲಿ ದಾಖಲಾಗಿದ್ದಾರೆ ಅವರಿಗೆ ಪ್ರತಿ ನಿತ್ಯ ೪ ತಾಸು ಕವಾಯತು, ೨ ತಾಸು ಬೌದ್ಧಿಕ ಶಿಕ್ಷಣ, ೧ ತಾಸು ನೂಲುವದು, ೧ ತಾಸು ರಾಷ್ಟ್ರೀಯ ಹಾಡುಗಳನ್ನು ಕಲಿಸುವದು ಹೀಗೆ ಕಾರ್ಯಕ್ರಮ ನಡೆದಿದೆ.

ಹತ್ತಿಕಾಳಿನ ಸಂಬಂಧದಲ್ಲಿ ಮೊನ್ನೆ ಮೊನ್ನೆ "ವೃತ್ತ" ದಲ್ಲಿ ಬಂದ ಟೀಕೆಗೆ ಪ್ರತ್ಯುತ್ತರವಾಗಿ ರಾ| ಹಳದೀಪುರ ವಾಸುದೇವರಾಯರು ಬರೆಯುತ್ತಾರೆ:— ಇದೀ ಜಿಲ್ಲೆಗೆ ಹತ್ತಿಕಾಳು ಪೂರೈಸುವ ಮಕ್ತೆ ನಮಗೆ ಕೊಟ್ಟಿದ್ದರಿಂದ ಹತ್ತಿಕಾಳು ಖುಟ್ಟಿಯಾಯಿತೆಂದೂ ಬೇರೆ ಬೇರೆ ವ್ಯಕ್ತಿಗಳಿಗೆ ಪರವಾನೆ ಕೊಟ್ಟಿದ್ದರೆ ಅದು ಅಗ್ಗವಾಗುತ್ತಿತ್ತೆಂದೂ ಹೇಳುವದರಲ್ಲಿ ಹುರುಳಿಲ್ಲ. ಹೊನ್ನಾವರ ಆರ್ಬನ ಬೇಂಕಿನವರು ಹುಬ್ಬಳ್ಳಿ ಪೇಟೆಯಲ್ಲಿ ಕಳೆದ ವರ್ಷ ರೂ. ೧೪ ೨೫ ರತ್ತಲಿನಂತೆ ಖರೇದಿಸಿದ ಹತ್ತಿಕಾಳನ್ನು ೧೩|| ರೂ.ಗಳಿಗೆ ೧ ಚೀಲದಂತೆ ಮಾರಿದ್ದಾರೆ. ಆದರೆ ನಾವು ೨೦ ರತ್ತಲಿನಂತೆ ಖರೇದಿಸಿದ ೪೦೦ ಚೀಲ ಹತ್ತಿಕಾಳನ್ನು ಕೊನೆಯ ತಿಂಗಳಲ್ಲಿ ರೂ ೧೨-೧೪-೦ಕ್ಕೆ ೧ ಚೀಲದಂತೆ (ಇದೂ ಕೂಡ ನಮ್ಮ ಹಾಗೂ ನಮ್ಮ ಸಬ್ ಏಜಂಟರ ದಲಾಲಿ ಸಹಿತ) ಅದೇ ಊರಲ್ಲಿ ಮಾಡಿದ್ದೇವೆ; ಯಲ್ಲಾಪುರದಲ್ಲಿ ರೂ ೧೦|||ಕ್ಕೆ ೧ ಚೀಲದಂತೆ ಪೂರೈಸಿದ್ದೇವೆ ಕಾರವಾರದ ವ್ಯಕ್ತಿ-ವ್ಯಾಪಾರಿಗಳು ರೂ. ೧೩|ಕ್ಕೆ ಮಾರುತ್ತಿದ್ದ ಚೀಲವನ್ನು ನಾವು ರೂ ೧೨ಕ್ಕೆ ಪೂರೈಸುತ್ತಿದ್ದೆವೆಂದು ಎದೆತಟ್ಟಿ ಹೇಳಬಲ್ಲೆವು. ಇದರ ಮೇಲಿಂದ ಬೇರೆ ಬೇರೆ ವ್ಯಕ್ತಿಗಳಿಗೆ ಮಕ್ತೆ ಕೊಡುವದಕ್ಕಿಂತ ಓರ್ವ ವ್ಯಕ್ತಿಗೇ ಮಕ್ತೆ ಕೊಡುವದು ಹಿತವೆಂದು ನಮ್ಮ ಮತ. ಓರ್ವ ವ್ಯಕ್ತಿಗೆ ಮಕ್ತೆ ಕೊಟ್ಟಲ್ಲಿ, ಖರೇದಿ, ವಾಹನ ಮುಂತಾದವುಗಳ ವ್ಯವಸ್ಥೆಯು ಸುಲಭ ಮತ್ತು ಅಗ್ಗವಾಗಿ ದರವನ್ನು ಇಳಿಸಲು ಹೆಚ್ಚು ಸಾಧ್ಯವಿದೆ. ಈಗ ಹತ್ತಿಕಾಳು ಖುಟ್ಟಿಯಾಗುವ ಕಾರಣ ಒಂದೇ ಹುಬ್ಬಳ್ಳಿಯಲ್ಲಿ ನಮಗೆ ಖರೇದಿಸಲು ಮುಂಬಯಿ ಸರಕಾರದವರು ಅಪ್ಪಣೆ ಕೊಡುವದಿಲ್ಲ. ದರ ಖುಟ್ಟಿಯಿದ್ದ ಬೆಳಗಾವಿ ಜಿಲ್ಲೆಯಲ್ಲೇ ನಾವು ಖರೇದಿಸಬೇಕಂತೆ ಅಲ್ಲಿಂದ ತರುವ ವೆಚ್ಚವೂ ದುಬಾರಿ ಬೀಳುತ್ತಿದೆ ಇದರಿಂದಲೇ ದರವನ್ನೇರಿಸುವ ಪ್ರಸಂಗ ಬಂದಿದೆ ಓರ್ವರಿಗೇ ಮಕ್ತೆ ಕೊಟ್ಟಿದ್ದರಿಂದ ಹೀಗಾಯಿತೆಂದು ಹೇಳುವದು ತೀರ ತಪ್ಪು. ಹತ್ತಿಕಾಳು ಖುಟ್ಟಿಯಾದದ್ದರ ಬಗ್ಗೆ ನೀವು ದೂರುವದಾದರೆ, ಧಾರವಾಡ ಜಿಲ್ಲೆಯಲ್ಲಿ ನಮಗೆ ಖರೇದಿಸಗೊಡದೆ ಬೆಳಗಾಂವ ಜಿಲ್ಲೆಯಲ್ಲೇ ನಾವು ಖರೇದಿಸತಕ್ಕದ್ದೆಂದು ನಿಗ್ರಹಿಸುವ ಮುಂಬಯಿ ಸರಕಾರದ ಪೂರೈಕೆ ಅಧಿಕಾರಿಗಳನ್ನು ದೂಷಿಸಬೇಕು. ಅನ್ಯರನ್ನು ದೂಷಿಸುವದು ನ್ಯಾಯ್ಯವಲ್ಲ. ಇತ್ಯಾದಿ.

ಅಂಕೋಲಾ—(ತಾ. ೨೫-೧೦-೧೯೪೫) ಇಲ್ಲಿಯ ನಾಗರಿಕರೂ ಭಾರತ ಸೇವಾ ಸಮಾಜದ ಸದಸ್ಯರೂ ಆಗಿರುವ ರಾ| ದಿನಕರ ದೇಸಾಯಿ ಇವರಿಗೆ ಮುಂದಿನ ತಿಂಗಳಲ್ಲಿ ಡೆನ್ಮಾರ್ಕ ದೇಶದ ರಾಜಧಾನಿಯಾದ ಕೋಪನಹೇಗನದಲ್ಲಿ ಕೂಡಲಿರುವ ನಾವಿಕ ಪರಿಷತ್ತಿನ ಹಿಂದೀ ಪ್ರತಿನಿಧಿಗಳ ಸಲಹೆಗಾರರನ್ನಾಗಿ ನೇಮಿಸಿದ್ದಾರೆ. ಕೋಪನಹೇಗನಕ್ಕೆ ಹೋಗುವ ಮುಂಚೆ ತಮ್ಮ ಹುಟ್ಟೂರು ಕಂಡು ಹೋಗುವಾ ಎಂದು ಅವರು ಮೊನ್ನೆ ಇಲ್ಲಿ ಬಂದಿದ್ದರು ಕಾನಡಾ ಜಿಲ್ಲೆಯಲ್ಲಿ ಪ್ರವೇಶ ಮಾಡಕೂಡದೆಂದು ಕಳೆದ ೫ ವರ್ಷಗಳಿಂದ ಅವರ ಮೇಲೆ ಸರಕಾರದವರ ಪ್ರತಿಬಂಧವಿತ್ತು. ೨ ತಿಂಗಳ ಹಿಂದೆ ಆ ಪ್ರತಿಬಂಧ ತೆಗೆಯಲ್ಪಟ್ಟಿತು. ಮೊನ್ನೆ ಅವರು ಬಂದಾಗ ಊರವರು ಸಂಭ್ರಮದ ಸ್ವಾಗತವನ್ನಿತ್ತರು. ನಿನ್ನೆ ರೈತರ ಸಭೆಯಲ್ಲಿ ಮಾತಾಡುವಾಗ, ರೈತರೆಲ್ಲರೂ ಸಂಘಟಿತರಾಗಬೇಕೆಂದೂ, ರಾಷ್ಟ್ರೀಯ ಸರಕಾರ ಅಸ್ತಿತ್ವದಲ್ಲಿ ಬಂದ ಮೇಲೆ ಒಕ್ಕಲಿಗರ ಕಷ್ಟಗಳೆಲ್ಲ ದೂರಾಗುವವೆಂದೂ ಅವರು ನುಡಿದರು ಲಾವಣಿ-ಕಟ್ಟಳೆಯನ್ನು ಬೇಗನೇ ಈ ಜಿಲ್ಲೆಯಲ್ಲಿ ಜಾರಿಯಲ್ಲಿ ತರುವದವಶ್ಯವುಂಟೆಂದೂ ಪ್ರತಿಪಾದಿಸಿದರು ಇಂದು ಅವರು ಮುಂಬಯಿಗೆ ಮರಳುತ್ತಾರೆ.

ಸಿದ್ದಾಪುರ— ಡಾ| ನೀಲೇಶ್ವರ ಗಣೇಶ ಭಟ್ಟರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಪ್ರದರ್ಶಿಸಲು ಈ ಊರವರು ಕಳೆದ ತಾ. ೧೧ಕ್ಕೆ "ಡಾ| ಭಟ್ಟ ದಿನ"ವನ್ನಾಚರಿಸಿದ್ದರು ಮುಂಜಾನೆ ಚೊಕ್ಕಳಿಯ ಮೆರವಣಿಗೆಯಾಯಿತು. ಮೆರವಣಿಗೆಯಾದ ಮೇಲೆ ಧ್ವಜವಂದನೆ, ದುಃಖಸೂಚನಾರ್ಥ ಧ್ವಜವನ್ನು ಅರ್ಧಕ್ಕೇ ಏರಿಸಿ ನಿಲ್ಲಿಸಿದ್ದರು. ಸಂಜೆ ರಾ| ಚಂದ್ರಭಟ್ಟಿಯವರ ಪಟಾಂಗಣದಲ್ಲಿ ಡಾ| ಕಾಮತರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ಸಭೆಯಾಗಿ, ದಿವಂಗತರ ಅಕಾಲಿಕ ನಿಧನದ ಬಗ್ಗೆ ದುಃಖಪ್ರದರ್ಶಕ ಗೊತ್ತುವಳಿಯಾಯಿತು. ಡಾ| ಭಟ್ಟ, ರಾ| ಮಡಗಾಂವಕರ ಮೊದಲಾದವರು ಮೃತಾತ್ಮರ ಗುಣಗಾನ ಮಾಡಿದರು.

ದಸರೆಯ ದಿನ ಇಲ್ಲಿಯ ಕನ್ನಡ ಶಾಲೆಯ ಬಾಲ ಬಾಲಕಿಯರು ತಾಲೂಕ ಮಾಮಲೇದಾರರ ಅಧ್ಯಕ್ಷತೆಯಲ್ಲಿ ಶ್ರೀ ಶಾರದಾ-ಉತ್ಸವ ಜರುಗಿಸಿದರು. ವಿದ್ಯಾರ್ಥಿನಿಗಳು "ಸಾವಿತ್ರೀ-ಸತ್ಯವಾನ" ನೆಂಬ ಪ್ರಹಸನವನ್ನೂ, ವಿದ್ಯಾರ್ಥಿಗಳು "ಕೃಷ್ಣ-ಕಾರಸ್ಥಾನ"ವೆಂಬ ನಾಟಕವನ್ನೂ ಅಭಿನಯಿಸಿ ಊರವರನ್ನು ಮೆಚ್ಚಿಸಿದರು

ಇಟಗಿಯ ಯೋಗ್ಯ ದರದ ಅಂಗಡಿಯಲ್ಲಿ ಅಲ್ಲಿ ಒಕ್ಕಲಿಗರಿಗೆ ಅಕ್ಕಿ ಮತ್ತು ಧಾನ್ಯ ಸರಿಯಾಗಿ ಕೊಡುವದಿಲ್ಲೆಂದು ಓರ್ವ ಒಕ್ಕಲಿಗನು ದೂರುತ್ತಾನೆ. ಜಿಲ್ಹಾಧಿಕಾರಿಗಳು ಚೌಕಶಿ ಮಾಡಬೇಕು.

ಮುಂದಿನ ವಾರ "ವೃತ್ತ"ಕ್ಕೆ ರಜೆ.

ಬರುವ ಶನಿ-ರವಿವಾರ "ವೃತ್ತ" ದ ಕಚೇರಿಯವರಿಗೆ ಬಿಡುವು ಬೇಕಾದ್ದರಿಂದ ತಾ. ೫-೧೧-೧೯೪೫ಕ್ಕೆ "ವೃತ್ತ" ವು ಪ್ರಕಟವಾಗದು. ಮುಂದಿನ ಸಂಚಿಕೆ ತಾ. ೧೨-೧೧-೪೫ಕ್ಕೆ ಹೊರಬೀಳುವದು.

ಎಂಪಾಯರ ಆಫ್ ಇಂಡಿಯಾ ಲೈಫ ಇನ್ಶುರನ್ಸ ಕಂಪನಿಯಲ್ಲೇ

ವಿಮೆ ಇಳಿಸಿರಿ ಎಲ್ಲ ಕಂಪನಿಗಳಿಗಿಂತ ಲಾಭಗಳು ಅತಿ ಸುಲಭವಿವೆ. ವಿಚಾರಿಸಿರಿ—

ಏಜಂಟ್, ಗೋವಿಂದ ಶ್ರೀಧರ ನಾಯಕ,
C/o ಬಾಲಕೃಷ್ಣ ಸ್ಟೋರ್ಸ್, ಕುಮಟಾ

The Agricultural & Industrial Bank, Ltd.
(Incorporated in British India, Liability of Members limited)
Head Office: COONDAPOOR. S. I
Branches:-
ANKOLA,
BELGAUM,
COONDAPOOR
DHARWAR,
GOKARN,
HAVERI,
HUBLI,
KARWAR,
KUMTA,
MANGALORE,
NAGAR,
SHIMOGA,
SIRSI,
SOMWARPET,
VIRAJPET
All kinds of Banking Business transacted.
Paid-up Capital & Reserves exceed Rs 4 LAKHS.
Please apply for particulars.
1-9-1945

ಹ॥ ಭ॥ ಪ॥ ಡಾ॥ ಪಟವರ್ಧನರ ಬೋಧಾಮೃತ.

ಹ॥ ಭ॥ ಪ॥ ಡಾಕ್ಟರ ಪಟವರ್ಧನ ದತ್ತೋಪಂತರ ಪರಿಚಯ ನಮ್ಮ ಜಿಲ್ಲೆಯವರಿಗುಂಟು ಇವರು ಬಹುಶ್ರುತರು, ವೈದ್ಯಶಾಸ್ತ್ರಪಾರಂಗತರು ಕಲಕತ್ತೆಯೊಳಗಿನ ವೈದ್ಯವಿದ್ಯಾಲಯದಲ್ಲಿ ಹೋಮಿಯೋಪಥಿ ಅಭ್ಯಾಸ ಮಾಡಿ ವಿಖ್ಯಾತ ವೈದ್ಯರಾಗಿದ್ದಾರೆ. ಇವರು ಮಾಡದಿದ್ದ ಉದ್ದಿಮೆಯಿಲ್ಲ. ಮುಂಬಯಿಯಲ್ಲಿ ಹಾಯಿಪಡಗಳ ವ್ಯಾಪಾರ ಮಾಡಿದ್ದಾರೆ, ಮುತ್ತಿನ ವ್ಯಾಪಾರ ಮಾಡಿದ್ದಾರೆ! ಇವರು ಒಳ್ಳೇ ಗಾಯನವಿಶಾರದರು. ಈಗಲೂ ಒಮ್ಮೊಮ್ಮೆ ಕೀರ್ತನೆದಲ್ಲಿ ಸ್ಫೂರ್ತಿ ಬಂದರೆ ಸರಾಸ್ತ ಹಾಡುತ್ತಾರೆ. ಹೋಮಿಯೋಪಥಿಯ ಅಭ್ಯಾಸ ಮುಗಿಸಿದ ಬಳಿಕ ಇವರು ೪ ವರ್ಷಗಳ ಕಾಲ ಪುಣೆಯಲ್ಲಿ ಔಷಧೋಪಚಾರ ನಡಿಸಿದ್ದರು. ಇವರ ಗಾನ-ನಿಪುಣತೆ, ದೇಹಸೌಷ್ಠವ ಮತ್ತು ಸದಾಚಾರಗಳನ್ನು ಕಂಡು ವಿಖ್ಯಾತ ಕಿರ್ಲೋಸ್ಕರ ಕಂಪನಿಯವರು ತಮ್ಮಲ್ಲಿ ನಟರಾಗಲು ವಿನಂತಿ ಮಾಡಿಕೊಂಡಿದ್ದರು. ತುಂಬ ಸಂಬಳ ಕೊಡುತ್ತೇವೆ, ಕಂಪನಿಯ ಆಡಳಿತೆಯಲ್ಲಿ ಸೇರಿಸಿಕೊಳ್ಳುತ್ತೇವೆ, ನಿಮ್ಮ ಸದಾಚಾರ ಕಂಪನಿಯವರಲ್ಲಿ ಹಬ್ಬಿ ಹಿತವಾದೀತು, ನೀವು ಡಾಕ್ಟರರಿದ್ದೀರಿ, ಔಷಧೋಪಚಾರದ ಪ್ರಯೋಜನ ಕಂಪನಿಗೆ ದೊರೆಯುವದು, ಗಾನ ಚಿತ್ತಾಕರ್ಷಕವುಂಟು, ಜನಮನರಂಜನವಾಗುವದು, ಇದೂ ಒಂದು ಲೋಕಸೇವೆ ಎಂದು ಮುಂತಾಗಿ ಕಿರ್ಲೋಸ್ಕರ ಕಂಪನಿಯವರು ದತ್ತೋಪಂತರಿಗೆ ದುಂಬಾಲ ಬಿದ್ದರು. ನಾಟಕದ ಸುದ್ದಿ ಬೇಡ, ಬಹಳ ನಾಟಕಗಳನ್ನು ನೋಡಿದ್ದೇನೆ, ನಾಟಕ ಕಂಪನಿಯವರೆಲ್ಲರು ನನ್ನ ಸ್ನೇಹಿತರು, ನಾಟಕ ಕಂಪನಿಯಲ್ಲಿ ನಾನು ಸೇರಿದರೆ ಇದ್ದ ಸದಾಚಾರ ಕಳಕೊಂಡು ನಾನು ದುರಾಚಾರಿಯಾಗುವೆನು, ನಾಟಕಗಳನ್ನು ಯಾರೂ ನೋಡಬಾರದು, ಅವುಗಳಿಂದ ಪ್ರೇಕ್ಷಕರ ನೈತಿಕತೆ ಕುಂದುತ್ತದೆ, ಬ್ರಹ್ಮಚರ್ಯ ಬಲವತ್ತರ ನಿಷ್ಠೆ ಪುಡಿಯಾಗುತ್ತದೆ, ಮನುಷ್ಯನು ಭೋಗಿಯಾಗುತ್ತಾನೆ, ಇಂದ್ರಿಯ ನಿಗ್ರಹಗಳಿಗೆ ಪರಾಙ್ಮುಖನಾಗುತ್ತಾನೆ. ನಾಟಕ ಪ್ರವೃತ್ತಿ ಸಮಾಜವನ್ನು ಹಾಳುಗೆಡಹುತ್ತಿದೆ, ಔಷಧೋಪಚಾರದಿಂದ ರೋಗನಿವಾರಣ ಮಾಡುವ ಪದ್ಧತಿ ನಿಸರ್ಗವಲ್ಲ, ನಿಸರ್ಗ ನಿಯಮಗಳಂತೆ ದೇಹಗಳಿಗೆ ನಡಿಸಿಕೊಂಡು ರೋಗಪರಿಹಾರ ಮಾಡಬೇಕು, ಔಷಧದಿಂದ ಮೈಯೊಳಗೆ ಪರಕೀಯ ವಸ್ತು ಸೇರಿ, ಮೈ ಕೆಟ್ಟು, ಮೈಶಕ್ತಿ ಕುಗ್ಗುತ್ತದೆ, ಹೀಗೆಲ್ಲ ದತ್ತೋಪಂತರ ವಿಚಾರ, ಕಂಪನಿಯವರು ಕೊಡತಕ್ಕಂಥ ದೊಡ್ಡ ಸಂಬಳದ ನೌಕರಿಯನ್ನು ಧಿಕ್ಕರಿಸಿ ಕೀರ್ತನಕಾರರಾಗಿದ್ದಾರೆ. ಶ್ರೀ ದತ್ತೋಪಂತರಿಗೆ ಕೀರ್ತನ ನವನವೊಂದು ವ್ಯವಸಾಯವಲ್ಲ, ಅದೊಂದು ಸಮಾಜಸೇವೆಯ ಉಪಾಸನೆಯಾಗಿದೆ. ಅನುಷ್ಠಾನಕ್ಕಾಗಿ ಅವರು ಕೀರ್ತನ ಮಾಡುತ್ತಾರೆ. ಈಗವರಿಗೆ ೬೫ ವರ್ಷ ವಯಸ್ಸು. ಅವರು ಸನಾತನಿಗಳು. ಸನಾತನ ಧರ್ಮದಂತೆ ಪ್ರಾತಃಸ್ನಾನ ಸಂಧ್ಯಾ, ಜಪ ತಪ, ಸೂರ್ಯ-ನಮಸ್ಕಾರ ಮಡಿ ಮೈಲಿಗೆ ವಿಧಿಗಳನ್ನು ನೇಮದಿಂದ ಪಾಲಿಸುತ್ತಾರೆ. ಮಡಿ ಪದ್ಧತಿಯಲ್ಲಿ ಆರೋಗ್ಯರಹಸ್ಯವುಂಟು. ದೇಹ ಧಾರಣೆಗೆ ವಿದ್ಯುತ್ತು ಬೇಕು. ನಮ್ಮ ಅಂಗಗಳಲ್ಲಿ ವಿದ್ಯುತ್ತು ಇರುತ್ತದೆ. ಭೂಮಿ ವಿದ್ಯುತ್ತನ್ನು ಆಕರ್ಷಿಸಿಕೊಳ್ಳುತ್ತದೆ. ಕಟ್ಟಿಗೆಯಿಂದ ವಿದ್ಯುತ್ಸಂಚಾರಕ್ಕೆ ತಡೆ ಬೀಳುತ್ತದೆ. ಮಡಿ ವಸ್ತ್ರವುಟ್ಟುಕೊಂಡು ಮಣೆಯ ಮೇಲೆ ಕೂತುಕೊಳ್ಳಬೇಕೆಂದು ವಿಧಿಸುವ ಕಾರಣವಿದೇ. ಹೆಂಗಸರಿಗೆ ಬೆನ್ನು ಭರಣ ಹಾಕುತ್ತಾರೆ. ಬೆನ್ನಿನಲ್ಲಿ ಎಲ್ಲಕ್ಕೂ ಹೆಚ್ಚು ವಿದ್ಯುಚ್ಛಕ್ತಿಯಿದೆ, ವಿದ್ಯುತ್ತು ಮೈಯಲ್ಲಿ ಸೇರಬೇಕೆಂಬ ಕಲ್ಪನೆ ಆ ಪದ್ಧತಿಯಲ್ಲಿದೆ. ಸೂರ್ಯನಮಸ್ಕಾರ ಹಾಕುವದರಿಂದ ಅಂಗಾಂಗಗಳ ವ್ಯಾಯಾಮವಾಗುತ್ತದೆ, ಪ್ರಾತಃಕಾಲದಲ್ಲಿ ಸೂರ್ಯಕಿರಣಗಳ ಸ್ನಾನವಾಗುತ್ತದೆ. ಸೂರ್ಯಕಿರಣ-ಸ್ನಾನ ಎಂದರೆ ವಿದ್ಯುತ್ ಸಂಚಾರದ ಒಂದು ಕ್ರಮ. ಈ ವ್ಯಾಯಾಮದಿಂದ ಮನುಷ್ಯನು ದೀರ್ಘಾಯುಷಿಯಾಗುತ್ತಾನೆ. ದತ್ತೋಪಂತರು ಈಗ ವೃದ್ಧರಾದರೂ ದಿನಾಲು ೩೦೦-೬೦೦ರ ತನಕ ಸೂರ್ಯನಮಸ್ಕಾರ ಹಾಕುತ್ತಾರೆ. ೧೦೦ ನಮಸ್ಕಾರ ಹಾಕಲು ೯ ಮಿನಿಟು ಸಾಕು. ಈ ವರೆಗೆ ಅವರು ೩೦ ಲಕ್ಷ ಸೂರ್ಯನಮಸ್ಕಾರ ಹಾಕಿದ್ದಾರೆ. ಬೆಳಗ್ಗೆ ಪ್ರವಚನ, ಸಂಜೆ ಹೊತ್ತಿನಲ್ಲಿ ಕೀರ್ತನೆ, ರಾತ್ರಿ ಸಾರ್ವಜನಿಕ ಕೀರ್ತನೆ ಹೀಗೆ ಸತತ ಉದ್ಯೋಗವನ್ನು ನಡಿಸಿದರೂ ಅವರಿಗೆ ದಣಿವಾಗುವದಿಲ್ಲ. ಸಮಾಜ-ಬೋಧೆಯ ಕಾರ್ಯದಲ್ಲಿ ಇಷ್ಟರ ಉತ್ಸಾಹ ಹೆಚ್ಚು. ಹುಡುಗರು ಸೊರಗಿದ್ದನ್ನು ಕಂಡು ಅವರು ಮರುಗುತ್ತಾರೆ. ೬ ವಿ. ೬ ಆಗಿ ಪ್ರಯೋಜನವಿಲ್ಲ, ಪುಷ್ಟ ಶರೀರವಿಲ್ಲದಿದ್ದರೆ ಕೇವಲ ವಿದ್ಯಾಸಂಪನ್ನತೆಯಿಂದ ಸ್ವ-ಪರ ಕಲ್ಯಾಣ ಸಾಧಿಸುವಂತಿಲ್ಲ. ಹುಡುಗರ ಆರೋಗ್ಯದ ಬಗ್ಗೆ ಇತ್ತ ತಾಯಿ ತಂದೆಗಳೂ ಅತ್ತ ಶಿಕ್ಷಕರೂ ಲಕ್ಷ ಕೊಡುವದಿಲ್ಲ, ಸರಕಾರವಂತೂ ಈ ವಿಷಯವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಿದೆ. ಈಗಿನ ಹುಡುಗರಲ್ಲಿ ಆತ್ಮವಿಶ್ವಾಸವಿಲ್ಲ. ನಮ್ಮ ಹಿರಿಯರು ದೀರ್ಘಾಯುಷಿಗಳಿದ್ದರು. ದೀರ್ಘಾಯುಷಿಗಳಾಗಬೇಕೆಂಬ ಅಭಿಲಾಷೆ ಅವರಿಗಿತ್ತು. "ನನ್ನ ತಂದೆ ೯೦ ವರ್ಷ ವಯಸ್ಸಿನವರಾಗಿ ತೀರಿಕೊಂಡರು. ಸಾಯುವ ವರೆಗೆ ಪ್ರತಿನಿತ್ಯ ೫ ಘಂಟೆಗೆ ಏಳುತ್ತಿದ್ದರು. ಅವರು ಎದ್ದೊಡನೆ ಗಡಿಯಾರವನ್ನು ನಿಲ್ಲಿಸಿ ಇಡಬಹುದಿತ್ತು. ಇಡೀ ಜನ್ಮದಲ್ಲಿ ಅವರು ಎರಡನೇ ಸಲ ಮಲವಿಸರ್ಜನೆಗೆ ಹೋಗಿಲ್ಲ" ಹೀಗೆ ಪಟವರ್ಧನರು ಹೇಳುತ್ತಾರೆ. ಚಹಪಾನದಿಂದ ಈಗಿನವರ ಆರೋಗ್ಯ ಕೆಟ್ಟಿದೆ. ತರತರದ ರೋಗಗಳು ಮನೆಮಾಡಿಕೊಂಡಿವೆ. ಚಹಾ, ಕಾಫಿ ಮೊದಲಾದ ಉಷ್ಣ ಪೇಯಗಳನ್ನು ಎಂದೂ ಸೇವಿಸಬಾರದು. ಅದರಿಂದ ಶರೀರದ ಸತ್ವಾಂಶ ಕುಗ್ಗಿ ರೋಗ ಪ್ರತಿಬಂಧಕ ಶಕ್ತಿ ಮಾಯವಾಗುತ್ತದೆ. ಹುಡುಗರು ಚಹಾ, ಕಾಫಿಗಳ ಬದಲಿಗೆ ಆಕಳ ಹಾಲನ್ನು ಸೇವಿಸಬೇಕು. ತಾಯಿಯ ಮೊಲೆ-ಹಾಲಿನ ನಂತರ ಆಕಳ ಹಾಲೇ ಮೇಲೆಂದು ಅನೇಕರಾದ ವೈದ್ಯಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದುಂಟು. ವಿದೇಶಗಳಲ್ಲಿ ಹುಡುಗರಿಗೆ ಆಕಳ ಹಾಲನ್ನು ಹಂಚುವ ಪ್ರಘಾತವುಂಟು. ಬೀಡಿ ಸೇದುವದರಿಂದ ಪುಪ್ಪುಸಗಳ ವಿಕಾರಗಳುಂಟಾಗುತ್ತವೆ. ಡಾಕ್ಟರರು ರೋಗಿಗಳಿಗೆ ಈ ಮಾತು ತಿಳಿಸಿ ಹೇಳಬೇಕು. ಅದನ್ನು ನಿವಾರಿಸಿಕೊಂಡು ನಿಸರ್ಗ-ಉಪಚಾರ ನಡಿಸಬೇಕು. ಗೋ-ಭಕ್ತ ಔಂಧೇ ಮಹಾರಾಜರು ದತ್ತೋಪಂತರ ಸ್ನೇಹಿತರು. ಅವರ ಅಳಿಯನು ಎಳೆ ವಯಸ್ಸಿನಲ್ಲಿ ಕೃಶನಾಗಿ ದುರ್ಬಲನಾಗಿದ್ದನು. ಆತನಿಗೆ ಬಹಳ ಡಾಕ್ಟರರು ಔಷಧೋಪಚಾರ ಮಾಡಿ ಬೇಸತ್ತಿದ್ದರು. ದಿನ ಹೋದ ಹಾಗೆ ಆತನು ಕ್ಷೀಣನಾಗುತ್ತಿದ್ದನು. ನಾಲ್ಕು ಹೆಜ್ಜೆ ತೆಗೆದರೆ ದಣಿವಾಗುತ್ತಿತ್ತು. ಡಾ॥ ಪಟವರ್ಧನರು ಆತನಿಗೆ ತಮ್ಮಲ್ಲಿ ಇಟ್ಟುಕೊಂಡರು. ನಸುಕಿಗೆ ಆತನಿಗೆ ಎಬ್ಬಿಸಿ, ಆಕಳ ಹಾಲು ಕೊಟ್ಟು ಅಡ್ಡಾಡ ಕಳುಹುತ್ತಿದ್ದರು. ಚಹಾ-ಬೀಡಿಗಳನ್ನು ಬಿಡಿಸಿದರು. ಕೈಯಿಂದ ಬೀಸಿದ ಹಿಟ್ಟಿನ ರೊಟ್ಟಿಗಳನ್ನು ತಿನ್ನಿಸುತ್ತಿದ್ದರು. ೬ ತಿಂಗಳಲ್ಲಿ ಆತನ ಪ್ರಕೃತಿ ಸುಧಾರಿಸಿತು. ೬ ಮೈಲುಗಳ ತನಕ ದಣುವಿಲ್ಲದೆ ಆತ ತಿರುಗಾಡತೊಡಗಿದನು. ಬೆಳಗಾಂವಿಯಲ್ಲಿ ಒಬ್ಬ ಸ್ಥಾನಿಕ ಹುಡುಗಿಗೆ ಅವರು ನಿಸರ್ಗೋಪಚಾರ ಮಾಡಿದ ಸಂಗತಿ ಉಲ್ಲೇಖಿಸಬಹುದು. ೧೫ ೧೬ ವರ್ಷ ವಯಸ್ಸಿನ ಹುಡುಗಿ, ಮದುವೆಯಾಗತಕ್ಕ ಹುಡುಗಿ. ಅವಳಿಗೆ ಬೊಜ್ಜು ಬೆಳೆದಿತ್ತು. ತಾಯಿ ತಂದೆಗಳು ಔಷಧೋಪಚಾರ ಮಾಡಿಸಿದರು, ಇಂಜೆಕ್ಷನ್ ಮಾಡಿಸಿದರು. ಅವರೂ ಸ್ವಲ್ಪಲತೆ ಬೆಳೆಯುತ್ತ ನಡೆಯಿತು! ಡಾ॥ ಪಟವರ್ಧನರು ಆಗ ಬೆಳಗಾಂವಿಗೆ ಬಂದಿದ್ದರು. ಅವರಿಗೆ ಆ ಹುಡುಗಿಯನ್ನು ತೋರಿಸಲಾಯಿತು. ಹುಡುಗಿಯ ತೂಕ ಆಗ ೧೭೫ ರತ್ತಲು ಇತ್ತು. ಒಂದೊಂದು ಮೈ ಅಂತು ನೋಡಲಾರದಷ್ಟು ಗಾತ್ರ! ತಾನು ಹೇಳಿದಂತೆ ನಡೆಕೊಳ್ಳುವದಾದರೆ ಹುಡುಗಿಗೆ ಉಪಚಾರ ಹೇಳುತ್ತೇನೆಂದು ಡಾ॥ ಪಟವರ್ಧನರು ನಿರ್ಧಾರದಿಂದ ಹೇಳಿದರು. ತಾಯಿ ತಂದೆಗಳೂ ಹುಡುಗಿಯೂ ಒಡಂಬಟ್ಟರು. ದಿನಾಲೂ ಬೀಸುಕಲ್ಲಿನ ಮೇಲೆ ಬೀಸಬೇಕು, ರಾತ್ರಿಯ ಊಟ ಬಿಡಬೇಕು, ೫ ೬ ಮೈಲು ತಿರುಗಾಡಬೇಕು ಎಂದು ಡಾಕ್ಟರರು ಕ್ರಮ ಹಾಕಿಕೊಟ್ಟರು. ಈ ಕ್ರಮದಿಂದ ೨ ತಿಂಗಳಲ್ಲಿ ಹುಡುಗಿಯ ತೂಕ ೫೦ ರತ್ತಲು ಕುಗ್ಗಿತು. ಮುಂದಿನ ೩ ತಿಂಗಳಲ್ಲಿ ಮತ್ತೆ ೧೫ ರತ್ತಲು ಕುಗ್ಗಿತು. ಮತ್ತೆ ಈ ಮಾಟಿಗೆ ಬರುವಾಗ ಅವರು ಆ ಹುಡುಗಿಯನ್ನು ನೋಡಿಕೊಂಡು ಬಂದಿದ್ದರು. ಈಗಿನ ಡಾಕ್ಟರರು ನಿಸರ್ಗವನ್ನು ಅಲಕ್ಷಿಸಿ ಔಷಧ ಕೊಡುತ್ತಾರೆ. ಒಂದು ಔಷಧದಿಂದ ಗುಣವಾಗದಿದ್ದರೆ ಇನ್ನೊಂದು ಔಷಧ ಕೊಡುತ್ತಾರೆ! ಆ ಔಷಧಗಳೆಲ್ಲ ವಿದೇಶಿ! ಔಷಧಗಳ ಗುಣಧರ್ಮಗಳನ್ನು, ಸ್ಥಳಿಕ ವಸ್ತುಗಳ ಗುಣ-ಧರ್ಮಗಳನ್ನು ತಿಳಕೊಂಡು ಅವರು ರೋಗಪರಿಹಾರದ ಯೋಜನೆ ಮಾಡುವದಿಲ್ಲ. ಬರೇ ವಿದೇಶಿ ಔಷಧ ಕಂಪನಿಗಳ ದಲಾಲರಾಗಿ ನಡಿಯುತ್ತಾರೆ! ಇತ್ತೀಚೆಗೆ ವ್ಹಿಟಮಿನ್ಸ್‌ಗಳ ಹುಚ್ಚು ರೂಢವಾಗಿದೆ. ವ್ಹಿಟಮಿನ್ಸ್‌ಗಳು ಬಾಟ್ಲಿಯಲ್ಲಿ ತುಂಬಿ ಬರುತ್ತಿವೆ! ಡಾಕ್ಟರರು ಅವನ್ನು ಸೇವಿಸಹೇಳುತ್ತಾರೆ! ಹೊರತು ವ್ಹಿಟಮಿನ್ ಇದ್ದ ಚೀಜು ಯಾವದೆಂದು ತಿಳಕೊಂಡು ಅವನ್ನು ಉಪಯೋಗಿಸಲು ಹೇಳುವದಿಲ್ಲ! ಕೃತ್ರಿಮ ಔಷಧೋಪಚಾರದಿಂದ ದೇಹದೊಳಗಿನ ಸ್ವಾಭಾವಿಕ ಶಕ್ತಿ ಕುಗ್ಗಿ ಮನುಷ್ಯನು ಅಲ್ಪಾಯುಷಿಯಾಗಿದ್ದಾನೆ. ವ್ಯಸನಗಳು ಬೇರೆ, ಕೃತ್ರಿಮ ಜೀವನ ಬೇರೆ, ಅಸ್ವಾಭಾವಿಕ ಔಷಧೋಪಚಾರಗಳು ಬೇರೆ. ಹಿಂದುಸ್ಥಾನದೊಳಗಿನ ಸಮಾಜಗಳ ವ್ಯವಸ್ಥೆ ಹೀಗಾಗಿ ಶೋಚನೀಯವಾಗಿ ಬಂದೊದಗಿದೆ. ಹುಟ್ಟುವ ಮುಂಚೆ ಸಾವು, ಹುಟ್ಟುವಾಗ ಸಾವು, ಹುಟ್ಟಿದ ಮೇಲೆ ಸಾವು ಹೀಗೆ ಜನನ ಕಾಲದಲ್ಲಿ ವಿಪತ್ತುಗಳನ್ನ! ಈ ವಿಪತ್ತುಗಳನ್ನು ದಾಟಿದ ಹುಡುಗನು ಈಗಿನ ಶಿಕ್ಷಣ-ಕ್ರಮದಿಂದ ಸೊರಗಿ ಪುರುಷಾರ್ಥ ಸಾಧಿಸದೆ ತೀರಿಕೊಳ್ಳುತ್ತಾನೆ! ನಿರಕ್ಷರನಾಗಿದ್ದರೂ ಚಿಂತೆಯಿಲ್ಲ, ಈ ಶಿಕ್ಷಣ ಬೇಡ, ದೃಢಕಾಯರಾಗಬೇಕು. ಮೊಹಮ್ಮದರಂತೆ ೧೨೫ ವರ್ಷ ನಾ ಬಾಳುವೆ ಎಂದು ಹೇಳುವವರು ಬೇಕು. ಈಗ ಕಲಿತ ಹುಡುಗರಲ್ಲಿ ಆ ಸಾಮರ್ಥ್ಯವಿಲ್ಲ, ಆ ವಿಶ್ವಾಸವಿಲ್ಲ, ಅಸ್ಥಿಪಂಜರವೊಂದಿರುತ್ತದೆ! ಪಂಚಪ್ರಾಣಹೀನರಾಗಿ ಇವರು ನೌಕರಿ ಬೇಡುತ್ತ ತಿರುಗಾಡುತ್ತಾರೆ. "ಶರೀರಮಾದ್ಯಂ ಖಲು ಧರ್ಮ-ಸಾಧನಮ್" ಎಂಬ ಉಕ್ತಿಯುಂಟು. ಶರೀರರಕ್ಷಣೆಗಾಗಿ ಎಲ್ಲರೂ ಪ್ರಯತ್ನಪಡಬೇಕು. ಶ್ರೀ ದತ್ತೋಪಂತರು ತಮ್ಮ ಕೀರ್ತನಗಳಲ್ಲಿ ಇಂಥ ವಿಷಯಗಳನ್ನೇ ಹೆಚ್ಚೆಚ್ಚು ಪ್ರತಿಪಾದಿಸುತ್ತಾರೆ. ಸ್ವಂತ ಅನುಭವವನ್ನೂ ಉದಾಹರಣೆಗಳನ್ನೂ ಕೊಟ್ಟು ಬಿಂಬಿಸುತ್ತಾರೆ. ಡಾ॥ ಪಟವರ್ಧನರ ವಿಚಾರಗಳು ಪ್ರಚಾರ ಹೊಂದಿ ಆಚಾರದಲ್ಲಿ ಪರಿಣಮಿಸಿದರೆ ಜನರಿಗೆ ಸುಖವಾಗುವಂತಿದೆ, ಸಮಾಜದ ಕಲ್ಯಾಣವಾಗುವಂತಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಮಳೆಯಾಗಲಿಲ್ಲ. ಒಕ್ಕಲಿಗರು ಭರದಿಂದ ಕೊಯಿಲು ಮಾಡುತ್ತಿದ್ದಾರೆ. ಆಗಾಗ ಮೋಡಗಳಾಗುತ್ತಿರುವದರಿಂದಲೂ ತೀವ್ರ ಸೆಕೆಯಾಗುತ್ತಿರುವದರಿಂದಲೂ ಬೇಗನೇ ಮಳೆಯಾಗುವ ಲಕ್ಷಣವಿದೆ.

ಗೋಕರ್ಣ-ಪರ್ತಗಾಳಿ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಗುರುಗಳು ನಿನ್ನೆ ಹಳಗೆಯಿಂದ ಕೋಡಕಣಿಗೆ ಬಂದಿದ್ದಾರೆ. ಅಲ್ಲಿಂದ ಮುಂದೆ ಕಾಗಾಲಿಗೆ ಚಿತ್ತೈಸಿ ಶುಕ್ರವಾರ ಇಲ್ಲಿ ಅನುಗ್ರಹ ಮಾಡುವವರಿದ್ದಾರಂತೆ.

ಗಿಬ್ಬ ಹೈಸ್ಕೂಲಿನ ವಿದ್ಯಾರ್ಥಿಗಳ ವಾರ್ಷಿಕ ಸಮ್ಮೇಲನವೂ ಇನಾಮು ಹಂಚುವ ಸಮಾರಂಭವೂ ಕಳೆದ ಶುಕ್ರವಾರ, ಶನಿವಾರ ಜರುಗಿದವು. ಸಮ್ಮೇಲನದ ಅಧ್ಯಕ್ಷರು ಕಾರವಾರದ ವಕೀಲ ರಾ॥ ಗಜಾನನ ನಾರಾಯಣ ಕಾಮತರು ಮತ್ತು ಇನಾಮು ಸಮಾರಂಭದ ಅಧ್ಯಕ್ಷರು ಜಿಲ್ಲಾಧಿಪತಿಗಳಾದ ರಾ॥ ವ್ಹಿ. ನಂಜಪ್ಪನವರಿದ್ದರು. ಇನಾಮುಗಳನ್ನು ಶ್ರೀ॥ ನಂಜಪ್ಪನವರ ಹಸ್ತದಿಂದ ಕೊಡಿಸಲಾಯಿತು. ಈ ಸಮಾರಂಭದ ಕಾಲಕ್ಕೆ ಶಾಲೆಯ ವರದಿಯನ್ನೋದುವಾಗ ಮುಖ್ಯಾಧ್ಯಾಪಕ ರಾ॥ ಗಾಡಸ್ಕರರು ಶಾಲೆಗೆ ಈಗ ಸ್ಥಳದ ಸಂಕೋಚವಾಗುತ್ತದೆಂದೂ ಸರಕಾರದವರು ಈ ಕೊರತೆಯನ್ನು ಹೋಗಲಾಡಿಸಬೇಕೆಂದೂ ಬೇಡಿಕೆ ಮಾಡಿದ್ದರು. ಈ ಬೇಡಿಕೆಯನ್ನು ಮನ್ನಿಸುವಂತೆ ಸರಕಾರದ ಮನವೊಲಿಸುತ್ತೇವೆಂದು ರಾ॥ ನಂಜಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಆಶ್ವಾಸನೆಯನ್ನಿತ್ತು, ಇಲ್ಲಿ ಕಾಲೇಜು ಮಾಡುವದಕ್ಕಾಗಿ ನಡೆದಿರುವ ಪ್ರಯತ್ನವನ್ನು ಸ್ವಾಗತಿಸಿದರು.

ಹಡಗ ಕಂಪನಿಯವರ ಹಡಗಗಳು ಈ ಕರಾವಳಿಯಲ್ಲಿ ಸಾರಿಗೆ ಮಾಡಲು ಇನ್ನೂ ಪ್ರಾರಂಭಿಸಿಲ್ಲ. ಮುರಗಾಂವದಲ್ಲಿ ಬಂದರ ಮಾಡಲು ಗೋವಾ ಸರಕಾರದ ಅಪ್ಪಣೆ ಸಿಗದೆ ತೊಂದರೆಯಾಗಿದೆಯೆಂದು ಹೇಳುತ್ತಾರೆ.

ಕೊಲೇಜ ಸಮಿತಿಯವರು ಊರೊಳಗಿನ ಸಾವಕಾರರ ವಂತಿಗೆ ಕೂಡಿಸಲಾರಂಭಿಸಿದ್ದಾರೆ. ರಾ॥ ನಾರಾಯಣ ಶೆಣೆಯವರ ವಂತಿಗೆಯನ್ನು ಹಿಡಿದು ಈ ತನಕ ರೂ. ೩೫೦೦೦ಕ್ಕೆ ಮಿಕ್ಕ ವಂತಿಗೆ ಕೂಡಿದೆಯಂತೆ. ಇಲ್ಲಿ ಕಾಲೇಜಾದಲ್ಲಿ ತಮ್ಮ ಮಕ್ಕಳಿಗೆ ಪರ ಜಿಲ್ಲೆಗಳೊಳಗಿನ ಕಾಲೇಜುಗಳಿಗೆ ಕಳಿಸುವ ಕಷ್ಟ ತಪ್ಪುವದು, ಮಕ್ಕಳ ಶಿಕ್ಷಣದ ಖರ್ಚು ಕಡಿಮೆಯಾಗುವದು ಎಂಬ ದೂರಗಾಮಿ ಗ್ರಹಿಕೆಯನ್ನಿಟ್ಟು ಸ್ಥಳಿಕ ಧನಿಕರು ಕೈಬಿಚ್ಚಿ ಕೊಲೇಜ-ನಿಧಿಗೆ ಸಹಾಯ ಮಾಡಬೇಕಾಗಿ ಅರಿಕೆಯಿದೆ.

ಮಾದನಗೇರಿ ಕನ್ನಡ ಶಾಲೆಯ ಶಿಕ್ಷಕರ ಸಂಬಂಧದಲ್ಲಿ ತಾ. ೧೫-೧೦-೪೫ರ "ವೃತ್ತ"ದಲ್ಲಿ ಬಂದ ಟೀಕೆಯು ಸಾಧಾರವಿರುತ್ತದೆಂತಲೂ, ತಾ. ೨೨ರ "ವೃತ್ತ"ದಲ್ಲಿ ಬಂದ ನಿರಾಕರಣೆ ನಿರಾಧಾರವಿರುತ್ತದೆಂತಲೂ ಆ ನಿರಾಕರಣೆಯ ಪತ್ರಕ್ಕೆ ಸಹಿ ಹಾಕಿದ ಪಂಚರೇ ಈಗ ತಿಳಿಸಿದ್ದಾರೆ. ೪ ಪಂಚರು ಜರೂರಿಯ ಕೆಲಸಕ್ಕೆ ಅವಸರದಿಂದ ಹೋಗುತ್ತಿದ್ದಾಗ ಶಿಕ್ಷಕರು ಅವರಿಗೆ ಕರೆದು ನಿರಾಕರಣೆಯ ಪತ್ರಕ್ಕೆ ಸಹಿ ತಕ್ಕೊಂಡರಂತೆ. ಪತ್ರವನ್ನು ಓದದೆ ಪಂಚರು ಸಹಿ ಮಾಡಿದ್ದರಂತೆ. ಈ ಶಿಕ್ಷಕರು ಹೊತ್ತಿಗೆ ಸರಿಯಾಗಿ ಶಾಲೆಗೆ ಬರದಿದ್ದುದು ಒಮ್ಮೆ ಶಾಲಾ-ತಪಾಸಣೆಗರೂ ಕಂಡು ಬಂದಿದೆಯಂತೆ. ಹಾಜರಿ-ಪಟ್ಟಿಯ ಮೇಲೆ ಶಿಕ್ಷಕರು ೨೬-೨೭ ವಿದ್ಯಾರ್ಥಿಗಳ ಹಾಜರಿ ಹಾಕಿರಬಹುದು. ಆದರೆ ಶಾಲೆಗೆ ಪ್ರತ್ಯಕ್ಷ ಬರುವ ಹುಡುಗರು ೧೫-೧೬ ಮಾತ್ರ! ಕೆಳಗಿನ ಇಯತ್ತೆಗಳ ಎಷ್ಟೋ ಹುಡುಗರು ಬೇರೆ ಶಾಲೆಗೂ ಹಿರೇಗುತ್ತಿ ಶಾಲೆಗೂ ಹೋಗುತ್ತಿದ್ದ ಬಗ್ಗೆ ಬೇಕಷ್ಟು ಪುರಾವೆಯಿದೆಯಂತೆ.

ಉಪ್ಪಿನಪಟ್ಟಣ ಕನ್ನಡ ಶಾಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ೫ ಶಿಕ್ಷಕರು ಬಂದು ಹೋದರಂತೆ! ಈಗ ಬಂದ ೬ನೇ ಶಿಕ್ಷಕರು ಶಾಲೆಗೆ ಸರಿಯಾಗಿ ಬರುವದಿಲ್ಲೆಂದು ಊರವರ ತಕ್ರಾರು. ಈ ಬಗ್ಗೆ ಶಾಲಾ ಪಂಚರೊಬ್ಬರು ಮೇಲಧಿಕಾರಿಗಳಿಗೆ ತಿಳಿಸಿದ್ದುಂಟಂತೆ. ಹಿಂದಿನ ವರ್ಗಾವರ್ಗಿಗಳಿಂದಲೂ ಈಗಿನ ಶಿಕ್ಷಕರ ಅನಾಸ್ಥೆಯಿಂದಲೂ ಹುಡುಗರ ಶಿಕ್ಷಣ ಕೆಟ್ಟು ಹೋಗಿದೆಯೆಂದು ಪಾಲಕರು ದೂರುತ್ತಾರೆ.

ಬರಗದ್ದೆ ಗ್ರಾಮದಲ್ಲಿ ಕಳೆದ ವರ್ಷ ೬ ಎಮ್ಮೆಗಳು, ೧ ಕೋಣ, ೫ ಆಕಳುಗಳು ಮತ್ತು ಎಷ್ಟೋ ಸಣ್ಣ ಕರು-

(೧ನೇ ಪುಟದ ಮೇಲೆ ಮುಂದರಿಸಿದೆ)

ಜಿಲ್ಲಾ ಸಮಾಚಾರ.

(ಕಳೆದ ವಾರದ ಶಿಲ್ಕು)

ಶಿರ್ಸಿ— ಕಾನಡಾ ಜಿಲ್ಲೆಯ ಅಡಿಕೆ ತೋಟಿಗರು ಅಡಿಕೆ ತೆರಿಗೆಯಿಂದ ಎಷ್ಟು ಕಂಗಾಲ ಆಗಿದ್ದಾರೆಂದು ಶ್ರೀ ಕೇಶವನ ಶೇಷಗಿರಿರಾಯರು ಒಂದು ಲೇಖದಲ್ಲಿ ಚಿತ್ತವೇಧಕವಾಗಿ ಬಣ್ಣಿಸಿದ್ದಾರೆ. ಆ ಲೇಖದ ಸಾರ ಹೀಗಿದೆ:—

ಅಡಿಕೆ ರಸ್ತಲ ೧ಕ್ಕೆ ೨ ಆಣೆಯಂತೆ ತೆರಿಗೆ ವಸೂಲ ಮಾಡುತ್ತಾರೆ. ಈ ತೆರಿಗೆ ಅಡಿಕೆ ತಿನ್ನುವವರ ಮೇಲೆ ಬೀಳುತ್ತಿದೆ, ತೋಟಿಗರ ಮೇಲಲ್ಲ, ಎಂದು ಸರಕಾರದವರ ಅಂಬೋಣ. ಆದರೆ ವಸ್ತುಸ್ಥಿತಿ ಹಾಗಿಲ್ಲ. ನಮ್ಮ ತೋಟಿಗರು ವಿದೇಶಗಳ ಕೃಷಿಕರಂತೆ ಸಂಘಟಿತರಾಗಿಲ್ಲ. ಅದರಿಂದ ತಮ್ಮ ಬೆಳೆಗೆ ಇಂತಿಷ್ಟೇ ಬೆಲೆ ನೀವು ಕೊಡಬೇಕು ಎಂದು ನಿರ್ಧಾರದಿಂದ ಹೇಳುವ ಶಕ್ತಿ ಅವರಿಗಿಲ್ಲ. ವ್ಯಾಪಾರಿಗಳು ಹೇಳಿದಂತೆ ಅವರು ಕೇಳಬೇಕು! ಸರಕಾರದವರೂ ಕೂಡ ಅಡಿಕೆ ತೆರಿಗೆಯು ತಿನ್ನುವವರಿಂದಲೇ ವಸೂಲ ಆಗುವಂತೆ ವ್ಯವಸ್ಥೆ ಮಾಡುವದಿಲ್ಲ.

ಅಡಿಕೆ ತೆರಿಗೆ ಹೇರುವ ಕಾಲಕ್ಕೆ ಅಡಿಕೆ ಮಣ ೧ರ ಧಾರಣೆ ರೂ. ೨೦ರಿಂದ ೨೫ರ ವರೆಗಿತ್ತು. ಈಗ ಅದು ರೂ. ೭॥ದಿಂದ ೧೦ರ ವರೆಗುಂಟು. ಹೀನ ತರಗತಿಯ ಅಡಿಕೆಯ ಧರವಂತೂ ರೂ. ೪-೫ ಇದೆ. ಇದರೊಳಗಿಂದ ರೂ. ೩॥ ತೆರಿಗೆ ಹೋಗಲಾಗಿ ತೋಟಿಗರಿಗೆ ಏನು ಉಳಿಯುತ್ತದೆ, ಅವರು ತೋಟದ ಸಾಗುವಳಿಯ ಖರ್ಚು ಹ್ಯಾಗೆ ಮುಟ್ಟಿಸಬೇಕು ಇಲ್ಲವೆ ಜೀವನ ಹೇಗೆ ನಡಿಸಬೇಕು ಎಂಬುವದನ್ನು ಸಹೃದಯ ವಾಚಕರೇ ಊಹಿಸಲಿ!

ತೆರಿಗೆ ವಸೂಲಿಯ ಕ್ರಮವಂತೂ ತೆರಿಗೆಗಿಂತ ಹೆಚ್ಚು ತ್ರಾಸದಾಯಕವಾದದ್ದು! ಅಡಿಕೆ ಬೆಳೆಸಲು ಮೊದಲು ಒಂದು ಪರವಾನೆ ಬೇಕು. ಅದನ್ನು ಮುಂದೆ ಪೇಟೆಗೆ ಒಯ್ಯಲಿಕ್ಕೂ ಇನ್ನೊಂದು ಚೀಟಿ ಬೇಕು. ಈ ಚೀಟಿಗಳನ್ನೂ ಪರವಾನೆಗಳನ್ನೂ ದೊರಕಿಸಲಿಕ್ಕೆ ತೋಟಿಗರು ತಮ್ಮ ಕೆಲಸ ಬಿಟ್ಟು ತೆರಿಗೆ ಅಧಿಕಾರಿಗಳ ಶೋಧ ಮಾಡುತ್ತ ತಿರುಗಾಡಬೇಕಾಗುತ್ತದೆ!

ಮೇಲಾಗಿ ವ್ಯಾಪಾರದ ಹಂಗಾಮಿನಲ್ಲಿ ಅಡಿಕೆಯನ್ನು ಪೇಟೆಗೆ ಒಯ್ಯಲು ತಕ್ಕ ಸೌಕರ್ಯಗಳು ಸಿಗುವದಿಲ್ಲ! ರೇಲ್ವೆಯಲ್ಲಿ ಡಬ್ಬಿಗಳು ಸಿಗದೆ ಕಳೆದ ಬೇಸಿಗೆಯಲ್ಲಿ ಸಾವಿರಗಟ್ಟಲೆ ಅಡಿಕೆ ಚೀಲಗಳು ಹುಬ್ಬಳ್ಳಿಯಲ್ಲಿ ಬಿದ್ದುಕೊಂಡಿದ್ದವು. ೨೮ ಲಕ್ಷ ರೂಪಾಯಿಗಳಷ್ಟು ಅಡಿಕೆ ತೆರಿಗೆ ವಸೂಲ ಮಾಡಿದ ಸರಕಾರದವರು ಕೂಡ ಆ ಅಡಿಕೆಗೆ ವಾಹನ-ಸೌಕರ್ಯ ದೊರಕಿಸಿ ಕೊಡಲು ಮನಸ್ಸು ಮಾಡಲಿಲ್ಲ!

ಈಗಂತೂ ಯುದ್ಧ ನಿಂತಿದೆ. ಬೇಗನೆ ಸಿಂಗಾಪುರ, ಮಲಾಯಾ ಕಡೆಯಿಂದ ಹೇರಳ ಅಡಿಕೆ ಹಿಂದೀ ಪೇಟೆಗೆ ಬರುವದು. ಅದು ಬಂದ ಮೇಲೆ ನಮ್ಮ ಜಿಲ್ಲೆಯ ತೋಟಿಗರ ಸ್ಥಿತಿ ಎಲ್ಲಿಗೆ ಮುಟ್ಟುವದೆಂದು ದೇವರಿಗೇ ಗೋಚರ!

ನಮ್ಮ ಜಿಲ್ಲೆಯಲ್ಲಿ ೨೦೦೦೦ ಎಕರೆ ತೋಟ ಭೂಮಿಯಿದೆ. ಇದರೊಳಗಿನ ಬೆಳೆಗೆ ಹಿಂದೆ ೬೦ ಲಕ್ಷ ರೂಗಳ ವರೆಗೆ ಬೆಲೆ ಸಿಗುತ್ತಿತ್ತು. ಈಗ ೩೦-೩೫ ಲಕ್ಷ ರೂ ಸಿಗುವದು ಕಷ್ಟವಾಗಿದೆ. ಅದರೊಳಗಿಂದ ಪುನಃ ೨೮ ಲಕ್ಷ ರೂಗಳಷ್ಟು ತೆರಿಗೆ ತೆರಬೇಕು! ಹೀಗಾದ ಮೇಲೆ ತೋಟಗಳ ಉತ್ಪತ್ತಿಯಿಂದ ಜೀವನ ಮಾಡಿಕೊಂಡಿರಬೇಕಾದ ೧೦೦೦೦ ಕುಟುಂಬಗಳ ಆರ್ಥಿಕ ಪರಿಸ್ಥಿತಿಯಾಗಲಿ, ತೋಟದ ಉದ್ದಿಮೆಯೇ ಮುಖ್ಯ ಉದ್ದಿಮೆಯಾಗಿರುವ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯಾಗಲಿ ಕೆಡದೆ ಉಳಿಯುವ ಬಗೆಯೆಂತು? ಇದೇ ಸ್ಥಿತಿ ಮುಂದೆವರೆದರೆ ತೋಟಗಳೆಲ್ಲ ಬೇಗನೇ ಹಾಳು ಸುರಿಯುವದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ಹಿಂದುಸ್ಥಾನ ಸರಕಾರಕ್ಕೆ ನಾವು ಈ ವಿಷಯವನ್ನು ವಿವರವಾಗಿ ತಿಳಿಸಿದ್ದೇವೆ. ಆದರೆ ಅವರು ಕಣ್ತೆರೆದು ನೋಡಲಿಕ್ಕೂ ಸಿದ್ಧರಿಲ್ಲ! ಕಿವಿಗೊಟ್ಟು ಕೇಳಲಿಕ್ಕೂ ತಯಾರಿಲ್ಲ! ಇದೀಗ ಯುದ್ಧೋತ್ತರ ಪುನರ್ರಚನೆ ಮತ್ತು ಗ್ರಾಮ ಸುಧಾರಣೆಗಳ ದೊಡ್ಡ ದೊಡ್ಡ ಮಾತು ಕೇಳಬರುತ್ತಿದೆ. ಇದ್ದ ತೋಟದ ವ್ಯವಸಾಯವನ್ನು ಹಾಳುಗೆಡಹುವವರ ಬಾಯಿಂದ ಈ ಮಾತುಗಳು ಹೊರಬೀಳುವದನ್ನು ಕೇಳುವಾಗ ಅಳಬೇಕೋ ನಗಬೇಕೋ ತಿಳಿಯದಾಗಿದೆ! ಅಡಿಕೆಯ ಕನಿಷ್ಠ ಧಾರಣೆಯನ್ನಾದರೂ ನಿಶ್ಚಯಿಸಿ — ಚಹಾ-ಕಾಫಿಗಳ ಧಾರಣೆ ನಿಶ್ಚಯಿಸಿದಂತೆ — ಅಡಿಕೆ ತೆರಿಗೆಯು ತಿನ್ನುವವರ ಮೇಲೆಯೇ ಬೀಳುವಂತೆ ಮಾಡಿರೆಂದು ಸೂಚಿಸಿದರೆ ಅದಕ್ಕೂ ಸರಕಾರದವರು ಒಪ್ಪುವದಿಲ್ಲ!

ನಮ್ಮ ಜಿಲ್ಲೆಯ ತೋಟದ ಭೂಮಿಗಳ ಒಟ್ಟು ಭೂಕಂದಾಯ ೨ ಲಕ್ಷ ೪೦ ರೂಪಾಯಿಗಳಷ್ಟುಂಟು. ಅವುಗಳಲ್ಲಿ ಬೆಳೆವ ಅಡಿಕೆಯ ಮೇಲೆ ೨೮ ಲಕ್ಷ ರೂಗಳಷ್ಟು ತೆರಿಗೆ ಹೇರಿದ್ದು ನ್ಯಾಯ್ಯವೋ ಹೇಗೆಂಬುದನ್ನು ಓದುಗರೇ ನಿರ್ಣಯಿಸಲಿ.

(೪ನೇ ಪುಟದ ಮೇಲೆ ಮುಂದುವರಿದಿದೆ)

ಆಜ್ಞೆ.

ಹಿಂದುಸ್ಥಾನ ರಕ್ಷಣೆಯ ಕಾನೂನು.

ನಂ. ೬೪-ಪ್ಲಿ. ಹಿಂದುಸ್ಥಾನ ಸಂರಕ್ಷಣ ನಿಯಮಾವಳಿಯ ೮೧ನೇ ನಿಯಮದ ೨ನೇ ಉಪ-ನಿಯಮ, ಹಾಗೂ ಆ ಸಂಬಂಧದಲ್ಲಿ ಗೃಹಖಾತೆ (ರಾಜಕೀಯ-ಯುದ್ಧ) ಯವರು ತಾ. ೧೫ ಸಪ್ಟಂಬರ ೧೯೪೪ಕ್ಕೆ ಹೊರಡಿಸಿದ ಎಸ್. ಡಿ. ೨/೧೩೬೦ನೇ ಮುಂಬಯಿ ಸರಕಾರ ಪ್ರಕಟಿಕೆಗಳಂತೆ ತನಗೆ ದೊರೆತಿರುವ ಅಧಿಕಾರಗಳನ್ನು ಉಪಯೋಗಿಸಿ ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ ಇವರು ಈ ಮೂಲಕ ಆಜ್ಞೆ ಮಾಡುವದೇನಂದರೆ.—

೧. ಸನ್ ೧೯೪೫ನೇ ಇಸವಿಯ ನವಂಬರ ತಾ. ೧ಕ್ಕೆ ಯಾ ತದನಂತರ ಈ ಕೆಳಗೆ ಜೋಡಿಸಿದ "ಅ" ಪರಿಶಿಷ್ಟದಲ್ಲಿ ಕಾಣಿಸಿರುವ ಕ್ಷೇತ್ರಗಳಲ್ಲಿ ವಾಸಿಸುವ ಯಾವದೇ ಮನುಷ್ಯನ ವಶದಲ್ಲಿ ಯಾ ನಿಯಂತ್ರಣದಲ್ಲಿ ಇರುವ, ಇದಕ್ಕೆ ಜೋಡಿಸಿದ "ಬ" ಪರಿಶಿಷ್ಟದಲ್ಲಿ ಹೇಳಿರುವ ಸಾಮಾನಿನ ಸಂಗ್ರಹವು ಅವನ ಸಾಮಾನ್ಯ ಆವಶ್ಯಕತೆಗಿಂತ ಹೆಚ್ಚಿಗೆ ಇರುವಲ್ಲಿ ಮತ್ತು ಆತನ ಸಂಗ್ರಹವು ಸಾಮಾನ್ಯ ಆವಶ್ಯಕ ಸಂಗ್ರಹಕ್ಕಿಂತ ಹೆಚ್ಚಿಗೆ ಇದ್ದಾಗ ಸದರಿ ಜಾತಿಯ ಇನ್ನಷ್ಟು ಸಾಮಾನು ಅವನ ವಶಕ್ಕೆ ಯಾ ನಿಯಂತ್ರಣದೊಳಗೆ ಬಂದಲ್ಲಿ, ಆತನು ತನ್ನ ವಾಸ್ತವ್ಯವಿದ್ದ ಕ್ಷೇತ್ರದ ಸಿಧಾ ಅಧಿಕಾರಿಗೆ ತನ್ನ ಕಡೆಗಿರುವ ಸದರಿ ಸಾಮಾನಿನ ಸಂಗ್ರಹದ ಮಾಹಿತಿಯನ್ನು ಪೂರೈಸತಕ್ಕದ್ದು.

ಆದರೆ (ಅ) ಯಾವ ಸಿಧಾ ಅವಧಿಯಲ್ಲಿ ಸದರಿ ಸಂಗ್ರಹವು ಸಾಮಾನ್ಯ ಆವಶ್ಯಕತೆಗಿಂತ ಹೆಚ್ಚಿಗೆ ಇರುವದೋ ಆ ಅವಧಿಗೆ ಹಾಗೂ ಅದರ ಮುಂದಿನ ಅವಧಿಗಳಿಗೆ ಸಂಬಂಧಪಟ್ಟ ಸಿಧಾ ಕೂಪನಗಳಲ್ಲಿ ಯಾ ಸಿಧಾ ಪರವಾನೆ-ಚೀಟಿಗಳಲ್ಲಿ ಕಾಣಿಸಿದಷ್ಟು ಸಂಗ್ರಹವಿದ್ದು ಆ ಬಾಬು (೧) ಕಾರವಾರ ಸಿಧಾ ರೆಗ್ಯುಲೇಶನ್, ೧೯೪೪, (೨) ಕುಮಟಾ ಸಿಧಾ ರೆಗ್ಯುಲೇಶನ್, ೧೯೪೪, (೩) ಹೊನ್ನಾವರ ಸಿಧಾ ರೆಗ್ಯುಲೇಶನ್, ೧೯೪೪, (೪) ಭಟಕಳ ಸಿಧಾ ರೆಗ್ಯುಲೇಶನ್, ೧೯೪೪, (೫) ಗೋಕರ್ಣ ಸಿಧಾ ರೆಗ್ಯುಲೇಶನ್, ೧೯೪೪ ಮತ್ತು (೬) ಶಿರ್ಸಿ ಸಿಧಾ ರೆಗ್ಯುಲೇಶನ್, ೧೯೪೪ ಇವುಗಳಲ್ಲಿ ಯಾವದು ಅನ್ವಯಿಸುತ್ತದೋ ಅದರ ೬ನೇ ಕಲಮಿನ ೨ನೇ ಉಪಕಲಮಿಗೆ ಜೋಡಿಸಿರುವ ೨ನೇ ಅಪವಾದ (ಪ್ರೊವ್ಹಿಜೋ) ಇಲ್ಲವೆ ೨೪ನೇ ಕಲಮಿಗೆ ಜೋಡಿಸಿರುವ ೧ನೇ ಅಪವಾದದಲ್ಲಿ ಹೇಳಿರುವಂತೆ ಆ ಕೂಪನುಗಳನ್ನು ರದ್ದುಪಡಿಸಿರುವದಾದರೆ ಸದರಿ ಸಂಗ್ರಹಕ್ಕೆ, ಮತ್ತು (ಬ) ಯಾವ ಸಂಗ್ರಹವನ್ನು ಸ್ಥಳಾಂತರಿಸಕೂಡದು, ವಿಲೆವಾರಿ ಮಾಡಕೂಡದು, ಉಣ್ಣಕೂಡದು ಇಲ್ಲವೆ ಉಪಯೋಗಿಸಕೂಡದು ಎಂದು ಹಿಂದುಸ್ಥಾನ ಸಂರಕ್ಷಣ ನಿಯಮಾವಳಿಯ ೮೧ನೇ ನಿಯಮದನ್ವಯ ಹೊರಟ ಹುಕುಮಿನಿಂದ ಪ್ರತಿಬಂಧ ಮಾಡಲ್ಪಟ್ಟಿದೆಯೋ ಅಂಥ ಸಂಗ್ರಹಕ್ಕೆ — ಈ (ಮೇಲಿನ) ಕಲಮಿನೊಳಗಿನ ಯಾವದೇ ವಿಧಾನವು ಅನ್ವಯಿಸಲಾರದು.

ವಿವರಣೆ.— ಸಾಮಾನ್ಯ ಆವಶ್ಯಕ ಸಂಗ್ರಹವೆಂದರೆ ಈ ಕೆಳಗೆ ಕೊಟ್ಟ "ಕ" ಪರಿಶಿಷ್ಟದಲ್ಲಿ ಹೇಳಿರುವ ಪ್ರಮಾಣದಂತೆ ಲೆಕ್ಕ ಹಾಕಿದಲ್ಲಿ ಯಾವನೊಬ್ಬನ ಮನೆಯ ಜನರ ಬಗ್ಗೆ (ಮನೆಯ ಜನರಲ್ಲೇ ಸೇರಿರುವಂಥ ಸೇವಕರನ್ನೊಳಗೊಂಡು) ಬೇಕಾಗುವ ಸಂಗ್ರಹವೆಂದು ತಿಳಿಯತಕ್ಕದ್ದು.

೨. (೧) ಉತ್ಪಾದಕ, ವ್ಯಾಪಾರಿ, ನಿರ್ಮಾಪಕ (Manufacturer), ಸಾಗಕ ಯಾ ಉಗ್ರಾಣದಾರರ ವಶದಲ್ಲಿರುವ, ಇಲ್ಲವೆ

(೨) ಸಾರ್ವಭೌಮ ಸರಕಾರದ ಕಡೆ ಯಾ ಅದರ ಪರವಾಗಿ ಯಾವನೊಬ್ಬನ ಕಡೆ ಇರುವ ಸದರಿ ಸಾಮಾನಿನ ಸಂಗ್ರಹಕ್ಕೆ ಮೇಲೆ ೧ನೇ ಕಲಮಿನಲ್ಲಿ ಹೇಳಿರುವ ವಿಧಾನಗಳು ಅನ್ವಯಿಸಲಾರವು.

೩. ಯಾವದೇ ಮನುಷ್ಯನು ಮೇಲಿನ ೧ನೇ ಕಲಮಿನಲ್ಲಿ ಕೊಟ್ಟ ಆಜ್ಞೆಯನ್ನು ಉಲ್ಲಂಘಿಸಿದಾಗ, ಆತನಿಗೆ ಕಾಯಿದೆಯಂತೆ ಬೇರೆ ಯಾವದೇ ಶಿಕ್ಷೆ ವಿಧಿಸುತ್ತಿದ್ದಾಗ್ಯೂ, ಆತನ ಅಪರಾಧದ ತನಿಖಿ ಮಾಡುವ ನ್ಯಾಯಾಸನವು ಅವನ ಗುನ್ಹೆಗೆ ಸಂಬಂಧಪಟ್ಟಿದ್ದೆಂದು ತನಗೆ ಮನವರಿಕೆಯಾಗುವ ಸಂಗ್ರಹವನ್ನೂ ಅದನ್ನಿಟ್ಟ ಪೆಟ್ಟಿಗೆ, ಚೀಲ ಮುಂತಾದ ಆವರಣಗಳನ್ನೂ ಸರಕಾರ-ಜಮಾ ಮಾಡುವಂತೆ ವಿಧಿಸಬಹುದು.

ಪರಿಶಿಷ್ಟ "ಅ"

(೧) ಕಾರವಾರ ಮ್ಯುನಿಸಿಪಲ್ ಹದ್ದು ಹಾಗೂ ಬೈತಖೋಲ, ಕೋಡಿಬಾಗ ಮತ್ತು ಬಾಡ ಗ್ರಾಮಗಳನ್ನೊಳಗೊಂಡ ಪ್ರದೇಶ,
(೨) ಕುಮಟಾ ಮ್ಯುನಿಸಿಪಲ್ ಹದ್ದು
(೩) ಹೊನ್ನಾವರ " "
(೪) ಭಟಕಳ " "
(೫) ಗೋಕರ್ಣ " "
(೬) ಶಿರ್ಸಿ " "

ಪರಿಶಿಷ್ಟ "ಬ"

(೧) ಅಕ್ಕಿ — ಅದರಿಂದ ತಯಾರಿಸಿದ ಪದಾರ್ಥಗಳನ್ನು ಕೂಡಿ
(೨) ಭತ್ತ
(೩) ಗೋಧಿ — ಗೋಧಿ ಹಿಟ್ಟು, ಸೂಜಿ, ರವೆ, ಮೈದಾ, ಆಟ್ಟಾ ಕೂಡಿ
(೪) ಜೋಳ — ಜೋಳದ ಹಿಟ್ಟು ಕೂಡಿ
(೫) ರಾಗಿ — ರಾಗಿಯ ಹಿಟ್ಟು ಕೂಡಿ

ಪರಿಶಿಷ್ಟ "ಕ"

(ಸಾಮಾನ್ಯ ಆವಶ್ಯಕ ಸಂಗ್ರಹದ ಲೆಕ್ಕ ಮಾಡುವ ಪ್ರಮಾಣ)

ಮನುಷ್ಯರ ವರ್ಗವಾರು (೧)	ಮಂಜೂರಾದ ಪರಿಮಾಣ (೨)
೬ ಯಾ ಹೆಚ್ಚಿಗೆ ವರ್ಷ ಪ್ರಾಯದ ಪ್ರತಿಯೊಬ್ಬನಿಗೆ —	ಮೇಲೆ "ಬ" ಪರಿಶಿಷ್ಟದಲ್ಲಿ ಕಾಣಿಸಿದ ಪ್ರತಿಯೊಂದು ಸಾಮಾನಿನ ೪ ಅಳತೆ (ಯುನಿಟ್)ಗಳು
೬ ವರ್ಷಕ್ಕಿಂತ ಕಡಿಮೆ ಪ್ರಾಯದ ಪ್ರತಿಯೊಂದು ಕೂಸಿಗೆ—	ಮೇಲೆ "ಬ" ಪರಿಶಿಷ್ಟದಲ್ಲಿ ಕಾಣಿಸಿದ ಪ್ರತಿಯೊಂದು ಸಾಮಾನಿನ ೨ ಅಳತೆಗಳು
೧೯೪೩ನೇ ಇಸವಿಯ ಮುಂಬಯಿ ಸಿಧಾ-ಹುಕುಮಿನಲ್ಲಿ ಹೇಳಿರುವಂತೆ ಕೊಟ್ಟ ಆಹಾರ-ಧಾನ್ಯಗಳ ಸಿಧಾ ಚೀಟಿಯುಳ್ಳವರಿಗೆ—	೬ ಯಾ ಹೆಚ್ಚಿಗೆ ವರ್ಷ ಪ್ರಾಯದ ಪ್ರತಿಯೊಬ್ಬನ ಸಂಬಂಧದಲ್ಲಿ ಮೇಲೆ "ಬ" ಪರಿಶಿಷ್ಟದಲ್ಲಿ ಕೊಟ್ಟ ಪ್ರತಿಯೊಂದು ಸಾಮಾನಿನ ನಾಲ್ಕು (೪) ಅಳತೆಗಳು ಮತ್ತು ೬ ವರ್ಷಕ್ಕಿಂತ ಕಡಿಮೆ ಪ್ರಾಯದ ಪ್ರತಿಯೊಂದು ಕೂಸಿನ ಸಂಬಂಧದಲ್ಲಿ ಮೇಲೆ "ಬ" ಪರಿಶಿಷ್ಟದಲ್ಲಿ ಕೊಟ್ಟ ಪ್ರತಿಯೊಂದು ಸಾಮಾನಿನ ೨ ಅಳತೆಗಳು

ವಿ. ಸೂ.:— ಒಂದು ಅಳತೆ ಅಂದರೆ ತಲೆ ಕೊಯ್ದು ಅಳೆದ ೪॥ ಸೇರು ಇಲ್ಲವೆ ತಲೆ ತುಂಬಿ ಅಳೆದ ೪ ಸೇರು

ಟಿಪ್ಪಣಿ.— ಹಿಂದುಸ್ಥಾನ ಸಂರಕ್ಷಣ ನಿಯಮಾವಳಿಯ ೧೧೯ನೇ ನಿಯಮದ (೧)ನೇ ಉಪನಿಯಮಕ್ಕನುಸಾರವಾಗಿ, ಈ ಆಜ್ಞೆಯನ್ನು ಮುಂಬಯಿ ಸರಕಾರದ ಗಾಝೀಟದಲ್ಲಿ ಮತ್ತು ಇದರ ಕನ್ನಡ ಅನುವಾದವನ್ನು "ಅ" ಪರಿಶಿಷ್ಟದಲ್ಲಿ ಹೇಳಿರುವ ಪ್ರದೇಶಗಳಲ್ಲಿ ಪ್ರಸಾರವುಳ್ಳ ಸ್ಥಾನಿಕ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಹಾಗೂ ಈ ಆಜ್ಞೆಯ ಕನ್ನಡ ಅನುವಾದದ ಪ್ರತಿಗಳನ್ನು ಸದರಿ ಪ್ರದೇಶಗಳಲ್ಲಿರುವ ಸ್ಥಾನಿಕ ಸರಕಾರಿ ಕಚೇರಿಗಳಲ್ಲಿರುವ ನೋಟೀಸ-ಬೋರ್ಡುಗಳಿಗೆ ಹಚ್ಚತಕ್ಕದ್ದು. ಮತ್ತು ಆ ರೀತಿ ಆಜ್ಞೆಯ ಪ್ರತಿಗಳು ನೋಟೀಸ-ಬೋರ್ಡುಗಳಿಗೆ ಹಚ್ಚಿಟ್ಟ ಸಂಗತಿಯನ್ನು ಡಂಗುರ ಸಾರಿ ಜಾಹೀರ ಮಾಡತಕ್ಕದ್ದು.

ಕಾರವಾರ,
ತಾ. ೧೧-೧೦-೧೯೪೫

V. NANJAPPA,
ಜಿಲ್ಲಾ ಮೆಜಿಸ್ಟ್ರೇಟ, ಕಾನಡಾ.

ಉತ್ತರ ಕನ್ನಡ ಜಿಲ್ಲಾ ತೋಟಿಗಾರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೊಂದು ತಾ ೨೦-೧೦-೪೫ಕ್ಕೆ ಇಲ್ಲಿ ಕೂಡಿತು, ರಾ॥ ರಾಮಕೃಷ್ಣ ಹೆಗಡೆ ಕಡವೆಯವರು ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಈ ಗೊತ್ತುವಳಿಗಳಾಗಿವೆ – (೧) ಮುಂಬಯಿ ಕರ್ನಾಟಕದ ಪಕ್ಷದಿಂದ ಕೇಂದ್ರ ಎಸೆಂಬ್ಲಿಗೆ ಆರಿಸಿ ಹೋದ ಕೊಂಗ್ರೆಸ ಪ್ರತಿನಿಧಿಗಳಾಗಲಿ ಇತರ ಕೊಂಗ್ರೆಸ ಸದಸ್ಯರಾಗಲಿ ಕಳೆಭಾರವಾದ ಅಡಿಕೆ ತೆರಿಗೆಯನ್ನು ರದ್ದುಗೊಳಿಸಲು ವಿಶೇಷ ಲಕ್ಷ್ಯ ತೋರಿಸಿಲ್ಲ ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಅಡಿಕೆ ತೆರಿಗೆ ಹೋಗಲಾಡಿಸಲು ಯತ್ನಿಸುವಂತಹವರಿಗೇ ತೋಟಿಗಾರರು ತಮ್ಮ ಮತಗಳನ್ನು ಕೊಡತಕ್ಕದ್ದು (೨) ರೈತರ ಋಣವಿಮೋಚನೆಯ ಕಾಯದೆಯನ್ನೂ ಲಾವಣಿ ಕಟ್ಟಳೆಯನ್ನೂ ಬೇಗನೇ ಇಡೀ ಜಿಲ್ಹೆಯಲ್ಲಿ ಜಾರಿಯಲ್ಲಿ ತರಬೇಕೆಂದು ಸರಕಾರಕ್ಕೆ ವಿನಂತಿ (೩) ಜಿಲ್ಲಾ ಸಂಘದೊಡನೆ ತಾಲೂಕ ಸಂಘಗಳು ಪೂರ್ಣ ಸಹಕರಿಸದಿದ್ದ ಬಗ್ಗೆ ವಿಷಾದ-ಪ್ರದರ್ಶನ (೪) ಆಣೆ-ಪಟ್ಟಿಯನ್ನು ಇಮ್ಮಡಿ ಮಾಡುವ ನಿರ್ಣಯ ಮಾಡಿದ ಬಗ್ಗೆ ಜಿಲ್ಲಾ ಲೋಕಲ್ ಬೋರ್ಡಿನ ಹಾಗೂ ಆ ನಿರ್ಣಯಕ್ಕೆ ಪ್ರತ್ಯಕ್ಷವಾಗಿ ಬೆಂಬಲ ಕೊಟ್ಟ ಮತ್ತು ಬೋರ್ಡಿನ ಸಭೆಗೆ ಹೋಗದೆ ಅಪ್ರತ್ಯಕ್ಷ ಬೆಂಬಲ ಕೊಟ್ಟ ಸದಸ್ಯರ ವರ್ತನೆಯ ನಿಷೇಧ (೫) ಅಡಿಕೆ ಸಂಕಟದ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಚಳುವಳಿ ನಡೆಸಬೇಕೆಂಬ ನಿರ್ಧಾರ. (೬) ಈಗ ಅಡಿಕೆಯ ದರ ಬಿದ್ದುಹೋಗಿರುವದರಿಂದಲೂ, ಸಿಂಗಾಪುರ ಅಡಿಕೆ ಬಂದ ಮೇಲೆ ಇನ್ನೂ ಬೀಳುವದೆಂಬ ಭಯವಿರುವದರಿಂದಲೂ, ಕಳೆದ ವರ್ಷದ ಹೇರಳ ಅತಿ ಮಳೆಯಿಂದ ನಷ್ಟ ಬಿದ್ದಿರುವದರಿಂದಲೂ ಈ ವರ್ಷ ಅಡಿಕೆ ಸುಂಕ ವಸೂಲ ಮಾಡಬಾರದಾಗಿ ಭಾರತ ಸರಕಾರಕ್ಕೆ ಬಿನ್ನಹ (೭) ಕೈ॥ ವಾ॥ ಸಿ ಜಿ ಕರ್ಕಿಯವರ ನಿಧನದ ಬಗ್ಗೆ ದುಃಖ-ಪ್ರದರ್ಶನ (೮) ಇದೇ ನವಂಬರ ತಿಂಗಳ ಕೊನೆಯೊಳಗಾಗಿ ಅಡಿಕೆ ಸಂಕಟದ ಬಗ್ಗೆ ಸರಕಾರದ ಮೇಲೆ ಛಾಪ ಹಾಕತಕ್ಕದ್ದಿರುವದರಿಂದ ಬೇರೆ ಬೇರೆ ತಾಲೂಕುಗಳಲ್ಲಿ ವರ್ಗಣಿ ಹಣ ಕೂಡಿಸಲು ಕಾರ್ಯದರ್ಶಿಗೆ ಸೂಚನೆ (೯) ಈ ವರ್ಷ ಬೆಳೆದ ಅಡಿಕೆಯನ್ನು ಪೇಟೆಗೆ ಕಳಿಸದೆ ಮನೆಯಲ್ಲೇ ದಾಸ್ತಾನ ಮಾಡಿಟ್ಟುಕೊಂಡು ಕೆಲವು ತಿಂಗಳ ನಿರೀಕ್ಷೆ ಮಾಡಬೇಕೆಂದು ಎಲ್ಲ ತೋಟಿಗರಿಗೆ ವಿನಂತಿ, ಮತ್ತು ಹೀಗೆ ಇಟ್ಟುಕೊಳ್ಳಲು ಅನುಕೂಲವಿಲ್ಲದವರಿಗೆ ಸಂಘವು ಅನುಕೂಲತೆ ಮಾಡಿಕೊಡಬೇಕೆಂಬ ನಿರ್ಧಾರ

ಕಳೆದ ತಾ ೧೫ಕ್ಕೆ ಇಲ್ಲಿಯ ವಿದ್ಯಾರ್ಥಿಗಳೂ ರಾಷ್ಟ್ರಸೇವಾದಳದವರೂ ಕೂಡಿ ಇಂಡೋನೇಶಿಯಾ ದಿನವನ್ನಾಚರಿಸಿದರು ಧ್ವಜವಂದನೆಯಾದ ಮೇಲೆ ರಾ॥ ನಾಡಿಗ ವಕೀಲ ಮತ್ತು ರಾ॥ ಶ್ರೀ ನಾಯಕ ಇವರ ಭಾಷಣಗಳಾದವು ರಾ॥ ನಾಡಿಗರು: ವಿದ್ಯಾರ್ಥಿಗಳಲ್ಲಿ [illegible] ಸಂಘಟನೆಯನ್ನು ಹರಸಿ, ೧೯೪೨ರ ಆಂದೋಲನದಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಹಸಕ್ಕಾಗಿ ಅವರನ್ನು ಅಭಿನಂದಿಸಿದರು, ಮತ್ತು ಮುಂದಿನ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಲು ವಿದ್ಯಾರ್ಥಿಗಳು ಸಿದ್ಧರಾಗಿರಬೇಕೆಂದು ಬೋಧಿಸಿದರು. ಹಾಗೆಯೇ ಮುಂದೆ ಸಾಗಿ, ಮೊನ್ನೆ ಮುಗಿದುಹೋದ ಯುದ್ಧವು ಸ್ವಾತಂತ್ರ್ಯದ ಯುದ್ಧವಾಗಿದ್ದಿಲ್ಲೆಂದೂ, ಸ್ವಾತಂತ್ರ್ಯದ ಯುದ್ಧವಾಗಿರುತ್ತಿದ್ದರೆ ಈಗ ಇಂಡೋನೇಶಿಯಾದಲ್ಲಿ ನಡೆದಿರುವ ಸ್ವಾತಂತ್ರ್ಯದ ಆಂದೋಲನವನ್ನು ದಬ್ಬಿಹಾಕಲು ಮಿತ್ರ-ರಾಷ್ಟ್ರಗಳು ಮುಂದಾಗುತ್ತಿದ್ದಿಲ್ಲವೆಂದೂ ವಾದಿಸಿದರು; ಮತ್ತು ಇಂಡೋನೇಶಿಯನರ ಆಂದೋಲನಕ್ಕೆ ಭಾರತದ ಸಂಪೂರ್ಣ ಸಹಾನುಭೂತಿಯುಂಟೆಂದೂ, ಯಾವದೇ ರಾಷ್ಟ್ರದ ವಿರುದ್ಧ ಸಾಮ್ರಾಜ್ಯ-ಲಾಲಸರು ಕೈಯೆತ್ತಿದರೆ ಭಾರತವು ಪ್ರತಿಭಟಿಸದೆ ಇರಲಿಕ್ಕಿಲ್ಲೆಂದೂ ನುಡಿದರು

ಕೆಲವು ದಿನಗಳ ಹಿಂದೆ ಇಲ್ಲಿಯ ಸೇಥಾ ಅಧಿಕಾರಿಗಳು ೨ ಅಂಗಡಿಗಳಲ್ಲಿ ಧಾಳಿ ನಡೆಸಿ, ಒಂದು ಮೂಲೆಯಲ್ಲಿ ಬಿದ್ದುಕೊಂಡಿದ್ದ ಹಾಳು ಗೋಧಿ-ರವೆಯನ್ನು ಜಪ್ತ ಮಾಡಿದರು! ದನಗಳು ಕೂಡ ತಿನ್ನದ ಆ ರವೆಯನ್ನು ಜಪ್ತ ಮಾಡಿದ ಈ ಅಧಿಕಾರಿಗಳ ಬುದ್ಧಿ-ಪ್ರತಾಪವನ್ನು ಹೊಗಳುವಷ್ಟು ಶಬ್ದ ಕಡಿಮೆಯೆಂದು ಜನರು ಅನ್ನತೊಡಗಲಾಗಿ, ಮರುದಿನ "ಜಿಲ್ಲಾಧಿಪರ ಅಪ್ಪಣೆಯಾದ ವಿನಹ ಇದನ್ನು ನಾಶಮಾಡಬಾರದು" ಎಂದು ತಾಕೀತ ಮಾಡಿ ಆ ರವೆಯನ್ನು ಅಂಗಡಿಕಾರರಿಗೆ ಬಿಟ್ಟುಕೊಟ್ಟರು ಜಿಲ್ಲಾಧಿಪರ ಅಪ್ಪಣೆಯಾದಲ್ಲಿ ಆ ರವೆಯನ್ನು ಈ ಅಧಿಕಾರಿಗಳು ಕೊಂಡುಕೊಳ್ಳಲು ಒಪ್ಪುವರೇ?

ಸಿದ್ದಾಪುರ— (ತಾ ೧೨-೧೦-೪೫) ಕೆರಜಿಗ್ರಾಮದ ಕನ್ನಡ ಶಾಲೆಯಲ್ಲಿ ನಿನ್ನೆ ದಸರೆಯ ದಿನ ಶಾರದಾ-ಪೂಜೆಯ ಉತ್ಸವವಾಯಿತು ಊರ ಜನರೂ ಉತ್ಸವದಲ್ಲಿ ಸೇರಿದ್ದರು ವಿದ್ಯಾರ್ಥಿಗಳು "ಅರುಣೋದಯ"ವೆಂಬ ನಾಟಕವನ್ನಾಡಿ ತೋರಿಸಿದರು

ಸರಕಾರೀ ಶಾಲೆಯಲ್ಲಿಯೂ ನಿನ್ನೆ ಶಾರದೋತ್ಸವವಾಯಿತು ರಾ॥ ಮಾಳಗಿಮನೆ ಮಂಜಭಟ್ಟರು ಮತ್ತು ಶ್ಯಾರಗಲ್ ಭಾಗವತರು ಈ ಉತ್ಸವಕ್ಕಾಗಿ ಶ್ರೀ ಶಾರದೆ ಮತ್ತು ಕಾಳಿಯಾ-ಮರ್ದನದ ಮೂರ್ತಿಗಳನ್ನು ತಯಾರಿಸಿ ಕೊಟ್ಟಿದ್ದರು. ಉತ್ಸವ ತೀರಿದ ಬಳಿಕ ರಾ॥ ಹೋಬಳಿ ಗಣಪ ಭಟ್ಟರ ಅಧ್ಯಕ್ಷತೆಯಲ್ಲಿ ಅಂಬಿಕಾ ವಾಚನಾಲಯದ ವಾರ್ಷಿಕ ಸಭೆಯಾಗಿ ಲೆಕ್ಕ ವರದಿಗಳ ವಾಚನ, ಹೊಸ ಕಾರ್ಯಕರ್ತರ ಆಯ್ಕೆ ವಗೈರೆ ಕೆಲಸ ನಡೆಯಿತು ಸಂಜೆಯಲ್ಲಿ ವಿದ್ಯಾರ್ಥಿಗಳು "ಬಿ.ಎ ಚಂದ್ರಕಾಂತ" ಎಂಬ ನಾಟಕವನ್ನಾಡಿ ತೋರಿಸಿ ಸಭಿಕರನ್ನು ಸಂತೋಷಗೊಳಿಸಿದರು

ಹೊಸತೋಟ ಶಾಲೆಯಲ್ಲಿಯೂ ನಿನ್ನೆ ಶಾರದಾ ಪೂಜೆಯಾಯಿತು ವಿದ್ಯಾರ್ಥಿಗಳ ಹಾಡು ವಗೈರೆ ಕಾರ್ಯಕ್ರಮ ಮುಗಿದ ಮೇಲೆ ಶಿಕ್ಷಕ ರಾ॥ ಸಣ್ಣ ಕೃಷ್ಣ ಭಟ್ಟರು "ಶಿಕ್ಷಣದಲ್ಲಿ ಹೊಸ ದೃಷ್ಟಿ" ಎಂಬ ಉಪನ್ಯಾಸವನ್ನಿತ್ತರು

ಇಲ್ಲಿಯ ಕನ್ನಡ ಶಾಲೆಯಲ್ಲಿಯೂ ಕೆಳಗಿ, ಕವಲಕೊಪ್ಪ, ಹಲಗೇರಿ ಗ್ರಾಮಗಳಲ್ಲಿಯೂ ಕಳೆದ ತಾ ೨ಕ್ಕೆ ಗಾಂಧಿ ಜಯಂತೀ ಉತ್ಸವವಾಯಿತು ಮಹಾತ್ಮರ ಭಾವ ಚಿತ್ರದ ಮೆರವಣಿಗೆ, ಅವರ ಗುಣಾನುವಾದ, ಅವರ ಆಯುರಾರೋಗ್ಯಗಳ ಬಗ್ಗೆ ಪ್ರಾರ್ಥನೆ ಮುಂತಾದ ಕಾರ್ಯಕ್ರಮಗಳು ನಡೆದವು. ಹಲಗೇರಿಯಲ್ಲಿ ಅಂದು 'ಆನಂದ ವಾಚನಾಲಯ"ವೆಂಬ ವಾಚನಾಲಯವು ತೆರೆಯಲ್ಪಟ್ಟಿತು ಆ ವಾಚನಾಲಯಕ್ಕೆ ೩೦೦ ರಷ್ಟು ಪುಸ್ತಕಗಳು ಸಿಕ್ಕಿವೆ ಇನ್ನೂ ಕೆಲವು ಪುಸ್ತಕ ತರಿಸಿಕೊಡುತ್ತೇನೆಂದು ಉದ್ಘಾಟಕ ರಾ॥ ಕವಡಿಯವರೂ ಊರ ಮಹಾಜನರೂ ಆಶ್ವಾಸನೆ ಕೊಟ್ಟಿದ್ದಾರೆ

ಓದು ಬರಹ ಬಲ್ಲ ಸ್ತ್ರೀಯರು ಮತಾಧಿಕಾರಕ್ಕಾಗಿ ಮಾಡತಕ್ಕ ಅರ್ಜಿಯ ಫಾರ್ಮುಗಳು ತಾ ೨೧ನೇ ಮಧ್ಯಾಹ್ನ ಜನರಿಗೆ ಸಿಕ್ಕಿದವು! ಅವನ್ನು ಅಂದೇ ಮರುದಿನ ಸಂಜೆಯೊಳಗಾಗಿ ಕಚೇರಿಗೆ ಮುಟ್ಟಿಸಬೇಕಾಗಿ ಡಂಗುರವನ್ನೂ ಸಾರಲ್ಪಟ್ಟಿತು! ೨೨ ತಾರೀಖಿನಲ್ಲಿ ಈ ಕೆಲಸವಾಗುವದೆಂದು ಅಧಿಕಾರಿಗಳಿಗೆ ತಿಳಿಯದಿದ್ದದ್ದು ಸೋಜಿಗ ಈ ಕಷ್ಟಕಾಲದಂತೋ ಏನೋ ಇಲ್ಲಿಯ ಶಾಲೆಗಳ ಮುಖ್ಯಾಧ್ಯಾಪಕ ಮುಖ್ಯಾಧ್ಯಾಪಿಕೆಯರು ಇನ್ನೊಂದು ಕಷ್ಟವುಂಟು ಮಾಡಿದರು! ಸ್ತ್ರೀಯರ ಅರ್ಜಿಗಳಿಗೆ ಈ ಮಹಾನುಭಾವರ ಪ್ರಶಸ್ತಿ-ಪತ್ರ ಬೇಕು ಶಾಲೆಯ ಹೊತ್ತಿನ ಹೊರಗೆ ತಾವು ಪ್ರಶಸ್ತಿ-ಪತ್ರ ಬರೆದು ಕೊಡಲಾರೆವೆಂದು ಇವರೆಲ್ಲ ಖಂಡತುಂಡ ಹೇಳಿಬಿಟ್ಟರು! ಮನೆಯಲ್ಲಿ ಹೋಗ ಅವರಿಗೆ ಬಿಡುವು ಸಿಗುವದಿಲ್ಲವಂತೆ! ಅದೂ ಸಹಜ! ಇವರೂ ಊರವರಾಗಿದ್ದಾರೆ. ಆದರಿಂದ ಮನೆಯ ಸಂಸಾರದ ಕೆಲಸ ಬಹಳವಾಗಿದೆ ಅವರಿಗೆ ಹಳಿಯಾಳ ಇಲ್ಲವೆ ಯಲ್ಲಾಪುರದತ್ತ ಕಡೆ ವರ್ಗ ಮಾಡುವದುಚಿತ

ಹೊನ್ನಾವರ— (ತಾ ೧೬-೧೦-೪೫) ಈ ತಾಲೂಕಿನ ಮತದಾನ ರಾಜ್ಯಗಳನ್ನು ಯಾವ ದೃಷ್ಟಿಯಿಂದ ನಿಶ್ಚಯಿಸಿರುವರೋ ತಿಳಿಯದು ಹೆಚ್ಚಿನ ಮತದಾರರಿಗೆ ವಸ್ತಿ ಸ್ಥಳಗಳನ್ನು ಈ ಬಗ್ಗೆ ಆರಿಸಿ, ಸುತ್ತುಮುತ್ತಲಿನ ಹಳ್ಳಿಗಳನ್ನು ಅವಕ್ಕೆ ಜೋಡಿಸುವದು ನ್ಯಾಯಸಂಗತವಾಗುವದು ಆರಿಸಿದ ಸ್ಥಳವು ಅನುಕೂಲವೂ ಆಗಿರಬೇಕು ನಮ್ಮ ಜಿಲ್ಲೆಯ ಕೆಲವು ರಾಜ್ಯಗಳಲ್ಲಿ ಈ ಗುಣಗಳೂ ಅನುಕೂಲತೆಗಳೂ ಕಂಡುಬರುವದಿಲ್ಲ ಜಲವಳ್ಳಿ ಕರ್ಕಿಯ ಶ್ರೀ ಶಿವಮ್ಮ ದೇವಸ್ಥಾನದಲ್ಲಿ ಸ್ಥಳದ ಅನುಕೂಲತೆ ಕಡಿಮೆ ಮತದಾರರು ಬಂದರೆ ಅಲ್ಲಿ ನಿಲ್ಲಲಿಕ್ಕೆ ಸ್ಥಳವಿಲ್ಲ, ಸೇರಿಡಿಕೆಯಾದರೆ ನಿಲ್ಲಲು ಅವಕಾಶವಿಲ್ಲ. ಅಲ್ಲೇ ಸಮೀಪದಲ್ಲಿರುವ ಜಂಗಲ ನಾಕೆ ಪ್ರಶಸ್ತವುಂಟು ಹಾ! ಸರಕೋಡ, ಕೆಳಗಿನೂರ, ಅಪ್ಸರಕೊಂಡ, ಗುಣವಂತೆ ವಗೈರೆ ಗ್ರಾಮಗಳ ಬಗ್ಗೆ ಗುಣವಂತೆಯಲ್ಲಿ ರಾಜ್ಯವನ್ನಿಟ್ಟಿದ್ದಾರೆ ಗುಣವಂತೆಯಲ್ಲಿ ಮತದಾರರು ಬಹಳ ಕಡಿಮೆ ಈ ರಾಜ್ಯವನ್ನು ಕೆಳಗಿನೂರದಲ್ಲಿ ಇಟ್ಟರೆ ಎಲ್ಲರಿಗೂ ಅನುಕೂಲ ಕೆಪವಳ್ಳಿ ಗ್ರಾಮ ಜಲವಳ್ಳಿ ಕರ್ಕಿಗೆ ಹೊಂದಿದೆ ಆದರೆ ಆ ಗ್ರಾಮವನ್ನು ಜಲವಳ್ಳಿ-ಕರ್ಕಿಗೆ ಜೋಡಿಸದೆ ೭ ಮೈಲು ಆಚೆಗಿರುವ ಹಡಿನಬಾಳಕ್ಕೆ ಜೋಡಿಸಿದ್ದಾರೆ! ಹೊಸ ಮತದಾರ ಯಾದಿಗಳನ್ನು ತಯಾರಿಸುವಾಗ ಈ ದೋಷಗಳನ್ನು ತಿದ್ದಬೇಕಾಗಿ ಹೊನ್ನಾವರದ ವಕೀಲರೊಬ್ಬರು ಜಿಲ್ಲಾಧಿಕಾರರ ಕಡೆ ಬಿನ್ನವಿಸುತ್ತಾರೆ

ಜಾಹೀರನಾಮೆ.

ಮಿಲ್ಲಿನಲ್ಲಿ ತಯಾರಿಸಿದ ಅರಿವೆಯ ಸೈಕಿ ಕೆಲವು ಸ್ಟಾಕು ತದಡಿ ಗೋಡೌನದಲ್ಲಿ ಇರುತ್ತದೆ. ಮತ್ತು ಅದನ್ನು ಅರಿವೆಯ ಲ್ಯಾಯಸೆನ್ಸದಾರರಿಗೆ ಕೊಡುವದು ನಿಶ್ಚಯಿಸಿರುತ್ತದೆ ಕಾರಣ ಸದ್ರಿ ಅರಿವೆಯ ಸೈಕಿ ಮಾಲು ಯಾರಿಗೆ ಬೇಕೋ ಅವರು ಈ ಕೆಳಗಿನ ತಪಶೀಲು ಸಹಿತ ಮೆ॥ ಜಿಲ್ಹಾ ಮೆಜಿಸ್ಟ್ರೇಟ, ಕಾನಡಾ ಇವರ ಕಡೆಗೆ ಅರ್ಜಿಗಳನ್ನು ತಾ. ೫-೧೧-೧೯೪೫ನೇದರೊಳಗೆ ತಲ್ಪುವಂತೆ ಕಳುಹಿಸಬೇಕು ಎಲ್ಲ ನಮೂನೆಯ ಮಾಲು ಸ್ಟಾಕ ಪ್ರಕಾರ ಸಮ-ಪ್ರಮಾಣದಲ್ಲಿ ಹಂಚಲಾಗುವದು.

೧. ಅರ್ಜೀದಾರರ ಹೆಸರು ಮತ್ತು ವಿಳಾಸ,
೨ ಲ್ಯಾಯಸೆನ್ಸ ನಂಬರು;
೩ ಬೇಕಾದ ಮಾಲಿನ ಕಿಮ್ಮತ್ತು.

ರೂ. ೩,೦೦೦/- ಯಾ ಅದಕ್ಕಿಂತ ಹೆಚ್ಚಿಗೆ ಕಿಮ್ಮತ್ತಿನ ಅರಿವೆ ಬೇಕಾದವರು ಮಾತ್ರ ಅರ್ಜ ಮಾಡತಕ್ಕದ್ದು

ಕಾರವಾರ, 20-10 45 } **V. NANJAPPA,**
District Magistrate, Kanara

ಹೊನ್ನಾವರ ಉದ್ಯೋಗ ಶಾಲೆಯಲ್ಲಿ ಹರಿಜನರಿಗೆ ಈ ಹಿಂದೆ ಪ್ರವೇಶ ದೊರೆತಿಲ್ಲವೆಂಬಂತೆ ಹೊನ್ನಾವರ ಗಾಂಧಿ ಜಯಂತಿಯ ಸಂಬಂಧದಲ್ಲಿ "ವೃತ್ತ"ದಲ್ಲಿ ಪ್ರಕಟವಾದ ವೃತ್ತಾಂತದಿಂದ ಯಾರೊಬ್ಬರ ಭಾವನೆಯಾಗುವಂತಿದೆ. ಹಾಗೆ ಭಾವನೆ ಮಾಡಿಕೊಳ್ಳುವದು ತಪ್ಪು. ಹಿಂದೆ ಈ ಶಾಲೆಯಲ್ಲಿ ಚರ್ಮದ ಉದ್ಯೋಗ ಪ್ರಾರಂಭಿಸಲ್ಪಟ್ಟಿತ್ತು. ಚಮಗಾರರೇ ಆ ಉದ್ಯೋಗ ಮಾಡುತ್ತಿದ್ದರು. ಆದರೆ ಅದು ಯಶಸ್ವಿಯಾಗಲಿಲ್ಲ ಹರಿಜನರಿಗೆ ಈಗಲೂ ಪ್ರವೇಶ ಸಿಗುತ್ತಿದೆ. ಇತ್ಯಾದಿ ಶಾಲೆಯವರೊಬ್ಬರು ತಿಳಿಸುತ್ತಾರೆ.

ಕಾರವಾರ— (ತಾ ೨೦-೧೦-೪೫) ಹೊಸ ಭತ್ತದ ಖರೇದಿಯ ದರವಿನ್ನೂ ನಿಶ್ಚಿತವಾಗಿಲ್ಲ ಹಳೆಯ ದರವನ್ನೇ ಇಡಬೇಕಾಗಿ ಜಮೀನದಾರರು ಜಿಲ್ಲಾಧಿಪರಿಗೆ ಒತ್ತಾಯ ಮಾಡುತ್ತಿದ್ದಾರೆಂದು ಸುದ್ದಿ! ಜಿಲ್ಲಾಧಿಪರಾಗಲಿ ಸರಕಾರದವರಾಗಲಿ ಈ ಜಮೀನದಾರರ ಸ್ವಾರ್ಥವಾತಿನ ಕಡೆ ಕಿವಿಗೊಡದೆ ಜನಸಾಮಾನ್ಯರ ಹಿತದ ಕಡೆಗೆ ಲಕ್ಷ್ಯಗೊಟ್ಟು ೧೯೪೨ರ ಮಟ್ಟಕ್ಕೆ ಹೊಸ ದರವನ್ನು ಇಳಿಸಬೇಕಾಗಿ ಜನಸಾಮಾನ್ಯರ ಪ್ರಾರ್ಥನೆಯಿದೆ. ಯುದ್ಧ-ಪೂರ್ವಕಾಲದಲ್ಲಿ ರೂ. ೧ಕ್ಕೆ ೧೨ ಸೇರು ಅಕ್ಕಿ ಸಿಗುತ್ತಿತ್ತು. ೧೯೪೨ ರಲ್ಲಿ ೧೦ ಸೇರಾಯಿತು ೧೯೪೩ ರಲ್ಲಿ ನಿಯಂತ್ರಣ ಬಂದು ೬ ಸೇರು ಆಯಿತು! ಇತರೇ ಜೀನಸುಗಳ ದರವಿಳಿದಿಲ್ಲ; ಅಕ್ಕಿಯ ದರವಿಳಿದರೆ ಅಕ್ಕಿ ಬೆಳೆಸಿದವರಿಗೆ — ಅಂದರೆ ಅಕ್ಕಿ ಮಾರಲು ಸಮರ್ಥರಿರುವ ಸಾವಕಾರರಿಗೆ! ಅಕ್ಕಿ ಬೆಳೆಸಿದ ಒಕ್ಕಲಿಗನಲ್ಲ! — ಅನ್ಯಾಯವಾಗುವದು; ಎಂದು ಜಮೀನದಾರರು ವಾದಿಸುತ್ತಾರೆ! ಆದರೆ ಈ ವಾದದಲ್ಲಿ ಹುರುಳಿಲ್ಲ ಅಕ್ಕಿಯೇ ನಮ್ಮಲ್ಲಿ ಪ್ರಧಾನ. ಅಕ್ಕಿ ಅಗ್ಗವಾದರೆ ಉಳಿದ ಜೀನಸುಗಳೂ ಅಗ್ಗವಾಗುವವು ಕೊಂಗ್ರೆಸ ಸರಕಾರ ಬಂದ ಮೇಲೆ ಅಕ್ಕಿ ಅಗ್ಗವಾಗುವದೆಂದು ಜನರು ನಂಬಿಕೊಂಡಿದ್ದಾರೆ. ಈಗಿನ ಸರಕಾರವು ಹುಟ್ಟು ದರದಿಂದ ಅಕ್ಕಿ ಭತ್ತ ಖರೇದಿಸಿಟ್ಟು ಆ ಮಂತ್ರಿಮಂಡಳದ ಕೈ ಬಿಗಿದಿಡಬಾರದಾಗಿ ಸೂಚನೆಯಿದೆ. ದರವಿಳಿಸಲಾಗದಿದ್ದರೆ ಅವರು ಖರೇದಿಯನ್ನೂ ಮಾಡುವದು ಬೇಡ. ಮಂತ್ರಿಮಂಡಳವೇ ತಮಗೆ ಇಷ್ಟವಿರುವ ದರದಿಂದ ಮುಂದೆ ಖರೇದಿಸುವದು

ಹಳಿಯಾಳ— (ತಾ. ೯-೧೦-೪೫) ಗಾಂಧಿ-ಜಯಂತಿಯು ಇಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಬೆಳಗ್ಗೆ ಮಹಾತ್ಮರ ಭಾವಚಿತ್ರವನ್ನು ಸಿಂಗರಿಸಿದ ಚಕ್ಕಡಿಯಲ್ಲಿಟ್ಟು ಮೆರವಣಿಗೆ ಹೊರಡಿಸಲ್ಪಟ್ಟಿತು. ಮೆರವಣಿಗೆ ಸಂತೆ ಪೇಟೆಗೆ ಮುಟ್ಟಿದ ಮೇಲೆ ಅಲ್ಲಿ ಧ್ವಜಾರೋಹಣ-ಧ್ವಜವಂದನೆಗಳಾದವು ಸಂಜೆಯಲ್ಲಿ ಅಲ್ಲೇ ಸಾರ್ವಜನಿಕ ಸಭೆಯಾಗಿ ಗಾಂಧೀಜಿಯವರ ಜೀವನ-ಚರಿತ್ರೆಯ ಮೇಲೆ ಭಾಷಣಗಳಾದವು

ಕಳೆದ ಸೋಮವಾರ ರಾ॥ ಕಾಶಿನಾಥ ಇಂಗಳೇಯವರು ಇಲ್ಲಿ ಬಂದಿದ್ದರು ಸಂತೆಪೇಟೆಯಲ್ಲಿ ಸಭೆಯಾಗಿ ಅವರ ಭಾಷಣವಾಯಿತು ಅವರು ಬ್ರಿಟಿಶರ ಪೂರ್ವೇತಿಹಾಸವನ್ನೂ ಅವರ ಸಾಮ್ರಾಜ್ಯ ನೀತಿಯನ್ನೂ ವಿವರಿಸಿ, ಮುಂಬರುವ ಚುನಾವಣೆಯಲ್ಲಿ ಕೊಂಗ್ರೆಸ್ಸಿಗೇ ಮತ ಕೊಡಿರೆಂದು ಬೋಧಿಸಿದರು

NOTICE.

Tenders are invited for construction of a new Church on dismantling the present one at Kone, Taluka Karwar District Kanara, so as to reach the undersigned on or before 11 a m on Tuesday the 13th November, 1945.

2 Each tender should accompany with a cheque for Rs 250 - issued in the name of ' The Rev Fr N D'souza on any recognised Bank in good faith

3. Form of tender application can be had from the Undersigned on payment of Rupee one (1 -) only per form

4 Period for completion of the work will be upto 31st March 1947

5. The approximate cost of the building is estimated to be about Rs 25,000 -

6 For further particulars apply to

Rev. Fr. N. D'souza,
President of the Church Building Committee and Vicar of the Church of Our Lady of Piety Kone, Karwar.
Karwar, 25-10-45.

ಇದನ್ನು ಪಾಂಡುರಂಗ ಕೃಷ್ಣ ಕಾಸರಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೨-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕಳಿಸಬೇಕು
ವರ್ಗಣಿ ಮುಂಗಡ ಕಟ್ಟತಕ್ಕದ್ದು

Reg. No. B 1270. Monday, 12th November, 1945

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೧೯.

ಕುಮಟಾ:- ಸೋಮವಾರ, ತಾ. ೧೨ ಮಾಹೆ ನವಂಬರ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಸ್ಮಾಲ್ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಸ್ಮಾಲ್ ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಕೇಂದ್ರ ಎಸೆಂಬ್ಲಿಯ ಚುನಾವಣೆ

ದಿಲ್ಲಿಯ ಕೇಂದ್ರ ಎಸೆಂಬ್ಲಿಯ ಸಾರ್ವತ್ರಿಕ ಚುನಾವಣೆಗಳು ಕೆಲವು ಪ್ರಾಂತಗಳಲ್ಲಿ ಈ ತಿಂಗಳ ಕೊನೆಗೆ ಮತ್ತು ಕೆಲವು ಪ್ರಾಂತಗಳಲ್ಲಿ ಮುಂದಿನ ತಿಂಗಳ ಪ್ರಾರಂಭಕ್ಕೆ ಆಗಲಿಕ್ಕಿವೆ. ನಮ್ಮ ಮುಂಬಯಿ ಪ್ರಾಂತದಲ್ಲಿ ಮುಸಲ್ಮಾನೇತರ ಸರ್ವಸಾಧಾರಣ ಮತದಾರ ಸಂಘಗಳ ಚುನಾವಣೆಯು ಅಂದರೆ ಮತನೋಂದಣಿಯು ಇದೇ ಬರುವ ಸೋಮವಾರ ತಾ. ೨೬-೧೧-೧೯೪೫ಕ್ಕೂ ಮುಸಲ್ಮಾನ ಮತದಾರ ಸಂಘದ ಚುನಾವಣೆ ಮರುದಿನ ಮಂಗಳವಾರ ತಾ. ೨೭ಕ್ಕೂ ನಡೆಯುವದು. ಮತ-ನೋಂದಣಿಯು ಮುಂಜಾನೆ ೮ ರಿಂದ ಸಂಜೆ ೬ರ ವರೆಗೆ ನಡೆಯುವದು. ನಮ್ಮ ದಕ್ಷಿಣ ಭಾಗದ (ಬೆಳಗಾಂವ, ಧಾರವಾಡ, ಕಾರವಾರ, ವಿಜಾಪುರ, ರತ್ನಾಗಿರಿ ಮತ್ತು ಕೊಲಾಬಾ ಈ) ೬ ಜಿಲ್ಹೆಗಳ ಮುಸಲ್ಮಾನೇತರರು ಮತ್ತು ಮುಸಲ್ಮಾನರು ೧ ಹೀಗೆ, ಇಬ್ಬ ಸದಸ್ಯರನ್ನು ಆರಿಸಿ ಕಳಿಸತಕ್ಕದ್ದಿದೆ ಈ ಸ್ಥಳಗಳಿಗಾಗಿ ಕಳೆದ ತಾ ೨೫ಕ್ಕೇ ನಾಮಪತ್ರಗಳು ಕೊಡಲ್ಪಟ್ಟಿದ್ದವು. ಮುಸಲ್ಮಾನೇತರರ ಸ್ಥಳಕ್ಕೆ (೧) ಕೊಂಗ್ರೆಸ ಹುರಿಯಾಳಾದ ಶ್ರೀ। ದತ್ತಾತ್ರೇಯ ಪರಶುರಾಮ ಕರಮರಕರ, (೨) ಹಿಂದು ಮಹಾಸಭೆಯ ಪರವಾಗಿ ಶ್ರೀ। ಶಿ. ಲ. ಕರಂದೀಕರ (೩) ಮರಾಠಾ ಲೀಗದ ಪರವಾಗಿ ದಿ। ಬ। ಬಾಲಕೃಷ್ಣ ಜಗತಾಪ, (೪) ಸ್ವತಂತ್ರವಾಗಿ ಶ್ರೀ। ಸೋಮಶೇಖರ ಚಿಕ್ಕಣ್ಣನವರ ಮತ್ತು (೫) ಕೊಂಗ್ರೆಸ ಪರವಾಗಿ ಶ್ರೀ। ಕೆ. ಎಸ್. ಪಾಟೀಲ ಇವರೂ, ಮುಸಲ್ಮಾನರ ಸ್ಥಳಕ್ಕಾಗಿ (೧) ಮುಂಬಯಿಯ ಜನಾಬ ಹುಸೇನಭಾಯಿ ಲಾಲಜಿ, (೨) ಮುಸ್ಲೀಮ ಲೀಗ-ಹುರಿಯಾಳುಗಳಾದ ಜನಾಬ ಅಹಮದ ಇಬ್ರಾಹಿಮ ಎಚ್ ಜಾಫರ ಇವರೂ ಮತ್ತಿಬ್ಬರೂ ಹುರಿಯಾಳು ಪತ್ರಗಳನ್ನು ರಿಟರ್ನಿಂಗ ಒಫಿಸರರಾದ ದಕ್ಷಿಣ ಭಾಗದ ಕಮಿಶನರರ ಮುಂದೆ ಹಾಜರಪಡಿಸಿದ್ದರು. ತಾ. ೩೦ಕ್ಕೆ ಹುರಿಯಾಳು ಪತ್ರಗಳ ಪರಿಶೀಲನೆ ಮುಗಿದ ಮೇಲೆ (ಶ್ರೀ। ಕರಮರಕರ ಹುರಿಯಾಳು-ಪತ್ರ ಕ್ರಮಬದ್ಧವಿರುತ್ತದೆಂದು ಸ್ವೀಕರಿಸಲ್ಪಟ್ಟದ್ದರಿಂದ) ಶ್ರೀ। ಪಾಟೀಲರು ತಮ್ಮ ನಾಮ-ಪತ್ರವನ್ನು ಹಿಂತೆಗೆದುಕೊಂಡರು. ಹಿಂದು ಮಹಾಸಭೆಯ ಹುರಿಯಾಳಾದ ಶ್ರೀ। ಕರಂದೀಕರರೂ, ಅದೇಕೋ ತಿಳಿಯದು, ತಮ್ಮ ಹುರಿಯಾಳುತನವನ್ನು ಹಿಂತೆಗೆದುಕೊಂಡರು. ದಿ। ಬ। ಜಗತಾಪರೂ ನಾಮ-ಪತ್ರ ಹಿಂದೆಗೆದುಕೊಂಡಿದ್ದೇವಾಗಿ ತಂತಿಯಿಂದ ತಿಳಿಸಿದ್ದರಂತೆ ಆದರೆ ತಂತಿಯನ್ನು ಮಾನ್ಯ ಮಾಡಲು ಬರುವದಿಲ್ಲೆಂದು ಕಮಿಶನರರು ವಿಧಿಸಿದ್ದರಿಂದ ಜಗತಾಪರ ಉಮೇದವಾರಿ ಹಾಗೆಯೇ ಉಳಿಯಿತು. ಹೀಗೆ ಮುಸಲ್ಮಾನೇತರ ಸ್ಥಾನಕ್ಕೆ ಈಗ ೩ ಮಂದಿ ಹುರಿಯಾಳುಗಳಿದ್ದಾರೆ. ಮುಸಲ್ಮಾನರ ಸ್ಥಾನಕ್ಕೆ ಬಾಕಿ ಮೂವರು ಹಿಂತೆಗೆದುಕೊಂಡದ್ದರಿಂದ ಈಗ ಹುಸೇನಭಾಯಿ ಮತ್ತು ಅಹಮ್ಮದ ಜಾಫರ ಇವರಿಬ್ಬರೇ ಉಳಿದಿದ್ದಾರೆ

ಮತ ಯಾರಿಗೆ ಕೊಡಬೇಕು ?

ಸದಸ್ಯ-ಸ್ಥಳಗಳಿಗಿಂತ ಹುರಿಯಾಳುಗಳ ಸಂಖ್ಯೆ ಹೆಚ್ಚಾದ ಮೇಲೆ ಮತಗಳನ್ನಾರಿಗೆ ಕೊಡಬೇಕೆಂದು ಮತದಾರ ಬಂಧು-ಭಗಿನಿಗಳು ಆಲೋಚಿಸಬೇಕಾಗುತ್ತದೆ. ಅಂಥ ಆಲೋಚನೆ ಮಾಡುವವರಿಗೆ ನಾವು ಇಲ್ಲಿ ನಮ್ಮ ಸಲಹೆ ಕೊಡಬಯಸುತ್ತೇವೆ.

ಈಗಾಗುವ ಎಸೆಂಬ್ಲಿಯ ಚುನಾವಣೆಯು ತೀರ ಮಹತ್ವದ್ದು. ಒಂದರ್ಥದಿಂದ ದೇಶದ ಭವಿತವ್ಯದ ಮೇಲೆ ಈ ಚುನಾವಣೆಯು ಪರಿಣಾಮವಾಗದೆ ಉಳಿಯದು. ದೇಶ-ಸ್ವಾತಂತ್ರ್ಯಕ್ಕಾಗಿ, ಅಷ್ಟೇ ಅಲ್ಲ ಭೂಮಂಡಳದೊಳಗಿನ ಸಮಸ್ತ ದಲಿತ ದೇಶಗಳ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹಿಂದೀ ರಾಷ್ಟ್ರೀಯ ಸಭೆಯು ಈ ಚುನಾವಣೆಗಳಲ್ಲಿ ಸೇರಿ ತನ್ನ ಶಕ್ತಿ, ಲೋಕ-ಪ್ರಿಯತೆ ಮತ್ತು ಲೋಕ-ಪ್ರಭುತ್ವಗಳನ್ನು ಆಳರಸರಿಗೂ ಜಗತ್ತಿಗೂ ತೋರಿಸಿಕೊಡಲು ಸಂಕಲ್ಪ ಮಾಡಿದೆ. ಹಿಂದೀ ಸ್ವಾತಂತ್ರ್ಯಕಾಗಿ ಹೋರಾಡುತ್ತಿರುವ ಹಾಗೂ ಆ ಬಗ್ಗೆ "ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ" ಎಂದೆನ್ನುತ್ತ ಬೇಕಾದ ತ್ಯಾಗ ಮಾಡಲಿಕ್ಕೂ, ಕಷ್ಟ-ನಷ್ಟಗಳನ್ನು ಸಹಿಸಲಿಕ್ಕೂ ಇಡೀ ಭಾರತವರ್ಷದಲ್ಲಿ ಸಿದ್ಧವಾಗಿರುವ ಒಂದೇ ಒಂದು ಸಂಸ್ಥೆಯೆಂದರೆ ಹಿಂದೀ ರಾಷ್ಟ್ರೀಯ ಸಭೆಯೇ ! ರಾಷ್ಟ್ರೀಯ ಸಭೆಯಲ್ಲಿ ತಮ್ಮ ಪ್ರತಿಷ್ಠೆ ಮೆರೆಸಲಾಗುವದಿಲ್ಲೆಂಬ ಭಾವನೆಯಿಂದ ಆ ಪ್ರತಿಷ್ಠೆ ಮೆರೆಸಲು ಪ್ರತ್ಯೇಕ ಪಕ್ಷ ಕಟ್ಟಿಕೊಂಡವರನ್ನು, ರಾಷ್ಟ್ರೀಯ ಸಭೆಯನ್ನು ತೆಗಳಲಿಕ್ಕೆ ಮತ್ತು ಒಂದಿಲ್ಲೊಂದು ಬಗೆಯಿಂದ ಅದರ ಶಕ್ತಿ-ಪ್ರತಿಷ್ಠೆಗಳನ್ನು ಕುಗ್ಗಿಸಲಿಕ್ಕೆ ಆಳರಸರಿಂದ ಅಂತರಂಗವಾಗಿಯೂ ಬಹಿರಂಗವಾಗಿಯೂ ಪ್ರೇರಣೆ, ಧನಸಹಾಯ ಮತ್ತು ಪ್ರೋತ್ಸಾಹಗಳನ್ನು ಪಡೆಯುತ್ತಿರುವ ಪಂಗಡಗಳೂ ಏನೇ ಹೇಳಿದರೂ ಹಿಂದೀ ರಾಷ್ಟ್ರೀಯ ಸಭೆಯೇ ಹಿಂದೀ ಜನತೆಯ ಪ್ರತಿನಿಧಿಯಾಗಿರುತ್ತದೆಂದೂ ಸಮಸ್ತ ಹಿಂದೀ ಪ್ರಜೆಗಳ ಹಿತಕ್ಕಾಗಿ ದುಡಿಯುತ್ತದೆಂದೂ ಪರಕೀಯರು ಕೂಡ ಒಪ್ಪುತ್ತಾರೆ, ಸತ್ಯದ ಅಭಿಮಾನವುಳ್ಳ ಆಳರಸರೂ ಕೂಡ ಒಪ್ಪುತ್ತಾರೆ. ಎಂದ ಮೇಲೆ ಭಾರತವು ಸ್ವತಂತ್ರವಾಗಬೇಕು ಮತ್ತು ಜನತೆಯ ಏಳಿಗೆ-ಉದ್ಧಾರ-ಕಲ್ಯಾಣವಾಗಬೇಕು ಎಂದು ಬಯಸುವ ಪ್ರತಿಯೊಬ್ಬನೂ ಕೊಂಗ್ರೆಸ್ಸಿಗೇ ಬೆಂಬಲ ಕೊಡಬೇಕಲ್ಲದೆ, ಕೊಂಗ್ರೆಸ್ಸಿನೊಡನೆ ಸ್ಪರ್ಧೆ ನಡೆಸುವ ಇಲ್ಲವೆ ಅದಕ್ಕೆ ವಿರೋಧ ಬಗೆಯುವ ಬೇರೆ ಯಾವ ಪಕ್ಷಕ್ಕೂ ಬೆಂಬಲ ಕೊಡತಕ್ಕದ್ದಲ್ಲವೆಂಬುದು ತಾನೇ ಸಿದ್ಧವಾಗುತ್ತದೆ. ಪಂ। ಜವಾಹಿರಲಾಲರು ಹೇಳುವಂತೆ ಕೊಂಗ್ರೆಸ್ಸಿಗೆ ಕೊಟ್ಟ ಮತವು ಸ್ವಾತಂತ್ರ್ಯಕ್ಕೆ ಕೊಟ್ಟ ಮತವೆಂದೆಣಿಸಲ್ಪಡುವದು. ಸ್ವಾತಂತ್ರ್ಯದ ಇಚ್ಛೆಯೂ ಅಭಿಮಾನವಿಲ್ಲವಿದ್ದವರು ಮಾತ್ರ ಬೇಕಾದ ಕೊಂಗ್ರೆಸ್ಸೇತರ ಪಕ್ಷಗಳಿಗೆ ತಮ್ಮ ಬೆಂಬಲವನ್ನೂ ಮತಗಳನ್ನೂ ಕೊಡಲು ಸ್ವತಂತ್ರರಿದ್ದಾರೆ.

ಈ ಸಾರೆಯ ಚುನಾವಣೆಗೆ ನಮ್ಮ ದಕ್ಷಿಣ ಭಾಗದ ಮತದಾರ ಸಂಘದಿಂದ (ಮುಸಲ್ಮಾನೇತರ ಸ್ಥಳಕ್ಕೆ) ಕೊಂಗ್ರೆಸ್ಸು ಶ್ರೀ। ಕರಮರಕರರನ್ನು ನಿಲ್ಲಿಸಿದೆ ಕರಮರಕರರ ಪರಿಚಯ ನಮ್ಮ ಜಿಲ್ಹೆಯವರಿಗೆ ಮಾಡಿಕೊಡುವದವಶ್ಯವಿಲ್ಲ. ೧೯೩೦ ಇಸ್ವಿ ಹಾಗೂ ೧೯೩೨-೩೩ ರ ಸತ್ಯಾಗ್ರಹ ಚಳವಳಿಗಳ ಕಾಲಕ್ಕೆ ಅವರು ನಮ್ಮ ಜಿಲ್ಹೆಯಲ್ಲಿ — ವಿಶೇಷವಾಗಿ ಅಂಕೋಲಾ ತಾಲೂಕಿನಲ್ಲಿ — ಜನಜಾಗೃತಿಯನ್ನು ಮಾಡಿ, ಕರ-ನಿರಾಕರಣೆಯ ಸತ್ಯಾಗ್ರಹಕ್ಕೆ ಒಕ್ಕಲಿಗರನ್ನು ಸಿದ್ಧ ಮಾಡಿ ನಮ್ಮೆಲ್ಲರಿಗೂ ಪರಿಚಿತರಾಗಿದ್ದಾರೆ. ಅವರು ವಿದ್ವಾಂಸರಿದ್ದಾರೆ, ಒಳ್ಳೇ ವಾಗ್ಮಿಗಳಿದ್ದಾರೆ; ಉತ್ಸಾಹಿ ಮತ್ತು ನಿಷ್ಠಾವಂತ ಕೊಂಗ್ರೆಸ-ಸೇವಕರಿದ್ದಾರೆ, ರಾಜಕಾರಣದ ಸೂಕ್ಷ್ಮ ಅಭ್ಯಾಸ ಮಾಡಿದ ಪರಿಪಾತ್ಯ ಕಾನೂನು-ಮಂಡಳಗಳಲ್ಲಿ ಚರ್ಚೆಗೆ ಬರುವ ವಿವಿಧ ವಿಷಯಗಳ ಅಭ್ಯಾಸ ಮಾಡಿ ತಮ್ಮ ಪ್ರಭಾವ ಬೀರಬಲ್ಲಷ್ಟು ಮೇಧಾವಿಗಳಿದ್ದಾರೆ; ಕರ್ನಾಟಕ ಪ್ರಾಂತಕ್ಕೆ ಸಂಬಂಧಿಸಿದ ವಿಷಯಗಳನ್ನು ಎಸೆಂಬ್ಲಿಯ ಮುಂದಿಟ್ಟು ಅವುಗಳಿಗೆ ಆ ಸಭೆಯ ಮನ್ನಣೆ ದೊರಕಿಸಲೆತ್ನಿಸುವಷ್ಟು ಸಮರ್ಥರಿದ್ದಾರೆ. ಕೇವಲ ಗುಣಗೌರವ ನೋಡಿ ಪರೀಕ್ಷಿಸಿದರೂ ಶ್ರೀ॥ ಕರಮರಕರರು ತಮ್ಮ ಪ್ರತಿಸ್ಪರ್ಧಿಗಳಿಗಿಂತ ಎಷ್ಟೋ ಪಾಲು ಸ್ಪೃಹಣೀಯರಿದ್ದಾರೆ. ಆದರೆ ನಾವು ಅವರ ಹುರಿಯಾಳುತನವನ್ನು ಪುರಸ್ಕರಿಸುವದು ಕೇವಲ ಅವರ ಗುಣ-ಗೌರವ ನೋಡಿ ಅಲ್ಲ ಅವರು ಕೊಂಗ್ರೆಸ ಸೈನಿಕರಿದ್ದಾರೆಂದು, ದಿಲ್ಲಿಯ ಕೋಟೆಯನ್ನು ವಶಪಡಿಸಿಕೊಳ್ಳುವದಕ್ಕಾಗಿ ಕೊಂಗ್ರೆಸ್ಸು ಸಂಘಟಿಸಿರುವ ಸೈನಿಕ-ಪಥಕದ ದಂಡಾಳುಗಳಾಗಿದ್ದಾರೆಂದು ಶ್ರೀ॥ ಕರಮರಕರರ ವಿನಹ ಅನ್ಯರಿಗೆ ಮತಕೊಡುವದಾಗಲಿ ಕೊಡಹೇಳುವದಾಗಲಿ ನಮಗೆ ಸಾಧ್ಯವಿಲ್ಲ.

ಹಿಂದುಸ್ತಾನ ಲೆಜಿಸ್ಲೇಟಿವ್ಹ ಎಸೆಂಬ್ಲಿ

ಯ ಚುನಾವಣೆಗೆ ಮುಂಬಯಿ ಪ್ರಾಂತದ ದಕ್ಷಿಣ ಭಾಗದ ಜನರಲ್ ಮತ್ತು ಮುಸಲ್ಮಾನ ಮತದಾರ ಸಂಘಗಳಲ್ಲಿ ಈ ಕೆಳಗೆ ನಮೂದಿಸಿದ ಜನರು ಉಮೇದವಾರರಾಗಿ ನೇಮಿಸಲ್ಪಟ್ಟಿದ್ದಾರೆ.

— ಜನರಲ್ ಮತದಾರರ ಸಂಘದಲ್ಲಿ —

(೧) ಬಾಳಕೃಷ್ಣ ಪಿರಾಜಿ ಜಗತಾಪ
(೨) ದತ್ತಾತ್ರೇಯ ಪರಶುರಾಮ ಕರಮರಕರ
(೩) ಸೋಮಶೇಖರ ಧರ್ಮಪ್ಪ ಚಿಕ್ಕಣ್ಣನವರ

— ಮುಸಲ್ಮಾನ ಮತದಾರರ ಸಂಘದಲ್ಲಿ —

(೧) ಅಹಮ್ಮದ ಇಬ್ರಾಹಿಮ ಎಚ್ ಜಾಫರ
(೨) ಹುಸೇನಭಾಯಿ ಅಬ್ದುಲ್‌ಭಾಯಿ ಲಾಲಜಿ

ಕಾರವಾರ,
ತಾ — -೧೧-೧೯೪೫. }

V. NANJAPPA,
ಕಾನಡಾ ಜಿಲ್ಹೆಯ ಕಲೆಕ್ಟರ.

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದುವರಿದ್ದು)

ಸಿದ್ದಾಪುರಗಳ ನಡುವೆ ಅಡಿಕೆಯ ವ್ಯವಹಾರ ಬಹಳ. ಈ ವ್ಯವಹಾರದ ಬಗ್ಗೆ ಶಿರ್ಸಿಯಿಂದ ಬೆಳಗ್ಗೆ ೮ಕ್ಕೆ ಕೊಟ್ಟ ತಂತಿ ಇಲ್ಲಿ ಬಹಳ ಬೇಗನೆಂದರೆ ೧೦ ಕ್ಕೆ ತಲ್ಪುತ್ತದೆ! ಅದಕ್ಕೆ ೧೫ ೨೦ ನಿಮಿಷಗಳಲ್ಲಿ ಜವಾಬು ಕೊಟ್ಟರೂ ಅದು ಮಧ್ಯಾನ್ಹ ೧॥ ಘಂಟೆಯ ವೇಳೆಗೂ (ಯಾಕೆಂದರೆ ಶಿರ್ಸಿಯ ಟಪಾಲ ಹೊತ್ತು ಮುಂಜಾನೆ ೮ರಿಂದ ೧೧ ಮತ್ತು ಅಪರಾಹ್ನ ೧ರಿಂದ ೫ ಹೀಗುಂಟು) ತಲ್ಪುವದಿಲ್ಲ. ಅದೇ ಇಲ್ಲಿಯ ಟಪಾಲಕಟ್ಟೆಯ ಹೊತ್ತನ್ನು ಶಿರ್ಸಿಯೊಳಗಿನಂತೆಯೇ ಇಟ್ಟರೆ ತಂತಿದ್ವಾರಾ ಮಾಡಲ್ಪಡುವ ವ್ಯವಹಾರ ವಿಳಂಬವಿಲ್ಲದೆ ಸಾಗುವಂತಾಗುಂಟು. ಮುಂಜಾನೆ ೬ಕ್ಕೆ ಶಿರ್ಸಿಯಿಂದ ಟಪಾಲ ಹೊರಟರೆ ೮ಕ್ಕೆ ಇಲ್ಲಿ ತಲ್ಪಿ ೯ ೯ ರೊಳಗೆ ಬಟವಡೆಯಾಗಬಹುದು. ಹಿಂದೆ ಶಿರ್ಸಿಯ ಟಪಾಲ ವೇಳೆಯೇ ಇಲ್ಲಿ ಅಮಲಿನಲ್ಲಿತ್ತು. ಅದನ್ನು ರದ್ದುಗೊಳಿಸಿ ಈಗಿನ ಹೊಸ ವೇಳೆ ತಂದದ್ದೇಕೋ ತಿಳಿಯದು. ಈಗಲಾದರೂ ಮೇಲಧಿಕಾರಿಗಳು ಪುನರಾಲೋಚನೆ ಮಾಡಿ ಇಲ್ಲಿಯ ಟಪಾಲ ವೇಳೆಯನ್ನು ಕೂಡ ಮುಂಜಾನೆ ೮ರಿಂದ ೧೧ ಮತ್ತು ಸಂಜೆ ೧ರಿಂದ ೫ ಇಟ್ಟು ಶಿರ್ಸಿ ಸಿದ್ದಾಪುರ ಟಪಾಲ ಗಾಡಿಯನ್ನು ಮುಂಜಾನೆ ೬ಕ್ಕೇ ಬಿಡುವಂತೆ ವ್ಯವಸ್ಥೆ ಮಾಡಬೇಕಾಗಿಯೂ ಜನರ ಅನುಕೂಲತೆಗಳ ಕಡೆಗೆ ಬೇಗ ಲಕ್ಷ್ಯ ಪೂರೈಸಬೇಕಾಗಿಯೂ ಬಿನ್ನೈಸುವ.

ಗಾಂಧಿ ಜಯಂತಿಯ ಕಾಲಕ್ಕೆ ಇಲ್ಲಿಯ ರಾ॥ ಉತ್ತರೇಶ ವಾಮನರಾಯರ 'ಸರಸ್ವತೀ ಸಂಗೀತ ಸಮಾಜ'ದ ವಿದ್ಯಾರ್ಥಿನಿಗಳು ಒಂದು ಸಂ[illegible] ನಡೆಸಿ, ಕೂಡಿದ ಉತ್ಪನ್ನ ರೂ ೩೬ ೦ ೬ ಹರಿಜನನಿಧಿಗೆ ಸಲ್ಲಿಸಿದ್ದಾರೆ.

ಓದು-ಬರಹ ಬಲ್ಲ ಹೆಂಗಸರ [illegible] ಅರ್ಜಿಗಳಿಗೆ ತಕ್ಕ ಪ್ರಶಸ್ತಿಪತ್ರ ಬರೆದು ಕೊಡಲು ತೊಂದರೆ ಮಾಡಿದ್ದು ನಿಜವಲ್ಲೆಂದು ಸಿದ್ದಾಪುರ ಶಾಲೆಗಳ ಮುಖ್ಯಾಧ್ಯಾಪಕ ಮುಖ್ಯಾಧ್ಯಾಪಿಕೆಯರು ತಿಳಿಸುತ್ತಾರೆ. ೨ ಜನ ಹೆಂಗಸ[illegible] ಹೊತ್ತಿನಲ್ಲೂ ಅವರು ಪ್ರಶಸ್ತಿಪತ್ರಗಳನ್ನು ಬರೆದುಕೊಟ್ಟಿದ್ದಾರಂತೆ.

ಶಿರಸಿ— (ತಾ ೪ ೧೧ ೪೫) ಇಲ್ಲಿಯ ರೆಸಿಡೆಂಟ ಮೆಜಿಸ್ಟ್ರೇಟರ ಕಚೇರಿಯಲ್ಲಿ ಕಳೆದ ವಾರ ಎರಡು ಮಹತ್ವದ ಖಟ್ಲೆಗಳ ನಿಕಾಲೆಯಾಯಿತು. ೧೯೪೪ರಲ್ಲಿ ಶಿರ್ಸಿ ಸಿದ್ದಾಪುರ ಮಾರ್ಗದಿಂದ ತ್ಯಾಗ್ಲಿಗೆ ಹೋಗುವ ರಸ್ತೆಯಲ್ಲಿದ್ದ ಕಲ್ಲಿನ ಸಂಕ ನಾಶ ಮಾಡಿದ ಆರೋಪದ ಮೇಲೆ ರಾ॥ ಕನ್ನಳ್ಳಿ ಶಿವರಾಮ ಹೆಗಡೆ ಮತ್ತು ಹೊಲಗದ್ದೆ ಗಣೇಶ ಹೆಗಡೆ ಇವರ ಮೇಲೊಂದು ಖಟ್ಲೆ ನಡೆದಿತ್ತು. ಹಾಗೂ ಮಾವಿನಗುಂಡಿಯ ಮಾರ್ಗದ ಮೇಲಿನ ಸಂಕ ನಾಶ ಮಾಡಿದ ಆಪಾದನೆಯನ್ನಿಟ್ಟು ರಾ॥ ಕುಡೇಗೋಡ ಸುಬ್ರಾಯ ಹೆಗಡೆ ಇವರನ್ನು ನ್ಯಾಯಾಸನದೆದುರು ನಿಲ್ಲಿಸಿದ್ದರು. ಎರಡೂ ಖಟ್ಲೆಗಳ ಆರೋಪಿತರು ನಿರ್ದೋಷಿಗಳೆಂದು ಬಿಡಲ್ಪಟ್ಟಿದ್ದಾರೆ. ಕನ್ನಳ್ಳಿ ಹೆಗಡೆಯವರು ೧೯೪೪ರ ವರೆಗೆ ಪೋಲೀಸರಿಗೆ ಸಿಕ್ಕಿದ್ದಿಲ್ಲ. ಅವರ ಆಸ್ತಿಯನ್ನೂ ಸರಕಾರದವರು ಜಪ್ತಿಮಾಡಿಟ್ಟಿದ್ದರು. ಮಾವಿನಗುಂಡಿ ಸಂಕದ ಖಟ್ಲೆಯಲ್ಲಿ ಸರಕಾರದ ಪರವಾಗಿ ೧೦-೧೨ ಸಾಕ್ಷಿಗಳಾದವು. ಇವು ಮಹತ್ವದ ಸಾಕ್ಷಿಗಳಂತೆ! ಮಹತ್ವವಿಲ್ಲದ ಇನ್ನೂ ಕೆಲವು ಸಾಕ್ಷಿಗಾರರಿದ್ದರು. ಮಹತ್ವದ ಸಾಕ್ಷಿಗಾರರೊಬ್ಬರೂ ಆರೋಪಿಯನ್ನು ಗುರುತಿಸಲಿಲ್ಲ! ಆರೋಪಿಯ ವಿರುದ್ಧ ಎಳ್ಳಷ್ಟು ಪುರಾವೆಕೊಡಲಿಕ್ಕೂ ಶಕ್ಯರಾಗಲಿಲ್ಲ! ಆರೋಪಿಯ ತರ್ಫಿನ ವಕೀಲರು ಇವರಿಗೆ ಮರುಸವಾಲು ಹಾಕುವ ಅವಶ್ಯಕತೆಯೇ ಬೀಳಲಿಲ್ಲ! ಇಂತಹ ಸಾಕ್ಷಿಗಾರರನ್ನು ನೂರಾರು ರೂಪಾಯಿ ವೆಚ್ಚ ಮಾಡಿ ಕೋರ್ಟಿಗೆ ತಂದದ್ದೇಕೆ? ಕೋರ್ಟಿನ ಹೊತ್ತಿನ ಅಪವ್ಯಯ ಮಾಡಿದ್ದೇಕೆ? ಇಂಥ ಟೊಳ್ಳು—ಪೊಳ್ಳು ಪುರಾವೆ (ಇದಕ್ಕೆ ಪುರಾವೆಯೆಂದು ಹೇಳುವದೂ ಅಪಾರ್ಥವೇ ಸರಿ!)ಯ ಆಧಾರದಿಂದ ಆರೋಪಿಯನ್ನು ಖಟ್ಲೆಗೆ ಗುರಿ ಮಾಡಿ ದಣಿಸಿದ್ದಾದರೂ ಯಾಕೆ? ಸರಕಾರದವರು ಇತ್ತ ಗಮನ ಕೊಟ್ಟು ಪೊಳ್ಳು ಖಟ್ಲೆಗಳಿಗೆ ಹಣ ದುಂದು ಮಾಡುವ ಅಧಿಕಾರಿಗಳಿಗೆ ಚನ್ನಾಗಿ ಬುದ್ಧಿ ಕಲಿಸಿ ಕೊಡಬೇಕಾಗಿ ಓರ್ವ ನಾಗರಿಕರು ಉದ್ವೇಗಗೊಂಡು ಸೂಚಿಸುತ್ತಾರೆ.

ಹುಲೇಕಲ್ಲ— (ತಾ ೬-೧೧ ೪೫) ಇಲ್ಲಿಯ ಕನ್ನಡ ಶಾಲೆಯ ಹುಡುಗರಿಗೆ ಶಿಕ್ಷಕರು ಏನು ಕಲಿಸುತ್ತಾರೆ ದೇವರೇ ಬಲ್ಲ! ರೂಪಾಯಿಗೆ ಎಷ್ಟು ಪೈ ಎಂದು ಕೇಳಿದರೆ ತಪ್ಪಿಲ್ಲದೆ ಉತ್ತರ ಹೇಳಬಲ್ಲ ವಿದ್ಯಾರ್ಥಿಗಳು ಮೇಲಿನ ವರ್ಗಗಳಲ್ಲೂ ತೀರ ಕಡಿಮೆ! ೨ರ ನಂತರ ಮಗ್ಗಿಗಳೆಂಬುದು ಎಷ್ಟೋ ಹುಡುಗರಿಗೆ ಗೊತ್ತೇ ಇಲ್ಲ! ಇಂತಹ ಶಿಕ್ಷಣದಿಂದ ಹುಡುಗರಿಗೇನು ಪ್ರಯೋಜನವೆಂದು ಎಷ್ಟೋ ಪಾಲಕರು ತಮ್ಮ ಮಕ್ಕಳಿಗೆ ಶಾಲೆಯಿಂದ ಬಿಡಿಸುತ್ತಿದ್ದುದು ಕಂಡು ಬರುತ್ತಿದೆ. ಮೇಲಧಿಕಾರಿಗಳು ಒಮ್ಮೆ ಈ ಶಾಲೆಯ ತಪಾಸಣೆ ಮಾಡಿ ಅವಶ್ಯವುಳ್ಳ ಸುಧಾರಣೆ ಮಾಡಬೇಕು ಎಂದು ಮುಂತಾಗಿ ಹುಲೇಕಲ್ಲಿನ ಗೃಹಸ್ಥರೊಬ್ಬರು ಬರೆಯುತ್ತಾರೆ.

ಕಾರವಾರ— (ತಾ ೧೦-೧೧-೪೫) ಗೋವೆಯಿಂದಲೂ ಪರಜಿಲ್ಲೆಗಳಿಂದಲೂ ಸಮುದ್ರ ಮಾರ್ಗವಾಗಿ ಬರುತ್ತಿರುವ ಕಳ್ಳ ಸರಾಯಿಯನ್ನು ಹಿಡಿಯಲಿಕ್ಕೆ ಅಬಕಾರಿ ಅಧಿಕಾರಿಗಳಿಗೆ ಮುಂಬಯಿ ಸರಕಾರದವರು ಈಗ "ಡ್ರ್ಯಾಯೀಟ" ಎಂಬ ಮೋಟಾರು-ಲಾಂಚ ಕೊಟ್ಟಿದ್ದಾರೆ. ಅದರ ಕೆಲಸದ ಪ್ರಾರಂಭದ ಸಮಾರಂಭವು ಕಳೆದ ಸೋಮವಾರ ತಾ ೫ ರ ಸಂಜೆ ನಡೆಯಿತು. ಜಿಲ್ಹೆಯ ಮುಖ್ಯ ಅಬಕಾರಿ ತಪಾಸಣೆ ಅಧಿಕಾರಿಗಳಾದ ರಾ॥ ವಾಗಳೇ, ಮದ್ಯಪಾನ ನಿರೋಧನ ಸಮಿತಿಯ ಹಿರಿಯರಾದ ರಾ॥ ಮಾಧವ ರಾ. ಭಾಗ, ಜಿಲ್ಲಾಧಿಪತಿಗಳಾದ ರಾ॥ ಪಿ ನಂಜಪ್ಪ, ಸೌ॥ ಲಲಿತಾಂಬಾ ನಂಜಪ್ಪ ವಗೈರೆ ಪ್ರಮುಖ ಅಧಿಕಾರಿಗಳೂ ಊರ ಗೃಹಸ್ಥರೂ ಸಮಾರಂಭಕ್ಕೆ ಬಂದಿದ್ದರು. ಜಿಲ್ಹಾಧಿಪತಿಗಳ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಿತು. ಈ ಜಿಲ್ಹೆಯನ್ನು ಸಂಪೂರ್ಣ ನಿರ್ಮದ್ಯ ಮಾಡಲು ತಾವು ಪ್ರಯತ್ನಿಸುತ್ತೇವೆಂತಲೂ ಜನತೂ ತಮ್ಮೊಡನೆ ಸಹಕರಿಸಬೇಕೆಂತಲೂ ಜಿಲ್ಹಾಧಿಪತಿಗಳು ತಮ್ಮ ಭಾಷಣದಲ್ಲಿ ನುಡಿದರು. ಸೌ॥ ನಂಜಪ್ಪನವರು ಆ ಮೇಲೆ ಹಾಲು ಮತ್ತು ಜೇನು (ಮದ್ಯದ ಬದಲಾಗಿ) ತುಂಬಿದ ೧ ಬಾಟ್ಲಿಯನ್ನು ಒಡೆದು ಮೋಟಾರು ಹಡಗವನ್ನು ಸಮುದ್ರದಲ್ಲಿ ನೂಕಿದರು. ಇಂತಹದೊಂದು ಹಡಗವನ್ನು ಸಮುದ್ರದಲ್ಲಿ ಕಾವಲಿಗಿಟ್ಟು ಹೊರಕ್ಕೆ ಗೋವೆಯಿಂದ ಬರುತ್ತಿರುವ ಕಳ್ಳ ಸರಾಯಿಯ ಪ್ರವಾಹವನ್ನು ನಿಲ್ಲಿಸುವದು ದುರ್ಘಟವೆಂದು ಜಿಲ್ಹಾ ಮದ್ಯನಿರೋಧನ ಸಮಿತಿಯವರು ೬-೭ ವರ್ಷಗಳ ಹಿಂದೆಯೇ ಸೂಚಿಸಿದ್ದರು. ಆ ಕಾಲಕ್ಕೆ ಅವರ ಬೇಡಿಕೆ ಅಧಿಕಾರಿಗಳಿಗೆ ಮಾನ್ಯವಾಗಲಿಲ್ಲ. ವಿಲಂಬವಾಗಿಯಾದರೂ ಅಡ್ಡಿಯಿಲ್ಲ, ಅದು ಈಗ ಮಾನ್ಯವಾದದ್ದು ಒಂದು ಸಂತೋಷದ ಸಂಗತಿ. ಈಗ ಇಟ್ಟ ಹಡಗದೊಳಗಿನ ಶಿಬಂದಿಯು ತತ್ಪರತೆಯಿಂದಲೂ ನಿರ್ಮಲಬುದ್ಧಿಯಿಂದಲೂ ದಕ್ಷ ಕಾವಲಿಟ್ಟು ಸಮುದ್ರಮಾರ್ಗವಾಗಿ ಬರುತ್ತಿರುವ ಸರಾಯಿಯನ್ನು ನಿಲ್ಲಿಸಿದರೆ ಜಿಲ್ಹೆಯ ಜನರು ಅವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುವರು. ಹಡಗವನ್ನಿಟ್ಟದ್ದರಿಂದಲೇ ಕಾರ್ಯಭಾಗವಾಗುವದಿಲ್ಲ. ಅದರೊಳಗಿನ ಶಿಬಂದಿಯ ದಕ್ಷತೆ, ನಿರ್ಮಲತೆ, [illegible] ಹಸ್ತಗಳ ಮೇಲೆಯೇ ಕಾರ್ಯಸಿದ್ಧಿ ಅವಲಂಬಿಸಿರುತ್ತದೆಂಬುದನ್ನು ಅಧಿಕಾರಿಗಳು ಲಕ್ಷ್ಯದಲ್ಲಿಡಬೇಕಾಗಿ ವಿನಂತಿಯಿದೆ.

ಕೊಂಕಣಿ ನುಡಿಯ ರಕ್ಷಣೆ ಮತ್ತು ಬೆಳವಣಿಗೆ ಮಾಡುವದಕ್ಕಾಗಿ ಕಳೆದ ತಾ ೬ಕ್ಕೆ ಇಲ್ಲಿ ಒಂದು ಸಂಘ ಸ್ಥಾಪಿಸಿಯಾಗಿದೆ. ಡಾ. ಸಾ ತೇಲಂಗರು ಅದರ ಅಧ್ಯಕ್ಷರು.

ಅಂಕೋಲಾ— (ತಾ ೧೧-೧೧-೪೫) ಕೊಂಗ್ರೆಸ ಪರವಾಗಿ ಚುನಾವಣೆಯ ಪ್ರಚಾರ ಮಾಡಲಿಕ್ಕೆ ಮೊನ್ನೆ ಒಂದು ಸಭೆಯಾಗಿತ್ತು. ಶ್ರೀ ಬಿಂದುಮಾಧವ ಬುರ್ಲಿಯವರು ಮಾತಾಡಿ ಕೊಂಗ್ರೆಸ್ಸು ಹಿಂದೆ ಮಾಡಿದ ಸೇವೆಯನ್ನೂ, ಈ ಮುಂದೆ ಮಾಡಲಿರುವ ಕಾರ್ಯವನ್ನೂ ವಿಶದವಾಗಿ ಬಣ್ಣಿಸಿ ಪೂರ್ಣ ಸ್ವಾತಂತ್ರ್ಯ ಬಯಸುವವರೆಲ್ಲರೂ ಕೊಂಗ್ರೆಸ ಉಮೇದುವಾರರಿಗೇ ಮತ ಕೊಡಬೇಕೆಂದು ಬೋಧಿಸಿದರು. ಮಾತಾಡುವ ಭರದಲ್ಲಿ ಒಂದು ಕಡೆ ಅವರು ಮುಂಬರುವ ಚುನಾವಣೆಗಳ ಸಂದರ್ಭದಲ್ಲಿ ಬೇರೆ ಕೆಲವು ಪಕ್ಷ ಪಂಗಡಗಳೂ ತಮ್ಮ ಪಕ್ಷ ಪಂಗಡಗಳ ಪಟ್ಟಿಗಳನ್ನು ಹಣೆಗೆ ಹಚ್ಚಿ ತಮ್ಮ ಕುದುರೆಗಳನ್ನೂ ಬಿಡಲು ತಯಾರಾಗಿದ್ದಾರೆಂತಲೂ, ಚುನಾವಣೆಗಳ ಕಾಲಕ್ಕೆ ಎದ್ದೇಳುವ ಹಾಗೂ ಚುನಾವಣೆ ತೀರಿದ ಮೇಲೆ ಪುನಃ ಅಡಗಿ ಹೋಗುವ ಈ ಪಕ್ಷ-ಪಂಗಡಗಳ ನಾಯಿಕೊಡೆ (mushrooms=ಅಣಬೆ) ಗಳ ಸೌಂದರ್ಯಕ್ಕೆ ಇಲ್ಲಿನ ಮತಗಾರರಲ್ಲಿ ಯಾರೂ ಬಲಿಗೊಡತಕ್ಕದ್ದಲ್ಲವೆಂದು ನುಡಿದು ಹೋದರು. ಆಗ ಆ ಸಭೆಯಲ್ಲಿ ರಾ॥ ಭಿಡೇ ಎಂಬ ಹಿಂದು ಮಹಾಸಭೆಯ ಓರ್ವ ಪ್ರಚಾರಕರಿದ್ದರು. ಅವರು ಈ ಮಾತಿನ ನಿಷೇಧ ಮಾಡಿ ಕೂಗಿದರು, ಮತ್ತು ವೇದಿಕೆಯನ್ನೇರಿ ಹಿಂದು ಮಹಾಸಭೆಯ ಹಿಂದೆ ಅಧ್ಯಕ್ಷರಾಗಿದ್ದ ಸ್ವಾತಂತ್ರ್ಯವೀರ ಸಾವರಕರರು ಹಿಂದುಸ್ಥಾನದಲ್ಲಿ ಬೇರೆ ಯಾರೂ ಸ್ವಾತಂತ್ರ್ಯ ಶಬ್ದದ ಉಚ್ಚಾರ ಮಾಡಲು ಸಿದ್ಧರಿಲ್ಲದ ಕಾಲದಲ್ಲಿ ಅಂದರೆ ೧೯೦೮ರಲ್ಲಿ ಆ ಶಬ್ದವನ್ನುಚ್ಚರಿಸಿ ಕರಿನೀರಿನ ಶಿಕ್ಷೆ ಅನುಭವಿಸಿದ್ದಾರೆ, ಹಿಂದು ಮಹಾಸಭೆಯಲ್ಲಿ ಗಲ್ಲಿಯ ಕಂಭದಿಂದ ಇಳಿದು ಬಂದವರಿದ್ದಾರೆ, ನಾನಾ ಬಗೆಯ ಕಷ್ಟ ನಷ್ಟ ಸಹಿಸಿದವರಿದ್ದಾರೆ, ಅಪಾರ ತ್ಯಾಗಿಗಳಿದ್ದಾರೆ ಎಂದು ಮುಂತಾಗಿ ಮಹಾಸಭೆಯವರ ತ್ಯಾಗದ ವರ್ಣನೆ ಮಾಡಹತ್ತಿದರು. ಆದರೆ ಹಿಂದು ಮಹಾಸಭೆಯವರು ಸಾಮುದಾಯಿಕ ರೀತ್ಯಾ ಏನು ಪರಾಕ್ರಮ ಮಾಡಿದ್ದಾರೆ ಇಲ್ಲವೆ ಎಂಥ ಹೋರಾಟ ನಡಿಸಲು ಸಿದ್ಧರಾಗಿದ್ದಾರೆಂಬುದನ್ನು ಕೇಳಿದರೂ ಹೇಳಲು ಅವರು ಶಕ್ತರಾಗಲಿಲ್ಲ! ಸದರಿ ಭಿಡೆಯವರು ಊರಲ್ಲೆಲ್ಲ ತಿರುಗಾಡಿ, 'ಬೇರೆ ಯಾರಿಗಾದರೂ ಮತ ಕೊಡಿರಿ, ಕೊಂಗ್ರೆಸ್ಸಿಗೆ ಮಾತ್ರ ಮತ ಕೊಡಬೇಡಿರಿ' ಎಂದು ಪ್ರಚಾರ ಮಾಡುತ್ತಿದ್ದಾರಂತೆ! ರಾ॥ ಭಿಡೆಯವರೊಬ್ಬರ ಮೇಲಿಂದಲೇ ಹಿಂದು ಮಹಾಸಭೆಯವರ ವೃತ್ತಿಯ ಅಳತೆ ಮಾಡಿದರೆ, ಕೊಂಗ್ರೆಸ-ದ್ವೇಷವೇ ಮಹಾಸಭೆಯ ತತ್ವವೆಂದು ತಿಳಿಯಬೇಕಾಗುತ್ತಿದೆ.

ಈ ತಾಲೂಕಿನ ಅಚ್ವೆ ಗ್ರಾಮಕ್ಕೆ ಹೋಗುವರೆ ಗುಂಡಬಾಳೆಯಿಂದ ಒಂದು ಲೋಕಲ್‌ಬೋರ್ಡ ಮಾರ್ಗವುಂಟು. ಆದರೆ ಅದಕ್ಕೆ ಮಾರ್ಗವೆನ್ನುವದಕ್ಕಿಂತ ಮಾರ್ಗದ ಕುರುಹು ಎನ್ನುವದೇ ಸರಿಯಾದೀತು! ಅಷ್ಟು ಅದು ಕೆಟ್ಟುಹೋಗಿದೆ. ಈ ಮಾರ್ಗದಲ್ಲಿರುವ ಸಂಕಗಳ ದುರುಸ್ತಿಯೂ ಆಗುವದಿಲ್ಲ! ಆದರಿಂದ ಮಳೆಗಾಲದಲ್ಲಿ ಅಚ್ವೆ ಗ್ರಾಮದವರು ಚಾತುರ್ಮಾಸ ವ್ರತ (ಊರ ಸೀಮೆ ದಾಟಬಾರದೆಂಬುದು ಈ ವ್ರತದ ಒಂದು ಅಂಗ) ಕೈಕೊಳ್ಳಬೇಕು, ಇಲ್ಲದಿದ್ದರೆ ಎಲ್ಲಾದರೂ ಹಳ್ಳ ದಾಟುವಾಗ ಜೀವವನ್ನು ಗಂಡಾಂತರದಲ್ಲಿ ಹಾಕಬೇಕು! ಕಳೆದ ಮಳೆಗಾಲದಲ್ಲಿ ಶಿರೂರ-ಗದ್ದೆ ಹಳ್ಳ ದಾಟುವಾಗ ಎಳೆ ಪ್ರಾಯದ ಹುಡುಗನೊಬ್ಬನು ನೀರಿನ ಸೆಳತಕ್ಕೆ ತೇಲಿಹೋಗಿದ್ದಾನಂತೆ. ಮಾರ್ಗವೂ ಸಂಕಗಳೂ ನೆಟ್ಟಗಿಲ್ಲದ್ದರಿಂದ ಅಚ್ವೆ ಗುಂಡಬಾಳೆಗಳೊಳಗೆ ಗಾಡಿ ರಹದಾರಿ ಸಾಧ್ಯವಿಲ್ಲ. ಆದರಲ್ಲೂ ಜಂಗಲ ಕಂಟ್ರಾಕ್ಟರು ಈ ಮಾರ್ಗದಲ್ಲಿ ತಮ್ಮ ನಾಟುಗಳನ್ನು ತಂದು ದಾಸ್ತಾನ ಮಾಡಿರುತ್ತಾರೆ! ಹೀಗಾಗಿ ಅಚ್ವೆಯೊಳಗೆ ಬೆಳೆಸಿದ ಭತ್ತ, ಅಡಿಕೆ ವಗೈರೆ ಹೊರಗೆ ರಪ್ತು ಮಾಡುವದಾದರೆ — ಮಾಡದಿದ್ದರೆ ಬೇರೆ ಗತಿಯಿಲ್ಲ! — ತಲೆಹೊರೆಯಿಂದಲೇ ಅವನ್ನು ಸಾಗಿಸಬೇಕು. ಹಾಗೆ ಸಾಗಿಸಿದರೆ ವಾಹನ ಖರ್ಚು ೬ ೭ ಪಟ್ಟು ಬರುತ್ತಿದೆ. ಅಷ್ಟು ಖರ್ಚು ಮಾಡಿ ರಫ್ತು ಮಾಡಿದ ಬೆಳೆಯು ಪೇಟೆಯೊಳಗಿಂದ ಕೈತಂಗೆ ಸಿಗುವದೇನು? ಮಾರ್ಗಸೌಕರ್ಯವಿಲ್ಲದ್ದರಿಂದಲೇ ಇರಬಹುದು, ಅಡಿಕೆ ಕೆರಿಗೆ ಅಧಿಕಾರಿಗಳು ಇನ್ನೂ ಅಚವೆ ಸೀಮೆಗೆ ಭೆಟ್ಟಿ ಕೊಟ್ಟಿಲ್ಲ, ಮತ್ತು ಅಡಿಕೆಯ ಸ್ಥಳಾಂತರದ ಬಗ್ಗೆ ಶೇಟಗಾರರಿಗೆ ಪರವಾನಿಗೆಗಳನ್ನೂ ಕೊಟ್ಟಿಲ್ಲ. ಜಿಲ್ಹಾಧಿಪರು ಅಚವೆ ಸೀಮೆಯವರ ಬಗ್ಗೆ ಕನಿಕರವಿಟ್ಟು ಮೇಲ್ಕಾಣಿಸಿದ ರಸ್ತೆಯನ್ನೂ ಸಂಕಗಳನ್ನೂ ಕೂಡಲೇ ದುರುಸ್ತ ಮಾಡಲಿಕ್ಕೂ ಮುಂದೆ ನೆಟ್ಟಗೆ ಇಡಲಿಕ್ಕೂ ಬೋರ್ಡಿಗೆ ವಿಧಿಸಬೇಕಾಗಿ ಸೂಚನೆಯಿದೆ.

ಅಂಕೋಲೆಯಿಂದ ಶ್ರೀ॥ ಬಿ ಎಸ್‌ ಬಸರೂರ ಅವರು ಬರೆಯುತ್ತಾರೆ – ಬೇರು ಹಲಸು (bread fruit) ಇದೊಂದು ಆಹಾರ ವಸ್ತು. [illegible] ದ್ವೀಪ ಸಮೂಹಗಳ ನಿವಾಸಿಗಳ ಮುಖ್ಯ ಆಹಾರವಸ್ತು. ಈ ಬೇರು ಹಲಸು ನಮ್ಮ ತೆಂಗಿನಕಾಯಿ ಇದ್ದಂತೆ. ಅಕ್ಕಿ ಅವರಿಗೆ ಸಿಗುವದು ತೀರ ಕಡಿಮೆ. ಈ ಹಲಸಿನ ಪ್ರಚಾರ ಮಾಡಿ ಅದರ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದು ನಮ್ಮ ಸಂಕಲ್ಪವಿದೆ. ಆ ಬಗ್ಗೆ ಬರುವ ಮಳೆಗಾಲದ ಪ್ರಾರಂಭಕ್ಕೆ [illegible] ಬೇರು ಹಲಸಿನ ಸಸಿಗಳು ಜನರಿಗೆ ಪುಕ್ಕಟೆ ಹಂಚಬೇಕೆಂದು ಆ [illegible] ಬೇರು-ಹಲಸಿನ [illegible] ಸಸಿಗಳನ್ನು — ೧ ನೂರದಷ್ಟು ಬೆಳೆದ ಸಸಿಗಳನ್ನು ನಮಗೆ ಕಳಿಸಿ, ಕಾಸರಕೋಡ [illegible] ಇಲ್ಲವೆ [illegible] ಕೋಳಿಯಲ್ಲಿ [illegible] ಬೆಲೆ ಕೊಟ್ಟು ಕೊಂಡು [illegible] ನಮಗೆ ತಿಳಿಸಿದರೆ ಉಪಕಾರವಾದೀತು.

ಸ್ಥಾನಿಕ ವೃತ್ತಾಂತ.

ಕುಮಟಾ— ಹಬ್ಬದ ಕಾಲಕ್ಕೆ ೪ ದಿನ ಚಲೋ [illegible]ತ್ತು, ಈಗ ೨-೩ ದಿನಗಳಿಂದ ಮಳೆಗಾಲದ ಚಿನ್ಹೆ [illegible]ಸಿಕೊಂಡಿವೆ ಶುಕ್ರವಾರ ಸಂಜೆ ಸುಮಾರು ಅರ್ಧ [illegible] ವರೆಗೆ ಘಟಕಳದಿಂದ ಅಂಕೋಲಾ ವರೆಗಿನ ಕರಾ[illegible] ಭಾಗದಲ್ಲಿ ಚಲೋ ಮಳೆ ಸುರಿಯಿತು

ಶ್ರೀ ಗೋಕರ್ಣ ಮಠಾಧೀಶ ಶ್ರೀಮದ್-ದ್ವಾರಕಾ[illegible]ತೀರ್ಥ ಗುರುಗಳು ಆಶ್ವಿನ ವ|| ೧೨ತಿಯ ದಿನ [illegible]ಣಯಿಂದ ಉಪ್ಪಿನಪಟ್ಟಣಕ್ಕೆ ಹೋಗಿ, ಅಲ್ಲಿಯ [illegible]ವರ್ಗದ ಪೂಜೆ ಸತ್ಕಾರಗಳನ್ನು ಸ್ವೀಕರಿಸಿ, ಕಳೆದ [illegible]ವಾರ ಸಾಯಂಕಾಲಕ್ಕೆ ಇಲ್ಲಿಗೆ ಚಿತ್ತೈಸಿದ್ದಾರೆ [illegible] ಜನರು ಮೆರವಣಿಗೆಯ ಮಾರ್ಗವನ್ನೆಲ್ಲ ತೋರಣ[illegible]ದಲೂ ದೀಪಾವಳಿಗಳಿಂದಲೂ ಸಿಂಗರಿಸಿ ಶ್ರೀ ಗುರು[illegible] ಸಡಗರದ ಸ್ವಾಗತವನ್ನಿತ್ತು ಸತ್ಕರಿಸಿದರು. ಶ್ರೀಗಳ [illegible]ವು ಸಾರ್ಧಂದಿನ ಮಾಡದ ವಾರ ಈ ಊರಲ್ಲಿಯೇ [illegible] ಹುಣ್ಣಿವೆ ನಂತರ ಕಾಗಾಲ ಗ್ರಾಮಕ್ಕೆ ಅನುಗ್ರಹ[illegible]ವ ವಿಚಾರವೂ ಉಂಟು

[illegible]ಂದ್ರ ಎಸೆಂಬ್ಲಿಯ ಚುನಾವಣೆಗೆ ದಕ್ಷಿಣ ಭಾಗದಿಂದ [illegible]ಂಗ್ರೆಸ ಉಮೇದವಾರರಾಗಿ ನಿಂತಿರುವ ಶ್ರೀ| ದತ್ತಾತ್ರೇಯ [illegible]ಉಂವಾ ಕರಮರಕರರ ಪರವಾಗಿ ಪ್ರಚಾರ ಮಾಡಲಿ[illegible] ಕಾಂಗ್ರೆಸ್ಸಿನ ಸಂದೇಶವನ್ನು ಪ್ರಚುರಗೊಳಿಸಲಿಕ್ಕೂ [illegible] ಭಾ| ದಿವಾಕರ ರಂಗರಾಯರು ನೆನ್ನೆ ಅಂಕೋಲೆಗೆ [illegible]ದರು, ಅಲ್ಲಿಂದ ಗೋಕರ್ಣಕ್ಕೆ ಹೋಗಿ ನಿನ್ನೆ ಮಧ್ಯಾ[illegible] ಇಲ್ಲಿಗೆ ಬಂದಿದ್ದರು ಸಂಜೆಯ ಕಡೆ ಶ್ರೀ ಶಾಂತೇರಿ [illegible]ಕ್ಷಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ಅವರ [illegible]ೀರ ಭಾಷಣವಾಯಿತು ಹಾಗೆಯೇ ಅವರು ಹೊನ್ನಾವರಕ್ಕೆ ಹೊರಟು ಹೋದರು ಅಲ್ಲಿಂದ ಇಂದು ಅವರು [illegible]ಗಿ ಹೋಗಿ ನಾಳೆ ಸಿದ್ದಾಪುರಕ್ಕೆ ಹೋಗುವವರಿದ್ದಾರೆ

ಬೆಂಗಳೂರಿನ ಉಜ್ವಲ ಕನ್ನಡ ಸಾಹಿತ್ಯ ಸೇವಕರಾದ ಶ್ರೀ| ರಾಜರತ್ನಂ ಇವರು ನಾಳೆ ಈ ಊರಿಗೆ ಚಿತ್ತೈಸುವವ[illegible]ರೆ ನಾಳೆ ಸಂಜೆ ೫ಕ್ಕೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಗಾಂಧಿ ಚೌಕದಲ್ಲಿ ಅವರ ಭಾಷಣ ವಾಗುವದು ಕನ್ನಡ ಸಾಹಿತ್ಯದ ಸವಿಯನ್ನುಬಯಸುವವ[illegible]ಗೆ ಇದೊಂದು ಸುಸಂಧಿ

ಕಾಲೇಜ ಸಮಿತಿಯವರು ತಮ್ಮ ನಿಧಿಗಾಗಿ ವಂತಿಗೆಗಳನ್ನು ವಂತಿಗೆಯ ವಾಗ್ದಾನಗಳನ್ನು ಕೂಡಿಸುತ್ತಿದ್ದಾರೆ ಈ ವರೆಗೆ ದೊರೆತ ವಂತಿಗೆ, ವಾಗ್ದಾನಗಳ ಅಂತು [illegible]ಮ ೫೦ ಸಾವಿರ ರೂ ಗಳಿಗೆ ಮಿಕ್ಕಿದೆಯೆಂದು ಸಮಿ[illegible] ಕಾರ್ಯದರ್ಶಿಗಳು ತಿಳಿಸುತ್ತಾರೆ ಮುಂಬಯಿಯ [illegible]ಲ ರಾ| ದಾಸ ನಿಲೋಬ ಶ್ಯಾನಭಾಗ ಇವರೊಬ್ಬರೇ [illegible] ವೈಕುಂಠವಾಸಿ ತಂದೆಯವರ ಹೆಸರಲ್ಲಿ ರೂಪಾಯಿ ೧೫೦೦೦ ಕೊಡಲೊಪ್ಪಿ ಸೀಲಕಾರೆ ಪದಸಾಸಿ ಕಂಪನಿಯಿಂದಲೂ ರೂ ೧೦೦೦೦ ಕೊಡಿಸುತ್ತೇವಾಗಿ ವಾಗ್ದಾನ ಮಾಡಿದ್ದಾರೆ

ಬಲ್ಲವರೊಬ್ಬರು ತಿಳಿಸುವದೇನಂದರೆ— ತಾ ೧೫-೧೦-೪೫ನೇಗೆ ಮಿರ್ಜಾನ ತಾರಿ ದೋಣಿಯ ಮೇಲೆ ಸಿಕ್ಕಿ[illegible] ಅಕ್ಕಿ ಪೊಟ್ಟಿಗೂ ಮಿರ್ಜಾನ ಉಗ್ರಾಣಕ್ಕೂ ಸಂಬಂಧ[illegible]ಲ್ಲ ಚೀಲದ ಮೇಲೆ ಸರಕಾರದ ಮುದ್ರೆ ಇದ್ದದ್ದು ನಿಜ [illegible]ದರೆ ಈ ಚೀಲಗಳು ಈಗ ಎಲ್ಲೆಲ್ಲೂ ಸಿಗುತ್ತವೆ ಈ [illegible]ಕ್ಕಿಯನ್ನು ಹಿಡಿಯುವನೊಬ್ಬನು ಅಸ್ಪಷ್ಟ ಇಲ್ಲದ [illegible]ಯುಕ್ತದ್ದನು ಈ ಕಾರಣ ಮಿರ್ಜಾನ ಉಗ್ರಾಣದಾರನ [illegible] ಹೊರಿಸಿದ್ದು ತಪ್ಪು ಇತ್ಯಾದಿ

[illegible]ಷ್ಕರದ ಬಗ್ಗೆ ಪ್ರಾಥಮಿಕ ಕಾಂಗ್ರೆಸ ಸದಸ್ಯರ[illegible]ನಿಸಿಕೊಳ್ಳುವ ಅವಧಿ ಈ ತಿಂಗಳ (ನವಂಬರ) [illegible]ನೆಗೊಳ್ಳುತ್ತದೆ ಅದ್ದರಿಂದ ಸದಸ್ಯರಾಗದಿದ್ದ[illegible] ಮಾಡಿ ಸದಸ್ಯರಾಗಬೇಕಾಗಿ ಈ ತಾಲೂಕಿನ [illegible] ಸಂಘಟಕರಾಗಿರುವ ರಾ| ಲಕ್ಷ್ಮಣ ಸುಬ್ರಾಯ [illegible]ಮುರು ಬಿನ್ನವಿಸುತ್ತಾರೆ

ಇದೀಗ ಈ ಜಿಲ್ಹೆಯಲ್ಲಿ ಹತ್ತಿಕಾಳು [illegible] ಹುಟ್ಟಿ[illegible]ದುದರ ಕಾರಣಪರಂಪರೆಗಳ ಬಗ್ಗೆ "ವೃತ್ತ" ದಲ್ಲಿ ಈ ವರೆಗೆ ಹಲವಷ್ಟು ಟೀಕೆಯೂ ಪ್ರತ್ಯುತ್ತರಗಳೂ ಪ್ರಕಟವಾಗಿವೆ ಇನಷ್ಟು ತಪ್ಪಿಷ್ಟು ಮೇಲಿನ ವಿವಾದ ಕೊನೆಗೊಂಡಿಲ್ಲ ಆದರೆ ಹತ್ತಿಕಾಳು ತುಟ್ಟಿಯಾಗಲು ಮೂಲಕಾರಣ ನಮ್ಮ ಜಿಲ್ಹಾಧಿಪರೇ ಎಂಬ ಧಾರವಾಡ ಜಿಲ್ಹಾಧಿಪರ ಅಭಿಪ್ರಾಯ "ಸಂಯುಕ್ತ ಕರ್ನಾಟಕ" ದಲ್ಲಿ ಪ್ರಕಟವಾಗಿದೆ ಧಾರವಾಡ ಜಿಲ್ಹೆಯಲ್ಲಿ ನಮಗೆ ಹತ್ತಿಕಾಳು ಸಿಗದ್ದರಿಂದಲೂ ಬೆಳಗಾಂವ ಜಿಲ್ಹೆಯ ಬೈಲಹೊಂಗಲ ಪೇಟೆಯಲ್ಲಿ ತುಟ್ಟಿ ದರದಿಂದ ಹತ್ತಿಕಾಳು ಖರೇದಿಸಿ ಭಾರಿ ವಾಹನ-ವೆಚ್ಚ ತೆತ್ತು ಅದನ್ನು ತರಿಸಿಕೊಳ್ಳಬೇಕಾದ್ದರಿಂದಲೂ ಹತ್ತಿಕಾಳು ತುಟ್ಟಿಯಾಗಲು ಕಾರಣವೆಂದು ಮಕ್ತೇದಾರರ (ಅರ್ಥಾತ್ ಅಧಿಕಾರಿ ಪಕ್ಷದ) ಅಂಬೋಣವಿರುತ್ತದೆ ಆದರೆ ಧಾರವಾಡ ಜಿಲ್ಹೆಯಲ್ಲಿ (ಯಾವ ಜಿಲ್ಹೆಯಲ್ಲಿ ಅಗ್ಗ ದರದಿಂದ ಹತ್ತಿಕಾಳು ಸಿಗುತ್ತವೋ ಅಲ್ಲಿ) ಹತ್ತಿಕಾಳು ಸಿಗದಂತೆ ಮಾಡಿಕೊಂಡವರು ನಮ್ಮ ಜಿಲ್ಹಾಧಿಪರಂತೆ ! ಧಾರವಾಡ ಜಿಲ್ಹೆಯ ಕಲೆಕ್ಟರರು ನಿಮಗೆ ಹತ್ತಿಕಾಳು ಬೇಕಾದರೆ ಪರವಾನೆ ಕೊಡುತ್ತೇನೆ, ಎಷ್ಟು ಬೇಕು ಎಂಬುದನ್ನು ತಿಳಿಸಿರಿ ಎಂದು ಎರಡೆರಡು ಬಾರಿ ನಮ್ಮ ಜಿಲ್ಹಾಧಿಪರಿಗೆ ತಿಳಿಸಿದಾಗ ತಮಗೆ ಹತ್ತಿಕಾಳು ಬೇಡವೆಂದು ನಮ್ಮ ಜಿಲ್ಹಾಧಿಪರು ಉತ್ತರ ಕೊಟ್ಟರಂತೆ ! ಅದರಿಂದ ಧಾರವಾಡದ ಅಧಿಕಾರಿಗಳು ಅದನ್ನು ಮುಂಬಯಿಗೆ ರಫ್ತು ಮಾಡಲು ಬಿಟ್ಟುಗೊಡಬೇಕಾಯಿತಂತೆ ಹತ್ತಿಕಾಳು ಬೇಕೇನೆಂದು ಕೇಳಿದಾಗ ಬೇಡೆಂದು ಹೇಳಿ ಅದು ಪರಜಿಲ್ಹೆಗಳಿಗೆ ರಫ್ತಾದ ಮೇಲೆ ಇಲ್ಲವೆ ಕೊಟ್ಟಾದ ಮೇಲೆ ಈಗ ಧಾರವಾಡ ಅಧಿಕಾರಿಗಳು ನಮ್ಮ ಮಕ್ತೇದಾರರಿಗೆ ಹತ್ತಿಕಾಳು ಖರೇದಿಸಗೊಡುವದಿಲ್ಲೆಂದು ದೂರುವದು ನ್ಯಾಯ್ಯವಲ್ಲೆಂದು ಯಾರಾದರೂ ಒಪ್ಪಬೇಕು ಧಾರವಾಡ ಜಿಲ್ಹೆಯ ಅಧಿಕಾರಿಗಳು ನಿಮಗೆ ಹತ್ತಿಕಾಳು ಬೇಕೇ ಎಂದು ಪುನಃ ಪುನಃ ಕೇಳಿದಾಗ ನಮ್ಮ ಜಿಲ್ಹಾಧಿಪರು ಬೇಡೆಂದು ಯಾವ ವಿಚಾರ ಇಲ್ಲವೆ ಉದ್ದೇಶದಿಂದ ಹೇಳಿದರೆಂಬುವದರ ಸ್ಪಷ್ಟೀಕರಣವಾಗುವದವಶ್ಯವುಂಟು

ಹೊಲನಗದ್ದೆ ಜ್ಞಾನಸಾಧನ ವಾಚನಾಲಯದ ವಾರ್ಷಿಕ ಸಭೆಯು ಸಮಾರಂಭ ಮೊನ್ನೆ ಶನಿವಾರ ರಾ|| ಮಹಾದೇವ ಹೆಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಭಾಷಣಗಳು, ಕಾವ್ಯ ಗಾಯನ, ನೃತ್ಯನಾಟಕಗಳು ಮುಂತಾದವು ನಡೆದವು.

ಮೂರೂರ ತರುಣ ಸಂಘದವರೂ ಕಳೆದ ಸೋಮವಾರ ರಾ|| ದೇವರು ಹೆಗಡೆಯವರಿಂದ ರಚಿತವಾದ "ಶ್ರೇಯಾ

ಜಾಹೀರ ನೋಟೀಸು.

ಉತ್ತರ ಕಾನಡಾ ಜಿಲ್ಹಾ ಸಿದ್ದಾಪುರ ತಾಲೂಕ ಕಾರಖಂಡ ಗ್ರಾಮದ ಅಪ್ರಾಯಸ್ಥ ಮಂಕಾಳಿ ತಂದೆ ಮಂಜನಾಥ ಹೆಗಡೆ ಇವಳ ತಾಯಿ ಸರಸ್ವತಿ ಕೋಂ ಮಂಜನಾಥ ಹೆಗಡೆ ಇವಳು ಅಪ್ರಾಯಸ್ಥಳಿಗೂ ಅಂಶದಾರರಿಗೂ ನಷ್ಟ ಮಾಡುವ ಇಂದೆಯಿಂದಲೂ ಜನರ ದುರ್ಬೋಧನೆಯಿಂದಲೂ ಚಂಚಲಳಾಗಿ ಕೆಲವು ಪಿತ್ರಾರ್ಜಿತ ಆಸ್ತಿಯನ್ನು ಹೀನ ಕ್ರಯಕ್ಕೆ ಮಾರಾಟ ಮಾಡಿರುತ್ತಾಳಾಗಿಯೂ ಇನ್ನು ಮುಂದೆ ಸಹ ಹಾಗೆ ಮಾಡುವವಳಿರುತ್ತಾಳಾಗಿಯೂ ತಿಳಿಯುತ್ತದೆ ಕುಟುಂಬದ ಆಸ್ತಿಯು ಉತ್ಪನ್ನ ಸಾಕಷ್ಟಿರುವದರಿಂದ ಯಾವದೇ ಕಾರಣದಿಂದ ಸದ್ರಿಯವಳಿಗೆ ಆಸ್ತಿ ಮಾರಾಟ ಮಾಡುವ ಪ್ರಸಂಗ ಇಲ್ಲ ಪಿತ್ರಾರ್ಜಿತ ಸಾಲ ವಗೈರೆ ಏನೂ ಇರುವದಿಲ್ಲ ಸದ್ರಿಯವಳ ಹೆಸರಲ್ಲಿ ಇರುವ ಯಾವತ್ತೂ ಆಸ್ತಿಗೆ ಅಪ್ರಾಯಸ್ತಳೇ ಪಕ್ಕಾದಾರಳಿರುವದರಿಂದ ಈಗ ಸದ್ರಿ ಸರಸ್ವತೀ ಕೋಂ ಮಂಜನಾಥ ಹೆಗಡೆ ಇವಳು ಮಾಡಿದ ಕ್ರಯವು ಊರ್ಜಿತ ಆಗಲಾರದ ಇನ್ನು ಮುಂದಾದರೂ ಆಕೆ ಮಾಡಬಹುದಾದ ಪರಾಧೀನತೆಗಳು ಅಪ್ರಾಯಸ್ಥಳಿಗೆ ಬಾಧಕಲಾರದು. ತಿಳಿಯುವದು ತಾ 2 11 45

● ಈ ಎಡಗೈ ಹೆಬ್ಬೆಟ್ಟಿನ ಗುರುತು ಅಪ್ರಾಯಸ್ಥಳ ಹಿತಚಿಂತಕ ತಿಮ್ಮವ್ವಾ ಕೋಂ ಮಾಬ್ಲ್ಯಾ ಹೆಗಡೆ ಸಾಕೀನ ಬೈಲಳ್ಳಿ, ತಾ ಸಿದ್ದಾಪುರ ಇವಳವಾಗಿರುತ್ತದೆ

ಶ್ರೀ ಸಂಸ್ಥಾನ ಜಾಂಬಾವಲಿ, ಗೋವಾ.

ಜಾಹೀರ ವಿನಂತಿ.

ವಾಡಿಕೆಯಂತೆ ಇದೇ ಬರುವ ಕಾರ್ತಿಕ ಶು|| ೧೫, ಬ|| ೧ ಮತ್ತು ೨ಗೆ (ನವಂಬರ ತಾ ೧೯-೨೦-೨೧) ಹೀಗೆ ೩ ದಿನ ಶ್ರೀ ಸಂಸ್ಥಾನದಲ್ಲಿ ಅನುಕ್ರಮವಾಗಿ ವನಭೋಜನ, ಕಾಲೂ ಮತ್ತು ಗೋಪಾಳ ಕಾಲಾ ಉತ್ಸವಗಳು ಜರುಗಲಿವೆ ಸಂಸ್ಥಾನದ ಭಜಕ-ಮಹಾಜನರೆಲ್ಲರೂ ಈ ಉತ್ಸವಗಳಿಗೆ ಬಂದು ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ

ಜಾಂಬಾವಲಿ, ಗೋವಾ ಆಶ್ವಿನ ವ|| ನವಮಿ ಶಕೆ ೧೮೬೭.

ವಿಶ್ವನಾಥ ಉಪೇಂದ್ರ ಭೋಬೆ,
ಕಾರ್ಯದರ್ಶಿ, ಗಾದಿ ಮಂಡಳ

ನೋಟೀಸಿಗೆ ಉತ್ತರ.

ಕಾನಡಾವೃತ್ತದ ತಾರೀಖು ೧೫-೯-೪೫ರ ಸಂಚಿಕೆಯಲ್ಲಿ ನನ್ನ ಅನುಜ ನಾರಾಯಣ ವೆಂಕಟರಮಣ ಭಟ್ಟ, ಇವನು ಜಾಹೀರ ಮಾಡಿದ ನೋಟೀಸು ಈಗ ನನ್ನ ನಜರಿಗೆ ಬಂದಿದೆ ಸದ್ರಿ ನೋಟೀಸಿನ ಮಜಕೂರು ಯಥಾರ್ಥವಾದದ್ದಲ್ಲ ನಮ್ಮ ಸಹೋದರರ ಪೈಕಿ ನಾನು ಹಿರಿಯನೆಂಬುವದು ಕಬೂಲ ಇದೆ ನಾನು ನನ್ನ ಮಾವನ ಮನೆಯಲ್ಲೇ ವಾಸ್ತವ್ಯ ಮಾಡಿಕೊಂಡಿದ್ದೇನೆಂಬ ಸಂಗತಿ ನಿಜವಲ್ಲ. ನಾನು ಯಾವದೇ ದುರುದ್ದೇಶದಿಂದಾ ಬಾಕಿ ಉಳಿದ ನನ್ನ ಸಹೋದರರ ಮೇಲೆ ಕುಟುಂಬದ ಮನೇಜರ ನಾತೆಯಿಂದ ಸಾಲ ಹೇರುವ ಪ್ರಯತ್ನ ಮಾಡಿದ್ದು ಇರುವದಿಲ್ಲ. ನಮ್ಮ ಕುಟುಂಬದ ಸಲುವಾಗಿ ವಾಸ್ತವ್ಯದ ಮನೆವ ಜಮೀನು ಮಾಡಿಕೊಳ್ಳುವಾಗ ಕೆಲವು ಸಾಲ ಆದದ್ದು ಇದ್ದು ಸದರಿ ವ್ಯವಹಾರಗಳ ಯಾವತ್ತೂ ಲಾಭ ನಮ್ಮೆಲ್ಲಾ ಸಹೋದರರಿಗೆ ಸಿಕ್ಕಿ ಅನುಭವಿಸುತ್ತಾರಲ್ಲದೆ, ಸದರಿ ವ್ಯವಹಾರಗಳಿಗೆ ಸಂಬಂಧಪಟ್ಟ ಅದಂಥ ಸಾಲ ನಮ್ಮ ಕುಟುಂಬದ ಯೋಗ್ಯ ವ ನ್ಯಾಯ್ಯವಾದ ಗರ್ಜಿನ ಬಗ್ಗೆ ಮಾಡಿದ್ದು ಇರುತ್ತದೆ. ನನ್ನ ಸಹೋದರನು ಬೇರೆಯವರ ಮಾತಿನ ಮೇಲೆ ಈ ರೀತಿ ನೋಟೀಸು ಕೊಟ್ಟಿದ್ದು ಕಾಣುವದರಿಂದ ಅಂಥ ನೋಟೀಸಿನಿಂದ ಕುಟುಂಬಕ್ಕೆ ಆದ ಸಾಲದ ಸಂಬಂಧದ ಅವರ ಯಾವದೇ ಜವಾಬದಾರಿ ತಪ್ಪಲಾರದು ತಿಳಿಯುವದು ತಾ ೨—೧೧—೪೫.

ಗಜಾನನ ವೆಂಕಟರಮಣ ಭಟ್ಟ ವಂದೂರ-
ತಲಗೋಡ, ತಾ ಹೊನ್ನಾವರ.

ನೋಟೀಸು.

ಸನ್ 1945ನೇ ಇಸವಿಯ ಬಾಬ್ತು

ತಾ 31-10-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು.

ಪ್ರೊವಿನ್ಶಿಯಲ್ ಟೆಕ್ಸ್‌ಟೈಲ್ ಕಂಟ್ರೋಲರ, ಕಾಳಾ ಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller opposite to Kalachowki Post Office, Parel Road, Bombay) ಇವರಿಗೆ ನೂಲಿನ ಮಾರಾಟದ ಲೈಸನ್ಸದಾರರಿಂದ ನೋಟಿ ನಮೂದಿಸಿದ ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ, ತಾ 5—11—1945 ನೇದರೊಳಗಾಗಿ ತಪ್ಪದೆ ಮುಟ್ಟತಕ್ಕದ್ದಿರುತ್ತದೆ ನೋಟ್ಯಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿರದಿದ್ದಲ್ಲಿ ನದಾರ ಮಾಹಿತಿಯನ್ನು ರವಾನಿಸತಕ್ಕದ್ದು ಕಾರಣ ನೂಲಿನ ಮಾರಾಟದ ಯಾವತ್ತೂ ಲಾಯಸನ್ಸದಾರರು ಸದರಿ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೆ ಮುಟ್ಟುವಂತೆ ರವಾನಿಸಬೇಕು

Bombay
31-10-1915

J. K. THAKORE,
Provincial Textile Controller Bombay

ಆ ಚರಿತ್ರೆ" ಎಂಬ ನಾಟಕವನ್ನಾಡಿದ ಸುದ್ದಿಯುಂಟು

ಕಳೆದ ತಾ ೧೫ಕ್ಕೆ ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ರಾ|| ಖಾನರು ಇಲ್ಲಿಗೆ ಬಂದಾಗ ತಾಲೂಕಿನೊಳಗಿನ ಯಾವತ್ತೂ ಗಂಡು ಶಾಲೆಯ ಶಿಕ್ಷಕರಿಗೆ ಗಿಬ್ಬ ಹಾಯಸ್ಕೂಲಿನಲ್ಲಿ ಕರೆಯಿಸಿದ್ದರಂತೆ. ಅದರಂತೆ ಶಿಕ್ಷಕರು ಸೇರಿದ ಮೇಲೆ ನಿಮಗೆ ತೊಂದರೆ ತೊಂದರೆಗಳೇನಾದರೂ ಇದ್ದರೆ ನಮಗೆ ಅರುಹಿಂ [illegible] ಅವರು ಆಜ್ಞೆ ಮಾಡಿದರಂತೆ. ಆಗ ತಮ್ಮ ಮೇಲೆ ಸ್ವಲ್ಪವಾದರೂ ಅನುಗ್ರಹವಾಗುವದೆಂಬ ಆಶೆಯಿಂದ ಕೂಡಿದ ಶಿಕ್ಷಕರು ಈಗಿನ ಮಹರ್ಗತೆಯ ಕಾಲದಲ್ಲಿ ತಮಗೆ ತುಟ್ಟಿ ಭತ್ತೆ ಕೊಡಿಸಬೇಕೆಂದು ಹೇಳಿಕೊಂಡರು. ಅಂಥದ್ದೇನೂ ಮಾಡಲಿಕ್ಕೆ ತಮ್ಮ ಇಲಾಖೆಯ ನಿಯಮಗಳಲ್ಲಿ ಅನುವು ಇಲ್ಲವಾಗಿ ಸಾಹೇಬರು ಮಾರುತ್ತರ ಕೊಟ್ಟು ಸಭೆಯನ್ನು ವಿಸರ್ಜಿಸಿಬಿಟ್ಟರಂತೆ! ಪರಿಹಾರ ಮಾಡಲಾಗದ ಸಾಹೇಬರು ತಮ್ಮ ಕಷ್ಟಗಳನ್ನಾದರೂ ಏಕೆ ಕೇಳಬೇಕಿತ್ತೆಂದು ನೆರೆದ ಶಿಕ್ಷಕರು ಮರುಗುತ್ತ ಮನೆಯ ಹಾದಿ ಹಿಡಿಯಬೇಕಾಯಿತು!

ಗೋಕರ್ಣದ ಮೂಲ ನಿವಾಸಿಗಳಾಗಿರುವ ರಾ|| ಪರಮೇಶ್ವರ ಶಾಸ್ತ್ರಿ ಗುಂಡಿ ಇವರು ಈಗ ಹಿಂದುಸ್ಥಾನ ಸರಕಾರದ ಔದ್ಯೋಗಿಕ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಅಂಕಿ-ಸಂಖ್ಯೆ (Statistics) ಗಳ ಆ|| ಡೈರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ರತ್ನಾಗಿರಿಯ ಚಿತ್ಪಾವನ ಬ್ರಾಹ್ಮಣ ಸಂಘದವರು ಕೇಶವಾನಂದ ಸರಸ್ವತೀ ವೈದಿಕ ಪಾರಿತೋಷಕ ನಿಧಿಯಿಂದ ಈ ವರ್ಷ ಶ್ರೀ ಗೋಕರ್ಣ ಮಹಾಬಲೇಶ್ವರ ದೇವರ ಸನ್ನಿಧಾನದಲ್ಲಿ ಯಜುರ್ವೇದದ ಕ್ರಮ ಪಾರಾಯಣ ಮಾಡಿಸುವ ಸಂಕಲ್ಪ ಮಾಡಿ ಆ ಬಗ್ಗೆ ವೇ|| ಖರೇ ಗಣಪತಿ ಶಾಸ್ತ್ರಿಗಳಿಗೆ ನೇಮಿಸಿದ್ದಾರೆ. ಬುಧವಾರದಿಂದ ಆ ಪಾರಾಯಣ ನಡೆಯುತ್ತಿದೆ.

ಹೊನ್ನಾವರ— (ತಾ ೨೯—೧೦—೪೫)

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಇಂದು ಬೆಳಗ್ಗೆ ಭಟಕಳದಿಂದ ಈ ಊರಿಗೆ ಬಂದಿದ್ದರು. ಜಿಲ್ಹಾಧ್ಯಕ್ಷರೂ ಊರ-ಪ್ರಮುಖರೂ ರಾಷ್ಟ್ರ-ಸೇವಾ ದಲದವರೂ ಅವರಿಗೆ ಸ್ವಾಗತಿಸಿದರು. ಬಂದವರೇ ಕಮಲಾದೇವಿಯವರು ಜೇನು-ಉದ್ದಿಮೆಯ ಸಂಘಕ್ಕೆ, ಉದ್ಯೋಗ ಶಾಲೆಗೂ ಸಂದರ್ಶನ ಕೊಟ್ಟರು. ಸಂಜೆ ಟಿಪ್ಪರ ಸಭಾಮಂದಿರದಲ್ಲಿ ರಾ|| ಮಂಜನಾಥ ಭಟ್ಟ ಕರ್ಕಿ ಇವರ ಅಧ್ಯಕ್ಷತೆಯೊಳಗೆ ಅವರ ಭಾಷಣವಾಯಿತು. ಶ್ರೀಮತಿಯವರು ಕಳೆದ ೬೫ ವರ್ಷಗಳ ಕೊಂಗ್ರೆಸ ಇತಿಹಾಸವನ್ನು ಪರಿಶೀಲಿಸಿ, ಈಗ ಮೆರವಣಿಗೆ-ಸಭೆ-ಭಾಷಣಗಳ ಆವಶ್ಯಕತೆಯಿಲ್ಲೆಂತಲೂ, ಸಂಘಟನೆ ಮಾಡಿ ಕೊಂಗ್ರೆಸ ಶಕ್ತಿಯನ್ನು ಬಲಗೊಳಿಸುವದೇ ಈಗ ಮಾಡಬೇಕಾದ ಕಾರ್ಯವಿರುತ್ತದೆಂತಲೂ, ವಿದ್ಯಾರ್ಥಿಗಳು, ಒಕ್ಕಲಿಗರು, ಕೂಲಿಕಾರರು, ಹೆಂಗಸರು ಮುಂತಾದವರಲ್ಲಿ ಸಂಘಟನೆ ಮಾಡಿ ಆ ವರ್ಗಗಳನ್ನೆಲ್ಲ ರಾಷ್ಟ್ರೀಯ ಸಭೆಯ ಮಹಾರಥಕ್ಕೆ ಜೋಡಿಸಿಕೊಳ್ಳಬೇಕೆಂತಲೂ ಅಂದರೆ ಆ ರಥವು ಬೇಗ ಸ್ವಾತಂತ್ರ್ಯದೇವತೆಯ ಮಂದಿರಕ್ಕೆ ಸಾಗುವದೆಂತಲೂ, ಸಂಘಟನ ಮಾಡಲು ತಪ್ಪಿದರೆ ಸ್ವಾತಂತ್ರ್ಯವು ಮುಂದಿನ ೨೫ ಅಲ್ಲ ೫೫ ವರ್ಷಗಳಲ್ಲಿ ಸಹ ಸಿಗುವದೆಂದು ನಾವು ಆಶಿಸಕೂಡದೆಂತಲೂ ಅವರು ಪ್ರತಿಪಾದಿಸಿದರು. ಮುಂಬರುವ ಚುನಾವಣೆಗಳು ಕೇವಲ ಕಾಲಹರಣಕ್ಕಾಗಿ ಸರಕಾರದವರು ಹೂಡಿರುವ ಆಟವೆಂದು ಅವರ ಮತ. ಆದರೂ ಆ ಚುನಾವಣೆಗಳಲ್ಲಿ ಕೊಂಗ್ರೆಸ್ಸಿಗರಿಗೆ ಮತ ಕೊಟ್ಟು, ಕೂಡಲೇ ಸಂಪೂರ್ಣ ಸ್ವಾತಂತ್ರ್ಯ ನೀಡಲು ಆಳರಸರಿಗೆ ಒತ್ತಾಯಪಡಿಸತಕ್ಕದ್ದೆಂದು ಅವರು ಬೋಧಿಸಿದರು.

(ತಾ ೧೦-೧೧-೪೫) ರಾಷ್ಟ್ರೀಯ ಕೀರ್ತನಕಾರ ನಾ|| ಪಟವರ್ಧನರವರು ಕಳೆದ ವಾರ ಇಲ್ಲಿ ಬಂದಿದ್ದರು. ೯ ದಿನ ಅವರ ಕೀರ್ತನ-ಪ್ರವಚನಗಳು ನಡೆದವು. ಸಾವಿರಾರು ಜನರು ಕೂಡುತ್ತಿದ್ದರು.

ರಾ|| ಪಿ. ಜಿ. ಕರ್ಕಿಯವರ ನಿಧನದಿಂದ ತೆರವಾದ ನಗರ ಸಭೆಯ ಅಧ್ಯಕ್ಷಸ್ಥಾನಕ್ಕೆ ರಾ|| ಶ್ರೀಪಾದರಾವ ನಗರಕಟ್ಟಿಯವರು ಆರಿಸಿ ಬಂದಿದ್ದಾರೆ. ಅಧ್ಯಕ್ಷಪೀಠ ವ್ಯಾಪಿಸಬೇಕೆಂಬ ಬಲವದಪೇಕ್ಷೆಯುಳ್ಳ, ಇಬ್ಬ ಹುರಿಯಾಳುಗಳನ್ನು ಬಿಟ್ಟು ಅಧ್ಯಕ್ಷರಾಗಬೇಕೆಂಬ ಕಲ್ಪನೆಯನ್ನು ಸಹ ಮಾಡದಿದ್ದವರಿಗೆ ಅದು ಸಿಕ್ಕಿದ್ದೊಂದು ವಿಶೇಷ. ಈ ಸಂದರ್ಭದಲ್ಲಿ "ಪ್ರಾಪ್ತವ್ಯಮರ್ಥಂ ಲಭತೇ ಮನುಷ್ಯಃ ದೇವೋಽಪಿ ತಂ ಲಂಘಯಿತುಂ ನ ಶಕ್ತಃ ||" ಎಂದು ಪಂಚತಂತ್ರದಲ್ಲಿ ಹೇಳಿರುವ ಮಾತಿನ ಮತ್ತು ಆ ಶ್ಲೋಕದ ಕಥೆಯ ನೆನಪಾಗುತ್ತಿದೆ.

ಜಿಲ್ಹಾಧಿಕಾರಿ ಮುಕ್ಕಾಮು ಈಗ ಈ ಊರಲ್ಲಿದೆ. ತಾ. ೧೭ರ ವರೆಗೆ ಇಲ್ಲೇ ಉಳಿಯುವದು.

ಈಗ ಊರಲ್ಲಿ ಅಕ್ಕಿ, ಬೇಳೆ, ಕಡ್ಲೆಹಿಟ್ಟು ಮುಂತಾದ ಧಾನ್ಯ-ದವಸಗಳ ಸಿಲ್ಕು ತೀರ ಕಡಿಮೆಯಾಗಿದೆ. ಅದರಿಂದ ದರಗಳೂ ಬಹಳ ಏರಿವೆ. ಮುಂಬಯಿಯಲ್ಲಿ ರೂ. ೩ಕ್ಕೆ ೧ ಚೀಲದಂತೆ ಮಾರುತ್ತಿರುವ ಕಡ್ಲೆಹಿಟ್ಟಿಗೆ ಇಲ್ಲಿ ಈಗ ೬೦ ರೂ. ತನಕ ದರವೇರಿದೆ! ಆದರೆ ಮುಂಬಯಿಯಿಂದ ಕಾಳು ಕಳಿಸಲು ಪರವಾನಿಗೆಗಳು ಸಿಗದ್ದರಿಂದ ವ್ಯಾಪಾರಿಗಳು ಕೈಕಟ್ಟಿ ಕೂಡ್ರಬೇಕಾಗಿದೆ. ಮುಂಬಯಿಗೆ ಹೋದ ಮಚವೆಗಳೂ ಖಾಲಿ ತಿರುಗಿ ಬರಬೇಕಾದ ಪ್ರಸಂಗ ಬಂದಿದೆ. ಜಿಲ್ಹಾಧಿಕಾರು ಪ್ರಯತ್ನ ಮಾಡಿ ವರ್ತಕರಿಗೆ ಬೇಕಾದ ಪರವಾನಿಗೆಗಳನ್ನೂ ಅಪ್ಪಣೆ-ಚೀಟಿಗಳನ್ನೂ ತ್ವರ್ಯವೇ ದೊರಕಿಸಿಕೊಡಬಾರದೇ?

ಇಲ್ಲಿಯ ಬೀದಿ ಅಂಗಡಿಯೊಂದರಲ್ಲಿ ನೌಕರಿಗಿದ್ದ ಶಿರ್ಶಿಯ ಸುಬ್ರಾಯನೆಂಬ [illegible] ಜಾತಿಯ ಹುಡುಗನಿಗೆ ಕೆಲವು ಮುಸಲ್ಮಾನರು ೬-೮ ದಿನಗಳ ಹಿಂದೆ ಭಟಕಳಕ್ಕೆ ಕರೆದೊಯ್ದು ಮುಸಲ್ಮಾನನನ್ನಾಗಿ ಮಾಡಿದ್ದಾರೆಂದು ಸುದ್ದಿ. ಆವನು ತಿರುಗಿ ಎಲ್ಲಾದರೂ ಹಿಂದು ಆದಾನೆಂಬ ಅಂಜಿಕೆಯಿಂದ ಆತನಿಗೆ ಅವರು ಸ್ವತಂತ್ರನಾಗಿ ತಿರುಗಾಡಗೊಡುವದಿಲ್ಲವೆಂತಲೂ ವಾರ್ತೆಯಿದೆ!

"ನನ್ನ ಪ್ರಿಯ ಅಳಿಯ ರಾ|| ಪಿ. ಜಿ. ಕರ್ಕಿಯವರ ಅಕಾಲಿಕ ನಿಧನದ ಬಗ್ಗೆ ನನಗೂ ನನ್ನ ಮಗಳಿಗೂ ಸಾಂತ್ವನ-ಸಂದೇಶಗಳನ್ನೂ ಸಂತಾಪ ಸೂಚಕ ಗೊತ್ತುವಳಿಗಳನ್ನೂ ಕಳಿಸಿರುವ ಸಂಘ ಸಂಸ್ಥೆಗಳಿಗೂ ಗೃಹಸ್ಥರಿಗೂ ನಾನು ತುಂಬಾ ಋಣಿಯಾಗಿದ್ದೇನೆ" ಎಂದು ರಾ|| ಎಮ್. ಡಿ. ಕರ್ಕಿ ಇವರು ಬರೆಯುತ್ತಾರೆ.

ದೀಪಾವಳಿ ಹಬ್ಬದ ಕಾಲದಲ್ಲಿ ಈ ತಾಲೂಕಿನ ಹಳ್ಳಿಗಳಲ್ಲಿ ಕೋಳಿ-ಜೂಜುಗಳಾಗುವದು ಒಂದು ರೂಢಿ. ಅದರಂತೆ ಹೊನ್ನಾಕುಳಿಯಲ್ಲೂ ಈ ವರ್ಷ ಕೋಳಿಜೂಜು ನಡೆದಿತ್ತು. ಆಗ ಇಲ್ಲಿಯ ಫೌಜದಾರರೂ (ಈಗ ಅವರಿಗೆ ವರ್ಗವಾಗಿದೆ, ಯಾಕೆಂಬುವದೊಂದು ಗೊತ್ತಿಲ್ಲ!) ಕೆಲವು ಪೋಲೀಸರೂ ಅಲ್ಲಿ ಹೋಗಿ ಹುಸಿ ಗುಂಡುಗಳನ್ನು ಹಾರಿಸಿ ಜನರನ್ನು ಓಡಿಸಿದರು, ಮತ್ತು ಕೋಳಿಗಳನ್ನು ಹಿಡಿದುಕೊಂಡು ನಿಂತ ಜನರನ್ನು ಮುತ್ತಿ ಅವರ ಕೋಳಿಗಳನ್ನೂ ಅವರ ಕಡೆಗಿದ್ದ ಹಣವನ್ನೂ ಮೈಮೇಲಿದ್ದ ನೇವಾಳ ಮೊದಲಾದವುಗಳನ್ನೂ ಕಸಕೊಂಡು ಅವರಿಗೂ ಓಡಿಸಿಬಿಟ್ಟರು. ಆ ಬಗ್ಗೆ ಪಂಚನಾಮೆಯೂ ಆಗಲಿಲ್ಲ! ಕಸಕೊಂಡ ಕೋಳಿಗಳ ಇಲ್ಲವೆ ರೊಕ್ಕ ನೇವಾಳ ಮುಂತಾದವುಗಳ ಯಾದಿಯನ್ನೂ ಮಾಡಿಸಿಲ್ಲ! ಮುಂದೆ ಸದರಿ ಕೋಳಿಗಳನ್ನು ಕೊಯ್ದು ಹಡನಬಾಳದಲ್ಲಿ ದೊಡ್ಡ ಔತಣ ಮಾಡಿದರೆಂದು ತಿಳಿಯುತ್ತದೆ! ಆ ಔತಣದಲ್ಲಿ ಬಹಳಷ್ಟು ಶರಾಯಿಯೂ ಖರ್ಚಾಯಿತಂತೆ! ಔತಣದ ನಂತರ ಔತಣದಲ್ಲಿ ಉಂಡವರು ಹಾಕಿದ ಗೊಂದಲವನ್ನೂ ನಡಿಸಿದ ಲೀಲೆಗಳನ್ನೂ ಬಣ್ಣಿಸಲಸದಳವೆಂದು ನೋಡಿದ ಕೆಲ ಹಳ್ಳಿಗರು ಹೇಳುತ್ತಾರೆ. ೧೯ನೇ ಶತಮಾನದ ಪ್ರಾರಂಭಕ್ಕೆ ಬ್ರಿಟೀಶರು ಪೆಂಢಾರಿಗಳ ನಿರ್ಮೂಲನ ಮಾಡಿದರೆಂದು ಇತಿಹಾಸದಲ್ಲಿ ಓದಿದವರಿಗಂತೂ ಆ ಪೆಂಢಾರಿಗಳ ಸಂತತಿಯವರು ಇನ್ನೂ ಬದುಕಿದ್ದಾರೆಂದು ಹೇಳಬೇಕಾಗುತ್ತದೆ.

ಮುಡೇಶ್ವರ—

ಈ ವರೆಗೆ ಇಲ್ಲಿ ಮುಸ್ಲಿಮ್ ಲೀಗಿನ ಸಮಿತಿಯಿದ್ದಿಲ್ಲ. ಕಳೆದ ತಾ ೨೫ಕ್ಕೆ ಭಟಕಳದ ಮಿ|| ಜೇ. ಎಚ್. ಶಮಸುದ್ದೀನರೂ ಅವರ ಗೆಳೆಯರೂ ಬಂದು ಒಂದು ಸಮಿತಿಯನ್ನು ಸ್ಥಾಪಿಸಿದ್ದಾರೆ. ಈಗಾಗಲೇ ೩೦೦ ಸದಸ್ಯರು ಕೂಡಿದ್ದಾರಂತೆ. ಮರುದಿನ ಶುಕ್ರವಾರ ಮಧ್ಯಾಹ್ನ ಜುಮ್ಮಾ ಪ್ರಾರ್ಥನೆಯಾದ ಮೇಲೆ ಮುಸಲ್ಮಾನ ಬಾಂಧವರು ಮಶೀದಿಯಲ್ಲೇ "ಪಾಲಿಸ್ತೈನ ದಿನ" ದ ನಿಮಿತ್ತ ಸಭೆಗೂಡಿ, ಪಾಲಿಸ್ತೈನದಲ್ಲಿ ಯಹೂದಿಗಳು ಅರಬರ ವಿರುದ್ಧ ನಡಿಸಿರುವ ಆಕ್ರಮಣದ ನಿಷೇಧ ಮಾಡುವ ಗೊತ್ತುವಳಿಯನ್ನು ಸ್ವೀಕರಿಸಿದರು.

ಶಿರಾಲಿ— (ತಾ ೯-೧೧-೪೫)

ಇಲ್ಲಿಯ ೫-೬ ಮಂದಿ ಧನಿಕರು ಕೂಡಿ ೩೦೦೦೦ ರೂ. ಬಂಡವಾಳ ಹಾಕಿ ಶ್ರೀ ರಾಮನಾಥ ಸ್ಟೋರ್ಸ ಎಂಬ ಕಿರಾಣಿ ಅಂಗಡಿಯನ್ನು ತೆರೆದಿದ್ದಾರೆ. ಈ ತಿಂಗಳ ಪ್ರಾರಂಭದಿಂದ ಕೂಪನ್ನಿನ ಕುಚಗಿ ಅಕ್ಕಿಯ ದರ ಒಮ್ಮೆಲೇ ಶೇರಿಗೆ ಮೂರಾಣೆ ಹೆಚ್ಚಾಗಿದೆ! ಬಡವರು ಬಾಳಬೇಕೆಂತು?

ಇತ್ತಿತ್ತ ಹುಲಿಯ ಹಾವಳಿ ಪ್ರಾರಂಭವಾಗಿದೆ. ಮೇಯಹೋದ ದನಗಳಿಗಂತೂ ಹುಲಿಯ ಕಾಟ ಉಂಟೇ ಉಂಟು. ಒಮ್ಮೊಮ್ಮೆ ಕೊಟ್ಟಿಗೆಯಲ್ಲಿದ್ದ ದನಗಳಿಗೂ ಹುಲಿ ಬಾಧಿಸುತ್ತಿದೆ. ಮೂರು ವಾರಗಳ ಹಿಂದೆ ಕುಂಬಾರಕೇರಿಯಲ್ಲಿರುವ ಒಂದು ಕೊಟ್ಟಿಗೆಯಲ್ಲಿದ್ದ ಆಕಳನ್ನು ಅದು ಮುರಿದಿತ್ತು. ೮ ೧೦ ದಿನಗಳ ಹಿಂದೆ ಚಿತ್ರಾಪುರದ ಒಂದು ಕೊಟ್ಟಿಗೆಯಲ್ಲೂ ಹುಲಿ ಬಂದು ಒಂದು ಆಕಳನ್ನು ಮುರಿಯಲೆತ್ನಿಸಿದ ಸುದ್ದಿಯಿದೆ. ಅಧಿಕಾರಿಗಳು ಈ ಹುಲಿಯ ಬೇಟೆ ಮಾಡುವ ವ್ಯವಸ್ಥೆ ಮಾಡಬೇಕು.

ಕಳೆದ ಶುಕ್ರವಾರ ಚಿತ್ರಾಪುರ ಮಾರ್ಗದಲ್ಲಿದ್ದ ಆಲದ ಮರವು ಆಕಸ್ಮಾತ ಮುರಿದು ಬಿದ್ದು, ಹಾದಿಯಿಂದ ಹೋಗುತ್ತಿದ್ದ ಓರ್ವ ಹೆಂಗಸಿಗೆ ಒಳ್ಳೇ ಪೆಟ್ಟಾಗಿದೆ. ಅವಳಿಗೆ ಭಟಕಳ ಚಿಕಿತ್ಸಾಲಯಕ್ಕೆ ಕಳಿಸಿದ್ದಾರೆ.

ಭಟಕಳ— (೩೧-೧೦-೪೫)

ಈಗ ಕೆಲವು ದಿನಗಳಿಂದ ಹತ್ತಿಕಾಳು ಸಿಗುವದು ಕಷ್ಟವಾಗಿದೆ. ಅಂಗಡಿಯವರು ಹಾಲು-ಹಿಂಡುವ ಎಮ್ಮೆ ಮತ್ತು ಆಕಳುಗಳ ಬಗ್ಗೆಷ್ಟೇ ಹತ್ತಿಕಾಳು ಕೊಡುತ್ತಾರೆ. ಎಮ್ಮೆ ೧ಕ್ಕೆ ದಿನ ೧ಕ್ಕೆ ೧॥ ರತ್ತಲು ಮತ್ತು ಆಕಳು ೧ಕ್ಕೆ ೧ ರತ್ತಲು. ಅಧಿಕಾರಿಗಳೇ ಹಾಗೆ ಅಪ್ಪಣೆ ಮಾಡಿದ್ದಾರಂತೆ. ಗಾಡಿ ಎತ್ತುಗಳಿಗೂ ಗಬ್ಬದ ದನಗಳಿಗೂ ಹತ್ತಿಕಾಳು ಸಿಗುವದಿಲ್ಲ! ಬೇಕಷ್ಟು ಹತ್ತಿಕಾಳು ಪೂರೈಸಬಲ್ಲ ಧಾರವಾಡ ಜಿಲ್ಹೆಗೆ ಹೊಂದಿಕೊಂಡಿರುವ ಈ ಜಿಲ್ಹೆಯಲ್ಲಿ ಈ ಪರಿ ಹತ್ತಿಕಾಳಿಗೆ ಬರಗಾಲ ಬಂದದ್ದು ತೀರ ಶೋಚನೀಯ! ಸರಕಾರದವರ ನಿಯಂತ್ರಣ-ಕಾರಭಾರಕ್ಕೆ ಇದೊಂದು ಒಳ್ಳೇ ಸರ್ಟಿಫಿಕೇಟು!

ನಗರ ಸಭೆಯವರು ಈ ವರ್ಷದಲ್ಲಿ ೪೦ ದೀಪಗಳನ್ನು ಹೊಸದಾಗಿ ಹಚ್ಚಿಸುತ್ತಿದ್ದಾರೆ. ಆದರೆ [illegible] ನಾಕೆಯಿಂದ ಮುಂದಕ್ಕೆ ಹೋಗುವ ರಸ್ತೆಯ ಮೇಲೆ ಮಾತ್ರ [illegible] ದೀಪದ ವ್ಯವಸ್ಥೆಯೂ ಇಲ್ಲ! ಆ ಮಾರ್ಗ ದುರುಸ್ತ ಮಾಡಿಸುವ ಆಲೋಚನೆಯೂ ಇಲ್ಲ! ಈ ಮಾರ್ಗ ಹೊಳೆಯಂಚಿಗೆ ಇದ್ದು ತೀರ ಕೆಟ್ಟುಹೋಗಿದೆ, ಕತ್ತಲೆಯಲ್ಲಿ ತಿರುಗಾಡುವವರು ಅಪಘಾತಕ್ಕೀಡಾಗುವ ಸಂಭವವುಂಟು.

ಹ|| ಭ|| ಸಂಜೀವರಾಯರ ಕೀರ್ತನೆಗಳು ಇನ್ನೂ ನಡೆದಿವೆ.

ಸಿದ್ದಾಪುರ— (ತಾ ೨೮-೧೦-೪೫)

ಇಲ್ಲಿಯ ತಂತಿ ಟಪಾಲ ಕಚೇರಿಯ ವೇಳೆ ಜನರಿಗೆ ಅನುಕೂಲವಾಗಿರುವದಿಲ್ಲ. ಟಪಾಲ ಕಚೇರಿಯನ್ನು ೧೦|| ಘಂಟೆಗೆ ತೆರೆದು ೫|| ಘಂಟೆಗೆ ಮುಚ್ಚುತ್ತಾರೆ. ಮುಂಬಯಿ ಹುಬ್ಬಳ್ಳಿಯಿಂದ ಮುನ್ನಾಣ ದಿನ ಬಂದ ಟಪಾಲು ರಾತ್ರೆ ಶಿರ್ಸಿಯಲ್ಲೇ ಬಿದ್ದುಕೊಂಡು, ಮರುದಿನ ೪|| ಘಂಟೆಗೆ ಹೊರಟು ೧೦|| ಘಂಟೆಗೆ ಇಲ್ಲಿ ತಲುಪುತ್ತದೆ. ಆ ನಂತರ ಬಟವಡೆ! ಶಿರ್ಸಿ

(೫ನೇ ಪುಟದ ಮೇಲೆ ಮುಂದುವರಿದಿದೆ)

ಇದನ್ನು ಪಾಂಡುರಂಗ ಕೃಷ್ಣ ಶಿ ... ಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಕ್ಯಾನರ ಆರ್ಟ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಾಶಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವವರು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ತೆರಬೇಕು
ವರ್ಗಣಿ ಮುಂಗಡ ಕಟ್ಟತಕ್ಕದ್ದು

Reg. No. B. 1270. Monday, 19th November, 1945.

ಕಾನಡಾವೃತ್ತ.

ವರ್ಷ ೨೮.] THE KANARA NEWS. [ಸಂಚಿಕೆ ೨೦.

ಕುಮಟಾ:- ಸೋಮವಾರ, ತಾ. ೧೯ ನೇ ನವಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಮಾಲಪೈಕಾ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತೀರಿಸಬೇಕು.

ಮುಸಲ್ಮಾನ ಬಾಂಧವರಿಗೆ.

ಕೇಂದ್ರ ಎಸೆಂಬ್ಲಿಯ ಚುನಾವಣೆಯಲ್ಲಿ ಮುಸಲ್ಮಾನೇತರ ಮತದಾರ ಬಾಂಧವರು ಕೊಂಗ್ರೆಸ-ಹುರಿಯಾಳುಗಳಾದ ಶ್ರೀ|| ಕರಮರಕರರಿಗೆ ಮತ ಕೊಡತಕ್ಕದ್ದೆಂದು ನಾವು ಕಳೆದ ವಾರ ಪ್ರತಿಪಾದಿಸಿದ್ದೆವು. ಸ್ಥಳ-ಸಂಕೋಚವಾದ್ದರಿಂದ ಮುಸಲ್ಮಾನ ಮತದಾರ-ಬಂಧುಗಳಿಗೆ ನಮ್ಮ ಸಲಹೆ ಕೊಡಲು ಅಂದು ಸಾಧ್ಯವಾಗಲಿಲ್ಲ. ಅದನ್ನು ಈಹೊತ್ತು ಕೊಡಬಯಸುತ್ತೇವೆ

ಮುಸಲ್ಮಾನ ಬಾಂಧವರಿಗೂ ಸ್ವಾತಂತ್ರ್ಯ ಬೇಕೆಂಬುದರಲ್ಲಿ ಸಂದೇಹವಿಲ್ಲ ಸರಕಾರವು ನಮ್ಮದು ಅಂದರೆ ಪ್ರಜೆಗಳದು ಆದ ಹೊರತು ನಮ್ಮ ದೇಶದ ಉದ್ಧಾರವಾಗದು, ನಮ್ಮ ಜನರ ಉತ್ಕರ್ಷವಾಗದು ನಮ್ಮ ಆರ್ಥಿಕ ಕಷ್ಟಗಳ ಪರಿಹಾರವಾಗದು; ನಮ್ಮ ಜನರಿಗೆ ಜಗತ್ತಿನಲ್ಲಿ ಮಾನ-ಮರ್ಯಾದೆ ಸಿಗಲಾರದು, ಎಂಬುದು ನಿರ್ವಿವಾದ ಹಿಂದೀ ಪ್ರಜೆಗಳಲ್ಲಿ ಮುಸಲ್ಮಾನರೂ ಸೇರುತ್ತಾರೆ. ಪರಕೀಯ ಬ್ರಿಟಿಶರ ಆಳಿಕೆಯಲ್ಲಿ ನಮ್ಮ ಮುಸಲ್ಮಾನ ಬಂಧುಗಳಿಗೆ ವಿಶೇಷ ಮರ್ಯಾದೆ ಸಿಗುತ್ತದೆಂದಾಗಲಿ, ಸ್ವಾಸ್ಥ್ಯ ದೊರೆಯುತ್ತದೆಂದಾಗಲಿ ಹೇಳಬರುವಂತಿಲ್ಲ. ಅಂದಮೇಲೆ ಅವರಾದರೂ ಪರಕೀಯರ ಸತ್ತೆಯನ್ನು ತಿರಸ್ಕರಿಸಿ, ಪ್ರಜೆಗಳ ಕೈಯ್ಯಲ್ಲಿ ರಾಜ್ಯಾಧಿಕಾರ ಬರುವಂತಹ ಪ್ರಯತ್ನ ಮಾಡಬೇಕಾದುದು ಕರ್ತವ್ಯ. ಮುಂಬರುವ ಚುನಾವಣೆಯಲ್ಲಿ ಕೂಡ ಅದೇ ದೃಷ್ಟಿಯನ್ನು ತಮ್ಮ ಮುಂದಿಟ್ಟುಕೊಂಡು ಅವರು ವರ್ತಿಸತಕ್ಕದ್ದೆಂದು ಸಿದ್ಧವಾಗುತ್ತದೆ. ರಾಷ್ಟ್ರಸ್ವಾತಂತ್ರ್ಯಕ್ಕಾಗಿ, ರಾಜ್ಯ-ನಿಯಂತ್ರಣದ ಅಧಿಕಾರ ಪ್ರಜೆಗಳ ಕೈಯ್ಯಲ್ಲಿ ಬರಬೇಕೆಂಬುದಾಗಿ ಹೋರಾಡುವ ಪಕ್ಷಕ್ಕೇ ಅವರಾದರೂ ತಮ್ಮ ಬೆಂಬಲ ಕೊಡಬೇಕು ಕೊಂಗ್ರೆಸ್ಸು ಅಂತಹ ಸಂಸ್ಥೆಯೆಂಬುದರಲ್ಲಿ ಸಂದೇಹವಿಲ್ಲ. ಕೊಂಗ್ರೆಸ್ಸಿನ ವಿನಹ ಬೇರೆ ಪಕ್ಷ-ಸಂಗಡಗಳು ರಾಷ್ಟ್ರಸ್ವಾತಂತ್ರ್ಯವು ತಮ್ಮದೂ ಗುರಿ ಇಲ್ಲವೆ ಧ್ಯೇಯವೆಂದು ಹೇಳುತ್ತಿರುವವಾದರೂ ಆ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರವೃತ್ತಿಯಾಗಲಿ, ನಿಶ್ಚಯವಾಗಲಿ, ಹುರುಪಾಗಲಿ ಬೇರೆ ಯಾವ ಪಕ್ಷ-ಸಂಗಡಗಳಲ್ಲೂ ನಮಗೆ ಕಂಡುಬರುವದಿಲ್ಲ ಆದ್ದರಿಂದ ಸ್ವಾತಂತ್ರ್ಯಕಾಂಕ್ಷಿ ಮುಸಲ್ಮಾನ ಬಾಂಧವರು ಕೊಂಗ್ರೆಸ್ಸಿಗೇ ಸಹಾಯ ಮಾಡಬೇಕೆಂದು ನಾವು ಪ್ರತ್ಯೇಕವಾಗಿ ಹೇಳಬೇಕಾದುದು ಅಗತ್ಯವಿಲ್ಲ ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟು, ಯಾರಿಗೆ ತಾವು ತಮ್ಮ ಮತಗಳನ್ನು ಕೊಟ್ಟರೆ ಕೊಂಗ್ರೆಸ್ಸಿಗೆ ಸಹಾಯ ಮಾಡಿದಂತಾಗುವದು ಮತ್ತು ಯಾರಿಗೆ ಮತ ಕೊಟ್ಟಲ್ಲಿ ತಾವು ಕೊಂಗ್ರೆಸ್ಸಿಗೆ ವಿರೋಧ ಒಗೆದಂತಾಗುವದು ಎಂಬದನ್ನು ತಮ್ಮಷ್ಟಕ್ಕೆ ಮುಹಮ್ಮದೀ ಬಾಂಧವರು ನಿರ್ಧರಿಸಬೇಕಾಗಿ ನಮ್ಮ ಬಿನ್ನಹವಿದೆ

ಆದರೆ ದುರ್ದೈವವಶಾತ್ ನಮ್ಮ ಮುಸಲ್ಮಾನ ಬಂಧುಗಳ ಮುಂದೆ ಈಗ "ಸ್ವಾತಂತ್ರ್ಯವೋ ಸಾಮ್ರಾಜ್ಯವೋ?" ಎಂಬ ಪ್ರಶ್ನೆಯನ್ನಿಡದೆ ಕೆಲವರು "ಪಾಕಿಸ್ತಾನವೋ ಅಖಂಡ ಹಿಂದುಸ್ಥಾನವೋ?" ಎಂಬ ಪ್ರಶ್ನೆಯನ್ನಿಟ್ಟು, ಪಾಕಿಸ್ತಾನಕ್ಕೆ ಬೆಂಬಲ ಕೊಡಿರಿ ಎಂದು ಅವರನ್ನು ಹುರಿದುಂಬಿಸುತ್ತಿದ್ದಾರೆ! ಈ ಪಾಕಿಸ್ತಾನದ ಕಲ್ಪನೆ ಈಗ ನಾಲ್ಕಾರು ವರ್ಷಗಳಿಂದ ಮುಸ್ಲಿಮ ಲೀಗದವರ ತಲೆಯಲ್ಲಿ ಹುಚ್ಚಾಟವನ್ನೆಬ್ಬಿಸಿದೆ. ಅಖಂಡ ಹಿಂದುಸ್ಥಾನದಲ್ಲುಳಿದರೆ ಮುಸಲ್ಮಾನರು ಅಲ್ಪಸಂಖ್ಯಾಕರಾಗುಳಿದು ರಾಜ್ಯಕಾರಭಾರದಲ್ಲಿ ಹಿಂದುಗಳದೇ ಪ್ರಾಬಲ್ಯವಾಗುತ್ತದೆಂದೂ, ಮುಸಲ್ಮಾನರ ಕಲ್ಯಾಣವಾಗಬೇಕಾದರೆ ಹಿಂದುಸ್ಥಾನದ ಪಾಲುಪಟ್ಟಿ ಮಾಡಿ ಮುಸಲ್ಮಾನರು ಬಹುಸಂಖ್ಯಾಕರಿರುವ ಪ್ರಾಂತಗಳನ್ನು ಪ್ರತ್ಯೇಕಿಸಿ ಪಾಕಿಸ್ತಾನವನ್ನು ನಿರ್ಮಿಸಬೇಕೆಂದೂ ಲೀಗದವರ ಅಂಬೋಣ. ಈ ಪಾಕಿಸ್ತಾನದ ಸ್ವರೂಪವೇನು, ಅದರ ವಿಸ್ತಾರವೇನು, ಅದಕ್ಕೂ ಹಿಂದುಸ್ಥಾನಕ್ಕೂ ಸಂಬಂಧವೆಂತಹದಿರುವದು ಎಂದು ಮುಂತಾದ್ದರ ಅಧಿಕೃತ ವಿವರಗಳನ್ನು ಲೀಗದವರು ಮೊನ್ನೆಯ ವರೆಗೆ ಕೊಟ್ಟಿದ್ದಿಲ್ಲ ಇತ್ತೀಚೆಗೆ ಅವರ ವಿವರಗಳು ಹೊರಬೀಳಹತ್ತಿವೆ ಹಿಂದುಸ್ಥಾನದ ವಾಯುವ್ಯದಲ್ಲಿರುವ ಸಿಂಧ ಬಲುಚಿಸ್ತಾನ, ಗಡಿನಾಡು ಮತ್ತು ಪಂಜಾಬ ಪ್ರಾಂತಗಳೂ ಈಶಾನ್ಯದಲ್ಲಿರುವ ಬಂಗಾಲ, ಆಸಾಮ ಪ್ರಾಂತಗಳೂ ಕೂಡಿ ಪಾಕಿಸ್ತಾನ ಎಂಬ ಪ್ರತ್ಯೇಕ ಸ್ವಯಂಪೂರ್ಣ-ಸ್ವತಂತ್ರ ರಾಷ್ಟ್ರವಾಗಬೇಕಂತೆ, ಮುಸಲ್ಮಾನರು ಬಹುಸಂಖ್ಯರಾಗಿರುವ ಪ್ರಾಂತಗಳನ್ನು ಒಟ್ಟುಗೂಡಿಸಿ ಪಾಕಿಸ್ತಾನದ ನಿರ್ಮಾಣ ಮಾಡಬೇಕಂತೆ ಆದರೆ ಆಸಾಮದಲ್ಲಿ ಮುಸಲ್ಮಾನರು ಅಲ್ಪಸಂಖ್ಯಾಕರು. ಆ ಪ್ರಾಂತವನ್ನು ಪಾಕಿಸ್ತಾನಕ್ಕೆ ಹ್ಯಾಗೆ ಜೋಡಿಸುವರೋ ತಿಳಿಯದು! ಬಂಗಾಲದ ಪಶ್ಚಿಮಾರ್ಧದಲ್ಲಿ ಹಿಂದುಗಳದೇ ಪ್ರಾಬಲ್ಯವಿದೆ ಅದರಂತೆ ಪಂಜಾಬದ ದಕ್ಷಿಣ ಭಾಗದಲ್ಲೂ ಸೀಖ ಮತ್ತು ಹಿಂದುಗಳ ಹೆಚ್ಚಳವಿದೆ ಈ ಭಾಗಗಳು ಪಾಕಿಸ್ತಾನಕ್ಕೆ ಸೇರಲೊಪ್ಪುವಂತಿಲ್ಲ. ಮೇಲಾಗಿ ಈ ಪಾಕಿಸ್ತಾನವು ಆರ್ಥಿಕ ದೃಷ್ಟಿಯಿಂದ ಇಲ್ಲವೆ ಸ್ವಸಂರಕ್ಷಣೆಯ ದೃಷ್ಟಿಯಿಂದ ಸ್ವಯಂಪೂರ್ಣ ಮತ್ತು ಸಮರ್ಥವಾಗಲಾರದೆಂದು ತಜ್ಞರ ಅಭಿಪ್ರಾಯವುಂಟು ಈಗಣ ಮನ್ವಂತರದಲ್ಲಿ ಸಣ್ಣ ಸಣ್ಣ ರಾಷ್ಟ್ರಗಳು ಪ್ರತ್ಯೇಕವಾಗಿ ಬಾಳುಳಿಯಲಾರವೆಂತಲೂ ಅವು ಬೇರೆ ರಾಷ್ಟ್ರಗಳೊಡನೆ ಕೂಡಿಕೊಳ್ಳುವದು ಹಿತಕರವೆಂತಲೂ ಪಂ|| ಜವಾಹರಲಾಲರು ಮುಕ್ತಕಂಠದಿಂದ ಬೋಧಿಸುತ್ತಾರೆ. ಇಂತಹ ಕಾಲದಲ್ಲಿ ಭಾರತವನ್ನು ಇಬ್ಭಾಗವಾಗಿ — ಬೆ|| ಜಿನ್ನಾರವರ ಪಾಕಿಸ್ತಾನದ ಕಲ್ಪನೆಯನ್ನು ಒಪ್ಪಿದರೆ ಮೂರು ಭಾಗಗಳನ್ನಾಗಿ — ಸೀಳಿ ಮೂರು ಜನಾಂಗಗಳನ್ನು ನಿರ್ಮಿಸುವದು ವಿಚಾರರಮಣೀಯವಲ್ಲ; ಶ್ರೇಯಸ್ಕರವೂ ಅಲ್ಲ. ಕೋಟ್ಯಾವಧಿ ಮುಸಲ್ಮಾನರೇ ಪಾಕಿಸ್ತಾನದ ಈ ಕಲ್ಪನೆಯನ್ನು ಧಿಕ್ಕರಿಸುತ್ತಿದ್ದಾರೆ

ಪಾಕಿಸ್ತಾನದ ಇಷ್ಟಾನಿಷ್ಟತೆಗಳು ಏನೇ ಇರಲಿ. ಅದರಿಂದ ನಮ್ಮಿತ್ತ ಕಡೆಯ — ದಕ್ಷಿಣ ಭಾರತದೊಳಗಿನ — ಮುಸಲ್ಮಾನ ಬಾಂಧವರಿಗೆ ಪ್ರಯೋಜನವೇನಾಗಬಲ್ಲದು ಎಂಬುದರ ಆಲೋಚನೆ ಮಾಡಬೇಕಲ್ಲವೇ? ಈಗ ಇಡೀ ಹಿಂದುಸ್ಥಾನದ ೪೦ ಕೋಟಿ ಪ್ರಜೆಗಳಲ್ಲಿ ೯ ಕೋಟಿಗಳಷ್ಟು ಮುಸಲ್ಮಾನರಿದ್ದಾರೆ. ಕಾಣಲಿಕ್ಕೆ ಅಲ್ಪಸಂಖ್ಯರಿದ್ದಾಗ್ಯೂ ಸರಕಾರದ ಮೇಲೆ ತಮ್ಮ ಪ್ರಭಾವವನ್ನು ನಡೆಸುವಷ್ಟು ಅವರ ಪ್ರಮಾಣ ದೊಡ್ಡದುಂಟು. ಅದೇ ಪಾಕಿಸ್ತಾನ ಅಸ್ತಿತ್ವದಲ್ಲಿ ಬಂದರೆ ಮುಸಲ್ಮಾನರು ಬಹುಸಂಖ್ಯರಿರುವ ಪ್ರಾಂತಗಳು ಪ್ರತ್ಯೇಕವಾಗಿ, ಇನ್ನುಳಿಯುವ ಹಿಂದುಸ್ಥಾನದ ಮುಸಲ್ಮಾನರು ತೀರ ಅಲ್ಪಸಂಖ್ಯಾಕರಾಗಿ ನಿರ್ಬಲರೂ ನಿಷ್ಪ್ರಭರೂ ಆಗುವರೆಂಬುದು ನಿಃಸಂಶಯ ಆದ್ದರಿಂದ ಪಾಕಿಸ್ತಾನದ ನಿರ್ಮಿತಿಯಿಂದ ದಕ್ಷಿಣ ಮಧ್ಯಭಾರತದೊಳಗಿನ ಮುಸಲ್ಮಾನರಿಗೆ ಬಹಳ ಕೇಡಾಗುವದೆಂದು ಹೈದರಾಬಾದದ ಡಾ|| ಲತೀಫರು ಎಚ್ಚರಿಕೆ ಕೊಟ್ಟಿದ್ದಾರೆ. ಪಾಕಿಸ್ತಾನ ಬಂದಮೇಲೆ ದಕ್ಷಿಣ ಭಾರತ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ.

[ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದುದು]

ಸೂಚನೆ—

ತಾ ೨೧-೧೨-೧೯೪೫ನೇ ಶುಕ್ರವಾರ ದಿನ ಬೇಂಕಿನ ಒಂದು ಶಾಖೆಯು

ಗದಗದಲ್ಲಿ

ತೆರೆಯಲ್ಪಡುವುದೆಂದು ತಿಳಿಸಲು ಡ್ಯಾರೆಕ್ಟರರು ಸಂತೋಷಪಡುತ್ತಾರೆ.

ಅತೀ ಶೀಘ್ರದಲ್ಲಿಯೇ ತೆರೆಯಲ್ಪಡುವ ನಮ್ಮ

ಮುಂಬಯಿ ಶಾಖೆಯ ಸೂಚನೆಯನ್ನು ನಿರೀಕ್ಷಿಸಿರಿ.

ಅಖಿಲ ಕರ್ನಾಟಕದಲ್ಲೆಲ್ಲೂ ಶಾಖೆಗಳಿವೆ.

ಪ್ರತಿಯೊಂದು ವಿಧದ ಬ್ಯಾಂಕಿಂಗ್ ವ್ಯವಹಾರಗಳು ನಡಿಸಲಾಗುತ್ತಿವೆ.

ಕುಂದಾಪುರ,
ತಾ ೧೦-೧೧-೧೯೪೫

K Vithaldas Shenai,
Managing Director

ದೊಳಗಿನ ಮುಸಲ್ಮಾನರು ತಮ್ಮ ಮನೆಮಾರು ಮಾರಿ ಗಂಟು ಮೊಟ್ಟೆ ಕಟ್ಟಿಕೊಂಡು ಆ ಪಾಕಿಸ್ತಾನಕ್ಕೆ ಹೋಗುವರೇ? ಅಥವಾ ಈಗ ಇದ್ದಲ್ಲೇ ಇರುವರು? ಈಗ ಇದ್ದಲ್ಲೇ ಉಳಕೊಂಡು ತಮ್ಮ ಬಹುಸಂಖ್ಯೆ ಹಿಂದು ಬಾಂಧವರೊಡನೆ ಪ್ರೇಮದಿಂದ ವ್ಯವಹಾರ ನಡಿಸಿ ಬಾಳುಳಿಯುವರಾದರೆ ಅವರಿಗೆ ಆ ಪಾಕಿಸ್ತಾನದ ಸಂಬಂಧವೇಕೆ? ಅದಕ್ಕೆ ಅವರು ಬೆಂಬಲವನ್ನು ಕೊಡುವವರಾದರೂ ಯಾಕೆ? ಪಾಕಿಸ್ತಾನ-ನಿರ್ಮಾಣದಿಂದ ಈಗಿದ್ದ ತಮ್ಮ ಪ್ರಮಾಣ ಕಡಿಮೆಯಾಗಿ ತಾವು ಅತ್ಯಲ್ಪ ಮತ್ತು ಹೀನಬಲರಾಗುತ್ತೇವೆಂಬುದನ್ನು ದಕ್ಷಿಣ ಭಾರತೀಯ ಮುಸಲ್ಮಾನರು ಲಕ್ಷದಲ್ಲಿಟ್ಟು ಸ್ವಹಿತದ ದೃಷ್ಟಿಯಿಂದ ಆಲೋಚಿಸಿದರೆ ಪಾಕಿಸ್ತಾನಕ್ಕೆ ಬೆಂಬಲ ಕೊಡುವದರ ಬದಲು ಅದನ್ನು ಅವರು ವಿರೋಧಿಸುವರೆಂದು ನಾವು ನಂಬುತ್ತೇವೆ. ಆದ್ದರಿಂದ ಕರ್ನಾಟಕದೊಳಗಿನ ಮುಸಲ್ಮಾನ ಬಾಂಧವರು ಪಾಕಿಸ್ತಾನವಾದಿಗಳ ಬೆನ್ನು ಹಿಡಿಯುವದರಲ್ಲಿ ಏನೇನೂ ಸ್ವಾರಸ್ಯವಿಲ್ಲ. ಪಾಕಿಸ್ತಾನವು ಅವರಿಗೆ ತೀರ ಅನಿಷ್ಟಕಾರಿಯಾದುದು. ಮುಸಲ್ಮಾನ ಬಂಧುಗಳು ಆಳವಾಗಿ ಇದರ ವಿಚಾರ ಮಾಡಬೇಕು. ಯಾವ ಕ್ರಮದಿಂದ ತಮ್ಮ ಸ್ವಂತ ಕಲ್ಯಾಣವಾದೀತೆಂಬುದನ್ನು ಅವರು ಕಂಡು ಹಿಡಿಯಬೇಕು. ಹಾಗೆ ಅವರು ವಿಚಾರ ಮಾಡಿದಲ್ಲಿ ಪಾಕಿಸ್ತಾನವಾದಿಗಳಿಗೆ ತಮ್ಮ ಮತ ಕೊಡತಕ್ಕದ್ದಲ್ಲವೆಂದೂ ಪಾಕಿಸ್ತಾನವಿರೋಧಿ ಮತ್ತು ಕೊಂಗ್ರೆಸ [illegible] ಹುರಿಯಾಳುಗಳಿಗೇ ತಮ್ಮ ಮತಗಳನ್ನು ಕೊಡತಕ್ಕದ್ದೆಂದೂ ಅವರಿಗೆ ತಂತಾನೇ ತಿಳಿಯುವಂತಿದೆ.

ಸ್ಥಳಿಕ ವಿಷಯಗಳು.

ಲೇಖಕ.— ಸ್ಥಳವಂತಿಕ

ಜವಳಿ ನಿಯಂತ್ರಣದಲ್ಲಿ ಕ್ರಮವುಂಟು, ವಿಕ್ರಮವೂ ಉಂಟು. ನಿರ್ಧರಿಸಿದ ಪ್ರಮಾಣದಲ್ಲಿ ಗಿರಣಿಯವರು ಜವಳಿ ತಯಾರಿಸತಕ್ಕದ್ದು. ಅದನ್ನು ಗಿರಾಕಿಗಳು ಒಯ್ಯಬೇಕೆಂಬ ಕಟ್ಟುನಿಟ್ಟು ಇಲ್ಲ. ತಮಗಿಷ್ಟವಿದ್ದ ಜವಳಿ ದೊರೆತರೆ ಇಷ್ಟವಿದ್ದಷ್ಟನ್ನು ಗಿರಾಕಿಗಳು ಒಯ್ಯಬಹುದು. ಎಲ್ಲ ನಿಯಂತ್ರಣ ವರ್ತಕರ ಮೇಲೆ. ಗಿರಣಿಗಳಲ್ಲಿ (೧) ಅತ್ಯುತ್ತಮ (superfine) (೨) ಉತ್ತಮ (fine) ಮತ್ತು (೩) ಒರಟು (coarse) ಹೀಗೆ ಮೂರು ಬಗೆಯ ಜವಳಿ ತಯಾರಾಗುತ್ತಿದೆ. ಅತ್ಯುತ್ತಮ ತರಗತಿಯದು ನೂರಕ್ಕೆ ೬ರಷ್ಟು, ಉತ್ತಮ ತರಗತಿಯದು ನೂರಕ್ಕೆ ೧೧, ಮತ್ತು ಒರಟು ೮೩ರಷ್ಟು ಹೀಗೆ ಪ್ರಮಾಣಬದ್ಧವಾಗಿ ಜವಳಿ ತಯಾರಾಗುತ್ತಿದೆ. ಈ ಜವಳಿಯನ್ನು ತಮ್ಮ ತಮ್ಮ ಜಿಲ್ಹೆಯ ಜನಸಂಖ್ಯೆ ಮತ್ತು ಸ್ಥಿತಿಗತಿಗಳ ವಿಚಾರದಿಂದ ಆಯಾ ಜಿಲ್ಹಾಧಿಕಾರಿಗಳು ತರಿಸಿಕೊಳ್ಳಬೇಕು. ಮುಂಬಯಿಯ ಕಡೆಯಲ್ಲಿ ತಲಾ ೩೦ ಗಜ ಅರಿವೆಯಂತೆ ಜವಳಿಯ ಖರೇದಿಯಾಗಿದೆ. ನಮ್ಮ ಜಿಲ್ಹೆಯೊಳಗೆ ತಲಾ ೧೦ ಗಜದಂತೆ ಗಣಿತ ಹಾಕಿ ಖರೇದಿಯಾಗಿದೆ. ನಮ್ಮ ಜಿಲ್ಹೆ ಬಡ ಜಿಲ್ಹೆ, ತೀರ ಬಡವರ ಜಿಲ್ಹೆ. ಜಿಲ್ಹೆಯಲ್ಲಿ ಪಟ್ಟಣಗರು ಕಡಿಮೆ, ಹಳ್ಳಿಗರೇ ಹೆಚ್ಚು. ಒಳೇ ಕಚ್ಚೆಯುಟ್ಟು ನಿರ್ವಾಹ ಮಾಡುವವರು ಅಸಂಖ್ಯರಿದ್ದಾರೆ. ಮೇಲಾಗಿ ಕೈಮಗ್ಗದ ಅರಿವೆ ಉಪಯೋಗಿಸುವವರು ಹೆಚ್ಚು. ಸೀರೆ, ಪಂಜಿ, ಧೋತರ ಮೊದಲಾದ ಕೈಮಗ್ಗದ ಜವಳಿಗೆ ಹೆಚ್ಚಿನ ಗಿರಾಕಿಯುಂಟು. ಜಿಲ್ಹಾಧಿಕಾರಿಗಳು ಈ ವಿಚಾರ ಗ್ರಹಿಸಲಿಲ್ಲ, ವರ್ತಕರಿಗೂ ಕೇಳಲಿಲ್ಲ. ಇಂತಿಷ್ಟು ಜವಳಿ ಗಂಟು ಈ ಜಿಲ್ಹೆಗೆ ಬೇಕೆಂದು ತಮ್ಮಷ್ಟಕ್ಕೇ ನಿರ್ಧರಿಸಿದರು! ಜಿಲ್ಹೆಯ ಜನರಿಗೆ ಎಷ್ಟು ಜವಳಿ ಬೇಕು, ಎಷ್ಟು ಮಾರಾಟವಾದೀತು ಎಂಬುದರ ವಿಚಾರ ಕೋಶವರ್ತಕರಿಂದ ಮಾಡಲಿಲ್ಲ. ಆ ವಿಚಾರ ಮಾಡುವ ಅಗತ್ಯವೂ ಅವರಿಗಿರಲಿಲ್ಲ. ಬಂದ ಜವಳಿಯ ಗುಣ-ದೋಷಗಳ ಚಿಂತೆ ಮಾಡದೆ, ಜಿಲ್ಹಾಧಿಕಾರಿ ಹುಕುಮಿನಂತೆ,

(೩ನೇ ಪೃಷ್ಠದ ಮೇಲೆ ಮುಂದರಿಸಿದೆ)

ಹಿಂದುಸ್ಥಾನಿ ಪಾಠಗಳು.

ದಕ್ಷಿಣ ಭಾರತದಲ್ಲಿ ಹಿಂದೀ ರಾಷ್ಟ್ರಭಾಷೆಯನ್ನು ಪ್ರಚುರಗೊಳಿಸಲು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ (ತ್ಯಾಗರಾಯನಗರ, ಮದ್ರಾಸ) ಯವರು ಕಳೆದ ೨೫ ವರ್ಷಗಳಿಂದ ನಡಿಸುವ ಪ್ರಯತ್ನ ಜನಜನಿತವಿದೆ. ಆ ಸಂಸ್ಥೆಯ ಬೆಳ್ಳಿ ಹಬ್ಬ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಇನ್ನೆರಡು ತಿಂಗಳಲ್ಲಿ ಮದ್ರಾಸದೊಳಗೆ ಜರುಗಲಿದೆ. ಇಂತಹ ಮಂಗಲ ಸಮಯದಲ್ಲಿ ಹಿಂದುಸ್ಥಾನಿ ಭಾಷೆಯ ಪರಿಚಯ ಪತ್ರಿಕೆಗಳ ದ್ವಾರಾ ಸಾರ್ವಜನಿಕರಿಗೆ ಮಾಡಿಕೊಡಬೇಕೆಂದು ಸಭೆಯವರು ಆ ಭಾಷೆಯ [illegible] ಪ್ರಾಥಮಿಕ ಪಾಠಗಳನ್ನು ತಯಾರಿಸಿ ಕಳಿಸಿದ್ದಾರೆ. ರಾಷ್ಟ್ರಭಾಷೆಯ ಸಣ್ಣ ಪರಿಚಯವು ಸಮಸ್ತ ಹಿಂದೀಯರಿಗೆ ಆಗಬೇಕಾದದ್ದು ಉಚಿತ ಹಾಗೂ ಅಗತ್ಯವಿರುವದರಿಂದ ನಾವು ಆ ಪಾಠಗಳನ್ನು ಕ್ರಮಶಃ 'ವೃತ್ತ'ದಲ್ಲಿ ಪ್ರಕಟಿಸಲು ಯೋಜಿಸಿದ್ದೇವೆ. ಓದುಗರು ಅವುಗಳನ್ನು ಅಭ್ಯಾಸ ಮಾಡಬೇಕಾಗಿ ಬಿನ್ನಹವಿದೆ.

ಈ ಕೆಳಗೆ ಪ್ರತಿಯೊಂದು ಪಾಠದಲ್ಲಿ ಮೊದಲು ಹಿಂದುಸ್ಥಾನಿ ವಾಕ್ಯಗಳನ್ನು ಕೊಟ್ಟು ಆ ವಾಕ್ಯಗಳ ಮುಂದೆ ಮೇಲೆ ಕಂಸಗಳಲ್ಲಿ ಅದರ ಕನ್ನಡ ಅನುವಾದವನ್ನು ಕೊಟ್ಟಿದ್ದೇವೆ.

ಸಬಕ ಏಕ (ಪಾಠ ೧)

ಯಹ ಕೌನ ಹೈ? (ಇವನು ಯಾರು?) ಯಹ ಏಕ ಲಡಕಾ ಹೈ (ಇವನೊಬ್ಬ ಹುಡುಗನು) ಉಸಕಾ ನಾಮ ಕ್ಯಾ ಹೈ? (ಇವನ ಹೆಸರು ಏನು?), ಉಸಕಾ ನಾಮ ರಾಮ ಹೈ (ಇವನ ಹೆಸರು ರಾಮ) ವಹ ಕೌನ ಹೈ? (ಅವನು ಯಾರು?) ವಹ ಗೋಪಾಲ ಹೈ (ಅವನು ಗೋಪಾಲ) ಗೋಪಾಲ ರಾಮಕಾ ಕೌನ ಹೈ? (ಗೋಪಾಲನು ರಾಮನಿಗೆ ಏನಾಗಬೇಕು?) ಗೋಪಾಲ ರಾಮಕಾ ಭಾಈ ಹೈ (ಗೋಪಾಲನು ರಾಮನ ಸಹೋದರನು) ರಾಘವಭೀ ಉಸಕಾ ಭಾಈ ಹೈ (ರಾಘವನೂ ಕೂಡ ರಾಮನ ಸಹೋದರ) ರಾಮ, ಗೋಪಾಲ ಔರ ರಾಘವ ಕಹಾಂ ಹೈ? (ರಾಮ, ಗೋಪಾಲ ಮತ್ತು ರಾಘವ ಎಲ್ಲಿದ್ದಾರೆ?) ವೇ ಯಹಾಂ ಮಕಾನಮೇ ಹೈಂ (ಅವರು ಇಲ್ಲಿ ಮನೆಯಲ್ಲಿದ್ದಾರೆ) ತುಮ ಕೌನ ಹೋ? (ನೀನು ಯಾರು?) ಮೈಂ ಯುಸಫ ಹೂಂ (ನಾನು ಯೂಸಫನು) ಸಯಾದ ತುಮ್ಹಾರಾ ಕೌನ ಹೈ? (ಸಯೀದನು ನಿನಗೇನಾಗಬೇಕು?) ಸಯಾದ ಮೇರಾ ಭಾಈ ಹೈ (ಸಯಾದ ನನ್ನ ಸಹೋದರ) ಮೇರಾ ನಾಮ ಕ್ಯಾ ಹೈ? (ನನ್ನ ಹೆಸರೇನು?) ಆಪಕಾ ನಾಮ ವಿಶ್ವನಾಥ ಹೈ (ತಮ್ಮ ಹೆಸರು ವಿಶ್ವನಾಥ) ಮೈ ಕೌನ ಹೂಂ? (ನಾನು ಯಾರು?) ಆಪ ಹಮಾರೇ ಉಸ್ತಾದ ಹೈಂ (ತಾವು ನಮ್ಮ ಗುರುಗಳು)

ಸಬಕ ದೋ (ಪಾಠ ೨)

ವಹ ರಾಮ ಹೈ (ಅವನು ರಾಮ) ರಾಮ ಪಢತಾ ಹೈ (ರಾಮನು ಓದುತ್ತಾನೆ,) ವಹ ಸವೇರೇ ಛೇ ಬಜೇ ಜಾಗತಾ ಹೈ (ಅವನು ಬೆಳಿಗ್ಗೆ ೬ ಬಡಿಯುವಾಗ ಏಳುತ್ತಾನೆ) ವಹ ಠಂಡೇ ಪಾನೀಸೇಂ ನಹಾತಾ ಹೈ, (ಅವನು ತಣ್ಣೀರಿನಿಂದ ಜಳಕ ಮಾಡುತ್ತಾನೆ,) ಔರ ಈಶ್ವರಕೀ ಪ್ರಾರ್ಥನಾ ಕರತಾ ಹೈ (ಮತ್ತು ದೇವರ ಪ್ರಾರ್ಥನೆ ಮಾಡುತ್ತಾನೆ) ಸಾತ ಬಜೇ ವಹ ಕಾಫೀ ಪೀತಾ ಹೈ (ಏಳು ಬಡಿಯುವಾಗ ಆತ ಕಾಫಿ ಕುಡಿಯುತ್ತಾನೆ) ಸಾತ ಬಜೇಸೇ ನೌ ಬಜೇತಕ ಸ್ಕೂಲಕಾ ಕಾಮ ಕರತಾ ಹೈ (ಏಳು ಘಂಟೆಯಿಂದ ಒಂಭತ್ತು ಘಂಟೆಯ ವರೆಗೆ ಶಾಲೆಯ ಕೆಲಸ ಮಾಡುತ್ತಾನೆ) ನೌ ಬಜೇ ಖಾನಾ ಖಾತಾ ಹೈ (ಒಂಭತ್ತು ಘಂಟೆಗೆ ಊಟ ಮಾಡುತ್ತಾನೆ) ವಹ ಜಲದೀ ಜಲದೀ ನಹೀ ಖಾತಾ, (ಅವನು ಬೇಗ ಬೇಗ ಉಣ್ಣುವದಿಲ್ಲ,) ಆಹಿಸ್ತೆ ಆಹಿಸ್ತೇ ಖಾತಾ ಹೈ (ನಿಧಾನವಾಗಿ ಉಣ್ಣುತ್ತಾನೆ) ಉಸಕೇ ಸಾಥ ಉಸಕೀ ಬಹನಭೀ ಖಾತೀ ಹೈ (ಅವನ ಜೊತೆಗೆ ಅವನ ಸಹೋದರಿಯೂ ಉಣ್ಣುತ್ತಾಳೆ) ವಹ ಮಹಾರಾಣೀ ಕಾಲೇಜ ಮೇಂ ಪಢತೀ ಹೈ (ಅವಳು ಮಹಾರಾಣಿ ಕಾಲೇಜಿನಲ್ಲಿ ಕಲಿಯುತ್ತಾಳೆ) ದೋನೋಂ ದಸ ಬಜೇ ಕಾಲೇಜ ಜಾತೇ ಹೈ (ಇಬ್ಬರೂ ಹತ್ತು ಗಂಟೆಗೆ ಕಾಲೇಜಿಗೆ ಹೋಗುತ್ತಾರೆ) ಶಾಮಕೋ ಪಾಂಚ ಬಜೆ ವೇ ವಾಪಸ ಆತೇ ಹೈಂ (ಸಂಜೆ ಐದಕ್ಕೆ ಅವರು ತಿರುಗಿ ಬರುತ್ತಾರೆ) ರಾಮ ಶಾಮಕೋ ಫುಟಬೊಲ ಖೇಲತಾ ಹೈ (ರಾಮನು ಸಂಜೆ ಫುಟಬೊಲ ಆಡುತ್ತಾನೆ) ಉಸಕೀ ಬಹನ ಟೆನಿಸ ಖೇಲತೀ ಹೈ (ಅವನ ಸಹೋದರಿ ಟೆನಿಸ ಆಡುತ್ತಾಳೆ) ವೇ ರಾತಕೋ ಸವಾ ಸಾತ ಬಜೇ ಖಾನಾ ಖಾತೇ ಹೈಂ (ಅವರು ರಾತ್ರಿ ಏಳೂಕಾಲು ಗಂಟೆಗೆ ಊಟ ಮಾಡುತ್ತಾರೆ) ಅಹಮದ ರಾಮಕಾ ದೋಸ್ತ ಹೈ (ಅಹಮದನು ರಾಮನ ಗೆಳೆಯ) ವಹ ರಾಮಕೇ ಸಾಥ ಪಢತಾ ಹೈ (ಅವನು ರಾಮನ ಜೊತೆಯಲ್ಲಿ ಓದುತ್ತಾನೆ) ವಹ ರಾಮಕೇ ಘರಕೇ ಪಾಸ ರಹತಾ ಹೈ (ಅವನು ರಾಮನ ಮನೆಯ ಹತ್ತರ ಇರುತ್ತಾನೆ)

ಹೊನ್ನಾವರ ಹವ್ಯಕ ಕೊ-ಒಪರೇಟಿವ್ಹ ಬೇಂಕ, ಲಿ., ಹೊನ್ನಾವರ.

ನೋಟೀಸು.

ಈ ಬೇಂಕಿನ ಯಾವತ್ತೂ ಮೆಂಬರರಿಗೆ ತಿಳಿಸುವದೇನಂದರೆ— ಹೊನ್ನಾವರ ತಾಲೂಕ (ಭಟ್ಕಳ ಪೇಟಾ ಸಹಿತ), ಹವ್ಯಕ [illegible] ಬೇಂಕಿನ ೧೯೪೪-೪೫ನೇ ಸಾಲಿನ ಬಗ್ಗೆ ಈ ಬೇಂಕಿನ ಪ್ರೆಸಿಡೆಂಟರಾದ ಶ್ರೀಯುತ ಪರಮೇಶ್ವರ ಗಣೇಶರಾವ ಕರ್ಕಿ ಇವರು ಮೃತಪಟ್ಟಿದ್ದರಿಂದ ಸದ್ರಿ ಜಾಗಾ ತುಂಬಿಕೊಂಡು ಕೆಲಸ ನಡಿಸುವದೇ ಬಹಳ ಅಗತ್ಯವಿರುವದರಿಂದ ಪ್ರೆಸಿಡೆಂಟ ಜಾಗ್ಗೆ ನೋಮಿನೇಶನ್ ಕೊಡತಕ್ಕವರು ೫ ಖಾಲಿ ಬಿದ್ದ ಮೆನೇಜಿಂಗ ಕಮಿಟಿ ಮೆಂಬರ ಬಗ್ಗೆ ನೋಮಿನೇಶನ್ ಕೊಡತಕ್ಕವರು ತಾ ೧೫-೧೧-೧೯೪೫ರಿಂದ ತಾ ೨೫-೧೧-೧೯೪೫ರೊಳಗೆ ನೊಮಿನೇಶನ್ ಪೇಪರ ಬೇಂಕ ಆಫೀಸಿನಿಂದ ಪಡಕೊಂಡು ತಾ ೨೫-೧೧ ಆಖೇರೊಳಗೆ ನೊಮಿನೇಶನ ಪೇಪರ ಬೇಂಕ ಆಫೀಸಿಗೆ ಕೊಡತಕ್ಕದ್ದಿರುತ್ತದೆ. ಸದರಿ ನೋಮಿನೇಶನ್ ಪೇಪರ ಛಾನನಿ ತಾ ೨-೧೨-೧೯೪೫ನೇ ರವಿವಾರ ಬೆಳಗಿನ ೮ ಘಂಟೆಯಿಂದ ೧೧ ಘಂಟೆಯ ವರೆಗೆ ಮಧ್ಯಾನ್ಹ ೨ ಘಂಟೆಯಿಂದ ೫ ಘಂಟೆಯ ವರೆಗೆ ಮತಗಣನೆಯು ಸದ್ರಿ ದಿವಸ ೫॥ ಘಂಟೆಗೆ ಇಟ್ಟಿರುತ್ತದೆ.

ಸ್ಪೆಶಲ್ ಜನರಲ್ ಕಮಿಟಿಯಲ್ಲಿ ವಿಚಾರವಾಗತಕ್ಕ ವಿಷಯಗಳು—

ಸ್ಪೆಶಲ್ ಜನರಲ ಕಮಿಟಿಯನ್ನು ತಾ [illegible] ೧೯೪೫ನೇ ರವಿವಾರ ದಿವಸ ಮಧ್ಯಾನ್ಹ ೩ ಘಂಟೆಗೆ ಬೇಂಕಿನ ಆಫೀಸಿನ ಮಾಳಿಗೆಯ ಮೇಲೆ ಇಟ್ಟಿರುತ್ತದೆ. ಸದ್ರಿ ಸಭೆಗೆ ಯಾವತ್ತೂ ಮೆಂಬರರು ಬರಬೇಕಾಗಿ ವಿನಂತಿ. ಆ ದಿವಸ ಕೋರಂ ಆಗದಿದ್ದಲ್ಲಿ ಅದೇ ದಿವಸ ೫ ಘಂಟೆಯ ವರೆಗೆ ಸಭೆ ಮುಂದಿಟ್ಟು ಕೆಲಸ ನಡಿಸಲ್ಪಡುವದು.

ತಾ ೬-೧೦-೧೯೪೫ನೇ ದಿವಸ [illegible] ಕಮಿಟಿಯಲ್ಲಿ ಇಟ್ಟ ವಿಷಯಗಳನ್ನು ಕುರಿತು ವಿಚಾರ ಮಾಡುವದು

ಹೊನ್ನಾವರ,
ತಾ ೧೬-೧೧-೧೯೪೫

Venkatsubba G. Hegde,
ಮೆನೇಜಿಂಗ ಕಮಿಟಿ ಮೆಂಬರ

ಸ್ಥಳೀಕ ವಿಷಯಗಳು.

(೨ನೇ ಪುಟದಿಂದ ಮುಂದರಿಸಿದ್ದು)

ಠೋಕ ಅಂಗಡಿಕಾರರು ರೋಖು ಹಣ ಕೊಟ್ಟು ಅದನ್ನು ಗೂ ತೆಗೆದುಕೊಳ್ಳಲೇಬೇಕು. ಅಂಥ ವೇಳೆ ಜವಳಿ ಸ್ಥಾಯಿತೋ ಕಡಿಮೆಯಾಯಿತೋ ಎಂಬದರ ಕಡೆ ಲಕ್ಷ ಡುವ ಪ್ರಸಂಗ ಠೋಕ ವರ್ತಕರಿಗೆ ಬರುವದಿಲ್ಲ! ಅವ ಬಂಡವಲು ಮುಳುಗುವದಿಲ್ಲ, ಉದ್ರಿ ಕೊಡುವ ಪ್ರಸಂ ಗ ಬರುವದಿಲ್ಲ, ಗಿರಾಕಿ ಕಟ್ಟಿಟ್ಟದ್ದು, ಮೇಲೆ ಜಿಲ್ಹಾಧಿ ಬೆಂಬಲವುಂಟು. ಹೀಗೆ ಠೋಕ ವರ್ತಕರು ಸುರಕ್ಷಿತ ದರಿಂದ ಅಧಿಕಾರಿಗಳು ಹೇಳಿದಷ್ಟು ಜವಳಿ ತರಿಸಿ ಕಿರ ಳ ಅಂಗಡಿಕಾರರಿಗೆ ಅವರು ಹಂಚುತ್ತಾರೆ.

ಕಿರಕೋಳ ಅಂಗಡಿಕಾರರ ಅವಸ್ಥೆ ಈವಾಗ ಕಠಿಣ ಗಿದೆ. ಗಿರಾಕಿಗಳಿಗೆ ಒತ್ತಾಯ ಮಾಡಬಾರದೆಂಬ ನಿಯ ವುಂಟು. ಜನರಿಗೆ ಬೇಕಾದ ಅರಿವೆಯನ್ನು ಬೇಕಾದ ಯದಲ್ಲಿ ನಿಯಂತ್ರಿತ ದರದಿಂದ ಅಂಗಡಿಕಾರರು ರಬೇಕು, ಗಿರಣಿಯಿಂದ ಹೊರಬಿದ್ದ ೧ ವರ್ಷದೊಳಗೆ ರ ವಿಲೆಯಾಗಬೇಕೆಂದು ಮಾತ್ರ ನಿಯಮವಿದೆ. ಳ ವರ್ತಕರು ಕಿರಕೋಳ ಅಂಗಡಿಕಾರರಿಗೆ ಕಳ ಪೂರೈಸಿದ ಸಮಯ ಯಾವದೇ ಇದ್ದರೂ ೧ ವರ್ಷದ ಅವಧಿಯಲ್ಲಿ ವ್ಯತ್ಯಾಸವಾಗುವದಿಲ್ಲ! ಅತ್ಯುತ್ತಮ ತರ ಯ ಜವಳಿಗೆ ಗಿರಾಕಿ ಹೆಚ್ಚು. ಉತ್ತಮ ತರಗತಿಯ ಳಿಗೂ ಗಿರಾಕಿಯುಂಟು. ಆದರೆ ಈ ತರಗತಿಗಳ ಜವಳಿ ಡಿಗೆ ತಕ್ಕಷ್ಟು ಸಿಗುವದಿಲ್ಲ! ೩ನೇ ತರಗತಿಯ ಉರುಟು ಳಿಗೆ ಗಿರಾಕಿ ಬಹಳ ಕಡಿಮೆ. ಹೀಗಾಗಿ ಅಂಗಡಿಗಳಲ್ಲಿ ರುಟು ಜವಳಿ ಈವಾಗ ರಾಶಿಯಾಗಿ ಬಿದ್ದಿದೆ! ವ್ಯಾಪಾರ ವಹಾರದಲ್ಲಿ ನಿಶಕ್ತಿಗಿಂತ ಶಕ್ತಿಗೇ ಪ್ರಾಧಾನ್ಯ. ಶಕ್ತಿ ನ ದನಲು ಕೊಡಿಸಿ ನಿಶಕ್ತಿಯುಳ್ಳವರೂ ವ್ಯಾಪಾರ ಮಾಡು ರೆ. ಆದರೆ ನಿಯಂತ್ರಣ ರಾಜ್ಯದಲ್ಲಿ ಶಕ್ತಿಗೆ ಬೆಯಿಲ್ಲ! ರೋಖು ಹಣ ಎಣಿಸಿ ವ್ಯವಹಾರ ಮಾಡಬೇಕು' ಂಬುದುಳ್ಳಲೂ ಕೂಡ ಈ ಪದ್ಧತಿ ನಡೆಯುವದು ಕಠಿಣ ಗಿದೆ. ಮುಂಗಡ ಹಣ ಕಟ್ಟಿ ನೇಮಿಸಿದ ಅವಧಿಯಲ್ಲಿ ವಳಿಯನ್ನು ತೆಗೆದುಕೊಳ್ಳಬೇಕೆಂಬ ನೂತನ ನಿಯಮ ವನ್ನು ಪಾಲಿಸುವದು ಅಶಕ್ಯವೆಂದು ೨ ದಿನ ಮುಂಬಯಿಯ ಜವಳಿ ವರ್ತಕರು ಹರತಾಳ ಮಾಡಿದ್ದರು. ಈ ಜಿಲ್ಹೆಯೊ ಳಗಿನ ಕಿರಕೋಳ ಅಂಗಡಿಕಾರರು ಪರವಾನೆ ಪಡೆಯುವಾಗ ೧೦೦೦ ಠೇವಿಟ್ಟದ್ದುಂಟು. ಆ ಠೇವು ಸರಕಾರ ಜಮೆಯಾದೀತೆಂಬ ಭೀತಿಯಿಂದ ಉರುಟು ಜವಳಿ ರಾಶಿ ಶಿಯಾಗಿ ಬಿದ್ದಿದ್ದರೂ ಹಂಚುವಿಕೆಯಲ್ಲಿ ತಮ್ಮ ಲಿಗೆ ಹಾಕಿದಷ್ಟು ಜವಳಿಯನ್ನು ಅಂಗಡಿಕಾರರು ಕೊಂಡು ಕೊಂಡರು. ನಡುವೆ ಮೂರ್ನಾಲ್ಕು ತಿಂಗಳ ಜವಳಿಯನ್ನು ಠೋಕ ವರ್ತಕರು ತರಿಸಿದ್ದಿಲ್ಲ. ೧ ತಿಂಗಳ ಹಿಂದೆ ಅದು ಬಂತು. ಅದನ್ನು ಅಂಗಡಿಕಾರರು ಒಂದೇಗಂಟಿನಿಂದ ಕೊಂಡು ಕೊಳ್ಳಬೇಕಾಯಿತು. ತಿಂಗಳು ತಿಂಗಳಿಗೆ ಬರುವ ಜವಳಿಯನ್ನೂ ಕೊಂಡುಕೊಳ್ಳಬೇಕಾಗಿದೆ. ಅವರು ಈ ಕಿರಕೋಳ ಅಂಗಡಿಕಾರರ ಐವಜು ಮೊದಲೇ ನಿಶ್ಶಕ್ತಿಯುಳ್ಳದ್ದು. ಹಂಚಿ ಹಾಕಿದ ಎಲ್ಲ ಜವಳಿಯನ್ನು ಅವರು ಕೊಂಡುಕೊಳ್ಳುವದೆಂತು? ಠೇವಿಟ್ಟ ರೂ ೧೦೦೦ದ ಜತೆ ಹಿಡಿದರೆ ಕೊಟ್ಟ ಜವಳಿ ಕೊಂಡುಕೊಳ್ಳಲು ಬೇಕಾದ ೧೫ ೨೦ ಸಾವಿರ ರೂ ಅವರು ಕೂಡಿಸಲಾರರು. ಪರವಾನೆ ರದ್ದು ಪಡಿಸಲಾದೀತು, ಠೇವು ಸರಕಾರ ಜಮಾ ಮಾಡಲಾದೀತು. ಈ ಆಪತ್ತು ತಪ್ಪಬಾರದೆಂದು ನಿಮ್ಮ ಇಚ್ಛೆಯಿದ್ದರೆ ಠೋಕ ವರ್ತಕರು ನಿಮಗಾಗಿ ತೆಗೆದಿಟ್ಟ ಜವಳಿಯನ್ನು ೧ ವಾರದೊಳಗೆ ಒಯ್ಯತಕ್ಕದ್ದು, ಎಂದು ಮುಂತಾಗಿ ನಿಯಂತ್ರಣಸೂತ್ರದಾಜ್ಞೆಗಳು ಕಚೇರಿಯಿಂದ ಹೊರಡುತ್ತವೆ! ಇತ್ತ ಗಿರಾಕಿಗಳು ಜವಳಿಯನ್ನು ಕೊಂಡುಕೊಳ್ಳುವದಿಲ್ಲ. ಅತ್ತ ಧನಸಂಚಕರ ಕೈ ಕಾಲು ಹಿಡಿದರೂ ಹಣ ಒದಗುವದಿಲ್ಲ'. ಕುಬೇರನು ಕೂಡ ಈ ನಿಯಂತ್ರಣ ರಾಜ್ಯದಲ್ಲಿ ತಿರುಕನಾಗಿ ಬೇಡುಂಬುವ ಪ್ರಸಂಗ! ಇದರೊಳಗಿಂದ ಸುರಕ್ಷಿತ ಪಾರಾಗುವ ಹಾದಿ ಕಾಣದೆ ಕಿರಕೋಳ ಅಂಗಡಿಕಾರರು ಪೇಚಾಡುತ್ತಿದ್ದಾರೆ! ಠೇವಿನ ಹಣ ಉಳಿಸಿಕೊಳ್ಳುವ ಉಪಾಯ ಅವರಿಗೆ ಕಾಣುವದಿಲ್ಲ! ಗಿರಣಿಗಳಲ್ಲಿ ಜವಳಿ ವಿಪುಲವಿರುವದೆಂದು ಗಿರಣಿ ಒಡೆಯರು ಜಾಹೀರಾತು ಹೊರಡಿಸಿದ್ದಾರೆ. ಅದರಿಂದ ಮುಂಬಯಿ ಪೇಟೆಯಲ್ಲಿ ಜವಳಿಯ ಕೊರತೆ ಇರುವದಿಲ್ಲೆಂಬ ಭಾವನೆಯುಂಟಾಗಿದೆ. ಹತ್ತಿಯ ದರ ಇಳಿಯತೊಡಗಿದ್ದರಿಂದ ಜವಳಿಯ ದರವೂ ಇಳಿಯತೊಡಗಿದೆ. ನಿಯಂತ್ರಣಾಧಿಕಾರಿಗಳು ಜವಳಿಯ ದರ ಇಳಿಸುವ ಆಜ್ಞೆಗಳನ್ನು ಹೊರಡಿಸತೊಡಗಿದ್ದಾರೆ. ಹೀಗೆ ದರ ಇಳಿದಲ್ಲಿ ಬಿದ್ದ ಜವಳಿಯ ಮೇಲೆ ಎಷ್ಟು ನಷ್ಟ ಬರಬಹುದೆಂಬುದರ ನೆಲೆ ಕಿರಕೋಳ ಅಂಗಡಿಕಾರರಿಗೆ ಹತ್ತುವದಿಲ್ಲ. ಈಗ ಎಲ್ಲೆಲ್ಲೂ ಇದೇ ಗದ್ದಲ. ಇಡೀ ಪ್ರಾಂತದ ಜವಳಿ ವರ್ತಕರು ತಮ್ಮ ಸಂಘ ಮಾಡಿಕೊಂಡು ಸರಕಾರಕ್ಕೆ ಅರಿಕೆ ಮಾಡುತ್ತಿದ್ದಾರೆ. ಯುದ್ಧ ನಿಂತಿದ್ದರಿಂದ ಈಗ ವಿದೇಶದಿಂದ ನಯವಾದ ಬಟ್ಟೆ ಬರಲು ಅವಕಾಶವುಂಟು. ಆದರೂ ಅಧಿಕಾರಿಗಳ ದೃಷ್ಟಿಯಲ್ಲಿ ಜವಳಿಯ ಕೊರತೆಯುಂಟು! ಬೇಕೆಷ್ಟು ಜವಳಿ ಉಂಟೆಂದು ಮುಂಬಯಿಯ ಗಿರಣಿ-ಒಡೆಯರು ಮಾಡಿದ ವಿಧಾನವನ್ನು ಅಂಕಿ-ಸಂಖ್ಯೆಗಳಿಂದ ಸಿದ್ಧಪಡಿಸಬೇಕಾಗಿ ಜವಳಿ ನಿಯಂತ್ರಣಾಧಿಕಾರಿಗಳು ಹುಕುಮು ಹೊರಡಿಸಿದ್ದಾರೆ! ಜವಳಿ ವಿಪುಲವಿರುವದೆಂಬ ಮಾತು ನಿಯಂತ್ರಣಾಧಿಕಾರಿಗಳಿಗೆ ಮಾನ್ಯವಿಲ್ಲ! ಇದರೊಳಗೆ ಏನೋ ರಾಜಕಾರಣವುಂಟೆಂದು ಹೇಳುತ್ತಾರೆ. ವಿದೇಶಗಳಿಂದ ನಯಬಟ್ಟೆ ತರಿಸುವ ಇಚ್ಛೆ ಸರಕಾರಕ್ಕೆ ಇರಬಹುದು. ಆ ಬಟ್ಟೆ ಬಂದು ಸೇರಿದರೆ ಮುಂದೆ ಉರುಟು ಬಟ್ಟೆ ಮೂಸಿ ನೋಡುವವರು ಸಿಗಲಾರರು. ಈಗ ಬಿದ್ದ ಬೀಳುವ ಉರುಟು ಬಟ್ಟೆ ಅಂಗಡಿಯಲ್ಲೇ ಲಡ್ಡಾಗುವ ಪ್ರಸಂಗವುಂಟು.

* * *

ಶ್ರೀ|| ಸಣ್ಣಪ್ಪ ಪರಮೇಶ್ವರ ಗಾಂವಕಾರರು ಕರ್ನಾಟಕದೊಳಗೆ ಖ್ಯಾತಿಗೊಂಡ ಮಹಾನುಭಾವರು. ಇಂಥವರು ಚುನಾವಣೆಯ ಜಂಜಾಳದಲ್ಲಿ ಸೇರುವದು ಆಶ್ಚರ್ಯ. ಗಾಂವಕಾರರು ನಿಸ್ಸ್ವಾರ್ಥರು, ನಿರ್ಮಲರು. ಜನಸೇವೆಯೇ ಇವರ ಧ್ಯೇಯ. ಈಗ ಅವರದು ಅಪರ ವಯಸ್ಸು. ಆದರೂ ಹರಿಜನರಿಗೂ ದಲಿತರಿಗೂ ಶಿಕ್ಷಣ ಕೊಡುವದಕ್ಕಾಗಿ ಪ್ರಯತ್ನಪಡುತ್ತಿದ್ದಾರೆ. ಯಾವ ಬೇಕಾದವನಿಗೆ ಸಹಾಯ ಮಾಡಲು ಯಾವಾಗಲೂ ಅವರು ತತ್ಪರರು. ಇವರಲ್ಲಿ ಭೇದಭಾವವಿಲ್ಲ, ಜಾತಿಮಾತ್ಸರ್ಯವಿಲ್ಲ. ಎಲ್ಲರೂ ನನ್ನವರೆಂದು ಎಣಿಸಿ ಕೈಲಾದಷ್ಟು ಸಹಾಯ ನೀಡುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಇವರು ಬಹಳ ದುಡಿದಿದ್ದಾರೆ. ಅಧಿಕಾರದ ಗರ್ವ ಹಿಡಿಯದೆ ವಿನಯದಿಂದಲೂ ಪ್ರೀತಿಯಿಂದಲೂ ಇವರು ನಿಖಿಲ ಕರ್ನಾಟಕದಲ್ಲಿ ಶಿಕ್ಷಣಕಾರ್ಯ ನಡಿಸಿ ನಮ್ಮ ಜಿಲ್ಹೆಗೆ ಮರಳಿಬಂದು ನೆಲೆಸಿರುತ್ತಾರೆ. ಲೋಕಲ್ ಬೋರ್ಡಿನಲ್ಲಿ ಮೊನ್ನೆ ಇವರು ಸದಸ್ಯರಾಗಿ ಆರಿಸಿ ಬಂದ ಬಳಿಕ ಇವರೇ ಸರ್ವಾನುಮತಿಯಿಂದ ಅಧ್ಯಕ್ಷರಾಗುವರೆಂದು ಎಲ್ಲರ ಊಹೆಯಾಗಿತ್ತು. ಆದರೆ ಕಳೆದ ಸೋಮವಾರ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಒಂದು ಮತ ಕಡಿಮೆಯಾಗಿ ಇವರು ಅಧ್ಯಕ್ಷರಾಗಲಿಲ್ಲ. ಸ್ವಜನರ ಯೋಗ್ಯತೆಯನ್ನು ಗ್ರಹಿಸುವ ಪಾತ್ರತೆ ಈ ಜಿಲ್ಹೆಯವರಲ್ಲಿಲ್ಲವೆಂದು ಈ ಸಂಗತಿಯಿಂದ ಹೊರನಾಡಿನಲ್ಲಿ ಅಪಖ್ಯಾತಿಯಾಗುವದು ಖಂಡಿತ. ಮಾಣಿಕದ ಬೆಲೆ ಮಂಗನಿಗೇನು ಗೊತ್ತು? ಎಂಬಂತೆ ಲೋಕಲ್ ಬೋರ್ಡಿನ ಸಭಾಸದರು ವರ್ತಿಸಿದ್ದಾರೆ. ಶ್ರೀ|| ಸಣ್ಣಪ್ಪ ಗಾಂವಕಾರರು ಚುನಾವಣೆಯ ಪೂರ್ವದಲ್ಲಿ ಒಂದು ಚಿಕ್ಕ ಭಾಷಣ ಮಾಡಿ ತಾವು ಒಂದು ದೂರದೃಷ್ಟಿ ಹಿಡಿದು ಬೋರ್ಡಿನೊಳಗೆ ಸೇರಿದ್ದೇನೆಂದು ಹೇಳಿದ ಮಾತಿನ ಮರ್ಮವನ್ನೂ ಬೆಲೆಯನ್ನೂ ಉಳಿದ ಸದಸ್ಯರು ಗ್ರಹಿಸಲಿಲ್ಲ. ಯಾರೋ ಮುಂದಾಳಿಯು ಮನೆ ಮಾರು ಬಿಟ್ಟು ದೇಶಾಂತರಕ್ಕೆ ಹೋಗುತ್ತಾನೆಂಬ ಪೊಳ್ಳು ಬೆದರಿಕೆಗೆ ಬಲಿ ಕೊಟ್ಟು ಓರ್ವ ಸದಸ್ಯನು ಶ್ರೀ|| ಗಾಂವಕಾರರ ವಿರುದ್ಧ ಮತ ಕೊಟ್ಟನಂತೆ! ಅದೇ ನಿರ್ಣಯಾತ್ಮಕವಾಯಿತು!! ಶ್ರೀ|| ಗಾಂವಕಾರರು ಅಧಿಕಾರಲೋಲುಪರಲ್ಲ. ಅಧ್ಯಕ್ಷಸ್ಥಾನ ಸಿಗದ ಬಗ್ಗೆ ವ್ಯಸನಪಡುವವರೂ ಅಲ್ಲ. ಜಿಲ್ಹೆಯ ಶಿಕ್ಷಣ ಕ್ಷೇತ್ರದಲ್ಲಿ ಶ್ರೀ|| ಗಾಂವಕಾರರಿಂದ ಆಗಬಹುದಾದ ಅಮೂಲ್ಯಸೇವೆಗೂ ಸುಧಾರಣೆಗೂ ಅವಕಾಶ ಮಾಡಿಕೊಡದೆ ತಾವು ಜಿಲ್ಹೆಯ ಜನರನ್ನು ವಂಚಿಸಿದೆವೆಂದು ಬೋರ್ಡಿನ ಸದಸ್ಯರು ಮಾತ್ರ ನಾಚಿಕೆಪಡಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— ಹವೆ ವಿಚಿತ್ರವಾಗಿದೆ. ಕಳೆದ ಬುಧವಾರ ರಾತ್ರಿ ಜಲೋ ಮಳೆ ಸುರಿಯಿತು. ಆ ನಂತರವೂ ಒಮ್ಮೊಮ್ಮೆ ಮೋಡಗಳಾಗಿ ಮಳೆಯಾಗುತ್ತದೆಂಬಂತೆ ಭಾಸವಾಗುತ್ತಿದೆ. ನಡುವೆ ಚಳಿಯೂ ಬೀಳುತ್ತಿದೆ! ಒಮ್ಮೊಮ್ಮೆ ಸೆಕೆಯೂ ಉರಿಯುತ್ತಿದೆ.

ಶ್ರೀಮದ್-ದ್ವಾರಕಾನಾಥ ತೀರ್ಥ ಗುರುಗಳ ಮುಕ್ಕಾಂ ಇಲ್ಲಿರುವಾಗಲೇ ಶ್ರೀವೆಂಕಟರಮಣದೇವರ ಶಿಖರದೀಪೋತ್ಸವ ನೆರವೇರಿಸತಕ್ಕದ್ದೆಂದು ಭಕ್ತರ ಸಂಕಲ್ಪವಾದಂತೆ, ಸದರಿ ದೀಪೋತ್ಸವದ ಉತ್ಸವ ಇದೇ ಬರುವ ವದ್ಯ ೩ಯಾ ಗುರುವಾರ ಸಂಜೆ ಜರಗುವದು.

ಕಳೆದ ವಾರ ತಿಳಿಸಿದಂತೆ ಬೆಂಗಳೂರಿನ ಪ್ರಸಿದ್ಧ ಸಾಹಿತ್ಯ ಸೇವಕ ಶ್ರೀ|| ಜಿ ಪಿ ರಾಜರತ್ನಂ ಇವರು ಮಂಗಳವಾರ ಇಲ್ಲಿಗೆ ಬಂದಿದ್ದರು. ಸಂಜೆಯ ಕಡೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಅವರ ವ್ಯಾಖ್ಯಾನವಾಯಿತು. ಕರ್ನಾಟಕದಲ್ಲೆಲ್ಲ ಕರ್ನಾಟಕ ಸಂಘಗಳನ್ನು ಸ್ಥಾಪಿಸಿ, ಕರ್ನಾಟಕದ ಬೇರೆ ಬೇರೆ ಭಾಗಗಳೊಳಗೆ ಸಹಕಾರ ಮತ್ತು ಐಕ್ಯಭಾವನೆಯನ್ನುಂಟು ಮಾಡಬೇಕೆಂದೂ ಹಾಗೆ ಮಾಡಿದರೆ ಮಾತ್ರ ಕರ್ನಾಟಕವು ಒಂದು ಪುಷ್ಟ ಅಂಗವಾಗಿ ಸ್ವತಂತ್ರ-ಭಾರತದ ನಿರ್ಮಾಣಕ್ಕೆ ಸಹಾಯ ಮಾಡಬಲ್ಲದೆಂದೂ ಶ್ರೀಯುತರು ತಮ್ಮ ಓಜಸ್ವಿ ಭಾಷಣದಲ್ಲಿ ಹೃದಯಂಗಮವಾಗಿ ಪ್ರತಿಪಾದಿಸಿದರು. ಭಾಷಣ ಮುಗಿದ ಮೇಲೆ ಸಭಿಕರ ಅಪೇಕ್ಷೆಯನ್ನು ಮನ್ನಿಸಿ ಅವರು ತಮ್ಮ ಅತ್ಯುತ್ತಮ ಕೃತಿಗಳಲ್ಲಿ ಒಂದಾದ "ಹೆಂಡಗುಡುಕ ರತ್ನ" ಎಂಬ ಜಾನಪದ ಭಾಷೆಯ ಕಾವ್ಯದೊಳಗಿನ ಕೆಲವೊಂದು ಭಾಗಗಳನ್ನು ಸುರಸವಾಗಿ ಓದಿ ತೋರಿಸಿದರು. ಸಭಾಧ್ಯಕ್ಷ ರಾ|| ಎಸ್ ವ್ಹಿ ಪಂಡಿತರು ಅತಿಥಿಗಳ ಆಭಾರಮನ್ನಣೆ ಮಾಡಿದ ಮೇಲೆ ಸಭೆಯು ವಿಸರ್ಜನೆಯಾಯಿತು. ರಾಜರತ್ನಂರವರು ಅಂದೇ ರಾತ್ರಿ ಗೋಕರ್ಣಕ್ಕೆ ತೆರಳಿದರು.

ಹೊಸ ಭತ್ತ-ಅಕ್ಕಿಗಳ ಧಾರಣೆ ಇನ್ನೂ ನಿಶ್ಚಿತವಾಗಿ ಪ್ರಕಟವಾಗಿಲ್ಲ. ಅದು ಇಳಿಯುವದೆಂದು ಒಮ್ಮೆ ವಾರ್ತೆ ಕೇಳಿಬಂದರೆ, ಇಳಿಯುವದಿಲ್ಲವೆಂದು ಇನ್ನೊಮ್ಮೆ ಸುದ್ದಿ ಬರುತ್ತಿದೆ. ನಮ್ಮ ಜಿಲ್ಹಾಧಿಪರು ಧಾರಣೆಯನ್ನು ಇಳಿಸಬೇಕೆಂಬ ಪಕ್ಷದವರಿರುತ್ತಾರೆಂತಲೂ ಆದರೆ ದಕ್ಷಿಣ ಭಾಗದ ಇನ್ನಿತರ ಜಿಲ್ಹಾಧಿಕಾರಿಗಳು ಧಾನ್ಯದವಸ್ತುಗಳ (ನಿಯಂತ್ರಿತ) ದರಗಳನ್ನಿಳಿಸಲು ವಿರೋಧ ಮಾಡುತ್ತಾರೆಂತಲೂ ಹಿಂದೊಮ್ಮೆ ವಾರ್ತೆಯಾಯಿತು. ಅಕ್ಕಿಯ ದರ ಇಳಿಸಬೇಕಾಗಿ ಪ್ರಾಂತಾಧಿಕಾರಿಗಳು ಸ್ಪಷ್ಟ ಸೂಚನೆ ಕೊಟ್ಟಿದ್ದಾರೆಂದೂ ಇನ್ನೊಂದು ವಾರ್ತೆ. ಸಯಾಂ, ಬ್ರಹ್ಮದೇಶ, ಮಲಾಯಾಗಳಿಂದ ೧,೬೦,೦೦೦ ಟನ್ನ ಅಂದರೆ ೪ ೬೦ ೦೦೦ ಖಂಡಿಗಳಷ್ಟು ಅಕ್ಕಿ ಈ ವರ್ಷ ಹಿಂದುಸ್ಥಾನಕ್ಕೆ ಬರುವದಾಗಿ ಭಾರತ ಸರಕಾರದ ಆಹಾರಮಂತ್ರಿಗಳಾದ ಸರ್ ಶ್ರೀವಾಸ್ತವರವರು ಸಾರಿದ್ದಾರೆ. ಅದರಿಂದ ಅಕ್ಕಿ ಈ ವರ್ಷ ಖಂಡಿತ ಅಗ್ಗವಾಗುವದೆಂದೂ ಅರೆಹೊಟ್ಟೆ ಉಂಡು ಕಷ್ಟದಿಂದ ಕಾಲಹರಣ ಮಾಡುತ್ತಿರುವ ಜನಸಾಮಾನ್ಯರಿಗೆ ಸುಖದ ದಿನಗಳು ಕಾಣಸಿಗುವವೆಂದೂ ಜನರೊಳಗೆ ಕೆಲಕಾಲ ಆನಂದವುಂಟಾಯಿತು. ಆದರೆ ಇದೀಗ ಕಿವಿಯ ಮೇಲೆ ಬೀಳುತ್ತಿರುವ ಸುದ್ದಿ ನಿಜವಾದರೆ ಬಡಬಗ್ಗರ ಗ್ರಹಚಾರ ಇನ್ನೂ ತೀರಿಲ್ಲವೆಂದು ಹೇಳಬೇಕಾಗುತ್ತದೆ. ಹೊಸ ಭತ್ತ ಖರೀದಿಯ ದರವನ್ನು ಎಲ್ಲಾ

ಧಿಪರು ಖಂಡಿ ೧ಕ್ಕೆ ರೂ ೧೧೦ (ಅಂದರೆ ೧೯೪೪ ರೊಳಗಿನಷ್ಟು) ಇಡಬೇಕೆಂದು ನಿರ್ಧರಿಸಿದ್ದರೆಂದೂ, ಈ ಸುದ್ದಿ ತಿಳಿದು ಸ್ವಾರ್ಥಿ ಜಮೀನದಾರರು ಕೆಲವರು ಜಿಲ್ಲಾಧಿಪರಿಗೆ ಭೆಟ್ಟಿಯಾಗಿ ಅಕ್ಕಿ ಭತ್ತಗಳ ದರವನ್ನು ಇಳಿಸಿದರೆ ತಮ್ಮ ನಾಡು ಹಾಳಾಗುವದೆಂದು ಹೇಳಿಕೊಂಡದರಿಂದೂ, ಅಂಥವರ ಮಾತಿಗೆ ಕಿವಿಗೊಟ್ಟು ಜಿಲ್ಲಾಧಿಪರು ಕಳೆದ ವರ್ಷದ ಧಾರಣೆಯನ್ನೇ ಈ ವರ್ಷವೂ ಊರ್ಜಿತವಿಡತಕ್ಕದ್ದೆಂದು ಪ್ರಾಂತಿಕ ಸರಕಾರಕ್ಕೆ ಇತ್ತೀಚೆಗೆ ಶಿಫಾರಸು ಮಾಡಿದ್ದಾರೆಂದೂ ಹೊಸ ಸುದ್ದಿ ತಿಳಿಸುತ್ತಿದೆ ಈ ಸುದ್ದಿ ನಿಜವಿರುತ್ತಿದ್ದರೆ ನಮ್ಮ ಜಿಲ್ಲಾಧಿಪರು ಬಡಬಗ್ಗರ ಹಿತಕ್ಕಿಂತ ಕೆಲವೇ ಶ್ರೀಮಂತರ ಬೊಕ್ಕಸ ತುಂಬುವದರ ಕಡೆಗೆ ಹೆಚ್ಚು ಆಸ್ಥೆ ತೋರಿಸುತ್ತಿದ್ದಾರೆಂದು ಹೇಳಬೇಕಾಗುತ್ತಿದೆ ಈ ಜಿಲ್ಲೆಯಲ್ಲಿ ಅವರು ೨೦ ತಿಂಗಳು ಕಳೆದಾಗ್ಯೂ ಜನತೆಯ ಸ್ಥಿತಿಗತಿ ಎಲ್ಲಿಗೆ ಮುಟ್ಟಿದೆ ಎಂಬುದರ ಅರಿವು ಅವರಿಗೆ ಆಗಿಲ್ಲೆಂದು ತಿಳಿಯಬೇಕಾಗುತ್ತಿದೆ ಸೀಧಾ ಅಂಗಡಿಗಳ ಲೆಕ್ಕ ನೋಡಿದರೆ ನೂರಕ್ಕೆ ೬೦ರಷ್ಟೇ ಅಕ್ಕಿ ಬಿಕರಿಯಾಗುತ್ತಿದೆ ಜನಸಾಮಾನ್ಯರ ಮಾತು ಒತ್ತಟ್ಟಿಗಿರಲಿ ತಿಂಗಳೊಂದರ ೩೦-೪೦-೫೦ ರೂ ಸಂಬಳ ಪಡೆಯುವ ಸಾಮಾನ್ಯ ಸರಕಾರಿ ನೌಕರರು ಬಾಳಿಬದುಕುವದರೂ ಹೇಗೆ ಕಾಲಕಳೆಯುತ್ತಿದ್ದಾರೆಂಬುದನ್ನಾದರೂ ಜಿಲ್ಲಾಧಿಪರು ತಿಳಕೊಳ್ಳಬೇಕು ಅಂದರೆ ಜನರ ಸ್ಥಿತಿ ಎಲ್ಲಿ ಮುಟ್ಟಿದೆ ಎಂಬುದು ಅವರಿಗೆ ತಿಳಿದುಬಂದೀತು ಅಕ್ಕಿಯನ್ನಷ್ಟು ಅಗ್ಗ ಮಾಡಿದರೆ ಆಯಿತೇ ಎಂದು ಅವರು ಕೇಳಬಹುದು ಅದಕ್ಕೆ ಅಹುದೆಂದೇ ಉತ್ತರ ಇನ್ನಿತರ ವಸ್ತುಗಳ ಧಾರಣೆಗಳು ಹೆಚ್ಚಾಗಿ ನಮ್ಮತ್ತ ಕಡೆ ಅಕ್ಕಿಯ ಧಾರಣೆಯ ಮೇಲೆಯೇ ಅವಲಂಬಿಸಿವೆ ಅಕ್ಕಿ ಅಗ್ಗವಾದರೆ ಅವೂ ಇಳಿಯುವವು ಬೇಕಾದರೆ ಜಿಲ್ಲಾಧಿಪತಿಗಳು ಈ ಮಾತಿನ ಅನುಭವ ಅಕ್ಕಿ ಅಗ್ಗ ಮಾಡಿ ಪಡೆಯಲಡ್ಡಿಯಿಲ್ಲ

ಈಗ ೮-೧೦ ದಿನಗಳಿಂದ ಸೀಧಾ ಅಂಗಡಿಗಳಲ್ಲಿ ಅಕ್ಕಿಯ ಸೀಧಾ ಒಯ್ಯುವವರು ಸೀಧಾ ಅಕ್ಕಿಯ ಅರ್ಧದಷ್ಟು ಸಣ್ಣಕ್ಕಿಯನ್ನು (ಇದರ ಬೆಲೆ ಪಾಯಲಿ ೧ಕ್ಕೆ ರೂ ೧-೭-೬ ಇಟ್ಟಿದ್ದಾರೆ) ಒಯ್ಯಬೇಕೆಂದೂ, ಸಣ್ಣಕ್ಕಿ ಒಯ್ಯದಿದ್ದರೆ ಅಷ್ಟು ಅಕ್ಕಿ ಕಡಿಮೆ ಕೊಡಲಾಗುವದೆಂದೂ ಹೇಳುತ್ತಾರೆ ಹೀಗ ಮೇಲಿಂದ ಅಂಗಡಿಯವರಿಗೆ ಹುಕುಮು ಬಂದಿದೆಯಂತೆ! ಸಣ್ಣಕ್ಕಿಯು ಮೊದಲೇ ಕಟ್ಟಿ ಅದರಲ್ಲೂ ಈಗ ಶಿಲ್ಕು ಇರುವ ಸಣ್ಣಕ್ಕಿ ತೀರ ಹಾಳಾಗಿದೆ ನೀರಲ್ಲಿ ಹಾಕಿದರೆ ಆ ಅಕ್ಕಿಯು ನೂರನೇ ಒಂದು ಪಾಲು ನೀರೊಳಗೆ ತೇಲುತ್ತಿದೆ! ಇಂತಹ ಪೊಳ್ಳು ಅಕ್ಕಿಯನ್ನು ತುಟ್ಟಿ ದರದಿಂದ ಕೊಂಡುಕೊಂಡು ಜೀವಿಸುವ ಜನರು ನಮ್ಮ ಬಡ ಜಿಲ್ಲೆಯಲ್ಲಿ ಇರುವರೇ? ಸಣ್ಣಕ್ಕಿ ನಮ್ಮಲ್ಲಿ ಖರ್ಚಾಗದಿದ್ದಾಗ ಅದನ್ನು ಘಟ್ಟದ ಜಿಲ್ಲೆಗಳಿಗೆ ಕಳಿಸಿ ಕೊಡದೆ ಹಾಳಾಗುವ ವರೆಗೂ ಇಲ್ಲಿ ಇಟ್ಟುಕೊಂಡದ್ದೇಕೆ? ಮತ್ತು ಅದನ್ನು ಈಗ ಜನರ ಕೊರಳಿಗೆ ಕಟ್ಟುವದೇಕೆ? ಸಣ್ಣಕ್ಕಿ ಕೊಂಡುಕೊಳ್ಳುವ ತಾಕತ್ತು ಜನರಿಗೆ ಇರುತ್ತಿದ್ದರೆ ಅದು ಶಿಲ್ಕಿಯಲ್ಲಿರುತ್ತಿದ್ದಾಗಲೇ ಜನರು ಕೊಂಡುಕೊಳ್ಳುತ್ತಿದ್ದಿಲ್ಲವೇ? ಈಗಣ ನಿಯಂತ್ರಣ ರಾಜ್ಯದಲ್ಲಿ ಜನರ ತಾಕತ್ತು ನೋಡುವವರಿಲ್ಲ ಅವರ ಅಭ್ಯಾಸ ಪರಿವಾರಗಳನ್ನೂ ಆಲೋಚಿಸುವವರಿಲ್ಲ ' ಕುಚಗಿ ಅಕ್ಕಿಯ ಪೂರೈಕೆಯ ಮಾತೇ ಇದಕ್ಕೆ ತಕ್ಕ ನಿದರ್ಶನ ಕರಾವಳಿಯ ಭಾಗದಲ್ಲಿ ಕುಚಗಿ ಅಕ್ಕಿ ಉಣ್ಣುವವರೇ ಹೆಚ್ಚು ನೂರಕ್ಕೆ ೭೫-೮೦ರಷ್ಟು ಜನರಾದರೂ ಕುಚಗಿ ಅಕ್ಕಿ ಉಣ್ಣುವವರು ಆದರೆ ಈಗ ಸೀಧಾ ಅಂಗಡಿಗಳಲ್ಲಿ ಕುಚಗಿ ಅಕ್ಕಿ ಸಿಗುವದಿಲ್ಲ! ಕುಚಗಿ ಉಣ್ಣುವವರು ಬೆಣತಿಗೆ ಅಕ್ಕಿಯನ್ನೇ ಒಯ್ಯಬೇಕಾಗಿದೆ ಕುಚಗಿ ಅಕ್ಕಿ ಕಳಿಸಲು ಬರೆದು ಹೋಗಿದೆಯಂತೆ ಆದರೆ ಘಟ್ಟದಿಂದ ಬೆಣತಿಗೆ ಅಕ್ಕಿಯೇ ಇಳಿಯುತ್ತಿದೆ ಕುಚಗಿ ಅಕ್ಕಿ ತಯಾರಿಸಿ ಕಳಿಸಲು ಘಟ್ಟದ ಮೇಲಿನ ಗಿರಣಿಗಳಿಗೆ ಅಸಾಧ್ಯವಿರುತ್ತಿದ್ದರೆ ಅಲ್ಲಿಂದ ಭತ್ತವನ್ನೇ ತರಿಸಿ ಇಲ್ಲಿ ಅದರ ಕುಚಗಿ ಅಕ್ಕಿ ಮಾಡಿಸಿಕೊಳ್ಳುವ ವ್ಯವಸ್ಥೆಯನ್ನಾದರೂ ಮಾಡಿಸಬಹುದಿತ್ತು. ಆದರೆ ಹೇಳುವವರಾರಿಗೆ? ಮತ್ತು ಕೇಳುವವರಾರು? ಜಿಲ್ಲಾಧಿಪರಾದರೂ ಇತ್ತ ಬೇಗನೇ ಗಮನ ಕೊಟ್ಟು ಕುಚಗಿ ಅಕ್ಕಿಯನ್ನು ಪೂರೈಸುವ ವ್ಯವಸ್ಥೆ ಮಾಡುವರೆಂದು ಆಶಿಸಲಾಗಿದೆ

ಕಳೆದ ಸೋಮವಾರ ತಾ ೧೨ ಇಲ್ಲಿಯ ವಿದ್ಯಾರ್ಥಿ ಸಂಘದವರು ಸುಭಾಸ ಸೈನಿಕರ ದಿನವನ್ನಾಚರಿಸಿದರು ಮುಂಜಾನೆ ಪ್ರಭಾತ-ಫೇರಿ ಹಾಗೂ ಸಂಜೆಯಲ್ಲಿ ಮೆರವಣಿಗೆ ಮತ್ತು ಸಭೆಗಳಾದವು.

ಕಳೆದ ತಾ ೬ಕ್ಕೆ ಮಧ್ಯರಾತ್ರಿಯ ಸುಮಾರಿಗೆ ಕಲವೆಹಳ್ಳಿಯೊಳಗಿನ ಮರಾಠರ ಕೊಪ್ಪಕ್ಕೆ ಆಕಸ್ಮಾತ್ ಬೆಂಕಿ ಬಿದ್ದು ೧೮ ಗುಡಿಸಲುಗಳು ಸುಟ್ಟು ಬೂದಿಯಾಗಿವೆ ಸುಮಾರು ೩೦೦೦ ರೂ ಗಳಷ್ಟು ಹಾನಿಯಾಗಿರಬೇಕು ಮರಾಠಿಗರು ತೀರ ಬಡವರು, ಹಿಂದುಳಿದವರು ಬೆಂಕಿಯ ಅನಾಹುತದಿಂದ ಈಗ ನಿರ್ಗತಿಕರಾಗಿದ್ದಾರೆ ಕುಮಟೆಯ ರಾ॥ ಭಗವಾನದಾಸ ಭಾಟಿಯಾ ಇವರು ಅವರಿಗೆ ೧೫೦ ರೂ ಗಳ ಜವಳಿ ಧರ್ಮಾರ್ಥ ಕೊಟ್ಟಿದ್ದಾರೆ ಊರವರೂ ಕೆಲವು ಅಕ್ಕಿಯನ್ನು ಕೂಡಿಸಿ ಕೊಟ್ಟಿದ್ದಾರೆ ಅದರಿಂದ ತುರ್ತದ ನಿರ್ವಾಹವಾದೀತು ಜಿಲ್ಲಾಧಿಪರು ಈ ಬಡವರಿಗೆ ಸರಕಾರದಿಂದ ಸಹಾಯ ದೊರಕಿಸಿ ಕೊಡಬೇಕಾಗಿ ವಿನಂತಿಯಿದೆ

ಗೋಕರ್ಣದಲ್ಲಿ ಕಳೆದ ೩ ವರ್ಷಗಳಿಂದ ಅಬಕಾರಿ ಜಟಿ ಒಫಿಸರರಾಗಿದ್ದ ರಾ॥ ಕೇ ಜಿ ಕುಲಕರ್ಣಿಯವರಿಗೆ ಸಿರ್ಸಿ ತಾಲೂಕಿಗೆ ವರ್ಗವಾಗಿದೆ ಇವರು ಜೀವದ ಹಂಗು ತೊರೆದು ಎಷ್ಟೋ ಅಬಕಾರಿ ಗುನ್ಹೆಗಳನ್ನು ಹಿಡಿದಿದ್ದರು

ಕೇಂದ್ರ ಎಸೆಂಬ್ಲಿಯ ಚುನಾವಣೆಗೆ ನಮ್ಮ ದಕ್ಷಿಣ ಭಾಗದಿಂದ ಕೊಂಗ್ರೆಸ ಹುರಿಯಾಳಾಗಿ ನಿಂತಿರುವ ಶ್ರೀ॥ ದತ್ತಾತ್ರೇಯ ಕರಮರಕರರು ಈ ಹೊತ್ತು ಯಲ್ಲಾಪುರ, ಅಂಕೋಲಾ ಮಾರ್ಗವಾಗಿ ಸಂಜೆ ಇಲ್ಲಿಗೆ ಬರುವರೆಂದು ಸುದ್ದಿ ಬಂದಿದೆ ಸಾಯಂಕಾಲ ೬॥ ಘಂಟೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ಅವರ ಸಾರ್ವಜನಿಕ ಭಾಷಣವಾಗುವದು ಇಲ್ಲಿಂದ ಅವರು ಮುಂದೆ ಹೊನ್ನಾವರ, ಭಟಕಳಗಳಿಗೂ ಅಲ್ಲಿಂದ ಹಿಂತಿರುಗಿ ಶಿರ್ಸಿ, ಸಿದ್ಧಾಪುರಗಳಿಗೂ ಹೋಗುವರು

ಕಾಲೇಜ ಸಮಿತಿಯವರು ಕಳೆದ ವಾರ ಕಾಲೇಜ ನಿಧಿ ಕೂಡಿಸಲು ಗೋಕರ್ಣಕ್ಕೂ ಬಂಕಿಕೋಡ್ಲಿಗೂ ಹೋಗಿದ್ದರು ಅಲ್ಲಿ ಅವರಿಗೆ ರೂ ೧೧೦೦೦ ದ ವಾಗ್ದಾನಗಳು ಸಿಕ್ಕಿವೆ ಸಮಿತಿಯವರು ಇನ್ನೊಮ್ಮೆ ಈ ಭಾಗದಲ್ಲಿ ಸಂಚರಿಸುವರಿದ್ದಾರೆಂದು ತಿಳಿಯುತ್ತದೆ

ಹೊನ್ನಾವರ— (ತಾ ೧೭-೧೧-೪೫) ಕರ್ನಾಟಕದ ಮುಂದಾಳುಗಳಾದ ಶ್ರೀ॥ ದಿವಾಕರ ರಂಗರಾಯರು ಕಳೆದ ರವಿವಾರ ರಾತ್ರಿ ಇಲ್ಲಿಗೆ ಆಗಮಿಸಿದ್ದರು ೯ ಘಂಟೆಗೆ ಅವರ ಜಾಹೀರ ಭಾಷಣವಾಯಿತು ತಾವು ಶ್ರೀ॥ ಕರಮರಕರರ ಬಗೆ ಪ್ರಚಾರ ಮಾಡಲಿಕ್ಕೆ ಬಂದಿಲ್ಲೆಂದೂ, ಕೊಂಗ್ರೆಸ ನಿಷ್ಠೆಯ ಬಗ್ಗೆ ಖ್ಯಾತಿಗೊಂಡ ಈ ಜಿಲ್ಲೆಯ ಜನರು ಕೊಂಗ್ರೆಸ ಹುರಿಯಾಳುಗಳಾದ ಶ್ರೀ॥ ಕರಮರಕರರಿಗೇ ಮತ ಕೊಡುವರೆಂದು ತಮಗೆ ಖಾತ್ರಿಯುಂಟೆಂದೂ ಪ್ರಸ್ತಾವನೆ ಮಾಡಿ, ಮುಂದಿನ ಹೋರಾಟಕ್ಕಾಗಿ— ಆಂಗ್ಲರು ಕೊಟ್ಟ ಭಾಷೆಯಂತೆ ನಡೆಯದಿದ್ದರೆ ಇನ್ನೊಂದು ಹೋರಾಟವಾಗುವದು ಖಂಡಿತ— ನಾವು ಸಂಘಟನೆ ಮಾಡಬೇಕೆಂದು ಅವರು ಬೋಧಿಸಿದರು ಮುಂದಿನ ಹೋರಾಟ 'ಚಲೇ ಜಾವ" ಎಂದು ಹೇಳುವ ಸ್ವರೂಪದ್ದಾಗದೆ ಪ್ರತ್ಯಕ್ಷ ಸ್ವರಾಜ್ಯ ಸ್ಥಾಪನೆಯದಾಗುವದು. ಆಳರಸರನ್ನು ಅಲಕ್ಷಿಸಿ ನಾವೇ ನಮ್ಮ ರಾಜ್ಯಕಾರಭಾರ ನಡೆಸಲು ಆರಂಭ ಮಾಡಬೇಕಾಗುವದು ಅದಕ್ಕಾಗಿ ನಾವು ಸುಸಂಘಟಿತರಾಗಬೇಕೆಂದು ಶ್ರೀ॥ ರಂಗರಾಯರು ಎಚ್ಚರಿಕೆ ಕೊಟ್ಟರು ಮರುದಿನ ಮುಂಜಾನೆ ಅವರು ಶಿರ್ಸಿಗೆ ಹೊರಟು ಹೋದರು

ಕಳೆದ ಬುಧವಾರ ತಾ ೧೪ಕ್ಕೆ ಇಲ್ಲಿ ಪಂ॥ ಜವಾಹಿರಲಾಲ ನೆಹರೂರವರ ಜಯಂತಿ ಆಚರಿಸಲ್ಪಟ್ಟಿತು ಬೆಳಗ್ಗೆ ಪ್ರಭಾತಫೇರಿ ಧ್ವಜವಂದನೆಗಳಾದವು ಸಂಜೆ ಜವಾಹಿರಲಾಲರ ಭಾವಚಿತ್ರದ ಮೆರವಣಿಗೆಯಾಗಿ ಟಿಪ್ಪರ ಸಭಾಗೃಹದಲ್ಲಿ ಸಭೆಯಾಯಿತು. ಜಿಲ್ಲಾಧ್ಯಕ್ಷ ಶ್ರೀ॥ ಶಾಸ್ತ್ರಿಯವರೂ ಬೇರೆ ಕೆಲವರೂ ಭಾಷಣಗಳನ್ನು ಮಾಡಿ ಪಂಡಿತಜಿಯವರ ಮಹಿಮೆಯನ್ನೂ ಅದರ ಕಾರಣಗಳನ್ನೂ ಎತ್ತಿ ತಿಳಿಸಿದರು ಕೊನೆಗೆ ಪಂಡಿತಜಿಯವರಿಗೆ ದೀರ್ಘಾಯುರಾರೋಗ್ಯ ದಯಪಾಲಿಸಲು ದೇವರ ಕಡೆ ಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು

ಕಾರವಾರ— (ತಾ ೧೪-೧೧-೪೫) ಹೊಸ ಚೆಅರಮನ್ನರನ್ನು ಆರಿಸಲು ಹೊಸ ಶಾಲಾ ಬೋರ್ಡಿನ ಸಭೆ ಮೊನ್ನೆ ಸೋಮವಾರ ಕೂಡಿತ್ತು. ಬೋರ್ಡಿನ ಒಟ್ಟು ೧೫ ಸದಸ್ಯರಲ್ಲಿ ಒಬ್ಬರು ತೀರಿಕೊಂಡಿದ್ದಾರೆ ಹರಿಜನ ಸದಸ್ಯರು ೧ ತಾಸು ತಡಮಾಡಿ ಸಭೆಗೆ ಬಂದು ತಪ್ಪಿದರು! ಅವರು ಬುದ್ಧಿಪೂರ್ವಕ ತಡಮಾಡಿ ಬಂದರೆಂದು ಹೇಳುತ್ತಾರೆ. ಬಂದ ೧೧ ಸಭಾಸದರಲ್ಲಿ ೬ ಮಂದಿ ರಾ॥ ಕೆಕ್ಕಾರ ಗಣಪತಿ ಭಟ್ಟರಿಗೂ ೫ ಮಂದಿ ರಾ॥ ಸಣ್ಣಪ್ಪ ಗಾಂವಕಾರರಿಗೂ ಮತ ಕೊಟ್ಟಿದ್ದರಿಂದ ರಾ॥ ಭಟ್ಟರೇ ಚೆಅರಮನ್ನರಾಗಿ ಆರಿಸಲ್ಪಟ್ಟರು, ಮತ್ತು ರಾ॥ ಗಾಂವಕಾರರು ಪ್ರತಿಸ್ಪರ್ಧಿಗಳಿಲ್ಲದೆ ಸರ್ವಾನುಮತದಿಂದ ಅಧ್ಯಕ್ಷರಾಗುವರೆಂಬ ಬಹುಜನರ ಆಶೆ ಮಣ್ಣುಪಾಲಾಯಿತು! ರಾ॥ ಗಾಂವಕಾರರ ವಿರುದ್ಧ ಕೆಲವರು ಕೊಂಗ್ರೆಸ ಲೀಗ ರಾಜಕಾರಣವನ್ನು ತಂದರಂತೆ! ಕೆಲವರು ಗಾಂವಕಾರರು ಕಟ್ಟಾ ಬ್ರಾಹ್ಮಣೇತರರೆಂದು ವಾದಿಸಿ ಅವರಿಗೆ ವಿರೋಧ ಮಾಡಿದರಂತೆ! ಕುಮಟಾ ನಗರ ಸಭೆಯ ಅಧ್ಯಕ್ಷರು ಕೂಡ ಅಜ್ಞರಂತೆ ವರ್ತಿಸಿ ರಾ॥ ಗಾಂವಕಾರರಿಗೆ ಮತ ಕೊಡದಿದ್ದುದು ತೀರ ವ್ಯಸನಕರ

ರಾಷ್ಟ್ರ ಸೇವಾದಲದ ಶಿಕ್ಷಣ ಶಿಬಿರದ ಮುಕ್ತಾಯ ತಾ ೧೦ನೇಗೆ ಜರುಗಿತು ೬೫ ಮಂದಿ ಶಿಕ್ಷಣ ಪಡೆದರು. ಅವರಲ್ಲಿ ೬೦ ಮಂದಿ 'ಉತ್ತೀರ್ಣರಾಗಿದ್ದಾರೆ ಶಿಬಿರ ನಡೆಯುತ್ತಿದ್ದಾಗ ಅನೇಕ ಕೊಂಗ್ರೆಸ ಮುಖಂಡರು ಅದಕ್ಕೆ ಭೆಟ್ಟಿ ಕೊಟ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಟ್ಟರು ನಡುವೆ ಈ ವಿದ್ಯಾರ್ಥಿಗಳಿಗೆ ಹೊಲಸು ವಸತಿಯ ಸ್ಥಳಗಳಿಗೂ ಹಳ್ಳಿಗಳಿಗೂ ಕರಕೊಂಡು ಹೋಗಿ ಸ್ವಚ್ಛತೆಯ ಮತ್ತು ಆರೋಗ್ಯ ರಕ್ಷಣೆಯ ಕೆಲಸ ಹೇಗೆ ಮಾಡತಕ್ಕದೆಂಬುವದರ ಸಕ್ರಿಯ ಪಾಠ ಕಲಿಸಿಕೊಡಲಾಯಿತು ಊರ ಸ್ವಚ್ಛತೆಯನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಇದರಿಂದ ಹಳ್ಳಿಗರಿಗೂ ಕಲಿಸಿಕೊಟ್ಟಂತಾಗಿದೆ ಈಗ ಇಡೀ ಜಿಲ್ಲೆಯಲ್ಲಿ ೧೧೦೦ ಮಂದಿ ರಾಷ್ಟ್ರಸೇವಾದಲದ ಸೈನಿಕರಿದ್ದಾರೆ ಇಲ್ಲಿ ಕಲಿತುಹೋದ ೬೦ ಮಂದಿ ಸೈನಿಕ ನಾಯಕರು ತಮ್ಮ ಊರುಗಳಲ್ಲಿ ಬೇಗನೇ ದಲದ ಸಂಘಟನೆ ಮಾಡುವರೆಂದೂ ೨-೩ ತಿಂಗಳಲ್ಲಿ ಇಡೀ ಜಿಲ್ಲೆಯೊಳಗೆ ೫೦೦೦ ಸೈನಿಕರಾದರೂ ದಲದಲ್ಲಿ ದಾಖಲಾಗಿಸಿಕೊಳ್ಳಲ್ಪಡುವರೆಂದೂ ಜಿಲ್ಲಾ ದಳಪತಿಗಳು ಆಶಿಸುತ್ತಾರೆ ಈ ರಾಷ್ಟ್ರಸೇನಾ-ದಲಗಳು ಜಿಲ್ಲಾ ಮತ್ತು ಪ್ರಾಂತಿಕ ಕೊಂಗ್ರೆಸ ಸಮಿತಿಗಳ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡತಕ್ಕದ್ದೆಂದು ನಿರ್ಧರಿಸಲ್ಪಟ್ಟಿದೆ

ವಿನಂತಿ.

ವಾಸುದೇವ ಗೋವಿಂದ ಮಹಾಲೆ ಲೈಸನ ನಂ ೧೫ ಎಪ್ರೂವ್ಡ ಕ್ಲೋಥ್ ಡೀಲರ ಹೊನ್ನಾವರ ಇವರ ಕಡೆಯಿಂದ —

ನಮ್ಮಲ್ಲಿ ಮಾರಾಟವಾಗುವ ಜವಳಿಯಲ್ಲಿ ಇಡೀ ಟಾಕೆಯನ್ನು ವಿಕ್ರಿಗೆ ಪಡೆಯುವವರಿಗೆ ರೂ ೧ಕ್ಕೆ ಅರ್ಧಾಣೆಯಂತೆ ಕಮಿಶನ್ ಕೊಡುತ್ತೇವೆ

ಈ ಸವಲತ್ತು ಕೆಲ ಕಾಲದ ಪೂರ್ತ ಇಟ್ಟಿದೆ

ಗಿರಾಕಿಗಳು ಈ ಸಂಧಿಯ ಪ್ರಯೋಜನ ಪಡೆಯಬೇಕಾಗಿ ವಿನಂತಿ

ಹೊನ್ನಾವರ, ತಾ. ೧೮-೧೧-೪೫

ವಾಸುದೇವ ಗೋವಿಂದ ಮಹಾಲೆ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ.
ಮುಂಗಡಯಲ್ಲಿ
ವರ್ಷಕ್ಕೆ ರೂ. ೨ ೪ ೦
ವಿದ್ಯಾರ್ಥಿಗಳಿಗೆ ವರ್ಷಕ್ಕೆ ೧ ೧ ೦
೬ ತಿಂಗಳಿಗೆ ೧-೧೨-೦
ಸಂಚಿಕೆಗೆ ೦-೦ ೬
ಸಂಚಿಕೆಗೆ ... ೦-೪-೦
ವಿ. ಪಿ. ಯಿಂದ ಹಣ ತರಿಸುವವರು ೬. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು
ಗ್ರಾಹಕರು ಮುಂಗಡ ಕಳಿಸಲಿಕ್ಕು

Reg. No. B 1270 Monday, 26th November, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೨೦

ಕುಮಟಾ:- ಸೋಮವಾರ, ತಾ ೨೬ ನೆಯ ನವಂಬರ ೧೯೪೫ನೇ ಇಸವಿ

ಜಾಹೀರಾತುಗಳ ದರ
ಕಾಲಮ್ ೧೫ ಎಮ್ ಉದ್ದ
೧ ಸಾಲಿಗೆ ೩ ಆಣೆಯಂತೆ
ಡಬಲ್ ಕಾಲಮ್ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾಗುವದು.

ಮ್ರಾಜ್ಯತೃಷ್ಣೆಯ ಬೈಲಾಟ.

(ನಿರೀಕ್ಷಕರು ಬರೆದುದು)

ಮಳೆ ನಿಂತರೂ ಮರದ ಹನಿ ನಿಂತಿಲ್ಲೆಂದು ಲ್ಲಿ ಒಂದು ಗಾದೆಯುಂಟು ಅದರಂತೆಯೇ ಯುದ್ಧ ನಿಂತರೂ ಯುದ್ಧದ ಬೇಗೆ ನಿಂದಿಲ್ಲೆಂದು ಬೇಕಾಗಿದೆ ಯುರೋಪದೊಳಗಿನ ಯುದ್ಧ ನಿಂತು ಈಗ ೬|| ತಿಂಗಳಾಯಿತು, ಜಪಾನ ಯುದ್ಧ ನಿಂತು ೩|| ತಿಂಗಳಾಯಿತು. ಆದರೂ ಜಗತ್ತಿನಲ್ಲಿ ಎಲ್ಲೂ ಅಶಾಂತಿಯೇ ಕಂಡುಬರುತ್ತಿದೆ, ವಿನಹ ಶಾಂತಿಯ ಸುಂದರ ನೋಟ ಎಲ್ಲೂ ಕಂಡುಬರುವದಿಲ್ಲ! ಇದಕ್ಕೆ ಸಾಮ್ರಾಜ್ಯ-ತೃಷ್ಣೆ ಮತ್ತು ವರ್ಣದ್ವೇಷಗಳೇ ಕಾರಣವಾಗಿವೆ ಬಿಳಿಯರಿಗೆ ತಮ್ಮ ಮೈಯ ಬಣ್ಣದ ಅಭಿಮಾನ ಎಂದೂ ಬಿಡುವಂತಿಲ್ಲ! ಅವರ ಮೈಬಣ್ಣ ಬಿಳಿಗಿದ್ದರೂ ಹೃದಯ-ಮಿದುಳುಗಳೊಳಗಿನ ನೆತ್ತರ ಬೆಳ್ಳಗಿಲ್ಲ! ಡಾಂಬರದಷ್ಟು ಅದು ಕಪ್ಪಾಗಿರದಿದ್ದರೂ ಇದ್ದಲಿಯಷ್ಟು ಕಪ್ಪಗುಂಟೆಂದು ನಿಸ್ಸಂಕೋಚವಾಗಿ ಹೇಳಬಹುದು ಈ ಬಿಳಿಯರು ಏಶಿಯಾ ಖಂಡದ ಶ್ವೇತೇತರ ಜನರನ್ನು ಕೀಳ್ಗಳೆಯುತ್ತಿದ್ದು ಅವರನ್ನಾಳುವ ಶಕ್ತಿಯನ್ನು ಜಗದೀಶನು ಧವಲ-ವರ್ಣದವರಿಗೇ ಕೊಟ್ಟಿದ್ದಾನೆಂದು ಅವರ ಮನೋನಿರ್ಣಯವುಂಟು ಹಿಂದುಸ್ಥಾನ, ಬ್ರಹ್ಮದೇಶ, ಮಲಯಾ, ಇಂಡೋ ಚೀನ, ಜಾವಾ, ಇರಾಣ ಮೊದಲಾದ ಧವಲೇತರ ಜನಾಂಗಗಳಲ್ಲಿ ನಡೆದಿರುವ ಘಟನೆಗಳೇ ಈ ಮಾತಿಗೆ ಸಾಕ್ಷಿ ಇಂಡೋ ಚೀನದಲ್ಲಿ ಹಿಂದೆ ಫ್ರೆಂಚರು ನಡಿಸಿರುವ ಅಕ್ರಮ-ಪರಾಕ್ರಮಗಳ ಕಥೆಗಳನ್ನು ಕೇಳಿದರೆ ನಾಚಿಕೆಯುಳ್ಳವನು ನಾಚದಿರಲಾರನು! ಜಾವಾ, ಸುಮಾತ್ರಾಗಳೊಳಗಿನ ಡಚ್ಚ ಜನರ ಮತ್ತು ಆಳರಸರ ನಡವಳಿಯ ಪುರಾಣವನ್ನೋದಿದರೆ (ಬಿಳಿಯರೇ ಬರೆದಿಟ್ಟ ಪುರಾಣವದು! ಜಾವಾ ಜನರು ಬರೆದಿಟ್ಟದ್ದಲ್ಲ!) ಆ ಆಳರಸರು ಮಾನವರು ಅಥವಾ ಸುಸಂಸ್ಕೃತರು ಎಂದು ಸರ್ವಥಾ ಹೇಳಬರುವಂತಿಲ್ಲ! ಆದರೂ "ಸಮಾನ-ಶೀಲ ವ್ಯಸನೇಷು ಸಖ್ಯಂ" ಎಂಬ ಸೂಕ್ತಿಗನುಸಾರವಾಗಿ ಇಂಡೋ ಚೀನದಲ್ಲಿ ಫ್ರೆಂಚರ ಪ್ರಭುತ್ವವನ್ನೂ ಜಾವಾ ಸುಮಾತ್ರಾಗಳಲ್ಲಿ ಡಚ್ಚರ ಸಾಮ್ರಾಜ್ಯವನ್ನೂ ಪುನಃ ಸ್ಥಾಪಿಸಲು ಬ್ರಿಟಿಶ ಸಮಾಜ-ಸತ್ತಾವಾದಿ ಕೂಲಿಕಾರ ಮಂತ್ರಿಮಂಡಳದವರು ನೆರವಾಗುತ್ತಿದ್ದಾರೆ! ಮತ್ತು ಹಾಗೆ ಮಾಡುವಾಗ ನಿಃಶಸ್ತ್ರ ಪ್ರಜೆಗಳ ಮೇಲೆ ತೋಪು ಹಾರಿಸಲಿಕ್ಕೂ ರಣ-ರಥ (ಟ್ಯಾಂಕ) ಗಳನ್ನು ಓಡಾಡಿಸಲಿಕ್ಕೂ, ವಿಮಾನಗಳಿಂದ ಬಾಂಬುಗುಂಡುಗಳ ಮಳೆಗರೆಯಲಿಕ್ಕೂ ಅವರು ತಿಲಮಾತ್ರ ನಾಚಿಕೆಪಡುವದಿಲ್ಲ! ಬ್ರಿಟಿಶ ಸರಕಾರದ ಈ ಲೀಲೆಗಳನ್ನು ನೋಡಿ ಸ್ವತಃ ಬ್ರಿಟಿಶ ಕೂಲಿಕಾರ ಪಕ್ಷದ ಅಧ್ಯಕ್ಷರಾ|| ಹೆರೊಲ್ಡ ಲಾಸ್ಕಿಯವರು ಕೂಡ ಅತಿಶಯ ಉದ್ವಿಗ್ನರಾಗಿದ್ದಾರೆ ಮತ್ತು ಈ ಹೀನ ಕೆಲಸಕ್ಕಾಗಿ ಹಿಂದೀ ಸೈನಿಕರನ್ನು ತೊಡಗಿಸುತ್ತಿದ್ದುದನ್ನೂ ಅವರು ತೀಕ್ಷ್ಣವಾಗಿ ಖಂಡಿಸಿದ್ದಾರೆ ಬ್ರಿಟಿಶರು ಈ ರೀತಿ ನಿರ್ದಯ ಬಲಪ್ರಯೋಗ ಮಾಡಲು ಜಾವಾ ಜನರಾಗಲಿ ಇಂಡೋ ಚೀನದ ಜನರಾಗಲಿ ಮಾಡಿದ ಅಪರಾಧವಾದರೂ ಏನು? ಯಾವ ಲೋಕ ಸ್ವಾತಂತ್ರ್ಯಕ್ಕಾಗಿ ತಾವು ಹೋರಾಟ ನಡಿಸಿದ್ದೇವೆಂದು ಬ್ರಿಟಿಶರೂ ಅವರ ಮಿತ್ರರೂ ಯುದ್ಧಕಾಲದಲ್ಲಿ ಡಂಗುರ ಸಾರುತ್ತಿದ್ದರೋ ಆ ಸ್ವಾತಂತ್ರ್ಯವನ್ನು ಈ ಜನರು ಬಯಸಿ, ಅದಕ್ಕಾಗಿ ಹೆಣಗಾಡುತ್ತಿದ್ದುದೇ ಆ ಅಪರಾಧ! ಬ್ರಿಟಿಶರು ಸಂಪೂರ್ಣ ನಾಚಿಕೆ ಬಿಟ್ಟು ತತ್ವ ಭ್ರಷ್ಟರಾಗಿ ಆಗ್ನೇಯ ಏಶಿಯಾದಲ್ಲಿ ಫ್ರೆಂಚ, ಡಚ್ಚರ ಪರವಾಗಿ ರಕ್ತ-ರಂಜಿತ ದಬ್ಬಾಳಿಕೆಯನ್ನು ನಡೆಸುವದಕ್ಕೆ ಎರಡು ಕಾರಣಗಳುಂಟು ಒಂದನೆಯದು ವರ್ಣ-ದ್ವೇಷ ಮತ್ತು ವರ್ಣಾಭಿಮಾನ ಫ್ರೆಂಚರೂ ಡಚ್ಚರೂ ತಮ್ಮಂತೆಯೇ ಬಿಳಿಯರು, ಮತ್ತು ಏಶಿಯಾದ ಜನರು ಕೃಷ್ಣ-ವರ್ಣದವರು ಈ ಕೃಷ್ಣವರ್ಣದ ಜನರು ಬಿಳಿಯರ ನೊಗವನ್ನು ಬಿಸುಟಿ ಸ್ವತಂತ್ರರಾದರೆ, ಬಿಳಿಯರ ಗೌರವಕ್ಕೂ ಪ್ರತಿಷ್ಠೆಗೂ ಕುಂದು ಬರುತ್ತದಲ್ಲವೇ? ಎರಡನೆಯ ಕಾರಣ ಸಾಮ್ರಾಜ್ಯ-ತೃಷ್ಣೆ ಜಾವಾ, ಸುಮಾತ್ರಾ, ಇಂಡೋ ಚೀನ, ಮಲಾಯಾ ಮುಂತಾದ ನೆರೆಹೊರೆಯ ಚಿಕ್ಕ-ಪುಟ್ಟ ರಾಷ್ಟ್ರಗಳಿಗೆ ಸ್ವತಂತ್ರವಾಗಗೊಟ್ಟರೆ ಹಿಂದುಸ್ಥಾನ ಮತ್ತು ಬ್ರಹ್ಮದೇಶಗಳಿಗೂ ಕೂಡಲೇ ತಾವು ಸ್ವಾತಂತ್ರ್ಯ ಕೊಟ್ಟು ಹೊರಬೀಳಬೇಕಾದೀತು, ಎಂಬ ಅಂಜಿಕೆ ಬ್ರಿಟಿಶರಿಗುಂಟು! ಇಂಥ ಸಾಮ್ರಾಜ್ಯವಾದಿಗಳಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಎಷ್ಟು ಕಷ್ಟಪಡಬೇಕೆಂಬುದನ್ನು ನಾವು ಆಲೋಚಿಸಬೇಕಾಗಿದೆ ಈ ವರ್ಣ ದ್ವೇಷ, ಸಾಮ್ರಾಜ್ಯತೃಷ್ಣೆಗಳು ರುಶ್ಯರಲ್ಲೂ, ಅಮೇರಿಕೆಯವರಲ್ಲೂ ತುಂಬಾ ನೆಲೆಗೊಂಡಿವೆ ಅದನ್ನು ಬಣ್ಣಿಸಲು ಇಂದು ಸ್ಥಳವಿಲ್ಲ ಹಿಂದಿನಿಂದ ಅನುಕೂಲವಾದಾಗ ವಿಸ್ತಾರವಾಗಿ ವಿವರಿಸುವೆನು.

(೪ನೇ ಪುಟದಿಂದ ಮುಂದರಿಸಿದ್ದು)

ಭಾಷಣಗಳಾದವು ಖಾನಸಾಹೇಬರು ಹಿಂದುಸ್ಥಾನಿಯಲ್ಲಿ ಮಾತಾಡಿ, ಪಾಕಿಸ್ತಾನ ವಾದವನ್ನು ಖಂಡಿಸಿದರು "ಪಾಕಿಸ್ತಾನವೇನೆಂದು ಯಾರಿಗೂ ಗೊತ್ತಿಲ್ಲ. ನನ್ನ ಮುಸಲ್ಮಾನ ಬಾಂಧವರು ಪಾಕಿಸ್ತಾನದ ಮರುಳಿಗೆ ಮೋಹಿತರಾಗಿ ತಮ್ಮ ಜನ್ಮಭೂಮಿ, ಹೊಲಮನೆ, ಮನೆ ಮಾರು ಮಸೀದೆಗಳನ್ನು ಇಲ್ಲೇ ಬಿಟ್ಟು ಪಾಕಿಸ್ತಾನದ ಸ್ವರ್ಗಕ್ಕೆ ಹೋಗಲಾರರಷ್ಟೇ! ಮುಸಲ್ಮಾನ ರಾಷ್ಟ್ರಗಳಿಗೂ ಪಾಕಿಸ್ತಾನ ಬೇಕಾಗಿಲ್ಲ ಪಂಜಾಬ, ಗಡಿನಾಡು, ಬಂಗಾಲ [illegible] ಮುಸಲ್ಮಾನರ ಬಹುಮತವಿದ್ದ ಪ್ರಾಂತಗಳಲ್ಲಿ ಕೂಡ ಮುಸ್ಲಿಂ ಲೀಗಿನ ಬೇಳೆ ಬೇಯುವದಿಲ್ಲ ಇಲ್ಲಿ ಹಿಂದು ಮುಸಲ್ಮಾನರೊಳಗಿನ ಬಾಂಧವ್ಯ ನೋಡಿ ನನಗೆ ಬಲು ಸಂತೋಷವಾಗಿದೆ ಇದೇ ನಮಗೆ ಇಷ್ಟವಾದುದು ಕಾರಣ ಮುಸಲ್ಮಾನ [illegible] ಲ್ಲರೂ ರಾಷ್ಟ್ರಧ್ವಜದ [illegible] ವರೆಗೆ ಮತ ಕೊಡಬೇಕಾಗಿ ನನ್ನ ಅರಿಕೆ' ಎಂದು ಅವರು ನುಡಿದರು ಮಾನ್ಯ ಅತಿಥಿಗಳು ಧಾರವಾಡ ಜಿಲ್ಲೆಯಲ್ಲಿ ಪ್ರಚಾರ ಮಾಡುವದಕ್ಕಾಗಿಯೇ ನಿನ್ನೆ ರಾತ್ರಿ ಧಾರವಾಡಕ್ಕೆ ಹೋದರು

ಅಳಿದ ತಾ ೧೪ ಕ್ಕೆ ಪಂ॥ ನೆಹರೂರವರ ಹುಟ್ಟಿದಹಬ್ಬ ಇಲ್ಲಿ ಆಚರಿಸಲ್ಪಟ್ಟಿತು

ಇದೀಗ ರಾಷ್ಟ್ರಸೇವಾದಳದ ಚಟುವಟಿಕೆಗಳಿಗೆ ಪ್ರಾರಂಭವಾಗಿದೆ

ಹಿಂದೆ ಈ ತಾಲೂಕಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ [illegible] ೩||| ಪಾಯಲಿ ಅಕ್ಕಿ [illegible] ದಿ ಧಾನ್ಯದ ಕೋಟಾ ಸಿಗುತ್ತಿತ್ತು. ಇತ್ತೀಚೆಗೆ ಘಟ್ಟದ ಕೆಳಗಿನ ಅಧಿಕಾರಿಯು ಅದನ್ನು ಕಡಿಮೆ ಮಾಡಿದ್ದಾರೆ! ಮೈಮುರಿದು ದುಡಿಯುವ ಜನರಿಗೆ ಇಷ್ಟು ಧಾನ್ಯದಿಂದ ಹೊಟ್ಟೆ ತುಂಬುವದೆಂತು? ಜಿಲ್ಲಾಧಿಪರು ಗಮನ ಕೊಡಬೇಕಾಗಿ ಅರಿಕೆ

ಶಿರಸಿ— (ತಾ ೧೩-೧೧-೪೫) ಕಾಂಗ್ರೆಸ್ಸಿನವರಿಗೆ ಅಡಿಕೆ ಬೆಳೆಗಾರರು ವಹಿಸಿಕೊಂಡಿದ್ದ ತಪ್ಪು ತಿಳುವಳಿಕೆಯು ಈಗ ನಿರಸನ ಹೊಂದಿದೆ ಕಾಂಗ್ರೆಸ ವಿನಹ ಬೇರೆ ಯಾವ ಸಂಸ್ಥೆಯಿಂದಲೂ ಭಾರತದ ಸ್ವಾತಂತ್ರ್ಯ ಸಂಪಾದಿಸಬರುವಂತಿಲ್ಲೆಂದೂ, ಸ್ವಾತಂತ್ರ್ಯ ಬಂದನಂತರ ಅಡಿಕೆ ಬೆಳೆಗಾರರ ಕಷ್ಟ-ನಷ್ಟ-ತೊಂದರೆಗಳ ಪರಿಹಾರವಾಗುವಂತಿಲ್ಲೆಂದೂ ಅವರು ಮನಗಂಡು ಚುನಾವಣೆಯಲ್ಲಿ ಕಾಂಗ್ರೆಸ-ಉಮೇದುವಾರರಿಗೇ ಮತ ಕೊಡತಕ್ಕದ್ದೆಂದು ನಿಶ್ಚಯಿಸಿದ್ದಾರೆಂದು ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ ರಾಸಾಳಗಾರ ವೆಂಕಟ್ರಮಣ ಹೆಗಡೆಯವರು ಬರೆಯುತ್ತಾರೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ
[ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದುದು]

ಸೂಚನೆ—
ತಾ. ೨೧-೧೨-೧೯೪೫ನೇ ಶುಕ್ರವಾರ ದಿನ ಬೇಂಕಿನ ಒಂದು ಶಾಖೆಯು
ಗದಗದಲ್ಲಿ
ತೆರೆಯಲ್ಪಡುವುದೆಂದು ತಿಳಿಸಲು ಡಾಯರೆಕ್ಟರರು ಸಂತೋಷಪಡುತ್ತಾರೆ.
ಅತೀ ಶೀಘ್ರದಲ್ಲಿಯೇ ತೆರೆಯಲ್ಪಡುವ ನಮ್ಮ
ಮುಂಬಯಿ ಶಾಖೆಯ ಸೂಚನೆಯನ್ನು ನಿರೀಕ್ಷಿಸಿರಿ.
ಅಖಿಲ ಕರ್ನಾಟಕದಲ್ಲೆಲ್ಲ ಶಾಖೆಗಳಿವೆ
ಪ್ರತಿಯೊಂದು ವಿಧದ ಬ್ಯಾಂಕಿಂಗ್ ವ್ಯವಹಾರಗಳು ನಡಿಸಲಾಗುತ್ತವೆ.

ಕುಂದಾಪುರ,
ತಾ ೧೦-೧೧-೧೯೪೫

K Vithaldas Shenai,
Managing Director

ಪತ್ರಕರ್ತರ ನುಡಿಗನ್ನಡಿ.

೧. ನಿಯಂತ್ರಣ ರಾಜ್ಯದಲ್ಲಿ ಲಂಚಗೋರತನ, ರಕ್ಕಸತನ, ಮೋಸಗಾರಿಕೆಗಳು ಹೆಚ್ಚಾಗಿವೆ. ಎಲ್ಲರೂ ಇದನ್ನು ಒಪ್ಪುತ್ತಾರೆ. ಕಲಕತ್ತೆಯೊಳಗಿನ ಸರಕಾರ-ಪಕ್ಷೀಯ 'ಸ್ಟೇಟ್ಸಮನ್' ಪತ್ರಿಕೆಯಲ್ಲಿ ಯುರೋಪಿಯನರೊಬ್ಬರು ಬರೆದ ಲೇಖದಲ್ಲಿ, ವರ್ಷ ೧೯೪೪ ರೂ. ೩೦,೦೦,೦೦೦ ದ ಮಟ್ಟಿಗೆ ಅಧಿಕಾರಿಗಳು ಲಂಚ ತಿನ್ನುತ್ತಾರೆಂದು ಲೆಕ್ಕ ಕೊಡಲಾಗಿದೆ. ಲಂಚದ ಪ್ರಕಾರಗಳೂ ಬಗೆಬಗೆಯಾಗಿವೆ. ಕೆಲವರು ಪ್ರತ್ಯಕ್ಷ ಹಣ ಪಡೆಯುವದುಂಟು. ಅಧಿಕಾರಿಗಳು ಸರಬರಾಯಿ ಪಡೆಯುವದುಂಟು; ಸಂಚಾರಕ್ಕೆ ಹೋದಾಗ ಸಂಚಾರದ ಖರ್ಚನ್ನು ಪರಸ್ಪರ ಸಾಗಿಸಿಕೊಂಡು, ಹೆಚ್ಚಿನ ಸಾಮಗ್ರಿಯನ್ನು ಕೆಲವರು ಸ್ವಸ್ತಕ್ಕೆ ಒಯ್ಯುವದುಂಟು; ಕಾಣಿಕೆಗಳನ್ನು ಪಡೆಯುವ ಪ್ರಘಾತವೂ ಉಂಟು. ಹೀಗೆ ವ್ಯಕ್ತಿ-ಭೇದದಂತೆ ಲಂಚದಲ್ಲೂ ಭೇದಗಳುಂಟು. ಬಂಗಾಲ ಸರಕಾರವು ಲಂಚದ ಪ್ರಕರಣಗಳ ಚೌಕಶಿ ಮಾಡುವದಕ್ಕಾಗಿ ಸರ್ ಆರ್ಚಿಬೊಲ್ಡ ರೌಲಂಡ್ಸ ಇವರ ಅಧ್ಯಕ್ಷತೆಯಲ್ಲಿ ಒಂದು ಚೌಕಶಿ ಮಂಡಳ ನೇಮಿಸಿತ್ತು. ಸರ್ ಆರ್ಚಿಬೊಲ್ಡರು ತಮ್ಮ ವರದಿಯಲ್ಲಿ ಹಲವು ಸೂಚನೆಗಳನ್ನು ಮಾಡಿದ್ದಾರೆ. ತಮಗೆ ೧೯೩೯ ರ ಸಂಬಳಕ್ಕಿಂತ ಹೆಚ್ಚಿನ ಪ್ರಾಪ್ತಿಯನ್ನು ಅಧಿಕಾರಿಗಳು ಮಾಡಿದಾಗ ಅವರು ಲಂಚ ತಿಂದಿದ್ದಾರೆಂದು ಎಣಿಸಿ, ಆ ಹೆಚ್ಚಿನ ಪ್ರಾಪ್ತಿಯ ವಿವರಗಳನ್ನು ಸರಕಾರಕ್ಕೆ ಕೊಟ್ಟು ಸಮಾಧಾನಪಡಿಸಲು ವಿಧಿಸಬೇಕು. ಲಂಚ ತಿಂದ ಪ್ರಕರಣಗಳ ಚೌಕಶಿ ಮಾಡಲು ಸರಕಾರದ ಪೂರ್ವಮನ್ನಣೆ ಪಡೆಯಬೇಕೆಂಬ ವಿಧಿ ರದ್ದಾಗಬೇಕು. ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳಬೇಕಾದರೆ ಈಗಿನ ಕಾನೂನುಗಳಂತೆ ಸರಕಾರದ ಮಂಜೂರಿ ಪಡೆಕೊಳ್ಳಬೇಕಾದ್ದರಿಂದ ಅಧಿಕಾರಿಗಳಿಗೆ ಬೇಕಾದ ಹಾಗೆ ಸೂರೆ ಹಾಕಲು ಅನುಕೂಲವಾಗಿದೆ. ಮೇಲಧಿಕಾರಿಗಳು ಸಹ ಲಂಚ ತಿನ್ನುವದರಿಂದಲೂ ಭ್ರಷ್ಟರಿರುವದರಿಂದಲೂ ಅವರ ಕೆಳಗಿನ ಅಧಿಕಾರಿಗಳಿಗೆ ಭ್ರಷ್ಟರಾಗಲು ತುಂಬಾ ಅವಕಾಶ ದೊರಕುತ್ತಿವೆ. ಸರ್ ಆರ್ಚಿಬಾಲ್ಡರಂಥ ವಿಚಾರವಂತರು ಒಪ್ಪಿಸಿದ ವರದಿಯನ್ನು ಬಂಗಾಲ ಸರಕಾರವು ಮೂಲೆಗೊತ್ತಿದೆ! ಸರ್ ಆರ್ಚಿಬಾಲ್ಡರು ತಮ್ಮ ವರದಿಯಲ್ಲಿ ಓರ್ವ ದೊಡ್ಡ ಅಧಿಕಾರಿಯ ಉದಾಹರಣೆ ಕೊಟ್ಟು, ಆತನಿಗೆ ನ್ಯಾಯವಾಗಿ ಸಿಗುವ ಪ್ರಾಪ್ತಿಯ ಲೆಕ್ಕ ಕೊಟ್ಟು ಆತನ ಆಸ್ತಿ ಆ ಪ್ರಾಪ್ತಿಗಿಂತ ತೀರ ಹೆಚ್ಚಿರುವದರಿಂದ ಆತನ ಹೇಳಿಕೆಯನ್ನು ಸರಕಾರವು ಪಡೆಯತಕ್ಕದ್ದೆಂದು ಸೂಚಿಸಿದ್ದರು. ಬಂಗಾಲ ಸರಕಾರವು ಆ ಸೂಚನೆಯನ್ನೂ ತಿರಸ್ಕರಿಸಿದೆ! ಇದರ ಮೇಲೆ ಲಂಚಗೋರತನಕ್ಕೆ ರಾಜಾಶ್ರಯವುಂಟೆಂದು ಜನರು ಎಣಿಸಿ ಈ ರಾಜ್ಯಭಾರವನ್ನು ಹಳಿದರೆ ತಪ್ಪೇನು? ಪಂಡಿತ ಜವಾಹರಲಾಲರು ನುಡಿದಂತೆ, ಹಿಂದುಸ್ಥಾನದ ಪ್ರಜೆಗಳು ನರಕಯಾತನೆಗಳನ್ನಾದರೂ ಸಹಿಸಲಿಕ್ಕೆ ಒಡಂಬಡಬಹುದು, ಈಗಿನ ರಾಜ್ಯಭಾರ ಅವರು ಸಹಿಸಲಾರರು. ಅದು ನಿರ್ನಾಮವಾದರೆ ಮಾತ್ರ ನಮ್ಮ ಜನಾಂಗಕ್ಕೆ ಕ್ಷೇಮ ಉಂಟು.

೨. ಲಂಚಗೋರತನದ ಸಂಬಂಧದಲ್ಲಿ ಪಂಜಾಬ ಸರಕಾರ ಸ್ವಲ್ಪ ಹೆಚ್ಚಿನ ಜಾಗ್ರತೆ ಕೊಳ್ಳುತ್ತಿದೆ. ಪಂಜಾಬದ ಪೂರೈಕೆ ಇಲಾಖೆಯವರು ಲಂಚಗೋರತನ ನಿರ್ಬಂಧಿಸುವದಕ್ಕಾಗಿ ಪ್ರಾಮಾಣಿಕತನದಿಂದ ಪ್ರಯತ್ನಪಡುತ್ತಾರೆ. ಲಂಚ ತಿಂದ ಸಂಗತಿಗಳು ಸರಕಾರದ ಲಕ್ಷಕ್ಕೆ ಬಂದಲ್ಲಿ ಅವುಗಳ ಕುರಿತು ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ಕೈಕೊಳ್ಳಲು ಅವರು ಸಿದ್ಧರು. ಆದರೆ ನಂಬಲರ್ಹವಾದ ಸುದ್ದಿಗಳೇ ಸಿಗುವದಿಲ್ಲೆಂದು ಅವರು ದೂರುತ್ತಾರೆ! ತೋರಗಾಣಿಕೆಗೆ ಈ ದೂರು ಯೋಗ್ಯವೆಂದು ತೋರುತ್ತದೆ. ಸರ್ ಆರ್ಚಿಬಾಲ್ಡರು ತಮ್ಮ ವರದಿಯಲ್ಲಿ ಈ ಸಂಬಂಧದಲ್ಲಿ ನಮೂದಿಸಿದ ಕಾರಣವನ್ನು ಪಂಜಾಬದ ನಿಯಂತ್ರಣ ಇಲಾಖೆಯವರು ಪರಾಂಬರಿಸಬೇಕು. [illegible] ಕಾನೂನಿನಂತೆ ಈಗ ಪ್ರತಿಯೊಬ್ಬರು ತಮಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಸ್ಥಳ ನಿರ್ಬಂಧಿಸಲ್ಪಟ್ಟಿದೆ. ಒಬ್ಬ ಸೀಧಾ ಅಂಗಡಿಕಾರನು ಕೆಟ್ಟವನೆಂದು ಇನ್ನೊಬ್ಬನ ಕಡೆ ಹೋಗಲಿಕ್ಕೆ ಅವರಿಗೆ ಅವಕಾಶವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅನ್ನಸಾಮಗ್ರಿ ಕೊಡುವವನ ತಪ್ಪು ಕಟ್ಟಿಕೊಂಡರೆ ಸಿಗಬಹುದಾದ ಅನ್ನಸಾಮಗ್ರಿಗಳಿಗೆ ಮೋಸವಾಗುವ ಭೀತಿಯಿದೆ. ಒಂದು ವೇಳೆ ಧೈರ್ಯ ಮಾಡಿ ಅವನ ವಿರುದ್ಧ ದೂರಿಕೊಂಡರೆ ಅಧಿಕಾರಿಗಳು ಚೌಕಶಿ ಮಾಡಲಿಕ್ಕೆ ಸಂತೋಷಪಡುವದಿಲ್ಲ! (Officers in authority are little disposed to persue prima facie cases for investigation.) ಜನರ ದೂರುಗಳೆಲ್ಲ ನಿರಾಧಾರವಾದವುಗಳೆಂದು ಅವರು ಶರಾ ಬರೆದು ಬಿಡುತ್ತಾರೆ! ಇದಲ್ಲದೆ ಆರೋಪಿತ ಇಸಮಿನ ಕಡೆಗೇ ಒಮ್ಮೊಮ್ಮೆ ದೂರಿನ ಯಥಾರ್ಥತೆಯ ಚೌಕಶಿ ಮಾಡುವ ಕೆಲಸ ಒಪ್ಪಿಸುತ್ತಾರೆ! ಇಂಥ ರಾಜ್ಯಪದ್ಧತಿಯಲ್ಲಿ ಅಧಿಕಾರಿಗಳ ಕಡೆಗೆ ದೂರುಗಳನ್ನೊಯ್ದು ಪ್ರಯೋಜನವೇನು? ಮೇಲಧಿಕಾರಿಗಳು ತಮ್ಮ ಕಚೇರಿಯಲ್ಲಿ ಮೇಲ್ತನಿಖೆಯನ್ನು ಕಠೋರವಾಗಿ ನಡಿಸಬೇಕು. ಸರ್ ಆರ್ಚಿಬೊಲ್ಡರು ಬರೆದಂತೆ, ಮೇಲ್ವಿಚಾರಕರು ಪೂರ್ಣ (Thorough) ತಪಾಸ ನಡಿಸಬೇಕು. ಈಗ ಪ್ರಚಾರದಲ್ಲಿರುವ ತಪಾಸಣೆಯ ಕ್ರಮ ನಿರುಪಯೋಗದ್ದು. ಮೇಲ್ವಿಚಾರಕರು ಕೆಳ-ಅಧಿಕಾರಿಗಳ ಕಡೆಯಿಂದ ಪುಕ್ಕಟೆ ಸರಬರಾಯಿ ಪಡೆಯುವ ಪ್ರಘಾತವನ್ನು ಒಮ್ಮೆಲೇ ನಿಲ್ಲಿಸಬೇಕು. ದೊಡ್ಡ ದೊಡ್ಡ ಸಂಬಳ ಪಡೆಯುವ ಅಧಿಕಾರಿಗಳು ತಮ್ಮ ಪ್ರವಾಸದ ಸುಖ ಸೌಕರ್ಯಗಳಿಗೆ ತಗಲುವ ಖರ್ಚನ್ನು ತಾವು ತೆರದೆ ಕೆಳ-ಅಧಿಕಾರಿಗಳ ಮೇಲೆ ಅದನ್ನು ಹೊರಿಸುವ ಈಗಿನ ಪ್ರಘಾತದಿಂದ ಕೆಳ-ಅಧಿಕಾರಿಗಳಿಗೆ ಲಂಚ ತಿನ್ನಲು ಹೇಳಿದಂತಾಗುತ್ತದೆ. ಸಣ್ಣ ಸಂಬಳ ಪಡೆಯುವ ಚಿಕ್ಕ-ಪುಟ್ಟ ನೌಕರರು ನೂರಾರು ರೂಪಾಯಿ ಖರ್ಚು ಮಾಡಿ ಮೇಲಧಿಕಾರಿಗಳ ಸಂಭ್ರಮವನ್ನು ನಡಿಸಲಾರರು. ಮೇಲಧಿಕಾರಿಗಳು ಸಂಚಾರದಲ್ಲಿರುವಾಗ ಸದಾ ಪವಿತ್ರರಾಗಿರದು, ಅವರಿಂದ ಕಾಸಿನ ಪ್ರಯೋಜನ ಪಡೆಯಲು ಅಪೇಕ್ಷಿಸದೆ ವರ್ತಿಸಿದರೆ ಮಾತ್ರ ಲಂಚಗೋರತನದ ಅನಾಹುತಕರ ಪ್ರಘಾತ ನಷ್ಟವಾದೀತು. ಸರ್ ಆರ್ಚಿಬೊಲ್ಡರು ತಮ್ಮ ವರದಿಯ ಕೊನೆಗೆ ನಮೂದಿಸಿದ ಒಂದು ಮಾತು ಉಲ್ಲೇಖನೀಯವಿದೆ. ಲಂಚದ ಭಾರ ಬೀಳುವದು ಕೊನೆಗೆ ಬಡ ಜನರ ಮೇಲೆ. ಈ ಜನರನ್ನು ರಕ್ಷಿಸಲು ಸರಕಾರವು ಒದ್ದವಿದೆ. ಹಿಂದುಸ್ಥಾನ ಸರಕಾರವು ಸರ್ ಆರ್ಚಿಬೊಲ್ಡರ ವರದಿಯನ್ನು ಚೆನ್ನಾಗಿ ಪರಾಂಬರಿಸಿ, ನಾಡಿನಲ್ಲಿ ಹಬ್ಬಿಕೊಂಡ ಲಂಚಗೋರತನವನ್ನು ನಿರ್ಬಂಧಿಸುವದಕ್ಕಾಗಿ ತಕ್ಕ ಯೋಜನೆ ಕೈಕೊಳ್ಳಬೇಕಾಗಿ ಸೂಚಿಸುತ್ತೇವೆ.

೩. ಲಂಚಗೋರತನದ ಸಂಬಂಧದಲ್ಲಿ ಬರೆಯುವಾಗ ಹೊನ್ನಾವರ ತಾಲೂಕಿನೊಳಗೆ ನಡೆದ ಒಂದು ಸಂಗತಿಯನ್ನು ನಾವು ಸರಕಾರದ ಲಕ್ಷಕ್ಕೆ ತರುವದುಚಿತ. ಇಡಗುಂಜಿಯ ಸಹಕಾರಿ ಸಂಘದವರು ಒಂದು ಸೀಧಾ ಅಂಗಡಿಯನ್ನು ನಡಿಸುತ್ತಾರೆ. ಈ ಅಂಗಡಿಯು ಹೊಣೆ ಸಂಘದ್ದಾದರೂ ಅದರ ಪೂರ್ಣ ಕಾರುಬಾರ ಅಲ್ಲಿಯ ಪಟೇಲರ ಮತ್ತು ಅವರ ತಮ್ಮನ ಕೈಯಲ್ಲಿದೆ. ಇವರು ನಾನಾ ಬಗೆಯ ಕ್ರಮಗಳಿಂದ ಜನರನ್ನು ಸೋಸಗೊಳಿಸುತ್ತಿದ್ದಾರೆ. ಸೀಧಾ ಸರಕುಗಳನ್ನು ಕಳ್ಳ ಪೇಟೆಗೆ ಕಳಿಸುತ್ತಾರೆಂಬ ಆರೋಪವುಂಟು; ಅಕ್ಕಿಯನ್ನು ಅಳೆದು ಕೊಡುವಾಗ ವಂಚನೆ ಮಾಡುತ್ತಾರೆಂಬ ಆಪಾದನೆಯುಂಟು, ಜನರಿಂದ ಕೊಂಡ ಹಣವನ್ನು ಲೆಕ್ಕದಲ್ಲಿ ಜಮಾ ಮಾಡುವದಿಲ್ಲವೆಂದೂ ದೂರು ಉಂಟು. ಸಕ್ಕರೆಯಲ್ಲಿ ಕೊರತೆ ಬಂದಂದೂ ಜನರು ಅದನ್ನು ತುಂಬಿ ಕೊಡಬೇಕೆಂದೂ ಹೇಳಿ, ಜನರಿಂದ ಹಣ ಎತ್ತುವದೂ ನಡೆದದ್ದುಂಟು! ಈ ಬಗ್ಗೆ ನಡೆದ ಲೆಕ್ಕ ತಪಾಸಣೆಯಲ್ಲಿ ಈ ಆರೋಪಗಳೆಲ್ಲ ಸಿದ್ಧವಾಗಿವೆ. ಆದರೆ ಇವೆಲ್ಲಕ್ಕಿಂತ ದೊಡ್ಡ ಆರೋಪಣ ಈ ಅಂಗಡಿಯವರ ಮೇಲೆ ಬಂದಿದೆ. ಅವರು ತಮ್ಮ ಕೀರ್ದಿಯ ೪ ಪುಟಗಳನ್ನು ಹರಿದು ಅವುಗಳ ಸ್ಥಳದಲ್ಲಿ ಬೇರೆ ಹೊಸ ಪುಟಗಳನ್ನು ಅಂಟಿಸಿದ್ದಾರೆ! ಈ ಪುಟಗಳ ಮೇಲೆ ಪಟೇಲರ ತಮ್ಮನ ಬರಹವುಂಟು. ಇದೇ ಕೀರ್ದಿ ಪುಸ್ತಕದ ಮೇಲೆ ಹೊನ್ನಾವರ ತಾಲೂಕ ಕಚೇರಿಯ ಮುದ್ರೆಯಿದೆ. ಈ ಹೊಸ ಪುಟಗಳ ಮೇಲೆ ಮಾತ್ರ ಮುದ್ರೆಯಿಲ್ಲ. ಈ ಕುರಿತು ಆಕ್ಷೇಪ ಬಂದು ಚೌಕಶಿಯಾಗಿ ಅಂಗಡಿಯ ಕಾರಕೂನನಿಗೆ ತೆಗೆದು ಹಾಕಿದ್ದಾರೆ! ಪರೀಕ್ಷಿತರಾಜನಿಗೆ ಕಚ್ಚಿಕೊಂದ ತಕ್ಷಕ ಸರ್ಪವನ್ನು ಆಹುತಿ ಕೊಡುವ ದೆಸೆಯಿಂದ ಜನಮೇಜಯ ರಾಯನು ಹೂಡಿದ ಸರ್ಪಯಾಗದಲ್ಲಿ ಆ ತಕ್ಷಕನು ಬಲಿ ಬೀಳದೆ ಆತನ ಜಾತಿಯವರು ಮಾತ್ರ ಬಲಿ ಬಿದ್ದದ್ದು ಕಂಡು ಇಡಗುಂಜಿ, ಹೊನ್ನಾವರಗಳೊಳಗಿನ ಜನರು ಆಶ್ಚರ್ಯಗೊಂಡಿದ್ದಾರೆ. ಮಾಮಲೇದಾರ, ಜಿಲ್ಹಾಧಿಪರ ಕಡೆ ಈ ಬಗ್ಗೆ ಅರುಹಿಕೊಂಡರೂ, ಖೊಟ್ಟಿ ಲೆಕ್ಕದ ಪುಸ್ತಕ ತಯಾರಿಸಿದ ಪಟೇಲರಿಗಾಗಲಿ, ಅವನ ತಮ್ಮನಿಗಾಗಲಿ ಏನೊಂದೂ ಶಾಸನವಾಗುವದಿಲ್ಲ! ಇಂಥ ಪರಿಸ್ಥಿತಿಯಲ್ಲಿ ಅಧಿಕಾರಿಗಳ ಲಂಚಗೋರತನವು ವಿಶಾಲ ಪ್ರಮಾಣದ ಮೇಲೆ ನಡೆದರೆ ಆಶ್ಚರ್ಯಪಡುವ ಕಾರಣವಿಲ್ಲ. ಮುಂಬಯಿ ಸರಕಾರವು ಈ ಪ್ರಕರಣದ ಕಡೆ ಗಮನ ಕೊಟ್ಟು, ತಪ್ಪಿತಸ್ಥರಿಗೆ ಯೋಗ್ಯ ನ್ಯಾಯ ಕೊಡುವ ಕ್ರಮ ಕೈಕೊಳ್ಳಬೇಕಾಗಿ ನಾವು ವಿನಂತಿ ಮಾಡುತ್ತೇವೆ.

೪. ನಮ್ಮ ಜಿಲ್ಹೆಯೊಳಗಿನ ಮದ್ಯನಿರೋಧನ ಬಗ್ಗೆ ಮುಂಬಯಿ ಸರಕಾರವು ಆಸ್ಥೆ ವಹಿಸುತ್ತಿರುವ ಬಗ್ಗೆ ನಾವು ಅದರ ಉಪಕಾರ ಮನ್ನಿಸುತ್ತೇವೆ. ಸಮುದ್ರ-ಕಾವಲಿಗಾಗಿ ಲಾಂಚ ಇಟ್ಟು ಸಮುದ್ರ ಸಂಚಾರಿ ಸರಾಯಿಗಳ್ಳರನ್ನು ಹಿಡಿಯಲು ಯೋಜಿಸಿದ್ದು ಯಥಾಯೋಗ್ಯವಾಯಿತು. ಸಾಹಿತ್ಯಗಳ ಮಟ್ಟಿಗೆ ಇರುವ ಕೊರತೆಯನ್ನು ಸರಕಾರವು ಪರಿಹರಿಸಿದೆ. ಆದರೆ ಹೊರಮೈಯಂತೆ ಒಳಮೈ ಬಗ್ಗೂ ಸರಕಾರವು ಜಾಗ್ರತೆ ಕೊಳ್ಳಬೇಕಾಗಿದೆ. ಆ ಜಾಗ್ರತೆ ತಕ್ಕೊಂಡರೆ ಮಾತ್ರ ಸರಕಾರದ ಸದಿಚ್ಛೆ ಸಾರ್ಥಕವಾದೀತು. ಕಳ್ಳ ಸರಾಯಿಯ ಪ್ರಸಾರ ಹೆಚ್ಚಾಗಲು, ಕಾವಲಿನ ಅಭಾವಕ್ಕಿಂತ ಮದ್ಯ-ನಿರೋಧಕ ಅಧಿಕಾರಿಗಳ ಹಾಗೂ ಅವರ ಗೆಳೆಯರ ಮದ್ಯಲೋಲುಪತೆಯೇ ಹೆಚ್ಚಿನ ಕಾರಣವಾಗಿದೆ. ಮದ್ಯ-ನಿರೋಧನ ಕ್ಷೇತ್ರಗಳಲ್ಲಿ ಮದ್ಯಪಿಗಳನ್ನು ನೇಮಿಸಕೂಡದು. ಅಬಕಾರಿ ಅಧಿಕಾರಿಗಳೂ ಪೋಲೀಸ ಅಧಿಕಾರಿಗಳೂ ಸರಾಯಿ ಕುಡಿಯುವವರಾದ್ದರೆ ಸರಾಯಿಗಳ್ಳರಿಗೂ ಈ ಅಧಿಕಾರಿಗಳಿಗೂ ಸಮಾನ ವ್ಯಸನಗಳ ಮೂಲಕ ಸ್ವಾಭಾವಿಕವಾಗಿ ಸಖ್ಯವುಂಟಾಗುತ್ತದೆ. ಸರಾಯಿಗಳ್ಳರ ಕಡೆಯಿಂದ ಈ ಅಧಿಕಾರಿಗಳ ಸಂಭ್ರಮದಿಂದ ಸರಾಯಿಯ ಸರಬರಾಯಿ ನಡೆಯುತ್ತದೆ! ದೊಡ್ಡ ಅಧಿಕಾರಿಗಳೂ ದೊಡ್ಡಸ್ತಿಕೆಗಾಗಿ ಸರಾಯಿ ಕುಡಿಯುವ ರೂಢಿ ಬಿದ್ದಿದೆ. ಮಹಾಜನರಿಗೆ ಮೆರೆಯುವ ಅರ್ವಾಚೀನ ಪರಂಪರೆಯಲ್ಲಿ ಮದ್ಯಕ್ಕೊಂದು ಗೌರವಸ್ಥಾನ ಸಿಕ್ಕಿದೆ. ಪರಸ್ಪರ ಸ್ವಾರ್ಥಸಾಧಕರು ಏರ್ಪಡಿಸುವ ಗುಪ್ತ ಮೇಜವಾನಿಗಳಲ್ಲಿ ಕಳ್ಳ ಸರಾಯಿಗೆ ಪ್ರಾಧಾನ್ಯವುಂಟು. ಮದ್ಯನಿರೋಧಕ ಅಧಿಕಾರಿಗಳು ಹೀಗೆ ಮದ್ಯಪಾನದಿಂದ ಸಂತೋಷಪಡುತ್ತಿರುವದರಿಂದಲೇ ಅವರೊಡನೆ ಸ್ನೇಹ ಬೆಳಸಲಪೇಕ್ಷಿಸುವ, ತಿಂದು, ಕುಡಿದು ದೊಡ್ಡವರಾಗಬಯಸುವ ಮತ್ತು ಉಚ್ಚರೆಂದು ಹೇಳಿಕೊಳ್ಳುವವರ ಸಮಾಜದಲ್ಲಿ ಮದ್ಯಪ್ರಸಾರವಾಗಹತ್ತಿದೆ! ದೊಡ್ಡವರೆಂದೆನಿಸಿಕೊಳ್ಳುವವರೇ ಮದ್ಯಪಿಗಳಾದ್ದರಿಂದ ಸರಾಯಿಗಳ್ಳರಿಗೆ ಸರಾಯಿಯನ್ನು ಆಮದು ಮಾಡಲಿಕ್ಕೆ ಬೇಕಷ್ಟು ಭಂಡವಲವೂ ಆಶ್ರಯವೂ ದೊರೆತು ಮದ್ಯನಿರೋಧನ ಕಾರ್ಯಕ್ಕೆ ತೊಂದರೆಯಾಗಿದೆ. ಜಿಲ್ಹಾಧಿಪರ ಮದ್ಯನಿರೋಧನದ ಆಸಕ್ತಿ ಕಂಡು ನಮಗೆ ತುಂಬಾ ಸಂತೋಷ. ಮದ್ಯನಿರೋಧನ-ಕಾರ್ಯಕ್ಕೆ ನಿತ್ಯ-ಸಂಬಂಧವಿರುವ ಅಬಕಾರಿ ಮತ್ತು ಪೋಲೀಸ ಅಧಿಕಾರಿಗಳನ್ನು ನೇಮಿಸುವಾಗ ಸರಾಯಿಯ ಸ್ಪರ್ಶ ಸಹಿಸದವರನ್ನು ನೇಮಿಸುವ ಧೋರಣ ತಳೆದರೆ ಮಾತ್ರ ಮದ್ಯನಿರೋಧನದ ಗುರಿಯನ್ನು ನಾವು ಮುಟ್ಟಬಹುದಾಗಿದೆ

ಸ್ಥಾನಿಕ ವೃತ್ತಾಂತ.

ಕುಮಟಾ— ೭-೮ ದಿನಗಳಿಂದ ಛಳಿಯು ಬೀಳುತ್ತಿದೆ.

ಕಳೆದ ಸೋಮವಾರ ಶ್ರೀ ವೆಂಕಟರಮಣ ದೇವರ ವನಭೋಜನದ ಮಹೋತ್ಸವವೂ ಗುರುವಾರ ಶಿಖರದೀಪೋತ್ಸವವೂ ಶ್ರೀ ಗೋಕರ್ಣ ಮಠಾಧೀಶರ ಸಾನ್ನಿಧ್ಯದಿಂದ ಈ ವರ್ಷ ವಾಡಿಕೆಗಿಂತ ವಿಶೇಷ ವಿಜೃಂಭಣೆಯಿಂದ ನಡೆದವು.

ಬುಧವಾರದಿಂದ ಪ್ರತಿ ನಿತ್ಯ ಸಂಜೆ ಶ್ರೀ ವೆಂಕಟರಮಣ ದೇವಸ್ಥಾನದ ಅಟ್ಟದ ಮೇಲೆ ಶ್ರೀಮದ್-ದ್ವಾರಕಾನಾಥ ತೀರ್ಥ ಗುರುಗಳ ಪ್ರವಚನಗಳು ನಡೆಯುತ್ತಿವೆ "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್" ಎಂಬ ಗೀತೆಯೊಳಗಿನ ಮಹಾವಾಕ್ಯದ ತಿರುಳನ್ನೇ ಶ್ರೀಗಳು ಈ ತನಕ ವಿಸ್ತಾರವಾಗಿ ವಿವರಿಸುತ್ತಿದ್ದಾರೆ. ಶ್ರೋತೃಗಳ ಅಪೇಕ್ಷೆಯಂತೆ ಪ್ರವಚನಗಳು ಕೊಂಕಣ ಭಾಷೆಯಲ್ಲಿ ನಡೆದಿವೆ.

ಜಿಲ್ಲಾಧಿಕಾರಿಗಳು ಕಳೆದ ವಾರ ಈ ಊರಲ್ಲಿದ್ದರು. ಆಗ ಅವರು ಸೀದಾ ಅಂಗಡಿಗಳಿಗೆ ಭೆಟ್ಟಿಕೊಟ್ಟು ಅಂಗಡಿಗಳೊಳಗಿನ ಸರಕುಗಳ ಬಗ್ಗೆ ಜನರ ದೂರುಗಳೇನೆಂಬುದು ಕೇಳಿಕೊಂಡು ಸಣ್ಣಕ್ಕಿಯನ್ನು ಒತ್ತಾಯದಿಂದ ಮಾರಕೂಡದಾಗಿ ಸುಳುವು ಕೊಟ್ಟಿದ್ದಾರೆ. ಸರಕಾರಮಾನ್ಯ ಜವಳಿ ಅಂಗಡಿಕಾರರ ಸಂಕಟಗಳನ್ನೂ ಅವರು ಕೇಳಿಕೊಂಡು, ಕೋ.ಆ.ವರ್ಕರು ಹಂಚಿಕೊಟ್ಟ ಎಲ್ಲ ಜವಳಿಯನ್ನು ಅಂಗಡಿಕಾರರು ಒಮ್ಮೆಲೇ ಒಯ್ಯಬೇಕೆಂಬ ನಿಯಮವನ್ನು ಸಡಲಿಸಿದ್ದಾರೆಂದು ತಿಳಿಯುತ್ತದೆ. [illegible] ಜವಳಿಯನ್ನು ಬಿಟ್ಟು ತಮಗೆ ಬೇಕಾದ ದಿನಸು ಅಥವಾ ಅರ್ಧದಿನಸು ಜವಳಿಯನ್ನಷ್ಟೇ ಅಂಗಡಿಕಾರರು ಕೋ.ಆ.ವರ್ಕರಿಂದ ಕೊಂಡುಕೊಳ್ಳಬಹುದೆಂದು ಅವರು ತಿಳಿಸಿದ್ದಾರಂತೆ

ಕೇಂದ್ರ-ಎಸೆಂಬ್ಲಿಯ ಚುನಾವಣೆಗೆ ನಮ್ಮ ದಕ್ಷಿಣ-ಭಾಗದಿಂದ ಕಾಂಗ್ರೆಸ-ಹುರಿಯಾಳಾಗಿ ನಿಂತಿರುವ ಶ್ರೀ ಕಾರವಾರಕರರೂ ಮುಸಲ್ಮಾನರ ಸ್ಥಳಕ್ಕೆ ಹುರಿಯಾಳಾಗಿ ನಿಂತಿರುವ ರಾಷ್ಟ್ರೀಯ ಮುಸಲ್ಮಾನ ಪಕ್ಷದ ಶ್ರೀ ಮುಸೇನಭಾಯಿ ಬಾಲಜಿ ಅವರ ಪ್ರಚಾರಕರಾದ ಶ್ರೀ ಖಾನಸಾಹೇಬರೂ ಯಲ್ಲಾಪುರ, ಅಂಕೋಲಾ, ಗೋಕರ್ಣ ಮಾರ್ಗವಾಗಿ ಕಳೆದ ಸೋಮವಾರ ರಾತ್ರಿ ಪ್ರಚಾರಕ್ಕಾಗಿ ಇಲ್ಲಿಗೆ ಬಂದಿದ್ದರು. ಗೋಕರ್ಣಸ್ಥರು ಮಾದನಗೇರಿಯಲ್ಲಿ ಶ್ರೀ ಕಾರವಾರಕರರ ಮೋಟರ ಬಂಡಿಯನ್ನು ಅಡ್ಡಗಟ್ಟಿ ಗೋಕರ್ಣಕ್ಕೆ ಕರೆದೊಯ್ದದ್ದರಿಂದ ಸಂಜೆ ೭ರ ಬದಲು ಅವರು ೯ ಘಂಟೆಯ ಸುಮಾರಿಗೆ ಇಲ್ಲಿಗೆ ಬಂದು ಮುಟ್ಟಿದರು. ಕೂಡಲೇ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣದಲ್ಲಿ ಕೂಡಿದ ಸಭೆಯೊಳಗೆ ಅವರ ಭಾಷಣವಾಯಿತು. ಕಾಂಗ್ರೆಸ್ಸು ಚುನಾವಣೆಗಳಲ್ಲಿ ಭಾಗ ವಹಿಸಿದ ಉದ್ದೇಶವೇನೆಂಬುದನ್ನು ಅವರು ಸ್ಪಷ್ಟವಾಗಿ ವಿವರಿಸಿ, ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನೂ ಶಕ್ತಿಯನ್ನೂ ಬ್ರಿಟಿಶ ಅಧಿಕಾರಿಗಳಿಗೆ ತೋರ್ಪಡಿಸುವದಕ್ಕಾಗಿ ಪ್ರತಿಯೊಬ್ಬ ಮತದಾರನು (ಇಂದು ಆಗಲಿರುವ) ಚುನಾವಣೆಯಲ್ಲಿ ಭಕ್ತಿಯಿಂದ ಮತದಾನ ಸ್ಥಳಕ್ಕೆ ಹೋಗಿ, ತನ್ನ ಮತವೆಂಬ ಹೂವನ್ನು ಹಿಂದೀ ರಾಷ್ಟ್ರೀಯ ಸಭೆಯ ಮತ್ತು ಜಗದ್ವಂದ್ಯ ಮಹಾತ್ಮಾಜಿಯವರ ಚರಣಾರವಿಂದಗಳಿಗೆ ಅರ್ಪಿಸುತ್ತೇನೆಂದು ಭಾವಿಸಿ ಕಾಂಗ್ರೆಸ ಹುರಿಯಾಳುವಿಗೇ ಮತ ಕೊಡಬೇಕಾಗಿ ಬೋಧಿಸಿದರು. ಅದೇ ವೇಳೆಗೆ (ನಾಳೆ ಆಗಲಿರುವ) ಮುಸಲ್ಮಾನ ಸ್ಥಳದ ಚುನಾವಣೆಯಲ್ಲಿ ಮುಸಲ್ಮಾನ ಮತದಾರ-ಬಾಂಧವರು ರಾಷ್ಟ್ರೀಯ ಪಕ್ಷದ ಪರವಾಗಿ ನಿಂತಿರುವ ಜನಾಬ ಮುಸೇನಭಾಯಿ ಬಾಲಜಿಯವರಿಗೇ ತಮ್ಮ ಮತಗಳನ್ನು ಕೊಡಬೇಕಾಗಿಯೂ ವಿನಂತಿಸಿದರು. ಶ್ರೀ ಖಾನಸಾಹೇಬರೂ ಹಿಂದುಸ್ಥಾನಿ ಭಾಷೆಯಿಂದ ಚಿಕ್ಕದೊಂದು ಭಾಷಣ ಮಾಡಿ ಶ್ರೀ ಕಾರವಾರಕರರ ಮಾತಿಗೆ ಪುಷ್ಟಿ ಕೊಟ್ಟರು. ಅಲ್ಲಿಯ ಸಭೆ ಮುಗಿಸಿ ಶ್ರೀ ಕಾರವಾರಕರರೂ ಅವರ ಜೊತೆಗಾರರೂ ಜಿಲ್ಲಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷ ಶ್ರೀ ಶಿ. ಶ್ರೀ. ನಾಯಕರೊಡನೆ ಹೊನ್ನಾವರ

(೬ನೇ ಪುಟದ ಮೇಲೆ ಮುಂದರಿಕೆ)

ಹಿಂದುಸ್ಥಾನಿ ಪಾಠಗಳು.

ಸಬಕ ತೀನ (ಪಾಠ ೩)

ತುಮ ಕಹಾಂ ರಹತೇ ಹೋ? (ನೀನು ಎಲ್ಲಿರುತ್ತೀ?) ಮೈಂ ಮೈಸೂರಮೇಂ ರಹತಾ ಹೂಂ. (ನಾನು ಮೈಸೂರಲ್ಲಿರುತ್ತೇನೆ) ತುಮ ಮೈಸೂರಮೇಂ ಕ್ಯಾ ಕರತೇ ಹೋ? (ನೀನು ಮೈಸೂರಲ್ಲಿ ಏನು ಮಾಡುತ್ತೀ?) ಮೈಂ ವಹಾಂ ಮ್ಯುನಿಸಿಪಾಲಿಟಿಮೇಂ ನೌಕರ ಹೂಂ (ನಾನು ಅಲ್ಲಿ ಮ್ಯುನಿಸಿಪಾಲಿಟಿಯಲ್ಲಿ ನೌಕರನಿದ್ದೇನೆ.) ತುಮಕೋ ಕಿತನೀ ತನಖಾಹ ಮಿಲತೀ ಹೈ? (ನಿನಗೆ ಎಷ್ಟು ಸಂಬಳ ಸಿಗುತ್ತದೆ?) ಮುಝೇ ಬೀಸ ರುಪಯೇ ಮಿಲತೇ ಹೈಂ) ನನಗೆ ೨೦ ರೂಪಾಯಿ ಸಿಗುತ್ತದೆ) ಕ್ಯಾ ತುಮ ಆನಂದರಾಮಕೋ ಜಾನತೇ ಹೋ? (ನೀನು ಆನಂದರಾಮನನ್ನು ಬಲ್ಲೆಯಾ?) ಜೀ ಹಾಂ, ಮೈಂ ಜಾನತಾ ಹೂಂ; (ಹೌದು ನಾನು ಬಲ್ಲೆ;) ವಹ ಮೇರಾ ಚಚೇರಾ ಭಾಈ ಹೈ (ಅವನು ನನ್ನ ಚಿಗಪ್ಪನ ಮಗ.) ಉಸಕೋ ಕಿತನೀ ತನಖಾಹ ಮಿಲತೀ ಹೈ? (ಅವನಿಗೆ ಎಷ್ಟು ಸಂಬಳ ಸಿಗುತ್ತದೆ?) ಉಸಕೋ ಸೌ ರುಪಯೇ ಮಿಲತೇ ಹೈಂ (ಅವನಿಗೆ ೧೦೦ ರೂ. ಸಂಬಳ ಸಿಗುತ್ತದೆ.) ಉಸಕಾ ಘರ ಕಹಾಂ ಹೈ? (ಅವನ ಮನೆ ಎಲ್ಲಿದೆ?) ಬಂಟೀಕೊಪ್ಪಲಮೇಂ ಹೈ. (ಬಂಟೀಕೊಪ್ಪಲದಲ್ಲಿದೆ) ತುಮ್ಹಾರೇ ಕಿತನೇ ಭಾಈ ಹೈಂ? (ನಿನಗೆ ಎಷ್ಟು ಸಹೋದರರು?) ಮೇರೇ ಏಕಹೀ ಭಾಈ ಹೈ. (ನನಗೆ ಒಬ್ಬನೇ ಸಹೋದರ.) ವಹ ಕ್ಯಾ ಕರತಾ ಹೈ? (ಅವನು ಏನು ಮಾಡುತ್ತಾನೆ?) ವಹ ಕಾಲೇಜಮೇಂ ಪಢತಾ ಹೈ. (ಅವನು ಕಾಲೇಜಿನಲ್ಲಿ ಓದುತ್ತಾನೆ.) ಹಮ ಕಹಾಂ ರಹತೇ ಹೈಂ? (ನಾವು ಎಲ್ಲಿರುತ್ತೇವೆ?) ಹಮ ಹಿಂದುಸ್ಥಾನಮೇಂ ರಹತೇ ಹೈಂ (ನಾವು ಹಿಂದುಸ್ಥಾನದಲ್ಲಿರುತ್ತೇವೆ.) ಹಮಾರೀ ಮಾದರೀ ಜಬಾನ ಕ್ಯಾ ಹೈ? (ನಮ್ಮ ಮಾತೃ-ಭಾಷೆ ಯಾವುದು?) ಹಮಾರೀ ಮಾದರೀ ಜಬಾನ ಕನ್ನಡೀ ಹೈ. (ನಮ್ಮ ಮಾತೃ-ಭಾಷೆ ಕನ್ನಡ.) ಹಮಾರೀ ಕೌಮೀ ಜಬಾನ ಕ್ಯಾ ಹೈ? (ನಮ್ಮ ರಾಷ್ಟ್ರ-ಭಾಷೆ ಯಾವುದು?) ಹಮಾರೀ ಕೌಮೀ ಜಬಾನ ಹಿಂದುಸ್ಥಾನೀ ಹೈ (ನಮ್ಮ ರಾಷ್ಟ್ರ ಭಾಷೆ ಹಿಂದುಸ್ಥಾನಿ.)

ಸಬಕ ಚಾರ (ಪಾಠ ೪)

ತೂ ಆ. (ನೀ ಬಾ.) ತೂ ಜಾ. (ನೀ ಹೋಗು.) ತೂ ಖಾ. (ನೀನು ತಿನ್ನು) ತೂ ಮತ ಹಂಸ (ನೀ ನಗಬೇಡ) ತುಮ ಆಓ. (ನೀವು ಬನ್ನಿ) ತುಮ ಜಾಓ (ನೀವು ಹೋಗಿರಿ) ತುಮ ಖಾಓ (ನೀವು ತಿನ್ನಿರಿ) ತುಮ ಮತ ಹಂಸೋ. (ನೀವು ನಗಬೇಡಿರಿ) ಆಪ ಆಇಯೇ. (ತಾವು ಬನ್ನಿರಿ.) ಆಪ ಜಾಇಯೇ. (ತಾವು ಹೋಗಿರಿ) ಆಪ ಖಾಇಯೇ (ತಾವು ತಿನ್ನಿರಿ.) ಆಪ ಮತ ಹಂಸಿಯೇ (ತಾವು ನಗಬೇಡಿರಿ.) ಅಂದರ ಆಇಯೇ (ಒಳಗೆ ಬನ್ನಿರಿ.) ಕುರ್ಸೀಪರ ಬೈಠಿಯೇ. (ಖುರ್ಚಿಯ ಮೇಲೆ ಕೂತ್ಕೊಳ್ಳಿರಿ.) ಖತ ಪಢಿಯೇ (ಕಾಗದ ಓದಿರಿ.) ಜಮೀನ ಪರ ಮತ ಬೈಠಿಯೇ (ನೆಲದ ಮೇಲೆ ಕೂತ್ಕೊಳ್ಳಬೇಡಿ) ದರವಾಜಾ ಖೋಲಿಯೇ. (ಬಾಗಿಲು ತೆರೆಯಿರಿ.) ಧೋಬೀಸೇ ಕಹಿಯೇ, (ಅಗಸಗೆ ಹೇಳ,) ಕಪಡೇ ಅಚ್ಛೀ ತರಹ ಸಾಫ ಕರೇ (ಬಟ್ಟೆಗಳನ್ನು ಸ್ವಚ್ಛ ಒಗೆ.) ಬಾವರಚೀಸೇ ಖಾನಾ ಲಾಓ. (ಅಡಿಗೆಯವನಿಂದ ಊಟವನ್ನು ತರ್) ಏಕ ಪ್ಯಾಲಾ ಚಾಯ ಪೀಜಿಯೇ (ಒಂದು ಪೇಲೆ ಚಹಾ ಕುಡಿಯಿರಿ) ಆಪ ಚಾಯ ನಹೀಂ ಪೀತೇ ಹೈಂ? (ತಾವು ಚಹಾ ಕುಡಿಯುವದಿಲ್ಲವೇ?) ದೂಧ ಲೀಜಿಯೇ (ಹಾಲು ತಕ್ಕೊಳ್ಳಿ.) ದೂಧಮೇಂ ಶಕ್ಕರ ಕಮ ಹೈ. (ಹಾಲಿನಲ್ಲಿ ಸಕ್ಕರೆ ಕಡಿಮೆ ಇದೆ.) ಜರಾ ಶಕ್ಕರ ದೀಜಿಯೇ. (ಸ್ವಲ್ಪ ಸಕ್ಕರೆ ಕೊಡಿ) ಜಲದೀ ಘರ ಜಾಇಯೇ. (ಬೇಗ ಮನೆಗೆ ಹೋಗಿರಿ.) ಯಹ ಕಾಮ ಕೀಜಿಯೇ (ಆ ಕೆಲಸ ಮಾಡಿರಿ) ಲಕ್ಷ್ಮೀಕೋ ಡಾಕ್ಟರಕೇ ಘರ ಲೇ ಜಾಓ. (ಲಕ್ಷ್ಮೀಗೆ ಡಾಕ್ಟರನ ಮನೆಗೆ ಕರಕೊಂಡು ಹೋಗಿ.) ಡಾಕ್ಟರಸಾಹಬ, ಜರಾ ಮುಝೇ ದೇಖಿಯೇ (ಡಾಕ್ಟರರೇ, ದಯವಿಟ್ಟು ನನ್ನನ್ನು ನೋಡಿರಿ.) ತುಮಕೋ ಕ್ಯಾ ಬೀಮಾರೀ ಹೈ? (ನಿನಗೆ ಏನು ಬೇನೆಯಾಗಿದೆ?) ಮೇರೇ ಪೇಟಮೇಂ ದರ್ದ ಹೈ. (ನನ್ನ ಹೊಟ್ಟೆಯಲ್ಲಿ ನೋವಿದೆ) ಮುಝೇ ಕುಛ ದವಾ ದೀಜಿಯೇ (ನನಗೆ ಏನಾದರೂ ಮದ್ದು ಕೊಡಿ) ಯಹ ದವಾ ಪೀಜಿಯೇ (ಈ ಮದ್ದು ಕುಡಿಯಿರಿ) ದವಾ ಕಡವೀ ಹೈ. (ಮದ್ದು ಕಹಿಯುಂಟು.) ಮೀಠೀ ದವಾ ದೀಜಿಯೇ (ಸಿಹಿ ಮದ್ದು ಕೊಡಿ) ಏಕ ಪೆಪ್ಪರಮೆಂಟ ಲೀಜಿಯೇ. (ಒಂದು ಪೆಪ್ಪರಮೆಂಟ ತೆಗೆದುಕೊಳ್ಳಿ.)

ಸಬಕ ಪಾಂಚ (ಪಾಠ ೫)

ಯಹ ದೂಧವಾಲಾ ಹೈ (ಇವನು ಹಾಲಿನವನು) ವಹ ರೋಜ ಸವೇರೇ ಛ ಬಜೇ ದೂಧ ಲಾತಾ ಹೈ. (ಅವನು ದಿನಾಲೂ ಬೆಳಗ್ಗೆ ೬ ಗಂಟೆಗೆ ಹಾಲು ತರುತ್ತಾನೆ) ವಹ ಘರಪರ ಹೀ ದೂಧ ದುಹತಾ ಹೈ. (ಅವನು ಮನೆಯಲ್ಲೇ ಹಾಲು ಕರೆದುಕೊಂಡು ತರುತ್ತಾನೆ.) ವಹ ಬಹುತ ಈಮಾನದಾರ ಹೈ. (ಅವನು ಬಹಳ ಪ್ರಾಮಾಣಿಕನಿದ್ದಾನೆ) ಉಸಕೇ ಪಾಸ ಆಠ ಗಾಯೇಂ ದೋ ಭೈಂಸೇಂ ಹೈಂ. (ಅವನ ಕಡೆ ೮ ಆಕಳು ಮತ್ತು ೨ ಎಮ್ಮೆಗಳಿವೆ.) ಹಮ ಪೀನೇಕೇ ಲಿಯೇ ಗಾಯಕಾ ದೂಧ ಲೇತೇ ಹೈಂ. (ನಾವು ಕುಡಿಯಲಿಕ್ಕೆ ಆಕಳ ಹಾಲು ತಕ್ಕೊಳ್ಳುತ್ತೇವೆ.) ದಹೀ ಬನಾನೇಕೇ ಲಿಯೇ ಭೈಂಸಕಾ ದೂಧ ಲೇತೇ ಹೈಂ (ಮೊಸರು ಮಾಡಲಿಕ್ಕೆ ಎಮ್ಮೆಯ ಹಾಲು ಕೊಳ್ಳುತ್ತೇವೆ) ಹಮ ಬಾಜಾರಕಾ ದಹೀ ನಹೀಂ ಖರೀದತೇ. (ನಾವು ಪೇಟೆಯೊಳಗಿನ ಮೊಸರು ಕೊಂಡುಕೊಳ್ಳುವದಿಲ್ಲ) ಮುಝೇ ಖಟ್ಟಾ ದಹೀ ಪಸಂದ ನಹೀಂ ಹೈ. (ನನಗೆ ಹುಳಿ ಮೊಸರು ಸೇರುವದಿಲ್ಲ.) ಗಾಯಕಾ ದೂಧ ರುಪಯಾ ದೋ ಆನೇ ಸೇರ ಪರ ಬಿಕತಾ ಹೈ. (ಆಕಳ ಹಾಲು ಒಂದು ರೂಪಾಯಿ ಎರಡಾಣೆಗೆ ಒಂದು ಪಡಿಯಂತೆ ಮಾರುತ್ತಾರೆ ; ಏಕ ಪಡೀ ಕರೀಬ ಡೇಢ ಸೇರಕೇ ಬರಾಬರ ಹೈ. (ಒಂದು ಪಡಿ ಸುಮಾರು ೧½ ಶೇರಿಗೆ ಸಮನಾಗುತ್ತದೆ) ಪಹಲೇ ದೂಧ ಸಸ್ತಾ ಥಾ (ಹಿಂದೆ ಹಾಲು ಅಗ್ಗವಿತ್ತು) ಅಬ ಮಹಂಗಾ ಹೈ. (ಈಗ ತುಟ್ಟಿಯಾಗಿದೆ) ಗಾಯ ದೂಧ ದೇತೀ ಹೈ. (ಆಕಳು ಹಾಲು ಕೊಡುತ್ತದೆ.) ಹಮ ಭೈಂಸಕಾ ದೂಧಭೀ ಕಾಮಮೇಂ ಲಾತೇ ಹೈಂ (ನಾವು ಎಮ್ಮೆಯ ಹಾಲು ಕೂಡ ಉಪಯೋಗಿಸುತ್ತೇವೆ) ಕಭೀ ಕಭೀ ಬಕರೀಕಾ ದೂಧಭೀ ಕಾಮಮೇಂ ಲಾತೇ ಹೈಂ. (ಒಮ್ಮೊಮ್ಮೆ ಆಡಿನ ಹಾಲನ್ನೂ ಉಪಯೋಗಿಸುತ್ತೇವೆ) ಗಾಯ ಅಚ್ಛಾ ಜಾನವರ ಹೈ. (ಆಕಳು ಒಳ್ಳೇ ಪ್ರಾಣಿ) ಗಾಯ ಹಮಾರೇ ಬಡೇ ಕಾಮಕೀ ಹೈ (ಆಕಳು ನಮಗೆ ಬಹಳ ಉಪಯೋಗದ್ದು) ಗಾಯ ಬೈಲಕೀ ಮಾಂ ಹೈ (ಆಕಳು ಹೋರಿಯ ತಾಯಿ) ಬೈಲ ಹಲ ಜೋತತಾ ಹೈ (ಎತ್ತು ಹೊಲವನ್ನು ಊಳುತ್ತದೆ) ಗಾಯಕೇ ಚಾರ ಪೈರ ಹೋತೇ ಹೈಂ (ಆಕಳಿಗೆ ನಾಲ್ಕು ಕಾಲುಗಳುಂಟು) ಉಸಕೀ ಪೂಂಛ ಲಂಬೀ ಹೋತೀ ಹೈ (ಅದರ ಬಾಲ ಉದ್ದವಿರುತ್ತದೆ) ಉಸಕೇ ಸಿರಪರ ದೋ ಸೀಂಗ ಹೋತೇ ಹೈಂ (ಅದರ ತಲೆಯ ಮೇಲೆ ೨ ಕೋಡುಗಳಿರುತ್ತವೆ) ಹಮಾರೇ ಸಿರಪರ ಬಾಲ ಹೈಂ (ನಮ್ಮ ತಲೆಯ ಮೇಲೆ ಕೂದಲುಗಳಿವೆ) ಗಾಯ ಘಾಸ, ಭೂಸಾ, ಖಲೀ ವಗೈರಹ ಖಾತೀ ಹೈ. (ಆಕಳು ಹುಲ್ಲು, ಹೊಟ್ಟು, ಹಿಂಡಿ ಮುಂತಾದ್ದು ತಿನ್ನುತ್ತದೆ.)

THE BANK OF RURAL INDIA, LTD.,
(Incorporated in British India under the Indian Companies Act, 1913)
HEAD OFFICE- **KARWAR.**
Offices at:- KARWAR, KUMTA, HONAVAR & SIRSI.
Authorised Capital .. Rs 10,00,000;
Subscribed Capital .. Rs. 5,00,000;
Paid-up Capital .. Rs 2,60,000.
Rates of Interest on Deposits:
Current a/c. @ 1% p. a. ***Savings Bank a/c @ 2½%***
Fixed Deposits for 3 months @ 3% per annum
" " for 6 months @ 3½% "
" " for 12 months or more @ 4% "
The Board of Directors have pleasure to announce the opening of a sub-Branch at YELLAPUR shortly.
All Kinds of modern Banking business transacted.
Karwar, 20-11-1945
P. X. GRACIOUS,
MANAGING DIRECTOR

ಸ್ಥಾನಿಕ ವೃತ್ತಾಂತ

(೩ನೇ ಪುಟದಿಂದ ಮುಂದರಿಸಿದ್ದು)

ಕ್ಕೆ ತೆರಳಿದರು ಅಲ್ಲಿಂದ ಮಾರುದಿನ ಮುಂಜಾನೆ ಭಟಕಳಕ್ಕೆ ಹೋಗಿ, ಅಂದೇ ಸಂಜೆ ತಿರಿಗಿಯೂ, ಸಿದ್ದಾಪುರಕ್ಕೂ ಭೆಟ್ಟಿ ಕೊಟ್ಟರು

ಹಿಂದು ಮಹಾಸಭೆಯ ಪ್ರಚಾರಕರು ಕೆಲವು ದಿನಗಳ ಹಿಂದೆ ಈ ಊರಿಗೆ ಬಂದಾಗ ಶ್ರೀ ಗೋಕರ್ಣ ಪರ್ತಗಾಳಿ ಮಠಾಧೀಶ ಶ್ರೀಮದ್-ದ್ವಾರಕಾನಾಥ ತೀರ್ಥ ಸ್ವಾಮಿಗಳ ದರ್ಶನಕ್ಕೆ ಹೋಗಿದ್ದರು. ಸಂಸ್ಥಾನದ ಸಂಪ್ರದಾಯದಂತೆ ಶ್ರೀಗಳು ಅವರಿಗೆ ಶ್ರೀಫಲ-ಮಂತ್ರಾಕ್ಷತೆಗಳನ್ನು ಕೊಟ್ಟು ಕಳಿಸಿದ್ದರು ಈ ಸಾಮಾನ್ಯ ಆಶೀರ್ವಾದದ ವಿಪರ್ಯಾಸ ಅರ್ಥ ಮಾಡಿ ಗುರುಗಳು ಚುನಾವಣೆಯಲ್ಲಿ ಹಿಂದು ಮಹಾಸಭೆಗೆ ಯಶಸ್ಸು ಕೋರಿ ಆಶೀರ್ವಾದ ಕೊಟ್ಟಿದ್ದಾರೆಂದು ಮಹಾಸಭೆಯ ಪ್ರಚಾರಕರು ಅಪಪ್ರಚಾರ ನಡಿಸಿದ್ದಾರೆಂದು ಬರುತ್ತಿದೆ! ಶ್ರೀಗುರುವರ್ಯರು ರಾಜಕಾರಣದಿಂದ ಅಲಿಪ್ತರಿದ್ದು, ಹಿಂದು ಮಹಾಸಭೆಯ ಕಾರ್ಯಕ್ಕಾಗಲಿ ರಾಜಕಾರಣಕ್ಕಾಗಲಿ ಸಹಾನುಭೂತಿಯನ್ನೂ ತೋರಿಸಿಲ್ಲ, ಆಶೀರ್ವಾದವನ್ನೂ ಕೊಟ್ಟಿಲ್ಲವೆಂದು ತಿಳಿಯುತ್ತದೆ

ಹೊನ್ನಾವರ— (ತಾ ೧೦-೧೧-೪೫) ತಾ ೨೯-೧೦-೪೫ರ "ವೃತ್ತ"ದಲ್ಲಿ ಪತ್ರಕಾಳಿನ ಒಕ್ಕಲು ಮುಕ್ತ ವ್ಯವಹಾರದ ರಾ॥ ಹಳದೀಪುರಕರರವರು ಹೊನ್ನಾವರ ಅರ್ಬನ ಕೋ-ಆಪರೇಟಿವ್ ಬ್ಯಾಂಕಿನ ಮೇಲೆ ಮಾಡಿದ ವ್ಯಂಗ್ಯಟೀಕೆಗೆ ಪ್ರತ್ಯುತ್ತರರೂಪವಾಗಿ ಆ ಬ್ಯಾಂಕಿನ ಅಭಿಮಾನಿಗಳೊಬ್ಬರು ಬರೆಯುತ್ತಾರೆ – ನಮ್ಮ ಬ್ಯಾಂಕ ರೂ ೧೩ ೨೫ ರತ್ತಲುಗಳಂತೆ ಖರೀದಿಸಿದ ಪತ್ರಕಾಳನ್ನು ಚೀಲ ೧೩ ರೂ. ೧೭ರಂತೆ ಮಾರಿದಾಗಿಯೂ ತಾವು ೨೦ ರತ್ತಲುಗಳಂತೆ ಖರೀದಿಸಿದ ಪತ್ರಕಾಳನ್ನು ಚೀಲ ೧೩ ರೂ. ೧೨-೧೪ ದರಂತೆ ಮಾರಿದೆವೆಂತಲೂ ಬರೆದು, ಬ್ಯಾಂಕು ಹೆಚ್ಚಿನ ಲಾಭ ಮಾಡಿ ಜನರನ್ನು ಸುಲಿಯುತ್ತದೆಂದು ಧ್ವನಿಸಿದ್ದಾರೆ, ಮತ್ತು ದಯೆಯಿಂದ ತಾವು ಲೋಕೋಪಕಾರಗಳೆಂದೂ ನಿಸ್ಪೃಹರೆಂದೂ ಸೂಚಿಸಿದ್ದಾರೆ ಹೀಗೆ ಮಾಡುವಾಗ ಅವರು ಅಸತ್ಯ ವಿಧಾನಗಳನ್ನು ಮುಂದೊಡ್ಡಿ ಸತ್ಯ ಸಂಗತಿಗಳನ್ನು ಅಡಗಿಸಿದ್ದು ನೋಡಿ ಬಹಳ ಬೇಸರವಾಗುತ್ತದೆ. ನಮ್ಮ ಬ್ಯಾಂಕಿನವರು ೨೫ ರತ್ತಲುಗಳಂತೆ ಪತ್ರಕಾಳು ಖರೀದಿಸಿದ್ದಿಲ್ಲ ೨೪ರಂತೆ ಖರೀದಿಸಿದ್ದರು ಅದರ ರಾ॥ ಹಳದೀಪುರಕರರ ಮೇಲೆ ಹಾಕದ ಕೆಲವು ನಿಬಂಧನೆಗಳನ್ನು ಅಧಿಕಾರಿಗಳು ಬ್ಯಾಂಕಿಗೆ ಹಾಕಿದ್ದರು ಚೀಲಕ್ಕೆ ೧೪ ದಲಾಲಿ ಕೊಟ್ಟು ಅಧಿಕೃತ ದಲಾಲರ ಮುಖಾಂತರವೇ ಬ್ಯಾಂಕು ಪತ್ರಕಾಳು ಖರೀದಿಸಬೇಕಾಗಿತ್ತು! ಈ ನಿರ್ಬಂಧ ಹಳದೀಪುರಕರರಿಗಿಲ್ಲ ಈ ದಲಾಲರು ಮೇಲಾಗಿ ಎಲ್ಲ ಪತ್ರಕಾಳನ್ನು ಪಟ್ಟಣ್ಣದಲ್ಲಿ ಖರೀದಿಸಿ ಕೊಡದೆ, ೧೫೦೦ ಚೀಲಗಳನ್ನು ಪಟ್ಟಣ್ಣದಲ್ಲಿ ಕೊಟ್ಟು ಉಳಿದ ೨೫೦೦ ಚೀಲಗಳನ್ನು ಪಟ್ಟಣ್ಣದಿಂದ ೪೬ ಮೈಲು ದೂರದಲ್ಲಿರುವ ಗದಗಿನಲ್ಲಿ ಕೊಟ್ಟರು ಈ ೪೬ ಮೈಲುಗಳ ಭಾಡಿಗೆ ಬ್ಯಾಂಕಿನ ಮೈಮೇಲೆ ಬಂತು ರಾ॥ ಹಳದೀಪುರಕರರಿಗೆ ಸರಕಾರದವರು ೧೬-೧೮ ಮೋಟಾರ ಬಂಡಿಗಳನ್ನು ಕೊಟ್ಟು ಬೇಕಷ್ಟು ಪೆಟ್ರೋಲ ಎಣ್ಣೆಯನ್ನೂ ಪೂರೈಸಿದ್ದಾರೆ! ಬ್ಯಾಂಕಿಗೆ ಈ ಯಾವ ಅನುಕೂಲತೆಯನ್ನೂ ಕೊಟ್ಟಿದ್ದಿಲ್ಲ. ಬ್ಯಾಂಕಿನವರು ಹೆಚ್ಚಿನ ದರದಿಂದ ಭಾಡಿಗೆ ಕೊಟ್ಟು ಖಾಸಗಿ ಮೋಟಾರ ಬಂಡಿಗಳಲ್ಲೇ ತಮ್ಮ ಪತ್ರಕಾಳು ಸಾಗಿಸಿಕೊಳ್ಳಬೇಕಾಯಿತು ಅದರಿಂದಲೇ ಹಿಂದಿನಿಂದ ಜಿಲ್ಹಾಧಿಪರು ಚೀಲ ೧೩ರ ಧಾರಣೆ ರೂ ೧೨ ಇದ್ದದ್ದನ್ನು ರೂ ೧೩॥ಗೆ ಏರಿಸಿ ಕೊಡಬೇಕಾಯಿತು ರೇಲ್ವೆಯಿಂದ ಸ್ಥಳಾಂತರಿಸಲು ಅನುಕೂಲವಿದ್ದಾಗ ೧೫೦೦ ಚೀಲ ಪತ್ರಕಾಳನ್ನು ಬ್ಯಾಂಕು ಪಟ್ಟಣ್ಣದಿಂದ ಮುರಗಾಂವಿಗೆ ತಂದು, ಅಲ್ಲಿಂದ ಸಮುದ್ರ ಮಾರ್ಗವಾಗಿ ಇಲ್ಲಿ ತಂದು, ಆ ಪತ್ರಕಾಳನ್ನು ನಿಯಂತ್ರಿತ ದರಕ್ಕಿಂತ (ರೂ ೧೨ಕ್ಕಿಂತ) ಕಡಿಮೆ ದರಕ್ಕೆ ಅಂದರೆ ರೂ ೧೦॥ಗೆ ಚೀಲ ೧೮ರಂತೆ ಮಾರಿದ್ದುಂಟು ರಾ॥ ಹಳದೀಪುರಕರರಿಗೆ ಕೊಟ್ಟ ಸವಲತ್ತುಗಳನ್ನೂ ಅನುಕೂಲತೆಗಳನ್ನೂ ನಮ್ಮ ಬ್ಯಾಂಕಿಗೆ ಒದಗಿಸಿಕೊಟ್ಟರೆ, ರಾ॥ ಹಳದೀಪುರಕರರು ಪ್ರತಿ ಚೀಲದ ಹಿಂದೆ ೧೨ ಆಣೆ ದಲಾಲಿ ಕೊಳ್ಳುತ್ತಿದ್ದರೆ ಬ್ಯಾಂಕಿನವರು ಬರೇ ೪ ಆಣೆ ದಲಾಲಿ ತಕ್ಕೊಂಡು ಬೇಕಷ್ಟು ಪತ್ರಕಾಳಿನ ಪುರವಠೆ ಮಾಡಲು ಸಿದ್ಧರಾದಾರ, ಲೋಕಾಗ್ರಹವಾದರೆ ೨ ಆಣೆ ದಲಾಲಿಯಿಂದಲೂ ಮಾಡಬಹುದು. ಸ್ಥೂಲವಾಗಿ ಇಂಥ ವ್ಯಾಪಾರದೊಳಗೆ ಬ್ಯಾಂಕಿಗೆ ದೊರೆಯುವ ಲಾಭದ ಸೂರಕ್ಕೆ ಬಂದಷ್ಟು ಪಾಲನ್ನು ಸಾರ್ವಜನಿಕ ಹಿತದ ಕಾರ್ಯಗಳಿಗಾಗಿ ಕೊಡಬೇಕೆಂದಿದ್ದುಂಟು ಒಕ್ಕಲು ಮಕ್ಕಳು ಕೊಟ್ಟಲ್ಲಿ ಖರ್ಚು ಕಡಿಮೆ ಬರುತ್ತಿದೆ, ಲೋಕಹಿತವಾಗುತ್ತದೆ ಮುಂತಾದ ಮಾತುಗಳನ್ನು ಅನುಭವಿಕ ವ್ಯವಹಾರಸ್ಥರಾರೂ ನಂಬಲಾರರು ಆದ್ದರಿಂದ ನಿಃಸ್ವಾರ್ಥ ಲೋಕೋಪಕಾರದ ವೇಷವನ್ನು ರಾ॥ ಹಳದೀಪುರಕರರು ಬರೆಕೊಂಡು ಅನ್ಯರನ್ನು ನಿಂದಿಸುವ ಗೊಡವೆಗೆ ಹೋಗಬಾರದೆಂದು ಸೂಚಿಸಬಯಸುತ್ತೇನೆ ಇತ್ಯಾದಿ.

(ತಾ ೧೬-೧೧-೪೫) ಕಳೆದ ಸೋಮವಾರ ತಾ ೧೨ನೇ ಮಧ್ಯಾಹ್ನ ಗಂಗಾ ಪ್ರಸಾದ ಎಂಬ ಮಚ್ವೆಯು ಸರಕಾರಿ ಸಾಟುಗಳನ್ನು ಹೇರಿಕೊಂಡು ಮುಂಬಯಿಗೆ ಹೊರಟಿತ್ತು. ಅಳವೆಯಿಂದ ಹೊರಬೀಳುತ್ತಿರುವಾಗ ಅದು ಒಮ್ಮೆಲೇ ನೆಲಕ್ಕೆ ತಾಗಿ ತಾಸಿ ವಗ್ಗರೆ ಮುಂದು ನೀರೊಳಗೆ ಮುಳುಗಹತ್ತಿತು ಅದನ್ನು ಕಂಡ ರಾ॥ ಅಂಬ್ರೋಜ ಗೊನ್ಸಾಲ್ವಿಸರೂ ಕಸ್ಟಮ ಕಚೇರಿಯವರೂ ಕೆಲವು ಖಲಾಸಿಗಳನ್ನು ಕೂಡಿಸಿಕೊಂಡು ಮುಳುಗುತ್ತಿದ್ದ ಮಚ್ವೆಯೊಳಗಿನ ಜನರನ್ನು ಮೊದಲು ಪ್ರಯಾಸದಿಂದ ಬದುಕಿಸಿದರು ಹಿಂದಿನಿಂದ ಪ್ರಯತ್ನ ಮಾಡಿ ಆ ಮಚವೆಯನ್ನೂ ಅದರೊಳಗಿನ ಸಾಟುಗಳನ್ನೂ ಕೂಡ ದಂಡೆಗೆ ಮುಟ್ಟಿಸಿದರು ಸದರಿ ಗಂಗಾಪ್ರಸಾದ ಮಚವೆಯ ತಾಂಡೇಲನು ಆರ್ಗಟಿಯವರಿಗೆ (ಮಚವೆಗಳನ್ನು ಸರಕಾರದಿಯಿಂದ ನಡಿಸಿ ಹೊರಗೆ ಸಮುದ್ರಕ್ಕೆ ಮುಟ್ಟಿಸುವವರಿಗೆ) ಕರೆದು ತನ್ನ ಮಚವೆ ಹೊರಗೆ ಮುಟ್ಟಿಸಿಕೊಡಲು ಹೇಳಿಕೊಂಡಿದ್ದನಂತೆ ಆಗ ಆರ್ಗಟಿಯವರು ೨೫-೩೦ ರೂ ಕೊಟ್ಟರೆ ಮಾತ್ರ ತಾವು ಬರುತ್ತೇವೆಂದು ಹೇಳಿದರಂತೆ! ಬಡ ತಾಂಡೇಲನು ಆಗ ಆರ್ಗಟಿಯವರಿಲ್ಲದೆ ಮಚ್ವೆ ಬಿಟ್ಟನಂತೆ ಕಸ್ಟಮ ಅಧಿಕಾರಿಗಳು ಇತ್ತ ಲಕ್ಷಕೊಟ್ಟು ಆರ್ಗಟಿಯವರ ಕೂಲಿ ದರವನ್ನು ನಿಯಂತ್ರಿಸಬೇಕಾಗಿ ಅರಿಕೆಯದೆ

ಇಲ್ಲಿಯ "ಪೀಸ ಹಾಸ್ಪಿಟಲ್" ದಲ್ಲಿ ಶಸ್ತ್ರ-ಕ್ರಿಯೆಯ ವಿಭಾಗದ ಉತ್ತಮ ವ್ಯವಸ್ಥೆ ಮಾಡಲು ಡಾ॥ ಜೇ ಎಫ್ ಡ್ಯಾನ್ ಎಂಬ ವಿದೇಶಗಳಲ್ಲಿ ಕಲಿತು ಅನುಭವಪಟ್ಟ ಸರ್ಜನರು ಬಂದಿದ್ದಾರೆ ಜನರು ಅವರ ವಿದ್ಯಾನುಭವಗಳ ಲಾಭ ಪಡೆಕೊಳ್ಳಬಹುದು

ಹೊನ್ನಾವರ-ಬೇರೊಳ್ಳಿ ಸೀಮೆಯ ಸೀಧಾ ಅಂಗಡಿಯವರು ಕಳೆದ ವರ್ಷ ಕಮಗಾದ ಲಾಭದ ರೂ ೧೫೪೦ರಲ್ಲಿ ರೂ. ೫೦೦ನ್ನು ತಮ್ಮ ಸೀಮೆಯ ಗಾಂವಠಿ ಶಾಲೆಗೂ, ರೂ ೪೬ನ್ನು ಬೇರೊಳ್ಳಿಯ ಕಟ್ಟಿನ ಕೆಲಸಕ್ಕೂ ರೂ ೫೬ನ್ನು ಕೆಡಲ್ಲ ಶಾಲೆಯ ದುರುಸ್ತಿಯ ಬಗ್ಗೆ ಕೊಟ್ಟಿದ್ದಾರೆಂದು ತಿಳಿಯುತ್ತದೆ

(ತಾ ೨೪ ೧೧ ೪೫) ಈಗೊಂದು ವಾರದಿಂದ ಸೀಧಾ ಅಂಗಡಿಯಿಂದ ಅಕ್ಕಿ ಒಯ್ಯುವವರು ಸ್ಥಿತಿವಂತರು ಸಕ್ಕರೆ ಒಯ್ಯಬೇಕೆಂತಲೂ ಸಕ್ಕರೆ ಬೇಡವಾದರೆ ಅಷ್ಟು ಅಕ್ಕಿ ಕಡಿಮೆ ಒಯ್ಯಬೇಕೆಂತಲೂ ಒತ್ತಾಯವಾಗಹತ್ತಿದೆ ಈ ಸಕ್ಕರೆಯ ಹಿಟ್ಟು ಮಾಡಲು ಕಷ್ಟವಾಗುವದಿಲ್ಲವಂತೆ! ಅಷ್ಟು ಅಷ್ಟು ಹಲೋರಿದೆ! ದೇವರೇ ಮಾಫಿಳದಿದೆ, ಅಂದರೆ ದೊಡ್ಡಕ್ಕಿಯ ದರಕ್ಕಿಂತ ಸಾಯಲಿ ೧೫ ಬರೇ ೪॥ ಆಣೆ ಹೆಚ್ಚಿಗೆ! ಒಡೆದರ? ಸಕ್ಕರೆ ಉಣ್ಣಲು ಇದೆಂದು ಸುಸಂಧಿ!!

ಭಟಕಳ— (ತಾ ೧೬-೧೧-೪೫) ಮೊನ್ನೆ ಶನಿವಾರದವರ ಹುಟ್ಟುಹಬ್ಬದ ಪ್ರೀತ್ಯರ್ಥ ಶ್ರೀ ಮಾರುತಿ ಗುಡಿಯಲ್ಲಿ ವಿಶೇಷ ಪೂಜೆ ಮಾಡಿಸಿ ಪಂಡಿತರಿಗೆ ಅವರಂದ ಆಯುರಾರೋಗ್ಯ ಜಯಬಾಲಿಸಲು ಪ್ರಾರ್ಥನೆಲಾಯಿತು

ಸೀಧಾ ಕ್ಷೇತ್ರದ ಹೊರಗಿನ ಭಾಗಕ್ಕೆ ಸೀಧಾ-ಸಾಮಗ್ರಿ ಪೂರೈಸುವ ಅಂಗಡಿಯಲ್ಲಿ ಸಕ್ಕರೆ ಎಂದು ಕೂಪನಗಳಲ್ಲಿ ಹಾಕಿ, ಬೆಲ್ಲ ಕೊಡುತ್ತಾರೆಂದು ದೂರುಂಟು ಇದೇನು ನಾಟಕವೆಂದು ಜಿಲ್ಹಾಧಿಪರು ಚೌಕಶಿ ಮಾಡಬೇಕು

(ತಾ ೨೨-೧೧-೪೫) ಇಂದಿನಿಂದ ರಾ॥ ಕೇ ಸಂಜೀವರಾಯರು ಶ್ರೀ ಮಾರುತಿ ಮಂದಿರದಲ್ಲಿ "ಸಂಪೂರ್ಣ ರಾಮಾಯಣ"ದ ಕೀರ್ತನೆಗಳನ್ನಾರಂಭಿಸಿದ್ದಾರೆ

ಇಲ್ಲಿಯ ಸೀಧಾ-ಅಂಗಡಿಗಳಲ್ಲೂ ಸಕ್ಕರೆಯ ಒತ್ತಾಯವಾಗುತ್ತಿದೆ

ವೆಂಕಟಾಪುರ ಹಾದಿಯಲ್ಲಿ ಗುತ್ತೇದಾರರು ಸಾಮಾನುಗಳನ್ನು ಕೂಡಲೇ ದಾಟಿಸದೆ ಹಂಗಲು ಬಿಡಲು ಮೋಟಾರ ಬಂಡಿಗಳ ಬರೋಣ ಕಾಯುತ್ತಾ ಜನರಿಗೆ ಪೀಡಿಸುತ್ತಾರಂತೆ

ಇಲ್ಲಿಯ ಸೋನಾರಕೇರಿಯೊಳಗಿನ ಶಾಲೆಯ ಶಿಕ್ಷಕರೊಬ್ಬರು ಊರಿಗೆ ಹೋಗಿ ೧॥ ತಿಂಗಳಾಯಿತು ಶಿಕ್ಷಕರಿಲ್ಲದ್ದರಿಂದ ವಿದ್ಯಾರ್ಥಿಗಳು ಅಲೆದಾಡುತ್ತಾರೆ! ನಗರದೊಳಗಿನ ಗಂಡು ಮಕ್ಕಳ ಶಾಲೆಯಲ್ಲೂ ಒಬ್ಬ ಶಿಕ್ಷಕನಿಲ್ಲವಂತೆ! ಸ್ಕೂಲ ಬೋರ್ಡಿನವರು ಲಕ್ಷ್ಯಕೊಡು ನೋಡಬೇಕು

ಸಿದ್ದಾಪುರ— (ತಾ ೨೦-೧೧-೪೫) ನಿನ್ನೆ ಮಂಗಳವಾರ ಸಂಜೆ ಶ್ರೀ॥ ಅರವಾರಕರ, ಗುಂಜೀಕರ, ಖಾನಸಾಹೇಬ ಇವರು ಜಿಲ್ಹಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷ ಶ್ರೀ॥ ನಾಯಕ ಮಾಸ್ತರರ ಸಂಗಡ ಚುನಾವಣೆಯ ಪ್ರಚಾರಕ್ಕಾಗಿ ಇಲ್ಲಿಗೆ ಆಗಮಿಸಿದ್ದರು ಅಭ್ಯಾಗತ ಮಹನೀಯರನ್ನು ಮೆರವಣಿಗೆಯಿಂದ ಚಂದ್ರಘಟಿಗಿಯವರ ಚಟಾಂಗಣದಲ್ಲಿ ನೆರೆದ ಸಭೆಗೆ ಕರೆತರಲಾಯಿತು ನಾಯಕ ಮಾಸ್ತರರು ಅತಿಥಿಗಳ ಪರಿಚಯ ಮಾಡಿಕೊಟ್ಟ ಬಳಿಕ ಶ್ರೀ॥ ಗುಂಜೀಕರ, ಖಾನ ಸಾಹೇಬ ಮತ್ತು ಅರವಾರಕರ ಇವರ

(೧ನೇ ಪುಟದ ಮೇಲೆ ಮುಂದರಿಸಿದೆ)

WANTED a Section-writer for the Haliyal Debt Adjustment Board Qualification essential – Must have passed the Matriculation or S S L C Examination Applications should be addressed to the District Judge Kanara, and sent to us so as to reach this office by 30th November 1945

Haliyal, 14-11-45 *Chairman,*

Debt Adjustment Board, Haliyal

ವಿದ್ಯಾರ್ಥಿ, ಶಿಕ್ಷಕ ಮತ್ತು ಉದ್ಯೋಗಸ್ಥರಿಗೆ

ಬೇಕಾದ ಸ್ಟೇಶನರಿ, ಮ್ಯಾಸೂರ ಕಾಗದ, ಹೆಚ್ಚಿನ ಪಿನ್ನಿನ ಕಾಗದ (ಬಿಳೇ ಹಾಗೂ ಬಣ್ಣ) ವಗೈರೆ ಸವಲತ್ತಿನ ದರದಿಂದ, ರೋಖ ಹಾಗೂ ಉದರಿಯಿಂದ ನಮ್ಮಲ್ಲಿ ಸಿಗುತ್ತವೆ.

ಬಾಲಕೃಷ್ಣ ಸ್ಟೋರ್ಸ್, ಕುಮಟಾ



ಇದನ್ನು ಪಾಂಡುರಂಗ ಕೃಷ್ಣ ಕಾಸರ್ಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

ವರ್ಗಣಿಯ ದರ
[illegible]ಟಿಯಲ್ಲಿ
ವರ್ಷಕ್ಕೆ ರೂ ೩ ೪ ೦
ವಿದ್ಯಾರ್ಥಿ ವರ್ಷಕ್ಕೆ ೩-೧ ೦
೬ ತಿಂಗಳಿಗೆ ೧ ೧೦-೦
ಸಂಚಿಕೆಗೆ ೦-೦ ೯
ಸಂಚಿಕೆಗೆ ೦ ೪ ೦
[illegible]ಯಿಂದ ಹಣ ಕಳಿಸುವವರು
[illegible] ಕಳಿಸಬೇಕು.
[illegible]ಗಳು ಮುಂಗಡ ಕಳಿಸಬೇಕು

Reg. No. B 1270 Monday, 3rd December, 1945

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೨೨

ಕುಮಟಾ- ಸೋಮವಾರ, ತಾ ೩ ನೆಯ ಡಿಸೆಂಬರ ೧೯೪೫ನೇ ಇಸವಿ

ಜಾಹೀರಾತುಗಳ ದರ.
ಪ್ರತಿ ೧೫ ಇಂಚ್ ಉದ್ದ
೧ ಕಾಲಿಗೆ ೩ ಆಣೆಯಂತೆ
ಸ್ಥಾನಿಕ ಪ್ರತಿ ೧೫ ಇಂಚ್ ಉದ್ದ
೧ ಕಾಲಿಗೆ ೮ ಆಣೆಯಂತೆ
ವಿಶಿಷ್ಟ ಇಲ್ಲವೆ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಬಹುದು

ಸ್ಥಾನಿಕ ವೃತ್ತಾಂತ

(೨ನೇ ಪುಟದಿಂದ ಮುಂದುವರಿದದ್ದು)

ಸಿದ್ದಾಪುರ— (ತಾ ೨೭-೧೧-೪೫) ನಿನ್ನಿನ ಮತದಾನದಲ್ಲಿ ಇದೇ ತಾಲೂಕಿನ ಯಾದಿಯಲ್ಲಿರುವ ಮತದಾರರ ಪೈಕಿ ೩೫೪ ಜನರು ಮತ ಕೊಟ್ಟರು ೪-೬ ಮತಗಳನ್ನು ಬಿಟ್ಟು ಎಲ್ಲ ಮತಗಳು ಕಾಂಗ್ರೆಸ ಉಮೇದವಾರರಿಗೇ ಸಿಕ್ಕವೆ ಈ ದೊಡ್ಡ ಮತ [illegible] ಇಲ್ಲಿ ಇರುವವರು [illegible] ಅವರಲ್ಲಿ ಒಬ್ಬನು ಮಾತ್ರ ಮತ ಕೊಟ್ಟನು [illegible] ಲಾಲಜಿಯವರಿಗೆ ಸಿಕ್ಕಿರಬೇಕು

ಕಾರವಾರ— (ತಾ ೨೬ ೧೧ ೪೫) ನಿನ್ನೆಯ ಮತದಾನದಲ್ಲಿ ಕಾರವಾರ ಮತಗಟ್ಟೆಯಲ್ಲಿ ೭೬, ಚಿತ್ತಾಕುಲದಲ್ಲಿ ೩೪, ಬೇಲಿಕೇರಿಯಲ್ಲಿ ೩೪, [illegible]ದಲ್ಲಿ ೨೩, ಕೋಣದಲ್ಲಿ ೨೮ ಮತದಾರರು ಮತ ಕೊಟ್ಟಿರುತ್ತಾರೆ [illegible] ತಿಂತಿಗಳು ಇನ್ನೂ ಬಂದಿಲ್ಲ. ೧೦ ೧೨ ಜನರ [illegible] ಕಾಂಗ್ರೆಸ್ಸಿಗೇ ಮತ ಕೊಟ್ಟರೆಂದು ಬಲ್ಲವರು ಹೇಳುತ್ತಾರೆ

ಇತ್ತಲಾಗಿ ಊರಲ್ಲಿ ಕಳವುಗಳು ಹೆಚ್ಚಾಗಿವೆ ನಗರ[illegible] ರಾ॥ ಮಹಾಬಳೇಶ್ವರ[illegible]ಯವರಲ್ಲಿ ರೂ ೨೦೦ ಕಳವಾಗಿ[illegible]ವೆಯಂತೆ ರಾ॥ ಬಿ॥ ಶಾಲಕರ ಯವರಲ್ಲಿ ಕಳವಾಗಿ [illegible] ೧೫೭ ಹೋಗಿವೆಯಂತೆ ನಿನ್ನೆ ರಾತ್ರಿ ನಡುಪೇಟೆಯಲ್ಲಿ ರಾ॥ ಮಂಗೇಶ [illegible]ಯವರಲ್ಲಿ ಚಿನ್ನ-ಬೆಳ್ಳಿಯ [illegible]ಗಳೂ, ಬೆಲೆಯುಳ್ಳ ಸೀರೆಗಳೂ ಇದ್ದ ಒಂದು ಪೆಟ್ಟಿಗೆ[illegible] ಕಳ್ಳರು ಒಯ್ದಿರುತ್ತಾರಂತೆ [illegible] ಬೆಲೆ ರೂ ೧೦೦೦ಕ್ಕೆ ಮಿಕ್ಕುತ್ತದೆ [illegible] ಕಳ್ಳರದೊಂದು ಟೋಳಿಯೇ ಉಂಟೆಂತ [illegible] ಮನೆಗಳೊಳಗಿನ [illegible] ಆಭರಣಗಳಾಗಲಿ [illegible] ಪೋಲೀಸ [illegible]

ಶ್ರೀ [illegible] ದಿವಾಕರರು ಈ ಊರಿಗೆ ಬಂದಾಗ [illegible] ರಾಷ್ಟ್ರಗೀತಗಳನ್ನು ಹಾಡಿದಳು, ಹಿಂದೆ [illegible] ದಿನದ ಪ್ರಭಾತ ಫೇರಿಯಲ್ಲಿ ಸೇರಿದಳು ಎಂದೇ [illegible] ಕಳಿಸಿದ್ದಾರೆಂದು ಸುದ್ದಿಯುಂಟು

ಈ ತಿಂಗಳಲ್ಲಿ ಇದೇ ಜಿಲ್ಲೆಯಲ್ಲಿ ರಾಷ್ಟ್ರಸೇವಾ ದಳದ [illegible] ಹೊಸ ಶಾಖೆಗಳು ತೆರೆಯಲ್ಪಟ್ಟ ವರದಿಗಳು ಬಂದಿವೆ

(ತಾ ೧-೧೨ ೪೫) ಅಕ್ಕಿ ಭತ್ತಗಳ ಖರೀದಿಯ [illegible] ಧಾರಣೆಗಳು ಹೋದ ವರ್ಷದವೇ ಇರುವವಾಗಿ[illegible] ಧಾರಣಾ [illegible] ಈ ವರ್ಷದ [illegible] ಇಲ್ಲವೆಂದು ಈ ಬಗ್ಗೆ [illegible] ಹೇಳಲಾಗು[illegible] ಧಾರಣಾ [illegible] ಮತ್ತು ಗೋದಿ, ಅಕ್ಕಿಯಲ್ಲ, ಎಂಬವನ್ನು ಈ [illegible] ಗೊತ್ತಿಲ್ಲದಿರಬೇಕು! ಅದೇನಿದ್ದರೂ [illegible] ಬಡವರ ಬಗ್ಗೆ ಸರಕಾರಕ್ಕೇನೂ ಕನಿಕರ [illegible] ಇಲ್ಲವೆಂಬಂತೆ ತೋರುತ್ತದೆ ದಯಾಘನ ಪರಮಾತ್ಮನೇ ಈಗ ಬಡವರ ಗತಿ!!

ಅಂಕೋಲಾ— (ತಾ ೧೭-೧೧-೪೫) [illegible] ಶಾಲಾ ಬೋರ್ಡಿನಲ್ಲಿ ಇದ್ದು ಪ್ರಯೋಜನವಾಗದೆಂದೂ, ತನ್ನ ವಿಶಿಷ್ಟ ಗುರಿ ಸಾಧಿಸಲಾಗದಿದ್ದಾಗ ಅಲ್ಲಿಯ [illegible] ನಿರುಪಯೋಗಿಯೆಂದೂ ಭಾವಿಸಿ ಶ್ರೀ [illegible] ಅವರು ತಮ್ಮ ಸದಸ್ಯತ್ವಕ್ಕೆ ಮೊನ್ನೆ ರಾಜೀನಾಮೆ ಕೊಟ್ಟಿದ್ದಾರೆ

ಕಳೆದ ತಾ ೧೪ಕ್ಕೆ ಭಾವಿಕೇರಿಯಲ್ಲಿ ಈ ತಾಲೂಕಿನ [illegible] ರಾ॥ ಮಹಾಬಳೇಶ್ವರ ವಕೀಲರ ಅಧ್ಯಕ್ಷತೆಯಲ್ಲಿ ಸೇರಿತ್ತು. (೧) ಒಕ್ಕಲಿಗರ ಸಾಲ-ಪರಿಹಾರದ [illegible] ಕಾನೂನುಗಳನ್ನು ಈ ತಾಲೂಕಿಗೆ ಆದಷ್ಟು ಬೇಗ [illegible]ಯಿಸಬೇಕೆಂದೂ, (೨) ಸಾಲ ಪರಿಹಾರ ಮಂಡಳದಲ್ಲಿ [illegible] ವಿಜ್ಞಾನವುಳ್ಳವರನ್ನೇ ನೇಮಿಸಬೇಕೆಂದೂ, (೩) ಸಮುದ್ರ [illegible] ಭಾಗದಲ್ಲಿ ಗೇಣಿಯ ದರ [illegible]ವದರಿಂದ ಅದನ್ನು [illegible] ಇಳಿಸಬೇಕೆಂದೂ [illegible]ವಂಗಳಾದವು. ತಾಲೂಕಿನಲ್ಲೆಲ್ಲ ಸಂಘಟನೆ ಎಲ್ಲೆಲ್ಲಿ ಗೇಣಿಯ ದರ ಎಷ್ಟೆಷ್ಟು ಇರಬಹುದೆಂದು [illegible] ವರದಿ ಮಾಡಲು ೭ ಜನರ ಒಂದು ಮಂಡಳ ನೇಮಿಸಲ್ಪಟ್ಟಿದೆ. ರೈತರ ಸಂಘಟನೆಯನ್ನು ಬಲಪಡಿಸುವದಕ್ಕಾಗಿ ೧೧ ಜನರ ಬೇರೊಂದು ಸಮಿತಿ ನೇಮಿಸಲಾಗಿದೆ. ಎಲ್ಲ ಕಲಾಪ ರಾಷ್ಟ್ರೀಯ ಸಭೆಯ ಧ್ವಜದಡಿಗೇ ನಿಂತು ನಡೆಸತಕ್ಕದ್ದೆಂದೂ ಠರಾವಿನ [illegible]ವಾಗಿದೆ

(ತಾ ೧ ೧೨-೪೫) ಕೆಲವು ದಿವಸಗಳ ಹಿಂದೆ [illegible] ವಾರದ [illegible] ಸಾಯಂಕಾಲದ [illegible] ಬಂದರ ಬದಿಗೆ ಹೋದಾಗ ಎತ್ತರ [illegible] ಮೇಲೆ ಬಿದ್ದ[illegible] ಅಲ್ಲಿಂದ [illegible] ಹೋಗುತ್ತಿದ್ದ ಮೋಟಾರ ಬಂಡಿಯ ಡ್ರಾಯವ್ಹರನೊಬ್ಬನು ಅವನನ್ನು ಎತ್ತಿ ಮನೆಗೆ ಮುಟ್ಟಿಸಿದನಾಗಿಯೂ ಸುದ್ದಿಯಿದೆ [illegible] ಪ್ರಕೃತಿ [illegible] ೪ ತಿಂಗಳಿಂದ [illegible] ಕೋರ್ಟ ಕೆಲಸಕ್ಕೆ [illegible] ದಾವೆಗಳ ವಿಚಾರಕ್ಕೆಂದು ಕಾರವಾರಕ್ಕೆ ಹೋದ [illegible]ರೂ ಸಾಕ್ಷಿಗಾರರೂ "ಬಂದ ಹಾದಿಗೆ ಸುಂಕವಿಲ್ಲ"ವೆಂದೆನ್ನುತ್ತ ಕೆಲಸವಾಗದೆ ಹಿಂತಿರುಗಿ ಮನೆಗೆ ಬರುತ್ತಿದ್ದರು [illegible] ಕೇಳಿದರೆ "ಜಡ್ಜರಿಗೆ ಜಡ್ಡಾಗಿದೆ, ನಿಮ್ಮ ದಾವೆ ಮುಂದೆ ಬೀಳುವದು" ಎಂದು ಅವರು ಹೇಳುತ್ತಿದ್ದರು. ಹೀಗೆ ಪ್ರಕೃತಿ ನೆಟ್ಟಗಿಲ್ಲದಿದ್ದಾಗ [illegible] ರಜೆ [illegible] ಯಾಕೆ [illegible] ತಿಳಿಯದು. ಈಗೇನೋ ಅವರು [illegible] ಶಿಫಾರಸಿನಿಂದ ೩ ತಿಂಗಳ ರಜೆ ತೆಗೆದುಕೊಂಡು ಹೋಗಿದ್ದಾರಂತೆ. ಪ್ರಕೃತಿ ಪೂರ್ಣ [illegible] ವರೆಗೆ ಅವರು ರಜೆಯ ಮೇಲೆ [illegible] ಎಂದು "[illegible] ಪತ್ರಗಾರ"ರೊಬ್ಬರು ಬರೆಯುತ್ತಾರೆ."

ಮುಂಬಯಿ ಪ್ರಾಂತ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಧೋಂಡೆಯವರು ಕಳೆದ ಮಂಗಳವಾರ ಹುಬ್ಬಳ್ಳಿಯಿಂದ ಇಲ್ಲಿ ಆಗಮಿಸಿದ್ದರು. ಶಿಕ್ಷಕರು ಅವರಿಗೆ ಅಪೂರ್ವ ಸ್ವಾಗತವನ್ನಿತ್ತರು. ಸಂಜೆಯ ೪ ಘಂಟೆಗೆ [illegible] ಶಿಕ್ಷಕರೂ [illegible] ವಿದ್ಯಾರ್ಥಿಗಳೂ [illegible] ಎಡ್ವರ್ಡ ಹೈಸ್ಕೂಲಿಗೆ [illegible] ಸಭೆ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಮಹನೀಯರ ಹೃದಯಸ್ಪರ್ಶಿ ಭಾಷಣವಾಯಿತು [illegible] ಪ್ರಾಥಮಿಕ ಶಿಕ್ಷಕರ ದುಸ್ಥಿತಿಯನ್ನು ವಿವರವಾಗಿ ಬಣ್ಣಿಸಿ, ಅವರ ಸ್ಥಿತಿ ಸುಧಾರಣೆ [illegible] ಶಿಕ್ಷಕರ [illegible] ಪ್ರತಿಪಾದಿಸಿದರು ಮತ್ತು ತಮ್ಮ ಮಕ್ಕಳ ಉದ್ಧಾರಕ್ಕಾಗಿ ದುಡಿಯುವ ಬಡ ಶಿಕ್ಷಕರನ್ನು ಜನತೆ [illegible]ಯಿಂದ [illegible] ಬೋಧಿಸಿದರು. ಅಧ್ಯಕ್ಷರು ಸಮಯೋಚಿತ ಸಮಾರೋಪ ಮಾಡಿದ ಮೇಲೆ ಸಭೆಯು ಮುಕ್ತಾಯವಾಯಿತು

[illegible] ಮತಗಟ್ಟೆ [illegible] ೨೨ ಮತದಾರರಲ್ಲಿ ೨೧ ಜನರು ಮತ [illegible]ದ್ದಾರೆ ಎಲ್ಲರೂ ಶ್ರೀ [illegible]ರಿಗೇ ಕೊಟ್ಟಿದ್ದಾರಂತೆ

ಯಲ್ಲಾಪುರ— (ತಾ. ೨೯-೧೧-೪೫) ಈ ತಾಲೂಕಿನ ೫ ಮತಗಟ್ಟೆಗಳಲ್ಲಿ ಕೂಡಿ ೧೩೭ ಮಂದಿ ಮತದಾರರು ಅವರಲ್ಲಿ ೧೧೧ ಮಂದಿ ಕಳೆದ ಸೋಮವಾರದ ಚುನಾವಣೆಯಲ್ಲಿ ಮತದಾನ ಮಾಡಿದ್ದಾರೆ ಎಲ್ಲರೂ ಕಾಂಗ್ರೆಸ ಪಕ್ಷಕ್ಕೇ. ರಾ॥ ಗುರಪ್ಪಾ ಜಾಲಿಹಾಳ ಎಂಬ ಮತದಾರರು ೮೮ ವರ್ಷಗಳ ಮುದುಕರು ಅವರೂ ಗಾಡಿಯಲ್ಲಿ ಬಂದು, ಬೇರೆಯವರ ಆಧಾರದಿಂದ ಮತ ಕೊಡುವಲ್ಲಿಗೆ ಹೋಗಿ, ಕಾಂಗ್ರೆಸ್ಸಿಗೇ ನನ್ನ ಮತವೆಂದು ಹೇಳಿ ಮತ ಕೊಟ್ಟರು ಕಾಂಗ್ರೆಸ ಉಮೇದವಾರರೇ ಗೆಲ್ಲುವರೆಂದು ಅವರು ಆಶೀರ್ವಾದವನ್ನು ಕೊಟ್ಟಿದ್ದಾರೆ ಕಾಂಗ್ರೆಸ್ಸಿನ ವಿಜಯಾನಂದವನ್ನು ನೋಡದೆ ತಾವು ಸಾಯಲಾರೆವೆಂದು ಅವರು ಹೇಳುತ್ತಾರೆ!

ಇಲ್ಲಿಯ ಮಾಮಲೇದಾರ ಮಿ॥ ಕಿಲ್ಲೇದಾರ ಅವರು ಈಗ ಅಲ್ಲಲ್ಲಿ ಭತ್ತದ ಬೆಳೆಯ ತನಿಖೆ ನಡೆಸಿದ್ದಾರೆ ಯಾವದೊಂದು ಗುಂಟೆ ಸ್ಥಳದ ಬೆಳೆ ಕೊಯ್ಯಿಸಿ, ಅಲ್ಲಿಂದ[illegible] ಬಡಿಸಿ ಭತ್ತ ಅಳೆಸುತ್ತಾರೆ ಜಳ್ಳು ಭತ್ತವೆಂದು ತಾವು ನೋಡುವದಿಲ್ಲ! ಜೊಳ್ಳು ಭತ್ತವನ್ನು ತೆಗೆಸುವದಿಲ್ಲ! ಎಲ್ಲ ಭತ್ತ ಅಳೆದು ಎಕರೆ ೧ಕ್ಕೆ ಸರಾಸರಿ ೧೪ ಖೇಲ ಬರುತ್ತದೆಂದು ಅವರು ಸಿದ್ಧಾಂತ ಮಾಡಿ, ಮತ್ತು ಎಕರೆ ೧ಕ್ಕೆ ಸರಾಸರಿ ೧೦ ಖೇಲದಂತೆ ರೈತರು ಸರಕಾರಕ್ಕೆ ಭತ್ತ ಕೊಡಬೇಕೆಂದು ಜಾಹೀರ ಮಾಡಿದ್ದಾರೆ! ಅವರಂತೆ ಖರೀದಿಯ ಪತ್ರಗಳನ್ನೂ ಹಂಚುತ್ತಿದ್ದಾರೆ ಈ ವರ್ಷ ಈ ತಾಲೂಕಿನಲ್ಲಿ ಸರಾಸರಿ ೬೫೦೦ ಎಕರೆ ಭೂಮಿಯಲ್ಲಿ ಭತ್ತ ಬೆಳೆಸಿದ್ದಾರೆ ಮಿ॥ ಕಿಲ್ಲೇದಾರರ ಲೆಕ್ಕದಂತೆ ನೋಡಿದರೆ ಈ ತಾಲೂಕಿನಲ್ಲಿ ಈ ವರ್ಷ ೬೫೦೦೦ ಖೇಲ ಭತ್ತ ಸರಕಾರಕ್ಕೆ ಕೊಡಬೇಕಾದೀತು ಈ ಸಾರಿಯ ಬೆಳೆ ಹೋದ ವರ್ಷದಷ್ಟು ಚೆಲೋದಿಲ್ಲ ಹೋದ ವರ್ಷ ೧೪೦೦೦ ಖೇಲ ಈ ತಾಲೂಕಿನಲ್ಲಿ ಖರೀದಿಸಲ್ಪಡಬೇಕೆಂದು ಸರಕಾರದವರ ಸಂಕಲ್ಪವಿತ್ತು, ಆದರೆ ಅಷ್ಟು ಖರೀದಿಸಲು ಆಗಲಿಲ್ಲೆಂದು ತಿಳಿಯುತ್ತದೆ ಹೀಗಿರುವಾಗ ಈ ವರ್ಷ ೬೫೦೦೦ ಖೇಲ ಭತ್ತ ಖರೀದಿಸುವರಂತೆ! ಮಿ॥ ಕಿಲ್ಲೇದಾರರ ಪ್ರತಾಪ ನೋಡಿರಿ

೧೦-೧೫ ದಿವಸಗಳ ಹಿಂದೆ [illegible]ಯಲ್ಲಿ ಕೋವಿ [illegible] ಬೇಟೆಗೆ ಹೋಗಿದ್ದರಂತೆ ಆಗ [illegible] ಅವರ ಮೈಮೇಲೆ ಬಂದ [illegible] ಒಬ್ಬನು ಧೈರ್ಯ ಮಾಡಿ ಅದನ್ನು ಗುಂಡಿಟ್ಟು ಕೊಂದನು ಈ ಸುದ್ದಿ ಮಿ॥ ಕಿಲ್ಲೇದಾರರಿಗೆ ತಿಳಿಯಿತು ಅವರು ಬೇಟೆಗಾರರನ್ನು ಕರೆದು, 'ಪರವಾನಿಗೆಯಿಲ್ಲದೆ ನೀವು ಹುಲಿಯನ್ನು ಹ್ಯಾಗೆ ಕೊಂದಿರಿ!' ಎಂದು ಗದರಿಸಿದರು! ಬೇಟೆಯ ಕಾಲಕ್ಕೆ ಪಟೇಲರೂ ಇದ್ದರು 'ನೀವು ಪಟೇಲರಾಗಿ ಹುಲಿ ಬೇಟೆ ಹ್ಯಾಗೆ ಮಾಡಗೊಟ್ಟಿರಿ? [illegible] ಯಾಕೆ ಮಾಡಿಸಲಿಲ್ಲ?' ಎಂದು ಅವರಿಗೂ ಬೆದರಿಸಿದರಂತೆ! ಇಷ್ಟೆಲ್ಲ ಮಾಡಿದ್ದು ಯಾಕೆ ಗೊತ್ತೇ? ಆ ಹುಲಿಯ ಚರ್ಮ ಮಿ॥ ಕಿಲ್ಲೇದಾರರಿಗೆ ಬೇಕಿತ್ತು ಅದನ್ನು ಎತ್ತಿ ಹಾಕಲಿಕ್ಕೆ ಅವರು ಇಷ್ಟೆಲ್ಲ ಖಟಾಟೋಪ ಮಾಡಿದ್ದು!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ
[ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದುದು]
ತಾ. ೨೧ ೧೨-೧೯೪೫ನೇ ಶುಕ್ರವಾರ ದಿನ ಬೇಂಕಿನ ಒಂದು ಶಾಖೆಯು
ಗದಗದಲ್ಲಿ
ತೆರೆಯಲ್ಪಡುವುದೆಂದು ತಿಳಿಸಲು ಡೈರೆಕ್ಟರರು ಸಂತೋಷಪಡುತ್ತಾರೆ.
ಅತೀ ಶೀಘ್ರದಲ್ಲಿಯೇ ತೆರೆಯಲ್ಪಡುವ ನಮ್ಮ
ಮುಂಬಯಿ ಶಾಖೆಯ ಸೂಚನೆಯನ್ನು ನಿರೀಕ್ಷಿಸಿರಿ.
ಅಖಿಲ ಕರ್ನಾಟಕದಲ್ಲೆಲ್ಲ ಶಾಖೆಗಳಿವೆ
ಪ್ರತಿಯೊಂದು ವಿಧದ ಬ್ಯಾಂಕಿಂಗ್ ವ್ಯವಹಾರಗಳು ನಡೆಸಲಾಗುತ್ತಿವೆ

[illegible]
ತಾ ೧೦ ೧೧ ೧೯೪೫

K Vithaldas Shenai
Managing Director

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಕ್ಕೆ ತೆರಳಿದರು. ಅಲ್ಲಿಂದ ಮರುದಿನ ಮುಂಜಾನೆ ಭಟಕಳಕ್ಕೆ ಹೋಗಿ, ಅಂದೇ ಸಂಜೆ ಶಿರ್ಸಿಗೂ, ಸಿದ್ದಾಪುರಕ್ಕೂ ಭೆಟ್ಟಿ ಕೊಟ್ಟರು.

ಹಿಂದು ಮಹಾಸಭೆಯ ಪ್ರಚಾರಕರು ಕೆಲವು ದಿನಗಳ ಹಿಂದೆ ಈ ಊರಿಗೆ ಬಂದಾಗ ಶ್ರೀ ಗೋಕರ್ಣ-ಪರ್ತಗಾಳಿ ಮಠಾಧೀಶ ಶ್ರೀಮದ್-ದ್ವಾರಕಾನಾಥ ತೀರ್ಥ ಸ್ವಾಮಿಗಳ ದರ್ಶನಕ್ಕೆ ಹೋಗಿದ್ದರು. ಸಂಸ್ಥಾನದ ಸಂಪ್ರದಾಯದಂತೆ ಶ್ರೀಗಳು ಅವರಿಗೆ ಶ್ರೀಫಲ-ಮಂತ್ರಾಕ್ಷತೆಗಳನ್ನು ಕೊಟ್ಟು ಕಳಿಸಿದ್ದರು. ಈ ಸಾಮಾನ್ಯ ಆಶೀರ್ವಾದದ ವಿಪರ್ಯಾಸ ಅರ್ಥ ಮಾಡಿ ಗುರುಗಳು ಚುನಾವಣೆಯಲ್ಲಿ ಹಿಂದು ಮಹಾ ಮಹಾಸಭೆಗೆ ಯಶಸ್ಸು ಕೋರಿ ಆಶೀರ್ವಾದ ಕೊಟ್ಟಿದ್ದಾರೆಂದು ಮಹಾಸಭೆಯ ಪ್ರಚಾರಕರು ಅಪಪ್ರಚಾರ ನಡಿಸಿದ್ದು ಕಂಡು ಬರುತ್ತದೆ! ಶ್ರೀಗುರುವರ್ಯರು ರಾಜಕಾರಣದಿಂದ ಅಲಿಪ್ತರಿದ್ದು, ಹಿಂದು ಮಹಾಸಭೆಯ ಕಾರ್ಯಕ್ಕಾಗಲಿ ರಾಜಕಾರಣಕ್ಕಾಗಲಿ ಸಹಾನುಭೂತಿಯನ್ನೂ ತೋರಿಸಿಲ್ಲ, ಆಶೀರ್ವಾದವನ್ನೂ ಕೊಟ್ಟಿಲ್ಲವೆಂದು ತಿಳಿಯುತ್ತದೆ.

ಹೊನ್ನಾವರ— (ತಾ. ೧೦-೧೧-೪೫) ತಾ. ೨೯-೧೦-೪೫ರ "ವೃತ್ತ"ದಲ್ಲಿ ಹತ್ತಿಕಾಳಿನ ಬಿಕ್ರಿ-ಮಕ್ತೆದಾರರಾದ ರಾ॥ ಹಳದೀಪುರಕರರವರು ಹೊನ್ನಾವರ ಅರ್ಬನ ಕೋ-ಆಪರೇಟಿವ್ ಬೇಂಕಿನ ಮೇಲೆ ಮಾಡಿದ ವ್ಯಂಗ್ಯಟೀಕೆಗೆ ಪ್ರತ್ಯುತ್ತರರೂಪವಾಗಿ ಆ ಬೇಂಕಿನ ಅಭಿಮಾನಿಗಳೊಬ್ಬರು ಬರೆಯುತ್ತಾರೆ:— ನಮ್ಮ ಬೇಂಕು ರೂ ೧ಕ್ಕೆ ೨೫ ರತ್ತಲುಗಳಂತೆ ಖರೀದಿಸಿದ ಹತ್ತಿಕಾಳನ್ನು ಚೀಲ ೧ಕ್ಕೆ ರೂ. ೧೬॥ಯಂತೆ ಮಾರಿದಾಗಿಯೂ ತಾವು ೨೦ ರತ್ತಲುಗಳಂತೆ ಖರೀದಿಸಿದ ಹತ್ತಿಕಾಳನ್ನು ಚೀಲ ೧ಕ್ಕೆ ರೂ. ೧೩-೧೪-೦ರಂತೆ ಮಾರಿದೆವೆಂತಲೂ ಬರೆದು, ಬೇಂಕು ಹೆಚ್ಚಿನ ಲಾಭ ಮಾಡಿ ಜನರನ್ನು ಸುಲಿಯುತ್ತಿದೆಯೆಂದು ಧ್ವನಿಸಿದ್ದಾರೆ, ಮತ್ತು ಪರ್ಯಾಯದಿಂದ ತಾವು ಲೋಕೋಪಕಾರಿಗಳೆಂದೂ ನಿಸ್ವಾರ್ಥರೆಂದೂ ಸೂಚಿಸಿದ್ದಾರೆ. ಹೀಗೆ ಮಾಡುವಾಗ ಅವರು ಅಸತ್ಯ ವಿಧಾನಗಳನ್ನು ಮುಂದೊಡ್ಡಿ ಸತ್ಯ ಸಂಗತಿಗಳನ್ನು ಅಡಗಿಸಿದ್ದು ನೋಡಿ ಬಹಳ ಬೇಸರವಾಗುತ್ತದೆ. ನಮ್ಮ ಬೇಂಕಿನವರು ೨೫ ರತ್ತಲುಗಳಂತೆ ಹತ್ತಿಕಾಳು ಖರೀದಿಸಿದ್ದಿಲ್ಲ. ೨೪ರಂತೆ ಖರೀದಿಸಿದ್ದರು. ಅದರ ರಾ॥ ಹಳದೀಪುರಕರರ ಮೇಲೆ ಹಾಕದ ಕೆಲವು ನಿರ್ಬಂಧನೆಗಳನ್ನು ಅಧಿಕಾರಿಗಳು ಬೇಂಕಿಗೆ ಹಾಕಿದ್ದರು. ಚೀಲ ೧ಕ್ಕೆ ೧ ಆಣೆ ದಲಾಲಿ ಕೊಟ್ಟು ಅಧಿಕೃತ ದಲಾಲರ ಮುಖಾಂತರವೇ ಬೇಂಕು ಹತ್ತಿಕಾಳು ಖರೀದಿಸಬೇಕಾಗಿತ್ತು! ಈ ನಿರ್ಬಂಧ ಹಳದೀಪುರಕರರಿಗಿಲ್ಲ. ಈ ದಲಾಲರು ಮೇಲಾಗಿ ಎಲ್ಲ ಹತ್ತಿಕಾಳನ್ನು ಹುಬ್ಬಳ್ಳಿಯಲ್ಲಿ ಖರೀದಿಸಿ ಕೊಡದೆ, ೧೫೦೦ ಚೀಲಗಳನ್ನು ಹುಬ್ಬಳ್ಳಿಯಲ್ಲಿ ಕೊಟ್ಟು ಇನ್ನುಳಿದ ೨೫೦೦ ಚೀಲಗಳನ್ನು ಹುಬ್ಬಳ್ಳಿಯಿಂದ ೪೬ ಮೈಲು ದೂರದಲ್ಲಿರುವ ಗದಗಿನಲ್ಲಿ ಕೊಟ್ಟರು. ಈ ೪೬ ಮೈಲುಗಳ ಭಾಡಿಗೆ ಬೇಂಕಿನ ಮೈಮೇಲೆ ಬಿತ್ತು. ರಾ॥ ಹಳದೀಪುರಕರರಿಗೆ ಸರಕಾರದವರು ೧೫-೨೦ರ ಮೋಟಾರ ಬಂಡಿಗಳನ್ನು ಕೊಟ್ಟು ಬೇಕಷ್ಟು ಪೆಟ್ರೋಲ ಎಣ್ಣೆಯನ್ನೂ ಪೂರೈಸಿದ್ದಾರೆ! ಬೇಂಕಿಗೆ ಈ ಯಾವ ಅನುಕೂಲತೆಯನ್ನೂ ಕೊಟ್ಟಿದ್ದಿಲ್ಲ. ಬೇಂಕಿನವರು ಹೆಚ್ಚಿನ ದರದಿಂದ ಭಾಡಿಗೆ ಕೊಟ್ಟು ಖಾಸಗಿ ಮೋಟಾರ ಬಂಡಿಗಳಲ್ಲೇ ತಮ್ಮ ಹತ್ತಿಕಾಳು ತರಿಸಿಕೊಳ್ಳಬೇಕಾಯಿತು. ಅದಲ್ಲದೆ ಹಿಂದಿನಿಂದ ಜಿಲ್ಲಾಧಿಪರು ಚೀಲ ೧ರ ಧಾರಣೆ ರೂ ೧೨ ಇದ್ದದ್ದನ್ನು ರೂ. ೧೩॥ಗೆ ಏರಿಸಿ ಕೊಡಬೇಕಾಯಿತು. ರೇಲ್ವೆಯಿಂದ ಸ್ವೀಕರಿಸಲು ಅನುಕೂಲವಿದ್ದಾಗ ೧೫೦೦ ಚೀಲ ಹತ್ತಿಕಾಳನ್ನು ಬೇಂಕು ಹುಬ್ಬಳ್ಳಿಯಿಂದ ಮಾರಗೋವಾಗೆ ತರಿಸಿ, ಅಲ್ಲಿಂದ ಸಮುದ್ರ ಮಾರ್ಗವಾಗಿ ಇಲ್ಲಿ ತಂದು, ಆ ಹತ್ತಿಕಾಳನ್ನು ನಿಯಂತ್ರಿತ ದರಕ್ಕಿಂತ (ರೂ ೧೩ಕ್ಕಿಂತ) ಕಡಿಮೆ ದರಕ್ಕೆ ಅಂದರೆ ರೂ. ೧೦॥ಗೆ ಚೀಲ ೧ರಂತೆ ಮಾರಿದ್ದುಂಟು. ರಾ॥ ಹಳದೀಪುರಕರರಿಗೆ ಕೊಟ್ಟ ಸವಲತ್ತುಗಳನ್ನೂ ಅನುಕೂಲತೆಗಳನ್ನೂ ನಮ್ಮ ಬೇಂಕಿಗೆ ಒದಗಿಸಿಕೊಟ್ಟರೆ, ರಾ॥ ಹಳದೀಪುರಕರರು ಪ್ರತಿ ಚೀಲದ ಹಿಂದೆ ೧೨ ಆಣೆ ದಲಾಲಿ ಕೊಳ್ಳುತ್ತಿದ್ದರೆ ಬೇಂಕಿನವರು ಬರೀ ೪ ಆಣೆ ದಲಾಲಿ ತಕ್ಕೊಂಡು ಬೇಕಷ್ಟು ಹತ್ತಿಕಾಳಿನ ಪುರವಟೆ ಮಾಡಲು ಸಿದ್ಧರಾದಾರು; ಲೋಕಾಗ್ರಹವಾದರೆ ೨ ಆಣೆ ದಲಾಲಿಯಿಂದಲೂ ಮಾಡಬಹುದು. ಮೇಲಾಗಿ ಇಂಥ ವ್ಯಾಪಾರದೊಳಗೆ ಬೇಂಕಿಗೆ ದೊರೆಯುವ ಲಾಭದ ನೂರಕ್ಕೆ ೮೦ರಷ್ಟು ಪಾಲನ್ನು ಸಾರ್ವಜನಿಕ ಹಿತದ ಕಾರ್ಯಗಳಿಗಾಗಿ ಕೊಡತಕ್ಕದ್ದುಂಟು. ಬಿಕ್ರಿ-ಮಕ್ತೆ ಕೊಟ್ಟಲ್ಲಿ ಖರ್ಚು ಕಡಿಮೆ ಬರುತ್ತದೆ, ಲೋಕಹಿತವಾಗುತ್ತದೆ ಮುಂತಾದ ಮಾತುಗಳನ್ನು ಅನುಭವೀ ವ್ಯವಹಾರಸ್ಥರಾರೂ ನಂಬಲಾರರು. ಆದ್ದರಿಂದ ನಿಃಸ್ವಾರ್ಥ ಲೋಕೋಪಕಾರದ ವೇಷವನ್ನು ರಾ॥ ಹಳದೀಪುರಕರರು ಬರಕೊಂಡು ಅನ್ಯರನ್ನು ನಿಂದಿಸುವ ಗೊಡವೆಗೆ ಹೋಗಬಾರದೆಂದು ಸೂಚಿಸಬಯಸುತ್ತೇನೆ. ಇತ್ಯಾದಿ.

(ತಾ ೧೬-೧೧-೪೫) ಕಳೆದ ಸೋಮವಾರ ತಾ. ೧೨ನೇ ಮಧ್ಯಾಹ್ನ ಗಂಗಾ-ಪ್ರಸಾದ ಎಂಬ ಮಚ್ವೆಯು ಸರಕಾರಿ ಸಾಟುಗಳನ್ನು ಹೇರಿಕೊಂಡು ಮುಂಬಯಿಗೆ ಹೊರಟಿತ್ತು. ಅಳಿವೆಯಿಂದ ಹೊರದೇಳುತ್ತಿರುವಾಗ ಅದು ಒಮ್ಮೆಲೇ ನೆಲಕ್ಕೆ ತಾಗಿ ತಾರಿ ವಗ್ಗರಿ ಮುಂದು ನೀರೊಳಗೆ ಮುಳುಗಹತ್ತಿತು. ಅದನ್ನು ಕಂಡ ರಾ॥ ಅಂಟ್ವೋನ ಗೊನ್ಸಾಲ್ವಿಸರೂ ಕಸ್ಟಮ್ ಕಚೇರಿಯವರೂ ಕೆಲವು ಖಲಾಸಿಗಳನ್ನು ಕೂಡಿಸಿಕೊಂಡು ಮುಳುಗುತ್ತಿದ್ದ ಮಚ್ವೆಯೊಳಗಿನ ಜನರನ್ನು ಮೊದಲು ಪ್ರಯಾಸದಿಂದ ಬದುಕಿಸಿದರು. ಹಿಂದಿನಿಂದ ಪ್ರಯತ್ನ ಮಾಡಿ ಆ ಮಚ್ವೆಯನ್ನೂ ಅದರೊಳಗಿನ ಸಾಟುಗಳನ್ನೂ ಕೂಡ ದಂಡೆಗೆ ಮುಟ್ಟಿಸಿದರು. ಸದರಿ ಗಂಗಾಪ್ರಸಾದ ಮಚ್ವೆಯ ತಾಂಡೇಲನು ಅರ್ಕಾಟಿಯವರಿಗೆ (ಮಚ್ವೆಗಳನ್ನು ಸರಿಹಾದಿಯಿಂದ ನಡಿಸಿ ಹೊರಗೆ ಸಮುದ್ರಕ್ಕೆ ಮುಟ್ಟಿಸುವವರಿಗೆ) ಕರೆದು ತನ್ನ ಮಚ್ವೆ ಹೊರಗೆ ಮುಟ್ಟಿಸಿಕೊಡಲು ಹೇಳಿಕೊಂಡಿದ್ದನಂತೆ. ಆಗ ಅರ್ಕಾಟಿಯವರು ೨೫-೩೦ ರೂ ಕೊಟ್ಟರೆ ಮಾತ್ರ ತಾವು ಬರುತ್ತೇವೆಂದು ಹೇಳಿದರಂತೆ! ಬಡ ತಾಂಡೇಲನು ಆಗ ಅರ್ಕಾಟಿಯವರಿಲ್ಲದೆ ಮಚ್ವೆ ಬಿಟ್ಟನಂತೆ. ಕಸ್ಟಮ್ ಅಧಿಕಾರಿಗಳು ಇತ್ತ ಲಕ್ಷಕೊಟ್ಟು ಅರ್ಕಾಟಿಯವರ ಕೂಲಿ ದರವನ್ನು ನಿಯಂತ್ರಿಸಬೇಕಾಗಿ ಅರಿಕೆಯುಂಟು.

ಇಲ್ಲಿಯ "ಸೀಕ ಹಾಸ್ಪಿಟಲ್" ದಲ್ಲಿ ಶಸ್ತ್ರ-ಕ್ರಿಯೆಯ ವಿಭಾಗದ ಉತ್ತಮ ಏರ್ಪಾಟು ಮಾಡಲು ಡಾ॥ ಜೇ. ಎಫ್. ಡ್ಯಾಸ್ ಎಂಬ ವಿದೇಶಗಳಲ್ಲಿ ಕಲಿತು ಅನುಭವಪಟ್ಟ ಸರ್ಜನರು ಬಂದಿದ್ದಾರೆ, ಜನರು ಅವರ ವಿದ್ಯಾನುಭವಗಳ ಲಾಭ ಪಡೆಕೊಳ್ಳಬಹುದು.

ಹೊಸಾಡ-ಬೇರೊಳ್ಳಿ ಸೀಮೆಯ ಸೀಧಾ ಅಂಗಡಿಯವರು ಕಳೆದ ವರ್ಷ ತಮಗಾದ ಲಾಭದ ರೂ. ೧೮೩ರಲ್ಲಿ ರೂ. ೯೦ನ್ನು ತಮ್ಮ ಸೀಮೆಯ ಗಾಂಧಿ ಶಾಲೆಗೂ, ರೂ. ೪೬ನ್ನು ಬೇರೊಳ್ಳಿಯ ಕಟ್ಟಿನ ಕೆಲಸಕ್ಕೂ ರೂ. ೪೬ನ್ನು ಕಡ್ಲ ಶಾಲೆಯ ದುರಸ್ತಿಯ ಬಗ್ಗೆ ಕೊಟ್ಟಿದ್ದಾರೆಂದು ತಿಳಿಯುತ್ತದೆ.

(ತಾ ೨೪ ೧೧-೪೫) ಈಗೊಂದು ವಾರದಿಂದ ಸೀಧಾ ಅಂಗಡಿಯಿಂದ ಅಕ್ಕಿ ಒಯ್ಯುವವರು ಇಷ್ಟಿಷ್ಟು ಸಕ್ಕರೆ ಒಯ್ಯಬೇಕೆಂತಲೂ, ಸಕ್ಕರೆ ಬೇಡವಾದರೆ ಅಷ್ಟು ಅಕ್ಕಿ ಕಡಿಮೆ ಒಯ್ಯಬೇಕೆಂತಲೂ ಒತ್ತಾಯವಾಗಹತ್ತಿದೆ. ಈ ಸಕ್ಕರೆಯು ಹಿಟ್ಟು ಮಾಡಲು ಕಷ್ಟವಾಗುವದಿಲ್ಲವಂತೆ! ಅದು ಅಷ್ಟು ಹಳೆಯದಿದೆ! ದರವೂ ಅಧಿಕವಿದೆ, ಅಂದರೆ ದೊಡ್ಡಕ್ಕಿಯ ದರಕ್ಕಿಂತ ಪಾಯಲಿ ೧ಕ್ಕೆ ಬರೀ ೪॥ ಆಣೆ ಹೆಚ್ಚಿಗೆ! ಬಡವರಿಗೆ ಸಕ್ಕರೆ ಉಣ್ಣಲು ಇದೊಂದು ಸುಸಂಧಿ!!

ಭಟಕಳ— (ತಾ. ೧೬-೧೧-೪೫) ಮೊನ್ನೆ ತಾ॥ ಜವಾಹರಲಾಲರ ಹುಟ್ಟುಹಬ್ಬದ ಪ್ರೀತ್ಯರ್ಥ ಶ್ರೀ ಮಾರುತಿ ಗುಡಿಯಲ್ಲಿ ವಿಶೇಷ ಪೂಜೆ ಮಾಡಿಸಿ ಪಂಡಿತಜಿಗೆ ಅಖಂಡ ಆಯುರಾರೋಗ್ಯ ಪಾಲಿಸಲು ಪ್ರಾರ್ಥಿಸಲಾಯಿತು.

ಸೀಧಾ-ಕ್ಷೇತ್ರದ ಹೊರಗಿನ ಭಾಗಕ್ಕೆ ಸೀಧಾ-ಸಾಮಗ್ರಿ ಪೂರೈಸುವ ಅಂಗಡಿಯಲ್ಲಿ ಸಕ್ಕರೆ ಎಂದು ಕೂಪನಗಳಲ್ಲಿ ಕಾಣಿಸಿ, ಬೆಲ್ಲ ಕೊಡುತ್ತಾರೆಂದು ದೂರುಂಟು. ಇದೇನು ನಾಟಕವೆಂದು ಜಿಲ್ಲಾಧಿಪರು ಶೋಧಿಸಿ ಸುಧಾರಿಸಬೇಕು

(ತಾ. ೨೨-೧೧-೪೫) ಇಂದಿನಿಂದ ರಾ॥ ಕೇ. ಸಂಜೀವರಾಯರು ಶ್ರೀ ಮಾರುತಿ ಮಂದಿರದಲ್ಲಿ "ಸಂಪೂರ್ಣ ರಾಮಾಯಣ"ದ ಕೀರ್ತನೆಗಳನ್ನಾರಂಭಿಸಿದ್ದಾರೆ.

ಇಲ್ಲಿಯ ಸೀಧಾ-ಅಂಗಡಿಗಳಲ್ಲೂ ಸಕ್ಕರೆಯ ಒತ್ತಾಯವಾಗುತ್ತಿದೆ.

ವೆಂಕಟಾಪುರ ಹೊಳೆಯಲ್ಲಿ ಗುತ್ತೇದಾರರು ಜನಾವರಗಳನ್ನು ಕೂಡಲೇ ದಾಟಿಸದೆ ಹಿಂಗಲು ಬಿಡಲು ಮೋಟಾರ ಬಂಡಿಗಳ ಬರೋಣ ಕಾಯುತ್ತಾ ಜನರಿಗೆ ಪೀಡಿಸುತ್ತಾರಂತೆ.

ಇಲ್ಲಿಯ ಸೋನಾರಕೇರಿಯೊಳಗಿನ ಶಾಲೆಯ ಶಿಕ್ಷಕರೊಬ್ಬರು ಊರಿಗೆ ಹೋಗಿ ೧॥ ತಿಂಗಳಾಯಿತು. ಶಿಕ್ಷಕರಿಲ್ಲೆಂದು ವಿದ್ಯಾರ್ಥಿಗಳು ಅಲೆದಾಡುತ್ತಾರೆ! ನಗರದೊಳಗಿನ ಗಂಡು ಮಕ್ಕಳ ಶಾಲೆಯಲ್ಲೂ ಒಬ್ಬ ಶಿಕ್ಷಕನಿಲ್ಲವಂತೆ! ಶಾಲಾ ಬೋರ್ಡಿನವರು ಕಣ್ದೆರೆದು ನೋಡಬೇಕು.

ಸಿದ್ದಾಪುರ— (ತಾ ೩೧-೧೦-೪೫) ನಿನ್ನೆ ಮಂಗಳವಾರ ಸಂಜೆ ಶ್ರೀ ಕರಮರಕರ, ಗುಂಜೀಕರ, ಖಾನ-ಸಾಹೇಬ ಇವರು ಜಿಲ್ಲಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷ ಶ್ರೀ ನಾಯಕ ವಕೀಲರ ಸಂಗಡ ಚುನಾವಣೆಯ ಪ್ರಚಾರಕ್ಕಾಗಿ ಇಲ್ಲಿಗೆ ಆಗಮಿಸಿದ್ದರು. ಅಭ್ಯಾಗತ ಮಹನೀಯರನ್ನು ಮೆರವಣಿಗೆಯಿಂದ ಚಂದ್ರಘಟಗಿಯವರ ಕಟಾಂಗಣದಲ್ಲಿ ಸೇರಿದ ಸಭೆಗೆ ಕರೆತರಲಾಯಿತು. ನಾಯಕ ವಕೀಲರು ಅತಿಥಿಗಳ ಪರಿಚಯ ಮಾಡಿಕೊಟ್ಟ ಬಳಿಕ ಶ್ರೀ ಗುಂಜೀಕರ, ಖಾನ ಸಾಹೇಬ ಮತ್ತು ಕರಮರಕರ ಇವರ

(೧ನೇ ಪುಟದ ಮೇಲೆ ಮುಂದರಿಸಿದೆ)

WANTED a Section-writer for the Haliyal Debt Adjustment Board Qualification essential.— Must have passed the Matriculation or S. S L. C. Examination. Applications should be addressed to the District Judge, Kanara, and sent to us so as to reach this office by 30th November, 1945

Haliyal, 14-11-'45 *Chairman,*
Debt Adjustment Board, Haliyal.

ವಿದ್ಯಾರ್ಥಿ, ಶಿಕ್ಷಕ ಮತ್ತು ಉದ್ಯೋಗಸ್ಥರಿಗೆ

ಬೇಕಾದ ಸ್ಟೇಶನರಿ, ಮ್ಯಾಸರ ಕಾಗದ, ಟೈಪ ಮಷಿನ ಕಾಗದ (ಬಿಳೇ ಹಾಗೂ ಬಣ್ಣ) ವಗೈರೆ ಸವಲತ್ತಿನ ದರದಿಂದ, ಹೋಲ ಹಾಗೂ ರಿಟೇಲ ನಮ್ಮಲ್ಲಿ ಸಿಗುತ್ತವೆ.

ಬಾಲಕೃಷ್ಣ ಸ್ಟೋರ್ಸ್, ಕುಮಟಾ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ತರಿಸುವದು
ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ
ಕೊಡಬೇಕು.
ವರ್ಗಣಿ ಮುಂಗಡ ಕೊಟ್ಟುಕೊಳ್ಳುವದು

Reg. No. B 1270. Monday, 3rd December, 1945.

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೨೨.

ಕುಮಟಾ:- ಸೋಮವಾರ, ತಾ. ೩ ನೆಯ ಡಿಸೆಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೬ ಆಣೆಯಂತೆ
ಸ್ಪೆಶಲ್ ಪ್ರತಿ ೧೫ ಎಮ್ ಉದ್ದ
೧ ಸಾಲಿಗೆ ೮ ಆಣೆಯಂತೆ
ವಿಶಿಷ್ಟ ಅಲ್ಪ ದೀರ್ಘಕಾಲೀನ
ಜಾಹೀರಾತುಗಳ ಬಗ್ಗೆ ಸಮಕ್ಷ
ಇಲ್ಲವೆ ಪತ್ರದ್ವಾರಾ
ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು)

ಸಿದ್ದಾಪುರ— (ತಾ. ೨೭-೧೧-೪೫) ನಿನ್ನಿನ ಚುನಾವಣೆಯಲ್ಲಿ ಇದೇ ತಾಲೂಕಿನ ಹಾದಿಯಲ್ಲಿರುವ ೪೭೧ ಮತದಾರರ ಪೈಕಿ ೩೫೪ ಜನರು ಮತ ಕೊಟ್ಟಿದ್ದಾರೆ. ೪-೬ ಮತಗಳನ್ನು ಬಿಟ್ಟು ಎಲ್ಲ ಮತಗಳು ಕಾಂಗ್ರೆಸ್-ಉಮೇದವಾರನಿಗೇ ಸಿಕ್ಕಿವೆ. ಈ ಹೊತ್ತು ಮುಸಲ್ಮಾನರ ಚುನಾವಣೆಯಾಯಿತು. ಇಲ್ಲಿ ಇರುವವರು ಇಬ್ಬರೇ ಮತದಾರರು ಅವರಲ್ಲಿ ಒಬ್ಬನು ಮಾತ್ರ ಮತ ಕೊಟ್ಟನು. ಅದು ಲಾಲಖಾನನಿಗೆ ಸಿಕ್ಕಿರಬೇಕು

ಕಾರವಾರ— (ತಾ. ೨೭-೧೧-೪೫) ನಿನ್ನಿನ ಚುನಾವಣೆಯಲ್ಲಿ ಕಾರವಾರ ಮತಗಟ್ಟೆಯಲ್ಲಿ ೬೬, ಚಿತ್ತಾಕುಲೆಯಲ್ಲಿ ೩೪, ಬೆಂಡಿಯಲ್ಲಿ ೨೪, ಕಡವಾಡದಲ್ಲಿ ೨೩, ಹಣಕೋಣದಲ್ಲಿ ೨೮ ಮತದಾರರು ಮತ ಕೊಟ್ಟಿರುತ್ತಾರೆ. ಕದ್ರೆಯ ಅಂಕಿಗಳು ಇನ್ನೂ ಬಂದಿಲ್ಲ ೧೦-೧೨ ಜನರ ಹೊರತು ಉಳಿದವರೆಲ್ಲರೂ ಕಾಂಗ್ರೆಸ್ಸಿಗೇ ಮತ ಕೊಟ್ಟಿರುತ್ತಾರೆಂದು ಬಲ್ಲವರು ಹೇಳುತ್ತಾರೆ

ಇತ್ತಲಾಗಿ ಊರಲ್ಲಿ ಕಳವುಗಳು ಹೆಚ್ಚಾಗಿವೆ ನಗರಾಧ್ಯಕ್ಷ ರಾ|| ದಾಮೋದರ ನಾಡಕರ್ಣಿಯವರಲ್ಲಿ ರೂ ೨೦೦ ಕಳವಾಗಿ ಹೋಗಿವೆಯಂತೆ. ರಾ|| ಬಿ|| ಕುಲಕರ್ಣಿಯವರಲ್ಲಿ ಕಳವಾಗಿ ರೂ ೧೫೭ ಹೋಗಿವೆಯಂತೆ. ನಿನ್ನೆ ರಾತ್ರಿ ನಂದನಗದ್ದೆಯಲ್ಲಿರುವ ರಾ|| ಮಂಗೇಶ ಚಿಕ್ಕೆರಮನೆಯವರಲ್ಲಿ ಚಿನ್ನ-ಬೆಳ್ಳಿಯ ಆಭರಣಗಳೂ, ಬೆಲೆಯುಳ್ಳ ಸೀರೆಗಳೂ ಇದ್ದ ಒಂದು ಪೆಟ್ಟಿಗೆಯನ್ನೇ ಕಳ್ಳರು ಒಯ್ದಿರುತ್ತಾರಂತೆ. ಕಳವಾಗಿ ಹೋದ ಸಾಮಾನಿನ ಬೆಲೆ ರೂ. ೧೦೦೦ಕ್ಕೆ ಮಿಕ್ಕುತ್ತದೆ. ಊರಲ್ಲಿ ಕಳ್ಳರದೊಂದು ಟೋಳಿಯೇ ಉಂಟಂತೆ. ಕಳವು ಮಾಡಬೇಕೆಂದು ಎಣಿಸಿದ ಮನೆಗಳೊಳಗಿನ ನೌಕರರೊಡನೆ ಈ ಟೋಳಿಯವರು ಸಂಧಾನ ಮಾಡಿ ಹಣವಾಗಲಿ ಆಭರಣಗಳಾಗಲಿ ಇರುವ ಸ್ಥಳದ ಸರಿಯಾದ ಸಂಗತಿ ತಿಳಿದುಕೊಂಡು ಕಳವು ಮಾಡುತ್ತಿರಬೇಕೆಂದು ತರ್ಕವಿದೆ. ಪೋಲೀಸರು ಈ ಕಳ್ಳರ ಪತ್ತೆ ಹಚ್ಚಬೇಕು.

ಶ್ರೀ|| ರಂಗರಾವ ದಿವಾಕರರು ಈ ಊರಿಗೆ ಬಂದಾಗ ಕೆಲವು ರಾಷ್ಟ್ರಗೀತಗಳನ್ನು ಹಾಡಿದಳು, ಹಿಂದ ಆಯುವ ಸೈನಿಕರ ದಿನದ ಪ್ರಭಾತ ಫೇರಿಯಲ್ಲಿ ಸೇರಿದಳು ಎಂಬೀ ಕಾರಣಗಳಿಂದ ಮುಲ್ಕೀ ಇಲಾಖೆಯಲ್ಲಿ ಕಾರಕೂನಳಾಗಿದ್ದ ಕುಮಾರಿ ಬೈಂದೂರ ಇವಳಿಗೆ ಕೆಲಸದಿಂದ ತೆಗೆದು ಹಾಕಿದ್ದಾರೆಂದು ಸುದ್ದಿಯುಂಟು

ಈ ತಿಂಗಳಲ್ಲಿ ಇದೇ ಜಿಲ್ಲೆಯಲ್ಲಿ ರಾಷ್ಟ್ರಸೇವಾ ದಳದ ೧೫ ಹೊಸ ಶಾಖೆಗಳು ತೆರೆಯಲ್ಪಟ್ಟ ವರದಿಗಳು ಬಂದಿವೆ

(ತಾ. ೧-೧೨-೪೫) ಅಕ್ಕಿ ಭತ್ತಗಳ ಖರೀದಿಯ ಹೊಸ ಧೋರಣೆಗಳು ಹೋದ ವರ್ಷದವೇ ಇರುವವಾಗಿ ಸುದ್ದಿ. ಧಾರವಾಡ ಅತ್ತ ಕಡೆ ಈ ವರ್ಷದ ಬೆಳೆಗಳು ಚನ್ನಾಗಿಲ್ಲವೆಂದು ಈ ಬಗ್ಗೆ ನೆವ ಹೇಳಲಾಗುತ್ತಿದೆ' ಧಾರವಾಡ ಜಿಲ್ಲೆಯ ಜನರ ಮುಖ್ಯ ಆಹಾರ ಜೋಳ ಮತ್ತು ಗೋದಿ, ಅಕ್ಕಿಯಲ್ಲ; ಎಂಬದನ್ನು ಈ ನೆವ ಹುಡುಕಿದವರಿಗೆ ಗೊತ್ತಿಲ್ಲದಿರಬೇಕು ! ಅದೇನಿದ್ದರೂ ಈ ಜಿಲ್ಲೆಯ ಬಡವರ ಬಗ್ಗೆ ಸರಕಾರಕ್ಕೇನೂ ಕನಿಕರ ಹುಟ್ಟುವದಿಲ್ಲವೆಂಬಂತೆ ತೋರುತ್ತಿದೆ ದಯಾಘನ ಪರಮಾತ್ಮನೇ ಈಗ ಬಡವರ ಗತಿ !!

ಅಂಕೋಲಾ— (ತಾ. ೧೭-೧೧-೪೫) ತಾವು ಇನ್ನು ಶಾಲಾ ಬೋರ್ಡಿನಲ್ಲಿ ಇದ್ದು ಪ್ರಯೋಜನವಾಗದೆಂದೂ, ತನ್ನ ವಿಶಿಷ್ಟ ಗುರಿ ಸಾಧಿಸಲಾಗದಿದ್ದಾಗ ಜಿಲ್ಲೆಯ ಮಂಡಳಿ ನಿರುಪಯೋಗಿಯೆಂದೂ ಭಾವಿಸಿ ಶ್ರೀ ಸ ಪ ಗಾಂವಕಾರರು ತಮ್ಮ ಸದಸ್ಯತ್ವಕ್ಕೆ ಮೊನ್ನೆ ತ್ಯಾಗಪತ್ರ ಕಳಿಸಿಕೊಟ್ಟಿದ್ದಾರೆ

ಕಳೆದ ತಾ ೧೪ಕ್ಕೆ ಭಾವಿಕೇರಿಯಲ್ಲಿ ಈ ತಾಲೂಕಿನ ರೈತರ ಪರಿಷತ್ತು ರಾ|| ಬಾಪಿನಕರ್ಣ ವಕೀಲರ ಅಧ್ಯಕ್ಷತೆಯಲ್ಲಿ ಸೇರಿತ್ತು. (೧) ಒಕ್ಕಲಿಗರ ಸಾಲ-ಪರಿಹಾರದ ಹಾಗೂ ಲಾವಣಿ ಕಾನೂನುಗಳನ್ನು ಈ ತಾಲೂಕಿಗೆ ಆದಷ್ಟು ಬೇಗ ಅನ್ವಯಿಸಬೇಕೆಂದೂ, (೨) ಸಾಲ-ಪರಿಹಾರ ಮಂಡಳದಲ್ಲಿ ರೈತರ ವಿಶ್ವಾಸವುಳ್ಳವರನ್ನೇ ನೇಮಿಸಬೇಕೆಂದೂ, (೩) ಸಮುದ್ರ ಕರಾವಳಿಯ ಭಾಗದಲ್ಲಿ ಗೇಣಿಯ ದರವು ಹೆಚ್ಚಿರುವದರಿಂದ ಅದನ್ನು ಇಳಿಸುವ ಆವಶ್ಯಕತೆಯಿದೆಯೆಂದೂ, ಗೊತ್ತುವಳಿಗಳಾದವು. ತಾಲೂಕಿನಲ್ಲೆಲ್ಲ ಸಂಚರಿಸಿ ಎಲ್ಲ ಕ್ಷೇತ್ರಗಳ ಗೇಣಿಯ ದರ ಎಷ್ಟೆಷ್ಟು ಇರಬಹುದೆಂದು ಕಂಡುಹಿಡಿದು ವರದಿ ಮಾಡಲು ೭ ಜನರ ಒಂದು ಮಂಡಳಿ ನೇಮಿಸಲ್ಪಟ್ಟಿದೆ ರೈತರ ಸಂಘಟನೆಯನ್ನು ಬಲಪಡಿಸುವದಕ್ಕಾಗಿ ೧೧ ಜನರ ಬೇರೊಂದು ಸಮಿತಿ ನೇಮಕವಾಗಿದೆ. ಎಲ್ಲ ಕೆಲಸ ರಾಷ್ಟ್ರೀಯ ಸಭೆಯ ಧ್ವಜದಡಿಗೇ ನಿಂತು ನಡಿಸತಕ್ಕದ್ದೆಂದೂ ಪರಿಷತ್ತಿನ ತೀರ್ಮಾನವಾಗಿದೆ,

(ತಾ ೧-೧೨-೪೫) ಕೆಲವು ದಿವಸಗಳ ಹಿಂದೆ ಕಾರವಾರದ ಸಬಜಡ್ಜರು ಸಾಯಂಕಾಲದ ತಿರುಗಾಟಕ್ಕೆ ಬಂದರದ ಕಡೆಗೆ ಹೋದಾಗ ಎಚ್ಚರ ತಪ್ಪಿ ಕಾಂಕ್ರೀಟದ ಮೇಲೆ ಬಿದ್ದರಾಗಿಯೂ ಅಲ್ಲಿಂದ ಕಾರವಾರಕ್ಕೆ ಹೋಗುತ್ತಿದ್ದ ಮೋಟಾರ ಬಂಡಿಯ ಡ್ರಾಯವ್ಹರನೊಬ್ಬನು ಅವರನ್ನು ಎತ್ತಿ ಮನೆಗೆ ಮುಟ್ಟಿಸಿದನಾಗಿಯೂ ಸುದ್ದಿಯಿದೆ. ಈ ಸಬಜಡ್ಜರ ಪ್ರಕೃತಿ ಇತ್ತ ೪-೫ ತಿಂಗಳಿಂದ ಸರಿಯಿದ್ದಿಲ್ಲ ಅದರಿಂದ ಕೋರ್ಟ-ಕೆಲಸಕ್ಕೆ ಬಹಳ ತೊಂದರೆಯಾಗುತ್ತಿತ್ತು ದಾವೆಗಳ ವಿಚಾರಕ್ಕೆಂದು ಕಾರವಾರಕ್ಕೆ ಹೋದ ಪಕ್ಷಗಾರರೂ ಸಾಕ್ಷಿಗಾರರೂ " ಬಂದ ಹಾದಿಗೆ ಸುಂಕವಿಲ್ಲ " ವೆಂಬಂತೆ ಕೆಲಸವಾಗದೆ ಹಿಂತಿರುಗಿ ಮನೆಗೆ ಬರುತ್ತಿದ್ದರು. ವಕೀಲರಿಗೆ ಕೇಳಿದರೆ " ಜಡ್ಜರಿಗೆ ಅಡ್ಡಾಗಿದೆ, ನಮ್ಮ ಮಾತೆ ಮುಂದೆ ಬೇಕುವವು. " ಎಂದು ಅವರು ಹೇಳುತ್ತಿದ್ದರು. ಹೀಗೆ ಪ್ರಕೃತಿ ನೆಟ್ಟಗಿಲ್ಲದಿದ್ದಾಗ ಜಡ್ಜರು ರಜೆ ತಕ್ಕೊಳ್ಳದೆ ಯಾಕೆ ಉಳಿದರೋ ತಿಳಿಯದು. ಈಗೇನೋ ಅವರು ಸರ್ಜನರ ಶಿಫಾರಸಿನಿಂದ ೨ ತಿಂಗಳ ರಜೆ ತಕ್ಕೊಂಡು ಹೋಗಿದ್ದಾರಂತೆ. ಪ್ರಕೃತಿ ಪೂರ್ಣ ವಾಸಿಯಾಗುವ ವರೆಗೆ ಅವರು ರಜೆಯ ಮೇಲೆ ಉಳಿಯುವದೊಳಿತು ಎಂದು "ಕ್ರಿಸ್ತ ಪಕ್ಷಗಾರ"ರೊಬ್ಬರು ಬರೆಯುತ್ತಾರೆ.

ಮುಂಬಯಿ ಪ್ರಾಂತ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ|| ಥೋರಾತೆಯವರು ಕಳೆದ ಮಂಗಳವಾರ ಹುಬ್ಬಳ್ಳಿಯಿಂದ ಇಲ್ಲಿ ಆಗಮಿಸಿದ್ದರು ಶಿಕ್ಷಕರು ಅವರಿಗೆ ಅಪೂರ್ವ ಸ್ವಾಗತವನ್ನಿತ್ತರು ಸಂಜೆಯ ವೇಳೆಗೆ ಅವರನ್ನು ಶಿಕ್ಷಕರೂ ಶಾಲಾ ವಿದ್ಯಾರ್ಥಿಗಳೂ ಮೆರವಣಿಗೆಯಿಂದ ಎಜ್ಯುಕೇಶನ ಹೈಸ್ಕೂಲಿಗೆ ಕರೆತಂದರು ಅಲ್ಲಿ ಸಭೆಯಾಗಿ ಶ್ರೀ ಸ ಪ. ಗಾಂವಕಾರರ ಅಧ್ಯಕ್ಷತೆಯಲ್ಲಿ ಅಭ್ಯಾಗತ ಮಹನೀಯರ ಹೃದಯಸ್ಪರ್ಶಿ ಭಾಷಣವಾಯಿತು. ಅವರು ಪ್ರಾಥಮಿಕ ಶಿಕ್ಷಕರ ದುಃಸ್ಥಿತಿಯನ್ನು ವಿವರವಾಗಿ ಬಣ್ಣಿಸಿ, ಅವರ ಸ್ಥಿತಿ ಸುಧಾರಿಸುವ ವರೆಗೆ ಶಿಕ್ಷಣದ ಏಳ್ಗೆಯಾಗದೆಂದು ಪ್ರತಿಪಾದಿಸಿದರು. ಮತ್ತು ತಮ್ಮ ಮಕ್ಕಳ ಉದ್ಧಾರಕ್ಕಾಗಿ ದುಡಿಯುವ ಬಡ ಶಿಕ್ಷಕರನ್ನು ಜನತೆಯು ಸಹಾನುಭೂತಿಯಿಂದ ಕಾಣಬೇಕೆಂಬುದಾಗಿ ಬೋಧಿಸಿದರು. ಅಧ್ಯಕ್ಷರು ಸಮಯೋಚಿತ ಸಮಾರೋಪ ಮಾಡಿದ ಮೇಲೆ ಸಭೆಯು ಮುಕ್ತಾಯವಾಯಿತು.

ಅವರ್ಸಾ ಸೀಮೆಗೆ ಹಟ್ಟಿಕೇರಿಯ ಮತಗಟ್ಟೆ ಆ ಸೀಮೆಗೊಳಪಟ್ಟ ೨೨ ಮತದಾರರಲ್ಲಿ ೨೧ ಜನರು ಮತ ಹಾಕಿದ್ದಾರೆ. ಎಲ್ಲರೂ ಶ್ರೀ|| ಕಾಮರಕರರಿಗೇ ಕೊಟ್ಟಿದ್ದಾರಂತೆ.

ಯಲ್ಲಾಪುರ— (ತಾ. ೨೮-೧೧-೪೫) ಈ ತಾಲೂಕಿನ ೫ ಮತಗಟ್ಟೆಗಳಲ್ಲಿ ಕೂಡಿ ೧೩೨ ಮಂದಿ ಮತದಾರರು. ಅವರಲ್ಲಿ ೧೦೧ ಮಂದಿ ಕಳೆದ ಸೋಮವಾರದ ಚುನಾವಣೆಯಲ್ಲಿ ಮತದಾನ ಮಾಡಿದ್ದಾರೆ. ಎಲ್ಲರೂ ಕಾಂಗ್ರೆಸ ಪಕ್ಷಕ್ಕೇ. ರಾ|| ಗುರಪ್ಪ ಜಾಲಿಹಾಳ ಎಂಬ ಮತದಾರರು ೮೮ ವರ್ಷಗಳ ಮುದುಕರು ಅದರೂ ಗಾಡಿಯಲ್ಲಿ ಬಂದು, ಬೇರೆಯವರ ಆಧಾರದಿಂದ ಮತ ಕೊಡುವಲ್ಲಿಗೆ ಹೋಗಿ, ಕಾಂಗ್ರೆಸ್ಸಿಗೇ ತನ್ನ ಮತವೆಂದು ಹೇಳಿ ಮತ ಕೊಟ್ಟರು. ಕಾಂಗ್ರೆಸ-ಉಮೇದವಾರನೇ ಗೆಲ್ಲುವನೆಂದು ಅವರು ಆಶೀರ್ವಾದವನ್ನೂ ಕೊಟ್ಟಿದ್ದಾರೆ ಕಾಂಗ್ರೆಸ್ಸಿಗೆ ವಿಜಯವಾದದ್ದು ನೋಡದೆ ತಾವು ಸಾಯಲಾರೆವೆಂದು ಅವರು ಹೇಳುತ್ತಾರೆ !

ಇಲ್ಲಿಯ ಮಾಮಲೇದಾರ ಮಿ|| ತಿಲ್ಲೇದಾರ ಇವರು ಈಗ ಅಲ್ಲಲ್ಲಿ ಭತ್ತದ ಬೆಳೆಯ ತಪಾಸಣಿ ನಡಿಸಿದ್ದಾರೆ. ಯಾವದೊಂದು ಗುಂಟೆ ಕ್ಷೇತ್ರದ ಬೆಳೆ ಕೊಯ್ಯಿಸಿ, ಅಲ್ಲಿಂದಕ್ಷ ಬಡಿಸಿ, ಭತ್ತ ಅಳೆಸುತ್ತಾರೆ ಹಸಿ ಭತ್ತವೆಂಬುದು ತಾವು ನೋಡುವದಿಲ್ಲ! ಜೊಳ್ಳು ಭತ್ತವನ್ನೂ ತೆಗೆಸುವದಿಲ್ಲ! ಎಲ್ಲ ಭತ್ತ ಅಳೆದು ಎಕರೆ ೧ಕ್ಕೆ ಸರಾಸರಿ ೧೪ ಖಂಡಿ ಬರುತ್ತದೆಂದು ಅವರು ಸಿದ್ಧಾಂತ ಮಾಡಿ, ಮತ್ತು ಎಕರೆ ೧ಕ್ಕೆ ಸರಾಸರಿ ೧೦ ಖಂಡಿಯಂತೆ ರೈತರು ಸರಕಾರಕ್ಕೆ ಭತ್ತ ಕೊಡಬೇಕೆಂದು ತೀರ್ಮಾನಿಸಿದ್ದಾರೆ! ಅದರಂತೆ ಖರೀದಿಯ ಪತ್ರಗಳನ್ನೂ ತಯಾರಿಸಿಕೊಳ್ಳುತ್ತಿದ್ದಾರೆ. ಈ ವರ್ಷ ಈ ತಾಲೂಕಿನಲ್ಲಿ ಸುಮಾರು ೮೫೦೦ ಎಕರೆ ಭೂಮಿಯಲ್ಲಿ ಭತ್ತ ಬೆಳೆಸಿದ್ದಾರೆ. ಮಿ|| ತಿಲ್ಲೇದಾರರ ಲೆಕ್ಕದಂತೆ ಹೋದರೆ ಈ ತಾಲೂಕಿನಲ್ಲಿ ಈ ವರ್ಷ ೮೫೦೦೦ ಖಂಡಿ ಭತ್ತ ಸರಕಾರಕ್ಕೆ ಕೊಡಬೇಕಾದೀತು ಈ ಸಾರಿಯ ಬೆಳೆ ಹೋದ ವರ್ಷದಷ್ಟು ಚಲೋದಿಲ್ಲ. ಹೋದ ವರ್ಷ ೧೩೦೦೦ ಖಂಡಿ ಈ ತಾಲೂಕಿನಲ್ಲಿ ಖರೀದಿಸಬೇಕೆಂದು ಸರಕಾರದವರ ಸಂಕಲ್ಪವಿತ್ತು, ಆದರೆ ಅಷ್ಟು ಖರೀದಿಸಲು ಆಗಲಿಲ್ಲೆಂದು ತಿಳಿಯುತ್ತದೆ ಹೀಗಿರುವಾಗ ಈ ವರ್ಷ ೮೫೦೦೦ ಖಂಡಿ ಭತ್ತ ಖರೀದಿಸುವರಂತೆ ! ಮಿ|| ತಿಲ್ಲೇದಾರರ ಪ್ರತಾಪ ನೋಡಿರಿ.

೧೦-೧೫ ದಿನಗಳ ಹಿಂದೆ ಕವಡಿಕೇರಿಯಲ್ಲಿ ಕೋಟಿ-ಮಂಡಳದವರು ಕಾಡು ಹಂದಿಗಳ ಬೇಟೆಗೆ ಹೋಗಿದ್ದರಂತೆ. ಆಗ ೧ [illegible] ಅವರ ಮೈಮೇಲೆ ಬಂತು. ಒಬ್ಬನು ಧೈರ್ಯ ಮಾಡಿ ಅದನ್ನು ಗುಂಡಿಟ್ಟು ಕೊಂದನು ಈ ಸುದ್ದಿ ಮಿ|| ತಿಲ್ಲೇದಾರರಿಗೆ ತಿಳಿಯಿತು ಅವರು ಬೇಟೆಗಾರರನ್ನು ಕರೆದು, "ಪರವಾನೆಯಿಲ್ಲದೆ ನೀವು ಹುಲಿಯನ್ನು ಹ್ಯಾಗೆ ಕೊಂದಿರಿ ! " ಎಂದು ಗದರಿಸಿದರು ! ಬೇಟೆಯ ಕಾಲಕ್ಕೆ ಪಟೇಲರೂ ಇದ್ದರು." ನೀವು ಪಟೇಲರಾಗಿ ಹುಲಿ-ಬೇಟೆ ಹ್ಯಾಗೆ ಮಾಡಗೊಟ್ಟಿರಿ ? ಪಂಚನಾಮೆ ಯಾಕೆ ಮಾಡಿಸಲಿಲ್ಲ ? " ಎಂದು ಅವರಿಗೂ ಬೆದರಿಸಿದರಂತೆ ! ಇಷ್ಟೆಲ್ಲ ಮಾಡಿದ್ದು ಯಾಕೆ ಗೊತ್ತೇ ? ಆ ಹುಲಿಯ ಚರ್ಮ ಮಿ|| ತಿಲ್ಲೇದಾರರಿಗೆ ಬೇಕಿತ್ತು, ಅದನ್ನು ಎತ್ತಿ ಹಾಕಲಿಕ್ಕೆ ಅವರು ಇಷ್ಟೆಲ್ಲ ಖಟಾಟೋಪ ಮಾಡಿದ್ದು !

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿ.
[ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದುದು]
ತಾ. ೨೧-೧೨-೧೯೪೫ನೇ ಶುಕ್ರವಾರ ದಿನ ಬೇಂಕಿನ ಒಂದು ಶಾಖೆಯು
ಗದಗದಲ್ಲಿ
ತೆರೆಯಲ್ಪಡುವುದೆಂದು ತಿಳಿಸಲು ಡೈರೆಕ್ಟರರು ಸಂತೋಷಪಡುತ್ತಾರೆ.
ಅತೀ ಶೀಘ್ರದಲ್ಲಿಯೇ ತೆರೆಯಲ್ಪಡುವ ನಮ್ಮ
ಮುಂಬಯಿ ಶಾಖೆಯ ಸೂಚನೆಯನ್ನು ನಿರೀಕ್ಷಿಸಿರಿ.
ಅಖಿಲ ಕರ್ನಾಟಕದಲ್ಲೆಲ್ಲ ಶಾಖೆಗಳಿವೆ
ಪ್ರತಿಯೊಂದು ವಿಧದ ಬ್ಯಾಂಕಿಂಗ್ ವ್ಯವಹಾರಗಳು ನಡಿಸಲಾಗುತ್ತವೆ.
ಕುಂದಾಪುರ, }
ತಾ ೧೦-೧೧-೧೯೪೫ }
K. Vithaldas Shenai,
Managing Director

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬೀಳುತ್ತಿದೆ ಊರಲ್ಲಿ ಶಕ್ತಿ ಮಟ್ಟಿಗೆ ಆರೋಗ್ಯವುಂಟು

ಶ್ರೀಮದ್-ದ್ವಾರಕಾನಾಥತೀರ್ಥ ಗುರುಗಳು ಬುಧವಾರ ಸಂಜೆ ಇಲ್ಲಿಂದ ಹೊರಟು ವೆಂಕಟಾಪುರಕ್ಕೆ ಚಿತ್ತೈಸಿದ್ದಾರೆ ಹೊರಡುವ ಮುಂಚೆ ಉಡುಪಿಯ ಶ್ರೀ ಫಲಿಮಾರ ಮಠದ ಶ್ರೀರಘುಮಾನ್ಯ-ತೀರ್ಥಸ್ವಾಮಿಗಳೂ ಶ್ರೀದ್ವಾರಕಾನಾಥ ತೀರ್ಥರಿಗೂ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಭೆಟ್ಟಿಯಾಯಿತು ಉಡುಪಿಯ ಸ್ವಾಮಿಗಳು ಬುಧವಾರ ದಿವಸೇ ಮಧ್ಯಾಹ್ನದ ಸುಮಾರಿಗೆ ಮುರ್ಡೇಶ್ವರದಿಂದ ಇಲ್ಲಿಗೆ ಬಂದು ತಲ್ಪಿದ್ದರು ಬಂದವರೇ ಶ್ರೀಮದ್‌ದ್ವಾರಕಾನಾಥರವರನ್ನು ಕಾಣಬಯಸಿ ಆ ರೀತಿ ಸಂದೇಶವನ್ನು ಕಳಿಸಿಕೊಟ್ಟರು ಅದರಿಂದ ಶ್ರೀಮದ್-ದ್ವಾರಕಾನಾಥರು ತಮ್ಮ ಪ್ರಯಾಣ ಸಮಯವನ್ನು ಬದಲಿಸಬೇಕಾಯಿತು ೩ ಘಂಟೆಯ ಸುಮಾರಿಗೆ ಶ್ರೀಮಠದ ಶಿಷ್ಯರು ವಾದ್ಯ-ವೈಭವಗಳಿಂದ ಶ್ರೀವಿಠೋಬ ದೇವರ ಗುಡಿಯಲ್ಲಿ ಇಳಕೊಂಡ ಶ್ರೀಮದ್ ರಘುಮಾನ್ಯ ತೀರ್ಥರನ್ನು ಶ್ರೀ ವೆಂಕಟರಮಣ ದೇವರ ಮಂದಿರಕ್ಕೆ ಕರೆತಂದರು ಗುಡಿಯ ಮಹಾದ್ವಾರದಲ್ಲಿ ಅವರನ್ನು ಗೋಕರ್ಣ ಮಠಾಧೀಶರು ಸ್ವಾಗತಿಸಿ ದೇವ ದರ್ಶನ ಮಾಡಿಸಿ, ಮುಂದಿನ ಮಾಳಿಗೆಗೆ ಕರೆಕೊಂಡು ಹೋದರು ಗಂಗಾ-ಯಮುನೆಗಳ ಈ ಪವಿತ್ರ ಸಂಯೋಗವನ್ನು ಕಂಡು ಪಾವನರಾಗಲು ಮಾಳಿಗೆ ತುಂಬ ಸ್ತ್ರೀ ಪುರುಷ ಮಕ್ಕಳು ಕೂಡಿದ್ದರು ಉಭಯರೂ ಸ್ವಾಮಿಗಳು ಆಸನಸ್ಥರಾದ ಮೇಲೆ ಅವರ ಪಾದ ಪೂಜೆ ಆದವು ಉಭಯ ಗುರುಗಳೂ ಚಿಕ್ಕ ಪ್ರವಚನಗಳನ್ನು ಮಾಡಿ ಧರ್ಮಬೋಧೆ ಮಾಡಿದರು ಆ ಮೇಲೆ ಗೋಕರ್ಣಮಠದವರು ಉಡುಪಿ ಮಠದ ಸೇವಕ ಪರಿವಾರಕ್ಕೆ ಉಡುಗೊರೆ ವಸ್ತ್ರ ಕೊಟ್ಟು ಸತ್ಕರಿಸಿದರು ಇದಾದ ಮೇಲೆ ಶ್ರೀ ರಘುಮಾನ್ಯ ತೀರ್ಥರಿಗೆ ಸ್ವಸ್ಥಾನಕ್ಕೆ ಮುಟ್ಟಿಸಿಕೊಡಲಾಯಿತು ಆ ನಂತರ ಶ್ರೀ ದ್ವಾರಕಾನಾಥ ಗುರುಗಳು ಇಲ್ಲಿಯ ಶಿಷ್ಯವರ್ಗಕ್ಕೆ ಫಲ-ಮಂತ್ರಾಕ್ಷತೆಗಳನ್ನು ಕೊಟ್ಟು ವೆಂಕಟಾಪುರಕ್ಕೆ ತೆರಳಿದರು

ಆಚೆಯ ವಾರ ಜಿಲ್ಲಾಧಿಪರು ಮೂರೂರಿಗೆ ಹೋಗಿ, ಅಲ್ಲಿಯ ಗ್ರಾಮ ಸುಧಾರಣೆಯ ಕಾರ್ಯ ಕಂಡು ಸಂತೋಷಪಟ್ಟರೆಂದು ತಿಳಿಯುತ್ತದೆ ಈ ಗ್ರಾಮದಲ್ಲಿ ಮಂಗಗಳಿಂದಲೂ, ಹಂದಿಗಳಿಂದಲೂ ಜನರಿಗೆ ಬಹಳ ಬಾಧೆಯಾಗುತ್ತದೆ ಹೀಗೆ ಮಂಗಗಳ ಕಾಟದಿಂದ ಕಳೆದ ಒಂದೇ ವರ್ಷದಲ್ಲಿ ಬೆಳೆಗಳ ೧೦ ಸಾವಿರದಷ್ಟು ನಷ್ಟವಾಗಿದೆ, ಹುಲಿ ಹಾವಳಿಯಿಂದ ೫೦-೬೦ ದನಗಳ ನಾಶವಾಗಿದೆ! ಈ ಬಾಧೆಯಿಂದ ಜನರನ್ನು ಕಾಯುವ ಉಪಾಯ ಯೋಜನೆಯನ್ನು ಜಿಲ್ಲಾಧಿಪರು ತ್ವರ್ಯವೇ ಮಾಡಬೇಕೆಂದು ಗ್ರಾಮಸ್ಥರ ಅಪೇಕ್ಷೆಯಿದೆ

ಕೇಂದ್ರ ಎಸೆಂಬ್ಲಿಯ ಮುಸಲ್ಮಾನರ ಸ್ಥಾನದ ಚುನಾವಣೆ ಕಳೆದ ಸೋಮವಾರ ನಡೆಯಿತು ಈ ತಾಲೂಕಿನ ೭ ಮತದಾರ ಕೇಂದ್ರಗಳಲ್ಲಿ ಒಟ್ಟು ೩೭೫ ಮತದಾರರಿದ್ದಾರೆ ಅವರಲ್ಲಿ ೩೧೩ ಮಂದಿ ಮತ ಕೊಟ್ಟಿರುತ್ತಾರೆ ಎಲ್ಲ ಮತಗಳು ಕಾಂಗ್ರೆಸ ಹುರಿಯಾಳುವಿಗೇ ದೊರೆಯುವದು ಅಂದಾಜು ಪ್ರತಿಸ್ಪರ್ಧಿ ಹುರಿಯಾಳುಗಳ ಏಜಂಟರಾಗಲಿ ಪ್ರಚಾರಕರಾಗಲಿ ಎಲ್ಲೂ ಕಣ್ಣಿಗೆ ಬೀಳಲಿಲ್ಲ

೪ ೫ ದಿವಸಗಳ ಹಿಂದೆ ಮೂರೂರ ಕಲ್ಲಬ್ಬೆಯಲ್ಲಿ ಒಬ್ಬ ಗೌಡನು ಆಕಸ್ಮಾತ್ ತೀರಿಕೊಂಡ ವರ್ತಮಾನವಿದೆ ಅದೊಂದು ಕೊಲೆಪಾತಕವಿರಬೇಕೆಂದು ಪೋಲೀಸರು ಸಂಶಯಗೊಂಡು ಚೌಕಸಿ ನಡಿಸಿದ್ದಾರೆ ಮೊನ್ನೆ ಹುಗಿದು ಹಾಕಿದ ಶವವನ್ನು ಅವರು ಅಗಿದು ತೆಗೆಯಿಸಿ ಡಾಕ್ಟರರ ಕಡೆಯಿಂದ ಅದರ ತಪಾಸಣೆ ಮಾಡಿಸಿದ್ದಾರಂತೆ.

ಗೋಕರ್ಣದಲ್ಲಿ ಕೆಲವು ದಿನಗಳ ಹಿಂದೆ ಅಲ್ಲಿಯ ಬೇಲೆ ಹೊಕ್ಕಲಲ್ಲಿರುವ ೮ ೯ ಮಂದಿ ಹಳ್ಳೇರರನ್ನು, ಅವರು ಸಾರಿಯ ಹತ್ತಿರದಲ್ಲಿ ಹೋಗುವ ತೆಂಗಿನ ಮರಗಳ ಕಾಯಿಗಳನ್ನು ಕಳವು ಮಾಡುತ್ತಿರಬೇಕೆಂಬ ಸಂಶಯದಿಂದ, ಕೆಲವರು ಚೆನ್ನಾಗಿ ಥಳಿಸಿದರೆಂತಲೂ ಅದರಿಂದ ಒಬ್ಬನು ೨-೩ ದಿನಗಳಲ್ಲಿ ಮರಣಹೊಂದಿದನೆಂತಲೂ ವಾರ್ತೆ ಕೇಳಿಬರುತ್ತಿದೆ ಪೋಲೀಸರು ಚೌಕಸಿ ಮಾಡಬೇಕು

ಹಳ್ಳಿಗಳೊಳಗಿನ ಭತ್ತವನ್ನು ಸರಕಾರದವರು ಖರೀದಿಸ ಹತ್ತಿದಂದಿನಿಂದ ಹಳ್ಳಿಗಳಲ್ಲಿ ಭತ್ತ ಕುಟ್ಟಿ ಅಕ್ಕಿ ಮಾಡಿ ಜೀವನ ಸಾಗಿಸುತ್ತಿದ್ದ ಸಾವಿರಾರು ಜನರು ಈಗ ನಿರಾಧಾರರಾಗಿದ್ದಾರೆ ಸರಕಾರದವರು ಎಲ್ಲ ಭತ್ತವನ್ನು ಗಿರಣಿಗಳಿಗೆ ಕೊಟ್ಟಲ್ಲಿ ಈ ಜನರು ಬೇರೆ ಉದ್ಯೋಗವಿಲ್ಲದೆ, ಜೀವನಾಧಾರವಿಲ್ಲದೆ ಬಳಲಿ ಸಾಯಬೇಕಾದೀತು ಕಳೆದ ವರ್ಷ ರಾ॥ ಮಹಾಬಲೇ ಪಡುವಾಳರು ಈ ಜನರ ಬಗ್ಗೆ ಕನಿಕರಪಟ್ಟು, ಬಹಳಷ್ಟು ಭತ್ತವನ್ನು ಅಕ್ಕಿ ಮಾಡುವದಕ್ಕಾಗಿ ಹಳ್ಳಿಯವರಿಗೆ ಕೊಟ್ಟಿದ್ದರು ಅದರಿಂದ ಮೇಲಿನ ಜನರಿಗೂ ಕೆಲಮಟ್ಟಿಗೆ ಉದ್ಯೋಗ ದೊರೆತು ಸಹಾಯವಾಯಿತು, ಸರಕಾರಕ್ಕೂ ಭತ್ತವನ್ನು ಹಳ್ಳಿಗಳಿಂದ ಗಿರಣಿಗಳಿಗೆ ಒಯ್ಯುವ ಬಗ್ಗೆ ಮತ್ತು ಅಲ್ಲಿ ತಯಾರಾದ ಅಕ್ಕಿಯನ್ನು ಹಳ್ಳಿಗಳಿಗೆ ಕಳಿಸಿಕೊಡುವ ಬಗ್ಗೆ ತಗಲುವ ಹೇರಳ ವಾಹನ ಖರ್ಚ ಉಳಿಯಿತು ಈ ವರ್ಷವೂ ಜಿಲ್ಲಾಧಿಪರು ಕಳೆದ ವರ್ಷದ ಪದ್ಧತಿಯನ್ನೇ ಮುಂದವರಿಸಿ ಹಳ್ಳಿಗಳ ಬಡಜನರಿಗೆ ಸಹಾಯವಾಗಬೇಕಾಗಿ ಅಂತೆಯೇ ಹಳ್ಳಿಗರಿಂದ ಅಕ್ಕಿ ಮಾಡಲು ಸಾಧ್ಯವಿಲ್ಲದ ಭತ್ತವನ್ನಷ್ಟೇ ಗಿರಣಿಗಳಿಗೆ ಕಳಿಸಿಕೊಡಬೇಕು ಗಿರಣಿ ಅಕ್ಕಿಗಿಂತ ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿ ಹೆಚ್ಚಿಗೆ ಸತ್ವಪೂರ್ಣವಿದ್ದಿರುತ್ತದೆಂಬುದನ್ನು ಲಕ್ಷದಲ್ಲಿಡಬೇಕಾಗಿ ಸೂಚನೆಯುಂಟು

ಹೊನ್ನಾವರ— (ತಾ ೨-೧೨-೪೫) ಇಲ್ಲಿಯ ಶ್ರೀಲಕ್ಷ್ಮೀನಾರಾಯಣ ದೇವರ ವನಭೋಜನದ ಉತ್ಸವ ನಿನ್ನೆ ವಾಡಿಕೆಗಿಂತ ವಿಶೇಷ ವಿಜೃಂಭಣೆಯಿಂದ ನೆರವೇರಿತು ಬಾಂವೇಹಳ್ಳದ ಕೇರಿಯವರು ಬಹಳ ಆಗ್ರಹ ಮಾಡಿದ್ದರಿಂದ ದೇವರ ಪಲ್ಲಕ್ಕಿಯ ಮೆರವಣಿಗೆಯನ್ನು ಆ ಕೇರಿಯಲ್ಲೂ ಒಯ್ಯಲಾಗಿತ್ತು ಕ್ಷತ್ರಿಯ ಸಮಾಜದ ಯುವಕರು ಉತ್ಸಾಹದಿಂದ ದುಡಿದು ಉತ್ಸವವನ್ನು ಯಶಸ್ವಿಗೊಳಿಸಿದರು

ಶಿರಾಲಿ— (ತಾ ೩೦-೧೧-೪೫) ಇಲ್ಲಿಯ [illegible] ಪಂಡಿತ ನಾಗರಕಟ್ಟೆಯ ರಾ॥ ಭವಾನಿಶಂಕರ ರಾಮರಾವ ನಾಗರಕಟ್ಟೆಯವರು ಕಳೆದ ತಾ ೨೦ಕ್ಕೆ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ ೪೦ ವರ್ಷಗಳಿಂದ ಅವರು ಹಿಂದು ದೇವಾಲಯ ಕಮಿಟಿಯ ಸದಸ್ಯರಾಗಿದ್ದರು. ಮೃತಾತ್ಮರಿಗೆ ಚಿರಶಾಂತಿಯಾಗಲಿ!

ಇತ್ತಲಾಗಿ ಮೋಟಾರ ಡ್ರಾಯವ್ಹರ ಕಂಡಕ್ಟರರ ಕಡೆ ಮಾತಾಡುವದೇ ಕಷ್ಟವಾಗಿದೆ ಅವರು ಜನರ ಮಾತನ್ನೇ ಕೇಳುವದಿಲ್ಲ! ನಿಲ್ದಾಣಗಳಲ್ಲಿ ಬಂಡಿಗಳನ್ನು ೧-೨ ಮಿನಿಟು ನಿಲ್ಲಿಸಲಿಕ್ಕೂ ಅವರು ಒಪ್ಪುವದಿಲ್ಲ! ಅವರ ದರ್ಪವನ್ನು ಇಳಿಸುವವರಾರೂ ಇಲ್ಲವೇ?

ಭಟಕಳ — (ತಾ ೨೯-೧೧-೪೫) ರಸ್ತೆಗಳ ಮೇಲೆ ಧೂಳು ಬಹಳವಾಗಿದೆ ಈಗ ಗಾಡಿಸುವಾಗ ಧೂಳು ಹಾರಿ ತೊಂದರೆಯಾಗುತ್ತದೆ ಮ್ಯುನಿಸಿಪಾಲಿಟಿಯವರು ನೀರು ಹಾಕಿಸುವ ವ್ಯವಸ್ಥೆ ಮಾಡಬೇಕು

ಸರಾಫರವರ ಜವಳಿ ಅಂಗಡಿಯಲ್ಲಿ ೧ ಧೋತರ ಕೊಳ್ಳಹೋದವರಿಗೆ ೧೦ ಗಜ ಕೋರಾ ಕೊಂಡವರಿಗೆ ಮಾತ್ರ ಧೋತರ ಸಿಕ್ಕೀತೆಂದು ಹೇಳುತ್ತಾರೆ! ನಿಯಂತ್ರಣಾಧಿಕಾರಿಗಳು ಹಾಗೇನಾದರೂ ಹುಕುಮು ಮಾಡಿದ್ದುಂಟೇ?

ಶಿರಸಿ— ಅಖಿಲ ಭಾರತ ಅಡಿಕೆ ಸಮ್ಮೇಳನವು ಇದೇ ಬರುವ ತಾ ೮, ೯ಕ್ಕೆ ಶಿವಮೊಗ್ಗೆಯೊಳಗೆ ಶ್ರೀ॥ ಹಸೂಡಿ ವೆಂಕಟರಮಣ ಶಾಸ್ತ್ರಿಗಳ ಸಾಹಿತ್ಯ ಭವನದಲ್ಲಿ, ಹಿಂದೆ ಕೇಂದ್ರ ಎಸೆಂಬ್ಲಿಯ ಉಪಾಧ್ಯಕ್ಷರಾಗಿದ್ದ ಶ್ರೀ॥ ಅಖಿಲ ಚಂದ್ರ ದತ್ತರವರ ಅಧ್ಯಕ್ಷತೆಯೊಳಗೆ ಜರುಗಲಿದೆ ಶ್ರೀ॥ ಎನ್ ಜಿ ರಂಗಾ ಇವರು ಅದರ ಉದ್ಘಾಟಕರು ಈ ಜಿಲ್ಲೆಯ ಅಡಿಕೆ ಬೆಳೆಗಾರರು ಸದರ ಸಮ್ಮೇಳನಕ್ಕೆ ಅಗತ್ಯ ಹೋಗಿ ಅದರಲ್ಲಿ ತಮ್ಮ ಕಷ್ಟಗಳನ್ನು ಅರುಹಬೇಕಾಗಿ ಜಿಲ್ಲಾ ಅಡಿಕೆ ಬೆಳೆಗಾರ ಸಂಘದವರು ಬಿನ್ನವಿಸುತ್ತಾರೆ

(೧ನೇ ಪುಟದ ಮೇಲೆ ಮುಂದರಿಸಿದೆ)

ನೋಟೀಸು

ಮುಂಬಯಿ ಪ್ರಾಂತಿಕ ಸರಕಾರದವರು ನೂಲಿನ ಲಾಯಸನ್ಸದ ಮುದ್ದತ್ತು ತಾ 31—12—45ರ ವರೆಗೆ ವಾಢವಿಸಿದ್ದಾರೆ

ಕಾರವಾರ, ತಾ ೩೦ ೧೧-೪೫

V NANJAPPA,
District Magistrate Kanara

॥ ನಮಃ ಶ್ರೀ ಪಾರ್ಶ್ವನಾಥಾಯ ॥

ಜಾಹೀರ ವಿಜ್ಞಾಪನೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಗೇರಸಪ್ಪೆಯಲ್ಲಿ ಚನ್ನಭೈರಾ ದೇವಿಯು ಕಟ್ಟಿಸಿದ ಇತಿಹಾಸ ಪ್ರಸಿದ್ಧ ಶ್ರೀ ಹಿರೇಬಸ್ತಿ, ಶ್ರೀ ಜ್ವಾಲಾಮಾಲಿನಿ-ಪದ್ಮಾವತಿ ಅಮ್ಮನವರ ಗುಡಿಯುಂಟು ಬಹು ಪುರಾತನ ಗುಡಿಯಿದು ಹಿಂದಿನ ಅರಸರು ಅದರ ಜೀರ್ಣೋದ್ಧಾರ ಮಾಡಿದ ಉಲ್ಲೇಖಗಳಿವೆ ಈಗ ಪುನಃ ಅದು ಪೂರ್ಣ ಜೀರ್ಣವಾಗಿದೆ ಹಿಂದಿನ ಅರಸರು ಈ ಅಮ್ಮನವರಿಗೆ ಭೂಮಿ ಬಿಟ್ಟಿದ್ದರು ಆದರೆ ಅದೆಲ್ಲ ಪರಾಧೀನವಾಗಿ ಹೋಗಿದೆ ಅದರಿಂದ ಗುಡಿಯ ಜೀರ್ಣೋದ್ಧಾರವನ್ನು ಸಾರ್ವಜನಿಕರ ಸಹಾಯದಿಂದಲೇ ಮಾಡಬೇಕಾಗಿದೆ ಈ ಕೆಲಸಕ್ಕೆ ಕನಿಷ್ಠ ರೂ ೧೦೦೦೦ ಖರ್ಚು ಬರುವದು ಆಸ್ತಿಕ ಮಹಾಶಯರೆಲ್ಲ ಈ ಧರ್ಮ ಕಾರ್ಯಕ್ಕೆ ನೆರವಾಗಿ ಕೃತಾರ್ಥರಾಗಬೇಕಾಗಿ ಬಿನ್ನವಿಸುತ್ತೇವೆ

ಗೇರಸಪ್ಪೆ, ತಾ ೨೬-೧೧-೪೫

ದೀಪಿಹಾಳ ಮಂಜಯ್ಯ ಶೆಟ್ಟಿ, ಮೊಕ್ತೇಸರ

ತಾ॥ ಕ॥ ಕಮಾವಳಿಯ ವೊಗೇರ ಬಾಂಧವರು ಸದರ ಅಮ್ಮನವರ ಭಕ್ತರು ಅವರೂ ಈ ಜೀರ್ಣೋದ್ಧಾರಕ್ಕೆ ಕೈಮೀರಿ ನೆರವಾಗಬೇಕಾಗಿ ಬೇಡಿಕೆ

(೪ನೇ ಪುಟದಿಂದ ಮುಂದರಿಸಿದ್ದು)

೩೨ ಲೋಕಲ್ ಬೋರ್ಡ ಹದ್ದಿನಿಂದ ಆಸ್ಪತ್ರೆಗೆ ಬರುವ ರೋಗಿಗಳ ದೆಸೆಯಿಂದ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನಿಂದ ಗ್ರಾಂಟು ಕೇಳಲ್ಲ ವರ್ಷದ ಕೊನೆಗೆ ಇಂಥ ಗ್ರಾಂಟು ಲೋಕಲ್ ಬೋರ್ಡ ಕಡೆಗೆ ಕೇಳಲಿಕ್ಕೆ ಅನುಕೂಲವಾಗುವಂತೆ ಇಂಥ ರೋಗಿಗಳ ಬಗ್ಗೆ ಪ್ರತ್ಯೇಕ ಲೆಕ್ಕವಿಡಬೇಕು ಸರಕಾರಿ ಠರಾವ ನಂಬರ ಪಿ ಡಿ ೫೦೨೮/೩೩ ತಾರೀಖು ೮ ಸಪ್ಟಂಬರ ೧೯೪೨ ಮತ್ತು ೧೬ ಮಾರ್ಚ ೧೯೪೩ ನೋಡುವದು

೩೩ ವಾರ್ಷಿಕ ಲೆಕ್ಕಕ್ಕೆ ಸಂಬಂಧಪಟ್ಟ ರಿಕಾರ್ಡಿನೊಂದಿಗೆ ತಾಳ ನೋಡಲಾಗಿ ಸರಿ ಇದ್ದದ್ದು ಕಂಡು ಬಂತು

೩೪ ಆಸ್ಪತ್ರೆ ಕಂಪೌಂಡರರ ದೆಸೆಯಿಂದ ಪೆನ್ಶನ್-ವರ್ಗಣಿ ಕಾಲಕಾಲಕ್ಕೆ ಸರಿಯಾಗಿ ಕೊಡಲ್ಪಟ್ಟಿವೆ

೩೫ ಒಟ್ಟಿನ ಮೇಲೆ ಲೆಕ್ಕ ಪತ್ರಗಳು ಸರಿಯಾಗಿ ಇಡಲ್ಪಟ್ಟಿವೆ ಕಾಗದ ಪತ್ರಗಳು ಮಾತ್ರ ಒಂದರೊಳಗೊಂದು ಕೂಡಿದ್ದವು ಅವುಗಳನ್ನು ಪ್ರತ್ಯೇಕಪಡಿಸಿ ಅನಾವಶ್ಯಕವಾದವುಗಳನ್ನು ನಾಶ ಮಾಡಬೇಕು

(**ಸೂಚನೆ:**— ಲೆಕ್ಕ ತಪಾಸಕರ ಈ ಆಕ್ಷೇಪಗಳಿಗೆ ಮ್ಯುನಿಸಿಪಾಲಿಟಿಯವರು ಕೊಟ್ಟ ಪ್ರತ್ಯುತ್ತರಗಳು ಮುಂದಿನ ವಾರದ "ವೃತ್ತ"ದಲ್ಲಿ ಬರುವವು)

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡಿದ ನಾನು ಈ ಮೂಲಕ ಯಾವತ್ತು ಜನರಿಗೆ ತಿಳಿಸುವದೇನಂದರೆ —

ತಾ ೧೧-೧೧ ೧೯೪೫ನೇದಿಗೆ ಖಾಸಗಿ ಕೆಲಸಕ್ಕಾಗಿ ನಾನು ಗೋಳಿಕೈಯಿಂದ ಸಿದ್ದಾಪುರಕ್ಕೆ ಹೋಗಿದ್ದೆ ಅಲ್ಲಿಯ ಕೆಲಸ ತೀರಿಸಿ ಅಂದೇ ೯ ಘಂಟೆ ರಾತ್ರಿ ಸಮಯ ನಾನು ತಿರುಗಿ ಬರುತ್ತಿದ್ದಾಗ ಬಿಧ್ರಕಾನ ಗೋಳಿಕ್ಕೆ ರಸ್ತೆಯಲ್ಲಿ ಯಾರೋ ಇಬ್ಬರು ಮುಸುಕು ಹಾಕಿಕೊಂಡವರು ನನಗೆ ಗಂಟುಬಿದ್ದು, ನನ್ನ ಜುಟ್ಟು ಮತ್ತು ಕುತ್ತಿಗೆ ಹಿಡಿದು ಬಗ್ಗಿಸಿ, ಒಂದು ಖಾಲಿ ಕಾಗದದ ಮೇಲೆ ಸಹಿ ಹಾಕು ಎಂದು ನನಗೆ ಬೆದರಿಸಿದರು ನಾನು ನಿರಾಕರಿಸಿದೆ ಆಗ ಅವರು ಒಂದು ಚೂರಿ ತೆಗೆದು ತೋರಿಸಿ, "ನಿನ್ನ ಜೀವಕ್ಕೆ ಸಂಚಕಾರ ಬಂದೀತು, ಸಹಿ ಹಾಕು" ಎಂದು ಭೀತಿ ಹಾಕಿದರು! ಆಗ ನಾನು ನಿರುಪಾಯನಾಗಿ, ಜೀವದ ಬಚಾವಿಗಾಗಿ ಆ ಖಾಲಿ ಕಾಗದದ ಮೇಲೆ ಸಹಿ ಕೊಟ್ಟೆನು ಇದಲ್ಲದೆ ಸದರಿ ಮೋಸಗಾರರು ನನ್ನ ಕಿಸೆಯಲ್ಲಿದ್ದ ೧) ರೂಪಾಯಿ ಸಹ ಕಸಕೊಂಡಿದ್ದಾರೆ ನನ್ನ ಕುತ್ತಿಗೆ ಹಿಡಿದು ಬಗ್ಗಿಸಿದ್ದರಿಂದಲೂ, ಮೋಸಗಾರರು ಮುಸುಕು ಹಾಕಿಕೊಂಡಿದ್ದರಿಂದಲೂ, ಮುಗಿಲಲ್ಲಿ ಮೋಡಗಳಾಗಿ ಕತ್ತಲೆ ಕವಿದಿದ್ದರಿಂದಲೂ ನನ್ನ ಸಹಿ ತೆಕ್ಕೊಂಡ ಈ ಪುಂಡರ ಗುರುತು ನನಗೆ ಸಿಗಲಿಲ್ಲ ಸ್ವರ ಬದಲಿಸಿ ಅವರು ಮಾತಾಡುತ್ತಿದ್ದರು ಯಾವ ಕಾರ್ಯಸಾಧನೆಗಾಗಿ ಅವರು ನನ್ನ ಸಹಿ ತೆಗೆದುಕೊಂಡಿದ್ದಾರೆಂಬುದು ತಿಳಿಯುವದಿಲ್ಲ ಯಾವದೇ ಕಾರ್ಯಸಾಧನೆಗಾಗಿ ಅವರು ನನ್ನ ಸಹಿಯುಳ್ಳ ಕಾಗದದ ಉಪಯೋಗ ಮಾಡಿದಲ್ಲಿ ಅದು ನನಗೆ ಯಾ ನನ್ನ ಹಿತಸಂಬಂಧಗಳಿಗೆ ಬಾಧಕ ವಂತಿಲ್ಲ ನಡೆದ ನಿಜ ಸಂಗತಿ ಈ ಮೂಲಕ ಜಾಹೀರ ಮಾಡಿರುತ್ತೇನೆ ತಾ ೧೩-೧೧ ೪೫

G. S Bhatt, Golikai

ನೋಟೀಸು.

ಸನ್ 1945ನೇ ಇಸವಿಯ ಬಾಬ್ತು

ತಾ. 30-11-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು.

ಪ್ರೊವಿನ್ಶಿಯಲ್ ಟೆಕ್ಸ್ಟೈಲ್ ಕಂಟ್ರೋಲರ, ಕಾಳಾ ಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller opposite to Kalachowki Post Office, Parel Road, Bombay) ಇವರಿಗೆ ನೂಲಿನ ವ್ಯಾಪಾರದ ಲಾಯಸನ್ಸದಾರರಿಂದ ಮೇಲೆ ನಮೂದಿಸಿದ ಮಾಹಿತಿಯು, ನಿರ್ದಿಷ್ಟಪಡಿಸಿದ ಫಾರ್ಮಿನಲ್ಲಿ, ತಾ 5—12—1945 ನೇದರೊಳಗಾಗಿ ತಪ್ಪದೆ ಮುಟ್ಟಿಸತಕ್ಕದ್ದಿರುತ್ತದೆ ಮೇಲ್ಕಾಣಿಸಿದ ಅವಧಿಯಲ್ಲಿ ಏನೂ ವ್ಯವಹಾರವಿಲ್ಲದಿದ್ದಲ್ಲಿ ಸದರ ಮಾಹಿತಿಯನ್ನು ರವಾನಿಸತಕ್ಕದ್ದು ಕಾರಣ ನೂಲಿನ ವ್ಯಾಪಾರದ ಯಾವತ್ತು ಲಾಯಸನ್ಸದಾರರು ಸದರ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೆ ಮುಟ್ಟುವಂತೆ ರವಾನಿಸಬೇಕು

Bombay,
30—11—1945

J K THAKORE,
Provincial Textile Controller Bombay

1942–43 ಮತ್ತು 43–44ನೇ ವರ್ಷಗಳ ಬಾಬ್ತು ಶಿರ್ಶಿ ಮ್ಯುನಿಸಿಪಾಲಿಟಿಯ ಲೆಕ್ಕ-ಪತ್ರಗಳ ತಪಾಸಣೆ ಟಿಪ್ಪಣಿ.

ಮೆ॥ ಎಕ್ಝಾಮಿನರ ಸಾಹೇಬ, ಲೋಕಲ್ ಫಂಡ ಎಕೌಂಟ್ಸ, ಮುಂಬಯಿ
ಇವರ ನಂಬರ L. 2/4-449, ತಾರೀಕ 5 ಜುಲೈ, 1945

ಲೋಕಲ್ ಫಂಡ ಒಡಿಟ್ ಎಕ್ಟ ಕಲಂ 9 A)ದರ ಕೆಳಗೆ ಬರುವ ಆಕ್ಷೇಪಗಳು

೫. ತೆಗೆದು ಹಾಕಿದೆ ೬ ತೆಗೆದು ಹಾಕಿದೆ

೭ ಮ್ಯುನಿಸಿಪಾಲಿಟಿಯು ಶ್ರೀ ಮಾರಿಕಾಂಬಾ ದೇವಸ್ಥಾನದ ಮೊಕ್ತೇಸರರ ವತಿಯಿಂದ ತನ್ನ ಹದ್ದಿನಲ್ಲಿ ನಡೆಯುವ ಜಾತ್ರೆಯ ಕಾಲದಲ್ಲಿ ಔಷಧೋಪಚಾರದ ವ್ಯವಸ್ಥೆ ಮುಂತಾದವುಗಳ ಮೇಲೆ ಬಹಳಷ್ಟು (೧೯೪೧–೪೨ರಲ್ಲಿ ಸುಮಾರು ರೂ ೧೬೦೦ ರಷ್ಟು) ರಕಮು ಖರ್ಚು ಮಾಡಿ, ಸದರಿ ರಕಮನ್ನು ಮೊಕ್ತೇಸರರ ಕಡೆಯಿಂದ ಹಿಂದಿನಿಂದ ವಸೂಲ ಮಾಡುತ್ತದೆ ಮೊಕ್ತೇಸರರ ಕಡೆಯಿಂದ ಅಂದಾಜ ರಕಮನ್ನು ಮುಂಗಡವಾಗಿ ತೆಗೆದುಕೊಳ್ಳುವದು ಯುಕ್ತವಾದೀತು ಇದೇ ಶಿಬಂದಿಯು ೧೦ ದಿವಸಗಳಿಗೂ ಮೇಲ್ಪಟ್ಟು ಇದೇ ಕೆಲಸದಲ್ಲಿ ತೊಡಗಿಸಲ್ಪಟ್ಟಿರುವದರಿಂದ ವಾರ್ಷಿಕ ಖರ್ಚಿಗೆ ಹೊಂದಿ (ಈ ಸರಿಗೆ ಬಿಟ್ಟುಬಿಟ್ಟ) ಶಿಬಂದಿ ಚಾರ್ಜ ಸಹ ವಸೂಲ ಮಾಡತಕ್ಕದ್ದು ಅದರ ಲೆಕ್ಕಾ ಪ್ರಮಾಣವನ್ನು ಯಾವದೊಂದು ನಿಶ್ಚಿತ ತಳಹದಿಯ ಮೇಲೆ ನಿರ್ಣಯಿಸಿ ಯೋಗ್ಯ ಮಂಜೂರಿ ತೆಗೆದುಕೊಳ್ಳಬಹುದು

೮ ಮಹಾತ್ಮಾ ಗಾಂಧಿ ಮೊದಲಾದ ಕಾಂಗ್ರೆಸ ಮುಖಂಡರಿಗೆ ಬಿಡುಗಡೆ ಮಾಡುವ ಬಗ್ಗೆ ಅಲಿಹಾ ನೇಕ ನಾಮಧಾರಿ ವಾಯುಸರಾಯ ಬಹಾದ್ದೂರರವರ ಕಡೆಗೆ ರೂ ೧–೧೨–೦ ಖರ್ಚು ಮಾಡಿ ತಂತಿ ಕಳಿಸಲಾಗಿತ್ತು. (ನೋ ಓ ನಂ ೪೭೩ ಮಾರ್ಚ ೧೯೪೩) ಈ ಖರ್ಚು ಮ್ಯುನಿಸಿಪಾಲಿಟಿಯ ಆಡಳಿತಕ್ಕೆ ಪ್ರತ್ಯಕ್ಷ ಸಂಬಂಧಪಟ್ಟಿದ್ದಲ್ಲದ್ದರಿಂದ ಆಡಿಟ್‌ದಲ್ಲಿ ಎಣಿಸಲಿಕ್ಕೆ ಬರುವದಿಲ್ಲ ಸದರಿ ರಕಮು ವಸೂಲಾಗತಕ್ಕದ್ದು

೯ ನಾಯಿ ಕಚ್ಚಿದ ಮ್ಯುನಿಸಿಪಲ್ ನಿವಾಸಿಗಳ ಉಪಚಾರದ ಬಗ್ಗೆ ಮ್ಯುನಿಸಿಪಾಲಿಟಿಯು ರೂ ೩೦–೯–೩ ಖರ್ಚು ಆಗಿದೆ ಈ ಖರ್ಚು ಮ್ಯುನಿಸಿಪಲ್ ಎಕ್ಟಿನ ಕೆಳಗೆ ಬರುವದಿಲ್ಲವಾದ್ದರಿಂದ ಅದನ್ನು ಸರಕಾರದಿಂದ ವಸೂಲ ಮಾಡಬೇಕು (ಸರಕಾರದ ಠರಾವ ಜಿ ಡಿ ನಂ ೨೪೭/೩ ತಾ ೧೩–೧ ೧೯೪೨) ಉಪಚಾರ ಹೊಂದಿದವರು ಖರ್ಚನ್ನು ಸಹಿಸಲಿಕ್ಕೆ ಸಮರ್ಥರಿದ್ದರೋ ಯಾ ನಿಸ್ಪೃಷ್ಟ ಸ್ಥಿತಿಯವರಿದ್ದರೋ ಎಂಬ ಬಗ್ಗೆ ಮಾಡತಕ್ಕ ಚೌಕಶಿ ಮಾಡಲಿಲ್ಲ ಇಂಥ ಚೌಕಶಿಯು ನಡೆದೊಂದನ್ನು ಮೆ॥ ಸಿವ್ಹಿಲ್ ಸರ್ಜನ ಸಾಹೇಬರ ಕಡೆಗೆ ತಪಶೀಲ ಬಗ್ಗೆ ಕಳಿಸತಕ್ಕದ್ದು

೧೦ ನೀರು ಸಂಗ್ರಹಿಸುವ ಬಗ್ಗೆ ಮ್ಯುನಿಸಿಪಲ್ ಆಸ್ಪತ್ರಿಯಲ್ಲಿ ದಿನಗೂಲಿಯ ಮೇಲೆ ಕಾಯಂ ಆಗಿ ಎರಡು ಜನ ಕೂಲಿಯವರನ್ನು ಇಟ್ಟಿದೆ ಮೆ॥ ಕಮಿಶನರ ಸಾಹೇಬರ ಮಂಜೂರಿ ಇಲ್ಲದೆ ನಿರವಧಿಯಾಗಿ ಅವರನ್ನು ಇಟ್ಟುಕೊಳ್ಳುವದು ಅಕ್ರಮವಾದ್ದರಿಂದ ಈ ಬಗ್ಗೆ ಅವಶ್ಯವುಳ್ಳ ಮಂಜೂರಿ ಪಡೆಕೊಳ್ಳಬೇಕು ಇದೇ ರೀತಿ ಪ್ಲೇಗಿನ ಪ್ರಸಾರದ ಲಕ್ಷಣಗಳು ತೋರಿದ ಸಮಯದಲ್ಲಿ ಅದರ ಪ್ರತಿಬಂಧಕೋಪಾಯಗಳನ್ನು ಕೈಕೊಳ್ಳಬೇಕಾಗಿ ಮೆ॥ ಸಿವ್ಹಿಲ್ ಸರ್ಜನ ಸಾಹೇಬರು ಆಗ್ರಹ ಮಾಡಿದ್ದರಿಂದ ತಾ ೧ನೇ ಜೂನ ೪೩ರಿಂದ ಮ್ಯುನಿಸಿಪಾಲಿಟಿಯು ಒಬ್ಬ ಮೋಕಾದಮ ಮತ್ತು ಇಬ್ಬ ಕೂಲಿಗಳನ್ನೊಳಗೊಂಡ ಜಾದಾ ಶಿಬಂದಿಯನ್ನು ನೇಮಿಸಿತ್ತು ಆದರೆ ಈ ಖರ್ಚಿನ ಬಗ್ಗೆ ಮಂಜೂರಿ ಪಡೆಕೊಳ್ಳಲಿಲ್ಲ ಮೊಟ್ಟಮೊದಲು ತಾ ೧ನೇ ಜನವರಿ ೧೯೪೪ರಿಂದ ಆರು ತಿಂಗಳಿಗೆ ಎಂದರೆ ೧೯೪೪ನೇ ಜನವರಿಯಲ್ಲಿ ಮಾತ್ರ ಮಂಜೂರಿ ಕೇಳಿಕೊಳ್ಳಲಾಯಿತು ಹಿಂದಿನ ಖರ್ಚು ಮಂಜೂರಿ ಶಿವಾಯ ಮಾಡಿದ್ದಿದೆ ಇಂಥ ಅಕ್ರಮಗಳನ್ನು ಮುಂದೆ ಮಾಡಬಾರದು

೧೧ ಮ್ಯುನಿಸಿಪಲ್ ರೂಲ್ಸದಲ್ಲಿಯ ರಜೆ ರೂಲ್ಸಿನ ಬದಲಿಗೆ ಮ್ಯುನಿಸಿಪಾಲಿಟಿಯು ಮೆ॥ ಕಮಿಶನರ ಸಾಹೇಬರವರ ಮಂಜೂರಿಯಿಂದ ತನ್ನ ನೌಕರರಿಗಾಗಿ ತಾ ೧ನೇ ನೋ ೧೯೪೩ರಿಂದ ಸುಧಾರಿಸಿದ ಮುಂಬಯಿ ಸಿವ್ಹಿಲ್ ಸರ್ವೀಸ್ ರೂಲ್ಸಗಳನ್ನು ಲಾಗೂ ಮಾಡಿದೆ ಆದರೆ ಪ್ರಸ್ತುತ ರಜೆ ಮತ್ತು ರಜೆ ಪಗಾರಗಳಿಗಾಗಿ ಮ್ಯುನಿಯು ರೂಲ್ಸಗಳನ್ನೇ ಅನುಸರಿಸಿದೆ ಇದು ಬಹಳ ಅಕ್ರಮವಾಗುತ್ತಿರುವ ಕಾರಣ ಅದರ ಕಡೆಗೆ ಹೆಚ್ಚು ಲಕ್ಷ ಪೂರೈಸಬೇಕು ಎಲ್ಲರಿಗೂ, ಅಂದರೆ ಹಳಬರಿಗೂ ಹೊಸದಾಗಿ ಸೇರಿದವರಿಗೂ, ಮುಂಬಯಿ ಸಿವ್ಹಿಲ್ ಸರ್ವೀಸ್ ರೂಲ್ಸ ಲಾಗೂ ಮಾಡಲ್ಪಟ್ಟಿದ್ದು ಸ್ಪಷ್ಟವಿಲ್ಲ ಉದ್ದೇಶವನ್ನು ಸ್ಪಷ್ಟಗೊಳಿಸಿ ಆ ಬಗ್ಗೆ ಮೆ॥ ಕಮಿಶನರ ಸಾಹೇಬರ ಮಂಜೂರಿ ಪಡೆಯಬೇಕು.

೧೨ ಮ್ಯುನಿಸಿಪಾಲಿಟಿಯವರು ಸ್ಟೇಶನರಿ ಮತ್ತು ಇತರ ಆವಶ್ಯಕತೆಗಳನ್ನು ಮೆಸರ್ಸ ಶಿವಾನಂದ ಸ್ಟೋರ್ಸ ಕಡೆಯಿಂದ ಕೊಳ್ಳುತ್ತಾರೆ ಮ್ಯುನಿಯ ಈಗಿನ ಸೆಕ್ರೆಟರಿಯವರು ಈ ಅಂಗಡಿಯ ಒಡೆಯನಿಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿರುವರಾಗಿ ತಿಳಿಯುತ್ತದೆ ಇದು ಮ್ಯುನಿಯ ಎಕ್ಟ ಕಲಂ ೪೩ (೨)ಕ್ಕೂ ಕಲಂ ೧೫ (೧)ರ ಕರ್ಮ(vi)ಕ್ಕೂ ವಿರೋಧವಾಗಿರುವದರಿಂದ ಒಂದು ವರ್ಷದಲ್ಲಿ ಇಂತಿಷ್ಟು ರಕಮಿಗೆ ಮೀರದಷ್ಟನ್ನು ಕೊಳ್ಳಲಿಕ್ಕೆ ಅಡ್ಡಿಯಿಲ್ಲ ಎಂಬ ಬಗ್ಗೆ ಮೆ॥ ಕಮಿಶನರ ಸಾಹೇಬರ ಮಂಜೂರಿಯಿಂದ ಎರಡನೆಯದಾಗಿ ಹೇಳಿದ ಕಲಮಿನ ಕೆಳಗೆ ವಿನಾಯತಿ ಪಡೆಕೊಳ್ಳಬೇಕು.

ಲೋಕಲ್ ಫಂಡ ಒಡಿಟ ಎಕ್ಟ ಕಲಂ 9 ಬಿ. ಕೆಳಗೆ ಬರುವ ಆಕ್ಷೇಪಗಳು.—

೧೩ ಮ್ಯುನಿಸಿಪಾಲಿಟಿಯು (ರೂಪಾಯಿ ೫೦೦೦/– ಮುಖಬೆಲೆಯ) ರೂ ೪೯೭೫–೧೪–೦ಯನ್ನು ಮುಂಬಯಿ ಪ್ರೊವಿನ್ಸಿಯಲ್ ಕೋ-ಓಪರೇಟಿವ್ಹ ಬ್ಯಾಂಕದ ಮೊರ್ಗೇಜ ಬೆಂಚಿನಲ್ಲಿ ತೊಡಗಿಸಿದೆ ಸದ್ರಿ ಬೆಂಚು ಸದ್ರಿ ಠೇವಣಿಯ ಮೇಲೆ [illegible] ಬಡ್ಡಿಯ ಬಗ್ಗೆ ಶಿರ್ಶಿ ಬೆಂಚಿನ ಮೇಲೆ ಚೆಕ್ಕುಗಳನ್ನು ಕಳಿಸುತ್ತದೆ ಈ ಬಗ್ಗೆ ಮ್ಯುನಿಗೆ ಪ್ರತಿ ಸಾರೆ ನಾಲ್ಕು ಆಣೆ ಖರ್ಚು ಬರುತ್ತದೆ ಆದರೆ ಸದ್ರಿ ಬೆಂಚಿನವರಿಗೆ ಅನುಕೂಲವಾದ ರೆಮಿಟನ್ಸ ಟ್ರಾನ್ಸಫರ ಸಾಧನಗಳನ್ನು ಕಳಿಸಿಕೊಟ್ಟರೆ ಇದು ತಪ್ಪುವಂತಾಯಿತು ಅದರ ಲಕ್ಷವನ್ನು ಸರಕಾರದ ಠರಾವ ಎಫ್ ಡಿ ನಂಬರ ೯/೨೪ ತಾರೀಕ ೨೬ನೇ ಮೇ ೧೯೩೪ರ ಕಡೆಗೆ ಎಳೆಯಬೇಕು

೧೪ ಈಗಿರುವ ಮನೆಗಳಿಗೆ ಜೋಡಿಸಲ್ಪಡುವ ಗೆರೇಜು, ಬಾಯಿಖಾನೆ, ಕೊಟ್ಟಿಗೆ, ಬಾವಿ ಮುಂತಾದವುಗಳ ಬಗ್ಗೆ ತೆರಿಗೆ ಆಕರಣೆಯಾಗುವದಿಲ್ಲ ಈ ಜೋಡಣೆಗಳಿಂದ ಮೂಲ-ಮನೆಯ ಅನುಕೂಲತೆಗಳು ಹೆಚ್ಚಾಗುವದರಿಂದ ಅದರ ವಾರ್ಷಿಕ ಭಾಡಿಗೆ ಆಕಾರ ಸಹಜವಾಗಿ ಹೆಚ್ಚುತ್ತಿದ್ದು, ಅದರಂತೆ ತೆರಿಗೆ ಹೆಚ್ಚಿಸಬೇಕು ಈ ತತ್ವವನ್ನು ಲಕ್ಷದಲ್ಲಿಟ್ಟುಕೊಂಡು ಈ ಮಾದರಿಯ ನ್ಯೂನತೆಗಳನ್ನು ಹುಡುಕಿ ತೆರಿಗೆಯ ಆಕರಣೆ ಹೆಚ್ಚಿಸತಕ್ಕದ್ದು

೧೫ ಒಂದೇ ಮನೆಯನ್ನು ಬೇರೆ ಬೇರೆ ಭಾಗಗಳನ್ನಾಗಿ ವಿಂಗಡಿಸಿ ತೆರಿಗೆ ಬಗ್ಗೆ ಅವುಗಳಿಗೆ ಬೇರೆ ಬೇರೆ ನಂಬರ ಕೊಡುವ ಪರಿಪಾಠವುಂಟು ಇದರಿಂದ ಮನೆತೆರಿಗೆ ಕಡಿಮೆಯಾಗುತ್ತದೆ ವಸ್ತುತಃ ಹೀಗೆ ಮಾಡುವದು ಕಾಯಿದೆಗೆ ವಿರುದ್ಧವಲ್ಲದಿದ್ದಾಗ್ಯೂ ಇಂಥ ಮನೆಗಳನ್ನು ಒಂದೇ ಮನೆಯಂತೆ ಹಿಡಿಯಬಹುದು, ಮತ್ತು ಹಿಡಿಯತಕ್ಕದ್ದು ಯಾಕಂದರೆ ಅದು ಹೆಚ್ಚು ಹಿತಕಾರಿಯಾದದ್ದು ಇದು ಎಕ್ಟಿಗೂ ವಿರುದ್ಧವಿಲ್ಲ (ನೋ ಕ್ಲೋಜಿಂಗ ಮ್ಯಾನ್ಯುಅಲ್ಲದಲ್ಲಿ ಕಲಂ ೫೭ರ ಕೆಳಗೆ ವಿವರಿಸಿದ ಸರಕಾರದ ಠರಾವ ನಂ ೪೩೩೧ ತಾ ೨೬–೧೧–೧೮೯೨) ಮೇಲೆ ಹೇಳಿದ್ದಕ್ಕೆ ಉದಾಹರಣೆ – ಮನೆ ನಂ ೩೦೫ ಇದು ಒಬ್ಬನೆ ಮಾಲೀಕನದಾಗಿದ್ದು ೧೯೪೨–೪೩ರಲ್ಲಿ ೩ ಭಾಗ ಮಾಡಿ ಒಂದೊಂದಕ್ಕೆ ರೂ ೩೬ರ ಮೇಲೆ ಆಕರಣೆಯಾಗಿದೆ ಪ್ರತಿಯೊಂದಕ್ಕೆ ರೂ ೯ ೦–೧–೦ಯಂತೆ ತೆರಿಗೆ ಆಕರಣೆಯಾಗುತ್ತಿದೆ ಅವುಗಳನ್ನು ಕೂಡಿಸಿದ್ದರೆ ರೂ ೧೦–೧–೯ ಯಂತೆ ತೆರಿಗೆ ಬರುತ್ತಿತ್ತು

೧೬ ಮಾದಕವಲ್ಲದ ಪೇಯಗಳನ್ನು ಮಾರುವ ಸ್ಥಳಗಳಿಗೆ ತೆರಿಗೆ ಆಕರಣೆಯಾಗುತ್ತದೆ ಆದರೆ ವರ್ಷದಲ್ಲಿ ಕೆಲವು ವಿಶಿಷ್ಟ ಹಂಗಾಮುಗಳಲ್ಲಿ ಕಬ್ಬಿನ ಹಾಲನ್ನು ಮಾರುವ ಸ್ಥಳಗಳಿಗೆ ಇದು ಆಕರಣೆಯಾಗಿಲ್ಲ ಇನ್ನು ಮುಂದೆ ನಿಯಮಗಳಂತೆ ನಡಕೊಳ್ಳತಕ್ಕದ್ದು

೧೭ ಆಸ್ಪತ್ರಿಯ ಲೆಕ್ಕಗಳು ಗುಡಿಸಲು ಆಸ್ಪತ್ರಿಯ (Cottage Hospital) ರಚನೆಯು ಅಮಲಿನಲ್ಲಿ ಬರುವ ಪೂರ್ವದಿಂದಲೂ (ಸರಕಾರಿ [illegible] ನಂಬರ ಜಿ ಡಿ ೪೭೭೦/೩೩ ತಾರೀಖು –೧–೬ ೧೯೪೩) ಮ್ಯುನಿಯು ತನ್ನ ದವಾಖಾನೆಯಲ್ಲಿ ಸರಕಾರಿ [illegible] ಧಾರ್ಮಿಕ ದವಾಖಾನೆಗಳಿಗೆ ಅನ್ವಯಿಸುವ ನಿಯಮಾವಲಿಯ ಪ್ರಕಾರ ಫೀ ವಸೂಲ ಮಾಡುತ್ತದೆ ಈ ಕುರಿತು ಈ ಕೆಳಗಿನ ವಿಷಯಗಳನ್ನು ನಮೂದಿಸಬಹುದು

(ಅ) ಆಡಿಟ್ ವರ್ಷದಲ್ಲಿ ಶ್ರೀಮಂತರಿಗೆ ಹೊಸ ಫೀ ಲಾಗೂ ಆಗಿಲ್ಲ ಪೂರಾ ಫೀ ಬಿಟ್ಟುಬಿಡುವ ಯೋಗ್ಯಾಯೋಗ್ಯ ವಿಚಾರವನ್ನು ಮೆಡಿಕಲ್ ಆಫೀಸರರು ಮಾಡುವರಾಗಿಯೂ ಹಾಗೆ ಮಾಡುತ್ತಿರುವ ಬಗ್ಗೆ ಕಾರಣಗಳನ್ನು ಬರೆದಿಡುವರಾಗಿಯೂ ತಿಳಿಯುತ್ತ[illegible] (ಮೇಲೆ ಹೇಳಿದ ನಿಯಮಾವಲಿಯ ಮೂರನೇ ಪರಿಶಿಷ್ಟದ ೧೪ನೇ ನಿಯಮ ನೋಡುವದು)

(ಬ) ಆಸ್ಪತ್ರಿಯಲ್ಲಿ ಸೇರಿಸಿಕೊಂಡ ರೋಗಿಗಳ ರಜಿಸ್ತರ ನೋಡಲಾಗಿ ಆ ಪೈಕಿ ಕೆಲವರಾದರೂ ಒಳ್ಳೆ ಸ್ಥಿತಿವಂತರಿದ್ದದ್ದು ಕಂಡುಬಂದಿತು ಆದಾಗ್ಯೂ ಡಿಸ್ಪೆನ್ಸರಿ ರೂಲ್ಸಿನ ೩ನೇ ಪರಿಶಿಷ್ಟ ೩ನೇ ಭಾಗದ ೬ನೇ ನಿಯಮದ (ಕ) ಕೋಷ್ಟಕದಲ್ಲಿ ಹೇಳಿದ ದರಗಳಂತೆ ಫೀ ವಸೂಲಾಗಿಲ್ಲ

(ಕ) ಒಳ-ರೋಗಿಗಳಾಗಿ ದಾಖಲಾದ ಹೆಡ್ ಕೊನ್ಸ್ಟೇಬಲ್‌ನ ಕಡೆಯಿಂದ "ಕ" ಕೋಷ್ಟಕದೊಳಗಿನ ದರಗಳಂತೆ ಫೀ ವಸೂಲಾಗಿಲ್ಲ ಇದು ೨ನೇ ಪರಿಶಿಷ್ಟದ ೧೦ನೇ ನಿಯಮಕ್ಕೆ ವಿರುದ್ಧವಿದೆ

(ಡ) ಆಸ್ಪತ್ರಿಗೆ ಹೊಂದಿದ ಪ್ರಸೂತಿಗೃಹದಲ್ಲಿ ಸದ್ರಿ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ೧೩೯ ಮತ್ತು ೧೨೬ ಪ್ರಸವ ಕ್ರಿಯೆಗಳಾದವು ಫೀ ಕೊಡತಕ್ಕವರ ಕಡೆಯಿಂದ "ಕ" ಕೋಷ್ಟಕದ ಪ್ರಕಾರ ವಸೂಲಾಗತಕ್ಕ ಈ ಫೀ ರಕಮಿನ ಪಟ್ಟು ಫೀ ವಸೂಲಾಗಿಲ್ಲ ಪ್ರಸೂತಿ ರಜಿಸ್ತರದಲ್ಲಿ ಸ್ಥಿತಿವಂತರ ಹೆಂಗಸರು ಇದ್ದದ್ದು ಕಂಡುಬಂತು ಅವರಿಂದ ಸದ್ರಿ ಕೋಷ್ಟಕದ ಪ್ರಕಾರ ಫೀ ವಸೂಲಾಗಿಲ್ಲ

(ಈ) ಆಸ್ಪತ್ರಿಯಲ್ಲಿ ಒಂದಾಣೆ ಮತ್ತು ಅರ್ಧ ಆಣೆ ಟಿಕೀಟು ಕೊಡುವದು ಪದ್ಧತಿಯಲ್ಲಿ ಆದೆ ಆಡಿಟ್ ಪ್ರಾರಂಭಕ್ಕೂ ಮುಂಚೆಯೇ ಸದ್ರಿ ಪುಸ್ತಕಗಳು ಖರ್ಚಾಗಿದ್ದು ಯಾವದೇ ಪಾವತಿ ಕೊಡದೆ ಫೀ ವಸೂಲಾಗುತ್ತಿತ್ತು ಇದು ಅತಿಶಯ ಅಕ್ರಮವಿದ್ದು ನ್ಯೂನತೆಯನ್ನು ಕೂಡಲೆ ಹೋಗಲಾಡಿಸಬೇಕು

(ಫ) ದವಾಖಾನೆ ರೂಲ್ಸ ೨೩ ಮತ್ತು ೨೩ರಲ್ಲಿ ದವಾಖಾನೆ ನಡೆಸುವ ಬಗ್ಗೆ ದವಾಖಾನೆ ಕಮಿಟಿಯ ನೇಮಣೂಕಿ ಮತ್ತು ಕರ್ತವ್ಯಗಳ ಬಗ್ಗೆ ಉಲ್ಲೇಖವಿದೆ ಆದರೆ ಆಸ್ಪತ್ರಿಯ ಆಡಳಿತ ನಡೆಸಲಿಕ್ಕೆ ಮೆನೆಜಿಂಗ ಕಮಿಟಿ ನೇಮಿಸಿದ್ದರಿಂದ ಇಂಥ ಕಮಿಟಿ ನೇಮಿಸಲ್ಪಟ್ಟಿಲ್ಲ ಆದರೆ ಈ ಕಮಿಟಿ ಒಂದೊಮ್ಮೆ ಕೂಡಿದರೂ ಈ ಬಗ್ಗೆ ಕೂಡಲಿಲ್ಲ ಹಾಗೂ ಸದರಿ ರೂಲ್ಸಗಳ ೨೪ನೇ ರೂಲಿನಲ್ಲಿ ಹೇಳಿದ ವಿವಿಧ ಕಾರ್ಯಗಳನ್ನೂ ನೋಡಲಿಲ್ಲ

೧೮ ಶಿರ್ಶಿಯಲ್ಲಿ ಶಾಲಾ ಕಟ್ಟಡಗಳನ್ನು ಉಪಯೋಗಿಸುವ ಬಗ್ಗೆ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಕೆನರಾ ಇವರಿಗೆ ಒಬ್ಬ ಭಂಗಿಯನ್ನು ಅರ್ಧ ಕಾಲ ಕೊಟ್ಟಿದೆ ಸದರಿ ಸ್ಕೂಲ ಬೋರ್ಡಿನಿಂದ ಪ್ರತಿ ತಿಂಗಳು ಆರು ರೂಪಾಯಿಯಂತೆ ಭಂಗಿ ಪಗಾರ ವಸೂಲ ಆಗಿದೆ ೧೯೪೨–೪೩ರಲ್ಲಿ ವಸೂಲ ಬಂದ ತುಟ್ಟಿ-ಭತ್ಯೆ ಅರ್ಧಕಾಲದ ನೌಕರರಿಗೆ ಲಾಗೂ ಇಲ್ಲೆಂಬ ಸಮಜೂತಿಯಿಂದ ತಾ ೧೮–೯–೧೯೪೩ನೇ ದಿವಸ ತಿರುಗಿ ಕೊಟ್ಟಿತು ಸರಕಾರಿ ಠರಾವ ಎಫ್ ಡಿ ನಂಬರ ೧೭೪ ತಾ ೩ ೧೨–೧೯೪೧ನೇ ಪ್ರಕಾರ ಅರ್ಧ ಹೊತ್ತಿನ ನೌಕರರಿಗೂ ತುಟ್ಟಿ ಭತ್ಯೆ ಲಾಗೂ ಆಗುತ್ತಿದ್ದು ಸದರಿ ಠರಾವಿನ ಕಡೆಗೆ ಲಕ್ಷ ಕೊಡಬೇಕು ಸದರಿ ಯುವನಿಗೆ ಲಾಗೂ ಆಗುವ ತಿಂಗಳಿಗೆ ಒಂದು ರೂಪಾಯಿ ದರದಂತೆ ಆಡಿಟ ವರ್ಷಗಳ ಬಗ್ಗೆ ಪುರುವಿನಿಂದಲೂ ರಕಮು ವಸೂಲಾಗತಕ್ಕದ್ದು

೧೯ (ಅ) ಲೋಕಲ್ ಫಂಡ ಎಕ್ಟ ಕಲಂ ೯ (ಕ) ಕೆಳಗೆ ಬರುವ ಆಕ್ಷೇಪಗಳು —

ಫೀ ಬಾಕಿ ವಸೂಲ ಮಾಡುತ್ತಿದ್ದ ಹಿಂದಿನ ಸ್ಕೂಲ ಕಾರಕೂನ ಮೆ॥ ಎಸ್ ವಿ ಓಕರಕೊರ ಇವರು ಸದ್ರಿ ಪೈಕಿ ಕೆಲವು ರಕಮು (ಎಷ್ಟೆಂದು ಇನ್ನೂ ನಿಶ್ಚಿತವಾಗುವದಿದೆ) ಅಪಹರಣ ಮಾಡಿದರು ಈ ಸಂಗತಿ ತಿಂದು ಅಧ್ಯಕ್ಷರು ಮೆ॥ ಕಲೆಕ್ಟರ ಸಾಹೇಬರಿಗೂ ನಮ್ಮ ಕಡೆಗೂ ತಮ್ಮ ನಂಬರ ೭೮೫ ತಾರೀಖು ೧೫–೧೧–೧೯೪೩ನೇ ಪತ್ರದಲ್ಲಿ ವರದಿ ಮಾಡಿದರು. ಅದರ ಸಂಕ್ಷೇಪ ಹೀಗಿದೆ –

(1) ಅವರು ೩ ಸ್ಕೂಲ ಲೀವ್ಹಿಂಗ ಸರ್ಟಿಫಿಕೇಟುಗಳನ್ನು ತಯಾರಿಸಿ ಹೆಡ್‌ಮಾಸ್ತರರ ಸಹಿ ನಂತರ ವಿದ್ಯಾರ್ಥಿಗಳಿಗೆ ಕೊಟ್ಟರು ಸರ್ಟಿಫಿಕೇಟಿನಲ್ಲಿ ಇರುವ ಸದರಿನಲ್ಲಿ ಸದರಿಯವರ ಫೀ ಬಾಕಿ ಇಲ್ಲವಾಗಿ ಬರೆದರು ಆದರೆ ವಸೂಲಿ ರಜಿಸ್ತರದಲ್ಲಿ ಸದರಿ ರಕಮುಗಳು ವಸೂಲಾಗಿ ಮ್ಯುನಿಸಿ

ಪಾಲಿಟಿಗೆ ಜಮಾ ಆದ ದಾಖಲೆ ಇಲ್ಲ. ಜನರಲ್ ರಜಿಸ್ಟರನಲ್ಲಿ ಅನುಕ್ರಮವಾಗಿ ರೂಪಾಯಿ ೮-೬-೦, ರೂ ೧೦-೬-೦ ಮತ್ತು ರೂ. ೪-೧೦-೦ ಬಾಕಿಯೆಂದು ದಾಖಲಿಸ್ಸಿ, ಈ ಸಂಗತಿ ಅಕ್ಟೋಬರ ೧೯೪೩ರಲ್ಲಿ ಹೆಡ್‌ಮಾಸ್ತರರು ಸದ್ರಿ ಕಾರಕೂನರ ಲಕ್ಷ್ಯಕ್ಕೆ ತಂದರು

(ii) ೧೯೪೩ನೇ ಅಕ್ಟೋಬರ ೨೩ನೇ ದಿವಸ ಹೆಡ್‌ಮಾಸ್ತರರಿಗೆ ಈ ಸೈಕಂ ಒಬ್ಬ ವಿದ್ಯಾರ್ಥಿಯ ತಂದೆಯ ಕಡೆಯಿಂದ ಎಂಬಂತೆ ರೂ. ೪-೬-೦ ಮನಿಆರ್ಡರಾಗಿ ಬಂತು ತಾರೀಖು ೧ನೇ ನವ್ಹಂಬರ ೧೯೪೩ರಲ್ಲಿ ಇದಾಗಿ ರೂ. ೮-೬-೦ ಕುಮಟೆಯಿಂದ ಬಂತು (ಕಳಿಸಿದವರ ಪತ್ತೆ ಹತ್ತಲಿಲ್ಲ) ಆದ್ದರಿಂದ ಸದ್ರಿ ರಕಮುಗಳು ಸಂಬಂಧಪಟ್ಟ ಕಾರಕೂನರ ಕಡೆಯಿಂದಲೇ ಬಂದಿರಬೇಕಾಗಿ ಊಹೆ [illegible] ಕೊಟ್ಟ ೨ ಪಾವತಿ ಪುಸ್ತಕಗಳೂ ಕಾಣೆಯಾಗಿವೆ

(iii) ಒಪ್ಪ ಕೌನ್ಸಿಲರಿಗೂ ವ ತ್ರೊಪ್ಪ ಕಾರಕೂನರಿಗೂ ಲೆಕ್ಕತಪಾಸಣೆಯ ಬಗ್ಗೆ ನೋಟೀಸು ಇತ್ತು. ಆದರೆ ಕೆಲ ಕಾರಣಗಳಿಂದ ಸದ್ರಿ ಕೆಲಸ ಮುಗಿಸಲಿಕ್ಕಾಗಲಿಲ್ಲ ಅಪರಾತಫರ ಮಾಡಿದ ಕಾರಕೂನರು ರಾಜೀನಾಮೆ ಕೊಟ್ಟು ಹಿಂದೀ ಸೈನ್ಯ ಸೇರಿದ್ದಾರೆ. ಮ್ಯುನಿಸಿಪಾಲಿಟಿಯವರು ಅವರ ರಾಜೀನಾಮೆ ಸ್ವೀಕರಿಸಬೇಕಾಗಿಯೂ ಅಪರಾತಫರ ಮಾಡಿದ ಒಟ್ಟು ರಕಮನ್ನು ಪ್ರೊವಿಡೆಂಟ ಫಂಡ ಲೆಕ್ಕದಲ್ಲಿ ಶಿಲ್ಕು ಇರುವ ಅವರ ರಕಮಿನೊಳಗಿಂದ ವಜಾ ಹಾಕಬೇಕಾಗಿಯೂ ಠರಾಯಿಸಿದ್ದಾರೆ ಒಡಿಟ್ ಕಾಲಕ್ಕೆ ತಿಳಿಸಿದ ಪ್ರಕಾರ ಎಲ್ಲ ಫೀ ಬಾಕಿ ರಕಮುಗಳ ಡಿಮಾಂಡ ರಜಿಸ್ಟರ ತಯಾರಿಸಿ ಮುಂದಿನ ಒಡಿಟ ಕಾಲಕ್ಕೆ ತೋರಿಸಬೇಕು

(ಬ) ಸ್ಕೂಲ ಲೆಕ್ಕ ಪತ್ರಗಳ ಬಗ್ಗೆ ಹೇಳಬೇಕಾದ್ದು

(i) ಶಾಲಾ ವರ್ಷದ ಕೊನೆಗೆ ವಿದ್ಯಾರ್ಥಿಯ ಫೀ ಬಾಕಿಯನ್ನು (ಸದರೆ ವಿದ್ಯಾರ್ಥಿಯು ಶಾಲೆ ಬಿಟ್ಟಿರೆ ಇದ್ದರೂ ಸಹ) ಸ್ಕೂಲ ಕಾರಕೂನರಿಗೆ ತಿಳಿಸಲಾಗುತ್ತದೆ, ಮತ್ತು ಅವರು ವಿದ್ಯಾರ್ಥಿಯು ಲೀವಿಂಗ ಸರ್ಟಿಫಿಕೇಟ ಕೇಳಲಿಕ್ಕೆ ಬಂದಾಗ ಯಾ ಪತ್ರ ಬರೆದು ಕೇಳಿದಾಗ ವಸೂಲ ಮಾಡತಕ್ಕದ್ದದೆ ಇಬ್ಬರು ಕಾರಕೂನರು ಎರಡು ಬೇರೆ ಬೇರೆ ಡಿಮಾಂಡ ರಜಿಸ್ಟರಗಳನ್ನು ಮತ್ತು ಕೀರ್ದಿಗಳನ್ನು ಇಡುವದು ಕೂಡಲೇ ಬಂದ ಮಾಡಿ ಒಬ್ಬರಿಗೇ ಅದರ ಜವಾಬದಾರಿ ಕೊಡತಕ್ಕದ್ದು ಖಾತೆ ರಜಿಸ್ಟರದಲ್ಲಿ ಪಾವತಿ ನಂಬರ ಮತ್ತು ತಾರೀಖು ದಾಖಲ ಮಾಡತಕ್ಕದ್ದು. ಪ್ರತಿ ತಿಂಗಳ ಕೊನೆಗೆ ಬಾಕಿ ಎಳಕೊಳ್ಳುವ ಬಗ್ಗೆ ಪ್ರತ್ಯೇಕ ಕೊಲಂ ಇಡತಕ್ಕದ್ದು ಮಾಫೀ ಕೊಟ್ಟ ಬಗ್ಗೆ ಆಧಾರವನ್ನು ಶರಾ ಕೊಲಂದಲ್ಲಿ ತೋರಿಸತಕ್ಕದ್ದು ವರ್ಷದ ಕೊನೆಗೆ ಖಾತೆಯ ಬೇರೀಜಿಗೂ ಫೀ ಕೀರ್ದಿಗೂ ತಾಳೆ ಬೀಳುತ್ತದೋ ನೋಡತಕ್ಕದ್ದು ಜನರಲ್ ರಜಿಸ್ಟರ ಮತ್ತು ಡಿಮಾಂಡ ರಜಿಸ್ಟರ ಮುಂತಾದವುಗಳಲ್ಲಿ ಒಂದಕ್ಕೊಂದು ಹವಾಲೆ ತೋರಿಸಬೇಕು

(ii) ಬಾಲಕಿ ಫೀ ವಸೂಲ ಮಾಡುವ ಶಿಕ್ಷಕರು ಲಕ್ಷ್ಯ ಚೆನ್ನಾಗಿಟ್ಟಿದ್ದಾರೆ ಆದರೆ ನಾಲ್ಕು ಸಂಗತಿಗಳಲ್ಲಿ ಫೀ ಬಾಕಿ ರಿಪೋರ್ಟ ಮಾಡದಿದ್ದದ್ದು ಕಂಡು ಬಂತು ಶಾಲೆ ಬಿಟ್ಟು ಹೋದವರಿಗಾಗಿ ಹಾಗೆ ಮಾಡಲಾಯಿತೆಂದು ಅವರು ಹೇಳಿದರು ಈ ಭಾವನೆನ್ನು ನಿಷೇಧಿಸಬೇಕು ಅವರು ಅಂಥ ಪ್ರಸಂಗದಲ್ಲಿ ಹೆಡ್ ಮಾಸ್ತರರ ವಿದ್ಯಮಾನ ಸದರಿ ರಕಮನ್ನು ಕಳೆಯುವ ಬಗ್ಗೆ ರಿಪೋರ್ಟ ಮಾಡತಕ್ಕದಿತ್ತು ರೂ ೨೦ ೦-೦ಗೆ ಮೇಲ್ಪಟ್ಟ ಪಾವತಿಗಳಿಗೆ ಸ್ಟಾಂಪ ಹಚ್ಚಿದ್ದಿಲ್ಲ ಪಾವತಿ ಪುಸ್ತಕಗಳಿಗೂ ಎಲ್ಲ ರಜಿಸ್ಟರಗಳಿಗೂ ಶಾಲೆಯದಾಗಲಿ ಮ್ಯುನಿಸಿಪಾಲಿಟಿಯದಾಗಲಿ ಮುದ್ರೆ ಹಾಕತಕ್ಕದ್ದು

(ಕ) ವಸೂಲಾದ ಡ್ರಾಯಿಂಗ ಫೀ ವಸೂಲಿ ಮ್ಯುನಿಗೆ ಜಮಾ ಆಗುವದಿಲ್ಲ ಪೋಸ್ಟಲ್ ಬ್ಯಾಂಕಿನಲ್ಲಿ ಪ್ರತ್ಯೇಕ ಲೆಕ್ಕವಿಟ್ಟು ಡ್ರಾಯಿಂಗ ಶಿಕ್ಷಕರು ವ್ಯವಹಾರ ಮಾಡುತ್ತಾರೆ ಈ ಕ್ರಮದ ಬಗ್ಗೆ ಆಧಾರಭೂತವಾಗಿರುವ ಹುಕುಮುಗಳು ನೋಡಲಿಕ್ಕೆ ಸಿಗಲಿಲ್ಲ

(ದ) ಡ್ರಾಯಿಂಗ ಮತ್ತು ಗೇಮ್ಸ ಫೀ ಲೆಕ್ಕಗಳ ಫೋಟ ಲೆಕ್ಕಗಳನ್ನಿಟ್ಟು, ಆ ಬಗ್ಗೆ ಆಗುವ ಖರ್ಚು ಮಿತಿ ಮೀರುವದಿಲ್ಲೆಂದು ನೋಡತಕ್ಕದ್ದು

(ಈ) ಮಾಧ್ಯಮಿಕ ಶಾಲಾ ಗ್ರಾಂಟ ಇನ್ ಕೋಡಿನ ೩೪ನೇ ನಿರ್ಬಂಧದಂತೆ ಹಾಗೆ ಮಾಡಲಿಕ್ಕೆ ಬರುತ್ತಿದ್ದಾಗ್ಯೂ ಕೆಲವು ಸಂಗತಿಗಳಲ್ಲಿ ವಿದ್ಯಾರ್ಥಿಗಳ ಫೀ ಬಾಕಿ ಸ್ಕೂಲ ಲೀವಿಂಗ ಸರ್ಟಿಫಿಕೇಟ ಕೊಡುವ ಮುನ್ನ ವಸೂಲ ಮಾಡಲಿಲ್ಲದ್ದು ಕಂಡು ಬಂತು ಸ್ಕೂಲ ಕಮೀಟಿಯವರು ಸ್ಕೂಲ ಕಾರಭಾರದ ಕಡೆಗೆ ಹೆಚ್ಚು ಗಮನಿಸಬೇಕು.

(ಫ) ಫೀ ವಸೂಲ ಮಾಡುವ ಶಿಕ್ಷಕರಿಗೆ ಮಾಹಿತಿ ತಿಳಿಸುವ ಜಾಮೀನ ಕೊಡಲಿಕ್ಕೆ ಹೇಳಬೇಕು ಅವರಿಗೆ ಈ ಹೆಚ್ಚಿನ ಕೆಲಸದ ಬಗ್ಗೆ ಏನೂ ಕೊಡಲಿಲ್ಲಾದ್ದರಿಂದ ಬೋರ್ಡು ಮಂಜೂರಿ ಪಡಕೊಂಡು ಏನಾದರೂ ಹೆಚ್ಚಿನ [illegible] ಕೊಡಬಹುದಾಗಿ ಸೂಚಿಸಿದೆ

೨೦ ಲೋಕಲ್ ಫಂಡ ಆಡಿಟ್ ಎಕ್ಟಿನ ಕಲಂ ೯ (i) ರ ಕೆಳಗೆ ಬರುವ ಆಕ್ಷೇಪಗಳು.-

ಸರಕಾರಿ ರೆವಿನ್ಯೂ ಡಿಪಾರ್ಟಮೆಂಟ ಠರಾವ ನಂಬರ ೧೦೬೧೧/೩೪ ತಾರೀಖು ೧೬ನೇ ಅಕ್ಟೋಬರ ೧೯೪೨ರನ್ವಯ ಮ್ಯುನಿಸಿಪಾಲಿಟಿ ಕಡೆಗಿರುವ ದೊಡ್ಡ ಬಾಬತು ಡಿಸ್ಟ್ರಿಕ್ಟ ಪೋಲೀಸ ಎಕ್ಟ ಕಲಂ ೧೨೦ರ ಪ್ರಕಾರ ವಸೂಲಾಗುವ ದಂಡ ಹಾಗೂ ಕಲಂ ೧೬೭ರ ಪ್ರಕಾರ ಹೆಚ್ಚಿಗೆ ಉಳಿಯುವ ರಕಮುಗಳನ್ನು ಸರಕಾರಕ್ಕೆ ಜಮಾ ಮಾಡತಕ್ಕದ್ದಿದೆ ವಸೂಲ ಮಾಡಿದ ದಂಡ ಮುಂತಾದ ರಕಮುಗಳನ್ನು ಮ್ಯುನಿಯು ಸರಕಾರಕ್ಕೆ ಜಮಾ ಮಾಡಲಿಲ್ಲದ್ದು ಜಮಾ ಮಾಡಬೇಕು.

೨೧ ೧೯೨೬ರಷ್ಟು ಹಿಂದೆ ಮಂಜೂರಾದ ಮ್ಯುನಿಸಿಪಾಲಿಟಿಯ ನಿಯಮಗಳ ಪ್ರಕಾರ ನಾಕಾ ಕಾರಕೂನರು ಬರೇ ೧೦೦ರೂಪಾಯಿ ಜಾಮೀನ ಕೊಡತಕ್ಕದ್ದಿದೆ. ವಿಶಿಷ್ಟ ನಾಕೆಗಳಲ್ಲಿ ಪ್ರತಿ ದಿವಸ ವಸೂಲಾಗುವ ರಕಮುಗಳು ಬಹಳಷ್ಟು ಹೆಚ್ಚಾಗಿರುವದರಿಂದ ಈ ಜಾಮೀನ ರಕಮು ಹೆಚ್ಚಿಸಬೇಕಾಗಿ ಸೂಚಿಸುತ್ತೇವೆ ಆಕಟ್ರಾಯ ಇನ್ಸಪೆಕ್ಟರರು ನಾಕೆಗಳಿಂದ ಆಗಾಗ್ಗೆ ಹಣ ತೆಗೆದುಕೊಂಡು ಬರುತ್ತಿರುವದರಿಂದ ಅವರೂ ಜಾಮೀನು ಕೊಡುವಂತೆ ನಿಯಮ ದುರುಸ್ತಿಯಾಗಬೇಕು

೨೨ ತೆಗೆದು ಹಾಕಿದೆ

೨೩ ಮನೆ ನಂಬ್ರ ೩/೨ A A. ನೇದರ ಮಾಲೀಕರಾದ ಮಿ॥ ಪಿ ಎಲ್ ಧಾಕಪ್ಪ ಇವರು ತಮ್ಮ ಅಪೀಲ ಅರ್ಜಿಯಲ್ಲಿ (೧೯೪೨-೪೩ರ ನಂಬ್ರ ೨೩) ೩೬ ರೂಪಾಯಿ ಭಾಡಿಗೆಯಿಂದ ಕೊಟ್ಟ ಖೋಲಿಯನ್ನು ಭಾಡಿಗೆದಾರನು ಬಿಟ್ಟು ಹೋದ್ದರಿಂದ ೧೯೪೨ ೪೩ರಲ್ಲಿ ಎರಡೂ ನಂಬ್ರ (೧೯೪೧ ೪೨ರಲ್ಲಿ ರೂಪಾಯಿ ೩೪-೦ ೦ ಮತ್ತು ರೂಪಾಯಿ ೩೬-೦-೦ ಈ ಪ್ರಕಾರ ಬೇರೆ ಬೇರೆ ಆಕಾರಣಿಯಾದ) ಗಳನ್ನು ಕೂಡಿಸಲಾಗಿದೆಯಾಗಿ ಹೇಳಿದ್ದಾರೆ ಸದ್ರಿ ಮನೆಗೆ ರೂಪಾಯಿ ೧೦೦ ೦-೦ರ ಮೇಲೆ ಆಕರಣಿ ಮಾಡಬಹುದಾಗಿದ್ದರೂ ಮೆನೇಜಿಂಗ ಕಮೀಟಿಯವರು ಸದ್ರಿ ನಂಬ್ರಗಳನ್ನು ಕೂಡಿಸಿ ರೂ ೬೨-೦-೦ರ ಮೇಲೆ ಆಕರಣಿ ಮಾಡಿದರು ಆಕಾರ ಇಳಿಸಿದ್ದು ನ್ಯಾಯವೆಂತ ತೋರಿಸಬೇಕು.

೨೪ ಮ್ಯುನಿಸಿಪಾಲಿಟಿಯ ವಾಹನ ತೆರಿಗೆ ರೂಲ್ಸ ಶೆಡ್ಯೂಲದಲ್ಲಿ ಪ್ಯಾಸೆಂಜರರನ್ನು ಒಯ್ಯುವ ಗಾಡಿಗೆ ಮಾತ್ರ ತೆರಿಗೆ ಹಾಕುವ ಬಗ್ಗೆ ಉಲ್ಲೇಖವಿದೆ. ಆದರೆ ಸಾಮಾನು ಒಯ್ಯುವ ಗಾಡಿಗೆ ಇಲ್ಲ. ಇದಾಗ್ಯೂ ಎರಡನೇ ಪ್ರಕಾರದ ಗಾಡಿಗೆ ತೆರಿಗೆ ಹಾಕಲಾಗಿದೆ ಸದರಿ ತೆರಿಗೆಯನ್ನು ರೂಲ್ಸ ದುರುಸ್ತಿ ಮಾಡಿ ಸಂಪಾದಿಸಿಕೊಳ್ಳುವದು

೨೫ ಪ್ರತಿ ಕ್ವಾರ್ಟರದಲ್ಲಿ ಮುಂಗಡವಾಗಿ ತೆರಿಗೆ ಕೊಡಬೇಕಾಗಿರುವದರಿಂದ ವಸೂಲಿಯ ಕಾರಕೂನರು ವಾಹನಗಳ ತ್ರೈಮಾಸಿಕ ಖಾನೇಸುಮಾರಿ ತಯಾರಿಸುತ್ತಾರೆ ನಿಯಮಗಳಲ್ಲಿ ಪ್ರತಿ ೩ ತಿಂಗಳಿಗೊಮ್ಮೆ ಖಾನೇಸುಮಾರಿ ಮಾಡಬೇಕೆಂದಿಲ್ಲ ಈಗ ಅನುಸರಿಸುವ ಪದ್ಧತಿಯಿಂದ ಪ್ರತಿ ಮೂರು ತಿಂಗಳಿಗೆ ಬಾಕಿ ಮುಂದೆ ಎಳಕೊಳ್ಳುವದು. ಖಾನೇಸುಮಾರಿ ಮತ್ತು ಡಿಮಾಂಡ ರಜಿಸ್ಟರಗಳನ್ನು ತಯಾರಿಸುವದು ಬಿಲುಗಳನ್ನು ಹೊರಡಿಸುವದು ಮುಂತಾದ ತೊಂದರೆಗಳು ಉಂಟಾಗುತ್ತವೆ ಇವೆಲ್ಲ ಅನಾವಶ್ಯಕ ತೋರುತ್ತವೆ ಒಂದೇ ಸಾರೆ ಖಾನೇಸುಮಾರಿ ಮಾಡಿ ಇಡೀ ವರ್ಷದ ಡಿಮಾಂಡ ತಯಾರಿಸಬಹುದು ಹೊಸ ವಾಹನಗಳು ಉಪಯೋಗದಲ್ಲಿ ಬಂದಂತೆ ಆಯಾ ಕ್ವಾರ್ಟರದಲ್ಲಿ ಅವುಗಳನ್ನು ಡಿಮಾಂಡಿಗೆ ಸೇರಿಸಬೇಕು ಮಾಲಿಕನು ವಾಹನವನ್ನು ಉಪಯೋಗಿಸುತ್ತಿರುವ ಯಾ ಇಲ್ಲದ ಬಗ್ಗೆ ತಿಳಿಸಬೇಕಾಗಿ ಇರುವ ೯ನೇ ನಿಯಮವನ್ನೂ ಹಾಗೆ ತಿಳಿಸಿದ್ದ ಬಗ್ಗೆ ಇರುವ ಉಲ್ಲೇಖ ರೂಲ ನಂಬರ ೧೦ನ್ನೂ ಕಠೋರವಾಗಿ ಪಾಲಿಸತಕ್ಕದ್ದು ಹೀಗಾದಲ್ಲಿ ತೆರಿಗೆ ವಸೂಲಿ ಕಾರಕೂನರಿಗೆ ಈಗ ಬಹಳ ಬಾಕಿಯಾಗಿ ಬಿದ್ದಿರುವ ತೆರಿಗೆ ವಸೂಲಿಗೆ ಹೆಚ್ಚು ಅವಕಾಶ ಸಿಗುವದು

೨೬ ಮ್ಯುನಿಸಿಪಾಲಿಟಿ ಜಾನುವಾರಗಳಿಗೆ ಬೇಕಾಗುವ ಹುಲ್ಲು, ಮೇವು, ಹತ್ತಿಕಾಳು, ಹುರುಳಿ ವಗೈರೆಗಳ ಬಗ್ಗೆ ಹಾಗೂ ಸಾರ್ವಜನಿಕ ಕಾಮಗಾರಿ ಬಗ್ಗೆ ಬೇಕಾಗುವ ಸ್ಟೇಶನರಿ ಪೂರೈಕೆ ಮತ್ತು ಇತರ ಸಂಕೀರ್ಣ ಅವಶ್ಯಕತೆಗಳ ಬಗ್ಗೆ ಟೆಂಡರ ಕರೆದಿಲ್ಲ ಹುಬ್ಬಳ್ಳಿ ಮತ್ತು ಧಾರವಾಡದಿಂದ ಮಾತ್ರ ದರಪತ್ರಕಗಳನ್ನು ತರಿಸಲಾಗಿತ್ತು. ಕಡಿಮೆ ದರಗಳಂತೆ ಖರೀದಿ ಮಾಡುವ ಬಗ್ಗೆ ದರಗಳ ತುಲನಾತ್ಮಕ ಪಟ್ಟಿ ತಯಾರಿಸಿಲ್ಲ. ಸರಕಾರಿ ಗ್ರಾಂಟ ಸಿಗದ ಬ್ಯಾಡಮಿಂಟನ್ ರೆಕೆಟ್‌ಗಳು, ಶಟ್ಲಕಾಕ್, ಪಿಂಗಪೊಂಗ ಬ್ಯಾಟುಗಳು, ಚೆಂಡುಗಳು, ಕ್ರಿಕೆಟ್ ಬ್ಯಾಟುಗಳು, ಹಾಕಿ ಸ್ಟಿಕ್ಸ ಮುಂತಾದವುಗಳ ಮೇಲೆ ಖರ್ಚು ಮಾಡಲಾಗಿತ್ತು ಇನ್ನು ಮುಂದೆ ಟೆಂಡರಗಳನ್ನು ಕರೆಯದಿರುವ ಸಾಧ್ಯತೆಯನ್ನು ಹೋಗಲಾಡಿಸಬೇಕು ಗ್ರಾಂಟ ಸಿಗದಂಥ ಆಟಿಗೆಯ ಸಾಮಾನು ಆದಷ್ಟು ಖರೀದಿಸದಿರಬೇಕು

(i) ಪಗಾರ-ಬಿಲು ಮತ್ತು ವ್ಹೌಚರಗಳಲ್ಲಿ ಹೆಡ್ ಬಜೆಟ್ಟಿನ ಗುತ್ತು ಯಾರದೆಂದು ಬರೆಯಲಿಲ್ಲ.

(ii) ಠೇವು ರಜಿಸ್ಟರದಲ್ಲಿಯ ರಕಮುಗಳು ೩ ತಿಂಗಳಿಗೆ ಮೇಲ್ಪಟ್ಟು ಇಡಲ್ಪಟ್ಟದ್ದವು ಇದು ಅಕ್ರಮ ಆಗುವದರಿಂದ ಇಂಥ ರಕಮುಗಳನ್ನು ಸದ್ರಿ ಅವಧಿಯ ಅಂತ್ಯಕ್ಕೆ ಮ್ಯುನಿಗೆ ಜಮಾ ಮಾಡುವದು

(iii) ಇನಕಮ್ ಟೆಕ್ಸ ಅಧಿಕಾರಿಗೆ ಕಳಿಸಿದ ಇನ್‌ಕಮ್ ಟೆಕ್ಸ ರಿಟರ್ನ ಮುಂತಾದವುಗಳಿಗೆ ತಗಲಿದ ಪೋಸ್ಟ ಖರ್ಚು ಹಾಯಸ್ಕೂಲ ಕೀರ್ದಿಗೆ ಬಿದ್ದದ್ದು ಹಾಯಸ್ಕೂಲ ಲೆಕ್ಕಪತ್ರದಲ್ಲಿ ಕಂಡು ಬಂತು ಇದು ಸರಿಯಲ್ಲ ಸದರು ೦-೧೪-೬ಯನ್ನು ಈ ಖರ್ಚು ಮಾಡಿದವರ ಕಡೆಯಿಂದ ವಸೂಲ ಮಾಡಬೇಕು.

(vi) ದಾವಾ ರಜಿಸ್ಟರವು ಅಪೂರ್ಣವಿತ್ತು ಖರ್ಚಿನ ವಿವರ, ದಾವಾ ಪರಿಣಾಮ, ಅಪೀಲ ಮಾಡಿದ್ದರೆ ಅದರ ಪರಿಣಾಮ ಸಹ ಬರೆದಿಡಬೇಕು. ಮ್ಯುನಿಸಿಪಾಲಿಟಿಯು ದಾವೆ, ಅಪೀಲ ದಾಖಲ ಮಾಡುವ ಬಗ್ಗೆ ಬಹಳ ಖರ್ಚು ಮಾಡುತ್ತದೆ ಕಾರಣ ಡ್ರಾಫ್ಟ ಮ್ಯುನಿಸಿಪಲ್ ಎಕೌಂಟ ಕೋಡಿನಲ್ಲಿ ಹೇಳಿದ ೭೦ನೇ ನಮೂನೆಯಲ್ಲಿ ಮೇಲೆ ಹೇಳಿದ ಯಾವತ್ತೂ ವಿವರಗಳಿಂದ ಪೂರ್ಣಪಡಿಸಬೇಕು

(v) ಪ್ರೊವ್ಹಿಡೆಂಟ ಫಂಡಿನಲ್ಲಿ ಬಡ್ಡಿ ಆಕರಣೆ ಮಾಡಿದ್ದರಲ್ಲಿ ಕೆಲವನ್ನು ಮತ್ತು ಕಾಮಗಾರಿಗಳನ್ನು ಮಾಡಿದ್ದರ ಅಳತೆಯಲ್ಲಿ ಕೆಲ ತೇಕಡಾ ಪ್ರಮಾಣವನ್ನು ಸೆಕ್ರೆಟರಿಯವರು ತಪಾಸ ಮಾಡಿ ನೋಡಬೇಕು

೨೭. ಯಾವದೊಂದು ವರ್ಷದಿಂದ ತೆರಿಗೆ ಆಕರಿಸಲ್ಪಟ್ಟ ಕೆಲ ಇಮಾರತುಗಳು ಇಮಾರತ ಪರವಾನಗಿ ರಜಿಸ್ಟರದಲ್ಲಿ [illegible] ನೋ ೩ ೩ ನಂಬರ ೨೫೧ (ರಾಯಮನ್ ಸಾವೇರ) ಇಮಾರತ ರಜಿಸ್ಟರದಲ್ಲಿ [illegible] ಯೂ ಈ ಮುಂಚೆಯೇ ತೆರಿಗೆ ಆಕರಿಸಲ್ಪಟ್ಟ ಯಾ ಇದು ಹಿಂದು ಮುಂದಾದ ಮನೆಗಳ ಯಾದಿಯನ್ನು ತೆರಿಗೆ ಖಾತೆಗೆ ಪೂರೈಸಲ್ಪಟ್ಟದೆ ಇದರ ಮೇಲಿಂದ ಸಾರ್ವಜನಿಕ ಕಾಮಗಾರಿ ಖಾತೆಯೂ ತೆರಿಗೆ ಖಾತೆಯೂ ಪರಸ್ಪರ ಸಹಕಾರ ಮಾಡತಕ್ಕದ್ದೆಂದು ಸ್ಪಷ್ಟವಾಗುತ್ತದೆ

೨೮. ಕರೆಂಟ ರಿಪೇರಿಯ ಇಲ್ಲವೆ ಗಟಾರ ಮುಂತಾದ ಒಂದೇ ಕಾಮಗಾರಿಯ ಎಸ್ಟಿಮೇಟಗಳು ಅಂದಾಜು ತಯಾರಿಸಿ ಮೆನೇಜಿಂಗ ಕಮೀಟಿಯ ಮಂಜೂರಿ ಅಧಿಕಾರದೊಳಗೆ ಬರುವಂತೆ ತಯಾರಿಸಲಾಗುತ್ತದೆ ಇದು ಜನರಲ್ ಬೋಡಿಯ ಮಂಜೂರಿಯ ಅವಶ್ಯಕತೆಯನ್ನು ನೀಗಿಸಲಿಕ್ಕಾಗಿ ಮಾಡಲಾಗುತ್ತದೆಂದು ತೋರುತ್ತದೆ ಹೀಗೆ ಮಾಡುವ ಬಗ್ಗೆ ಉದ್ದೇಶಗಳೇನೇ ಇದ್ದರೂ ಈ ಕೆಳಗಿನವು ಹೆಚ್ಚು ಮಹತ್ವದವು ಇರುತ್ತವೆ

(i) ಸಣ್ಣ ಸಣ್ಣ ಎಸ್ಟಿಮೇಟುಗಳಿಗೆ ಕಂಟ್ರಾಕ್ಟರರು ಸಿಗುವದಿಲ್ಲ

(ii) ಯಾವದೇ ಕಾಮಗಾರಿಯನ್ನು ಸಂಪೂರ್ಣವಾಗಿ ನೋಡಿದರೇನೇ ಅದರ ಲೋಪ ದೋಷಗಳು ಎದ್ದು ಕಾಣುವದರಿಂದಲೂ ಜನರಲ್ ಬೋಡಿಯವರ ಕಡೆಗೆ ಕಳಿಸಿದರೆ ಅದರ ಕೂಲಂಕಷ ಚರ್ಚೆಯಾಗುವದರಿಂದಲೂ ಅದು ಪರಿಪೂರ್ಣವಾದೀತು

(iii) ಪಾರಿಭಾಷಿಕ ಮತ್ತು ಗಣಿತ ಸಂಬಂಧಿ ಕೆಲಸದಲ್ಲಿ ಬಹಳಷ್ಟು ಉಳಿತಾಯವಾಗುವದಲ್ಲದೆ ಮಿತವ್ಯಯಕ್ಕೂ ಆಸ್ಪದವಾದೀತು ಕಾರಣ ಈಗ ಅನುಸರಿಸುವ ಪದ್ಧತಿಯನ್ನು ಬದಲಾಯಿಸಬೇಕು

೨೯ ಕೆಳ ದರ್ಜೆಯ ನೌಕರರಿಗೆ ಬಡ್ತಿಗಳು ಆಗಲೂ ಆದಾಗ್ಯೂ ವರ್ಷಗಟ್ಟಲೆ ಅವನ್ನು ಕೊಟ್ಟಿಲ್ಲ ಕೆಳಗಿನವು ಉದಾಹರಣೆಗಳಾಗಿವೆ — (i) ಗುರುವಾ ಸುಬ್ಬಾ ಎಂಬ ಭಂಗಿಯು ಪಬ್ಲಿಕ ವರ್ಕ್ಸ ಡಿಪಾರ್ಟಮೆಂಟಿನಲ್ಲಿ ರೂ. ೧೪/೮ ಮೇಲೆ ಕೆಲಸಕ್ಕಿದ್ದನು ಅನಂತರ ಅವನಿಗೆ ಅಷ್ಟೇ ಪಗಾರದ ಮೇಲೆ ಸ್ಯಾನಿಟರಿ ಖಾತೆ ಭಂಗಿ ಕೆಲಸಕ್ಕೆ ಹಾಕಲಾಯಿತು ಆದರೆ ಕಮಿಶನರ ಸಾಹೇಬರು ಮಂಜೂರ ಮಾಡಿದ ಪಗಾರ ೧೫/ ಅದೆ (೨) ರೂ ೧೩-½-೧೫ ಸ್ಕೇಲಿನಲ್ಲಿ ಬಡಿಯ ಪುಟ್ಟು ಎಂಬ ಭಂಗಿಯು ಮೊದಲೇ ನೇಮಿಸಲ್ಪಟ್ಟಿದ್ದರೂ ೧ನೇ ಜನವರಿ ೧೯೩೮ರಲ್ಲಿ ರೂ ೧೩/ ರ ಮೇಲೆ ಕಾಯಂ ಆದನು ಮುಂದೂ ಅದೇ ಪಗಾರದ ಮೇಲೆ ಉಳಿದನು (೩) ರೋಜ ಮರಿಯಾನ (ಸ್ಕೇಲು ೧೦-½-೧೫) ಇವಳಿಗೆ ೧ನೇ ಮಾರ್ಚ ೧೯೪೩ಕ್ಕೆ ರೂ ೧೩/ ಸಿಗಬೇಕಾಗಿತ್ತಾದರೂ ರೂ ೧೧/ ಕೊಟ್ಟಿದೆ ಸದ್ರಿ ಬಡ್ತಿಗಳನ್ನು ತಡೆಹಿಡಿಯಲಿಕ್ಕೆ ಕಾರಣಗಳು ತೋರುವದಿಲ್ಲಾದ್ದರಿಂದ ಫರಕು ಮೇಲಿನವರಿಗೆ ಮತ್ತು ಅಂಥ ಬೇರೆಯವರಿಗೂ ಕೊಟ್ಟು ಹಾಕಬೇಕು

೩೦ **ಆಕಟ್ರಾಯ:—** ಅಮದಾದ ೨೪ ತಾಸುಗಳಲ್ಲಿ ರಫ್ತಾಗುವ ದನಗಳ ಮೇಲೆ "ಚಲಾವಣೆಯಲ್ಲಿರುವ ಸರಕು" ಎಂತಾ ರಿಫಂಡ ಕೊಡಲ್ಪಡುತ್ತದೆ. ಆದರೆ ಆಕಟ್ರಾಯ ರೂಲ್ಸಗಳಲ್ಲಿ "ಚಲಾವಣೆಯಲ್ಲಿಯ ಸರಕಿನ" ವ್ಯಾಪ್ತಿ ಇಲ್ಲ ಹಾಗೂ ನಿಯಮಗಳಲ್ಲಿಯೂ ಇಂಥ ರಿಫಂಡು ಕೊಡಬಹುದೆಂಬುದು ಸ್ಪಷ್ಟವಿಲ್ಲ ಇದು ಕಾಯಿದೆಸಮ್ಮತವೋ ಏನೆಂಬದನ್ನು ಅರಿತುಕೊಳ್ಳಬೇಕು "ಚಲಾವಣೆ ಸರಕಿನ" ಪಾವತಿಯಲ್ಲಿ ರಫ್ತು ನಾಕೇದಾರನಿಗೆ ತಿಳಿಯುವ ಬಗ್ಗೆ ದನಗಳ ವರ್ಣನೆ ಇರುವದಿಲ್ಲ ಇದನ್ನು ತಪ್ಪದೇ ಬರೆಯಬೇಕು ೧ನೇ ಎಪ್ರಿಲ್ ೧೯೪೪ರಿಂದ ಹೊಸ ರೂಲ್ಸಗಳು ಅಮಲಿನಲ್ಲಿ ಬಂದಿವೆ ಆದರೆ ಮೇಲಿನ ನ್ಯೂನತೆಯು ನಿಯಮಗಳಲ್ಲಿಯೂ ಕಂಡುಬರುತ್ತದೆ

೩೧ ಮ್ಯುನಿಸಿಪಾಲಿಟಿಯಲ್ಲಿ ಕ್ವಾಲಿಫೈಡ ಅಕೌಂಟಂಟರಿಲ್ಲ ಆದಷ್ಟು ಬೇಗ ಅಂಥವರನ್ನು ನೇಮಿಸಿಕೊಳ್ಳಬೇಕು

(೨ನೇ ಪುಟದ ಮೇಲೆ ಮುಂದರಿಸಿದೆ)

ಇದನ್ನು ಪಾಂಡುರಂಗ ಕೃಷ್ಣ ಶಿರಾಲ್ಕರ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೧-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ... ೦-೦-೯
ಹಳೇ ಸಂಚಿಕೆಗೆ ... ೦-೪-೦
ವ್ಹಿ. ಪಿ. ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ತೆರಬೇಕು.
ವರ್ಗಣಿಮುಂಗಡ ಕಳ್ಸಿಕೊಡ್ವದು

Reg. No. B 1270. Monday, 10th December, 1945.

ಕಾನಡಾವೃತ್ತ

ವರ್ಷ ೨೮] **THE KANARA NEWS.** [ಸಂಚಿಕೆ ೨೩

ಕುಮಟಾ:- ಸೋಮವಾರ, ತಾ ೧೦ ಮಾಹೆ ಡಿಸೆಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ರಾಕಾ ೧೫ ಎಮ್ ಉದ್ದ ೧ ಸಾರಿಗೆ ೬ ಆಣೆಯಂತೆ
ನಿವ್ಹಳಪ್ರಾಕಾ ೧೫ ಎಮ್ ಉದ್ದ ೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಬಹುದು.

ಜಯ ಹಿಂದ! ಜಯ ಕೊಂಗ್ರೆಸ!

ಕೇಂದ್ರ ಎಸೆಂಬ್ಲಿಯ ಚುನಾವಣೆಗಳಲ್ಲಿ ಎಲ್ಲೆಲ್ಲೂ ಕೊಂಗ್ರೆಸ್ಸಿಗೆ ಜಯವಾಗುತ್ತಿದೆ ಮದ್ರಾಸ ಪ್ರಾಂತದಲ್ಲಿ ಎಲ್ಲ ಚುನಾಯಿತ ಸ್ಥಳಗಳು ಕೊಂಗ್ರೆಸ್ಸಿಗೇ ಸಿಕ್ಕಿವೆ ದಿಲ್ಲಿಯಲ್ಲಿ ಶ್ರೀ ಆಸಫ್ ಅಲ್ಲಿಯವರು ಪ್ರತಿಸ್ಪರ್ಧಿ ಹಿಂದು ಮಹಾಸಭೆಯ ಉಮೇದವಾರನಿಗಿಂತ ೩೫ ಪಟ್ಟು ಮತಗಳನ್ನು ಪಡೆದು ಆರಿಸಿ ಬಂದಿದ್ದಾರೆ. ಮಧ್ಯಪ್ರಾಂತದಲ್ಲಿ ಎಲ್ಲ ಸ್ಥಳಗಳು ಕೊಂಗ್ರೆಸ್ಸಿಗೆ ಸಿಕ್ಕಿವೆ. ನಮ್ಮ ಮುಂಬಯಿ ಪ್ರಾಂತದಲ್ಲಿ ಡಾ॥ ದೇಶಮುಖ, ಬ್ಯಾ॥ ಮಸಾನಿ ಶ್ರೀ ಗಾಡಗೀಳ, ಶ್ರೀ ಹಿರೇ ಮತ್ತು ಶ್ರೀ ಕರಮರಕರ ಇವರು ಪ್ರಚಂಡ ಬಹುಮತಗಳಿಂದ ಆರಿಸಿ ಬಂದಿದ್ದಾರೆ, ಮತ್ತು ಹಿಂದು ಮಹಾಸಭೆಯ "ಪಂಚ ಪಾಂಡವ"ರನ್ನು (ಪುಣೆಯ "ಕೇಸರಿ"ಯ ಕೊಟ್ಟ ಹೆಸರು) ಪುನಃ ತಲೆ ಎತ್ತದಂತೆ ಮಾಡಿದ್ದಾರೆ (ಸರದಾರ ಜಹಾಗೀರದಾರ ಮತದಾರ ಸಂಘದಲ್ಲಿ ಮಾತ್ರ ಕೊಂಗ್ರೆಸ ಮುಂದಾಳುಗಳಾದ ಶ್ರೀ ತುಳಪುಳೇಯವರು ಬರೇ ೭ ಮತ ಕಡಿಮೆ ಬಿದ್ದು ಸೋತಿರುವರು ಕೊಂಗ್ರೆಸ್ಸು ಸೋತದ್ದು ಇದೊಂದೇ ಸ್ಥಳದಲ್ಲಿ) ಯುಕ್ತ-ಪ್ರಾಂತ, ಒರಿಸ್ಸಾ, ಬಿಹಾರ ಪ್ರಾಂತಗಳ ಚುನಾವಣೆಗಳ ಫಲಿತಾಂಶ ಪೂರ್ಣ ಪ್ರಕಟವಾಗಿಲ್ಲ ಪ್ರಕಟವಾದದ್ದರಲ್ಲೆಲ್ಲ ಕೊಂಗ್ರೆಸ್ಸಿಗೇ ಜಯವಾದದ್ದು ಕಂಡುಬಂದಿದೆ ಪ್ರತಿಸ್ಪರ್ಧಿಗಳು ಠೇವು (ರೂ ೫೦೦) ಸಹ ಕಳಕೊಳ್ಳುತ್ತಾರೆ ಇದರ ಮೇಲಿಂದ ಕೊಂಗ್ರೆಸ್ಸಿನ ಶಕ್ತಿಸಾಮರ್ಥ್ಯ ಎಷ್ಟೆಂಟೆಂಬುದು ನಿಚ್ಚಳವಾಗುತ್ತದೆ

(೨ನೇ ಪುಟದಿಂದ ಮುಂದರಿಸಿದ್ದು.)

ನಿಲ್ಲಬಯಸುವವರು, ಇದೇ ಬರುವ (ಡಿಸೆಂಬರ) ೩೦ ನೇ ತಾರೀಖು ಸಂಜೆ ೬ ಘಂಟೆಯೊಳಗಾಗಿ ಕರ್ನಾಟಕ ಪಾರ್ಲಿಮೆಂಟರಿ ಬೋರ್ಡಿನ ಧಾರವಾಡದಲ್ಲಿಯ ಕಚೇರಿಗೆ ತಲ್ಪುವಂತೆ ಅರ್ಜಿಗಳನ್ನು ಮಾಡಬೇಕೆಂದು ಬೋರ್ಡಿನ ಕಾರ್ಯದರ್ಶಿ ರಾ॥ ಚನ್ನಬಸಪ್ಪ ಅಂಬಲಿಯವರು ತಿಳಿಸುತ್ತಾರೆ ಅರ್ಜಿಗಳ ಫಾರ್ಮುಗಳು ಬೋರ್ಡಿನ ಕಚೇರಿಯಲ್ಲಿ ಇಲ್ಲವೆ ಜಿಲ್ಲಾ ಕೊಂ॥ ಕಮಿಟಿಯ ಕಚೇರಿಯಲ್ಲಿ ಸಿಗುತ್ತವಂತೆ ಅರ್ಜಿಯ ಫಾರ್ಮ ಮತ್ತು ಅರ್ಜಿದಾರರು ತುಂಬಿ ಕೊಡಬೇಕಾದ ಪ್ರಶ್ನಾವಳಿಯ ಬೆಲೆ ೧ ರೂ ಉಂಟು ಅರ್ಜಿದಾರರು ಮೂರು ಅರ್ಜಿಗಳನ್ನು ಬರೆದು ೨ ಅರ್ಜಿಗಳನ್ನು ಬೋರ್ಡಿಗೂ, ೧ ಅರ್ಜಿ ಮತ್ತು ತುಂಬಿದ ಪ್ರಶ್ನಾವಳಿಗಳನ್ನು ಜಿಲ್ಲಾ ಕೊಂ॥ ಕಮಿಟಿಯ ಕಚೇರಿಗೂ ಫೀ ರೂ ೧೦೦ ಮತ್ತು ಇಡುಗಂಟು ರೂ ೨೦೦ ಸಹಿತ ಮೇಲ್ಕಂಡಿಸಿದ ಅವಧಿಯಲ್ಲಿ ಕಳಿಸಿಕೊಡಬೇಕು ಅರ್ಜಿ ತಿರಸ್ಕರಿಸಲ್ಪಟ್ಟವರ ಇಡುಗಂಟಿನ ಹಣ ರೂ ೨೦೦ ತಿರುಗಿ ಸಿಗುವದು ಫೀ ಹಣ ರೂ. ೧೦೦ ಮಾತ್ರ ತಿರುಗಿ ಸಿಗಲಿಕ್ಕಿಲ್ಲ

ಮುಂಡಗೋಡ—(ತಾ ೨೬-೧೧-೪೫) ಗ್ರಾಮ ಸುಧಾರಣಾ ಇಲಾಖೆಯವರು ಈ ತಾಲೂಕಿನ ಚಿಗಳ್ಳಿ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಬೇಕೆಂದು ಎಣಿಸಿ, ಅಲ್ಲಿಯ ರಸ್ತೆಗಳನ್ನು ಸುಧಾರಿಸಿದ್ದಾರೆ, ಕಾಲುವೆಗಳನ್ನು ತೋಡಿಸಿದ್ದಾರೆ, ಹೊಲಗಳಲ್ಲಿ ಸುಧಾರಿಸಿದ ಭತ್ತದ ಬೀಜ ಬಿತ್ತಿಸುತ್ತಿದ್ದಾರೆ; ಎಲುಬಿನ ಗೊಬ್ಬರ ಬಳಕೆಯಲ್ಲಿ ತಂದಿದ್ದಾರೆ, ಹಣ್ಣು-ಹಂಪಲಗಳ ಸಂಗುವಳಿ ಮಾಡಿಸುತ್ತಿದ್ದಾರೆ ಊರಲ್ಲಿ ಕೋ-ಆಪ-ಮಂಡಳಿ, ಶಾಲೆ, ಉಗ್ರಾಣ ಮತ್ತು ಒಂದು ವಾಚನಾಲಯ ಇವನ್ನು ಸ್ಥಾಪಿಸಿದ್ದಾರೆ

ಯಲ್ಲಾಪುರ—(ತಾ ೧೬-೧೧-೪೫) ರಾಷ್ಟ್ರ ಸೇವಾ ದಲದ ಶಿಕ್ಷಣ ಪಡೆದು ಬಂದ ರಾ॥ ಪದ್ಮನಾಭಪ್ರಭು ಮತ್ತು ಮಧುಕರ ಕುಂದಲೇ ಇವರು ನಿನ್ನೆ ಸಂಜೆ ರಾ॥ ನಾರಾಯಣ ಕುಂದಲೇಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ, ಇಲ್ಲೊಂದು ರಾಷ್ಟ್ರ-ಸೇವಾ ದಲದ ಶಾಖೆಯನ್ನು ಸ್ಥಾಪಿಸಿದ್ದಾರೆ ಈಗಾಗಲೇ ೪೦ ಬಾಲ-ಬಾಲಕಿಯರು ದಲಕ್ಕೆ ಸೇರಿರುವರು

ಮಿ॥ ಕಿಲ್ಲೇದಾರರ ಭೆಟ್ಟಿ ಸಿಗುವದು ಕಷ್ಟ. ಸೋಲಿಂದ ಮೇಲೆ ಅವರು ಕಿರವತ್ತಿಯ ಮುಕ್ಕಾಮು ಮಾಡುತ್ತಾರೆ! ಅಲ್ಲೂ ಅವರು ಸಿಗುವದಿಲ್ಲ ಕೇಂದರೆ ಹಳ್ಳಿಗೆ ಹೋಗಿದ್ದಾರೆಂದು ಅಲ್ಲಿದ್ದ ಶಾನಭೋಗ ಪಟೇಲರು ಹೇಳುತ್ತಾರೆ. ಎಲ್ಲ ಶಾನಭೋಗ ಪಟೇಲರನ್ನು ಕಿರವತ್ತಿಯಲ್ಲಿ ಬಿಟ್ಟು ಅವರು ಹಳ್ಳಿಗಳಿಗೆ ಹೋಗುತ್ತಿರುವದು ಹೇಗೋ ತಿಳಿಯದು 'ಹಳ್ಳಿಗೆ ಹೋಗುತ್ತೇನೆ'ಂದು ಹೇಳಿ ಅವರು ಧಾರವಾಡಕ್ಕೆ (ಧಾರವಾಡ ಅವರ ಊರು) ಹೋಗುತ್ತಿರಬಹುದೇ?

ಮಂಚಿಕೇರಿ— (ತಾ ೧೬-೧೧-೪೫) ಇದೇ ಕಳೆದ ಕಾರ್ತಿಕ ವ॥ ೧೧ನೇ ತಿಥಿಯ ದಿನ ರಾ॥ ಘಾಟಿಯದೇಯವರ ಅಶ್ವತ್ಥಕಟ್ಟೆಯ ಮೇಲೆ ಅಹೋರಾತ್ರ ಭಜನೆಯಾಗಿ ಮರುದಿನ ಶ್ರೀ ವಿಠೋಬ-ರಖುಮಾಯಿ ದೇವರ ಪಲ್ಲಕ್ಕಿ ಉತ್ಸವವಾಯಿತು ಊರೆಲ್ಲ ಸಿಂಗರಿಸಲ್ಪಟ್ಟಿತ್ತು

ಹಳಿಯಾಳ— (ತಾ ೧೬-೧೧-೪೫) ಮೊನ್ನೆ ಇಲ್ಲಿ ಪಂ॥ ಜವಾಹರಲಾಲರ ಜಯಂತಿ ಉತ್ಸವವಾಯಿತು ಈಗ ಇಲ್ಲಿರುವ ದೇವಲ ಸರ್ಕಸದೊಳಗಿನ ೩ ಆನೆಗಳ ಮೇಲೂ ೨೦ ಎತ್ತಿನ ಜೋಡಿಗಳನ್ನು ಕಟ್ಟಿದ ಬಕ್ಕಡಿಯಲ್ಲೂ ಪಂಡಿತರ ಭಾವಚಿತ್ರವನ್ನಿಟ್ಟು ದೊಡ್ಡ ಮೆರವಣಿಗೆಯಾಯಿತು ಮೆರವಣಿಗೆ ಮಾರ್ಕೆಟದಲ್ಲಿ ಬಂದ ಮೇಲೆ ಅಲ್ಲಿ ಸಭೆಯಾಗಿ ಪಂಡಿತರ ಗುಣಗೌರವಪರ ಭಾಷಣಗಳಾದವು.

ಅದೇ ಸಂಜೆ ರಾಷ್ಟ್ರಸೇವಾ ದಲದ ಒಂದು ಶಾಖೆ ಇಲ್ಲಿ ಸ್ಥಾಪಿಸಲ್ಪಟ್ಟಿತು ನೂರಾರು ಜನರು ಈ ಸಮಾರಂಭಕ್ಕೆ ಕೂಡಿದ್ದರು. ಪಂ॥ ನೆಹರು ಮತ್ತು ಮಹಾತ್ಮಾ ಗಾಂಧಿ ಇವರ ಭಾವಚಿತ್ರಗಳಿಗೆ ಹಾಕಿದ ಪುಷ್ಪಮಾಲೆಗಳ ಲಿಲಾಂವ ಆಗಿ ರೂ. ೬೭ ಹುಟ್ಟಿದವು ಈ ಹಣ ದಲದ ನಿಧಿಗೆ ಕೊಡಲಾಯಿತು

ನಿನ್ನೆ ಕೊಂಗ್ರೆಸ ಕಾರ್ಯಕರ್ತರ ಸಭೆಯಾಗಿ ಈ ವರ್ಷ ಆದಷ್ಟು ಹೆಚ್ಚಿಗೆ ಕೊಂಗ್ರೆಸ ಸದಸ್ಯರನ್ನು ಮಾಡಬೇಕೆಂದು ನಿರ್ಣಯವಾಯಿತು.

[redacted]

(ತಾ. ೮-೧೨-೪೫) ೧೯೩೭ರಿಂದ ಮುಂಬಯಿ ಎಸೆಂಬ್ಲಿಯ ಕೊಂಗ್ರೆಸ-ಪಕ್ಷೀಯ ಸದಸ್ಯರಾಗಿದ್ದ ಶ್ರೀ ಹಳ್ಳಿಕೇರಿ ಸಂಗಪ್ಪಣ್ಣನವರು ಮೊನ್ನೆ ರಾತ್ರಿ ೧೦ ಘಂಟೆಯ ಸುಮಾರಿಗೆ ಆಕಸ್ಮಾತ್ ಹೃತ್ಕ್ರಿಯೆ ನಿಂತು ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ ಮೃತರು ಒಳ್ಳೇ ಲೋಕಪ್ರಿಯ ವ್ಯಾಪಾರಿಗಳೂ ದಾನಶೂರರೂ ಆಗಿದ್ದರು ಅವರ ವ್ಯಾಪಾರದ ಭರಭರಾಟಿಗೆ ಅವರ ಸೌಜನ್ಯ, ಲೋಕೋಪಕಾರಿತ್ವಗಳೇ ಕಾರಣವಾಗಿದ್ದವು ಇಲ್ಲಿಯ ಇಂಗ್ಲಿಷ ಶಾಲೆಯ ಕಟ್ಟಡಕ್ಕಾಗಿ ಅವರು ರೂ ೫೦೦೦ ದಾನ ಕೊಟ್ಟಿದ್ದುಂಟು. ಗೋರಕ್ಷಣೆಗೂ ಅವರು ಹೇರಳ ಸಹಾಯ ಮಾಡುತ್ತಿದ್ದರು ನಿಧನಸಮಯದಲ್ಲಿ ಅವರ ಪ್ರಾಯ ೭೦ ವರ್ಷ ಮೃತಾತ್ಮನಿಗೆ ಸದ್ಗತಿಯಾಗಲಿ!

ಅಂಕೋಲಾ— (ತಾ. ೮-೧೨-೪೫) ಕಳೆದ ವಾರದ ಸಬಜಡ್ಜರು ರಜೆಯ ಮೇಲೆ ಇನ್ನೂ ಹೋಗಿಲ್ಲ ರಜೆಯ ಬಗ್ಗೆ ಅರ್ಜಿಯನ್ನಷ್ಟೇ ಮಾಡಿದ್ದರು ಇದೀಗ ಪ್ರಾಂತಿಕ ಎಸೆಂಬ್ಲಿಯ ಕಚ್ಚಾ ಮತದಾರ ಯಾದಿಗಳು ಪ್ರಕಟಗೊಂಡಿರುವದರಿಂದಲೂ ಅಲ್ಲಿಗೆ ತಕ್ರಾರಿ ಅರ್ಜಿಗಳು ಬಂದರೆ ಅವುಗಳ ನಿಕಾಲಿ ತೀವ್ರ ಮಾಡಬೇಕಾಗಿರುವದರಿಂದಲೂ ಸಬ ಜಡ್ಜರಿಗೆ ಜಿಲ್ಲಾ ಜಡ್ಜರು ರಜೆಯ ಮೇಲೆ ಹೋಗಗೊಟ್ಟಿಲ್ಲವೆಂದು ವಾರ್ತೆಯಿದೆ. ಮತದಾರರ ತಕ್ರಾರಿ ಅರ್ಜಿಗಳ ನಿರ್ಣಯದ ಪ್ರಶ್ನೆ ಮಹತ್ವದ್ದು ಮತ್ತು ಅವಸರಿಯದೇನೋ ಹೌದು ಆದರೆ ಕೆಲಸ ಮಾಡಲು ಅಶಕ್ಯರೆಂದು ಸರ್ಜನರು ಅಭಿಪ್ರಾಯಪಟ್ಟಂಥವರಿಗೆ ಕೆಲಸ ಮಾಡಲು ಜಿಲ್ಲಾ-ನ್ಯಾಯಾಧೀಶರು ಯಾಕೆ ಒತ್ತಾಯ ಮಾಡಬೇಕೋ ತಿಳಿಯದು ಸಬಜಡ್ಜರ ಪ್ರಕೃತಿ ಪೂರ್ಣ ಕೆಟ್ಟು ಹೋದರೆ ಅದಕ್ಕೆ ಹೊಣೆಗಾರರಾರು?

ಕಳೆದ ತಾ. ೩ಕ್ಕೆ ಇಲ್ಲಿಯ ೧೫ ಗಾಡಿಕಾರರು ತಮ್ಮ ಖರ್ಚಿಗಾಗಿ (ಹೋಟೆಲ್ಲಿ ಊಟಕ್ಕಾಗಿ) ೬॥ ಖಂಡಿಗ ಅಕ್ಕಿ ಒಯ್ಯುತ್ತಿದ್ದಾಗ ಅವರಿಗೆ ಹಿಡಿದು ಖಟ್ಲೆ ಮಾಡಿ ಕೊಡಲಾಯಿತು! ಬಡ ಗಾಡಿಕಾರರು ತಮ್ಮ ಅಪರಾಧ ಒಪ್ಪಿಕೊಂಡರು. ಅವರಿಗೆ ಮೆಜಿಸ್ಟ್ರೇಟ ಮಿ॥ ಶೇಖರು ರೂ ೫೦ ದಂಡ ವಿಧಿಸಿ ಎಲ್ಲ ಅಕ್ಕಿಯನ್ನು ಸರಕಾರಜಮಾ ವಸೂಲಿಯ ಹುಕುಮು ಮಾಡಿದ್ದಾರೆ! ಏನು ನಿಯಂತ್ರಣವೋ! ಏನು ಕಾಯಿದೆಯೋ! ಏನು ಅದರ ಅರ್ಥವೋ!

ಕಾರವಾರ— (ತಾ ೮-೧೨-೪೫) ಕೊಚ್ಚಿಯಲ್ಲಿ ಮೊದಲಿನ ಎಣ್ಣೆ ಈಗ ತುಟ್ಟಿಯಾಗಿದೆಯಂತೆ ಅದರಿಂದ ಇಲ್ಲಿ ಈಗ ಎಣ್ಣೆಯೇ ಸಿಗದಂತಾಗಿದೆ ತೆಂಗಿನ ಕಾಯಿಗಳ ಧಾರಣೆಯೂ ಅತಿಶಯ ತುಟ್ಟಿಯಾಗಿದೆ ಸಾಧಾರಣ ಕಾಯಿಗಳಿಗೂ ನೂರಕ್ಕೆ ರೂ ೨೦ ರಿಂದ ೨೫ ಹೇಳುತ್ತಾರೆ! ತೆಂಗಿನಕಾಯಿಗಳ ಧಾರಣೆಯನ್ನು ಸರಕಾರದವರು ನಿಯಂತ್ರಿಸಬೇಕಾದ ಸಮಯ ಬಂದಿದೆ. ಎಣ್ಣೆಯ ದರ ನಿಯಂತ್ರಿಸಿದವರು ಕಾಯಿಗಳ ಧಾರಣೆಯನ್ನು ನಿಯಂತ್ರಿಸಬೇಕಾದದ್ದು ಕ್ರಮಪ್ರಾಪ್ತ. ಕಳೆದ ವಾರ ಪೇಟೆಗೆ ಬಂದ ಅರವತ್ತು ಸಾವಿರ ಕಾಯಿಗಳನ್ನು ರತ್ನಾಗಿರಿಯವರು ಖರೀದಿಸಿಕೊಂಡು ಹೋದರು ಆದ್ದರಿಂದ ಕಾಯಿಗಳ ರಫ್ತನ್ನು ನಿರ್ಬಂಧಿಸುವ ಪ್ರಸಂಗ ಬಂದಿದೆ.

ಈ ಜಿಲ್ಲೆಯ ಭತ್ತದ ಬೆಳೆ ಈ ವರ್ಷ ಬಹಳ ಕಡಿಮೆಯಾಗಿರುವದೆಂದೂ ೪೦೦೦ ಟನ್ನುಗಳಷ್ಟು ಅಕ್ಕಿಯ ಕೊರತೆಯಾಗುವದೆಂದೂ ಜಿಲ್ಲಾಧಿಕಾರಿಗಳು "ಎಸೋಸಿಯೇಟೆಡ್ ಪ್ರೆಸ್" ಪ್ರತಿನಿಧಿಗೆ ಹೇಳಿ ಅಕ್ಕಿ-ಭತ್ತಗಳ ದರವನ್ನು ಇಳಿಸಬರುವದಿಲ್ಲವಾಗಿ ತಿಳಿಸಿದ್ದಾರೆ ಅಕ್ಕಿಯ ದರವನ್ನು ಇದ್ದ ಹಾಗೆಯೇ ಇಡಲಿಕ್ಕೆಂದು ಜಿಲ್ಲಾಧಿಪರು ಈ ಅಂಕಿ ಕೊಟ್ಟಿದ್ದಾರೇನೋ ನಿಜ ಆದರೆ ಬೇರೆ ಬೇರೆ ತಾಲೂಕುಗಳೊಳಗಿನ ಬೆಳೆಯ ಆಣೇವಾರಿಯನ್ನು ಅವರು ಪ್ರಕಟಿಸಿ ತಮ್ಮ ಅಂಕಿಗಳು ಮೊದಲು ವಿಶ್ವಸನೀಯವಿರುತ್ತವೆಂದು ಸಿದ್ಧಗೊಳಿಸಬೇಕು. ಮೇಲಾಗಿ ಅಕ್ಕಿಯ ಕೊರತೆಯುಂಟೆಂದು ದರವನ್ನು ತುಟ್ಟಿಯಾಗಿಸಿಡುವದು ಎಲ್ಲಿಯ ನ್ಯಾಯ? ಬ್ರಹ್ಮದೇಶದಿಂದ ಅಕ್ಕಿ ಬರುತ್ತಿರುವಾಗಲೂ ಅಕ್ಕಿಯನ್ನು ತುಟ್ಟಿ ಮಾಡಿ ಬಡವರನ್ನು ಬಳಲಿಸುವದು ತರವಲ್ಲ ಪ್ರಾಂತಿಕ ಸರಕಾರವು ಈ ಬಗ್ಗೆ ವಿಚಾರ ಮಾಡಬೇಕು

ಕುಂಭಾರವಾಡಾ—(ತಾ. ೨೩-೧೧-೪೫) ಈಗ ರಾ॥ ಗಾಂವಕಾರ ಎಂಬವರು ಇಲ್ಲಿಯ ಶಾಲೆಯ ಶಿಕ್ಷಕರಿದ್ದಾರೆ ಅವರು ಬಂದಂದಿನಿಂದ ಶಾಲೆ ಚನ್ನಾಗಿ ನಡೆದಿದೆ. ಹುಡುಗರ ಸಂಖ್ಯೆಯೂ ಹೆಚ್ಚಾಗಿದೆ ಇನ್ನು ೨-೩ ವರ್ಷವಾದರೂ ಈ ಶಿಕ್ಷಕರು ಇಲ್ಲೇ ಇರಬೇಕೆಂದು ಊರವರ ಆಗ್ರಹವುಂಟು.

The Agricultural & Industrial Bank, Ltd.
[Incorporated in British India, Liability of Members limited]

ANNOUNCEMENT.

The Directors have pleasure to announce the opening of two more Branches of the Bank simultaneously at

JAVALI BAZAAR, GADAG & FORT. BOMBAY

on Friday, the 21st December 1945.

All kinds of Banking business transacted.

Coondapoor,
3-12-1945

K. VAMAN SHENAI,
CHAIRMAN

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬೀಳುತ್ತಿದೆ. ಮಾರ್ಗಗಳಲ್ಲಿ ಧೂಳು ಬಹಳವಾಗಿದೆ. ಹೊಸ ನಗರಸಭೆಯವರಾದರೂ ನೀರು ಹಾಕಿಸುವ ವ್ಯವಸ್ಥೆ ಮಾಡಬಾರದೇ?

ಇಲ್ಲಿಯ ಶ್ರೀಶಂಕರನಾರಾಯಣ ದೇವರ ವನಭೋಜನೆಯ ಉತ್ಸವ ಕಳೆದ ಮಂಗಳವಾರ ನೆರವೇರಿತು.

ಇದೇ ಬರುವ ಶನಿವಾರ ಗೀತಾ-ಜಯಂತಿ ದಿನ ಇಲ್ಲಿಯ ಗೀತಾ-ಮಂಡಳದವರು ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯದಲ್ಲಿ ವಾಡಿಕೆಯಂತೆ ಮುಂಜಾನೆ ಪಾರಾಯಣ, ಮಧ್ಯಾನ್ಹ ಪೂಜೆ, ಸಂಜೆ ಪ್ರವಚನಗಳು, ಮಂಗಲಾರತಿ ವಗೈರೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಗೀತಾಭಿಮಾನಿಗಳೆಲ್ಲರೂ ಉತ್ಸವದಲ್ಲಿ ಸೇರಬೇಕಾಗಿ ವಿನಂತಿ

ಮಹಾರಾಷ್ಟ್ರದ ಪ್ರಸಿದ್ಧ ಖಾದಿ ಕೆಲಸಗಾರರಾದ ಶ್ರೀ ಅಣ್ಣಾಸಾಹೇಬ ಸಹಸ್ರಬುದ್ಧೇ, ವಿಜಾಪುರದಲ್ಲಿ ಹರಿಜನ ಸೇವೆಯನ್ನು ಮಾಡುತ್ತಿರುವ ಶ್ರೀ ಕಾಕಾ ಕಾರಖಾನೀಸ ಮುಂಬಯಿಯ ರಾಷ್ಟ್ರಸೇವಾ ದಳದ ಪ್ರಮುಖ ಕಾರ್ಯಕರ್ತೆಯರಲ್ಲೊಬ್ಬರಾದ ಶ್ರೀಮತಿ ಸುಚೇತಾ [illegible] ಇವರು ಕಾರವಾರ, ಅಂಕೋಲಾ ಊರುಗಳಲ್ಲಿ ಸಂಚರಿಸಿ ಶುಕ್ರವಾರ ಸಂಜೆ ಈ ಊರಿಗೆ ಮುಟ್ಟಿದ್ದರು. ಜಿಲ್ಲಾ ಕಾಂಗ್ರೆಸ ಸಮಿತಿಯ ಉಪಾಧ್ಯಕ್ಷ ಶ್ರೀ ತಿಮ್ಮಪ್ಪ ನಾಯ್ಕರು ಅವರ ಜೊತೆಯಲ್ಲಿದ್ದರು. ಸಂಜೆ ೭ಕ್ಕೆ ಗಾಂಧಿ ಚೌಕದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಅವರ ಭಾಷಣಗಳಾದವು. ದೇಶದಲ್ಲೀಗ ಸಾಕಷ್ಟು ಜಾಗೃತಿಯಾಗಿದೆ; ಎಲ್ಲರಿಗೂ ಸ್ವರಾಜ್ಯ ಬೇಕಾಗಿದೆ, ಬ್ರಿಟಿಶರು ನಮ್ಮ ರಾಜ್ಯ ನಮಗೆ ಬಿಟ್ಟುಕೊಟ್ಟು ಸ್ವದೇಶಕ್ಕೆ ನಡೆಯಬೇಕೆಂದು ಎಲ್ಲರೂ ಹೇಳಹತ್ತಿದ್ದಾರೆ; ಆದರೆ ಕಾಂಗ್ರೆಸದಲ್ಲಿ ಸಾಕಷ್ಟು ಸಂಘಟನೆಯಾಗಿಲ್ಲಾದ್ದರಿಂದ ಬ್ರಿಟಿಶರನ್ನು ಓಡಿಸುವಷ್ಟು ಮತ್ತು ಸ್ವರಾಜ್ಯ ಸ್ಥಾಪಿಸುವಷ್ಟು ಶಕ್ತಿ ಕಾಂಗ್ರೆಸಿನಲ್ಲಿಲ್ಲ, ಆ ಸಂಘಟನೆಯನ್ನು ನಾವೀಗ ಮಾಡಬೇಕಾಗಿದೆ, ಸರಕಾರದವರೂ ತಮ್ಮ ಪರಿಯಿಂದ ಸಂಘಟನೆ ಮಾಡತೊಡಗಿದ್ದಾರೆ, ತಮ್ಮ ಸೈನಿಕರಿಗೆ ಬೇಸಾಯ ಸುಧಾರಣೆಯ ಕೆಲಸವನ್ನೂ ಬೇರೆ ಬೇರೆ ಉದ್ದಿಮೆಗಳನ್ನೂ ಸಹಕಾರ-ಸಂಸ್ಥೆ ನಡಿಸುವ ವಿದ್ಯೆಯನ್ನೂ ಕಲಿಸಿ, ಅವರು ತಮ್ಮ ತಮ್ಮ ಹಳ್ಳಿಗಳಿಗೆ ಹೋದ ಮೇಲೆ ಅಲ್ಲಿ ಅವರು ಮುಂದಾಳುಗಳಾಗಿ ಜನತೆಯ ನೇತೃತ್ವ ವಹಿಸುವಂತೆ ಮಾಡಲು ಪ್ರಯತ್ನ ನಡಿಸಿದ್ದಾರೆ; ಕಾಂಗ್ರೆಸ್ಸು ಈಗ ಸ್ವಸ್ಥ ಕುಳಿತು ಪ್ರಯೋಜನವಿಲ್ಲ, ಪ್ರತಿಯೊಂದು ಹಳ್ಳಿಯಲ್ಲಿ, ಪ್ರತಿಯೊಂದು ನಗರದಲ್ಲಿ ವಿಧಾಯಕ ಕಾರ್ಯಕ್ರಮ ಕೈಕೊಂಡು ಜನರನ್ನು ಸಂಘಟಿಸುವ ಹಾಗೂ ಪ್ರಸಂಗ ಬಂದಾಗ ಬೇಕಾದ ತ್ಯಾಗ ಮಾಡಲು ಸಿದ್ಧರಿರುವ ಲಕ್ಷಾವಧಿ ಕಾರ್ಯಕರ್ತರನ್ನು ಕಾಂಗ್ರೆಸ್ಸು ಸಿದ್ಧಗೊಳಿಸಬೇಕಾಗಿದೆ, ಇಂಥ ಕಾರ್ಯಕರ್ತರು ಸಿದ್ಧರಾಗುವ ವರೆಗೆ ಮತ್ತು ದೇಶದಲ್ಲಿ ಪೂರ್ಣ ಸಂಘಟನೆಯಾಗುವ ವರೆಗೆ ಇನ್ನೊಂದು ಸತ್ಯಾಗ್ರಹದ ಹೋರಾಟ ಕೂಡ ಯಶಸ್ವಿ ಮಾಡಬರುವಂತಿಲ್ಲ, ೧೯೪೨ರ ಆಂದೋಲನದಿಂದ ನಾವು ಕಲಿತುಕೊಳ್ಳಬೇಕಾದ ಪಾಠವಿದೇ, ಎಂದು ಶ್ರೀ ಅಣ್ಣಾಸಾಹೇಬರು ಹೇಳಿದರು. ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ಅಳಿದೊಗೆದು ೭ ಕೋಟಿ ಹರಿಜನ ಬಾಂಧವರನ್ನು ನಾವು ನಮ್ಮವರನ್ನಾಗಿ ಮಾಡಿಕೊಂಡ ವಿನಹ ಸ್ವರಾಜ್ಯ ಸಿಗಲಾರದೆಂತಲೂ, ಒಂದು ವೇಳೆ ಸಿಕ್ಕರೂ ಅದನ್ನು ನಾವು ಕಾಪಾಡಿಕೊಳ್ಳಲಾರೆವೆಂತಲೂ, ೭ ಕೋಟಿ ಮಾನವರನ್ನು ದನಗಳಿಗಿಂತ ಹೀನರೆಂದು ಎಣಿಸಿ ಅವರನ್ನು ದಬ್ಬಿಡಬೇಕೆಂಬುವ ಧರ್ಮವು ಧರ್ಮವಲ್ಲೆಂದಲೂ ಶ್ರೀ ಕಾಕಾಸಾಹೇಬರು ಹೃದಯಂಗಮವಾಗಿ ಬೋಧಿಸಿದರು. ಕಾಂಗ್ರೆಸ್ಸಿನಲ್ಲಿ ಸಾಕಷ್ಟು ಸಂಘಟನೆಯಿಲ್ಲಾದ್ದರಿಂದಲೇ ೧೯೪೨ರ ಆಂದೋಲನವು ಪೂರ್ಣ ಯಶಸ್ವಿಯಾಗಲಿಲ್ಲ, ಆ ಸಂಘಟನೆ ಮಾಡಲು ರಾಷ್ಟ್ರಸೇವಾ-ದಳ ಬೇಕಾಗಿದೆ; ಕಾಂಗ್ರೆಸ ಕೆಲಸವನ್ನು ನಿಷ್ಠೆಯಿಂದ ಮಾಡಿ, ಕಾಂಗ್ರೆಸ ಶಕ್ತಿಯನ್ನು ಬೆಳೆಸಲು ರಾಷ್ಟ್ರಸೇವಾ-ದಳಗಳು ಬೇಕಾಗಿವೆ; ಸೇವಾದಲದಲ್ಲಿ ಸೇರಿ ತರುಣ ಸ್ತ್ರೀ ಪುರುಷರು ದೃಢಕಾಯರಾಗಬೇಕು; ರಾಷ್ಟ್ರೀಯ ಇತಿಹಾಸವನ್ನೂ ದೇಶ ವಿದೇಶಗಳೊಳಗಿನ ಆಗು-ಹೋಗುಗಳನ್ನೂ ತಿಳಿದು ಜ್ಞಾನಸಂಪನ್ನರಾಗಬೇಕು, ಮತ್ತು ಕಾರ್ಯ ಮಾಡುವ ಪ್ರಸಂಗ ಬಂದಾಗ ಜನರಿಗೆ ಮಾರ್ಗದರ್ಶನ ಮಾಡುವ ಶಕ್ತಿಯನ್ನೂ ಅರ್ಹತೆಯನ್ನೂ ತಮ್ಮಲ್ಲಿ ಬೆಳಿಸಿಕೊಳ್ಳಬೇಕು; ಎಂದು ಮುಂತಾಗಿ ರಾಷ್ಟ್ರಸೇವಾ-ದಳದ ಸೈನಿಕರ ಆದರ್ಶವೇನಿರಬೇಕೆಂದೂ ಜನತೆಯು ಆ ದಳಕ್ಕೆ ಯಾಕೆ, ಹೇಗೆ ಮತ್ತು ಎಷ್ಟು ಸಹಾಯ-ಪ್ರೋತ್ಸಾಹ ನೀಡಬೇಕೆಂದೂ ಶ್ರೀಮತಿ [illegible] ಅವರು ವೀರ ವಾಣಿಯಿಂದ ಬೋಧಿಸಿ, ರಾಷ್ಟ್ರಸೇವಾ ದಳದ ಸಂಘಟನೆ ಪರಿಪೂರ್ಣವಾಗಿ "ಗಲ್ಲಿ-ಗಲ್ಲಿಯೊಳಗೆ ಜವಾಹರಲಾಲ ನೆಹರುಗಳು" ನಿರ್ಮಾಣವಾಗಿದ್ದರೆಂದು ಮಾನವಾಗ್ರೇಸರಾದ ಮೋ. ಕ. ಗಾಂಧಿಯವರು ಮುಂದಿನ ಸ್ವಾತಂತ್ರ್ಯದ ಹೋರಾಟದ ಕಂಬವನ್ನು ಊರುವರೆಂದು ನುಡಿದರು. ಸಭಾಧ್ಯಕ್ಷರಾಗಿದ್ದ ಶ್ರೀ [illegible] ಸಮಾರೋಪ ಮಾಡಿ ಅಭ್ಯಾಗತರಿಗೆ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು. ಅಭ್ಯಾಗತರು ಮೊನ್ನೆ ಮಧ್ಯಾನ್ಹ ಇಲ್ಲಿಂದ ಶಿರಸಿ-ಸಿದ್ದಾಪುರ ಸಂಚಾರಕ್ಕೆ ಹೊರಟುಹೋದರು.

ಗೋಕರ್ಣದ ಬೇಲೆ-ಹಿತ್ತಲಲ್ಲಿ ಹಳ್ಳೇರನನ್ನು ಥಳಿಸಿದರು ಎಂದು ಮುಂತಾಗಿ ಕಳೆದ ವಾರದ "ವೃತ್ತ"ದಲ್ಲಿ ಪ್ರಕಟಗೊಂಡ ಸುದ್ದಿ ನಿರಾಧಾರವಿರುತ್ತದೆಂತಲೂ, ಸತ್ತ ಹಳ್ಳೇರನು ಬಹಳ ದಿನ ಜ್ವರದಿಂದ ಬಳಲಿ ಸತ್ತಿದ್ದಾನೆಂತಲೂ ಗೋಕರ್ಣದಿಂದ ಓರ್ವ 'ಸತ್ಯವಾದಿ'ಗಳು ತಿಳಿಸುತ್ತಾರೆ "ವೃತ್ತ"ದ ಸುದ್ದಿ ಹೊರಬಿದ್ದ ನಂತರ ಗೋಕರ್ಣ ಪೋಲೀಸರು ಒತ್ತರದಿಂದ ಚೌಕಶಿ ಮಾಡಹತ್ತಿದ್ದಾರಂತೆ.

ಜಿಲ್ಲಾ ಗ್ರಾಮ ಸೇವಾ ಸಮಿತಿಯ ಪರವಾಗಿ ಹಳಕಾರ, ಗುಡೇಅಂಗಡಿ, ಬಾಡ, ಬಗ್ಗೋಣ ಮತ್ತು ಹೆಗಡೆ ಗ್ರಾಮಗಳಲ್ಲಿ ಕಳೆದ ಜುಲಾಯಿ ತಿಂಗಳಿಂದ ನೂಲುವ ಉದ್ದಿಮೆಯ ಪ್ರಚಾರ ನಡೆದಿದೆ. ಇದೇ ನವಂಬರ ತಿಂಗಳ ಕೊನೆಯ ವರೆಗಿನ ೫ ತಿಂಗಳ ಅವಧಿಯಲ್ಲಿ ೧೯ ಜನರು ಹಂಜಿ ಮಾಡುವ ಹಾಗೂ ೧೯೦ ಜನರು ನೂಲುವ ಉದ್ಯೋಗ ಕಲಿತಿದ್ದಾರೆ, ಮತ್ತು ೧೨೩೫ ಸೇರು ನೂಲು ನೂತುಕೊಟ್ಟಿದ್ದಾರೆ. ನೂತಿದ ಜನರಿಗೆ ನೂತ ಬಗ್ಗೆ ರೂ. ೯೦೩ ಮತ್ತು ಹಂಜಿ ಮಾಡಿದ ಬಗ್ಗೆ ರೂ. ೩೨೮ ಕೂಲಿ ಕೊಡಲಾಗಿದೆಯಂತೆ. ಸ್ವತಃದ ಬಗ್ಗೆ ನೂತವರ ಲೆಕ್ಕ ಇದರಲ್ಲಿ ಸಮಾವಿಷ್ಟವಾಗಿರುವದಿಲ್ಲ.

ಹೊನ್ನಾವರ— (ತಾ ೭-೧೨-೪೫) ಸಾಣೀಕಟ್ಟ ಉಪ್ಪಿನ ಸೊಸೈಟಿಯು ಹೊರಗಿನವರ ಉಪ್ಪು ಬಂದದ್ದರಿಂದ ಸೊಸೈಟಿಯವರು ತಮ್ಮ ಉಪ್ಪಿನ ಧಾರಣೆಯನ್ನು ರೂ ೩-೧೧-೦ ರಿಂದ ರೂ ೩-೯-೦ಕ್ಕೆ ಇಳಿಸಿದ್ದಾರೆ.

ಹೊಸ ಆಸ್ಪತ್ರೆಯಲ್ಲಿ ಬಡವರಿಗೆ ಉಪಚಾರ ಮಾಡಲಾಗುವದೆಂದು ಈಗಿನ ಡಾಕ್ಟರರು ಸಾರಿದ್ದರಷ್ಟೇ. ಆದರೆ ಬಡವರಿಗೆ ಅಲ್ಲಿ ಪ್ರವೇಶವಿಲ್ಲೆಂದು ಮೊನ್ನೆ ತಾ. ೫ಕ್ಕೆ ಸಿದ್ಧವಾಯಿತು. ಅಂದು ಬಡ ಒಕ್ಕಲಿಗನೊಬ್ಬನು ಈ ಆಸ್ಪತ್ರೆಯಲ್ಲಿ ಉಪಚರಿಸಿಕೊಳ್ಳಬೇಕೆಂದು ಬಂದು ಆಸ್ಪತ್ರೆಯ ಬಾಗಿಲಲ್ಲಿ ಬಿದ್ದುಕೊಂಡಿದ್ದನು. ಆಸ್ಪತ್ರೆಯವರು ಅವನ ಕಡೆಗೆ ಕಣ್ಣೆತ್ತಿ ನೋಡಲಿಲ್ಲ! ಕೊನೆಗೆ ಮಾಮಲೇದಾರರು ಅವನನ್ನು ಮ್ಯುನಿಸಿಪಲ್ ಚಿಕಿತ್ಸಾಲಯಕ್ಕೆ ಮುಟ್ಟಿಸಿದರು.

ಊರವರಿಗೆ ಸರಿಯಾಗಿ ಉರುವಲ ಪೂರೈಸಲು ಸರಕಾರದವರು ವರ್ಷದ ಉಗ್ರಾಣದಾರರಿಗೆ ರೂ ೧೦೦೦೦ ಧನಸಹಾಯ ಕೊಟ್ಟಿದ್ದಾರಂತೆ. ಆದರೂ ಉಗ್ರಾಣದಾರರ ದುಡಿಗೆ ತುದಿಯಿಲ್ಲ, ಬುಡವಿಲ್ಲ! ಚಲೋ ಉರುವಲ ಕಟ್ಟಿಗೆಯನ್ನೆಲ್ಲ ಮುಂಬಯಿ ಕಡೆಗೆ ರಫ್ತು ಮಾಡಿ, ಕೊಳೆತ ನಾಟಿದ ಗಂಟುಗಳನ್ನೂ ಮುರಕಗಳನ್ನೂ ಅವರು ಇಲ್ಲಿಟ್ಟು ಮಾರುತ್ತಾರೆ! ಆದ್ದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಅಧಿಕಾರಿಗಳು ತುಸು ಕಣ್ಣೆತ್ತಿ ನೋಡುವರೇ?

ಕಾಸರಕೋಡ, ಕೆಳಗಿನೂರ ವಗೈರೆ ೬ ಗ್ರಾಮಗಳಿಗೆ ಕೂಡಿ ಒಂದೇ ಒಂದು ಸೀಧಾ ಅಂಗಡಿಯಿತ್ತು, ಅದನ್ನು ಕೆಳಗಿನೂರ ಗ್ರಾಮದ ಹಿಂದಣ ಪಟೇಲರು ನಡಿಸುತ್ತಿದ್ದರು. ಅವರ ನಡತೆ ಸರಿಯಿಲ್ಲೆಂದು ಮುಂದೆ ಆ ಅಂಗಡಿಯನ್ನು "ಚಿತ್ರಾಪುರ ಫಾರ್ಮಿಂಗ ಸೊಸೈಟಿ" ಎಂಬ ಒಕ್ಕಲುತನದ ಸಂಸ್ಥೆಗೆ ಒಪ್ಪಿಸಿದರು. ಅವರ ಆಡಳಿತೆಯಿಂದಲೂ ಜನರಿಗೆ ಸಮಾಧಾನವಾಗಲಿಲ್ಲ. ಮುಂದೆ ಮಾಮಲೇದಾರರು ಅಲ್ಲಿ ಸ್ವತಃ ಹೋಗಿ ಸೀಮೆಯವರ ಅಂಬೋಣ ತಿಳಕೊಂಡು, ಸೀಮೆಯ ವಿಶ್ವಾಸಪಾತ್ರರ ವತಿಯಿಂದ ೨ ಅಂಗಡಿಗಳನ್ನಿಡುವದು ಲೇಸೆಂದು ಅಭಿಪ್ರಾಯಪಟ್ಟು, ಆ ಅಂಗಡಿಗಳ ಬಗ್ಗೆ ೨ ಪ್ರತ್ಯೇಕ ಲೋಕಪ್ರತಿನಿಧಿಗಳ ಮಂಡಳಗಳನ್ನು ನೇಮಿಸಿ, ಆ ಮಂಡಳಗಳಿಗೆ ಅಂಗಡಿ-ಪರವಾನಗಿ ಕೊಡಬೇಕಾಗಿ ಜಿಲ್ಲಾಧಿಪತಿಗಳಿಗೆ ಬರೆದುಹಾಕಿದ್ದರು. ಜಿಲ್ಲಾಧಿಪರಿಂದಲೂ ಅದಕ್ಕೆ ಮನ್ನಣೆ ಕೊಟ್ಟಿರುತ್ತಾರೆಂದು ವಿಶ್ವಸನೀಯ ಸುದ್ದಿಯುಂಟು. ಮಂಡಳಗಳ ನೇಮಣೂಕಿಯಾಗಿ ಈಗ ೨ ತಿಂಗಳಾಗುತ್ತ ಬಂತು. ಆದರೂ ಪರವಾನಗಳೂ ಸಿಗುವದಿಲ್ಲ! ಅಂಗಡಿಗಳೂ ಸಿಗುವದಿಲ್ಲ!! ಜಿಲ್ಲಾಧಿಪರ ಹುಕುಮು ಅವರ ಕಚೇರಿಯಿಂದ ಹೊರಬೀಳದೆ ಮೂಲೆಗೆ ಬಿದ್ದುಕೊಂಡಿರುವದೋ ಅಥವಾ ನಡುವೆ ಎಲ್ಲಾದರೂ ಮುಳ್ಳುಗಂಟಿಯಲ್ಲಿ ಸಿಲುಕಿಕೊಂಡು ಬಿದ್ದಿರುವದೋ ತಿಳಿಯದು! ಜಿಲ್ಲಾಧಿಪರು ಚೌಕಶಿ ಮಾಡಬೇಕು.

(ತಾ ೯-೧೨-೪೫) ಉತ್ತರ ಕನ್ನಡ ಜಿಲ್ಲೆಯ ಔದ್ಯೋಗಿಕ ಸಹಕಾರಿ ಪರಿಷತ್ತು ಇದೇ ನಾಡದು ಮಂಗಳವಾರ ಮಧ್ಯಾನ್ಹ ೨ ಘಂಟೆಗೆ ಇಲ್ಲಿಯ ಉದ್ಯೋಗ-ಶಾಲೆಯ ಕಟ್ಟಡದಲ್ಲಿ ಮುಂಬಯಿ ಪ್ರಾಂತಿಕ ಸಹಕಾರಿ ಬೇಂಕಿನ ಕಾರ್ಯಾಧ್ಯಕ್ಷರಾಗಿರುವ ಶ್ರೀಮಾನ್ ವೈಕುಂಠಲಾಲ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಅದೇ ಸಂಜೆ ಅವರ ಹಸ್ತದಿಂದ ಜಿಲ್ಲೆಯ ಮನೆ ಕೈಗಾರಿಕೆಗಳ ಪ್ರದರ್ಶನವೂ ತೆರೆಯಲ್ಪಡುವದು.

ಭಟಕಳ— (ತಾ ೭-೧೨-೪೫-) ತೆಂಗಿನಗುಂಡಿಯೊಳಗಿನ ಸರಾಯಿಯ ವ್ಯಾಪಾರ ಇನ್ನೂ ಕುಗ್ಗಿಲ್ಲ! ನೂರಾರು ಬೆಲ್ಲದ ಮಡಿಕೆಗಳು ಆ ಕಡೆಗೆ ಸಾಗುತ್ತಿರುವದು ಕಂಡುಬರುತ್ತಿದೆ. ಅಬಕಾರಿ ಶಿಬಂದಿಯವರೇ ತೆಂಗಿನಗುಂಡಿಯವರಿಗೆ ಸಹಾಯಕ್ಕಿದ್ದಾರೆಂದು ಲೋಕ-ಪ್ರವಾದವುಂಟು. ಎಲ್ಲಾದರೂ ಭಟ್ಟಿ ಇಲ್ಲವೆ ಸರಾಯಿಯ ಸಂಗ್ರಹವಿದ್ದ ಸುದ್ದಿಯನ್ನು ಅಬಕಾರಿಯವರಿಗೆ ಕೊಟ್ಟರೆ ಕೂಡಲೇ ಅದು ಸರಾಯಿಗರಿಗೆ ಮುಟ್ಟುತ್ತಿದೆ! ಮೊನ್ನೆ ಮೊನ್ನೆ ಮಾಕ್ತಪ್ಪ ಎಂಬ ದೊಡ್ಡ ಸರಾಯಿಗನು ಗೋವಾ-ಸರಾಯಿ ತರಲಿಕ್ಕೆ ಗೋವೆಗೆ ಹೋಗಿದ್ದಾನೆಂದೂ ಸಮುದ್ರ-ದಂಡೆಯಲ್ಲಿ ಗುಪ್ತ-ಕಾವಲು ಇಡಬೇಕೆಂದೂ ಅಬಕಾರಿ ಮೇಲಧಿಕಾರಿಗಳಿಗೆ ಹೆಬ್ಳೆ ಪಟೇಲರು ತಂತಿಯಿಂದ ತಿಳಿಸಿದ್ದರಂತೆ. ಸರಾಯಿ ಬಂದು ಮುಟ್ಟುತ್ತಲೇ ಪುನಃ ಸ್ಥಾನಿಕ ಅಬಕಾರಿ ಜನರಿಗೂ ತಿಳಿಸಿದರಂತೆ. ಆದರೆ ಯಾವ ಅಬಕಾರಿ ಅಧಿಕಾರಿಯೂ ಕಿವಿಗೊಡಲಿಲ್ಲವಂತೆ! ಇಂಥ ಅಬಕಾರಿ ಶಿಬಂದಿಯನ್ನು ಸರಕಾರದವರು ಇಡುವದಾದರೂ ಯಾಕೆ? ಅವರ ಬಗ್ಗೆ ಹಣ ದಂಡ ಮಾಡುವದಾದರೂ ಯಾಕೆ?

ಕಳೆದ ತಾ. ೩ನೇಗೆ ಕೂಡಿದ ನಗರ-ಸಭೆಯ ಮಹಾಸಭೆಯಲ್ಲಿ ಹೊಸ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳುವ ಪ್ರಶ್ನೆ ಚರ್ಚೆಗೆ ಬಂದಿತ್ತು. ಈಗಿದ್ದ ಕಾರ್ಯದರ್ಶಿಗಳು ತಮ್ಮನ್ನೇ ಕಾಯಂ ಮಾಡಬೇಕೆಂದು ವಿನತಿ ಮಾಡಿದ್ದರಂತೆ; ಮತ್ತು ಅದಕ್ಕೆ ಪ್ರಯತ್ನವನ್ನೂ ನಡಿಸಿದ್ದಾರಂತೆ. ಅದರ ಫಲವಾಗಿಯೋ ಏನೋ ಕಾರ್ಯದರ್ಶಿಯ ಪ್ರಶ್ನೆಯನ್ನು ನಗರಸಭಿಕರು ಮೊನ್ನೆಯ ಸಭೆಯಲ್ಲೇ ತೀರ್ಮಾನಿಸದೆ ಇನ್ನೊಂದು ಸಭೆಯ ವರೆಗೆ ಮುಂದೂಡಿದ್ದಾರೆ! ಜಿಲ್ಲಾಧಿಪರ ಸೂಚನೆಯಂತೆ ಸೂಲಗಿತ್ತಿಯ ಪ್ರಕರಣದ ಪುನರ್ವಿಚಾರ ಮಾಡಬೇಕೆಂತಲೂ ನಿರ್ಣಯವಾಗಿದೆ

ತೆರನಮಕ್ಕಿ ಸೀಧಾ ಅಂಗಡಿಗೆ ಕಳೆದ ತಿಂಗಳಲ್ಲಿ ೫೦ ಡಬ್ಬ ಚಿಮಣಿ ಎಣ್ಣೆ ಸಿಗುವದರ ಬದಲಾಗಿ ೨೦ ಡಬ್ಬೆ ಎಣ್ಣೆ ಸಿಕ್ಕಿದೆಯಂತೆ. ಆದರೂ ಜನರಿಗೆ ಕೂಪನುಗಳಲ್ಲಿ ಕಾಣಿಸಿದಷ್ಟೇ ಎಣ್ಣೆ ಕೊಡಬೇಕೆಂದು ಅಧಿಕಾರಿಗಳು ಹೇಳುತ್ತಾರಂತೆ! ಈ ಅದ್ಭುತ ಇಂದ್ರಜಾಲ ಪರಾಕ್ರಮವನ್ನು ಹೇಗೆ ಮಾಡಬೇಕೆಂದು ಪೂರೈಕೆ ಅಧಿಕಾರಿಗಳು ಒಂದೊಮ್ಮೆ ಮಾಡಿ ತೋರಿಸಬಾರದೇ? ಈ ಅಂಗಡಿಗೆ ಒಳಪಟ್ಟ ಕೂಪನಧಾರಿಗಳಿಗೆ ೭-೮ ಚೀಲ ಸಕ್ಕರೆ ಬೇಕು. ಕಳೆದ ತಿಂಗಳಲ್ಲಿ ಬರೇ ೫ ಚೀಲ ಕೊಟ್ಟಿದ್ದಾರೆ! ಆದರಿಂದ ಎಷ್ಟೋ ಜನರಿಗೆ ಸೀಧಾ-ಸಕ್ಕರೆ ಸಿಗಲೇ ಇಲ್ಲ!

"ಶ್ರೀ ಸ್ವಾಮಿ ಭಕ್ತ ಮಂಡಳ"ವೆಂಬ ಹೆಸರಿಟ್ಟುಕೊಂಡು ಕೆಲವರು ಮುಂಬಯಿಯಲ್ಲಿ ದಿವಂಗತ ಗೋಕರ್ಣ-ಮಠಾಧೀಶ ಶ್ರೀಮದಿಂದಿರಾಕಾಂತತೀರ್ಥ ಸ್ವಾಮಿಗಳ ಸ್ಮಾರಕ-ರೂಪವಾಗಿ ಒಂದು ಮಠ ಸ್ಥಾಪನೆ ಮಾಡುತ್ತೇವೆಂದು ಹೇಳಿ ಹಣ ಎತ್ತುವಳಿ ಮಾಡುತ್ತಿದ್ದುದು ವಿದ್ಯಮಾನ ಶ್ರೀಮಠಾಧೀಶರ ಲಕ್ಷಕ್ಕೆ ಬಂದಿದೆ. ಸದರಿ ಮಂಡಳದ ಪರಿಚಯ ಶ್ರೀ ಸಂಸ್ಥಾನಕ್ಕಿಲ್ಲ; ಅದರ ಉದ್ಯೋಗ ಶ್ರೀ ಸಂಸ್ಥಾನದ ತಿಳುವಳಿಕೆಯಿಂದ ನಡೆದದ್ದೂ ಇರುವದಿಲ್ಲ. ಮಂಡಳದೊಡನೆ ವ್ಯವಹರಿಸುವವರು ಈ ಸಂಗತಿಯನ್ನು ಅರಿತು ಇಷ್ಟ ಬಿದ್ದಂತೆ ವರ್ತಿಸಬಹುದು

ಶಿರಸಿ ವಿಭಾಗದ ರೆಸಿಡೆಂಟ ಮೆಜಿಸ್ಟ್ರೇಟರ ಕೋರ್ಟು ಈಗ ಶಿರಸಿಯಲ್ಲೇ ಇಡಲ್ಪಟ್ಟಿದೆ. ಘಟ್ಟದ ಮೇಲಿನ ಖಟ್ಲೆಗಳ ಸಂಖ್ಯೆ ಈಗ ಕಡಿಮೆ. ಕರಾವಳಿ ಭಾಗದ ಖಟ್ಲೆಗಳೇ ಹೆಚ್ಚು. ಭಟಕಳ, ಹೊನ್ನಾವರ ಕಡೆಯ ಖಟ್ಲೆಗಳು ಈ ಕೋರ್ಟಿನಲ್ಲಿ ನಡೆದರೆ ಪಕ್ಷಗಾರರಿಗೂ ಸಾಕ್ಷಿಗಾರರಿಗೂ ಪ್ರವಾಸದ ಕಷ್ಟವೂ ವೆಚ್ಚವೂ ಬಹಳ ಬರುತ್ತಿದೆ. ಒಮ್ಮೊಮ್ಮೆ ಮೋಟಾರ ಸಿಗದೆ ತೊಂದರೆಯಾಗುತ್ತಿದೆ. ಕಾರಣ ಜಿಲ್ಲಾಧಿಪರು ಪುನರಾಲೋಚನೆ ಮಾಡಿ ಕೋರ್ಟನ್ನು ಕೆಲ ಕಾಲವಾದರೂ ಘಟ್ಟದ ಕೆಳಗಿನ ಭಾಗದಲ್ಲಿ ಎಲ್ಲಾದರೂ ಇಡುವ ವ್ಯವಸ್ಥೆ ಮಾಡಬೇಕಾಗಿ ಅರಿಕೆಯದೆ

ಶಿರಸಿ— ಜಿಲ್ಲಾಧಿಪರ ಡಿಸೆಂಬರ ತಿಂಗಳ ಸಂಚಾರ ಕ್ರಮ ಕೆಳಗಿನಂತಿದೆ.— ತಾ ೫ರಿಂದ ೯ ಸಂಪಖಂಡ, ತಾ. ೧೦ರಿಂದ ೧೪ ಎಕ್ಕಂಬಿ; ತಾ. ೧೫ರಿಂದ ೧೯ ಶಿರಸಿ

ಮುಂಬಯಿ ಪ್ರಾಂತಿಕ ಎಸೆಂಬ್ಲಿಯ ಮುಂಬರುವ ಚುನಾವಣೆಗೆ ಕಾಂಗ್ರೆಸ ಪರವಾಗಿ ಹುರಿಯಾಳುಗಳಾಗಿ

(೧ನೇ ಪಾನಿನ ಮೇಲೆ ಮುಂದುವರಿಸಿದೆ)

ಬೇಕು, ಬೇಕು!

ಶಿರಸಿ, ಸಿದ್ದಾಪುರ, ಹಳಿಯಾಳ, ಕುಮಟಾ ನಗರಗಳಲ್ಲಿ ಸಿಮೆಂಟ ಡಿಪೋಗಳನ್ನು ತೆರೆಯುವದುಂಟು ಈ ಡಿಪೋಗಳ ಕೆಲಸಕ್ಕೆ ಮೆಟ್ರಿಕ್ಯುಲೇಶನ್ ಪರೀಕ್ಷೆ ತೇರ್ಗಡೆ ಹೊಂದಿದ ಇಲ್ಲವೆ ಅಷ್ಟೇ ತನಕ ಕಲಿತ ಉತ್ಸಾಹಿ, ಅನುಭವಿಕ, ವ್ಯವಹಾರಜ್ಞ ತರುಣರು ಬೇಕು

ನಿಶ್ಚಿತ ಪಗಾರದ ಮೇಲೆ ಇಲ್ಲವೆ ಕಮಿಶನಿನ ಮೇಲೆ ನೇಮಿಸಿಕೊಳ್ಳಲಾಗುವದು.

ಈ ಕೆಲಸ ಕೈಕೊಳ್ಳಲು ಅಪೇಕ್ಷೆಯುಳ್ಳವರು, ಸರ್ಟಿಫಿಕೇಟುಗಳ ಸಹಿತ, ತಮಗೆ ಇಷ್ಟವಿದ್ದ ಪಗಾರ ಇಲ್ಲವೆ ಕಮಿಶನ ನಮೂದಿಸಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

ಶಿರಸಿ, ತಾ. ೪-೧೨-೪೫ } ಎಸ್. ಎಸ್. ಧುಂಡ್ಸಿ
ಮತ್ತು ಕಂಪನಿ, ಶಿರಸಿ.

(೪ನೇ ಪುಟದಿಂದ ಮುಂದರಿಸಿದ್ದು.)

ಪೆರಾ ೨೪ — ನೋಟ ಮಾಡಿದೆ. ಯೋಗ್ಯ ಬದಲಾವಣೆ ಮಾಡಲಾಗುತ್ತಿದೆ.

ಪೆರಾ ೨೫.— ನೋಟ ಮಾಡಿದೆ.

ಪೆರಾ ೨೬. — ಸರಕಾರಿ ಕಂಟ್ರೋಲ ಮೂಲಕ ದೊರುಕ-ವಸ್ತುಗಳ ಬಗ್ಗೆ ಟೆಂಡರು ಕರೆಯುವದಾಗಲಿಲ್ಲ. ಅಲ್ಲದೆ ಟೆಂಡರ ಪದ್ಧತಿಯಿಂದ ಪೂರೈಕೆ ಪಡೆಯುವದು ಅಷ್ಟು ಉಪಯೋಜನಕಾರಿಯಲ್ಲೆಂದು ಹಿಂದಿನ ಅನುಭವವಿದೆ ಕಂಟ್ರ್ಯಾಕ್ಟರರು ಮುಂದಿನ ೧೨ ತಿಂಗಳುಗಳಲ್ಲಿ ಪೂರೈಸಬೇಕಾದ ಸಾಮಾನುಗಳ ಬಗ್ಗೆ ಸ್ವಾಭಾವಿಕವಾಗಿಯೇ ಹೆಚ್ಚಿನ ದರ ಕೊಡುವದುಂಟು. ಅದೇ ಮಾತು ಹುಲ್ಲಿಗೂ ಅನ್ವಯಿಸುತ್ತದೆ. ಈಗ ಮನೆಜಿಂಗ ಕಮೀಟಿಯವರು ಅನುಸರಿಸುತ್ತಿರುವ ಪದ್ಧತಿ ಅಂದರೆ ಹಂಗಾಮಿನಲ್ಲಿ ಬಾಜಾರ ಧಾರಣೆ ನೋಡಿಕೊಂಡು ಖರೇದಿ ಮಾಡುವದು ಒಳ್ಳೇದೆಂದು ಕಂಡುಬಂದಿದೆ. ಆಟದ ಸಾಮಾನುಗಳ ಖರ್ಚು ವಿದ್ಯಾರ್ಥಿಗಳ ಕಡೆಯಿಂದ ವಸೂಲಾಗುವ ಗೇಮ್ಸ ಫಿ ಹಣದೊಳಗಿಂದ ಹೋಗುತ್ತದೆ. ಆದಾಗ್ಯೂ ಸರಕಾರಿ ಗ್ರಾಂಟ ಸಿಗದ ಸಾಮಾನುಗಳ ಮೇಲೆ ಆದಷ್ಟು ಕಡಿಮೆ ಖರ್ಚು ಮಾಡಲಾದೀತು. ಆಟದ ಸಾಮಾನುಗಳ ಪೂರೈಕೆ ಬಗ್ಗೆ ಟೆಂಡರ ಕರೆಯುವದರಲ್ಲಿ ಬರುವದು.

(i) ಮತ್ತು (ii) ಈ ಪೋಟ ಪೆರಾದಲ್ಲಿ ಹೇಳಿದ ಸಂಗತಿಗಳ ಕಡೆ ಲಕ್ಷ್ಯ ಪೂರೈಸಲಾಗುವದು.

(iii) ೨-೧೪-೬ ಖರ್ಚಾದದ್ದು ಇನಕಮ್ ಟ್ಯಾಕ್ಸ ಖಾತೆಗೆ ಮಾಹಿತಿ ಪೂರೈಸುವ ಬಗ್ಗೆ ತಗಲಿದ್ದೆಂದೂ ಶಿಕ್ಷಕರ ಸಂಬಂಧಿ ರಿಟರ್ನ ಕಳಿಸುವ ಬಗ್ಗೆ ಖರ್ಚಾದದ್ದೆಂದೂ ಕಂಡುಬರುತ್ತಿದೆ ಕಾರಣ ಸದ್ರಿ ಖರ್ಚು ಶಾಲೆಯ ಲೆಕ್ಕಕ್ಕೇ ಬೀಳಬೇಕಾಗುವದು.

(iv) ದಾವಾ ರಜಿಸ್ತರವು ಸೂಚಿಸಿದ ನಮೂನೆಯಲ್ಲಿ ಪುನಃ ಬರೆಯಲ್ಪಡುವದು.

(v) ನೋಟ ಮಾಡಿದೆ.

ಪೆರಾ ೨೭— ನೋಟ ಮಾಡಿದೆ.

ಪೆರಾ ೨೮ — ನೋಟ ಮಾಡಿದೆ.

ಪೆರಾ ೨೯ — ನೋಟ ಮಾಡಿದೆ.

ಪೆರಾ ೩೦— ಸದ್ರಿ ನ್ಯೂನತೆಯನ್ನು ಮ್ಯುನಿಸಿಪಲ್ ಅಕೌಂಟ್ಸ ರೂಲ್ಸ ಮತ್ತು ಬ್ಯಾಲೋಸಗಳಲ್ಲಿದ್ದ "ಚಲಾವಣೆಯಲ್ಲಿದ್ದ ಸರಕು" ಎಂಬ ಪದದ ವ್ಯಾಖ್ಯೆಯನ್ನು ದನಗಳಿಗೂ ಅನ್ವಯಿಸುವಂತೆ ದುರುಸ್ತ ಮಾಡಿ ಸರಿಪಡಿಸಲಾಗುವದು

ಪೆರಾ ೩೧ — ನೋಟ ಮಾಡಿದೆ.

ಪೆರಾ ೩೨ — ಲೋಕಲ್ ಬೋರ್ಡ ಕ್ಷೇತ್ರದೊಳಗಿಂದ ಆಸ್ಪತ್ರೆಗೆ ಬರುವ ರೋಗಿಗಳ ಸಂಬಂಧ ಲೆಕ್ಕ ಇಡುವ ಬಗ್ಗೆ ಮೆಡಿಕಲ್ ಆಫೀಸರರಿಗೆ ತಿಳಿಸಿದೆ ೧೯೪೨—೪೩ ನೇ ಸಾಲಿನ ಬಗ್ಗೆ ಇಂಥ ಗ್ರಾಂಟ ಕೇಳಿದ್ದು ಈವರೆಗೂ ಬಂದಿಲ್ಲ. ಆ ನಂತರದ ವರ್ಷಗಳ ಬಗ್ಗೂ ಲೋಕಲ್ ಬೋರ್ಡಿನ ಕಡೆಗೆ ಮಾಗಣಿ ಮಾಡಲಾಗುವದು.

ಪೆರಾ ೩೩ — ನೋಟ ಮಾಡಿದೆ,

ಪೆರಾ ೩೪ — ನೋಟ ಮಾಡಿದೆ,

ಪೆರಾ ೩೫ — ನೋಟ ಮಾಡಿದೆ. ರಿಕಾರ್ಡ ವಿಲೆವಾರಿ ನಡೆದಿದೆ. ನಾಶ ಮಾಡತಕ್ಕವುಗಳನ್ನು ಆದಷ್ಟು ಬೇಗ ನಾಶ ಮಾಡಲಾಗುವದು.

*

ಮೆ॥ ಎಕ್ಸಾಮಿನರ ಸಾಹೇಬರು ತಮ್ಮ ನಂಬರ ೨/೪ ೨೦೦೭ ತಾ. ೨೪-೧೦-೧೯೪೫ರಲ್ಲಿ ಮೆ॥ ಕಮಿಶನರ ಸಾಹೇಬರಿಗೆ ಬರೆದ ಪತ್ರ:—

೨ ಪೆರಾ ೨. (ಅ)- ೧೯೩೬—೩೭ ಮತ್ತು ೧೯೩೭—೩೮ನೇ ಒಡಿಟ್ ನೋಟಿನ ಪೆರಾ ೪ ಮತ್ತು ೬ — ರೂ. ೧೫/- ಮುದ್ದತ್ತು ಮೀರಿಗೊಟ್ಟ ಬಗ್ಗೆ ಸಮಾಧಾನಕರ ಕಾರಣಗಳು ಮುಂದೆ ಬರದಿದ್ದಲ್ಲಿ ಸದರಿ ಬಾಬ್ತನು ಸಂಬಂಧಪಟ್ಟ ಜನರಿಂದ ವಸೂಲ ಮಾಡಲಾಗಬಹುದು.

೩. ಪೆರಾ ೨ (ಗ) ೧೯೪೧-೪೨ನೇ ಸಾಲಿನ ಒಡಿಟ್ ನೋಟ ಪೆರಾ ೩೫- ಟೆಂಪಲ ಕಮಿಟಿಯ ಜಾತ್ರೆಯ ವ್ಯವಸ್ಥೆಯ ಬಗ್ಗೆನೇ ತಗಲಿದ ಖರ್ಚು ಎಷ್ಟೆಂದು ಲೆಕ್ಕ ಮಾಡಿ ಬೇಗನೇ ಅದನ್ನು ವಸೂಲ ಮಾಡಲಿಕ್ಕೆ ಮ್ಯುನಿಸಿಪಾಲಿಟಿಗೆ ತಿಳಿಸಬೇಕು.

೪. ಪೆರಾ ೮. ಸದ್ರಿ ರಕಮಿನ ವಸೂಲಿ ಬಿಡಬಹುದೋ ಹೇಗೆಂಬುದನ್ನು ತಾವೇ ವಿಚಾರ ಮಾಡತಕ್ಕದ್ದದೆ.

೫. ಪೆರಾ ೧೧, ತಮ್ಮ ಮಂಜೂರಿಯಿಂದ ಸ್ಪಷ್ಟ ನಿಯಮಗಳನ್ನು ತಯಾರಿಸಲಿಕ್ಕೆ ಮ್ಯುನಿಸಿಪಾಲಿಟಿಗೆ ತಿಳಿಸೋಣಾಗಬಹುದು.

೬. ಪೆರಾ ೧೭, (ಡ) ಸರಕಾರದ ಸ್ಪಷ್ಟ ಮಂಜೂರಿಯಿಲ್ಲದೆ ಪ್ರಸೂತಿಯ ಫೀ ರಕಮು ಬಿಟ್ಟು ಬಿಡಲಿಕ್ಕೆ ಮ್ಯುನಿಸಿಪಾಲಿಟಿಗೆ ಅಧಿಕಾರವಿಲ್ಲ. ಸದ್ರಿ ಫೀ ವಸೂಲ ಮಾಡಬೇಕೆಂದಾಗಲಿ, ಮ್ಯು॥ಯು ಹೇಳುವಂತೆ ವಿನಾಯತಿ ಮಾಡುವದಾದಲ್ಲಿ ಸರಕಾರದ ಮಂಜೂರಿ ಪಡೆಯಬೇಕೆಂದಾಗಲಿ ತಿಳಿಸೋಣಾಗಬಹುದು.

೭. ಬಾಕಿ ಉಳಿದ ಪೆರಾಗ್ರಾಫಗಳ ವಿಷಯದಲ್ಲಿ ತಮ್ಮ ಹೇಳಿಕೆಯನ್ನು ಮೆ॥ ಪ್ರಸಿಡೆಂಟ ಸಾಹೇಬರ ಕಡೆಗೆ ಮುಂದಿನ ವ್ಯವಸ್ಥೆಯ ಬಗ್ಗೆ ನೇರವಾಗಿ ತಿಳಿಸಲಾಗುವದು.

ಸದರಿ ಒಡಿಟ್ ನೋಟು, ಅದಕ್ಕೆ ಮ್ಯುನಿಸಿಪಾಲಿಟಿಯಿಂದ ಕೊಟ್ಟ ಉತ್ತರ ಮತ್ತು ಆ ಕುರಿತು ಮೆ॥ ಎಕ್ಸಾಮಿನರ ಸಾಹೇಬರ ಅಂಬೋಣ ಇವುಗಳು ಸಾರ್ವಜನಿಕರ ತಿಳುವಳಿಕೆಯ ಬಗ್ಗೆ ಲೋಕಲ್ ಫಂಡ ಒಡಿಟ್ ಎಕ್ಟ ಕಲಂ ೧೦ (೪) ರನ್ವಯ ಪ್ರಕಟಿಸಲಾಗಿದೆ.

ಶಿರಸಿ ಮ್ಯುನಿಸಿಪಲ್ ಕಚೇರಿ,
ಶಿರಸಿ, ತಾ. ೨೬-೧೧-೧೯೪೫.

T. M. MOTENSAR.
ಪ್ರಸಿಡೆಂಟ, ಶಿರಸಿ ಮ್ಯುನಿಸಿಪಾಲಿಟಿ.

ಆಜ್ಞೆ.

ಹಣಕಾಸಿನ ಖಾತೆ, (ಪೂರೈಕೆ)
ಮುಂಬಯಿ ಕೋಟೆ, ತಾ. [illegible]-೧೧-೧೯೪೫.

ಹಿಂದುಸ್ಥಾನ ರಕ್ಷಣ ನಿಯಮಗಳನ್ವಯ

ನಂ. ೩೧:— ಹಿಂದುಸ್ಥಾನ ಸಂರಕ್ಷಣ ನಿಯಮಾವಳಿಯ ೮೧ನೇ ನಿಯಮದ ೨ನೇ ಉಪ-ನಿಯಮದಂತೆ ದೊರೆತ ಅಧಿಕಾರವನ್ನುಪಯೋಗಿಸಿ ಹಾಗೂ ಹಣಕಾಸಿನ ಖಾತೆ (ಪೂರೈಕೆ)ಯವರು ತಾ. ೨೨-೦೨-೧೯೪೪ಕ್ಕೆ ಹೊರಡಿಸಿದ ನಂ ೩೧ (ಅ) ಎಂಬ ಸರಕಾರಿ ಹುಕುಮನ್ನು ರದ್ದುಗೊಳಿಸಿ ಮುಂಬಯಿ ಸರಕಾರದವರು ಈ ಮೂಲಕ ಹುಕುಮು ಮಾಡುವದೇನೆಂದರೆ:- ತಾ ೧೪-೧೧-೧೯೪೫ರಿಂದ ಮುಂದೆ ಯಾವ ಮನುಷ್ಯನೂ ಮುಂಬಯಿ ಪ್ರಾಂತದೊಳಗಿನ ಯಾವದೇ ಸ್ಥಳದಿಂದ ೫ ರತ್ತಲುಗಳಿಂತ ಹೆಚ್ಚಿಗೆ ಬೆಲ್ಲವನ್ನು ಮಾರ್ಗದಿಂದ, ರೇಲ್ವೆಯಿಂದ, ಜಲ-ಮಾರ್ಗವಾಗಿ ಇಲ್ಲವೆ ಸಮುದ್ರ ಮಾರ್ಗವಾಗಿ ಸದ್ರಿ ಪ್ರಾಂತದ ಹೊರಗಿರುವ ಹಿಂದುಸ್ಥಾನದೊಳಗಿನ ಯಾವದೇ ಸ್ಥಳಕ್ಕೆ— ಇದಕ್ಕೆ ಜೋಡಿಸಿರುವ ಪರಿಶಿಷ್ಟದಲ್ಲಿ ಕಾಣಿಸಿರುವ ಹಿಂದೀ ಸಂಸ್ಥಾನಗಳು ಮತ್ತು ಪ್ರದೇಶಗಳು ಇವುಗಳೊಳಗಿನ ಸ್ಥಳಗಳನ್ನು ಬಿಟ್ಟು ಬೇರೆ ಯಾವದೇ ಸ್ಥಳಕ್ಕೆ— ಮುಂಬಯಿ ಶಹರ ಮತ್ತು ಮುಂಬಯಿ ಉಪನಗರ ಜಿಲ್ಲೆಯ ಮಟ್ಟಿಗೆ ಡೈರೆಕ್ಟರ ಆಫ ಸಿವ್ಹಿಲ್ ಸಪ್ಲಾಯಿಸ ಅಥವಾ ಅಸಿಸ್ಟಂಟ ಡೈರೆಕ್ಟರ ಆಫ್ ಸಿವ್ಹಿಲ್ ಸಪ್ಲಾಯ್ಸ್ ಅಥವಾ ಮುಂಬಯಿಯ ಸಪ್ಲಾಯ ಕಮಿಶನರರ ಕಚೇರಿಯಲ್ಲಿ ಪರವಾನೆ ಕೊಡುವ ಬಗ್ಗೆ ನೇಮಿಸಿದ ಸ್ಪೆಶಲ್ ಆಫೀಸರ ಇವರ ಹಾಗೂ ಇತರ ಭಾಗಗಳಲ್ಲಿ ಆಯಾ ಭಾಗದ ಜಿಲ್ಲಾ ಮೆಜಿಸ್ಟ್ರೇಟರ ಅಪ್ಪಣೆ-ಚೀಟಿ ಪಡೆಕೊಳ್ಳದೆ ಮತ್ತು ಆ ಅಪ್ಪಣೆ ಚೀಟಿಯಲ್ಲಿ ವಿಧಿಸಿರುವ ಕರಾರುಗಳನ್ನುಲ್ಲಂಘಿಸಿ ಒಯ್ಯತಕ್ಕದ್ದಲ್ಲ.

ಆದರೆ ಈ ಆಜ್ಞೆಯೊಳಗಿನ ಯಾವದೇ ವಿಧಾನವು ಸರಕಾರದವರು ಯಾ ಸರಕಾರದ ಆಫೀಸರರು ಬೆಲ್ಲ ಒಯ್ಯುವದಕ್ಕೆ ಇಲ್ಲವೆ ಸೈನ್ಯ ಖಾತೆಯ ಕ್ರೆಡಿಟ್ ನೋಟ್ಸಗಳನ್ವಯ ಬೆಲ್ಲ ಒಯ್ಯುವದಕ್ಕೆ ಅನ್ವಯಿಸಲಾರದು.

ಈ ಆಜ್ಞೆಯನ್ನು ಉಲ್ಲಂಘಿಸಿದ ಅಪರಾಧದ ತನಿಖೆ ಮಾಡುವ ಯಾವದೇ ಕೋರ್ಟಿನವರು, ಯಾವ ಬೆಲ್ಲದ ಸಂಗ್ರಹದ ಸಂಬಂಧವಾಗಿ ಈ ಆಜ್ಞೆಯ ಉಲ್ಲಂಘನೆಯಾಗಿರುವದೆಂದು ಸಿದ್ಧವಾಗುತ್ತದೋ ಆ ಬೆಲ್ಲದ ಸಂಗ್ರಹವನ್ನು, ಅದರ ಆವರಣ-ಪ್ರಾವರಣಗಳ ಸಹಿತ, ಸರಕಾರ-ಜಮಾ ಮಾಡಲು ವಿಧಿಸಬಹುದು.

ಟಿಪ್ಪಣಿ.— ಈ ಹುಕುಮಿನ ಅರ್ಥ ಮಾಡುವಾಗ ಮುಂಬಯಿ ಉಪನಗರ ಜಿಲ್ಲೆ ಅಂದರೆ ತಾ. ೧-೧೦-೧೯೪೫ರ ಮುನ್ನಾಣ ದಿನ ಘಟಿಸಲ್ಪಟ್ಟಿರುವ ಮುಂಬಯಿ ಉಪನಗರ ಜಿಲ್ಲೆ ಎಂದು ತಿಳಿಯತಕ್ಕದ್ದು.

ಪರಿಶಿಷ್ಟ.

ದಕ್ಷಿಣೀ ಸಂಸ್ಥಾನಗಳು:— ೧ ಕೊಲ್ಹಾಪುರ, ೨ ಅಕ್ಕಲಕೋಟೆ, ೩ ಭೋರ, ೪ ಜಂಜಿರಾ, ೫ ಜಮಖಂಡಿ, ೬ ಕುರುಂದವಾಡ (ಸೀನಿಯರ), ೭ ಕುರುಂದವಾಡ (ಜೂನಿಯರ), ೮ ಮಿರಜ (ಸೀನಿಯರ), ೯ ಮಿರಜ (ಜೂನಿಯರ), ೧೦ ಮುಧೋಳ, ೧೧ ಫಲಟಣ, ೧೨ ಸವಣೂರ, ೧೩ ರಾಮದುರ್ಗ, ೧೪ ಸಾವಂತವಾಡಿ, ೧೫ ಸಾಂಗಲಿ, ೧೬ ವಾಡಿ ಜಹಗೀರ, ೧೭ ಔಂಧ, ೧೮ ಜತ.

ಗುಜರಾಥಿ ಸಂಸ್ಥಾನಗಳಲ್ಲಿ ಸಮಾವಿಷ್ಟವಾಗುವ ಸಂಸ್ಥಾನಗಳೂ, ಪ್ರದೇಶಗಳೂ:— ೧ ಬಾಲಾಸಿನೋರ, ೨ ಬಾಂಸದಾ, ೩ ಬಾರಿಯಾ, ೪ ಕೆಂಬೇ, ೫ ಛೋಟಾ ಉದೇಪುರ, ೬ ಧರಮಪುರ, ೭ ಜವ್ಹಾರ, ೮ ಲುನವಾಡಾ, ೯ ರಾಜಪಿಪಲಾ, ೧೦ ಸಚೀನ, ೧೧ ಸಾಂತ, ೧೨ ಜಂಬುಘೋಡಾ, ೧೩ ಸುರಗಣಾ, ೧೪ ಡಾಂಗ.

ಬಡೋದೆ ಸಂಸ್ಥಾನವೂ ಅದಕ್ಕೆ ಸಂಬಂಧಪಟ್ಟ ಪ್ರದೇಶಗಳೂ:— ೧ ಅಂಬಲಿಯಾರ ಸಂಸ್ಥಾನ, ೨ ಬಂಟವಾ ಸಂಸ್ಥಾನ, ೩ ದಾಭಾ ತಾಲೂಕ, ೪ ದೇಢ್ರೋಟಾ ತಾ., ೫ ದೇವದಾರ ತಾ., ೬ ದೇರೋಲ, ೭ ಘೋಡಸರ ತಾ., ೮ ಹಾಡೋಲ ತಾ., ೯ ಕಾಡೋಲಿ ತಾ., ೧೦ ಕಾಟೋಸನ ತಾ., ೧೧ ಖಡಾಳ ಸಂಸ್ಥಾನ, ೧೨ ಖೇಡಾವಾಡಾ ತಾ., ೧೩ ಮಾಲಪುರ ಸಂಸ್ಥಾನ, ೧೪ ಮಾನಸಾ ಸಂಸ್ಥಾನ, ೧೫ ಪಟಡಿ ಸಂಸ್ಥಾನ, ೧೬ ಪೇಥಾಪುರ ತಾ., ೧೭ ಪ್ರೇಮಪುರ ತಾ., ೧೮ ಪುನಾದ್ರಾ ತಾ., ೧೯ ರಾಣಾಸನ ತಾ., ೨೦ ಸುದಾಸಣಾ ಸಂಸ್ಥಾನ, ೨೧ ಥಾರಾ ತಾ., ೨೨ ಥರಾದ ಸಂಸ್ಥಾನ, ೨೩ ವಾಲ್ಸನಾ ತಾ., ೨೪ ವಾಸನೋಡ ಸಂಸ್ಥಾನ, ೨೫ ವರಸೋಡಾ ಸಂಸ್ಥಾನ, ೨೬ ವಾಸ್ನಾ ತಾ., ೨೭ ವಿರಲಗಢ ತಾ., ೨೮ ವಾವ ಸಂಸ್ಥಾನ, ೨೯ ಜೈನಾಬಾದ ತಾ., ೩೦ ಆಗರ ಸಂಸ್ಥಾನ, ೩೧ ಭಾದರ್ವಾ ಸಂಸ್ಥಾನ, ೩೨ ಘೇಲೋಡಿಯಾ ಇಸ್ಟೇಟ, ೩೩ ಭಾಲಿಯಾರ ಸಂಸ್ಥಾನ, ೩೪ ಚೋರಂಗಲಾ ಇಸ್ಟೇಟ, ೩೫ ಮಾಂಡವಾ ಸಂಸ್ಥಾನ, ೩೬ ನಾಸವಾಡಿ ಸಂಸ್ಥಾನ, ೩೭ ಪಲಾಸ್ನಿ ಸಂಸ್ಥಾನ, ೩೮ ಸಾನೋರ ಸಂಸ್ಥಾನ, ೩೯ ಸಿಹೋರಾ ಸಂಸ್ಥಾನ, ೪೦ ಉಚಾದ ಸಂಸ್ಥಾನ, ೪೧ ಉಮೇಟಾ ಸಂಸ್ಥಾನ, ೪೨ ವಾಜಿರಿಯಾ ಸಂಸ್ಥಾನ, ೪೩ ವನಮಾಲಾ ಇಸ್ಟೇಟ, ೪೪ ಮಾಗೋಡಿ ತಾ., ೪೫ ತೇಜಪುರ ತಾ., ೪೬ ಭಾಲುಸಣಾ ತಾ., ೪೭ ಖಡೋಲ ತಾ., ೪೮ ಸತಲಾಸ್ನಾ ತಾ., ೪೯ ಇಲೋಲ ತಾ., ೫೦ ರಾಬಾಜ ತಾ., ೫೧ ವರಂಪುರ ತಾ., ೫೨ ಬಾದವಾಲಾ ತಾ., ೫೩ ಬಿಲಖಾ ಸಂಸ್ಥಾನ, ೫೪ ಚಂದರಾಜಪುರ ತಾ., ೫೫ ದಾಂಗವಾಡಾ ತಾ., ೫೬ ಹಡಾಲಾ ತಾ., ೫೭ ಹರಸುರಪುರ ತಾ., ೫೮ ಖಾಬಾಗಸ್ರಾ ತಾ., ೫೯ ಕೋಟಡ ಸೀಲಾ ಮತ್ತು ತಾ., ೬೦ ನವಿನವನಗರ ತಾ., ೬೧ ಧುಂಬಾಲಾ ತಾ., ೬೨ ವಡಿಯಾ ಸಂಸ್ಥಾನ, ೬೩ ಸಾಂಟೀಪಾ ಮೇವಾಸ, ೬೪ ಪಾಂಡು ಮೇವಾಸ, ೬೫ ಕಾಟೋಸನ ಠಾಣಾ, ೬೬ ಛುಂದ್ರುಮಾವಾಡಾ ಠಾಣಾ, ೬೭ ದಾಸದಾ ಠಾಣಾ, ೬೮ ಗಢಾಡಾ ಠಾಣಾ, ೬೯ ಕೆಂಪ್ರೇಜ ಠಾಣಾ, ೭೦ ದೇವದಾರ ಠಾಣಾ (ಸುಯಿಗಾಂವ ಸಹಿತ), ೭೧ ಬಾಬರಾ ಠಾಣಾ, ೭೨ ಲಖಪದಾರ ಠಾಣಾ, ೭೩ ದೇವಾನ

× × × × ×

ಮುಂಬಯಿಯ ಗವ್ಹರ್ನರರ ಅಜ್ಞೆಯಂತೆ,

A. D. GORWALA,
ಸರಕಾರದ ಸೆಕ್ರೆಟರಿ.

ನೋಟೀಸು.

ಜವಳ ವರ್ತಕರು ನನ್ನ ಪರವಾನೆ ಶಿವಾಯ ಮಿಲ್ಲಿನ ಅರಿವೆ ಈ ಜಿಲ್ಲೆಯ ಹೊರಗೆ ಖರೀದಿಸಿದರೆ ಸದರಿ ಅರಿವೆ ನನ್ನ ಜಿಲ್ಲೆಗೆ ಬಂದ ಕೂಡಲೇ ಅವರು ಆ ಮಾಲಿನ ಡಿಕ್ಲೇರೇಶನ್ ಕೊಡಬೇಕು. ಮತ್ತು ನನ್ನ ಪರವಾನೆ ದೊರೆತ ವಿನಹ ಸದರಿ ಅರಿವೆ ವಿಕ್ರಿ ಮಾಡಬಾರದು.

Karwar,
3-12-1945.

V. NANJAPPA,
District Magistrate, Kanara.

ಲೆಕ್ಕ-ತಪಾಸಕರ ಆಕ್ಷೇಪಗಳಿಗೆ ಶಿರ್ಶಿ ಮ್ಯುನಿಸಿಪಾಲಿಟಿಯ ಪ್ರತ್ಯುತ್ತರಗಳು.

ಕಳೆದ ವಾರದ "ವೃತ್ತ"ದಲ್ಲಿ ಪ್ರಕಟವಾದ ಲೆಕ್ಕ-ತಪಾಸಕರ ಆಕ್ಷೇಪಗಳಿಗೆ ಶಿರ್ಶಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ ಸಾಹೇಬರು ನಂಬರ ೫೭೯ ತಾ. ೬-೧೦-೧೯೪೫ನೇ ಪತ್ರ ಬರೆದು ಕೊಟ್ಟ ಉತ್ತರಗಳು:—

೨. (ಅ) ೧೯೩೬-೩೭ ಮತ್ತು ೧೯೩೭-೩೮ನೇ ಆಡಿಟ್ ನೋಟಗಳ ಪೆರಾ ೪ ಮತ್ತು ೬. (ಇಬ್ರಾಹಿಮ ಇಸ್ಮಾಯಿಲ ಇವರಿಂದ ನೆಲ ಭಾಡಿಗೆಯ ವಸೂಲಿ ಕುರಿತು) ಸದರಿ ಬಾಕಿದಾರರ ಮೇಲೆ ಆವೇಳೆ ಡಿಕ್ರಿ ಆಗಿದೆ. ಡಿಕ್ರಿಯಲ್ಲಿ ಫೈಸಲಾದ ಎಲ್ಲ ಹಣ ವಸೂಲಾದ ಬಳಿಕ ಈ ರಕಮು ಕಳೆದು ಹಾಕುವ ಬಗ್ಗೆ ವಿಚಾರ ಮಾಡಲಾದೀತು. ೧೯೩೬-೩೭ ಮತ್ತು ೧೯೩೭-೩೮ನೇ ವರ್ಷಗಳ ಬಾಬ್ತು ಬಾಕಿ ಉಳಿದ ಸದರಿ ರೂ ೧೫ ಆಡಿಟ್‌ನಲ್ಲಿ ಸೂಚಿಸಿದಂತೆ ೧೯೪೦-೪೧ರಲ್ಲಿ ಬೀಳು ಕೊಟ್ಟಿಗಳೇ ಮುದ್ದತ್ತು ಮೀರಿದ್ದು ಕಂಡುಬರುತ್ತದೆ.

(ಬ) ಪೆರಾ ೧೬. (ನಿಕೃಷ್ಟ ಸ್ಥಿತಿಯ ಜನರಿಗೆ ನಾಯಿ ಕಚ್ಚಿದಾಗ ಉಪಚಾರ ಮಾಡಿದ ಬಗ್ಗೆ ವಸೂಲಿ ಕುರಿತು) ಮೆ|| ಸಿವ್ಹಿಲ ಸರ್ಜನ ಸಾಹೇಬ ಕಾರವಾರ ಇವರಿಗೆ ಆ ನಂತರದ ಈ ಸಂಬಂಧ ಖರ್ಚು ರಿಫಂಡ ಮಾಡಲು ವಿನಂತಿಸಿದೆ.

(ಕ) ಪೆರಾ ೨೬. (ಕಂಪೆನಸೇಶನ್ ತೆಗೆದುಕೊಂಡು ಮ್ಯುನಿಸಿಪಲ್ ಕಾಯಿದೆಯ ೬೦ದ ನಡೆದ ಬಗ್ಗೆ ಆದ ಪ್ರಕರಣಗಳನ್ನು ರಾಜಿ ಮಾಡಿಕೊಂಡ ಕುರಿತು.) ಈ ಸಂಗತಿಯಲ್ಲಿ ಸಲಹೆ ಕೊಡುವರೆ ವಕೀಲರಿಗೆ ತಿಳಿಸಲಾಗಿದೆ.

(ಡ) ಪೆರಾ ೨೮ (ಹಂದರ ಫೀ ರಜಿಸ್ಟರ ಇಡುವ ಕುರಿತು) ೧೯೪೪ ೪೫ರಿಂದ ಸೂಚಿತವಾದ ನಮೂನೆಯಲ್ಲಿ ಸದರಿ ರಜಿಸ್ಟರ ಇಡಲಾಗಿದೆ.

(ಈ) ಪೆರಾ ೩೦ (ಸಿರ್ಟಿನ ರಕಮು ಹೆಚ್ಚು ಕಡಿಮೆ ಮಾಡಿದ್ದು ಮಂಜೂರ ಮಾಡಿಕೊಳ್ಳುವ ನೋಟಿಸು ಖರ್ಚ ಮಾಡದಿರುವ ಕುರಿತು) ಈ ಬಗ್ಗೆ ಸೆಕ್ರೆಟರಿಯವರಿಗೆ ತಿಳಿಸಿದೆ.

(ಫ) ಪೆರಾ ೩೩ (ಸಂಸ್ಥೆಗಳಿಗೆ ಗ್ರ್ಯಾಂಟ ಕೊಡುವ ಮುಂಚೆ ಅವುಗಳ ಲೆಕ್ಕ-ತಪಾಸಣೆ ಕುರಿತು) ನೋಟ ಮಾಡಿಟ್ಟಿದೆ.

(ಗ) ಪೆರಾ ೩೫ (ಮಾರಿಕಾಂಬಾ ದೇವಸ್ಥಾನದಿಂದ ನಡೆಯುವ ಜಾತ್ರೆಯಲ್ಲಿ ಮ್ಯು||ಯ ನೌಕರರು ಕೆಲಸ ಮಾಡಿದ ಬಗ್ಗೆ ಹಣ ವಸೂಲ ಮಾಡುವ ಬಗ್ಗೆ) ಜಾತ್ರೆಯ ಹೊತ್ತಿನಲ್ಲಿ ಇಡೀ ಊರನ್ನು ಆರೋಗ್ಯ ಸ್ಥಿತಿಯಲ್ಲಿ ಇಟ್ಟುಕೊಳ್ಳುವ ಕೆಲಸ ತಮ್ಮದಾಗಿರದೆ ಮ್ಯುನಿಸಿಪಾಲಿಟಿಯದಿರುತ್ತದೆಂದು ಮೊಕ್ತೇಸರರು ವಾದಿಸುತ್ತಾರೆ. ಅವರ ಅಂಬೋಣವು ಕೆಲಮಟ್ಟಿಗೆ ಸಾಧುವಾಗುತ್ತದೆ. ಸದ್ರಿ ರೂ ೧೯೩ರಲ್ಲಿ ಜಾತ್ರೆಯ ಕೆಲಸಕ್ಕೆ ಪ್ರತ್ಯಕ್ಷ ಸಂಬಂಧವಿಲ್ಲದ ನಾಕೇದಾರ ಮುಂತಾದವರಿಗೆ ಹೆಚ್ಚಿನ ಕೆಲಸದ ಬಗ್ಗೆ ಕೊಟ್ಟ ಎಲ್ಲವನ್ನ ಕಡಿದೆ ಕಾರಣ ದೇವಸ್ಥಾನದಿಂದ ವಸೂಲ ಮಾಡಬೇಕೆಂಬ ಸೂಚನೆ ಒಪ್ಪಬಹುದು.

(ಹ) ೩೬ (ಮ್ಯುನಿಸಿಪಲ್ ಹೈಸ್ಕೂಲಿನ ಆಯ-ವ್ಯಯ ಬಾಬಿಗೊಳಿಸುವದು.) ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರಿಂದ ಬರುವ ಹೆಚ್ಚಿನ ಉತ್ಪನ್ನದಿಂದಲೂ, ಸ್ಟೇಟಿನ ಮಾಪಗಾರ ಯಾ ಅದರ ಸಮೀಪದ ಪಗಾರ ಸಿಗುವ ಹಳೇ ಶಿಕ್ಷಕರು ನಿವೃತ್ತರಾದ್ದರಿಂದಲೂ ಸ್ಥಿತಿಯು ಈಗ ಸುಧಾರಿಸಿದೆಂದು ಹೇಳಲಿಕ್ಕೆ ಸಮಾಧಾನವಾಗುತ್ತದೆ. ಶಕ್ಯವಾದಲ್ಲಿ ದೇಣಿಗೆಗಳನ್ನು ಕೂಡಿಸಲು ಯತ್ನಿಸಬೇಕೆಂದು ಸ್ಕೂಲ ಕಮಿಟಿಗೆ ಬಿನ್ನವಿಸಿದೆ.

(ಯ) ಮೆ|| ಆಸಿಸ್ಟಂಟ ಎಗ್ಝಾಮಿನರ ಸಾ||ರ ತಪಾಸಣೆ ನೋಟು. ತಾ. ೧೦ ಜನವರಿ ೧೯೪೪ ನಂ ಎಲ್ ೧೪/೩೪-ಎ —೪೬೧೦

(1) ಪೆರಾ ೩ (ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಕೋ. ಬೇಂಕ ಮತ್ತು ಶಿರ್ಶಿ ಅರ್ಬನ್ ಕೋ೦. ಬೇಂಕ) ಈ ಬೇಂಕುಗಳಲ್ಲಿ ಮ್ಯು||ಯ ಠೇವುಗಳನ್ನು ಇಡುವ ಮಿತಿಯನ್ನು ಅನುಕ್ರಮವಾಗಿ ರೂ. ೨೫೦೦೦ ಮತ್ತು ೩೦೦೦೦ಕ್ಕೆ ಬೆಳಿಸಲಾಗಿದೆ. ಯಾವದೇ ಕಾರಣದಿಂದ ಸದ್ರಿ ಮಿತಿ ಮೀರದಂತೆ ಸೆಕ್ರೆಟರಿಯವರು ನೋಡಿಕೊಳ್ಳಬೇಕು.

(ii) ಸದ್ರಿ ಹಣ ಬೇಂಕಿನಿಂದ ತೆಗೆದು ಹೆಚ್ಚಿಗೆ ಬಡ್ಡಿ ಬರುವಂಥ ಸೆಕ್ಯೂರಿಟಿಗಳಲ್ಲಿ ಹಾಕುವದರೊಳಗೆಂದು ದೇವಸ್ಥಾನದ ಮೊಕ್ತೇಸರರ ಕಡೆಗೆ ಹೇಳಲಾಗಿ ಅವರು ಒಪ್ಪಲಿಲ್ಲ. ೧೯೨೬ರಲ್ಲಿ ಪೂರ್ಣ ವಿಚಾರ ಮಾಡಿ ಅವರು ಸದ್ರಿ ಹಣ ಸದ್ರಿ ಬೇಂಕಿನಲ್ಲಿ ಇಟ್ಟಿರುತ್ತಾಗಿ ಹೇಳುತ್ತಾರೆ. ಕಾರಣ ಹೈಸ್ಕೂಲ ನಡಿಸುವ ಬಗ್ಗೆ ಹೆಚ್ಚಿಗೆ ಬಡ್ಡಿ ಪಡೆಯುವ ಉದ್ದೇಶದಿಂದ ದಾನ ಕೊಟ್ಟವರ ಅನುಮತಿಯಿಲ್ಲದೆ ಸೆಕ್ಯೂರಿಟಿಗಳಲ್ಲಿ ಸದ್ರಿ ಹಣ ತೊಡಗಿಸುವದು ಕರಾರಿಗೆ ವಿರುದ್ಧವಾಗುವದೋ ಏನೆಂದು ಕಾಯ್ದೆ ಸಲಹೆ ಕೇಳಲಾಗಿದೆ.

ಭಾಗ ೨ — ಚಾಲ್ತಿ ಆಡಿಟ್.

ಪೆರಾ ೩ ಮತ್ತು ೪. - ನೋಟ ಮಾಡಿದೆ.

ಪೆರಾ ೬ ಮತ್ತು ೭ - ತೆಗೆದು ಹಾಕಿದೆ.

ಪೆರಾ ೭.- ಮುಂದೆ ಮಾರ್ಗದರ್ಶನಕ್ಕಾಗಿ ನೋಟ ಮಾಡಿದೆ.

ಪೆರಾ ೮ - ಸದರಿ ಖರ್ಚು ಮ್ಯುನಿಸಿಪಲ್ ಆಡಳಿತಕ್ಕೆ ಪ್ರತ್ಯಕ್ಷ ಸಂಬಂಧಪಟ್ಟಿದ್ದಿಲ್ಲದಿದ್ದರೂ ಈ ಪ್ರಶ್ನೆ ಇಡೀ ಹಿಂದುಸ್ಥಾನಕ್ಕೆ ಮಹತ್ವದ್ದಿತ್ತು. ಮತ್ತು ಆ ಕಾರಣದಿಂದ ಹಿಂದುಸ್ಥಾನದ ಮೂಲೆಮೂಲೆಗಳಿಂದ ನೇ|| ವಾಯಿಸರಾಯ ಸಾಹೇಬರ ಕಡೆಗೆ ಮಹಾತ್ಮಾ ಗಾಂಧಿಯವರ ಬಿಡುಗಡೆಯ ಬಗ್ಗೆ ತಂತಿಗಳು ಹೋಗುತ್ತಿದ್ದಾಗ ಈ ಮ್ಯುನಿಸಿಪಾಲಿಟಿಯು ಅಲಿಪ್ತ ಇರುವದು ಶೋಭಿಸುತ್ತಿರಲಿಲ್ಲ. ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ಸದ್ರಿ ಪ್ರಶ್ನೆ ಮ್ಯುನಿಸಿಪಲ್ ಆಡಳಿತಕ್ಕೆ ಸಂಬಂಧಿಸಿದ್ದೆಂಬದು ನಿಃಸಂಶಯ.

ಪೆರಾ ೯-. ನೋಟ ಮಾಡಿದೆ. ಸದ್ರಿ ಹಣ ರಿಫಂಡ ಕೊಡಲು ಮೆ|| ಸಿವ್ಹಿಲ್ ಸರ್ಜನ್ ಕಾರವಾರ ಇವರಿಗೆ ವಿನಂತಿಸಿದೆ.

ಪೆರಾ ೧೦ - ನೋಟ ಮಾಡಿದೆ. ಮ್ಯು||ಯವರು ಈಗ ಆಸ್ಪತ್ರೆಯಲ್ಲಿ ನೀರು ಹಾಕುವವಳನೊಂದು ಸ್ಥಳ ನಿರ್ಮಾಣ ಮಾಡಬೇಕೆಂದು ಠರಾಯಿಸಿದ್ದಾರೆ.

ಪೆರಾ ೧೧ - ಮ್ಯು||ಯವರು ಈಗ ಮುಂಬಯಿ ಸಿವ್ಹಿಲ ಸರ್ವಿಸ ರೂಲ್ಸುಗಳನ್ನು (ಕಾಲಕಾಲಕ್ಕೆ ದುರುಸ್ತಿ ಆದಂತೆ) ಅಂದರೆ ಹಳಬರಿಗೆ ಹಳೇ ರೂಲ್ಸುಗಳನ್ನು ಹಾಗೂ ಹೊಸಬರಿಗೆ ಹೊಸ ರೂಲ್ಸುಗಳನ್ನು ಲಾಗೂ ಮಾಡಬೇಕಾಗಿ ನಿಶ್ಚಯಿಸಿದ್ದಾರೆ.

ಪೆರಾ ೧೩.- ಮೆಸರ್ಸ ತಿರುಮಾನಿಕರ ಸ್ಟೋರ್ಸ ಇವರ ಕಡೆಯಿಂದ ಇನ್ನು ಮುಂದೆ ಏನೂ ಖರೀದಿಸಬಾರದಾಗಿ ಮ್ಯು||ಯು ಠರಾಯಿಸಿದೆ. ಕಾರಣ ಮಂಜೂರಿ ಕೇಳುವದವಶ್ಯವಿಲ್ಲ.

ಪೆರಾ ೧೪.- ಸರಕಾರಿ ರಾಜ್ಯ ಎಫ್. ಡಿ. ನಂ ೯೧೨೪ ತಾ. ೨೮ ಮೇ ೧೯೩೪ರ ಕಡೆಗೆ ಮುಂಬಯಿ ಪ್ರೊವ್ಹಿನ್ಸಿಯಲ್ ಲ್ಯಾಂಡ ಮೊರ್ಟಗೇಜ ಬೇಂಕಿನ ಲಕ್ಷ ಎಳೆದಿತ್ತು. ಆದರೆ ಸರಕಾರದವರು ಸದ್ರಿ ಸವಲತ್ತು ಇತ್ತಲಾಗಿ ಹಿಂದೆ ತೆಗೆದುಕೊಂಡಿದ್ದಾರಾಗಿ ಬೇಂಕಿನ ಮೆನೇಜರರು ತಿಳಿಸುತ್ತಾರೆ.

ಪೆರಾ ೧೫.- ಮನೆಗಳಿಗೆ ಗರೇಜು, ಶಾಯಖಾನೆ ಮುಂತಾದವುಗಳನ್ನು ಜೋಡಿಸಿದಾಗ ಆಕರಣಿ ಹೆಚ್ಚಿಸಬೇಕೆಂಬದರ ಕಡೆಗೆ ಮೆನೇಜಿಂಗ ಕಮಿಟಿಯವರ ಲಕ್ಷ ಎಳೆದಿದೆ. ಸೂಚನೆ ಇನ್ನು ಮುಂದೆ ಅನುಸರಿಸಲ್ಪಡುವದು.

ಪೆರಾ ೧೬ - ಮನೆ ನಂ ೩೦೫ (ವಾರ್ಡ ನಂ ೧) ನೇದರಲ್ಲಿ ೪ ಬಿಡಾರುಗಳಿದ್ದು ಬೇರೆ ಬೇರೆ ಕುಟುಂಬದವರು ಅದರಲ್ಲಿದ್ದಾರೆ. ಸದ್ರಿ ಬಿಡಾರಗಳಿಗೆ ಪ್ರತ್ಯೇಕವಾಗಿ ನಂ. ೨೫೬೧, ೨೫೬೨, ೨೫೬೩ ಮತ್ತು ೨೫೬೪ ಹಾಕಿರುವದರಿಂದ ಇದು ವ್ಯಕ್ತವಾಗುತ್ತದೆ. ಹೀಗಿರುವದರಿಂದ ಈ ನಾಲ್ಕೂ ಬಿಡಾರಗಳನ್ನು ಒಂದೇ ಮನೆಯೆಂದು ಆಕರಣಿ ಮಾಡುವದು ಯುಕ್ತವಾಗಲಿಕ್ಕಿಲ್ಲ.

ಪೆರಾ ೧೭ - ನೋಟ ಮಾಡಿದೆ

ಪೆರಾ ೧೮.- **ಆಸ್ಪತ್ರೆ ಲೆಕ್ಕ**:- ಈ ಕೆಳಗಿನ ಪೋಟ ಪೆರಾಗಳ ಬಗ್ಗೆ ರಿಪೋರ್ಟ ಮಾಡುವರೆ ಮೆಡಿಕಲ್ ಆಫೀಸರ ಸಾ||ರಿಗೆ ತಿಳಿಸಿದ್ದಕ್ಕೆ ಅವರು ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ:—

(ಅ) ಊರಲ್ಲಿ ಸುಸ್ಥಿತ ವೈದ್ಯಕೀ ಜನರು ಇರುವದರಿಂದ ಆಸ್ಪತ್ರೆಗೆ ಸ್ಥಿತಿವಂತ ಹೊರರೋಗಿಗಳು ಬರುವದಿಲ್ಲ.

(ಬ) ನಿರ್ದಿಷ್ಟ ಸಂಗತಿಗಳನ್ನು ಹೇಳದ್ದರಿಂದ ಸ್ಥಿತಿವಂತ ರೋಗಿ ಯಾರೆಂಬದು ಹೇಳಬರದು. ಉಪಚಾರ ಹೊಂದಿದವರ ರಜಿಸ್ಟರದಲ್ಲಿ ದಾಖಲಾದವನು ಸ್ಥಿತಿವಂತನಿದ್ದಿಲ್ಲವೆಂದೇ ಮೆಡಿಕಲ್ ಆಫೀಸರರ ಅಭಿಪ್ರಾಯವಿದೆ.

(ಕ) ಪೋಲೀಸ ರೋಗಿಗಳ ದಾಖಲೆ ನೋಡಲಾಗಿ, ಯಾವನೇ ಹೆಡ್ ಕಾನ್ಸಟೇಬಲನು ಆಸ್ಪತ್ರೆಯಲ್ಲಿ ಒಳ-ರೋಗಿಯಾಗಿ ಉಪಚಾರ ಹೊಂದಿದ್ದು ಕಂಡುಬರುವದಿಲ್ಲ. ಮತ್ತು ಆಸ್ಪತ್ರೆಯಲ್ಲಿ ಇಂಥವರು ಉಪಚಾರ ಹೊಂದಿದಾಗ ಯಾರಿಗೂ ವಿನಾಯಿತಿ ಕೊಡಲಿಲ್ಲ

(ಡ) **ಪ್ರಸೂತಿ-ಗೃಹ**- ಸಾಧಾ ಪ್ರಸೂತಿಯ ಬಗ್ಗೆ ಶಿರ್ಶಿಯ ಹೆಂಗಳೆಯರು ಆಸ್ಪತ್ರೆಗೆ ಬರಲಿಕ್ಕೆ ಉತ್ಸಾಹ ತೋರಿಸುವದಿಲ್ಲ. ಬರಲಿಕ್ಕೆ ಇಚ್ಛಿಸುವ ಕೆಲವರಾದರೂ ಆರ್ಥಿಕ ಬಡತನದಿಂದಲೇ ಕಠಿಣ ಪ್ರಸಂಗ ಇದ್ದಂಥವರಾಗಿರುತ್ತಾರೆ. ಫೀಗಳ ದರ ಏರಿಸಿ ವಸೂಲ ಮಾಡುವದು ಜಾರಿಯಲ್ಲಿ ತಂದಲ್ಲಿ ಈ ಪ್ರವೇಶಗಳ ಮೇಲೆ ವಿರುದ್ಧ ಪರಿಣಾಮವಾಗಿ ಸದ್ರಿ ಸಾರ್ವಜನಿಕ ಪ್ರಯೋಜನಕ್ಕೆ ಧಕ್ಕೆ ಬಂದೀತು. ಶಿರ್ಶಿಯಲ್ಲಿ ಖಾಸಗಿ ಪ್ರಸೂತಿ ಗೃಹಗಳು ಇಲ್ಲದ್ದರಿಂದ ಈಗಿನ ಕಡಿಮೆ ದರ ಸ್ಪರ್ಧೆ-ಸ್ವರೂಪದ್ದಿಲ್ಲವೆಂದು ಹೇಳಬಹುದು. ಮತ್ತು ಆ ಕಾರಣದಿಂದ ಪ್ರಸೂತಿಗಾಗಿ ಬಂದವರಿಗೆ ಸಹ ಸರಾಸರಿ ದಿವಸಕ್ಕೆ ಎವರೇಜಿಯ ದರವನ್ನೇ ಇಡುವಂತೆ ಮ್ಯು||ಯು ಅಪ್ಪಣೆ ಕೊಡಿಸಬಹುದು.

ಮೆಡಿಕಲ್ ಆಫೀಸರರು ಮೇಲೆ ಹೇಳಿದಂತೆ ಮುಂದೆ ಕೆಲ ವರ್ಷಗಳ ವರೆಗಾದರೂ ಪ್ರಸೂತಿ-ದರಗಳು ಸಾಮಾನ್ಯ ಒಳ-ರೋಗಿಗಳ ದರಗಳಂತೆಯೇ ಇರಬೇಕಾಗಿ ನಾವು ಅಭಿಪ್ರಾಯಪಡುತ್ತೇವೆ.

(ಇ) ಅವಶ್ಯವುಳ್ಳ ತಿಕೀಟುಗಳನ್ನು ಆಸ್ಪತ್ರೆಗೆ ಅದಾಗಲೇ ಪೂರೈಸಲಾಗಿದೆ.

(ಫ) ಪ್ರತಿ ಕ್ವಾರ್ಟರದಲ್ಲಿ ಒಮ್ಮೆಯಾದರೂ ಆಸ್ಪತ್ರೆಯಲ್ಲಿ ಸಭೆ ಇರಲಿಕ್ಕೂ ರೂಲ್ಸ ಪ್ರಕಾರ ವಿವಿಧ ತಪಾಸಣೆ ಮಾಡಲಿಕ್ಕೂ ಮೆನೇಜಿಂಗ ಕಮಿಟಿ ಚೆಅರಮನ್ ಸಾಹೇಬರಿಗೆ ತಿಳಿಸಿದೆ.

ಪೆರಾ ೧೯- ಸರಕಾರಿ ರಾಜ್ಯ ಎಫ್. ಡಿ. ನಂ. ೧೬೪ ತಾ. ೩-೧೨-೧೯೪೧ರ ಪ್ರಕಾರ ಟುಟ್ಟಿ-ಭತ್ಯ ಕೊಡುವರೆ ಮೆ|| ಚೆಅರಮನ್, ಡಿ|| ಸ್ಕೂ|| ಬೋರ್ಡ, ಕಾನಡಾ ಇವರಿಗೆ ಬಿನ್ನವಿಸಿದೆ ಅವರು ಹಾಗೆ ಮಾಡುವರೆಂದು ನಿರೀಕ್ಷಿಸಲಾಗಿದೆ.

ಪೆರಾ ೧೯ (ಅ).- **ಲೋಕಲ್ ಫಂಡ ಆಡಿಟ್ ಆಕ್ಟ ಕಲಂ ೯. (೫) ಕೆಳಗೆ ತೆಗೆದ ಆಕ್ಷೇಪಗಳಿಗೆ ಉತ್ತರಗಳು**:—

(i), (ii) ಮತ್ತು (iii) — ಅಪರಾತಫರ ಮಾಡಿದ ರಕಮು ಎಷ್ಟೆಂದು ನೋಡಿ ಸದ್ರಿ ಕಾರಕೂನರ ಪ್ರೊವ್ಹಿಡೆಂಟ ಫಂಡ ಹಣದೊಳಗಿಂದ ವಸೂಲ ಮಾಡಲಾಗುವದು.

ಆಡಿಟ್ ಕಾಲಕ್ಕೆ ಮಾಹಿತಿ ಕೊಟ್ಟ ಪ್ರಕಾರ ಸರಿಯಾದ ಡಿಮಾಂಡ ರಜಿಸ್ಟರ ಈ ವರ್ಷ ತಯಾರಿಸಿದೆ. ಮತ್ತು ಅದರಲ್ಲಿ ಅವಶ್ಯವುಳ್ಳ ಮಾಹಿತಿ ತುಂಬಿದೆ

(ಬ) (i) - ನೋಟ ಮಾಡಿದೆ. ಸೂಚಿಸಿದ ಪ್ರಕಾರ ರಿಮಾ. ಕಾಲಮಿನಲ್ಲಿ ಮಾಫಿ ಕೊಟ್ಟ ಕುರಿತು ಆಧಾರ ತೋರಿಸಲಾಗುತ್ತದೆ.

ಫೀ ರಕಮಿನ ಬಗ್ಗೆ ಒಂದೊಂದೇ ಕಾಲಂ ಇಟ್ಟು ಫೀ ಕೊಡದ ಸಂಗ್ಯೆಯಲ್ಲಿ ಕಾಲಂ ಖಾಲಿ ಇಡುವ ಈಗಿನ ಕ್ರಮವೇ ಸಮಾಧಾನಕರವೆಂದು ಕಂಡುಬರುತ್ತದೆ. ಇದರಿಂದ ಯಾವನೊಬ್ಬ ವಿದ್ಯಾರ್ಥಿಯ ಹೆಸರಿನ ಎದುರಿಗೆ ಖಾಲಿ ಇರುವ ಕಾಲಮುಗಳನ್ನು ಎಣಿಸಿ ಆಯಾ ವಿದ್ಯಾರ್ಥಿಯ ಬಾಕಿಯನ್ನು ಸುಲಭವಾಗಿ ತಿಳಕೊಳ್ಳಬಹುದು. ಈ ವಿಷಯದಲ್ಲಿ ಮುಂದಿನ ಆಡಿಟ್ ಕಾಲಕ್ಕೆ ಚರ್ಚೆ ಮಾಡುವೆವು. ಸ್ಕೂಲ ಕಾರಕೂನರಿಗೆ ಜನರಲ್ ರಜಿಸ್ಟರ ಮುಂತಾದವುಗಳಲ್ಲಿ ಒಂದಕ್ಕೊಂದು ಹವಾಲೆ ಕೊಡುವ ಬಗ್ಗೆ ತಿಳಿಸಲಾಗಿದೆ.

(ಬ) (ii) ನೋಟ ಮಾಡಿದೆ. ವಸೂಲಿ ಮಾಡುವ ಶಿಕ್ಷಕರಿಗೆ ಬಾಕಿ ರಕಂ ಎಷ್ಟೆಂಬದು ರಿಪೋರ್ಟ ಮಾಡಬೇಕಾಗಿ ತಿಳಿಸಿದೆ.

(ಕ) ಮೆ|| ಡ್ರಾಯಿಂಗ ಮತ್ತು ಕ್ರಾಫ್ಟ ಕೆಲಸದ ಇನ್ಸಪೆಕ್ಟರ ಸಾಹೇಬ ಮುಂಬಯಿ ಇವರು ೧೯೩೫ನೇ ವರ್ಷದ ತಪಾಸಣೆ ರಿಪೋರ್ಟ ಪೆರಾ ಅವತರಣಿಕೆ ಲಗತ್ತು ಇಟ್ಟಿದೆ. ಸದ್ರಿ ಉತಾರದಲ್ಲಿ ಹೇಳಿದ ಮೆ|| ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರ ಸರ್ಕ್ಯುಲರ ನಂ. ೧೩೦/೨೫— ತಾರೀಖು ೧೬-೨-೧೯೨೬ನೇದರ ಉತಾರು ತರಿಸಿಕೊಳ್ಳಲಿಕ್ಕೆ ಹೆಡ್ ಮಾಸ್ತರರಿಗೆ ತಿಳಿಸಿದೆ.

(ಡ) ಫೀ ವಸೂಲ ಮಾಡುವ ಶಿಕ್ಷಕರಿಗೆ ಗೇಮ್ಸ ಮತ್ತು ಲ್ಯಾಬ್ರರಿ ಫೀ ಶಿಲ್ಕ ಮ್ಯು||ಯಲ್ಲಿ ಇಡಲಿಕ್ಕೆ ಆರಂಭಿಸಿದಂದಿನಿಂದ ಸದರಿ ಲೆಕ್ಕ ತಯಾರ ಮಾಡಲು ತಿಳಿಸಿದೆ.

(ಇ) ನೋಟ ಮಾಡಿದೆ.

(ಫ) ಸದರಿ ಶಿಕ್ಷಕರ ಕಡೆಯಿಂದ ರೂ. ೧೦೦ ಜಾಮೀನು ತೆಗೆದುಕೊಳ್ಳಬೇಕಾಗಿ ಠರಾಯಿಸಿದೆ, ಮತ್ತು ಫೀ ವಸೂಲಿ ಬಗ್ಗೆ ನೇಮಿಸಲ್ಪಡುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ. ೫-೦-೦ ಹೆಚ್ಚಿನ ಭತ್ಯಾ ಕೊಡುವ ಬಗ್ಗೆ ಮಂಜೂರಿ ತರಿಸಬೇಕಾಗಿ ನಿಶ್ಚಯಿಸಿದೆ.

ಪೆರಾ ೨೦.- ಕೊಂತವಾಡೆ ಕಾನೂನ ಕಲಂ ೧೨ ಮತ್ತು ೧೬ರಂತೆ ಬಂದ ದೊಡ್ಡ ಉತ್ಪನ್ನ ಸರಕಾರಿ ಖಜಾನೆಯಲ್ಲಿ ಜಮಾ ಮಾಡಿದೆ.

ಪೆರಾ ೨೧ - ನಾಕಾ ಕಾರಕೂನರ ಜಾಮೀನ ರಕಮು ಹೆಚ್ಚಿಸುವ ಅವಶ್ಯಕತೆ ಇಲ್ಲೆಂದು ಠರಾಯಿಸಲ್ಪಟ್ಟಿದೆ. ಆದರೆ ಆಕ್ಟ್ರಾಯ ಇನ್ಸಪೆಕ್ಟರರು ರೂ. ೨೦೦ರ ಮತ್ತು ಆಸಿಸ್ಟಂಟ ಆಕ್ಟ್ರಾಯ ಇನ್ಸಪೆಕ್ಟರರು ರೂ. ೧೦೦ರ ಜಾಮೀನು ಕೊಡುವಂತೆ ಠರಾಯಿಸಿದ್ದು ಆ ಬಾಬ್ತು ನೇಮಗಳಲ್ಲಿ ದುರುಸ್ತಿ ಮಾಡುವ ಬಗ್ಗೆ ಮಂಜೂರಿ ಕೇಳಲಾಗುವದು.

ಪೆರಾ ೨೨ - ನೋಟ ಮಾಡಿದೆ.

ಪೆರಾ ೨೩.- ಮನೆ ನಂ. ೩- ಎ. ಎ. ಇದಕ್ಕೆ ಮೊದಲು ರೂ. ೬೪-೦-೦ರ ಮೌಲೆ ಆಕರಣಿ ಇತ್ತು. ಅದರಲ್ಲಿ ಒಂದು ಭಾಗ ಮಾಡಿ ಒಬ್ಬರಿಗೆ ವರ್ಷಕ್ಕೆ ರೂ. ೩೬/-ಕ್ಕೆ ಭಾಡಿಗೆಗೆ ಕೊಟ್ಟಿತ್ತು. ತರುವಾಯ ಭಾಡಿಗೆಯವನು ಬಿಟ್ಟ ಮೇಲೆ ಮಾಲೀಕರು ಸದರಿ ಭಾಗವನ್ನು ತಮ್ಮ ಮನೆಗೆ ಕೂಡಿಸಿಕೊಂಡರು. ಸದರಿ ಹಂಗಾಮಿ ಬಿಡಾರದ ಆಕರಣಿ ಕಡಿಮೆ ಮಾಡಿ ಇಡೀ ಮನೆಯ ಆಕರಣಿ ರೂ ೬೭/-ಕ್ಕೆ ಏರಿಸಲ್ಪಟ್ಟಿದೆ. ಇದಕ್ಕೂ ಹೆಚ್ಚಿಗೆ ಮಾಡಿದರೆ ನ್ಯಾಯವಾಗುತ್ತಿದ್ದಿಲ್ಲ. ನೆರೆಯಲ್ಲಿ ಇರುವ ಇಂಥವೇ ಮನೆಗಳಿಗೆ ಹೆಚ್ಚಿಗೆ ಭಾಡಿಗೆ ಬರುವದಿಲ್ಲ

(೩ನೇ ಪುಟ ನೋಡಿರಿ)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೧-೦
” ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ.ಪಿ.ಯಿಂದ ಹಣ ತರುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿಮುಂಗಡ ಕಳಿಸತಕ್ಕದ್ದು

Reg. No. B 1270. Monday, 17th December, 1945.

ಕಾನಡಾವೃತ್ತ

ವರ್ಷ ೨೮] THE KANARA NEWS. [ಸಂಚಿಕೆ ೩೪.

ಕುಮಟಾ:— ಸೋಮವಾರ, ತಾ. ೧೭ ಮಾಹೆ ಡಿಸೆಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ:
ಪ್ಯಾಕಾ ೧೫ ಎಮ್ ಉದ್ದ ೧ ಸಾಲಿಗೆ ೩ ಆಣೆಯಂತೆ.
ಸ್ಮಾಲಪ್ಯಾಕಾ ೧೫ಎಮ್‌ಉದ್ದ ೧ ಸಾಲಿಗೆ ೨ ಆಣೆಯಂತೆ.
ವಿಶಿಷ್ಟ ಇಲ್ಲವೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದರಿಸಿದ್ದು.)

ಒಕ್ಕಲಿಗರ ಸಾಲ-ಪರಿಹಾರ ಕಾನೂನಿನಿಂದ ಇಲ್ಲಿಯ ಸಹಕಾರಿ ಪತ್ತಿನ ಸಂಘದ ವ್ಯವಹಾರಕ್ಕೆ ಕೊಡಲಿಯ ಪೆಟ್ಟು ಬಿದ್ದಂತೆಯೇ ಆಗಿದೆ. ಅಧಿಕಾರಿಗಳ ಸೂಚನೆಯಂತೆ ಸಂಘದವರು ಎಲ್ಲ ಋಣಕೋ ಜನರ ಪ್ರಕರಣಗಳನ್ನು ಸಾಲ-ಪರಿಹಾರ ಮಂಡಳಕ್ಕೆ ಅರ್ಜಿ ಮಾಡಿ ಒಪ್ಪಿಸಿದ್ದಾರೆ. ಆದರೆ ಇನ್ನು ಮುಂದೆ ಒಕ್ಕಲಿಗರಿಗೆ (ಜಮೀನುದಾರರನ್ನೂ ಒಳಗೊಂಡು) ಸಾಲ ಕೊಡುವ ಬಗೆ ಹೇಗೆ ಮತ್ತು ಎಷ್ಟು ಕೊಡಬಹುದು ಎಂಬ ಪ್ರಶ್ನೆಯುದ್ಭವಿಸುತ್ತದೆ. ಈ ಬಗ್ಗೆ ಸಹಕಾರಿ ಸಂಘಗಳ ಅಸಿಸ್ಟಂಟ ರಜಿಸ್ಟ್ರಾರರ ಸಲಹೆ ಕೇಳಲಾಗಿ, ಸಾಗುವಳಿಯಾಗುವ ಪ್ರತಿ ಎಕರೆಗೆ ರೂ. ೮ರಿಂದ ೧೦ ರ ವರೆಗೆ ಸಾಲ ಕೊಡಬಹುದಾಗಿ ಸದರಿ ಅಧಿಕಾರಿಗಳು ಸೂಚಿಸಿದ್ದಾರೆ ! ಈ ೮-೧೦ ರೂಪಾಯಿಗಳು ಒಂದು ಎಕರೆ ಭೂಮಿಯಲ್ಲಿದ್ದ ಗಿಡಗಂಟಿಗಳನ್ನು ತೆಗೆದು ಭೂಮಿ ಹಸನಗೊಳಿಸಲಿಕ್ಕೂ ಸಾಲುವಂತಿಲ್ಲ. ಮೇಲೆ ಬೀಜ ಬೇಕು; ಗೊಬ್ಬರ ಬೇಕು; ಎತ್ತು ಬೇಕು, ಬಾಗ್ವಾಯ ಮಾಡಲಿಕ್ಕೆ ಹಣ ಬೇಕು. ಆ ರಜಿಸ್ಟ್ರಾರರ ೮-೧೦ ರೂಪಾಯಿಗಳಿಂದ ಒಕ್ಕಲಿಗರಿಗಾಗುವದೇನು ? ಅರ್ಥಾತ್ ಅವರು ಸಂಘದ ಗೊಡವೆ ಬಿಟ್ಟು ಖಾಸಗಿ ಸಾವಕಾರರ ಕಾಲು ಹಿಡಿಯಬೇಕಾಗುವದು ! ಸಂಘದವರ ಬಳಿ ಈಗ ೪೦-೫೦ ಸಾವಿರ ರೂ. ಚಾಲತಿ ಭಂಡವಲುಂಟು. ಅದನ್ನು ಎಲ್ಲಿ ತೊಡಗಿಸಬೇಕು, ಹ್ಯಾಗೆ ಉಪಯೋಗಿಸಬೇಕು ಎಂಬುದೇ ಸಂಘದ ಚಾಲಕರಿಗೆ ತಿಳಿಯದಂತಾಗಿದೆ.

ಇಲ್ಲಿಂದ ಸಾವಿರಾರು ಚೀಲ ಅಕ್ಕಿಯನ್ನು ಸರಕಾರದವರು ವಿಜಾಪುರ ವಗೈರೆ ಜಿಲ್ಲೆಗಳಿಗೆ ಕಳಿಸುತ್ತಿದ್ದಾರೆ. ಆದರೆ ಅಲ್ಲಿಂದ ಕಡಲೆ, ತೊಗರಿ ಬೇಳೆ, ಉದ್ದು, ಹೆಸರು ಮುಂತಾದ್ದು ತರಿಸುವದೂ ಇಲ್ಲ; ತರಿಸಲಿಕ್ಕೆ ಪರವಾನೆಗಳನ್ನೂ ಕೊಡಿಸುವದಿಲ್ಲ !

ಈ ಜಿಲ್ಲೆಯ ಇತರ ತಾಲೂಕುಗಳಲ್ಲಿ ಕೊಡುವಷ್ಟು ಚಿಮಣಿ ಎಣ್ಣೆ ಇಲ್ಲಿ ಸಿಗುವದಿಲ್ಲ. ಸರಾಸರಿ ಅರ್ಧದಷ್ಟು ಸಿಗುತ್ತಿದೆ. ಈ ಪಕ್ಷಪಾತವ್ಯಾಕೆ ?

ಮೊಬಿಲ ಎಣ್ಣೆ, ಬೆಲ್ಲ ಮುಂತಾದವುಗಳ ಧಾರಣೆಯನ್ನಷ್ಟೇ ಅಧಿಕಾರಿಗಳು ನಿಯಂತ್ರಿಸುತ್ತಾರೆ. ಅವರೆ ಅವುಗಳ ಪುರವಠಿ ಮಾಡುವದಿಲ್ಲ' ವ್ಯಾಪಾರಿಗಳು ಈ ಸರಕುಗಳನ್ನು ಹೊರಗಿಂದ ತರಿಸಿದರೆ ಅವರಿಗೆ ದರವೆಷ್ಟು ಬೀಳುತ್ತದೆ ಎಂಬುದನ್ನು ಪರಾಂಬರಿಸಿ ನಿಯಂತ್ರಣ-ದರವನ್ನು ನಿಶ್ಚಯಿಸಿಕೊಡುವದೂ ಇಲ್ಲ ! ಅದರಿಂದ ಪೇಟೆಯೊಳಗೆ ಈ ಸರಕುಗಳು ಸಿಗದಂತಾಗಿವೆ. ಜನರು ಕಷ್ಟಕ್ಕೀಡಾಗಿದ್ದಾರೆ.

ಭತ್ತ ಖರೀದಿಸುವಾಗ ಅಧಿಕಾರಿಗಳು ಭತ್ತ ಹಸಿದಿರುತ್ತಂಬ ನೆವ ಹೇಳಿ ನೂರಕ್ಕೆ ೫ರಿಂದ ೧೦ರ ವರೆಗೆ ಹೆಚ್ಚಿಗೆ ಭತ್ತ ತಕ್ಕೊಳ್ಳುತ್ತಾರೆ. ಇದು ಅನ್ಯಾಯವಲ್ಲವೇ ?

ಇತ್ತಲಾಗಿ ಸೀಧಾ-ಅಂಗಡಿಗಳಿಗೆ ಮುಂಚಿನಷ್ಟು ಸಕ್ಕರೆ ಅಂದರೆ ಆಯಾ ಅಂಗಡಿಗೊಪ್ಪಿದ ಎಲ್ಲ ಸೀಧಾ-ಚೀಟಿಗಳಲ್ಲಿ ನಮೂದಿಸಲ್ಪಟ್ಟಷ್ಟು ಸಕ್ಕರೆ ಕೊಡುವದಿಲ್ಲ. ಆದರೂ ಅಂಗಡಿಯವರು ಜನರಿಗೆ ಅವರವರ ಸೀಧಾ-ಚೀಟಿಗಳಲ್ಲಿ ಬರೆದಷ್ಟು ಪೂರ್ಣ ಸಕ್ಕರೆ ಕೊಡಬೇಕೆಂದು ಅಧಿಕಾರಿಗಳ ನಿಗ್ರಹ ! ನಿಯಂತ್ರಣಾಧಿಕಾರಿಗಳ ಬುದ್ಧಿ-ಚಮತ್ಕಾರ ! !

ಯಲ್ಲಾಪುರ— (ತಾ. ೭-೧೨-೪೫) ಈಗ ೨ ೩ ವಾರಗಳಿಂದ ಇಲ್ಲಿ " ವಿಜಯ ಕೃತಜ್ಞತೆ ದಿನ " ದ ಆಚರಣೆಯ ಬಗ್ಗೆ ನಿಧಿ ಕೂಡಿಸಲ್ಪಡುತ್ತದೆ. ಹೋದ ತಿಂಗಳ ಕೊನೆಯ ವಾರದಲ್ಲಿ ಒಂದು ದಿನ ಮಾಮಲೇದಾರ ಮಿ| ಶಿಸ್ತೇದಾರರು ಪೇಟೆಯಲ್ಲಿ ಒಂದು ಅಂಗಡಿಯಲ್ಲಿ ಕೂತು ಎಲ್ಲ ಚಹಾ ಅಂಗಡಿಕಾರರಿಗೆ ಅಲ್ಲಿ ಕರೆದರು; ಮತ್ತು ಕೃತಜ್ಞತೆ ನಿಧಿಗೆ ವಂತಿಗೆ ಕೊಡಬೇಕೆಂದು ಅವರಿಗೆ ಹೇಳಿದರು. ಅಂಗಡಿಕಾರರು ಒಂದೆರಡು ರೂಪಾಯಿ ಖುಷಿಯಿಂದ ಕೊಡಲೊಪ್ಪಿದರು ಆದ್ದರಿಂದ ಮಿ| ಶಿಸ್ತೇದಾರರಿಗೆ ತೃಪ್ತಿಯಾಗಲಿಲ್ಲ. ಪ್ರತಿಯೊಬ್ಬರು ಕನಿಷ್ಠ ೧೦-೧೦ ರೂಪಾಯಿ ಕೊಡಬೇಕೆಂದು ಹೇಳಿದರು. ಅದರಂತೆ ವಂತಿಗೆ ಕೊಟ್ಟರೆ ಹೆಚ್ಚಿಗೆ ಸಕ್ಕರೆ-ಸೀಧಾ ಕೊಡುತ್ತೇವೆಂತಲೂ ಆಮಿಷ ತೋರಿಸಿದರು ! ಆ ಆಮಿಷಕ್ಕೆ ಬಲಿಬಿದ್ದು ಕೆಲವರು ೧೦-೧೦ ರೂಪಾಯಿ ಕೊಟ್ಟರು. ಕೆಲವರು ತಮ್ಮ ಬಡತನ ಹೇಳಿಕೊಂಡು ೪-೫ ರೂ. ಕೊಟ್ಟರು. ೧೦-೧೦ ರೂ. ಕೊಟ್ಟವರಿಗೆ ಮಿ| ಶಿಸ್ತೇದಾರರು ೧೦-೧೦ ರತ್ತಲ ಸಕ್ಕರೆ ಹೆಚ್ಚಿಗೆ ಕೊಟ್ಟಿದ್ದಾರೆ. ೪-೫ ರೂ. ಕೊಟ್ಟವರ ಸೀಧೆಯಲ್ಲಿ ಕೆಲವು ಸಕ್ಕರೆ ಕಡಿಮೆ ಮಾಡಿದ್ದಾರೆ ! ತೀರ ಬಡ ಅಂಗಡಿಕಾರರು " ಈಗ ಹಣವಿಲ್ಲ; ಮುಂದಿನ ತಿಂಗಳ ಪ್ರಾರಂಭಕ್ಕೆ ಸರಕಾರ ನೌಕರರಿಗೆ ಪಗಾರ ಸಿಕ್ಕಿ ನಮ್ಮ ಉದ್ರಿ ಹಣ ವಸೂಲ ಬಂದ ಮೇಲೆ ಶಕ್ತ್ಯನುಸಾರವಾಗಿ ವಂತಿಗೆ ಕೊಡುತ್ತೇವೆ. " ಎಂದು ದೈನ್ಯಗೊಂಡು ಹೇಳಿಕೊಂಡರು. ಆದರೂ ಅವರ ಮೇಲೆ ಕೋಪಗೊಂಡು ಅವರಿಗೆ ಕೊಡುತ್ತಿದ್ದ ೧೫-೨೦ ರತ್ತಲ ಸಕ್ಕರೆಯಲ್ಲಿ ೧೦-೧೨ ರತ್ತಲು ಸಕ್ಕರೆಗೆ ಕಾಟು ಹಾಕಿದ್ದಾರೆ ! ಏನು ಉತ್ಸವವೋ, ಏನು ನಿಧಿ-ಸಂಗ್ರಹವೋ !

ಸ್ವಾಮಿ ಲಲಿತಾನಂದ.

" ಕರುಣಾಳು ಬಾ ಬೆಳಕೆ,
ಮುಗಿದೀ ಕತ್ತಲಲಿ ಕೈಹಿಡಿದು ನಡೆಸೆನ್ನನು "

ಅರ್ಥಶಾಸ್ತ್ರವೇ ವೇದವೆಂದು ನಂಬಿ, ಭೌತ ಮೋಹಕ್ಕೆ ಮನಸೋತ ಮಾನವನು ಉದಾತ್ತ ತತ್ವವನ್ನು ಮರೆಯುತ್ತಾನೆ. ಜಗತ್ತು ಬಲಿಷ್ಠರದೆಂದೂ, ಸಂಪತ್ತಿನ ಸತ್ತೆಯೇ ಸತ್ಯವೆಂದೂ ಅರ್ಥಶಾಸ್ತ್ರದ ದಾಸರು ಸಾರುತ್ತಾರೆ. ಆದರೆ ಮನುಷ್ಯನಲ್ಲಿದ್ದ ದೇವತ್ವವನ್ನು ತೆಗೆದುಹಾಕುವದು ಎಂದೂ ಸಾಧ್ಯವಿಲ್ಲ. ಯಾಕಂದರೆ ಆತ್ಮವು ಅಚಿಂತ್ಯ ಹಾಗೂ ಅವಿನಾಶಿ ಇರುತ್ತದೆ. ಕಾಮ-ರಾಗ ದ್ವೇಷಗಳ ಜಂಜಾಳದಲ್ಲೂ ಸತ್ಯವು ಒಮ್ಮೊಮ್ಮೆ ಮಾನವನಿಗೆ ಕಾಣಿಸಿಕೊಳ್ಳದೆ ಬಿಡುವದಿಲ್ಲ. ಮನುಷ್ಯರು ಧರ್ಮದ ಕೈಬಿಟ್ಟಾಗ ಸಾಧು-ಸಂತರು ಮುಂದೆ ಬಂದು ಅವರಿಗೆ ಆತ್ಮ-ಶಕ್ತಿಯ ಅರಿವು ಮಾಡಿಕೊಡುತ್ತಾರೆ. ಅದೇ ಮೇರೆಗೆ ನಮ್ಮಲ್ಲಿ ಆತ್ಮ-ಶಕ್ತಿಯ ಮರೆವು ಉಂಟಾದ ಈ ಕಾಲದಲ್ಲಿ ಸ್ವಾಮಿ ಶ್ರೀ ಲಲಿತಾನಂದರು ನಮ್ಮಲ್ಲಿ ಉದಯಿಸಿದುದು ನಮ್ಮ ಭಾಗ್ಯ.

ಶ್ರೀ ಶಿರಾಲಿ ಆನಂದರಾಯರು (ಸ್ವಾಮಿಗಳ ಪೂರ್ವಾಶ್ರಮದ ಹೆಸರು) ಹಿಂದೆ ಸಾಮಾನ್ಯರಂತೆಯೇ ಜೀವನ ಸಾಗಿಸಿದ್ದರು. ಆದರೆ ಜೀವನದಲ್ಲಿ ಒಂದು ವಿಶಿಷ್ಟ ಗುರಿ ಸಾಧಿಸಬೇಕೆಂಬ ನಿಶ್ಚಯ ಅವರಲ್ಲಿತ್ತು. ಬಾಲ್ಯದಲ್ಲಿ ಕಳಕೊಂಡ ತಾಯಿಯ ಮಾತೃವಾತ್ಸಲ್ಯದ ಅನುಭವ ಪಡೆಯಬೇಕೆಂಬ ಉತ್ಕಟ ಇಚ್ಛೆ ಅವರ ಎಲ್ಲ ವ್ಯವಹಾರಗಳಲ್ಲಿ ವ್ಯಕ್ತವಾಗುತ್ತಿತ್ತು. ಆ ಸ್ತ್ರೀಯ ಪರಿಚಯ ಮಾಡಿಕೊಳ್ಳಲು ಯತ್ನಿಸುತ್ತಿರುವಾಗ ಆನಂದರಾಯರಿಗೆ ವಿಶ್ವಮಾತೆಯ ದಿವ್ಯ ಪ್ರೇಮದ ಸಾಕ್ಷಾತ್ಕಾರವಾಯಿತು. ಅಂದಿನಿಂದ ಅವರು ಆ ದಿವ್ಯ ಪ್ರೇಮದ ಸಂದೇಶವನ್ನು ಎಲ್ಲೆಲ್ಲಿ ಬೀರುತ್ತಿದ್ದಾರೆ.

ಸಾಮಾನ್ಯ ಮನುಷ್ಯರ ಜಗತ್ತಿನ ಮಹತ್ವ ಸತ್ಪುರುಷರಿಗೆ ಇರುವದಿಲ್ಲ. ಸತ್ಯದ ಜಗತ್ತಿನಲ್ಲಿ ಬಾಳಿ ಬದುಕುವ ಸಾಧುಗಳು ಇಂದ್ರಿಯಗಳಿಗೆ ಗೋಚರವಾಗುವ ಜಗತ್ತು ನಿಜವಲ್ಲೆಂದು ನಿರ್ಧಾರಕ್ಕೆ ಬರುತ್ತಾರೆ. ಆನಂದರಾಯರೂ ಕೊನೆಗೆ ಅದೇ ನಿರ್ಧಾರಕ್ಕೆ ಬಂದು, ಅಂತರಾತ್ಮನಿಗೆ ಮನ್ನಣೆ ಕೊಟ್ಟು ಹಂಪೆಯ ಶ್ರೀಶಂಭುನಾಥಜಿಯವರಿಂದ ಶ್ರೀವಿದ್ಯೆಯನ್ನೂ ಚಿತ್ರಾಪುರ ಮಠದ ಶ್ರೀಮದ್-ಆನಂದಾಶ್ರಮ ಸ್ವಾಮಿಗಳಿಂದ ಮಹಾವಾಕ್ಯೋಪದೇಶವನ್ನೂ ಪಡೆದು ಸನ್ಯಾಸಿಗಳಾಗಿದ್ದಾರೆ.

ಆದರೆ ಸತ್ಯದ ಸಂದೇಶ ದೀನ ಸಮಾಜದ ಹಿತ ಸಾಧಿಸಲು ಶ್ರೀ ಲಲಿತಾನಂದರು ಸಮಾಜದಲ್ಲಿಯೇ ಬಾಳುತ್ತಲಿದ್ದಾರೆ. ವ್ಯಕ್ತಿ-ಜೀವನದ ಮಹತ್ವವನ್ನು ಅರಿತು, ಕಲಹ-ದ್ವೇಷಾದಿಗಳಿಂದ ತುಂಬಿದ ಸಂಸಾರವೇ ತಮ್ಮ ಕಾರ್ಯರಂಗವೆಂದು ಮನಗಂಡು, ವ್ಯಕ್ತಿಗಳಿಗೂ ಸಮಾಜಕ್ಕೂ ಸುಖ-ಮಾರ್ಗ ಕಾಣಿಸಿಕೊಡಬೇಕೆಂಬ ಸದುದ್ದೇಶದಿಂದ ಅವರು ಜನಸಂಮರ್ದದಲ್ಲಿದ್ದಾರೆ. ಜಗತ್ತಿನ ವಿಷಮತೆಯನ್ನು ಅಳಿವೊಗೆಯುವಂತೆ ಅವರಿಗೆ ಲೋಕಮಾತೆಯ ಅಜ್ಞೆಯಾದಂತೆ ಕಾಣುತ್ತದೆ.

" ನಿನ್ನ ಇಚ್ಛೆಯಂತೆ ನಡೆಯಲಿ, ಅಮ್ಮಾ " ಎಂದು ನುಡಿಯುತ್ತ ಸ್ವಾಮಿಜಿಯವರು ಮಾತೆಯ ಸಂದೇಶವನ್ನು ಬೀರುತ್ತಿದ್ದಾರೆ. ಈ ವಿಶ್ವಧರ್ಮದ ತಿರುಳು ತಿಳಕೊಳ್ಳಲು ದಿನಾಲು ಅನೇಕ ಅಜ್ಞ-ಸುಜ್ಞರೂ, ಬಡವ-ಬಲ್ಲಿದರೂ ಸ್ವಾಮಿಗಳ ಬಳಿಗೆ ಬರುತ್ತಿರುತ್ತಾರೆ.

ಅವರ ಸಂದೇಶ ಪಡೆಯುವವರು ಮನಃಶಾಂತಿಯನ್ನಲ್ಲದೆ ಸುತ್ತಲಿನ ವಾತಾವರಣದೊಂದಿಗೆ ಸಾಮರಸ್ಯ ಹೊಂದಬೇಕು. ಸಾಮಾನ್ಯ ಮಾನವನಿಗೆ ಅವನ ಕಣ್ಮುಂದಿರುವ ವಸ್ತುಗಳೇ ವಿಶೇಷ ಸುಖ ಕೊಡುತ್ತವೆ. ಅಂತರಾತ್ಮನ ಅನುಭವ ಪಡೆಯುವ ಇಚ್ಛೆ ಅವನಿಗಿದ್ದರೂ ಆಸಕ್ತಿ ಕಡಿಮೆ. ಇಂಥ ಆಸಕ್ತಿ ಬೆಳೆದು, ಬಾಹ್ಯ ವಸ್ತುಗಳ ಕಡೆ ಮನಸ್ಸು ಹರಿಯಗೊಡದೆ, ಏಕಾಗ್ರ ಚಿತ್ತದಿಂದ ಸ್ವಾಮಿಯವರ ವಚನಾಮೃತ ಸವಿಯಬೇಕಾದರೆ ಅದಕ್ಕೆ ತಕ್ಕ ಶಾಂತ ವಾತಾವರಣ ಬೇಕು. ಈ ಬಗೆಯ ವಾತಾವರಣವಿರುವಂತಹ ಒಂದು ಪ್ರಶಾಂತ-ರಮ್ಯ ಆಶ್ರಮ ಸ್ಥಾಪಿಸಲು ಕುಮಟೆಯ ನಾಗರಿಕರು ಶ್ರೀ ಎಸ್. ಜಿ ಶಾನಭಾಗ, ವಕೀಲ ಇವರ ನೇತೃತ್ವದಲ್ಲಿ ಒಂದು ಸಂಘ ಸ್ಥಾಪಿಸಿದ್ದುಂಟು. ಸಂಕಲ್ಪಿತ ಆಶ್ರಮದಲ್ಲಿ ಸ್ವಾಮಿಜಿಯವರ ಪ್ರವಚನಗಳ ವ್ಯವಸ್ಥೆ ಮಾಡುವದಲ್ಲದೆ, ಪ್ರತಿವಾರ ವಿದ್ವಾಂಸರ ವ್ಯಾಖ್ಯಾನಗಳನ್ನು ಏರ್ಪಡಿಸಲಿಕ್ಕೂ, ಧಾರ್ಮಿಕ, ತಾತ್ವಿಕ ಗ್ರಂಥಗಳನ್ನು ಸಂಗ್ರಹಿಸಲಿಕ್ಕೂ ಸಂಘದ ನಿಶ್ಚಯವಾಗಿದೆ. ಪರಸ್ಥಳಗಳಿಂದ ಬರುವ ಭಕ್ತಜನರಿಗೆ ಇಳಕೊಳ್ಳುವ ಬಿಡಾರಗಳ ವ್ಯವಸ್ಥೆಯೂ ಆಗಲಿದೆ. ಈ ಕಾರ್ಯಗಳಿಗೆ ವಿಪುಲ ಹಣ ಬೇಕು. ದಯವುಳ್ಳವರು ಮುಕ್ತಹಸ್ತದಿಂದ ಈ ಕಾರ್ಯಗಳಿಗೆ ಧನಸಹಾಯ ನೀಡಬೇಕಾಗಿ ವಿನಂತಿಯುಂಟು.

S. S. Shastri,
(ವಕೀಲ, ಹೊನ್ನಾವರ.)

The Agricultural & Industrial Bank, Ltd.
[Incorporated in British India, Liability of Members limited]

ANNOUNCEMENT.

The Directors have pleasure to announce the opening of two more Branches of the Bank simultaneously at

GADAG & BOMBAY

on Friday, the 21st December 1945.

All kinds of Banking business transacted.

Coondapoor, 3-12-1945.

K. VAMAN SHENAI,
CHAIRMAN.

(೪ನೇ ಪುಟದಿಂದ ಮುಂದರಿಸಿದ್ದು)

ತಾ. ೧೦-೧೦-೪೫ರ ಬೋರ್ಡಿನ ಸಭೆಯಲ್ಲಿ ತೀರ್ಮಾನವಾದಾಗ್ಯೂ ಇನ್ನೂ ಆ ರಸ್ತೆಯ ದುರುಸ್ತಿಯೂ ಇಲ್ಲ; ದುರುಸ್ತಿ ಕೆಲಸದ ಪ್ರಾರಂಭವೂ ಇಲ್ಲ. ಅಡಪಟ್ಟಿಯನ್ನು ಇನ್ನ್ಯಾಡಿ ಮಾಡಿ ಜನರಿಗೆ ಸೌಕರ್ಯಗಳನ್ನು ಒದಗಿಸಿಕೊಡಬೇಕಾದ ಅಧ್ಯಕ್ಷರಿಂದ ಒಂದು ಸಣ್ಣ ರಸ್ತೆಯ ದುರುಸ್ತಿ ಕೂಡ ಮಾಡಿಸಬರುವದಿಲ್ಲವೇ ?

ಅಂಕೋಲಾ— (ತಾ. ೧೫-೧೨-೪೫) ದೇವರು ಕೊಟ್ಟರೂ ಪೂಜಾರಿ ಕೊಡನೆಂಬುದೊಂದು ಗಾದೆಯುಂಟಷ್ಟೇ. ಇಲ್ಲಿಯ ಮಾಮಲೇದಾರರು ಆ ಗಾದೆಯಂತೆ ವರ್ತಿಸುತ್ತಿದ್ದಾರೆ. ಸಕ್ಕರೆಯು ಸೀಧಾ ಸಾಕಾಗುವದಿಲ್ಲೆಂದು ಇಲ್ಲಿಯ ಚಹಾ ಅಂಗಡಿಯವರು ಹಿಂದೆ ಅಂಗಡಿಗಳನ್ನು ಮುಚ್ಚಿದ, ಹಾಗೂ ನಿಮಗೆ ಬೇಕಾದಷ್ಟು ಸಕ್ಕರೆ ಕೊಡಿಸುತ್ತೇವೆ ಎಂದು ಜಿಲ್ಹಾಧಿಪರು ಅವರಿಗೆ ಭರವಸೆ ಕೊಟ್ಟು ಅಂಗಡಿಗಳನ್ನು ತೆರೆಯಿಸಿದ ಕಥೆ ಈ ಹಿಂದೆ "ವೃತ್ತ"ದಲ್ಲಿ ಪ್ರಕಟವಾಗಿದೆಯಷ್ಟೇ. ಜಿಲ್ಹಾಧಿಪರು ತೋರಿಸಿದ ಆ ಸಹಾನುಭೂತಿಯ ಲಾಭವನ್ನು ಮಾಮಲೇದಾರರು ಅಂಗಡಿಯವರಿಗೆ ಸಿಗಗೊಡುವದಿಲ್ಲ. ಅಂಗಡಿಕಾರರಿಗೆ ಕೊಡಬರುವಂತಹ ಸಕ್ಕರೆಯನ್ನು ಅವರು ಹೊಸ ಹೊಸ ಅಂಗಡಿಕಾರರಿಗೆ ಹಂಚಹಾಕುತ್ತಿದ್ದಾರೆ! ಮೊನ್ನೆಯೇ ಒಬ್ಬರು ಹೊಸ ಅಂಗಡಿಯನ್ನಿಟ್ಟಿದ್ದಾರೆ. ಅವರು ಈ ಚಹಾ ವ್ಯಾಪಾರಕ್ಕೆ ತೀರ ಹೊಸಬರು! ಅವರಲ್ಲಾಗುವ ವ್ಯಾಪಾರವೂ ಅಷ್ಟಕ್ಕಷ್ಟೇ! ಆದರೂ ಮಾಮಲೇದಾರರು ಆ ಅಂಗಡಿಗೆ ತಿಂಗಳಿಗೆ ೬೦ ರತ್ತಲು ಸಕ್ಕರೆ ಕೊಟ್ಟಿದ್ದಾರೆ. ಒಂದೆರಡು ದೊಡ್ಡ ಅಂಗಡಿಗಳಿಗೆ ವಿನಹ ಬೇರೆ ಯಾವ ಹಳೇ ಅಂಗಡಿಗೂ ಇಷ್ಟು ಸಕ್ಕರೆ ಸಿಗುವದಿಲ್ಲ! "ಇದ್ದ ಮಕ್ಕಳಿಗೆ ಗಂಜಿಯಿಲ್ಲ, ಮತ್ತೆ ಕೊಡೋ ಸದಾಶಿವಾ" ಎಂಬಂತೆ ಇದ್ದ ಅಂಗಡಿಯವರಿಗೇ ಕೊಡಲು ಸಾಕಷ್ಟು ಸಕ್ಕರೆ ಇಲ್ಲದಿದ್ದಾಗ ಹೊಸ ಹೊಸ ಅಂಗಡಿಗಳಿಗೆ ಸಕ್ಕರೆ ಮಂಜೂರ ಮಾಡಿ ಇದ್ದವರನ್ನು ಉಪವಾಸ ಕೆಡಹುವದೇಕೋ ತಿಳಿಯದು!

ಇನ್ನೊಂದು ಕಥೆ ಇದಕ್ಕೂ ಹೆಚ್ಚು ಸ್ವಾರಸ್ಯಮಯವಿದೆ. ಇಲ್ಲಿಯ ರಾ॥ ಭಗವಂತ ಪೈ ಗಾಂವಕಾರ ಇವರ ಭೂಮಿಯೆಲ್ಲ ಬೆಳಸೆ ಗ್ರಾಮದಲ್ಲುಂಟು. ಅದರಿಂದ ಅವರಿಗೆ ೮೦ ಮಾನಗಿ ಅಕ್ಕಿ ಬರುತ್ತಿದೆ. ಮನೆಯಲ್ಲಿ ೧೬-೧೭ ಮಂದಿ ಜನರಿದ್ದಾರೆ. ಅವರಿಗೆ ವರ್ಷದಲ್ಲಿ ಸರಾಸರಿ ೬೦-೬೫ ಮಾನಗಿ ಖರ್ಚಿಗೆ ಬೇಕು. ಕಳೆದ ಬೇಸಿಗೆಯಲ್ಲಿ ಇವರು ಮಾಮಲೇದಾರರಿಗೆ ಭೆಟ್ಟಿಯಾಗಿ, ಎಲ್ಲ ವಿವರ ತಿಳಿಸಿ, ಬೆಳಸೆಯಿಂದ ಅಕ್ಕಿ ತರಲು ಪರವಾನೆ ಕೊಡಬೇಕೆಂದು ಬೇಡಿಕೊಂಡರು. "ಲೆವ್ಹಿ" ಅಕ್ಕಿ ವಸೂಲ ಕೊಂಡು ಅಕ್ಕಿ ಬಿಟ್ಟುಕೊಡಬಹುದಾಗಿ ಮಾಮಲೇದಾರರು ಆಗ ಗ್ರಾಮಸ್ಥರಿಗೆ ಹುಕುಮು ಕೊಟ್ಟರು. ಅದರಂತೆ ಬೆಳಸೆಯ ಹಿಂದಿನ ಶಾನಭೋಗರು "ಲೆವ್ಹಿ" ವಸೂಲ ಮಾಡಿ ರಾ॥ ಗಾಂವಕಾರರಿಗೆ ಅಕ್ಕಿ ಒಯ್ಯಲಡ್ಡಿಯಿಲ್ಲೆಂದು ಬಿಟ್ಟುಕೊಟ್ಟರು. ಆದರೆ ಆಗ ಗಾಂವಕಾರರಿಗೆ ಪೂರ್ಣ ಅಕ್ಕಿ ರೈತರಿಂದ ವಸೂಲ ಬರಲಿಲ್ಲ. ಕೆಲವು ಅಕ್ಕಿ ವಸೂಲ ಬಂತು. ಸುಮಾರು ೩೦ ಮಾನಗಿ ರೈತರ ಮೇಲೆ ಉಳಿಯಿತು. ವಸೂಲ ಬಂದ ಅಕ್ಕಿ ಖರ್ಚದ ಮೇಲೆ ಈ ಬಾಕಿಯುಳಿದ ಅಕ್ಕಿಯನ್ನು ತರಲು ಗಾಂವಕಾರರು ಅಪ್ಪಣೆ-ಚೀಟಿ ಬೇಡಿದರು. ಆಗ ಹಿಂದಣ ಗ್ರಾಮಸ್ಥರಿದ್ದಿಲ್ಲ. ಹೊಸ ಗ್ರಾಮಸ್ಥರು ಹಿಂದೆ ಲೆವ್ಹಿ ವಸೂಲ ಕೊಟ್ಟ ಸಂಗತಿ ತಾವರಿಯೆವೆಂದೂ, ಕಾಗದ-ಪತ್ರ ತಮ್ಮ ಕಡೆಗಿಲ್ಲವೆಂದೂ ತಿನಿಯ ಮೇಲೆ ಕೈಯಿಟ್ಟರು. ಗಾಂವಕಾರರು ಆಗ ಮಾಮಲೇದಾರರನ್ನು ಕಂಡು ಅಕ್ಕಿ ಬಿಟ್ಟುಕೊಡಬೇಕಾಗಿಯೂ, ಬಿಟ್ಟುಕೊಡದಿದ್ದರೆ ತಮ್ಮ ಜನರು ಉಪವಾಸ ಬೀಳಬೇಕಾಗುವದೆಂದೂ ಅರುಹಿಕೊಂಡರು. ಗ್ರಾಮಸ್ಥರಂತೆ ಈ ಮಾಮಲೇದಾರರೇನು ಹೊಸದಾಗಿ ಬಂದವರಲ್ಲ. ಗಾಂವಕಾರರು ಹಿಂದೆ "ಲೆವ್ಹಿ" ಅಕ್ಕಿ ಕೊಟ್ಟ ಸಂಗತಿಯನ್ನೂ ಇವರು ಬಲ್ಲರು; ಗಾಂವಕಾರರ ಅವಶ್ಯಕತೆಯನ್ನೂ ಬಲ್ಲರು. ಆದರೂ ಶಾನಭೋಗರಂತೆಯೋ ಇವರೂ "ಲೆವ್ಹಿ" ಅಕ್ಕಿ ಕೊಟ್ಟನಕ ಅಕ್ಕಿ ಸ್ಥಳಾಂತರಿಸಲು ಬರಲಾರದೆಂದು ಅಪ್ಪಣೆ ಕೊಟ್ಟರು! ಆಗ ಗಾಂವಕಾರರು ನಿರುಪಾಯರಾಗಿ ಕಾರವಾರಕ್ಕೆ ಓಡಿ ಜಿಲ್ಹಾಧಿಕಾರಿಗಳ ಕಡೆ ದೂರಿಕೊಂಡರು. ಜಿಲ್ಹಾಧಿಕಾರಿಗಳು ದಯೆಗೊಂಡು ರಾ॥ ಗಾಂವಕಾರರಿಗೆ ತುರ್ತಕ್ಕೆ ೧೦ ಮುಡಿ ಅಕ್ಕಿ ಬಿಟ್ಟು ಕೊಡಬೇಕಾಗಿಯೂ, ಅವರ ಲೆವ್ಹಿ ಸಂಬಂಧದ ಕಾಗದ ಪತ್ರಗಳನ್ನು ಕಾರವಾರಕ್ಕೆ ಕಳಿಸಿಕೊಡಬೇಕಾಗಿಯೂ ಅಪ್ಪಣೆ ದಯಪಾಲಿಸಿದರಂತೆ. ಆದರೆ ಮಾಮಲೇದಾರರು ಕಾಗದ-ಪತ್ರ ಕಳಿಸಿ ಕೊಡಲಿಲ್ಲವಂತೆ! ಮೇಲೆ ಜಿಲ್ಹಾಧಿಕಾರಿಗಳಿಗೆ ಪರವಾನೆ ಕೊಡುವ ಅಧಿಕಾರವಿದ್ದರೆ ಅದನ್ನು ಜಪ್ತ ಮಾಡಿ ಸರಕಾರ ಉಗ್ರಾಣಕ್ಕೆ ಸಾಗಿಸುವ ಅಧಿಕಾರ ತಮಗುಂಟೆಂದು ಹಾರಿದರಂತೆ. ಇಷ್ಟಕ್ಕೇ ತಡೆಯದೆ ಮಾಮಲೇದಾರರು ಬೆಳಸೆಗೆ ಹೋಗಿ ರಾ॥ ಗಾಂವಕಾರರ ರೈತರ ಕಡೆಯಿಂದ ಅವರ ಕಡೆಗಿದ್ದ ಅಕ್ಕಿ ಸರಕಾರಕ್ಕೆ ಕೊಡುತ್ತೇವೆಂಬರ್ಥದ ಅಥವಾ ಹೆಚ್ಚು-ಕಡಿಮೆ ಅದೇ ಆಶಯದ ಪತ್ರಕ್ಕೆ ಅವರ ಹೆಬ್ಬೆರಳುಗಳ ಮುದ್ರೆ ಹಾಕಿಸಿಕೊಂಡರಂತೆ! ರೈತರು ಈ ಸುದ್ದಿಯನ್ನು ತಮ್ಮ ಒಡೆಯರಿಗೆ ತಿಳಿಸಿದರು. ಕೂಡಲೇ ರಾ॥ ಗಾಂವಕಾರರು ತಿರುಗಿ ಕಾರವಾರಕ್ಕೆ ಹೋಗಿ ನಡೆದ ಕಥೆಯನ್ನೆಲ್ಲ ಜಿಲ್ಹಾಧಿಕಾರಿಗಳಿಗೆ ಅರುಹಿದರು. ಆಗ ಜಿಲ್ಹಾಧಿಕಾರಿಗಳು ತಾವೇ ಸ್ವತಃ ೧೦ ಮುಡಿ ಅಕ್ಕಿ ಬೆಳಸೆಯಿಂದ ಅಂಕೋಲೆಗೆ ತರಲು ಅಪ್ಪಣೆ-ಚೀಟಿ ಕೊಟ್ಟು, ಅಕ್ಕಿ ತರುವಾಗ ಚೀಟಿಯ ಮೇಲೆ ಗ್ರಾಮಸ್ಥರ ಸಹಿ ಬರೆಯಿಸಿಕೊಳ್ಳಬೇಕೆಂದೂ, ಅಕ್ಕಿ ಅಂಕೋಲೆಗೆ ಮುಟ್ಟಿದ ಮೇಲೆ ಚೀಟಿಯನ್ನು ತಾಲೂಕಿಗೆ ಮುಟ್ಟಿಸಬೇಕೆಂದೂ ಗಾಂವಕಾರರಿಗೆ ಆಜ್ಞಾಪಿಸಿದರು. ಅದರಂತೆ ರಾ॥ ಗಾಂವಕಾರರು ೧೦ ಮುಡಿ ಅಕ್ಕಿ ರೈತರ ಕಡೆಯಿಂದ ವಸೂಲ ಮಾಡಿ ಗ್ರಾಮಸ್ಥರ ಸಹಿ ಬೇಡಿದರು. ಆದರೆ ಗ್ರಾಮಸ್ಥರು — ಬಹುಶಃ ಮಾಮಲೇದಾರರು ಹಾಗೆ ಮುಂದಾಗಿ ಸೂಚನೆ ಕೊಟ್ಟಿದ್ದರಿಂದ. ಇಲ್ಲದಿದ್ದರೆ ಜಿಲ್ಹಾಧಿಕಾರಿಗಳ ಸೂಚನೆ ಉಲ್ಲಂಘಿಸುವ ಧೈರ್ಯ ಆ ಹಳ್ಳಿಯ ಶಾನಭೋಗರಿಗೆ ಬರುತ್ತಿದ್ದಿಲ್ಲ — ಸಹಿ ಬರೆಕೊಡಲೊಪ್ಪಲಿಲ್ಲ! ರಾ॥ ಗಾಂವಕಾರರು ಈ ಬಗ್ಗೆ ಪಂಚನಾಮೆ ಮಾಡಿ, ಅಕ್ಕಿ ಮನೆಗೆ ತಂದೇ ಬಿಟ್ಟರು ಮತ್ತು ಆ ಪಂಚನಾಮೆಯನ್ನೂ ಅಪ್ಪಣೆ ಚೀಟಿಯನ್ನೂ ನೇರವಾಗಿ ಜಿಲ್ಹಾಧಿಪರ ಕಚೇರಿಗೆ ಕಳಿಸಿ ಕೊಟ್ಟಿದ್ದಾರೆ. ಜಿಲ್ಹಾಧಿಕಾರಿಗಳು ಪರವಾನೆ ಕೊಟ್ಟ ಸಂಗತಿ ಮಾಮಲೇದಾರರಿಗೂ ಬರೆದು ಬಂದಿರಬೇಕು. ಆಗಲೂ ಅವರು ಕುಚೋದ್ಯ ಬಿಡಲಿಲ್ಲ! ಬೆಳಸೆಯಿಂದ ಇಂಥವರ ಅಕ್ಕಿ ಅಂಕೋಲೆಗೆ ಬರುವದುಂಟೆಂತಲೂ, ಅದಕ್ಕೆ ಕಾಯದೆಶೀರ ಅಪ್ಪಣೆ-ಚೀಟಿ— ಗ್ರಾಮಸ್ಥರು ಸಹಿ ಕೊಡಲಿಕ್ಕಿಲ್ಲವಾದ್ದರಿಂದ ಅದು ಕಾಯದೆಶೀರವಾಗಲಿಕ್ಕಿಲ್ಲೆಂದು ಭಾವಿಸಿ(?) — ಇಲ್ಲೆಂತಲೂ, ಆ ಅಕ್ಕಿ ನಡುವೆ ಹಿಡಿದು ಜಪ್ತಿ ಮಾಡಿ ಖಟ್ಲೆ ಮಾಡಿಕೊಡಬೇಕೆಂತಲೂ ಅವರು ಫೌಜದಾರರಿಗೆ ತಿಳಿಸಿದ್ದರಾಗಿ ಹೇಳುತ್ತಾರೆ. ಆದರೆ ಪೋಲೀಸರು ಜಿಲ್ಹಾಧಿಕಾರಿಗಳ ಅಪ್ಪಣೆಚೀಟಿಯನ್ನು ನೋಡಿ, ಮಾಮಲೇದಾರರ ಅಪೇಕ್ಷೆಯಂತೆ ಮುಂಗಚೇಷ್ಟೆ ಮಾಡಲು ಸಿದ್ಧರಾಗಲಿಲ್ಲ! ಇನ್ನೂ ಈ ಕಥೆ ಮುಗಿದಿಲ್ಲ. ರಾ॥ ಗಾಂವಕಾರರು "ಲೆವ್ಹಿ"ಯನ್ನು ಕೊಡದೆ ಅಕ್ಕಿ ತಂದಿದ್ದಾರೆ, ಅವರ ಮೇಲೆ ಖಟ್ಲೆ ಮಾಡಬೇಕು ಎಂದು ಮುಂತಾಗಿ ಮಾಮಲೇದಾರ ರಾ॥ ಕೇ ಆರ್ ಶೆಟ್ಟಿಯವರು ಜಿಲ್ಹಾಧಿಪರ ಕಡೆ ವರದಿ ಕಳಿಸಿದ್ದಾರೆಂದು ಊರತುಂಬ ವಾರ್ತೆ ಹಬ್ಬಿದೆ.

ಕಾರವಾರ— (ತಾ. ೧೪-೧೨-೪೫) ಅಕ್ಟೋಬರ ತಿಂಗಳ ಕೊನೆಗೆ ಜಿಲ್ಹೆಯಲ್ಲಿ ಅಂತು ೧೧೦೦ ರಾಷ್ಟ್ರಸೇವಾದಲದ ಸೈನಿಕರಿದ್ದರು. ಇಲ್ಲಿಯ ಶಿಬಿರದಲ್ಲಿ ಕಲಿತು ಹೋದ ಜನರು ಅಲ್ಲಲ್ಲಿ ಹೊಸ ಶಾಖೆಗಳನ್ನು ತೆರೆದಿರುವದರಿಂದ ಈಗ ಜಿಲ್ಹೆಯಲ್ಲಿ ೨೧೦೦ ಮಂದಿ ದಳಕ್ಕೆ ಸೇರಿದ್ದಾರೆಂದು ಇಲ್ಲಿ ಬಂದ ವರದಿಗಳ ಮೇಲಿಂದ ಕಂಡು ಬರುತ್ತಿದೆ. ಈ ತಿಂಗಳ ಕೊನೆಯೊಳಗಾಗಿ ಈ ಸಂಖ್ಯೆ ೩೫೦೦ಕ್ಕೆ ತಲ್ಪುವಂತುಂಟು. ಜಿಲ್ಹಾ ಸಂಘಟಕರು ನಾತಾಳದಬ್ಬದ ರಜೆಯಲ್ಲಿ ಜಿಲ್ಹೆಯಲ್ಲೆಲ್ಲ ಸಂಚಾರ ಮಾಡಿ ದಳದ ಶಾಖೆಗಳಿಲ್ಲದ ಸ್ಥಳಗಳಲ್ಲಿ ಅವನ್ನು ತೆರೆಯುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ.

ಕಾರವಾರದಲ್ಲಿ ನಡೆದ ರಾಷ್ಟ್ರ ಸೇವಾದಲ ಶಿಕ್ಷಣ ಶಿಬಿರದ ಜಮಾ-ಖರ್ಚ ಪತ್ರಿಕೆ ಶಿಬಿರದ ವರದಿಯಲ್ಲಿ ಪ್ರಕಟಿಸಲ್ಪಡುವದಾಗಿಯೂ ಬೇಕಾದವರು ಅದನ್ನು ಜಿಲ್ಹಾ ಸಂಘಟಕರಲ್ಲಿ (ಕಾರವಾರ) ಬಂದು ನೋಡಿಕೊಳ್ಳಬಹುದಾಗಿಯೂ ಸಂಘಟಕರು ತಿಳಿಸುತ್ತಾರೆ.

ಇಲ್ಲಿಯ ಹುಡುಗಿಯರ ಮರಾಠಿ ಶಾಲೆಯ ಇನಾಮು ಸಮಾರಂಭ ಕಳೆದ ತಾ. ೨ಕ್ಕೆ ಜಿಲ್ಹಾಧಿಪ ರಾ॥ ನಂಜಪ್ಪ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಮಾರಂಭದ ಕಾಲಕ್ಕೆ ಒಂದು ವಿಚಿತ್ರ ಘಟನೆಯಾಯಿತು. ಇಲ್ಲಿಯ ಹಿಂದೀ ಪ್ರಚಾರಕ ರಾ॥ ಡಿ. ಕೇ. ಜೋಶಿಯವರು ಪ್ರತಿವರ್ಷ ಕೆಲವು ಪುಸ್ತಕಗಳನ್ನು ಈ ಸಮಾರಂಭದಲ್ಲಿ ಇನಾಮು ಕೊಡುವ ಬಗ್ಗೆ ಕೊಡುತ್ತಾರೆ. ಈ ವರ್ಷವೂ ಅವರು ಕೆಲವು ಪುಸ್ತಕಗಳನ್ನು ಕೊಟ್ಟಿದ್ದಾರಂತೆ. ಅವರಿಗೆ ಸಮಾರಂಭಕ್ಕೆ ಬರಲು ನಗರ ಸಭೆಯ ಅಧ್ಯಕ್ಷರ ಮುದ್ದಾಂ ನಿಮಂತ್ರಣೆಯಾಗಿತ್ತು. ಅದರಂತೆ ಅವರು ಬಂದು ಒಂದು ನಿರ್ದಿಷ್ಟ ಖುರ್ಚಿಯ ಮೇಲೆ ಕುಳಿತುಕೊಳ್ಳಲು ಹೋದರು. ಆದರೆ ಯಾಕೋ ಏನೋ, ಅಲ್ಲಿದ್ದ ನಗರಸಭೆಯ ಓರ್ವ ಸದಸ್ಯ ರಾ॥ ದ. ಸು. ನಾಯ್ಕರು ಅವರಿಗೆ ಆ ಖುರ್ಚಿಯ ಮೇಲೆ ಕೂಡ್ರಗೊಡಲಿಲ್ಲ! ಹೀಗೆ ನಗರಕಾರರೊಬ್ಬರು ಮಾನಭಂಗ ಮಾಡಿದ್ದರಿಂದ ರಾ॥ ಜೋಶಿಯವರು ಸಭೆಯನ್ನು ಬಿಟ್ಟು ನಡೆದುಬಿಟ್ಟರು. ರಾ॥ ನಾಯ್ಕರ ಈ ಅಸಭ್ಯ ನಡತೆಯ ಬಗ್ಗೆ ನಗರಾಧ್ಯಕ್ಷ ರಾ॥ ಮಾವಿನಕುರ್ವೆಯವರು ಮುಂದೆ ರಾ॥ ಜೋಶಿಯವರ ಕಡೆ ಕ್ಷಮೆ ಬೇಡಿಕೊಳ್ಳಬೇಕಾಯಿತು. ರಾ॥ ನಾಯ್ಕರು ಈಗ ೩೦-೩೫ ವರ್ಷಗಳಿಂದ ಜಿಲ್ಹಾ ಬೋರ್ಡಿನ ಮತ್ತು ನಗರಸಭೆಯ ಸದಸ್ಯರಿದ್ದಾರೆ. ಇಂಥವರಿಗೆ ಸಾದಾ ಸಭ್ಯತನ ಮತ್ತು ಶಿಷ್ಟಾಚಾರ ತಿಳಿಯದಿದ್ದದ್ದು ಸೋಜಿಗವಲ್ಲವೇ ?

ಈ ಹೊತ್ತು ಒಂದು ಲಷ್ಕರಿ ಮೋಟಾರ ಬಂಡಿಯು ವೇಗದಿಂದ ಊರೊಳಗಿಂದ ಹಾಯ್ದು ಹೋಗಿ ಪೋಲೀಸ-ಕಚೇರಿಯ ಆವಾರದ ಗೋಡೆಗೆ ಅಪ್ಪಳಿಸಿ, ಗೋಡೆಯ ಕೆಲವು ಭಾಗವನ್ನು ಒಡೆದು ಕೆಡವಿದೆ! ಆ ಮೋಟಾರ ಬಂಡಿಯ ಡ್ರಾಯವ್ಹರನು ಆಗ ಶುದ್ಧಿಯಲ್ಲಿದ್ದಿಲ್ಲವಂತೆ! ಇಂಥ ಪ್ರಕಾರಗಳ ಪುನರುಕ್ತಿಯಾಗದಂತೆ ಅಧಿಕಾರಿಗಳು ದಕ್ಷತೆ ತೆಗೆದುಕೊಳ್ಳಬೇಕು.

ಈ ತಾಲೂಕಿನ ಶಿನ್ನರ ಗ್ರಾಮದಲ್ಲಿ ಕೆಲವು ದಿನಗಳ ಹಿಂದೆ ಒಂದು ರೈತ ಸಂಘದ ಮಹಾಸಭೆಯಾಯಿತಂತೆ. ಭೂಮಿಯ ಒಡೆಯರಿಗೆ ಈ ವರ್ಷ ಗೇಣಿ ಕೊಡತಕ್ಕದ್ದಿಲ್ಲವೆಂದು ಆ ಸಭೆಯಲ್ಲಿ ಒಂದು ಗೊತ್ತುವಳಿಯಾಗಿದೆಯಾಗಿ ಹೇಳುತ್ತಾರೆ! ಈ ರೈತ ಸಂಘದವರನ್ನು ಕಾಲದಲ್ಲಿ ನಿಯಂತ್ರಿಸದಿದ್ದರೆ ಅವರು ಜಿಲ್ಹೆಯಲ್ಲೆಲ್ಲ ಗೊಂದಲವನ್ನೆಬ್ಬಿಸಿ ಜಮೀನದಾರ-ಒಕ್ಕಲಿಗರೊಳಗೆ ಕಲಹವನ್ನೆಬ್ಬಿಸಿ ಬಿಡುವ ಅಂಜಿಕೆಯುಂಟು.

ಹಳಿಯಾಳ— (ತಾ. ೧೨-೧೨-೪೫) ಶ್ರೀ ಹಳ್ಳಿಕೇರಿ ನಿಂಗಪ್ಪಣ್ಣನವರ ಆಕಸ್ಮಿಕ ಅವಸಾನದ ಕಥೆ ಹೀಗುಂಟು: ತಾ. ೭ನೇ ಶುಕ್ರವಾರ ರಾತ್ರಿ ಇಲ್ಲಿಯ ಸಂತೆಪೇಟೆಯಲ್ಲಿ ಕಾಂಗ್ರೆಸ ಪ್ರಚಾರದ ಗೀ ಗೀ ಪದಗಳನ್ನು ಹಾಡುವ ಕಾರ್ಯಕ್ರಮವಿತ್ತು. ನಿಂಗಪ್ಪಣ್ಣನವರು ಅವನ್ನು ಕೇಳಲು ಪೇಟೆಗೆ ಹೋಗಿದ್ದರು. ಅಲ್ಲಿ ಕೂತಲ್ಲಿ ಅವರಿಗೆ ಒಮ್ಮಿಂದೊಮ್ಮೆ ಮೈಯಲ್ಲಿ ನಿತ್ರಾಣವೆನಿಸಹತ್ತಿತು. ಕೂಡಲೆ ಅವರಿಗೆ ಮನೆಗೆ ಸಾಗಿಸಿ, ಡಾ॥ ಕಾಮತರಿಗೆ ಕರೆಕಳಿಸಲಾಯಿತು. ಡಾಕ್ಟರರು ಬಂದು ಕೈಲಾದ ಮಟ್ಟಿಗೆ ಪ್ರಯತ್ನ ಮಾಡಿದರು. ಆದರೆ ಏನು ಮಾಡಿದರೂ ಬೇನೆ ಕಡಿಮೆಯಾಗಲಿಲ್ಲ! ೨೦ ನಿಮಿಷಗಳಲ್ಲಿ ನಿಂಗಪ್ಪಣ್ಣನವರ ಪ್ರಾಣಪಕ್ಷಿಯು ಹಾರಿಹೋಯಿತು. ಮೃತರ ಸ್ಮಶಾನಯಾತ್ರೆಯಲ್ಲಿ ಸಾವಿರಾರು ಜನರು ಕೂಡಿದ್ದರು.

(೧ನೇ ಪಾನಿನ ಮೇಲೆ ಮುಂದರಿಸಿದೆ.)

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಬೆಲೆ ಏರುತ್ತಿದೆ.

ಕಳೆದ ವಾರ ತಿಳಿಸಿದಂತೆ ಮೊನ್ನೆ ೧೧ನೇಯ ದಿನ ಶ್ರೀ ಶಾಂತೇರಿ ಕಾಮಾಕ್ಷಿ ಮಂದಿರದಲ್ಲಿ ಗೀತಾ ಮಂಡಳಿಯವರ ತರಫಾಗಿ ಗೀತಾ ಜಯಂತಿಯ ಉತ್ಸವವಾಯಿತು. ಮುಂಜಾನೆ ಪಾರಾಯಣಗಳೂ ಮಧ್ಯಾಹ್ನ ಶ್ರೀಮದ್ಭಗವದ್ಗೀತೆಯ ಹಾಗೂ ಶ್ರೀ ಕೃಷ್ಣನ ಪೂಜೆಯೂ ನಡೆದವು. ಸಂಜೆಯಲ್ಲಿ ಇಲ್ಲಿಯ ವಕೀಲ ರಾ|| ಗಣಪತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯಾಗಿ, ಕಳೆದ ವರ್ಷದ ಗೀತಾ-ಮಂಡಳದ ಕಾರ್ಯದ ವರದಿಯು ವಾಚನವಾಯಿತು; ಮತ್ತು, ಗೀತಾ-ಬೋಧವನ್ನು ಕುರಿತು ಅಂಕೋಲೆಯ ರಾ|| ರಾ|| ಪುರುಷೋತ್ತಮ ಶೆಣ್ವಿ, ವಕೀಲ ನಾರಾಯಣ ಶಾನಭಾಗ, ಹೆಗಡೆಯ ಮಹಾಬಲೇಶ್ವರ ರಾಮಭಟ್ಟ,ವೈಕುಂಠ ಶ್ರೀನಿವಾಸ ಪ್ರಭು, ವಕೀಲ ಲಕ್ಷ್ಮಣ ಕಾಮತ ಇವರ ಭಾಷಣಗಳಾದವು. ಆಮೇಲೆ ಅಧ್ಯಕ್ಷ ರಾ|| ಶಾಸ್ತ್ರಿಯವರು ಸುಂದರ ಸಮಾರೋಪ ಮಾಡಿ, ಗೀತೆಯ ಅಭ್ಯಾಸ ಕೇವಲ ಮುಮುಕ್ಷುಗಳಿಗೆ ಬೇಕಿದ್ದಂಬ ಜನಸಾಮಾನ್ಯರಲ್ಲಿರುವ ತಿಳುವಳಿಕೆ ತಪ್ಪೆಂದೂ, ಮುಮುಕ್ಷುಗಳಿಗೆ ಉಪಯುಕ್ತವಿದ್ದಷ್ಟೇ ಗೀತಾಬೋಧವು ಸಂಸಾರಿಗಳಿಗೂ ಉಪಯುಕ್ತವಿರುತ್ತದೆಂದೂ, ಸ್ತ್ರೀ-ಪುರುಷರು ಇಲ್ಲವೆ ಬ್ರಾಹ್ಮಣ-ಶೂದ್ರರೆಂಬ ಯಾವದೇ ಭೇದಭಾವವಿಲ್ಲದ, ಯಾವಾತರು "ಅನನ್ಯಾಶ್ಚಿಂತಯಂತೋ ಮಾಂ" ಅಂದರೆ ಪರಮಾತ್ಮನು ತಮ್ಮವನೇ ಇಲ್ಲವೆ (ಅದ್ವೈತಿಗಳು ಹೇಳುವಂತೆ ತಾನೇ ಆ ಪರಮಾತ್ಮನು) ಎಂದು ತಿಳುವಳಿಕೆ ಮಾಡಿಕೊಂಡು, "ಯೇ ಜನಾಃ ಪರ್ಯುಪಾಸತೇ" ಅಂದರೆ ಭಕ್ತಿಪೂರ್ವಕವಾಗಿ ಭಜಿಸುತ್ತಿರುವರೋ ಅಂತಹ, "ತೇಷಾಂ ನಿತ್ಯಾಭಿಯುಕ್ತಾನಾಂ" ಸದಾಕಾಲವೂ ಪರಮಾತ್ಮನನ್ನೇ ನೆನೆಯುತ್ತ ತಮ್ಮ ತಮ್ಮ ವ್ಯವಹಾರ ಸಾಗಿಸುವವರ, "ಯೋಗಕ್ಷೇಮಂ ವಹಾಮ್ಯಹಂ" ಯೋಗ— (ಬೇಕಾದ್ದನ್ನು ಒದಗಿಸಿ ಕೊಡುವದು) ಕ್ಷೇಮ (ಇದ್ದದ್ದನ್ನು ಕಾಪಾಡಿ ಕೊಡುವದು) ವನ್ನು ತಾನು ನೋಡುವೆನೆಂದು ಶ್ರೀ ಕೃಷ್ಣ ಪರಮಾತ್ಮನು ಗೀತೆಯಲ್ಲಿ ಭಾಷೆ ಕೊಟ್ಟಿದ್ದಾನೆಂದೂ, ಸಕಲರೂ ಗೀತೆಯ ಬೋಧವನ್ನು ಅಭ್ಯಾಸ ಮಾಡಿಕೊಂಡು ಆಚರಣೆಯಲ್ಲಿ ತರಬೇಕೆಂದೂ ಬೋಧಿಸಿ, ಜನರೊಳಗೆ ಗೀತೆಯ ಪ್ರಚಾರ ಮಾಡುವ ಗೀತಾ-ಮಂಡಳದ ಕಾರ್ಯವನ್ನು ಕೊಂಡಾಡಿದರು. ಸಭೆಯು ಮುಕ್ತಾಯವಾದ ಮೇಲೆ ಮಂಗಳಾರತಿ, ಪ್ರಾರ್ಥನೆ, ಪ್ರಸಾದ-ಸ್ವೀಕಾರಗಳಾಗಿ ಉತ್ಸವದ ಸಮಾಪ್ತಿಯಾಯಿತು. ಬಾಗಿಲ ಗ್ರಾಮದ ಶ್ರೀ ಗಣಪತಿ ದೇವರ ಗುಡಿಯಲ್ಲೂ ರಾ|| ರಮಾಕಾಂತ ಪಂಡಿತರ ಅಧ್ಯಕ್ಷತೆಯಲ್ಲಿ ಗೀತಾ-ಜಯಂತಿಯ ಉತ್ಸವವಾದ ಸುದ್ದಿಯದೆ.

ಯುದ್ಧಕಾಲಕ್ಕಿಂತಲೂ ಈಗ ಕೊರತೆ-ಮಹಗಾಯಿಗಳು ವಿಪರೀತವಾಗಿವೆ. ತೆಂಗಿನ ಎಣ್ಣೆ ಸಿಗುವದೇ ಕಷ್ಟ! ಸಿಕ್ಕಿದ್ದ ಬಾಟಲಿಗೆ ರೂ. ೨॥।—೩ ಹೇಳುತ್ತಾರೆ! ತೆಂಗಿನ ಕಾಯಿಗಳ ದರ ೧೦೦ಕ್ಕೆ ರೂ ೨೦ ಆಗಿದೆ! ಕಡಲೆ, ಉದ್ದು, ಹೆಸರು, ತೊಗರಿ ಬೇಳೆ ಮೊದಲಾದ ಕಾಳು-ಕಡಿಗಳ ಧಾರಣೆಗಳೂ ಏರುತ್ತಿವೆ. ಈಗ ಸಿಗುವ ಕಾಳು-ಕಡಿಯೆಲ್ಲ ಹಳೆಯದು. ಹೊಸ ಕಾಳು-ಕಡಿಗಳು ಇನ್ನೂ ಮುಂಬಯಿಯಿಂದ ಬಂದಿಲ್ಲ ಅವನ್ನು ತರಲು ಪರವಾನಗಿಯೇ ಸಿಗುವದಿಲ್ಲವಂತೆ! ಮುಂಬಯಿಯ ಪೇಟೆಯಲ್ಲಿ ಕೊರತೆಯಾಗಿ ಸಿಗದಿರಬಹುದೆಂದು ತಿಳಿಯುವಾ ಎಂದರೆ ಹಾಗೇನೂ ಇಲ್ಲ. ಒಂದಕ್ಕೆ ಒಂದೂವರೆಯಷ್ಟು ದರ ಕೊಟ್ಟರೆ ಬೇಕಷ್ಟು ಕಾಳುಕಡಿ ತೆಗೆದುಕೊಳ್ಳುತ್ತೇವಾಗಿ ದಲಾಲರು ಹೇಳುತ್ತಾರಂತೆ! ಮಾರ್ಗದಲ್ಲಿಯ ನಿಯಂತ್ರಣಾಧಿಕಾರಿಗಳಿಗೆ ಬಲಿ ಮಾಡಲು ಹಣ ಬೇಕೆಂದೂ ಅದಕ್ಕಾಗಿ ಒಂದೂವರೆ ಪಟ್ಟು ಬೆಲೆ ಕೊಡಬೇಕೆಂದೂ ದಲಾಲ-ಜನರ ವಾದ! ಜಿಲ್ಲಾಧಿಪರೇ ಮುಂದಾಗಿ ಪ್ರತ್ಯೇಕ-ಅಧಿಕಾರಿಗಳ ಕಡೆಯಿಂದ ಪರವಾನೆ ಕೊಡಿಸಿ ಬೇಕಾದ ಕಾಳು-ಕಡಿ ತರಿಸಿದರೆ ಕಳ್ಳ ಪೇಟೆಯಲ್ಲಿ ಖರೀದಿ ಮಾಡುವ ಕಾರಣವು ಬೀಳುವದಿಲ್ಲ; ಹಾದಿಯೊಳಗಿನ ದೆವ್ವಗಳಿಗೆ ಬಲಿ ಮಾಡುವ

ಹತ್ತಿಕಾಳು ತುಟ್ಟಿಯಾಗಲು ಜಿಲ್ಲಾಧಿಪರು ಕಾರಣರಲ್ಲವಂತೆ.

ಕಾನಡಾ ಜಿಲ್ಲೆಯ ಕಲೆಕ್ಟರ ರಾ|| ವ್ಹಿ. ನಂಜಪ್ಪನವರು ತಾ. ೧೭-೧೨-೪೫ಕ್ಕೆ ಕೆಳಗಿನ ಪ್ರಕಟನೆ ಹೊರಡಿಸಿದ್ದಾರೆ.—

ಹತ್ತಿಕಾಳು ತುಟ್ಟಿಯಾಗಲು ನಾವೇ ಕಾರಣರೆಂದು ತಾ. ೧೨-೧೧-೪೫ರ "ವೃತ್ತ"ದಲ್ಲಿ ಪ್ರಕಟವಾದ ಅಪವಾದವು ಕೇವಲ ನಿರಾಧಾರವಾದದ್ದು. ಹತ್ತಿಕಾಳು ಹುಟ್ಟುವ ಜಿಲ್ಲೆಗಳಿಂದ ಹತ್ತಿಕಾಳು ಬೇಕಾಗುವ ಜಿಲ್ಲೆಗಳಿಗೆ ಪೂರೈಸುವ ಅಧಿಕಾರ ಪ್ರಾಂತಿಕ ಸರಕಾರವು ತನ್ನ ಕಡೆಗೆ ಇಟ್ಟುಕೊಂಡಿದೆ. ನಮ್ಮ ಜಿಲ್ಲೆಗೆ ಬೇಕಾದ ಹತ್ತಿಕಾಳು ಧಾರವಾಡ ಜಿಲ್ಲೆಯಿಂದಲೇ ಕೊಡಿಸಬೇಕಾಗಿ ನಾವು ಸರಕಾರಕ್ಕೆ ಬಿನ್ನವಿಸಿದ್ದೆವು. ಅದಕ್ಕೆ ಸರಕಾರದವರು ೩೦೦ ಟನ್ನ ಬೆಳಗಾಂವ ಜಿಲ್ಲೆಯಿಂದ ಕೊಟ್ಟರು. ಆಗ ಹತ್ತಿಕಾಳಿನ ಕೊರತೆ ತೀವ್ರವಿದ್ದದ್ದರಿಂದ ಬೆಳಗಾಂವ ಜಿಲ್ಲೆಯಿಂದ ಅದನ್ನು ತೆಗೆದುಕೊಳ್ಳುವದರ ಹೊರತು ಬೇರೆ ಉಪಾಯವಿದ್ದಿಲ್ಲ. ಧಾರವಾಡ ಜಿಲ್ಲೆಯಿಂದ ಹತ್ತಿಕಾಳು ಕೊಡುತ್ತೇನೆಂದು ಅಲ್ಲಿಯ ಜಿಲ್ಲಾಧಿಕಾರಿಗಳು ಹೇಳಿದ್ದೂ ಇಲ್ಲ; ನಾವು ಬೇಡೆಂದು ಹೇಳಿದ್ದೂ ಇಲ್ಲ. ನಮ್ಮ ಜಿಲ್ಲೆಯವರಿಗೆ ಅದಷ್ಟು ಅಗ್ಗ ಹತ್ತಿಕಾಳು ಸಿಗಬೇಕೆಂದು ಯತ್ನಿಸುತ್ತಿದ್ದೇವೆ. ಧಾರವಾಡ ಜಿಲ್ಲೆಯಿಂದಲ್ಲದೆ ಬೇರೆ ಕಡೆಯಿಂದ ತಂದರೆ ನಮಗೆ ವಾಹನ-ವೆಚ್ಚ ಬಹಳ ಬಂದು ಹತ್ತಿಕಾಳು ಹೆಚ್ಚಿನ ದರದಿಂದ ಮಾರಬೇಕಾಗುತ್ತದೆಂಬುದನ್ನು ನಾವು ಪ್ರಾಂತಿಕ ಸರಕಾರಕ್ಕೆ ತಿಳಿಸಿ, ಇನ್ನು ಮುಂದಾದರೂ ಧಾರವಾಡ ಜಿಲ್ಲೆಯಿಂದಲೇ ಕೊಡಿಸಬೇಕಾಗಿ ಬಿನ್ನವಿಸಿದ್ದೇವೆ.

ಹಿಂದುಸ್ಥಾನಿ ಪಾಠಗಳು.

ಸಬಕ ಛೇ (ಪಾಠ ೬)

ಮೈಂ ಕಲಕತ್ತೇ ಜಾವೂಂಗಾ. (ನಾನು ಕಲಕತ್ತೆಗೆ ಹೋಗುವೆ.) ತೂ ಕಬ ಜಾಯಗಾ? (ನೀ ಎಂದು ಹೋಗುವಿ?) ವಹ ಗಾಡೀಸೇ ಜಾಯೇಗಾ. (ಅವನು ಗಾಡಿಯಲ್ಲಿ ಹೋಗುವನು.) ಹಮ ರಾತಕೋ ಜಾಯೇಂಗೇ (ನಾವು ರಾತ್ರಿ ಹೋಗುವೆವು.) ಆಜ ಹಮ ಭೋಜನ ನಹೀಂ ಕರೇಂಗೆ. (ಇಂದು ನಾವು ಊಟ ಮಾಡಲಿಕ್ಕಿಲ್ಲ) ಕ್ಯಾ, ಆಪ ಮುಝೇ ಛುಟ್ಟೀ ದೇಂಗೇ? (ತಾವು ನನಗೆ ರಜೆ ಕೊಡುವಿರಾ?) ಡಾಕಿಯಾ ಇಧರ ಕಬ ಆಯೇಗಾ? (ಅಂಚೆಯವನು ಇಲ್ಲಿ ಯಾವಾಗ ಬರುವನು?) ವಹ ಚಿಟ್ಠಿಯಾಂ ಕಬ ನಿಕಾಲೇಗಾ? (ಅವನು ಪತ್ರಗಳನ್ನು ಯಾವಾಗ ತೆಗೆಯುವನು?) ರಾಜಾಜೀ ಆಜ ಚೌಪಾಟೀಪರ ಬೋಲೇಂಗೇ. (ರಾಜಾಜಿಯವರು ಇಂದು ಸಮುದ್ರ ದಂಡೆಯಮೇಲೆ ಮಾತಾಡುವರು.) ಮದ್ರಾಸಮೇಂ ಕಲ ಹರತಾಲ ಹೋಗೀ (ಮದ್ರಾಸಿನಲ್ಲಿ ನಾಳೆ ಹರತಾಳವಾಗುವದು.) ಲಡಕಿಯಾ ಕಾಲೇಜ ನಹೀಂ ಜಾಯೇಂಗೇ (ಹುಡುಗಿಯರು ಕಾಲೇಜಿಗೆ ಹೋಗಲಿಕ್ಕಿಲ್ಲ) ಯಹ ಚಿಟ್ಠೀ ಪರಸೋಂ ತೋ ಕಲಕತ್ತಾ ಪಹುಂಚೇಗೀ. (ಈ ಪತ್ರ ನಾಡದೇ ಕಲಕತ್ತೆಗೆ ತಲ್ಪುವದು.) ಖಾನಾ ಕಬ ತೈಯಾರ ಹೋಗಾ? (ಊಟ ಯಾವಾಗ ಸಿದ್ಧವಾಗುವದು?) ಆಪ ಆಜ ಕ್ಯಾ ಖಾಯೇಂಗೇ? (ತಾವು ಇಂದು ಏನು ಉಣ್ಣುವಿರಿ?) ವೇ ಕಲ ಕ್ಯಾ ಬನಾಯೇಂಗೇ? (ಅವರು ನಾಳೆ ಏನು ತಯಾರಿಸುವರು?) ಲಲಿತಾ ಖೀರ ಬನಾಯೇಗೀ. (ಲಲಿತೆ ಪಾಯಸ ತಯಾರಿಸುವಳು) ಬಢಯೀ ಪೇಡ ಕಾಟೇಗಾ ಔರ ಕುರಸಿಯಾಂ ಬನಾಯೇಗಾ. (ಬಡಿಗನು ಮರ ಕೊಯ್ಯುವನು ಮತ್ತು ಖುರ್ಚಿಗಳನ್ನು ಮಾಡುವನು.) ಪಹರೇದಾರಸೇ ಕಹೋ-ಖಬರದಾರ ರಹೋ. (ಕಾವಲಿನವನಿಗೆ ಹೇಳು- ಎಚ್ಚರಿಕೆಯಿಂದ ಇರು.) ಬಚ್ಚೋಂಸೇ ಕಹೋ—ಗಾಯೋಂಕೇ ಪಾಸ ನಹೀಂ ಜಾಯೇ. (ಮಕ್ಕಳಿಗೆ ಹೇಳು— ಆಕಳ ಸಮೀಪ ಹೋಗಬೇಡ) ದರವಾನ, ಗಾಡೀ ಲೇ ಆಓ. (ಸೇವಕಾ, ಗಾಡಿ ತಕ್ಕೊಂಡು ಬಾ.) ಗಾಡೀವಾಲಾ ಗಾಡೀಮೇಂ ಸಾಮಾನ ರಖೇಗಾ (ಗಾಡಿಯವನು ಗಾಡಿಯಲ್ಲಿ ಸಾಮಾನು ಇಡುವನು.) ಗಾಂಧೀಜೀ ಹಮಾರೇ ಯಹಾಂ ಠಹರೇಂಗೇ. (ಗಾಂಧೀಜಿಯವರು ನಮ್ಮಲ್ಲಿ ಇಳಿಯುವರು) ನೌಕರ ಬಡೇ ಜೋರಸೆ ಘಂಟೀ ಬಜಾಯೇಗಾ. ([illegible] ನೌಕರನು ಗಂಟೆ ಬಾರಿಸುವನು) ಕಲ ಸ್ಕೂಲ ಬಂದ ಹೋಗಾ (ನಾಳೆ ಶಾಲೆ ಮುಚ್ಚಲಾಗುವದು) ಸಬ ಲೋಗ ಅಪನೇ ಅಪನೇ ಘರ ಜಾಯೇಂಗೇ (ಎಲ್ಲ ಜನರೂ ತಮ್ಮ ತಮ್ಮ ಮನೆಗೆ ಹೋಗುವರು)

ಸಬಕ ಸಾತ (ಪಾಠ ೭)

ಮೈಂ ಥಾ. (ನಾನಿದ್ದೆ) ತೂ ಥಾ. (ನೀನಿದ್ದೆ.) ತುಮ ಥೇ (ನೀವಿದ್ದಿರಿ.) ವಹ ಥಾ (ಅವನಿದ್ದನು.) ವೇ ಥೇ. (ಅವರಿದ್ದರು.) ಆಪ ಥೇ (ತಾವು ಇದ್ದಿರಿ.) ಹಮ ಥೇ (ನಾವಿದ್ದೆವು.) ಲಡಕೀ ಥೀ (ಹುಡುಗಿ ಇದ್ದಳು) ಲಡಕಿಯಾಂ ಥೀಂ (ಹುಡುಗಿಯರು ಇದ್ದರು) ಮೈಂ ಹುಆ (ನಾನು ಆದೆ) ತೂ ಹುಆ. (ನೀನು ಆದೆ) ವಹ ಹುಆ. (ಅವನು ಆದನು.) ತುಮ ಹುಏ. (ನೀವು ಆದಿರಿ) ಆಪ ಹುಯೇ (ತಾವು ಆದಿರಿ) ಹಮ ಹುಯೇ. (ನಾವು ಆದೆವು.) ವೇ ಹುಯೇ. (ಅವರು ಆದರು.) ಮೈಂ ಆಯಾ (ನಾ ಬಂದೆ.) ತೂ ಆಯಾ. (ನೀ ಬಂದೆ) ವಹ ಆಯಾ. (ಅವನು ಬಂದನು) ಹಮ ಆಯೇ. (ನಾವು ಬಂದೆವು.) ಆಪ ಆಯೇ. (ತಾವು ಬಂದಿರಿ) ತುಮ ಆಯೇ (ನೀವು ಬಂದಿರಿ.) ವೇ ಆಯೇ. (ಅವರು ಬಂದರು.) ಯೇ ಆಯೇ (ಇವರು ಬಂದರು.) ಸೀತಾ ಬೋಲೀ. (ಸೀತೆ ಮಾತಾಡಿದಳು.) ಲಡಕಾ ಝೂಠ ಬೋಲಾ (ಹುಡುಗನು ಸುಳ್ಳು ಹೇಳಿದನು) ಬನಿಯಾ ಕಪಡಾ ಲಾಯಾ. (ವ್ಯಾಪಾರಿಯು ಬಟ್ಟೆ ತಂದನು) ರಾಜಾ ಮದ್ರಾಸಸೇ ಗಯಾ. (ರಾಜನು ಮದ್ರಾಸದಿಂದ ಹೋದನು.) ಖಾನಾ ತೈಯಾರ ಹುಆ. (ಊಟ ಸಿದ್ಧವಾಯಿತು.) ಗಾಡೀ ತೇಜ ಚಲೀ. (ಗಾಡಿ ವೇಗದಿಂದ ನಡೆಯಿತು.) ವಿಕ್ಟೋರಿಯಾ ಏಕ ರಾನೀ ಥೀ. (ವಿಕ್ಟೋರಿಯಾ ಒಬ್ಬ ರಾಣಿಯಾಗಿದ್ದಳು.) ಮೈಂ ಪಹಲೇ ಏಕ ಅಧ್ಯಾಪಕ ಥಾ. (ನಾನು ಮೊದಲು ಒಬ್ಬ ಶಿಕ್ಷಕನಾಗಿದ್ದೆ) ನೌಕರ ದಸ ಬಜೇತಕ ಸೋಯಾ. (ಸೇವಕನು ೧೦ ಬಡಿಯುವ ವರೆಗೆ ಮಲಗಿದನು) ಗಂಗಾ ಪಶ್ಚಿಮಸೇ ಪೂರಬಕೋ ಬಹೀ. (ಗಂಗೆಯು ಪಶ್ಚಿಮದಿಂದ ಪೂರ್ವಕ್ಕೆ ಹರಿಯಿತು) ಕಿಸಾನಕೇ ಲಡಕೇ ಆಪಸಮೇಂ ಲಡೇ. (ಒಕ್ಕಲಿಗನ ಹುಡುಗರು ತಮ್ಮೊಳಗೇ ಜಗಳಾಡಿದರು.) ನೌಕರ ಲೋಗ ಬೇಕಾರ ಬೈಠೇ. (ನೌಕರ ಜನರು ಉದ್ಯೋಗವಿಲ್ಲದೆ ಕೂತರು.) ಮೈಂನೇ ಖಾನಾ ಖಾಯಾ. (ನಾನು ಊಟ ಮಾಡಿದೆ.) ಧೋಬೀನೇ ಧೋತೀ ಧೋಯೀ. (ಅಗಸನು ಧೋತರ ಒಗೆದನು) ಲಡಕಿಯೋಂನೇ ಕಪಡೇ ಬದಲೇ. (ಹುಡುಗಿಯರು ಬಟ್ಟೆ ಬದಲಿಸಿದರು.) ಕಮಲಾನೇ ದರವಾಜಾ ಖೋಲಾ. (ಕಮಲೆಯು ಬಾಗಿಲ ತೆರೆದಳು.) ಕರೀಮ ಬಹುತ ಬಕಾ. (ಕರೀಮನು ಬಹಳ ಬೊಗಳಿದನು) ಜಪಾನಿಯೋಂನೇ ಬರ್ಮಾಪರ ಹಮಲಾ ಕಿಯಾ. (ಜಪಾನಿಯರು ಬರ್ಮಾ ಮೇಲೆ ದಾಳಿ ಮಾಡಿದರು.) ಕ್ಯಾ, ಮಿತ್ರರಾಷ್ಟ್ರೋಂನೇ ಪಹಲೇ ಜರ್ಮನೀ ಪರ ಚಢಾಈ ಕೀ? (ಮಿತ್ರರಾಷ್ಟ್ರಗಳು ಮೊದಲು ಜರ್ಮನಿಯ ಮೇಲೆ ದಾಳಿ ಮಾಡಿದವೇ?) ರಾಧಾನೇ ಏಕ ಮಸಹರೀ ಖರೀದೀ (ರಾಧೆಯು ಒಂದು ಸೊಳ್ಳೆ-ಪರದೆಯನ್ನು ಕೊಂಡುಕೊಂಡಳು.) ಕಾವೇರೀ ಪರ ಹೈದರನೇ ಬಾಂಧ ನಹೀಂ ಬಾಂಧಾ ಥಾ. (ಕಾವೇರಿಗೆ ಹೈದರನು ಅಣೆಕಟ್ಟು ಕಟ್ಟಿದ್ದಿಲ್ಲ) ಮಹಾರಾಣಾ ಪ್ರತಾಪ ಅಕಬರಸೇ ಲಡೇ. (ಮಹಾರಾಣಾ ಪ್ರತಾಪನು ಅಕಬರನ ಕೂಡ ಯುದ್ಧ ಮಾಡಿದನು.) ಕ್ಯಾ, ಯಹ ಉಸಕೀ ಭೂಲ ಥೀ? (ಇದು ಅವನ ತಪ್ಪಾಯಿತೇ?) ಕೋಲಾಹಲಕೇ ವಜಹಸೇ ಹಮನೇ ಕುಛ ನಹೀಂ ಸುನಾ (ಗಲಾಟೆಯ ಕಾರಣದಿಂದ ನಾವು ಏನೂ ಕೇಳಲಿಲ್ಲ) ಇಸ ತರಕಾರೀಮೇಂ ನಮಕ ಜ್ಯಾದಾ ಡಾಲಾ ಹೈ. (ಈ ಪಲ್ಯದಲ್ಲಿ ಉಪ್ಪು ಹೆಚ್ಚು ಹಾಕಿದ್ದಾರೆ)

THE BANK OF RURAL INDIA, LTD.,

[Incorporated in *British India* under the Indian Companies Act, 1913]

HEAD OFFICE:— **KARWAR.**

Offices at:- KARWAR, KUMTA, HONAVAR & SIRSI.

Authorised Capital -- Rs. 10,00,000;
Subscribed Capital -- Rs. 5,00,000;
Paid-up Capital -- Rs. 2,60,000.

Rates of Interest on Deposits:

Current a/c. @ 1% p. a. Savings Bank a/c @ 2½%.

Fixed Deposits for 3 months @ 3% per annum
„ „ for 6 months @ 3½% „
„ „ for 12 months or more @ 4% „

The Board of Directors have pleasure to announce the opening of a sub-Branch at YELLAPUR shortly.

All Kinds of modern Banking business transacted.

Karwar, 20-11-1945.

P. X. GRACIOUS,
MANAGING DIRECTOR.

ಪ್ರಸಂಗವೂ ಬರುವದಿಲ್ಲ. ಆದರೆ ಜಿಲ್ಹಾಧಿಕಾರಿಗಳು ತಮ್ಮ ಸಂದರ್ಶನದಲ್ಲೇ ಇದ್ದಾರೆ. ಜಿಲ್ಹೆಯವರ ಕೊರತೆಗಳನ್ನು ಆಗಿಂದಾಗ ತಿಳಕೊಂಡು ಅವನ್ನು ತತ್ಪರತೆಯಿಂದ ನೀಗಿಸಬೇಕೆಂಬ ಆಸ್ಥೆಯಾಗಲಿ ಉತ್ಕಂಠೆಯಾಗಲಿ ಅವರಲ್ಲಿ ಕಂಡು ಬರುವದಿಲ್ಲ. ಅದರಿಂದ ಎಲ್ಲೆಲ್ಲೂ “ ಈ ಹಾಳು ನಿಯಂತ್ರಣವು ಎಂದು ಹೋಗುವದೋ ! ” ಎಂದು ಜನರು ಉದ್ವೇಗಗೊಂಡು ಶಪಿಸುತ್ತಿದ್ದಾರೆ

ಉಪ್ಪಿನಪಟ್ಟಣ ಶ್ರೀ ವೆಂಕಟರಮಣ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಜಂಗಲ ಕಂಟ್ರ್ಯಾಕ್ಟರ ರಾ|| ಜಗನ್ನಾಥ ಕಾಮತ ಇವರು ತಮ್ಮ ಮಾತೋಶ್ರೀ ಭಾಗೀರಥಿಬಾಯಿಯವರ ಸ್ಮರಣಾರ್ಥ ೫೦ ಖಂಡಿ ಇಮಾರತು ಕಟ್ಟಿಗೆ ಕೊಟ್ಟಿದ್ದಾರೆಂದು ಶ್ರೀ ದೇವರ ಭಜಕರು ತಿಳಿಸುತ್ತಾರೆ

ಹೊನ್ನಾವರ— (ತಾ. ೧೫ ೧೨-೪೫) ಚಳಿ ಬಹಳ. ಮಾರ್ಗಗಳಲ್ಲಿ ಧೂಳು ಹೆಚ್ಚಾಗಿದೆ. ಒಂದಿಷ್ಟು ಗಾಳಿ ಬೀಸಿದರೆ ಯಾ ಮೋಟಾರ ಬಂಡಿ ಓಡಾಡಿದರೆ ಸುತ್ತಮುತ್ತಲಿನ ವಾತಾವರಣವೆಲ್ಲ ಧೂಳುಮಯವಾಗಿ ಉಸಿರುಗಟ್ಟಿ ಬರುತ್ತದೆ ! ಆದರೂ ನೀರು ಹಾಕಿಸುವ ವಿಚಾರ ನಗರಸಭೆಯವರ ತಲೆಯಲ್ಲಿ ಬರಲೊಲ್ಲದು ! ಪಾಲಿಕೆಯ ಆಯ-ವ್ಯಯ ಪತ್ರಕಗಳಲ್ಲಿ ಮಾತ್ರ ಅವರು ಮಾರ್ಗಗಳಿಗೆ ನೀರು ಹಾಕಿಸುವದಕ್ಕೆಂದು ಖರ್ಚಿನ ವ್ಯವಸ್ಥೆ ಮಾಡಿದ್ದಾರೆ ! ಹೀಗೆ ವ್ಯವಸ್ಥೆ ಮಾಡಿದ್ದು ಕೇವಲ ಧೂಳು ಸುಮ್ಮಗೆ ಬಿದ್ದುಕೊಳ್ಳಬೇಕೆಂದು ಅವರ ಅಪೇಕ್ಷೆಯೋ ಏನೋ !

ಒಂದು ಮಹಿನಾ ಹಬ್ಬದ ಮೂಲಕ ಸೀಧಾ ಅಂಗಡಿಗಳಿಗೆಲ್ಲ ರಜೆ ಕೊಡಲಾಗಿದೆ. ಈ ರಜೆ ಇಂದೇ ಮಂಜೂರಾಗಿ ಬಂತಂತೆ. ಜನರಿಗೆ ಈ ರಜೆಯ ವಾರ್ತೆ ಮುಂಚಿತವಾಗಿ ತಿಳಿದಿದ್ದಿಲ್ಲ. ಅದರಿಂದ ಎಷ್ಟೋ ಜನರು ತಮ್ಮ ಅಕ್ಕಿ, ಸಕ್ಕರೆ, ಎಣ್ಣೆಗಳಿಗಾಗಿ ಅಂಗಡಿಗೆ ಬಂದು, ಅಂಗಡಿ ಮುಚ್ಚಿದ್ದು ಕಂಡು ನಿರಾಶರಾಗುವ ಪ್ರಸಂಗ ಬಂತು. ಈ ಹೊಸ್ತು ಸೀಧಾ-ಪತ್ರದ ಕೊನೆಯ ದಿನ ಆದರಿಂದ ಆ ಎಲ್ಲ ಜನರ ಸೀಧಾ (ಬಾಕಿಯಿರುವ ಸೀಧಾ) ಮುಳುಗಿ ಹೋಗುವ ಪ್ರಸಂಗ ಬಂತು. ಸೀಧಾ ಅಂಗಡಿಗಳಿಗೆ ರಜೆ ಕೊಡುವಾಗ ಜನರಿಗೆ ಇಂತಹ ಕಷ್ಟ ನಷ್ಟ-ತೊಂದರೆಗಳಾಗದಂತೆ ನೋಡಿಕೊಳ್ಳಬಾರದೇ ?

ಶಿರ್ಶಿ ನಗರ ಸಭೆಯ ಲೆಕ್ಕ-ತಪಾಸಣೆಯ ವರದಿ ಮುಂತಾದ್ದು “ ವೃತ್ತ ”ದಲ್ಲಿ ಪ್ರಕಟವಾದದ್ದು ಕಂಡು, ನಮ್ಮ ನಗರ ಸಭೆಯ ಲೆಕ್ಕವಾಗಲಿ, ಲೆಕ್ಕ-ತಪಾಸಕರ ಆಕ್ಷೇಪಗಳಾಗಲಿ ಯಾಕೆ ಪ್ರಕಟಿಸಲ್ಪಡುವದಿಲ್ಲ ? ನಮ್ಮ ನಗರ ಸಭೆಗೆ ಶಿರ್ಶಿ ನಗರ ಸಭೆಯ ಕಾಯಿದೆ-ನಿಯಮಗಳು ಅನ್ವಯಿಸುವದಿಲ್ಲವೋ ಹೇಗೆ ? ಎಂದು ಮುಂತಾಗಿ ಜನರು ಆಡುತ್ತಿದ್ದಾರೆ. ತಮ್ಮ ಕೆಲಸ ಜನರ ಮುಂದೆ ಬರಬಾರದೆಂದು ನಗರ ಸಭೆಯವರು ಎಲ್ಲವನ್ನೂ ಗುಪ್ತವಾಗಿಡುತ್ತಿರಬೇಕು ಎಂದು ಅವರು ಸಂಶಯವನ್ನು ವ್ಯಕ್ತಪಡಿಸುವರು. ನಗರಪಾಲಕರು ಇತ್ತ ಗಮನ ಕೊಡಬೇಕು.

ಭಟಕಳ— (ತಾ. ೧೪-೧೨-೪೫) ಕಳೆದ ರವಿವಾರ ಗೋಕರ್ಣ ಮಠಾಧೀಶ ಶ್ರೀಮದ್-ದ್ವಾರಕಾನಾಥ ತೀರ್ಥ ಸ್ವಾಮಿಗಳು ವೆಂಕಟಾಪುರದಿಂದ ಇಲ್ಲಿ ಚಿತ್ತೈಸಿದ್ದರು. ಊರವರು ಸಂಭ್ರಮದಿಂದ ಅವರನ್ನು ಸ್ವಾಗತಿಸಲಾಯಿತು. ಇಲ್ಲಿರುವಾಗ ಪ್ರತಿನಿತ್ಯ ಗುರುಗಳ ಧಾರ್ಮಿಕ ಪ್ರವಚನಗಳಾದವು. ನಿನ್ನೆ ಅವರ ಸ್ವಾಮಿಯು ಶಿರಾಲಿಯ ಶ್ರೀ ಗಣಪತಿ-ಮಹಾಮಾಯಾ ದೇವರ ರಥೋತ್ಸವಕ್ಕೆ ಬರಬೇಕೆಂದು ಭಜಕರ ನಿಮಂತ್ರಣೆಯಂತೆ ಶಿರಾಲಿಗೆ ಚಿತ್ತೈಸಿದೆ. ಮುಷ್ಟಿಮೆಯ ಮುಂದಿನ ಗುರುಗಳು ಹೊನ್ನಾವರ ತಾಲೂಕ ಕಂಚಗ್ರಾಮ ತೀರ್ಥಯ ಸಂಚಾರಕ್ಕೆ ಹೋಗುವವರಿದ್ದಾರೆ.

ರಸ್ತೆಗಳಲ್ಲಿ ಧೂಳು ಬಹಳವಾಗಿದೆ. ನಗರಪಾಲಕರು ನೀರು ಹಾಕಿಸುವ ವ್ಯವಸ್ಥೆ ಮಾಡಬೇಕು.

ಕಳೆದ ವಾರ ಮಾವಳ್ಳಿಗ್ರಾಮದ ಉಗ್ರಾಣಿಯು ಇಲ್ಲಿಯ ತೀರ್ವಾ ಕಚೇರಿಯಿಂದ ಹೆಂಗಿನಗುಂಡಿಯ ಮಾರ್ಗವಾಗಿ ಮುರ್ಡೇಶ್ವರಕ್ಕೆ ಹೋಗುತ್ತಿದ್ದಾಗ ಅವನ ಜೊತೆಯಲ್ಲೇ ಹೋಗುತ್ತಿದ್ದ ಕೆಲವು ಮೊಗೇರ ಜನರು ಹಾದಿಯಲ್ಲೊಂದು ಕಡೆ ಉಗ್ರಾಣಿಯ ಕೈಯಲ್ಲಿದ್ದ ಚೀಲವನ್ನೂ ಹಣವನ್ನೂ ಕಸಕೊಂಡು ಓಡಿಹೋದರೆಂದು ಸುದ್ದಿ. ಪೋಲೀಸ ಚೌಕಶಿ ನಡೆದಿದೆ.

ಶಿರ್ಶಿ— (ತಾ. ೧೫-೧೨-೪೫) ಸರಕಾರದವರ ಭತ್ತದ ಲೆವ್ಹಿ ಕಡಿಮೆಯಾಗದೆಯಿಂದೂ, ಫೇಬ್ರುವರಿ ತಿಂಗಳ ವರೆಗೆ ಜನರಿಗೆ ಅಕ್ಕಿ ಪೂರೈಸಲು ಕಷ್ಟವಾಗುವದೆಂದೂ ಕಾರಣಗಳನ್ನು ಹೇಳಿ ಅಧಿಕಾರಿಗಳು ಈಗ ಒಂದು ತಿಂಗಳಿಂದ ಅವಲಕ್ಕಿ ಮಂಡಕ್ಕಿ ಮಾಡುವವರಿಗೆ ಭತ್ತ ಕೊಡುವದನ್ನು ನಿಲ್ಲಿಸಿದ್ದಾರೆ. ಅವಲಕ್ಕಿ-ಮಂಡಕ್ಕಿ ತಯಾರಿಸಿ ಮಾರುವವರ ೧೦೦ ಕುಟುಂಬಗಳಾದರೂ ಈ ಊರಲ್ಲಿವೆ. ಅವರಿಗೆ ಈಗ ಉದ್ಯೋಗ ಸಿಗದೆ ಬಹಳ ಕಷ್ಟದಲ್ಲಿದ್ದಾರೆ. ಮುಂದೆ ಬರಲಿರುವದೆಂಬ ದುಷ್ಕಾಲವು ಈ ಜನರನ್ನು ಈಗಲೇ ಬಾಧಿಸುತ್ತಿದೆ ! ಜಿಲ್ಹಾಧಿಕಾರಿ ಅವರಿಗೆ ಸಹಾಯದ ವ್ಯವಸ್ಥೆ ಮಾಡಬೇಕು.

ಶ್ರೀ|| ಸಹಸ್ರಬುದ್ಧೇ, ಕಾಕಾಸಾಹೇಬ ಮತ್ತು ಶ್ರೀಮತಿ ಸುಚೇತಾ ರಾಕೂರ ಇವರು ಕಳೆದ ತಾ. ೫ಕ್ಕೆ ಇಲ್ಲಿ ಬಂದಿದ್ದರು. ಸಂಜೆ ಇಲ್ಲಿಯ ಪತ್ತಿ-ಚಾಳಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಅವರ ಭಾಷಣಗಳಾದವು. ಕಾಂಗ್ರೆಸ-ಸಂಘಟನೆ, ಹರಿಜನ-ಸೇವೆ, ರಾಷ್ಟ್ರಸೇವಾ ದಳದ ಮಹತ್ವ ಈ ವಿಷಯಗಳನ್ನು ಕುರಿತು ಅವರು ಮಾತಾಡಿದರು. ರಾತ್ರಿಯಲ್ಲಿ ಅಭ್ಯಾಗತರು ಸ್ಥಾನಿಕ ಕಾಂಗ್ರೆಸ-ಕಾರ್ಯಕರ್ತರನ್ನು ಭೆಟ್ಟಿಯಾಗಿ, ಅವರಿಗೆ ತಕ್ಕ ಸಲಹೆಗಳನ್ನು ಕೊಟ್ಟರು.

ಈ ಊರಲ್ಲಿ ಈಗ ರಾಷ್ಟ್ರಸೇವಾ ದಳದ ೪ ಶಾಖೆಗಳಿವೆ. ಇನ್ನೂ ಕೆಲವು ಶಾಖೆಗಳು ತೆರೆಯಲ್ಪಡುವವಂತೆ. ಭಗಿನೀವರ್ಗಕ್ಕಾಗಿ ಪ್ರತ್ಯೇಕ ಶಾಖೆಯೊಂದನ್ನು ತೆರೆಯುವ ವಿಚಾರವೂ ಉಂಟು.

ಮಂಜಗುಣಿಯ ಸೀಧಾ-ಅಂಗಡಿಯಲ್ಲಿ ಬಹಳ ಕಳ್ಳಾಟ ನಡೆದಿದೆಯೆಂದು ಓರ್ವರು ದೂರುತ್ತಾರೆ. ಕೂಪನಧಾರಿಗಳಿಗೆ — ಅವರೆಲ್ಲರೂ ನಿರಕ್ಷರಕುಕ್ಷಿಗಳು — ಒಂದೊಂದು ದ್ಯಾಂಟಿ ಎಣ್ಣೆ ಕೊಟ್ಟು ಮೂರು ಪಾವು ದ್ಯಾಂಟಿ ಖರ್ಚು ಬರೆಯುತ್ತಾರಂತೆ ! ಮತ್ತು ಉಳಿದ ಎಣ್ಣೆಯನ್ನು ಕಳ್ಳ ಪೇಟೆಯಲ್ಲಿ ಮಾರುತ್ತಾರಂತೆ. ಹೇರಳ ಅಕ್ಕಿಯೂ ಕಳ್ಳ ಪೇಟೆಗೆ ಹೋಗುತ್ತದೆಯಂತೆ. ಅಧಿಕಾರಿಗಳು ಚೌಕಶಿ ಮಾಡಬೇಕು

ಸಿದ್ದಾಪುರ— (ತಾ. ೧೪-೧೨-೪೫) ಇದೇ ಬರುವ ತಾ. ೨೪ನೇ ಸೋಮವಾರ ಯುದ್ಧದಲ್ಲಿ ಮಿತ್ರರಿಗೆ ವಿಜಯ ದೊರೆತದ ಬಗ್ಗೆ “ ಕೃತಜ್ಞತೆ ಸಲ್ಲಿಸುವ ದಿನ ” ಆಚರಿಸಬೇಕಾಗಿ ಸರಕಾರದವರ ಅಪ್ಪಣೆಯಾಗಿದೆಯಷ್ಟೆ. ಆ ದಿನದ ಆಚರಣೆಗಾಗಿ ನಿಧಿ ಕೂಡಿಸುವ ಕೆಲಸ ಈ ತಾಲೂಕಿನಲ್ಲಿ ಒತ್ತರದಿಂದ ಸಾಗಿದೆ. ಪ್ರತಿಯೊಬ್ಬ ಶಾನಭೋಗನು ಕನಿಷ್ಠ ೨೦೦-೩೦೦ ರೂ. ನಿಧಿ ಕೂಡಿಸಿ ಕೊಡಬೇಕೆಂದು ಆಜ್ಞಾ-ರಾಯಸಗಳು ಹೊರಟಿವೆಯಂತೆ ! ಈ ಊರಲ್ಲಿ ನಿಧಿ ಕೂಡಿಸುವ ಒಂದು ಕ್ರಮ ನಮೂದಿಸತಕ್ಕಂಥಾದ್ದಿದೆ. ಹೊಸ ಸೀಧಾ-ಕಾರ್ಡುಗಳನ್ನು ಕೊಡುತ್ತೇನಾಗಿಯೂ ಹಳೆಯ ಕಾರ್ಡುಗಳನ್ನು ಜನರು ತಿರುಗಿ ಕೊಡಬೇಕಾಗಿಯೂ ಊರಲ್ಲಿ ಡಂಗುರ ಸಾರಿತು, ಕಾರ್ಡುಗಳನ್ನೆಲ್ಲ ತಿರುಗಿ ತಕ್ಕೊಂಡರು. ಈಗ ಹೊಸ ಕಾರ್ಡುಗಳನ್ನು ಕೊಡಬೇಕಾದರೆ “ ಕೃತಜ್ಞತಾ ನಿಧಿ ”ಗೆ ವಂತಿಗೆ ಕೊಡಬೇಕು ! ಅವರವರ ಐಪತ್ತಿನಂತೆ ೨-೩-೫ ರೂ. ವಂತಿಗೆ ಕೊಟ್ಟರೆ ಮಾತ್ರ ಕಾರ್ಡುಗಳು ಸಿಗುತ್ತವೆ ! ಚಹಾ ಅಂಗಡಿಯವರು ವಿಶೇಷ-ವಂತಿಗೆ ಕೊಡಬೇಕು ! ವಂತಿಗೆ ಕೊಟ್ಟವರಿಗೆ ಪಾವತಿಗಳನ್ನು ಮಾತ್ರ ಕೊಡುವದಿಲ್ಲ ! ಪಾವತಿ ಕೊಟ್ಟಲ್ಲಿ ನಿಧಿ ಕೂಡಿಸಿದ ಪುರಾವೆ ಜನರ ಕೈಯಲ್ಲಿ ಸಿಗುತ್ತದೆಂದು ಪಾವತಿ ಕೊಡುವದಿಲ್ಲವೋ ಅಥವಾ ಕೂಡಿಸಿದ ಹಣವೆಲ್ಲ, ಅದು ಎಲ್ಲಿ ಹೋಯಿತು ಎಂಬುದರ ಲೆಕ್ಕ ಸಿಗಬಾರದೆಂದು ಕೊಡುವದಿಲ್ಲವೋ ದೇವರೇ ಬಲ್ಲ ! ಒತ್ತಾಯದಿಂದ ಹಣ ಕೂಡಿಸಿ ಉತ್ಸವ ಮಾಡುವದಕ್ಕಿಂತ ಅದನ್ನು ಮಾಡದಿದ್ದರೆ ಇಲ್ಲವೆ ವಿಶೇಷ ವೆಚ್ಚವಿಲ್ಲದೆ ಉತ್ಸವ ಮಾಡಿದರೆ ನಡೆಯುವಂತಿಲ್ಲವೇ ?

ಮೊನ್ನೆ ಮೊನ್ನೆ ಸರಕಾರ-ಮಾನ್ಯ ಖಾದಿ ಅಂಗಡಿಯಲ್ಲಿ ಧೋತರಗಳ ಹಂಚುವಿಕೆಯಾಯಿತು. ಮಧ್ಯಾಹ್ನ ೪ ಘಂಟೆಗೆ ಧೋತರಗಳ ಗಂಟು ಒಡೆಯುವರೆಂದೂ ಆಗ ಬೇಕಾದವರು ಬಂದು ಕೊಂಡುಕೊಳ್ಳಬೇಕೆಂದೂ ಮೊದಲೇ ಜಾಹೀರ ಮಾಡಲಾಗಿತ್ತು. ಆದರಂತೆ ೪ ಘಂಟೆಗೆ ೫-೬ ನಿಮಿಷಗಳಿರುವಾಗಲೇ ನೂರಿನ್ನೂರು ಜನರು ಅಂಗಡಿಯ ಬಾಗಿಲಲ್ಲಿ ಮುತ್ತಿದರು. ಆದರೆ ೪ಕ್ಕೆ ೫ ಮಿನಿಟುಗಳಿರುವಾಗ ಭಾಗೀದಾರರೊಬ್ಬರು ಯಾರದೋ ೨೦ ಸೀಧಾ ಕಾರ್ಡುಗಳನ್ನು ಕೂಡಿಸಿಕೊಂಡು ಅಂಗಡಿಗೆ ಬಂದು, ಅಂಗಡಿಯೊಳಗೆ ಹೋಗಿ ಇದ್ದ ಧೋತರಗಳನ್ನೆಲ್ಲ ಖರ್ಚು ಬರೆಯಿಸಿಕೊಂಡು ಬಿಟ್ಟರು ! ಧೋತರಗಳಿಗಾಗಿ ನೆರೆದ ಜನರು ಈ ನಾಟಕ ನೋಡಿ ನಿರಾಶರಾಗಿ ತಿರುಗಿ ಹೋಗಬೇಕಾಯಿತು, ಮೇಲಿನ ನಾಟಕ ಜರುಗುವಾಗ ಪೂರೈಕೆ ಅಧಿಕಾರಿಗಳೂ ಅಲ್ಲಿ ಬಂದು ನಿಂತಿದ್ದರು. ಅದಾಗಲೇ ಖರ್ಚು ಬರೆದು ಹೋದ ಧೋತರಗಳನ್ನು ಬಿಟ್ಟು ಇನ್ನುಳಿದ ಧೋತರಗಳನ್ನು (?) ಕೊಡಿಸುವ ಒಂದು ಪ್ರಯತ್ನವನ್ನು ಅವರೂ ಅದಿ ತೋರಿಸಿದರು ! ನಿಯಂತ್ರಣರಾಜ್ಯದಲ್ಲಿ ಎಂತೆಂತಹ ನಾಟಕಗಳಾಗುತ್ತವೆ ನೋಡಿರಿ

ಕಳೆದ ವಾರ ಭಾವಿ ಅಕ್ಕಿ ಗಿರಣಿಯಲ್ಲಿ ೬ ಚೀಲ ಕಳ್ಳ-ಭತ್ತ ಸಿಕ್ಕಿತ್ತು. ತಮ್ಮ ಪರವಾನೆಯ ವಿನಹ ಅದನ್ನು ಯಾರಿಗೂ ಕೊಡಬಾರದೆಂದು ಅಧಿಕಾರಿಗಳು ಗಿರಣಿಯವರಿಗೆ ತಾಕೀತು ಕೊಟ್ಟು ನಡೆದರು. ಆ ಭತ್ತವೀಗ ಇದ್ದಲ್ಲಿಂದ ಮಾಯವಾಗಿದೆ ! ಅದು ಯಾರದೋ ಒಬ್ಬ ಶ್ರೀಮಂತರದಿತ್ತಂತೆ. ಹೀಗಾಗಿ ಸದ್ದು-ಗದ್ದಲವಿಲ್ಲದೆ ಭತ್ತ ಬಿಟ್ಟುಕೊಟ್ಟರಂತೆ ! ಅದೇ ಆ ಭತ್ತ ಬಡವನದಾಗಿದ್ದರೆ ಪಂಚನಾಮೆ, ಜಪ್ತಿ, ಖಟ್ಲೆಗಳಾಗುತ್ತಿದ್ದವು !

ಇಲ್ಲೊಂದು ಸರಾಯಿ ಅಂಗಡಿ ತೆರೆಯಲ್ಪಟ್ಟ ಸುದ್ದಿ ಹಿಂದೊಮ್ಮೆ “ ವೃತ್ತ ”ದಲ್ಲಿ ಪ್ರಕಟವಾಗಿತ್ತು. ಆ ಪ್ರಕಟನೆಯ ನಂತರವಾದರೂ ಅಂಗಡಿ ಮುಚ್ಚಲ್ಪಡುವದು ಇಲ್ಲವೆ ಅಧಿಕಾರಿಗಳು ಅದನ್ನು ಮುಚ್ಚುವರು ಎಂದು ವಿಚಾರವಂತರ ಅಪೇಕ್ಷೆಯಾಗಿತ್ತು. ಆದರೆ ಹಾಗೇನೂ ಆಗಿಲ್ಲ ! “ವೃತ್ತ”ವು ದೂರಿಕೊಂಡರೂ ಅಂಗಡಿಯನ್ನು ತಾವು ನಿರ್ಭಯವಾಗಿ ನಡಿಸುತ್ತಿದ್ದೇವೆ ಎಂಬ ಹೆಮ್ಮೆಯನ್ನೇ ಅಂಗಡೀಕಾರರು ತೋರ್ಪಡಿಸುತ್ತಿದ್ದಾರೆ ! ಅಬಕಾರಿ ಮತ್ತು ಇನ್ನಿತರ ಅಧಿಕಾರಿಗಳ ಬೆಂಬಲವಿಲ್ಲದಿರುತ್ತಿದ್ದರೆ ಅಂಗಡಿಯವರು ಹೀಗೆ ಹೆಮ್ಮೆಪಡುತ್ತಿದ್ದಿಲ್ಲವೆಂದು ಒಳಗುಟ್ಟು ಬಲ್ಲ ಕೆಲವರ ಅಂಬೋಣವುಂಟು. ಇಲ್ಲಿರುವ ಇದೇ ಅಬಕಾರಿ ಶಿಬಂದಿಯನ್ನು ಕೂಡಲೇ ಇಲ್ಲಿಂದ ವರ್ಗಾಯಿಸಿ ಕರ್ತವ್ಯದಕ್ಷ ಹೊಸಬರನ್ನು ಇಲ್ಲಿ ತಂದರೆ ಮಾತ್ರ ಸಾರಾಯಿಯ ಈ ದುರ್ವ್ಯಾಪಾರ ನಿಂತೀತು. ಇಲ್ಲದಿದ್ದರೆ ಅದು ಸರಾಗವಾಗಿ ನಡೆಯುವದೇ !

ಬಾಳೇಕೊಪ್ಪದಿಂದ ಕಾನಸೂರಕ್ಕೆ ಹೋಗುವ ರಸ್ತೆ, ವಿಶೇಷವಾಗಿ ೯, ೧೦ ಮ್ಯಾಲುಗಲ್ಲುಗಳ ನಡುವಿನ ಭಾಗ, ಕಳೆದ ಮಳೆಗಾಲದಲ್ಲಿ ಅತಿವೃಷ್ಟಿಯಾದಾಗ ಪೂರ್ತಿ ಕೆಟ್ಟು ಹೋಗಿದೆ. ಚಕ್ಕಡಿಗಳು ಓಡಾಡುವದು ಒತ್ತಟ್ಟಿಗಿರಲಿ, ಕಾಲ್ನಡಿಗೆಯವರೂ ಅಲ್ಲಿ ನಿರ್ಭಯವಾಗಿ ನಡೆಯಲಾರರು. ಅಲ್ಲಲ್ಲಿ ಮರಗಳು ಮುರಿದು ಇಲ್ಲವೆ ಕುಸಿದು ಬಿದ್ದದ್ದುಂಟು. ಅದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಸೀಧಾ-ಅಂಗಡಿಗೆ ಹೋಗಿ ಸೀಧಾ ತರಲಿಕ್ಕೂ, ಅಡಿಕೆ ಮಗೈ* ಪೇಟೆಗೆ ಕೊಂಡೊಯ್ಯಲಿಕ್ಕೂ ಜನರಿಗೆ ಕಷ್ಟವಾಗುತ್ತದೆ. ಈ ಎಲ್ಲ ಕಥೆಯನ್ನು ಜಿಲ್ಹಾ ಬೋರ್ಡಿನ ಲಕ್ಷ್ಯಕ್ಕೆ ತಂದುಕೊಟ್ಟರೂ, ಸಿದ್ದಾಪುರ ತಾಲೂಕಿನ ಈ ವರ್ಷದ ಕಾಮಗಾರಿಗಳ ಬಗ್ಗೆ ತೆಗೆದಿಟ್ಟ ಪರಂತು ಖರ್ಚಾಗದೆ ಉಳಿದಿರುವ ಹಣ ವಿನಿಯೋಗಿಸಿ ಈ ರಸ್ತೆ ದುರುಸ್ತ ಮಾಡತಕ್ಕದ್ದೆಂದು

(೨ನೇ ಪಾನಿನ ಮೇಲೆ ಮುಂದುವರಿಸಿದೆ)

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ “ಸ್ಟಾರ ಆಫ್ ಕೆನರಾ ಪ್ರೆಸ್ಸಿ”ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ. ೩-೪-೦
ಟಪಾಲದ್ವಾರಾ ವರ್ಷಕ್ಕೆ ೪-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೯
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ಹಣ ಕಳಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕಳಿಸಬೇಕು.
ವರ್ಗಣಿಯು ಮುಂಗಡ ಕೊಟ್ಟಿರತಕ್ಕದ್ದು

Reg. No. B 1270. Monday, 24th December, 1945

ಕಾನಡಾವೃತ್ತ

ವರ್ಷ ೨೮.] THE KANARA NEWS. [ಸಂಚಿಕೆ ೨೫

ಕುಮಟಾ:- ಸೋಮವಾರ, ತಾ. ೨೪ ಮಾಹೆ ಡಿಸೆಂಬರ ೧೯೪೫ನೇ ಇಸವಿ.

ಜಾಹೀರಾತುಗಳ ದರ;
ಪ್ರತಿ ೧ ಇಂಚು ಉದ್ದ
೧ ಸಾಲಿಗೆ ೬ ಆಣೆಯಂತೆ.
ಸ್ಥೂಲಬ್ಯಾಕಾ ೧ ಇಂಚು ಉದ್ದ
೧ ಸಾಲಿಗೆ ೮ ಆಣೆಯಂತೆ.
ನಿಶ್ಚಿತ ಇಲ್ಲದ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಿಸಲಾದೀತು.

ಸ್ಥಾನಿಕ ವೃತ್ತಾಂತ.

(೨ನೇ ಪುಟದಿಂದ ಮುಂದುವರಿದ್ದು.)

ಬದುಕಿಸಿಕೊಳ್ಳಲಾಯಿತು. ಮೊನ್ನೆ ಶುಕ್ರವಾರ ಸಂಜೆ ಪುನಃ ಕುಂಟ-ಜಟಿಕನ ಸಮೀಪದಲ್ಲಿರುವ ಒಂದು ಹಿತ್ತಲಿನಲ್ಲಿದ್ದ ನಾಮಧಾರಿ ಜಾತಿಯವರ ಒಂದು ಮನೆ ಪೂರ್ಣ ಸುಟ್ಟು ಬೂದಿಯಾಯಿತು. ಅದರ ಬಳಿಯಲ್ಲಿಯೇ ಇದ್ದ ಬೇರೆ ಎರಡು ಮನೆಗಳಿಗೂ ಬೆಂಕಿಯ ಉಪಸರ್ಗವಾಗಿತ್ತು. ಆದರೆ ಜನರು ಪ್ರಯತ್ನಪಟ್ಟು ಅವನ್ನು ಉಳಿಸಿದರು.

ನಾಳೆ ಮಂಗಳವಾರ (ಮುಂಜಾನೆ ಹಾಗೂ ಸಂಜೆ) ಇಲ್ಲಿಯ ತಾಲೂಕ ಶಾಳೆಯಲ್ಲಿ ಕುಮಟಾ ಪೇಟೆಯ ಪ್ರಾಥಮಿಕ ಶಿಕ್ಷಕರ ಸಮ್ಮೇಲನವೂ ಶೈಕ್ಷಣಿಕ ವಸ್ತುಗಳ ಪ್ರದರ್ಶನವೂ ಜಿಲ್ಹಾ ಲೋಕಲ ಬೋರ್ಡಿನ ಆಡಳಿತ ಅಧಿಕಾರಿಗಳಾದ ರಾ|| ನಾಡಕರ್ಣಿ ಇವರ ಅಧ್ಯಕ್ಷತೆಯಲ್ಲಿ ಜರುಗಲಿದೆ

ಕಳೆದ ವಾರ ತಿಳಿಸಿದಂತೆ ರಾ|| ರಮಾಕಾಂತ ಪಂಡಿತರ ಅಧ್ಯಕ್ಷತೆಯಲ್ಲಿ ಆದ ಗೀತಾ-ಜಯಂತಿ ಉತ್ಸವವು ಅಘನಾಶಿನಿಯ ಶ್ರೀ ಗಣಪತಿ ದೇವಸ್ಥಾನದಲ್ಲಾಗಿತ್ತು. ಕಾಗಾಲದಲ್ಲಿ. ಗುಡ್ಡಕಾಗಾಲದಲ್ಲಿ ವೇ|| ಸುಬ್ರಾಯ ಕರ್ಮಾ ದೇವನೀಮನೆ ಇವರ ಅಧ್ಯಕ್ಷತೆಯೊಳಗೆ ಪ್ರತ್ಯೇಕ ಗೀತಾ-ಜಯಂತೀ ಉತ್ಸವವಾಗಿತ್ತು. ಗುಡ್ಡಕಾಗಾಲ ಗ್ರಾಮದ ಗಾಂವಠಿ ಶಾಳೆಯ ವಿದ್ಯಾರ್ಥಿಗಳು ಈ ವರ್ಷ ಸ್ವಯಂಸ್ಫೂರ್ತಿಯಿಂದ ಕಳೆದ ಮಂಗಳವಾರ ಶ್ರೀ ದತ್ತಜಯಂತಿಯ ಉತ್ಸವವನ್ನು ಆಚರಿಸಿದ ಸುದ್ದಿಯುಂಟು

ಕೊಲೇಜ ಸಮಿತಿಯವರು ಈ ವರೆಗೆ ಕುಮಟಾ ಶಹರ, ಗೋಕರ್ಣ ಮತ್ತು ಬಂಕಿಕೋಡ್ಲ ಊರುಗಳಲ್ಲೇ ೬೫-೬೬ ಸಾವಿರ ರೂಪಾಯಿಗಳ ವಾಗ್ದಾನಗಳನ್ನು ಪಡಕೊಂಡಿದ್ದಾರೆ. ಕುಮಟಾ ತಾಲೂಕಿನಲ್ಲಿ ಕನಿಷ್ಠ ೧ ಲಕ್ಷ ರೂಪಾಯಿ ಕೂಡುವದೆಂದು ಅವರ ಅಪೇಕ್ಷೆಯುಂಟು ಆದರೆ ಕೊಲೇಜಿಗೆ ಐಸಿಲ್ಲೆಂದರೂ ೫ ಲಕ್ಷ ರೂ. ಬೇಕು. ಇಡೀ ಜಿಲ್ಹೆಯ ಧನಿಕರು ಕೊಡುಗೈ ದೊರೆಗಳಾಗಿ ಸಮಿತಿಗೆ ಸಹಾಯ ಮಾಡಿದ ವಿನಹ ಕೊಲೇಜು ಮೂರ್ತರೂಪ ಹೊಂದುವಂತಿಲ್ಲ ಕೊಲೇಜು ತೆರೆಯಲ್ಪಡುವದು ಕುಮಟಾ ತಾಲೂಕಿನವರ ಒಬ್ಬರ್ಸ್ಟೇ ಅಲ್ಲ; ಇಡೀ ಜಿಲ್ಹೆಯ ಜನರ ಬಗ್ಗೆ — ಇಡೀ ಉತ್ತರ ಕರ್ನಾಟಕದ ಬಗ್ಗೆಂದು ಹೇಳಿದರೂ ತಪ್ಪಾಗುವದಿಲ್ಲ ಯಾಕೆಂದರೆ ಧಾರವಾಡ, ಬೆಳಗಾಂವ ಕೊಲೇಜುಗಳಲ್ಲಿ ಪ್ರವೇಶ ಸಿಗದ ಹಾಗೂ ಇಲ್ಲಿಯ ಆರೋಗ್ಯ-ವಾತಾವರಣಗಳಿಗೆ ಮೆಚ್ಚಿದ ಹೊರಗಿನ ವಿದ್ಯಾರ್ಥಿಗಳು ಈ ಕೊಲೇಜಿಗೆ ಸೇರುವರೆಂದು ನಾವು ಅಪೇಕ್ಷಿಸಲೇ ಬೇಕು — ಇರುತ್ತದೆ ಆದ್ದರಿಂದ ಜಿಲ್ಹೆಯೊಳಗಿನ ಸಕಲ ಧನಿಕರು ಹಾಗೂ ಹೊರನಾಡಿನಲ್ಲಿರುವ ಜಿಲ್ಹೆಯ ಜನರು ವಿಶಾಲ ವಿಚಾರದಿಂದಲೂ ಉದಾರ ಬುದ್ಧಿಯಿಂದಲೂ ಕೊಲೇಜಿನ ಕಾರ್ಯಕ್ಕೆ ಸ್ವಯಂಸ್ಫೂರ್ತಿಯಿಂದ ಶಕ್ತಿಮೀರಿ ನೆರವಾಗುವದವಶ್ಯವುಂಟು. ಈ ಸಾಹಾಯದ ರಚನೆಯಲ್ಲಿ ಸಮಿತಿಯವರು ಭಟಕಳ, ಹೊನ್ನಾವರ, ಶಿರ್ಸಿ, ಅಂಕೋಲಾ ವಗೈರೆ ಊರುಗಳಿಗೆ ಹೋಗುವವರಿದ್ದಾರೆ. ಅಲ್ಲಿ ಅವರಿಗೆ ಅಪೇಕ್ಷೆಯ ಹೊರಗೆ ಯಶಸ್ಸು ಮತ್ತು ಪ್ರೋತ್ಸಾಹ ಸಿಗುವದೆಂದು ಆಶಿಸಲಾಗಿದೆ

ಕಲ್ಲಬ್ಬೆಯಲ್ಲಿ ೩-೪ ವಾರಗಳ ಹಿಂದೆ ಸಂಶಯಾತ್ಮಕ ರೀತಿಯಲ್ಲಿ ಮರಣಪಟ್ಟ ಗೌಡನು ಕೊಲೆ ಮಾಡಲ್ಪಟ್ಟು ಮಡಿದನೆಂದು ಕಂಡು ಹಿಡಿದು ಪೋಲೀಸರು ೪ ಗೌಡರ ವಿರುದ್ಧ ಕೊಲೆಪಾತಕದ ಖಟ್ಲೆ ಮಾಡಿಕೊಟ್ಟಿದ್ದಾರೆ.

ಹೊನ್ನಾವರ— (೧೬ ೧೨ ೪೫) ಉರುವಲ ಉಗ್ರಾಣದಲ್ಲಿ ಯಾವಾಗಲೂ ಕನಿಷ್ಠ ೫೦ ಟನ್ನ ಉರುವಲ ಸಂಗ್ರಹವಿರಬೇಕೆಂಬ ನಿಯಮವಿದೆ ಆದರೆ ಇತ್ತಲಾಗಿ ೧೦-೧೨ ಟನ್ನ ಸಹ ಶಿಲ್ಕು ಇಲ್ಲ! ಜಂಗಲ ಅಧಿಕಾರಿಗಳು ಇನ್ನೂ ಜಂಗಲದಲ್ಲೇ ಇದ್ದಾರೆ! ಜನರಿಗಾಗುವ ತೊಂದರೆಗಳು ಅವರ ಕಣ್ಣಿಗೆ ಹೇಗೆ ಬೀಳಬೇಕು ?

ಊರಲ್ಲೆಲ್ಲೂ ತೆಂಗಿನ ಎಣ್ಣೆ ಇಲ್ಲ. ಕಲ್ಲೆ ಹಿಟ್ಟಿನ ಗತಿಯೂ ಅದೇ. ಮುಂಬಯಿಯಿಂದ ತರಿಸಿಕೊಳ್ಳಲು ಪರವಾನೆ ಸಿಗುವದಿಲ್ಲವಂತೆ. ಶಿರ್ಸಿಯವರಿಗೊಬ್ಬರಿಗೆ ಪರವಾನೆ ಕೊಟ್ಟಿದ್ದರಂತೆ. ಆ ಪುಣ್ಯಾತ್ಮರು ಬಹಳಷ್ಟು ಹಿಟ್ಟು ಹಾದಿಯಲ್ಲಿ ಧಾರವಾಡ ಜಿಲ್ಹೆಯಲ್ಲೇ ಮಾರಿಬಿಟ್ಟರು! ಅವರಲ್ಲಿಗೆ ಬರುವ ವರೆಗೆ ಹಿಟ್ಟೇ ಉಳಿಯಲಿಲ್ಲ!

(ತಾ. ೨೨-೧೨-೪೫) ಊರಲ್ಲೆಲ್ಲೂ ಹತ್ತಿಕಾಳು ಇಲ್ಲ. ದನ ಸಾಕುವವರು ಗೋಳಿಡುತ್ತಿದ್ದಾರೆ.

ಸಮುದ್ರ-ಸಾರಿಗೆಯು ಪೂರ್ಣವಾಗಿ ಸುರುವಾಗಿ ೩ ತಿಂಗಳಾಗುತ್ತ ಬಂದರೂ ಮುಂಬಯಿಯಿಂದ ಕಾಳುಕಡಿ ಮುಂತಾದ್ದು ಬರಲು ಇನ್ನೂ ಪ್ರಾರಂಭವಿಲ್ಲ. ಹೋದ ಹಡಗಗಳು ಮುಂಬಯಿಯಿಂದ ತಿರುಗಿ ಖಾಲಿ ಬರುತ್ತವೆ! ಕಾಳು-ಕಡಿ ವಗೈರೆ ತರಲಿಕ್ಕೆ ಪರವಾನಿಗೆಗಳೇ ಸಿಗುವದಿಲ್ಲವಂತೆ! ಮುಂಬಯಿಯಿಂದ ಧಾರವಾಡ, ಬೆಳಗಾಂವ ವಗೈರೆ ಜಿಲ್ಹೆಗಳಿಗೂ ಮಂಗಳೂರ ವಗೈರೆ ದಕ್ಷಿಣ-ಕನ್ನಡ ಜಿಲ್ಹೆಗಳಿಗೂ ಬೇಕಷ್ಟು ಸರಕು ಸಿಕ್ಕಿದೆ ಮತ್ತು ಸಾಗುತ್ತಿದೆ. ನಮ್ಮ ಜಿಲ್ಹೆಗೆ ಮಾತ್ರ ಪರವಾನಿಗೆಗಳು ಸಿಗುತ್ತಿಲ್ಲವೇಕೆ ?

ಕಳೆದ ವಾರ "ಭಾರತ ವಣಿಕ ಸಂಘ" ಎಂಬ ವರ್ತಕ ಸಂಘವೊಂದು ಇಲ್ಲಿ ಸ್ಥಾಪನೆಯಾಗಿದೆ. ಇಲ್ಲಿಯ ವರ್ತಕರಿಗೂ ಹಳ್ಳಿಗರಿಗೂ ಬೇಕಾದ ಪರಬಂದರಗಳ ಸರಕು ತರುವ ಪ್ರಯತ್ನ ಮಾಡುವದೇ ಸಂಘದ ಪ್ರಧಾನೋದ್ದೇಶ

ಬೇರೊಳ್ಳಿಯಲ್ಲಿ ಹೋದ ಶುಕ್ರವಾರ ವನಭೋಜನೆಯ ಉತ್ಸವವಾಯಿತು. ಶನಿವಾರದಿಂದ ಕೋಳಿಜೂಜುಗಳ ಜಾತ್ರೆ ನಡೆದಿದೆ! ಆದರಿಂದ ತೆಂಗಿನಮರಗಳಿಗಿದ್ದ ಹುಂಡಿಗಳು ಇದ್ದಲ್ಲೇ ಮಾಯವಾಗತೊಡಗಿವೆ! ಕಾಯಿಗಳೆಂದು ಬೇರೆ ದರವುಂಟು ಕೋಳಿಜೂಜಿನ ಇಷ್ಟೊಂದು ದೊಡ್ಡ ಜಾತ್ರೆ ನಡೆದಿರುವದಾದರೂ ಪಟೇಲ-ಶಾನಭೋಗರ ಇಲ್ಲವೆ ಪೋಲೀಸರ ಕಣ್ಣಿಗೆ ಬೀಳುವದಿಲ್ಲ! ಅವರ ಕಣ್ಣುಗಳಲ್ಲೇ ನೋವು ದೋಷವಿರಬೇಕು!

ಪೇಟೆಯಲ್ಲಿ ಎಷ್ಟು ಬೆಳೆಯಾದ ಭತ್ತ ಅಕ್ಕಿಯಾಗಲು ಹಾರ ಘಾಟಿ ಮೇಲ್ಗೆ ಬಂದಿದೆ! ಪೇಟೆಯಲ್ಲಿ ಬೇಕಷ್ಟು ಭತ್ತ ಮರೆದು ಕೊಡಲು ಬೇಕಷ್ಟು ಜನರು ಇದ್ದಾಗ್ಯೂ ಈ ಪ್ರವೃತ್ತಿ ನ್ಯಾಯವಾಯಿತೇಕೆ ?

ಪರೋಪಕ್ಷ-ನೋಡಿದರೆ ಸೀಮೆಯ ಸೀದಾ ಅಂಗಡಿಗೆ ಉಳಿದ ಲಾಭದಾಯಕ ಧರ್ಮ ಸಾಧಿಸುವದೇನೋ ನಿಜ ಈ ಧರ್ಮ-ಬುದ್ಧಿಯನ್ನು ಅಂಗಡಿಯವರು ಬಡವರಿಗೆ ಅಕ್ಕಿ ಅಳೆದು ಕೊಡುವಾಗ ತೋರಿಸಬಾರದೇ? ಪಾಯಲಿಯ ಕೇಳಿ ಕೊಡುವ್ಯ ಬಟ್ಟೆಯ ಬಗ್ಗುವದರಿಂದ ಅಳತೆ ಕಡಿಮೆ ಬರುತ್ತವೆಂತಲೂ ೧೦ ಪಾಯಲಿ ಅಕ್ಕಿ ಅಳೆದರೆ ಅರ್ಧ ಪಾಯಲಿಯಷ್ಟು ಅಕ್ಕಿ ಕಡಿಮೆ ಸಿಗುತ್ತವೆಂತಲೂ ಬಡಗಿಗರ ದೂರುಂಟು

(ತಾ. ೧೭-೧೨-೪೫) ಸರಳಗಿ, ಸಂಶಿ, ಕುದ್ರಿಗೆ ವಗೈರೆ ಗ್ರಾಮಗಳಲ್ಲಿ ಕಾಡುಹಸುಗಳು ಹಾವಳಿ ಹಾಕುತ್ತಿವೆ. ೪೦-೫೦ ಕಾಡುಹಂದಿಗಳು ಗುಂಪು ಕಟ್ಟಿ ಬಂದು ಕಬ್ಬಿನ ತೋಟಗಳನ್ನೂ ಭತ್ತದ ಗದ್ದೆಗಳನ್ನೂ ತಿಂದು ನಾಶ ಮಾಡುತ್ತಿವೆ. ಹಗಲಿಗೆ ಸಹ ಅವು ಬರುತ್ತಿವೆ. ಅವನ್ನು ಹಿಡಿಸಲು ಒಕ್ಕಲಿಗರ ಹತ್ತರ ಕೋವಿಗಳುಂಟು; ಆದರೆ ಮದ್ದು-ಗುಂಡುಗಳಿಲ್ಲ! ಹಂದಿಗಳು ಬೆಳೆ ಹಾಳು ಮಾಡಿದರೆ ಹುಲಿಗಳು ದನಗಳ ಸಂಹಾರ ಮಾಡುತ್ತಿವೆ. ಕಳೆದ ವಾರ ಒಂದು ದಿನ ೩ ಹುಲಿಗಳು ಕುದ್ರಿಗೆಯೊಳಗಿನ ಒಂದು ಕೊಟ್ಟಿಗೆಯಲ್ಲಿ ಹೊಕ್ಕು ೪ ಎತ್ತುಗಳ ಮತ್ತು ೪ ಆಕಳಗಳ ಕುತ್ತಿಗೆ ಮುರಿದು ಚೆಲ್ಲಿದವು! ಅವುಗಳ ಒಡೆಯನು ೧ ಎತ್ತಿನ ಜೋಡಿಗೆ ರೂ. ೫೦೦ ಕೊಟ್ಟು ಮೊನ್ನೆಯೇ ಕೊಂಡುಕೊಂಡಿದ್ದನಂತೆ. ಹಗಲ ಹೊತ್ತಿಗೂ ಹುಲಿಗಳು ಹಳ್ಳಿಯಲ್ಲಿ ಬರುತ್ತವೆ! ಸರಕಾರದವರು ಹಳ್ಳಿಗರನ್ನು ನಿಃಶಸ್ತ್ರಗೊಳಿಸಿದ್ದಾರೆಂದು ಯಾರೋ ಅವುಗಳಿಗೆ ಸುದ್ದಿ ಕೊಟ್ಟಿರಬೇಕು!

ಭಟಕಳ— (ತಾ. ೨೦-೧೨-೪೫) ಇಲ್ಲಿಂದ ಎಸ್ಟೇ ಜವಳಿ ಕಳ್ಳತನದಿಂದ ಹೊರಗೆ ಹೋಗುತ್ತಿದೆಯೆಂಬ ಗುಪ್ತ ಮಾಹಿತಿ ಸಿಕ್ಕಂತೆ ಕಳೆದ ಸೋಮವಾರ ಬೈಂದೂರ ಪೋಲೀಸರು ಇಲ್ಲಿಂದ ಹೋದ ಮೊದಲನೆಯ ಮೋಟಾರ ಬಂಡಿಯನ್ನು ನಿಲ್ಲಿಸಿ ಝಡತಿ ಮಾಡಿದರು ಓರ್ವ ಮಹಮ್ಮದಿ ಪ್ರಯಾಣಿಕನ ಗಂಟಿನಲ್ಲಿ ೬೯ ಜತೆ ಧೋತ್ರಗಳೂ ಬಹಳಷ್ಟು ಚಲಿದೀ ಶರ್ಟಿಂಗ ಅರಿವೆಯೂ ಕೆಲವು ಕೋರಾ ಟಾಕಗಳೂ ಸಿಕ್ಕವು ಭಟಕಳದಲ್ಲಿ ಧೋತರಗಳೂ ಶರ್ಟಿಂಗೂ ಸಿಗದಿರಲಿಕ್ಕೆ ಈ ಕಳ್ಳ ನಿರ್ಯಾತವೇ ಕಾರಣವೆಂದು ಇದರಿಂದ ಸಿದ್ಧವಾಯಿತು. ನಮ್ಮ ಜಿಲ್ಹಾಧಿಪರು ಪೋಲೀಸರಿಗೆ ಹುಕುಮು ಕೊಟ್ಟು ಈ ನಿರ್ಯಾತವನ್ನು ಕಠಿಣತನದಿಂದ ನಿರ್ಬಂಧಿಸಬೇಕು.

ಕಾರವಾರ— (ತಾ. ೨೨-೧೨-೪೫) ೧೯೪೬ರ ಪ್ರಾಥಮಿಕ ಹಾಗೂ ಪ್ರೌಢಮಿಡಲ ಪಾಸು ಶಿಷ್ಯವೃತ್ತಿಗಳ ಪರೀಕ್ಷೆಗಳು ಅನುಕ್ರಮವಾಗಿ ಫೆಬ್ರುವರಿ ೫ ಆಕ್ಕ ಮತ್ತು ೭ಕ್ಕೆ ಪ್ರಾರಂಭವಾಗುವವೆಂತಲೂ ಪರೀಕ್ಷೆಗಳಿಗೆ ಕೂಡ್ರುವವರು ತಾ ೫-೧-೪೬ ರೊಳಗೆ ಅರ್ಜಿ ಮಾಡಬೇಕೆಂತಲೂ ಸರಕಾರಿ ಹ್ಯಾಸ್ಕೂಲಿನ ಮುಖ್ಯಾಧ್ಯಾಪಕರು ತಿಳಿಸುತ್ತಾರೆ.

ಜಾಣನಿ ಗುಪ್ತ-ತಾರದ ಚಿತ್ರ ಕೊಟ್ಟು ಅವನನ್ನು ಕೂಡಿಟ್ಟು ಕೊಂಡು ಹಾಕಿರಿ ಎಂಬ ಆತನಿಗೆ ಹಾದುಂಬಿಸುವ ಭಿತ್ತಿ-ಪತ್ರಗಳು ಯುದ್ಧಕಾಲದಲ್ಲಿ ಹೊರಬಿದ್ದಿದ್ದವು. ಈಗ ಈಗಲವನ್ನು ಹಾಗೇ ಇಡುವದು ಕ್ಷಮ್ಯವಲ್ಲ; ಸಮಂಜಸವೂ ಅಲ್ಲ ಅವನಿಟ್ಟರೆ ಕೊಲೆಯ ಪ್ರವೃತ್ತಿಗೆ ಪ್ರೋತ್ಸಾಹ ಕೊಟ್ಟಂತಾಗುವದು. ಆದ್ದರಿಂದ ಆ ಚಿತ್ರಗಳನ್ನು ಕೂಡಲೇ ತಾರದೊಗೆಸಬೇಕು ಎಂದು ಓರ್ವರು ಸೂಚಿಸುತ್ತಾರೆ.

ಸೀಧಾ ಅಂಗಡಿಗಳಲ್ಲಿ ಈಗ ಗೋದಿ ಸಿಗುವದಿಲ್ಲ ಗೋದಿಯೇ ಶಿಲ್ಕು ಇಲ್ಲವಂತೆ ಯಾವದೊಂದು ಧಾನ್ಯದ ಸಂಗ್ರಹ ಶೂನ್ಯಾಂಕಕ್ಕೆ ಬರುವ ವರೆಗೂ ಅದನ್ನು ತರಿಸುವ ವ್ಯವಸ್ಥೆಯಾಗದಿರುವದು ಆಶ್ಚರ್ಯದ ಮಾತೇ ಸರಿ.

The Agricultural & Industrial Bank, Ltd.
(Incorporated in British India, Liability of Members limited)

ANNOUNCEMENT.

The Directors have pleasure to announce the opening of two more Branches of the Bank simultaneously at

GADAG & BOMBAY

on Friday, the 21st December 1945.

All kinds of Banking business transacted.

Coondapoor,
3-12-1945

K. VAMAN SHENAI,
CHAIRMAN

ವಿಚಾರ-ಲಹರಿಗಳು.

(ವಿಚಾರವಂತನು ಬರೆದುದು)

"ಊರಲ್ಲಿಲ್ಲ ಬಳಗ, ಉಪ್ಪಿಗೆ ಬಡತನ" ಎಂಬುದೊಂದು ಗಾದೆಯುಂಟು. ಗ್ರಾಮಗಳಲ್ಲಿ ಹೊಸ ಹೊಸ ಉದ್ದಿಮೆಗಳನ್ನು ಹೊರಡಿಸಬೇಕು, ಬಡ ಜನರಿಗೆ ಜೀವನೋಪಾಯ ತೋರಿಸಿಕೊಡಬೇಕು, ತುತ್ತು ಕೂಳಿಗೆ ಗತಿ ಇಲ್ಲದವರಿಗೆ ಹೊಟ್ಟೆತುಂಬ ಉಣಿಸಬೇಕು, ಇವೇ ಮೊದಲಾದ ಮಾತುಗಳನ್ನು ಮೇಲೆ ಭಾರತ ಮಂತ್ರಿಗಳಿಂದ ಹಿಡಿದು ಕೆಳಗೆ ಮಾಮಲೇದಾರರ ವರೆಗೆ ಎಲ್ಲ ಅಧಿಕಾರಿಗಳು ಸಾರುತ್ತಾರೆ. ಈ ಬಗ್ಗೆ ಸರಕಾರದ ಸಭೆಗಳು ಸೇರಿ, ಬೇರೆ ಬೇರೆ ಉದ್ದಿಮೆಗಳನ್ನು ಹೊರಡಿಸುವ ಸಂಕಲ್ಪಗಳಾಗುತ್ತಿವೆ. ಜೇನು ಸಾಕಲು ಹೇಳಲ್ಪಡುತ್ತದೆ, ಬೆತ್ತದ, ಕತ್ತದ ಕೈಗಾರಿಕೆಗಳನ್ನೂ ಗುಂಡಿ, ಗಂಧದ ಸಾಮಾನು ಮೊದಲಾದವುಗಳನ್ನೂ ಮಾಡುವವರಿಗೆ ಅಧಿಕಾರಿಗಳು ದೊಡ್ಡ ದೊಡ್ಡ ಸಭೆ ಸೇರಿಸಿ ಇನಾಮು ಕೊಡುವ ಹೊಸ ರೂಢಿಯೊಂದು ಪ್ರಚಾರದಲ್ಲಿ ಬಂದಿದೆ, ಸರಕಾರದ ಮನ್ನಣೆಯಿಂದ ವ್ಯಕ್ತಿಗಳಿಗೆ ರಾವಸಾಹೇಬ ರಾವಬಹಾದ್ದೂರ ಮೊದಲಾದ ಕಿತಾಬುಗಳನ್ನು ಕೊಡುವಂತೆ ಪ್ರಶಂಸನೀಯ ಗ್ರಾಮಸುಧಾರಣೆ ಮಾಡಿದ ಗ್ರಾಮಗಳಲ್ಲಿ ಒಂದು ವರ್ಷದ ವರೆಗೆ ಬೆಳ್ಳಿಯ ಢಾಲು ಇಡುವ ಪ್ರಘಾತವುಂಟು. ಆದರೆ ಗ್ರಾಮಸುಧಾರಣೆಯ ಈ ಸಂಕಲ್ಪ ವಾದವಿವಾದದಿಂದ ನಮ್ಮ ಜಿಲ್ಹೆಯೊಳಗೆ ಎಷ್ಟೋ ಗ್ರಾಮಗಳು ಹಾಳುಬಿದ್ದವು, ಇನ್ನೂ ಹಾಳಾಗುತ್ತಲಿವೆ. ಆಸಾಮದ ಸಂಚಾರದಲ್ಲಿ ಪಂ॥ ಜವಾಹರಲಾಲರು ನುಡಿದಂತೆ, ಹಿಂದುಸ್ಥಾನದೊಳಗೆ ಈಗ ನಡೆದಿರುವ ರಾಜ್ಯಪದ್ಧತಿ ದೇಶೋದ್ಧಾರದ್ದಲ್ಲ, ಸಮಾಜಕಲ್ಯಾಣದ್ದಲ್ಲ; ಪೋಲೀಸ ಬಂದೋಬಸ್ತಿನ ಸರಕಾರವಿದು. ಸರಕಾರದ ಎಲ್ಲ ಚಟುವಟಿಕೆಗಳು ಆ ಧೋರಣದಿಂದಲೇ ನಡೆಯುತ್ತಿವೆ.

ಹೊಸ ಕೈಗಾರಿಕೆಗಳನ್ನು ಹೊರಡಿಸಿಕೊಡುವ ಅಧಿಕಾರಿಗಳ ಉತ್ಸಾಹದಲ್ಲಿ ಇದ್ದ ಕೈಗಾರಿಕೆಗಳು ಒಂದೊಂದಾಗಿ ಲೋಪ ಹೊಂದತೊಡಗಿವೆ. ಗಿರಣಿಗಳು ಹೊರಬಂದಂದಿನಿಂದ ಗಾಣಿಗರು ಉದ್ಯೋಗಹೀನರಾದರು. ಬೀಸುಕಲ್ಲುಗಳನ್ನು ಇಟ್ಟುಕೊಂಡು ಹಿಟ್ಟು ಬೀಸಿಕೊಟ್ಟು ಹೊಟ್ಟೆ ಹೊರಕೊಳ್ಳುವ ಉದ್ದಿಮೆ ಕೈಬಿಟ್ಟಿತು! ನಮ್ಮ ಕರಾವಳಿಯಲ್ಲಿ ಭತ್ತ ಕುಟ್ಟಿ ಅಕ್ಕಿ ಮಾಡಿ ಬೇಸಿಗೆಯಲ್ಲಿ ಜೀವನ ಸಾಗಿಸಿ, ಮಳೆಗಾಲದ ಬಗ್ಗೂ ಕೆಲವು ಅಕ್ಕಿ ಗಳಿಸಿಡುವ ಕ್ರಮ ಹಿಂದಿನಿಂದ ರೂಢಿಯಲ್ಲುಂಟು. ಘಟ್ಟದ ಮೇಲೆ ಗಿರಣಿಗಳಾಗುವ ಮುಂಚೆ ಘಟ್ಟದ ಮೇಲಿನ ಭತ್ತ ಕರಾವಳಿಗೆ ಬಂದು, ಕರಾವಳಿಯಲ್ಲಿ ಅಕ್ಕಿಯಾಗಿ ರಫ್ತಾಗುವ ರೂಢಿಯಿತ್ತು. ಘಟ್ಟದ ಮೇಲೆ ಗಿರಣಿಗಳಾದ್ದರಿಂದ ಆ ಭತ್ತಕ್ಕೆ ಮೋಸವಾಯಿತು! ಯುದ್ಧಕಾಲದಲ್ಲಿ ಜನರಕ್ಷಣೆಯ ಉಪಾಯವೆಂದು ಅಧಿಕಾರಿಗಳು ಕೈಕೊಂಡ ಭತ್ತದ ಎತ್ತುವಳಿಯ ಕ್ರಮದಿಂದ ಭತ್ತ ಕುಟ್ಟುವ ಈ ಉದ್ದಿಮೆ ನಷ್ಟವಾಗಿ ಭತ್ತ ಮೊರೆದು ಜೀವಿಸುತ್ತಿದ್ದ ಬಡ ಬಗ್ಗರು ತುತ್ತು ಕೂಳಿಗೆ ಮುಟ್ಟಿಯಾಗಿದ್ದಾರೆ! ಭತ್ತ ಮೊರೆಯುವ ಉದ್ದಿಮೆ ಮುಖ್ಯವಾಗಿ ಹೆಂಗಸರದು. ಬೇಸಾಯ ಕೆಲಸವನ್ನು ತೀರಿಸಿ, ಬೇಸಿಗೆಯಲ್ಲಿ ಬೇರೆ ಕೆಲಸವಿಲ್ಲದಿದ್ದಾಗ ಭತ್ತ ಮೊರೆದು ಇವರು ಜೀವನ ಮಾಡುತ್ತಿದ್ದರು. ಈಗ ಹಳ್ಳಿ-ಹಳ್ಳಿಗಳಲ್ಲಿ ಭತ್ತದ ಎತ್ತುವಳಿ ರಭಸದಿಂದ ನಡೆದಿದೆ. ಎತ್ತುವಳಿಯಲ್ಲಿ ನಡೆಯುವ ಅನಾಚಾರ ದುರಾಚಾರಗಳನ್ನು ಸ್ವತಃ ಅನುಭವಿಸಿದವರೇ ಬಲ್ಲರು. ಆ ಮಾತು ಬೇರೆ. ಹಳ್ಳಿಗಳಲ್ಲಿ ಎತ್ತುವಳಿಯಾದ ಭತ್ತ ಪಟ್ಟಣಗಳಿಗೆ ಸಾಗಿಸುತ್ತಾರೆ. ಮತ್ತು ಗಿರಣಿ ಸಾವಕಾರರಿಗೆ ಕೊಟ್ಟು ಅಕ್ಕಿ ಮಾಡಿಸಿ ತಿರುಗಿ ಹಳ್ಳಿಗಳಿಗೆ ಕಳಿಸುತ್ತಾರೆ! ಬ್ರಿಟಿಶ ರಾಜ್ಯಕಾರಭಾರದಲ್ಲಿ ಲೆಕ್ಕದಂತೆಯೇ ನಡೆಯುತ್ತಿದೆ. ತರ-ಒಯ್ಯುವ ಖರ್ಚು ಆಕರಿಸಿ ಆ ಅಕ್ಕಿ ಮುಂದೆ ಬಡ ಜನರಿಗೆ ಮಾರುತ್ತಾರೆ. ಬಡವರು ಅದನ್ನು ಕೊಳ್ಳುವ ಬಗೆಯನ್ನು ಮಾತ್ರ ಅಧಿಕಾರಿಗಳು ಅರಿಯರು! ಇಷ್ಟು ಉದ್ದಿಮೆ ಕೈ ತಪ್ಪಿ ಹೋದಾಗ ಬಡವರು ಬಾಳುವೆ ಮಾಡುವದೆಂತೆಂದು ಇವರಿಗೆ ಗೊತ್ತಿಲ್ಲ! ಗಿರಣಿ ಇಟ್ಟ ಸಾವಕಾರರು ದೊಡ್ಡವರಾಗುತ್ತಾರೆ, ಅಧಿಕಾರಿಗಳೊಡನೆ ಅವರು ಸವಿ ಸವಿ ಮಾತಾಡುತ್ತಾರೆ, ತಿನ್ನುಣ್ಣುವವರಿದ್ದರೆ ಸವಿ ಸವಿ ತಿಂದುಂಡು ತೇಗುತ್ತಾರೆ! ಗಿರಣಿಯವರಿಗೆ ಭತ್ತ ಕೊಟ್ಟರೆ ಅಧಿಕಾರಿಗಳಿಗೆ ಲೆಕ್ಕ ಇಡಲು ಅನುಕೂಲವಾಗುತ್ತದಂತೆ. ಹಳ್ಳಿ-ಹಳ್ಳಿಗಳಲ್ಲಿ ಹಂಚಿ ಕೊಟ್ಟರೆ ಲೆಕ್ಕವಿಡಲಿಕ್ಕೆ ತೊಂದರೆಯಾಗುತ್ತದಂತೆ! ಭತ್ತ ಎತ್ತುವಳಿ ಮಾಡುವ ಬದಲು ಅಕ್ಕಿ ಪಡೆಯಬೇಕಾಗಿ ಗ್ರಾಮಸ್ಥರಿಗೆ ವಿಧಿಸಿದರೆ ಲೆಕ್ಕಕ್ಕೆ ತೊಂದರೆ ಬರುವಂತಿಲ್ಲ. ಗ್ರಾಮದವರು ತಮ್ಮಲ್ಲಿಯೇ ಭತ್ತ ಮುರಿಸಿ ಅಧಿಕಾರಿಗಳಿಗೆ ಅಕ್ಕಿಯನ್ನೇ ಒಪ್ಪಿಸುವರು. ಆದರೆ ಗ್ರಾಮಸ್ಥರಿಂದ ಭತ್ತವನ್ನೇ ಪಡೆಯಬೇಕೆಂಬ ಗುಪ್ತ ಆಜ್ಞೆಗಳುಂಟು. ಭತ್ತ ಬಿಟ್ಟರೆ ಅಕ್ಕಿ ಸಿಗುವದೆಂಬ ನಂಬಿಗೆ ಅವರಿಗಿಲ್ಲ!

⁂

ಅವಲಕ್ಕಿ ಮಾಡುವದು ತೀರ ಬಡಬಗ್ಗರ ಕೆಲಸ. ಇದೊಂದು ಗ್ರಾಮಕೈಗಾರಿಕೆ. ಪ್ರತಿ ಗ್ರಾಮದಲ್ಲಿ ಅವಲಕ್ಕಿ ಕುಟ್ಟಿ ಹೊಟ್ಟೆ ಹೊರಕೊಳ್ಳುವ ನಾಲ್ಕಾರು ಮನೆಗಳಾದರೂ ಇದ್ದೇ ಇವೆ. ಭತ್ತ ಮಾರಾಟ ಮಾಡಲು ಕಾನೂನಿನ ನಿರ್ಬಂಧ ಉಂಟು. ಅವಲಕ್ಕಿ ಮಾಡುವವರ ಕಡೆ ಅಧಿಕಾರಿಗಳು ಲಕ್ಷ್ಯ ಮಾಡಿದ್ದಾರೆ. ಆದ್ದರಿಂದ ಅವಲಕ್ಕಿ-ಮುಂಡಕ್ಕಿ ಮಾಡುವವರು ಕಳ್ಳ ಪೇಟೆಯಲ್ಲಿ ವ್ಯವಹಾರ ಮಾಡುವ ಪ್ರಸಂಗ ಬಂದಿದೆ. ಕಳ್ಳ ಪೇಟೆ ನಿರ್ಮೂಲ ಮಾಡಬೇಕೆಂಬ ಮಹತ್ವಾಕಾಂಕ್ಷೆ ಅಧಿಕಾರಿಗಳಿಗೆ ಉಂಟು. ಆದರೆ ಅವರು ಸಕಲ ಜನರ ಜೀವನೋಪಾಯ-ಜೀವನಕ್ರಮಗಳನ್ನು ಪರಾಂಬರಿಸಿ ಯೋಗ್ಯ ಉಪಾಯಯೋಜನೆ ಮಾಡದ್ದರಿಂದ ಕಳ್ಳ ಪೇಟೆಗಳೇ ಲೋಕೋಪಕಾರಿಯಾಗಿವೆ! ಸರಕಾರದ ನಿಯಂತ್ರಣ ರಾಜ್ಯಕ್ಕೆ ಜನಬೆಂಬಲ ಸಿಗುವದಿಲ್ಲ. ಅವಲಕ್ಕಿ ಮಾಡುವವರಿಗೆ ಅವಲಕ್ಕಿ ಉದ್ದಿಮೆಯ ಅಭಾವದಲ್ಲಿ ಬೇರೊಂದು ಉದ್ದಿಮೆ ತೋರುವದಿಲ್ಲ. ಜೇನುತುಪ್ಪ ತಿಂದು ಹೊಟ್ಟೆ ತುಂಬಿಕೊಳ್ಳುವ ಪರಿಪಾಠ ಎಲ್ಲೂ ಇಲ್ಲ. ಆ ಉದ್ದಿಮೆಯಿಂದ ಭತ್ತ ಮೊರೆದು ಜೀವಿಸುವ ಇಲ್ಲವೆ ಅವಲಕ್ಕಿ ಕುಟ್ಟಿ ಹೊಟ್ಟೆ ಹೊರಕೊಳ್ಳುವ ಬಡಬಗ್ಗರ ನಿರ್ವಾಹವಾಗುವಂತಿಲ್ಲ.

⁂

ಮೇಲಾಗಿ ಗಿರಣಿಗಳಿಗೆ ಭತ್ತ ಕೊಡುವದರಿಂದ ಹೊಲಗಳಿಗೆ ಸಿಗುವ ಗೊಬ್ಬರ ಬಯಲಾಗುತ್ತದೆ. ಭತ್ತ ಮೊರೆದು ಸಿಗುವ ಉಮ್ಮಿಯನ್ನು ಒಕ್ಕಲಿಗರು ಗೊಬ್ಬರಕ್ಕೆ ಉಪಯೋಗಿಸುತ್ತಿದ್ದರು. ಉಮ್ಮಿಯ ಕಸುವಿನಿಂದ ಒಳ್ಳೇ ಬೆಳೆಯಾಗುತ್ತದಾಗಿ ಬೇಸಾಯಗಾರರ ಅನುಭವ ಉಂಟು. ಸರಕಾರದ ಬೇಸಾಯದ ಪ್ರಯೋಗ ಹೊಲದವರ ಅಭಿಪ್ರಾಯ ಮಾತ್ರ ಈ ಬಗ್ಗೆ ಏನುಂಟೆಂದು ತಿಳಿಯುವದಿಲ್ಲ. ಭತ್ತವನ್ನು ಪಟ್ಟಣಗಳಿಗೆ ತರುವದರಿಂದ ಈ ಗೊಬ್ಬರವೀಗ ಹೊಲಗಳಿಗೆ ಸಿಗುವದಿಲ್ಲ. ಅರಣ್ಯ ಖಾತೆಯವರ ಉಪಟಳದಿಂದ ಸೊಪ್ಪು-ತರಕು ಸಿಗುವದೂ ಕಷ್ಟ. ಗೋಧನ ನಮ್ಮಲ್ಲಿ ತಕ್ಕಷ್ಟಿಲ್ಲ. ಘಟ್ಟದ ಸರಿಹೊರೆಯಲ್ಲಿರುವ ಗ್ರಾಮಗಳಲ್ಲಂತೂ ಹುಲಿ ತಿಂದು ಉಳಿದ ದನಗಳ ಮೇಲೆಯೇ ಬೇಸಾಯಗಾರರು ನಿರ್ವಾಹ ಮಾಡಬೇಕು. ಇಂಥ ಸ್ಥಿತಿಯಲ್ಲಿ ಹೆಚ್ಚೆಚ್ಚು ಆಹಾರ ಧಾನ್ಯ ಬೆಳೆಸಬೇಕೆಂಬ ದೊಡ್ಡ ದೊಡ್ಡ ಜಾಹೀರಾತುಗಳನ್ನು ಓದಿಯೇ ಹಳ್ಳಿಗರು ಸಮಾಧಾನಪಡಬೇಕಾಗಿದೆ! ಧಾನ್ಯ ಬೆಳೆಸುವ ಅನುಕೂಲತೆಗಳನ್ನು ಅಧಿಕಾರಿಗಳು ಒಂದೊಂದಾಗಿ ಗೊತ್ತುಮಾಡುತ್ತಿದ್ದಾರೆ!

⁂

ಹತ್ತಿಕಾಳಿನ ಧರ್ಮ-ವ್ಯವಹಾರದಲ್ಲಿ ನಮ್ಮ ಜಿಲ್ಹೆಯೊಳಗಿನ ಬೇಸಾಯಗಾರರು ಕಂಗೆಟ್ಟರು! ನಮ್ಮ ಜಿಲ್ಹಾಧಿಪರು ಹತ್ತಿಕಾಳಿನ ಬಗ್ಗೆ ಬಹಳ ಪ್ರಯತ್ನ ಮಾಡಿದ್ದಾರೆ. ಧಾರವಾಡ ಜಿಲ್ಹೆಯವರು ನಮ್ಮ ಜಿಲ್ಹಾಧಿಪರ ಕಡೆ ದುರ್ಲಕ್ಷ ಮಾಡಿದರಾಗಿ ನಮ್ಮ ಜಿಲ್ಹಾಧಿಪರ ಅಂಬೋಣ. ಧಾರವಾಡ ಜಿಲ್ಹಾಧಿಪರು ಬೇಕಷ್ಟು ಹತ್ತಿಕಾಳು ನಮ್ಮ ಜಿಲ್ಹೆಗೆ ಕೊಡಲು ಸಿದ್ಧರಿದ್ದರಂತೆ, ಆದರೆ ನಮ್ಮ ಜಿಲ್ಹಾಧಿಪರು ನಿರಾಕರಿಸಿದರಾಗಿ ಧಾರವಾಡ ಜಿಲ್ಹಾಧಿಪರ ಅಂಬೋಣ. ಇದರಲ್ಲಿ ಸುಳ್ಳನಾರು, ಕಳ್ಳನಾರು ಎಂಬುದನ್ನು ಪ್ರಾಂತಿಕ ಸರಕಾರವು ತಿಳಕೊಳ್ಳಬೇಕು. ಹಿಂದ ಯಾರದೂ ತಪ್ಪಿರಲಿ, ಈಗಲಾದರೂ ಧಾರವಾಡ ಜಿಲ್ಹೆಯಿಂದ ಹತ್ತಿಕಾಳು ನಮ್ಮ ಜಿಲ್ಹೆಗೆ ತರುವಂತೆ ಏರ್ಪಾಟು ಮಾಡಲು ಅನುಕೂಲವುಂಟು.

⁂

ಹತ್ತಿಕಾಳಿನ ಮಕ್ತೆಯನ್ನು ಒಬ್ಬೊಬ್ಬಂಟಿಗರಿಗೇ ಕೊಟ್ಟು ಜಿಲ್ಹಾಧಿಪರು ಲೋಕೋಪಕಾರ ಮಾಡಿದ್ದಾರೆಂದು ಶ್ರೀ ಹಳದೀಪುರಕರ ವಾಸುದೇವರಾಯರ ಅಂಬೋಣ. ಆ ಮಕ್ತೆ ತಮಗೆ ಸಿಗುತ್ತಿದ್ದಿಲ್ಲವಾದರೆ ಅವರು ಈ ಪರಿ ವಾದಿಸುತ್ತಿದ್ದಿಲ್ಲ. ವ್ಯಾಪಾರದಿಂದ ಜನಹಿತ ಆಗಬೇಕಾದರೆ ಒಕ್ಕಟ್ಟು ಇರಬಾರದು, ಮೇಲಾಟಿಕೆ ಇಂಬು ಇರಬೇಕು, ಅಂದರೆ ವರ್ತಕರ ಕಸಬಿನ ಪ್ರಯೋಜನ ಜನರಿಗೆ ಸಿಗುತ್ತದೆ, ತರ-ಒಯ್ಯುವ ಖರ್ಚಿನಲ್ಲಿ ಮಿತವ್ಯಯವಾಗುತ್ತದೆ, ಲಾಭದ ಪರಿಮಾಣದಲ್ಲಿ ವ್ಯತ್ಯಾಸವಾಗುತ್ತದೆ, ಸಾಮಗ್ರಿಯ ಗುಣದಲ್ಲಿ ಅಭ್ಯಂತರ ಉಂಟಾಗುತ್ತದೆ, ವರ್ತಕನು ಗಿರಾಕಿಯ ಮನದೊಲವು ತಿಳಕೊಂಡು ವ್ಯವಹಾರ ನಡೆಸುತ್ತಾನೆ. ಮಕ್ತೆಯ ವ್ಯವಹಾರದಲ್ಲಿ ಗಿರಾಕಿಯ ಇಷ್ಟಾನಿಷ್ಟತೆಯ ವಿಚಾರವಾಗುವದಿಲ್ಲ. ವಸ್ತು-ಗುಣಕ್ಕಿಂತ ವಸ್ತು-ನಾಮಕ್ಕೇ ಪ್ರಾಧಾನ್ಯ ಬರುತ್ತದೆ! ಹತ್ತಿಕಾಳು ಹೊಸತೋ ಹಳತೋ, ತಿರುಳಿದ್ದದ್ದೋ ತಿರುಳಿಲ್ಲದಿದ್ದದ್ದೋ, ದನಗಳು ತಿನ್ನುವಂತಹದೋ ತಿನ್ನದಿದ್ದಂತಹದೋ ಎಂಬ ಯಾವದೇ ವಿಚಾರ ಮಕ್ತೇದಾರರನ್ನು ಸೋಂಕುವದಿಲ್ಲ. ದರಗಳನ್ನು ಮಕ್ತೆದಾರರು ನಿರ್ಣಯಿಸುತ್ತಾರೆ. ಒಂದೊಂದು ಕಡೆ ಒಂದೊಂದು ದರ! ಕಾರ್ಯಕಾರಣಗಳ ಸಂಬಂಧವಿರುವದಿಲ್ಲ! ಕಾರವಾರದಲ್ಲಿ ಒಂದು ದರ, ಹೊನ್ನಾವರದಲ್ಲಿ ಇನ್ನೊಂದು ದರ; ಕುಮಟೆಯಲ್ಲಿ ಮತ್ತೊಂದು ದರ. ತರ-ಒಯ್ಯುವ ಖರ್ಚಿನ ಮೇಲೆ ಈ ದರದ ನಿರ್ಣಯವಾಗುತ್ತಿದ್ದರೆ ಹೊನ್ನಾವರಕ್ಕಿಂತ ಕುಮಟೆ ಸಮೀಪವಿದ್ದದರಿಂದ ಕುಮಟೆಯಲ್ಲಿ ದರ ಕಡಿಮೆಯಾಗಬೇಕಿತ್ತು. ಆದರೆ ಕುಮಟೆಯಲ್ಲಿ ಹತ್ತಿಕಾಳು ತುಟ್ಟಿ! ಹೊನ್ನಾವರದಲ್ಲಿ ಆ ಮಾನದಿಂದ ಅಗ್ಗ. ಸಹಕಾರಿ ಸಂಘಗಳಿಗೆ ಆಶ್ರಯ ಕೊಡಬೇಕೆಂದು ಜಿಲ್ಹಾಧಿಕಾರಿಗಳ ಸಾಮಾನ್ಯ ಧೋರಣೆ. ಹತ್ತಿಕಾಳನ್ನು ತರಿಸಲಿಕ್ಕೆ ಬೇಂಕುಗಳು ಒಡಂಬಟ್ಟಿದ್ದವು. ವಾಹನಗಳನ್ನು ಒದಗಿಸಿಕೊಡಲು ಜಿಲ್ಹಾಧಿಪರು ನಿರಾಕರಿಸಿದರಾಗಿ ಹೊನ್ನಾವರ ಬೇಂಕಿನ ಅಂಬೋಣ. ಜಿಲ್ಹಾಧಿಪರು ವಾಹನ ಸೌಕರ್ಯ ಒದಗಿಸಿಕೊಟ್ಟು ಮಕ್ತೇದಾರರಿಗೆ ಇಡೀ ಜಿಲ್ಹೆಯ ಮಕ್ತೆ ಕೊಡುವಾಗ ಬೇರೆ ಯಾರಿಗೂ ವಿಚಾರಿಸಿದ್ದು ಕಂಡುಬರುವದಿಲ್ಲ. ತಾರಿ ಮಕ್ತೆಗಳಂತೆ ಹತ್ತಿಕಾಳಿನ ಮಕ್ತೆಯನ್ನು ಸವಾಲಿಗೆ ಹಾಕಿದರೆ ಸರಕಾರಕ್ಕೆ ರೂ ೨೦-೨೫ ಸಾವಿರ ಸಹ ಸಿಗುತ್ತಿತ್ತೆಂದು ಹಲವರ ಅಂಬೋಣವಿದೆ. ಜಿಲ್ಹಾಧಿಕಾರಿಗಳು ಈ ಮಾತಿನ ಅನುಭವ ಪಡೆಯಬಹುದು.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಚಳಿ ಕಡಿಮೆ

"ವಿಜಯ ಕೃತಜ್ಞತಾ ನಿಧಿ"ಗೆ ಹಣ ಕೂಡಿಸುವದಕ್ಕಾಗಿ ಅಧಿಕಾರಿಗಳು ಮೊನ್ನೆ ತಾಲೂಕ ಕಚೇರಿಯ ಪಟಾಂಗಣದಲ್ಲಿ ಹೆಸರಾಂತ ಯಕ್ಷಗಾನ ವಿಹಾರದವರ ಕಡೆಯಿಂದ "ದ್ರೌಪದೀ-ಪ್ರತಾಪ" ಎಂಬ ಆಟವನ್ನಾಡಿಸಿದ್ದರು. ಈ ಆಟದಿಂದ ರೂ ೧೨೦೦ ರಷ್ಟು ಉತ್ಪನ್ನವಾಗಿರಬೇಕು. "ವಿಜಯ ಕೃತಜ್ಞತಾ ನಿಧಿ"ಯೊಳಗಿಂದ (೧) ಕೆಂಪು ಕುರೀಸಿನ ರುಗ್ಣ ಶುಶ್ರೂಷಾ ಸಂಸ್ಥೆಯು ಯುದ್ಧಕಾಲದ ಸಾಲ ತೀರಿಸಿ, ಶಾಂತಿ ಕಾಲದ ಬಗ್ಗಾಗಿ ಅದರ ಪುನರ್ರಚನೆ ಮಾಡಲು ನೆರವನ್ನೀಯಲಾಗುವದೆಂದೂ, ರಣರಂಗದಿಂದ ತಿರುಗಿ ಬಂದ ಸೈನಿಕರಿಗೆ ನಾಗರಿಕ ವ್ಯವಸಾಯ ಕೈಕೊಳ್ಳಲು ಸಹಾಯ ಮಾಡಲಾಗುವದೆಂದೂ ಪ್ರಕಟವಾಗಿದೆ. ಮುಂಬಯಿ ಪ್ರಾಂತದಲ್ಲಿ ೫೦ ಲಕ್ಷ ರೂಗಳಷ್ಟು ನಿಧಿ ಕೂಡಿಸಬೇಕೆಂದು ಪ್ರಾಂತಾಧಿಪತಿಗಳ ಬಯಕೆಯುಂಟು.

ಇತ್ತಲಾಗಿ ಬೆಂಕಿಯ ಅನಾಹುತಗಳಾಗುತ್ತಿವೆ. ಆಚೆಯ ವಾರ ಸೆಲ್ಲಕೇರಿಯಲ್ಲಿ ಮಧ್ಯಾನ್ಹ ಹೊತ್ತಿಗೆ ಒಂದು ದನವಿನ ಕೊಟ್ಟಿಗೆ ಸುಟ್ಟುಹೋಯಿತು. ಬೆಂಕಿ ಜನರ ದೃಷ್ಟಿಗೆ ಬೀಳುವ ಮುಂಚೆಯೇ ಅದು ಉಗ್ರರೂಪ ಧರಿಸಿದ್ದರಿಂದ ಒಳಗಿದ್ದ ಒಂದು ಎಮ್ಮೆಯನ್ನು ಪ್ರಯಾಸಪಟ್ಟರೂ ಬಿಡಿಸಿ ಹೊರಗೆ ತರಲಾಗಲಿಲ್ಲ. ೨ ಆಳುಗಳನ್ನು ಮಾತ್ರ

(೧ನೇ ಪಾನಿನ ಮೇಲೆ ಮುಂದರಿಸಿದೆ)

ಪ್ರಾಂತಿಕ ಚುನಾವಣೆಗಳ ಕಾಂಗ್ರೆಸ ಉದ್ದೇಶ ಪತ್ರಿಕೆ.

(ಚುನಾವಣೆಗಳಲ್ಲಿ ಹೋರಾಡುವ ಪಕ್ಷ-ಪಂಗಡಗಳು ತಾವು ಯಾವ ಉದ್ದೇಶ ಇಲ್ಲವೆ ಧ್ಯೇಯ ಸಾಧಿಸುವದಕ್ಕಾಗಿ ಹೋರಾಡುತ್ತೇವೆ ಮತ್ತು ಚುನಾವಣೆಯಲ್ಲಿ ಬಹುಮತದಿಂದ ಆರಿಸಿ ಬಂದರೆ ಇಲ್ಲವೆ ಅಧಿಕಾರ ತಮ್ಮ ಕೈಗೆ ಸಿಕ್ಕಿದರೆ ತಾವು ಏನೇನು ಮಾಡಬಯಸುತ್ತೇವೆ ಎಂಬುದನ್ನು ಜನತೆಯ ತಿಳುವಳಿಕೆಗಾಗಿ ಮುಂದಾಗಿ ಜಾಹೀರಪಡಿಸುವದುಂಟು ಅಂತೆಯೇ ಕಾಂಗ್ರೆಸ್ಸಿನ ಪರವಾಗಿ ಅ|| ಭಾ|| ಕಾಂಗ್ರೆಸ ಕಾರ್ಯಕಾರಿ ಮಂಡಳದವರು ಈಗ ಜರುಗಲಿರುವ ಪ್ರಾಂತಿಕ ಚುನಾವಣೆಗಳ ಸಂಬಂಧದಲ್ಲಿ ತಮ್ಮ ಉದ್ದೇಶ ಪತ್ರಿಕೆಯನ್ನು ತಯಾರಿಸಿ ಪ್ರಕಟಿಸಿದ್ದಾರೆ ಈ ಪತ್ರಿಕೆಗೆ ಅ|| ಭಾ|| ಕಾಂಗ್ರೆಸ ಸಮಿತಿಯ ಮಂಜೂರಿಯನ್ನು ಪಡೆಕೊಳ್ಳಬೇಕೆಂದು ಮುಂಬಯಿಯ ಸಭೆಯ ಕಾಲಕ್ಕೆ ನಿಶ್ಚಿತವಾಗಿತ್ತು. ಆದರೆ ಅ|| ಭಾ|| ಕಾಂ|| ಸಮಿತಿಯ ಸಭೆ ಸೇರಿಸಲು ಬೇರೆ ವಿಶೇಷ ಕೆಲಸವಿಲ್ಲಾದ್ದರಿಂದಲೂ, ಈಯೊಂದೇ ಕೆಲಸಕ್ಕೆ ಸಭೆ ಸೇರಿಸುವದು ಉಚಿತವಲ್ಲಾದ್ದರಿಂದಲೂ, ಉದ್ದೇಶ ಪತ್ರ ತಯಾರಿಸಿ ಪ್ರಕಟಿಸಲು ಕಾರ್ಯಕಾರಿ ಮಂಡಳಕ್ಕೆ ಪೂರ್ಣ ಅಧಿಕಾರವಿರುವದರಿಂದಲೂ ಕಾರ್ಯಕಾರಿ ಮಂಡಳವು ತನ್ನ ಹೊಣೆಯಿಂದಲೇ ಈ ಪತ್ರಿಕೆಯನ್ನು ತಯಾರಿಸಿ ಪ್ರಕಟಿಸಿದೆ ಪತ್ರಿಕೆಯ ಸಾರ ಈ ಕೆಳಗೆ ಕೊಡಲಾಗಿವೆ)

ಕಳೆದ ೬೦ ವರ್ಷಗಳಿಂದ ಕಾಂಗ್ರೆಸ್ಸು ಹಿಂದೀ ಸ್ವಾತಂತ್ರ್ಯಕ್ಕಾಗಿ ದುಡಿದಿದೆ ಈ ಅವಧಿಯ ಕಾಂಗ್ರೆಸ್ಸಿನ ಇತಿಹಾಸವು ಭಾರತೀಯರು ದಾಸ್ಯಮುಕ್ತರಾಗಲು ನಡಿಸಿದ ಯತ್ನದ ಇತಿಹಾಸವಾಗಿದೆ ಕಾಂಗ್ರೆಸ್ಸು ಸಣ್ಣ ಪ್ರಮಾಣದಿಂದ ಆರಂಭ ಮಾಡಿ ಈಗ ದೇಶದ ಆದ್ಯಂತ ಸ್ವಾತಂತ್ರ್ಯದ ಸಂದೇಶವನ್ನು ಮುಟ್ಟಿಸಿದೆ ಹಳ್ಳಿಗರ ಬೆಂಬಲದಿಂದಲೇ ಕಾಂಗ್ರೆಸು ಬಲಿಷ್ಠ ಸಂಸ್ಥೆಯಾಗಿದ್ದು, ಮತ್ತು ಹಿಂದೀ ಸ್ವಾತಂತ್ರ್ಯದ ಜೀವಂತ ಪ್ರತೀಕವಾಗಿದೆ ಕಾಂಗ್ರೆಸ್ಸಿನ ಧ್ವಜದಡಿಯಲ್ಲಿ ಅಸಂಖ್ಯ ಹಿಂದೀ ನರ-ನಾರಿಯರು ಕೈಕೊಂಡ ಪ್ರತಿಜ್ಞೆಯ ಪಾಲನೆಗಾಗಿ ಬಗೆಬಗೆಯ ಯಾತನೆಗಳನ್ನು ಸಹಿಸಿದ್ದಾರೆ, ಸೇವೆ-ತ್ಯಾಗಗಳ ಮೂಲಕ ಕಾಂಗ್ರೆಸ್ಸು ಜನತೆಯ ಹೃದಯವನ್ನು ಆಕರ್ಷಿಸಿದೆ, ರಾಷ್ಟ್ರದ ಅಪಮಾನ ಸಹಿಸದೆ ಪರರ ಸ್ವಾಮಿತ್ವವನ್ನು ಎದುರಿಸಲು ಪ್ರಭಾವಿ ಆಂದೋಲನಗಳನ್ನು ಹೂಡಿದ ಪ್ರಜಾಪ್ರಭುತ್ವವೇ ಅದರ ಗುರಿ ಭಾರತೀಯ ರಾಜ್ಯಘಟನೆ ಸಂಯುಕ್ತ ಪದ್ಧತಿಯದಿರಬೇಕೆಂದೂ, ಘಟಕ ಪ್ರಾಂತಗಳಿಗೆ ಸ್ವಾಯತ್ತತೆಯಿರಬೇಕೆಂದೂ ಅದರ ನಿಶ್ಚಿತ ಮತ. ಪ್ರೌಢವಯಸ್ಕರಿಗೆಲ್ಲ ಶಾಸನ ಸಭೆಗಳ ಮತಾಧಿಕಾರವಿರಬೇಕೆಂದೂ ಅದರ ಅಭಿಪ್ರಾಯ. ಸಂಯುಕ್ತರಾಜ್ಯದಲ್ಲಿ ಘಟಕ ಪ್ರಾಂತಗಳು ಸ್ವೇಚ್ಛೆಯಿಂದಲೇ ಸೇರಬೇಕೆಂದೂ ಘಟಕಗಳಿಗೆ ಆದಷ್ಟು ಹೆಚ್ಚು ಸ್ವಾಯತ್ತತೆ ಕೊಟ್ಟು, ಎಲ್ಲ ಘಟಕಗಳಿಗೂ ಸಾಮಾನ್ಯವಿರುವ ವಿಷಯಗಳನ್ನಷ್ಟೇ ಸಂಯುಕ್ತರಾಜ್ಯಕ್ಕೆ ಕೊಡಮಾಡಬೇಕೆಂದೂ ಕಾಂಗ್ರೆಸ್ಸು ಪ್ರತಿಪಾದಿಸುತ್ತದೆ

ಮೂಲಭೂತ ಹಕ್ಕುಗಳು

ಭಾವೀ ರಾಜ್ಯಘಟನೆಯಲ್ಲಿ ಈ ಕೆಳಗಿನ ಮೂಲಭೂತ ಹಕ್ಕುಗಳು ಇರತಕ್ಕದ್ದು —

(೧) ಎಲ್ಲ ನಾಗರಿಕರಿಗೆ ಮತ-ಸ್ವಾತಂತ್ರ್ಯ, ಸಂಘ-ಸ್ವಾತಂತ್ರ್ಯ ಮತ್ತು ಶಾಂತರೀತಿಯಿಂದ ಸಭೆ ಸೇರುವ ಸ್ವಾತಂತ್ರ್ಯವಿರಬೇಕು

(೨) ವಿಚಾರ ಸ್ವಾತಂತ್ರ್ಯವೂ ಸಾರ್ವಜನಿಕ ಸುರಕ್ಷಿತತೆಗೆ ಪ್ರತಿಕೂಲವಲ್ಲದ ಧರ್ಮಾಚರಣೆಯ ಸ್ವಾತಂತ್ರ್ಯವೂ ಸರ್ವರಿಗೆ ಇರಬೇಕು

(೩) ಅಲ್ಪಸಂಖ್ಯಾಕರ ಹಾಗೂ ವಿವಿಧ ಭಾಷೆಗಳನ್ನಾಡುವವರ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳ ರಕ್ಷಣೆಯ ಆಶ್ವಾಸನೆ ಬೇಕು

(೪) ಸರಕಾರದ ದೃಷ್ಟಿಯಲ್ಲಿ ಎಲ್ಲರೂ ಜಾತಿ-ಮತ-ವರ್ಗಗಳ ಭೇದವನ್ನು ಎಣಿಸದೆ ಸಮಾನರಿರಬೇಕು

(೫) ಸರಕಾರಿ ಅಧಿಕಾರಗಳ ಇಲ್ಲವೆ ಗೌರವ ಸ್ಥಾನಗಳನ್ನು ಕೊಡುವಾಗ ಇಲ್ಲವೆ ವ್ಯಾಪಾರೋದ್ಯೋಗಗಳಲ್ಲಿ

(೪ನೇ ಪಾನದ ಮೇಲೆ ಮುಂದರಿಸಿದೆ)

ಹಿಂದುಸ್ಥಾನಿ ಪಾಠಗಳು.

ಸಬಕ ಆಠ (ಪಾಠ ೮)

ಪಂಸಾರೀಕೀ ದುಕಾನ (ಕಿರಾಣಿ ಅಂಗಡಿ)

ಮುಸಾಫಿರ (ಪ್ರವಾಸಿ)— ಇಸ ದುಕಾನಮೇಂ ಕ್ಯಾ ಕ್ಯಾ ಸಾಮಾನ ಮಿಲತಾ ಹೈ ? (ಈ ಅಂಗಡಿಯಲ್ಲಿ ಏನೇನು ಸಾಮಾನು ಸಿಗುತ್ತದೆ ?)

ದುಕಾನದಾರ (ಅಂಗಡಿಕಾರ)— ಚಾವಲ, ದಾಲ ವಗೈರಹ ಸಬ ಹೈಂ ಕಹಿಯೇ ಆಪಕೋ ಕ್ಯಾ ಚಾಹಿಯೇ ! (ಅಕ್ಕಿ, ಬೇಳೆ ಮುಂತಾದ್ದೆಲ್ಲ ಇವೆ ನಿಮಗೆ ಏನು ಬೇಕು ಹೇಳಿ)

ಮು (ಪ್ರ.)— ಕ್ಯಾ ಗೇಹೂಂಕಾ ಆಟಾ ಭೀ ಹೈ ? (ಗೋದಿಯ ಹಿಟ್ಟು ಕೂಡ ಉಂಟೇ ?)

ದು - ಜೀ ಹಾಂ, ಆಟಾ ಭೀ ಹೈ ಹರ ಚೀಜ ಮೌಜೂದ ಹೈ (ಹೌದು ಸ್ವಾಮಿ, ಹಿಟ್ಟು ಕೂಡ ಇದೆ ಎಲ್ಲ ಪದಾರ್ಥಗಳೂ ಇವೆ)

ಮು - ಮುಝೇ ಪುರಾನಾ ಚಾವಲ ದಿಖಾಇಏ. (ನನಗೆ ಹಳೆಯ ಅಕ್ಕಿ ತೋರಿಸಿರಿ)

ದು - ದೇಖಿಏ, ಯಹ ಪುರಾನಾ ಔರ ಮಹೀನ ಚಾವಲ ಹೈ ಯಹ ರುಪಯೇಕಾ ಸಾಢೇ ತೀನ ಸೇರ ಮಿಲತಾ ಹೈ (ನೋಡಿರಿ, ಇದು ಹಳೆಯ ಮತ್ತು ಸಣ್ಣ ಅಕ್ಕಿ ಇದು ರೂಪಾಯಿಗೆ ಮೂರುವರೆ ಸೇರು ಸಿಗುತ್ತದೆ)

ಮು - ಆಪಕೇ ಪಾಸ ದೂಸರಾ ಚಾವಲ ನಹೀಂ ಹೈ ? (ತಮ್ಮ ಹತ್ತರ ಬೇರೆ ಅಕ್ಕಿ ಇಲ್ಲವೇ ?)

ದು - ಹೈ ಹೈ (ಉಂಟು ಉಂಟು) ಯಹ ದೇಖಿಏ (ಇದು ನೋಡಿರಿ) ಯಹ ಭೀ ಬಾರೀಕ ಚಾವಲ ಹೈ (ಇದೂ ಸಣ್ಣಕ್ಕಿಯೇ) ಲೇಕಿನ ಯಹ ನಯಾ ಹೈ. (ಆದರೆ ಇದು ಹೊಸದು) ಯಹ ರುಪಯೇಕಾ ಚಾರ ಸೇರ ಹೈ (ಇದು ರೂಪಾಯಿಗೆ ನಾಲ್ಕು ಸೇರು.) ಯಹ ಪುರಾನಾ ಚಾವಲ ಹೈ (ಇದು ಹಳೇ ಅಕ್ಕಿ) ಲೇಕಿನ ಮೋಟಾ ಹೈ (ಆದರೆ ದೊಡ್ಡ ಕಾಳು) ಯಹ ಭೀ ರುಪಯೇಕಾ ಚಾರ ಸೇರ ಹೈ (ಇದೂ ರೂಪಾಯಿಗೆ ನಾಲ್ಕು ಸೇರು)

ಮು - ಕ್ಯಾ ಆಪಕೇ ಪಾಸ ನಯಾ, ಮೋಟಾ ಚಾವಲ ನಹೀಂ ಹೈ ? (ತಮ್ಮ ಹತ್ತರ ಹೊಸ,ದೊಡ್ಡಕ್ಕಿ ಇಲ್ಲವೆ?)

ದು - ಯಹ ದೇಖಿಏ ಯಹ ರುಪಯೇಕಾ ಸಾಢೇ ಚಾರ ಸೇರ ಹೈ (ಇದು ನೋಡಿ ಇದು ರೂಪಾಯಿಗೆ ನಾಲ್ಕೂವರೆ ಸೇರು.)

ಮು ನಹೀಂ, ಯಹ ಚಾವಲ ಮುಝೇ ಪಸಂದ ನಹೀಂ ಹೈ. (ಇಲ್ಲ, ಈ ಅಕ್ಕಿ ನನಗೆ ಬಯಕೆ ಇಲ್ಲ) ಮುಝೇ ಆಪ ಬಾರೀಕ ಪುರಾನಾ ಚಾವಲ ಪಾಂಚ ರುಪಯೇಕಾ ಔರ ಪುರಾನಾ ಮೋಟಾ ತೀನ ರುಪಯೇಕಾ ದೀಜಿಏ (ನನಗೆ ತಾವು ಸಣ್ಣ ಹಳೇ ಅಕ್ಕಿ ೫ ರೂಪಾಯಿದು ಮತ್ತು ಹಳೇ ದೊಡ್ಡ ಅಕ್ಕಿ ೩ ರೂಪಾಯಿದು ಕೊಡಿರಿ)

ದು - ದೋ ಪೌಂಡ ಯಾ ಅಸ್ಸೀ ತೋಲೇಕಾ ಏಕ ಸೇರ ಹೋತಾ ಹೈ (ಎರಡು ಪೌಂಡು ಇಲ್ಲವೆ ಎಂಭತ್ತು ತೊಲೆ ಅಂದರೆ ಒಂದು ಸೇರು ಆಗುತ್ತದೆ)

ಮು - ತೋ ಕ್ಯಾ ಆಪ ಚಾವಲ ತೌಲಕರ ದೇತೇ ಹೈ ? (ಹಾಗಾದರೆ ತಾವು ಅಕ್ಕಿ ತೂಕವಾಡಿ ಕೊಡುತ್ತೀರಾ ?

ದು ಜೀ ಹಾಂ, ಹಮ ತೌಲಕರ ಹೀ ದೇತೇ ಹೈಂ (ಹೌದು ಅಯ್ಯಾ, ನಾವು ತೂಕ ಮಾಡಿಯೇ ಕೊಡುತ್ತೇವೆ) ಆಪಕೇ ದೇಶಮೇಂ ಕೈಸೇ ದೇತೇ ಹೈಂ ? (ತಮ್ಮ ದೇಶದಲ್ಲಿ ಹ್ಯಾಗೆ ಕೊಡುತ್ತಾರೆ?)

ಮು - ಹಮಾರೇ ಸೂಬೇಮೇಂ ನಾಪಕರ ದೇತೇ ಹೈ. (ನಮ್ಮ ಪ್ರಾಂತದಲ್ಲಿ ಅಳತೆ ಮಾಡಿ ಕೊಡುತ್ತಾರೆ) ಅಚ್ಛಾ, ಅಬ ಏಕ ಸೇರ ಚಾವಲ ತೌಲಿಯೇ (ಒಳ್ಳೇದು, ತಾವು ಒಂದು ಸೇರು ಅಕ್ಕಿ ತೂಕ ಮಾಡಿ)

ದು - ಯಹ ದೇಖಿಏ, ಯಹ ಬಾರೀಕ ಚಾವಲ ಏಕ ಸೇರ ಹೈ (ಇಗೋ ನೋಡಿ, ಈ ಸಣ್ಣಕ್ಕಿ ಒಂದು ಸೇರುಂಟು)

ಮು - ಯಹ ಹಮಾರೇ ಏಕ ಪಡೀಸೇ ಕಮ ಹೈ (ಇದು ನಮ್ಮ ಒಂದು ಪಡಿಗಿಂತ ಕಡಿಮೆಯುಂಟು) ಆಧೀ ಪಡೀಸೇ ಕುಛ ಜ್ಯಾದಾ ಹೈ. (ಅರ್ಧ ಪಡಿಗಿಂತ ತುಸು ಹೆಚ್ಚುಂಟು.) ಇಸಲಿಯೇ ಆಪ ಬಾರೀಕ ಚಾವಲ ಆಠ ರುಪಯೇಕಾ ಔರ ಮೋಟಾ ಚಾವಲ ಚಾರ ರುಪಯೇಕಾ ದೀಜಿಯೇ (ಆದ್ದರಿಂದ ತಾವು ಸಣ್ಣಕ್ಕಿ ಎಂಟು ರೂಪಾಯಿಗಳದು ಮತ್ತು ದೊಡ್ಡಕ್ಕಿ ನಾಲ್ಕು ರೂಪಾಯಿಗಳದು ಕೊಡಿರಿ)

ದು - ಅಚ್ಛಾ, ಆಪಕೋ ದಾಲ ನಹೀಂ ಚಾಹಿಯೇ ? (ಒಳ್ಳೇದು, ತಮಗೆ ಬೇಳೆ ಬೇಡವೇ ?)

ಮು - ನಹೀಂ, ಮೇರೆ ಪಾಸ ದಾಲ ಹೈ ಮುಝೇ ತೇಲ ಚಾಹಿಯೇ. (ಬೇಡ, ನನ್ನ ಹತ್ತರ ಬೇಳೆಯುಂಟು. ನನಗೆ ಎಣ್ಣೆ ಬೇಕು)

ದು - ಯಹ ದೇಖಿಯೇ, ಸರಸೋಂಕಾ ತೇಲ ಹೈ. (ಇಗೋ ತೆಗೊಳ್ಳಿರಿ, ದೊಡ್ಡ ಸಾಸಿವೆಗಳ ಎಣ್ಣೆಯಿದು)

ಮು - ಜೀ, ಇಸಮೇಂ ತೋ ರಾಈಕೀ ಮಹಕ ಹೈ (ಅಯ್ಯಾ, ಇದರಲ್ಲಿ ಸಾಸಿವೆಯ ವಾಸನೆಯುಂಟು) ಕ್ಯಾ ಆಪಕೇ ಪಾಸ ತಿಲಕಾ ತೇಲ ನಹೀಂ ಹೈಂ ? (ಏನು ತಮ್ಮಲ್ಲಿ ಎಳ್ಳೆಣ್ಣೆ ಇಲ್ಲವೇ ?)

ದು - ಅಬ ತೈಯಾರ ನಹೀಂ ಹೈ. ಆಪ ಶಾಮಕೋ ಆಇಏ ಮೈಂ ದೂಂಗಾ (ಈಗ ತಯಾರ ಇಲ್ಲ ತಾವು ಸಂಜೆಗೆ ಬನ್ನಿರಿ ನಾನು ಕೊಡುವೆ)

ಮು - ಮುಝೇ ಪತ್ತೇ ಚಾಹಿಯೇ (ನನಗೆ ಎಲೆಗಳು ಬೇಕು)

ದು - ಪತ್ತೇ? ಕೈಸೇ ಪತ್ತೇ ? (ಎಲೆಗಳು? ಎಂಥ ಎಲೆ?)

ಮು - ಕೇಲೇಕೇ ಪತ್ತೇ ಹಮ ಪತ್ತೇಪರ ಹೀ ಖಾತೇ ಹೈಂ. (ಬಾಳೆಯ ಎಲೆಗಳು ನಾವು ಎಲೆಗಳ ಮೇಲೆ ಉಣ್ಣುತ್ತೇವೆ)

ದು - ಯಹಾಂ ಕೇಲೇಕಾ ಪತ್ತಾ ನಹೀಂ ಮಿಲೇಗಾ (ಇಲ್ಲಿ ಬಾಳೆಯ ಎಲೆ ಸಿಗಲಾರದು.) ಆಪ ಯಹ ಪತ್ತಲ ಲೇ ಜಾಇಯೇ (ತಾವು ಈ ಪತ್ರಾವಳಿ ತೆಕ್ಕೊಂಡು ಹೋಗಿರಿ)

ಮು - ಯಹ ತೋ ಅಚ್ಛಾ ನಹೀಂ ಹೈ (ಇವಂತೂ ಚನ್ನಾಗಿಲ್ಲ) ಫಿರ ಸೌ ದೀಜಿಯೇ (ಆದರೂ ನೂರು ಕೊಡಿರಿ) ಅಬ ಮುಝೇ ಇಮಲೀ ದೀಜಿಯೇ (ತಾವು ನನಗೆ ಹುಣಸೇ-ಹಣ್ಣು ಕೊಡಿರಿ)

ದು - ಜೀ, ಇಮಲೀ ನಹೀಂ ಹೈ ಅಮಚೂರ ಲೇ ಜಾಇಯೇ (ಅಯ್ಯಾ ಹುಣಸೇ ಹಣ್ಣು ಇಲ್ಲ ಮಾವಿನ ಚೂರು ತೆಕ್ಕೊಂಡು ಹೋಗಿ)

ಮು - ಅಮಚೂರ ಕ್ಯಾ ಚೀಜ ಹೈ ? (ಮಾವಿನ ಚೂರು ಅದೆಂಥ ಪದಾರ್ಥ ?)

ದು - ಆಮಕಾ ಅಮಚೂರ ಹೈ (ಮಾವಿನ ಕಾಯಿಯ ಮಾವಿನ ಚೂರು) ಕಚ್ಚೇ ಆಮಕೋ ಸುಖಾನೇ ಸೇ ಬನತಾ ಹೈ (ಎಳೆ ಮಾವಿನಕಾಯಿ ಒಣಗಿಸಿ ತಯಾರಾಗುತ್ತದೆ)

ಮು - ಮುಝೇ ವಹ ನಹೀಂ ಚಾಹಿಯೇ ಮೈಂ ನಿಂಬೂ ಖರೀದ ಲೂಂಗಾ (ನನಗೆ ಅದು ಬೇಡ, ನಾನು ಲಿಂಬೇಹಣ್ಣು ಕೊಂಡುಕೊಳ್ಳುವೆ)

Notice to Motor Owners in the Karnatak Region.

Owners of motor vehicles residing in the Karnatak Region are informed that tax for the last quarter in the current financial year ending 31—3—1946 should be paid on or before 15—1—1946 for vehicles registered in the Bombay Province and on or before 31—12—1945 for vehicles registered elsewhere, respectively Tax should be paid in **cash, crossed cheques drawn on the Imperial Bank of India only,** chalans or by money orders at the Regional Transport Office, Belgaum between 10-30 A M and 2-30 P M on week days and 9-30 A M and 11-30 A M on Saturdays

2 Payment of tax should be accompanied by —

(i) Registration certificates of vehicles and (ii) valid Insurance Policies in the case of heavy Transport Vehicles namely Goods Vehicles and Passenger Buses

3 Non use intimation for vehicles which are kept idle should be submitted before the date on which tax tokens already issued for such vehicles expire as required by Rule 26 of the B M V Tax Rules 1940

Belgaum
18—12—1945

J. B. RABBITT,
Regional Transport Officer Karnatak Region BELGAUM

(೩ನೇ ಪುಟದಿಂದ ಮುಂದುವರಿದದ್ದು)

ಜಾತಿ-ಮತ ಲಿಂಗಭೇದಗಳ ಮೂಲಕ ಯಾರೂ ಅಪಾತ್ರವೆನಿಸಕೂಡದು.

(೬) ಸರಕಾರ ಯಾ ಸ್ಥಾನಿಕ ಸಂಸ್ಥೆಗಳ ಹಣದಿಂದ ನಡೆಯುವ ಹಾಗೂ ಸಾರ್ವಜನಿಕರಿಗಾಗಿ ವ್ಯಕ್ತಿಗಳು ದಾನ ಬಿಟ್ಟ ಬಾವಿ ವಗೈರೆ ಜಲಾಶಯಗಳಲ್ಲೂ ಶಾಲೆ ಮೊದಲಾದವುಗಳಲ್ಲೂ ಸರ್ವರಿಗೂ ಪ್ರವೇಶವಿರತಕ್ಕದ್ದು.

(೭) ಶಸ್ತ್ರಾಸ್ತ್ರಗಳ ನಿಯಮಗಳಿಗನುಸಾರವಾಗಿ ಅವನ್ನು ಇಟ್ಟುಕೊಳ್ಳಲು ಎಲ್ಲರಿಗೂ ಅಧಿಕಾರವಿರಬೇಕು.

(೮) ಕಾನೂನು-ಬದ್ಧ ರೀತಿಯಿಂದಲ್ಲದೆ ಯಾವದೇ ವ್ಯಕ್ತಿಯ ಸ್ವಾತಂತ್ರ್ಯ ಹರಣವಾಗಕೂಡದು ಅಥವಾ ಯಾವಾತನ ಆಸ್ತಿ-ವಸತಿಗಳ ಹಕ್ಕಿಗೂ ಧಕ್ಕೆ ತರಕೂಡದು.

(೯) ಸರಕಾರವು ಸದಾ ಕಾಲ ಧಾರ್ಮಿಕ ತಟಸ್ಥತೆಯನ್ನು ತಳೆಯಬೇಕು.

(೧೦) ಎಲ್ಲ ಪ್ರೌಢ-ವಯಸ್ಕರಿಗೆ ಮತಾಧಿಕಾರ ಕೊಡಬೇಕು.

(೧೧) ಕಡ್ಡಾಯದ ಉಚಿತ ಮೂಲ ಶಿಕ್ಷಣದ ವ್ಯವಸ್ಥೆಯನ್ನು ಸರಕಾರವು ಮಾಡತಕ್ಕದ್ದು

(೧೨) ಎಲ್ಲ ನಾಗರಿಕರಿಗೆ ಹಿಂದುಸ್ಥಾನದೊಳಗೆ ಬೇಕಾದಲ್ಲಿ ಸಂಚರಿಸಲಿಕ್ಕೂ, ಉಳಿಯಲಿಕ್ಕೂ, ವ್ಯಾಪಾರ ಉದ್ಯೋಗ ಮಾಡಲಿಕ್ಕೂ ಮುಕ್ತದ್ವಾರವಿರಬೇಕು ಎಲ್ಲ ನಾಗರಿಕರಿಗೂ ಸಮಾನ ಸಂರಕ್ಷಣೆ ಸಿಗಬೇಕು

ಹಿಂದುಳಿದ ಯಾ ದಲಿತ ವರ್ಗಗಳು ಭರದಿಂದ ಮುಂದೆ ಬಂದು ಉಳಿದವರೊಡನೆ ಸಮಾನ ಭಾಗ ವಹಿಸಲು ಸಮರ್ಥರಾಗುವಂತೆ ಅವರಿಗೆ ವಿಶೇಷ ಸಂರಕ್ಷಣೆ ಕೊಡತಕ್ಕದ್ದು. ವಿಶೇಷತಃ ಕಾಡು ಜನರ ಅಭ್ಯುದಯಕ್ಕೂ, ಹರಿಜನರೇ ಮೊದಲಾದವರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಪ್ರಗತಿಗೂ ಸರಕಾರವು ನೆರವನ್ನೀಯತಕ್ಕದ್ದು

ಜನತೆಯ ಸಾಂಪತ್ತಿಕ ಏಳಿಗೆಯೇ ನಮ್ಮ ಗುರಿ.

೧೫೦ ವರ್ಷಗಳ ಪರಸ್ಥರ ರಾಜ್ಯದಲ್ಲಿ ದೇಶದ ಪ್ರಗತಿ ಕುಂಠಿತವಾಗಿದೆ ಒಂದೇ ಸಮನೆ ಪರಕೀಯರು ನಾಡಿನ ಸುಲಿಗೆ ನಡಿಸಿದ್ದರಿಂದ ಜನರು ಅನ್ನಾನ್ನಗತಿಕರಾಗಿರುವರು ಸಕಲ ರಂಗಗಳಲ್ಲೂ ದೇಶವು ಅವನತಿಯನ್ನೈದಿದೆ ಅಧಿಕಾರಿಗಳ ಸುಲಿಗೆಯು ಕ್ರಮವೂ ಅಧಿಕತೆಯ ಅಸಮರ್ಥತೆಯೂ ಪರಾಕಾಷ್ಠೆಗೆ ಮುಟ್ಟಿ, ಜನತೆಯನ್ನು ಬರಗಾಲದ ಭವಣೆಗೀಡುಮಾಡಿವೆ ರಾಷ್ಟ್ರಸ್ವಾತಂತ್ರ್ಯದ ವಿನಹ ಈ ರೋಗಗಳಿಗೆ ಬೇರೆ ಮದ್ದು ಇಲ್ಲ ರಾಜಕೀಯ ಸ್ವಾತಂತ್ರ್ಯದಲ್ಲಿ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯಗಳೂ ಸೇರುತ್ತವೆ

ದಾರಿದ್ರ್ಯವನ್ನು ಹೋಗಲಾಡಿಸಿ ಜನತೆಯ ಜೀವನದ ಮಟ್ಟವನ್ನು ಏರಿಸುವದೇ ಈಗಿನ ಮಹತ್ವದ ಪ್ರಶ್ನೆ ಜನತೆಯ ಕಲ್ಯಾಣ ಸಾಧಿಸಲಿಕ್ಕೇ ಕಾಂಗ್ರೆಸ್ಸು ವಿಧಾಯಕ ಕಾರ್ಯಕ್ರಮ ಕೈಕೊಂಡದ್ದು ಪ್ರತಿಯೊಂದು ಸೂಚನೆಯ ವಿಚಾರ ಮಾಡುವಾಗ ಜನತೆಯ ಹಿತಾಹಿತದ ದೃಷ್ಟಿಯನ್ನಿಟ್ಟುಕೊಂಡೇ ಕಾಂಗ್ರೆಸ್ಸು ನಡೆದಿದೆ. ಬಡವರ ಅಡಚಣೆಗಳನ್ನು ಪರಿಹರಿಸಿ, ಒಕ್ಕಲತನ-ಉದ್ಯೋಗಗಳಿಗೆ ಹೊಸ ಚೈತನ್ಯ, ಹೊಸ ರೂಪ ಕೊಟ್ಟು, ದೇಶದ ಸಂಪತ್ತು ಬೆಳಸಿ, ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುವದೇ ಕಾಂಗ್ರೆಸ್ಸಿನ ಧ್ಯೇಯ ನಿರುದ್ಯೋಗವನ್ನು ನಷ್ಟಪಡಿಸಿ ಜನತೆಯ ಜೀವನ-ಯೋಗ್ಯತೆಯನ್ನು ಏರಿಸುವದೇ ಅದರ ಗುರಿ. ಅದಕ್ಕಾಗಿ ಅಧಿಕಾರ ಸಂಪತ್ತುಗಳು ವ್ಯಕ್ತಿಗಳ ಯಾ ಗುಂಪುಗಳ ಕೈಯಲ್ಲಿ ಕೇಂದ್ರೀಭೂತವಾಗದಂತೆಯೂ ಪರಂಪರಾಗತ ಆಸ್ತಿವಂತರು ತಲೆಯೆತ್ತದಂತೆಯೂ ನೋಡುವದು ಮತ್ತು ಖನಿಜ ಸಂಪತ್ತು, ವಾಹನ ಸಾರಿಗೆ ಮೊದಲಾದ ಉದ್ಯೋಗಗಳನ್ನು ಪ್ರಜೆಗಳ ಅಂಕೆಯಲ್ಲಿ ತರುವದು ಅವಶ್ಯವಿದೆ

ಒಕ್ಕಲತನವೂ ಉದ್ಯೋಗಗಳೂ.

ಒಕ್ಕಲತನ-ಉದ್ಯೋಗಗಳ ಬೆಳವಣಿಗೆ ಮಾಡುವಾಗ ಹಳ್ಳಿಯ ಸಾಂಪತ್ತಿಕ ವ್ಯವಹಾರ ಮತ್ತು ನಗರದ ಸಂಪದಭಿವೃದ್ಧಿಗಳ ನಡುವೆ ಸಮತೂಕವಿರುವಂತೆ ನೋಡಿಕೊಳ್ಳುವದವಶ್ಯವಿದೆ. ಹಳ್ಳಿಗಳನ್ನು ಹೀರಿ ನಗರಗಳ ಅಭಿವೃದ್ಧಿ ಮಾಡತಕ್ಕದ್ದಲ್ಲ ಎರಡರ ಕಡೆಯ ಜೀವನಮಟ್ಟ ಒಂದೇ ತರದ್ದಿರಬೇಕು ಉದ್ಯೋಗಗಳನ್ನು ಕೆಲವೊಂದು ಪ್ರಾಂತಗಳಲ್ಲೇ ಕೇಂದ್ರೀಕರಿಸದೆ, ಎಲ್ಲ ಪ್ರಾಂತಗಳ ಸಾಂಪತ್ತಿಕ, ಔದ್ಯೋಗಿಕ ಸ್ಥಿತಿ ಒಂದೇ ಪಾತಳಿಯಲ್ಲಿರುವಂತೆಯೂ ನೋಡಿಕೊಳ್ಳಬೇಕು

ಒಕ್ಕಲತನ-ಉದ್ಯೋಗಗಳಿಗೆ ಹಿಂದುಸ್ಥಾನದಲ್ಲಿ ಹರಿಯುತ್ತಿರುವ ಅಸಂಖ್ಯ ಮಹಾನದಿಗಳ ಪ್ರವಾಹದ ಶಕ್ತಿಯು ಪೂರ್ಣ ಪ್ರಯೋಜನ ಮಾಡಿಕೊಳ್ಳುವದು ಅಗತ್ಯವಿದೆ. ಈಗ ಈ ನದಿಗಳ ನೀರಿನಿಂದ ಪ್ರಯೋಜನವಾಗುವ ಬದಲು ದಂಡೆಗುಂಟ ಇರುವ ಭೂಮಿಗಳಿಗೆ ಅಪಾಯವೇ ಆಗುತ್ತಿದೆ! ನೀರಾವರಿಯ ಬೆಳವಣಿಗೆ, ನೆರೆಹಾವಳಿಯ ನಿವಾರಣೆ, ಹೊಲಗಳ ಮಣ್ಣು ಹರಿದುಹೋಗದಂತೆ ವ್ಯವಸ್ಥೆ ಮಾಡೋಣ, ಜಲ ವಿದ್ಯುಚ್ಛಕ್ತಿಯ ಉತ್ಪತ್ತಿ ಇವುಗಳ ವಿಚಾರ ಮಾಡಿ ಹಳ್ಳಿಗಳ ಸಂಪದಭಿವೃದ್ಧಿ ಮಾಡುವ ಯೋಜನೆಯನ್ನು ಸಿದ್ಧಗೊಳಿಸಲು ಒಂದು ಮಂಡಳ ನೇಮಿಸಬೇಕಾಗಿದೆ ಎಲ್ಲೆಲ್ಲಿ ವಿದ್ಯುತ್ ಶಕ್ತಿಯನ್ನು ನಿರ್ಮಿಸಿ ಒಕ್ಕಲತನಕ್ಕೂ ಉದ್ಯೋಗಗಳಿಗೂ ಅದನ್ನು ಪೂರೈಸಬಹುದೆಂಬುದನ್ನು ಶೀಘ್ರವೇ ಕಂಡುಹಿಡಿಯಬೇಕು ಜನರಿಯ ಏಳಿಗೆ ಮಾಡಲು ಅನುಕೂಲ ಮತ್ತು ಯೋಗ್ಯ ಶಿಕ್ಷಣದ ಏರ್ಪಾಟಾಗಬೇಕು ಹಳ್ಳಿಗಳ ಆರೋಗ್ಯ-ಸಂವರ್ಧನೆಯ ಕಡೆಗೆ- ವಿಶೇಷವಾಗಿ ಶಿಶು-ಸಂಗೋಪನ ಮತ್ತು ಪ್ರಸೂತಿಗೃಹಗಳ ಕಡೆಗೆ — ಹೆಚ್ಚಿನ ಲಕ್ಷ ಪೂರೈಸಬೇಕು

ಎಲ್ಲೆಲ್ಲೂ ಬಡತನದ ಭೂತ

ಹಿಂದುಸ್ಥಾನದಲ್ಲಿ ಬಡತನ ಹಬ್ಬಿದೆಯಾದರೂ ಹಳ್ಳಿಗಳ ಜನತೆಯ ದಾರಿದ್ರ್ಯ ವಿಶೇಷವಾಗಿದೆ ಒಕ್ಕಲತನದ ಮೇಲೆ ಹೆಚ್ಚಿಗೆ ಭಾರ ಬಿದ್ದದ್ದೇ ಇದಕ್ಕೆ ಕಾರಣ ಬ್ರಿಟಿಶರ ಆಳಿಕೆಯಲ್ಲಿ ಉದ್ಯೋಗಗಳೂ ಉತ್ಪಾದಕ ಸಾಧನಗಳೂ ಒಂದೊಂದೇ ನಾಶವಾಗಿ, ಜನರು ಹೊಲಗಳ ಹುಟ್ಟುವಳಿಯ ಮೇಲೆಯೇ ಅವಲಂಬಿಸಿರಬೇಕಾದ್ದರಿಂದಲೂ, ಹೊಲಭೂಮಿಗಳ ವಿಚ್ಛೇದನ ಹೆಚ್ಚಾಗಿ ಒಕ್ಕಲತನ ಹೀನ ದೆಸೆಗೆ ಮುಟ್ಟಿದ್ದರಿಂದಲೂ ಜನರು ದರಿದ್ರರಾಗಿದ್ದಾರೆ ಅದರಿಂದ ಒಕ್ಕಲತನವನ್ನು ಶಾಸ್ತ್ರೀಯ ಪದ್ಧತಿಯಿಂದ ಸುಧಾರಿಸಬೇಕಾಗಿದೆ ಒಕ್ಕಲಿಗರ ಧನೋತ್ಪಾದನೆ ಹೆಚ್ಚುವಂತೆ ಅವರಿಗೆ ಉದ್ದಿಮೆಗಳನ್ನು ಕಲ್ಪಿಸಿಕೊಡಬೇಕಾಗಿದೆ ದೊಡ್ಡ ಉದ್ಯೋಗಗಳು ಸಮಾಜಕ್ಕೆ ಬೇಕಾಗಿದ್ದರೂ ಅವುಗಳ ಉನ್ನತಿಯಿಂದ ಇಲ್ಲವೆ ವೃದ್ಧಿಯಿಂದ ಯಾರೂ ನಿರುದ್ಯೋಗಿಗಳಾಗದಂತೆ ನೋಡಿಕೊಳ್ಳುವದು ಅವಶ್ಯವುಂಟು. ಕೆಲಸ ಮಾಡಲು ಶಕ್ತಿಯುಳ್ಳ ಪ್ರತಿಯೊಬ್ಬನಿಗೂ ಒಂದಿಲ್ಲೊಂದು ಉದ್ಯೋಗ ಸಿಗುವಂತೆ ವ್ಯವಸ್ಥೆಯಾಗತಕ್ಕದ್ದು

ಭೂ-ಧಾರಣ-ಪದ್ಧತಿಯಲ್ಲಿ ಸರಕಾರ ಮತ್ತು ಸಾಗುವಳಿದಾರ ಇವರ ನಡುವಿನ ಮಧ್ಯಸ್ಥರ ಲೋಪ ಮೊದಲು ಮಾಡಬೇಕಾಗಿದೆ ಸುಧಾರಣೆ ಮಾಡುವಾಗ ಈಗಿರುವ ಮಧ್ಯಸ್ಥರಿಗೆ ನ್ಯಾಯ್ಯ ಪ್ರತಿಫಲ ಕೊಡಬೇಕಾಗುವದು ಒಕ್ಕಲತನದ ಪ್ರಗತಿಯಾಗಬೇಕಾದರೆ ಪರಿಸ್ಥಿತಿಗನುರೂಪವಾಗಿ ಸಹಕಾರಿ ಪದ್ಧತಿಯನ್ನು ರೂಢಗೊಳಿಸುವದು ಅವಶ್ಯ ಇದ್ದರಿಂದ ಒಕ್ಕಲಿಗರಿಗೆ ಮಾದರಿ ಹಾಕಿಕೊಡುವದಕ್ಕಾಗಿ ಅಲ್ಲಲ್ಲಿ ಸಹಕಾರಿ ಸಾಗುವಳಿಯ ಕೇಂದ್ರಗಳನ್ನು ತೆರೆಯಬೇಕು

ಕೂಲಿಕಾರರು.

ಕೂಲಿಕಾರರಿಗೆ ಸಿಗಬೇಕಾದ ಕನಿಷ್ಠ ಕೂಲಿಯ ದರವನ್ನು ಸರಕಾರವು ಗೊತ್ತುಪಡಿಸಿ, ಅವರಿಗೆ ಉಳಿಯಲಿಕ್ಕೆ ಮನೆ, ಯೋಗ್ಯ ಜೀವನಮಟ್ಟ, ಬೇನೆ-ಬೇಸರಿಕೆಗಳಲ್ಲೂ ಮುಪ್ಪಿನಲ್ಲೂ ಯೋಗ್ಯ ಸಂರಕ್ಷಣೆ ಸಿಗುವಂತೆ ನೋಡಿಕೊಳ್ಳಬೇಕು ಒಡೆಯ-ಕೂಲಿಕಾರರೊಳಗಿನ ವ್ಯಾಜ್ಯಗಳನ್ನು ಬಗೆಹರಿಸಲು ಯೋಗ್ಯ ಏರ್ಪಾಟು ಮಾಡಬೇಕು. ತಮ್ಮ ಹಿತರಕ್ಷಣೆಗೆ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಎಲ್ಲ ಕೂಲಿಕಾರರಿಗೂ ಸ್ವಾತಂತ್ರ್ಯವಿರಬೇಕು. ಕೂಲಿಕಾರರ ಸಂಬಂಧದಲ್ಲಿ ಕಾಂಗ್ರೆಸ್ಸಿನ ಧೋರಣೆ ಹೀಗುಂಟು.

ರೈತರ ಸಾಲವಿಮೋಚನೆ.

ಹಳ್ಳಿಗರೂ ರೈತರೂ ಸಾಲದಲ್ಲಿ ಮುಳುಗಿ ನುಗ್ಗಾಗಿದ್ದಾರೆ ಇತ್ತೀಚೆಗೆ ಅವರ ಸಾಲದ ಹೊರೆ ಕಡಿಮೆಯಾಗಿದ್ದರೂ ಅದು ಪೂರ್ಣ ಪರಿಹಾರ ಹೊಂದಿಲ್ಲ. ಸರಕಾರ ಸಂಘಗಳ ಮುಖಾಂತರ ಅವರನ್ನು ಈ ಸಾಲದಿಂದ ಮುಕ್ತಗೊಳಿಸಬೇಕಾಗಿದೆ

ನೆರೆಯವರೊಡನೆ ಬಾಂಧವ್ಯ.

ಆಂತರ್ರಾಷ್ಟ್ರೀಯ ವಿಷಯದಲ್ಲಿ ಕಾಂಗ್ರೆಸ್ಸಿನ ನೀತಿ ಈಗಾಗಲೇ ಸ್ಪಷ್ಟವಾಗಿದೆ. ಸ್ವತಂತ್ರ ರಾಷ್ಟ್ರಗಳ ಸಂಯುಕ್ತ ಮಂಡಳವಿರಬೇಕೆಂದು ಕಾಂಗ್ರೆಸ್ಸಿನ ಆಶೆ ಇಂಥ ಮಂಡಳ ನಿರ್ಮಾಣವಾಗುವ ವರೆಗೆ ಹಿಂದುಸ್ಥಾನವು ಎಲ್ಲ ರಾಷ್ಟ್ರಗಳೊಡನೆ- ಹೆಚ್ಚಾಗಿ ನೆರೆಯ ರಾಷ್ಟ್ರಗಳೊಡನೆ- ಬಾಂಧವ್ಯ ಬೆಳೆಸತಕ್ಕದ್ದು ಪೂರ್ವ,ಪಶ್ಚಿಮ ಏಶಿಯಾದಲ್ಲಿ ಭಾರತದ ವ್ಯಾಪಾರಿ ಹಾಗೂ ಸಾಂಸ್ಕೃತಿಕ ಸಂಬಂಧ ಸಾವಿರಾರು ವರ್ಷಗಳಿಂದ ನಡೆದು ಬಂದಿದೆ ಸ್ವತಂತ್ರ ಹಿಂದುಸ್ಥಾನವು ಈ ಸಂಬಂಧವನ್ನು ಪುನರುಜ್ಜೀವಿಸಿ ದೃಢಗೊಳಿಸುವದು ಅಹಿಂಸಾ-ಮಾರ್ಗದಿಂದ ಸ್ವಾತಂತ್ರ್ಯ ಸಂಪಾದಿಸಿದ ಹಿಂದು ರಾಷ್ಟ್ರವು ವಿಶ್ವಶಾಂತಿ, ಸಹಕಾರಗಳನ್ನೇ ಪುರಸ್ಕರಿಸುವದೆಂದು ಹೇಳಬೇಕಾಗಿಲ್ಲ ಎಲ್ಲ ದಲಿತ, ಪರತಂತ್ರ ರಾಷ್ಟ್ರಗಳ ಸ್ವಾತಂತ್ರ್ಯ-ಸಂಗ್ರಾಮವನ್ನು ಭಾರತವು ಪುರಸ್ಕರಿಸುತ್ತಿದೆ. ಸಾಮ್ರಾಜ್ಯ-ವಾದದ ನಾಶವಾದ ಹೊರತು ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳುವಂತಿಲ್ಲ

೧೯೪೨ನೇ ಇಸವಿಯ ಆಗೋಸ್ತ ತಿಂಗಳ ತಾ ೮ಕ್ಕೆ ಕಾಂಗ್ರೆಸ್ಸು ಮಾಡಿದ ಗೊತ್ತುವಳಿಯು ಇತಿಹಾಸ-ಪ್ರಸಿದ್ಧವಾಗುವದರಲ್ಲಿ ಸಂಶಯವಿಲ್ಲ ಆ ಗೊತ್ತುವಳಿಯ ನೆಲೆಯ ಮೇಲೆಯೇ ಕಾಂಗ್ರೆಸ್ಸು ಬರುವ ಚುನಾವಣೆಗಳಲ್ಲಿ ಹೋರಾಡಬಯಸುತ್ತಿದೆ

ಮತದಾರರಿಗೆ ವಿನಂತಿ

ಆದ್ದರಿಂದ ಎಲ್ಲ ಮತದಾರರು ಕಾಂಗ್ರೆಸ್ಸಿಗೇ ಬೆಂಬಲವನ್ನೀಯಬೇಕೆಂದು ಬಿನ್ನಹ. ಭವಿಷ್ಯತ್ಕಾಲ ಉಜ್ವಲವಾಗುವ ಈ ಪರ್ವ ಕಾಲದಲ್ಲಿ ಸಮಸ್ತರೂ ಕಾಂಗ್ರೆಸ ಪಕ್ಷದಲ್ಲಿರಬೇಕಾಗಿ ಕಾಂಗ್ರೆಸ್ಸಿನ ಪ್ರಾರ್ಥನೆ ಭಾವೀ ಚುನಾವಣೆಗಳಲ್ಲಿ ಚಿಕ್ಕ-ಪುಟ್ಟ ವಿಷಯಗಳಿಗೂ, ವ್ಯಕ್ತಿಗಳಿಗೂ ಮಹತ್ವ ಕೊಡತಕ್ಕದ್ದಲ್ಲ ಜಾತಿ-ವಿಚಾರಕ್ಕೂ ಎಡೆಯಿಲ್ಲ ದೇಶಮಾತೆಯ ಬಂಧಮುಕ್ತಿ ಮತ್ತು ಸ್ವಾತಂತ್ರ್ಯ-ಸಂಪಾದನೆ ಇದೇ ಈಗ ಅತ್ಯಂತ ಮಹತ್ವದ ಸಮಸ್ಯೆ ಈ ಸ್ವಾತಂತ್ರ್ಯ ಸಿಕ್ಕಿದರೆ ಮಾತ್ರ ಉಳಿದ ಸ್ವಾತಂತ್ರ್ಯಗಳು ಸಿಗುವವು ಹಿಂದೀ ಜನರು ಎಷ್ಟೋ ಸಲ ಸ್ವಾತಂತ್ರ್ಯದ ಪ್ರತಿಜ್ಞೆ ಕೊಂಡದ್ದುಂಟು ಆ ಪ್ರತಿಜ್ಞೆ ಪೂರ್ತಿಗೊಳಿಸುವ ಕಾಲ ಸಮೀಪಿಸುತ್ತಿದೆ ಬರುವ ಚುನಾವಣೆಗಳು ಒಂದು ಸಣ್ಣ ಪರೀಕ್ಷೆ ಸ್ವಾತಂತ್ರ್ಯಪ್ರಿಯರಾದ ನಾವು ಆ ಪರೀಕ್ಷೆಗೆ ಆತ್ಮವಿಶ್ವಾಸದಿಂದ ಸಿದ್ಧರಾಗುವಾ, ಮತ್ತು ಸ್ವತಂತ್ರ ಭಾರತಾಂಬೆಯ ದರ್ಶನ ಪಡೆಯಲು ಒಕ್ಕಟ್ಟಿನಿಂದ ಮುಂದೆ ಸಾಗುವಾ

ಶ್ರೀ ಕೃಷ್ಣ ಹೋಮಿಯೋ ಫಾರ್ಮಸಿ, ಪುಣೆ

ಇವರ ಹೋಮಿಯೋಪಥಿ ಹನ್ನೆರಡು ಕ್ಷಾರ ಔಷಧಗಳು ಕಂಪನಿಯ ದರದಿಂದ ಕಿರಕೋಳ ವ ರೋಖ ನಮ್ಮಲ್ಲಿ ಸಿಗುತ್ತವೆ ಡಾ|| ಪಳಸುಳೇಯವರ ಕನ್ನಡ, ಮರಾಠಿ " ಜೀವನ ರಸಾಯನ " ಹಾಗೂ " ಹೋಮಿಯೋ ಚಿಕಿತ್ಸಾ ಶಾಸ್ತ್ರ " ಎಂಬ ಪುಸ್ತಕಗಳೂ ದೊರೆಯುತ್ತವೆ.

ಕಾರವಾರ ಜಿಲ್ಲೆಯ ಏಜಂಟರು —

ಎಸ್. ಜಿ. ಮಹಾಲೇ ಎಂಡ್ ಸನ್ಸ್,
ಪ್ರೋ. ಅಂಕೋಲಾ.

Applications are invited for the post of an Office Manager by the Sanikatta Co operative Salt Sale Society Ltd Sanikatta, for the period of one year on a Salary of Rs 70 — per mensem plus usual dearness allowance so as to reach this office by the 28th instant at the latest 22 12-45

S R. Nadkarni,
Chairman

THE BANK OF RURAL INDIA, LTD.,
[Incorporated in British India under the Indian Companies Act, 1913]
HEAD OFFICE— **KARWAR.**
Offices at:- KARWAR, KUMTA, HONAVAR & SIRSI
Authorised Capital · Rs. 10,00,000;
Subscribed Capital ·· Rs. 5,00,000;
Paid-up Capital ·· Rs. 2,60,000.
Rates of Interest on Deposits:
Current a/c. @ 1% p. a. ***Savings Bank a/c @ 2½%***
Fixed Deposits for 3 months @ 3% per annum
„ „ for 6 months @ 3½% „
„ „ for 12 months or more @ 4% .
The Board of Directors have pleasure to announce that a sub-Branch at YELLAPUR has been opened on 21st December 1945.
All Kinds of modern Banking business transacted.

Karwar, 22-12-1945
P. X. GRACIOUS,
MANAGING DIRECTOR

ಇದನ್ನು ಪಾಂಡುರಂಗ ಕೃಷ್ಣ ಬಾಪಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

ವರ್ಗಣಿಯ ದರ:
ಕುಮಟೆಯಲ್ಲಿ
ವರ್ಷಕ್ಕೆ ರೂ ೨-೪-೦
ಟಪಾಲದ್ವಾರಾ ವರ್ಷಕ್ಕೆ ೩-೦-೦
" ೬ ತಿಂಗಳಿಗೆ ೧-೧೦-೦
ಬಿಡಿ ಸಂಚಿಕೆಗೆ ೦-೦-೪
ಹಳೇ ಸಂಚಿಕೆಗೆ ೦-೪-೦
ವ್ಹಿ. ಪಿ. ಯಿಂದ ತರಿಸುವವರು ವ್ಹಿ. ಪಿ. ವೆಚ್ಚ ೫ ಆಣೆ ಹೆಚ್ಚಿಗೆ ಕೊಡಬೇಕು.
ವರ್ಗಣಿ ಮುಂಗಡ ಕಳಿಸತಕ್ಕದ್ದು.

Reg. No. B. 1270. Monday, 31st December, 1945.

ಕಾನಡಾವೃತ್ತ.

ವರ್ಷ ೨೮.] THE KANARA NEWS [ಸಂಚಿಕೆ ೩೬.

ಕುಮಟೆ:- ಸೋಮವಾರ, ತಾ. ೩೧ ನೆಯ ದಿಶಂಬರ ೧೯೪೫ನೇ ಇಸವಿ

ಜಾಹೀರಾತುಗಳ ದರ:
ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೬ ಆಣೆಯಂತೆ
ತೆಳ್ಳಗಿನ ಪ್ರತಿ ೧೫ ಎಮ್ ಉದ್ದ
೧ ಸಾರಿಗೆ ೮ ಆಣೆಯಂತೆ.
ವಿಶಿಷ್ಟ ಅಲ್ಲದೆ ದೀರ್ಘಕಾಲೀನ ಜಾಹೀರಾತುಗಳ ಬಗ್ಗೆ ಸಮಕ್ಷ ಅಲ್ಲವೆ ಪತ್ರದ್ವಾರಾ ಗೊತ್ತುಮಾಡಬೇಕು.

(೩ನೇ ಪುಟದಿಂದ ಮುಂದುವರಿದದ್ದು)

ಂದೂ, ಅದರೂ ಡ್ರಾಯ್ವ್ಹರರು ದುರ್ಲಕ್ಷ ಮಾಡಿದರೆಂ[illegible] ಆಯುರ್ವೇದ ಗಟ್ಟಿ ಇದ್ದುದರಿಂದ ತಾವು ಇಷ್ಟು ಸರ[illegible] ಕಲ್ಪಿಸಿದೆಂದೂ ಓರ್ವ ಪ್ರಯಾಣಿಕರು ಬರೆಯುತ್ತಾರೆ. [illegible] ೨೩ ೧೨-೪೫ನೇಗೆ ಬಂಕಿಕೊಡ್ಲಕ್ಕೆ ಮಧ್ಯಾನ್ಹ [illegible] ಬಿಡುವ ಮೋಟರು ಮನಿದಿ ಹೆಂಗಸರನ್ನೂ ಹುಡುಗರನ್ನೂ [illegible] ಕೊಂಡು ಬಂದ ಒಂದು ಮೋಟರು ೧ ಘಂಟೆಗೆ [illegible] ಕೋಡ್ಲಕ್ಕೆ ಕಲ್ಪಿದರೂ ಪ್ರಯಾಣಿಕರನ್ನು ಮುಂದೆ [illegible] ಯ್ಯದೆ ಸಾಂಜೆ ೬ ಘಂಟೆಯ ತನಕ ಅವರನ್ನು ದಣಿ[illegible] ಂಜೆ ೭ ಘಂಟೆಗೆ ಬಂಕಿಕೋಡ್ಲಿಗೆ ಕಲ್ಪಿಸಿರುವದು ಇನ್ನೊ[illegible] ರು ಬರೆಯುತ್ತಾರೆ. ಈ ಕುರಿತು ಕಂಪನಿಯವರು [illegible] ಚಾರಿಸಿ ಮಾಡಿ ಸಂಬಂಧಪಟ್ಟ ಡ್ರಾಯ್ವ್ಹರರಿಗೆ ಸ್ವಲ್ಪ ಬುದ್ಧಿ ಹೇಳಬೇಕು

ಅಂಕೋಲಾ— (ತಾ ೧೮-೧೨-೪೫) ಕಳೆದ ತಾ. ೧೬ನೇಗೆ ಹಿರಿಗೆ ಗ್ರಾಮದಲ್ಲಿ ರೈತರ ಸಭೆ ಕೂಡಿತ್ತು. [illegible]ಧ್ಯಕ್ಷ ೧೧ ಮಾನವರು ಸರ್ವೇಸಾಮವರೂ ಬೇರೆ ಕೆಲವರೂ [illegible] ಕಾಂಗ್ರೆಸ ಧ್ವಜದಡಿಯಲ್ಲೇ ರೈತರು ಸಂಘಟಿತರಾಗಬೇಕೆಂತಲೂ ಇನ್ನಿತರ ಧ್ವಜಗಳ ಗೋಜಿಗೆ ಹೋಗ[illegible] ಬಾರದೆಂತಲೂ ಸಭಿಕರಿಗೆ ಬೋಧಿಸಿದರು.

ಮೊನ್ನೆ ಪಟ್ಟಣದಲ್ಲಿ ಒಂದು ನಾಟಕ ಪ್ರಯೋಗ[illegible] ದ್ದಾಗ ಅದು ಮುಗಿದದ್ದರಿಂದ ಓರ್ವ ಕೂಲಿಯಾಳು ಅದರ [illegible] ಕಿತ್ತು ಹಾಕುತ್ತಿದ್ದನು. ಹೀಗೆ ಕೆಲಸ ಮಾಡುತ್ತಿದ್ದಾಗ ಅದ[illegible] ಆತನ್ನೇ ಮಾನವನಿಗೆ ದುಡಿಸಿಕೊಳ್ಳುವವರಿಂದ ಯೋಗ್ಯ [illegible] ಉಪಚಾರ ಕೊಡಿಸುವದುಚಿತ. ಜಿಲ್ಲಾಧಿಪರು ಆ ಮರಣದ [illegible] ಕ್ಯಾತನ ವಾರಿಸದಾರರಿಗೆ ಸಿಗುವಂತೆ ನೋಡಿಕೊಳ್ಳಬೇಕಾಗಿ [illegible] ಕೇಳುತ್ತೇವೆ.

ಮೊನ್ನೆ ಇಲ್ಲಿಯ ಕನ್ನಡ ಶಾಲೆಯಲ್ಲಿ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಸಂಘದ ವಿಶೇಷ ಸಭೆಯಾಗಿ (೧) ಕಾರ್ಯಕಾರಿ ಇದೇ ಬರುವ ತಾ. ೨೬-೨೭ಕ್ಕೆ ಸೇರಲಿರುವ ಪ್ರಾಂತಿಕ ಶಿಕ್ಷಕರ ಪರಿಷತ್ತಿಗೆ ೫ ಪ್ರತಿನಿಧಿಗಳನ್ನು ಕಳಿಸಿಕೊಡಬೇಕೆಂತಲೂ (೨) ಪ್ರಾಂತಿಕ ಸಂಘದ ನಿಧಿಗೆ ಹಣ ಕೊಡಬೇಕೆಂತಲೂ (೩) ಸದರಿ ಸಂಘಕ್ಕೆ ರೂ ೧೦೦ ವಂತಿಗೆಯನ್ನಾಗಿ ಕೊಡಬೇಕೆಂತಲೂ (೪) ಸಂಘದ ಸಂಘಟನೆ ಸುಧಾರಿಸುವದಕ್ಕಾಗಿ ಕೂಡಲೇ ಕನಿಷ್ಟ ರೂ. ೧೦೦೦ [illegible] ಕೂಡಿಸಬೇಕೆಂತಲೂ ನಿರ್ಣಯಿಸಲಾಯಿತು.

ಇದೇ ಬರುವ ಬೇಸಿಗೆಯಲ್ಲಿ ಇಲ್ಲಿಯ ಶ್ರೀ ಲಕ್ಷ್ಮೀ ನಾರಾಯಣ ದೇವರ ಅಷ್ಟಬಂಧ ಜೀರ್ಣೋದ್ಧಾರ ಮಾಡಬೇಕೆಂದು ಮಹಾಜನರ ಸಂಕಲ್ಪವಾಗಿದೆ. ಈ ಕಾರ್ಯಕ್ಕೆ ಸುಮಾರು ರೂ. ೧೫೦೦ ಖರ್ಚು ಬರುವದೆಂದು ಅಂದಾಜು. ಕಾರಣ ಊರವರೂ ಪರಸ್ಥಳದಲ್ಲಿರುವ ಅವಶ್ಯ[illegible]ರೂ ಭಕ್ತಿಯಿಂದ ತಮ್ಮ ಕೈಲಾದ ಪಟ್ಟಿಗ ವಂತಿಗೆಗಳನ್ನು ಕೊಟ್ಟು ನೆರವಾಗಬೇಕೆಂದು ದೇವಾಲಯದ ವಹಿವಾಟದಾರರು ವಿನಂತಿಸುತ್ತಾರೆ. ಪರಸ್ಥಳಗಳಲ್ಲಿ ವಂತಿ[illegible] ಕೂಡಿಸಲು ಅವರು ೧೧ ೧೫ [illegible] ಇವರಿಗೆ ನೇಮಿಸಿದ್ದಾರೆ. ದೇವರ ಶಿಕ್ಕೆಯುಳ್ಳ [illegible] ಪುಸ್ತಕಗಳು ಅವರ ಕಡೆ ಕೊಡಲ್ಪಟ್ಟಿವೆ.

(ತಾ. ೨೬-೧೨-೪೫) ಅಂಕೋಲಾ ತಾಲೂಕ ರಾಷ್ಟ್ರ ಸೇವಾದಲದವರು ಕಳೆದ ತಾ. ೨೦ಕ್ಕೆ ಒಂದು ಸ್ವಯಂ ಶಿಕ್ಷಣ ಶಿಬಿರವನ್ನು ತೆರೆದಿದ್ದಾರೆ. ಇದೇ ಬರುವ ತಾ. ೩೧ರ ವರೆಗೆ ಈ ಶಿಬಿರ ನಡೆಯುವದಂತೆ.

ಯಲ್ಲಾಪುರ— ಇಲ್ಲಿಯ ಮಾಮಲೇದಾರರು ತಮ್ಮ [illegible]ಗೆ ಕಿರಿಯ ಮುಕ್ಕಾಮು ಇಟ್ಟು ಧಾರವಾಡಕ್ಕೆ ಹೋಗಿ ಉಳಿಯುತ್ತಾರೆಂಬುದು ಜಿಲ್ಲಾಧಿಕಾರಿಗಳ ಕಿವಿಗೆ ಬಂತು. ಮಾಮಲೇದಾರರು ಜಿಲ್ಲಾಧಿಕಾರಿಗೆ ಕರವ[illegible]ಯಲ್ಲಿ ಸಿಗಲಿಲ್ಲ; ಧಾರವಾಡದಲ್ಲಿ ಸಿಕ್ಕಿದರು. [illegible] ಮಾಮಲೇದಾರರ ಕರವ[illegible] ಧಾರವಾಡಕ್ಕೆ ಹೋಗುತ್ತಿದ್ದರೆಂದು ಕೆಲವರ ಅಂಬೋಣ.

ತಾ. ೨೬ ೧೨ ೪೫ ಜಿಲ್ಲಾ ಲೋಕಲ ಬೋರ್ಡಿನ ಸದಸ್ಯರಾಗಿರುವ ಶ್ರೀ ಗಣಪತಿ ಗುಂಡಕಾರರ ಮೇಲೆ ಒಂದು ಫಿರ್ಯಾದಿಯಾಗಿದೆ. ಕೆಲವು ದಿವಸಗಳ ಹಿಂದೆ ಗಾಂವಕಾರರು ಒಬ್ಬನನ್ನು ಪೇಟೀಫಸನ್ನಾಗಿ ಮಾಡಿ, ಶಾರೀಯಂಟ ಭಾಗವತರ ಮನೆಗೆ ಹೋಗಿ ನಿಮ್ಮ ಮೇಲೆ ಅಭ್ಯಂತರ ಅನ್ಯಾಯ ಸಂಬಂಧದಲ್ಲಿ ರೂ. ೨೦೦೦ರ ದಂಡ ಆಗಿದೆ! ಪೇಟೀಫರು ನಿಮ್ಮಲ್ಲಿಗೆ ಬಂದಿದ್ದಾರೆ, ಈಗ ಜಪ್ತಿ ಮಾಡಬೇಕಾಗಿದೆ, ಎಂದು ಬೆದರಿಕೆ ಹಾಕಿದರಂತೆ. ಭಾಗವತರಿಗೆ ಇದೇನೆಂದು ತಿಳಿಯಲಿಲ್ಲ. ಅವರು ಎಷ್ಟೆಂದರೂ ತಪ್ಪುವರು, ಆಶಿಸ್ತರು ಪೇಟೀಫರು ನಿಮ್ಮಲ್ಲಿಗೆ ಬಂದದ್ದು ನಿಜವೆಂದು ನಂಬಿ ರಾಜಿಯಿಂದ ಬರುವ ಪ್ರಕರಣ ನಿಕಾಲಿ ಮಾಡಲು ಅವರು ಒಪ್ಪಿದರಾಗಿ, ಮುಕ್ತಕ್ಕೆ ರೂ. ೫೦ ಗಾಂವಕಾರರಿಗೆ ನಗದು ಕೊಟ್ಟು, ಬಾಕಿ ಹಣಕ್ಕೆ ಒಂದು ಅವರ ಹೆಸರಲ್ಲಿ ಪತ್ರಕ ಬರೆದುಕೊಟ್ಟರಂತೆ. ನಿಮ್ಮಲ್ಲಿಗೆ ಬಂದ ಪೋಲಿಸಗಾರರು ಹೆಂಡತಿ ಹೋದ ನಂತರ ೧೧ ಭಾಗವತರು ಕಾರವಾರಕ್ಕೆ ಹೋಗಿ ಚೌಕಶಿ ಮಾಡಿದರು. ವಾರಂಟಿಯಾದದ್ದು ಸುಳ್ಳು; ಪೇಟೀಫನಾಗಿ ನಿಮ್ಮಲ್ಲಿಗೆ ಕಳಿಸಿದ್ದು ಸುಳ್ಳು, ಎಂದು ಮುಂದೆ ಅವರಿಗೆ ತಿಳಿದು ಬಂತು. ಈ ೦೬೨ ೦೫ ಗಾಂವಕಾರರು ಮತ್ತು [illegible] ನಾಟಕ ಮಾಡಿ ಹಣಕ್ಕಾಗಿ ಮೋಸ ಮಾಡಿದರು ಎಂದು ಈಗ ೨೫ ಭಾಗವತರು ಗಾಂವಕಾರರ ವಿರುದ್ಧ ದೂರು ದಾಖಲಮಾಡಿದ್ದಾರೆ.

ಇಲ್ಲಿ ಶಾಲಾ ಕೊಠಡಿ ಎಂಬ ಇಲ್ಲ [illegible] ಯುಂಟು. ಆದರ ಮುಖ್ಯ ಉಪಾಧ್ಯಾಯ ಮಾನಂದರಿಯವರ ಬಹಳ ಪ್ರಾಚೀನ ಬಹಳ ಅಪ್ರಿಯವೆ ಅದರೂ ವಾಮನ [illegible] ಮಾಡದು ಈ ಕೊಠಡಿಗೆ ೩೦ ರಕ್ತಬಿಸ್ತ್ರೆ ನೇಮಿಸಿಕೊಟ್ಟದ್ದಾರೆ. ಇನ್ನು ಅವ ಬಹು ಅಗತ್ಯವಿಲ್ಲದ ಅಂಥ ಶಿಸ್ತು ಸಿಗುತ್ತಿದೆ! ಇವರೆಲ್ಲ ಮಾಮಲೇದಾರರ ಮುಖ್ಯ ಕಚೇರಿ! ಸಣ್ಣಯ ಜಿಲ್ಲೆಯಲ್ಲಿಯು, ಹಸಿವಿಗಾಗಿ ನೋಡಿಸಿ ವರೆ, ಪ್ರಾಂತಿಕ ಅಧಿಕಾರಿಗಳ ಅಧಿಕಾರ ಕಚೇರಿಗೆ ಬರುತ್ತದೆ ಅದರ ಮಾಮಲೇದಾರರು ಅವರನ್ನು ಇನ್ನೂ ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದಾರಂತೆ!!

ಈ ಕಾಲದಲ್ಲಿ ಅತಿ ಬಹಳ ಬೆಳೆಯುತ್ತದೆ ಅದರ ಅವರ ಪಗಾರಪಟ್ಟಿಯೂ ಶಿಕ್ಷಣ, ಕುಮಟಾ ಇಲ್ಲದೆ ತುಪ್ಪಳ್ಳಿಯಲ್ಲಿ. ಇಲ್ಲಿಯ ಅರ್ಜಿಯು ಪ್ರಾಂತದ ಪೇಟಿಯಲ್ಲಿ. ಅತಿ ಹೆಗೆ ಬಂದುದರಿಂದ ಅತಿ ಬೇಗನೆ ಪರಿಗೆ ಕೈಸೇರು ಕನ್ನ ಬಂದರೆ ಅತಿಯನ್ನು ತಾಲೂಕಿನಿಂದ ಹೊರಗೆ ಒಯ್ಯಬೇಕಾದರೆ ಮೊದಲು ೨೦೧ ಕೊಡಬೇಕೆಂ ೩೫ ಮಾಮಲೆ ದಾರ ಇಲ್ಲದೆ ತರಾಟಿನ ಪ ಟಿ ಸ್ವತಿ ಕೆಂ ನೆ ಕೊಡುತ್ತೇವೆಂದು ಹೇಳಿದರೆ ಸಾಂಕ್ರ ಅಧಿಕಾರಿಗಳು ಒಪ್ಪಂದಕ್ಕೆ ಬಂದಿಲ್ಲ! ಅದರಿಂದ ಕೋಟಿಗಾರರು ಅದರ ಕಾಲಕ ಕರಲು ಎಲ್ಲೆಂದರಲ್ಲಿ ಕಾಲ ಕಳೆಯಬೇಕು ಇಲ್ಲವೆ ತಮ್ಮ ಅತಿಯನ್ನು ಅಲ್ಲಿಂದಲ್ಲೇ ಪಾಲಾಟ ಮಾಡಿ ಹಣ ಒದಗಿಸಿಕೊಳ್ಳಬೇಕು ಕಾಲ ಸಿಗುವದು ಕಷ್ಟ. ಅಲ್ಲಿಂದ ಇಲ್ಲಿ ಪೇಟೆಯಲ್ಲಿಯದ್ದರೂ ಅಗ್ಗದ ದರ ಅತಿ ವ್ಯಾಪಾರಿಗಳು ಖರೀದಿಸುವದರಿಂದ ಕೈಹುಲ್ಲು ಧವಳ ಪರ್ಮಿಟ ಅವರ ಹೇಳದ ಧಾರಣೆಯಿಂದ ಪಾಲಾಟ ಮಾಡಬೇಕು. ಕೋಟಿಗಾರರು ಹಣ ಒದಗಿಸಿಕೊಳ್ಳುವ ದುರ್ಧರ ಪ್ರಸಂಗ ಒದಗಿದೆ! ಇನ್ನೊಂದು ಕಷ್ಟವೆಂದರೆ ಸಂಚಾರ ಕೊಡುವ ಹರಿಯ ಅಡಿಕೆಯನ್ನು ಹಂಚಲು ಒಟ್ಟಿಗೆ ಪಡೆದ ಪರವಾನಿಗೆಯಿಂದ ಮಾಡಿಗೆ ಒಯ್ಯಬೇಕು ಇಲ್ಲಿ ಯಲ್ಲಾಪುರದಲ್ಲಿ ೨-೩ ವಖಾರಗಳುಂಟು. ಹಳ್ಳಿಗಳಿಂದ ತಂದ ಅಡಿಕೆ ಈ ವಖಾರಗಳಿಗೆ ತರಲು ಬೇಲ ಗಳ್ಳಿ ದಿನ.ತರವರೆಗೆ ಗಾಡಿ ಭಾಡಿಗೆ ಕೊಡಬೇಕು! ಕೋಟಿಗಾರರ ಪತ್ರದ ಮುದ್ರೆ ಹಾಕಿದ ಬೇರೆ ತಕ್ಕಡಿಗಳು ಇರುವದಿಲ್ಲ ಅದರಿಂದ ಅವರ ಅಡಿಕೆಯನ್ನು ವಖಾರಗಳಲ್ಲೇ ತೂಕ ಮಾಡಬೇಕು. ಆ ಬಗ್ಗೆ ತೂಕದ ಭಾಡಿಗೆಯು ಬಗ್ಗೆ ಕೋಟಿಗಾರರು ಬೇಲ ಗೆ ಸರಾಸರಿ ರೂ. ೩ ಕರ ಬೇಕಾಗುತ್ತದೆ! ಈ ತೂಕ ಪ್ರತಿ ದಿನದ ಒಪ್ಪಿತವ ಎಂಬ ಅಧಿಕಾರಿಗಳ ಮುಂದೆ ಆಗಬೇಕು. ಅವರು ಸಂಚಾರಕ್ಕೆ ಹೋದದ್ದು ಇದ್ದರೆ ಅವರು ಬರುವ ವರೆಗೂ ಅಡಿಕೆ ತಂದ ಕೋಟಿಗಾರನು ಅಲ್ಲಿ ಕಾಯಬೇಕು! ಮುಂಚಿಕೇರಿ ಸೀಮೆಯವರು ತಮ್ಮ ಅಡಿಕೆ ಶಿರ್ಸಿ ಪೇಟೆಗೆ ಒಯ್ದು ಕೊಡುತ್ತಾರೆ ಅಂತೆಯೇ, ಸಿದ್ದಾಪುರ, ಹೊನ್ನಾವರ ತಾಲೂಕಿನವರು ಕುಮಟಾ ಪೇಟೆಗೆ ಒಯ್ದು ಅಲ್ಲಿ ತೂಕ ಕೊಡುತ್ತಾರಂತೆ. ಯಲ್ಲಾಪುರ ಸೀಮೆಯವರಿಗೆ ಮಾತ್ರ ಆ ಸವಲತ್ತು ಇಲ್ಲ! ಅದರಿಂದ ಅಡಿಕೆ ಬೆಳೆಯುವವರು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಬೇಗನೇ ಅನುಕೂಲ ವ್ಯವಸ್ಥೆ ಮಾಡಬೇಕಾಗಿ ಆರೈಸುವೆ

ಮಂಚಿಕೇರಿ— (ತಾ. ೧೯-೧೨-೪೫) ಇಲ್ಲಿ ಮುಲ್ಕಿಯ ತನಕ ಕಲಿಸುವ ಶಾಲೆ ಅವಶ್ಯವಿದೆ ಅದು ಎಂದು ಸ್ಥಾಪಿಸಲಾಗುವದೋ ದೇವರೇ ಬಲ್ಲ! ಇಷ್ಟು ಶಾಲೆಯ ವ್ಯವಸ್ಥೆ ಯಾವಾಗ ನೆಟ್ಟಗಿದ್ದೀತು? ಶಾಲೆಯಲ್ಲೀಗ ೮೫ ವಿದ್ಯಾರ್ಥಿಗಳಿದ್ದಾರೆ, ಇಷ್ಟು ಒಬ್ಬರೇ ಶಿಕ್ಷಕರಿರುವ ಅವರನ್ನು ಕಲಿಸಲು ಸಾಧ್ಯವಿಲ್ಲೆಂದು ಇವರು ಇಲ್ಲಿಯವರು ಒಂದು ಖಾಸಗಿ ಅಸಿಸ್ಟಂಟ ಶಿಕ್ಷಕರನ್ನು ನೇಮಿಸಿಕೊಂಡಿದ್ದರು. ಮುಂದೆ ಆ ಲಾ ಬೋರ್ಡಿನವರು ಹಾಗೇ ಅಸಿಸ್ಟಂಟ ಶಿಕ್ಷಕರನ್ನು ಕೊಡುತ್ತೇವೆಂದು ಹೇಳಿ ಯಾರಿಗೋ ನೇಮಿಸಿದ ಸಂಗತಿಯನ್ನು ತಿಳಿಸಿದರು ಬೋರ್ಡಿನ ಪತ್ರ ಬಂದು ಈಗ ತಿಂಗಳುಗಳು ಲೆಯಾದರೂ ಆ ಶಿಕ್ಷಕರು ಬಂದು ಮುಟ್ಟಿಲ್ಲ! ಇದ್ದ ಶಿಕ್ಷಕರು ಮೊನ್ನೆ ಬರೋಡಯ ಕೆಲಸಕ್ಕೊಂದು ರಜೆ ಹೋಗ್ಯಂದು ಊರಿಗೆ ಹೋಗಿದ್ದರೆ ಹೀಗಾಗಿ ಶಾಲೆ ಮುಚ್ಚುವ ಪ್ರಸಂಗ ಬಂದಿದೆ. ಶಾಲಾ ಬೋರ್ಡಿನ ಕಾರಭಾರವೆ ಇದೆಂದು ಹಾರದ!" ಇತ್ಯಾದಿ ಮಂಚಿಕೇರಿಯ ಕೆಲವು ನಾಗರಿಕರು ಬರೆಯುತ್ತಾರೆ.

WANTED Agents & Stockists for our High Class Cosmetics and Quality Inks in every town in Karnatak & Kanara Districts.
Apply for terms to —
The Karnatak Sales & Agencies,
17, Karani Bldg, Forjet Hill Rd.,
BOMBAY, 26

The Agricultural & Industrial Bank, Ltd.
[Incorporated in British India, Liability of Members limited]
ANNOUNCEMENT.
The Directors have pleasure to announce the opening of two more Branches of the Bank simultaneously at
GADAG & BOMBAY
on Friday, the 21st December 1945.
All kinds of Banking business transacted.
Goondapoor,
3-12-1945.
K. VAMAN SHENAI,
CHAIRMAN.

ಸ್ಥಳಿಕ ವಿಷಯಗಳು.

ಲೇಖಕ - ಸ್ಥಳವಂತಿಕ

ಭತ್ತ ಕುಟ್ಟಿ ಅಕ್ಕಿ ಮಾಡುವ ಉದ್ಯಮ ಬಹಳ ಜನರು ನಡಿಸುತ್ತಾರೆ. ದಿನ ೧ಕ್ಕೆ ೧ ಹೆಂಗಸು ೧೨॥ ಕೊಳಗ ಭತ್ತ ಮರೆಯುತ್ತಾಳೆ. ಆ ಭತ್ತದಿಂದ ಸಾಧಾರಣವಾಗಿ ೮॥ಯಿಂದ ೯ ಕೊಳಗ ಅಕ್ಕಿ ಸಿಗುತ್ತದೆ. ಕೂಲಿ ೫ ಶಿದ್ದೆ ಕೊಡುವದುಂಟು. ಸಾಮಾನ್ಯವಾಗಿ ೪ ತಿಂಗಳ ತನಕ ಈ ಕೆಲಸ ಸಾಗುತ್ತಿತ್ತು. ಇದಲ್ಲದೆ ಬೇರೆ ಬೇರೆ ಚಿಕ್ಕ-ಪುಟ್ಟ ಕೆಲಸಗಳಿಗೆ ಕಡಿಯಕ್ಕಿ ಕೊಡುವ ಪ್ರಘಾತವುಂಟು. ಸಾಮಾನ್ಯವಾಗಿ ಈ ಜನರು ಕಡಿಯಕ್ಕಿಯಿಂದ ನಿರ್ವಹ ಮಾಡುತ್ತಾರೆ. ಕೂಲಿಯ ಬಗ್ಗೆ ಸಿಕ್ಕ ಅಕ್ಕಿಯನ್ನು ಮಳೆಗಾಲದ ಬಗ್ಗೆ ಕಾದಿಡುತ್ತಾರೆ. ಗಿರಣಿಗಳಿಗೆ ಭತ್ತ ಕೊಡುವದರಿಂದ ನಿರುದ್ಯೋಗಿಯಾಗಿರುವ ಜನರ ಸಂಖ್ಯೆಯೆಷ್ಟೆಂದು ಅಧಿಕಾರಿಗಳು ಲೆಕ್ಕ ಮಾಡಿ ನೋಡಬಹುದು.

⁂

'ನೆಕ್ಕಲು ಮೇಲೆ ಬಾಯಿ ಇದ್ದರೆ ಮತ್ತೊಂದು ಕುತ್ತು' ಎಂಬದೊಂದು ಗಾದೆಯುಂಟು. ಗಿರಣಿಯವರ ಸಡಾವಳಿ ಅಲ್ಪ ಸ್ವಧರ್ಮದಿಂದೆ ಕರಾವಳಿಯಲ್ಲಿ [illegible] ಅಕ್ಕಿ ಉಣ್ಣುತ್ತಾರೆ. ಗಿರಣಿಯವರು ಈ ಅಕ್ಕಿಯನ್ನು [illegible] ತಯಾರಿಸಿ ಬಿಸಿಬಿಸಿ ಕೊಡುತ್ತಾರೆ. ಭತ್ತದ ಹೆಚ್ಚಿನ ಪರಿ ಮಾತ್ರ ಹೋಗುತ್ತದೆ! ಇದ [illegible] ದಿಂದ ಅಕ್ಕಿ ಒಯ್ಯುವಾಗ ಅಳತೆ ಸರಿಯ [illegible] ದೆ ಆದರೆ ಸ್ವಲ್ಪ ಹೊರಗೆ ಹುಟ್ಟಿದೊಡನೆ ಆದ ಒಣಗಿ ಅಳತೆಯಲ್ಲಿ ತಗ್ಗುತ್ತದೆ. ಸಾಮಾನ್ಯವಾಗಿ ಬೇಲ ೧ಕ್ಕೆ - ೧ ಪಾಯಲಿ ತಗ್ಗುವದು [illegible] ವಂತೆ ಈ ತುಟ್ಟಿಯುಗದಲ್ಲಿ ಬಡವರಿಗೆ [illegible] ಗಿರಣಿಯವರು ಸ್ವಚ್ಛತೆ ಮಾಡಬೇಕು. ಇಲ್ಲವೆ ಎಷ್ಟು ಸಹಿಬೇಕು, ಹೀಗೆ ಬಿಸಿಬಿಸಿ ಅಕ್ಕಿಯನ್ನು ಅಂಗಡಿಯವರಿಗೆ ಮಾರಾಟ ಮಾಡುವದರಿಂದ [illegible] ಕ್ಕೆ ಕೊಡುವ ಅಕ್ಕಿ ಕೆಟ್ಟು ಹೋಯಿತು. ಗಿರಣಿಯವರಿಗೆ ಕೆಟ್ಟ ಅಕ್ಕಿ [illegible] ತ್ತದೆ. ಈ ಶಿಲ್ಕು ಉಳಿದ ಅಕ್ಕಿ ಕಳ್ಳ ಪೇಟೆ ಸೇರುತ್ತ ಗಿರಣಿಯವರ ಸಭ್ಯ ವಂಚನೆಯ ಮೂಲಕ ಗಿರಾಕಿಗಳ ಬೇಡುವ ಕಾಚ್ಚಗಿ ಅಕ್ಕಿಯನ್ನು ಅಂಗಡಿಯವರು ಮಾರಾಟಕ್ಕೆ ಒಪ್ಪಲು ಒಡಂಬಡುವದಿಲ್ಲ. ಇಷ್ಟಾಗಿ ಜನರಿಂದ ಭತ್ತ ಎತ್ತುವಳಿ ಮಾಡುವಾಗ ಪ ಪರಿಯ ಬಲಾತ್ಕಾರ ನಡೆಯುತ್ತದೆ. ಭತ್ತವನ್ನು ತಂದ ಕೂಡಲೆ ಅಳತೆ ಮಾಡಿಕೊಳ್ಳುವದಿಲ್ಲ. ಅದನ್ನು ತಾವು ತಯಾರಿಸಿಟ್ಟ ಅಂಗಳದಲ್ಲಿ ಒಂದು ಬಿಸಿಲಿಗೆ ಒಣಗಿಸಿ ಆಮೇಲೆ ಗ್ರಾಮಸ್ಥರು ಅಳೆದುಕೊಳ್ಳುವ ಹೊಸ ಪ್ರಸಾರ ರೂಢವಾಗಿದೆ. ಅಳೆದುಕೊಳ್ಳುವ ಪಾಯಲಿಗಳಲ್ಲಿಯೂ ವ್ಯತ್ಯಾಸವುಂಟು, ಅಳೆಯುವದರಲ್ಲಿಯೂ ಕಸವುಂಟು, ಕೊಯ್ಯುವಲ್ಲಿಯೂ ಹಂಟಿಕೆಯುಂಟು. ಆದ್ದರಿಂದ ಸುಟ್ಟಿಗೆ ಹೆಚ್ಚಾಗಿ ಭತ್ತ ಪಡೆಯುವ ಪ್ರಯತ್ನಗಳು ನಡೆಯುತ್ತವೆ. ರೈತರಿಗೆ ಆಕ್ಷೇಪ ಮಾಡಲು ಅವಕಾಶವಿಲ್ಲ. ಆಕ್ಷೇಪ ಮಾಡಿದರೆ ಭತ್ತ ಅಳೆಕೊಳ್ಳದೆ ಅವರಿಗೆ ಗ್ರಾಮಸ್ಥರು ದಂಡಿಸುತ್ತಾರೆ. ಹೀಗೆ ಒಣಗಿಸಿ ಅಳತೆ ಮಾಡಿ ಪಡೆದ ಭತ್ತದಿಂದ ಗಿರಣಿಯವರು ಬಿಸಿ ಬಿಸಿ ಅಕ್ಕಿ ಮಾಡಿ ಬಡ ಜನರನ್ನು ಸುಲಿಯುತ್ತಾರೆ!

⁂

ನಮ್ಮ ಜಿಲ್ಹೆಯೊಳಗೆ ಭತ್ತದ ಎತ್ತುವಳಿಯನ್ನು ಬಹಳ [illegible] ಯಿಂದ ಮಾಡಬೇಕಾಗಿ ಕಟ್ಟಳೆಯಿದೆ. ಘಟ್ಟದ ಮೇಲೆ ೨ ಎಕರೆ ಮತ್ತು ಘಟ್ಟದ ಕೆಳಗೆ ೩ ಎಕರೆ ಭೂಮಿ ಸಾಗುವಳಿ ಮಾಡುವವರ ಕಡೆಯಿಂದ ಭತ್ತ ಪಡೆಯಬಾರದೆಂಬ ನಿಯಮವುಂಟು. ಜನರು ತಾವಾಗಿ ಆತ್ಮಸಂತೋಷದಿಂದ ಭತ್ತ ಯಾ ಅಕ್ಕಿ ಕೊಟ್ಟರೆ ಅದನ್ನು ಪಡೆಯಲು ಗ್ರಾಮಸ್ಥರಿಗೆ ಪ್ರತಿಬಂಧವಿಲ್ಲ. ಬ್ರಿಟಿಶ ಸಾಮ್ರಾಜ್ಯದಲ್ಲಿ ಸಂತೋಷದ ಮಾರಿಗೆ ನಡೆಯುವ [illegible] ಎಲ್ಲರೂ ಬಲ್ಲರು. ಬ್ರಿಟಿಶರಿಗೆ [illegible] ಮಾಮಲೇದಾರರು "ಕೃತಜ್ಞತಾ ನಿಧಿ"ಗೆ ಎತ್ತುವಳಿ ಮಾಡತಕ್ಕ ಅಂಕಿಯನ್ನು ಜಿಲ್ಹಾಧಿಪರು [illegible] ಕೊಟ್ಟ ಮೇರೆಗೆ [illegible] ತಮ್ಮ ತಮ್ಮ [illegible] ಯೋಜನೆಯನ್ನು ಕಲ್ಪಿಸಿ ಬಡ ಜನರಿಗೆ ಸುಲಿದ ವಾರ್ತೆಗಳು ಪ್ರಕಟವಾಗಿವೆ! ಈಗಿನ ದಿನದಲ್ಲಿ ಮಾಮಲೇದಾರರ ಕಡೆ ಬೇರೆ ಬೇರೆ ಜನರ ಬೇರೆ ಬೇರೆ ಕೆಲಸಗಳಿರುತ್ತವೆ. ಮಾಮಲೇದಾರರನ್ನು ವಿಚಾರಿಸಿಕೊಳ್ಳಲು ಜನಸಾಮಾನ್ಯರು ಧೈರ್ಯಪಡುವದಿಲ್ಲ. ಇದರಿಂದ ಜನರಿಗೆ ಬಹಳ ಸಂಕಟವಾಗುತ್ತದೆ. ಯಲ್ಲಾಪುರ, ಸಿದ್ದಾಪುರಗಳಲ್ಲಿದ್ದಂಥ ಮಾಮಲೇದಾರರಿದ್ದಲ್ಲಿ ಜನರಿಗೆ ವಿಶೇಷ ವೇದನೆಯಾಗುತ್ತದೆ. ಮಾಮಲೇದಾರರಿಗೆ ಮೇಲಧಿಕಾರಿಗಳ ಭಯವಿರುವದಿಲ್ಲ. ಈಗಿನ ಕಾಲದಲ್ಲಿ ಸರಕಾರದ ಬಗ್ಗೆ ಜನರಲ್ಲಿ ಪ್ರೀತಿಯಿಲ್ಲ. ಸರಕಾರವು ಪುರಸ್ಕರಿಸುವ ಧಮಕಿ ಕಾರ್ಯಗಳಿಂದ ಸ್ವಜನರಿಗೆ ಪಕ್ಷಪಾತ ದೊರೆಯುವವೆಂಬ ಆಶೆ ಜನರಿಗೆ ಇಲ್ಲ. ಜನರನ್ನು [illegible] ಮಾಡಿಸಿ ಅಡ್ಡಗಟ್ಟುವ ಹೊರತು ಪಟ್ಟು [illegible] ಕೂಡಿಸುವದಿಲ್ಲ [illegible] ಮೇಲಧಿಕಾರಿಗಳಿಗೆ [illegible] ಮಾಮಲೇದಾರರು ಉಂಟುಮಾಡುವ [illegible] ಸಂಕಟಗಳು ಮೇಲಧಿಕಾರಿಗಳ ಲಕ್ಷ್ಯಕ್ಕೆ ಹೋಗುವದಿಲ್ಲ! [illegible] ಲೋಕಸಂಕಟದಿಂದ ತಮ್ಮ [illegible] ತಪ್ಪಿ [illegible] ಹೊರಗೆ [illegible] ಭತ್ತದ [illegible] ಮಾಡದಿರುವದು [illegible] ಇದ್ದವರ ಎತ್ತುವಳಿ [illegible] ನೋಟೀಸು [illegible] ಹೇಳಲ್ಪಟ್ಟಿದೆ [illegible] ಭತ್ತದ ಪರಿಮಾಣ [illegible] ಗ್ರಾಮಾಧಿಕಾರಿಗಳೂ ಜನರಿಗೆ ಕಷ್ಟ ಕೊಡಬೇಕಾಗುತ್ತದೆ. ಈ [illegible] ಅಧಿಕಾರಿಗಳ ಕಡೆಗೆ ದೂರಿಕೊಂಡರೆ ಫಲವೇನು ಸಿಗುವದು?

⁂

ಅಂಕೋಲೆ [illegible] ಗೆ ತಿಮ್ಮಾ [illegible] ಹೀಗೆ [illegible] ಗ್ರಾಮಸ್ಥರು [illegible] ಮಾಡುತ್ತಾರೆ. ಇವರಿಗೆ ಭತ್ತದ ಎತ್ತುವಳಿಯ ನಿಯಮ ಅನ್ವಯಿಸುವದಿಲ್ಲ. ತಿಮ್ಮನು ೬೦ ಎಂಡಿ ಭತ್ತ ಉತ್ಪನ್ನದ ಮಿತಿಯ ಗ್ರಾಮಸ್ಥರಿಗೆ ತಿಳಿಸಿದನು. ಭೂಮಿ ಆತನ ಮಾಲ್ಕಿಯದ್ದು. ಆತನಿಗೆ ಇಷ್ಟ ಒಡೆಯರಿದ್ದಾರೆ. ಒಡೆಯನಿಗೆ ೪೫ ಎಂಡಿ ಭತ್ತ ಗೇಣಿ ಕೊಡತಕ್ಕದ್ದು. [illegible] ಮನೆಯಲ್ಲಿ ೧೦ ಜನರಿದ್ದಾರೆ. ಉಳಿದ ೧೫ ಎಂಡಿ ಭತ್ತದಿಂದ [illegible] ಜೀವನ [illegible] ತಿಮ್ಮನು ಒಪ್ಪ [illegible] ಕೊಡುವದಕ್ಕೆ ೧೦ [illegible] ಪಟೇಲರೂ ಆಗ [illegible] ಸಂತವಾನ ಮಾಡಿಸಿದರು! [illegible] ಈಗ [illegible] ತಿಮ್ಮನು ಸಂತೋಷದಿಂದ ಆ ಭತ್ತವನ್ನು ಕೊಟ್ಟನೆಂದು ಗ್ರಾಮಸ್ಥರು ಹೇಳುತ್ತಾರೆ! ಸರಕಾರ ಅಂದಾಜಿನಂತೆ ತಿಮ್ಮನ ಸಾಗುವಳಿಯಲ್ಲಿದ್ದ ಹೊಲಕ್ಕೆ ೫೫ ಎಂಡಿ ಭತ್ತ ಉತ್ಪನ್ನವಾಗುತ್ತದೆ. ೬೦ ಎಂಡಿ ಉತ್ಪನ್ನ ಹಿಡಿದು ಲೆಕ್ಕ ಮಾಡಿದರೂ ಸರಕಾರ ಕೋಷ್ಟಕದಂತೆ [illegible] ಭತ್ತ ಮಾತ್ರ ಸರಕಾರಕ್ಕೆ ಸಲ್ಲಬೇಕು. ಆದರೂ [illegible] ಮಾರಾಟ ಮಾಡಬೇಕೆಂದು [illegible] ಅವನಿಗೆ [illegible]! ಮಾಮಲೇದಾರರು ಆ ಕಡೆ ಕಣ್ಣೆತ್ತಿ ನೋಡುವದಿಲ್ಲ! ಕಪ್ಪುಳಿಯಂತೆ ನಡೆದರೆ ಜಿಲ್ಹಾಧಿಪರ ಪಟ್ಟಿ ತುಂಬಲಿಕ್ಕಾಗುವದಿಲ್ಲ. ಜಿಲ್ಹಾಧಿಪರು ಸಮಗ್ರ ಪರಿಸ್ಥಿತಿ ಪರಾಂಬರಿಸಿ ಜನರು ನ್ಯಾಯವಾಗಿ ಆಧಾರ ಹೇಳಿ ಗ್ರಾಮಸ್ಥರಿಗೆ ಎತ್ತುವಳಿಯ ಕಾರ್ಯದಲ್ಲಿ ವಿಘ್ನ ಮಾಡದೆಂಬ ಗ್ರಾಮಸ್ಥರ [illegible] ಪಡೆದು ಎತ್ತುವಳಿಯ ನಿಯಮಗಳಲ್ಲಿ ತಿದ್ದುಪಡಿ ಮಾಡುವ ಪ್ರಸಂಗ ಬಂದಿದೆ.

⁂

[illegible] ಮಾಮಲೇದಾರರ ಭತ್ತದ ಕುಂಟಣದಲ್ಲಿ [illegible] ನಡಿಸಿದ [illegible] ರಾ॥ [illegible] ಮೇಲೆ ಖಟ್ಲೆಯ ವಿಚಾರ ನಡೆದಿದೆ. ಯಲ್ಲಾಪುರ ಫೌಜದಾರರಾಗಿದ್ದ ರಾ॥ ಅನಂತ ಮಲ್ಲು ನಾಯ್ಕ ಇವರ ಮೇಲೆಯೂ ಖಟ್ಲೆ ನಡೆದಿದೆ. ರಾ॥ ನಾಯ್ಕರ ಮೇಲಿನ ಖಟ್ಲೆಯನ್ನು ಸರಕಾರಿ ವಕೀಲರು ತತ್ಪರತೆಯಿಂದ ನಡಿಸುವದಿಲ್ಲವಾಗಿ ವಿಚಾರದ ಕಾಲಕ್ಕೆ ಹಾಜರಿದ್ದ ಕೆಲವರು ಹೇಳುತ್ತಾರೆ. ಜಿಲ್ಹಾಧಿಪರು ಈ ಮಾತಿನ ಚೌಕಶಿ ಮಾಡಬೇಕು. ಸರಕಾರಿ ವಕೀಲರಿಗೆ ಸಾಲ್ಕಾ ಕೋರ್ಟುಗಳಲ್ಲಿ ಕೆಲಸವಿರುವದರಿಂದ ಎಲ್ಲ ಖಟ್ಲೆಗಳಲ್ಲಿ ಸರಿಯಾಗಿ ಲಕ್ಷ್ಯ ಹಾಕಲು ಅವಕಾಶ ಸಿಗುವದಿಲ್ಲವಂತೆ. ಇಂತಹ ಪ್ರಸಂಗದಲ್ಲಿ ಅಸಿಸ್ಟಂಟ ಸರಕಾರಿ ವಕೀಲರಿಗೆ ಕೆಲವು ಕೆಲಸ ಹಂಚಿಕೊಡುವಂತೆ ಜಿಲ್ಹಾಧಿಪರು ನಿಯಮಗಳನ್ನು ಮಾಡುವದುಚಿತ. ಖಟ್ಲೆ ನಡಿಸಲು [illegible] ಕೊಡುವಾಗಲೂ ಜಿಲ್ಹಾಧಿಪರ ಆಫೀಸಿನವರು ಅಸಿಸ್ಟಂಟ ಸರಕಾರಿ ವಕೀಲರಿಗೂ ಕೆಲಸ ಸಿಗುವಂತೆ ವ್ಯವಸ್ಥೆ ಮಾಡುವದು ಯೋಗ್ಯ.

⁂

ಸಿದ್ದಾಪುರದಲ್ಲಿ ಹಿಂದೆ ಮಾಮಲೇದಾರರಾಗಿದ್ದ ರಾ॥ ಅಂಚ್ಲೇಯವರು ಶ್ರೀಗಂಧ, ಕ್ವಿನೀನು ಮೊದಲಾದ ಕೆಲವು ಆಕ್ಷೇಪಾರ್ಹ ಸಾಮಾನುಗಳನ್ನು ಕಳ್ಳತನದಿಂದ ಸಿದ್ದಾಪುರದಿಂದ ಧಾರವಾಡ ಕಡೆ ಒಯ್ಯುತ್ತಿದ್ದಾಗ ಜನರು ಆ ಸಾಮಾನ ಹಿಡಿದು ಪಂಚನಾಮೆ ಮಾಡಿ ದೀರ್ಘ ಕಾಲವಾಯಿತು. ರಾ॥ ಅಂಚ್ಲೇಯವರಿಗೆ ಆ ಮೇಲೆ ಸಿದ್ದಾಪುರದಿಂದ ಮುಂಡಗೋಡಕ್ಕೆ ವರ್ಗವಾಗಿದೆ. ಈ ಪ್ರಕರಣದಲ್ಲಿ ಆರೋಪಿ [illegible] ಬಡ ಜನರಿದ್ದರೆ ಅವರ ಮೇಲೆ ಕೂಡಲೆ ಖಟ್ಲೆಯಾಗಿ ದಂಡವಿಧಿಸಲಾಗುತ್ತಿತ್ತು. ರಾ॥ ಅಂಚ್ಲೇಯವರ ಮೇಲೆ ಖಟ್ಲೆಯಾಗುವದೆಂದು ಸುದ್ದಿಯಿತ್ತು. ಆದರೆ ಜಿಲ್ಹಾಧಿಪರೂ ಪ್ರಾಂತಿಕ ಸರಕಾರದವರೂ ಇದನ್ನು [illegible] ಗೆ ಇದರಿಂದ [illegible] ಮಾಮಲೇದಾರರಿಗೆ [illegible] ಪ್ರಾಂತಿಕ ಸರಕಾರವು ಆ ಪ್ರಕರಣವನ್ನು [illegible] ಮಾಮಲೇದಾರರಂಥ ಅಧಿಕಾರಿಗಳ ವಿರುದ್ಧ ಜನಸಾಮಾನ್ಯರು ಸಾಧನೆ ಮಾಡಿ ಅಪರಾಧವನ್ನು ಹಿಡಿಯುವ ಪ್ರಸಂಗ ಒಮ್ಮೆಲೇ ಬರುವದಿಲ್ಲ. [illegible] ಅಸಹ್ಯವಾದ ಮೇಲೆ ಜನರು ಒಕ್ಕಟ್ಟಾಗಿ ಅಧಿಕಾರಿಗಳಿಗೆ [illegible] ಮಾಡುತ್ತಾರೆ. ಇಂಥ ಪ್ರಸಂಗಗಳನ್ನು ಅಧಿಕಾರಿಗಳು ಬರವಾಡಿಕೊಂಡು [illegible] ಶಾಸನ ಮಾಡದಿದ್ದರೆ ಲೋಕಸಂಕಟದ [illegible] ಮೇಲಧಿಕಾರಿಗಳೂ ಪ್ರಾಂತಿಕ ಸರಕಾರದವರು ಸೇರಿಕೊಂಡಿದ್ದಾರೆಂದು ಜನಭಾವನೆಯಾಗಿ ಸರಕಾರದ ಬಗ್ಗೆ ಅನಾದರವುಂಟಾಗದೆ ಉಳಿಯದು.

⁂

ಈಗ ಸಕ್ಕರೆಯ ನಿಯಂತ್ರಣ ಆಗತ್ಯವಿಲ್ಲ. ಸಕ್ಕರೆ ಗಿರಣಿಯಲ್ಲಿದ್ದ ಹೇರಳ ಸಕ್ಕರೆ ಗೋದಾಮುಗಳಲ್ಲಿ ಶಿಲ್ಕು ಬಿದ್ದು ಹಾಳಾಗುತ್ತಿರುವದು [illegible] "ಕೇಸರಿ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಧರ್ಮ ಕಾರ್ಯಗಳಲ್ಲಿಯೂ [illegible] ಕಾರ್ಯಗಳಲ್ಲಿಯೂ ಸಕ್ಕರೆ ಪೂರವಟೆಯಾಗುವದು ದೊಡ್ಡ ಸಮಸ್ಯೆಯಾಗಿದೆ. ತೀರ್ಥಕ್ಷೇತ್ರದಲ್ಲಿ ಸಕ್ಕರೆಯ ಹೆಚ್ಚಿನ ಕೋಟಾ ಪಡೆಯಲಿಕ್ಕೆ ನಿಯಮವಿಲ್ಲ. ಅದರಿಂದ ಆ ಪ್ರದೇಶದವರು [illegible] ತಮ್ಮ ಕಾರ್ಯ ಸಾಗಿಸಿಕೊಳ್ಳಬೇಕು. ಕೂಪನ್ ಪ್ರದೇಶದಲ್ಲಿ ಮಾಮಲೇದಾರರ ಮರ್ಜಿ ಸಂಪಾದನೆ ಮಾಡಿದರೆ ಹೆಚ್ಚಿನ ಸಕ್ಕರೆ ಸಿಗುತ್ತದೆ. [illegible] ಸಕ್ಕರೆಯ ಹೆಚ್ಚಿನ ಅಭಾವದಲ್ಲಿ ಮಾಮಲೇದಾರರು ಕೈ ಬಿಗಿಹಿಡಿಯಬೇಕಾಗಿದೆ. ಸಕ್ಕರೆಯ ಕಾರ್ಖಾನೆಗಳಲ್ಲಿ ಸಕ್ಕರೆಯನ್ನು ಶಿಲ್ಕು ಇಟ್ಟು ಸರಕಾರವು ಅತ್ತ ಗಿರಣಿಯವರನ್ನೂ ಇತ್ತ ಜನರನ್ನೂ ಸಂಕಟಗೊಳಿಸಿ ಮಾಡುತ್ತಿರುವ ಭಾರತ ರಕ್ಷಣದ ಈ ಕ್ರಮಕ್ಕೆ ಎಲ್ಲಿಯೂ ಉಪಮೆ ದೊರೆಯುವಂತಿಲ್ಲ!

ಜಾಹೀರ ಪ್ರಕಟಣೆ.

ಇದೇ ಕಳೆದ ತಾ॥ ೨೪ ೧೨ ೧೯೪೫ನೇಗೆ ನನ್ನ ಕೋಮಾರ್ತಿಯು ನಾಗ ಸುಬ್ರಾಯ ದೇವರು ಶೆಟ್ಟಿ ಸಾ॥ ಇದಗು ಜಿ ಕಾರಗೋಡ (ತಾ॥ ಹೊನ್ನಾವರ) ಈತನು ನನಗೆ ಸುಳ್ಳು ಮಾಹಿತಿ ಕೊಟ್ಟು ೧ ಜತೆಯ ರುಪ್ಪಿನ ಸ್ಟಾಂಪ ಪತ್ರದ ೧ ಕಾಗದದ ಮೇಲೆ ನನ್ನ ಸಹಿ ತೆಗೆದುಕೊಂಡಿದ್ದಾನೆ. [illegible] ತನಗಿಂತ [illegible] ಕೊಂಡದ್ದು ಇಲ್ಲ. [illegible] ವಿಶ್ವಾಸದಿಂದ ಸಹಿ ಮಾಡಿದ ಆ ಕಾಗದದ [illegible] ಉಪಯೋಗಿಸಿಕೊಂಡಿದ್ದನೆ [illegible] ಆ ಕಾಗದದ ಮುಖಾಂತರ ಮಾಡಿದ್ದಕ್ಕೆ ನನಗೆ ಯಾವ [illegible] ಯಾವ ತರದಿಂದಲೂ ಬಾಧಕ ಬರುವಂತಿಲ್ಲ ಎಂದು ಈ ಮೂಲಕ ಜಾಹೀರಪಡಿಸಿದ್ದೇನೆ.

ತಾ ೩೦ ೧೨ ೧೯೪೫

ವೆಂಕಟರಮಣ ರಾಮ ಶೆಟ್ಟಿ, ಕಲಗೋಡು

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಪ್ರಾರಂಭವಾದರೂ ಗಾಳಿಯ ಕಾಟ ಹೆಚ್ಚು ಎಷ್ಟು? ಅದರಲ್ಲೂ ಗಾಳಿಯಿಂದ ಧೂಳಿಯ ಹಾವಳಿ ಮಿತಿಮೀರಿದೆ! ಮಾರ್ಗಗಳ ಮೇಲೆ ನೀರು ಹಾಕಿಸುವ ವ್ಯವಸ್ಥೆ ಇನ್ನೂ ಆಗಿಲ್ಲ ಧೂಳಿಯ ಈ ಉಪದ್ರವ ಜಿಲ್ಲಾಧಿಕಾರಿ ಕಚೇರಿಗೂ ಬಂದು ಮಾರ್ಗಗಳ ಮೇಲೆ ನೀರು ಹಾಕಿಸುವ ವ್ಯವಸ್ಥೆ ತೀವ್ರವೇ ಮಾಡತಕ್ಕದ್ದೆಂದು ನಗರ ಸಭೆಗೆ ಅವರು ತಿಳಿಸಿದ್ದಾರಂತೆ ನಗರ ಸಭೆಯವರಿಗೆ ತಮ್ಮ ಕರ್ತವ್ಯದ ಅರಿವು ಮಾಡಿಕೊಡಲಿಕ್ಕೆ ಜಿಲ್ಲಾಧಿಕಾರಿ ಮುಂದಾಗಬೇಕಾದದ್ದು ನಗರಸಭೆಗೆ ಭೂಷಣವೇ?

ಈ ಹಿಂದೆ ತಿಳಿಸಿದಂತೆ ಕುಮಟಾ ತಾಲೂಕಿನ ಪ್ರಾಥಮಿಕ ಶಾಲೆಗಳ ಶಿಕ್ಷಕ ಶಿಕ್ಷಕಿಯರ ಸಮ್ಮೇಳನವು ಕಳೆದ [illegible] ರಾ॥ [illegible] ಅವರ ಅಧ್ಯಕ್ಷತೆಯಲ್ಲಿ ನಡೆದು ವರದಿಯ ವಾಚನಗಳು, ವಿದ್ಯಾರ್ಥಿಗಳ ಕಸರತ್ತುಗಳು, ಕೈಗಾರಿಕೆಯ ವಸ್ತುಗಳ ಪ್ರದರ್ಶನ ಮುಂತಾದ ಕಾರ್ಯಕ್ರಮ ನಡೆಯಿತು ಸಂಜೆಯ ಕಡೆಗೆ ಇಲ್ಲಿಯ [illegible] ಮತ್ತು ಕನ್ನಡ ಶಾಲೆಯ ಹುಡುಗಿಯರ ಹಾಗೂ ಕನ್ನಡ ಗಂಡು ವಿದ್ಯಾರ್ಥಿಗಳ ನಾಟಕಗಳಾದವು ಗಂಡು ಮಕ್ಕಳ "ನಾರದ ಗರ್ವ ಭಂಗ" ನಾಟಕ ಪ್ರಹಸನದ ಪ್ರಯೋಗ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದ್ದರಿಂದ ಕೆಲವು ಪ್ರೇಕ್ಷಕರು [illegible] ಬೇರೆ ಬೇರೆ ವಿದ್ಯಾರ್ಥಿಗಳಿಗೆ [illegible] ಗಳ ಮೆಡ್ಲುಗಳನ್ನು ಕೊಟ್ಟರು

[illegible] ಸರ್ಕಸ್ಸುಗಳಿಗೆ [illegible] ಪ್ರಯಾಣಿಕರ [illegible] ಅರಿವು ಇಲ್ಲದಂತಾಗಿದೆ ಈ ಸರ್ಕಸ್ಸುಗಳ ಗಾಡಿಗಳ ವೇಳೆ [illegible] ನಡೆದು [illegible] ಹೋಗುವದೇ [illegible] ಬೇಕಾದ [illegible] ನೋಡುತ್ತವೆ! ಇದೇ [illegible] ಇಷ್ಟಿಂದ [illegible] ಸರ್ಕಸ್ಸಿನ [illegible] ಬಿಟ್ಟದ್ದರಿಂದ [illegible] ಸರಿಯಾಗಿ [illegible] ಕೆಲಸಕ್ಕೆ [illegible] ಬರೆಯುತ್ತಾರೆ [illegible] ಸರ್ಕಸ್ಸಿನ ಗಾಡಿಯಿಂದ [illegible] ಅವರು [illegible] ಅರಿತುಕೊಂಡು ನಡೆಯಬೇಕೆಂದು ಅವರ [illegible]

[illegible] "ಹಳ್ಳಿಯ ಪುನರುಜ್ಜೀವನ ಸಂಘ" [illegible] ಸಂಘವನ್ನು ಕೆಲವರ [illegible] ಇನ್ನೇನೂ ತಿಳಿಯಲಿಲ್ಲ

ಕಳೆದ ಸೋಮವಾರ [illegible] ಕಚೇರಿಯಲ್ಲಿ [illegible] ಕನ್ನಡ [illegible] ಹೋಗಿ [illegible]

ಕಳೆದ ಶುಕ್ರವಾರ [illegible] ಹಿಂದೀ [illegible] ತನ್ನ [illegible] ಶ್ರೀಮಾನ [illegible] ಪೂರ್ಣ [illegible] ಆ [illegible] ನಿರ್ಣಯವಾಗಿದೆ [illegible] ಕಾರ್ಯಕ್ರಮ [illegible] ಕರ್ನಾಟಕ [illegible] ಕರ್ನಾಟಕ ಅಧ್ಯಕ್ಷ [illegible] ಸೇವಾದಳದವರು [illegible] ಕಾರ್ಯಕ್ರಮವನ್ನು [illegible]

[illegible] ಕಳೆದ ಗುರುವಾರ ಸಂಜೆ ವೇ॥ [illegible] ಅವರ ದನವಿನ ಕೊಟ್ಟಿಗೆಗೆ ಬೆಂಕಿ [illegible] ಕೊಟ್ಟಿಗೆ ಪೂರ್ಣ ಸುಟ್ಟು ಹೋಯಿತು [illegible] ದನಗಳನ್ನು ಬಿಡಿಸಿದರು [illegible] ಬೆಂಕಿಯಿಂದ ಸುಮಾರು [illegible] ನಷ್ಟವಾಗಿದೆಯಂತೆ

ಹೊನ್ನಾವರ— ಬೇರೊಬ್ಬ ಕೊಡುವ ಸೀದಾ ಅಂಗಡಿಯಲ್ಲಿ [illegible] ಮಾಡಿಕೊಡುವ [illegible] ಸುದ್ದಿ [illegible] ಅಂಗಡಿಯಲ್ಲಿ [illegible] ಸೇರು [illegible] ಸೇರುಗಳ [illegible] ಅಕ್ಕಿ [illegible] ಅಂಗಡಿಯ [illegible] ಹೋಗುವದಿಲ್ಲ, [illegible] ಅಂಗಡಿಯ ಮಾಲಕರು ಬರೆಯುತ್ತಾರೆ

ಊರಲ್ಲೆಲ್ಲೂ ಈಗ ತೆಂಗಿನ ಎಣ್ಣೆ ಮತ್ತು ಬೆಲ್ಲ ಸಿಗುವದಿಲ್ಲ ತೆಂಗಿನ ಎಣ್ಣೆಯ ನಿಯಂತ್ರಣ ಧಾರಣೆ ರತ್ತಲ ಒಕ್ಕೆ [illegible] ಕೊಟ್ಟಿಯಲ್ಲಿ [illegible] ಎಣ್ಣೆ ಸಿಗಲೊಲ್ಲದು ಈ ದರದಿಂದ ಖರೀದಿ ಮಾಡಿದ ಎಣ್ಣೆಗೆ ರತ್ತಲ ಒಕ್ಕೆ [illegible] ಆಣೆ [illegible] ಬೆಲ್ಲದ ನಿಯಂತ್ರಣ ದರ ರತ್ತಲ ಒಕ್ಕೆ [illegible] ಆಣೆಯಿದೆ ಕೊಲ್ಹಾಪುರ [illegible] ಇಲ್ಲಿ ಬೆಲ್ಲ ಬರಬೇಕು [illegible] ನಿಯಂತ್ರಣ ದರದಿಂದ ಬೆಲ್ಲ ತಂದು, [illegible] ಕೂಡಿಸಿದರೆ ರತ್ತಲ ಒಕ್ಕೆ [illegible] ಆಣೆ ಬೀಳುತ್ತವೆ ಸೀದಾ ಅಂಗಡಿಯಲ್ಲಿ ಎಣ್ಣೆ ಬೆಲ್ಲ ಸಿಗುವದಿಲ್ಲ ನಿಯಂತ್ರಣ ಅಧಿಕಾರಿಗಳ [illegible] ಪೋಲೀಸರಿಗೆ ಲಂಚ ತಿನ್ನಲು ಒಳ್ಳೇ ಅನುಕೂಲವಾಗಿದೆ ಲಂಚ ಕೊಡುವವರ ಅಂಗಡಿಯಲ್ಲಿ [illegible] ಸಾಮುಗ್ರಿಗಳಿರುತ್ತವೆ! [illegible] ಎಣ್ಣೆ ಸಿಗುವದು ಕಷ್ಟ ಸಕ್ಕರೆಯ ಕಾರಖಾನೆಗಳಲ್ಲಿ ಸಕ್ಕರೆ [illegible] ಅಧಿಕಾರಿಗಳು ಅದನ್ನು [illegible] ಪೋಲೀಸರು [illegible] ವರ್ತಕರು ತಮ್ಮ [illegible] ಎಣ್ಣೆ ಬೆಲ್ಲಗಳನ್ನು [illegible] ನಿಯಂತ್ರಣಾಧಿಕಾರಿಗಳೂ ಪೋಲೀಸರ [illegible]

ಮುರ್ಡೇಶ್ವರ— (ತಾ [illegible]) [illegible] ಪ್ರಾಥಮಿಕ ಶಿಕ್ಷಣ [illegible] ಕೊಡುವ [illegible] ಜಿಲ್ಲಾ [illegible] ಮಾಡಿದ್ದರೆಂಬ [illegible] ಆದರೆ ಆ [illegible] ಬಂದಿಲ್ಲ! [illegible] ಅಧಿಕಾರಿಗಳು [illegible]

ಭಟಕಳ— (ತಾ [illegible]) ಸೋಮವಾರ [illegible] ವಿಜಯೋತ್ಸವದ [illegible] ಶಾಲೆಯ ಹುಡುಗರಿಗೆ [illegible] ಸಕ್ಕರೆ [illegible]

ಕಳೆದ ಮಂಗಳವಾರ ಆಬಕಾರಿ ಚೀಫ ಇನ್ಸಪೆಕ್ಟರ [illegible] ಪೋಲೀಸ [illegible] ಕೆಲ ಮನೆಗಳನ್ನು [illegible] ಹಿಡಿದಿದ್ದಾರಂತೆ [illegible]

ಕಳೆದ [illegible] ಶನಿವಾರ ಇಲ್ಲಿಯ ಕನ್ನಡ ಶಾಲೆ [illegible] ವಿದ್ಯಾರ್ಥಿಗಳು [illegible] ದಿನವನ್ನು ಒಳ್ಳೇ [illegible] ಸ್ಪರ್ಧೆಯ [illegible]

ಶಿರಸಿ— ಕಳೆದ [illegible] ಚುನಾವಣೆಯು [illegible] ಎಲ್ಲ ಸೇವೆ [illegible] ಬರೆಯುತ್ತಾರೆ

ಸಿದ್ದಾಪುರ— (ತಾ [illegible]) [illegible] ಕರಿ [illegible] ಈ [illegible]

ಗಳಿಯಿಂದ ಇಲ್ಲಿಗೆ [illegible] ಅವರ [illegible] ಪೋಲೀಸರು [illegible] ಪೋಲೀಸ [illegible]

(ತಾ [illegible]) ಕಳೆದ ವಾರದ [illegible] ಅಕ್ಕಿ [illegible] ಪ್ರಕಟವಾಗಿದೆಯಷ್ಟೇ [illegible] ಅಧಿಕಾರಿಗಳು [illegible]

[illegible] ಬಂದಿದ್ದರು [illegible] ಅಂಗಡಿಯ [illegible] ಪೋಲೀಸರು [illegible] ಅಧಿಕಾರಿಗಳು [illegible]

ನೆರೆಯಾಗಿನ [illegible] ಪೂರ್ಣ ಕೆಟ್ಟುಹೋಗಿದೆ. [illegible] ಎಲ್ಲವನ್ನೂ ಮರೆತಂತೆ ತೋರುತ್ತದೆ!

ಕಾರವಾರ— (ತಾ [illegible]) ಊರಲ್ಲಿ ಕಳೆದ [illegible] ಜಿಲ್ಲಾ ಪೋಲೀಸರ [illegible] ಪೋಲೀಸ [illegible] ಊರಲ್ಲಿ [illegible]

[illegible]

[illegible] ಜನರು [illegible]

(ಗಣೇ ಪುಟದ ಮೇಲೆ ನೋಡಿರಿ)

ನೋಟೀಸು.

ಸನ್ 1945ನೇ ಇಸವಿಯ ಡಿಸೆಂಬರ ತಿಂಗಳ ಬಾಬ್ತು

ತಾ 31-12-1945ರ ವರೆಗಿನ ನೂಲಿನ ಶಿಲ್ಕಿನ ಮಾಹಿತಿಯು

ಪ್ರಾವ್ಹಿನ್ಸಿಯಲ್ ಟೆಕ್ಸಟೈಲ್ ಕಂಟ್ರೋಲರ, ಕಾಳಾಚೌಕಿ ಪೋಸ್ಟ ಆಫೀಸಿನ ಎದುರು, ಪರೇಲ ರೋಡ, ಮುಂಬಯಿ (Provincial Textile Controller opposite Kalachowki Post Office Parel Road, Bombay) ಇವರಿಗೆ ನೂಲಿನ [illegible] ಲಾಯಸೆನ್ಸದಾರರಿಂದ ನೇಮಿಸಿದ [illegible] ನಿರ್ದೇಶಿಸಿದ ಫಾರ್ಮಿನಲ್ಲಿ, ತಾ 5-1-1946 ನೇದರೊಳಗಾಗಿ ತಪ್ಪದೆ ಮುಟ್ಟತಕ್ಕದ್ದಿರುತ್ತದೆ ನೇಮಿಸಿದ ಅವಧಿಯಲ್ಲಿ ಏನೂ ವ್ಯವಹಾರವಿಲ್ಲದಿದ್ದಲ್ಲಿ ನಿಮ್ಮ [illegible] ನೂಲಿನ [illegible] ಲಾಯಸೆನ್ಸದಾರರು ಸದರಿ ಮಾಹಿತಿಯನ್ನು ಮುದ್ದತ್ತಿನೊಳಗೆ ತಪ್ಪದೆ ಮುಟ್ಟುವಂತೆ ರವಾನಿಸಬೇಕು

Bombay
31-12-1945

J K. THAKORE,
Provincial Textile Controller, Bombay

ಹಿಂದುಸ್ಥಾನಿ ಪಾಠಗಳು.

ಸಬಕ ನೌ (ಪಾಠ ೯)

ಚಾಂದಬೀಬೀ ಅಹಮದನಗರಕೀ ಬಾದಶಾಹಕೀ ಬೇಟೀ ಥೀ (ಚಾಂದಬೀಬೀಯು ಅಹಮದನಗರದ ಬಾದಶಹನ ಮಗಳಾಗಿದ್ದಳು) ವಹ ಹೋಶಿಯಾರ ಔರ ಗುಣವತೀ ಥೀ (ಆಕೆ ಪ್ರತಿಭಾಶಾಲಿಯೂ ಗುಣವತಿಯೂ ಆಗಿದ್ದಳು) ವಹ ತೀರ ಔರ ತಲವಾರ ಚಲಾತೀ ಥೀ (ಆಕೆ ಬಾಣ ಮತ್ತು ಖಡ್ಗವನ್ನು ಉಪಯೋಗಿಸುತ್ತಿದ್ದಳು) ಘೋಡೇ ಪರ ಚಢತೀ ಥೀ, ಔರ ಶಿಕಾರ ಖೇಲತೀ ಥೀ (ಕುದುರೆಯ ಸವಾರಿ ಮಾಡುತ್ತಿದ್ದಳು, ಬೇಟೆಯಾಡುತ್ತಿದ್ದಳು) ಉಸಕೋ ಗಾನಾ ಬಜಾನಾಭೀ ಬಹುತ ಪಸಂದ ಥಾ (ಅವಳಿಗೆ ಹಾಡುವದು ಬಾರಿಸುವದು ಕೂಡ ಬಹಳ ಪ್ರಿಯವಿತ್ತು) ಉಸಕಿ ಶಾದೀ ಬಿಜಾಪುರಕೀ ಬಾದಶಾಹಕೀ ಸಾಥ ಹುಈ ಥೀ (ಅವಳ ಮದುವೆ ವಿಜಾಪುರದ ಬಾದಶಹನ ಕೂಡ ಆಗಿತ್ತು)

ಶಾದೀಕೇ ಥೋಡೇ ದಿನ ಬಾದ ಚಾಂದಬೀಬೀಕಾ ಪತಿ ಮರಗಯಾ (ಲಗ್ನವಾದ ಕೆಲವು ದಿನಗಳ ನಂತರ ಚಾಂದಬೀಬಿಯು ಗಂಡನು ತೀರಿಕೊಂಡನು) ಉಸಸೇ ಉಸಕೋ ಬಹುತ ದುಃಖ ಹುವಾ (ಆದರಿಂದ ಅವಳಿಗೆ ಬಹಳ ದುಃಖವಾಯಿತು) ಉಸ ಸಮಯ ಉಸಕೀ ಉಮ್ರ ಪಚ್ಚೀಸ ಸಾಲಕೀ ಥೀ (ಆ ಕಾಲದಲ್ಲಿ ಅವಳ ವಯ ೨೫ ವರ್ಷಗಳದಿತ್ತು) ಉಸಕೀ ಕೋಈ ಲಡಕಾ ನಹೀಂ ಥಾ (ಅವಳಿಗೆ ಮಕ್ಕಳಾರೂ ಇದ್ದಿಲ್ಲ) ಉಸಕೇ ಪತಿಕೇ ಬಹಿನಕೇ ಏಕ ಲಡಕಾ ಥಾ (ಅವಳ ಗಂಡನ ಸಹೋದರಿಗೆ ಒಬ್ಬ ಮಗನಿದ್ದನು) ಉಸಕಾ ನಾಮ ಇಬ್ರಾಹಿಮ ಥಾ (ಅವನ ಹೆಸರು ಇಬ್ರಾಹಿಮ) ಉಸೀಕೋ ವಹ ಬಾದಶಾಹ ಬನಾನಾ ಚಾಹತೀ ಥೀ (ಅವನಿಗೆ ಅವಳು ಬಾದಶಹನನ್ನಾಗಿ ಮಾಡಲು ಇಚ್ಛಿಸುತ್ತಿದ್ದಳು) ಲೇಕಿನ ವಹ ಬಹುತ ಛೋಟಾ ಥಾ (ಆದರೆ ಅವನು ಬಹಳ ಸಣ್ಣವನಿದ್ದನು) ವಹ ರಾಜ ಕರನೇ ಲಾಯಕ ನಹೀಂ ಥಾ (ಅವನು ರಾಜ್ಯವಾಳಲು ಯೋಗ್ಯನಾಗಿದ್ದಿಲ್ಲ) ಇಸಲಿಯೇ ಚಾಂದಬೀಬೀ ಖುದ ರಾಜ ಕರನೇ ಲಗೀ (ಆದರಿಂದ ಚಾಂದಬೀಬಿಯು ಸ್ವತಃ ರಾಜ್ಯವಾಳಹತ್ತಿದಳು.) ಇಸಸೇ ಬಹುತಸೇ ಸರದಾರ ಉಸಕೇ ದುಶ್ಮನ ಹೋಗಯೇ (ಇದರಿಂದ ಬಹಳಷ್ಟು ಸರದಾರರು ಅವಳ ಶತ್ರುಗಳಾದರು) ಏಕ ಔರತಕಾ ರಾಜ ಕರನಾ ಉಸಕೋ ಪಸಂದ ನಹೀಂ ಥಾ (ಓರ್ವ ಹೆಂಗಸು ರಾಜ್ಯವಾಳುವದು ಅವರಿಗೆ ಇಷ್ಟವಿರಲಿಲ್ಲ) ವೇ ಝಗಡಾ ಕರನೇ ಲಗೇ (ಅವರು ಜಗಳಾಡಹತ್ತಿದರು) ಲೇಕಿನ ಕುಛ ನ ಕರ ಸಕೇ (ಆದರೆ ಏನೂ ಮಾಡಲು ಶಕ್ತರಾಗಲಿಲ್ಲ) ಜಬ ಇಬ್ರಾಹಿಮ ಬಡಾ ಹುವಾ ತಬ ಉಸಕೋ ಬಾದಶಾಹ ಬನಾಕರ ಚಾಂದಬೀಬೀ ಅಹಮದನಗರ ಚಲೀ ಗಯೀ (ಎಂದು ಇಬ್ರಾಹಿಮನು ದೊಡ್ಡವನಾದನೋ ಅಂದು ಅವನನ್ನು ಬಾದಶಹನನ್ನಾಗಿ ಮಾಡಿ ಚಾಂದಬೀಬಿಯು ಅಹಮದನಗರಕ್ಕೆ ನಡೆದಳು) ಉಸ ಸಮಯ ಅಹಮದನಗರಮೇಂ ಭೀ ಬಡೀ ಗಡಬಡೀ ಥೀ (ಆ ಸಮಯದಲ್ಲಿ ಅಹಮದನಗರದಲ್ಲೂ ದೊಡ್ಡ ಗಡಬಡಿಯುಂಟಾಗಿತ್ತು) ಅಹಮದನಗರಕಾ ಬಾದಶಾಹ ಮರಗಯಾ ಥಾ (ಅಹಮದನಗರದ ಬಾದಶಹನು ಸತ್ತುಹೋಗಿದ್ದನು) ಸರದಾರ ಲೋಗ ರಾಜಕೇ ಲಿಯೇ ಆಪಸಮೇಂ ಲಡತೇ ಥೇ (ಸರದಾರ ಜನರು ರಾಜ್ಯದ ಸಲುವಾಗಿ ತಮ್ಮೊಳಗೇ ಜಗಳಾಡುತ್ತಿದ್ದರು)

ಅಕಬರ ಅಹಮದನಗರ ಜೀತನಾ ಚಾಹತಾ ಥಾ (ಅಕಬರನು ಅಹಮದನಗರವನ್ನು ಗೆಲ್ಲಲು ಇಚ್ಛಿಸುತ್ತಿದ್ದನು) ಉಸನೇ ಏಕ ಬಡೀ ಫೌಜ ಭೇಜೀ (ಅವನು ಒಂದು ದೊಡ್ಡ ದಂಡು ಕಳಿಸಿಕೊಟ್ಟನು) ಅಕಬರಕಾ ಬೇಟಾ ಮುರಾದ ಉಸ ಫೌಜಕೇ ಸಾಥ ಥಾ (ಅಕಬರನ ಮಗ ಮುರಾದನು ಆ ದಂಡಿನೊಡನೆ ಇದ್ದನು) ಫೌಜನೇ ಆಕರ ಅಹಮದನಗರ ಘೇರ ಲಿಯಾ (ದಂಡು ಬಂದು ಅಹಮದನಗರಕ್ಕೆ ಮುತ್ತಿಗೆ ಹಾಕಿತು) ಚಾಂದಬೀಬೀನೇ ಬಿಜಾಪುರ ಔರ ಗೋಲಕುಂಡಾಕೇ ಬಾದಶಾಹೋಂಸೇ ಮದದ ಮಾಂಗೀ (ಚಾಂದಬೀಬಿಯು ವಿಜಾಪುರ ಮತ್ತು ಗೋಲಕೊಂಡದ ಬಾದಶಹರ ಸಹಾಯ ಬೇಡಿದಳು) ಮಗರ ವೇ ಉಸಕೀ ಮದದ ಕರನೇ ನಹೀಂ ಆಯೇ (ಆದರೆ ಅವರು ಅವಳಿಗೆ ಸಹಾಯ ಮಾಡಲು ಬರಲಿಲ್ಲ) ಚಾಂದಬೀಬೀ ಬಹಾದುರೀಕೇ ಸಾಥ ಮುಗಲೋಂಸೇ ಲಡೀ (ಚಾಂದಬೀಬಿಯು ಶೌರ್ಯದಿಂದ ಮೊಗಲರೊಡನೆ ಹೋರಾಡಿದಳು) ಮುಗಲ ಸಿಪಾಹೀ ಸುರಂಗ ಖೋದಕರ ಅಹಮದನಗರಕೇ ಅಂದರ ಆನಾ ಚಾಹತೇ ಥೇ (ಮೊಗಲ ಸೈನಿಕರು ಸುರಂಗ ತೋಡಿ ಅಹಮದನಗರ ಕೋಟೆಯೊಳಗೆ ಬರಲು ಬಯಸುತ್ತಿದ್ದರು) ಚಾಂದಬೀಬೀ ಉನಕೋ ಅಂದರ ಆನೇಸೇ ರೋಕತೀ ಥೀ (ಚಾಂದಬೀಬಿಯು ಅವರನ್ನು ಒಳಗೆ ಬರದಂತೆ ತಡೆಯುತ್ತಿದ್ದಳು) ಆಖಿರ ಮುಗಲ ಸೇನಾ ಅಹಮದನಗರಕೇ ಅಂದರ ಪಹುಂಚ ಗಯೀ (ಕೊನೆಗೆ ಮೊಗಲ ಸೈನ್ಯವು ಅಹಮ್ಮದನಗರದ ಒಳಗೆ ಮುಟ್ಟಿತು) ಅಬಭೀ ಚಾಂದಬೀಬೀ ನಹೀಂ ಘಬಡಾಯೀ (ಆಗಲೂ ಚಾಂದಬೀಬಿಯು ಗಾಬರಿಗೊಳ್ಳಲಿಲ್ಲ) ವಹ ಖುದ ಹಾಥಮೇಂ ತಲವಾರ ಲೇಕರ ಲಡಾಈಕೇ ಮೈದಾನಮೇಂ ಆಯೀ (ಅವಳು ಸ್ವತಃ ಕೈಯ್ಯಲ್ಲಿ ಕತ್ತಿ ತಕ್ಕೊಂಡು ರಣಭೂಮಿಗೆ ಬಂದಳು) ತಬ ಮುಗಲ ಲೋಗ ಹಾರಕರ ಭಾಗ ಗಯೇ (ಆಗ ಮೊಗಲರು ಹೆದರಿ ಓಡಿಹೋದರು)

ಚಾಂದಬೀಬೀ ಬಹುತ ಖುಶ ಥೀ (ಚಾಂದಬೀಬಿಗೆ ಬಹಳ ಸಂತೋಷವಾಯಿತು) ಲೇಕಿನ ಉಸಕೀ ಖುಶೀ ಬಹುತ ಸಮಯತಕ ನಹೀಂ ರಹೀ (ಆದರೆ ಅವಳ ಸಂತೋಷ ಬಹಳ ಕಾಲದ ವರೆಗೆ ಉಳಿಯಲಿಲ್ಲ.) ಅಹಮದನಗರಮೇಂ ಫಿರಭೀ ಝಗಡಾ ಶುರೂ ಹುವಾ. (ಅಹಮದನಗರದಲ್ಲಿ ಪುನಃ ಜಗಳಕ್ಕೆ ಆರಂಭವಾಯಿತು.) ಉಸಮೇಂ ಚಾಂದಬೀಬೀ ಮಾರೀ ಗಯೀ. (ಅದರಲ್ಲಿ ಚಾಂದಬೀಬಿಯು ಕೊಲ್ಲಲ್ಪಟ್ಟಳು.)

ನೋಟೀಸು.

ಉತ್ತರ ಕಾನಡಾ ಜಿಲ್ಲಾ ಎಗ್ಝಿಕ್ಯೂಟಿವ್ಹ ಇಂಜನಿಯರ ಸಾಹೇಬ ಬಹಾದ್ದೂರರವರ ಕಚೇರಿಯಿಂದ ಎಲ್ಲ ಜನರಿಗೆ ತಿಳಿಸಲ್ಪಡುವದೇನಂದರೆ:-

ಕೆಳಗೆ ತೋರಿಸಿದ ಈ ಪತ್ರಿಯೊಳಗಿನ ತಾರಿಗಳು ಉತ್ತಮ ರೀತಿಯಿಂದ ನಡಿಸುವ ಮತ್ತು ತಾರಿ ಹಾಸಲು ವಸೂಲ ಮಾಡುವ ಹಕ್ಕಿನ ದೆಸೆಯಿಂದ ೧೯೪೬ನೇ ಇಸವಿಯ ಏಪ್ರಿಲ್ ತಾರೀಖು ೧ನೇಯಿಂದ ಒಂದು ವರುಷದ ಬಾಬತು ಮಕ್ತೆಗಳು ಕೆಳಗೆ ತೋರಿಸಿದ ತಾರೀಖಿಗೆ, ಕೆಳಗೆ ತೋರಿಸಿದ ಮುಕ್ಕಾಮಿನಲ್ಲಿ ಮಧ್ಯಾನ್ಹ ಮೂರು ಘಂಟೆಗೆ ಬಹಿರಂಗವಾಗಿ ಲಿಲಾವ ಮಾಡಲ್ಪಡುವವು ಸವಾಲು ಮಾಡುವ ಇಚ್ಛೆಯುಳ್ಳವರು ಬಂದು ಸವಾಲು ಮಾಡಬಹುದು

೨ ಮಕ್ತೆ ಬೇಡುವವರ ತಮ್ಮ ತಮ್ಮ ಲಾಯಕಿ ಬಗ್ಗೆ ಅವರ ಸ್ಥಿರ ಆಸ್ತಿ ಎಲ್ಲಿರುವದೋ ಆ ತಾಲೂಕಿನ ಮಾಮಲೇದಾರರ ಅಥವಾ ಪೇಟೆಯ ಮಹಾಲಕರಿಯವರ ಲಾಯಕಿ ಸರ್ಟಿಫಿಕೇಟು ತರಬೇಕು ಮತ್ತು ಅವರು ಪ್ರತಿಯೊಂದು ಮಕ್ತೆ ಬಾಬತು ಇನ್ನೂರು (೨೦೦-೦-೦) ರೂಪಾಯಿಗಳನ್ನು ನಗದಿಯಾಗಿ ಹಾಜರ ಮಾಡಲು ಸಿದ್ಧರಾಗಿರಬೇಕು ಬನವಾಸಿ ತಾರಿಯ ಬಗ್ಗೆ ನಿರ್ದಿಷ್ಟ ಮಾಡಿದ ಡಿಪೋಜಿಟ ರಕಮು ಇಪ್ಪತ್ತು (೨೦-೦-೦) ರೂಪಾಯಿ ಇರುತ್ತದೆ ಹಿಂದಕ್ಕೇನೇ ಅಂಥವರ ಸವಾಲು ಅವರ ಲಾಯಕಿ ರಕಮಿನ ವರೆಗೆ ಮಾತ್ರ ತಕ್ಕೊಳ್ಳಲಾಗುವದು ಸವಾಲು ಮಂಜೂರ ಆಗದಿದ್ದರೆ ನಗದಿಯಾಗಿ ಹಾಜರ ಮಾಡಿದ ಹಣ ಪರತ ಕೊಡಲ್ಪಡುವದು ಮಂಜೂರ ಆದರೆ ಸದರಿ ರಕಮು ಕರಾರಿನಲ್ಲಿ ನಮೂದಿಸಿದ ಯಾವತ್ತೂ ಶರ್ತುಗಳನ್ನು ಯೋಗ್ಯ ರೀತಿಯಿಂದ ಪಾಲಿಸುವ ಬಗ್ಗೆ ಅಮಾನತವಾಗಿ ಇಡಲ್ಪಡುವದು, ಮತ್ತು ಮಕ್ತೆಯ ಮುದ್ದತು ತೀರಿದ ಬಳಿಕ ಎಲ್ಲ ಶರ್ತುಗಳನ್ನು ಪಾಲಿಸಿದಲ್ಲಿ ಮಾತ್ರ ಸದರಿ ರಕಮು ಪರತ ಕೊಡಲ್ಪಡುವದು

೩ ಲಿಲಾವಿನ ಉಳಿದ ಯಾವತ್ತೂ ಶರ್ತುಗಳು ಪ್ರತ್ಯೇಕವಾಗಿ ಛಾಪಿಸಿದ ಜಾಹೀರನಾಮೆಯಲ್ಲಿ ನಮೂದಿಸಿದಂತೆಯೇ ಇರುವವು ಮಕ್ತೆ ಮಾಡುವ ಇಚ್ಛೆಯುಳ್ಳವರು ತಮಗೆ ಬೇಕಾದ ಎಲ್ಲ ಮಾಹಿತಿಯನ್ನು ಮೆ॥ ಎ. ಇಂ ಸಾಹೇಬ, ಕಾರವಾರ ಅಥವಾ ಸಬ್ ಡಿವ್ಹಿಜನಲ್ ಆಫೀಸರ, ಪಿ ಡಬ್ಲ್ಯು ಡಿ ಕುಮಟಾ ಮತ್ತು ಶಿರ್ಸಿ ಇವರ ಕಚೇರಿಗಳಲ್ಲಿ, ಕಚೇರಿಯ ವೇಳೆಯಲ್ಲಿ ತಿಳಕೊಳ್ಳಬಹುದು. ಲಿಲಾಂವಿನ ಯಾವತ್ತೂ ಶರ್ತುಗಳನ್ನು ಲಿಲಾಂವಿನ ಕಾಲಕ್ಕೆ ಓದಿ ತಿಳಿಸುವದರಲ್ಲಿ ಬರುವದು.

೪ ಕೋಡಿಬಾಗ ಮತ್ತು ಶರಾವತಿ ತಾರಿಯ ಬಗ್ಗೆ ಹೊಸ ಲೊಂಚ ಸರ್ವಿಸಿಗೆ ಲಿಲಾಂವ ಮಾಡಲಿಚ್ಛಿಸುವವರಿಗೆ ಪ್ರಾಶಸ್ತ್ಯ ಕೊಡಲಾಗುವದು

ನಂಬರು	ತಾರಿಯ ಹೆಸರು	ತಾರಿಯ ಕ್ಲಾಸು	ತಾಲೂಕ	ಯಾವ ತಾರೀಖಿಗೆ	ಎಲ್ಲಿ	ಯಾರ ಮುಂದೆ
೧	ಕೋಡಿಬಾಗ (ಸದಾಶಿವಗಡ)	೨ನೇ	ಕಾರವಾರ	೨೭-೧-೪೬	ಮೆ॥ ಎ ಇಂ ಸಾಹೇಬರ ಆಫೀಸಿನಲ್ಲಿ	ಮೆ॥ ಎ ಇಂ ಸಾಹೇಬ, ಉ ಕಾನಡಾ
೨	ಶರಾವತಿ (ಮಲ್ಲುಕುರ್ವೆ ಫೋರ್ಟ ತಾರಿಯ ಸಹಿತ)	"	ಹೊನ್ನಾವರ	೨೮—೧—೧೯೪೬	ಪಿ ಡಬ್ಲ್ಯು ಡಿ ಆಫೀಸ, ಕುಮಟಾ.	ಮೆ॥ ಎಗ್ಝಿಕ್ಯೂಟಿವ್ಹ ಇಂಜನಿಯರ ಸಾಹೇಬ, ಕಾನಡಾ
೩	ಹೆಗಡೆ (ಮಿರ್ಜಾನ ಕೋಡಕಣಿ ಫೋರ್ಟ ತಾರಿಯ ಸಹಿತ)	೩ನೇ	ಕುಮಟಾ			
೪	ದೀವಗಿ (ಮಣ್ಕಿ)		"			
೫	ವೆಂಕಟಾಪುರ (ಹೆಬಳೆ ಮತ್ತು ತೆಂಗಿನಗುಂಡಿ ಫೋರ್ಟ ತಾರಿಗಳ ಸಹಿತ)	"	ಭಟಕಳ ಪೇಟಾ			
೬	ಉಳವರೆ	"	ಅಂಕೋಲಾ			
೭	ಬನವಾಸಿ	೪ನೇ	ಶಿರ್ಸಿ	೨೫-೧-೪೬	ಸಬ್ ಡಿವ್ಹಿಜನಲ್ ಆಫೀಸ, ಪಿ ಡಬ್ಲ್ಯು ಡಿ ಶಿರ್ಸಿ	ಮೆ॥ ಸಬ್ ಡಿವ್ಹಿಜನಲ್ ಆಫೀಸರ, ಪಿ ಡಬ್ಲ್ಯು ಡಿ ಶಿರ್ಸಿ

KARWAR
22-12-1945

R. L. DESHPANDE,
Executive Engineer, Kanara Division

NOTICE.

The yarn licences granted under Government of Bombay, General Department Order No 24 (3) dated the 31st July 1942, and the validity of which was extended by Finance Department (Supply) Orders No 24 (3)/VII dated the 27th April 1945 and 30th October 1945 upto 31st December 1945 will be renewed, on application, for a further period of one year upto 31st December 1946. Licensees who wish to have their licences renewed should apply and forward their licences to the Provincial Textile Controller, Kalachowki Parel Road Bombay, **immediately** and in no case later than 31st January 1946 The renewal fee of Rs 5/- should be paid in advance in case at the Office of the Provincial Textile Controller in the case of Bombay City licensees and by chalans in the case of mofussil licensees

Bombay,
24-12-1945

J K. THAKORE,
Provincial Textile Controller Bombay

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ಕುಮಟೆಯಲ್ಲಿರುವ ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು